
# ಮತಗಳು ಮತ್ತು ತತ್ತ್ವಸಿದ್ಧಾಂತಗಳು

(ಪೂರ್ವ-ಪಶ್ಚಿಮದೇಶಗಳ ತತ್ತ್ವಸಿದ್ಧಾಂತಗಳ ಪರಿಚಯ)



ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಅಧ್ಯಾತ್ಮಪ್ರಕಾಶ ಕಾರ್ಯಾಲಯ

ಹೊಳೆನರಸೀಪುರ - 573 211

# ಸಂಸ್ಥಾಪಕರ ಸ್ಮರಣೆ



ವೇದಧರ್ಮದ ಪುನರುತ್ಥಾನ ಮತ್ತು ವೇದಾಂತಕ್ಕೊಂದು ನವಚೇತನ ತುಂಬಿದ ಮಹತ್ಕಾರ್ಯದಿಂದ ಶ್ರೀ ಶಂಕರ ಭಗವತ್ಪಾದರು ಸರ್ವದಾ ಸ್ಮರಣೀಯರು. ಬ್ರಹ್ಮೀಭೂತ ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು (ಪೂರ್ವಾಶ್ರಮದ ಶ್ರೀಯಲ್ಲಂಬಳಸೆ ಸುಬ್ರಹ್ಮಣ್ಯ ಶರ್ಮರು- ವೈ. ಸುಬ್ಬರಾಯರು, ಜನನ 5.1.1880) ಶ್ರೀಶಂಕರವೇದಾಂತ ಸರಣಿಯಿಂದ ಆಕರ್ಷಿತರಾಗಿ, ಆಳವಾದ ಅಧ್ಯಯನ, ಚಿಂತನ-ಮಂಥನಗಳಿಂದ, ತಮ್ಮ ವಿಶಿಷ್ಟ ಸಂಶೋಧನಾಪ್ರವೃತ್ತಿಯನ್ನು ಬಳಸಿ, ಶಂಕರರ ಅಮೋಘವಾದ ಪ್ರಸ್ಥಾನತ್ರಯಭಾಷ್ಯಗಳಿಗೆ ಹತ್ತಿದ್ದ ಕೊಳೆಯನ್ನು, ಮುತ್ತಿದ್ದಧೂಳನ್ನು ತೊಡೆದು ಶಾಂಕರ ವೇದಾಂತದ ನೈಜತಿರುಳನ್ನು ಕಂಡುಕೊಂಡರು. ಶಾಂಕರವೇದಾಂತಕ್ಕೆ 20ನೇ ಶತಮಾನದ ಅಧಿಕೃತ ವಕ್ತಾರರಾದರು, ಅಭಿನವಶಂಕರರಾದರು.

'ಬೆಳಿಗ್ಗೆ ಎದ್ದಾಗಿನಿಂದ ಮಲಗುವವರೆಗೂ ಹಾಗೂ ಹುಟ್ಟಿನಿಂದ ಬದುಕಿರುವವರೆಗೂ ವೇದಾಂತ ಚಿಂತನೆಯಿಂದಲೇ ಕಾಲವನ್ನು ಕಳೆಯಬೇಕು' ಎಂಬ ಅಭಿಯುಕ್ತರ ವಚನಕ್ಕೆ ಪ್ರತ್ಯಕ್ಷ ಉದಾಹರಣೆಯಾಗಿದ್ದ ಶ್ರೀ ಶ್ರೀಗಳವರು ತಮ್ಮ ಬಾಲ್ಯದಿಂದ 96ನೆಯ ವಯಸ್ಸಿನವರೆಗೂ ವೇದಾಂತಗ್ರಂಥ ಪಠನ, ಚಿಂತನ, ಪ್ರವಚನ, ಲೇಖನಗಳಲ್ಲಿ ತತ್ಪರರಾಗಿದ್ದು 'ಪುರುಷ ಸರಸ್ವತೀ' ಎಂಬ ಅನ್ವರ್ಥ ನಾಮವನ್ನು ಹೊಂದಿದ್ದರು. ಅವರ ಕನ್ನಡ, ಇಂಗ್ಲಿಷ್, ಸಂಸ್ಕೃತ ಭಾಷೆಗಳ ಇನ್ನೂರಕ್ಕೂ ಮೀರಿದ ಕೃತಿಗಳು ವೇದಾಂತಪ್ರಪಂಚದಲ್ಲಿ ಅವರನ್ನು ಅಮರರನ್ನಾಗಿಸಿವೆ. ಸಂಸ್ಕೃತ ಬಾರದ ಅಧ್ಯಾತ್ಮ ವಿಚಾರಕರಾದ ಜಿಜ್ಞಾಸುಗಳಿಗೆ ಒಂದು ವರಪ್ರದಾನವಾಗಿದೆ.

ಶಾಲಾ ಉಪಾಧ್ಯಾಯರಾಗಿ ಸೇವೆ ಸಲ್ಲಿಸುವಾಗಲೇ ಅಧ್ಯಾತ್ಮದ ಒಲವಿನಿಂದ ಸಂಸ್ಕೃತ ಕಲಿತು ಸಾಧಕರಾದರು. ಆ ಸಮಯದಲ್ಲಿ ಶ್ರೀ ಹೊಸಕೆರೆ ಚಿದಂಬರಯ್ಯನವರ, ಶ್ರೀ ಮಹಾಭಾಗವತರಸಂಪರ್ಕ, ಅಧ್ಯಾತ್ಮಬಾಂಧವ್ಯ, ಆತ್ಮೀಯತೆ, ಅನಂತರ ಶ್ರೀಗೋಂದಾವಳಿ ಮಹಾರಾಜರಲ್ಲಿ ಶ್ರೀರಾಮತಾರಕ ಮಂತ್ರೋಪದೇಶ, ಶೃಂಗೇರಿ ಜಗದ್ಗುರುಗಳಾದ ಶ್ರೀಸಚ್ಚಿದಾನಂದಶಿವಾಭಿನವನೃಸಿಂಹಭಾರತಿ ಮಹಾಸ್ವಾಮಿಗಳವರಿಂದ ಕಾಲಟಿಯಲ್ಲಿಯೇ ಭಾಷ್ಯಶಾಂತಿ ಪಾಠಗಳು ಅವರ ಶ್ರದ್ಧಾಕಾರ್ಯತತ್ಪರತೆಗೆ ಮೆರಗನ್ನು ನೀಡಿದವು.

1937ರಲ್ಲಿ ಹೊಳೆನರಸೀಪುರದಲ್ಲಿ ನೆಲೆಸಿದ ಮೇಲೆ ತಮ್ಮನ್ನು ಪೂರ್ಣವಾಗಿ ಶಾಂಕರವೇದಾಂತಕ್ಕೆ ಅರ್ಪಿಸಿಕೊಂಡರು. 1948ರಲ್ಲಿ ಸಂನ್ಯಾಸಸ್ವೀಕಾರ ಮಾಡಿದರು. ಶುದ್ಧತತ್ತ್ವಾನ್ವೇಷಣೆ, ನಿಖರವಾದ ಬರವಣಿಗೆ, ಆಚಾರನಿಷ್ಠೆ ಮತ್ತು ಕಠೋರನಿಯಮಪಾಲನೆಗೆ ಶ್ರೀ ಶ್ರೀಗಳವರು ಹೆಸರಾದವರು. ಅವರು ಸ್ಥಾಪಿಸಿರುವ (1920) ಅಧ್ಯಾತ್ಮಪ್ರಕಾಶ ಕಾರ್ಯಾಲಯವು ಈಗಲೂ ನಿಜವಾದ ಅಧ್ಯಾತ್ಮವಿದ್ಯಾಪ್ರಸಾರ ಕೇಂದ್ರವಾಗಿದೆ. ಪೂಜ್ಯರು 1975ನೇ ಆಗಸ್ಟ್ 5ರಂದು ಬ್ರಹ್ಮೀಭೂತರಾದರು. ಇವರ ಮಹಾಸಮಾಧಿ ಪೀಠವು ಹೊಳೆನರಸೀಪುರದಲ್ಲಿದೆ. ಇಂದಿಗೂ ಚೈತನ್ಯಸ್ವರೂಪಿಗಳಾಗಿ ಕಾರ್ಯಾಲಯದ ಮೂಲ ಶಕ್ತಿಯಾಗಿದ್ದಾರೆ. ಈಚೆಗೆ 28.07.2008ರಂದು ಪ್ರತಿಷ್ಠೆಗೊಂಡ ಶ್ರೀ ಶ್ರೀಗಳವರ ಅಮೃತಶಿಲಾವಿಗ್ರಹವು ಹೊಳೆನರಸೀಪುರದ ಸಮಾಧಿಮಂದಿರದಲ್ಲಿ ರಾರಾಜಿಸುತ್ತಿದೆ.

ಬ್ರಹ್ಮನಿಷ್ಠಾಯ ವಿದ್ಮಹೇ ಸಂಯಮೀಂದ್ರಾಯ ಧೀಮಹೀ ।
ತನ್ನಃ ಸಚ್ಚಿದಾನಂದಃ ಪ್ರಚೋದಯಾತ್ ॥
" ಓಂ ನಮೋ ಭಗವತೇ ಸಚ್ಚಿದಾನಂದಾಯ "

ಅಧ್ಯಾತ್ಮ ಗ್ರಂಥಾವಳಿ

# ಮತಗಳು ಮತ್ತು ತತ್ತ್ವಸಿದ್ಧಾಂತಗಳು

(ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಯಲ್ಲಿ ಮೂಡಿಬಂದ
ಪೂರ್ವ-ಪಶ್ಚಿಮದೇಶಗಳ ತತ್ತ್ವಸಿದ್ಧಾಂತಗಳ ಪರಿಚಯ)

ಸಂಪಾದಕರು

**ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು**

**ಕ್ರಮಾಂಕ : 280**

Price List Catalog Sl. No : 192

**ಅಧ್ಯಾತ್ಮ ಪ್ರಕಾಶಕಾರ್ಯಾಲಯ**

ಹೊಳೆನರಸೀಪುರ - 573 211, ಹಾಸನ ಜಿಲ್ಲೆ, ಕರ್ನಾಟಕ ರಾಜ್ಯ

ದೂ: 08175-273820

www.adhyatmaprakasha.org

e-mail: secretary@adhyatmaprakasha.org

coordinator_apk@yahoo.com

**ಬೆಂಗಳೂರು ಶಾಖೆ :**

ನಂ. 68 (ಹೊಸ ನಂ. 6), 6ನೇ ಮುಖ್ಯರಸ್ತೆ (ಎ.ಪಿ.ಕೆ. ರಸ್ತೆ), 2ನೇ ಬ್ಲಾಕ್,

ತ್ಯಾಗರಾಜನಗರ, ಬೆಂಗಳೂರು - 560 028.

ದೂ : 080-2676 5548

e-mail: shankara.bhaskara@gmail.com

**2021**

**MATAGALU MATTU TATTVA SIDHANTAGALU :**
Edited by : **Sri Sri Satchidanandendra Saraswathi Swamiji.**
Published by: Adhyatma Prakasha Karyalaya, Holenarasipura -573211, Hassan District, Karnataka State, INDIA.
Phone: 08175-273820
website : www.adhyatmaprakasha.org
e-mail : secretary@adhyatmaprakasha.org
coordinator_apk@yahoo.com

ಒಂದನೆಯ ಮುದ್ರಣ : 2021 ಪ್ರತಿಗಳು: 500

ಮುದ್ರಣ ಕಾಗದ : 70 **GSM NS Maplitho**

ಪುಟಗಳು : 12 + 539 = 551

**ಬೆಲೆ : ರೂ. 280/-**

**© ಅಧ್ಯಾತ್ಮಪ್ರಕಾಶಕಾರ್ಯಾಲಯದವು**

**ಪ್ರತಿಗಳು ದೊರೆಯುವ ಸ್ಥಳ:**

**ಅಧ್ಯಾತ್ಮಪ್ರಾಕಾಶಕಾರ್ಯಾಲಯ**
ಹೊಳೆನರಸೀಪುರ - 573 211, ಹಾಸನ ಜಿಲ್ಲೆ, ಕರ್ನಾಟಕ ರಾಜ್ಯ
ದೂ: 08175-273820
e-mail: secretary@adhyatmaprakasha.org

**ಬೆಂಗಳೂರು ಶಾಖೆ :**
ನಂ. 68 (ಹೊಸ ನಂ. 6), 6ನೇ ಮುಖ್ಯರಸ್ತೆ (ಎ.ಪಿ.ಕೆ. ರಸ್ತೆ), 2ನೇ ಬ್ಲಾಕ್,
ತ್ಯಾಗರಾಜನಗರ, ಬೆಂಗಳೂರು - 560 028.
ದೂ : 080-2676 5548
e-mail: shankara.bhaskara@gmail.com

**ಅಕ್ಷರಜೋಡಣೆ:**
ಡಿ.ಎನ್.ನರಹರಿ, ದೊಡ್ಡನಾರವಂಗಲ, ತುಮಕೂರು - 572 107.
Mobile : 98457 60612, 97383 52817,

**ಮುದ್ರಣ ಸ್ಥಾನ :**
ಶ್ರೀರಾಮ ಪ್ರಿಂಟರ್ಸ್, ನಂ - 25, 15ನೇ ಕ್ರಾಸ್, ಶ್ರೀನಿಧಿ ಲೇಔಟ್
ಬೆಂಗಳೂರು - 560 062. ಮೊಬೈಲ್ : 98453 46197.

# ಪ್ರಕಾಶಕರ ಬಿನ್ನಹ

ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳವರು ರುಧಿರೋದ್ಗಾರಿ ಸಂವತ್ಸರದ ಚೈತ್ರದಲ್ಲಿ (1923 ಏಪ್ರಿಲ್) 'ಅಧ್ಯಾತ್ಮಪ್ರಕಾಶ' ಮಾಸಪತ್ರಿಕೆಯನ್ನು ಪ್ರಪ್ರಥಮವಾಗಿ ಪ್ರಕಟಿಸಿದರು. ಪ್ರಥಮ ಸಂಪುಟದ ಪ್ರಥಮಸಂಚಿಕೆಯ ಸಂಪಾದಕರ ವಿಜ್ಞಾಪನೆಯಲ್ಲಿ ಕರ್ಮ, ಭಕ್ತಿ, ಜ್ಞಾನ, ವೈರಾಗ್ಯ, ಯೋಗ - ಮುಂತಾದ ಅಧ್ಯಾತ್ಮವಿಚಾರಗಳನ್ನೂ ಅದಕ್ಕೆ ಪೂರಕವಾದ ಲೇಖನಗಳನ್ನೂ ಪ್ರಕಟಿಸುತ್ತೇವೆಂದು ತಿಳಿಸಿದ್ದರು. ಅದರಂತೆ ಅನೇಕ ವೈದಿಕ - ಅವೈದಿಕ ಮತಗಳ ತತ್ತ್ವಸಿದ್ಧಾಂತಗಳ ಪರಿಚಯವನ್ನೂ ಪತ್ರಿಕೆಯಲ್ಲಿ ಮಾಡಿಸುತ್ತಾ ಬಂದರು. ಅವುಗಳನ್ನೆಲ್ಲ ಸಂಗ್ರಹಿಸಿ ಅಧ್ಯಾತ್ಮಪ್ರಕಾಶಕಾರ್ಯಾಲಯ ಸ್ಥಾಪನಾ ಶತಮಾನೋತ್ಸವದ ಸಂದರ್ಭದಲ್ಲಿ ಗ್ರಂಥರೂಪದಲ್ಲಿ ಪ್ರಕಟಿಸುತ್ತಿದ್ದೇವೆ.

ಈ ಗ್ರಂಥಪ್ರಕಟಣೆಗೆ ಶ್ರೀ ಡಾ|| ವೈ. ಅನಂತನಾರಾಯಣ, ಶ್ರೀ ಆರ್. ಬಿ ಗೋಪಿನಾಥ್, ಬೆಂ, 5000/- ಗಳನ್ನು ಉದಾರವಾಗಿ ಸಹಾಯಮಾಡಿರುತ್ತಾರೆ. ಇವರಿಗೆ ಕಾರ್ಯಾಲಯದ ಪರವಾಗಿ ಕೃತಜ್ಞತಾಪೂರ್ವಕ ಧನ್ಯವಾದಗಳು.

ಲೇಖನಗಳ ಸಂಗ್ರಹಕಾರ್ಯದಲ್ಲಿ ಶ್ರೀ ಡಾ|| ವೈ. ಅನಂತನಾರಾಯಣ ಮತ್ತು ದಿ|| ಹೆಚ್. ವೆಂಕಟನರಸಪ್ಪನವರು ಸಹಾಯನೀಡಿರುತ್ತಾರೆ. ಗ್ರಂಥದ ಕರಡನ್ನು ತಿದ್ದುವದರಲ್ಲಿ ಸಹಾಯಮಾಡಿರುವ ಶ್ರೀ ಲಕ್ಷ್ಮೀಶ ಭಟ್ಟ ಮತ್ತು ಶ್ರೀ ಯು. ಪಿ. ಶ್ರೀಕಂಠ- ಇವರಿಗೂ, ಡಿ.ಟಿ.ಪಿ. ಯನ್ನು ಮಾಡಿರುವ ಶ್ರೀ ಡಿ. ಎನ್. ನರಹರಿ ಶರ್ಮಾರವರವರಿಗೂ, ಅಂದವಾಗಿ ಮುದ್ರಣವನ್ನು ಮಾಡಿರುವ ಶ್ರೀರಾಮ ಪ್ರಿಂಟರ್ಸ್ ನವರಿಗೂ ಕಾರ್ಯಾಲಯದ ಪರವಾಗಿ ಕೃತಜ್ಞತಾಪೂರ್ವಕ ಧನ್ಯವಾದಗಳು.

ಜಿಜ್ಞಾಸುಗಳು ಎಂದಿನಂತೆ ಗ್ರಂಥವನ್ನು ಆದರದಿಂದ ಬರಮಾಡಿಕೊಂಡು ಕಾರ್ಯಾಲಯದ ಅಧ್ಯಾತ್ಮಪ್ರಸಾರ ಕಾರ್ಯದಲ್ಲಿ ತನು, ಮನ, ಧನಗಳಿಂದ ಸಹಕರಿಸಿರೆಂದು ಪ್ರಾರ್ಥಿಸುತ್ತೇವೆ.

**ಪ್ಲವ ಸಂವತ್ಸರದ ಆಷಾಢ** **ಪ್ರಕಾಶಕರು**
**ಕೃಷ್ಣ ತ್ರಯೋದಶೀ**
**ಶ್ರೀಶ್ರೀಗಳವರ ಆರಾಧನೆ**
**06-08-2021**

# ಪೀಠಿಕೆ

ಜಗತ್ತೆಲ್ಲವೂ ಅಧ್ಯಾತ್ಮ, ಅಧಿಭೂತವೆಂದು ಎರಡು ದೊಡ್ಡಪಂಗಡವಾಗಿರುವದು. ನಮ್ಮ ಪೂರ್ವಜರು ಎರಡೂ ಪಂಗಡದ ಮರ್ಮವನ್ನೂ ಅರಿತವರಾಗಿದ್ದು, ಅವಕ್ಕೆ ತಕ್ಕಂತೆ ವ್ಯವಹಾರವನ್ನು ನಡೆಸಿ ಸುಖವನ್ನು ಹೊಂದಿದ್ದರು. ಆದರೆ ಈಗ ಕಾಲವಶದಿಂದ ಅಧ್ಯಾತ್ಮವು ಕಣ್ಮರೆಯಾಗಿ ಅಧಿಭೂತವೊಂದೇ ಪ್ರಧಾನವಾಗಿ ತೋರುತ್ತಿದೆ. ಭೌತಿಕಸಂಪತ್ತಿನ ಸುಖವನ್ನು ಅನುಭವಿಸಬೇಕೆಂದರೂ ಅಧ್ಯಾತ್ಮವಿದ್ಯೆಯ ತಳಹದಿಯು ಬೇಕೆಂಬುದನ್ನು ಸಮಾಜವು ಮರೆತಿದೆ. ಅದನ್ನು ನೆನಪಿಸಲು ಮತ್ತೆ ಉಪನಿಷತ್ತಿನಲ್ಲಿ ಅಡಗಿರುವ ತತ್ತ್ವಗಳ ಬೆಳಕಿನಲ್ಲಿ ಸುಲಭವಾಗಿ ಅಧ್ಯಾತ್ಮಮಾರ್ಗವನ್ನು ಬೋಧಿಸುವ ಗ್ರಂಥಗಳು, ಪತ್ರಿಕೆಗಳು ಅವಶ್ಯ. ಆ ಉದ್ದೇಶದಿಂದಲೇ ಪ್ರಾರಂಭವಾದ ಪತ್ರಿಕೆ ಅಧ್ಯಾತ್ಮಪ್ರಕಾಶ.

ಅನೇಕ ಆಧ್ಯಾತ್ಮಿಕ ಪತ್ರಿಕೆಗಳಿವೆ, ಅವುಗಳಿಗೂ ಇದಕ್ಕೂ ಕೆಲವು ವ್ಯತ್ಯಾಸಗಳಿವೆ:

1. ಕರ್ಮ, ಭಕ್ತಿ, ಜ್ಞಾನ, ವೈರಾಗ್ಯ, ಯೋಗ – ಮುಂತಾದ ಅಧ್ಯಾತ್ಮವಿಚಾರದ ಯಾವ ಪ್ರಭೇದಕ್ಕೂ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡದೆ ಇದೆಲ್ಲ ಒಂದೇ ಗತಿಯನ್ನು ಕಾಣುವ ಪ್ರಸ್ಥಾನಭೇದವೆಂದು ಮನಗಾಣಿಸುವ ಪ್ರಯತ್ನ.

2. ವೈದಿಕದರ್ಶನಗಳಲ್ಲಿ ಹೇಗೋ ಹಾಗೆ ಅವೈದಿಕ ಮತಗಳಲ್ಲಿರುವ ವಿಚಾರಗಳನ್ನೂ ಸಾರಗ್ರಾಹಕ ದೃಷ್ಟಿಯಿಂದ ಪ್ರಕಟಿಸುವದು. ಇವು ಕೇವಲ ವೇದಪ್ರಮಾಣವನ್ನು ಒಪ್ಪದೇ ಇದ್ದರೂ ಅಮೋಘವಾದ ನೀತಿಮಾರ್ಗಕ್ಕೆ ಪ್ರೋತ್ಸಾಹಕೊಟ್ಟ ಬೌದ್ಧಜೈನಾದಿದರ್ಶನಗಳು ಈಗಿನಕಾಲಕ್ಕೆ ಗ್ರಂಥಸ್ಥವಾಗಿರುವ ವಿಷಯಗಳು. ನಮ್ಮ ದರ್ಶನಗ್ರಂಥಗಳಲ್ಲಿ ಹೇಳಿರುವ ಅವೈದಿಕದರ್ಶನಗಳ ಪೂರ್ವಪಕ್ಷಗಳ ಬಲಾಬಲಗಳನ್ನು ಆಯಾ ಮತದವರು ಹೇಳುವ ಅಭಿಪ್ರಾಯಗಳಿಂದಲೇ ತಿಳಿಯುವದು ಯುಕ್ತವಾಗಿದೆ. ಹಿಂದಿನ ಆಚಾರ್ಯರುಗಳು ಚಾರ್ವಾಕಾದಿ ಮತಗಳ ಗುಣಾಗುಣಳನ್ನು ಹೀಗೆಯೇ ವಿಚಾರಮಾಡಿದರೆಂಬುದು ಅವರ ಅಮೋಘವಾದ ಭಾಷ್ಯಗಳಿಂದಲೇ ವ್ಯಕ್ತವಾಗುವದು. ಈಗ ಪ್ರಾಚೀನಕಾಲದ ಅವೈದಿಕಮತಗಳು ಲುಪ್ತವಾಗಿ ಹೊಸಮತಗಳು ತಲೆದೋರಿವೆ. ಈ ನವೀನ ಮತಗಳು ಜಗತ್ತಿನ ಬಹುಭಾಗದ ಜನರಮೇಲೆ ತಮ್ಮ ಪರಿಣಾಮವನ್ನು ಉಂಟುಮಾಡಿರುತ್ತವೆ. ಈ ಮತಗಳಿಂದ ಜಗತ್ತಿನ ಇತಿಹಾಸವೇ ಬದಲಾಗುತ್ತಿವೆ. ಈಗ ಅವುಗಳ ಸಾರವನ್ನು ಗ್ರಹಿಸದೇ ಇರುವದು ಕೂಪಮಂಡೂಕವೃತ್ತಿಯಂತೆ ತೋರುತ್ತದೆ. ಕೆಲವು ಶೋಧನೆಗಳನ್ನು ಗಮನಿಸಿದರೆ ಪ್ರಾಚೀನಾರ್ಯರ ಸನಾತನ ವೈದಿಕಸಿದ್ಧಾಂತವೇ

ಬಗೆಬಗೆಯ ಮಾರ್ಪಾಡುಗಳನ್ನು ಹೊಂದಿ ಹೊಸ ಹೆಸರುಗಳನ್ನು ಪಡೆಯುತ್ತ ಬಂದಿದೆ ಎಂಬುದು ವಿದಿತವಾಗುತ್ತದೆ. ಈ ಎಲ್ಲ ಕಾರಣಗಳಿಂದ **'ಯುಕ್ತಿಯುಕ್ತಮುಪಾದೇಯಂ ಬಾಲಾದಪಿ ಶುಕಾದಪಿ'** (ಯುಕ್ತಿ ಇರುವ ಮಾತನ್ನು ಬಾಲಕನು ಹೇಳಲಿ, ಕೊನೆಗೊಂದು ಗಿಣಿಯೇ ಹೇಳಲಿ ತೆಗೆದುಕೊಳ್ಳಬೇಕು) – ಎಂಬಂತೆ ಅಧ್ಯಾತ್ಮವಿಚಾರವು ಎಲ್ಲೆಲ್ಲಿ ಕವಲೊಡೆದು ಎಂತೆಂಥ ಫಲಪುಷ್ಪಗಳನ್ನು ಬಿಡುತ್ತಿರುವದೆಂಬುದನ್ನು ವಿಚಾರಿಸುವದು ಪ್ರಯೋಜನಕಾರಿಯಾಗಿದೆ.

ಈಗ ಭರತಖಂಡದಲ್ಲಿ ಕೇಳಿ ಅಥವಾ ನೋಡಿ ಪ್ರಸಿದ್ಧವಾಗಿರುವ ಆರ್ಯಸಮಾಜ, ಬ್ರಹ್ಮಸಮಾಜ, ಪ್ರಾರ್ಥನಾಸಮಾಜ, ಕ್ರೈಸ್ತಮತ, ಮಹಮ್ಮದೀಯಮತ, ಥಿಯೋಸಫಿ, ಮುಂತಾದ ದರ್ಶನಗಳು ಜೈನ, ಬೌದ್ಧ ಮುಂತಾದ ಪ್ರಾಚೀನ ದರ್ಶನಗಳು ಇವುಗಳಲ್ಲಿ ದೊರೆಯುವ ಅಧ್ಯಾತ್ಮವಿಚಾರವನ್ನು ನಿಷ್ಪಕ್ಷಪಾತಿಗಳಾದ ಲೇಖಕರ ಸಹಾಯದಿಂದ ಜಿಜ್ಞಾಸುಗಳಿಗೆ ಸಹಾಯವಾಗುವಂತೆ ಪ್ರಕಟಿಸುತ್ತಾ ಬಂದಿದೆ.

1923 ರಿಂದ 1975ರ ವರೆಗೆ ಅಧ್ಯಾತ್ಮಪ್ರಕಾಶ ಪತ್ರಿಕೆಯಲ್ಲಿ ಶ್ರೀ ಶಂಕರಸಿದ್ಧಾಂತ, ವಿಶಿಷ್ಟಾದ್ವೈತ ಸಿದ್ಧಾಂತ, ದ್ವೈತಸಿದ್ಧಾಂತ, ವಲ್ಲಭಮತ, ಅರವಿಂದಮತ, ವೀರಶೈವಸಿದ್ಧಾಂತ, ಜೈನಸಿದ್ಧಾಂತ, ಬೌದ್ಧದರ್ಶನ, ಕ್ರೈಸ್ತಮತ, ಇಸ್ಲಾಂಮತ, ಸೂಫಿಮತ, ಪಾರ್ಸಿ, ಯಹೂದಿ – ಈ ಎಲ್ಲ ವೈದಿಕಾವೈದಿಕ ದರ್ಶನಗಳ ಸಿದ್ಧಾಂತಗಳನ್ನು ಪ್ರಕಟಿಸಲಾಗಿತ್ತು. ಅವು ಪತ್ರಿಕೆಯ ಸಂಪುಟಗಳಲ್ಲಿ ಹುದುಗಿದ್ದು, ಮತ್ತೆ ಜಿಜ್ಞಾಸುಗಳಿಗೆ ಅಧ್ಯಯನಕ್ಕೆ ಒದಗಬೇಕೆಂದು ಸಂಗ್ರಹಿಸಿ ಪ್ರಕಟಿಸಲಾಗಿದೆ.

ಆತ್ಮನನ್ನು ತಿಳಿಯದ ಅಜ್ಞಾನದಿಂದ ಸಂಸಾರದ ಅನರ್ಥವು ಉಂಟಾಗಿರುವದು ಎಂಬುದನ್ನೂ ತತ್ತ್ವಜ್ಞಾನವು ಮೋಕ್ಷಕ್ಕೆ ಅವಶ್ಯವೆಂಬುದನ್ನು ಬಹುಮಟ್ಟಿಗೆ ಎಲ್ಲ ಅಧ್ಯಾತ್ಮವಾದಿಗಳೂ ಒಪ್ಪುತ್ತಾರೆ. ವಸ್ತುತಂತ್ರವಾದದ್ದೇ ಜ್ಞಾನವೆಂದು ಕೆಲವರು, ಮನೋವೃತ್ತಿರೂಪವಾದದ್ದೇ ಜ್ಞಾನವೆಂದು ಕೆಲವರು. ಹೀಗೆ ಜ್ಞಾನಾಜ್ಞಾನಗಳ ಸ್ವರೂಪದ ವಿಷಯದಲ್ಲಿ ಬಹಳ ಮತಭೇದವಿರುತ್ತದೆ. ವೇದಾಂತವಿಚಾರವನ್ನು ಮಾಡುವಾಗ ಈ ವಿಷಯಗಳನ್ನೆಲ್ಲ ತಿಳಿದಿರುವದು ಅತ್ಯವಶ್ಯ.

ಸಾಂಖ್ಯ, ಯೋಗ, ನ್ಯಾಯ, ವೈಶೇಷಿಕ, ಮೀಮಾಂಸಾ, ವೇದಾಂತ ಇವು ಆರು ಆಸ್ತಿಕದರ್ಶನಗಳು. ಇವುಗಳಲ್ಲಿ ವೇದಾಂತವೊಂದನ್ನು ಬಿಟ್ಟರೆ ಮೋಕ್ಷಮಾರ್ಗವನ್ನು ತೋರುವ ಉಳಿದ ಸಿದ್ಧಾಂತಗಳ ಕಾಣಬರುತ್ತಿಲ್ಲ. ಅದರೆ ಸಾಂಖ್ಯಾದಿ ದರ್ಶನಗಳ

ವಿಷಯಗಳು ಎಷ್ಟೋ ವೇದಾಂತದಲ್ಲಿ ಬೆರೆತುಹೋಗಿವೆ. ಈ ದರ್ಶನಗಳ ಅಸಾಧಾರಣ ಸ್ವರೂಪವೇನೆಂಬುದು ತಿಳಿಯದೇ ಇರುವದರಿಂದ ಎಲ್ಲವೂ ವೇದಾಂತವೆಂದೇ ವ್ಯವಹರಿಸುವಂತಾಗಿದೆ. ಆದ್ದರಿಂದ ಈ ಪ್ರಾಚೀನದರ್ಶನಗಳ ಪರಿಚಯವನ್ನು ಮಾಡಿ ಕೊಳ್ಳಬೇಕು. ಅವುಗಳಿಗಿರುವ ಪರಸ್ಪರ ಸಂಬಂಧವ್ಯತ್ಯಾಸಗಳು ತಿಳಿದರೆ ಆಗ ಶ್ರೀ ಶಂಕರಭಗವತ್ಪಾದರ ಉಪದೇಶದ ಅಸಾಧಾರಣ ಸ್ವರೂಪವು ಸುಲಭವಾಗಿ ಮನದಟ್ಟಾ ಗುತ್ತದೆ.

ಶ್ರೀ ಶಂಕರಾಚಾರ್ಯರವರ ಅಭಿಪ್ರಾಯವು ಹೀಗೆ, ಶ್ರೀ ರಾಮಾನುಜಾ ಚಾರ್ಯರ ಅಭಿಪ್ರಾಯವು ಹೀಗೆ ಎಂದು ಉಪನ್ಯಾಸಾದಿಗಳಲ್ಲಿ ಉದಾಹರಿಸುವದು ಕಂಡುಬರುತ್ತದೆ. ಆ ಆಚಾರ್ಯರುಗಳ ಉಪದೇಶದ ರೂಪುರೇಖೆಗಳನ್ನು ಸಂಕ್ಷಿಪ್ತವಾದಿ ತಿಳಿದಿರುವದೂ ಅತ್ಯವಶ್ಯವಾಗಿದೆ. ಇನ್ನು ವೈದಿಕಮತವೇ ಆಗಿದ್ದ ವೀರಶೈವ ಸಿದ್ಧಾಂತ ಪರಿಚಯ, ಅವೈದಿಕ ದರ್ಶನಗಳಾದ ಬೌದ್ಧ, ಜೈನಾದಿ ದರ್ಶನಗಳ ಪರಿಚಯವಿದ್ದರೆ ಪರಸ್ಪರ ಹೋಲಿಸಿ ಉಪನಿಷದ್ದರ್ಶನವನ್ನು ಅಧ್ಯಯನಮಾಡುವದು ಸುಲಭವಾಗುತ್ತದೆ.

ಶ್ರೀ ಶಂಕರಾಚಾರ್ಯರೇ ಮೊದಲಾದ ದ್ವೈತಾದ್ವೈತವಿಶಿಷ್ಟಾದ್ವೈತಾದಿ ಭಾಷ್ಯಗಳು, ಅವುಗಳಿಗಿರುವ ವ್ಯಾಖ್ಯಾನಗಳ ಕಾಲದಲ್ಲಿ ವೈದಿಕ-ಅವೈದಿಕ ಮತಗಳ ನಡುವೆ ಖಂಡನ ಮಂಡನಗಳು ನಡೆಯುತ್ತಿದ್ದವು. ಆದರೆ ಈಗ ಪಾಶ್ಚಾತ್ಯ ದರ್ಶನಗಳ ಪ್ರಭಾವವೂ ನಮ್ಮ ದರ್ಶನಗಳ ಮೇಲೆ ಉಂಟಾಗಿದೆ. ಈ ದರ್ಶನಗಳನ್ನು ಪಾಶ್ಚಾತ್ಯ ದರ್ಶನಗಳ ಜೊತೆ, ನೈತಿಕವಿಷಯಗಳ ಜೊತೆ ಹೋಲಿಸುತ್ತಾ, ಭೌತಿಕವಿಜ್ಞಾನದ ನೆಲೆಗಟ್ಟನ್ನು ಅನುಸರಿಸಬೇಕೆಂಬ ಆಶಯವೂ ತೋರುತ್ತಿದೆ. ಇದರಿಂದ ದರ್ಶನಗಳ ಪ್ರಧಾನ ಉಪದೇಶಗಳೇ ಕಣ್ಮರೆಯಾಗುವ ಹಂತಕ್ಕೆ ಬಂದಿದೆ. ಆದ್ದರಿಂದ ಈ ಎಲ್ಲ ಪೂರ್ವ-ಪಶ್ಚಿಮದ ತತ್ತ್ವಸಿದ್ಧಾಂತಗಳ ವಿಚಾರವು ಪ್ರಕೃತಸಂದರ್ಭದಲ್ಲಿ ವೇದಾಂತಜಿಜ್ಞಾಸುಗಳಿಗೆ ಅತ್ಯವಶ್ಯವಾಗಿದೆ.

ಶ್ರೀ ಶಂಕರಾಚಾರ್ಯರು ಪ್ರಶ್ನೋಪನಿಷತ್ತಿನಲ್ಲಿ - ಪರಸ್ಪರ **ವಿರುದ್ಧಾರ್ಥಕಲ್ಪನಾತಃ ಆಮಿಷಾರ್ಥಿನ ಇವ ಪ್ರಾಣಿನಃ ಅನ್ಯೋನ್ಯವಿರುಧ್ಯಮಾನಾರ್ಥದರ್ಶಿತ್ವಾತ್ ಪರಮಾರ್ಥತತ್ತ್ವಾದ್ದೂರಮೇವ ಅಪಕೃಷ್ಯನ್ತೇ । ಅತಃ ತನ್ಮತಮ್ ಅನಾದೃತ್ಯ ವೇದಾನ್ತಾರ್ಥತತ್ತ್ವಮ ಏಕತ್ವದರ್ಶನಂ ಪ್ರತಿ ಆದರವನ್ತೋ ಮುಮುಕ್ಷವಃ ಸ್ಯುಃ ಇತಿ ತಾರ್ಕಿಕಮತದೋಷಪ್ರದರ್ಶನಂ ಕಿಂಚಿದುಚ್ಯತೇಽಸ್ಮಾಭಿಃ ॥** (ಒಬ್ಬರಿಗೊಬ್ಬರು ವಿರುದ್ಧವಾಗಿರುವ ವಿಷಯಗಳನ್ನು ಕಲ್ಪಿಸುತ್ತಿರುವದರಿಂದ ಮಾಂಸವನ್ನು ಬಯಸುತ್ತಿರುವ

ಪ್ರಾಣಿಗಳಂತೆ ಒಬ್ಬರಿಗೆ ವಿರುದ್ಧವಾದ ಅರ್ಥವನ್ನು ಮತ್ತೊಬ್ಬರು ಒಪ್ಪುತ್ತಿರುವದರಿಂದ ಪರಮಾರ್ಥತತ್ತ್ವಕ್ಕೆ ದೂರವಾಗಿಯೇ ಹೋಗುತ್ತಿರುವರು. ಆದ್ದರಿಂದ ಅವರ ಮತವನ್ನು ಅಸಡ್ಡೆ ಮಾಡಿ ಉಪನಿಷತ್ತುಗಳಲ್ಲಿರುವ ವಿಷಯದ ತತ್ತ್ವವಾದ ಏಕತ್ವದರ್ಶನದಲ್ಲಿ ಮುಮುಕ್ಷುಗಳು ಆದರವುಳ್ಳವರಾಗಲಿ ಎಂದು ತಾರ್ಕಿಕರ ಮತದಲ್ಲಿ ಸ್ವಲ್ಪಮಟ್ಟಿಗೆ ದೋಷವನ್ನು ಹೇಳುತ್ತಿದ್ದೇವೆ) ಎಂದು ಹೇಳಿ, ವೇದಾರ್ಥವನ್ನು ಬಲ್ಲಾತನು ಒಬ್ಬರಿಗೊಬ್ಬರು ವಿರುದ್ಧವಾಗಿ ವಾದಮಾಡುತ್ತಿರುವವರಲ್ಲಿಯೇ ವಿರೋಧವುಂಟಾಗುವ ಕಾರಣವನ್ನು ಬಿಟ್ಟು ಅವರಿಂದ ಸದ್ಬುದ್ಧಿಯನ್ನು ಕಾಪಾಡಿಕೊಂಡು ಸುಲಭವಾಗಿ ಆನಂದವನ್ನು ಹೊಂದುತ್ತಾನೆ (ಪ್ರಶ್ನ. 6-3) ಎಂದಿದ್ದಾರೆ. ಆದ್ದರಿಂದ ಬೇರೆಬೇರೆ ಮತ-ಸಿದ್ಧಾಂತಗಳನ್ನು ಹೋಲಿಸಿ ವೇದಾಂತಸಿದ್ಧಾಂತಕ್ಕೆ ಧಕ್ಕೆ ಬರದಂತೆ ವಿಷಯಗಳನ್ನು ಅಳವಡಿಸಿಕೊಳ್ಳುತ್ತಾ **'ಯೇನ ತು ಅಂಶೇನ ನ ವಿರುಧ್ಯತೇ ತದಿಷ್ಟಮೇವ'** (ಯಾವ ಅಂಶದಲ್ಲಿ ನಮ್ಮ ಸಿದ್ಧಾಂತಕ್ಕೆ ವಿರುದ್ಧವಲ್ಲವೋ ಅದು ಒಪ್ಪಿತವಾದದ್ದೇ) ಎಂಬಂತೆ ವಿಷಯಗಳನ್ನು ಅಳವಡಿಸಿಕೊಂಡು ತತ್ತ್ವಜಿಜ್ಞಾಸೆಯನ್ನು ಮಾಡಲು ಅನುಕೂಲವಾಗುವಂತೆ ಪೂರ್ವ-ಪಶ್ಚಿಮಗಳ ತತ್ತ್ವ ಸಿದ್ಧಾಂತಗಳನ್ನು ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಯಲ್ಲಿ ಶ್ರೀ ಶ್ರೀಗಳವರು ಸಂಪಾದಿಸಿದ್ದಂತೆ ಈ ಗ್ರಂಥದಲ್ಲಿ ಅಳವಡಿಸಲಾಗಿದೆ. ಕ್ರೈಸ್ತಾದಿಮತಗಳ ವಿಷಯದಲ್ಲಿ ಇಲ್ಲಿಯ ಕೆಲವು ಅಭಿಪ್ರಾಯಗಳಿಗೂ ಈಗಿನ ವಿಚಾರದಲ್ಲಿಯೂ ಭಿನ್ನವಾಗಿಕಾಣಿಸಬಹುದು. ಅವು ನೂರು ವರ್ಷಗಳ ಹಿಂದಿನ ವಿಚಾರವಿಧಾನವನ್ನು ನೆನಪುಮಾಡುವದಷ್ಟೇ ಆಗಿದೆ. ಈ ಗ್ರಂಥದಲ್ಲಿ ಅಲ್ಲದೆ ಪರಮಾರ್ಥಚಿಂತಾಮಣಿಯ ಎರಡನೆ ಭಾಗದಲ್ಲಿಯೂ ಪಾಶ್ಚಾತ್ಯತತ್ತ್ವಜ್ಞಾನಿಗಳ ಸಿದ್ಧಾಂತಗಳ ವಿಮರ್ಶೆಯನ್ನು ಶ್ರೀ ಶ್ರೀಗಳವರು ಮಾಡಿಕೊಟ್ಟಿದ್ದಾರೆ. ಅವನ್ನೂ ಅಧ್ಯಯನಮಾಡಬಹುದು.

ಅಧ್ಯಾತ್ಮವಿದ್ಯಾವೃಕ್ಷದ ತಾಯಿ ಬೇರು ವೇದಾಂತವು; ವೇದಾಂತಸಿದ್ಧಾಂತದ ಆವಾಸಸ್ಥಾನಗಳು ಉಪನಿಷತ್ತುಗಳು. ಮಿಕ್ಕ ದೇಶಗಳಲ್ಲಿಯೂ ಅಧ್ಯಾತ್ಮವಿಚಾರವು ಜರುಗಿರುವದು ನಿಜ; ಆದರೆ ವೇದಾಂತಸಿದ್ಧಾಂತದ ಸಾಕ್ಷಾತ್ ಆಧಾರದ ಮೇಲೆ ಅಥವಾ ಪರಂಪರೆಯಿಂದ ಅವುಗಳಿಂದ ಪ್ರೇರಿತವಾಗಿ ಹುಟ್ಟಲಿಲ್ಲವೆಂಬ ಅಧ್ಯಾತ್ಮಕಲೆಯನ್ನು ಕಾಣುವದು ಸಾಧ್ಯವಿಲ್ಲ. ಆದ್ದರಿಂದ ಅಧ್ಯಾತ್ಮವಿದ್ಯೆಗೆಲ್ಲ ಮೂಲವಾಗಿರುವ ಉಪನಿಷತ್ಸಿದ್ಧಾಂತವನ್ನೂ ಇದನ್ನು ಪರಿಪುಷ್ಟಿಗೊಳಿಸುವ ಮಿಕ್ಕದರ್ಶನಗಳನ್ನೂ ಪರಿಚಯ ಮಾಡಿಕೊಂಡು ವೇದಾಂತಸಿದ್ಧಾಂತದ ಚರಮಗುರಿಯನ್ನು ಮುಟ್ಟೋಣ.

**(ಸಂಗ್ರಹ)**

**ಲಕ್ಷ್ಮೀಶ ಭಟ್ಟ**

# ವಿಷಯಾನುಕ್ರಮಣಿಕೆ


| ಕ್ರ.ಸಂ | ವಿಷಯ | ಪುಟ |
|---|---|---|
| 1. | ಮತಗಳೂ ತತ್ತ್ವೋಪದೇಶವೂ | 1 |
| | **ಶ್ರೀಶಂಕರಸಿದ್ಧಾಂತ -** | |
| 2. | ಅಧ್ಯಾತ್ಮ ಜ್ಞಾನದ ಬೆಲೆ | 4 |
| 3. | ಅಧ್ಯಾತ್ಮ ಶ್ರವಣ | 7 |
| 4. | ಮನನ ಸ್ವರೂಪ | 11 |
| 5. | ಮನನದ ಮಹತ್ವ | 15 |
| 6. | ನಿದಿಧ್ಯಾಸನ | 18 |
| 7. | ಬ್ರಹ್ಮಜ್ಞಾನ | 21 |
| 8. | ಬ್ರಹ್ಮಾತ್ಮಜ್ಞಾನ | 25 |
| 9. | ಸಾಂಖ್ಯದರ್ಶನ | 29 |
| 10. | ಯೋಗದರ್ಶನ | 34 |
| 11. | ನ್ಯಾಯದರ್ಶನ | 37 |
| 12. | ವೈಶೇಷಿಕದರ್ಶನ | 41 |
| 13. | ಪೂರ್ವಮೀಮಾಂಸೆ | 45 |
| 14. | ಸರಿಯಾದ ಜ್ಞಾನದ ಸ್ವರೂಪ | 50 |
| 15. | ಆತ್ಮಲಾಭದ ಪ್ರಯೋಜನ | 53 |
| 16. | ಮತತ್ರಯ | 58 |
| | **ವಿಶಿಷ್ಟಾದ್ವೈತ ಸಿದ್ಧಾಂತ -** | |
| 17. | ಶ್ರೀರಾಮಾನುಜಾಚಾರ್ಯರ ಸಿದ್ಧಾಂತ | 62 |
| 18. | ವೇದಾಂತವಿಹಿತಜ್ಞಾನ | 75 |
| 19. | ಸಾರತಮವಾವುದು? | 79 |
| 20. | ಅರ್ಥಪಂಚಕವು | 83 |
| 21. | ಮೂಲಮಂತ್ರ | 87 |
| 22. | ದ್ವಯಮಂತ್ರ | 89 |
| 23. | ಅವಸ್ಥಾಪಂಚಕ | 92 |

24. ಗೀತಾಚಾರ್ಯಪ್ರಭಾವ 97
25. ಮತತ್ರಯಸಾಮರಸ್ಯ 100
26. ಮತಜಿಜ್ಞಾಸೆಯ ಪ್ರಕಾರಗಳು 103
27. ವೈಖಾನಸರ ಧ್ಯೇಯ 111

**ದ್ವೈತಸಿದ್ಧಾಂತ**

28. **ಶ್ರೀಮನ್ಮಧ್ವಸಿದ್ಧಾಂತ** 116
29. ಮಾಂಡೂಕ್ಯೋಪನಿಷತ್ತಿನ ತಾತ್ಪರ್ಯವು 122
30. ಕರ್ಮಬಂಧ 126
31. ಚೌಪದ 129
32. ಶ್ರೀಕೃಷ್ಣೋಪನಿಷತ್ ಸಾರ 133
33. ಹರಿಯೇ ಸರ್ವೋತ್ತಮನು 141
34. **ವಲ್ಲಭಮತ** -ಶುದ್ಧಾದ್ವೈತ 144
35. ಸದಾಚಾರವೃಕ್ಷದ ಸ್ವರೂಪ 148
36. **ಅರವಿಂದಮತವಿಮರ್ಶೆ** 175

ವೀರಶೈವಸಿದ್ಧಾಂತ -

37. ವೀರಶೈವಮತ 210
38. ಎರಡು ಬಗೆಯ ಉಪಾಸನೆಗಳು 216
39. ವೀರಶೈವಧರ್ಮವು 218
40. ವೀರಶೈವಸಿದ್ಧಾಂತ ಸ್ವರೂಪ 237

ಜೈನಸಿದ್ಧಾಂತ -

41. ಆತ್ಮನಾರು? 240
42. ಶ್ರೀಮಹಾವೀರಸ್ವಾಮಿಯ ಆದೇಶ 245
43. ಜೀವ ಅಥವಾ ಆತ್ಮ 248
44. ಜೈನಶಾಸ್ತ್ರದ ನಯ 254
45. ಜೈನರ ಭಕ್ತಿಯೋಗ 268
46. ಗುರುಶಿಷ್ಯಸಂವಾದ 274
47. ಈಶ್ವರೋಪಾಸನೆ 276
48. ಪ್ರಾಣಾಯಾಮದಿಂದುಂಟಾಗುವ ಲಾಭ 278

| | | |
|---|---|---|
| 49. | ಧ್ಯಾನ | 280 |
| 50. | ಸಮಾಧಿಮರಣ | 282 |
| 51. | ಜೈನದರ್ಶನದಲ್ಲಿ ಕರ್ಮಸಿದ್ಧಾಂತ | 284 |
| 52. | ವಿದುಷಿ ಜಯಂತಿ | 291 |
| 53. | ಅನಾಥೀ ಮುನಿ | 293 |
| | **ಬೌದ್ಧದರ್ಶನ -** | |
| 54. | ಬೌದ್ಧಧರ್ಮಕ್ಕೆ ಭರತಖಂಡದಲ್ಲಿ ಸ್ವಾಗತ | 299 |
| 55. | ಸಮಾಜದ ಏಳಿಗೆಯ ವಿಷಯದಲ್ಲಿ ಬುದ್ಧನ ಉಪದೇಶ | 302 |
| 56. | ಬೌದ್ಧಸಿದ್ಧಾಂತದ ಮೂಲತತ್ತ್ವಗಳು | 306 |
| 57. | ಆರ್ಯಸತ್ಯಗಳು | 310 |
| 58. | ಪ್ರತೀತ್ಯಸಮುತ್ಪಾದ- 1 | 313 |
| 59. | ಪ್ರತೀತ್ಯಸಮುತ್ಪಾದ -2 | 316 |
| 60. | ಹನ್ನೆರಡು ನಿದಾನಗಳು | 321 |
| 61. | ವಿಜ್ಞಾನವಾದ | 325 |
| 62. | ಬೌದ್ಧಮತದಲ್ಲಿ ಕರ್ಮವಿಪಾಕ | 331 |
| 63. | ಬೌದ್ಧಮತದಲ್ಲಿ ಅನಾತ್ಮವಾದ | 334 |
| 64. | ಭರತಖಂಡದಲ್ಲಿ ಬೌದ್ಧಮತವು ಕಣ್ಮರೆಯಾದದ್ದು | 338 |
| 65. | ಬುದ್ಧನ ಉಪದೇಶವೂ ಅದಕ್ಕೆ ವ್ಯಾಖ್ಯಾನಗಳೂ | 347 |
| 66. | ಬುದ್ಧನ ಜಯಗಾಥಾ | 352 |
| 67. | ತಿಳಿದವರು ವಾದಮಾಡುವ ರೀತಿ | 353 |
| 68. | ಭಿಕ್ಷುಗಳೇಕೆ ತಮ್ಮ ದೇಹದ ಪೋಷಣೆಯನ್ನು ಮಾಡಿಕೊಳ್ಳುವರು? | 354 |
| 69. | ಶುದ್ಧವಾದ ನಿರ್ವಾಣಕ್ಕೆ ಹಾದಿ | 355 |
| | **ಕ್ರೈಸ್ತಮತ -** | |
| 70. | ಏಸುಕ್ರಿಸ್ತ | 356 |
| 71. | ಕ್ರೈಸ್ತಜಯಂತಿ | 359 |
| 72. | ಉಪನಿಷತ್ಸಿದ್ಧಾಂತವೂ ಕ್ರೈಸ್ತಮತವೂ | 362 |
| 73. | ಥಿಯಾಸೊಫಿ ಮತ್ತು ಕ್ರಿಸ್ತಿಯನ್ ಮತ | 365 |
| 74. | ಕ್ರೈಸ್ತನಂತೆ ನಡೆಯುವದು | 368 |

75. ಜೀಸಸ್ಸನು ಬೋಧಿಸಿದ ಕ್ರೈಸ್ತಧರ್ಮ 369

76. ಕ್ರೈಸ್ತನ ಕೆಲವು ಉಪದೇಶಗಳು 372

77. ಜೀಸಸ್ ಕ್ರೈಸ್ತನ ಕೆಲವು ಸೂಕ್ತಿಗಳು 373

78. ಕ್ರೈಸ್ತನೂ ಅವನ ಉಪದೇಶವೂ 374

79. ಜ್ಞಾನಸ್ನಾನದಾತನಾದ ಜಾನನು 378

80. ಜೇಕಬ್ ಬೊ ಎಹ್ಮ್ 380

81. ಎಲ್ಲಿ ಬಿತ್ತಿದ ಬೀಜವು ಸಾರ್ಥಕವಾಗುವದು? 386

82. ಏಷಿಯದ ಯುವಕರಿಗೆ 388

83. ಹೆನ್ರಿ ಬರ್ಗ್ಸನ್ನರವರ ಸಿದ್ಧಾಂತ 391

ಇಸ್ಲಾಂ ಮತ -

84. ಇಸ್ಲಾಂ ಎಂದರೇನು? 400

85. ಮಹಮ್ಮದ್ ಪೈಗಂಬರನು 401

86. ಜೀವನದ ಬೆಳಕು 405

87. ಮಹಮ್ಮದ್ ಪೈಗಂಬರನ ಕೆಲವು ಸೂಕ್ತಿಗಳು 409

88. ಹ|| ಅಬೂಸ್ವಾಲಿಹರವರ ಗೃಹಸ್ಥಾಶ್ರಮಪ್ರವೇಶ 410

89. ಹ|| ಇಬ್ರಾಹೀಮರ ಏಕದೇವಾರಾಧನೆ 416

90. ಮತವೂ ಸಾಕ್ಷಾತ್ಕಾರವೂ 419

91. ಹ|| ಮಹಮ್ಮದ ಪೈಗಂಬರರ ಅತಿಥಿಸತ್ಕಾರ 420

92. ಸಭ್ಯಗೃಹಸ್ಥನ ಲೌಕಿಕ ವ ಧಾರ್ಮಿಕ ಕರ್ತವ್ಯ ಕರ್ಮಗಳು 425

93. ಎರಡು ಇಸ್ಲಾಮಿ ರತ್ನಗಳು 426

94. ಹ|| ಸೈಯದ ಅಬ್ದುಲ್‌ಕಾದರ ಜೀಲಾನಿಯವರು 430

95. ಹಿಂದೂರಾಣಿಯ ಮುಸಲ್ಮಾನ ಬಂಧು 443

96. ಹ|| ಅಹಮ್ಮದ ಹರ್ಬ ನೇಷಾಪುರಿ 446

97. ಇಸ್ಲಾಂ ಮತ್ತು ಹಿಂದೂ ಧರ್ಮಗಳಲ್ಲಿ ಭ್ರಾತೃಭಾವನೆ 449

98. ಮುಸಲ್ಮಾನರ ಮತದಲ್ಲಿ ದೇವರು 455

99. ಇಸ್ಲಾಮ್ ಮತದಲ್ಲಿ ಕೆಲವು ಧ್ಯಾನಪ್ರಕಾರಗಳು 457

100. ಇಸ್ಲಾಂಮತವೂ ಗೋಹತ್ಯವೂ 461

**ಸೂಫಿಮತ –**


| | | |
|---|---|---|
| 101. | ಸೂಫಿಯ ಪರಿಚಯ | 464 |
| 102. | ಸೂಫಿಪಂಥ | 465 |
| 103. | ಸೂಫಿಕವಿಗಳು | 468 |
| 104. | ಆಧುನಿಕ ಸೂಫಿಮತ | 471 |
| 105. | ಮುಸಲಮಾನ ಸಾಧ್ವಿ ರಬಿಯಾ | 473 |
| 106. | ಬಾಬಿಪಂಥ | 476 |
| 107. | ಬಾಹಾ ಉಲ್ಲ್ಹನ ಪಂಥ | 482 |
| 108. | ಬಾಹ್ಯೆ(ನನ್ನ) ಮತ | 486 |
| 109. | ಬಾಹ್ಯೆ ಶತಮಾನೋತ್ಸವ | 490 |
| 110. | ಪಾರ್ಸಿಯವರ ಮತ | 494 |
| 111. | ಸೂರ್ಯದಾಹ | 500 |
| 112. | ಯೂರೋಪಿನ ಶಂಕರಾಚಾರ್ಯ ಮಿಸ್ಟರ್ ಎಕ್ಹಾರ್ಟ್ | 503 |
| 113. | ಮೂರ್ತಿಪೂಜೆ | 508 |
| 114. | ಗಟ್ಟಿ ಮೆದು | 517 |
| 115. | ಮತಗಳ ಗುರಿ | 517 |
| 116. | ಯಹೂದ್ಯರು | 519 |
| 117. | ಮಹಾಧರ್ಮಗ್ರಂಥ | 522 |
| 118. | ಥೋರೊ | 525 |
| 119. | ಕೆಲವು ಪ್ರಾರ್ಥನೆಗಳು | 527 |
| 120. | ಸಂದೇಶದ ವಿಷಯಕ್ಕೆ ಅಭಿಪ್ರಾಯಭೇದ | 529 |
| 121. | ಧರ್ಮಸಂಸ್ಥೆಗಳೂ ಸಮತಾವಾದವೂ | 530 |
| 122. | ಗುರುಪರಮೇಶ್ವರನಲ್ಲಿ ಭಕ್ತಿ | 534 |
| 123. | ಅಂತಃಕರಣಕ್ಕೆ ಸಂಸ್ಕಾರದ ಅವಶ್ಯಕತೆ | 538 |
| 124. | ವಿಕಾಸಕ್ರಮದ ಪರೀಕ್ಷೆ | 539 |


★★★★★

# ಮತಗಳು ಮತ್ತು ತತ್ತ್ವಸಿದ್ಧಾಂತಗಳು

## ಮತಗಳೂ ತತ್ತ್ವೋಪದೇಶವೂ

ಶ್ರೀ. ಲ. ನರಸಿಂಹ

ಮತವೆಂದರೆ ಅಭಿಪ್ರಾಯವು. 'ಈ ವಿಷಯದಲ್ಲಿ ಇದೇ ನನ್ನ ಮತವು' ಎಂದು ಜನರು ವ್ಯವಹಾರದಲ್ಲಿ ಆಡಿಕೊಳ್ಳುವದನ್ನು ನಾವು ಕೇಳಿರುತ್ತೇವೆ. ಅದೇ ವಿಷಯದಲ್ಲಿ ಮಿಕ್ಕವರು ಬೇರೆಯ ಮತವುಳ್ಳವರಾಗಿರುತ್ತಾರೆ. ಜನರು ತಮ್ಮ ಮತವನ್ನು ತಿಳಿಸುವಾಗ ಅದಕ್ಕೆ ಕಾರಣವನ್ನು ಕೊಟ್ಟರೂ ಕೊಡಬಹುದು; ಇಲ್ಲದಿದ್ದರೆ 'ಇದು ನನ್ನ ಮತವು' ಎಂದಿಷ್ಟೇ ಹೇಳಲೂಬಹುದು. ಅವರ ವಿದ್ಯೆ, ಸ್ಥಾನಮಾನಗಳು, ವಯಸ್ಸು, – ಮುಂತಾದವುಗಳ ಮೇಲಿಂದ ಆಯಾ ಮತಕ್ಕೆ ಜನರು, ಬೆಲೆಕಟ್ಟುತ್ತಾರೆ. ಲೌಕಿಕವಿಷಯಗಳಲ್ಲಿ ಹೇಗೋ ಹಾಗೆಯೇ ಧಾರ್ಮಿಕವಿಷಯಗಳಲ್ಲಿಯೂ ಮತಗಳು ಇರುತ್ತವೆ. ಬೇರೆ ಬೇರೆಯ ಕಾಲಗಳಲ್ಲಿ ಬೇರೆ ಬೇರೆಯ ದೇಶಗಳಲ್ಲಿ ಮತಾಚಾರ್ಯರುಗಳು ಅವತರಿಸಿ ಈಶ್ವರ, ಧರ್ಮ, ಜೀವಸ್ವರೂಪ, ಜನ್ಮಾಂತರ, ಲೋಕಾಂತರ ಪ್ರಾಪ್ತಿ, ಸಾಧನಗಳು, ಆಚಾರಗಳು, – ಮುಂತಾದವನ್ನು ಬೋಧಿಸಿರುತ್ತಾರೆ. ಅವರು ತಮ್ಮ ಉಪದೇಶಗಳಿಗೆ ಬೆಂಬಲವಾಗಿ ಒಂದಿಷ್ಟು ಯುಕ್ತಿಯನ್ನೂ ಕೊಟ್ಟಿರುತ್ತಾರೆ; ಆದರೆ ಬಲುಮತ್ತಿಗೆ ಅವರ ತಪಃಶಕ್ತಿ, ತೇಜಸ್ಸು, ಪಾವಿತ್ರ್ಯ, ನಿಃಸ್ವಾರ್ಥತೆ – ಮುಂತಾದ ಕಾರಣಗಳಿಂದ ಜನರು ಅವರ ಮತವನ್ನು ಶ್ರದ್ಧೆಯಿಂದ ನಂಬಿ ಅನುಯಾಯಿಗಳಾಗಿರುತ್ತಾರೆ. ವೈದಿಕಧರ್ಮದ ಪ್ರಭೇದಗಳು, ಜೈನ, ಬೌದ್ಧ, ಫಾರಸಿ, ಯಹೂದಿ, ಕ್ರಿಸ್ತಿಯನ್, ಮುಸಲ್ಮಾನ್– ಮುಂತಾದ ಮತಗಳು ಹೀಗೆ ಉಂಟಾಗಿರುತ್ತವೆ.

ಮತಗಳು ಆಯಾ ದೇಶಕ್ಕೆ ಆಯಾ ಕಾಲಕ್ಕೆ ಜನರ ಮೇಲೆ ಉತ್ತಮ ಪರಿಣಾಮವನ್ನು ಮಾಡಿವೆ. ಆದರೆ ಒಂದು ಮತದವರು ಮತ್ತೊಂದು ಮತದವರ

ಸಂಪರ್ಕವನ್ನು ಪಡೆದಾಗ ಆ ಮತದವರಿಗೆ ಅಭಿಪ್ರಾಯಭೇದದಿಂದಲೂ ಆಚಾರಭೇದದಿಂದಲೂ ವಿರೋಧವುಂಟಾಗಿ ಜಗಳಗಳೂ, ಬಡಿದಾಟಗಳೂ ಆಗಿರುವದುಂಟು, ಉದಾಹರಣೆಗೆ: ಯಹೂದಿಯವರಿಗೂ ಕ್ರಿಸ್ತಿಯನರಿಗೂ, ಕ್ರಿಸ್ತಿಯನರಿಗೂ ಮುಸಲ್ಮಾನರಿಗೂ ಆದ ಹೊಡೆದಾಟಗಳು ಇಂಥವು; ನಮ್ಮ ದೇಶದಲ್ಲಿ ಶೈವ, ವೈಷ್ಣವ, ಶಾಕ್ತೇಯ, ವೈಷ್ಣವ, ಹಿಂದೂ,ಮುಸಲ್ಮಾನ ಇವರಗಳನ್ನು ಒಬ್ಬರನ್ನೊಬ್ಬರು ದ್ವೇಷಿಸಿರುವದೂ ಇದೇ ನಿಮಿತ್ತದಿಂದ.

ಮತಾಚಾರ್ಯರ ಕಾಲಕ್ಕೆ ಅವರವರ ಮಹಿಮೆಯ ಆದರ್ಶದಿಂದ ಬೆರಗಾದ ಅನುಯಾಯಿಗಳು ಕೆಲಕಾಲದವರೆಗೆ ಧರ್ಮಪರಾಯಣರಾಗಿ ಒಗ್ಗಟ್ಟಿನಿಂದ ಇರುತ್ತಿದ್ದರು. ಆದರೆ ಕಾಲಕ್ರಮದಲ್ಲಿ ಅನುಯಾಯಿಗಳಲ್ಲಿಯೂ ಮತಭೇದವುಂಟಾಗಿ ಹಲವು ಶಖೋಪಶಾಖೆಗಳಾಗಿರುವದೂ ಉಂಟು. ಉದಾಹರಣೆಗೆ ಮುಸಲ್ಮಾನರಲ್ಲಿ ಸುನ್ನಿಷಿಯಾ ಮುಂತಾದ ಪ್ರಭೇದಗಳೂ ಕ್ರಿಸ್ತಿಯನ್ನರಲ್ಲಿ ಕ್ಯಾಥೊಲಿಕ್, ಪ್ರಾಟೆಸ್ಟೆಂಟ್ ಮುಂತಾದ ಪ್ರಭೇದಗಳೂ ಈ ನಿಮಿತ್ತದಿಂದ ಆಗಿರುತ್ತವೆ. ನಮ್ಮ ದೇಶದಲ್ಲಿ ಶೈವರು, ವೈಷ್ಣವರು ಮುಂತಾದವರಲ್ಲಿ ಆಗಿರುವ ಒಳಪಂಗಡಗಳೂ ಹೀಗೆಯೇ ಆಗಿರುತ್ತವೆ.

ಈಗಿನ ಕಾಲದಲ್ಲಿ ನಮ್ಮ ಭರತಖಂಡದಲ್ಲಿ ಎಲ್ಲಾ ಮತಗಳವರೂ ಎಲ್ಲಾ ಮತಪ್ರಭೇದಗಳವರೂ ಸಿಕ್ಕುತ್ತಾರೆ. ಅವರಲ್ಲಿ ಪರಸ್ಪರವಾಗಿ ಮತನಿಮಿತ್ತದಿಂದ ಆಗಾಗ್ಗೆ ವಾಗ್ವಾದಗಳೂ ಹೊಡೆದಾಟಗಳೂ ಆಗುವದುಂಟು ಆದರೆ ಈ ವೈಷಮ್ಯಗಳು ಈಗ್ಗೆ ಬೇರೆಯ ಕಾರಣದಿಂದ ಆಗುತ್ತವೆ. ಹಿಂದಿನ ಸರಕಾರವು ರಾಜಕೀಯ, ಕಾರಣಗಳಿಂದ ಈ ಮತಭೇದಗಳನ್ನು ಪ್ರೋತ್ಸಾಹಿಸಿ ಜನರಲ್ಲಿ ಒಗ್ಗಟ್ಟನ್ನು ಮುರಿಯುವದಕ್ಕೆ ಪ್ರಯತ್ನಿಸುತ್ತಿತ್ತು. ಈಗಿನ ಸರಕಾರವು 'ಲೌಕಿಕಸರಕಾರ'ವಾಗಿದ್ದರೂ ಸುಧಾರಕರ ಪ್ರೋತ್ಸಾಹದಿಂದ ಮತಾಚಾರಕ್ಕೆ ಸಂಬಂಧಿಸಿದ ಹಲವು ಕಾನೂನುಗಳನ್ನು ಮಾಡಿ ಅಜ್ಞರಾದ ಜನರ ಮನಸ್ಸನ್ನು ಕದಡಿರುತ್ತದೆ. ಸ್ವಾರ್ಥಿಗಳಾದ ಕೆಲವು ಜನರೂ ತಾವು ಮುಂದಾಳುಗಳೆನಿಸಿಕೊಳ್ಳಬೇಕೆಂಬ ಹಿರಿಯಾಸೆಯಿಂದ ಈ ಆಚಾರಗಳು, ಪದ್ಧತಿಗಳು – ಮುಂತಾದವುಗಳಿಂದಾದ ಭೇದಗಳನ್ನು ಒತ್ತಿ ಜನರನ್ನು ಅಡ್ಡಹಾದಿಗೆ ಎಳೆಯುತ್ತಿರುವದು.

ಈ ಕಾಲದಲ್ಲಿ ಜನರಿಗೆ ಅನೇಕ ಕಾರಣಗಳಿಂದ ಮತವಿಚಾರಗಳಲ್ಲಿ ಅನಾದರವುಂಟಾಗಿರುತ್ತದೆ. ನಮ್ಮ ದೇಶದ ಸಂಸ್ಕೃತಿಯ ಹೆಗ್ಗುರುತಾದ ಧರ್ಮ ಪರಾಯಣತೆಯು ಲುಪ್ತವಾಗುವ ಅಂಜಿಕೆಯು ಕಾಣಬರುತ್ತಿದೆ. ಆದ್ದರಿಂದ ಈಗ ವಿವೇಕಿಗಳಾದವರು ಕಾಲಸ್ಥಿತಿಗೆ ತಕ್ಕಂತೆ ಧರ್ಮೋಪದೇಶವನ್ನು ಮಾಡುವದು ಅವಶ್ಯವು. ದೈವಯೋಗದಿಂದ ಈಗಿನ ತರುಣರಿಗೆ ವಿಚಾರ ಪ್ರಧಾನತೆ ಇರುತ್ತದೆ; ಯುಕ್ತಿಯುಕ್ತವಾದ ಯಾವ ವಿಷಯವನ್ನಾದರೂ ಅವರು ಮನ್ನಣೆಯಿತ್ತು ಗೌರವಿಸುತ್ತಾರೆ. ಆದಕಾರಣ ಈಗ್ಗೆ ತತ್ತ್ವೋಪದೇಶಕರು ಒಂದು ವಿಶೇಷ ನೀತಿಯನ್ನು ಅವಲಂಬಿಸಬೇಕಾಗಿದೆ. ಯಾರು ಹಳೆಯ ಸಂಪ್ರದಾಯಗಳನ್ನು ಬಿಡದೆ ತಮ್ಮತಮ್ಮ ಮತದ ಆಚಾರವಿಚಾರಗಳನ್ನು ಶ್ರದ್ಧೆಯಿಂದ ಅನುಸರಿಸಿಕೊಂಡು ಬರುತ್ತಿದಾರೋ ಅವರಿಗೆ ಆಯಾ ಸಂಪ್ರದಾಯದಲ್ಲಿ ಶ್ರದ್ಧೆಯು ಹೆಚ್ಚುವಂತೆ ಉಪದೇಶಿಸುವದು ಯೋಗ್ಯವೇ ಸರಿ. ಆದರೆ ಎಲ್ಲಾ ಮತದವರೂ ಎಲ್ಲಾ ಬಗೆಯ ಚಿತ್ತಭೂಮಿಕೆಯವರೂ ಸೇರಿರುವ ಸ್ಕೂಲುಗಳಲ್ಲಿಯೂ ಸಭೆಗಳಲ್ಲಿಯೂ ಉಪದೇಶಿಸುವಾಗ ಅಥವಾ ಸಾರ್ವಜನಿಕವಾಗಿ ಎಲ್ಲರಿಗೂ ಉಪಯೋಗವಾಗುವಂತೆ ಜನರ ಧಾರ್ಮಿಕ ಮನಸ್ಸನ್ನು ಎಚ್ಚರಗೊಳಿಸುವದಕ್ಕೆಂದು ಲೇಖನಗಳನ್ನೂ ಪತ್ರಿಕೆಗಳನ್ನೂ ಪ್ರಕಟಿಸುವಾಗ ಮತಾಚಾರಗಳಿಗಿಂತಲೂ ಜ್ಞಾನ, ವೈರಾಗ್ಯ, ಭಕ್ತಿ–ಮುಂತಾದ ಯಮಪ್ರಧಾನವಾದ ಸಾಧನಗಳನ್ನೇ ಯುಕ್ತ್ಯನುಭವಗಳ ಬೆಂಬಲದಿಂದಲೇ ತಿಳಿಸಬೇಕು. ಸಿದ್ಧಾಂತಗಳನ್ನು ಈಗಿನ ಜನರಿಗೆ ಮೆಚ್ಚಾಗಿರುವ ಭೌತಿಕ ವಿಜ್ಞಾನಕ್ಕೆ ಅವಿರುದ್ಧವಾಗಿಯೇ ತಿಳಿಸಿಕೊಡಬೇಕು.

ತತ್ತ್ವವಿಚಾರಕ್ರಮದಲ್ಲಂತೂ ಯುಕ್ತ್ಯನುಭವಗಳಿಗೆ ಎಲ್ಲಕ್ಕೂ ಹೆಚ್ಚಿನ ಸ್ಥಾನವು ಇರಬೇಕು. ಯುಕ್ತಿಯು ಸರ್ವಸಮ್ಮತವಾದ ತರ್ಕಕ್ಕೆ ಎಂದಿಗೂ ವಿರುದ್ಧವಾಗಿ ರಬಾರದು. ಅನುಭವವು ಸರ್ವರಿಗೂ ಸ್ವಭಾವದಿಂದ ಸಿಕ್ಕಿರುವ ಅನುಭವವೇ ಆಗಿರಬೇಕಲ್ಲದೆ ತಪಸ್ಸು, ಯೋಗಸಿದ್ಧಿ, ಮಂತ್ರಶಕ್ತಿ, ಮತಾಚಾರ್ಯರ ಅಥವಾ ಮಹಾತ್ಮರವಚನ, ಪ್ರಸಿದ್ಧ ಗ್ರಂಥೋಕ್ತಿ – ಮುಂತಾದವುಗಳ ಆಧಾರದಿಂದ ತನಗೊಬ್ಬನಿಗೇ ಆಗಿರುವ ವಿಶೇಷಾನುಭವವಾಗಿರಬಾರದು. ಇಂಥ ವಿಚಾರಕ್ರಮವು ಎಲ್ಲಾ ಕಾಲದಲ್ಲಿಯೂ ಎಲ್ಲರಿಗೂ ಸ್ವೀಕಾರ್ಯವಾಗಿರುತ್ತದೆ. ಈಗಿನ ಯುಕ್ತಿಪ್ರಧಾನ ಕಾಲಕ್ಕಂತೂ ಅತ್ಯವಶ್ಯವಾಗಿ ಆಶ್ರಯಿಸತಕ್ಕದ್ದಾಗಿರುತ್ತದೆ.

★★★★★

# ಶ್ರೀಶಂಕರಸಿದ್ಧಾಂತ

ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು

# ಅಧ್ಯಾತ್ಮ ಜ್ಞಾನದ ಬೆಲೆ

ವೇದದಲ್ಲಿರುವ ಉಪದೇಶಕ್ಕೆಲ್ಲ ಒಂದೇ ಒಂದು ಪಲ್ಲವಿಯಿರುವದೆಂದು ಸೂಕ್ಷ್ಮದೃಷ್ಟಿಯುಳ್ಳವರಿಗೆ ಗೊತ್ತಾಗುವದು. ಆ ಪಲ್ಲವಿಯ ಅಭಿಪ್ರಾಯವೇನೆಂದರೆ, 'ಸ್ವಸ್ಥರಾಗಿರಿ'. ಸ್ವಸ್ಥರಾಗಿರುವದೆಂದರೇನು? ನಮ್ಮ ನಮ್ಮಲ್ಲಿ ನಾವಿದ್ದು ಕೊಂಡಿರುವದು, ಹೊರಗೆ ಹರಿಯದೆ ಇರುವದು. ನಮ್ಮ ಸ್ವರೂಪಕ್ಕಿಂತ ಹೆಚ್ಚಿನ ಪದಾರ್ಥವೇ ಇಲ್ಲವೆಂದೂ ಇದೇ ಹೆಚ್ಚಿನ ವಸ್ತುಗಳಲ್ಲೆಲ್ಲಾ ಹೆಚ್ಚಿನದಾದ್ದರಿಂದ ಪರಬ್ರಹ್ಮವೆನಿಸಿಕೊಂಡಿರುವದೆಂದೂ ವೇದವು ಬಿಡದೆ ಸಾರುತ್ತಿರುವದು.

ಹೀಗೆ ಸ್ವಸ್ಥರಾಗಿರುವದೆಂಬುದು ನಮ್ಮಲ್ಲಿ ಕೋಟಿಜನರಲ್ಲಿ ಒಬ್ಬನಿಗೆ ಆಗುವದೋ ಇಲ್ಲವೋ ಅದಂತಿರಲಿ, ಆಗಾಗ್ಗೆ ತಮ್ಮ ಕಡೆಗೆ ಹೋಗಿಬರುವ ಪ್ರಯತ್ನವನ್ನಾದರೂ ಮಾಡುವ ಜನರು ಸಾವಿರಕ್ಕೊಬ್ಬರು ಸಿಗುವದು ಕಷ್ಟವಾಗುತ್ತಿರುವದು. ಬಹುಜನರಿಗೆ ತಮ್ಮ ನೆನಪೇ ಇರುವದಿಲ್ಲ. ದೇವ ಮೇರು, ಅಸುರಮೇರು – ಇವುಗಳವರೆಗಿನ ಭೂಗೋಳದ ಸಂಗತಿಯನ್ನಾದರೂ ತಿಳಿಯುವದಕ್ಕೆ ಮನಸ್ಸು ಹಾಕುವರು: ಕೋಟಿಗಟ್ಟಲೆಯ ಮೈಲಿಗಳ ದೂರ ದಲ್ಲಿರುವ ಸೂರ ಚಂದ್ರ ಮೊದಲಾದ ಗ್ರಹಗಳ ಮತ್ತು ನಕ್ಷತ್ರಗಳ ಸ್ವರೂಪ, ಗತಿ – ಮುಂತಾದವನ್ನು ಕುರಿತು ಯೋಚಿಸುವದಕ್ಕೂ ಸಿದ್ಧವಾಗುವರು; ಪ್ರಾಣಿವರ್ಗ, ಸಸ್ಯವರ್ಗ, ಧಾತುವರ್ಗ ಮುಂತಾದ ಭೌತಿಕಭಾಗಗಳ ಆಗುಹೋಗುಗಳನ್ನೂ ನೆಲೆಯನ್ನೂ ನಿರೂಪಿಸುವದಕ್ಕೆ ಹೋಗುವರು. ಎಂದೂ ಕಂಡುಕೇಳದ ಚಮತ್ಕಾರಗಳಿಂದ ಕೂಡಿದ ಕಟ್ಟುಕಥೆಗಳನ್ನಾದರೂ ಮತ್ತೊಬ್ಬರಿಗೆ ಹೇಳುವದಕ್ಕೂ ಅವರಿಂದ ಕೇಳುವದಕ್ಕೂ ಅಕ್ಕರೆಯನ್ನು ತೋರಿಸುವರು. ಆದರೆ ತಮ್ಮಲ್ಲಿಯೇ ಇರುವ ತನ್ನ ಸ್ವರೂಪವನ್ನು ಕುರಿತು ಒಮ್ಮೆಯಾದರೂ ಚಿಂತಿಸರು. ಬಹುಧನವು ವ್ಯವಾಗುವದೆಂಬುದನ್ನಾಗಲಿ ದಾರಿಯಲ್ಲಿ ಪಡುವ ದೇಹಾಯಾಸವನ್ನಾಗಲಿ ಕೊನೆಗೆ ಸಿಕ್ಕುವ ಫಲದ ಅಲ್ಪತೆಯನ್ನಾಗಲಿ ಲೆಕ್ಕಿಸದೆ ಮೋಟಾರು, ರೈಲು, ಹಡಗು, ಜಹಜು ಮುಂತಾದ ಯಾನಗಳ ಮೇಲೆ ದೀರ್ಘಪ್ರಯಾಣಗಳನ್ನು ಬೆಳಸಿ ಪಡಬಾರದ ಕ್ಲೇಶವನ್ನು ಪಟ್ಟಾದರೂ ದೇಶಾಂತರಗಳನ್ನು ನೋಡಲೆಳಸುವರು; ಸಮುದ್ರದಲ್ಲಿ

ಮುಳುಗಿಯಾದರೂ ವಿಮಾನಗಳಿಂದ ಅಂತರಿಕ್ಷಗಳಲ್ಲಿ ಸಂಚರಿಸಿಯಾದರೂ ಪ್ರಪಂಚವೈಚಿತ್ರ್ಯಗಳನ್ನು ಪರೀಕ್ಷಿಸುವರು; ಆದರೆ ಯಾವ ಕಾಸುವೀಸದ ವೆಚ್ಚವೂ ಇಲ್ಲದೆ ಎಳ್ಳಷ್ಟೂ ಆಯಾಸಪಡಬೇಕಾದ್ದಿಲ್ಲದೆ ಫಲವೂ ಅನಂತವಾಗಿರುವ, ಪ್ರಯಾಣವೇ ಇಲ್ಲದೆ ತಮ್ಮ ತಮ್ಮಲ್ಲಿಯೇ ಕಂಡುಕೊಳ್ಳುವ, ಸ್ವರೂಪದ ಕಡೆಗೆ ಆಗಾಗ್ಗೆ ಕಡೆಗಣ್ಣಾಗಾದರೂ ಹಾಕಿರೆಂದು ವೇದಶಾಸ್ತ್ರಗಳಲ್ಲಿ ಹೊಡೆಯುತ್ತಿರುವ ಭಗವಂತನ ಆಜ್ಞಾರೂಪವಾದ ಡಂಗುರಕ್ಕೆ ಮನಸ್ಸು ಕೊಡದೆ ಇರುವರು.

ಇದೇನು ಮಾಯೆ! ಎಂದು ಕೆಲವರು ಯೋಚಿಸಬಹುದು. ಇದು ಮಾಯೆಯಲ್ಲ, ಹಿಡಿದಮಾರ್ಗಕ್ಕೆ ಸಿಕ್ಕ ಊರು, ಪೂರ್ವದ ಕಡೆಗೆ ಹೊರಟವನಿಗೆ ಉತ್ತರಕ್ಕಿರುವ ಊರು ಸಿಗುವದುಂಟೋ ಎಂದಿಗೂ ಇಲ್ಲ. ''ಮನೆಗೆ ಮಾರಿ, ಹೆರರಿಗೆ ಉಪಕಾರಿ'' ಎಂಬಂತೆ ಜನರಿಗೆ ತಮ್ಮ ಮನೆಯಾದ ತಮ್ಮ ಆತ್ಮವು ಕಾಣದೆ ಇರುವದರಿಂದ ನಿಮ್ಮ ಸ್ವರೂಪವನ್ನು ಕುರಿತು ವಿಚಾರಮಾಡಿಕೊಳ್ಳಿ ಎಂದ ಕೂಡಲೆ ಕೆಂಡದಂಥ ಸಿಟ್ಟು ಬರುವದು. ಅತ್ತನೋಡಿ, ಇತ್ತ ನೋಡಿ ಎಂದರೆ ಇವರಿಗೆ ಬಲು ಅಕ್ಕರೆಯ ಮಾತು. ನಮ್ಮ ಮನೆಯಾದ ನಮ್ಮ ಸ್ವರೂಪಕ್ಕೆ ನಾವು ತೀರ ಹೊಸಬಗು, ಅದನ್ನು ನಾವು ಎಂದೂ ನೋಡಲಿಲ್ಲ, ಅದನ್ನು ನೋಡುವದಕಿಂತಲೂ ಹೊರಮುಖವಾಗಿರುವದೇ ನಮಗೆ ಸಹಜವಾಗಿರುವದು. ''**ಬ್ರಹ್ಮನು ಇಂದ್ರಿಯಗಳನ್ನು ಹೊರಮುಖವಾಗಿ ತೆರೆಯುವಂತೆಯೇ ಕೊರೆದಿರುವನು, ಆದ್ದರಿಂದ ಮನುಷ್ಯನು ಹೊರಗೆ ನೋಡುತ್ತಾನೆಯೆ ಹೊರತು ಒಳಗಿರುವ ತನ್ನ ರೂಪನ್ನು ನೋಡನು**'' – ಎಂದು ಉಪನಿಷತ್ತಿನಲ್ಲಿರುವದು. ಯಾರು ಇಂದ್ರಿಯಗಳ ಮೂಲಕ ಹೊರಗೇ ನೋಡುವ ಅಭ್ಯಾಸವನ್ನು ಬಿಟ್ಟು ಒಳಗೆ ನೋಡುವ ಅಭ್ಯಾಸವನ್ನು ಮಾಡುವರೋ ಅಂಥಾ ಧೀರರಿಗೆ ಮಾತ್ರ ತಾವು ಯಾರೆಂಬುದು ಗೊತ್ತಾಗುವದು.

ತಾವು ಯಾರೆಂಬುದನ್ನು ಏಕೆ ತಿಳಿಯಬೇಕು? ಸ್ವಭಾವದಿಂದ ಯಾವ ಕಡೆಗೆ ಮನಸ್ಸು ಹರಿಯುತ್ತಿರುವದೋ ಆಕಡೆಗೇ ಏತಕ್ಕೆ ಅದನ್ನು ಬಿಡಬಾರದು? ಲೋಕಕ್ಕೆ ವಿಲಕ್ಷಣವಾದ ರೀತಿಯಿಂದ ನಡೆಯುವದಕ್ಕೆ ಏತಕ್ಕೆ ಯತ್ನಿಸಬೇಕು? ಎಂದು ಯಾರಿಗಾದರೂ ಸಂಶಯ ಬಂದೀತು. ಇದಕ್ಕೆ ಉತ್ತರವೇನೆಂದರೆ, ಲೋಕದಲ್ಲಿ ಕಾಡುಜನರು ಸ್ವಭಾವಕ್ಕನುಸರಿಸಿಯೆ ಇರುವರು, ನಾಗರಿಕರೋ ಎಂದರೆ ಹುಟ್ಟಿದಂತೆ ಇರದೆ ಬಗೆಬಗೆಯ ಸಂಸ್ಕಾರಗಳನ್ನು ಪಡೆದುಕೊಂಡು ಸುಖಪಡುತ್ತಿರುವರು.

ನಾಗರಿಕತೆಯು ಕಷ್ಟವಾದ್ದರಿಂದ ನಾಗರಿಕತೆಯ ಸುಖಬೇಡ, ತೆಪ್ಪನೆ ಇದ್ದಂತೆ ಇರೋಣ ಎನ್ನುವದುಂಟೆ? ಇದರಂತೆ ತನ್ನನ್ನು ತಾನು ತಿಳಿಯುವದು ಎಷ್ಟು ಕಷ್ಟವಾಗಿರಲಿ, ಆ ತಿಳಿವನ್ನು ಅವಶ್ಯವಾಗಿ ಪಡೆದು ಸುಖಪಡುವದು ಮನುಷ್ಯನ ಕರ್ತವ್ಯವಾಗಿದೆ.

ಇಂದ್ರಿಯಗಳಿಂದ ಹೊರಗಿನ ವಸ್ತುಗಳನ್ನು ನವನವಮಾರ್ಗಗಳಿಂದ ವಶಮಾಡಿಕೊಂಡು ಸುಖಪಡಬೇಕೆಂದಿರುವ ನಾವು ಯೋಚಿಸಬೇಕಾದದ್ದು ಒಂದು ವಿಷಯವುಂಟು. ಒಂದು ಮರದಲ್ಲಿರುವ ಒಂದು ಹಣ್ಣಿಗೆ ಹೆಚ್ಚು ಬೆಲೆಯೊ? ಅಥವಾ ಆ ಮರಕ್ಕೆ ಹೆಚ್ಚು ಬೆಲೆಯೋ ? ಆ ಮರವು ಒಂದು ಸಲ ಬಿಟ್ಟ ಕಣ್ಣುಗಳನ್ನೆಲ್ಲ ಸೇರಿಸಿದರಾದರೂ ಆಮರದ ಬೆಲೆಗೆ ಸರಿಯಾದೀತೆನ್ನಬಹುದೆ? ಇಲ್ಲ. ಮರವು ಆಹಣ್ಣುಗಳಿಗೆಲ್ಲ ಆಧಾರವಾದದ್ದಾಗಿರುವದರಿಂದ ಅದರ ಬೆಲೆಯೇ ಹೆಚ್ಚು. ನಾವೇ ಮರವಿದ್ದಂತೆ, ನಮ್ಮ ಇಂದ್ರಿಯಗಳು ಕೊಂಬೆ ಇದ್ದಂತೆ, ಇಂದ್ರಿಯಗಳಿಂದಾಗುವ ವಿಷಯಜ್ಞಾನಗಳೇ ಚಿಗುರು, ಹೂ, ಮುಂತಾದವಿದ್ದಂತೆ. ಇವುಗಳಲ್ಲಿ ಯಾರಿಗೆ ಬೆಲೆಹೆಚ್ಚು? ನಮಗೇ. ಇದೂ ಅಲ್ಲದೆ ಮರಕ್ಕೆ ಸೇರಿರುವಾಗಲೆ ಕೊಂಬೆಗೂ ಚಿಗುರಿಗೂ ಹೂವಿಗೂ ಹಣ್ಣಿಗೂ ಬೆಲೆ, ಬೇರೆಯಾದರೆ ಮೊದಲಿನ ಸೌಂದರ್ಯವಿಲ್ಲ. ನಮ್ಮ ದೇಶದಲ್ಲಿ ಬೆಳೆಯುವ ಯಾವದಾದರೊಂದು ಮರದ ಹಣ್ಣನ್ನು ತೆಗೆದು ಒಣಗಿಸಿ ಕೆಡದಂತೆ ಸಂಸ್ಕಾರ ಮಾಡಿ ದೇಶಾಂತರಕ್ಕೆ ಕಳುಹಿಸಿ ವರ್ಷಗಟ್ಟಲೆಕಾಲವಾದಮೇಲೆ ಆ ಮರವೇ ಆ ಹಣ್ಣನ್ನು ನೋಡಿದರೂ ಅದನ್ನು ಗುರ್ತಿಸೀತೇನು? ಗುರ್ತಿಸಲಾರದು. ನಾವೂ ವಿಷಯಗಳೂ ಇಂಥ ಮರಹಣ್ಣುಗಳ ಸಂಬಂಧವುಳ್ಳವರಾಗಿದ್ದೇವೆ. ನಮ್ಮ ಶರೀರವೇ ಮರವು, ಮನಸ್ಸೆ ಇದರಲ್ಲಿರುವ ಉತ್ತಮವಾದ ಫಲವು ನಮ್ಮ ಸ್ವರೂಪವಾಗಿರುವ ಆತ್ಮವೇ ಇದಕ್ಕೆ ತಾಯಿಬೇರು. ಆ ತಾಯಿಬೇರನ್ನು ಅರಿತು ಅದಕ್ಕೂ ಉಳಿದ ಅವಯವಗಳಿಗೂ ಇರುವ ಸಂಬಂಧವನ್ನು ಅರಿತರೇ ಆ ಅವಯವಗಳಿಗೆ ಬೆಲೆ ಬರುವದು. ವೃಕ್ಷ ಸ್ಥಾನದಲ್ಲಿರುವ ನಾವು ಇದು ನನ್ನ ಕೊಂಬೆ, ಇದು ನನ್ನ ರೆಂಬೆ, ಇದು ನನ್ನ ಚಿಗುರು, ಇದು ನನ್ನ ಕುಸುಮ, ಇದು ನನ್ನ ಕಾಯಿ, ಇದು ನನ್ನ ಹಣ್ಣು ಎಂದು ಹೊರಗಿನ ವಸ್ತುಗಳನ್ನು ಅರಿಯಬೇಕು. ಆಗಲೇ ಅವಕ್ಕೆ ಬೆಲೆ, ಇಲ್ಲದಿದ್ದರೆ ದೇಶಾಂತರಕ್ಕೆ ಹೋಗಿ ಬಾಡಿ ಬತ್ತಿರುವ ಹೂಹಣ್ಣುಗಳಂತೆ ಅವು ಹೊರ ಗಿನ ವಸ್ತುಗಳಾಗಿ ಕಾಣುವವು.

ಹೆಚ್ಚೇನು? ನಮ್ಮ ಸ್ವರೂಪದಲ್ಲಿಯೇ ಎಲ್ಲವನ್ನೂ ಕಾಣಬೇಕು,

ಇದನ್ನೊಂದನ್ನು ಅರಿತರೆ ಎಲ್ಲವನ್ನೂ ಅರಿತಂತಾಯಿತು. ಶುಕಾನುಶಾಸನದಲ್ಲಿ ವ್ಯಾಸಮಹರ್ಷಿಗಳು ಅಪ್ಪಣೆ ಕೊಡಿಸಿರುವದೇನೆಂದರೆ:

**ವೇದಾಂಶ್ಚ ವೇದ್ಯಂತು ವಿಧಿಂ ಚ ಕೃತ್ಸ್ನ-**
**ಮಥೋ ನಿರುಕ್ತಂ ಪರಮಾರ್ಥತಾಂ ಚ ।**
**ಸರ್ವಂ ಶರೀರಾತ್ಮನಿ ಯಃ ಪ್ರವೇದ**
**ತಸ್ಯೈವ ದೇವಾಃ ಸ್ಪೃಹಯನ್ತಿ ನಿತ್ಯಮ್ ॥**

ವೇದಗಳು, ತಿಳಿಯಬೇಕಾದ ವಸ್ತುಗಳು, ಕರ್ಮಶಾಸ್ತ್ರ, ನಿರುಕ್ತ, ಪರಮಾರ್ಥ- ಇವುಗಳನ್ನೆಲ್ಲ ಈ ಶರೀರಾತ್ಮನಲ್ಲಿಯೇ ಯಾವಾತನು ಸಾಕ್ಷಾತ್ಕಾರಮಾಡಿಕೊಳ್ಳುವನೋ ಆತನನ್ನೇ ಸೇವಿಸಬೇಕೆಂದು ದೇವತೆಗಳು ನಿತ್ಯವೂ ಹಾತುವರಿಯುತ್ತಿರುವರು.

★★★★★

# ಅಧ್ಯಾತ್ಮ ಶ್ರವಣ

ಅಧ್ಯಾತ್ಮಜ್ಞಾನವನ್ನು ಮೈಗೂಡಿಸಿಕೊಳ್ಳುವದಕ್ಕೇನು ಮಾಡಬೇಕು? ಆ ಜ್ಞಾನದ ಬಲವು ನಮಗಾಗುವದಕ್ಕೆ ಉಪಾಯಗಳು ಯಾವವು? ಎಂದು ಜಿಜ್ಞಾಸುಗಳು ಕೇಳುವದುಂಟು. ಇದಕ್ಕೆ ಬೃಹದಾರಣ್ಯಕದಲ್ಲಿ ಯಾಜ್ಞವಲ್ಕ್ಯ ಮೈತ್ರೇಯೀ ಸಂವಾದದಲ್ಲಿ ಉತ್ತರವಿರುತ್ತದೆ. ‘‘**ಎಲೆ ಮೈತ್ರೇಯಿ, ಆತ್ಮನನ್ನೇ ಅರಿಯಬೇಕು, ಶ್ರವಣಮಾಡಬೇಕು, ಮನನಮಾಡಬೇಕು, ನಿದಿಧ್ಯಾಸನಮಾಡಬೇಕು; ಆತ್ಮನನ್ನು ಅರಿಯುವದರಿಂದ, ಆತ್ಮನ ಶ್ರವಣಮನನನಿಧಿಧ್ಯಾಸನಗಳಿಂದ ಇದನ್ನೆಲ್ಲವನ್ನೂ ಅರಿತಂತೆಯೇ ಆಗುವದು.**’’ ಇಲ್ಲಿ ಆತ್ಮಜ್ಞಾನಕ್ಕೆ ಶ್ರವಣಮನನನಿದಿಧ್ಯಾಸನಗಳು ಸಾಧನಗಳೆಂದೂ, ಅವುಗಳಿಂದಾದ ಆತ್ಮಜ್ಞಾನದಿಂದ ಪ್ರಪಂಚಮಾತ್ರದ ತತ್ತ್ವವನ್ನೇ ತಿಳಿದಂತಾಗುವದೆಂದೂ ಹೇಳಿರುತ್ತದೆ. ಆದ್ದರಿಂದ ಶ್ರವಣಮನನನಿದಿಧ್ಯಾಸನಗಳ ಸ್ವರೂಪವನ್ನೂ ಅವುಗಳನ್ನು ನಡೆಸುವ ಕ್ರಮವನ್ನೂ ಕುರಿತು ವಿಚಾರಮಾಡುವದು ಅಗತ್ಯವಾಗಿದೆ. ಈ ಲೇಖದಲ್ಲಿ ಶ್ರವಣವಿಷಯವಾಗಿ ಕೆಲವು ಕಲ್ಪನೆಗಳನ್ನು ವಾಚಕರ ಮುಂದೆ ಇಡುವೆವು.

ಶ್ರವಣವೆಂದರೆ ಶಾಸ್ತ್ರಗಳಿಂದಲೂ ಗುರುಗಳಿಂದಲೂ ಆತ್ಮವಿಚಾರದಲ್ಲಿ ಕೇಳಿ ತಿಳಿದುಕೊಳ್ಳುವದು. ಲೋಕದಲ್ಲಿ ಯಾವದಾದರೊಂದು ವಿಷಯದ ಜ್ಞಾನವು ನಮಗೆ ಬರಬೇಕಾದರೇನು ಮಾಡುತ್ತೇವೆ? ಅದನ್ನು ಬಲ್ಲವರ ಸ್ನೇಹಮಾಡುತ್ತೇವೆ, ಅವರ ನಡೆನುಡಿಗಳನ್ನು ನೋಡುತ್ತೇವೆ, ಸಂಶಯ ಬಂದೆಡೆಯಲ್ಲಿ ಕೇಳಿ ತಿಳಿಯುತ್ತವೆ, ಆಮೇಲೆ ಅದರಂತೆಯೆ ಆಚರಿಸಲು ಯತ್ನಮಾಡುತ್ತೇವೆ. ಆತ್ಮ ವಿಷಯದಲ್ಲಿಯೂ ಹೀಗೆಯೇ ಮಾಡಬೇಕು. ಆತ್ಮವಿಚಾರವನ್ನು ಮಾಡುತ್ತಿರುವ ಸಾಧುಸತ್ಪುರುಷರನ್ನು ಸೇರಿ ಅವರನ್ನು ಕೇಳಿ ತಿಳಿದುಕೊಳ್ಳಬೇಕು. ಕೆಲವರು ''ಬರಿಯ ಬಾಯಿವೇದಾಂತದಿರದ ಪ್ರಯೋಜನವಿಲ್ಲ, ಶಾಸ್ತ್ರಗಳನ್ನು ಹೆಚ್ಚಾಗಿ ಓದುವದರಿಂದಲೂ ಜನರಲ್ಲಿ ಸುಮ್ಮನೆವಾದ ಮಾಡುತ್ತಿರುವದರಿಂದಲೂ ಮನಸ್ಸು ತಲ್ಲಣಗೊಳ್ಳುವದೇ ಹೊರತು, ಇದರಿಂದ ಮತ್ತೆ ಯಾವ ಪ್ರಯೋಜನವೂ ಇಲ್ಲ, ಆದ್ದರಿಂದ ಶ್ರವಣವನ್ನು ಹೆಚ್ಚಾಗಿ ಉಪಯೋಗಿಸಬೇಕಾದ್ದಿಲ್ಲವೆಂದು ಹೇಳುವರು. ಈ ಅಭಿಪ್ರಾಯವನ್ನು ಒಪ್ಪಲಾಗುವದಿಲ್ಲ. ಏಕೆಂದರೆ, ಲೋಕದಲ್ಲಿಯಾದರೂ ಜನರಿಗೆ ಯಾವದಾದರೂ ವಿಷಯದ ಕತೆಗೆ ಮನಸ್ಸು ಜಗ್ಗುವದಕ್ಕೆ ಮೊದಲು ಶ್ರವಣವೇ ಕಾರಣವಾಗುವದು. ನೋಡಿರಿ! ಕಾಫಿ, ಟೀ, ಬಿಸ್ಕತ್ತು, ಮೊದಲಾದ ಆಹಾರವಸ್ತುಗಳೂ ಹೂ, ಗಂಧ, ಸೆಂಟ್, ಅತ್ತರು ಮುಂತಾದ ಸುವಾಸನೆಯ ದ್ರವಗಳೂ ಸಂಗೀತ, ಪಿಟೀಲು, ವೀಣೆ, ಹಾರ್ಮೋನಿಯಂ ಮುಂತಾದ ಶಬ್ದಪ್ರಧಾನವಾದ ವಾದ್ಯಗಳೂ, ಬೈಯಾಸ್ಕೋಪ್, ಸರ್ಕಸ್, ನಾಟಕ, ಮ್ಯೂಸಿಯಮ್ ಮುಂತಾದ ರೂಪಪ್ರಧಾನವಾದ ನೋಟಗಳೂ, ಬೂರುಗದ ಹತ್ತಿಯ ಮೆತ್ತೆ, ಸ್ಪ್ರಿಂಗುಕುಷನ್ ಹಾಕಿದ ಕುರ್ಚಿ, ಫ್ಲಾನಲ್ ಬಟ್ಟೆ, ಉಣ್ಣೆಯ ಕಾಲುಚೀಲ ಮುಂತಾದ ಸುಖಸ್ಪರ್ಶವಾಗಿರುವ ಪದಾರ್ಥಗಳೂ ನಮ್ಮಗಳ ಮನಸ್ಸನ್ನೆಳೆಯುವದಕ್ಕೆ ಮೊದಲನೆಯ ಮೆಟ್ಟಿಲು ಯಾವುದು? ಇವುಗಳ ವರ್ಣನೆಯ ಮಾತುಗಳೇ, ಇವುಗಳು ಹೀಗಿವೆ, ಹಾಗಿವೆ ಎಂದು ವರ್ತಮಾನ ಪತ್ರವೇ ಮುಂತಾದೆಡೆಗಳಲ್ಲಿ ನಾನಾವಿಧವಾಗಿ ಸಚಿತ್ರವಾಗಿ ವಿವಿಧಮುದ್ರಾಕ್ಷರ ಗಳಿಂದ ವರ್ಣಿಸಿರುವ ಪ್ರಕಟನೆಗಳನ್ನು ಓದುವದು, ಅವುಗಳನ್ನನುಭವಿಸಿ 'ಇಂಥ ಸುಖಪಟ್ಟೆವು ಅಂಥ ಸ್ವರ್ಗದಲ್ಲಿದ್ದೆವು' – ಎಂದು ಬಣ್ಣಿಸುವ ನಮ್ಮ ಗೆಳೆಯರ ಮಾತುಗಳನ್ನು ಕೇಳುವದು, ಇವೆರಡೂ ನಮ್ಮ ಮೇಲೆ ಎಷ್ಟು ಪರಿಣಾಮವನ್ನುಂಟು ಮಾಡುವದನ್ನು ನೆನಸಿಕೊಂಡರೆ ವಸ್ತುವಿನ ಶ್ರವಣದಿಂದಾಗುವ ಫಲವನ್ನು ತಿಳಿಯಬಹುದಾಗಿದೆ. ಭಲೆ, ಶಹಬ್ಬಾಸ್ ಮುಂತಾದ ಶಬ್ದಗಳನ್ನು ಕೇಳಿದ

ಕೂಡಲೆ ಕುಸ್ತಿಮಾಡುವವರೂ ಕೂಲಿಯಾಳುಗಳೂ ಎಷ್ಟರ ಮಟ್ಟಿಗೆ ಮೈಯುಬ್ಬಿ ಉತ್ಸಾಹದಿಂದ ಕೆಲಸಮಾಡುವರು! ಯುದ್ಧಗಳಲ್ಲಿ ವೀರರಸಪ್ರಧಾನವಾದ ಗಾನಗಳನ್ನು ವಾದ್ಯಗಳಿಂದ ಬಾರಿಸುವಾಗ ಹೇಡಿಗಳಾದ ಸೀಪಾಯಿಯರಿಗೂ ಹೇಗೆ ಧೈರ್ಯವುಕ್ಕೇರುವದು! ಶಬ್ದಮಾತ್ರದಲ್ಲಿ ಇಷ್ಟು ಬಲವಿರುವಾಗ, ಪದಾರ್ಥದ ರೂಪುಲಾವಣ್ಯಗಳನ್ನೂ ಉಪಯೋಗಗಳನ್ನೂ ಬೆಲೆಯನ್ನೂ ವಿವರಿಸುವ ಮಾತಿನ ರೂಪದಲ್ಲಿರುವ ಶಬ್ದಕ್ಕೆಷ್ಟು ಬೆಲೆಯಾಯಿತು? ಶಬ್ದವೂ ವಸ್ತುವೂ ಎಂದೆಂದಿಗೂ ಹೊಂದಿಕೊಂಡೇ ಇರುವವೆಂದು ತಿಳಿದವರು ಹೇಳುವರು. ಆದ್ದರಿಂದ ವಸ್ತುಜ್ಞಾನಕ್ಕೆ ಅದರ ವಿಷಯವಾಗಿ ಶ್ರವಣಮಾಡುವದು ವಸ್ತುವಿನಲ್ಲಿ ತುಂಬ ಆದರವನ್ನು ಹುಟ್ಟಿಸಿ ಅದರ ಜ್ಞಾನಕ್ಕೆ ಸಹಾಯ ಮಾಡುವದೆಂಬುದರಲ್ಲಿ ಸಂಶಯವಿಲ್ಲ.

ಆತ್ಮಜ್ಞಾನಕ್ಕೂ ಇದೇ ಕಾರಣದಿಂದ ಶ್ರವಣವು ಪ್ರಧಾನವಾದ ಮೊದಲನೆಯ ಮೆಟ್ಟಿಲಾಗಿರುವದು. ಆತ್ಮವಿಷಯಕವಾದ ಗ್ರಂಥಗಳನ್ನು ಓದುತ್ತಲಿರಬೇಕು. ಗ್ರಂಥಗಳನ್ನು ಓದಿದಷ್ಟೂ ಅವುಗಳ ರುಚಿ ಹತ್ತುವದು. ಕಾವ್ಯಶಾಸ್ತ್ರಗಳಲ್ಲಿ ಓದಿದ ಹಾಗೆಲ್ಲ ಹೇಗೆ ಕೌಶಲವೂ ಹೆಚ್ಚು ಓದುವ ಅಭಿರುಚಿಯೂ ಹೆಚ್ಚುವದೋ ಇದೂ ಹಾಗೆಯೆ. ಎಷ್ಟೋ ಜನರು ಕಲ್ಪಿತವಾದ ಕಾದಂಬರಿಗಳನ್ನೋದುವದರಲ್ಲಿ ಹಸಿವುತೃಷೆಗಳನ್ನು ಕೂಡ ಮರೆಯುವದಿಲ್ಲವೆ? ಇದರಂತೆ ಆತ್ಮವಿಷಯಕವಾದ ಪುರಾಣೇತಿಹಾಸಗಳನ್ನು ಓದುವದಕ್ಕೂ ಕೇಳುವದಕ್ಕೂ ಮೊದಲುಮಾಡಿದರೆ ಅವುಗಳ ಸವಿಯೂ ನಮಗೆ ತೋರಹತ್ತುವದು. ಒಂದು ವೇಳೆ ನಮಗೇ ಗ್ರಂಥಗಳನ್ನು ಓದಿ ಅರ್ಥಮಾಡಿಕೊಳ್ಳುವ ಶಕ್ತಿಯಿಲ್ಲದಿದ್ದರೆ, ಓದಿಸಿ ಕೇಳಬೇಕು. ಇದೂ ಶ್ರವಣವೇ ಆಗುವದು. ಇದರ ಜತೆಗೆ ಈಗಿನ ಕಾಲಕ್ಕೆ ಅನುಗುಣವಾಗಿ ದೃಷ್ಟಾಂತಗಳನ್ನು ಕೊಟ್ಟು ಕಥಾದಿರೂಪಗಳಲ್ಲಿ ಬರೆದಿರುವ ಗ್ರಂಥಗಳನ್ನು ಓದಬೇಕು! ಇದರಿಂದ ಮನಸ್ಸಿಗೆ ಬೇಸರ ಹುಟ್ಟದೆ ಆತ್ಮವಿಚಾರವೂ ವಿಷಯವಿಚಾರದಂತೆ ವಿನೋದವಾಗಿ ಯೇ ಪರಿಣಮಿಸುವದು.

ಗ್ರಂಥಗಳನ್ನೋದುವದಕ್ಕಿಂತಲೂ ಸರಿಯಾದ ಸದ್ಗುರು ಸಿಕ್ಕರೆ ಅವಶ್ಯವಾಗಿ ಆತನಿಂದಲೇ ಆತ್ಮವಿಷಯವಾಗಿ ಕೇಳಿ ತಿಳಿದುಕೊಳ್ಳುವದುತ್ತಮ ಪಚಾಂಗಕ್ಕಿಂತಲೂ ಜೋಯಿಸನುಮೇಲಲ್ಲವೆ? ಗ್ರಂಥಗಳಲ್ಲಿ ವಾಕ್ಯರತ್ನಗಳೇ ಇರುವುದು ನಿಜವಾದರೂ ಅವುಗಳ ಬೆಲೆಯು ದಿವ್ಯಜ್ಞಾನವೆಂಬ ಚಕ್ಷುಸುಳ್ಳ ಸದ್ಗುರುವಿಗೆ ತಿಳಿಯುವದು.

ಇದಲ್ಲದೆ ಗ್ರಂಥಗಳು ಜಡವಸ್ತುಗಳು, ಸದ್ಗುರುವೋ ಚೇತನನು. ಆತನ ನುಡಿಯಿಂದ ಶ್ರವಣಮಾಡಿದ ವಿಷಯಕ್ಕೆ ಆತನೇ ಉದಾಹರಣೆಯಾಗಿರುವನು. ವಿದ್ಯುಚ್ಛಕ್ತಿಯ ಉಗ್ರಾಣವಾಗಿರುವ ಬ್ಯಾಟರಿಯೆಂಬ ಯಂತ್ರವಿಶೇಷದಂತೆ ಆತ್ಮಶಕ್ತಿಯ ಸರ್ವಸ್ವವೂ ಆಗಿರುವ ಸದ್ಗುರುಮೂರ್ತಿಯನ್ನು ಬಿಟ್ಟರೆ ಮತ್ತೆಲ್ಲಿ ನಮಗೆ ಆತ್ಮವಿಷಯಕವಾದ ಜ್ಞಾನವು ದೊರೆತೀತು? ಆತನು ಪ್ರಸನ್ನನಾದರೆ ವಿದ್ಯುಚ್ಛಕ್ತಿಯು ಉತ್ಪತ್ತಿಸ್ಥಾನದಿಂದ ತಂತಿಯ ಮೂಲಕ ಹೊರಟು ಉದ್ದಿಷ್ಟ ಸ್ಥಳದಲ್ಲಿ ತೇಜಃಪುಂಜವಾಗಿ ವ್ಯಕ್ತವಾಗುವಂತೆ ಆತ್ಮಜ್ಞಾನವು ಶಿಷ್ಯನ ಹೃದಯದಲ್ಲಿ ಅವಶ್ಯವಾಗಿ ತೋರಿಕೊಳ್ಳುವದು. ಆದ್ದರಿಂದಲೇ ಗೀತೆಯಲ್ಲಿ

**ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ ।**
**ಉಪದೇಕ್ಷ್ಯನ್ತಿ ತೇ ಜ್ಞಾನಂ ಜ್ಞಾನಿನಃ ತತ್ತ್ವದರ್ಶಿನಃ ॥**

'ತತ್ತ್ವವನ್ನು ಮನಗಂಡಿರುವ ಜ್ಞಾನಿಗಳನ್ನು ನಮಸ್ಕರಿಸಿ, ಸೇವೆಮಾಡಿ ಅವರನ್ನು ಕೇಳಿ ಜ್ಞಾನವನ್ನು ಪಡೆಯಬೇಕು. ಅವರೇ ಅದನ್ನು ಪದೇಶಿಸುವವರು' – ಎಂತ ಭಗವಂತನು ಅಪ್ಪಣೆ ಕೊಟ್ಟಿರುವನು

ಎಷ್ಟೋ ಜನರು ಗ್ರಂಥಗಳನ್ನು ಓದಿಯೇ ಇರುವರು, ದೊಡ್ಡವರ ಮಾತನ್ನೂ ಕೇಳಿಯೇ ಇರುವರಲ್ಲ? ಅವರಿಗೇತಕ್ಕೆ ಶ್ರವಣದ ಫಲವಾಗಿಲ್ಲ? ಎಂದರೆ ಇಲ್ಲಿ ಒಂದು ರಹಸ್ಯವುಂಟು. ಸುಮ್ಮನೆ ಮಾತುಗಳನ್ನು ಕಿವಿಯಲ್ಲಿ ಹಾಕಿಕೊಂಡರೆ ಶ್ರವಣವೆನಿಸದು. ನಿಜವಾದ ಶ್ರವಣವಾಗಬೇಕಾದರೆ ಕೇಳಿದ ವಿಷಯದಲ್ಲಿಯೆ ಮನಸ್ಸು ನೆಡಬೇಕು. ಫೋಟೋ ಎಂಬ ಭಾವಚಿತ್ರವನ್ನು ತೆಗೆಯುವವನು ತನ್ನ ಯಂತ್ರವನ್ನು ಸರಿಯಾದ ಎತ್ತರದಲ್ಲಿ ಸರಿಯಾದ ದೂರದಲ್ಲಿ ಸರಿಯಾದ ಸ್ಥಳದಲ್ಲಿಟ್ಟು ಎದುರಿಗೆ ಕೂತಿರುವವರ ಪೂರ್ಣಪ್ರತಿಬಿಂಬವು ಯಂತ್ರದ ಕನ್ನಡಿಯ ಮೇಲೆ ಬೀಳುವಂತೆ ಮಾಡಿಕೊಳ್ಳುವದಕ್ಕೆ ಹೇಗೆ ಯತ್ನಿಸುವನೋ ಹಾಗೆಯೇ ಮನಸ್ಸನ್ನು ನೆಟ್ಟಗೆ ನಿಲ್ಲಿಸಿಕೊಂಡು ವಿಷಯಗಳನ್ನು ತಿಳಿಸುವ ಸದ್ಗುರು ಮಾಡುವ ಯತ್ನಗಳಿಂದ ಅವು ನಮ್ಮ ಮನಸ್ಸಿನಲ್ಲಿ ಮೂಡುವಂತೆ ಮಾಡಿಕೊಳ್ಳುವದೇ ಶ್ರವಣವೆನಿಸುವದು. ಎಷ್ಟೋ ಜನರಿಗೆ ಶ್ರವಣಶಕ್ತಿಯೇ ಇರುವದಿಲ್ಲ. ಎಷ್ಟೋ ಜನ ಇದರಿಂದಲೆ ಕೇಳಿದ ಹರಿಕಥೆ, ಉಪನ್ಯಾಸ, ಪಾಠಪ್ರವಚನಗಳು ಇವುಗಳಿಂದ

ಇಂಥವರ ಮನಸ್ಸಿನಮೇಲೆ ಪರಿಣಾಮವಾಗುವದಿಲ್ಲ. ಗೋರಿಕಲ್ಲಿನಮೇಲೆ ಮಳೆ ಹೊಯ್ದಂತೆ ಅವರ ಮನಸ್ಸಿನಮೇಲೆ ಬಿದ್ದ ಸದುಕ್ತಿಗಳೂ ಜಾರಿಹೋಗುವವು. ಅಧ್ಯಾತ್ಮದ ವಿಷಯಗಳನ್ನು ಎಷ್ಟೋಸಲ ಕೇಳಿ ಕೇಳಿ ನಮಗೇನೂ ತಿಳಿಯಲೇ ಇಲ್ಲವಲ್ಲ! ಎಂದು ನಿಟ್ಟುಸಿರು ಬಿಡುತ್ತಿರುವವರು ಬಹುಮಂದಿ ಈ ಪಂಗಡದವರೆಂದು ಅರಿಯಬೇಕು. ಇಂಥವರ ಮನಸ್ಸಿಗೆ ಶುದ್ಧಿಸಾಲದು, ಅದು ಸರಿಯಾಗಿ ನಿಂತು ವಿಷಯಗಳನ್ನು ಹಿಡಿದುಕೊಳ್ಳಲಾರದು. ಇಂಥವರು ಶ್ರುತಿಸ್ಮೃತಿ ಪುರಾಣಗಳಲ್ಲಿ ಹೇಳಿರುವ ಶುದ್ಧಿಪ್ರಯೋಜಕವಾದ ಉತ್ತಮಕರ್ಮಗಳನ್ನು ಆಚರಿಸಬೇಕು. ಮನಸ್ಸಿಗೆ ಸಂಸ್ಕಾರವನ್ನು ಕೊಡುವ ಶಾಸ್ತ್ರಗಳನ್ನು ಅಭ್ಯಾಸ ಮಾಡಬೇಕು. ಇಂಥ ಉಪಾಯಗಳಿಂದ ಚಿತ್ತಶುದ್ಧಿಯನ್ನು ಸಂಪಾದಿಸಿಕೊಂಡು ಅದರಲ್ಲಿಯೆ ಮನಸ್ಸಿಟ್ಟು ಶ್ರದ್ಧೆಯಿಂದ ಯಾರು ಅಧ್ಯಾತ್ಮವಿಷಯಕವಾದ ಶ್ರವಣವನ್ನು ಆಚರಿಸುವರೋ ಆ ಮಹನೀಯರಿಗೆ ಆತ್ಮಸಾಕ್ಷಾತಾರವೆಂಬುದು ಕರತಲಾಮಲಕವಾಗಿರುವದೆಂಬುದರಲ್ಲಿ ಸಂದೇಹವಿಲ್ಲ.

★★★★★

# ಮನನ ಸ್ವರೂಪ

ಕಠೋಪನಿಷತ್ತಿನಲ್ಲಿ ಒಂದು ವಾಕ್ಯವುಂಟು –

**ಶ್ರವಣಾಯಾಪಿ ಬಹುಭಿರ್ಯೋ ನ ಲಭ್ಯಃ**
**ಶೃಣ್ವನ್ತೋಽಪಿ ಬಹವೋ ಯಂ ನ ವಿದ್ಯುಃ ।**
**ಆಶ್ಚರ್ಯೋ ವಕ್ತಾ ಕುಶಲೋಽಸ್ಯ ಲಬ್ಧಾಽ-**
**ಶ್ಚರ್ಯೋ ಜ್ಞಾತಾ ಕುಶಲಾನು ಶಿಷ್ಟಃ ॥**

ಇದರ ಅಭಿಪ್ರಾಯವೇನೆಂದರೆ, ‘‘ಎಷ್ಟೋ ಜನರಿಗೆ ಆತ್ಮನ ಶ್ರವಣವೇ ಸಿಕ್ಕುವದಿಲ್ಲ. ಇನ್ನೂ ಕೆಲವರಿಗೆ ಶ್ರವಣವಾದ ಮೇಲೂ ಈ ಆತ್ಮನ ಅರಿವಾಗುವದಿಲ್ಲ. ಈ ಆತ್ಮತತ್ತ್ವವನ್ನು ಹೇಳುವವನೇ ಆಶ್ಚರ್ಯಸ್ವರೂಪನು, ಇದನ್ನು ಪಡೆಯುವವನೇ ಮೇಲಾದರೂ ತಿಳಿದುಕೊಳ್ಳುವವನೂ ಆಶ್ಚರ ಸ್ವರೂಪನೆ. ಉಪದೇಶಮಾಡಿದ

ಮೇಲಾದರೂ ತಿಳಿದುಕೊಳ್ಳುವವನೂ ಆಶ್ವರ್ಯಸ್ವರೂಪನೆ.'' ಎಲ್ಲರಿಗೂ ಈ ತಿಳಿವು ಬರುವದಿಲ್ಲ.

ಈ ಉಪನಿಷದ್ವಾಕ್ಯದಲ್ಲಿ ಶ್ರವಣಮನನಗಳ ಸ್ವರೂಪವನ್ನು ಬಿಡಿಸಿ ಹೇಳಿರುತ್ತದೆ. ಹೇಳಿದ ವಿಷಯವನ್ನು ಮನಸ್ಸು ಕೊಟ್ಟು, ತನ್ನೊಳಕ್ಕೆ ಬರಮಾಡಿಕೊಂಡರೆ ಶ್ರವಣವಾಯಿತು. ಸುಮ್ಮನೆ ಈ ಕಿವಿಯಿಂದ ಕೇಳಿದ್ದು ಆ ಕಿವಿಯಿಂದ ಸೋರಿಹೋಗುವಂತೆ ಎತ್ತಲೋ ನೋಡುತ್ತ ಹೊಗಟ್ಟುತ್ತ ತಲೆಹಾಕಿದರೆ ಆಗಲಿಲ್ಲ. ಈ ಶ್ರವಣವೆಂಬುದು ಎಷ್ಟೋ ಜನರಿಗೆ ದಕ್ಕಗೆ ಹೋಗುವದು. ಅಧ್ಯಾತ್ಮ ವಿಚಾರಗಳ ಗ್ರಂಥಗಳು ಕಡಿಮೆಯೆಂಬುದಾಗಲಿ ಅಧ್ಯಾತ್ಮ ವಿಚಾರವನ್ನು ತಿಳಿಯಹೇಳುವವರು ಇಲ್ಲವೆಂಬುವಾಗಲಿ ಇದಕ್ಕೆ ಕಾರಣವಲ್ಲ. ಶ್ರವಣಶಕ್ತಿಯಿಲ್ಲದಿರುವರೇ ಇದಕ್ಕೆ ಕಾರಣವು. ಈ ಶ್ರವಣಕ್ಕೆ ಇರುವ ಪ್ರತಿಬಂಧಕಗಳು ಅನೇಕವಾಗಿರುತ್ತವೆ. ಹೊರವಿಷಯಗಳು ನಮ್ಮ ಮನಸ್ಸನ್ನು ಎಳೆಯುತ್ತಿರುದೊಂದು ಕಾರಣ, ''ಒಳಗೆ ಆತ್ಮತತ್ತ್ವವೆಂದು ಹೇಳುತ್ತಾರೆ. ಅದೇನು ನಿಜವಾಗಿ ಇದೆಯೋ ಇಲ್ಲವೊ! ಇದ್ದರೆ ಅದು ವಿಚಾರಮಾಡಿದರೆ ನನಗೆ ತಿಳಿಯುವದೋ ಇಲ್ಲವೋ! ತಿಳಿದರೂ ಅದರಿಂದ ನನಗೇನಾದರೂ ಪ್ರಯೋಜನವುಂಟೋ ಇಲ್ಲವೋ! ಒಂದು ವೇಳೆ ಆಕಡೆಗೆ ಲಕ್ಷ್ಯಕೊಡುವದರಿಂದ ಈ ಲೋಕದಲ್ಲಿರುವ ಅನುಕೂಲಗಳೆಲ್ಲವೂ ನನಗೆ ತಪ್ಪಿಹೋಗುವವೋ ಏನೋ! ನಾನು ಏತಕ್ಕೂ ಬರದವನಾಗಿ ಮೂಗುಹಿಡಿದು ಕೂರುವವನೆಂದು ಜನರು ಹಾಸ್ಯ ಮಾಡುವದಕ್ಕೆ ಪ್ರಾರಂಭಿಸಿದರೇನು ಗತಿ!'' ಎಂದು ಮುಂತಾಗಿ ಸಂಶಯಗಳು ಅಲೆಗಳಂತೆ ಒಂದರ ಹಿಂದೊಂದು ಬಂದು ಆಕ್ರಮಿಸಿಕೊಳ್ಳುವದೊಂದು ಕಾರಣ. ಇವುಗಳನ್ನು ಒತ್ತಟ್ಟಿಗಿಟ್ಟು ಪ್ರಯತ್ನಮಾಡುವಾಗ ಅಭ್ಯಾಸದ ಮೊದಲನೆಯ ಸ್ಥಿತಿಯಲ್ಲಿ ಪ್ರಯೋಜನವು ಕಾಣದೆ ಕಷ್ಟಗಳೊದಗಿ ಕಣ್ಣುಕಟ್ಟಿ ಕಾಡಿಗೆ ಬಿಟ್ಟಂತಾಗುವದೊಂದು ಕಾರಣ. ಈ ಎಲ್ಲಾ ಪ್ರತಿಬಂಧಕಗಳನ್ನೂ ದಾಟುವದಕ್ಕೆ ಶಕ್ತನಾದವನಿಗೇ ಆತ್ಮವಿಷಯಕ ಶ್ರವಣವು ದಕ್ಕುವದಾದ್ದರಿಂದ ''ಇದನ್ನು ಪಡೆಯುವವನೇ ಜಾಣನು'' ಎಂದು ಉಪನಿಷತ್ತಿನಲ್ಲಿ ಹೇಳಿರುತ್ತದೆ.

ಇನ್ನು ಕೆಲವರಿಗೆ ಹೀಗೆ ಶ್ರವಣವಾದ ಮೇಲೂ ಈ ಆತ್ಮನ ಅರಿವಾಗುವದಿಲ್ಲ. ಇವರಿಗೆ ಮನನವು ಬೇಕಾಗುವದು. ಅಡಿಗೆ ಮಾಡಿದ ವಸ್ತುಗಳನ್ನು ಸಾರು, ಹುಳಿ, ಕೂಟು, ಪಲ್ಯ – ಎಂದು ಗುರ್ತಿಸುವದೂ ಅಂಥಿಂಥವಸ್ತುಗಳು ಸೇರಿ ಈ ಅಡಿ

ಗೆಗಳು ಆಗಿರುವವೆಂದು ಮಾಡಿದವರಿಂದ ಕೇಳಿ ತಿಳಿಯುವದೂ ಅಡಿಗೆಯ ಜ್ಞಾನಕ್ಕೆ ಸಹಕಾರಿಗಳೇ ಸರಿ. ಆದರೆ ತಾನೇ ಅವುಗಳನ್ನು ಪಾಕಮಾಡಿದಾಗಲೇ ಅವುಗಳ ಸ್ವರೂಪಜ್ಞಾನವು ನಿಜವಾಗಿಹುಟ್ಟುವದು. ಇದರಂತೆಯೇ ಆತ್ಮನ ವಿಷಯದಲ್ಲಿ ಗ್ರಂಥಗಳನ್ನೂ ಉಪದೇಶಗಳನ್ನೂ ಕೇಳಿದರೆ ಸಾಲದು. ಆ ಅಂಶಗಳ ಬೆಲೆಯನ್ನು ಕುರಿತು ತಾನೇ ಆಲೋಚನೆ ಮಾಡಬೇಕು. ಆಲೋಚನೆ ಎಂದರೇನೆಂದು ತಿಳಿಯುವದು ಅವಶ್ಯವಾಗಿದೆ. ಈ ಮಾತಿನ ಧಾತ್ವರ್ಥವನ್ನು ಮನಸ್ಸಿನಲ್ಲಿಟ್ಟರೆ ಎಲ್ಲೆಲ್ಲಿಯೂ ಬೆಳಕು ಬೀಳುವಂತೆ ಮಾಡುವದೆಂದು ಅಭಿಪ್ರಾಯವಾಗುವದು. ಆತ್ಮನ ವಿಷಯದಲ್ಲಿ ನಮಗೆ ಯಾವ ಸಂದೇಹವಾಗಲಿ, ವಿಪರೀತ ಭಾವನೆಯಾಗಲಿ, ಇರದಂತೆ ಮನಸ್ಸು ಎಲ್ಲಾ ಕಡೆಗೂ ಹರಿದಾಡಿ ನೋಡಬೇಕು. ಆಗಲೇ ಮನನವು ಪ್ರಾರಂಭವಾಯಿತು.

ಈ ಮನನದಲ್ಲಿ ಇನ್ನೊಂದು ವಿಶೇಷವಿದೆ. ಹೊರಗಿನ ವಸ್ತುವಿನ ವಿಷಯದಲ್ಲಿ ವಿಚಾರಮಾಡುವದು ನಮಗೆ ಬಹುಸುಲಭ, ಏಕೆಂದರೆ, ಅವು ಮನಸ್ಸಿಗೆ ವಿಷಯವಾಗಿಯೇ ಇರುವವು. ಆತ್ಮಮನನದಲ್ಲಿಯೋ ಎಂದರೆ ಮನಸ್ಸು ಹಿಂದಿರುಗಬೇಕು. ಹಿಮಾಲಯದಿಂದ ಸಮುದ್ರದ ಕಡೆಗೆ ಹರಿಯುತ್ತಿರುವ ಗಂಗಾನದಿಯನ್ನು ಹಿಂದಕ್ಕೆ ಪ್ರವಹಿಸುವಂತೆ ಮಾಡುವ ಕೆಲಸವೂ ಮನಸ್ಸನ್ನು ವಿಷಯಗಳಿಂದ ಹಿಮ್ಮೆಟ್ಟಿಸುವ ಕೆಲಸವೂ ಸಮವೆನ್ನಬಹುದು. ಇಷ್ಟೇ ಅಲ್ಲ. ಮನಸ್ಸು ಹಿಂದಿರುಗಿದಮೇಲಾದರೂ ಮನಸ್ಸಿಗೆ ಸಿಕ್ಕದ ವಸ್ತುವಿನ ವಿಷಯದಲ್ಲಿ ಮನನ ಮಾಡಬೇಕೆಂದರೆ ಎಂಥ ವಿಚಾರಶೂನ್ಯವಾದ ಮಾತಾಗಿತೋರುವದು! ''ಮಾತುಗಳೂ ಮನಸ್ಸೂ ಆ ಪರಮಾತ್ಮನನ್ನು ಪಡೆಯಲಾರದೇ ಹೋಗುವವು'' ಎಂದು ಶ್ರುತಿಯೇ ಹೇಳುತ್ತಿರುವದು. ಹೀಗಿರುವದರಿಂದ ಆತ್ಮನ ವಿಷಯವಾಗಿ ಮನನ ಮಾಡಬೇಕೆಂದು ಹೇಳುವದು ಕಷ್ಟವೆಂಬುದು ಹಾಗೆ ಇರಲಿ, ಯಾರಿಂದಲೂ ಆಗದ ಮಾತೆಂದೇ ತೋರುತ್ತಿರುವದು.

ಆದರೆ ಬಾಹ್ಯ ವಿಷಯಾಸಕ್ತರಿಗೆ ಮನನವೆಂಬುದು ಕಷ್ಟದ ಮಾತೇ ಆದರೂ ಸರಿಯಾದ ಸಂಸ್ಕಾರವುಳ್ಳವರಿಗೆ ಅದೇನೂ ಕಷ್ಟವಲ್ಲ. ಕಠೋಪನಿಷತ್ತಿನಲ್ಲಿಯೇ ಈ ವಿಚಾರದಲ್ಲಿ ಹೇಳಿರುವದೇನೆಂದರೆ ''**ಮನಸೈವೇದಮಾಪ್ತವ್ಯಂ ನೇಹ ನಾನಾಸ್ತಿ ಕಿಂಚನ**'' (ಇದನ್ನು ಮನಸ್ಸಿನಿಂದಲೆ ತಿಳಿಯಬೇಕಾಗಿದೆ, ಇದರಲ್ಲಿ ಯಾವ ಭೇದವೂ ಇರುವದಿಲ್ಲ). ಈ ವಾಕ್ಯಕ್ಕೆ ಶ್ರೀ ಶಂಕರಾಚಾರ್ಯರು ಬರೆದಿರುವ ಭಾಷ್ಯದಲ್ಲಿ

ಹೀಗೆಂದು ಹೇಳಿರುತ್ತಾರೆ. ''**ಆತ್ಮವೊಂದೇ ತತ್ತ್ವವೆಂದು ಅರಿಯುವದಕ್ಕೆ ಮೊದಲು ಆಚಾರ್ಯರಿಂದಲೂ ಶಾಸ್ತ್ರದಿಂದಲೂ ಸಂಸ್ಕಾರವನ್ನು ಹೊಂದಿದ ಮನಸ್ಸಿನಿಂದಲೇ ಈ ಅಖಂಡರಸವಾಗಿರುವ ಬ್ರಹ್ಮವನ್ನು ಅರಿಯಬೇಕಾಗಿದೆ; ಹಾಗೆ ಅರಿತಮೇಲೋ ಎಂದರೆ ಭೇದಗಳನ್ನು ತಿಳಿಸುವ ಅವಿದ್ಯೆಯೇ ಹೋಗಿ ಬಿಡುವದರಿಂದ ಈ ಬ್ರಹ್ಮದಲ್ಲಿ ಸ್ವಲ್ಪವೂ ಭೇದವಿರುವದಿಲ್ಲ.**'' ಈ ಭಾಷ್ಯದಿಂದ ಮೇಲೆ ನಾವು ತಿಳಿಸಿದ ಶಂಕೆಗೂ ಪರಿಹಾರವನ್ನು ಹೇಳಿದಂತಾಗುವದು. ಹೇಗೆಂದರೆ ಮನಸ್ಸಿಗೆ ಸಿಕ್ಕುವದಿಲ್ಲವೆಂಬುದು ಸಂಸ್ಕಾರವಿಲ್ಲದ ಮನಸ್ಸಿನ ವಿಷಯವು, ಸರಿಯಾದ ಸಂಸ್ಕಾರವುಳ್ಳ ಮನಸ್ಸಿಗೆ ಆತ್ಮನ ಅರಿವು ಆಗಿಯೇ ತೀರುವದು, ಅಂಥ ಅರಿವನ್ನುಂಟುಮಾಡುವದಕ್ಕೆ ಶಾಸ್ತ್ರವು ಹೊರಟಿರುವದು. ಮನಸ್ಸಿಗೆ ಆತ್ಮನು ವಿಷಯವಲ್ಲವೆಂಬುದೂ ಇಂಥ ಅರಿವು ಹುಟ್ಟಿದ ಮೇಲೆಯೇ ಗೊತ್ತಾಗುವದು.

ಮನನದ ವಿಷಯದಲ್ಲಿ ಇನ್ನೊಂದು ಮಾತನ್ನು ಹೇಳಿ ಈ ಲೇಖವನ್ನು ಮುಗಿಸುವೆವು. ಮನನವೆಂದರೆ ವಿಚಾರವೆಂದು ಅರ್ಥವಾದರೂ ಸಿಕ್ಕಹಾಗೆ ವಿಚಾರಮಾಡುವದು ಮನನವಾಗಲಾರದು. ಶಾಸ್ತ್ರವಿಚಾರವನ್ನು ಅನುಭವಕ್ಕೆ ತಂದುಕೊಂಡಿರುವ ಸದ್ಗುರುವಿನ ಉಪದೇಶದಿಂದ ಸಿಕ್ಕ ವಿಷಯವನ್ನು ಕುರಿತು ವಿಚಾರಮಾಡುವದೇ ಮನನವೆನಿಸುವದು. ಬರಿಯ ಬುದ್ಧಿಯಿಂದ ಊಹಿಸಿ ತಿಳಿದ ಜನರು ''ಆತ್ಮನು ಇದ್ದಾನೆ, ಇಲ್ಲ, ಕರ್ತೃ, ಅಕರ್ತೃ, ಒಬ್ಬನು, ಅನೇಕ, ಸಗುಣನು, ನಿರ್ಗುಣನು'' – ಎಂದು ಮುಂತಾಗಿ ಆನೆಯ ಸ್ವರೂಪವನ್ನು ತಡವರಿಸಿ ತಿಳಿಯುವ ಕುರುಡರಂತೆ ಬಗೆಬಗೆಯಾಗಿ ಕಲ್ಪಿಸುತ್ತಲೂ ಒಬ್ಬರನೊಡನೊಬ್ಬರು ತತ್ತ್ವದ ವಿಷಯದಲ್ಲಿ ಜಗಳವಾಡುತ್ತಲೂ ಇರುವರು. ಆದ್ದರಿಂದಲೇ ''**ತರ್ಕವು ನಿಲುಗಡೆಗೆ ಬರುವದಿಲ್ಲ**'' – ಎಂದು ಬಾದರಾಯಣರು ಬ್ರಹ್ಮಸೂತ್ರದಲ್ಲಿ ಹೇಳಿರುತ್ತಾರೆ. ವಾಕ್ಕಿನ ಶ್ರವಣವನ್ನನುಸರಿಸಿ ಶ್ರುತಿಸಮ್ಮತವಾಗಿ ವಿಚಾರಮಾಡುವದೇ ಸರಿಯಾದ ಅನುಭವವನ್ನು ಕೊಡುವ ಬೋಧಾಭ್ಯಾಸವೆಂದೂ ಮನನವೆಂದೂ ವೇದಾಂತದಲ್ಲಿ ಹೇಳಲ್ಪಡುವದು.

★★★★★

# ಮನನದ ಮಹತ್ವ

ಈ ಕಾಲದಲ್ಲಿ ಅನೇಕರು 'ಮನನ'ದ ಬೆಲೆಯನ್ನು ಅರಿಯದೆ ಅದನ್ನು ಅಲ್ಲಗಳೆಯುತ್ತಿರುವರು. ಸುಮ್ಮನೆ ಆಲೋಚನೆ ಮಾಡುತ್ತಿರುವದರಿಂದ ಏನಾಗುವದು? ವ್ಯವಹಾರದಲ್ಲಿ ನುಗ್ಗಿ ಕೆಲಸಮಾಡಬೇಕು. ಪರೋಪಕಾರ ಮಾಡಬೇಕು, ದೇಶಾಭಿವೃದ್ಧಿ ಭಾಷಾಭಿವೃದ್ಧಿ ಮುಂತಾದ ಮಹಾಕಾರ್ಯಗಳಿಗೆ ಕೈಹಾಕಬೇಕು. ವಿಚಾರಮಾಡುತ್ತೇವೆಂದು ಮೂಲೆಯಲ್ಲಿ ಮುದುರಿಕೊಂಡು ಕೂರುವವರು ಹೆಚ್ಚಾದದ್ದರಿಂದಲೇ ನಮ್ಮ ದೇಶವು ಹೀನಸ್ಥಿತಿಗೆ ಬತು. ಆದ್ದರಿಂದ ವ್ಯವಹಾರದಲ್ಲಿ ಪ್ರವರ್ತಿಸುವವರಿಗೆ ಬೆಲೆಯೇ ಹೊರತು, ಸುಮ್ಮನೆ ವಿಚಾರ ಮಾಡುತ್ತೇವೆಂದು ಪದ್ಮಾಸನ ಹಾಕಿ ಕೂತುಕೊಳ್ಳುವವರಿಗೇನೂ ಬೆಲೆಯಿಲ್ಲ. ಅಂಥವರನ್ನು ಅನುಕರಿಸಿದರೆ ನಮ್ಮ ಜನರು ಸೋಮಾರಿಗಳಾಗುವರು. ಹೀಗೆಂದು ಅನೇಕರ ಭಾವನೆ ಇರುವದು.

ಆದರೆ ಲೋಕದಲ್ಲಿ ನಿಜಸ್ಥಿತಿಯನ್ನು ನೋಡಿ, ಮಹಾಕಾರ್ಯಗಳನ್ನು ಮಾಡಿರುವರು ಯಾರು? ಯಾರು ತಾವು ಕೈಗೊಳ್ಳಬೇಕಾದ ಕಾರ್ಯದ ಸ್ವರೂಪವನ್ನೂ ಪ್ರಯೋಜನಗಳನ್ನೂ ಅದಕ್ಕೆ ಆಗಬೇಕಾದ ಸಲಕರಣೆಗಳನ್ನೂ ತಮ್ಮ ಯೋಗ್ಯತೆಯನ್ನೂ ಚೆನ್ನಾಗಿ ಯೋಚನೆಮಾಡಿ ತೂಕಹಾಕಿಕೊಂಡು ಕಾರ್ಯದಲ್ಲಿ ಪ್ರವರ್ತಿಸುವರೋ ಅವರೇ ಲೋಕದಲ್ಲಿ ಸಾಮಾನ್ಯರಿಗೆ ಅಸಾಧ್ಯವಾದ ಕಾರ್ಯಗಳನ್ನೂ ಲೀಲಾಪ್ರಾಯವಾಗಿ ಸಾಧಿಸಿರುವದು, ದೇಶಗಳನ್ನು ಕಂಡುಹಿಡಿದವರು, ಯಂತ್ರಗಳನ್ನು ನಿರ್ಮಾಣಮಾಡಿದವರು, ಜಗತ್ತಿನ ಭೌತಿಕತತ್ತ್ವಗಳನ್ನು ಶೋಧನೆ ಮಾಡಿದವರು – ಇವರೆಲ್ಲ ಮೊದಲು ಏನುಮಾಡಿದರು? ಆಯಾ ವಿಷಯವನ್ನು ಕುರಿತು ಉಳಿದವರಿಗೆ ಯಾರಿಗೂ ಆಗದಷ್ಟು ಆಲೋಚನೆ ಮಾಡಿ, ತಮ್ಮ ಆಲೋಚನೆಯನ್ನು ಕೃತಿಯಲ್ಲಿ ರೂಪುಗೊಳಿಸಿದರು. ಆದ್ದರಿಂದ ಲೋಕದಲ್ಲಿ ನಡೆಯುವ ವ್ಯವಹಾರ ದೃಷ್ಟಿಯಿಂದ ನೋಡಿದರೂ ಮನನವೇ ಮಹಾಕಾರ್ಯವಾಗಿ ಪರಿಣಾಮವನ್ನು ಪಡೆಯುವದೆನ್ನ ಬೇಕಾಗಿದೆ. ಯಾವ ಅವಿವೇಕಿಗಳಿಗೆ ಮನನದ ಶಕ್ತಿಯೇ ಗೊತ್ತಿಲ್ಲವೋ ಅಂಥವರು ಚಟಾಕಿಗಳನ್ನು ಹತ್ತಿಸುವರಲ್ಲಿ ದುಡ್ಡು ವೆಚ್ಚಮಾಡಿ ಸಂತೋಷಪಡುವ ಚಿಕ್ಕಮಕ್ಕಳಂತೆ ತಮಗೆ ಇದ್ದ ಅಲ್ಪ ಸ್ವಲ್ಪ ಶರೀರೇಂದ್ರಿಯಗಳ

ಶಕ್ತಿಯನ್ನು ಸಿಕ್ಕ ಸಿಕ್ಕ ಸಣ್ಣ ಪುಟ್ಟ ಕೆಲಸಗಳಿಗೆ ವಿನಿಯೋಗಿಸಿ, ಭೀಮಾರ್ಜುನರಂಥ ವೀರಾಗ್ರೇಸರರಿಗೂ ಅಸಾಧ್ಯವಾದ ಕೆಲಸಗಳನ್ನು ಮಾಡಿದೆವೆಂದು ಹಿಗ್ಗುತ್ತ ತಮ್ಮ ಜಯಭೇರಿಗಳನ್ನು ಹೊಡೆಸಿಕೊಳ್ಳುವರು. ಆದರೆ ಯಾರು ಮನಸ್ಸಿನಲ್ಲಿರುವ ಹೆಚ್ಚಿನ ಶಕ್ತಿಯನ್ನು ಅರಿತಿರುವರೋ, ಅವರು ತಮ್ಮ ಆ ಶೋಧನಾಬಲದಿಂದ ಎಲ್ಲಾ ಶಕ್ತಿವಿಶೇಷಗ ಳನ್ನೂ ಬಲಗಡಿಸಿ ಒಂದು ಗೂಡಿಸಿ, ಬೇಕಾದರೆ ಹಿಮಾಚಲವನ್ನೇ ಕಿತ್ತು ರಾಮೇಶ್ವರಕ್ಕಿಳಿಸುವಷ್ಟು ಅದ್ಭುತವಾದ ಕಾರ್ಯವನ್ನಾದರೂ ನೆರವೇರಿಸಿ ಬಿಡುವರು.

ವ್ಯವಹಾರವೇ ಮನುಷ್ಯ ಜನ್ಮದ ಪರಮೋದ್ದೇಶವೆಂದು ಇಟ್ಟು ಕೊಂಡು ಈ ಮಾತು ಹೇಳಿದ್ದಾಗಿದೆ. ನಿಜವಾಗಿ ಮನುಷ್ಯನು ಹುಟ್ಟಿದಂದಿನಿಂದ ಸಾಯುವವರೆಗೂ ಜಟಕಾ ಕುದುರೆಗಳಂತೆ ದುಡಿಯುವದಕ್ಕೆ ಹುಟ್ಟಿಲ್ಲ. ಅವನಿಗೆ ಇನ್ನೂ ಹೆಚ್ಚಿನ ಪುರುಷಾರ್ಥವುಂಟು. ಗರಡಿಯ ಮನೆಯಲ್ಲಿ ದಂಡೇ ಒತ್ತುವದೇ ಮುಂತಾದ ಸಾಧನೆ ಮಾಡುವದರಿಂದ ಜನರಿಗೆ ಮೈಬಲ ಹೆಚ್ಚುವದು, ಆರೋಗ್ಯವು ನಿರ್ವಿಘ್ನವಾಗಿರುವದು, ಮನಸ್ಸಿನಲ್ಲಿ ಹರ್ಷವೂ ಇರುವದು. ಆದರೆ ಆ ಗರಡಿಯ ಸಾಧನೆಯೇ ಅವರಿಗೆ ಉದ್ದೇಶವೋ? ಅವರು ಸಾವಿರಾರು ಜನರು ನೋಡುತ್ತಿರುವಾಗ ಕುಸ್ತಿಹೊಡೆದು ಲೋಕಪ್ರಸಿದ್ಧರಾದ ''ವಸ್ತಾದಿ ಗಳನ್ನು ಜಯಿಸಿ ಕೀರ್ತಿಯನ್ನು ಹೊಂದಬೇಕೆಂದು ತವಕಿಸುತ್ತಿರುವರು. ಇವರ ಕೈಚಳಕವನ್ನೂ ಎದುರಾಳಿಯನ್ನು ಕೆಡಹುವದಕ್ಕೆ ಮಾಡುವ ಹಂಚಿಕೆಗಳನ್ನೂ ಹಿಡಿಯುವ ಪಟ್ಟುಗಳನ್ನೂ ನೋಡಿ ಪ್ರೇಕ್ಷಕರು ಮೆಚ್ಚಿ ಕೊಡುವ 'ಥೋಡಾ' ಮುಂತಾದ ಬಹುಮಾನದಲ್ಲಿಯೇ ಅವರಿಗೆ ದೃಷ್ಟಿಯಿರುವದು. ಇದರಂತೆ ಈ ಪ್ರಪಂಚವ್ಯವಹಾರವೆಂಬುದೂ ನಮಗೊಂದು ಗರಡಿಯಮನೆಯಿದ್ದಂತೆ. ಇಲ್ಲಿ ನಾವು ಮಾಡುವ ಮಹಾಕಾವ್ಯಗಳೂ ಪರೋಪಕಾರಗಳೂ ಎಲ್ಲಾ ಗರಡಿಯ ಸಾಧ ನವೇ ಹೊರತು ಪುರುಷಾರ್ಥವಲ್ಲ. ಪರಮಪುರುಷಾರ್ಥವೆಂಬುದು ಅಧ್ಯಾತ್ಮವಿದ್ಯೆ ಯಿಂದ ಆತ್ಮಸಾಕ್ಷಾತ್ಕಾರವನ್ನು ಪಡೆಯುವದೇ ಹೊರತು ಮತ್ತೆ ಯಾವದೂ ಅಲ್ಲ. ಅಂಥ ಪರಮಪುರುಷಾರ್ಥರೂಪವಾದ ಫಲಕ್ಕಂತೂ ಮನನವು ಬಹುಮುಖ್ಯ ಸಾಧನವು.

ಅಧ್ಯಾತ್ಮಮನನಮಾಡುವವರು ಕೇವಲ ಸ್ವಾರ್ಥಪರರೆಂದೂ ಕೆಲವರು ದೋಷವನ್ನು ತೆಗೆಯುವರು. ಜನರಿಗೆ ಎಷ್ಟೋ ಜನಕ್ಕೆ ಹೊಟ್ಟೆಗಿಲ್ಲ ಬಟ್ಟೆಗಿಲ್ಲ,

ವಿದ್ಯೆಯಿಲ್ಲ, ಬುದ್ಧಿಯಿಲ್ಲ, ಜನರು ದ್ವೇಷಾಸೂಯೆಗಳಿಂದ ಒಬ್ಬರೊಬ್ಬರು ಹೊಡೆದಾಡುತ್ತಿರುವರು. ಕ್ಷಾಮಡಾಮರಗಳೂ ರೋಗರುಜಿನಗಳೂ ದೇಹಗಳನ್ನು ಆವರಿಸಿಕೊಂಡಿರುವವು. ಹೀಗಿರುವಲ್ಲಿ ಎಲ್ಲರನ್ನೂ ಕೈಬಿಟ್ಟು, ತನ್ನ ಮೋಕ್ಷಚಿಂತೆಯನ್ನು ಮಾಡಿಕೊಂಡರೇನಾಯಿತು? ಅದೇನು ಹೆಚ್ಚಿನ ತಪಸ್ಸು? ಲೋಕದಲ್ಲಿರುವ ದುಃಖಸಾಮಗ್ರಿಗಳನ್ನು ಕಡಿಮೆಮಾಡಿ ಸುಖಸಾಮಗ್ರಿಗಳನ್ನು ಕಡಿಮೆಮಾಡುವದೇ ನಮ್ಮಗಳ ಪ್ರಥಮೋದ್ದೇಶವಾಗಿರಬೇಕು. ಇಂಥ ಸಾಕ್ಷಾತ್ಕರ್ತವ್ಯವನ್ನು ಮರೆತು ಯಾವದೋ ಹಳೆಯ ಕಡತಗಳನ್ನು ಬಿಚ್ಚಿಕೊಂಡು ವಿಚಾರಮಾಡುತ್ತಾ ಕೂತುಕೊಳ್ಳುವದು ಮೂಢತನವೂ ಸ್ವಾರ್ಥಪರತೆಯೂ ಆಗುವದಿಲ್ಲವೆ? ಎಂದು ಕೆಲವರು ವಾದಿಸುತ್ತಿರುವರು.

ಆತ್ಮಮನನವೆಂದರೆ ಲೋಕವನ್ನೆಲ್ಲ ಬಿಟ್ಟು ಎಲ್ಲಿಗೋ ಓಡಿಹೋಗುವದೆಂದು ಇಂಥ ಜನರ ಭಾವನೆಯಿರುವದು, ಲೋಕದಲ್ಲಿರುವ ಪ್ರಾಣಿಗಳಲ್ಲೆಲ್ಲ ಪರಮೇಶ್ವರಸಾನ್ನಿಧ್ಯವಿರುವದೆಂದು ಮನನಮಾಡುವವನು ಸ್ವಾರ್ಥಪರನು ಹೇಗಾದಾನು? ಪರೋಪಕಾರವೇ ಮುಖ್ಯಕರ್ತವ್ಯವೆಂಬುದೂ ನಿಜವೇ, ಆದರೆ ಆ ಅಭಿಪ್ರಾಯವನ್ನು ಸರಿಯಾದ ಆಧಾರದಮೇಲಿಟ್ಟು ಬೋಧಿಸುವದಕ್ಕೆ ಹೊರಟರೆ? ಆತ್ಮಜ್ಞಾನವೇ ಅಂಥ ಆಧಾರವಾಗಿರುವದು. ಜ್ಞಾನಕ್ಕೆ ಮನನವೇ ಮುಖ್ಯ ಸಾಧನವಾಗುವದು. ಇದು ಹಾಗಿರಲಿ, ಅಧ್ಯಾತ್ಮತತ್ತ್ವವನ್ನು ಯಾರು ಮನನ ಮಾಡುತ್ತಾರೋ ಅವರೇ ನಿಜವಾಗಿ ಪರೋಪಕಾರಿಗಳೆನ್ನಬೇಕು. ಏಕೆಂದರೆ, ಲೋಕದಲ್ಲಿ ಜನರ ಸಂಕಟವನ್ನು ಬರಿಯ ಅನ್ನಪಾನಾದಿದಾನಗಳನ್ನು ಮಾಡಿ ಪರಿಹರಿಸುವದಕ್ಕೆ ಆಗುವದೇ ಇಲ್ಲ. ಹಸಿವಾದವನಿಗೆ ಎಷ್ಟು ಸಲ ಅನ್ನಹಾಕಿದರೆ ಹಸಿವು ಬರದೇ ಇರುವದು? ಗೃಹಸ್ಥರೆಲ್ಲ ತಮ್ಮ ಮನೆಯನ್ನು ಅನ್ನ ಸತ್ರವನ್ನಾಗಿ ಮಾಡಿದರಾದರೂ ಜನರ ಕ್ಷುಧೆಯನ್ನ ಪರಿಹಾರಮಾಡಲಾದೀತೆ ? ಊರುಊರಿಗೂ ಕೇರಿಕೇರಿಗೂ ಆಸ್ಪತ್ರೆಗಳನ್ನು ಇಟ್ಟರಾದರೂ ರೋಗಗಳು ಇಲ್ಲವಾಗುವವೆ? ಲೋಕದಲ್ಲಿರುವ ದುಃಖಕ್ಕೆಲ್ಲ ಅಜ್ಞಾನವೇ ಕಾರಣವು, ಜ್ಞಾನವಿದ್ದವನು ಹೇಗಾದರೂ ದುಃಖವನ್ನು ಪರಿಹರಿಸಿಕೊಳ್ಳುವನು. ಆದ್ದರಿಂದ ತತ್ತ್ವವಿಚಾರದಿಂದ ಜ್ಞಾನವನ್ನು ಸಂಪಾದಿಸಿ ಕೊಂಡು ಜ್ಞಾನೋಪದೇಶವನ್ನು ಮಾಡುವದಕ್ಕಿಂತ ಹೆಚ್ಚಿನ ಪರೋಪಕಾರವು ಯಾವದೂ ಇಲ್ಲ. ಆದ್ದರಿಂದಲೇ ಬ್ರಹ್ಮವಿಚಾರ ಮಾಡುವರನ್ನು ಕುರಿತು ದೊಡ್ಡವರು ಹೇಳುವದೇನೆಂದರೆ –

ಸ್ನಾತಂ ತೇನ ಸಮಸ್ತತೀರ್ಥಸಲೇ ಸರ್ವಾऽಪಿದತ್ತಾವನಿ-
ರ್ಯಜ್ಞಾನಾಂ ಚ ಸಹಸ್ರಮಿಷ್ಟಮಖಿಲಾ ದೇವಾಶ್ಚ ಸಂಪೂಜಿತಾಃ ।
ಸಂಸಾರಾಚ್ಚ ಸಮುದ್ಧೃತಾಃ ಸ್ವಪಿತರಸ್ತ್ರೈಲೋಕ್ಯ ಪೂಜ್ಯೋಽಪ್ಯಸೌ
ಯಸ್ಯ ಬ್ರಹ್ಮ ವಿಚಾರಣೇ ಕ್ಷಣಮಪಿ ಸ್ಥೈರ್ಯಂ ಮನಃಪ್ರಾಪ್ನುಯಾತ್ ॥

ಯಾವಾತನಿಗೆ ಬ್ರಹ್ಮವಿಚಾರಮಾಡುವದರಲ್ಲಿ ಒಂದು ಕ್ಷಣವಾದರೂ ಮನಸ್ಸು ಸ್ಥಿರವಾಗಿನಿಲ್ಲುವದೋ ಆತನು ಎಲ್ಲಾ ತೀರ್ಥೋದಕದಲ್ಲಿಯೂ ಸ್ನಾನಮಾಡಿದಂತಾಯಿತು, ಸಮಸ್ತ ಭೂಮಿಯನ್ನೂ ದಾನಮಾಡಿದಂತಾಯಿತು, ಸಾವಿರಾರು ಯಜ್ಞಗಳನ್ನುಮಾಡಿದಂತಾಯಿತು, ಎಲ್ಲಾ ದೇವತೆಗಳನ್ನೂ ಪೂಜೆ ಮಾಡಿದಂತಾಯಿತು, ತನ್ನ ಪಿತೃಗಳನ್ನೆಲ್ಲ ಸಂಸಾರದಿಂದ ದಾಟಿಸಿದಂತಾಯಿತು, ನಿಜವಾಗಿ ಆತನು ಮೂರು ಲೋಕಕ್ಕೂ ಪೂಜ್ಯನಾಗಿರುವನು.

★★★★★

# ನಿದಿಧ್ಯಾಸನ

ಆತ್ಮಜ್ಞಾನಕ್ಕೆ ಶ್ರವಣಮನನಗಳು ಹೇಗೋ ಹಾಗೆ ನಿದಿಧ್ಯಾಸನವೂ ಅವಶ್ಯವಾಗಿರುವದು. ಶಾಸ್ತ್ರಾಚಾರ್ಯರ ವಾಕ್ಯವನ್ನು ಕೇಳಿ ತಿಳಿದುಕೊಳ್ಳುವ ಶಕ್ತಿ ಇರಬಹುದು. ಕೇಳಿದ ವಿಷಯದಲ್ಲಿ ಯುಕ್ತಾಯುಕ್ತವನ್ನು ವಿಚಾರಿಸುವ ಶಕ್ತಿಯೂ ಇರಬಹುದು. ಇವೆರಡು ಶಕ್ತಿಗಳನ್ನೂ ಉಪಯೋಗಿಸಿ ತನ್ನ ಅನುಭವದಲ್ಲಿ ತತ್ತ್ವವು ಮೂಡಿಕೊಳ್ಳುವವರೆವಿಗೂ ಅದೇ ಅರ್ಥವನ್ನು ಧಾರಾಕಾರವಾಗಿ ಹರಿಯಿಸುವ ಸ್ಥೈರ್ಯವೊಂದಿಲ್ಲದಿದ್ದರೆ ವ್ಯರ್ಥ, ಹೊಲವನ್ನು ಕೊಂಡುಕೊಂಡದ್ದಾಯಿತು; ಉತ್ತುಬಿತ್ತುಬಂದದ್ದೂ ಆಯಿತು; ಕಾಲಕಾಲಕ್ಕೆ ಗೊಬ್ಬರ ಗೋಡನ್ನು ನೋಡಿ ಕೊಳ್ಳುವದು, ಕಳೆಕೀಳುವದು, ಮುಂತಾದ ಎಡೆಬಿಡದೆ ಫಲಪರವಸಾನದವರೆಗೂ ಮಾಡುವ ಕಾರ್ಯವನ್ನು ಮಾಡದಿದ್ದರೇನು ಪ್ರಯೋಜನ; ಹೀಗೆಯೇ ಅಧ್ಯಾತ್ಮ ವಿಚಾರದಲ್ಲಿಯೂ ನಿದಿಧ್ಯಾಸನವು ಫಲಪರ್ಯವಸಾನದವರೆಗೆ ಮಾಡುತ್ತಿರ ಬೇಕಾದ ಬಹು ಮುಖ್ಯವಾದ ಕಾರ್ಯವಾಗಿರುತ್ತದೆ. ಆದ್ದರಿಂಗಲೇ ಶಾಸ್ತ್ರವು

ಹೀಗೆಂದು ಹೇಳುತ್ತಿರುವದು – **''ತಮೇವ ಧೀರೋ ವಿಜ್ಞಾಯ ಪ್ರಜ್ಞಾಂ ಕುರ್ವೀತ ಬ್ರಾಹ್ಮಣಃ । ನಾನು ಧ್ಯಾಯಾದ್ಬಹೂನ್ ಶಬ್ದಾನ್ ವಾಚೋವಿಗ್ಲಾಪನಂ ಹಿ ತತ್ ॥''** (ಆತ್ಮನನ್ನೇ ಜಾಣನಾದವನು ಉಪದೇಶದಿಂದಲೂ ಶಾಸ್ತ್ರದಿಂದಲೂ ತಿಳಿದುಕೊಂಡವನಾಗಿ, ಶಾಸ್ತ್ರವೂ ಆಚಾರ್ಯರೂ ಉಪದೇಶಮಾಡಿದ ವಿಷಯದಲ್ಲಿ ತಮ್ಮ ಜಿಜ್ಞಾಸೆಯನ್ನು ಕೊನೆಮುಟ್ಟಿಸುವಂಥದ್ದನ್ನಾಗಿ ಮಾಡಬೇಕು. ಬಹು ಶಬ್ದಗಳನ್ನು ಧ್ಯಾನಮಾಡಬಾರದು. ಏಕೆಂದರೆ ಮತ್ತೊಂದರ ಧ್ಯಾನವೆಂಬುದು ಮಾತಿಗೆ ಶ್ರಮವನ್ನು ಕೊಡತಕ್ಕದ್ದಾಗಿರುವದು).

ಲೋಕದಲ್ಲಿ ಆಯಾಯ ವಿಷಯದ ನಿದಿಧ್ಯಾಸನವು ಅದರದರ ಜ್ಞಾನಕ್ಕೆ ಎಷ್ಟು ಸಾಧಕವಾಗಿರುವದೆಂಬುದನ್ನು ಒಂದು ಉದಾಹರಣೆಯಿಂದ ಮನಗಾಣಬಹುದು. ಸಂಗೀತದಲ್ಲಿ ಪ್ರಾವೀಣ್ಯವನ್ನು ಹೊಂದಬೇಕೆನ್ನುವಾತನು ಏನು ಮಾಡುತ್ತಾನೆ? ತನ್ನ ಗುರು ಹೇಳಿಕೊಡುವದನ್ನು ಕೇಳುವದು, ಸಂಗೀತ ಶಾಸ್ತ್ರದಲ್ಲಿ ಹೇಳಿರುವದನ್ನು ತಿಳಿದುಕೊಳ್ಳುವದು, ಇಷ್ಟೇ ಮಾಡುವದಿಲ್ಲ; ಹಗಲೂ ಇರುಳೂ ಸಂಗೀತಾಭ್ಯಾಸದಲ್ಲಿಯೇ ಮಗ್ನನಾಗಿ ''ಇದು ಯಾವ ರಾಗವು? ಇದರಲ್ಲಿರುವ ಸ್ವರಸಮುದಾಯದ ಲಕ್ಷಣವೇನು? ಯಾವ ಸಂಗತಿಯಿಂದ ಇಂಥ ಕೃತಿಗೆ ಚೆನ್ನಾಗಿ ಕಳೆಕಟ್ಟುವ ಸ್ಥಿತಿ ಬರುವದು?'' ಎಂದು ಅದೊಂದೇ ಯೋಚನೆಯಲ್ಲಿಯೇ ಮನಸ್ಸನ್ನು ಮುಳುಗಿಸಿಟ್ಟಿರುವನು. ಸಂಗೀತವಲ್ಲದ್ದು ಯಾವದೂ ಅವನಿಗೆ ರುಚಿಸುವದಿಲ್ಲ. ಸಂಗೀತವೆಂದಮಾತ್ರಕ್ಕೆ ಅವನಿಗೆ ಸಾವಿರ ಕಿವಿ ಯಾಗುವದು. ಇಂಥ ದೂರನಗರದಲ್ಲಿ ಒಬ್ಬ ಮಹಾಕುಶಲತೆಯುಳ್ಳ ಸಂಗೀತ ವಿದ್ವಾಂಸನಿರುವನೆಂದರೆ ಅವನ ದರ್ಶನತೆಗೆದುಕೊಂಡು ಅವ ನಿಂದ ವಿದ್ಯೆಯನ್ನು ಸಂಪಾದಿಸುವದಕ್ಕೆ ಏನು ಏನು ಕಷ್ಟವಾದರೂ ಸಹಿಸುವದಕ್ಕೆ ಸಿದ್ಧವಾಗಿರುತ್ತಾನೆ. ಅವನಿಗೆ ಇಹಪರವೆಲ್ಲ ಸಂಗೀತವೇ ಆಗಿರುವದು. ಹೀಗೆ ಅವನು ಸಂಗೀತವನ್ನೇ ಕೇಳಿ, ಸಂಗೀತವನ್ನೇ ಅಭ್ಯಾಸಮಾಡಿ, ಸಂಗೀತದ ಯೋ ಚನೆಯಲ್ಲಿಯೇ ಕಾಲಕಳೆಯುತ್ತಾ ಕೊನೆಗೆ ಸ್ವರದೇವತೆಗಳ ಅಭಿಮಾನಕ್ಕೆ ಪಾತ್ರನಾಗಿ ಲೋಕವನ್ನೇ ಪರಮಾನಂದದಲ್ಲಿ ನಿಮಗ್ನವನ್ನಾಗಿ ಮಾಡುವಂಥ ಸಂಗೀತದ ಮರ್ಮವನ್ನು ಕೈವಶಮಾಡಿಕೊಂಡು ಬಿಡುತ್ತಾನೆ. ಆತ್ಮವಿಚಾರದಲ್ಲಿಯೂ ಹೀಗೆ ಏಕನಿಷ್ಠೆಯಿರಬೇಕು. ಆಗ ಮಾತ್ರ ನಿಜವಾದ ಆತ್ಮಜ್ಞಾನವು ಮೈಗೂಡುವದು.

ನಿ ಧ್ಯಾಸನ ಎಂಬ ಶಬ್ದದಲ್ಲಿ 'ನಿ' ಎಂಬ ಉಪಸರ್ಗವಿರುವದಷ್ಟೆ. ಇದು ಬಹುಮಹತ್ತ್ವದ್ದಾಗಿರುವದು. ನಿಶ್ಚಿತಬುದ್ಧಿಯಿಂದ ಧ್ಯಾನದ ಉಚ್ಚಕೋಟಿಯನ್ನು ಏರುವದೆಂರ್ಥವನ್ನು ಇದು ತೋರಿಸುವದು. ಈ ಅಭಿಪ್ರಾಯವನ್ನು ಚೆನ್ನಾಗಿ ತಿಳಿಯುವದಕ್ಕೆ ಇನ್ನೂ ಒಂದೆರಡು ದೃಷ್ಟಾಂತಗಳನ್ನು ತೆಗೆದುಕೊಳ್ಳಬೇಕು. ಅತ್ಯಂತ ಸುಂದರವಾದ ಚಿತ್ರವನ್ನು ಬರೆಯುತ್ತಿರುವಾಗ, ಯಾವದಾದರೊಂದು ಕಷ್ಟತರವಾದ ಗಣಿತದ ಉದಾಹರಣೆಯನ್ನು ಬಿಡಿಸುತ್ತಿರುವಾಗ, ಅಥವಾ ರಾಜ ಕಾರ್ಯದಂಥ ಬಹುಮಹತ್ತ್ವದ ಯಾವದಾದರೊಂದು ವಿಷಯವನ್ನು ಕುರಿತು ಸ್ವಗತಾಲೋಚನೆಯನ್ನು ಮಾಡುತ್ತಿರುವಾಗ ಒಬ್ಬ ಮನುಷ್ಯನ ಮನಃಸ್ಥಿತಿಯು ಹೇಗಿರುತ್ತದೆ? ತನ್ನ ಸಕಲವೃತ್ತಿಗಳನ್ನೂ ಒಳಸರಿಸಿ, ಏಕೀಕರಣಮಾಡಿ, ಏಕಾಗ್ರತೆಯಿಂದ ತನ್ನ ಧ್ಯೇಯದಲ್ಲಿ ಬಿಟ್ಟಿರುವನು. ಆ ಕಾಲಕ್ಕೆ ಅವನಿಗೆ ತಾನು ದೇಹ, ಜಗತ್ತು - ಮುಂತಾದ ಪ್ರಪಂಚವೆಂಬುದು ಇರುವದೇ ಗೊತ್ತಿರುವದಿಲ್ಲ. ತನ್ನ ಮುಖ್ಯವಾದ ಧ್ಯೆಯವಾಯಿತು, ತಾನಾಯಿತು ಹೀಗೆ ತಾದಾತ್ಮ್ಯವನ್ನು ಪಡೆದಿರುತ್ತಾನೆ. ಅಂಥ ಸ್ಥಿತಿಯಲ್ಲಿ ಮಾಡಿದ ಕಾರ್ಯವೂ ಉತ್ತಮತರದ್ದಾಗಿರುವದು. ಹೀಗಾಗುವದಕ್ಕೆ ಬದಲಾಗಿ ಅವನಿನ್ನೂ ತನ್ನ ಮನಸ್ಸನ್ನು ಒಮ್ಮುಖವಾಗಿ ಮಾಡುವಷ್ಟರಲ್ಲಿ ಮತ್ತೆ ಯಾವದಾದರೂ ಆಶ್ಚರ್ಯಭಯಾದಿಗಳನ್ನುಂಟುಮಾಡುವ ವಸ್ತುವಿನ ಅರಿವು ಅವನ ಲಕ್ಷ್ಯಕ್ಕೆ ಬಿದ್ದರೆ, ಅವನ ಕೆಲಸವೇ ಹಾಳಾಗುವದು. ಮಕ್ಕಳು ತಮ್ಮ ಆಟದಲ್ಲಿ ಮನಸ್ಸಿಟ್ಟಿರುವವರೆಗೂ ಹೊರಗೆ ತಮ್ಮನ್ನು ಮತ್ತೊಬ್ಬರು ನೋಡುತ್ತಿರುವರೆಂದಾಗಲಿ, ತಾವು ಆಡುತ್ತಿರುವ ಆಟವು ಮೇಲೋ ಕೀಳೋ ಎಂದಾಗಲಿ ಯೋಚಿಸದೆ ಆಟದ ಸವಿಯನ್ನು ಅನುಭವಿಸುತ್ತಿರುವರು; ಆದರೆ ಅತ್ತಿತ್ತ ಅವರು ನೋಡಿ ಅವರ ಕಣ್ಣಿಗೆ ತಮ್ಮ ಗುರುಹಿರಿಯರು ಬಿದ್ದರೆ, ಕೂಡಲೆ ಪ್ರಪಂಚಜ್ಞಾನವೆಲ್ಲ ಹೊಸದಾಗಿ ಸೃಷ್ಟಿಯಾದಂತೆ ಆಗಿ, ಆಟದ ಆನಂದವು ಮಾಯವಾಗುವದು. ಸಂಗೀತಗಾರನು ಸಭೆಯಲ್ಲಿ ತನಗಿಂತ ಉತ್ತಮರಾದ ವಿದ್ವಾಂಸರಿದಾರೆಂದು ಮನಸ್ಸಿಗೆ ತಂದುಕೊಂಡನೋ ಇಲ್ಲವೋ ಅವನಿಗೆ ಕಂಠದಲ್ಲಿದ್ದ ರಾಗಸೌಷ್ಟವವು ಹೇಗೋ ಒಳಸರಿದುಕೊಳ್ಳುವದು. ಪರೀಕ್ಷಕನು ತನ್ನನ್ನು ಏನು ಕೇಳುವನೋ ಎಂಬ ಯೋಚನೆಯನ್ನು ತಂದುಕೊಳ್ಳುತ್ತಲೂ ಪರೀಕ್ಷ್ಯನಿಗೆ ಗೊತ್ತಿದ್ದಷ್ಟೂ ವಿಷಯಗಳು ತೋರದೇ ಹೋಗುವವು. ಈರೀತಿಯಲ್ಲಿ ಒಂದೇ ವಿಷಯದಲ್ಲಿ ಮನಸ್ಸನ್ನು ಇಟ್ಟು ಬಾಹ್ಯವನ್ನು ಮರೆಯುವಾಗ ಅದರ ಜ್ಞಾನವು, ಆ ವಿಷಯದ ಒಳತತ್ತ್ವವು, ಮನಸ್ಸಿಗೆ ಗೋಚರವಾಗುತ್ತದೆ. ಆದರೆ ಹೊರಬುದ್ಧಿಯಿಂದ ಅದನ್ನು ಕುರಿತು

ವಿಚಾರಮಾಡುವವರಿಗೆ ಗೊತ್ತಿದ್ದ ವಿಷಯಗಳೂ ಗಲಿಬಿಲಿಯಾಗಿ ಹೇಗೆಹೇಗೋ ತೋರುವವು. ಆದ್ದರಿಂದ ಆ ತತ್ತ್ವವನ್ನು ಒಳಹೊಕ್ಕು ಅರಿಯಬೇಕೆನ್ನುವರೂ ಈ ಮರ್ಮವನ್ನರಿತು ಅವಶ್ಯವಾಗಿ ನಿದಿಧ್ಯಾಸನ ಮಾಡಬೇಕು.

ಆತ್ಮವಿಷಯವು ಶ್ರುತಿವಾಕ್ಯದ ಶ್ರವಣ, ಗುರುವಾಕ್ಯದಂತೆ ಮನನ, ತನ್ನಲ್ಲಿ ಅನುಭವವಾಗುವಂತೆ ನಿದಿಧ್ಯಾಸನ - ಈ ಮೂರು ಮರ್ಮಗಳಿಂದ ಪ್ರಸನ್ನವಾಗುವದು. ಮನವಾರೆ ಕೇಳಬೇಕು, ಕೇಳಿದ್ದರಲ್ಲಿ ತೋರುವ ಸಂದೇಹಗಳನ್ನು ಯುಕ್ತಿಗಳಿಂದ ನಿವಾರಿಸಿಕೊಳ್ಳಬೇಕು; ಹೀಗೆ ಶ್ರವಣ ಮನನಗಳಿಂದ ಸಿದ್ಧವಾದ ವಸ್ತುವು ತನ್ನ ಅನುಭವಕ್ಕೆ ವಿರುದ್ಧವಾಗದಂತೆ ಇರಬೇಕು. ಹೀಗೆ ಶಾಸ್ತ್ರಪ್ರತಿಪತ್ತಿ, ಗುರುಪ್ರತಿಪತ್ತಿ, ಆತ್ಮಪ್ರತಿಪತ್ತಿ - ಇವು ಮೂರೂ ಹೊಂದಿದರೆ ತಮ್ಮ ಜ್ಞಾನವಾಗುವದು. ಶಾಸ್ತ್ರದಲ್ಲಿ ಆತ್ಮವಿಚಾರವನ್ನು ಹೇಗೆ ವರ್ಣಿಸಿದೆಯೆಂಬುದನ್ನೂ ಅದರರ್ಥವನ್ನೂ ಬೇರೆಬೇರೆ ದರ್ಶನಕಾರರು ಹೇಗೆ ಮಾಡಿರುವರೆಂಬುದನ್ನೂ ಈಚಿನ ಮತಾಚಾರ್ಯರುಗಳು ಯಾವಯಾವ ರೀತಿಯಲ್ಲಿ ಬೋಧಿಸುವರೆಂಬುದನ್ನೂ ಇನ್ನು ವಿಚಾರ ಮಾಡಬೇಕಾಗಿದೆ.

★★★★★

# ಬ್ರಹ್ಮಜ್ಞಾನ

ಅಧ್ಯಾತ್ಮವಿಚಾರಕ್ಕೆಲ್ಲಾ ಮೂಲಾಧಾರವಾಗಿರುವ ಉಪನಿಷತ್ತುಗಳಲ್ಲಿ ಬ್ರಹ್ಮವಿದ್ಯೆಯಿಂದ ಪರಮಪುರುಷಾರ್ಥವುಂಟಾಗುವುದೆಂದು ಬಹುಕಡೆಗಳಲ್ಲಿ ಹೇಳಿರುತ್ತದೆ. ಈ ಬ್ರಹ್ಮವಿದ್ಯೆಯು ವಿದ್ಯೆಗಳಲ್ಲೆಲ್ಲ ಶ್ರೇಷ್ಠವಾದದ್ದೆಂದೂ ಇದನ್ನು ತಿಳಿದರೆ ತಿಳಿಯದ್ದನ್ನು ತಿಳಿದಂತೆಯೂ ಕೇಳದ್ದನ್ನು ಕೇಳಿದಂತೆಯೂ ಆಗುವದೆಂದು ಬಗೆಬಗೆಯಾಗಿ ಉಪನಿಷತ್ತುಗಳು ಸಾರು ತಿರುವುವು. ಉಪನಿಷತ್ತುಗಳ ಸಿದ್ಧಾಂತವನ್ನು ನಿರ್ಣಯಿಸುವದಕ್ಕಾಗಿ ಬಾದರಾಯಣರು ಬರೆದಿರುವ ಬ್ರಹ್ಮಸೂತ್ರದಲ್ಲಿ ಮೊದಲನೆಯ ಸೂತ್ರದಲ್ಲಿಯೂ, ''**ಅಥಾತೋ ಬ್ರಹ್ಮ ಜಿಜ್ಞಾಸಾ**'' (ಎಂದರೆ ಇನ್ನು, ಆದ್ದರಿಂದ, ಬ್ರಹ್ಮ ಜ್ಞಾನಕ್ಕಾಗಿ ಇಚ್ಛೆಯನ್ನು ಮಾಡಬೇಕು) – ಎಂದು ಬ್ರಹ್ಮಜ್ಞಾನವಿಷಯವಾದ ವಿಚಾರವನ್ನು ಪ್ರಸ್ತಾಪಿಸಿರುತ್ತದೆ. ಈ ಬ್ರಹ್ಮಜ್ಞಾನದ

ಸ್ವರೂಪವೇನು? ಈ ಜ್ಞಾನದಿಂದ ಪರಮಪುರುಷಾರ್ಥವು ದೊರಕುವದು ಹೇಗೆ? ಎಂದು ಸ್ವಾಭಾವಿಕವಾಗಿ ಕುತೂಹಲವು ವಾಚಕರಿಗೆ ಉಂಟಾಗುತ್ತದೆ ಯಷ್ಟೆ. ಮೊದಲನೆಯ ಪ್ರಶ್ನೆಗೆ ವೇದಾಂತಿಗಳು ಕೊಟ್ಟಿರುವ ಉತ್ತರವನ್ನು ಈ ಕೆಳಗೆ ಸಂಕ್ಷೇಪವಾಗಿ ಬರೆದಿರುತ್ತೇವೆ.

ಈ ವಿಷಯದಲ್ಲಿ ಮುಖ್ಯವಾಗಿ ಎರಡು ಅಭಿಪ್ರಾಯಗಳುಂಟಾಗಿರುತ್ತವೆ ಒಂದು ಪಕ್ಷದವರು ಹೇಳುವದೇನೆಂದರೆ – ಉಪನಿಷತ್ತುಗಳ ವಾಕ್ಯದ ಅರ್ಥವನ್ನು ತಿಳಿದುಕೊಂಡಮಾತ್ರಕ್ಕೆ ಬ್ರಹ್ಮಜ್ಞಾನವಾಗುವದಿಲ್ಲ. ಏಕೆಂದರೆ, ಬ್ರಹ್ಮಜ್ಞಾನವನ್ನು ಉಪನಿಷತ್ತುಗಳಲ್ಲಿ ವಿಧಾನಮಾಡಿರುತ್ತದೆ. ವಾಕ್ಯಾರ್ಥಜ್ಞಾನವನ್ನು ವಿಧಿಸಬೇಕಾದ ಅವಶ್ಯತೆಯಿಲ್ಲ. ವಾಕ್ಯಶ್ರವಣದಿಂದ ಅದು ತಾನೇ ಹುಟ್ಟುವದು. ಆದರೆ ವಾಕ್ಯಾರ್ಥಜ್ಞಾನದಿಂದ ಯಾರಿಗೂ ಸಂಸಾರನಿವೃತ್ತಿಯಾಗುವುದು ಕಂಡು ಬರುವದಿಲ್ಲ. ಆದ್ದರಿಂದ ವಾಕ್ಯಾರ್ಥಜ್ಞಾನದಿಂದ ಬೇರೆಯಾಗಿರುವ ಉಪಾಸನೆ, ಧ್ಯಾನ ಮುಂತಾದ ಹೆಸರುಗಳಿಂದ ಕರೆಯಲ್ಪಡುವ ಜ್ಞಾನವೇ ಬ್ರಹ್ಮಜ್ಞಾನವು. ಇದನ್ನೇ ಬ್ರಹ್ಮಸೂತ್ರದಲ್ಲಿಯೂ ಸೂಚಿಸುತ್ತಾರೆ. ಇದು ಒಂದು ಪಕ್ಷದವರ ಅಭಿಪ್ರಾಯ. ಇನ್ನೊಂದು ಪಕ್ಷದವರ ಅಭಿಪ್ರಾಯವೇನೆಂದರೆ, ಉಪನಿಷತ್ತಿನಲ್ಲಿ ಉಪಾಸನೆಗೆ ಜ್ಞಾನವೆಂದು ಹೆಸರು ಕೊಟ್ಟಿರುವದು ನಿಜ. ಆದರೆ ಈ ಜ್ಞಾನಕ್ಕಿಂತ ಬೇರೆಯಾದ ಜ್ಞಾನವೊಂದುಂಟು. ಆ ಜ್ಞಾನವೇ ಮೋಕ್ಷಕ್ಕೆ ಕಾರಣವಾಗಿರುವದೇ ಹೊರತು ಉಪಾಸನಾರೂಪವಾದ ಜ್ಞಾನದಿಂದ ಸಾಕ್ಷಾತ್ತಾಗಿ ಮುಕ್ತಿಯಾಗುವದಿಲ್ಲ. ಉಪಾಸನಾರೂಪವಾದ ಜ್ಞಾನವು ಬರಿಯ ವಾಕ್ಯದಿಂದ ಆದ ಮಾತ್ರಕ್ಕೆ ಕಾರ್ಯಕಾರಿಯಾಗುವದಿಲ್ಲವೆಂಬುದೂ ಸರಿಯೇ. ಆದರೆ ನಾವು ಹೇಳುವ ಜ್ಞಾನವು ವಾಕ್ಯಾರ್ಥನಿಶ್ಚಯಮಾತ್ರದಿಂದಲೇ ಆಗುವದು, ಅಷ್ಟು ಮಾತ್ರದಿಂದಲೇ ಪರಮಪುರುಷಾರ್ಥವು ಕೈಸೇರುವದು. ಈ ಜ್ಞಾನಕ್ಕೂ ಉಪಾಸನೆಗೂ ಸ್ವರೂಪದಲ್ಲಿಯೂ ಫಲದಲ್ಲಿಯೂ ಭೇದವಿರುತ್ತದೆ. ಇದು ಜ್ಞಾನವಾದಿಗಳ ಮತ.

ಉಪಾಸನಾರೂಪವಾದ ಜ್ಞಾನವನ್ನು ಎರಡು ಪಕ್ಷದವರೂ ಒಪ್ಪಿರುವದ್ದರಿಂದ ಪ್ರಕೃತದಲ್ಲಿ ಉಪಾಸನಾವ್ಯತಿರಿಕ್ತವಾದ ಜ್ಞಾನವನ್ನು ಪ್ರತಿಪಾದಿಸುವವರ ಪಕ್ಷದಿಂದ ಒಂದೆರಡು ಮಾತುಗಳನ್ನು ಇಲ್ಲಿ ಹೇಳುತ್ತೇವೆ. ಶ್ರೀ ಶಂಕರಾಚಾರ್ಯರವರು ಛಾಂದೋಗ್ಯಭಾಷ್ಯದಲ್ಲಿ ಉಪಾಸನೆಗಳ ವಿಷಯವಾಗಿ ಹೇಳಿರುವದೇನಂದರೆ, ಈ ಅದ್ವೈತವಿದ್ಯೆಯ ಪ್ರಕರಣದಲ್ಲಿ ಅಭ್ಯುದಯಕ್ಕೆ ಸಾಧನವಾಗಿರುವ

ಉಪಾಸನೆಗಳನ್ನೂ ಹೇಳಿರುತ್ತದೆ. ಅದ್ವೈತಬ್ರಹ್ಮಕ್ಕಿಂತ ಸ್ವಲ್ಪ ವಿಕಾರವಾಗಿರುವ ಬ್ರಹ್ಮದ ವಿಷಯವಾಗಿರುವವಾಗಿಯೂ ಕೈವಲ್ಯಕ್ಕೆ ಸಮೀಪವಾಗಿರುವ ಫಲವನ್ನು ಕೊಡುವವುಗಳಾಗಿಯೂ ಮನೋಮಯನು ಪ್ರಾಣಶರೀರನು ಮುಂತಾಗಿ (ಚಿಂತಿಸುವ) ಉಪಾಸನೆಗಳನ್ನು ಹೇಳಿರುತ್ತದೆ. ಕರ್ಮಫಲದಲ್ಲಿ ಹೆಚ್ಚಿಗೆಯನ್ನುಂಟು ಮಾಡುವಂತೆ ಕರ್ಮದ ಅಂಗಕ್ಕೆ ಸಂಬಂಧಪಟ್ಟ ಉಪಾಸನೆಗಳನ್ನೂ ಇಲ್ಲಿ ಹೇಳಿರುತ್ತದೆ. (ಇಲ್ಲಿ ಉಪಾಸನೆಗಳನ್ನು ಹೇಳಿರುವದಕ್ಕೆ ಕಾರಣವೇನೆಂದರೆ, ಜ್ಞಾನ, ಉಪಾಸನೆ – ಇವು) ಎರಡೂ ರಹಸ್ಯವಾಗಿವೆ. (ಅಂದರೆ ಉಪನಿಷತ್ತು ಎನಿಸಿಕೊಂಡಿವೆ), ಮತ್ತು ಇವೆರಡೂ ಮನೋವೃತ್ತಿಯೇ ಆಗಿವೆ. ಅದ್ವೈತಜ್ಞಾನವೆಂಬುದು ಹೇಗೆ ಬರಿಯ ಮನೋವೃತ್ತಿಯೋ ಅದರಂತೆ ಮಿಕ್ಕ ಉಪಾಸನೆಗಳೂ ಮನೋವೃತ್ತಿರೂಪವಾಯೇ ಇರುತ್ತವೆ, ಇದು ಇವೆರಡಕ್ಕೂ ಇರುವ ಹೋಲಿಕೆ. (ಆದ್ದರಿಂದ ಇಲ್ಲಿ ಉಪಾಸನೆಗಳನ್ನು ಹೇಳಿರುತ್ತದೆ.) ಹಾಗಾದರೆ ಅದ್ವೈತಜ್ಞಾನಕ್ಕೂ ಉಪಾಸನೆಗಳಿಗೂ ಇರುವ ಹೆಚ್ಚುಕಡಿವೆಯೇನು? ಎಂದರೆ ಹೇಳುತ್ತೇವೆ. ಹಗ್ಗವೇ ಮುಂತಾದವುಗಳಲ್ಲಿ (ಇವು) ಹಾವೇ ಮುಂತಾದವುಗಳೆಂದು ಹುಟ್ಟುಕಟ್ಟಿಕೊಂಡಿರುವ ತಪ್ಪುತಿಳಿವನ್ನು ಬೆಳಕು ಉಂಟಾಗಲು, ಇದು ಹಗ್ಗ ಮಂತಾದ್ದೇ ಎಂದು ನಿಶ್ಚಯಿಸುವ ಜ್ಞಾನವು ಹೇಗೆ ಕಳೆಯುತ್ತದೆಯೋ ಹಾಗೆ, ಕ್ರಿಯಾರಹಿತನಾದ ಆತ್ಮನಲ್ಲಿ ಸ್ವಭಾವವಾಗಿ (ಅಜ್ಞಾನದಿಂದ) ಆರೋಪವಾಗಿರುವ ಕರ್ತೃ ಮೊದಲಾದ ಕಾರಕ, ಕ್ರಿಯೆ, ಫಲ – ಎಂಬ ಭೇದವನ್ನು ಯಾವದು ಕಳೆಯುವದೋ ಅದು ಅದ್ವೈತಜ್ಞಾನವು ಉಪಾಸನೆಯೋ ಎಂದರೆ ಶಾಸ್ತ್ರದಲ್ಲಿ ಹೇಳಿರುವಂತೆ ಯಾವದಾದರೂ ಒಂದು ವಿಷಯವನ್ನು ತೆಗೆದುಕೊಂಡು ಅದರಲ್ಲಿ ಒಂದೇ ಬಗೆಯಾದ ಚಿತ್ತವೃತ್ತಿಯನ್ನು ನಡುವೆ ಬರಗೊಡದೇ ಇರುವದು. ಇದೇ ಉಪಾಸನೆಗಳಿಗೂ ಜ್ಞಾನಕ್ಕೂ ಇರುವ ವಿಶೇಷವು. ಈ ಉಪಾಸನೆಗಳು ಚಿತ್ತಶುದ್ಧಿಯನ್ನು ಉಂಟುಮಾಡಿಕೊಟ್ಟು ವಸ್ತುವಿನ ತತ್ತ್ವವನ್ನು ಬೆಳಗುವವಾದಕಾರಣ ಅದ್ವೈತಜ್ಞಾನಕ್ಕೆ ಉಪಕಾರವಾಗುವವು. ಇದಲ್ಲದೆ ಯಾವದಾದರೊಂದು ಆಲಂಬನವನ್ನು ಇಟ್ಟುಕೊಂಡಿರುವದರಿಂದ ಇವುಗಳನ್ನು ನಡೆಸುವದೂ ಸುಲಭವಾಗಿರುವದು. ಆದ್ದರಿಂದ ಇವುಗಳನ್ನು ಇಲ್ಲಿ ಮೊದಲು ಹೇಳಿರುತ್ತದೆ. ಇದುವರೆಗೆ ಕರ್ಮದ ಅಭ್ಯಾಸವು ದೃಢವಾಗಿ ಬಿಟ್ಟಿರುವದರಿಂದ ಕರ್ಮಗಳನ್ನು ಬಿಟ್ಟು ಬಿಟ್ಟೆ ಮಾಡುವ ಉಪಾಸನೆಗಳಲ್ಲಿ ಮನಸ್ಸು ಹಾಕುವದು ಕಷ್ಟವಾಗುವದೆಂದು ಕರ್ಮಾಂಗವಿಷಯವಾದ ಉಪಾಸನೆಯನ್ನೇ ಮೊದಲು ಹೇಳಿರುತ್ತದೆ''.

ಈ ಮೇಲಿನ ಭಾಷ್ಯದಿಂದ ನಮಗೆ ಇಷ್ಟು ಗೊತ್ತಾಗುವದು. ಕರ್ಮವು ಸ್ಥೂಲಸಾಧನವು, ಜ್ಞಾನವು ತೀರ ಸೂಕ್ಷ್ಮವಾದ ಸಾಧನವು. ಇವೆರಡಕ್ಕೂ ನಡುವೆ ಉಪಾಸನೆಯೆಂಬ ನಡುತರದ ಸಾಧನವಿರುವದು. ಉಪಾಸನೆಯು ಜ್ಞಾನವನ್ನೇ ಬಹುಮಟ್ಟಿಗೆ ಹೋಲುವದು. ಮುಖ್ಯವಾಗಿ ಇವೆರಡಕ್ಕೂಎರಡು ಹೋಲಿಕೆಗಳುಂಟು. ಇವು ಎರಡಕ್ಕೂ ಉಪನಿಷತ್ತೆಂಬ ಹೆಸರಿದ್ದು ಎರಡೂ ರಹಸ್ಯವೆನಿಸಿಕೊಂಡಿರುವದು ಒಂದು ಹೋಲಿಕೆ. ಎರಡೂ ಮನೋವೃತ್ತಿಗಳೇ ಎಂಬುದು ಮತ್ತೊಂದು ಹೋಲಿಕೆ. ಈ ಹೋಲಿಕೆಯಿಂದಲೇ ಅನೇಕರು ಇವುಗಳೆರಡನ್ನೂ ಬಿಡಿಸಿ ತಿಳಿದುಕೊಳ್ಳದೇ ಇರುವರು. ಇನ್ನು ಇವೆರಡಕ್ಕಿರುವ ತಾರತಮ್ಯವನ್ನು ನೋಡಿದರೆ, ಜ್ಞಾನವು ಭೇದಬುದ್ಧಿಯನ್ನು ದೂರಮಾಡುವದು. ಉಪಾಸನೆಗೆ ಈ ಸಾಮರ್ಥ್ಯವಿಲ್ಲ, ಈ ಲೋಕದಲ್ಲಿ ಸುಖವನ್ನು ಕೊಡುವದೋ ಮಾಡಿದ ಕರ್ಮವನ್ನು ವೀರ್ಯವತ್ತರವೆನಿಸುವದೋ ಅಥವಾ ಕ್ರಮಮುಕ್ತಿಯನ್ನು ಕೊಡುವದೋ ಉಪಾಸನೆಯ ಫಲವಾಗಿರುವದು. ಇವು ಚಿತ್ತಶುದ್ಧಿದ್ವಾರಾ ಜ್ಞಾನಕ್ಕೂ ಸಹಾಯ ವಾಗುವವು. ಆದರೆ ಭೇದವನ್ನು ಕಳೆಯುವದು ಜ್ಞಾನದಿಂದಲೇ ಆಗಬೇಕು, ಮತ್ತೊಂದು ಹೆಚ್ಚು ಕಡಿಮೆಯೇನೆಂದರೆ ಉಪಾಸನೆಯು ಶಾಸ್ತ್ರಾಧೀನವಾಗಿ ಕರ್ತೃವಿನ ಇಚ್ಛೆಗೊಳಪಟ್ಟು ಜರುಗುವದು; ಆದರೆ ಜ್ಞಾನವು ಪ್ರಮಾಣವಶದಿಂದ ಹುಟ್ಟಿ, ವಸ್ತ್ವಧೀನವಾಗಿರುವದು.

ಜ್ಞಾನವು ವಸ್ತ್ವಧೀನವೆಂಬುದನ್ನು ಶಾರೀರಕ ಭಾಷ್ಯದಲ್ಲಿ ಹೀಗೆಂದು ವಿವರಿಸಿರುತ್ತದೆ. ''ಧ್ಯಾನವೆಂದರೆ ಚಿಂತಿಸುವದು. ಇದು ಮನಸ್ಸಿನ ವೃತ್ತಿಯಾದರೂ ಪುರುಷನಾದವನು ಇದನ್ನು ಮಾಡುವದಕ್ಕಾಗಲಿ, ಬಿಡುವದಕ್ಕಾಗಲಿ, ಬೇರೆ ವಿಧವಾಗಿ ಮಾಡುವದಕ್ಕಾಗಲಿ, ಆಗುತ್ತದೆ. ಏಕೆಂದರೆ ಇದು ಪುರುಷನ ಅಧೀನವಾಗಿರುವದು. ಜ್ಞಾನವೋ ಎಂದರೆ ಪ್ರಮಾಣದಿಂದ ಹುಟ್ಟತಕ್ಕದ್ದು. ಪ್ರಮಾಣವೆಂಬುದು ಯಾವ ವಸ್ತುಹೇಗೆ ಇರುವದೋ ಹಾಗೆಯೇ ಅದನ್ನು ವಿಷಯಮಾಡಿಕೊಳ್ಳುವದಾದ್ದರಿಂದ ಜ್ಞಾನವನ್ನು ಮಾಡುವದಕ್ಕಾಗಲಿ, ಬೇರೆವಿಧವಾಗಿ ಮಾಡಿಕೊಳ್ಳುವದಕ್ಕಾಗಲಿ ಆಗಲಾರದು. ಅದು ಕೇವಲ ವಸ್ತುವಿನ ಅಧೀನವಾಗಿರುವದು. ಶಾಸ್ತ್ರಕ್ಕೂ ಅಧಿನವಲ್ಲ, ಪುರುಷನಿಗೂ ಅಧೀನವಲ್ಲ ಹೀಗೆ ಜ್ಞಾನವೂ ಮನಸ್ಸಿನ ವೃತ್ತಿಯೇ ಆದರೂ (ಉಪಾಸನೆಗೂ ಅದಕ್ಕೂ) ತುಂಬ ವೈಲಕ್ಷಣ್ಯವುಂಟು. ಉದಾಹರಣೆಗೆ ''ಎಲೈ ಗೌತಮನೇ, ಪ್ರುರುಷನೇ ಅಗ್ನಿಯು, ಎಲೈ ಗೌತಮನೇ, ಸ್ತ್ರೀಯೇ ಅಗಿ

ನಿಯು'' ಎಂಬಲ್ಲಿ ಸ್ತ್ರೀಪುರುಷರು ಅಗ್ನಿಯೆಂದು ತಿಳಿಯುವದು ಮಾನಸವೃತ್ತಿಯು. ಇದು ಬರಿಯ ಶಾಸ್ತ್ರವಿಧಿಯಿಂದ ಹುಟ್ಟತಕ್ಕ ದ್ದಾದ್ದರಿಂದ ಇದು (ಧ್ಯಾನ) ಕ್ರಿಯೆಯೇ, ಇದು ಪುರುಷನಿಗೆ ಅಧೀನವಾಗಿಯೂ ಇರುವದು. ಆದರೆ ಪ್ರಸಿದ್ಧವಾದ ಅಗ್ನಿಯನ್ನು ಅಗ್ನಿಯೆಂದು ಅರಿಯುವದುಂಟಲ್ಲವೆ? ಅದು ಶಾಸ್ತ್ರದ ವಿಧಿಗೂ ಅಧೀನವಲ್ಲ, ಪ್ರುರುಷನಿಗೂ ಅಧೀನವಲ್ಲ. ಮತ್ತೇನೆಂದರೆ, ಪ್ರತ್ಯಕ್ಷ ಪ್ರಮಾಣಕ್ಕೆ ವಿಷಯವಾಗಿರುವ ವಸ್ತುವಿಗೆ ಅಧೀನವಾಗಿರುವದು. ಆದ್ದರಿಂದ ಇದು ಜ್ಞಾನವೇ ಹೊರತು (ಧ್ಯಾನ) ಕ್ರಿಯೆಯಲ್ಲ. ಹೀಗೆಯೇ ಮಿಕ್ಕ ಎಲ್ಲಾ ಪ್ರಮಾಣಗಳಿಗೆ ವಿಷಯವಾಗಿರುವ ವಸ್ತುಗಳ ವಿಚಾರದಲ್ಲಿಯೂ ತಿಳಿಯಬೇಕು.''

ಉಪಾಸನಾವಾದಿಗಳು ಉಪನಿಷತ್ತಿನಲ್ಲಿ ಜ್ಞಾನವನ್ನು ವಿಧಿಸಿರುತ್ತದೆಯೆಂತಲೂ ಆ ವಿಧಿಯಂತೆ ಉಪಾಸನೆಮಾಡುವದರಿಂದ ಮೋಕ್ಷವಾಗುವದು ಎಂದೂ ಹೇಳುತ್ತಾರೆ. ಉಪಾಸನಾವ್ಯತಿರಿಕ್ತಜ್ಞಾನವಾದಿಗಳೋ ಎಂದರೆ, ಜ್ಞಾನವನ್ನು ಶಾಸ್ತ್ರದಲ್ಲಿ ವಿಧಿಸಿಲ್ಲ. ಉಪಾಸನೆಯನ್ನು ಮಾತ್ರ ವಿಧಿಸಿರುತ್ತದೆ. ಕೆಲವು ಕಡೆಗಳಲ್ಲಿ ಆತ್ಮಜ್ಞಾನವನ್ನೇ ವಿಧಿಸಿರುವಂತೆ ಕಾಣುವದುಂಟು. ಆದರೆ ಜ್ಞಾನಸ್ವರೂಪವು ವಿಧಿಸವದಕ್ಕೆ ಬರುವ ಹಾಗೆಯೇ ಇಲ್ಲವಾದ್ದರಿಂದ ಶಾಸ್ತ್ರಕ್ಕೆ ಜ್ಞಾನವಿಧಿಯಲ್ಲಿ ತಾತ್ಪರ್ಯವಿಲ್ಲವೆಂದು ತಿಳಿಯಬೇಕು. ಸ್ವಾಭಾವಿಕವಾಗಿ ವಿಷಯದ ಕಡೆಗೆ ಹೊರನುಗ್ಗುತ್ತಿರುವ ಬುದ್ಧಿಯನ್ನು ಆತ್ಮನ ಕಡೆಗೆ ಹಿಂತಿರುಗುವಂತೆ ಮಾಡುವದೇ ಆ ವಿಧಿಗಳ ಕಾರ್ಯವು ಎಂದು ಅಭಿಪ್ರಾಯಪಡುವರು. ಆತ್ಮಜ್ಞಾನಕ್ಕಾಗಿ ವಿಧಿಸಿಸಿರುವ ಶ್ರವಣಮನನನಿಧಿಧ್ಯಾಸಗಳಿಗೆ ಹೀಗೆ ಅನಾತ್ಮವನ್ನು ಬಿಟ್ಟು ಆತ್ಮನ ಕಡೆಗೆ ಮನಸ್ಸು ತಿರಿಗಿಸುವದೇ ಉದ್ದೇಶವೆಂದು ಇವರ ಮತವು.

★★★★★

# ಬ್ರಹ್ಮಾತ್ಮಜ್ಞಾನ

ಉಪನಿಷತ್ತುಗಳಿಗೆಲ್ಲಾ ಎರಡು ಮಾತುಗಳು ಮೂಲಮಂತ್ರಗಳಾಗಿರುವವು: ಬ್ರಹ್ಮವೆಂಬುದೊಂದು, ಆತ್ಮವೆಂಬುದೊಂದು. ಮುಖ್ಯವಾದ ಉಪನಿಷತ್ತುಗಳನ್ನು ನೋಡುವಲ್ಲಿ ಈ ಜಗತ್ತಿನ ಮೂಲತತ್ತ್ವಕ್ಕೆ ಬ್ರಹ್ಮವೆಂಬ

ಹೆಸರನ್ನು ಮೊದಲು ಕೊಟ್ಟಿರುವದು ಕಂಡುಬರುತ್ತದೆ; ಬರುಬರುತ್ತ 'ಆತ್ಮ' ಎಂಬ ಹೆಸರು ಉಪಯುಕ್ತವಾಗಿರುತ್ತದೆ. ಅಂತೂ ಬ್ರಹ್ಮವಿದ್ಯೆ, ಆತ್ಮವಿದ್ಯೆ ಇವುಗಳಲ್ಲಿ ಯಾವ ಭೇದವೂ ಇಲ್ಲ, ಇವೆರಡೂ ಒಂದೇ ವಿದ್ಯೆಯ ಹೆಸರು.

ಬ್ರಹ್ಮವೆಂದು ಮೊದಲು ಹೆಸರುಕೊಟ್ಟು ಆಮೇಲೆ ಆತ್ಮನೆಂದು ಕರೆಯುವದಕ್ಕೇನು ಕಾರಣವೆಂಬುದನ್ನು ಭಾಷ್ಯಕಾರರು ಅವರವರ ಮತದಂತೆ ವರ್ಣಿಸಿರುವರು. ಉದಾಹರಣೆಗೆ ಶ್ರೀಭಾಷ್ಯಕಾರರಾದ ರಾಮಾನುಜಾಚಾರ್ಯರು ಬ್ರಹ್ಮವೇ ''ಸರ್ವಾನ್ತರಾತ್ಮಭೂತವಾದದ್ದು'' ಆದ್ದರಿಂದ ಬ್ರಹ್ಮಕ್ಕೆ ಆತ್ಮವೆಂಬ ಹೆಸರು ಬಂದಿರುವದು – ಎನ್ನುತ್ತಾರೆ. ''ಯಾವನು ಆತ್ಮನಲ್ಲಿದ್ದುಕೊಂಡು, ಆತ್ಮನಿಗಿಂತಲೂ ಒಳಗೆ ಇರುವನೋ, ಯಾವಾತನನ್ನು ಆತ್ಮನು ಅರಿಯನೋ, ಯಾವಾತನಿಗೆ ಆತ್ಮನೇ ಶರೀರವೋ, ಯಾವಾತನು ಆತ್ಮನ ಒಳಗಿದ್ದುಕೊಂಡು (ಆತ್ಮನನ್ನು) ಆಳುತ್ತಿರುವನೋ'', ''ಈ ನಾರಾಯಣನೊಬ್ಬನೇ ಎಲ್ಲಾ ಭೂತಗಳಿಗೂ ಅಂತರಾತ್ಮನು, ಪಾಪವಿಲ್ಲದವನು, ದಿವ್ಯಲೋಕದಲ್ಲಿರುವ ದೇವನು'' – ಎಂಬುದೇ ಮುಂತಾದ ಶಾಸ್ತ್ರದಿಂದ ಪರಮಾತ್ಮನ ಶರೀರವು ಜೀವಾತ್ಮನು; ಆದ್ದರಿಂದ ಜೀವಾತ್ಮನನ್ನು ಹೇಳುವ 'ನಾನು, ನೀನು' ಮುಂತಾದ ಮಾತುಗಳೆಲ್ಲವಕ್ಕೂ ಪರಮಾತ್ಮನಲ್ಲಿಯೇ ತಾತ್ಪರ್ಯವು. ಹೀಗೆಂಬುದು ಈ ಭಾಷ್ಯಕಾರರ ಮತವು. ಇದರಂತೆಯೇ ಚೈತನ್ಯಮತದಲ್ಲಿ ಬ್ರಹ್ಮದೇವರಿಗೆ ಭೇದಾಭೇದವಿರುವದು; ಆದ್ದರಿಂದ ಅಭೇದಪಕ್ಷವನ್ನಿಟ್ಟುಕೊಂಡು ಆತ್ಮಶಬ್ದವನ್ನು ಬ್ರಹ್ಮಕ್ಕುಪಯೋಗಿಸಬಹುದು. ಅದ್ವೈತವಾದದಲ್ಲಿಯಂತೂ ಆತ್ಮಶಬ್ದವನ್ನು ಉಪಯೋಗಿಸುವದು ನಿರಾಕ್ಷೇಪವಾಗಿರುವದೆಂಬುದು ಹಾಗಿರಲಿ, ಅದೇ ಸಯುಕ್ತಿಕವಾಗಿರುವದು. ಏಕೆಂದರೆ ಈ ಮತದಲ್ಲಿ ಬ್ರಹ್ಮವು ನಮ್ಮೆಲ್ಲರ ಆತ್ಮವೇ ಎಂಬುದೇ ಸಿದ್ಧಾಂತವು.

ಶ್ರೀಶಾರೀರಕಭಾಷ್ಯದಲ್ಲಿ ಶ್ರೀಭಗವತ್ಪಾದರವರು ಬ್ರಹ್ಮಜಿಜ್ಞಾಸದ ವಿಚಾರವಾಗಿ ಮಾತನಾಡುವಾಗ ತೆಗೆದಿರುವ ವಿಚಾರವು ಇಲ್ಲಿ ತಿಳಿಸುವದಕ್ಕೆ ಯೋಗ್ಯವಾಗಿರುತ್ತದೆ. ಅಲ್ಲಿರುವದೇನೆಂದರೆ, ''ಈ ಬ್ರಹ್ಮವೆಂಬುದು ಪ್ರಸಿದ್ಧವಾಗಿರುವದೋ ಅಪ್ರಸಿದ್ಧವಾಗಿರುವದೊ? ಪ್ರಸಿದ್ಧವೇ ಆಗಿದ್ದರೆ ಅದನ್ನು ಕುರಿತು ವಿಚಾರಮಾಡತಕ್ಕದ್ದೇ ಇಲ್ಲ; ಅಥವಾ ಅಪ್ರಸಿದ್ಧವೇ ಆಗಿದೆಯೆಂದರೆ ಅದನ್ನು

ಕುರಿತು ವಿಚಾರಮಾಡುವದಕ್ಕೇ ಆಗುವದಿಲ್ಲವಲ್ಲ? ಎಂದರೆ ಹೇಳುತ್ತೇವೆ. ನಿತ್ಯಶುದ್ಧಬುದ್ಧ ಮುಕ್ತಸ್ವಭಾವವುಳ್ಳದ್ದಾಗಿಯೂ ಸರ್ವಜ್ಞವಾಗಿಯೂ ಸರ್ವಶಕ್ತಿಯುಳ್ಳದಾಗಿಯೂ ಇರುವ ಬ್ರಹ್ಮವಂತೂ ಇದೆ. ಏಕೆಂದರೆ ಬ್ರಹ್ಮಶಬ್ದಕ್ಕೆ ವ್ಯುತ್ಪತ್ತಿಯನ್ನು ಮಾಡುವಲ್ಲಿ **'ಬೃಹ್'** ಧಾತುವಿನ ಅರ್ಥದನುಸಾರವಾಗಿ ನಿತ್ಯಶುದ್ಧವಾಗಿರೋಣ ಮುಂತಾದ ಅರ್ಥಗಳು ತೋರುವವು. ಎಲ್ಲರಿಗೂ ಆತ್ಮನಾಗಿರುವದರಿಂದಲೂ ಬ್ರಹ್ಮವಿರುವದೆಂದು ಸಿದ್ಧವಾಗುತ್ತದೆ. ಏಕೆಂದರೆ ಪ್ರತಿಯೊಬ್ಬನೂ ತಾನು ಇದ್ದೇನೆಂದು ಅರಿಯುತ್ತಾನೆಯೇ ಹೊರತು ''ನಾನು ಇಲ್ಲ'' ಎಂದು ತಿಳಿಯುವದಿಲ್ಲ; ಆತ್ಮವೇ (ತಾನೇ) ಬ್ರಹ್ಮವು.

ಬ್ರಹ್ಮವು ನಮ್ಮಗಳ ಸ್ವರೂಪವೇ ಆಗಿದ್ದರೆ ಇದನ್ನು ತಿಳಿಸುವದಕ್ಕೆ ಶಾಸ್ತ್ರವೇತಕ್ಕೆ? ಇದನ್ನು ತಿಳಿಯುವದಕ್ಕಾಗಿ ವಿಚಾರವನ್ನಾದರೂ ಮಾಡಬೇಕಾದದ್ದೇನು? ಎಂದರೆ, ಈ ವಿಷಯದಲ್ಲಿ ಭಾಷ್ಯಕಾರರು ಹೀಗೆಂದು ಹೇಳಿರುತ್ತಾರೆ: – ''ಹಾಗಲ್ಲ, ಏಕೆಂದರೆ ಅದು ಇಂಥದ್ದೆಂಬ ವಿಷಯದಲ್ಲಿ ವಿರುದ್ಧವಾದ ಅಭಿಪ್ರಾಯಗಳುಂಟಾಗಿವೆ. ಚೈತನ್ಯದಿಂದ ಕೂಡಿರುವ ದೇಹವೇ ಆತ್ಮವೆಂದು ಸಾಮಾನ್ಯ ಜನರೂ ಲೋಕಾಯತಿಕರೂ ತಿಳಿದುಕೊಡಿರುವರು; ಕೆಲವರು ಇಂದ್ರಿಯಗಳೇ ಚೇತನರೂಪಗಳೆಂದೂ ಆತ್ಮವೆಂದೂ ಅನ್ನುವರು; ಮನಸ್ಸೇ (ಆತ್ಮವೆಂದು) ಕೆಲವರು ಹೇಳುವರು; ಕ್ಷಣಿಕವಾಗಿರುವ ಬರಿಯ ವಿಜ್ಞಾನವೇ (ಆತ್ಮವೆಂದು) ಮತ್ತೆ ಕೆಲವರು ಹೇಳುತ್ತಾರೆ; ಶೂನ್ಯವೇ (ಆತ್ಮವೆಂದು) ಇನ್ನು ಕೆಲವರು; ಇನ್ನೂ ಕೆಲವರು ದೇಹವೇ ಮೊದಲಾದವುಗಳಿಗಿಂತ ಬೇರೆಯಾಗಿರುವ ಸಂಸಾರಿಯೊಬ್ಬನಿರುವನು, ಅವನು ಕರ್ತೃ (ಕೆಲಸವನ್ನು ಮಾಡುವವನೂ) ಮತ್ತು ಭೋಕ್ತ (ಫಲವನ್ನು ಅನುಭವಿಸುವವನೂ) ಆಗಿರುವನು ಎನ್ನುತ್ತಾರೆ; ಇವನು ಬರಿಯ ಭೋಕ್ತೃವೇ ಹೊರತು ಕರ್ತೃವಲ್ಲ ಎಂದು ಕೆಲವರನ್ನುವರು; ಮತ್ತೆ ಕೆಲವರು ಇವನಿಗಿಂತ ಬೇರೆಯಾಗಿ ಸರ್ವಜ್ಞನೂ ಸರ್ವಶಕ್ತನೂ ಆಗಿರುವ ಈಶ್ವರನೊಬ್ಬನಿರುವನೆನ್ನುವರು; ಆತನು ಭೋಕ್ತೃವಾಗಿರುವ (ಸಂಸಾರಿಯ) ಆತ್ಮನೇ ಆಗಿರುವನೆಂದು ಮತ್ತೂ ಕೆಲವರು ಹೇಳುವರು. ಹೀಗೆ ಬಹುಜನವಾದಿಗಳು ಯುಕ್ತಿ, ವಾಕ್ಯ, ಸರಿಯಾದ ಯುಕ್ತಿವಾಕ್ಯಗಳಂತೆ ತೋರುವ (ಸಲ್ಲದ ಯುಕ್ತಿವಾಕ್ಯಗಳು) ಇವುಗಳನ್ನು ಹಿಡಿದು ವಿರುದ್ಧವಾಗಿ ಹೇಳುತ್ತಿರುವರು. ಹೀಗಿರುವಲ್ಲಿ ಯಾವದನ್ನೋ ಒಂದನ್ನು

ವಿಚಾರಿಸದೆ ಇಟ್ಟುಕೊಂಡು ಬಿಟ್ಟರೆ ಅಂಥವನಿಗೆ ಉತ್ತಮಗತಿಯೂ ತಪ್ಪಿ ಅನರ್ಥವೂ ಆಗಬಹುದು. ಆದ್ದರಿಂದ ಬ್ರಹ್ಮಜಿಜ್ಞಾಸೆ ಯನ್ನು ಮಾಡಬೇಕೆಂದು ಈ ಮುಖದಿಂದ ವೇದಾಂತವಾಕ್ಯಗಳ ಪೂಜ್ಯ ವಿಚಾರವನ್ನೂ ಇದಕ್ಕೆ ವಿರೋಧವಾಗದಿರುವ ತರ್ಕವನ್ನೂ ಉಪಕರಣವಾಗಿಟ್ಟು ಕೊಂಡು ಪ್ರಾರಂಭಮಾಡಲಾಗಿದೆ.''

ಉಪನಿಷತ್ತುಗಳಲ್ಲಿ **'ಬ್ರಹ್ಮ', 'ಆತ್ಮ'** ಎಂಬ ಎರಡುಶಬ್ದಗಳನ್ನೂ ಹೀಗೆ ಒಂದೇ ಅರ್ಥದಲ್ಲಿ ಉಪಯೋಗಿಸಿರುತ್ತದೆಯಾದರೂ ಇವೆರಡಕ್ಕೂ ಪ್ರವೃತ್ತಿ ನಿಮಿತ್ತವನ್ನು ನೋಡಿದರೆ ಅರ್ಥವ್ಯತ್ಯಾಸವುಂಟು. ಬ್ರಹ್ಮವೆಂಬುದು ಈ ಜಗತ್ತಿನ ಮೂಲತತ್ತ್ವವನ್ನು ಹೇಳುವದು. ''**ಈ ಭೂತಗಳೆಲ್ಲವೂ ಯಾವದರಿಂದ ಹುಟ್ಟಿರುವವೋ, ಹುಟ್ಟಿ ಯಾವದರಿಂದ ಜೀವಿಸಿರುತ್ತವೆಯೋ, ಯಾವದನ್ನು ಸೇರಿ ಲಯವಾಗುತ್ತವೆಯೊ, ಅದೇ ಬ್ರಹ್ಮವು'' (ತೈ).** ಆತ್ಮವೆಂದರೆ ನಮ್ಮೊಳಗಿನ ತತ್ತ್ವವು.

**ಯಚ್ಚಾಪ್ನೋತಿ ಯದಾದತ್ತೇ ಯಚ್ಚಾತ್ತಿ ವಿಷಯಾನಿಹ ।**
**ಯಚ್ಚಾಸ್ಯ ಸಂತತೋ ಭಾವಸ್ತಸ್ಮಾದಾತ್ಮೇತಿ ಕೀರ್ತಿತಃ ॥**

ಎಂದರೆ ಬ್ರಹ್ಮವನ್ನು ಪಡೆಯತಕ್ಕವನಾದ್ದರಿಂದಲೂ ವಿಷಯವಾಸನೆಯನ್ನು ಸ್ವೀಕಾರಮಾಡುವದರಿಂದಲೂ ವಿಷಯಗಳನ್ನು ಭೋಗಿಸುವವನಾದ್ದರಿಂದಲೂ ವಿಚ್ಛೇದವಿಲ್ಲದೆ ಎಲ್ಲಾ ಕಡೆಯಲ್ಲಿಯೂ ಇರುವವನಾದ್ದರಿಂದಲೂ ಇವನು ಆತ್ಮನೆಂದೆನಿಸುವನು. ಜಗತ್ತಿನ ಸೃಷ್ಟ್ಯಾದಿಗಳಿಗೆ ಕಾರಣವಾಗಿರುವ ಬ್ರಹ್ಮವು, ಸರಿಯಾಗಿ ಶೋಧನೆಮಾಡಿ ಹುಡುಕಿದರೆ ನಮ್ಮ ಆತ್ಮವೇ ಆಗಿರುವದು ಎಂಬುದೇ ಉಪನಿಷತ್ಸಿದ್ಧಾಂತದ ಮೂಲಸ್ತಂಭವಾಗಿರುವದು. ಈ ಬ್ರಹ್ಮಾತ್ಮಜ್ಞಾನಕ್ಕಾಗಿಯೇ ಎಲ್ಲಾ ಜಿಜ್ಞಾಸುವಾದವನು ಶ್ರವಣ ಮನನನಿಧಿಧ್ಯಾಸಗಳನ್ನು ಆಚರಿಸಬೇಕಾಗಿರುವದು.

★★★★★

# ಸಾಂಖ್ಯದರ್ಶನ

ಅಜ್ಞಾನದಿಂದ ಸಂಸಾರದ ಅನರ್ಥವುಂಟಾಗಿರುವದೆಂಬುದನ್ನೂ ತತ್ತ್ವಜ್ಞಾನವು ಮೋಕ್ಷಕ್ಕೆ ಅವಶ್ಯವೆಂಬುದನ್ನೂ ಬಹುಮಟ್ಟಿಗೆ ಎಲ್ಲಾ ಅಧ್ಯಾತ್ಮವಾದಿಗಳೂ ಒಪ್ಪುತ್ತಾರೆ. ಆದರೆ ಈ ಜ್ಞಾನಾಜ್ಞಾನಗಳ ಸ್ವರೂಪವೇನೆಂಬ ವಿಷಯದಲ್ಲಿ ಬಹಳ ಮತಭೇದವಿರುತ್ತದೆ. ಜ್ಞಾನವೆಂದರೇನೆಂಬ ವಿಚಾರದಲ್ಲಿ ಎರಡು ಮುಖ್ಯ ಅಭಿಪ್ರಾಯಗಳನ್ನು ಹಿಂದೆಯೇ ತಿಳಿಸಿದ್ದೇವೆ. ವಸ್ತು ಸ್ವರೂಪವನ್ನೂ ಪ್ರಮಾಣವನ್ನೂ ಅನುಸರಿಸಿ ಉಂಟಾಗುವ ಅರಿವೇ ಜ್ಞಾನವೆಂಬ ಮತವನ್ನು ಕೆಲವರೂ; ಧ್ಯಾನರೂಪವಾದ ಮನೋವೃತ್ತಿಯೇ ಜ್ಞಾನವೆಂದು ಕೆಲವರೂ ಹೇಳುತ್ತಾರೆ. ಇನ್ನು ವಸ್ತುತಂತ್ರವಾದ ಜ್ಞಾನದ ವಿಷಯಕ್ಕೂ ಅಭಿಪ್ರಾಯಗಳು ಭಿನ್ನವಾಗಿರುವವೆಂಬುದನ್ನು ಇಲ್ಲಿ ತಿಳಿಸುತ್ತೇವೆ.

ಸಾಂಖ್ಯ, ಯೋಗ, ನ್ಯಾಯ, ವೈಶೇಷಿಕ, ಮೀಮಾಂಸ, ವೇದಾಂತ ಈ ಆರೂ ಆಸ್ತಿಕದರ್ಶನಗಳೆನಿಸಿವೆ. ಇವುಗಳಲ್ಲಿ ವೇದಾಂತವನ್ನೊಂದು ಬಿಟ್ಟರೆ ಮಿಕ್ಕವುಗಳನ್ನು ಮೋಕ್ಷಕ್ಕೆ ದಾರಿಯೆಂದು ಒಪ್ಪಿ ಅದರಂತೆ ಜನರಿಗೆ ಬೋಧೆ ಮಾಡುತ್ತಿರುವವರು ಈಗಿನ ಕಾಲದಲ್ಲಿ ಯಾರೂ ಕಂಡುಬರುವದಿಲ್ಲ. ಆದರೂ ಸಾಂಖ್ಯಾದಿ ದರ್ಶನಗಳ ಎಷ್ಟೋ ವಿಷಯಗಳು ಈಗಿನ ವೇದಾಂತದಲ್ಲಿ ಬೆರತು ಹೋಗಿವೆ. ಬಹು ಜನಕ್ಕೆ ಈ ದರ್ಶನಗಳ ಅಸಾಧಾರಣ ವಿಷಯವೇನೆಂಬುದು ತಿಳಿಯದೇ ಇರುವದರಿಂದ, ಯಾವದನ್ನು ಹೇಳಿದರೂ ವೇದಾಂತವೆಂದೇ ವ್ಯವಹರಿಸುವರು. ಆದ್ದರಿಂದ ವೇದಾಂತಕ್ಕೂ ಮಿಕ್ಕ ದರ್ಶನಗಳಿಗೂ ಇರುವ ಮುಖ್ಯಭೇದ, ಆ ದರ್ಶನಗಳಲ್ಲಿ ಗ್ರಹಿಸಬಹುದಾದ ಅಂಶಗಳು – ಇವುಗಳನ್ನು ಜಿಜ್ಞಾಸುವಾದವನು ತಿಳಿಯುವದು ಅವಶ್ಯ. ಈ ದೃಷ್ಟಿಯಿಂದ ಈ ದರ್ಶನಗಳಲ್ಲಿ ತತ್ತ್ವಜ್ಞಾನವೆಂದರೇನೆಂಬುದನ್ನು ಸಂಗ್ರಹವಾಗಿ ಇನ್ನುಮೇಲೆ ಹೇಳುತ್ತಾ ಹೋಗುವೆವು. ಈ ಲೇಖನದಲ್ಲಿ ಸಾಂಖ್ಯದರ್ಶನದಂತೆ ತತ್ತ್ವಜ್ಞಾನಸ್ವರೂಪವನ್ನು ತಿಳಿಸುತ್ತೇವೆ.

ಸಾಂಖ್ಯ ದರ್ಶನಕಾರರು ಜಗತ್ತನ್ನೆಲ್ಲ ವ್ಯಕ್ತ, ಅವ್ಯಕ್ತ, ಜ್ಞ – ಎಂಬ ಮೂರು ಪಂಗಡವಾಗಿ ವಿಂಗಡಿಸಿರುವರು. ಈ ಮೂರು ಸ್ವರೂಪವನ್ನೂ ಬಿಡಿಸಿ ತಿಳಿದುಕೊಳ್ಳದೇ ಇರುವದೇ ಅಜ್ಞಾನವು. ಅಜ್ಞಾನಕ್ಕೆ ಈ ಮತದಲ್ಲಿ

ಅವಿವೇಕವೆಂದು ಹೆಸರು. ಈ ಅವಿವೇಕದಿಂದ ನಮಗೆ ಮೂರು ವಿಧವಾದ ದುಃಖಗಳುಂಟಾಗಿರುವವೆಂದು ಸಾಂಖ್ಯರು ಹೇಳುತ್ತಾರೆ. ನಮ್ಮ ಶರೀರದಲ್ಲಿ ಆಗುತ್ತಿರುವ ಜ್ವರ, ತಲೆನೋವು ಮುಂತಾದ ರೋಗಗಳು ಮತ್ತು ಬೇಕಾದದ್ದು ಸಿಕ್ಕದೆ ಇರುವಾಗ ಮನಸ್ಸಿನಲ್ಲಿ ಉಂಟಾಗುವ ವ್ಯಥೆ, ಇವೆರಡಕ್ಕೂ **ಆಧ್ಯಾತ್ಮಿಕ ದುಃಖ**ವೆಂದು ಹೆಸರು. ನಮ್ಮ ಹೊರಗಡೆಯಲ್ಲಿ ಮನುಷ್ಯರು, ಪಶುಪಕ್ಷಿಗಳು, ಕ್ರಿಮಿಕೀಟಗಳು ಮುಂತಾಗಿ ಕಾಣಬರುತ್ತಿರುವವಷ್ಟೇ; ಇವುಗಳಿಂದ ಆಗುವ ದುಃಖಕ್ಕೆ **ಆಧಿಭೌತಿಕದುಃಖ**ವೆಂದು ಹೆಸರು. ಹೀಗೆ ನಮ್ಮಲ್ಲಿಯೇ ಆಗುವ ಆಧ್ಯಾತ್ಮಿಕ ದುಃಖ, ನಮ್ಮ ಹೊರಗಡೆ ಇರುವ ಪ್ರಾಣಿಗಳಿಂದ ನಮಗೆ ಆಗುವ ಆಧಿಭೌತಿಕ ದುಃಖ - ಈ ಎರಡಲ್ಲದೆ ಚಳಿ-ಗಾಳಿ, ಮಳೆ-ಬಿಸಿಲು, ಸಿಡಿಲು ಮುಂತಾದ ಕಾರಣಗಳಿಂದ ಆಗಬಹುದಾದ ಮೂರನೆಯ ಬಗೆಯ ದುಃಖವೊಂದುಂಟು. ಇದಕ್ಕೆ **ಆಧಿದೈವಿಕ**ವೆಂದು ಹೆಸರು. (ಇವುಗಳೇ 'ತಾಪತ್ರಯ'ಗಳೆನಿಸಿಕೊಂಡಿವೆ) ಈ ದುಃಖಗಳಿಗೆ ನಾವು ಉಪಯೋಗಿಸುವ ಪ್ರತೀಕಾರಗಳಿಂದ ಇವು ಅತ್ಯಂತವಾಗಿ ಹೋಗಿಬಿಡುವದಿಲ್ಲ, ಆಗ್ಗೆ ಮಟ್ಟಾಗಿದ್ದು ಮತ್ತೆ ಕಾಣಿಸಿಕೊಳ್ಳುವವು. ಉದಾಹರಣೆಗೆ, ತಲೆನೋವಿಗೆ ಅಮೃತಾಂಜನವನ್ನು ಹಚ್ಚಿದರೆ ಸದ್ಯಕ್ಕೆ ಪರಿಹಾರವಾದಂತಾಗುವದೇ ಹೊರತು ಮತ್ತೆ ತಲೆನೋವೇ ಬರದಂತೆ ಮಾಡಲಾಗುವದಿಲ್ಲ. ಶಾಸ್ತ್ರದಲ್ಲಿ ಹೇಳಿದ ಕರ್ಮಗಳಿಂದ ಪರಲೋಕವುಂಟಾಗುವದಷ್ಟೆ; ಆ ಲೋಕದಲ್ಲಿ ಆಗುತ್ತಿರುವ ಸುಖವೂ ಕ್ಷಯವಾಗುವದಾಗಿರುವದಲ್ಲದೆ ಅಲ್ಲಿಗೆ ಹೋದರೂ ದುಃಖತ್ರಯದಿಂದ ಬಿಡುಗಡೆಯಾಗುವುದಿಲ್ಲ, ಈ ದುಃಖತ್ರಯವು ಅವಿವೇಕದಿಂದ ಉಂಟಾಗಿರುವದರಿಂದ ವಿವೇಕದಿಂದಲೇ ಹೋಗುವದು. ಈ ವಿವೇಕವೇ ವ್ಯಕ್ತ, ಅವ್ಯಕ್ತ, ಜ್ಞ - ಎಂಬ ಮೂರನ್ನು ವಿಂಗಡಿಸಿ ತಿಳಿಯುವದು. ಇದಕ್ಕೇ ಸಾಂಖ್ಯದರ್ಶನದಲ್ಲಿ ತತ್ತ್ವಜ್ಞಾನವೆಂಬ ಹೆಸರು.

ಈ ವಿವೇಕವನ್ನು ಸಾಂಖ್ಯರು ವರ್ಣಿಸಿರುವದು ಹೇಗೆಂದರೆ:

**ಆ।। ಮೂಲಪ್ರಕೃತಿರವಿಕೃತಿರ್ಮಹದಾದ್ಯಾಃ ಪ್ರಕೃತಿವಿಕೃತಯಃ ಸಪ್ತ ।**
**ಷೋಡಶಕಸ್ತು ವಿಕಾರೋ ನ ಪ್ರಕೃತಿರ್ನವಿಕೃತಿಃ ಪುರುಷಃ ।।**

ಇದರಭಿಪ್ರಾಯವೇನೆಂದರೆ **ಅವ್ಯಕ್ತ**ವೆಂದರೆ **ಪ್ರಧಾನವು** **ವ್ಯಕ್ತ**ವೆಂದರೆ **ಜಗತ್ತು**, **ಜ್ಞ** ಎಂದರೆ ಇವೆರಡಕ್ಕಿಂತಲೂ ಬೇರೆಯಾಗಿರುವ **ಪುರುಷನು**.

ಇವುಗಳಲ್ಲಿ ಪುರುಷನು ಯಾವುದಕ್ಕೂ ಕಾರಣವೂ ಅಲ್ಲ, ಕಾರ್ಯವೂ ಅಲ್ಲ. ಮಿಕ್ಕ ಎರಡರಲ್ಲಿಯೇ ಕಾರ್ಯಕಾರಣಭಾವವಿರುವದು. ಹೇಗೆಂದರೆ: ಈ ಜಗತ್ತಿಗೆಲ್ಲ ಪ್ರಧಾನವೆಂಬ ಮೂಲಕಾರಣವಿರುವದು. ಇದು ಅವ್ಯಕ್ತ ರೂಪವಾಗಿರುವುದು. ಇದರಿಂದಲೇ ಮಿಕ್ಕದ್ದೆಲ್ಲವೂ ಆಗುತ್ತಿರುವದು. ಇದಕ್ಕೆ ಯಾವ ಕಾರಣವೂ ಇಲ್ಲ. ಆದ್ದರಿಂದ ಇದು **ಮೂಲಪ್ರಕೃತಿ**ಯೆನಿಸುವದು. ಅವ್ಯಕ್ತವಾಗಿ ಎಂದರೆ ನಮ್ಮ ಇಂದ್ರಿಯಗಳಿಗೆ ಗೋಚರವಾಗದೆ ಇದ್ದುಕೊಂಡು, ಪ್ರಧಾನವು ಜಗತ್ತಿಗೆ ಕಾರಣವಾಗಿರುವದಷ್ಟೇ. ಮಣ್ಣು ಮಡಕೆಯ ಆಕಾರವನ್ನು ಕೈಕೊಂಡಂತೆ ಈ ಅವ್ಯಕ್ತವಾದ ಪ್ರಧಾನವು ರೂಪಾಂತರವನ್ನು ಹೊಂದಿ ವ್ಯಕ್ತವಾದ ಜಗತ್ತಾಗುವದು. ಆದ್ದರಿಂದ ವ್ಯಕ್ತವಾದ ಜಗತ್ತು **ವಿಕೃತಿ** ಎಂದರೆ ಕಾರ್ಯವೆನಿಸುವದು. ಪ್ರಧಾನವು **ಪ್ರಕೃತಿ** ಎಂದರೆ ಕಾರಣವು; ವ್ಯಕ್ತವಾದ ಜಗತ್ತು ವಿಕೃತಿಯು. ಈ ವ್ಯಕ್ತವಾದ ವಿಕೃತಿಯಾದ ಜಗತ್ತನ್ನು ಎರಡು ರಾಶಿಯಾಗಿ ವಿಂಗಡಿಸಬಹುದು ಬುದ್ಧಿ, ಅಹಂಕಾರ, ಐದು ತಾನ್ಮಾತ್ರೆಗಳು – ಇವು ಏಳೂ ಒಂದು ರಾಶಿ; ಜ್ಞಾನೇಂದ್ರಿಯಗಳು ಐದು, ಕರ್ಮೇಂದ್ರಿಯಗಳು ಐದು, ಮನಸ್ಸು ಒಂದು, ಆಕಾಶವೇ ಮೊದಲಾದ ಮಹಾಭೂತಗಳು ಐದು – ಈ ಹದಿನಾರೂ ಮತ್ತೊಂದು ರಾಶಿ. ಒಂದನೆಯ ರಾಶಿಯಲ್ಲಿರುವ ಪದಾರ್ಥಗಳು ಒಂದು ದೃಷ್ಟಿಯಿಂದ ನೋಡಿದರೆ ಕಾರಣವೂ ಮತ್ತೊಂದು ದೃಷ್ಟಿಯಿಂದ ನೋಡಿದರೆ ಕಾರ್ಯವೂ ಆಗುವವು. ಹೇಗೆಂದರೆ: ಮೂಲಪ್ರಕೃತಿಯಾದ ಪ್ರಧಾನದಿಂದ ಬುದ್ಧಿ ಹುಟ್ಟುತ್ತದೆಯಾದ್ದರಿಂದ ಬುದ್ಧಿಯು ಪ್ರಧಾನದ ಕಾರ್ಯವೆನ್ನಬೇಕಾಯಿತು. ಈ ಬುದ್ಧಿಯಿಂದಲೇ ಅಹಂಕಾರವು ಹುಟ್ಟುತ್ತದೆ; ಆದ್ದರಿಂದ ಬುದ್ಧಿಯು ಅಹಂಕಾರಕ್ಕೆ ಕಾರಣವೂ ಆಯಿತು. ಇದರಂತೆಯೇ ಅಹಂಕಾರವು ಬುದ್ಧಿಯ ಕಾರ್ಯವೂ ಪಂಚತನ್ಮಾತ್ರೆಗಳಿಗೆ ಕಾರಣವೂ ಆಗುವದು. ಶಬ್ದ, ಸ್ಪರ್ಶ, ರೂಪ, ರಸ, ಗಂಧ ಇವುಗಳು ಮತ್ತೊಂದರ ಬೆರಕೆಯಿಲ್ಲದೆ ಒಂದೊಂದೇ ಇದ್ದರೆ ತನ್ಮಾತ್ರೆಯೆಂದು ಹೆಸರು. ಈ ತನ್ಮಾತ್ರೆಗಳು ಅಹಂಕಾರದಿಂದ ಹುಟ್ಟುತ್ತವೆ; ಆದ್ದರಿಂದ ಇವು ಅಹಂಕಾರದ ಕಾರ್ಯವಾಗಿ ವೆ. ಇವುಗಳಿಂದಲೇ ಆಕಾಶ, ವಾಯು, ತೇಜಸ್ಸು, ಅಪ್ಪು, ಪೃಥ್ವಿ – ಎಂಬ ಭೂತಗಳೂ ಹುಟ್ಟುತ್ತವೆ; ಆದ್ದರಿಂದ ಇವು ಮಹಾಭೂತಗಳಿಗೆ ಕಾರಣವಾಗಿವೆ. ಹೀಗೆ ಬುದ್ಧಿ ಮುಂತಾದ ಏಳು ಪದಾರ್ಥಗಳು ತಮ್ಮ ತಮ್ಮ ಕಾರಣದೃಷ್ಟಿಯಿಂದ ಕಾರ್ಯವಾಗಿವೆ, ಮುಂದೆ ತಮ್ಮಿಂದ ಉಂಟಾಗುವ ಕಾರ್ಯಗಳ ದೃಷ್ಟಿಯಿಂದಾಗಿ ಕಾರಣಗಳೂ ಆಗಿವೆ. ಆದ್ದರಿಂದ ಇವಕ್ಕೆ **ಪ್ರಕೃತಿ ವಿಕೃತಿ**ಗಳೆಂದು ಹೆಸರು ಪ್ರಧಾನವು ಮೂಲಪ್ರಕೃತಿ, ವಿಕೃತಿಯಲ್ಲ. ಬುದ್ಧಿ (ಇದನ್ನು ಸಾಂಖ್ಯರು ಮಹತ್ತೆಂದೂ

ಕರೆಯುವರು ಈ ಮಹತ್ತು) ಮುಂತಾದ ಏಳೂ ಪ್ರಕೃತಿವಿಕೃತಿಗಳು. ಇವು ವ್ಯಕ್ತದ ಒಂದು ರಾಶಿಯಾಗಿವೆ. ಎರಡನೆಯ ರಾಶಿಯಾದ ಜ್ಞಾನೇಂದ್ರಿಯ ಮುಂತಾದ ಹದಿನಾರೂ ಬರಿಯ ವಿಕೃತಿಗಳೇ ಎಂದರೆ ಕಾರ್ಯವೇ; ಇವು ಯಾವದಕ್ಕೂ ಕಾರಣವಲ್ಲ, ಪ್ರಕೃತಿ ವಿಕೃತಿಗಳಾದ ತನ್ಮಾತ್ರೆಗಳಿಂಸ ಆಗಿರುತ್ತವೆ. ಅಂತು ಮೂಲಪ್ರಕೃತಿಯಾಗಿರುವ ಅವ್ಯಕ್ತ ಮತ್ತು ಪ್ರಕೃತಿವಿಕೃತಿ ಅಥವಾ ಕೇವಲ ವಿಕೃತಿರೂಪವಾಗಿರುವ ವ್ಯಕ್ತ – ಇವೆರಡರಲ್ಲಿ ಕಾರ್ಯಕಾರಣ ಭಾವವಿರುವದು. ಅವ್ಯಕ್ತಕ್ಕೂ ವ್ಯಕ್ತಕ್ಕೂ ಭಿನ್ನನಾಗಿರುವ ಪುರುಷನು ಪ್ರಕೃತಿಯೂ ಅಲ್ಲ, ವಿಕೃತಿಯೂ ಅಲ್ಲ.

ಅವ್ಯಕ್ತವಾಗಿರುವ ಪ್ರಧಾನವೇ ವ್ಯಕ್ತರೂಪವಾಗಿ ಪರಿಣಮಿಸುವದು. ಈ ಪ್ರಧಾನವು ವ್ಯಕ್ತರೂಪಾಗಿ ಪರಿಣಮಿಸಲಾಗಿ ಇದರಿಂದ ಪುರುಷನಿಗೆ ಎರಡು ಕಾರ್ಯವಾಗುತ್ತದೆ: ಶಬ್ದ, ಸ್ಪರ್ಶ, ಮುಂತಾದ ವಿಷಯಗಳ ಅನುಭವವೂ ಉಂಟಾಗುತ್ತದೆ, ಪ್ರಕೃತಿಪುರುಷರಿಗಿರುವ ಭೇದವಿದು ಎಂಬ ಅರಿವೂ ಉಂಟಾಗುತ್ತದೆ. ವಿಷಯಾನುಭವವೇ ಭೋಗವು, ಪ್ರಕೃತಿ ಪುರುಷರನ್ನು ವಿಂಗಡಿಸಿ ತಿಳಿಯುವದೇ ಮೋಕ್ಷವು. ಪ್ರಧಾನವೆಂಬ ಅವ್ಯಕ್ತವು, ಮಹತ್ತು ಮೊದಲಾದ ಇಪ್ಪತ್ತುಮೂರು ಬಗೆಯ ವ್ಯಕ್ತವು, ಇವುಗಳಿಗೆ ಬೇರೆಯಾಗಿರುವ ಜ್ಞ ಅಥವಾ ಪುರುಷನು – ಈ ಇಪ್ಪತ್ತೈದು ತತ್ತ್ವಗಳನ್ನು ಮತ್ತೆಮತ್ತೆ ವಿಚಾರಮಾಡುವದರಿಂದ ''ಇದು ಮೂಲಪ್ರಕೃತಿ, ಇವು ಮಹದಾದಿಗಳು, ನಾನು ಇವೆರಡಕ್ಕಿಂತಲೂ ಬೇರೆಯಾಗಿರುವೆನು'', ಎಂದು ನಿಸ್ಸಂಶಯವಾಗಿ ತಪ್ಪುತಿಳಿವಿಲ್ಲದ ತತ್ತ್ವಜ್ಞಾನ ವುಂಟಾಗುತ್ತದೆ. ಆಗ ಪುರುಷನು ತತ್ತ್ವವನ್ನು ತಿಳಿದು ಜಗತ್ತಿನಲ್ಲಿ ಉದಾಸೀನ ನಾಗುತ್ತಾನೆ. ಅಂದಿನಿಂದ ಅವನಿಗೆ ಜಗತ್ತಿನಲ್ಲಿ ಭೋಗಮೋಕ್ಷಗಳು ಆಗಬೇಕಾದ ದ್ದಿರುವದಿಲ್ಲ. ಇನ್ನು ಮೇಲೆ ಪ್ರಧಾನಪರಿಣಾಮದಿಂದ ಅವನಿಗಾಗಬೇಕಾದದ್ದೇನೂ ಇರುವದಿಲ್ಲ. ಉಳಿದ ಪುರುಷರಿಗಾಗಿ ಪ್ರಧಾನವು ಪರಿಣಮಿಸುತ್ತಿರುವದು.

ಈ ಜ್ಞಾನವಾಗುವವರೆಗೆ ಧರ್ಮದಿಂದ ಊರ್ಧ್ವಗತಿಯನ್ನೂ ಅಧರ್ಮದಿಂದ ಆಧೋಗತಿಯನ್ನೂ ಪಡೆಯುತ್ತಿರುತ್ತಾನೆ. ಜ್ಞಾನವಾದಮೇಲೋ ಎಂದರೆ ಕುಂಬಾರನು ಮಡಕೆ ಮಾಡುವದಕ್ಕೆ ತಿರುಗಿಸಿ ಕೈಬಿಟ್ಟ ತಿಗರಿಯು ತನ್ನಷ್ಟಕ್ಕೆ ತಾನೇ ಸ್ವಲ್ಪಕಾಲ ತಿರುಗುತ್ತಿರುವಂತೆ ಈ ಶರೀರವು ಇದ್ದು ಕೊಂಡಿರುವದು. ಆ ಶರೀರವೂ ಬಿದ್ದು ಹೋದಮೇಲೆ ಅತ್ಯಂತವಾದ ಕೈವಲ್ಯವಾಗುತ್ತದೆ; ಎಂದರೆ

ಪ್ರಕೃತಿಯೊಡನೆ ಈ ಪುರುಷನಿಗಿದ್ದ ಸಂಬಂಧವು ಪೂರ್ಣವಾಗಿ ಹೋಗಿಬಿಡುವದು.

ಸಾಂಖ್ಯರು ಜಗತ್ತಿಗೆ ಈಶ್ವರನಾಗಲಿ ಆತ್ಮನಾಗಲಿ ಕಾಲವಾಗಲಿ ಸ್ವಭಾವವಾಗಲಿ ಕಾರಣವೆಂದು ಒಪ್ಪುವದಿಲ್ಲ. ಪ್ರಧಾನವೇ ಎಲ್ಲಕ್ಕೂ ಕಾರಣವೆನ್ನುತ್ತಾರೆ. ಪುರುಷನಿಗೆ ನಿಜವಾಗಿ ಬಂಧವುಂಟೆಂಬುದನ್ನೂ ಇವರು ಒಪ್ಪುವದಿಲ್ಲ.

**ಆ|| ತಸ್ಮಾನ್ನ ಬಧ್ಯತೇ ನಾಪಿ ಮುಚ್ಯತೇ ನಾಪಿ ಸಂಸರತಿ ಕಶ್ಚಿತ್ ।**
**ಸಂಸರತಿ ಬಧ್ಯತೇ ಮುಚ್ಯತೇ ಚ ನಾನಾಶ್ರಯಾ ಪ್ರಕೃತಿಃ ||**

ಎಂದರೆ, ಯಾವ ಪುರುಷನಿಗೂ ಬಂಧವೂ ಇಲ್ಲ, ಮುಕ್ತಿಯೂ ಇಲ್ಲ, ಸಂಸಾರವೂ ಇಲ್ಲ. ದೇವಮನುಷ್ಯಾದಿ ಶರೀರಗಳನ್ನು ಧರಿಸುತ್ತಾ ಪ್ರಧಾನವೇ ಬಂಧಕ್ಕೆ ಸಿಕ್ಕುತ್ತದೆ ಸಂಸಾರವನ್ನು ಅನುಭವಿಸುತ್ತದೆ, ಕೊನೆಗೆ ಮುಕ್ತಿಯನ್ನು ಹೊಂದುತ್ತದೆ. ಇದರ ಸಂಬಂಧದಿಂದ ಪುರುಷನಿಗೆ ಬಂಧಾದಿಗಳನ್ನು ಉಪಚಾರಕ್ಕಾಗಿ ಹೇಳುವರೆಂದು ಇವರ ಅಭಿಪ್ರಾಯವು.

ಸಾಂಖ್ಯಪ್ರಕ್ರಿಯೆಯನ್ನು ಭಾರತದಲ್ಲಿಯೂ ಪುರಾಣಗಳಲ್ಲಿಯೂ ಉಪಯೋಗಿಸಿಕೊಂಡಿರುತ್ತಾರೆ. ಸತ್ತ್ವರಜಸ್ತಮೋಗುಣಗಳ ವಿವರಣೆ, ಸ್ಥೂಲಸೂಕ್ಷ್ಮಶರೀರಗಳ ವರ್ಣನೆ, ಅಂತಃಕರಣದಲ್ಲಿ ಮನೋಬುದ್ಧ್ಯಹಂಕಾರಗಳೆಂಬ ಭೇದವನ್ನು ಕಲ್ಪಿಸಿಕ್ಕೊಳ್ಳುವದು, ಆತ್ಮಾನಾತ್ಮವಿವೇಕ ಇದೆಲ್ಲ ಬಹುಮಟ್ಟಿಗೆ ಸಾಂಖ್ಯಪ್ರಕ್ರಿಯೆಯನ್ನನುಸರಿಸಿ ವೇದಾಂತಗ್ರಂಥಗಳಲ್ಲಿಯೂ ಬರೆದಿರುತ್ತದೆ. ಸಾಂಖ್ಯಪ್ರಕ್ರಿಯೆಯು ವೇದಾಂತವಿಚಾರಕ್ಕೆ ತುಂಬ ಸಹಾಯಕರವಾಗಿರುವದರಿಂದ ಇದನ್ನು ಚೆನ್ನಾಗಿ ತಿಳಿದುಕೊಳ್ಳುವದು ಅವಶ್ಯವಾಗಿರುವದು.

★★★★★

# ಯೋಗದರ್ಶನ

ಸಾಂಖ್ಯದರ್ಶನದಂತೆ ಜ್ಞಾನವೆಂದರೇನು? ಅಜ್ಞಾನವೆಂದರೇನು? ಎಂಬುದನ್ನು ವಿಚಾರಮಾಡಿದ್ದಾಯಿತು. ಇಲ್ಲಿ ಯೋಗದರ್ಶನದಂತೆ ಜ್ಞಾನಜ್ಞಾನಗಳ ಸ್ವರೂಪವನ್ನು ಕುರಿತು ಎರಡು ಮಾತುಗಳನ್ನು ಹೇಳುವೆವು.

ಯೋಗದರ್ಶನದಲ್ಲಿಯೂ ಅಜ್ಞಾನವು ಸಂಸಾರಕ್ಕೆ ಕಾರಣವಾಗಿದೆ. ಹೇಗೆಂದರೆ: ದೃಶ್ಯವಾಗಿರುವ ಈ ಪ್ರಪಂಚವು ಸಾಂಖ್ಯರು ಹೇಳುವಂತೆಯೇ ಪುರುಷನಿಗೆ ಭೋಗಕ್ಕೂ ಮೋಕ್ಷಕ್ಕೂ ಕಾರಣವಾಗಿರುವದು ಪುರುಷನು ಕೇವಲ ಜ್ಞಾನಸ್ವರೂಪನಾಗಿರುವನು. ತಾನು ಶುದ್ಧನಾಗಿರುವನಾದರೂ ಬುದ್ಧಿಯನ್ನನುಸರಿಸಿ ಭೋಗಮೋಕ್ಷಗಳನ್ನ ಅನುಭವಿಸುತ್ತಿರುವನು. ದೃಶ್ಯವೆಂಬುದು ಒಬ್ಬ ಪುರುಷನ ಮೋಕ್ಷವನ್ನು ಸಂಪಾದಿಸಿಕೊಟ್ಟಮೇಲೆ ಮತ್ತೊಬ್ಬನಿಗೋಸ್ಕರ ಕೆಲಸಮಾಡುತ್ತಿರುವದು. ಪ್ರಪಂಚವನ್ನು ನೋಡುತ್ತಿರುವ ಪುರುಷ, ಅವನಿಂದ ನೋಡಲ್ಪಡುತ್ತಿರುವ ಪ್ರಪಂಚ – ಇವುಗಳ ಸಂಯೋಗವೇ ಸಂಸಾರಕಾರಣವಾಗಿ ರುವದು. ಸಂಯೋಗವೆಂದರೇನು?

**ಸೂ।। ಸ್ವಸ್ವಾಮಿಶಕ್ತ್ಯೋಃ ಸ್ವರೂಪೋಪಲಬ್ಧಿಹೇತುಃ ಸಂಯೋಗಃ ।।**

ನಾನು, ನನ್ನದು ಎಂಬ ಶಕ್ತಿಗಳು ಹೊರಬೀಳುವದಕ್ಕೆ ಕಾರಣವಾಗಿರುವದೇ ಸಂಯೋಗವು. ''ಇದು ನನ್ನದು'' ಎಂದು ಶರೀರಾದಿಗಳಲ್ಲಿ ಪುರುಷನಿಗೆ ಬಿದ್ದಿರುವ ಅಭಿಮಾನದಗಂಟೇ ಸಂಯೋಗವು, ಈ ಸಂಯೋಗಕ್ಕೆ ಅವಿದ್ಯೆಯೇ ಕಾರಣವು.

ಅವಿದ್ಯೆಯೆಂದರೇನು? ಸಾಂಖ್ಯದರ್ಶನದಲ್ಲಿ ಪುರುಷ, ಪ್ರಕೃತಿ – ಇವುಗಳನ್ನು ಬಿಡಿಸಿ ತಿಳಿಯದಿರುವದೇ ಅವಿವೇಕವು, ಎಂದರೆ ಅಜ್ಞಾನವು. ಯೋಗದರ್ಶನದಲ್ಲಿಯೂ ಸ್ವಲ್ಪಹೆಚ್ಚುಕಡಿಮೆಯಾಗಿ ಇದೇ ಅಭಿಪ್ರಾಯವುಂಟು.

**ಸೂ।। ಅನಿತ್ಯಾऽಶುಚಿದುಃಖಾನಾತ್ಮಸು ನಿತ್ಯಶುಚಿಸುಖಾತ್ಮಖ್ಯಾತಿರವಿದ್ಯಾ ।।**

ಎಂಬುದು ಅವಿದ್ಯೆಯ ಲಕ್ಷಣ. ಇದರ ತಾತ್ಪರ್ಯವೇನೆಂದರೆ, ದೃಶ್ಯವಾದ ಪ್ರಪಂಚವು ಅನಿತ್ಯವಾಗಿರುವದು, ಆದರೂ ಇದನ್ನು ನಿತ್ಯವೆಂದು

ಪುರುಷನು ತಿಳಿಯುವನು; ದೇಹಾದಿಗಳು ಕೊಳೆಯಿಂದ ಕೂಡಿರುವವು, ಆದರೂ ಇವು ಶುಚಿಯಾಗಿರುವವೆಂದು ತಿಳಿಯುವನು. ವಿಷಯಭೋಗವು ನಿಜವಾಗಿ ನೋಡಿದರೆ ದುಃಖಕರವಾಗಿಯೇ ಇರುವದು, ಆದರೂ ಇದನ್ನು ಸುಖಕರವೆಂದು ತಿಳಿಯುವನು. ತಾನಲ್ಲದೆ ಇರುವವು ದೇಹಾದಿಗಳು; ಆದರೂ ಅವುಗಳು ತಾನೇ ಎಂದು ತಿಳಿಯುವನು. ಈ ತಪ್ಪು ತಿಳಿವಳಿಕೆಯೇ ಅವಿದ್ಯೆಯು. ಅವಿವೇಕದಿಂದ ಮೂರುಬಗೆಯ ದುಃಖವಾಗುವದೆಂದು ಸಾಂಖ್ಯರು ಹೇಳುವಂತೆ, ಅವಿದ್ಯೆಯಿಂದ ಅಸ್ಮಿತೆ, ರಾಗ, ದ್ವೇಷ, ಅಭಿನಿವೇಶ – ಎಂಬ ನಾಲ್ಕು ಬಗೆಯ ಕ್ಲೇಶಗಳುಂಟಾಗುವದೆಂದು ಯೋಗಿಗಳು ಹೇಳುತ್ತಾರೆ. ಅವಿದ್ಯೆಯೂ ಕ್ಲೇಶವೇ. ಆದರೆ ಅವು ಬೀಜದ್ದಂತೆ, ಮಿಕ್ಕ ಕ್ಲೇಶಗಳು ಮೊಳಕೆ, ಗಿಡ, ಹೂ, ಹಣ್ಣುಗಳಿದ್ದಂತೆ. ಅಸ್ಮಿತೆಯೆಂದರೆ ನೋಡುವ (ಪುರುಷನ) ಶಕ್ತಿ, ನೋಡಲ್ಪಡುವ (ಪ್ರಕೃತಿಯ) ಶಕ್ತಿ ಇವುಗಳನ್ನು ಬೆರಸಿ ತಿಳಿಯುವದು. ಇದು ಸುಖಕರವೆಂದು ತಿಳಿಯುವದೇ ರಾಗವು. ಇದು ದುಃಖಕರವೆಂದು ತಿಳಿಯುವದೇ ದ್ವೇಷವು. ಎಷ್ಟು ವಿಚಾರಮಾಡಿಕೊಂಡಿದ್ದವನಿಗೂ ಕೂಡ ತನ್ನಲ್ಲಿರುವ ಅಭಿಮಾನಕ್ಕೆ ಅಭಿನಿವೇಶವೆಂದು ಹೆಸರು. ಹೀಗೆ ಸರ್ವಸಂಸಾರಕ್ಕೂ ಕಾರಣವಾಗಿರುವ ಅವಿದ್ಯೆಯು ಹೋದರೆ ಪುರುಷನಿಗೆ ಕೈವಲ್ಯವುಂಟಾಗುವದು, ಎಂದರೆ ಪ್ರಕೃತಿಯ ಸಂಯೋಗವನ್ನು ತಪ್ಪಿಸಿಕೊಂಡು ಪುರುಷನು ತಾನೇ ತಾನಾಗಿರುವನು.

ಅಜ್ಞಾನಸ್ವರೂಪವಿಚಾರದಲ್ಲಿ ಯೋಗದರ್ಶನಕ್ಕೂ ಸಾಂಖ್ಯದರ್ಶನಕ್ಕೂ ತುಂಬ ಸಾಮ್ಯವಿರುವದೆಂದು ಮೇಲೆ ಹೇಳಿದ ಅವಿದ್ಯಾಸ್ವರೂಪದಿಂದ ಗೊತ್ತಾಯಿತಷ್ಟೆ. ಇನ್ನು ಜ್ಞಾನವಿಚಾರಕ್ಕೆ ಹೊರಟರೆ ಸಂಯೋಗವನ್ನು ಬಿಡಿಸಿ ಕೊಳ್ಳುವದಕ್ಕೆಪುರುಷಪ್ರಕೃತಿಗಳವಿವೇಕವನ್ನುಮಾಡಿಕೊಳ್ಳುವದೇಉಪಾಯವೆಂದು ಯೋಗಿಗಳು ಹೇಳುವರು. ಆದ್ದರಿಂದ ಈ ಭಾಗದಲ್ಲಿಯೂ ಸಾಂಖ್ಯಮತವೇ ಯೋಗಮತವೆಂದು ಹೇಳಬೇಕಾಗಿದೆ. ಆದರೆ ಆ ಜ್ಞಾನವುಂಟಾಗುವ ಬಗೆ ಏನೆಂದು ಕೇಳಿದರೆ,

**ಸೂ|| ಯೋಗಾಂಗಾನುಷ್ಠಾನಾದಶುದ್ಧಿಕ್ಷಯೇ ಜ್ಞಾನದೀಪ್ತಿರಾವಿವೇಕಖ್ಯಾತೇಃ ||**

ಯೋಗದ ಅಂಗಗಳನ್ನು ಅಭ್ಯಾಸಮಾಡುವದರಿಂದ ಚಿತ್ತದ ಅಶುದ್ಧಿಯೆಲ್ಲ ನಾಶವಾಗುವದು; ಇದರಿಂದ ಜ್ಞಾನವು ಬೆಳಗಿ ಕೊನೆಗೆ ಪುರುಷಪ್ರಧಾನಗಳ

ವಿವೇಕವುಂಟಾಗುವದು - ಎಂದು ಈ ದರ್ಶನದಲ್ಲಿ ಹೇಳಿರುತ್ತದೆ. ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣಾ, ಧ್ಯಾನ, ಸಮಾಧಿ - ಇವೇ ಯೋಗದ ಅಂಗಗಳು. **ಯಮ**ವೆಂದರೆ ಅಹಿಂಸೆ ಮೊದಲಾದ ಮನಸ್ಸಿನ ಸಾಧನಗಳು; **ನಿಯಮ**ವೆಂದರೆ ಶುಚಿಯಾಗಿರುವದೇ ಮೊದಲಾದ ಸಾಧನಗಳು; ಸ್ಥಿರವಾಗಿ ಸುಖವಾಗಿ ಕೂತುಕೊಳ್ಳುವದೇ **ಆಸನ**ವು; ಶ್ವಾಸಪ್ರಶ್ವಾಸಗಳು ನಡೆಯದಂತೆ ತಡೆಯುವದೇ **ಪ್ರಾಣಾಯಾಮ**ವು; ಇಂದ್ರಿಯಗಳನ್ನು ತಮ್ಮ ವಿಷಯಗಳಿಂದ ಹಿಡಿದೆಳೆದುಕೊಳ್ಳುವದೇ **ಪ್ರತ್ಯಾಹಾರ**ವು; ಚಿತ್ತವನ್ನು ಯಾವದಾದರೊಂದು ಸ್ಥಳದಲ್ಲಿ ಕಟ್ಟಿನಿಲ್ಲಿಸುವದೇ **ಧಾರಣೆ**ಯು; ಹಾಗೆ ನಿಲ್ಲಿಸಿಕೊಂಡು ಒಂದೇ ಪ್ರತ್ಯಯವನ್ನು ನಡೆಸುವದೇ **ಧ್ಯಾನ**ವು; ಕೊನೆಗೆ ಆ ಧ್ಯಾನವು ತಾನು ಇಲ್ಲದೇ ಇದ್ದರೆ ಹೇಗೋ ಹಾಗೆ ಪರಿಣಮಿಸಿ ಧ್ಯೇಯವಾದ ವಸ್ತುವೊಂದೇ ತೋರುವಂತಾದರೆ ಅದಕ್ಕೆ **ಸಮಾಧಿ**ಯೆಂದು ಹೆಸರು.

ಹೀಗೆ ಯೋಗಾಂಗಾನುಷ್ಠಾನವನ್ನು ವಿಸ್ತಾರವಾಗಿ ಹೇಳಿರುವದನ್ನು ಬಿಟ್ಟರೆ ಯೋಗಕ್ಕೂ ಸಾಂಖ್ಯಕ್ಕೂ ಹೆಚ್ಚುಕಡಿಮೆ ಯಾವದನ್ನೂ ಹೇಳುವದಕ್ಕಿಲ್ಲ. ಬಹುಮುಖ್ಯವಾದ ತಾರತಮ್ಯವೆಂದರೆ ಯೋಗದಲ್ಲಿ ಈಶ್ವರನನ್ನು ಅಂಗೀಕರಿಸಿದ್ದಾರೆ, ಸಾಂಖ್ಯದಲ್ಲಿ ಅಂಗೀಕರಿಸಲಿಲ್ಲ. ಯೋಗದ ಅಂಗಗಳಲ್ಲಿ ಮುಖ್ಯವಾದ ಸಮಾಧಿಯು ''**ಈಶ್ವರಪ್ರಣಿಧಾನ**''ದಿಂದ ಉಂಟಾಗುವದೆಂದು ಹೇಳಿರುತ್ತದೆ. ''ಈಶ್ವರಭಕ್ತಿಯೂ ತಪಸ್ಸೂ ವೇದಾಧ್ಯಯನವೂ ಕ್ರಿಯಾಯೋಗವೆನಿಸುವವು; ಇವುಗಳಿಂದ ಸಮಾಧಿಯುಂಟಾಗುವದು ಮತ್ತು ಕ್ಲೇಶಗಳು ಕ್ಷಯವಾಗುವವು'' ಹೀಗೆಂಬುದು ಯೋಗಿಗಳ ಅಭಿಪ್ರಾಯವು. ಸಾಂಖ್ಯಕ್ಕೆ ಮಿಕ್ಕ ಎಲ್ಲಾ ಭಾಗಗಳಲ್ಲಿಯೂ ಸಮಾನವಾಗಿರುವದರಿಂದ ಯೋಗವನ್ನು ''ಸೇಶ್ವರಸಾಂಖ್ಯ''ವೆಂದೂ ಕರೆಯುವದುಂಟು.

ಸಾಂಖ್ಯವನ್ನು ಇತಿಹಾಸಪುರಾಣಗಳಲ್ಲಿ ಬಹುವಾಗಿ ಹೊಗಳಿರುವಂತೆಯೇ ಯೋಗವನ್ನೂ ಹೊಗಳಿರುತ್ತದೆ. ಸಾಂಖ್ಯಕ್ಕಿಂತ ಹೆಚ್ಚಿನ ಜ್ಞಾನವಿಲ್ಲ, ಯೋಗಕ್ಕಿಂತ ಹೆಚ್ಚಿನ ಸಾಧನವಿಲ್ಲ - ಎಂಬುದು ಅನೇಕ ಸ್ಮೃತಿಕಾರರ ವಚನವು. ಭಗವದ್ಗೀತೆಯಲ್ಲಿಯೂ ಮನುಸ್ಮೃತಿಯಲ್ಲಿಯೂ ಪುರಾಣಗಳಲ್ಲಿಯೂ ಯೋಗವನ್ನು ವಿಸ್ತರಿಸಿ ಹೇಳಿರುವದು ಕಂಡುಬರುತ್ತದೆ. ಬಾದರಾಯಣದ ಸೂತ್ರಗಳಲ್ಲಿ ಯೋಗವನ್ನು ಖಂಡಿಸಿರುತ್ತದೆಯಾದರೂ

ಸಂರಾಧನೆಯಲ್ಲಿ ಆತ್ಮನ ಸ್ವರೂಪವನ್ನು ಕಂಡುಕೊಳ್ಳಬಹುದೆಂದು ಹೇಳಿದೆ; ಸಾಂಖ್ಯಶಾಸ್ತ್ರದಲ್ಲಿಯೂ ಯೋಗದಿಂದಾಗುವ ಸಿದ್ಧಿಗಳನ್ನು ಒಪ್ಪಿಕೊಂಡಿರುತ್ತದೆ. ಕೆಲವರು ಈಚಿನ ವೇದಾಂತಿಗಳು ಯೋಗದಲ್ಲಿ ಹೇಳಿರುವ ಸಮಾಧಿಯೇ ವೇದಾಂತದಲ್ಲಿ ತುರೀಯಾವಸ್ಥೆಯೆನಿಸಿರುವದೆಂದು ವಾದಿಸುತ್ತಿರುವರು. ಧ್ಯಾನರೂಪವಾದ ಜ್ಞಾನವೇ ವೇದಾಂತವಿಹಿತವೆಂದು ಅಂಗೀಕರಿಸುವ ವೇದಾಂತಿಗಳಿಗೂ ಯೋಗದರ್ಶನದ ಸಹಾಯವು ಬಹಳವಾಗಿ ಬೇಕಾಗುತ್ತದೆ. ಶ್ರೀ ರಾಮಕೃಷ್ಣಪರಮಹಂಸರ ಮುಖ್ಯಶಿಷ್ಯರಾದ ವಿವೇಕಾನಂದಸ್ವಾಮಿಗಳು ಸ್ವಭಾವಜನ್ಯಜ್ಞಾನ, ವಿಶೇಷಜ್ಞಾನ, ಸಮಾಧಿಜನ್ಯವಾದ ಅತೀಂದ್ರಿಯ ಜ್ಞಾನ ಎಂದು ಜ್ಞಾನಕ್ಕೆ ಮೂರು ಭೂಮಿಕೆಗಳಿರುವವೆಂತಲೂ ಮೂರನೆಯ ಮೆಟ್ಟಲಾದ ಅತೀಂದ್ರಿಯ ಜ್ಞಾನದ ಆಧಾರದಮೇಲೆ ತತ್ತ್ವಜ್ಞಾನವು ನಿಂತಿರುವದೆಂತಲೂ ಬೋಧಿಸಿರುತ್ತಾರೆ. ಯೋಗದಿಂದ ಅತೀಂದ್ರಿಯಜ್ಞಾನವನ್ನು ಸಂಪಾದಿಸಬಹುದೆಂದು ಅನೇಕರು ಈಗಲೂ ನಂಬುತ್ತಾರೆ. ಈ ಎಲ್ಲಾ ಕಾರಣಗಳಿಂದ ಯೋಗದರ್ಶನವನ್ನು ಚೆನ್ನಾಗಿ ವಿಚಾರಮಾಡುವದು ಜಿಜ್ಞಾಸುಗಳಿಗೆ ಯುಕ್ತವಾಗಿರುತ್ತದೆ. ಯೋಗದರ್ಶನಕ್ಕೂ ವೇದಾಂತಕ್ಕೂ ಇರುವ ಸಂಬಂಧವನ್ನೂ ತಾರತಮ್ಯವನ್ನೂ ಇನ್ನೊಮ್ಮೆ ವಿಚಾರಕ್ಕೆ ತೆಗೆದುಕೊಳ್ಳುವೆವು.

★★★★★

# ನ್ಯಾಯದರ್ಶನ

ಸಾಂಖ್ಯ-ಯೋಗದೃಷ್ಟಿಯಿಂದ ಜ್ಞಾನವೆಂದರೇನು ಅಜ್ಞಾನವೆಂದರೇನು ಎಂಬುದನ್ನು ಹಿಂದೆ ತಿಳಿಸಿದ್ದಾಯಿತು. ಇನ್ನು ನ್ಯಾಯಶಾಸ್ತ್ರದ ದೃಷ್ಟಿಯಿಂದ ಇದೇ ವಿಷಯವನ್ನು ಸಂಕ್ಷೇಪವಾಗಿ ಹೇಳುತ್ತೇವೆ.

ಈ ದರ್ಶನದಲ್ಲಿ ಅಜ್ಞಾನಕ್ಕೆ **ಮಿಥ್ಯಾಜ್ಞಾನ**ವೆಂದು ಹೆಸರು. ಪ್ರಮೇಯದ ವಿಷಯದಲ್ಲಿ ತಪ್ಪಾಗಿ ತಿಳಿದುಕೊಳ್ಳುವದೇ ಮಿಥ್ಯಾಜ್ಞಾನವು. ಆತ್ಮ, ಶರೀರ, ಇಂದ್ರಿಯ, ವಿಷಯ, ಬುದ್ಧಿ, ಮನಸ್ಸು, ಪ್ರವೃತ್ತಿ, ದೋಷಗಳು, ಪ್ರೇತ್ಯಭಾವ, ಫಲ, ದುಃಖ, ಅಪವರ್ಗ - ಇವುಗಳಿಗೆ ಪ್ರಮೇಯವೆಂದು ಹೆಸರು. ಇವುಗಳನ್ನು

ಸರಿಯಾಗಿ ತಿಳಿದುಕೊಳ್ಳದೆ ತಪ್ಪಾಗಿ ತಿಳಿದುಕೊಂಡರೆ ಮಿಥ್ಯಾಜ್ಞಾನವೆನಿಸುವದು. ಹೇಗೆಂದರೆ; ಆತ್ಮನು ಇಲ್ಲವೆಂತಲಾಗಲಿ, ಅನಾತ್ಮವೇ ಆತ್ಮವೆಂತಲಾಗಲಿ, ತಿಳಿದುಕೊಳ್ಳುವದು ಆತ್ಮವಿಷಯಕವಾದ ಮಿಥ್ಯಾಜ್ಞಾನವು. ಇದರಂತೆಯೇ ದುಃಖವನ್ನು ಸುಖವೆಂದು ತಿಳಿದುಕೊಂಡು ಭಯವಿರುವೆಡೆಯಲ್ಲಿ ಭಯವಿಲ್ಲ ವೆಂದು ನಂಬಿ, ಸಂಸಾರದಲ್ಲಿ ಯಾವದೋ ಒಂದನ್ನು ಇದು ಬೇಕಾದದ್ದು, ಇದನ್ನು ಬಿಡತಕ್ಕದ್ದಲ್ಲ, ಅದೇ ನನ್ನನ್ನು ಕಾಪಾಡುವದು ಎಂದು ತಿಳಿದುಕೊಂಡಿರುವದೂ ಮಿಥ್ಯಾಜ್ಞಾನವೇ. **ಪ್ರವೃತ್ತಿ**ಯೆಂದರೆ ಧರ್ಮಾಧರ್ಮಗಳು. ''ಧರ್ಮವೆಲ್ಲಿದೆ, ಅಧರ್ಮವೆಲ್ಲಿದೆ? ಕರ್ಮವೂ ಇಲ್ಲ, ಫಲವೂ ಇಲ್ಲ'' ಎಂದು ತಿಳಿದುಕೊಂಡರೆ ಅದೂ ಮಿಥ್ಯಾಜ್ಞಾನವೇ. ಕ್ಷಯರೋಗದಿಂದ ನರಳುವಾತನು ತನಗೆ ಯಾವ ರೋಗವೂ ಇಲ್ಲವೆಂದು ನಂಬಿರುವಂತೆ ಈ ಸಂಸಾರವು ನಿರ್ದುಷ್ಟವಾದದ್ದು ಎಂದು ನಂಬಿಕೊಂಡು ಕೂತುಕೊಳ್ಳುವದೂ ಮಿಥ್ಯಾಜ್ಞಾನವೇ. ಪ್ರೇತ್ಯಭಾವವೆಂದರೆ ಸತ್ತು ಹುಟ್ಟುವದು. ''ಜೀವನೂ ಇಲ್ಲ, ಆತ್ಮನೂ ಇಲ್ಲ. ಸತ್ತು ಹುಟ್ಟುವದಕ್ಕೆ ಎರಡು ಜನ್ಮಗಳಲ್ಲಿಯೂ ಇರುವನೊಬ್ಬನು ಇರಬೇಕಲ್ಲ, ಅವನೇ ಇಲ್ಲ. ಹುಟ್ಟುವದಕ್ಕೆ ಯಾವ ಕಾರಣವೂ ಇಲ್ಲ, ಜಂತುಗಳು ತಮಗೆ ತಾವೇ ಹುಟ್ಟುತ್ತವೆ. ಹೀಗೆಯೇ ಸಾವಿಗೂ ಕಾರಣವಿಲ್ಲ, ಪ್ರಾಣಿಗಳು ನಿರ್ನಿಮಿತ್ತವಾಗಿಯೇ ಸಾಯುತ್ತವೆ. ಒಂದು ಸಲ ಸತ್ತರೆ ಸರಿ, ಎಂದೆಂದಿಗೂ ಹಾಗೆಯೇ ಇದ್ದು ಬಿಡುವದೇ; ಮತ್ತೆ ಹುಟ್ಟುವದೆಲ್ಲಿಂದ ಬಂತು? ಅಥವಾ ಹುಟ್ಟಿಗೂ ಕಾರಣವಿರಲಿ, ಸಾವಿಗೂ ಕಾರಣವಿರಲಿ; ಇವಕ್ಕೆ ಕರ್ಮವೇನೂ ಕಾರಣವಲ್ಲ. ಸತ್ತಮೇಲೆ ಈ ಶರೀರಾದಿಗಳು ನಾಶವಾಗಿಬಿಡುವದರಿಂದ ಏನು ಉಳಿಯುವದು? ಏನೂ ಇಲ್ಲ.'' ಎಂದು ಮುಂತಾಗಿ ತಿಳಿಯುವದು ಪ್ರೇತ್ಯಭಾವದ ವಿಷಯದಲ್ಲಿ ಮಿಥ್ಯಾಜ್ಞಾನವು. **ಅಪವರ್ಗ**ವೆಂದರೆ ಮೋಕ್ಷವು. ಅಪವರ್ಗವೆಂದರೆ ಭಯವಾಗುತ್ತದೆ. ಏಕೆಂದರೆ ಅಪವರ್ಗದಲ್ಲಿ ಎಲ್ಲಾ ಪದಾರ್ಥಗಳೂ ಹೋಗಿಬಿಡುತ್ತವೆಯಾದ್ದರಿಂದ ನಮಗೆ ಬೇಕಾದದ್ದು ನಾಶವಾಗಿಬಿಡುವದು. ತಿಳಿದವರು ಇಂಥ ಅಪವರ್ಗವನ್ನು ಬಯಸಬಹುದೆ? ಎಂದು ಯೋಚಿಸುವದೂ ಮಿಥ್ಯಾಜ್ಞಾನವೇ.

ಸಾಂಖ್ಯಸಿದ್ಧಾಂತದಲ್ಲಿ ಅವಿವೇಕವನ್ನೂ ಯೋಗದಲ್ಲಿ ಅವಿದ್ಯೆಯನ್ನೂ ಸಂಸಾರಕಾರಣವೆಂದು ಹೇಳಿರುವಂತೆಯೇ ನ್ಯಾಯದಲ್ಲಿ ಮಿಥ್ಯಾಜ್ಞಾನವನ್ನು ಸಕಲಸಂಸಾರಕ್ಕೂ ಕಾರಣವೆಂದು ವರ್ಣಿಸಿರುತ್ತದೆ. ಮಿಥ್ಯಾಜ್ಞಾನದಿಂದ ಇದು

ಬೇಕೆಂಬ ರಾಗ, ಇದು ಬೇಡವೆಂಬ ದ್ವೇಷ, ಏನೂ ತಿಳಿಯದೆಂಬ ಮೋಹ ಇವುಗಳುಂಟಾಗುವವು – ರಾಗದ್ವೇಷಗಳಿಂದಲೇ ಕೆಟ್ಟಬುದ್ಧಿ. ಹೊಟ್ಟೇಕಿಚ್ಚು, ಮೋಸ, ಅತ್ಯಾಶೆ ಮುಂತಾದ ದೋಷಗಳುಂಟಾಗುವವು. ದೋಷಗಳಿಂದ ಒಳ್ಳೆಯ ಅಥವಾ ಕೆಟ್ಟ ಪ್ರವೃತ್ತಿಗಳುಂಟಾಗುವವು. ಒಬ್ಬರನ್ನು ತೊಂದರೆಪಡಿಸುವದು, ಕದಿಯುವದು, ಅಗಮ್ಯಾಗಮನ ಮುಂತಾದವುಗಳನ್ನು ಮಾಡುವದು; ಕಠಿನವಾಕ್ಕು, ಚಾಡಿ, ಅಸಂಬದ್ಧವಾದ ನುಡಿ – ಇವುಗಳನ್ನಾಡುವದು; ಪರರಿಗೆ ದ್ರೋಹವೆಣಿಸುವದು, ಪರರ ಒಡವೆಯನ್ನು ಬಯಸುವದು, ನಾಸ್ತಿಕಬುದ್ಧಿಯನ್ನು ಮಾಡುವದು – ಇವೆಲ್ಲ ಕೆಟ್ಟ ಪ್ರವೃತ್ತಿಯು. ಇದರಂತೆ ಒಬ್ಬರಿಗೆ ಏನನ್ನಾದರೂ ದಾನಮಾಡುವದು, ಒಬ್ಬರನ್ನು ಕಾಪಾಡುವದು, ಒಬ್ಬರನ್ನು ಸೇವಿಸುವದು; ಸತ್ಯವಾಗಿಯೂ ಹಿತವಾಗಿಯೂ ಪ್ರಿಯವಾಗಿಯೂ ಇರುವ ಮಾತನ್ನಾಡುವದು, ವೇದಾಧ್ಯಯನ ಮಾಡುವದು; ಮತ್ತು ಒಬ್ಬರಲ್ಲಿ ದಯೆಯಿಡುವದು, ಆಶೆಯಿಲ್ಲದಿರುವದು, ಶ್ರದ್ಧೆಯುಳ್ಳವನಾಗಿರುವದು – ಇವೆಲ್ಲ ಒಳ್ಳೆಯ ಪ್ರವೃತ್ತಿಯು. ಕೆಟ್ಟಪ್ರವೃತ್ತಿಯಿಂದ ಕೆಟ್ಟಜನ್ಮವೂ ಒಳ್ಳೆಯಪ್ರವೃತ್ತಿಯಿಂದ ಒಳ್ಳೆಯ ಜನ್ಮವೂ ಉಂಟಾಗುತ್ತವೆ. ಜನ್ಮದಿಂದ ದುಃಖವುಂಟಾಗುತ್ತದೆ. ಹೀಗೆ ಮಿಥ್ಯಾಜ್ಞಾನದಿಂದ ದೋಷಗಳೂ ದೋಷಗಳಿಂದ ಪ್ರವೃತ್ತಿಯೂ ಪ್ರವೃತ್ತಿಯಿಂದ ಜನ್ಮವೂ ಜನ್ಮದಿಂದ ದುಃಖವೂ ಇದೊಂದು ತಪ್ಪಿಸಿಕೊಳ್ಳವಾಗದ ಚಕ್ರಭ್ರಮಣೆಯಂತಿರುವದು ಎಡೆಬಿಡದೆ ಉಂಟಾಗುತ್ತಿರುವದೇ ಸಂಸಾರವು.

ಹೀಗೆ ಸಂಸಾರದಲ್ಲಿ ಕಷ್ಟಪಡುತ್ತಿರುವ ಜೀವನಿಗೆ ತತ್ತ್ವಜ್ಞಾನವುಂಟಾಯಿತೆಂದರೆ ಅವನಿಗೆ ದುಃಖದಿಂದ ಬಿಡುಗಡೆಯಾಗುತ್ತದೆ. ಮಿಥ್ಯಾಜ್ಞಾನವೆಂದರೇನೆಂಬುದನ್ನು ಮೇಲೆ ವಿವರಿಸಿರುತ್ತೇವೆಯಷ್ಟೆ; ಇದಕ್ಕೆ ವಿರುದ್ಧವಾಗಿರುವದೇ ತತ್ತ್ವಜ್ಞಾನವು. ಸರಿಯಾದ ಜ್ಞಾನವು ಇದ್ದದ್ದನ್ನು ಇದ್ದಂತೆಯೇ ತಿಳಿಸುವದಾದ್ದರಿಂದ 'ಆತ್ಮನು ಇದ್ದಾನೆ, ಅನಾತ್ಮವು ಆತ್ಮನಲ್ಲ' ಎಂದು ತಿಳಿಯುವದು ಆತ್ಮವಿಷಯಕವಾದ ತತ್ತ್ವಜ್ಞಾನವಾಗುವದು. ದುಃಖವನ್ನು ದುಃಖವೆಂತಲೂ, ಈ ಸಂಸಾರದಲ್ಲಿ ಯಾವದನ್ನೂ ನಂಬಿರಕೂಡದು, ಇದು ಯಾವದೂ ನನ್ನನ್ನು ಕಾಪಾಡುವದಿಲ್ಲ, ಇದೆಲ್ಲ ಸಭಯವಾದದ್ದೇ – ಎಂತಲೂ ತಿಳಿಯುವದು ತತ್ತ್ವಜ್ಞಾನವು. ರಾಗದ್ವೇಷಾದಿಗಳು ಪ್ರವೃತ್ತಿಗೆ ಕಾರಣವೆಂತಲೂ

ಪ್ರವೃತ್ತಿಯಿಂದ ಜನ್ಮವುಂಟೆಂತಲೂ ತಿಳಿಯುವದೂ ತತ್ತ್ವಜ್ಞಾನವೇ. ಸತ್ತು ಹುಟ್ಟುವ ಜೀವನೊಬ್ಬನುಂಟು, ಜನ್ಮಕ್ಕೂ ಸಾವಿಗೂ ಕಾರಣವುಂಟು, ಜನನಮರಣಗಳು ಅನಾದಿಯಾಗಿವೆ, ಅಪವರ್ಗವಾದರೆ ಜನ್ಮಾದಿಗಳಿರುವದಿಲ್ಲ, ಎಂದು ತಿಳಿಯುವದೂ ತತ್ತ್ವಜ್ಞಾನವೇ ಅಪವರ್ಗವು ಶಾಂತಸ್ವರೂಪವಾಗಿದೆ, ಇದರಿಂದ ಎಲ್ಲಾ ಕಷ್ಟವೂ ಭಯವೂ ನಿವಾರಣೆಯಾಗುವದರಿಂದ ತಿಳಿದವರು ಅಗತ್ಯವಾಗಿ ಇದನ್ನು ಬಯಸಬೇಕು ಎಂದು ತಿಳಿಯುವದೂ ತತ್ತ್ವಜ್ಞಾನವೇ.

ಈ ತತ್ತ್ವಜ್ಞಾನವು ಏತರಿಂದ ಉಂಟಾಗುತ್ತದೆಯೆಂದರೆ, ನೈಯಾಯಿಕರು ಎರಡು ವಿಧವಾದ ಸಾಧನೆಯನ್ನು ಹೇಳುತ್ತಾರೆ. ಯಮನಿಯಮಗಳಿಂದ ಅಧರ್ಮವನ್ನೆಲ್ಲಾ ಕಳೆದುಕೊಂಡು ಧರ್ಮಾಭಿವೃದ್ಧಿಯನ್ನು ಮಾಡಿಕೊಳ್ಳುತ್ತಾ ಯೋಗಶಾಸ್ತ್ರದಲ್ಲಿ ಹೇಳಿರುವಂತೆ ಅಧ್ಯಾತ್ಮವಿಧಿಯನ್ನರಿತು ಅನುಷ್ಠಾನಮಾಡುವದೊಂದು ಸಾಧನ; ಜ್ಞಾನವನ್ನು ಸರಿಯಾಗಿ ಗ್ರಹಿಸಿಕೊಂಡು ಅದನ್ನೇ ಚಿಂತನೆಮಾಡುತ್ತಾ ಆತ್ಮವಿದ್ಯೆಯನ್ನು ಬಲ್ಲವರೊಡನೆ ವಾದಮಾಡಿ ಜ್ಞಾನವನ್ನು ಪರಿಪಾಕಗೊಳಿಸಿಕೊಳ್ಳುವದು ಮತ್ತೊಂದು ಸಾಧನ. ನ್ಯಾಯಶಾಸ್ತ್ರದಲ್ಲಿ ಈ ಎರಡು ಬಗೆಯ ಸಾಧನಗಳಲ್ಲಿ ಮುಖ್ಯವಾಗಿ ಎರಡನೆಯ ಸಾಧನದ ರೀತಿಯನ್ನು ವಿವರವಾಗಿ ಪ್ರತಿಪಾದಿಸಿರುತ್ತದೆ.

ಈ ತತ್ತ್ವಜ್ಞಾನದಿಂದ ಮೋಕ್ಷವುಂಟಾಗುವ ಕ್ರಮವನ್ನು ಗೌತಮ ಋಷಿಗಳು ಹೀಗೆಂದು ವರ್ಣಿಸಿರುವರು:

**ಸೂ|| ದುಃಖಜನ್ಮಪ್ರವೃತ್ತಿದೋಷಮಿಥ್ಯಾಜ್ಞಾನಾನಾಮುತ್ತರೋತ್ತರಾಪಾಯೇ ತದನಂರಾಪಾಯಾದಪವರ್ಗಃ ||**

ಇದರ ಅಭಿಪ್ರಾಯವೇನೆಂದರೆ (ಹಿಂದೆ ವರ್ಣಿಸಿರುವ ಮಿಥ್ಯಾಜ್ಞಾನದಿಂದ ಜೀವನಾದವನು) ಶರೀರಾದಿಗಳು ನಾಶವಾದರೆ ತಾನೇ ನಾಶವಾಗುವೆನೆಂದು ತಿಳಿದು, ಮತ್ತೆ ಮತ್ತೆ ಧರ್ಮಾಧರ್ಮಗಳಿಂದ ಇವುಗಳನ್ನು ಸಂಪಾದಿಸುತ್ತಿರುವನಷ್ಟೆ. ಆದರೆ ಯಾವನಿಗೆ ಪ್ರಮೇಯವಾದ ಆತ್ಮಾದಿಗಳ ವಿಷಯದಲ್ಲಿ ಸರಿಯಾದ ಜ್ಞಾನವುಂಟಾಗುವದೋ ಅವನಿಗೆ ಆತ್ಮಾದಿಗಳ ವಿಷಯಕ್ಕೆ ಬಂದಿದ್ದ ಮಿಥ್ಯಾಜ್ಞಾನವು ನಾಶವಾಗುತ್ತದೆ. ಮಿಥ್ಯಾಜ್ಞಾನವು ಹೋಗಲು ಅವುಗಳಿಂದುಂಟಾಗಬೇಕಾದ ರಾಗದ್ವೇಷ ಮೋಹಗಳೆಂಬ ದೋಷಗಳು ನಾಶವಾಗುತ್ತವೆ. ದೋಷಗಳೇ

ಧರ್ಮಾಧರ್ಮರೂಪವಾದ ಪ್ರವೃತ್ತಿಗೆ ಕಾರಣವಾಗಿರುವದರಿಂದ ದೋಷನಾಶವಾದ ಮೇಲೆ ಪ್ರವೃತ್ತಿಯೂ ಇಲ್ಲವಾಗುತ್ತದೆ. ಪ್ರವೃತ್ತಿಯಿಂದಲೇ ಜನ್ಮವುಂಟಾಗುತ್ತದೆ. ಆದಕಾರಣ ಪ್ರವೃತ್ತಿಯು ಯಾವಾತನಿಗೆ ನಾಶವಾಯಿತೋ ಅವನಿಗೆ ಜನ್ಮವೇ ಇಲ್ಲವಾಗುವದು. ಜನ್ಮವೇ ದುಃಖಕ್ಕೆ ಕಾರಣಾವಾಗಿರುವದರಿಂದ ಜನ್ಮವಿಲ್ಲದವನಿಗೆ ದುಃಖವೂ ಇರುವದಿಲ್ಲ. ಹೀಗೆ ದುಃಖ, ಜನ್ಮ, ಪ್ರವೃತ್ತಿ, ದೋಷ, ಮಿಥ್ಯಾಜ್ಞಾನ – ಇವುಗಳಲ್ಲಿ ಮುಂದೆ ಮುಂದೆ ಹೇಳಿರುವ ಕಾರಣವು ನಾಶವಾದ ಹಾಗೆ ಹಿಂದೆ ಹಿಂದೆ ಹೇಳಿರುವ ಕಾರ್ಯವು ನಾಶವಾಗುವದು. ಇದರಿಂದ ಸರ್ವದುಃಖಧ್ವಂಸರೂಪವಾದ ಮೋಕ್ಷವು ಪ್ರಾಪ್ತಿಯಾಗುವದು.

★★★★★

# ವೈಶೇಷಿಕದರ್ಶನ

ಸಾಂಖ್ಯಯೋಗದರ್ಶನಗಳಿಗೆ ಹೇಗೆ ಬಹುಸಮೀಪವಾದ ಸಂಬಂಧವಿರುವದೋ ಹಾಗೆಯೇ ನ್ಯಾಯವೈಶೇಷಿಕಗಳಿಗೂ ಬಹುಸಮೀಪವಾದ ಸಂಬಂಧವಿರುವದು. ನ್ಯಾಯದರ್ಶನದಲ್ಲಿ ಜ್ಞಾನಾಜ್ಞಾನಗಳ ಲಕ್ಷಣವನ್ನು ವಿಚಾರಮಾಡಿದ್ದಾಯಿತು. ಈಗ ವೈಶೇಷಿಕರು ಈ ವಿಷಯದಲ್ಲಿ ಏನು ಹೇಳುತ್ತಾರೆಂಬುದನ್ನು ತಿಳಿಯಬೇಕಾಗಿದೆ.

ಈ ಶಾಸ್ತ್ರದಲ್ಲಿ ಅಜ್ಞಾನಕ್ಕೆ ಅವಿದ್ಯೆಯೆಂದು ಹೆಸರು. ಈ ಅವಿದ್ಯೆಯು ಸಂಶಯ, ಸ್ವಪ್ನ, ಅನಧ್ಯವಸಾಯ, ವಿಪರ್ಯಯ ಎಂದು ನಾಲ್ಕು ಬಗೆಯಾಗಿ ರುವದು. ವಸ್ತುವನ್ನು ಸಾಮಾನ್ಯಾಕಾರವಾಗಿ ಕಂಡು ವಿಶೇಷರೂಪನ್ನು ಕಾಣದೆ, ತಾನು ನೆನಸಿಕೊಳ್ಳುವ ವಿಶೇಷದಿಂದ ಬರುವ ಜ್ಞಾನವು ಸಂಶಯವು. ಹೇಗೆಂದರೆ ಮಬ್ಬುಗತ್ತಲೆಯಲ್ಲಿ ಏನೋ ವಸ್ತುವಿರುವಂತೆ ತೋರುತ್ತದೆ; ಆದರೆ ಅದರ ಭಾಗಗಳು ಸ್ಪಷ್ಟವಾಗಿ ತೋರುತ್ತಿರುವದಿಲ್ಲ; ಒಂದು ಬಗೆಯಿಂದ ನೋಡಿದರೆ ಇದು ಕೊಂಬೆ, ಇದು ರೆಂಬೆ, ಇದು ಪೊಟ್ಟರೆ ಎಂದು ತಿಳಿಯಬಹುದು; ಇನ್ನೊಂದು ಬಗೆಯಿಂದ ನೋಡಿದರೆ ಇದು ತಲೆ, ಇದು ಕೈ, ಇದು ಕಾಲು – ಎಂದೂ ತಿಳಿಯಬಹುದು. ಹೀಗೆ ಎರಡು ಬಗೆಯಲ್ಲಿ ವಿಶೇಷದ ನೆನಪಾದ್ದರಿಂದ ಎರಡು ಬಗೆಯಿಂದಲೂ ಹೊಯ್ದಾಡುವ ಈ ಜ್ಞಾನಕ್ಕೆ ಸಂಶಯವೆಂದು ಹೆಸರು.

ಸ್ವಪ್ನವೆಂಬುದು ಪ್ರಸಿದ್ಧವಾಗಿ ಎಲ್ಲರಿಗೂ ಗೊತ್ತಿರುವದೇ. ನಿದ್ರೆಯಲ್ಲಿ ತಾನು ಕಾಣುವ ವಸ್ತುಗಳು ನಿಜವಾಗಿ ಇರುವದಿಲ್ಲ, ಆದರೂ ಎಚ್ಚರದ ಸಂಸ್ಕಾರದಿಂದಲೂ ತಾನು ಮಾಡಿರುವ ಪುಣ್ಯಪಾಪಗಳ ಫಲವಾಗಿಯೂ ಬಗೆ ಬಗೆಯ ನೋಟಗಳು ನಮಗೆ ತೋರಿಕೊಳ್ಳುವವು. ಈ ಅರಿವೇ ಸ್ವಪ್ನವೆಂಬ ಅವಿದ್ಯೆಯು. ಇನ್ನು ಕೆಲವುವೇಳೆ ಸಾಮಾನ್ಯವಾದ ಆಕಾರದಲ್ಲಿ ಜ್ಞಾನವಾಗಿ ಇಂಥದ್ದೆಂಬ ನಿಶ್ಚಯವೂ ಆಗುವದಿಲ್ಲ, ಸಂಶಯವೂ ಆಗಿರುವದಿಲ್ಲ. ಈ ಬಗೆಯ ಅರಿವಿಗೆ ಅನಧ್ಯವಸಾಯವೆಂಬ ಹೆಸರು. ಮತ್ತೂ ಕೆಲವು ಸಂದರ್ಭಗಳಲ್ಲಿ ಒಂದನ್ನು ಮತ್ತೊಂದು ಪದಾರ್ಥವೆಂದು ನಿಶ್ಚಯಿಸಿಯೇಬಿಡುತ್ತೇವೆ. ಹಗ್ಗವನ್ನು ಹಾವೆಂದೂ ಕಪ್ಪೆಯಚಿಪ್ಪನ್ನು ಬೆಳ್ಳಿಯೆಂದೂ ನಿರ್ಣಯಿಸುವದು ಈ ಬಗೆಯ ಜ್ಞಾನವು. ಇದಕ್ಕೆ ನಮ್ಮ ಕಣ್ಣು ಮುಂತಾದ ಇಂದ್ರಿಯದ ದೋಷವೂ, ಮೊದಲು ನಾವು ನೋಡಿರುವ ಹಾವು-ಬೆಳ್ಳಿ ಮುಂತಾದವುಗಳ ಜ್ಞಾನದ ಸಂಸ್ಕಾರದೋಷವೂ, ಕಾರಣವಾಗಿ ರುವವು. ಆ ಸಂದರ್ಭಗಳಲ್ಲಿ ನಾವು ಒಂದು ಪದಾರ್ಥವನ್ನು ಮತ್ತೊಂದೆಂತಲೇ ಖಂಡಿತವಾಗಿಯೇ ತಿಳಿದುಬಿಡುತ್ತೇವಷ್ಟೆ. ಆ ಜ್ಞಾನಕ್ಕೆ ವಿಪರ್ಯಯವೆಂದು ಹೆಸರು. ಹೀಗೆ ಸಂಶಯ, ಸ್ವಪ್ನ, ಅನಧ್ಯವಸಾಯ, ವಿಪಯ - ಇವು ನಾಲ್ಕೂ ಸರಿಯಾದ ತಿಳಿವಳಿಕೆಯಲ್ಲದ್ದರಿಂದ ಅವಿದ್ಯೆಯೆನಿಸುವವು.

ಈ ದರ್ಶನದಲ್ಲಿ ದೋಷರಹಿತವಾದ ಜ್ಞಾನವನ್ನು ವಿದ್ಯೆ ಎನ್ನುವರು. ಈ ತತ್ತ್ವಜ್ಞಾನವು ಹೇಗೆ ಉಂಟಾಗುತ್ತದೆಯೆಂಬುದನ್ನು ವೈಶೇಷಿಕರು ತಿಳಿಸಿರುವದು ಹೇಗೆಂದರೆ:

**ಧರ್ಮವಿಶೇಷಪ್ರಸೂತಾದ್ದ್ರವ್ಯಗುಣಕರ್ಮಸಾಮಾನ್ಯ**
**ವಿಶೇಷಸಮವಾಯಾನಾಂ ಪದಾರ್ಥಾನಾಂ ಸಾಧರ್ಮ್ಯ**
**ವೈಧರ್ಮ್ಯಾಭ್ಯಾಂ ತತ್ತ್ವಜ್ಞಾನಾನ್ನಿಃಶ್ರೇಯಸಮ್॥**

ದ್ರವ್ಯ, ಗುಣ, ಕರ್ಮ, ಸಾಮಾನ್ಯ, ವಿಶೇಷ, ಸಮವಾಯ - ಎಂದು ಪದಾರ್ಥಗಳು ಆರು ವಿಧ. ಇವುಗಳಲ್ಲಿ ಒಂದಕ್ಕೊಂದಕ್ಕೆ ಇರುವ ಹೋಲಿಕೆಯನ್ನೂ ಹೆಚ್ಚುಕಡಿಮೆಯನ್ನೂ ತಿಳಿದರೆ ತತ್ತ್ವಜ್ಞಾನವಾಯಿತು. ಈ ತತ್ತ್ವಜ್ಞಾನದಿಂದಲೇ ಮೋಕ್ಷವಾಗುವದು.

ಇಲ್ಲಿ ಹೇಳಿರುವ ಆರು ಪದಾರ್ಥಗಳನ್ನೂ ಅವುಗಳ ಸಾಮ್ಯವೈಷಮ್ಯಗಳನ್ನೂ

ವಿವರಿಸುವದಕ್ಕೆ ಇದು ಸ್ಥಳವಲ್ಲ. ಆದರೆ ಇಲ್ಲಿ ಇಷ್ಟು ಪ್ರಕೃತವಾಗಿರುವದು: ನ್ಯಾಯಶಾಸ್ತ್ರದಲ್ಲಿ ಪ್ರಮಾಣ (ನಿಜವಾದ ಸಾಧನ) ಪ್ರಮೇಯ (ಅಂಥ ಜ್ಞಾನದ ವಿಷಯ) – ಎಂದು ಎರಡು ದೊಡ್ಡ ವಿಭಾಗಗಳನ್ನು ಮಾಡಿ ಇವುಗಳ ಜ್ಞಾನದಿಂದಲೇ ಮೋಕ್ಷವಾಗುವದೆಂದು ಹೇಳಿರುತ್ತದೆ. ಪ್ರಮೇಯವೆಂಬ ಗುಂಪಿನಲ್ಲಿ ಆತ್ಮ, ಶರೀರ, ಇಂದ್ರಿಯ, ವಿಷಯ, ಬುದ್ಧಿ, ಮನಸ್ಸು, ಪ್ರವೃತ್ತಿ, ದೋಷ, ಪ್ರೇತ್ಯಭಾವ, ಫಲ, ದುಃಖ, ಅಪವರ್ಗ ಎಂಬ ಪಾದಾರ್ಥಗಳನ್ನು ಸೇರಿಸಿರುತ್ತದೆ. ವೈಶೇಷಿಕದಲ್ಲಿಯೋ ಎಂದರೆ ದ್ರವ್ಯ, ಗುಣ ಮುಂತಾದ ಆರು ಪಂಗಡದಲ್ಲಿ ಇದೆಲ್ಲವೂ ಸೇರಿರುತ್ತವೆ. ಅಂತೂ ಪದಾರ್ಥಗಳ ಯಥಾರ್ಥಜ್ಞಾನದಿಂದ ಮೋಕ್ಷವೆಂಬದರಲ್ಲಿ ಎರಡು ದರ್ಶನಕ್ಕೂ ಸಮಾನ ಅಭಿಪ್ರಾಯವುಂಟು. ಆದರೆ ಮಿಥ್ಯಾಜ್ಞಾನವೇ ಸಂಸಾರಕ್ಕೆ ಸಾಕ್ಷಾತ್ಕಾರಣವೆಂದು ನ್ಯಾಯದಲ್ಲಿ ಕಂಠೋಕ್ತವಾಗಿ ಹೇಳಿದ್ದರೆ; ವೈಶೇಷಿಕದಲ್ಲಿ ಜ್ಞಾನದಿಂದ ಮೋಕ್ಷವಾಗುವದು ಎಂದು ಹೇಳಿರುವದರಿಂದ ಅಜ್ಞಾನವೇ ಸಂಸಾರಬಂಧಕ್ಕೆ ಕಾರಣವು ಎಂದಂತೆ ಆಯಿತೆಂದು ಇಟ್ಟುಕೊಳ್ಳಬೇಕಾಗುವದು.

ಇನ್ನು ನ್ಯಾಯಶಾಸ್ತ್ರದಲ್ಲಿ ಹೇಳಿರುವಂತೆಯೇ ಇಲ್ಲಿಯೂ ತತ್ತ್ವಜ್ಞಾನಕ್ಕೆ ಸಹಕಾರಿಯಾಗಿ ಮತ್ತೊಂದು ಸಾಧನವನ್ನೂ ಹೇಳಿದೆ. ಇಲ್ಲಿಯೂ ಯೋಗದಿಂದಾಗುವ ಮನಸ್ಸಂಸ್ಕಾರದಿಂದ ಆತ್ಮಜ್ಞಾನವಾಗುವದೆಂದು ಒಪ್ಪಿಕೊಂಡಿರುತ್ತದೆ. ಇದರ ಜೊತೆಗೆ ಧರ್ಮವನ್ನೂ ಉಪದೇಶಮಾಡಿದೆ. ಧರ್ಮವೆಂದರೆ ಅಭ್ಯುದಯನಿಃಶ್ರೇಯಸಗಳಿಗೆ ಕಾರಣವಾದದ್ದು. ಅಭ್ಯುದಯವೆಂದರೇನೆಂಬ ವಿಷಯದಲ್ಲಿ ವ್ಯಾಖ್ಯಾನಕಾರರು ಬೇರೆಬೇರೆ ಅಭಿಪ್ರಾಯಪಟ್ಟಿರುವರು. ಸುಖಪ್ರಾಪ್ತಿಯೂ ದುಃಖನಿವೃತ್ತಿಯೂ ಏತರಿಂದಾಗುವದೋ ಅದೇ ಧರ್ಮವೆಂದು ಕೆಲವರು ಹೇಳಿದ್ದಾರೆ. ಈ ವ್ಯಾಖ್ಯಾನದಲ್ಲಿ ಸ್ವರ್ಗವೆಂಬ ಸುಖವನ್ನು ಹೊಂದುವದೇ ಅಭ್ಯುದಯವು, ಎಲ್ಲಾ ಸಂಸಾರದ ದುಃಖಗಳನ್ನೂ ಕಳೆದುಕೊಳ್ಳುವದೆಂಬ ಮೋಕ್ಷವೇ ನಿಃಶ್ರೇಯಸವು. ದುಃಖವಿಲ್ಲದಿರುವದೇ ಮೋಕ್ಷವೆಂಬ ವಿಷಯದಲ್ಲೂ ನ್ಯಾಯವೈಶೇಷಿಕ ದರ್ಶನಗಳು ಒಂದೇ ಅಭಿಪ್ರಾಯವುಳ್ಳವಾಗಿದೆ.

ಸಾಂಖ್ಯಯೋಗಗಳು ಹೇಗೆ ಜತೆಯ ದರ್ಶನಗಳೋ ಹಾಗೆಯೇ ನ್ಯಾಯವೈಶೇಷಿಕದರ್ಶನಗಳೂ ಸಮಾನಶಾಸ್ತ್ರಗಳೆಂದು ಮೊದಲೇ ಹೇಳಿದೇವಷ್ಟೆ. ಈ ಎರಡು ಶಾಸ್ತ್ರಗಳನ್ನೂ ಪರೀಕ್ಷೆಮಾಡಿದರೆ ನ್ಯಾಯದಲ್ಲಿ

ವಿಷಯಗಳು ಪ್ರತಿಪಾದಿತವಾಗಿರುವಷ್ಟು ಚೆನ್ನಾಗಿ ಈ ದರ್ಶನದಲ್ಲಿ ಹೇಳಿಲ್ಲ. ಇದರಿಂದ ಈ ದರ್ಶನವು ಮೊದಲು ಹುಟ್ಟಿತೆಂದೂ ಆಮೇಲೆ ನ್ಯಾಯಶಾಸ್ತ್ರವು ಆಯಿತೆಂದೂ ಕೆಲವರು ಅಭಿಪ್ರಾಯಪಡುತ್ತಾರೆ. ಆದರೆ ಈ ವಿಷಯದಲ್ಲಿ ತತ್ತ್ವಶೋಧಕರೆಲ್ಲರೂ ಒಪ್ಪಿಗೆಯನ್ನು ಕೊಟ್ಟಿರುವುದಿಲ್ಲ. ಇವೆರಡು ದರ್ಶನಗಳ ಬೇರೆಬೇರೆ ಪ್ರಧಾನವಿಷಯಗಳು ಯಾವವೆಂಬುದನ್ನೂ ವಿವಾದವಿಲ್ಲದಂತೆ ನಿರ್ಣಯಮಾಡುವದು ಕಷ್ಟವಾಗಿರುವದು. ಜಗತ್ತು ಪರಮಾಣುಗಳ ಸೇರುವಿಕೆಯಿಂದಾಗಿರುವದೆಂಬುದು ವೈಶೇಷಿಕಶಾಸ್ತ್ರದಲ್ಲಿಯೇ ಹೆಚ್ಚಾಗಿ ಕಂಡುಬಂದರೂ ನ್ಯಾಯಶಾಸ್ತ್ರದಲ್ಲಿಯೂ ಅಣುಗಳನ್ನು ಒಪ್ಪಿರುತ್ತಾರೆ. ನಿತ್ಯಪದಾರ್ಥಗಳಲ್ಲಿರುವ ವಿಶೇಷಗಳೆಂಬ ಪದಾರ್ಥಗಳನ್ನು ಒಪ್ಪಿರುವದರಿಂದ ವೈಶೇಷಿಕವೆಂಬ ಹೆಸರು ಬಂತೆಂದು ಕೆಲವರು ಊಹಿಸುತ್ತಾರೆ. ಇದು ಹೇಗಾದರೂ ಇರಲಿ. ವೈಶೇಷಿಕದರ್ಶನಕ್ಕೂ ನ್ಯಾಯದರ್ಶನಕ್ಕೂ ವಿಶೇಷವಾಗಿ ಹೆಚ್ಚುಕಡಿಮೆ ಯಾವದೂ ಇಲ್ಲವೆಂಬುದೇನೋ ನಿಶ್ಚಿತವಾದ ಮಾತು.

ವೈಶೇಷಿಕರ ಮತವನ್ನಾಗಲಿ ನ್ಯಾಯಮತವನ್ನಾಗಲಿ ಮನ್ವಾದಿ ಸ್ಮೃತಿಗಳಲ್ಲಿ ಸಾಂಖ್ಯಯೋಗದರ್ಶನಗಳಂತೆ ಉಪಯೋಗಮಾಡಿಕೊಂಡಿರುವದು ಕಂಡುಬರುವದಿಲ್ಲ. ತಾರ್ಕಿಕರನ್ನು ಹೇತುವಿದ್ಯೆಯನ್ನು ಅರಿತವರೆಂದು ಅಲ್ಲಲ್ಲಿ ತುಸು ನಿಂದಿಸಿರುವ ವಾಕ್ಯಗಳು ಮಹಾಭಾರತದಲ್ಲಿಯೂ ರಾಮಾಯಣದಲ್ಲಿಯೂ ಸಿಕ್ಕುತ್ತವೆ. ವೈಶೇಷಿಕಮತವನ್ನು ಬ್ರಹ್ಮಸೂತ್ರದಲ್ಲಿ ಖಂಡನೆಮಾಡಿರುತ್ತಾರೆ. ಆರಂಭವಾದ, ಆತ್ಮನನ್ನು ಇಚ್ಛಾದ್ವೇಷಗಳೇ ಮುಂತಾದ ಚಿಹ್ನೆಗಳಿಂದ ಊಹಿಸಿ ತಿಳಿಯಬಹುದೆಂಬ ವಾದ, ಸಮವಾಯವೆಂಬ ಸಂಬಂಧವನ್ನು ಒಪ್ಪಿರುವದು– ಇವೇ ಮುಂತಾದ ವೈಶೇಷಿಕರ ಮತವನ್ನು ಶ್ರೀಶಂಕರಚಾರ್ಯರೇ ಮುಂತಾದ ಭಾಷ್ಯಕಾರರೂ ನಿರಾಕರಿಸಿದ್ದಾರೆ.

ಹೀಗಿದ್ದರೂ ನ್ಯಾಯವೈಶೇಷಿಕಮತಗಳು ಕೇವಲ ಖಂಡನೆಯ ದೃಷ್ಟಿಯಿಂದ ತಿಳಿಯತಕ್ಕವೆಂದು ಭಾವಿಸಕೂಡದು. 'ಪರಮತಮಪ್ರತಿಷಿದ್ಧಂ ಅನುಮತಂ ಭವತಿ' ಎಂದರೆ 'ಮತ್ತೊಂದು ಮತದಲ್ಲಿ ಯಾವ ಭಾಗವನ್ನು ನಿರಾಕರಣಮಾಡಲಿಲ್ಲವೋ ಅದನ್ನು ಒಪ್ಪಿದಂತೆ' ಎಂದು ನ್ಯಾಯವಿರುವದು. ನ್ಯಾಯವೈಶೇಷಿಕರ ಪರಮಸಿದ್ಧಾಂತವನ್ನು ಇತರ ದರ್ಶನಕಾರರು ಒಪ್ಪದಿದ್ದರೂ ಪ್ರಮಾಣಪ್ರಮೇಯಾದಿವ್ಯವಹಾರ, ಅನುಮಾನಪ್ರಮಾಣ, ಹೇತ್ವಾಭಾಸಗಳ

ನಿರೂಪಣೆ - ಇವೇ ಮುಂತಾದ ಸಕಲತಂತ್ರಸಮಾನವಾದ ವಿಷಯಗಳನ್ನು ವಿಚಾರಕ್ಕಾಗಿ ಬಹುಮಟ್ಟಿಗೆ ಎಲ್ಲರೂ ಇಟ್ಟುಕೊಂಡಿರುವರು. ಈಚೆಗೆ ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಮುಂತಾದ ವೇದಾಂತದರ್ಶನಗಳ ಪ್ರಸ್ಥಾನಗಳನ್ನು ಬೆಳೆಸಿರುವ ಕೆಲಕೆಲವು ಗ್ರಂಥಕಾರರು ಸ್ವತಂತ್ರವಾಗಿಯೇ ಪ್ರಮಾಣಲಕ್ಷಣ ಮುಂತಾದವನ್ನೂ ಹೊಸದಾಗಿ ಏರ್ಪಾಡುಮಾಡಿಕೊಂಡಿರುವದೂ ನಿಜವೆ; ಆದರೆ ಇದುವರೆಗೂ ಎಲ್ಲಾ ಮತಾನುಯಾಯಿಗಳೂ ನ್ಯಾಯವೈಶೇಷಿಕ ಶಾಸ್ತ್ರಗಳನ್ನು ತಾವು ಕಲಿಯುತ್ತಲೂ ಶಿಷ್ಯರಿಗೆ ಕಲಿಸುತ್ತಲೂ ಇರುವದನ್ನು ನೋಡಿದರೆ ಈ ಶಾಸ್ತ್ರಗಳು ಪ್ರಮಾಣತರ್ಕಗಳ ಸ್ವರೂಪವನ್ನು ಗೊತ್ತುಮಾಡುವದಕ್ಕೆ ವೇದಾಂತಕ್ಕೆ ಸಹಾಯಕಗಳೆಂತ ಇವರು ಭಾವಿಸಿರುವರೆಂತಲೇ ಹೇಳಬೇಕಾಗಿದೆ.

★★★★★

# ಪೂರ್ವಮೀಮಾಂಸೆ

ಜ್ಞಾನದಿಂದ ಮೋಕ್ಷವೆಂದು ಹೇಳುವವರಲ್ಲಿ ಜ್ಞಾನವಿಧಿವಾದಿಗಳೆಂದೂ ವಸ್ತುತಂತ್ರಜ್ಞಾನವಾದಿಗಳೆಂದೂ ಮುಖ್ಯವಾಗಿ ಎರಡು ಪಂಗಡಗಳಿರುವವೆಂದು ಹಿಂದೆ ತಿಳಿಸಿರುತ್ತದೆಯಷ್ಟೆ. ವಸ್ತುತಂತ್ರಜ್ಞಾನವಾದಿಗಳಲ್ಲಿ ಜ್ಞಾನ ಮತ್ತು ಅಜ್ಞಾನ - ಇವುಗಳ ಸ್ವರೂಪದ ವಿಷಯಕ್ಕೆ ಇರುವ ಭಿನ್ನಾಭಿಪ್ರಾಯಗಳನ್ನು ಹಿಂದೆ ಸ್ವಲ್ಪಮಟ್ಟಿಗೆ ತಿಳಿಸಿದ್ದಾಗಿದೆ. ಸಾಂಖ್ಯ, ಯೋಗ, ನ್ಯಾಯ, ವೈಶೇಷಿಕ - ಈ ದರ್ಶನಗಳಲ್ಲಿ ಜ್ಞಾನವೆಂದರೇನೆಂಬುದನ್ನು ಹೇಳಿದ್ದಾಯಿತು. ಈಗ ಪೂರ್ವಮೀಮಾಂಸ ಮತ್ತು ಉತ್ತರಮೀಮಾಂಸ ಇವುಗಳ ದೃಷ್ಟಿಯಿಂದ ಜ್ಞಾನವೆಂದರೆ ಏನೆಂಬುದನ್ನು ವಿಚಾರಮಾಡುವದಕ್ಕೆ ಸಮಯವಾಗಿರುವದು. ಈ ಲೇಖನದಲ್ಲಿ ಪೂರ್ವಮೀಮಾಂಸದಲ್ಲಿ ಜ್ಞಾನಸ್ವರೂಪವೇನು ಎಂಬುದನ್ನು ಸಂಕ್ಷೇಪವಾಗಿ ತಿಳಿಸುತ್ತೇವೆ.

ಮೀಮಾಂಸಕರು ಜ್ಞಾನದಿಂದಲೇ ಸಾಕ್ಷಾತ್ತಾಗಿ ಮೋಕ್ಷವುಂಟಾಗುವದೆಂಬುದನ್ನು ಒಪ್ಪುವದಿಲ್ಲ. ಅವರ ಮತದಲ್ಲಿ ಧರ್ಮಾಧರ್ಮಗಳು ನಾಶವಾಗುವದರಿಂದ ಸುಖದುಃಖಗಳು ನಾಶವಾಗುವವು, ಆಮೇಲೆ

ಮೋಕ್ಷವಾಗುವದು. ಆದರೂ ಆತ್ಮಜ್ಞಾನವು ಅವಶ್ಯಕವಾದದ್ದೆಂದು ಈ ದರ್ಶನದವರೂ ಒಪ್ಪುತ್ತಾರೆ. ಆತ್ಮಜ್ಞಾನವು ಕರ್ಮಕ್ಕೆ ಉಪಯೋಗವಾಗುತ್ತದೆ. ಆ ಮೂಲಕವಾಗಿ ಮೋಕ್ಷಕ್ಕೂ ಉಪಯೋಗವಾಗುತ್ತದೆ - ಎಂದು ಇವರು ಹೇಳುತ್ತಾರೆ. ಮೋಕ್ಷಸ್ವರೂಪವನ್ನೂ ಅದಕ್ಕೆ ಸಾಧನವಾದ ಕರ್ಮಸ್ವರೂಪವನ್ನೂ ಈ ದರ್ಶನದವರು ಹೇಗೆ ವರ್ಣಿಸುವರೆಂಬುದನ್ನು ಸಾಧನವಿಚಾರವನ್ನು ಪ್ರಸ್ತಾಪಿಸುವಾಗ ತಿಳಿಸಬಹುದಾಗಿರುವದರಿಂದ ಸದ್ಯಕ್ಕೆ ಜ್ಞಾನದ ಸ್ವರೂಪವನ್ನೂ ಉಪಯೋಗವನ್ನೂ ಇಲ್ಲಿ ವಿವರಿಸಿದರೆ ಸಾಕಾಗಿದೆ.

ಮೀಮಾಂಸದಲ್ಲಿ ಜ್ಞಾನವೆಂದರೆ ಆತ್ಮಜ್ಞಾನವು. ಶರೀರಕ್ಕಿಂತ ಬೇರೆಯಾಗಿ ಆತ್ಮನಿದಾನೆಂದು ತೋರಿಸುವದಕ್ಕೆ ಶಬರಸ್ವಾಮಿಗಳು ಮಾಡಿರುವ ಭಾಷ್ಯ, ಕುಮಾರಿಲಭಟ್ಟರ ವಾರ್ತಿಕ, ಮುಂತಾದ ಗ್ರಂಥಗಳಲ್ಲಿ ವಿಸ್ತಾರವಾಗಿ ಬರೆದಿರುತ್ತದೆ. ನಮ್ಮ ಶರೀರದಲ್ಲಿ ಯಾವನು ಉಸಿರನ್ನು ಮೇಲಕ್ಕೂ ಕೆಳಕ್ಕೂ ಹಾಕುತ್ತ ಕಣ್ಣನ್ನು ಮುಚ್ಚುತ್ತಲೂ; ತೆರೆಯುತ್ತಲೂ ಇರುವನೋ ಅವನೇ ಆತ್ಮನು. ಯಾವದಾದರೊಂದು ವಸ್ತುವಿನಲ್ಲಿರುವ ಗುಣಗಳು ತಮಗೆ ವಿರುದ್ಧವಾದ ಗುಣಗಳುಂಟಾದರೆ ನಾಶವಾಗುವವು. ಉದಾಹರಣೆಗೆ ಕೂದಲಿನಲ್ಲಿ ಬಿಳುಪು ಉಂಟಾದರೆ ಅದರಲ್ಲಿ ಮೊದಲಿದ್ದ ಕಪ್ಪು ಹೋಗಿಬಿಡುವದು, ಆ ವಸ್ತು ನಾಶವಾದರೂ ಆ ಗುಣಗಳು ಹೋಗಿಬಿಡುವವು. ಏಕೆಂದರೆ ವಸ್ತುವೇ ಇಲ್ಲದ ಮೇಲೆ ಗುಣಗಳು ಎಲ್ಲಿದ್ದಾವು? ಆದರೆ ಉಸಿರುಬಿಡುವದು, ಕಣ್ಣು ಮಿಟಿಕಿಸುವದು ಮುಂತಾದ ಗುಣಗಳು ಶರೀರವು ಇರುವಾಗಲೇ ನಾಶವಾಗಿ ಬಿಡುವವು. ಉದಾಹಾರಣೆಗೆ ಸತ್ತವರ ಶರೀರವು ಹಾಗೇ ಇರುತ್ತಿದ್ದರೂ ಅದರಲ್ಲಿ ಪ್ರಾಣಾದಿಗಳು ಕಂಡುಬರುವದಿಲ್ಲ. ಇದಕ್ಕೆ ಕಾರಣವೇನು? ಪ್ರಾಣಾದಿಗಳು ಶರೀರದ ಧರ್ಮವಲ್ಲ. ಇದರಂತೆ ಜ್ಞಾನವು ಶರೀರದ ಧರ್ಮವಲ್ಲ. ಇದೂ ಅಲ್ಲದೆ, ನಮ್ಮಲ್ಲಿ ಸುಖದುಃಖಾದಿಗಳು ಪ್ರತ್ಯಕ್ಷವಾಗಿ ನಮಗೆ ತೋರುತ್ತಿದ್ದರೂ ಮತ್ತೊಬ್ಬರಿಗೆ ಅವು ಗೋಚರವಾಗುವದಿಲ್ಲ. ಆದರೆ ನಮ್ಮ ಶರೀರದ ಗುಣಗಳಾದ ರೂಪವೇ ಮುಂತಾದವು ನಮಗೂ ಗೋಚರವಾಗುತ್ತವೆ, ಮಿಕ್ಕವರಿಗೂ ಗೋಚರವಾಗುತ್ತವೆ. ಹೀಗಿರುವದರಿಂದ ಸುಖದುಃಖಾದಿಗಳೂ ನಮ್ಮ ಶರೀರದ ಗುಣಗಳಲ್ಲವೆಂದು ಸಿದ್ಧವಾಯಿತು. ಹೀಗೆ ಉಸಿರಾಡಿಸುವ ಪ್ರಯತ್ನವು ಶರೀರದ್ದಲ್ಲವಾದ್ದರಿಂದಲೂ

ಸುಖದುಃಖಗಳೂ ಶರೀರದ್ದಲ್ಲವಾದ್ದರಿಂದಲೂ ಇವುಗಳು ಮತ್ತೆ ಯಾವುದೋ ಒಂದು ಪದಾರ್ಥದ ಗುಣವಾಗಿರಬೇಕಷ್ಟೆ. ಆ ಪದಾರ್ಥವೇ ನಮ್ಮ ಆತ್ಮವು.

ಹೀಗೆ ಯುಕ್ತಿಯಿಂದ ಆತ್ಮಸಿದ್ಧಿಯನ್ನು ಮಾಡಿಕೊಂಡರೂ ನಿಜವಾಗಿ ದೇಹಾತ್ಮರಿಗೆ ಭೇದವಿರುವದೆಂದು ಸ್ಪಷ್ಟವಾಗುವದಿಲ್ಲ. ಏಕೆಂದರೆ ನಾನು ಹೋಗುತ್ತೇನೆ, ನಾನು ಕೇಳುತ್ತೇನೆ - ಎಂದು ಮೊದಲಾಗಿ ದೇಹೇಂದ್ರಿಯಗಳ ವಿಷಯದಲ್ಲಿಯೇ ಆತ್ಮವ್ಯವಹಾರವು ಕಾಣಬರುತ್ತಿರುವದು. ಹೀಗಿದ್ದರೂ ನನ್ನ ಶರೀರವು, ನನ್ನ ಇಂದ್ರಿಯವು, ನನ್ನ ಬುದ್ಧಿ - ಎಂದೂ ವ್ಯವಹಾರವಿರುವದರಿಂದ ಆತ್ಮನು ಶರೀರಾದಿಗಳಿಗಿಂತ ಬೇರೆಯಿರಬೇಕೆಂದೂ ಆಗುವದು. ಹಾಗಾದರೆ ಈ ಎರಡು ವ್ಯವಹಾರಗಳು ಒಂದಕ್ಕೊಂದು ವಿರುದ್ಧವಾಗಿರುವದರಿಂದ ಇವೆರಡರಲ್ಲಿ ಯಾವದನ್ನು ನೆಚ್ಚುವದು? ಎಂದರೆ ಇದಕ್ಕೆ ಮೀಮಾಂಸಕರ ಉತ್ತರವೇನೆಂದರೆ ''**ಸ್ವರ್ಗವನ್ನು ಇಚ್ಛಿಸುವಾತನು ಜ್ಯೋತಿಷ್ಟೋಮವನ್ನು ಮಾಡಬೇಕು**'' ಎಂದು ಮುಂತಾಗಿ ಶ್ರುತಿಗಳಲ್ಲಿ ಹೇಳಿರುತ್ತದೆ. ಸ್ವರ್ಗವನ್ನು ಇದೇ ಶರೀರದಿಂದ ಅನುಭವಿಸುವದಕ್ಕಾಗುವದಿಲ್ಲ. ಆದ್ದರಿಂದ ಶ್ರುತಿಯು ಪ್ರಮಾಣವಾರುವದ ರಿಂದಲೂ ಸ್ವರ್ಗಸುಖವು ಜ್ಯೋತಿಷ್ಟೋಮವನ್ನು ಮಾಡಿದಾತನಿಗೆ ಸಿಕ್ಕುವದೆಂದು ಶ್ರುತಿಯಲ್ಲಿ ಹೇಳಿರುವದರಿಂದಲೂ ಶರೀರಕ್ಕಿಂತ ಆತ್ಮನು ಬೇರೆ ಇದಾನೆಂದು ನಿರ್ಣಯಿಸಬೇಕಾಗಿದೆ. ಇದೇ ಮುಂತಾದ ಯುಕ್ತಿಗಳಿಂದ ಆತ್ಮನು ಶರೀರೇಂದ್ರಿ ಯಾದಿಗಳಿಗಿಂತ ಬೇರೆಯಾಗಿ ಇರುತ್ತಾನೆಂತಲೂ ಅಹಂಪ್ರತ್ಯಯಕ್ಕೆ (ನಾನು ಎಂಬ ಅರಿವಿಗೆ) ವಿಷಯನೆಂತಲೂ ಇವನು ವ್ಯಾಪಕ(ಎಲ್ಲೆಲ್ಲಿಯೂ ವ್ಯಾಪಿಸಿರುವ)ನೆಂತಲೂ ಕರ್ತೃ (ಕರ್ಮವನ್ನು ಮಾಡುವನು) ಎಂತಲೂ ಇಂಥ ಆತ್ಮರು ಅನೇಕರೆಂತಲೂ ತಿಳಿಯುವದೇ ಆತ್ಮಜ್ಞಾನವು.

ಆತ್ಮಜ್ಞಾನಕ್ಕಿಂತ ಬೇರೆಯಾದ ಈಶ್ವರನೆಂಬ ಚೇತನವನ್ನು ಮೀಮಾಂಸಕರು ಅಂಗೀಕರಿಸಿರುವದಿಲ್ಲ. ಈಚಿನ ಕೆಲವು ಮೀಮಾಂಸ ಗ್ರಂಥಗಳಲ್ಲಿ ಕರ್ಮವನ್ನು ಈಶ್ವರಾರ್ಪಣೆ ಮಾಡಿದರೆ ಅದಕ್ಕೆ ಉತ್ತಮ ಫಲವು ದೊರೆಯುವದೆಂದು ಹೇಳಿರುತ್ತದೆ; ಆದರೆ ಪ್ರಾಚೀನಗ್ರಂಥಗಳಲ್ಲಿ ಕರ್ಮಕ್ಕೆ ತಾನೇ ಫಲವನ್ನು ಕೊಡುವ ಶಕ್ತಿಯಿರುವದಾಗಿಯೂ ಆ ಶಕ್ತಿಯೇ ಅಪೂರ್ವವೆಂತಲೂ ಬರೆದಿರುತ್ತದೆ.

ಸಾಕ್ಷಾತ್ತಾಗಿ ಜೈಮಿನಿಯ ಸೂತ್ರಗಳನ್ನು ನೋಡಿದರೆ ಈಶ್ವರವಿಚಾರವಾಗಲಿ ಬ್ರಹ್ಮ ವಿಚಾರವಾಗಲಿ ಕಂಡುಬರುವದಿಲ್ಲ. ಮುಖ್ಯವಾಗಿ ಮೀಮಾಂಸದರ್ಶನದಲ್ಲಿ ಕರ್ಮ, ಅದರ ಫಲ, ಮತ್ತು ಅದನ್ನು ಮಾಡುವ ವಿಧಾನ – ಇವೇ ಪ್ರಧಾನವಾಗಿರುವವು.

ಆತಜ್ಞಾನಕ್ಕೆ ಪ್ರಯೋಜನವನ್ನು ಹೇಳುವದರಲ್ಲಿ ಮೀಮಾಂಸಕರು ಎರಡು ಬೇರೆಬೇರೆ ಅಭಿಪ್ರಾಯಪಡುವರು. ಆತ್ಮಜ್ಞಾನಕ್ಕೆ ಶಾಸ್ತ್ರದಲ್ಲಿ ಯಾವ ಫಲವನ್ನೂ ಹೇಳಿರುವದಿಲ್ಲ, ಆದರೂ ಇದನ್ನು ವಿಧಿಸಿರುತ್ತದೆ. ಆದ್ದರಿಂದ ಇದನ್ನು ಪಡೆದವರಿಗೆ ಮೋಕ್ಷವೇ ಆಗುವದೆಂದು ಕಲ್ಪಿಸಿ ಕೊಳ್ಳಬೇಕಾಗಿದೆ. ಹೀಗೆಂದು ಕೆಲವರೆನ್ನುವರು. ಇಲ್ಲಿ ಜ್ಞಾನವೆಂದರೆ ಉಪಾಸನೆಯು. ಈ ಮೀಮಾಂಸಕರ ಮತದಲ್ಲಿ ಉಪನಿಷತ್ತುಗಳಲ್ಲಿ ಹೇಳಿರುವ ಉಪಾಸನಾರೂಪವಾದ ವಾಕ್ಯಗಳಿಗೆ ಮೋಕ್ಷವು ಫಲವಾಗಿರುವದು. ಆತ್ಮಜ್ಞಾನವು ಕರ್ಮಕ್ಕೆ ಉಪಯೋಗಿ ಎಂಬುದು ಮತ್ತೊಂದು ಮತವು. ಈ ಮತದಲ್ಲಿ ಇದುವರೆಗೆ ನಾವು ಮಾಡಿರುವ ಕರ್ಮಗಳ ಫಲವನ್ನು ಅನುಭವಿಸಿಯೇ ತೀರಬೇಕು; ಆದ್ದರಿಂದ ಆ ಕರ್ಮದಿಂದ ಬಿಡುಗಡೆ ಮಾಡುವದಕ್ಕೆ ಜ್ಞಾನದಿಂದ ಆಗಲಾರದು. ಇನ್ನು ಮುಂದೆ ಮಾಡುವ ಧರ್ಮಾಧರ್ಮಗಳನ್ನು ಮತ್ತೆ ರಾಶಿಹಾಕಿಕೊಳ್ಳದೆ ಇರುವದಕ್ಕೆ ಮಾತ್ರ ಜ್ಞಾನವು ಕಾರಣವಾಗಿರುವದು. ಹೇಗೆಂದರೆ ಆತ್ಮನು ನಿತ್ಯವಾಗಿರುವನೆಂದು ಶಾಸ್ತ್ರದಿಂದ ತಿಳಿದವನು ಕರ್ಮಗಳನ್ನು ಮಾಡಿ ಸ್ವರ್ಗಾದಿಸುಖಗಳನ್ನು ಪಡೆಯುತ್ತಾ ಹೋಗುತ್ತಿರುವನು, ತಿಳಿಯದವನು ನಿಷಿದ್ಧಕರ್ಮಗಳನ್ನು ಮಾಡಿ ದುಃಖವನ್ನು ಪಡೆಯುತ್ತಿರುವನು. ಆದರೆ ಸುಖದುಃಖಾದಿಗಳಿಂದ ಬಿಡುಗಡೆ ಹೊಂದಬೇಕೆಂಬವನು ನಿತ್ಯನೈಮಿತ್ತಿಕ ಕರ್ಮಗಳನ್ನು ಮಾಡಿ ಪ್ರತ್ಯವಾಯವೆಂಬ ದೋಷವನ್ನು ತಪ್ಪಿಸಿಕೊಳ್ಳುವನು; ನಿಷಿದ್ಧ ಕರ್ಮವನ್ನು ಬಿಟ್ಟು ಅಧರ್ಮಫಲವನ್ನು ತಪ್ಪಿಸಿಕೊಳ್ಳುವನು; ಒಂದು ಕರ್ಮದ ಫಲವನ್ನುಪಭೋಗಿಸಿ ತೀರಿಸುವನು. ಇದರಿಂದ ಈ ಶರೀರವು ಬಿದ್ದು ಹೋದಮೇಲೆ ಬೇರೆ ಧರ್ಮಾಧರ್ಮಗಳಿಲ್ಲದ್ದರಿಂದ ಮತ್ತೊಂದು ಶರೀರವುಂಟಾಗುವದಿಲ್ಲ. ಈ ರೀತಿಯಲ್ಲಿ ಶರೀರಕ್ಕಿಂತ ಬೇರೆಯಾಗಿ ಆತ್ಮನಿರುವನೆಂಬ ಜ್ಞಾನವು ಮಾಡಬೇಕಾದ ಕರ್ಮಗಳಲ್ಲಿ ಶ್ರದ್ಧೆಯನ್ನುಂಟು ಮಾಡುವದಕ್ಕೂ ನಿಷಿದ್ಧಕರ್ಮಗಳನ್ನು ಬಿಡಿಸುವದಕ್ಕೂ ಕಾರಣವಾಗಿ ಪರಂಪರೆಯಿಂದ ಮೋಕ್ಷ ಸಾಧನವಾಗಿರುವದು.

ಮಿಕ್ಕದರ್ಶನಗಳಿಗೂ ಮೀಮಾಂಸದರ್ಶನಕ್ಕೂ ಇರುವ ಮುಖ್ಯ ಭೇದವೇನೆಂದರೆ, ಇಲ್ಲಿ ವೇದಕ್ಕೇ ಪ್ರಾಧಾನ್ಯವನ್ನು ಕೊಟ್ಟಿರುತ್ತದೆ. ವೇದದಲ್ಲಿ ಮಾಡಬೇಕೆಂದು ಹೇಳಿರುವದೇ ಧರ್ಮವು. ವೇದವಾಕ್ಯವನ್ನು ನೋಡಿ ಅರ್ಥವನ್ನು ನಿರ್ಣಯಿಸುವದೇ ಮೀಮಾಂಸಶಾಸ್ತ್ರದ ಉದ್ದೇಶವು. ಈ ಶಾಸ್ತ್ರದಲ್ಲಿ ಉಪಯೋಗಿಸಿರುವ ಯುಕ್ತಿಗಳೆಲ್ಲ ವೇದದ ಅರ್ಥವನ್ನು ನಿರ್ಣಯಿಸುವದಕ್ಕೇ ಹೊರತು ಸ್ವತಂತ್ರವಾಗಿ ಧರ್ಮದ ಸ್ವರೂಪವನ್ನು ಗೊತ್ತುಮಾಡುವದಕ್ಕಲ್ಲ. ಈ ಕಾರಣದಿಂದ ಈಶ್ವರನಿಗೆ ಅಷ್ಟೊಂದು ಪ್ರಾಧಾನ್ಯವಿಲ್ಲದಿದ್ದರೂ ವೇದಪ್ರಾಮಾಣ್ಯವನ್ನು ಒಪ್ಪಿರುವದರಿಂದ ಇದು ಆಸ್ತಿಕದರ್ಶನವೆನ್ನಿಸಿಕೊಂಡಿರುವದು. ವೇದಾಂತದರ್ಶನಕ್ಕೂ ಮೀಮಾಂಸಕ್ಕೂ ಈ ವಿಷಯದಲ್ಲಿ ಪೂರ್ಣ ಸಂಬಂಧವಿರುವದು. ಬ್ರಹ್ಮವು ಆಗಮೈಕವೇದ್ಯವೆಂತಲೂ ವೇದಾಂತವಾಕ್ಯಗಳ ತಾತ್ಪರ್ಯವನ್ನು ನಿರ್ಣಯಿಸುವದೇ ಶಾರೀರಕಸೂತ್ರಗಳ ಉದ್ದೇಶವೆಂತಲೂ ವೇದಾಂತಿಗಳು ಹೇಳುತ್ತಾರೆ. ಆದರೆ ಇಲ್ಲಿ ಇವೆರಡಕ್ಕೆ ಸ್ವಲ್ಪವೈಲಕ್ಷಣ್ಯವೂ ಇದೆ. ಇದನ್ನು ಮುಂದೆ ಸಂದರ್ಭಾನುಸಾರ ತಿಳಿಸುತ್ತೇವೆ. ಪೂರ್ವಮೀಮಾಂಸದಲ್ಲಿ ಪ್ರಾಭಾಕರ, ಭಾಟ್ಟ – ಎಂಬ ಎರಡು ಉಪಮತಗಳಾಗಿ ರುವವು. ಇವುಗಳಲ್ಲಿ ಭಾಟ್ಟಮೀಮಾಂಸದ ರೀತಿಯೇ ಈಗ ಎಲ್ಲೆಲ್ಲಿಯೂ ಪ್ರಚಾರದಲ್ಲಿರುವದು. ಮೀಮಾಂಸದಲ್ಲಿ ಹೇಳಿರುವ ಕರ್ಮಗಳು ಈಗ ಆಚಾರದಲ್ಲಿ ಬಲುಮಟ್ಟಿಗೆ ಕಡಿಮೆಯಾಗುತ್ತಿದ್ದರೂ ಮೀಮಾಂಸದರ್ಶನದಲ್ಲಿ ಹೇಳಿರುವ ತತ್ಪಾರ್ಯನಿರ್ಣಯದ ನ್ಯಾಯಗಳು ಧರ್ಮಶಾಸ್ತ್ರದಲ್ಲಿಯೂ ವೇದಾಂತದಲ್ಲಿಯೂ ತುಂಬ ಬಳಕೆಯಲ್ಲಿರುತ್ತವೆ. ವೇದಾಂತದರ್ಶನಕ್ಕೂ ಮೀಮಾಂಸದರ್ಶನಕ್ಕೂ ಜ್ಞಾನಕರ್ಮಮೋಕ್ಷಗಳ ವಿಚಾರದಲ್ಲಿ ಇರುವ ಅಭಿಪ್ರಾಯಭೇದವನ್ನು ಮತ್ತೊಮ್ಮೆ ತಿಳಿಸುತ್ತೇವೆ.

★★★★★

''ಅದರೊಳ್ ಪೂರ್ವಮೀಮಾಂಸೆಯು ತಾತ್ಪರ್ಯನಿರ್ಣಾಯಕಯಾದ
ಉಪಕ್ರಮಾದಿಷಡ್ವಿಧಲಿಂಗಗಳಿಂ ವೇದವಾಕ್ಯವಿಚಾರಪೂರ್ವಕಮಾಗಿ ಜ್ಯೋತಿಷ್ಟೋಮಾದಿ
ಯಾಗಪ್ರಮುಖವಿಧಾನಕ್ರಮವಂ ನಿರ್ವಹಿಸುವದರಿಂ ಕರ್ಮಕಾಂಡಮೆನಿಸುವದು.
– ಶ್ರೀಮನ್ನಿಜಗುಣಶಿವಯೋಗಿಗಳ ವಿವೇಕಚಿಂತಾಮಣಿ

★★★★★

# ಸರಿಯಾದ ಜ್ಞಾನದ ಸ್ವರೂಪ

ಬ್ರಹ್ಮಜ್ಞಾನದಿಂದಲೇ ಮೋಕ್ಷವೆಂದು ಉಪನಿಷತ್ತುಗಳು ಹೇಳುತ್ತವೆಯಷ್ಟೆ; ಅಲ್ಲಿ ಮೋಕ್ಷಕ್ಕೆ ಕಾರಣವಾಗಿರುವ ಜ್ಞಾನದ ಸ್ವರೂಪವೇನು? - ಎಂಬುದನ್ನು ವಿಚಾರಿಸುವದಕ್ಕೆ ಪ್ರಾರಂಭಿಸಿ ಮಿಕ್ಕ ದರ್ಶಕಾರರು ಈ ವಿಷಯಕ್ಕೆ ಏನು ಹೇಳುತ್ತಾರೆಂಬುದನ್ನು ಸಂಗ್ರಹವಾಗಿ ಹೇಳಿದ್ದಾಯಿತು. ಈಗ ವೇದಾಂತಿಗಳು ಜ್ಞಾನದಿಂದಲೇ ಮೋಕ್ಷ - ಎನ್ನುವಾಗ ಜ್ಞಾನಶಬ್ದಕ್ಕೆ ಏನು ಅರ್ಥವನ್ನು ಹೇಳುತ್ತಾರೆಂಬುದನ್ನು ತಿಳಿಸುತ್ತೇವೆ. ವಸ್ತುತಂತ್ರವಾದ ಜ್ಞಾನವೇ ಇಲ್ಲಿ ಪ್ರಕೃತವಾಗಿರುವದರಿಂದ ಇಂಥ ಜ್ಞಾನವನ್ನು ಪ್ರತಿಪಾದಿಸಿರುವವರಲ್ಲಿ ಜಗತ್ಪ್ರಸಿದ್ಧರಾಗಿರುವ ಶ್ರೀಶಂಕರಾಚಾರ್ಯರ ಭಾಷ್ಯಾನುಸಾರವಾಗಿಯೇ ಈ ವಿಷಯವನ್ನು ಇಲ್ಲಿ ಪ್ರತಿಪಾದನೆ ಮಾಡಲಾಗುವದು.

ಶಾರೀರಕಭಾಷ್ಯದ ಪ್ರಾರಂಭದಲ್ಲಿ ಇವರು ಬರೆದಿರುವದೇನೆಂದರೆ ''ನೀನು, ನಾನು-ಎಂಬೆರಡು ಅರಿವುಗಳಿಗೆ ಗೋಚರವಾಗಿರುವವೇ **ವಿಷಯ, ವಿಷಯಿ** - ಎನ್ನಿಸಿಕೊಂಡಿರುವವು. ಇವು ಕತ್ತಲೆಬೆಳಕುಗಳಂತೆ ಒಂದಕ್ಕೊಂದು ವಿರುದ್ಧವಾದ ಸ್ವಭಾವವುಳ್ಳವುಗಳಾದ್ದರಿಂದ ಇವು ಒಂದು ಮತ್ತೊಂದಾಗುವದು ಆಗಲಾರದೆಂದು ಸಿದ್ಧವೇ ಆಗಿರುವದು; ಹೀಗಿರುವಲ್ಲಿ ಇವುಗಳ ಧರ್ಮಗಳು ಒಂದು ಮತ್ತೊಂದರಲ್ಲಿ ಕಂಡುಬರುವವೆಂಬುದು ಇನ್ನೂ ಆಗದಮಾತಾಗಿ ರುವದು. ಆದ್ದರಿಂದ ನಾನು - ಎಂಬ ಅರಿವಿಗೆ ಗೋಚರವಾದ ಜ್ಞಾನಸ್ವರೂಪವಾದ ವಿಷಯಿಯಲ್ಲಿ ನೀನು - ಎಂಬ ಅರಿವಿಗೆ ಗೋಚರವಾದ ವಿಷಯವನ್ನೂ ಅದರ ಧರ್ಮಗಳನ್ನೂ ಅಧ್ಯಾಸಮಾಡುತ್ತಾರೆಂಬುದೂ ಇದಕ್ಕೆ ವಿರುದ್ಧವಾಗಿ ವಿಷಯ ಮತ್ತು ಅದರ ಧರ್ಮಗಳನ್ನು ವಿಷಯದಲ್ಲಿ ಅಧ್ಯಾಸಮಾಡುತ್ತಾರೆಂಬುದೂ ಸುಳ್ಳು - ಎಂಬುದೇ ಯುಕ್ತವಾಗಿರುವದು. ಹೀಗಿದ್ದರೂ ಇವುಗಳಲ್ಲಿ ಒಂದನ್ನು ಮತ್ತೊಂದರಲ್ಲಿಯೂ ಒಂದರ ಧರ್ಮವನ್ನು ಮತ್ತೊಂದರಲ್ಲಿಯೂ ಅಧ್ಯಾಸಮಾಡಿ ಅತ್ಯಂತವಾಗಿಬೇರ್ಪಟ್ಟಿರುವ ಈ ಧರ್ಮಿ ಮತ್ತು ಧರ್ಮ- ಇವುಗಳನ್ನು ಒಂದರಿಂದ ಇನ್ನೊಂದನ್ನು ವಿಂಗಡಿಸಿ ತಿಳಿದುಕೊಳ್ಳದೆ ತಪ್ಪು ತಿಳಿವಳಿಕೆಯಿಂದ ದಿಟವಾದದ್ದನ್ನೂ ಸಟೆಯಾದದ್ದನ್ನೂ ಬೆರಿಸಿಕೊಂಡು 'ನಾನು ಇಂಥದ್ದು, ನನ್ನದು ಇಂಥದ್ದು' ಎಂದು ಸ್ವಭಾವವಾಗಿಯೇ ಜನರು ವ್ಯವಹಾರಮಾಡುತ್ತಿರುವರು.''

''ಹೀಗೆ ಈರೀತಿಯಲ್ಲಿ ಜನರು ಮಾಡುತ್ತಿರುವ **ಅಧ್ಯಾಸ**ವನ್ನು ಪಂಡಿತರು **ಅವಿದ್ಯೆ**ಯೆನ್ನುವರು. ಈ ಆತ್ಮಾನಾತ್ಮಗಳನ್ನು ವಿಂಗಡಿಸಿ ಇದರ ಸ್ವರೂಪವು ಇಂಥದ್ದೆಂದು ನಿರ್ಣಯಮಾಡುವದನ್ನೇ **ವಿದ್ಯೆ**ಯನ್ನುವರು.''

ಈ ಭಾಷ್ಯದ ಅಭಿಪ್ರಾಯವನ್ನು ಮತ್ತೊಮ್ಮೆ ವಿಸ್ತಾರವಾಗಿ ವಿವರಿಸುವೆವು. ಸದ್ಯಕ್ಕೆ ಇಷ್ಟು **ಪ್ರಕೃತ.** ಈ ಭಾಷ್ಯಭಾಗದಿಂದ ವಿಷಯಿ ವಿಷಯ – ಇವುಗಳನ್ನು ವಿಂಗಡಿಸಿ ತಿಳಿಯದೆ ಒಂದರ ಧರ್ಮವನ್ನು ಮತ್ತೊಂದರಲ್ಲಿ ಭ್ರಾಂತಿಯಿಂದ ಹಾಕುವ ಅಧ್ಯಾಸವನ್ನೇ ವೇದಾಂತಿಗಳು ಅವಿದ್ಯೆಯೆಂದು ಕರೆಯುತ್ತಾರೆಂಬುದು ಸ್ಪಷ್ಟವಾಗಿದೆ. ಯಾವದಕ್ಕೆ ಯಾವದು ಗೋಚರವಾಗುತ್ತದೆಯೋ ಅವುಗಳಲ್ಲಿ ಮೊದಲನೆಯದಕ್ಕೆ ವಿಷಯಿಯೆಂತಲೂ ಎರಡನೆಯದಕ್ಕೆ ವಿಷಯವೆಂತಲೂ ಸಂಜ್ಞೆ. ಹೀಗೆ ವಿಂಗಡಿಸಿ ನೋಡುವಾಗ, ಇಂದ್ರಿಯಗಳಿಗೆ ಹೊರಗಣ ದೇಹಾದಿಪ್ರಪಂಚವು ತೋರುತ್ತಿರುವದು; ಆದ್ದರಿಂದ ಇಂದ್ರಿಯಗಳು ವಿಷಯಿ ಎನ್ನಬೇಕಾಯಿತು, ಪ್ರಪಂಚವು ವಿಷಯವಾಯಿತು. ಆದರೆ ಮನಸ್ಸಿಗೆ ಇಂದ್ರಿಯಗಳೂ ಗೋಚರವಾಗುತ್ತಿರುವದರಿಂದ ಇವೂ ವಿಷಯಕೋಟಿಗೇ ಸೇರಿರುವವು. ಇದರಂತೆ ನಮ್ಮ ಮನಸ್ಸೂ ನಮ್ಮ ಒಳಗಿನ ಆತ್ಮಕ್ಕೆ ಗೋಚರವಾಗಿರುವದು; ಆದ್ದರಿಂದ ಇದೂ ವಿಷಯವೇ. ಅಂತೂ ಆತ್ಮವೊಂದು ವಿಷಯಿ; ಮಿಕ್ಕದ್ದೆಲ್ಲ ವಿಷಯವೇ. ಆತ್ಮವೆಂಬ ವಿಷಯಿ, ಅನಾತ್ಮನೆಂಬ ವಿಷಯ – ಇವುಗಳಲ್ಲಿ ಒಂದನ್ನು ಮತ್ತೊಂದರಲ್ಲಿಯೂ ಒಂದರ ಧರ್ಮವನ್ನು ಮತ್ತೊಂದರಲ್ಲಿಯೂ ಭ್ರಾಂತಿಯಿಂದ ಆರೋಪಿಸುವದೇ ಅಧ್ಯಾಸವು; ಈ ಅಧ್ಯಾಸವನ್ನೇ **ಅವಿದ್ಯೆ ಅಥವಾ ಅಜ್ಞಾನ** ಎಂದು ವೇದಾಂತಿಗಳು ಕರೆಯುವರು.

ಸಾಂಖ್ಯರ ದರ್ಶನದಂತೆ ಜ್ಞಾನಾಜ್ಞಾನಗಳ ಸ್ವರೂಪವನ್ನು ವಿಂಗಡಿಸುವಾಗ ವ್ಯಕ್ತ ಮತ್ತು ಅವ್ಯಕ್ತ – ಎಂಬ ಎರಡು ರೂಪಗಳಲ್ಲಿ ಕಂಡುಬರುವ ಪ್ರಕೃತಿ, ಇದಕ್ಕಿಂತ ಬೇರೆಯಾಗಿರುವ ಪುರುಷ – ಈ ಎರಡನ್ನೂ ಬಿಡಿಸಿ ತಿಳಿದುಕೊಳ್ಳದೇ ಇರುವದೇ **ಅವಿವೇಕ**ವೆಂಬ ಅಜ್ಞಾನವೆಂತಲೂ ಈ ಅವಿವೇಕವೇ ಸಂಸಾರದ ಎಲ್ಲಾ ಅನರ್ಥಕ್ಕೂ ಕಾರಣವೆಂತಲೂ ತಿಳಿಸಿದ್ದೆವಷ್ಟೆ. ಅದರಂತೆಯೇ ವೇದಾಂತಿಗಳೂ ''ತಪ್ಪುತಿಳಿವಳಿಕೆಯ ರೂಪದಲ್ಲಿರುವ ಅಧ್ಯಾಸವೇ ಕರ್ತೃತ್ವ, ಭೋಕ್ತೃತ್ವ- ಎಂಬ ಸಂಸಾರವನ್ನುಂಟುಮಾಡುವದೆಂದು ಎಲ್ಲಾ ಜನರಿಗೂ ಗೊತ್ತಾಗಿ ರುವದು. ಅನರ್ಥಕ್ಕೆ ಕಾರಣವಾಗಿರುವ ಈ ಅಧ್ಯಾಸವನ್ನು ನಾಶಮಾಡುವದಕ್ಕೇ

ಉಪನಿಷತ್ತುಗಳು ಜ್ಞಾನವನ್ನು ಉಪದೇಶಮಾಡುತ್ತಿವೆ'' ಎನ್ನುತ್ತಾರೆ.

ಆದರೆ ಈ ಎರಡು ದರ್ಶನಗಳಿಗೂ ಇರುವ ಮುಖ್ಯವಾದ ಭೇದವೇನೆಂದರೆ - ಪ್ರಕೃತಿಯು ಸತ್ಯವಾದದ್ದು, ವ್ಯಕ್ತಾವ್ಯಕ್ತರೂಪಗಳನ್ನು ಪಡೆಯುತ್ತಿರುವದು, ಬೇರೆಬೇರೆ ಆತ್ಮರುಗಳಿಗೆ ಅವಿವೇಕದಿಂದ ಬಂಧವನ್ನೂ ವಿವೇಕದಿಂದ ಮೋಕ್ಷವನ್ನೂ ಉಂಟುಮಾಡುತ್ತಲೇ ಇರುವದು - ಎಂಬುದು ಸಾಂಖ್ಯರ ಮತವು. ವಿಷಯರೂಪವಾದ ಅನಾತ್ಮವು ಮಿಥ್ಯೆ, ತೋರುತ್ತಿರುವದೇ ಹೊರತು ನಿಜವಾಗಿ ಇರುವದಲ್ಲ; ಸತ್ಯಸ್ವರೂಪನಾಗಿರುವ ಒಬ್ಬನೇ ಒಬ್ಬ ಆತ್ಮನಲ್ಲಿ ಅಧ್ಯಾಸರೂಪವಾದ ಅವಿದ್ಯೆಯಿಂದ ತೋರಿಕೊಳ್ಳುತ್ತಾ ಬಂಧವನ್ನು ಕಲ್ಪಿಸುವದು; ಆತ್ಮಾನಾತ್ಮಗಳ ನಿಜವಾದ ಸ್ವರೂಪವನ್ನು ತಿಳಿದವರಿಗೆ ತಾನೇ ಇರುವದಿಲ್ಲವೆಂಬುದನ್ನು ಗೊತ್ತುಮಾಡಿಕೊಡುವದು - ಎಂಬುದು ವೇದಾಂತಿಗಳ ಮತ. ಸಾಂಖ್ಯರ ಮತದಲ್ಲಿ ಪ್ರಕೃತಿಯೇ ಬಂಧವನ್ನೂ ಮೋಕ್ಷವನ್ನೂ ಪಡೆಯುತ್ತದೆ ಪುರುಷನು ಅವಿವೇಕದಿಂದ ಬಂಧಮೋಕ್ಷಗಳನ್ನು ಅನುಭವಿಸುತ್ತಾನೆ. ವೇದಾಂತಮತದಲ್ಲಿ ಬಂಧವಾಗಲಿ ಮೋಕ್ಷವಾಗಲಿ ಪರಮಾರ್ಥದೃಷ್ಟಿಯಿಂದ ನೋಡಿದರೆ ಯಾರಲ್ಲಿಯೂ ಇರುವದಿಲ್ಲ; ಅಜ್ಞಾನಿಗಳು ಮೇಲೆ ವರ್ಣಿತವಾಗಿರುವ ಅಧ್ಯಾಸರೂಪವಾದ ಅವಿದ್ಯೆಯಿಂದ ಬಂಧ ಮೋಕ್ಷಗಳನ್ನು ಅನುಭವಿಸುವರು. ಆದ್ದರಿಂದ ಸಾಂಖ್ಯ, ವೇದಾಂತ - ಈ ಎರಡು ದರ್ಶನಗಳಲ್ಲಿಯೂ ಆತ್ಮನಲ್ಲಿ ಬಂಧಮೋಕ್ಷಗಳು ಇರುವವೆಂಬುದು ಉಪಚಾರದ ಮಾತಾಗಿರುವದು.

ಆತ್ಮವು ಒಂದೇ ಎಂಬುದು ಹೇಗೆ, ಇದು ಸತ್ಯವೆಂಬುದು ಹೇಗೆ? ಅನಾತ್ಮವು ಮಿಥ್ಯೆಯೆಂಬುದು ಹೇಗೆ? ಆತ್ಮಾನಾತ್ಮಗಳು ಒಂದು ಒಂದು ಅಧ್ಯಾಸವಾಗಿರುವದೆಂದರೆ ಹೇಗೆ? - ಈ ಮೂರು ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರವನ್ನು ವೇದಾಂತಿಗಳು ಕೊಡಬೇಕಾಗಿರುತ್ತದೆ. ಉತ್ತರದಿಂದ ಅಜ್ಞಾನದಿಂದ ಬಂಧವೂ ಜ್ಞಾನದಿಂದ ಮೋಕ್ಷ ಉಂಟಾಗುವದೆಂದು ಇವರು ಹೇಳುವ ಮಾತಿನ ಅರ್ಥವು ತಾನೇ ವ್ಯಕ್ತವಾಗುವದು.

★★★★★

# ಆತ್ಮಲಾಭದ ಪ್ರಯೋಜನ

ಆತ್ಮನನ್ನು ಮೈಮುರಿಯ ಹುಡುಕಿ ಅರಿತುಕೊಂಡ ಮೇಲೆ ಆಗುವ ಪ್ರಯೋಜನವಾದರೂ ಏನು? ಎಂದು ಯಾರಾದರೂ ಕೇಳಬಹುದು. ಇದಕ್ಕೆ ಉತ್ತರವನ್ನು ಕಂಡುಕೊಳ್ಳಬೇಕಾದರೆ ಆತ್ಮನನ್ನು ಅರಿಯದ್ದರಿಂದ ನಮಗೆ ಈಗ ಆಗಿರುವ ನಷ್ಟವೇನೆಂಬುದನ್ನು ಮೊದಲು ತಿಳಿದುಕೊಳ್ಳಬೇಕು. ಈ ವಿಷಯದಲ್ಲಿ ನಮ್ಮ ಉಪನಿಷತ್ತುಗಳಲ್ಲಿ ಹೇಳಿರುವದನ್ನು ಕೇಳಿರಿ:–

**ಅಸುರ್ಯಾ ನಾಮ ತೇ ಲೋಕಾ ಅನ್ಧೇನ ತಮಸಾ ವೃತಾಃ ।**
**ತಾಂ ಸ್ತೇ ಪ್ರೇತ್ಯಾಭಿಗಚ್ಛಂತಿ ಯೇ ಕೇಚಾತ್ಮಹನೋ ಜನಾಃ ॥ (ಈ. 3)**

''ಯಾರು ಆತ್ಮನನ್ನು ಅರಿತುಕೊಳ್ಳದೆ ಆತ್ಮನನ್ನು ಮರೆತು ಅನಾತ್ಮವಿಚಾರದಲ್ಲಿಯೇ ಮಗ್ನರಾಗಿರುವರೋ ಅವರು ಆತ್ಮಹತ್ಯೆಯನ್ನು ಮಾಡಿರುವ ಮಹಾಪಾತಕಿಗಳು; ಅವರು ಅಸುರರ ಜನ್ಮದಲ್ಲಿ ಹುಟ್ಟಿರುವವರೇ ಹೊರತು ಮನುಷ್ಯರಲ್ಲ; ಅವರು ಇದ್ದರೂ ಒಂದೆ, ಸತ್ತರೂ ಒಂದೆ; ಕಣ್ಣು ಕಾಣದಂಥ ಕಾಡುಗತ್ತಲೆಯು ಕವಿದಿರುವ, ಇಷ್ಟೆಂಬ ಆಳದ ಲೆಕ್ಕವಿಲ್ಲದ, ಹಾಳುಬಾವಿಯಲ್ಲಿ ಬಿದ್ದು ಕೆಳಕ್ಕೇ ಸರಿಯುತ್ತಿರುವವರ ಬಾಳಿನಂತೆ ಇರುವದು ಅವರ ಬಾಳು!'' ಹೀಗೆಂದು ಆತ್ಮನನ್ನರಿತುಕೊಳ್ಳದವರ ಪಾಡನ್ನು ನಮ್ಮ ಉಪನಿಷತ್ತುಗಳಲ್ಲಿ ವರ್ಣಿಸಿರುತ್ತದೆ; ಇಂಥ ದುಃಸ್ಥಿತಿಗೆ ಜನರು ಇಳಿಯದೆ ಇರಲೆಂದು ಮರುಕದಿಂದ ಆತ್ಮನ ನಿಜಸ್ಥಿತಿಯನ್ನೂ ಆ ಶಾಸ್ತ್ರಗಳಲ್ಲಿ ಬೋಧಿಸಿರುತ್ತದೆ. ಈ ಆತ್ಮಹತ್ಯೆಯಿಂದ ಪಾರಾಗಿ, ಅಸುರಜನ್ಮವನ್ನು ಬಿಟ್ಟು ಮೇಲಕ್ಕೇರುವದು ಆತ್ಮ ಜ್ಞಾನದ ಮೊದಲನೆಯ ಪ್ರಯೋಜನವು.

ಇದು ಸರಿ. ಆದರೆ ಆತ್ಮಜ್ಞಾನದಿಂದ ನಮಗೆ ದೊರೆಯುವ ವಿಧಿರೂಪವಾದ ಪ್ರಯೋಜನವೇನಾದರೂ ಉಂಟೋ? ಆತ್ಮಜ್ಞಾನದಿಂದ ನಮ್ಮಲ್ಲಿರುವ ದೋಷವನ್ನು ಕಳೆದುಕೊಳ್ಳುವದೊಂದೇ ಪ್ರಯೋಜನವೋ, ಅಥವಾ ಹೊಸದಾಗಿ ಏನಾದರೂ ಸಾಕ್ಷಾತ್ತಾಗಿ ಬರುವ ಪ್ರಯೋಜನವೂ ಉಂಟೋ? ಎಂದರೆ! ಮನುಷ್ಯನು ಭೌತಿಕವಿದ್ಯೆಯನ್ನು ತಿಳಿದುಕೊಂಡರೆ ಪ್ರಪಂಚದ ಬಹುಭಾಗವನ್ನು ತನ್ನ ವಶಕ್ಕೆ ತಂದುಕೊಳ್ಳಬಹುದು. ಇದು ಕಣ್ಣಲ್ಲಿಕಂಡ

ಮಾತಾಗಿದೆ. ಆದ್ದರಿಂದಲೇ ಜನರು ಭೌತಿಕವಿದ್ಯೆಯನ್ನು ನಾನುತಾನೆಂದು ಮುಂದಕ್ಕೆ ಬಂದು ಕಲಿತುಕೊಳ್ಳುತ್ತಿದ್ದಾರೆ. ಹಾಗೆಯೇ ಆತ್ಮವಿದ್ಯೆಗೆ ಪ್ರಯೋಜನವೇನಾದರೂ ಉಂಟೋ?– ಎಂದರೆ, ಉಂಟು. ಭೌತಿಕಶಾಸ್ತ್ರಜ್ಞಾನದಿಂದ ಮನುಷ್ಯನು ಒದಗಿಸಿಕೊಂಡಿರುವ ಸುಖಸಾಧನಗಳು ಕಡೆಯವರೆಗೂ ಸುಖಸಾಧನಗಳೇ ಎಂದು ಹೇಳುವದಕ್ಕಿಲ್ಲ. ಈ ಕಾಲದಲ್ಲಿ ನೋಡಿ, ಜನರಲ್ಲಿ ಅತೃಪ್ತಿಯೂ ಅಸಮಾಧಾನವೂ ತಲೆದೋರಿಕೊಂಡಿರುವವು; ಇಡಿಯ ಪ್ರಪಂಚಕ್ಕೇ ಇನ್ನು ಕೆಲವು ಕಾಲದವರೆಗೆ ಸಾಕಾಗುವಷ್ಟಕ್ಕಿಂತಲೂ ಹೆಚ್ಚಾಗಿಯೇ ಭೋಗಸಾಮಗ್ರಿಗಳು ಏರ್ಪಾಡಾಗಿಬಿಟ್ಟಿರುವದರಿಂದ ಕೂಲಿಯಿಂದ ಜೀವಿಸುವವರಿಗೆ ಕೆಲಸವು ಸಿಕ್ಕದೆ ಹೊಟ್ಟೆಯ ಪಾಡಿನ ಯೋಚನೆ ಹತ್ತಿಕೊಂಡಿರುವದು. ಜನರೂ ಜನಾಂಗಗಳೂ ಭೌತಿಕವಿದ್ಯೆಯು ಹೇಳಿಕೊಟ್ಟ ಮಾತನ್ನು ಕೇಳಿ ಓಡುತ್ತೋಡುತ್ತಾ ಇರುವಲ್ಲಿ ಮುಂದಕ್ಕೆ ಹೋಗದ ಹಾಗೆ ಒಂದು ದೊಡ್ಡ ಅಡ್ಡ ಗೋಡೆಯು ಅವರ ಮುಂದೆ ನಿಂತುಬಿಟ್ಟಂತೆ ಆಗಿರುವದು. ಇದನ್ನು ಕಂಡು, ಈ ಅಡಚಣೆಗೆ ಯಾರು ಹೊಣೆಯೆಂಬುದನ್ನು ಅರಿಯದೆ ಒಬ್ಬರ ಮೇಲೊಬ್ಬರು ತಪ್ಪನ್ನು ಹೊರಿಸುತ್ತಾ ತಮ್ಮ ರಾಗದ್ವೇಷಗಳ ಫಲವಾದ ಕ್ಷಾಮ, ಡಾಮರ, ಯುದ್ಧ – ಮುಂತಾದ ಅನಾಹುತಗಳಲ್ಲಿ ಯಾವದು ಯಾವಾಗ ಬಂದು ತೋರಿಕೊಳ್ಳುವದೋ ಎಂದು ಎಲ್ಲರೂ ಭಯಚಕಿತರಾಗಿ ಕಣ್ಣುಕಣ್ಣು ಬಿಡುತ್ತಿರುವರು. ಇಂಥ ದುರವಸ್ಥೆಯಲ್ಲಿ ಭೌತಿಕವಿದ್ಯೆಯು ಅವರಿಗೆ ಏನು ಉಪಾಯವನ್ನು ಹೇಳಿಕೊಡುವದು ಗೊತ್ತೆ? ಅದು ''ನನಗೆ ತಿಳಿಯುವದು ಇಷ್ಟೇ, ಇನ್ನು ಮೇಲೆ ನಿಮ್ಮ ಬುದ್ಧಿ ನಿಮ್ಮ ಕೈಯಲ್ಲಿರಲಿ!'' – ಎಂದು ನಿರಾಶೆಯ ಮಂತ್ರವನ್ನು ಜಪಿಸುತ್ತಿರುವದು. ಆತ್ಮವಿದ್ಯೆಯ ವಿಚಾರವು ಮಾತ್ರ ಹಾಗಲ್ಲ. ಇಂಥ ದುರವಸ್ಥೆಯ ಕಾಲದಲ್ಲಿ ಜನರಿಗೆ ಅಧ್ಯಾತ್ಮ ವಿಚಾರದ ಕಡೆಗೆ ಮನಸ್ಸು ಹೋಯಿತೆಂದರೆ ಅವರು ಅಸುರತ್ವವನ್ನು ಬಿಟ್ಟು ಮನುಷ್ಯತ್ವಕ್ಕೆ ಬಂದಾರೆಂಬುದು ಹಾಗಿರಲಿ, ಮನುಷ್ಯತ್ವದಿಂದ ದೇವತ್ವಕ್ಕೂ ಏರಿಯಾರು. ದಾನ, ಧರ್ಮ, ದಯೆ, ಪರೋಪಕಾರ – ಎಂಬ ಅಧ್ಯಾತ್ಮವಿದ್ಯೆಯ ಬಾವುಟಗಳನ್ನು ಈಗ ನಾವು ಮೇಲಕ್ಕೆತ್ತಿದರೆ ನಮ್ಮ ತೊಂದರೆಗಳು ಎಷ್ಟೋ ಬೇಗನೆ ಮಾಯವಾದಾವು.

ಆತ್ಮಲಾಭದಿಂದ ಶೋಕಮೋಹಗಳು ತೊಲಗುವವು, ಸಂಶಯಗಳು ಸರಿಯುವವು, ದುಡಿದು ದುಡಿದು ಬೆಂಡಾಗುತ್ತಿರುವವರ ಆಯಾಸವು ಪರಿಹಾರವಾಗುವದು, ಹೆದರುವವರಿಗೆ ಭಯವೆಲ್ಲ ಬಯಲಾಗುವದು,

ದುಃಖಿತರಾದವರಿಗೆ ದುಃಖವು ದೂರವಾಗುವದು, ಬಡವರಿಗೆ ಭಾಗ್ಯವು ದೊರಕಿದಂತಾಗುವದು, ಹೇಡಿಗಳಿಗೆ ಧೈರ್ಯವು ತುಂಬುವದು, ಸಕಲ ಕಾರ್ಯಗಳಲ್ಲಿಯೂ ಗೆಲುವಾಗುವದು, ಸಕಲ ಇಷ್ಟಾರ್ಥಗಳೂ ಕೈಗೂಡುವವು- ಎಂದು ಶಾಸ್ತ್ರಗಳು ಡಂಗುರವನ್ನು ಹಾಕುತ್ತಿರುವವು. ಇದೇನೂ ಅತಿಶಯೋಕ್ತಿಯಲ್ಲ. ಅಧ್ಯಾತ್ಮವಿದ್ಯೆಯನ್ನು ಲೋಕಕ್ಕೆ ಅನುಗ್ರಹಿಸಿದ ಮಹರ್ಷಿಗಳ ಚರಿತ್ರೆಗಳನ್ನು ನೋಡಿದರೆ ಸಾಕು, ಕೂಡಲೆ ಇದರ ನಿಜವು ನಮಗೆ ಮನದಟ್ಟಾಗುವದು. ಅವರು ಮಹಾಜ್ಞಾನಿಗಳು. ರಾಜಾಧಿರಾಜರೂ ಅವರುಗಳನ್ನು ಗೌರವದಿಂದ ಕಾಣುತ್ತಿದ್ದದ್ದರಿಂದ ಐಶ್ವರ್ಯವಾಗಲಿ, ಅಧಿಕಾರವಾಗಲಿ ವಿಷಯಭೋಗವಾಗಲಿ, ಅವರಿಗೆ ಬೇಕಾಗಿದ್ದರೆ ಆ ತಮ್ಮ ಅಭಿಲಾಷೆಯನ್ನು ಪೂರ್ತಿಗೊಳಿಸಿಕೊಳ್ಳುವದೇನೂ ಅವರಿಗೆ ಕಷ್ಟವಾಗಿರಲಿಲ್ಲ; ಹೀಗಿದ್ದರೂ ಅವರು ನಗರವಾಸವನ್ನು ಬಿಟ್ಟು ಅರಣ್ಯಕ್ಕೆ ಹೋಗಿ ನಿತ್ಯಬ್ರಹ್ಮಚರ್ಯದಿಂದ, ಪರಮಾತ್ಮಚಿಂತನೆಯಲ್ಲಿಯೇ ಕಾಲವನ್ನು ಕಳೆಯುತ್ತಿದ್ದರು. ಕೆಲವರು ತಮ್ಮ ತಮ್ಮ ಆಶ್ರಮಗಳಿಗೆ ಬಂದ ರಾಜರುಗಳಿಗೂ ಅವರ ಪರಿವಾರಕ್ಕೂ ತಕ್ಕ ಭೋಗಸಾಮಗ್ರಿಗಳನ್ನು ಯೋಗಸಿದ್ಧಿಯಿಂದ ಕಲ್ಪಿಸಿ ತೃಪ್ತಿಗೊಳಿಸುತ್ತಿದ್ದರೆಂದು ನಮ್ಮ ಪುರಾಣಗಳಲ್ಲಿ ಹೇಳಿದೆಯಷ್ಟೆ; ಆ ಸಿದ್ಧಿಗಳ ಸ್ವರೂಪವನ್ನೇ ಅರಿಯದ ನಮಗೆ ಅದೆಲ್ಲ ಕಟ್ಟು ಕಥೆಯೆನಿಸಿರುವದು. ಅದಿರಲಿ, ಲೋಕಕ್ಕೆಲ್ಲ ಪೂಜ್ಯರೆನಿಸಿಕೊಂಡು ತಮ್ಮ ಇಚ್ಛೆಯನ್ನು ಪೂರ್ತಿಗೊಳಿಸುವ ಎಲ್ಲಾ ಬಗೆಯ ಸಾಧನಗಳೂ ಅವರಲ್ಲಿ ಸಿದ್ಧವಾಗಿದ್ದರೂ ಪರಮವೈರಾಗ್ಯದಿಂದ ಅವುಗಳನ್ನು ಕಡೆಗಂಡು ಅಧ್ಯಾತ್ಮ ಚಿಂತೆಯಲ್ಲಿಯೇ ಮಗ್ನರಾಗಿರಬೇಕಾದರೆ ಆತ್ಮಲಾಭಕ್ಕೆ ಅವರು ಎಂಥ ಬೆಲೆಯನ್ನು ಕಟ್ಟಿರಬೇಕಾಯಿತು!

ಜನರಿಗೆ ಆಗುವ ಸಕಲದುಃಖಗಳಿಗೂ ಸರಿಯಾದ ಆತ್ಮಜ್ಞಾನವಿಲ್ಲದ್ದೇ ಕಾರಣವೆಂದೂ, ಎಲ್ಲವನ್ನೂ ಆತ್ಮದೃಷ್ಟಿಯಿಂದ ನೋಡದೆ ಶರೀರದ ದೃಷ್ಟಿಯಿಂದ ನೋಡುತ್ತಿರುವದರಿಂದಲೇ ಸಕಲ ಅನರ್ಥಗಳೂ ಉಂಟಾಗಿರುವವೆಂದೂ ಆದ್ದರಿಂದ ಆತ್ಮಜ್ಞಾನವನ್ನು ಸಂಪಾದಿಸಿಕೊಳ್ಳಬೇಕೆಂಬ ಇಚ್ಛೆಯೇ ಪರಮಮಂಗಲರೂಪವಾದದ್ದೆಂದೂ ಪ್ರಾಚೀನರಾದ ನಮ್ಮ ದೇಶದ ಮಹಾತ್ಮರೆಲ್ಲರೂ ಸಾರಿರುತ್ತಾರೆ. ನಮ್ಮ ಆತ್ಮನ ನಿಜವಾದ ಸ್ವರೂಪಕ್ಕೂ ನಾವು

ಈಗ ತಿಳಿದುಕೊಂಡಿರುವ ನಮ್ಮ ಸ್ವರೂಪಕ್ಕೂ ಆನೆಗೂ ಆಡಿಗೂ ಇರುವಷ್ಟು ಹೆಚ್ಚು ಕಡಿಮೆ ಇರುವದು. ನಮ್ಮ ಸ್ವರೂಪದ ವಿಷಯದಲ್ಲಿ ನಮಗೆ ಈಗ ಇರುವ ತಿಳಿವಳಿಕೆ ಏನು? ನಮ್ಮಲ್ಲಿ ಎಷ್ಟೋ ಕುಂದುಕೊರತೆಗಳಿರುವವು; ಹಸಿವುಬಾಯಾರಿಕೆ, ಮುಪ್ಪುಮರಣ – ಇವು ನಮ್ಮ ಬೆನ್ನಿಗೆ ಬಿಗಿದುಕೊಂಡಿರುವವು; ರೋಗರುಜಿನಗಳು ನಮ್ಮನ್ನು ಬಿಡುವಹಾಗಿಲ್ಲ. ನಮ್ಮ ಆಸೆಗಳೂ ಸಂಕಲ್ಪಗಳೂ ಸಾವಿರಾರು ಇರುವವು, ಅವುಗಳಲ್ಲಿ ಪೂರ್ತಿಯಾಗದ ಆಸೆಗಳೇ ಹೆಚ್ಚು; ನಾವು ಒಂದು ದೇಶದಲ್ಲಿ ಒಂದು ಕಾಲದಲ್ಲಿ ಹುಟ್ಟಿ ಕೆಲವು ಕಾಲ ಹೇಗೊ ಬಾಳಿ ಕೊನೆಗೆ ಒಂದಲ್ಲದಿದ್ದರೆ ಒಂದು ದಿನ ಮಣ್ಣುಪಾಲಾಗುವ ಅಸ್ವತಂತ್ರರು – ಈ ಬುದ್ಧಿಯಲ್ಲವೆ ನಮ್ಮಲ್ಲಿ ಬೇರೂರಿಕೊಂಡುಬಿಟ್ಟಿದೆ? ಆದರೆ ಶ್ರುತಿಯಲ್ಲಿ ನಮ್ಮ ವಾಸ್ತವವಾದ ಸ್ವರೂಪವನ್ನು ಹೇಗೆ ಕೊಂಡಾಡಿದೆ ನೋಡಿ:

> **ಯ ಆತ್ಮಾ ಅಪಹತಪಾಪ್ಮಾ ವಿಜರೋ ವಿಮೃತ್ಯುರ್ವಿಶೋಕೋ**
> **ವಿಜಿಘತ್ಸೋಽವಿಪಾಸಃ ಸತ್ಯಕಾಮಃ ಸತ್ಯಸಂಕಲ್ಪಃ ಸೋಽನ್ವೇಷ್ಟವ್ಯಃ**
> **ಸವಿಜಿಜ್ಞಾಸಿತವ್ಯಃ ಸ ಸರ್ವಾಂಶ್ಚ ಲೋಕಾನಾಪ್ನೋತಿ ಸರ್ವಾಂಶ್ಚ**
> **ಕಾಮಾನ್ ಯಸ್ತಮಾತ್ಮಾನಮನುವಿದ್ಯ ವಿಜಾನಾತೀತಿ**
> **ಹ ಪ್ರಜಾಪತಿರುವಾಚ ॥** **(ಛಾಂ. 8-1-7)**

''ಈ ಆತ್ಮನಲ್ಲಿ ಯಾವ ದೋಷವೂ ಇರುವದಿಲ್ಲ; ಮುಪ್ಪಿಲ್ಲ, ಸಾವಿಲ್ಲ, ದುಃಖವಿಲ್ಲ, ಹಸಿವಿಲ್ಲ, ಬಾಯಾರಿಕೆಯಿಲ್ಲ; ಅವನು ಪಡೆಯಲಾರದ ಬಯಕೆಯಿಲ್ಲ, ನೆರವೇರಿಸಿಕೊಳ್ಳಲಾರದ ಯೋಚನೆಯಿಲ್ಲ; ಅವನನ್ನು ಹುಡುಕಬೇಕು, ಅವನನ್ನು ಅರಿತುಕೊಳ್ಳಬೇಕು. ಈ ಆತ್ಮನನ್ನು ಯಾವನು ದಕ್ಕಿಸಿಕೊಂಡು ಚನ್ನಾಗಿ ಅರಿತುಕೊಳ್ಳುವನೋ ಅವನಿಗೆ ಎಲ್ಲಾ ಲೋಕಗಳೂ ಸಿಗುವವು, ಎಲ್ಲಾ ಕಾಮಗಳೂ ಪೂರ್ತಿಯಾಗುವವು.'' ನಮ್ಮ ಆತ್ಮಸ್ವರೂಪವು ನಿಜವಾಗಿಯೂ ಹೀಗಿಯೇ ಇದ್ದರೆ ಅದನ್ನು ಅರಿತು ಆನಂದಭರಿತರಾಗಿರುವದೆಂಬುದು ಯಾರಿಗೆ ತಾನೆ ಬೇಡ?

ಇಲ್ಲಿ ಒಂದು ಆಕ್ಷೇಪಣೆಯು ತಲೆದೋರುವದು – ನಮ್ಮ ಸ್ವರೂಪವು ನೀವು ಹೇಳುವಂತೆಯೇ ಇದ್ದಿದ್ದರೆ, ನಿಮ್ಮ ಆಕಾಶಪುರಾಣವೆಲ್ಲ ಸರಿಯಾದೀತು. ಆದರೆ ನಿಜಸ್ಥಿತಿ ಹೇಗಿದೆ? ನಮಗೆ ಮುಪ್ಪಿಲ್ಲ, ಮರಣವಿಲ್ಲ – ಎಂದು ಕೆಲವರು

ಮೂರ್ಖರು ತಿಳಿದುಕೊಂಡಿರಬಹುದು; ಆದರೆ ವಿಚಾರಶಾಲಿಗಳಾದವರು ಯಾರು ತಾನೆ ಈ ಮಾತನ್ನು ನಿಜವಾಗಿ ನಂಬುತ್ತಾರೆ? ಎಲ್ಲಾ ಪ್ರಾಣಿಗಳೂ ದಿನದಿನಕ್ಕೆ ಬೆಳೆಯುತ್ತಲೂ ಮಾರ್ಪಡುತ್ತಲೂ ರೋಗರುಜಿನಗಳಿಂದ ಸೊರಗುತ್ತಲೂ ಮುದುಕರಾಗುತ್ತಲೂ, ಹಳೆಯ ಮರಗಳು ನೆಲಕ್ಕುರುಳುವಂತೆ, ದೇಹವನ್ನು ಕೆಳಕ್ಕೆಹಾಕಿ ಕಣ್ಮರೆಯಾಗುತ್ತಲೂ ಇರುವದು ಯಾರಿಗೆ ತಿಳಿಯದು? ದುರ್ಬಲರು ಬಲಿಷ್ಠರು, ಬಡವರು ಭಾಗ್ಯವಂತರು, ರೈತರು ರಾಜರು, ವಿಷಯಾಸಕ್ತರು ವಿರಕ್ತರು, ದಡ್ಡರು ಜಾಣರು, ಆಸ್ತಿಕರು ನಾಸ್ತಿಕರು, ಶಿಷ್ಯರು ಗುರುಗಳು,ಅಜ್ಞರು ಸರ್ವಜ್ಞರು – ಯಾರೇ ಆಗಲಿ ಕಾಲಪುರುಷನ ವಶರಾಗದವರು ಇದ್ದಾರೇನು? ಮರಣವನ್ನು ಗೆಲ್ಲುವ ವಿಧವನ್ನು ಹಿಂದೆ ಲೋಕಕ್ಕೆ ಬೋಧಿಸಿದ ಮತಾಚಾರ್ಯರಲ್ಲಿ ಯರೊಬ್ಬನೂ ಉಳಿಯಲಿಲ್ಲ. ಹೀಗಿರುವಲ್ಲಿ ಮುಪ್ಪುಮರಣಗಳನ್ನು ಕಾಣದ ಸ್ವರೂಪವು ನಮ್ಮದೆಂದು ಕೊಚ್ಚಿಕೊಳ್ಳುವವರನ್ನು ಏನೆಂದು ಕರೆಯಬೇಕು? ನಮ್ಮ ಶಾಸ್ತ್ರಗಳಲ್ಲಿ ಇಂಥ ಅಡಗೂಳಜ್ಜಿಯ ಕಥೆಗಳೇ ಇದ್ದರೆ ಈಗಿನ ಕಾಲಕ್ಕೆ ಅವು ಬೇಕಿಲ್ಲವೆಂಬುದಕ್ಕೆ ಇದಕ್ಕಿಂತ ಬೇರೆ ಏನು ಪ್ರಮಾಣವೂ ಅಗತ್ಯವಿರುವದಿಲ್ಲ.

ಮೇಲಿನ ಆಕ್ಷೇಪಣೆಯು ಸ್ವಾಭಾವಿಕವಾಗಿ ಎಲ್ಲರಿಗೂ ತೋರುವದು, ಆದರೆ ಇದಕ್ಕೆ ನಮ್ಮ ಶಾಸ್ತ್ರಗಳಲ್ಲಿ ಪರಿಹಾರವನ್ನು ಹೇಳದೆ ಇಲ್ಲ. ಹುಟ್ಟುವದು, ಬೆಳೆಯುವದು, ಸೊರಗುವದು, ಸಾಯುವದು – ಇದು ಪ್ರಾಣಿಗಳಿಗೆಲ್ಲ ಸಹಜವೆಂಬುದೂ ಒಂದು ದೃಷ್ಟಿಯಿಂದ ನಿಜವೇ. ಆದರೆ ವೇದಾಂತದ ದೃಷ್ಟಿಯಿಂದ ನೋಡಿದರೆ ನಮ್ಮೆಲ್ಲರ ಆತ್ಮನು ಯಾವ ವಿಕಾರವೂ ಇಲ್ಲದೆ, ಎಂದೆಂದಿಗೂ ಒಂದೇ ಪ್ರಕಾರದಿಂದ ಇರುವನೆಂಬುದನ್ನು ನಿಸ್ಸಂದೇಹವಾಗಿ ಮನಗಾಣಬಹುದು. ಆ ಕಣ್ಣಿನಿಂದ ನೋಡಿದರೆ ಜನನಮರಣಗಳೆಂಬವು ಕೇವಲ ವ್ಯವಹಾರ ಮಾತ್ರವೆಂದೂ ಈ ತೋರಿಕೆಯ ಜನನಮರಣಗಳು ನಮ್ಮ ನಿಜವಾದ ಸ್ವರೂಪಕ್ಕೆ ಒಂದಿಷ್ಟೂ ಸೋಕುವಹಾಗಿಲ್ಲವೆಂದೂ ಸ್ಪಷ್ಟವಾಗಿ ಗೊತ್ತಾಗುವದು. ಶಾಸ್ತ್ರವು ನಮಗೆ ದೊರಕಿಸುವ ಈ ದೃಷ್ಟಿಗೆ **ಪರಮಾರ್ಥದೃಷ್ಟಿ**ಯೆಂದು ಹೆಸರು. ಪರಮಾರ್ಥದೃಷ್ಟಿ ಎಂದರೇನು? ಆ ದೃಷ್ಟಿಯಿಂದ ನಮ್ಮ ಆತ್ಮದ ನಿಜವಾದ ಸ್ವರೂಪವನ್ನು ಕಂಡುಕೊಳ್ಳುವದು ಹೇಗೆ? ಎಂಬುದನ್ನು ಇನ್ನೊಮ್ಮೆ ವಿಚಾರಕ್ಕೆ ತೆಗೆದುಕೊಳ್ಳುವೆವು. ಸದ್ಯಕ್ಕೆ ಇಷ್ಟುಮಾತ್ರ ನೆನಪಿನಲ್ಲಿಡಬೇಕು. ನಮ್ಮ ಶಾಸ್ತ್ರಗಳಲ್ಲಿ ಹೇಳಿರುವ ಆತ್ಮಲಾಭವೂ ಈ ಆತ್ಮನನ್ನು ಪಡೆದ ಮೇಲೆ ಆಗುವ ಪ್ರಯೋಜನವೂ

ಸತ್ತಮೇಲೆ ಕಲಾಂತರದಲ್ಲಿ ಲೋಕಾಂತರದಲ್ಲಿ ಕಾಣುವದೆಂಬುದಲ್ಲ; ಇಲ್ಲಿಯೇ, ಈ ಜನ್ಮದಲ್ಲಿಯೇ, ಅನುಭವಕ್ಕೆ ತಂದುಕೊಳ್ಳಬಹುದಾದದ್ದು. ಇದು ಬರಿಯ ಸಂಪ್ರದಾಯದ ಬಲದ ಮೇಲೆ ಗುರುವಿನ ಉಪದೇಶವೆಂಬ ಶ್ರದ್ಧೆಯಿಂದ ಸುಮ್ಮನೆ ನಂಬತಕ್ಕ ವಿಷಯವೂ ಅಲ್ಲ; ಯುಕ್ತಿಗೂ ಅನುಭವಕ್ಕೂ ಹೊಂದಿಸಿ ವಿಚಾರಮಾಡುವದಕ್ಕೆ ಸಿದ್ಧವಾಗಿರುವವರೆಲ್ಲರೂ ಮತ್ತೆ ಯಾವ ವಚನಪ್ರಮಾಣವನ್ನೂ ನಂಬದೆಯೇ ನಿಸ್ಸಂಶಯವಾಗಿ ಮನಗಾಣ ಬಹುದಾಗಿರುವ ತತ್ತ್ವವು. ಭೌತಿಕಶಾಸ್ತ್ರಗಳಲ್ಲಿ ಹೇಳಿರುವ ವಿಷಯಗಳನ್ನು ಹೇಗೆ ಪರೀಕ್ಷಣನಿರೀಕ್ಷಣಗಳಿಂದ ನೋಡಿ ಅರಿತುಕೊಳ್ಳಬೇಕಾಗಿರುವದೋ, ಹಾಗೆಯೇ ನಮ್ಮ ನಮ್ಮ ಅನುಭವಗಳನ್ನು ಪರೀಕ್ಷಿಸಿ ನಿರ್ದುಷ್ಟವಾದ ವಿಚಾರದಿಂದ ನಮ್ಮ ಆತ್ಮತತ್ತ್ವದ ಸ್ವರೂಪವನ್ನು ಅರಿತುಕೊಳ್ಳಬೇಕಾಗಿರುವದು.

★★★★★

# ಮತತ್ರಯ

**- ಶ್ರೀಮತಿ ಮೀನಾಕ್ಷಮ್ಮನವರು**

ಅನಾದಿಯಾದ ಹಿಂದೂಮತವು ವೇದ, ಶಾಸ್ತ್ರ, ಇತಿಹಾಸ, ಪುರಾಣ ಮುಂತಾದ ಶಬ್ದಪ್ರಮಾಣಗಳಿಂದಲೂ ಯುಕ್ತ್ಯನುಭವಗಳಿಂದಲೂ ವ್ಯಾಸಾದಿಮಹರ್ಷಿಗಳಿಂದ ಸ್ಥಾಪಿತವಾಗಿರುವದು. ಉಪನಿಷತ್ಪ್ರತಿಪಾದಿತವಾದ ಈ ಮತವನ್ನು ವೇದವ್ಯಾಸದೇವರು ಬ್ರಹ್ಮಸೂತ್ರಗಳನ್ನೂ ಶ್ರೀಮದ್ಗೌಡಪಾದರು ಕಾರಿಕೆಗಳನ್ನೂ ರಚಿಸಿ ಪೋಷಿಸಿದರು. ಈಚೆಗೆ ಸುಮಾರು 1500 ವರ್ಷಗಳ ಹಿಂದೆ ಶ್ರೀ ಶಂಕರಭಗವತ್ಪಾದರೂ 900 ವರ್ಷಗಳ ಹಿಂದೆ ಶ್ರೀರಾಮಾನುಜಾರ್ಯರೂ ಸುಮಾರು 800 ವರ್ಷಗಳ ಹಿಂದೆ ಶ್ರೀಮಧ್ವಾಚಾರ್ಯರೂ ಲೊಕೋಪಕಾರಕ್ಕಾಗಿ ಆಯಾ ಅಧಿಕಾರಿಗಳ ಅಭಿರುಚಿ, ಯೋಗ್ಯತೆ ಇವುಗಳನ್ನನುಸರಿಸಿ ಸಿದ್ಧಾಂತತ್ರಯವನ್ನು ಏರ್ಪಡಿಸಿದರು. ಇದರಿಂದ ಬ್ರಾಹ್ಮಣರಲ್ಲಿ ಮೂರುಪಂಗಡಗಳು ಉಂಟಾಗಿ ಒಬ್ಬರಲ್ಲೊಬ್ಬರಿಗೆ ಭೋಜನ ಪ್ರತಿಭೋಜನಗಳು ವೈವಾಹಿಕಸಂಬಂಧಗಳು ಕೂಡ ತಪ್ಪಿಹೋಗಿವೆ. ಮತ್ತು ಐಕಮತ್ಯಕ್ಕೆ ವಿರೋಧವಾದ

ದ್ವೇಷಾಸೂಯೆಗಳು ಹುಟ್ಟಿರುವವು. ಈ ನಮ್ಮ ಸ್ಥಿತಿ ಶೋಚನೀಯವಾಗಿ ರುವದರಿಂದ ಈ ವಿಷಯಬಲ್ಲ ಎಲ್ಲರೂ ಆಲೋಚಿಸಬೇಕಾದ ಕೆಲವು ಅಂಶಗಳನ್ನು ಇಲ್ಲಿ ಅರಿಕೆ ಮಾಡುವೆವು.

ಸಿದ್ಧಾಂತಗಳು ಬೇರೆಬೇರೆಯಾಗಿದ್ದರೂ ಬ್ರಾಹ್ಮಣ್ಯವು ಭೇದರಹಿತವಾಗಿ ಒಂದೇ ಆಗಿರುವುದು. ಸಿದ್ಧಾಂತಗಳು ಅವರವರ ಬುದ್ಧಿವೃತ್ತಿ, ಅಭಿರುಚಿ, ಅನುಭವ, ಸಂಪ್ರದಾಯ ಇವುಗಳನ್ನು ಆಶ್ರಯಿಸಿಕೊಂಡಿರುವದು. ಬ್ರಾಹ್ಮಣ್ಯವಾದರೋ ವರ್ಣಾಶ್ರಮಧರ್ಮಗಳನ್ನು ಬೋಧಿಸುವ ಸಾಧಾರಣವಾಗಿರುವ ಶ್ರುತಿಸ್ಮೃತಿ ಮುಂತಾದ ಪ್ರಮಾಣಗಳನ್ನು ಆಶ್ರಯಿಸಿರುತ್ತವೆ. ಈ ಕಾರಣದಿಂದಲೇ ನಿತ್ಯನೈಮಿತ್ತಿಕ ಕರ್ಮಗಳು ಎಲ್ಲರಿಂದಲೂ ಏಕರೀತಿಯಾಗಿ ಆಚರಿಸಲ್ಪಡುತ್ತವೆ. ಆದ್ದರಿಂದ ಜ್ಞಾನವನ್ನುಂಟುಮಾಡುವ ಸಿದ್ಧಾಂತಗಳು ಅವರವರ ಇಷ್ಟದಂತೆ ಭಿನ್ನಿಸಿದರೂ ಬ್ರಾಹ್ಮಣ್ಯವ್ಯವಹಾರಗಳಲ್ಲಿ ಎಲ್ಲರೂ ಅನ್ಯೋನ್ಯಭಾವವನ್ನು ಇಟ್ಟುಕೊಳ್ಳುವದು ಸಾಧ್ಯವಾಗಿಯೂ ಅವಶ್ಯವಾಗಿಯೂ ಇದೆ.

ಸಿದ್ಧಾಂತಭಾಗಗಳಲ್ಲಿಯೂ ವಿಶೇಷವಾದ ಅಂಶಗಳಲ್ಲಿ ಭೇದವಿದ್ದರೂ ಸಾಮಾನ್ಯಾಂಶದಲ್ಲಿ ಒಂದೇ ತಾತ್ಪರ್ಯವಿರುವಹಾಗೆ ತೋರುತ್ತದೆ. ಹೇಗೆಂದರೆ:

1. ಶ್ರೀ ಶಂಕರಭಗವತ್ಪಾದರು '**ಸರ್ವಂ ಖಲ್ವಿದಂ ಬ್ರಹ್ಮ**' ಎಂಬ ಶ್ರುತಿಯನ್ನನುಸರಿಸಿ ಆತ್ಮವಸ್ತು ಒಂದೇ ಇರುವದೆಂತಲೂ ಅದನ್ನು ಜ್ಞಾನಮಾರ್ಗದಿಂದ ನಿರ್ಗುಣವೆಂದು ಅರಿಯಬೇಕೆಂತಲೂ ಭಕ್ತಿಮಾರ್ಗದಿಂದ ಸಗುಣವಾಗಿಯೂ ಭಾವಿಸಿ ಧ್ಯಾನವೇ ಮುಂತಾದ ಸಾಧನಗಳಿಂದ ಭಗವದ ಅನುಗ್ರಹವನ್ನು ಸಂಪಾದಿಸಿಕೊಂಡು ಜನ್ಮರಾಹಿತ್ಯವನ್ನು ಪಡೆಯಬೇಕೆಂತಲೂ ಅನುಗ್ರಹಿಸಿದರು.

2. ಶ್ರೀ ರಾಮಾನುಜಾರ್ಯ್ಯರು **ಸಗುಣತ್ವ**ವನ್ನೆ ಒತ್ತಿಹೇಳಿ **ಭಕ್ತಿವೈರಾಗ್ಯ**ಗಳಿಂದ ಮುಕ್ತಿಯನ್ನು ಪಡೆಯಬೇಕೆಂದು ಸಮರ್ಥಿಸಿರುತ್ತಾರೆ.

3. ಶ್ರೀಮಧ್ವಾಚಾರ್ಯರೂ **ಬ್ರಹ್ಮನ ಸಗುಣತ್ವ**ವನ್ನೆ ಒತ್ತಿ ಹೇಳಿ **ಭಕ್ತಿಜ್ಞಾನ** ಈ ಸಾಧನೆಗಳಿಂದ ಜೀವನು ಭವಸಾಗರವನ್ನು ದಾಟಬೇಕೆಂದು ಅನುಗ್ರಹಿಸಿರುವರು.

ಹೀಗೆ ಈ ಮೂರು ಸಿದ್ಧಾಂತಗಳಿಗೂ ಭಕ್ತಿಜ್ಞಾನವೈರಾಗ್ಯಗಳಿಂದ ಸರ್ವೇಶ್ವರನ ಕೃಪೆಯನ್ನು ಸಂಪಾದಿಸಿದ ಹೊರತು ಜೀವನಿಗೆ ಗತ್ಯಂತರವಿಲ್ಲವೆಂಬುವ ಅಂಶವು ಸಾಮಾನ್ಯವಾಗಿದೆ. ಮತ್ತು ಹಿಂದೆ ಸೂಚಿಸಿದಂತೆ ವೇದಾಧ್ಯಯನ, ಸ್ವಕರ್ಮಾನುಷ್ಠಾನ, ಸದಾಚಾರ, ಧರ್ಮಾಧರ್ಮವಿವೇಕ, ಉಪಾಸ್ಯದೇವರು ಇವೆಲ್ಲವೂ ಒಂದೇ ಆಗಿವೆ.

ಇದೂ ''**ಸರ್ವಂ ಖಲ್ವಿದಂ ಬ್ರಹ್ಮ**'' ಎಂಬ ಒಂದು ಶ್ರುತಿಗೇ ಸಿದ್ಧಾಂತತ್ರಯ ಆಚಾರ್ಯರು ಕೆಳಗೆ ವಿವರಿಸಿರುವಂತೆ ಬೇರೆ ಬೇರೆ ತಾತ್ಪರ್ಯಗಳನ್ನು ಬೋಧಿಸಿದ್ದಾಗ್ಯೂ ಮೂರು ಸಿದ್ಧಾಂತಗಳೂ ಅವರವರ ಅಭಿರುಚಿಗೆ ತಕ್ಕ ಹಾಗೆ ಗ್ರಾಹ್ಯಗಳಾಗಿರುವವು. ಹೇಗೆಂದರೆ:

1. ಶ್ರೀ ಶಂಕರಭಗವತ್ಪಾದರು ಉಪದೇಶಿಸುವದು ಏನೆಂದರೆ ಬ್ರಹ್ಮವಸ್ತು ಒಂದೇ ಸರ್ವಪ್ರಪಂಚರೂಪವಾಗಿಯೂ ಸರ್ವವ್ಯಾಪಕನಿಯಂತೃ ರೂಪವಾಗಿಯೂ ತೋರುವದು. ಅದನ್ನು ಬಿಟ್ಟು ಬೇರೆ ವಸ್ತುವಿಲ್ಲ.

2. ಇದೇ ಶ್ರುತಿಗೆ ಶ್ರೀರಾಮಾನುಜಾರ್ಯರು ಬ್ರಹ್ಮವಸ್ತುವೊಂದೇ ಚಿತ್ - ಅಚಿತ್ ಈ ರೂಪವಾದ ಪ್ರಪಂಚವಾಗಿಯೂ ಸರ್ವವ್ಯಾಪಕವೂ ನಿಯಂತೃವೂ ಆಗಿ ಸರ್ವವಸ್ತುಗಳನ್ನೂ ತನ್ನ ಶರೀರವಾಗಿ ಪಡೆದುದು ಎಂದು ನಿಶ್ಚಯಿಸಿದರು.

3. ಶ್ರೀಮಧ್ವಾಚಾರ್ಯರು ಬ್ರಹ್ಮವಸ್ತು ಒಂದೇ ಸರ್ವಪ್ರಪಂಚಕ್ಕೂ ವ್ಯಾಪಕವಾಗಿಯೂ ಸ್ವಾಮಿಯಾಗಿಯೂ ಇರುವದು ಎಂದು ನಿರ್ಧರಿಸಿದರು.

ಈ ಮೂರು ಸಿದ್ಧಾಂತಗಳನ್ನೂ ನಿರ್ಣಯಿಸಿದ ಆಚಾರ್ಯತ್ರಯಕ್ಕೂ ನಾವು ಕೃತಜ್ಞರಾಗಿರಬೇಕೇ ಹೊರತು ಆಯಾ ಮತಾವಲಂಬಿಗಳಲ್ಲಿ ದ್ವೇಷಾಸೂಯೆಗಳನ್ನು ಮಾಡುವದರಿಂದ ಐಕಮತ್ಯಕ್ಕೆ ನಾಶವೇ ಹೊರತು ಬೇರೆ ಯಾವ ಫಲವನ್ನೂ ಹೊಂದಲಾರೆವು. ಜ್ಞಾನವನ್ನು ಸಂಪಾದಿಸುವದರಲ್ಲಿಯೂ ಭಕ್ತಿಮಾಡುವದರಲ್ಲಿಯೂ ಒಬ್ಬೊಬ್ಬರಿಗೂ ಸರ್ವಸ್ವಾತಂತ್ರ್ಯವನ್ನು ಕೊಡುವದೇ ಅಲಂಕಾರವಲ್ಲವೆ? ಉಳಿದ ವೈದಿಕ ಲೌಕಿಕ ವ್ಯವಹಾರಗಳಲ್ಲಿ ಮತತ್ರಯದವರೂ ಒಂದು ಮನೆಯವರಹಾಗೆ ಪ್ರೀತಿಯಿಂದಲೂ ಗೌರವದಿಂದಲೂ ಏಕೆ ನಡೆದುಕೊಳ್ಳಬಾರದು?

ಯೂರೋಪುಖಂಡದಲ್ಲಿ ತತ್ತ್ವಬೋಧಕರೊಳಗೆ ನೂರಾರು ಸಿದ್ಧಾಂತಗಳುಂಟು. ಅವುಗಳಲ್ಲಿ ಅನೇಕವು ನಮ್ಮ ಮತತ್ರಯದ ಹೇಳಿಕೆಯಾಗಿ ರುವವು. ಆದರೆ ಇಷ್ಟು ಸಿದ್ಧಾಂತಗಳಿಗೆ ಉತ್ಪತ್ತಿಸ್ಥಾನವಾದ ಆ ಖಂಡದಲ್ಲಿ ಮತನಿಮಿತ್ತದಿಂದ ಲೌಕಿಕವ್ಯವಹಾರಗಳಲ್ಲಿ ಯಾವದೊಂದು ವೈಷಮ್ಯವೂ ಕಂಡುಬರುವದಿಲ್ಲ. ಜಗತ್ಸತ್ಯತ್ವವಾದಿ, ಮಿಥ್ಯಾತ್ವವಾದಿ, ಏಕತತ್ತ್ವವಾದಿ ಅನಂತತತ್ತ್ವವಾದಿ, ಸ್ಯಾದ್ವಾದಿ, ಶೂನ್ಯವಾದಿ, ಇವರೆಲ್ಲರೂ ತಮ್ಮ ತಮ್ಮ ಲೌಕಿಕಕೃತ್ಯಗಳನ್ನು ಮಿತ್ರರಂತೆಯೆ ಅನ್ಯೋನ್ಯತೆಯಿಂದ ನಡೆಸಿಕೊಂಡು ಬರುತ್ತಾರೆ. ಹೀಗೆ ಬ್ರಾಹ್ಮಣರು ಅನ್ಯೋನ್ಯಪ್ರೀತಿ, ಐಕಮತ್ಯ ಇವುಗಳೊಡನೆ ನಡೆದುಕೊಳ್ಳುವದಕ್ಕೆ ಇನ್ನೂ ಸರಿಯಾದ ಕಾಲ ಬರಲಿಲ್ಲವೆ?

★★★★★

# ವಿಶಿಷ್ಟಾದ್ವೈತ ಸಿದ್ಧಾಂತ

# ಶ್ರೀರಾಮಾನುಜಾಚಾರ್ಯರ ಸಿದ್ಧಾಂತ[1]

- ಶ್ರೀ ಕೆ.ಎ. ಕೃಷ್ಣಸ್ವಾಮಿ ಅಯ್ಯರ್, ಬಿ.ಎ.

## 1

ರಾಮಾನುಜಾಚಾರ್ಯರು ಬ್ರಹ್ಮಸೂತ್ರಕ್ಕೆ ಭಾಷ್ಯವನ್ನು ಮಾಡಿದಂದಿನಿಂದ, ಬಹುಕಾಲದಿಂದಲೂ ನಡೆದುಕೊಂಡು ಬಂದಿದ್ದ ಶಂಕರಮತದಲ್ಲಿ ಒಡಕುಂಟಾಗುವದಕ್ಕೆ ಮೊದಲಾಯಿತು. ಇವರ ತರುವಾಯ ಬಂದ ಮಧ್ವಾಚಾರ್ಯರಂತೆಯೇ ಇವರೂ ಮಾಯಾವಾದವನ್ನು ತಿರಸ್ಕರಿಸಿ ವ್ಯವಹಾರದಲ್ಲಿ ಕಂಡುಬರುವ ವಸ್ತುಗಳೂ ಅವುಗಳಲ್ಲಿರುವ ಭೇದವೂ ಸತ್ಯವೆಂದು ತೋರಿಸುವದಕ್ಕೆ ಹೋರಾಡಿದರು. ಎಷ್ಟೋ ಜನರಿಗೆ ಮಾಯಾವಾದವೆಂಬುದು ಒಂದು ಕೆಟ್ಟಕನಸಿನಂತೆ ಆಗಿಬಿಟ್ಟಿತ್ತು. ಒಂದು ಕಡೆ ನೋಡಿದರೆ ವೇದಗಳಲ್ಲಿ ಬ್ರಹ್ಮವು ಒಂದೇ ಎಂದು ಘಂಟಾಘೋಷವಾಗಿ ಸಾರಿರುತ್ತದೆ, ಸರ್ವವೂ ಬ್ರಹ್ಮವೇ ಎಂಬುದೇ ಸಾಂಪ್ರದಾಯಿಕವಾದ ಮತವಾಗಿ ಕಾಣುತ್ತದೆ; ಮತ್ತೊಂದು ಕಡೆ ನೋಡಿದರೆ ನಮ್ಮೆದುರಿಗೆ ಇರುವ ಪ್ರಪಂಚದಲ್ಲಿ ನಾನಾತ್ವವೂ ಸತ್ಯಭೇದಗಳೂ ಇದ್ದೇತೀರಬೇಕೆಂದು ಕಾಣುತ್ತಿದೆ. ಏನು ಮಾಡುವದು? ಈ ಸಮಯಕ್ಕೆ ಮಾಯಾವಾದದ ಹಿಡಿತದಿಂದ ಜನರನ್ನು ತಪ್ಪಿಸಿ ಪ್ರಪಂಚಕ್ಕೆ ಆನಂದವನ್ನೂ ಸೌಂದರ್ಯವನ್ನೂ ಮತ್ತೆ ತಂದುಕೊಡುವ ಒಬ್ಬ ಆಚಾರ್ಯರ ಅವಶ್ಯಕತೆಯು ಬಹಳವಾಗಿತ್ತು. ವೇದವಚನಗಳನ್ನೂ ತಳ್ಳಬಾರದು, ಸರ್ವಜನರಿಗೂ ಇರುವ ಅನುಭವವನ್ನೂ ತಿರಸ್ಕರಿಸಬಾರದು - ಇಂಥದ್ದೊಂದು ಉಪದೇಶವನ್ನು ಮಾಡುವ ಆಚಾರ್ಯರೊಬ್ಬರು ಬೇಕಾಗಿತ್ತು. ರಾಮಾನುಜಾಚಾರ್ಯರು ಈ ಕಾರ್ಯವನ್ನು ನೆರವೇರಿಸುವದಕ್ಕಾಗಿ ಬಂದರು. ಅವರು ತಮ್ಮ ಅಸಾಧಾರಣವಾದ ಬುದ್ಧಿಕೌಶಲದಿಂದಲೂ ತರ್ಕದಲ್ಲಿದ್ದ ಜಾಣ್ಮೆಯಿಂದಲೂ

---

1. ಇದು ಶ್ರೀಯುತ ಕೃಷ್ಣಸ್ವಾಮಿ ಅಯ್ಯರವರು ಮೈಸೂರಿನಲ್ಲಿ ನಡೆದ ಭರತಖಂಡದ ತತ್ತ್ವಶಾಸ್ತ್ರಜ್ಞರ ಸಮಾಜದ ಎಂಟನೆಯ ಸಮ್ಮೇಳನದಲ್ಲಿ ಓದಿದ ಪ್ರಬಂಧದ ಭಾಗವು.

ವಿಸ್ತಾರವಾದ ಶಾಸ್ತ್ರಪಾಂಡಿತ್ಯದಿಂದಲೂ ವೇದದ ಉಪದೇಶಕ್ಕೆ ಒಂದು ಹೊಸ ರೂಪವನ್ನೇ ಕೊಟ್ಟರು. ಅವರ ಅಸಾಧಾರಣ ಬುದ್ಧಿಯ ಫಲವಾಗಿ ಶ್ರೀಭಾಷ್ಯವು ಹೊರಕ್ಕೆ ಬಂದಿತು. ಉಪನಿಷತ್ತುಗಳಲ್ಲಿ ಏಕತ್ವವನ್ನೇ ಹೇಳಿದೆಯೆಂಬುದನ್ನು ಶಂಕರಾಚಾರ್ಯರಂತೆಯೇ ಇವರೂ ಒಪ್ಪಿದರು: ಆದರೆ ಅದ್ವೈತದ ಬೆನ್ನಂಟಿಕೊಂಡೇ ಇರುವ ಮಾಯಾವಾದವನ್ನು ತಿರಸ್ಕರಿಸಿಬಿಟ್ಟರು.

ದಕ್ಷಿಣಭಾರತದಲ್ಲಿ ಈ ಕಾಲಕ್ಕೆ ಧರ್ಮಶ್ರದ್ಧೆಯು ಮಿತಿಮೀರಿ ಉಕ್ಕಿಹರಿಯುತ್ತಿತ್ತೆಂಬುದು ಇತಿಹಾಸದಿಂದ ತಿಳಿಯಬರುತ್ತದೆ. ಶಂಕರಾಚಾರ್ಯರ ಉಪದೇಶಗಳು ಸಾಮಾನ್ಯಜನರ ಬುದ್ಧಿಗೆಟುಕದಷ್ಟು ಸೂಕ್ಷ್ಮವಾಗಿದ್ದದ್ದರಿಂದ, ಅದನ್ನು ಜನರು ಸರಿಯಾಗಿ ತಿಳಿದುಕೊಳ್ಳಲಾರದೆ ತಪ್ಪು ಹಾದಿಗೆ ಹೋಗುತ್ತಿದ್ದರು. ಎಲ್ಲಿಯೋ ಒಂದೊಂದು ಕಡೆಯಲ್ಲಿ ವಿದ್ವಾಂಸರು ಮೂಲೆಯಲ್ಲಿ ಕುಳಿತು ಏಕತ್ವವಿಚಾರವನ್ನು ಮಾಡಿಮಾಡಿ ಬುದ್ಧಿಯನ್ನು ಮಸುಳಿಸಿಕೊಳ್ಳುತ್ತಿದ್ದರು, ವೇದಾಂತತತ್ತ್ವಗಳನ್ನು ನ್ಯಾಯಪ್ರಯೋಗಗಳ ರೂಪಕ್ಕೆ ಕೆಡವಿ ಬರಿಯ ತರ್ಕದ ಕಲ್ಪನೆಗಳನ್ನಾಗಿ ಮಾಡಿಕೊಳ್ಳಹತ್ತಿದ್ದರು. ಭಕ್ತಿಶ್ರದ್ಧೆಯುಳ್ಳವರಿಗೆ ಇವುಗಳಿಂದ ಉತ್ಸಾಹವಾಗಲಿ ಚಿತ್ತಸಮಾಧಾನವಾಗಲಿ ಉಂಟಾಗುವಂತೆಯೇ ಇರಲಿಲ್ಲ. ಆದ್ದರಿಂದ ಜನರ ಮನಸ್ಸು ಮತ್ತೊಂದು ಕಡೆಗೆ ತಿರುಗಿತು. ಪುರಾಣಗಳನ್ನೂ ಇತಿಹಾಸಗಳನ್ನೂ ಶ್ರದ್ಧಾಪೂರ್ವಕವಾಗಿ ಎಲ್ಲರೂ ಓದಲಾರಂಭಿಸಿದರು. ಮೂರ್ತಿ ಪೂಜೆ, ದೇವಾಲಯಗಳು - ಇವುಗಳಲ್ಲಿ ಜನರಿಗೆ ಹೆಚ್ಚಿನ ಆದರವುಂಟಾಯಿತು. ವಿಚಾರವಿಲ್ಲದೆ ಮಾಹಾತ್ಮ್ಯಗಳನ್ನು ನಂಬುವದು ಹೆಚ್ಚಾಯಿತು. ಪ್ರತಿಯೊಂದು ದೇವತೆಗೂ ಭಕ್ತರು ತಮತಮಗೆ ಇಷ್ಟವಾದ ಗುಣಗಳನ್ನು ಆರೋಪಿಸುವದಕ್ಕೆ ಮೊದಲುಮಾಡಿದರು. ತಟಸ್ಥೇಶ್ವರವಾದದ ಜಯದುಂದುಭಿಯು ಎಲ್ಲೆಲ್ಲಿಯೂ ಮೊಳಗಿತು; ವೇದಾಂತವಿಚಾರವೆಂಬುದು ಎಲ್ಲಿಯೋ ಮೂರು ನಾಲ್ಕು ಪಂಡಿತರ ವಿನೋದಕಾಲಕ್ಷೇಪಕ್ಕೆಂದಾಗಿ ಬಿಟ್ಟಿತು.

ಈಗ ಭಾಗವತರೆಂದು ಜನರ ಒಂದು ಹೊಸ ಸಮಾಜವು ತಟ್ಟನೆ ಮುಂದಕ್ಕೆ ಬಂದು ಜನಾನುರಾಗವನ್ನು ಸಂಪಾದಿಸಿಕೊಂಡಿತು. ಈ ಸಮಾಜವು ಬಹುಕಾಲದಿಂದಲೂ ಎಲ್ಲಿಯೋ ಅಜ್ಞಾತವಾಸವನ್ನು ಅನುಭವಿಸಿಕೊಂಡಿದ್ದಿರಬೇಕು. ಆ ಸಮಾಜಕ್ಕೆ ಇನ್ನೂ ಬಹುಜನರು ಸೇರಿರಲಿಲ್ಲವಾದರೂ ಬಹುಕಡೆಗಳಲ್ಲಿ ಈ ಜನರು ಇರುತ್ತಿದ್ದರು. ಇವರಲ್ಲಿ ಜಾತ್ಯಾಚಾರಗಳ ಕಟ್ಟು ಇರಲಿಲ್ಲ ಕಂಚಿ,

ಶ್ರೀರಂಗ- ಮುಂತಾದ ಕ್ಷೇತ್ರಗಳಲ್ಲಿ ಇವರು ಸಂಘಗಳನ್ನು ಮಾಡಿಕೊಂಡು ಆಗಾಗ್ಗೆ ಸಗುಣೇಶ್ವರಭಕ್ತಿಯನ್ನು ಬೋಧಿಸುವದು, ಭಜನೆಗಳನ್ನೂ ಕೀರ್ತನೆಗಳನ್ನೂ ಏರ್ಪಡಿಸುವದು, ಭಕ್ತಿಯಿಂದುಂಟಾದ ಅದ್ಭುತವಾದ ಅನುಭವವಿಶೇಷಗಳನ್ನು ತಿಳಿಸುವದು - ಹೀಗೆಲ್ಲ ಮಾಡುತ್ತಿದ್ದರು; ಪ್ರತಿಯೊಬ್ಬನೂ ಈಶ್ವರನೊಡನೆ ಸಂಭಾಷಣೆಮಾಡಬಹುದೆಂದು ಅವರು ಜನರನ್ನು ಹುರಿದುಂಬಿಸುತ್ತಿದ್ದರು. ಪ್ರತಿಯೊಬ್ಬನಿಗೂ ತಾನು ಆರಾಧಿಸುವ ದೇವರು ತನ್ನನ್ನು ರಕ್ಷಿಸುತ್ತಾನೆಂಬ ನಂಬಿಕೆಯು ಹೆಚ್ಚಿತು, ಸ್ವಲ್ಪ ದಿನಗಳಲ್ಲಿಯೇ ಈ ಜನರೆಲ್ಲ ಒಂದು ಸಮಾಜಕ್ಕೆ ಸೇರಿದವರಾದರು.

ಇವರೆಲ್ಲರೂ ಬಡವರೇ ಆದರೂ ಯಾವನಾದರೂ ತಮ್ಮವನು ಕಷ್ಟದಲ್ಲಿ ಸಿಕ್ಕಿದ್ದರೆ ಅವನಿಗೆ ಸಹಾಯಮಾಡುವದಕ್ಕೇ ಅಲ್ಲದೆ ತಮ್ಮ ಮತಕ್ಕಾಗಿ ಪ್ರಾಣವನ್ನೇ ಒಪ್ಪಿಸುವದಕ್ಕೆ ಸಿದ್ಧರಾದರು. ಮಿಕ್ಕ ಜನರು ಇವರನ್ನು ವೈಷ್ಣವರೆಂದು ಕರೆಯುತ್ತಿದ್ದರು.

ಈ ಮತಕ್ಕೆ ಸೇರಿದ್ದವರಲ್ಲಿ ತಿರುಕಚ್ಚಿನಂಬಿ ಎಂಬ ಒಬ್ಬ ಬಡಬ್ರಾಹ್ಮಣಭಕ್ತನು ಕಾಂಚೀನಗರದಲ್ಲಿರುತ್ತಿದ್ದನು. ಪರಿಶುದ್ಧವಾದ ನಡತೆಯಿಂದಲೂ ಉದಾತ್ತವಾದ ತತ್ತ್ವೋಪದೇಶದಿಂದಲೂ ಅವನ ಪ್ರಖ್ಯಾತಿಯು ಎಲ್ಲೆಲ್ಲಿಯೂ ಹರಡಿತ್ತು. ಅವನು ತುಂಬ ಪವಿತ್ರಾತ್ಮನಾಗಿದ್ದದ್ದರಿಂದ ಕಂಚಿಯ ವರದರಾಜಸ್ವಾಮಿಯೊಡನೆ ನೇರಾಗಿ ಮಾತನಾಡುತ್ತಾನೆಂಬ ವಾರ್ತೆಯು ಹಬ್ಬಿತು. ರಾಮಾನುಜಾಚಾರ್ಯರು ಶ್ರದ್ಧಾಭಕ್ತಿಯ ಸ್ವಭಾವಾದವರಾದ್ದರಿಂದ ಜಾತಿಕುಲಗಳನ್ನು ಲೆಕ್ಕಿಸದೆ ಭಕ್ತರಾದವರಲ್ಲೆಲ್ಲ ಸಹಾನುಭೂತಿಯನ್ನು ತೋರಿಸುತ್ತಿದ್ದರು; ಆದ್ದರಿಂದ ಅವರಿಗೆ ಈತನಲ್ಲಿ ಬೇಗನೆ ಗೌರವವುಂಟಾಗಿ ಅವರು ಈ ರಹಸ್ಯಸಮಾಜಕ್ಕೆ ಸೇರಿದ್ದೇನೂ ಆಶ್ಚರ್ಯವಲ್ಲ. ಆದ್ದರಿಂದಲೇ ವೇದದಲ್ಲಿದ್ದ ಶ್ರದ್ಧೆ, ಪ್ರಪಂಚವು ಸತ್ಯವೆಂಬುದನ್ನು ಸ್ಥಾಪಿಸಬೇಕೆಂಬ ಕುತೂಹಲ - ಈ ಎರಡು ಭಾವನೆಗಳಿಗೆ ಅವರಲ್ಲಿ ಒಳತೋಟಿಯುಂಟಾಗಿ ಅವರು ತಮ್ಮ ಸಂದೇಹಗಳನ್ನು ಈ ನಂಬಿಗೆ ತಿಳಿಸಿದರು. ಆಗ ಆತನು 'ಈ ವಿಷಯವನ್ನು ವರದರಾಜನನ್ನು ಕೇಳಿ ಆತನ ಅಪ್ಪಣೆಯನ್ನು ನಿಮಗೆ ತಿಳಿಸುವೆನು'- ಎಂದು ವಾಗ್ದಾನವಿತ್ತನು. ಇದರಂತೆ ಆತನು ಕೂಡಲೆ ನಡೆಸಿಯೂ ಕೊಟ್ಟನು. ಪ್ರಪಂಚದಲ್ಲಿರುವ ಭೇದವು ಸತ್ಯವೆಂಬುದೂ ಜೀವನು ಬ್ರಹ್ಮನಿಗಿಂತ ಬೇರೆಯೆಂಬುದೂ ದೇವರಿಗೆ ಅಭಿಮತವಾಗಿರುವದೆಂಬುದನ್ನು ಕೇಳಿದ ಮೇಲೆ ರಾಮಾನುಜರಿಗೆ ಎಷ್ಟೋ ಮನಸ್ಸಮಾಧಾನವಾಯಿತು.

ರಾಮಾನುಜರ ಜೀವನಚರಿತ್ರೆಯಲ್ಲಿ ಈ ಘಟನೆಗೇನೂ ಅಷ್ಟು ಬೆಲೆಯಿಲ್ಲವೆಂದು ಈಗಿನವರು ಭಾವಿಸಬಹುದು. ಆದರೆ ಆಗಿನ ಕಾಲದ ಸಂದರ್ಭವೇ ಬೇರೆಯಾಗಿದ್ದಿತು. ಆಗ ಈಶ್ವರಭಕ್ತಿಯನ್ನು ಉಜ್ಜೀವನಗೊಳಿಸುವ ಶ್ರದ್ಧೆಯು ಎಲ್ಲಾ ಕಡೆಯಲ್ಲಿಯೂ ತುಂಬಿ ತುಳುಕುತ್ತಲಿತ್ತು; ದರ್ಶನಗಳು, ಭವಿಷ್ಯ, ದೇವರಪ್ಪಣೆಗಳು, ಸ್ವಪ್ನಗಳು, ಪವಾಡಗಳು - ಇವುಗಳಲ್ಲಿಯೇ ಆಗಿನ ಜನರಿಗೆ ಹೆಚ್ಚಿನ ನಂಬಿಕೆಯಿತ್ತು.

ಇಷ್ಟು ಹೊತ್ತಿಗೆ ಶ್ರೀರಂಗದಲ್ಲಿ ಒಂದು ಹೊಸ ಘಟನೆಯಾಯಿತು. ಅಲ್ಲಿದ್ದ ವೈಷ್ಣವಗುರುಗಳಾದ ಯಾಮುನಾಚಾರ್ಯರು ತಮ್ಮ ಉತ್ಕ್ರಾಂತಿಯ ಕಾಲದಲ್ಲಿ ರಾಮಾನುಜರನ್ನು ನೋಡಬೇಕೆಂದು ಹೇಳಿ ಕಳುಹಿಸಿದರು. ರಾಮಾನುಜರ ಅಸಾಧಾರಣವಾದ ಬುದ್ಧಿಶಕ್ತಿಯನ್ನು ಶ್ರೀವೈಷ್ಣವಮತಪ್ರಸಾರಕ್ಕೆ ಉಪಯೋಗಿಸಿಕೊಳ್ಳಬೇಕೆಂಬುದು ಅವರ ಉದ್ದೇಶವು; ಈ ಕಾರ್ಯವನ್ನು ರಾಮಾನುಜಾಚಾರ್ಯರಿಗೆ ಒಪ್ಪಿಸಿದರೆ ಸಮರ್ಪಕವಾಗಿ ನಡೆಯುವದೆಂದು ಅವರಿಗೆ ಭರವಸೆಯುಂಟಾಗಿತ್ತು. ರಾಮಾನುಜರು ಶೀಘ್ರವಾಗಿಯೇ ಶ್ರೀರಂಗಕ್ಕೇನೋ ಬಂದರು. ಆದರೆ ಪಾಪ! ಅವರು ಬರುವ ಹೊತ್ತಿಗೆ ಆ ಮಹಾತ್ಮರು ದೇಹವನ್ನು ಬಿಟ್ಟಿದ್ದರು. ಅವರು ಬದುಕಿರುವಾಗಲೇ ಅವರ ಸಮಾಗಮವು ತಮಗೆ ಆಗಲಿಲ್ಲವಲ್ಲ!- ಎಂದು ರಾಮಾನುಜರಿಗೆ ತುಂಬ ಪಶ್ಚಾತ್ತಾಪವುಂಟಾಯಿತು. ಆದರೆ ಅಲ್ಲಿ ಒಂದು ವಿಶೇಷವು ಅವರ ಕಣ್ಣಿಗೆ ಬಿತ್ತು. ಶವದ ಬಲಗೈ ಬೆರಳುಗಳಲ್ಲಿ ಮೂರು ಇನ್ನೂ ಮಡಿಸಿಕೊಂಡೇ ಇದ್ದವು. ರಾಮಾನುಜನರು ''ಇದರಭಿಪ್ರಾಯವೇನು? ನಾನು ನೆರವೇರಿಸಬೇಕಾದ ಮೂರು ಕಾರ್ಯಗಳು ಇವರ ಮನಸ್ಸಿನಲ್ಲಿದ್ದಿರಬಹುದೆ?'' ಎಂದು, ಒಂದು ವೇಳೆ ಹೀಗೇ ಇದ್ದರೂ ಇರಬಹುದೆಂಬ ನಂಬಿಕೆಯ, ಶ್ರದ್ಧಾಭರದಿಂದ ''ಮಹನೀಯರೆ, ನಿಮ್ಮ ಅಪ್ಪಣೆಯಂತೆ ನಡೆಯಲು ನಾನು ಸಿದ್ಧನಾಗಿರುವೆನು. ಇಗೋ ಎಲ್ಲರ ಮುಂದೆಯೂ ಆಣೆಮಾಡಿ ಹೇಳಿರುತ್ತೇನೆ. ಭಾಗವತ ಮತಕ್ಕೆ ಅನುಸಾರವಾಗಿ ಬ್ರಹ್ಮಸೂತ್ರಕ್ಕೆ ಭಾಷ್ಯವನ್ನು ಬರೆಯಬೇಕೆಂಬುದು ತಮ್ಮ ಒಂದು ಉದ್ದೇಶವೇನು?'' ಎಂದು ಗಟ್ಟಿಯಾಗಿ ಕೂಗಿ ಕೇಳಿದರು. ಸ್ವಲ್ಪ ಹೊತ್ತಿನಲ್ಲಿ ಒಂದು ಬೆರಳು ಮೆಲ್ಲಗೆ ಬಿಟ್ಟುಕೊಂಡ ನೆಟ್ಟಗಾಯಿತು. ಆ ಮೇಲೆ ಇಂಥ ಇನ್ನೆರಡು ಪ್ರಶ್ನೆಗಳನ್ನು ಹಾಕಲು ಮಿಕ್ಕೆರಡು ಬೆರಳುಗಳೂ ಹೀಗೆಯೇ ಬಿಟ್ಟುಕೊಂಡವು. ರಾಮಾನುಜಾಚಾರ್ಯರ ಪರಮೋದ್ದೇಶವು ಈಗ ನೆರವೇರಿದಂತಾಯಿತು. ಭಾಗವತ ಜನರಿಗೆಲ್ಲ ಈಗ ಅವರು ಗುರುಗಳಾದರು; ತಮ್ಮ ಉತ್ಸಾಹವೆಲ್ಲವನ್ನೂ ಉಪಯೋಗಿಸಿ ಪೂರ್ಣಶ್ರದ್ಧೆಯಿಂದ

ಅವರಿಗೆ ಉಪಕಾರಮಾಡಬಹುದೆಂದು ಅವರಿಗೆ ಸಂತೋಷವಾಯಿತು. ತಮ್ಮ ಪ್ರತಿಭೆಯನ್ನೂ ಪಾಂಡಿತ್ಯವನ್ನೂ ಈ ಜನರ ಕಾರ್ಯಕ್ಕಾಗಿ ಅವರು ಪೂರ್ಣವಾಗಿ ಉಪಯೋಗಿಸಿದರು. ಇವರ ಮಹಾಫಲವಾಗಿ ಶ್ರೀಭಾಷ್ಯವು ರೂಪುಗೊಂಡಿತು.

## 2

ರಾಮಾನುಜರು ವ್ಯವಹಾರದಲ್ಲಿ ತೋರುವ ದ್ವೈತವೇ ಪರಮಾರ್ಥವೆಂದು ಸ್ಥಾಪಿಸುವದಕ್ಕೆ ಹೊರಟರಾದರೂ ಅದನ್ನು ಯುಕ್ತಿಯ ಆಧಾರದಿಂದ ಸ್ಥಾಪಿಸುವದಕ್ಕೆ ಹೊಸ ವಿಚಾರಮಾರ್ಗಗಳನ್ನು ಯಾವದನ್ನೂ ಅವರು ತೆಗೆದು ತೋರಿಸಲಿಲ್ಲ. ವೇದಗಳು, ಲೋಕಬುದ್ಧಿ - ಇವೆರಡನ್ನೇ ಅವರು ನಂಬಿಕೊಂಡಿರುವದರಿಂದ ಅವರ ಮಾತಿಗೆ ತತ್ತ್ವಶಾಸ್ತ್ರದ ದೃಷ್ಟಿಯಿಂದ ಏನೂ ಬೆಲೆಯಿಲ್ಲದಂತಾಯಿತು; ಭ್ರಾಂತಿಯೆಂಬುದೇ ಜಗತ್ತಿನಲ್ಲಿಲ್ಲವೆಂದು ಅವರು ಹೇಳಿರುವದನ್ನು ಕೇಳಿದರಂತೂ ಯಾರಾದರೂ ಬೆಪ್ಪಾಗಿ 'ಇದೇನು ಎದೆಯಪ್ಪ!' ಎನ್ನುವಂತಾಗುತ್ತದೆ.

ವ್ಯವಹಾರದಲ್ಲಿ ಭೇದವಿದ್ದೇ ಇದೆ, ಅದು ನಿಜವೆಂದು ನಾವು ಇಟ್ಟುಕೊಳ್ಳುತ್ತಲೂ ಇದ್ದೇವೆ. ಆದರೆ ಈ ನಂಬಿಕೆಯನ್ನೇ ತೋರಿಸಿಬಿಟ್ಟಮಾತ್ರದಿಂದ ಇದೆಲ್ಲ ಯುಕ್ತಿಸಿದ್ಧವೆಂದಾಗಲಾರದು. ವಿಷಯಗಳನ್ನು ಇಂದ್ರಿಯಗಳಿಂದ ಅರಿಯುತ್ತೇವೆಂಬುದೂ ಸಾಮಾನ್ಯವಾಗಿ ಇಂದ್ರಿಯಗಳು ನಮ್ಮನ್ನು ಮೋಸಗೊಳಿಸುವದಿಲ್ಲವೆಂಬುದೂ ನಿಜವೆ. ಆದರೆ ಭ್ರಾಂತಿಗಳಾಗುವವಲ್ಲ, ಅವಕ್ಕೇನು ಗತಿ? ತಪ್ಪುತಿಳಿವಳಿಕೆಯೇ ಇಲ್ಲ, ಭ್ರಾಂತಿಯೇ ಇಲ್ಲ - ಎನ್ನುವದು ದೃಷ್ಟವಿರುದ್ಧವಾಗಿದೆ. ಇದೂ ಅಲ್ಲದೆ ಕನಸೆಂಬುದು ನಾವು ಕಂಡ ಹಾಗೆಯೇ ಎಲ್ಲರಿಗೂ ಆಗುವ ವ್ಯಾಮೋಹವು; ಅದಕ್ಕೆ ನಮ್ಮನ್ನು ಬಿಟ್ಟರೆ ಮತ್ತೆ ಯಾವ ಆಶ್ರಯವೂ ಇಲ್ಲ, ಅದು ಮತ್ತೆಲ್ಲಿಯೂ ಇರುವದಕ್ಕೂ ಆಗುವದಿಲ್ಲ. ಕನಸುಗಳೆಂಬವು ದಿನದಿನವೂ ಆಗುತ್ತಿರುವವು, ಅವುಗಳಲ್ಲಿ ಕಾಣುವ ವಸ್ತುಗಳನ್ನು ಸತ್ಯವೆನ್ನುವದಕ್ಕೆ ಬರುವ ಹಾಗೆಯೇ ಇಲ್ಲ. ಆ ಕಾಲಕ್ಕೆ ಈಶ್ವರನು ಅವುಗಳನ್ನು ಸೃಷ್ಟಿಮಾಡುವನೆಂಬುದು ಈಶ್ವರವಾದಿಯು ಹೂಡುವ ಹಂಚಿಕೆ ಯಾದೀತೇ ಹೊರತು ತತ್ತ್ವವಿಚಾರಕನು ಹೇಳತಕ್ಕ ಮಾತಾಗಲಾರದು. ಪ್ರಮಾಣ ವಾಕ್ಯಗಳನ್ನುದಾಹರಿಸುವದೂ ಅವುಗಳಿಗೆ ತನಗೆ ಬೇಕಾದಂತೆ ಅರ್ಥಮಾಡುವದೂ

ಈ ಸಂದರ್ಭಕ್ಕೆ ಹೊಂದುವದಿಲ್ಲ; ಕನಸಿನನುಭವವೆಂದುಂಟೆಂಬ ವಿಷಯಕ್ಕೆ ಯಾವ ಸಂದೇಹವೂ ಇಲ್ಲವಾದ್ದರಿಂದ ಅದನ್ನು ಅಚೆಗೆ ತಳ್ಳಿದರೆ ತತ್ತ್ವವಿಚಾರದಲ್ಲಿ ಏಕವಾಕ್ಯತೆಯೆ ಇಲ್ಲದೆ ಹೋಗುತ್ತದೆ. ಇದರಂತೆ ಇಂದ್ರಿಯಗಳು ಹೇಳುವದೆಲ್ಲ ಪ್ರಮಾಣವೆಂಬುದು ನಿರಾಕ್ಷೇಪವಾಗಬೇಕಾದರೆ ಜಾಗ್ರದವಸ್ಥೆಯಲ್ಲಿ ನಮಗೆ ಆಗುವ ಭ್ರಾಂತಿಗಳನ್ನೇನು ಮಾಡಬೇಕೆಂಬುದನ್ನು ಯೋಚಿಸಬೇಕಾಗುವದು.

ಭ್ರಾಂತಿಗಳನ್ನಾಗಲಿ ವ್ಯಾಮೋಹಗಳನ್ನಾಗಲಿ ಅವು ನಮಗಾಗುತ್ತಿರುವಾಗ ಇಂಥವೆಂದು ಗೊತ್ತುಪಡಿಸುವದಾಗುವದಿಲ್ಲ; ಅವು ಸತ್ಯವಾಗಿ ಸ್ವಾಭಾವಿಕವಾಗಿ ಆಗುತ್ತಿರುವಂತೆಯೇ ತೋರುತ್ತಿರುವದು. ಅವುಗಳ ನಿಜವಾದ ಸ್ವರೂಪ ವೇನೆಂಬುದನ್ನು ಆಮೇಲೆ ಕಂಡುಕೊಳ್ಳುತ್ತೇವೆ; ಅವು ಆಗುವ ಬಗೆಯು ಹೇಗೆಂಬುದನ್ನು ನಾವು ವಿವರಿಸುವದೂ ಆಮೇಲೆಯೆ. ನಿಜವಾದ ಅರಿವು ಉಂಟಾಗುವಾಗಲೂ ತಪ್ಪಾದ ಅರಿವು ಉಂಟಾಗುವಾಗಲೂ ಇಂದ್ರಿಯಮನಸ್ಸುಗಳು ಒಂದೇ ಬಗೆಯಲ್ಲಿಯೇ ವರ್ತಿಸುತ್ತವೆ; ಅವುಗಳ ಶಕ್ತಿಯು ಒಂದು ಸಂದರ್ಭದಲ್ಲಿ ಬಲವಾಗುವದೆಂಬುದಾಗಲಿ ಮತ್ತೊಂದು ಸಂದರ್ಭದಲ್ಲಿ ಕುಗ್ಗುವದೆಂಬುದಾಗಲಿ ಇಲ್ಲ. ಇದೂ ಅಲ್ಲದೆ, ಅರಿವನ್ನುಂಟುಮಾಡುವದಕ್ಕೆ ಸಾಧನಮಾತ್ರವಾಗಿರುವ ಕರಣಗಳು ತಮಗೆ ಸಿಕ್ಕುವ ವಿಷಯಗಳೂ ತಾವೂ ಸತ್ಯವೆಂಬ ನಂಬಿಕೆಯನ್ನೂ ನಮಗೆ ಕೊಡುವದೆಂತೆಂಬುದನ್ನು ನಾವು ಯೋಚಿಸಬೇಕು. ಸತ್ಯವೆಂದರೇನೆಂಬುದನ್ನು ಒಂದು ಶಾಸ್ತ್ರೀಯತತ್ತ್ವದ ಆಧಾರದಮೇಲೆ ಗೊತ್ತುಪಡಿಸಬೇಕೇ ಹೊರತು ಅರಿವಿಗೆ ಸಹಾಯವನ್ನೂ ಮಾಡುವದು, ಅರಿವು ಸತ್ಯವೆಂದೂ ನಿರ್ಧರಿಸುವದು- ಈ ಎರಡು ಕಾರ್ಯಗಳ ಭಾರವನ್ನೂ ಇಂದ್ರಿಯಗಳ ತಲೆಯ ಮೇಲೆಯೇ ಹೇರತಕ್ಕದ್ದಲ್ಲ. ರಾಮಾನುಜರಿಗೆ ಇಂಥ ಯಾವದೊಂದು ತತ್ತ್ವವನ್ನೂ ತಂದೊದಗಿಸುವದು ಆಗಲಿಲ್ಲ; ಅವರಿಗೆ ಸೋಲಾದ ಈ ವಿಷಯದಲ್ಲಿ ಮಧ್ವಾಚಾರ್ಯರಿಗೂ ಜಯವು ಕೈಗೂಡಲಿಲ್ಲ.

ರಾಮಾನುಜಾಚಾರ್ಯರು ವಿಜ್ಞಾನವಾದವನ್ನು ಖಂಡಿಸಿದರೆಂದೂ ಹೇಳುವದಕ್ಕೆ ಆಗುವದಿಲ್ಲ. ವ್ಯವಹಾರದಲ್ಲಿ ಕಾಣುವ ವಸ್ತುಗಳಿಗೆಲ್ಲ ಅವುಗಳ ಅರಿವೇ ಆಧಾರವು; ಏಕೆಂದರೆ ಅರಿವಿಗೆ ಸಂಬಂಧಪಟ್ಟೇ ಅವು ವಿಷಯಗಳಾಗಿ ನಮಗೆ ತೋರುತ್ತಿವೆ, ವಿಷಯಗಳಿಗೆ ವಿಷಯಿಯೊಂದು ಇರಲೇಬೇಕು. ಹೀಗೆ ನೋಡಿದರೆ ಅವುಗಳಿಗೆ ವಿಜ್ಞಾನಕ್ಕಿಂತ ಬೇರೆಯಾದ ಸತ್ತೆಯಿಲ್ಲವೆಂದಾಗುವದು ಮತ್ತು ಅವುಗಳಲ್ಲಿ ವ್ಯಕ್ತಿತ್ವವೂ ಭೇದಗಳೂ ಅನೇಕತ್ವವೂ ಇರುವದರಿಂದಲ್ಲವೆ

ಅವನ್ನು ಸತ್ಯವೆನ್ನಬೇಕು? ಆದರೆ ಈ ವ್ಯಕ್ತಿತ್ವಾದಿಗಳು ಸಾಪೇಕ್ಷವಾಗಿರುವವೇ ಹೊರತು ನಿರಪೇಕ್ಷವಾಗಿರುವದಿಲ್ಲ. **ಜೆಂಟೈಲ್** ಎಂಬಾತನು ಅಭಿಪ್ರಾಯಪಟ್ಟಿರುವ ಹಾಗೆ, ವಸ್ತುವಿನ ವ್ಯಕ್ತಿತ್ವವೆಂಬುದು ಕಾಲದೇಶಗಳಿಂದ, ಅದು ಎಲ್ಲಿರುವದು ಯಾವಾಗ ಇರುವದು - ಎಂಬುದರಿಂದ, ಉಂಟಾಗಿರುವದೇ ಹೊರತು ಅದರ ಸ್ವಭಾವದಿಂದ ಆಗಿರುವದಿಲ್ಲ (ಪುಟ 324, Vedanta or the Science of Reality [1]) ಅದಕ್ಕೂ ಮಿಕ್ಕ ವಸ್ತುಗಳಿಗೂ ಇರುವ ಭೇದವೆಂಬುದು ಅದರಲ್ಲಿರುವ ಗುಣಗಳಿಂದ; ಆ ಗುಣಗಳೆಲ್ಲವೂ ಒಂದೊಂದು ಸಾಮಾನ್ಯವು. ಒಂದೊಂದು ಜಾತಿಗೆ ಸಂಬಂಧಪಟ್ಟಿದ್ದು. ಆದ್ದರಿಂದ ಅವು ಗುಂಪಿಗೆ ಸೇರತಕ್ಕವುಗಳಾಗಿವೆ. ಒಬ್ಬ ಮನುಷ್ಯನು ಎತ್ತರವಾಗಿದ್ದಾನೆ ಎಂದರೆ ಅವನ ಎತ್ತರವೆಂಬುದು ಸಾಪೇಕ್ಷವಾಗಿ ರುತ್ತದೆ; ಎಲ್ಲರಿಗೂ ನಿರಪೇಕ್ಷವಾಗಿ ಎತ್ತರವಿದ್ದರೆ ಆಮೇಲೆ ಭೇದಗಳೇ ಇರುತ್ತಿರಲಿಲ್ಲ.

**ಕೇರ್ಡ್** ಎಂಬಾತನು ಹೇಳಿರುವಂತೆ ''ನಿರಪೇಕ್ಷಭೇದವೆಂಬುದರ ಸ್ವಭಾವವನ್ನು ಪರ್ಯಾಲೋಚಿಸಿದರೆ ಇದು ತನಗೆ ತಾನೇ ವಿರುದ್ಧವಾದ ಮಾತೆಂಬುದು ಗೊತ್ತಾಗುವದು; ಏಕೆಂದರೆ ಅದು ಯಾವ ವಸ್ತುಗಳನ್ನು ಬೇರ್ಪಡಿಸಬೇಕೋ ಅವುಗಳಿಗಿರುವ ಸಂಬಂಧವನ್ನೆಲ್ಲ ಅಳಿಸಿಹಾಕಬೇಕಾಗುವದು. ಭೇದವೆಂಬ ಮಾತಿನಲ್ಲಿ ಅಡಗಿರುವ ಸಂಬಂಧವನ್ನೇ ಅದು ನಾಶಗೊಳಿಸುವದು, ಆಗ ಭೇದವನ್ನೇ ನಾಶಗೊಳಿಸಿದಂತಾಗುವದು.'' (ಪುಟ 135, Hegel) ಇದರಂತೆ ಅನೇಕತ್ವವೆಂಬುದರಲ್ಲಿ ಸಂಖ್ಯೆಯು ಸೇರಿಕೊಂಡಿದೆಯಷ್ಟೆ; ಈ ಸಂಖ್ಯೆಯೆಂಬುದು ಒಂದು ಜಾತಿಗೆ ಸೇರಿದ ವ್ಯಕ್ತಿಗೆ ಮಾತ್ರ ಸೇರಿದ್ದಾಗಿರುವದು, ಆದ್ದರಿಂದ ಅವುಗಳೆರಡಕ್ಕೂ ಸಮಾನಧರ್ಮವು ಇರಬೇಕೆಂದಾಗುವದು. ಉದಾಹರಣೆಗೆ ಕುದುರೆಯೂ ನಾಯಿಯೂ ಎರಡು ಪ್ರಾಣಿಗಳು; ನಾಯಿಯೂ ಕೋಲೂ ಎರಡು ವಸ್ತುಗಳು, ಪದಾರ್ಥಗಳು, ಇರವಗಳು. ಹೀಗೆ ಅನೇಕತ್ವವೆಂಬುದೂ ಸ್ವತಂತ್ರಭಾವನೆಯಲ್ಲ. ಒಂದು ಗುಂಪನ್ನು ಅವಲಂಬಿಸಿರುತ್ತದೆ ಎಂದು ಸಿದ್ಧವಾಯಿತು. ಈ ರೀತಿಯಲ್ಲಿ ಬೇರೆಬೇರೆಯಾಗಿರುವ ವಸ್ತುಗಳು ಅನೇಕವಾಗಿ

---

1 ಇದು ಶ್ರೀಯುತ ಕೆ.ಎ.ಕೃಷ್ಣಸ್ವಾಮಿ ಅಯ್ಯರವರಿಂದಲೇ ಇಂಗ್ಲಿಷು ಭಾಷೆಯಲ್ಲಿ ರಚಿತವಾಗಿರುವ ಅಮೋಘವಾದ ವೇದಾಂತಗ್ರಂಥವು. ಅಧ್ಯಾತ್ಮಪ್ರಕಾಶಕಾರ್ಯಾಲಯದಲ್ಲಿ ಪ್ರಕಟವಾಗಿದೆ.

ರುವವೆಂದ ಮಾತ್ರಕ್ಕೆ ಅವು ಪರಮಾರ್ಥವಾಗಿಯೂ ಸತ್ಯವಾಗಿರುವವೆಂಬುದಕ್ಕೆ ಪ್ರಮಾಣವೇನೂ ದೊರಕಿದಂತಾಗುವದಿಲ್ಲ; ಅವು ವ್ಯವಹಾರದಲ್ಲಿ ಮಟ್ಟಿಗೆ ಸತ್ಯವಾಗಿರುವವೆಂದಾಗುತ್ತದೆ. ವ್ಯಕ್ತಿಗಳು ಸಂಪೂರ್ಣವಾಗಿ ಬೇರೆಬೇರೆಯೇ ಆಗಿ ರುತ್ತಿದ್ದರೆ ಅವುಗಳು ಅನೇಕವಾಗಿವೆ ಎಂಬ ಮಾತಿಗೆ ಅರ್ಥವೇ ಇರುತ್ತಿರಲಿಲ್ಲ. ರಾಮಾನುಜರು ಹೇಳುವ ಹಾಗೆ ಬೇರೆಬೇರೆ ಬಗೆಯ ಸತ್ಯಗಳಿಲ್ಲವೇ ಇಲ್ಲವೆಂಬುದೂ ಪ್ರಪಂಚ, ಆತ್ಮ, ಈಶ್ವರ- ಎಲ್ಲವೂ ಒಂದೇ ರೀತಿಯಲ್ಲಿ ಸತ್ಯವಾಗಿ ರುವವೆಂಬೂದೂ ನಿಜವಾದರೆ, ಆಗ ಈಶ್ವರನೇ ಮುಂತಾದವುಗಳ ಸತ್ಯತ್ವವು ಒಂದನ್ನೊಂದು ಅವಲಂಬಿಸಿರುವದೆಂದೂ ಸಾಪೇಕ್ಷವೆಂದೂ ಆಗುವದೇ ಹೊರತು ಅವು ನಿರಪೇಕ್ಷವಾಗಿ ಪರಮಾರ್ಥಸತ್ಯವಾಗಿರುವದೆಂದು ಎಂದಿಗೂ ಸಿದ್ಧಿಸುವದಿಲ್ಲ.

## ಸಮಾಲೋಚನೆ

### 3

ರಾಮಾನುಜಾಚಾರ್ಯರು ಹೀಗೆ ಹೇಳಬಹುದು: ಪ್ರಪಂಚ, ಜೀವ, ಈಶ್ವರ – ಈ ಮೂರೂ ಒಂದೇ; ಏಕೆಂದರೆ ಈಶ್ವರನಿಗೆ ಮಿಕ್ಕೆರಡೂ ಶರೀರವಾಗಿ ರುತ್ತವೆ. ಈಶ್ವರನು ಪರಮಾರ್ಥಸತ್ಯವಾಗಿರುವದರಿಂದ ಮಿಕ್ಕೆರಡರಲ್ಲಿಯೂ ಅವನ ಸ್ವಭಾವವು ಇರಲೇಬೇಕು, ಅವೂ ಸತ್ಯವಾಗಿರಲೇಬೇಕು. ಇಲ್ಲೀಗ ಈಶ್ವರನು ಶರೀರಿಯೆಂಬ ಅವರ ಮತ್ತೊಂದು ಮನೋಭಾವವು ನಮ್ಮೆದುರಿಗೆ ಬಂದು ನಿಲ್ಲುವದು. ಉಪನಿಷತ್ತುಗಳಲ್ಲಿ ಹೇಳಿರುವ ಏಕತ್ವವನ್ನೂ ವ್ಯವಹಾರದಲ್ಲಿ ಕಂಡುಬರುವ ಅನೇಕತ್ವವನ್ನೂ ಹೊಂದಿಸುವದಕ್ಕಾಗಿ ಅವರು ಜೀವರೂ ಜಡರಾಶಿಯೂ ಶರೀರರೂಪದಿಂದ ಈಶ್ವರನಲ್ಲಿಯೇ ಅಡಕವಾಗಿರುತ್ತಾರೆಂಬ ಹಂಚಿಕೆಯನ್ನು ತೆಗೆದಿರುತ್ತಾರೆ. ಹೀಗೆ ಕ್ಲೇಶವನ್ನು ಬಗೆಹರಿಸಿಕೊಳ್ಳುವದರಿಂದ ಸಾಮಾನ್ಯಬುದ್ಧಿಯೇ ಕೊನೆಗೂ ಗೆದ್ದಂತಾಗುವದೆಂದು ಅವರ ಭಾವನೆ.

ಆದರೆ ಇಲ್ಲೊಂದು ಅಪರಿಹಾರ್ಯವಾದ ಆಡಚಣೆಯಿದೆ. ಶರೀರಕ್ಕಿಂತ ಬೇರೆಯಾಗಿ ಒಬ್ಬ ಜೀವನೂ, ಪ್ರಪಂಚದಲ್ಲಿ ಧರ್ಮಾಧರ್ಮಗಳ ವ್ಯವಸ್ಥೆಯನ್ನು ನೋಡಿಕೊಳ್ಳುವ ಒಬ್ಬ ಈಶ್ವರನೂ ಇದಾರೆಂದು ನಿರ್ದುಷ್ಟವಾದ ಯುಕ್ತಿಯಿಂದ ತೋರಿಸಿಕೊಟ್ಟ ಹೊರತು ರಾಮಾನುಜಾಚಾರ್ಯರ ಅಭಿಪ್ರಾಯವು

ಯುಕ್ತಿಸಿದ್ಧವೆಂಬುದನ್ನು ಒಪ್ಪಲಾಗುವದೇ ಇಲ್ಲ. ಮೊದಲು ನೋಡಿ: ಶರೀರಕ್ಕೂ ಜೀವನಿಗೂ ಸಂಬಂಧವೇನು? ಸಂಬಂಧವೆಂಬುದು ಒಂದೇ ಜಾತಿಯ ಎರಡು ವಸ್ತುಗಳಿಗೆ ಇರುತ್ತದೆ. ಒಂದು ಜಡವಸ್ತುವಿಗೂ ಮತ್ತೊಂದು ಜಡವಸ್ತುವಿಗೂ ಇರುತ್ತದೆ ಎಂದು ಅನುಭವದಲ್ಲಿ ಕಂಡುಬಂದಿರುತ್ತದೆ. ಆದರೆ ಜೀವಕ್ಕೂ ಶರೀರಕ್ಕೂ ಅನಿತ್ಯವಾಗಿ ಸಂಬಂಧವಿದೆಯೆಂದರೂ ಈ ಸಂಬಂಧವನ್ನು ಕಲ್ಪಿಸುವದಕ್ಕೇ ಬರುವ ಹಾಗಿಲ್ಲ. ಒಂದು ವೇಳೆ ಈ ಎರಡಕ್ಕೂ ಇಂಥ ಸಂಬಂಧವೊಂದಿದೆಯೆಂದು ಒಪ್ಪಿಕೊಂಡರೂ ಇದೇ ಸಂಬಂಧವು ಈಶ್ವರನಿಗೂ ಜೀವಜಡಗಳಿಗೂ ಇರುವದೆಂದು ಕಲ್ಪಿಸಿಕೊಳ್ಳುವದಾದರೂ ಹೇಗೆ ಸಾಧ್ಯ? ಶರೀರವೆಂದರೆ ಜೀವನು ಅರಿಯಬಹುದಾದ ವಿಷಯವು; ಜೀವನು ತನಗೆ ತಾನು ವಿಷಯನಾದರೂ ಆಗಲಿ, ಮತ್ತೆ ಯಾವದಕ್ಕೂ ವಿಷಯನಾಗಲೇ ಆರನು. ಏಕೆಂದರೆ ಅವನ ಸ್ವಭಾವವೇ ಅಂಥದ್ದಾಗಿರುತ್ತದೆ. ಆದ್ದರಿಂದ ಜೀವನು, ಅವನ ಶರೀರ – ಎಂಬ ಮಾತುಗಳನ್ನು ಯಾವರ್ಥದಲ್ಲಿ ಉಪಯೋಗಿಸುತ್ತಿದ್ದೇವೋ ಅದೇ ಅರ್ಥದಲ್ಲಿಯೇ ಜೀವನು ಈಶ್ವರನ ಶರೀರವಾಗಿರುವನೆಂದರೆ 'ಶರೀರ'ವೆಂಬ ಮಾತಿಗೆ ಅರ್ಥವಿಲ್ಲದೆ ಹೋಗುವದು. ಈಶ್ವರನನ್ನು ನನ್ನ ಧ್ಯಾನಕ್ಕೆ ಅಥವಾ ಜ್ಞಾನಕ್ಕೆ ವಿಷಯನೆಂದು ಎಣಿಸುವದಕ್ಕೆ ಆಗುತ್ತದೆ, ಆದರೆ ಎಂದೆಂದಿಗೂ ವಿಷಯಿಯಾಗಿ ಇದ್ದೇತೀರಬೇಕಾಗಿರುವ ನಾನು ನನ್ನ ಆತ್ಮನನ್ನು ಈಶ್ವರನಿಗೆ ವಿಷಯವೆಂದು ಎಣಿಸುವದು ಆಗುವ ಹಾಗೇ ಇಲ್ಲ; ಒಂದು ವೇಳೆ ಇಂಥ ಭಾವನೆಯನ್ನು ಮನಸ್ಸಿಗೆ ಬಲತ್ಕಾರದಿಂದ ತಂದುಕೊಂಡರೂ ಅದು ಆ ಬಲತ್ಕಾರವನ್ನೊಲ್ಲದೆ ಮತ್ತೂ ತಾನು ವಿಷಯಿಯೇ ಆಗಿಬಿಡುವದು. ಈಶ್ವರ, ನಾನು ಆತನ ವಿಷಯನಾಗಿರುವೆನೆಂಬ ಕಲ್ಪನೆ ಈ ಎರಡೂ ಈಗಿನ ನನ್ನ ಅರಿವಿಗೆ ವಿಷಯವಾಗಿಬಿಡುವವು. ನಾನು ಆಗದ್ದನ್ನು ಕಲ್ಪಿಸುವದಕ್ಕೆ ವ್ಯರ್ಥಪ್ರಯತ್ನವನ್ನು ಮಾಡಿದೆನೆಂಬುದು ಇದರಿಂದ ವ್ಯಕ್ತವಾಗುವದು. ಸಂಬಂಧವೆಂಬುದು ಎರಡು ಬೇರೆಬೇರೆಯಾಗಿರುವ ಕೋಟಿಗಳಿಗೆ ಅಥವಾ ವಿಷಯಗಳಿಗೆ ಮಾತ್ರ ಇರಬಹುದು; ಆದರೆ ಜೀವನಿಗೂ ಸರ್ವವ್ಯಾಪಕನಾದ ಈಶ್ವರನಿಗೂ ಯಾವ ಸಂಬಂಧವನ್ನೂ ಕಲ್ಪಿಸುವದಕ್ಕೆ ಬರುವದಿಲ್ಲ. ಏಕೆಂದರೆ ಇವರಿಬ್ಬರಲ್ಲಿ ಯಾರೂ ವಿಷಯಸ್ವಭಾವದವರಲ್ಲ.

ರಾಮಾನುಜರು 'ಶರೀರ'ವೆಂಬ ಮಾತಿಗೆ ಇರುವ ಬೇರೆಬೇರೆ ಅರ್ಥಗಳನ್ನು ಪ್ರಯತ್ನಪೂರ್ವಕವಾಗಿ ಚರ್ಚೆಗೆ ತಂದು (1) ಸಂಪೂರ್ಣವಾಗಿ

ಅಧೀನದಲ್ಲಿದ್ದುಕೊಂಡಿರುವದು (2) ಶರೀರಿಯಾದ ಜೀವನ ಪ್ರವೃತ್ತಿಗೂ ಭೋಕ್ತೃತ್ವಕ್ಕೂ ಸಾಧನವಾಗಿರುವದು - ಎಂಬರ್ಥದಲ್ಲಿ ಅದನ್ನುಪಯೋಗಿ ಸುವದಾಗಿ ನಿಶ್ಚಯಿಸಿಕೊಂಡಿರುತ್ತಾರೆ. ಆದರೆ ಈಶ್ವರನಿಗೂ ಶರೀರಿಗೂ ಈ ರೀತಿಯಾಗಿ ತನಗೆ ವಿಷಯವಾಗಿರುತ್ತಾನೆ. ಹೇಗೇ ಆಗಲಿ, ಈಶ್ವರನಿಗೆ ಜೀವನ ಹೋಲಿಕೆಯನ್ನು ಕೊಟ್ಟಿರುವದರಿಂದಲೂ ಕೆಲವು ಅನರ್ಥಗಳುಂಟು. ಏಕೆಂದರೆ ಶರೀರಿಗೆ ಆಯಾ ಅವಯವವು ಇದ್ದಾಗ ಮಾತ್ರವೇ ಕೆಲಸದಲ್ಲಿ ತೊಡಗುವದಕ್ಕೆ ಆಗುತ್ತದೆ; ಅದರ ಸೌಖ್ಯವೂ ರಕ್ಷಣೆಯೂ ಅದರ ಅವಯವಗಳನ್ನೇ ಹೊಂದಿಕೊಂಡಿರುತ್ತವೆ. ಮತ್ತು ಹೊರಗಿನಿಂದ ನೋಡಿದಾಗ ಶರೀರಿಯು ತನ್ನ ಅವಯವಗಳನ್ನು ವಶದಲ್ಲಿಟ್ಟುಕೊಂಡಿರುವದೆಂದು ಕೊಚ್ಚಿಕೊಳ್ಳಬಹುದೇ ಹೊರತು ಆಹಾರವನ್ನು ಅರಗಿಸಿಕೊಳ್ಳುವದು, ರಕ್ತವನ್ನು ಸಂಚರಿಸುವಂತೆ ಮಾಡಿಕೊಳ್ಳುವದು, ಜೀರ್ಣರಸಗಳನ್ನು ಸಿದ್ಧಗೊಳಿಸುವದು - ಇವುಗಳು ಯಾವವನ್ನೂ ಅದು ಮಾಡಿಕೊಳ್ಳಲರಿಯದು. ಇವೆಲ್ಲ ಪ್ರಕೃತಿಯೆಂಬ ಮತ್ತೊಂದು ಹೆಚ್ಚಿನ ಶಕ್ತಿಗೆ ಒಳಪಟ್ಟಿರುತ್ತವೆ; ಆ ಶಕ್ತಿಗೆ ಶರೀರಿಯು ಕಂ ಕಿಂ ಎನ್ನದೆ ದಾಸನಾಗಿ ದ್ದುಕೊಂಡಿರುವದು. ಅನುಭವದಲ್ಲಿ ಕಂಡುಬರುವ ಈ ವಿಷಯಗಳನ್ನು ಆಧಾರವಾಗಿಟ್ಟುಕೊಂಡು ವಿಚಾರಮಾಡುವದಕ್ಕೆ ಹೊರಟರೆ ಈಶ್ವರನು ತನ್ನ ಶರೀರವಾಗಿರುವ ಜೀವಜಡಗಳನ್ನು ಆಳುವದು ಹೇಗೆ, ಆ ಸಂದರ್ಭದಲ್ಲಿ ಶರೀರಕ್ಕೆ ಹೊಂದಿಕೊಂಡೇ ಅವನ ವ್ಯಕ್ತಿತ್ವವು ಇರಬೇಕಾಗುವದರಿಂದ ಅವನಿಗೆ ಸ್ವಾತಂತ್ರ್ಯವು ಅಳಿಯದೆ ಉಳಿಯುವ ಬಗೆಯಾದರೂ ಹೇಗೆ?- ಎಂಬುದು ತಿಳಿಯುವ ಹಾಗಿಲ್ಲ. ಇದೂ ಅಲ್ಲದೆ, ಈಶ್ವರನು ಸಚೇತನನಾಗಿದ್ದರೆ ಜೀವನು ಅವನಿಗೆ ವಿಷಯನಾಗಿ ಮಾತ್ರ ಇರಬೇಕು; ಹೀಗಿದ್ದರೂ ಜೀವನು ಅವನಿಗೆ ಶರೀರವಾಗಿರುವದಾದರೆ ಇದೇ ಯುಕ್ತಿಯಿಂದ ಜೀವನೂ ದೇವರನ್ನು ತನ್ನ ಶರೀರವೆನ್ನಬಹುದಾಗುವದು. ಏಕೆಂದರೆ ಆತನೂ, ವಿಷಯಿತ್ವವೆಂಬುದು ಎಂದಿಗೂ ದಕ್ಕುವ ಹಾಗಿಲ್ಲ, ಜೀವನು ತನಗೆ ತಾನು ಹೇಗಿರುವನೋ ಹಾಗೆ ಜೀವನಿಗೆ ಆತನು ಎಂದಿಗೂ ಆಗಲಾರನು. ಮತ್ತೂ ಒಂದು ವಿಚಾರ. ಶರೀರವೆಂಬುದು ಚೇತನಕ್ಕೆ ವ್ಯಕ್ತಿತ್ವವನ್ನು ಕೊಟ್ಟು ಅದರ ಸ್ವಾತಂತ್ರ್ಯಕ್ಕೆ ಅಡ್ಡಿಯಾಗಿ ಬಿಡುತ್ತದೆ; ಇದನ್ನು ರಾಮಾನುಜಾಚಾರ್ಯರವರೇ (ಬ್ರಹ್ಮಸೂತ್ರ 3-2-5ರ ಭಾಷ್ಯದಲ್ಲಿ) ಒಪ್ಪಿಕೊಂಡಿರುತ್ತಾರೆ. ಇದರಿಂದ ಜೀವವು ವ್ಯಕ್ತಿಗಳ ನಡುವೆ ತಾನೂ ಒಂದು ವ್ಯಕ್ತಿಯಾಗುವದಿಲ್ಲವೆ? ಇದರಂತೆ ಈಶ್ವರನೂ ಶರೀರವುಳ್ಳಾತನಾದರೆ ಆತನೂ

ವ್ಯಕ್ತಿಯಾಗಬೇಕಾಯಿತು. ಆದರೆ ಅವನು ಈ ಶರೀರದಿಂದ ತಾನೊಬ್ಬ ಅನೇಕ ಭಾಗಗಳಿಂದ ಕೂಡಿದವನೆನಿಸಿಕೊಂಡಾನೇ ಹೊರತು ಒಟ್ಟಾಗಿರುವ ಆ ತನ್ನಂತೆ ಇರುವ ಬೇರೆ ವ್ಯಕ್ತಿಗಳ ಜೊತೆಯಲ್ಲಿರುವವನಾಗುವದೇ ಇಲ್ಲವಲ್ಲ!

ಇದಲ್ಲದೆ ಈ ಪಕ್ಷದಲ್ಲಿ ಈಶ್ವರನಲ್ಲಿ ಎಲ್ಲವೂ ಅಂತರ್ಗತವಾಗುವ ಅವಕಾಶವೇ ಇರುವದಿಲ್ಲ; ಏಕೆಂದರೆ ಆತನು ನನಗೆ ವಿಷಯನಾಗಿ ರುವದರಿಂದ ನನ್ನನ್ನು ತನ್ನಲ್ಲಿ ಅಂತರ್ಭೂತನಾಗಿ ಮಾಡಿಕೊಳ್ಳಲಾರನು. ಹೀಗೆ ಎಲ್ಲವೂ ಸೇರಿ ಒಂದಾಗಿರುವದೆಂಬುದು ಅಲಂಕಾರಿಕಭಾಷೆಯಾಯಿತೇ ಹೊರತು ಯುಕ್ತಿಸಿದ್ಧವಾಗಲಿಲ್ಲ. ಏಕೆಂದರೆ ದೇವರಿಗೆ ಶರೀರವುಂಟೆಂಬ ಈ ಕಲ್ಪಿತಸಂಬಂಧವನ್ನು ಕರಗಿಸಿ, ಮೇಲ್ಮುಸುಕನ್ನು ತೆಗೆದು ಹಾಕಿದರೆ ರಾಮಾನುಜರ ಸಿದ್ಧಾಂತಕ್ಕೂ ಮಧ್ವಾಚಾರ್ಯರ ಶುದ್ಧ ನಾನಾತ್ವವಾದಕ್ಕೂ ಐಕ್ಯವೇ ಇರುವದೆಂಬುದು ನಿಸ್ಸಂದಿಗ್ಧವಾಗಿ ಹೊರ ಬೀಳುವದು; ಆಮೇಲೆ ಉಳಿಯುವ ಈಶ್ವರ, ಜೀವರು, ಜಡಪ್ರಕೃತಿ – ಇವು ನಿತ್ಯವಾಗಿ ನಿಸ್ಸಹಾಯವಾಗಿ ಎಂದೆಂದಿಗೂ ಒಂದರ ಮುಖವನ್ನು ಒಂದು ಅತ್ಯಂತವಿರುದ್ಧದೃಷ್ಟಿಯಿಂದ ನೋಡುತ್ತಾ ಕುಳಿತುಕೊಳ್ಳುವವು. ಇವುಗಳನ್ನು ಕೂಡಿಸುವದಕ್ಕೆ ಯಾವದೊಂದೂ ತತ್ತ್ವವಿರುವದಿಲ್ಲ, ಒಂದೊಂದೂ ಸ್ವತಂತ್ರವಾಗಿ ಅನೇಕತ್ವವೇ ಸಿದ್ಧವಾಗಿ ಕೊನೆಗೆ ಅವ್ಯವಸ್ಥೆಯೇ ನಿಲ್ಲುವದು.

ಈಶ್ವರನಿಗೂ ಅವನ ಶರೀರಕ್ಕೂ ಇರುವ ಈ ನಿತ್ಯಸಂಬಂಧವು ಈಶ್ವರನಿಗೇ ಅನನುಕೂಲವಾಗಿರುತ್ತದೆ. ಏಕೆಂದರೆ ಶರೀರವು ತನ್ನ ಇರವಿಗಾಗಿ ಈಶ್ವರನನ್ನು ನಂಬಿಕೊಡಿರುತ್ತದೆಯಾದರೆ ಈಶ್ವರನೂ ತನ್ನ ಬಾಳು ಮಾಡುವದಕ್ಕೆ ತನ್ನ ಶರೀರವನ್ನು ನಂಬಿಕೊಂಡೇ ಇರಬೇಕಾಗುವದು. ನಿಷ್ಪಕ್ಷಪಾತವಾಗಿ ನೋಡಿದರೆ ಸಂಬಂಧವೆಂಬುದು ಸಂಬಂಧಿಗಳೆರಡಕ್ಕೂ ಒಂದೇ ಬಗೆಯಲ್ಲಿ ಸೇರಿರತಕ್ಕದ್ದು. ಶರೀರವೆಂಬುದು ಈಶ್ವರನ ಒಂದು ಪ್ರಕಾರಮಾತ್ರವಾಗಿದ್ದು ಆ ಪ್ರಕಾರವು ಸತ್ಯವಾಗಿದ್ದರೆ, ಆ ಪ್ರಕಾರದಲ್ಲಿ ಆಗುವ ಮಾರ್ಪಾಡುಗಳೆಲ್ಲ ದೇವರಿಗೂ ಆಗಿ ಯೇತೀರಬೇಕು. ಈ ಯುಕ್ತಿಸಿದ್ಧವಾದ ತೀರ್ಪನ್ನು ತಪ್ಪಿಸಿಕೊಳ್ಳುವದಕ್ಕೆ ಯಾವ ಹಾದಿಯೂ ಇಲ್ಲ. **ಸ್ಪಿನೋಜನು** ದೇವರಿಗೆ ಎರಡು ಪ್ರಕಾರಗಳಿರುವವೆಂದು ಹೇಳಿರುವದು ನಿಜ; ಆದರೆ ಅವು ಕಲ್ಪಿತಪ್ರಕಾರಗಳಾಗಿರುತ್ತವೆ, ನಾವು ದೇವರಲ್ಲಿ ಕಲ್ಪಿಸುವ ಪರಿಚ್ಛೇದಗಳೇ ಆ ಪ್ರಕಾರಗಳಾಗಿವೆ.

ಸೃಷ್ಟಿಪ್ರಲಯಗಳೆಂಬಿವು ದೇವರ ಶರೀರದ ಸಂಕೋಚವಿಕಾಸಗಳಿಂದ ಆಗುವವೆಂದು ರಾಮಾನುಜಾಚಾರ್ಯರು ವಿವರಿಸಿರುವದರಲ್ಲಿಯೂ ಒಂದು ಸಹಜದೌರ್ಬಲ್ಯವಿದೆ. ಮೊದಲು ನೋಡಿ : ಆತನ ಶರೀರವಾದ ಜೀವಜಡಗಳಲ್ಲಿ ಜೀವರುಗಳು ಸಂಕೋಚವಿಕಾಸವಾಗುವದೆಂಬುದು ಆಗದ ಮಾತು. ಏಕೆಂದರೆ ಈ ವಿಕಾರಗಳು ಜಡವಸ್ತುಗಳಿಗೆ ಮಾತ್ರ ಸಂಬಂಧಪಟ್ಟವುಗಳಾಗಿವೆ. ಎರಡನೆಯದಾಗಿ, ದೇವರಿಗೂ ಆತನ ಶರೀರಕ್ಕೂ ಒಂದು ಸಂಬಂಧವಿದೆಯೆಂದು ಒಪ್ಪಿಕೊಂಡ ಮೇಲೆ ದೇವರ ಶರೀರದಲ್ಲಿ ಆಗುವ ಮಾರ್ಪಾಡುಗಳ ಫಲವು ಆತನಿಗೆ ಹಾಗಿಲ್ಲವೆಂದು ಹೇಳುವದಕ್ಕೂ ಬರುವದಿಲ್ಲ. ಈ ಸಂಬಂಧವನ್ನಾದರೂ ತೀರ ಸಣ್ಣದು ಮಾಡಿ ಇಲ್ಲವಾಗಿಸಿಬಿಡಬೇಕು, ಇಲ್ಲವೆ ದೇವರ ಸ್ವಭಾವವು ನಿರ್ವಿಕಾರವಾದದ್ದೆಂಬು ದನ್ನಾದರೂ ಪೂರ್ತಿಯಾಗಿ ಕೈಬಿಡಬೇಕು. ಮೂರನೆಯದಾಗಿ, ದೇವರಿಗೆ ಶರೀರ ವೆಂಬುದು ಸ್ವಾಭಾವಿಕವಾಗಿಯಾದರೂ ಇರಬೇಕು, ಇಲ್ಲವೆ ಅವಶ್ಯಕವಾಗಿರಬೇಕು; ಅವಶ್ಯಕವಾಗಿದ್ದರೆ ಅವನು ಅಪೂರ್ಣನೆಂದಾಗುವದು, ಸ್ವಾಭಾವಿಕವಾದರೆ ಅದರ ಕೈಗೆ ಸಿಕ್ಕು ನರಳುತ್ತಾನೆಂದಾಗುವದು. ಹೇಗಾದರೂ ದೇವರಲ್ಲಿ ನಮಗೆ ಮರುಕ ಹುಟ್ಟುವದೇ ಹೊರತು ಮೆಚ್ಚಿಕೆಯಾಗಲಿ ಪೂಜ್ಯಬುದ್ಧಿಯಾಗಲಿ ಉಂಟಾಗಲಾರದು.

ಇದಲ್ಲದೆ ರಾಮಾನುಜರ ಕಲ್ಪನೆಗೆ ಆಧಾರವಾಗಿ ದೃಷ್ಟಾಂತ ವಾಗಿರುವ ಶರೀರಿಯೆಂಬುದು ದೇಶದಲ್ಲಿದ್ದುಕೊಂಡು ಕಾಲದಲ್ಲಿ ಬೆಳೆಯುತ್ತಾ ಹೋಗುತ್ತಿರುವದು; ಎಂದರೆ ಶರೀರಿಯಾದದ್ದು ದೇಶಕಾಲಗಳಲ್ಲಿ ಬಾಳು ಮಾಡಿಕೊಂಡಿರುವದು. ದೇವರು ಶರೀರಿಯಾದರೆ ಹೀಗೆಯೇ ಆತನೂ ದೇಶಕಾಲಪರಿಚ್ಛಿನ್ನನಾಗಿರಬೇಕಾಗುವದು. ರಾಮಾನುಜಸಿದ್ಧಾಂತವು ಈ ಪರಿಸ್ಥಿತಿಗೆ ಕಟ್ಟುಬಿದ್ದೇತೀರಬೇಕು; ಏಕೆಂದರೆ ಅವರ ಮತದಲ್ಲಿ ಜೀವರೂ ಜಡವೂ ಪರಮೇಶ್ವರನ ಅಂಶಗಳಾಗಿವೆ. ಅಂಶಗಳೆಂದರೆ ದೇಶಪರಿಚ್ಛೇದವಿದೆಯೆಂದರ್ಥ, ಸಂಕೋಚವಿಕಾಸಗಳೆಂದರೆ ಕಾಲಪರಿಚ್ಛೇದವಿದೆಯೆಂದರ್ಥ. ರಾಮಾನುಜರು ಕಾಲದೇಶಗಳನ್ನು ವಿಚಾರಕ್ಕೇ ತೆಗೆದುಕೊಳ್ಳದೆ ಇರುವದು ಶೋಚನೀಯವಾಗಿ ದೆ. ಅವುಗಳು ಪ್ರಪಂಚಕ್ಕೆ ಹೊರಚ್ಚಾಗಿರುವೆಂತಲೂ ಅವುಗಳ ತತ್ತ್ವವನ್ನು ವಿವರಿಸುವ ಅವಶ್ಯಕತೆಯೇನೂ ಇರುವದಿಲ್ಲವೆಂತಲೂ ಅವರು ಭಾವಿಸಿರುವಂತೆ ತೋರುವದು. ಸೃಷ್ಟಿಪ್ರಲಯಗಳೆಂಬಿವು ಈಶ್ವರನ ಲೀಲೆಯೆಂದೂ ಈ ಲೀಲೆಯು ಕಾರ್ಯಕಾರಣನಿಯಮವನ್ನು ಲೆಕ್ಕಕ್ಕೆ ತರುವದಿಲ್ಲವೆಂದೂ ಅವರು ಹೇಳಿರುತ್ತಾರೆ.

(ಇಂದ್ರಿಯಗಳು ತೋರಿಸುವದೇ ಸತ್ಯ, ಅರ್ಥಕ್ರಿಯಾಕಾರಿಯಾದದ್ದೇ ಸತ್ಯ, ದೇಶಕಾಲಗಳಲ್ಲಿರುವದೇ ಸತ್ಯ, ಬಾಧಿತವಾಗದ್ದು ಸತ್ಯ - ಎಂಬ ನಾಲ್ಕು ಪಕ್ಷಗಳನ್ನು ಇದರಲ್ಲಿ ಖಂಡಿಸಿರುತ್ತದೆ.)

ಹೊರಗಿನ ಪ್ರಪಂಚವು ಸತ್ಯವೆಂಬುದಕ್ಕೆ ಮಧ್ವಾಚಾರ್ಯರು ಕೂಡ ಯಾವ ಹೊಸಯುಕ್ತಿಗಳನ್ನೂ ಕೊಟ್ಟಿರುವದಿಲ್ಲ; ರಾಮಾನುಜಾಸಿದ್ಧಾಂತದ ವಿಷಯದಲ್ಲಿ ಹೇಳಿರುವದನ್ನೆಲ್ಲ ಒಂದಿಷ್ಟೂ ಹೆಚ್ಚುಕಡಿಮೆಮಾಡದೆ ಅವರ ಸಿದ್ಧಾಂತಕ್ಕೂ ಅನ್ವಯಿಸಬಹುದಾಗಿರುತ್ತದೆ.

ರಾಮಾನುಜಾಚಾರ್ಯರಾಗಲಿ ಮಧ್ವಾಚಾರ್ಯರಾಗಲಿ ದುಃಖವೆಂಬುದು ಕರ್ಮದ ಫಲವೆಂದು ಹೇಳಿರುವದು ವಾದಕ್ಕೆ ಸರಿಹೋಗುವದಾದರೂ ತೃಪ್ತಿಕರವೆಂದು ಹೇಳುವಂತಿಲ್ಲ. ಈಶ್ವರನೆಂದರೆ ಸಗುಣನೇ ಎಂದು ಪಟ್ಟುಹಿಡಿದಿರುವ ಈ ಸಿದ್ಧಾಂತದಲ್ಲಿ ಇದೊಂದು ದೋಷವು ಈಶ್ವರನ ಯೋಗಕ್ಷೇಮವನ್ನು ನೋಡಿಕೊಳ್ಳುವದು, ಎಂದರೆ ಈಶ್ವರನು ಸರ್ವಶಕ್ತನು, ಸರ್ವಜ್ಞನು, ದಯಾಘನನು - ಎಂಬುದನ್ನು ಗಟ್ಟಿಭದ್ರವಾಗಿ ನಿಲ್ಲಿಸಿಕೊಳ್ಳುವದು, ಪ್ರತಿಯೊಬ್ಬ ತಟಸ್ಥೇಶ್ವರವಾದಿಯ ಕರ್ತವ್ಯವಾಗಿರುತ್ತದೆ. ಆದರೆ ಮನುಷ್ಯನ ಬಾಳಿನಲ್ಲಿ ದುಃಖಕ್ಕೆ ಅವಕಾಶವನ್ನು ಕೊಟ್ಟಿರುವದೆಂಬುದು ಈಶ್ವರನ ಶಕ್ತಿಗೆ, ಅಥವಾ ದಯೆಗೆ, ಅಥವಾ ಈ ಎರಡಕ್ಕೂ, ಕಲಂಕವನ್ನೊಡ್ಡುವಂಥದ್ದಾಗಿರುತ್ತದೆ. ಈಶ್ವರನ ಈ ಸ್ವಭಾವ ಶಕ್ತಿಗಳನ್ನು ಉಪಯೋಗಿಸದಂತೆ ಕರ್ಮವೆಂಬ ತಪ್ಪಿಸಿಕೊಳ್ಳಲಶಕ್ಯವಾದ ಹೊರಗಿನ ಲಗಾಮನ್ನು ತಂದು ಬಿಗಿಯುವದೆಂದರೆ ಈಶ್ವರನನ್ನು ಆತನ ಗದ್ದುಗೆಯಿಂದ ಇಳಿಸಿ ಬಡಮಾನವನ ಭರವಸೆಯನ್ನೆಲ್ಲ ಮಣ್ಣುಪಾಲು ಮಾಡಿದಂತೆಯೇ ಸರಿ. ಶಂಕರಾಚಾರ್ಯರೂ ಈ ಕರ್ಮವಾದವನ್ನು ಸ್ವಲ್ಪದೂರ ಅಂಗೀಕರಿಸಿರುತ್ತಾರೆ; ಆದರೆ ನಿಜವಾಗಿ ಇದು ಸಾಲದೆಂದು ಅವರಿಗೆ ಕಂಡುಬಂದ ಕೂಡಲೆ ಅವರು ಇದನ್ನು ಕೈಬಿಟ್ಟುಬಿಟ್ಟರು (ಬ್ರ. ಸೂ. 2-1-33ರ ಭಾಷ್ಯವನ್ನು ನೋಡಿ.)

ಹೀಗಿದ್ದರೂ ಸಂಸಾರದಲ್ಲಿ ಕಂಗೆಟ್ಟಿರುವ ಜೀವರಿಗೆ ಶಾಂತಿಯೊದಗಲೆಂದು ತಂದೊದಗಿಸಿರುವ ಧರ್ಮಪಂಥವೆಂಬ ದೃಷ್ಟಿಯಿಂದ ನೋಡಿದರೆ, ರಾಮಾನುಜರ ಸಿದ್ಧಾಂತವು ಮನುಷ್ಯಕಲ್ಪಿತವಾದ ಮತ್ತೆ ಯಾವ ಪಂಥಕ್ಕೂ

ಕಡಿಮೆಯೆನಿಸಿರುವದಿಲ್ಲವೆಂದು ಒಪ್ಪಲೇಬೇಕು. ಶರಣಾಗತಿ, ಕೈಂಕರ್ಯ - ಎಂಬ ಸಾಧನಗಳನ್ನು ಇದರಲ್ಲಿ ಒತ್ತಿಹೇಳಿರುವದರಿಂದ ಇದು ಜೀವನವನ್ನು ಘನತೆಗೇರಿಸಿ ಪವಿತ್ರಗೊಳಿಸುವಂತಿದೆ. ಜಾತಿಕುಲಗಳನ್ನು ಲೆಕ್ಕಿಸದೆ ಎಲ್ಲರಲ್ಲಿಯೂ ಅವರು ತೋರಿಸಿದ ಪ್ರೇಮ, ಸಹಾನುಭೂತಿ, ಸರ್ವರೂ ಸಹೋದರರೆಂಬ ಭಾವನೆಯಿಂದ ತುಂಬಿತುಳುಕುವ ಅವರ ಉಪದೇಶಗಳು, ತಮ್ಮನ್ನು ಜನರು ಎಷ್ಟೇ ಹಿಂಸಿಸಿ ಕಷ್ಟಕ್ಕೀಡು ಮಾಡಿದರೂ ಬಿಡದೆ ಮಾನವರ ಉದ್ಧಾರಕ್ಕೆಂದು ಅವರು ಮಾಡಿರುವ ಅಸ್ವಾರ್ಥಪ್ರಯತ್ನಗಳು - ಇವನ್ನೆಲ್ಲ ನೋಡಿದರೆ ಮಾನವಜಾತಿಗೆ ಉಪಕಾರವನ್ನೆಸಗಿದವರಲ್ಲಿ ಅವರಿಗೆ ಅಗ್ರಸ್ಥಾನವು ದೊರೆಯುವಂತಿರುವದು. ಅವರ ಸಿದ್ಧಾಂತದಲ್ಲಿ ಕಾಣಬರುವ ಕೊರತೆಗಳು ಅವರ ದೃಷ್ಟಿಮಾಂದ್ಯದಿಂದೇನೂ ಆದವುಗಳಲ್ಲ- ಏಕೆಂದರೆ ಅವರ ಬುದ್ಧಿಶಕ್ತಿಯು ಅತ್ಯಂತ ಮೇಲ್ತರದ್ದಾಗಿತ್ತು; ಅವರು ಬಿಚ್ಚುವದಕ್ಕೆಂದು ಹೊರಟ ಸಮಸ್ಯೆಯ ಸ್ವಾಭಾವಿಕದೋಷದಿಂದಲೇ ಆ ಕೊರತೆಗಳುಂಟಾಗಿರುವವು. ತಟಸ್ಥೇಶ್ವರವಾದವನ್ನೂ ಯುಕ್ತಿಯನ್ನೂ ಹೊಂದಿಸಬೇಕೆಂಬುದು ಅವರ ಪ್ರಯತ್ನವು; ಇದು ಎಂದಿಗೂ ಆಗತಕ್ಕದ್ದಲ್ಲ; ಏಕೆಂದರೆ ಈಶ್ವರವಾದವು ಶ್ರದ್ಧೆಯ ರಾಜ್ಯಕ್ಕೆ ಸೇರಿದ್ದಾಗಿದೆ. ಅವರು ತಮ್ಮ ಪ್ರಯತ್ನದಲ್ಲಿ ಜಯಶೀಲರಾಗಲಿಲ್ಲವೇಕೆಂದರೆ ಅದರಲ್ಲಿ ಯಾರಿಗೂ ಜಯವಾಗುವ ಸಂಭವವೇ ಇಲ್ಲ. ಆದರೆ ಇಷ್ಟು ಮಾತ್ರದಿಂದ ಅವರ ಜೀವನದ ಅಥವಾ ಅವರ ಪ್ರಯತ್ನದ ಘನತೆಗೆ ಎಳ್ಳಷ್ಟೂ ಕುಂದುಂಟಾಗುವ ಹಾಗಿಲ್ಲ.

★★★★★

# ವೇದಾಂತವಿಹಿತಜ್ಞಾನ

## (ಶ್ರೀರಾಮಾನುಜಾಚಾರ್ಯರವರ ಮತ)

ಉಪಾಸನಾತ್ಮಕವಾದ ಜ್ಞಾನವೇ ವೇದಾಂತದಲ್ಲಿ ವಿಹಿತವಾಗಿರುವೆದೆಂದು ಅನೇಕ ಆಚಾರ್ಯರುಗಳು ಅಭಿಪ್ರಾಯಪಟ್ಟಿರುವರು. ಶ್ರೀಭಾಷ್ಯದಲ್ಲಿ ಶ್ರೀ ರಾಮಾನುಜಾಚಾರ್ಯರವರು ಈ ವಿಷಯದಲ್ಲಿ ಬರೆದಿರುವದನ್ನು ಇಲ್ಲಿ ವಾಚಕರ ಅವಲೋಕನಕ್ಕೆ ತರುತ್ತೇವೆ.

‘‘ಅವಿದ್ಯಾನಿವೃತ್ತಿಗಾಗಿ ವೇದಾಂತವಾಕ್ಯಗಳಲ್ಲಿ ವಿಧಿಸಲು ಹೊರಟಿರುವ ಜ್ಞಾನದ ಸ್ವರೂಪವೇನೆಂಬುದನ್ನು ಬಿಡಿಸಿ ತಿಳಿಯಬೇಕಾಗಿರುವದು. ಇದು ವಾಕ್ಯದಿಂದಾಗುವ ಬರಿಯ ವಾಕ್ಯಾರ್ಥದ ತಿಳಿವೋ ಅಥವಾ ಇದರ ಆಧಾರದ ಮೇಲೆ ಹುಟ್ಟುವ ಉಪಾಸನಾರೂಪವಾದ ಜ್ಞಾನವೋ? ವಾಕ್ಯದಿಂದ ಹುಟ್ಟುವ ಜ್ಞಾನವೇ ಇದೆನ್ನುವದಕ್ಕಿಲ್ಲ; ಏಕೆಂದರೆ ಇದು ವಿಧಿಸದೆ ಇದ್ದರೂ ವಾಕ್ಯದಿಂದಲೇ ಹುಟ್ಟಿಬಿಡುವದು. ಇದಲ್ಲದೆ ಇಷ್ಟು ಮಾತ್ರದಿಂದಲೇ ಅವಿದ್ಯೆಯು ಹೋದದ್ದು ಎಲ್ಲಿಯೂ ಕಂಡುಬರುವದಿಲ್ಲ.

ಭೇದವಾಸನೆಯನ್ನು ಕಳೆಯದಿದ್ದರೆ ವಾಕ್ಯದಿಂದ ಅವಿದ್ಯೆಯನ್ನು ನೀಗುವ ಅರಿವು ಹುಟ್ಟುವದಿಲ್ಲ. ಇದಲ್ಲದೆ ಜ್ಞಾನವು ಹುಟ್ಟಿದರೂ ಎಲ್ಲರಿಗೂ ಕೂಡಲೆ ಭೇದಜ್ಞಾನವು ಹೋಗದಿದ್ದರೂ ದೋಷವಿಲ್ಲ; ಹೇಗೆಂದರೆ ಚಂದ್ರನು ಒಬ್ಬನೆಂದು ತಿಳಿದ ಮೇಲೂ (ಕಣ್ಣಿನ ದೋಷವಿರುವವರಿಗೆ) ಇಬ್ಬರು ಚಂದ್ರರ ಅರಿವು ಹೋಗಿರುವದಿಲ್ಲ. ಭೇದಜ್ಞಾನವು ಸಂಪೂರ್ಣವಾಗಿ ಹೋಗದಿದ್ದರೂ ಬೇರುಕಡಿದು ಹೋಗಿರುವದರಿಂದ ‘ಇದರಿಂದ ಬಂಧವಾಗುವದಿಲ್ಲ’ ಎಂದು ಹೇಳಲಾಗುವದಿಲ್ಲ; ಏಕೆಂದರೆ ಸಾಮಗ್ರಿ ಇದ್ದರೂ ಜ್ಞಾನವು ಹುಟ್ಟುವದಿಲ್ಲ ಎನ್ನುವದು ಆಗುವದಿಲ್ಲ: ಏಕೆಂದರೆ ವಿರುದ್ಧವಾದ ಜ್ಞಾನದವಾಸನೆ ಇರುತ್ತಿದ್ದರೂ ತಿಳಿದವರು ಹೇಳುವ ವಾಕ್ಯ, ವಸ್ತುವಿನ ಹೆಗ್ಗುರುತು, ಮುಂತಾದವುಗಳಿಂದ ಅಜ್ಞಾನವನ್ನು ಹೋಗಲಾಡಿಸುವ ಜ್ಞಾನವು ಹುಟ್ಟುವದನ್ನು ಕಂಡಿದೇವೆ ವಾಕ್ಯಾರ್ಥದ ಜ್ಞಾನವು ಉಂಟಾದರೂ ಅನಾದಿಯಾದ ತಪ್ಪುತಿಳಿವಿನ ವಾಸನೆಯಿಂದ ಸ್ವಲ್ಪಮಟ್ಟಿಗೆ [1] ಭೇದಜ್ಞಾನವು ಅನುಸರಿಸಿಕೊಂಡೇ ಇರುವದೆಂದು ನೀವು ಹೇಳುವದಕ್ಕಾಗಲಾರದು; ಏಕೆಂದರೆ ಭೇದಜ್ಞಾನಸಾಮಗ್ರಿಯಾದ ವಾಸನೆಯೆಂಬುದು ಮಿಥ್ಯೆಯಾದ್ದರಿಂದ ಜ್ಞಾನವು ಹುಟ್ಟುತ್ತಲೂ ಹೋಗಿ ಬಿಡುವದು. ಹಾಗೆ ಮಿಥ್ಯಾರೂಪವಾದದ್ದು ಜ್ಞಾನವಾದ ಮೇಲೂ ಹೋಗದೆ ಇದ್ದರೆ, ಅದನ್ನು ಹೋಗಲಾಡಿದಲು ಮತ್ತೊಂದು ಯಾವದೂ ಇರುವದಿಲ್ಲವಾಗಿ ಈ ವಾಸನೆಯು ಎಂದಿಗೂ ಹೋಗದೆ ಇರಬೇಕಾಗಿರುವದು. ವಾಸನೆಯಿಂದಾದ ಭೇದ ಜ್ಞಾನವು ಬೇರುಕಡಿದು ಹೋಯಿತು, ಆದರೂ ಅನುಸರಿಸಿ ಬಂದಿರುವದು

1. ಈ ಮಾತು ಜ್ಞಾನಿಗಳಿಗೂ ಅವಿದ್ಯಾಲೇಶವುಂಟೆಂಬ ಅದ್ವೈತವಾದಿಗಳನ್ನು ಕುರಿತು ಹೇಳಿದ್ದು.

ಎಂಬುದು ಹುಡುಗಾಟಿಕೆಯ ಮಾತು. ಎರಡು ಚಂದ್ರವೆಂಬ ಜ್ಞಾನವೇ ಮುಂತಾದೆಡೆಯಲ್ಲಿಯಾದರೆ, ಬಾಧಕವಾದ ಜ್ಞಾನವು ಇರುತ್ತಿದ್ದರೂ ತಪ್ಪುತಿಳಿವಿಗೆ ಕಾರಣವಾಗಿರುವ ಕಣ್ಣಿನ ತಿಮಿರರೋಗವೇ ಮೊದಲಾದ ದೋಷವು ನಿಜವಾಗಿ ರುವದಾಗಿದ್ದು ಜ್ಞಾನದಿಂದ ಹೋಗತಕ್ಕದ್ದಲ್ಲವಾದ್ದರಿಂದ ಅದು ನಾಶವಾಗದೆ ಇರುವದು. ಆದ್ದರಿಂದ ಮಿಥ್ಯಾಜ್ಞಾನವು ಮತ್ತೂ ಇರುವದೇನೂ ವಿರೋಧವಲ್ಲ (ರಜ್ಜುಸರ್ಪದೃಷ್ಟಾಂತದಲ್ಲಿ ರಜ್ಜುಜ್ಞಾನವಾಗಲು) ಪ್ರಬಲಪ್ರಮಾಣದಿಂದ ಭಯಾದಿಕಾರ್ಯವು ಬಾಧಿತವಾಗುತ್ತದೆಯಾದ್ದರಿಂದ ಅದು ಇರುವದಿಲ್ಲ. ಇದೂ ಅಲ್ಲದೆ ಭೇದವಾಸನೆಯನ್ನು ಕಳೆದೇ ಜ್ಞಾನವುಂಟಾಗುವದೆಂದು ಅಂಗೀಕರಿಸುವವರ ಮತದಲ್ಲಿ ಜ್ಞಾನಹುಟ್ಟುವದೆಂಬುದೇ ಎಂದಿಗೂ ಆಗಲಾರದು; ಏಕೆಂದರೆ ಭೇದವಾಸನೆಯು ಅನಾದಿಕಾಲದಿಂದ ಕೂಡಿಹಾಕಿದ್ದಾದ್ದರಿಂದ ಅಪರಮಿತವಾಗಿ ರುವದು. ಇದಕ್ಕೆ ವಿರೋಧವಾದ ಭಾವನೆಯು ಬಹಳ ಸ್ವಲ್ಪವಾಗಿರುವದರಿಂದ ಇದನ್ನು ಕಳೆಯಲಾರದು.

ಆದ್ದರಿಂದ ವಾಕ್ಯಾರ್ಥಜ್ಞಾನಕ್ಕಿಂತ ಬೇರೆಯಾಗಿ 'ಧ್ಯಾನ, ಉಪಾಸನೆ', ಮುಂತಾದ ಶಬ್ದಗಳಿಂದ ಹೇಳಲ್ಪಡುವ ಜ್ಞಾನವೇ ವೇದಾಂತವಾಕ್ಯಗಳು ವಿಧಿಸಬೇಕೆಂಬುದು. ಆದ್ದರಿಂದಲೇ ''ತಿಳಿದು ಪ್ರಜ್ಞೆಯನ್ನು ಮಾಡಬೇಕು'' (ಬೃ), ''ತಿಳಿದು ಜ್ಞಾನವನ್ನು ಮಾಡುತ್ತಾನೆ'' (ಛಾಂ), ''ಓಂ ಎಂದೇ ಆತ್ಮನನ್ನು ಧ್ಯಾನಿಸಿರಿ'' (ಮುಂ), ''ಆತನನ್ನು ಉಪಾಸನೆ ಮಾಡಿದರೆ ಮೃತ್ಯುವಿನ ಬಾಯಿಯಿಂದ ಬಿಡುಗಡೆ ಹೊಂದುವನು'' (ಕ), ''ಆತ್ಮನೆಂಬ ಲೋಕವನ್ನೇ ಉಪಾಸನೆ ಮಾಡಬೇಕು'' (ಬೃ), ''ಎಲೆ ಮೈತ್ರೇಯಿ, ಆತ್ಮನನ್ನೇ ಕಾಣಬೇಕು; ಕೇಳಬೇಕು, ತಿಳಿಯಬೇಕು, ಚೆನ್ನಾಗಿ ಧ್ಯಾನಿಸಬೇಕು.'' (ಬೃ) ಇವೇ ಮುಂತಾದ ಶ್ರುತಿಗಳು ಈ ಅಭಿಪ್ರಾಯವನ್ನು ಹೇಳುತ್ತಿವೆ.

ಇಲ್ಲಿ ''ಚೆನ್ನಾಗಿ ಉಪಾಸನೆ ಮಾಡಬೇಕು'' ಮೊದಲಾದ ಶ್ರುತಿಯ ಅರ್ಥದಲ್ಲಿಯೇ ''ತಿಳಿದು ವಿಜ್ಞಾನವನ್ನು ಮಾಡುತ್ತಾನೆ'' ''ತಿಳಿದು ಪ್ರಜ್ಞೆಯನ್ನು ಮಾಡಬೇಕು'' ಮುಂತಾದ ವಾಕ್ಯಗಳಲ್ಲಿ ವಾಕ್ಯಾರ್ಥಜ್ಞಾನವು ಧ್ಯಾನಕ್ಕೆ ಬೇಕಾದದ್ದರಿಂದ ''ತಿಳಿದು'' ಎಂದು ಅನುವಾದ ಮಾಡಿ ''ಪ್ರಜ್ಞೆಯನ್ನು ಮಾಡಬೇಕು'' ''ವಿಜ್ಞಾನವನ್ನು ಮಾಡುತ್ತಾನೆ'' – ಎಂದು ಧ್ಯಾನವನ್ನು ವಿಧಿಸಿರುತ್ತದೆ. ''ಶ್ರವಣಮಾಡಬೇಕು'' ಎಂಬುದು ಅನುವಾದವು;

ಅಧ್ಯಯನವೆಂಬುದು ಅರ್ಥಕ್ಕಾಗಿರುವದರಿಂದ ವೇದವನ್ನು ಅಧ್ಯಯನ ಮಾಡಿದ ಪುರುಷನು ಪ್ರಯೋಜನವನ್ನುಂಟುಮಾಡುವ ಅರ್ಥವನ್ನು ಇದು ಹೇಳುವದೆಂದು ಕಂಡು, ಅದನ್ನು ನಿರ್ಣಯಿಸುವದಕ್ಕೆ ತಾನೇ ಹೊರಡುತ್ತಾನೆ. ಆದ್ದರಿಂದ ಶ್ರವಣವು ಪ್ರಾಪ್ತವೇ ಆಗಿರುವದು, ಶ್ರವಣ ಮಾಡಿದ್ದು ನಿಲ್ಲುವದಕ್ಕೇ ಮನನವಾದ್ದರಿಂದ ''ಮನನ ಮಾಡಬೇಕು'' ಎಂಬುದೂ ಅನುವಾದವೇ. ಆದ್ದರಿಂದ ಧ್ಯಾನವೊಂದನ್ನೇ ಇಲ್ಲಿ ವಿಧಿಸಿರುತ್ತದೆ. ಮುಂದೆ ಸೂತ್ರಕಾರರೂ ''ಧ್ಯಾನವನ್ನು ಮತ್ತೆಮತ್ತೆ ಆವೃತ್ತಿ ಮಾಡಬೇಕು, ಏಕೆಂದರೆ ಹೀಗೆಂದು ಶ್ರುತಿಯಲ್ಲಿ ಉಪದೇಶವಿರುತ್ತದೆ'' ಎಂದು ಹೇಳಿರುತ್ತಾರೆ.

ಹೀಗೆ ಮೋಕ್ಷಕ್ಕಾಗಿ ವಿಹಿತವಾಗಿರುವ ಜ್ಞಾನವೆಂಬುದು ಉಪಾಸನೆಯೇ ಎಂಬುದನ್ನು ''ವಿದ್,'' ''ಉಪಾಸ್'' - ಎಂಬ ಧಾತುಗಳನ್ನು ಮಿಶ್ರಮಾಡಿ ಉಪಕ್ರಮೋಪಸಂಹಾರಗಳಲ್ಲಿ ಉಪಯೋಗಿಸಿರುವದರಿಂದ ನಿಶ್ಚಯ ಮಾಡಬಹುದು. ಹೇಗೆಂದರೆ, ''ಮನೋಬ್ರಹ್ಮೇತ್ಯುಪಾಸೀತ'' (ಮನಸ್ಸನ್ನೇ ಬ್ರಹ್ಮವೆಂದು ಉಪಾಸನೆ ಮಾಡಬೇಕು) ಎಂಬಲ್ಲಿ ಭಾತಿಚ ತಪತಿಚ ಕೀರ್ತ್ಯಾ ಯಶಸಾ ಬ್ರಹ್ಮವರ್ಚಸೇನ ಯ ಏವಂ ವೇದ ''(ಯಾವನು ಹೀಗೆಂದು ತಿಳಿಯುವನೋ ಅವನು ಕೀರ್ತಿ, ಯಶಸ್ಸು, ಬ್ರಹ್ಮವರ್ಚಸ್ಸು - ಇವುಗಳಿಂದ ಹೊಳೆಯುತ್ತಲೂ ತಪಿಸುತ್ತಲೂ ಇರುವನು)'' ಎಂದೂ ''ಅವನಿಗೆ ತಿಳಿಯದು, ಏಕೆಂದರೆ ಅವನು ಪೂರ್ಣನಲ್ಲ - ಆತ್ಮನೆಂದೇ ಉಪಾಸನೆಮಾಡಬೇಕು'' ಎಂದೂ, ''ಯಾರು ಅದನ್ನು ತಿಳಿಯುವನೋ ಆತನೇ ಬಲ್ಲವನು, ಆತನೇ ಬಲ್ಲವನು, ಅವನನ್ನೇ ನಾನು ಈಗ ಹೇಳಿದ್ದು'' ಎಂಬಲ್ಲಿ ''ಸ್ವಾಮಿ, ತಾವು ಯಾವ ದೇವತೆಯನ್ನು ಉಪಾಸನೆ ಮಾಡುತ್ತೀರೋ ನನಗೆ ಅಪ್ಪಣೆಯಾಗಬೇಕು'' ಎಂದೂ (ತಿಳಿಯುವದು ಉಪಾಸನೆ ಮಾಡುವದು - ಎರಡನ್ನೂ ಮಿಶ್ರಮಾಡಿ ಹೇಳಿರುತ್ತದೆ).

ಇದುವರೆಗೆ ಬರೆದಿರುವ ಭಾಷ್ಯದ ಮುಖ್ಯ ಆಶಯವೇನೆಂದರೆ, ವೇದಾಂತದಲ್ಲಿ ಜ್ಞಾನವನ್ನು ವಿಧಿಸಿರುವದು. ಅದು ವಾಕ್ಯಾರ್ಥ ಮಾತ್ರವಲ್ಲ. ಏಕೆಂದರೆ ವಾಕ್ಯದ ಅರ್ಥವು ತಾನೇ ಆಗುತ್ತದೆ ಜ್ಞಾನಮಾತ್ರದಿಂದ ಯಾರಿಗೂ ಬಂಧನಾಶವಾಗುವದೂ ಇಲ್ಲ. ವಾಕ್ಯಾರ್ಥವೇ ಭೇದ ಜ್ಞಾನರೂಪವಾದ ಬಂಧವನ್ನು ಕಳೆಯುವದು ಎಂದು ಕೆಲವರು ಹೇಳುವರು. ಆದರೆ ವಾಕ್ಯಾರ್ಥವನ್ನು ಕೇಳಿದಮೇಲೂ ಭೇದಜ್ಞಾನವಿರುವದೆಂದು ಅವರೇ ಒಪ್ಪಿರುವದರಿಂದ ಅವರ

ಮತವು ಆದರಣೀಯವಲ್ಲ. ಆದ್ದರಿಂದ ಉಪನಿಷತ್ತುಗಳಲ್ಲಿ ಧ್ಯಾನರೂಪವಾದ ಜ್ಞಾನವನ್ನೇ ವಿಧಿಸಿರುತ್ತದೆ. ಈ ಜ್ಞಾನವು ಧ್ಯಾನ ಅಥವಾ ಉಪಾಸನಾರೂಪವಾದದ್ದೆಂಬುದಕ್ಕೆ ಮತ್ತೊಂದು ಸಾಕ್ಷಿಯುಂಟು: ಜ್ಞಾನವಿಧಿ ಇರುವ ಅನೇಕ ಕಡೆಗಳಲ್ಲಿ ತಿಳಿವು (ವೇದನ) ಧ್ಯಾನ (ಉಪಾಸನಾ) - ಇವುಗಳನ್ನು ಹೇಳುವ ಮಾತುಗಳನ್ನು ಬೆರಸಿ ಉಪಕ್ರಮೋಪಸಂಹಾರಗಳಲ್ಲಿ ಹೇಳಿರುತ್ತದೆ. ಈ ಎಲ್ಲಾ ಕಾರಣಗಳಿಂದ ಧ್ಯಾನವೇ ಉಪನಿಷತ್ತುಗಳಲ್ಲಿ ವಿಹಿತವಾಗಿರುವ ಜ್ಞಾನವೆಂಬುದು ಸಿದ್ಧವಾಗುತ್ತದೆ.

★★★★★

# ಸಾರತಮವಾವುದು?

**- ಡಿ. ಗೋಪಾಲಾಚಾರ್ಯರವರು**

**ಶ್ರೀಮತೇ ರಾಮಾನುಜಾಯ ನಮಃ ॥**

ಶ್ರೀಮದ್ರಾಮಾನುಜಾಚಾರ್ಯರೇ ಮೊದಲಾದ ಮಹನೀಯರು ವಿಶಿಷ್ಟಾದ್ವೈತಮತವನ್ನು ಸರ್ವತೋಮುಖವಾಗಿ ಪ್ರಚಾರಮಾಡಬೇಕೆಂಬ ಅಭಿಪ್ರಾಯದಿಂದ ಅನೇಕಗ್ರಂಥಗಳನ್ನು ಸಂಸ್ಕೃತಭಾಷೆಯಲ್ಲಿ ರಚಿಸಿದರು. ಮತ್ತೆ ಕೆಲವರು ಆಚಾರ್ಯರ ಅದನ್ನು ಸುಲಭವಾಗಿ ತಿಳಿದುಕೊಳ್ಳುವದಕ್ಕಾಗಿ ದ್ರಾವಿಡಭಾಷೆಯಲ್ಲಿ ರಚಿಸಿ ತಮ್ಮ ಪರೋಪಕಾರಬುದ್ಧಿಯನ್ನು ಅನೇಕ ಮುಖವಾಗಿ ಪ್ರಕಾಶಪಡಿಸಿದರು. ಆದರೆ ಕಾಲಕ್ರಮದಲ್ಲಿ ದೇಶವಾಸಿಗಳಿಗೂ ಸಂಸ್ಕೃತಭಾಷೆಯಲ್ಲಿ ಕೇವಲ ಅನಾದರವುಂಟಾದುದರಿಂದ ಮತಜ್ಞಾನವೇ ಇಲ್ಲದಂತಾಗಿದೆ. ಸಂಸ್ಕೃತಭಾಷೆಯಲ್ಲಿ ಶಾಸ್ತ್ರಜ್ಞಾನವು ಕೇವಲ ಕಠಿನವಾಗಿರುವದರಿಂದ ತಿಳಿಯಲು ಅಸಾಧ್ಯವಾಗಿರುವದು. ಇದನ್ನು ತಿಳಿದು ಮತಾಂತರದವರು ತಮ್ಮ ತಮ್ಮ ಸಿದ್ಧಾಂತ ಗ್ರಂಥಗಳನ್ನು ದೇಶಭಾಷೆಗಳಿಗೆ ಪರಿವರ್ತನೆಮಾಡಿ ತಮ್ಮ ತಮ್ಮ ಮತಗಳನ್ನು ತಕ್ಕಮಟ್ಟಿಗೆ ಪ್ರಚುರಪಡಿಸಿರುತ್ತಾರೆ. ಆದರೆ ಶ್ರೀವೈಷ್ಣವರಲ್ಲಿ ವಿದ್ವಾಂಸರು

ಹೊರತು ಸಾಮಾನ್ಯಜನರಿಗೆ ತಮ್ಮ ಮತ ಸಂಗತಿಯೇನೆಂದು ತಿಳಿಯಲು ಸಾಧನಗಳೇ ಇಲ್ಲದಿರುವದು ತುಂಬಾ ವಿಷಾದಕರವಾಗಿದೆ. ಈ ಸಂಗತಿಯನ್ನು ಕುರಿತು ನಾನು ಬಹಳದಿನಗಳು ಯೋಚಿಸಿ ಸಾಮಾನ್ಯವಾದ ಕನ್ನಡಭಾಷೆಯಿಂದ ''**ವಿಶಿಷ್ಟಾದ್ವೈತ ಸಿದ್ಧಾಂತ ಸಂಗ್ರಹ**''ವೆಂಬ ಪುಸ್ತಕವನ್ನು ರಚಿಸಿದೆನು. ಅದು ಪ್ರಕಟವಾಗಲು ಅನುಕೂಲವಿಲ್ಲದೆ ಇರುತ್ತೆ. ಹೀಗಿರುವಲ್ಲಿ ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಯಲ್ಲಿ ಮತಸಂಬಂಧವಾದ ವಿಚಾರಗಳನ್ನು ಪ್ರಕಟಿಸುತ್ತಿರುವದಾಗಿ ತಿಳಿದು ನಾನು ಈ ಮೂಲಕವಾಗಿಯಾದರೂ ಕೆಲವು ಶ್ರೀ ವೈಷ್ಣವಮತ ತತ್ತ್ವಗಳನ್ನು ಕನ್ನಡಭಾಷೆಯಿಂದ ಶ್ರೀವೈಷ್ಣವಮಹಾಶಯರ ಮುಂದಿಡಬೇಕೆಂದು ಯೋಚಿಸಿ ಈ ಲೇಖನಮಾಲೆಯನ್ನು ಪ್ರಾರಂಭಿಸಿರುವೆನು. ನಾನು ಅಲ್ಪಮತಿಯಾದರೂ ಸ್ವಮತಾಭಿಮಾನದಿಂದ ಪ್ರಕಟಿಸುವ ಲೇಖನಗಳಲ್ಲಿ ಸಂಪ್ರದಾಯಜ್ಞರು ಸಾರವನ್ನು ಗ್ರಹಿಸುವರೆಂದು ಪ್ರಾರ್ಥಿಸುತ್ತೇನೆ.

''ಪರೀಕ್ಷ್ಯಲೋಕಾನ್ ಕರ್ಮಚಿತಾನ್ ಬ್ರಾಹ್ಮಣೋ ನಿರ್ವೇದಮಾಯಾತ್'' ಬ್ರಾಹ್ಮಣನಾದವನು ಸತ್ಕರ್ಮಗಳಿಂದ ಸಂಪಾದಿಸಲ್ಪಟ್ಟ ಸ್ವರ್ಗಾದಿ ಲೋಕಗಳು ಅನಿತ್ಯಗಳೆಂಬುದಾಗಿ ತಿಳಿದು ವ್ಯಸನವನ್ನು ಹೊಂದಬೇಕು. ಹೀಗೆ ಪ್ರಾಪ್ತವ್ಯಸನನಾದ ಮನುಷ್ಯನು ''ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್'' ಆ ಬ್ರಹ್ಮಜ್ಞಾನವನ್ನು ಸಂಪಾದಿಸುವದಕ್ಕೋಸ್ಕರವಾಗಿ ಗುರುವನ್ನಾಶ್ರಯಿಸಬೇಕು. ''ಆಚಾರ್ಯಾದ್ಧ್ಯೆವವಿದಿತಾ ವಿದ್ಯಾ ಸಾಧಿಷ್ಠಂ ಪ್ರಾಪತ್'' ಎಂಬುವಂತೆ ಆಚಾರ್ಯಮುಖೇನ ಅಭ್ಯಾಸಮಾಡಿದ ವಿದ್ಯೆಯೇ ಸಾಧುವಾದದ್ದು ಮತ್ತು ಕಾರ್ಯಕಾರಿಯಾಗುವದು ಎಂದಿರುವದರಿಂದ ಗುರುವಿನ ಮೂಲಕವಾಗಿ ತಿಳಿದ ವಿದ್ಯೆಯು ಮೋಕ್ಷ ಸಾಧನವಾಗುವದು ಎಂದು ಶಾಸ್ತ್ರದಲ್ಲಿ ಹೇಳಿರುವದು.

ಅದರಂತೆ ಶಿಷ್ಯವೃತ್ತಿಯನ್ನು ಮಾಡಿ ಶಾಸ್ತ್ರಜ್ಞಾನವನ್ನು ಸಂಪಾದಿಸಿ ಮುಕ್ತಿಲಾಭವನ್ನು ಹೊಂದಬಹುದಲ್ಲ ಎಂದರೆ ''ಅನಂತಪಾರಂ ಬಹುವೇದಿ ತವ್ಯಮ್ ಅಲ್ಪಶ್ಚಕಾಲೋ ಬಹವಶ್ಚವಿಘ್ನಾಃ'' ಅಂದರೆ ಶಾಸ್ತ್ರಗಳಿಗೆ ಕೊನೆಯೇ ಇಲ್ಲ; ಎಷ್ಟು ಓದಿದರೂ ಮುಗಿಯುವದಿಲ್ಲ; ತಿಳಿಯಬೇಕಾದ ಸಂಗತಿಗಳು ಅನೇಕಗಳಾಗಿ ರುತ್ತವೆ; ಕಾಲವಾದರೋ ಬಹಳ ಸ್ವಲ್ಪವಾಗಿರುವದು, ವಿಘ್ನಗಳಾದರೋ ಬಹಳವಾಗಿರುವವು - ಎಂಬುದಾಗಿಯೂ ''ಸೂಕ್ಷ್ಮಃ ಪರಮದುರ್ಜ್ಞೇಯಃ

ಸತಾಂ ಧರ್ಮಃ ಪ್ಲವಂಗಮ'' - ಎಲೈ ಹನುಮಂತನೇ, ಸತ್ಪುರುಷಧರ್ಮವು ಸೂಕ್ಷ್ಮವಾದುದು, ತಿಳಿಯುವದಕ್ಕೆ ಬಹು ಕಷ್ಟವಾದುದು ಎಂದು ಹೇಳಿ ''ಶಾಸ್ತ್ರಜ್ಞಾನಂ ಬಹುಕ್ಲೇಶಂ...'' ಅಂದರೆ ಶಾಸ್ತ್ರಗಳನ್ನು ಓದುವದು ಬಹಳ ಕಷ್ಟವು, ಬುದ್ಧಿಯು ಚಂಚಲವಾಗುವದಕ್ಕೆ ಕಾರಣವು, ಅಂದರೆ ಎಲ್ಲಾ ಶಾಸ್ತ್ರಗಳನ್ನೂ ಶೋಧಿಸುವದು ಮನುಷ್ಯನಿಂದ ಸಾಧ್ಯವಿಲ್ಲ; ಮತ್ತು ವೇದಾಂತಶಾಸ್ತ್ರಗಳಲ್ಲಿಯೂ ಇತರ ಶಾಸ್ತ್ರಗಳಲ್ಲಿಯೂ ಮತಬೇಧಗಳಿರುವದರಿಂದ ಯಾವದು ಪ್ರಮಾಣವೋ ಯಾವದು ಅಪ್ರಮಾಣವೋ ಎಂಬ ಸಂದೇಹವುಂಟಾಗಿ ಬುದ್ಧಿಚಲನಕ್ಕೆ ಕಾರಣವಾಗುವದು - ಇತ್ಯಾದಿ ವಚನಗಳಿಂದ ತತ್ತ್ವಜ್ಞಾನವನ್ನು ತಿಳಿಯುವದೇ ಅಸಾಧ್ಯವಾಗಿರುವದು.

ಹಾಗಾದರೆ ಮೋಕ್ಷವು ದೊರೆಯುವ ಬಗೆ ಹೇಗೆ? ಎಂಬುದಾಗಿ ಸಂದೇಹವುಂಟಾದರೆ ''ಯತ್ಸಾರಭೂತಂ ತದುಪಾದದೀತ ಹಂಸೋ ಯಥಾ ಕ್ಷೀರ ಮಿವಾಂಬುಮಿಶ್ರಂ । ಉಪದೇಶಾದ್ಧರಿಂ ಬುದ್ಧ್ವಾ ವಿರಮೇತ್ಸರ್ವಕರ್ಮಸು ॥'' ಹಂಸವು ನೀರಿನಲ್ಲಿ ಬೆರೆತಿರುವ ಹಾಲನ್ನು ಮಾತ್ರ ತೆಗೆದುಕೊಂಡು ನೀರನ್ನು ಬಿಟ್ಟುಬಿಡುವಂತೆ ಬುದ್ಧಿವಂತನಾದವನು ಸಾರತಮವಾದುದಾವುದೋ ಅದನ್ನು ಗ್ರಹಿಸಬೇಕು; ಮತ್ತು ಗುರೂಪದೇಶದಿಂದ ಶ್ರೀಮನ್ನಾರಾಯಣನನ್ನು ತಿಳಿದು ಸರ್ವಕರ್ಮಗಳಿಂದಲೂ ವಿರಾಮವನ್ನು ಹೊಂದಬೇಕು - ಇತ್ಯಾದಿ ಪ್ರಮಾಣಗಳಿಂದ ಯಾವುದು ಅತ್ಯಂತ ಮುಖ್ಯವಾದುದೋ ಅದನ್ನು ಗ್ರಹಿಸಬೇಕು - ಎಂಬಂಶವನ್ನು ಅಚಾರ್ಯರು ತಿಳಿಸಿರುತ್ತಾರೆ.

ಹೇಗೆಂದರೆ - ''**ಅಸಾರಮಲ್ಪಸಾರಂ ಚ ಸಾರಂ ಸಾರತರಂ ತ್ಯಜೇತ್ । ಭಜೇತ್ಸಾರತಮಂ ಶಾಸ್ತ್ರಂ ರತ್ನಾಕರ ಇವಾಮೃತಂ ॥**'' ಅಂದರೆ ಅಸಾರವಾದುದನ್ನೂ ಅಲ್ಪಸಾರವಾದುದನ್ನೂ ಸಾರವಾದುದನ್ನೂ ಸಾರತರವಾದುದನ್ನೂ ಬಿಟ್ಟು ಸಾರತಮವಾದುದನ್ನು ಸಮುದ್ರದಲ್ಲಿ ರತ್ನಗಳನ್ನು ಹೊಂದುವಂತೆ ಹೊಂದಬೇಕು- ಎಂದು ಹೇಳಿರುತ್ತಾರೆ. ಮುಮುಕ್ಷುವಾದವನಿಗೆ ಅಸಾರವಾವುದು? ಅಲ್ಪಸಾರವಾವುದು? ಸಾರವಾವುದು? ಸಾರತರವಾವುದು? ಸಾರತಮವಾವುದು? ಎಂದರೆ -

ಬಾಹ್ಯಕುದೃಷ್ಟಿಕಲ್ಪಿತಗಳಾದ ನಾಸ್ತಿಕಚಾರ್ವಾಕಾದಿಮತಗಳು ಬ್ರಹ್ಮಾಸ್ತಿತ್ವ ವಿರುದ್ಧಶಾಸ್ತ್ರಗಳನ್ನು ಬೋಧಿಸುವದರಿಂದಲೂ ವೇದಪ್ರಾಮಾಣ್ಯಾಭ್ಯುಪಗಮವುಳ್ಳ

ಮುಮುಕ್ಷುಗಳಿಗೆಅನಾದರಣೀಯಗಳಾಗಿದ್ದರಿಂದಲೂಅಸಾರಗಳೆನಿಸುತ್ತವೆ. ಐಹಿಕ ಫಲಸಾಧನಗಳಾದ ವ್ರತೋ ಪ್ರವಾಸನಾದಿಗಳು ದುಃಖಹೇತುಗಳಾದುದರಿಂದ ಅಲ್ಪಸಾರಗಳೆನಿಸುತ್ತವೆ. ವೇದದಲ್ಲಿ ಪೂರ್ವಭಾಗಪ್ರತಿಪಾದಕಗಳಾದ ''ಜ್ಯೋತಿಷ್ಟೋಮೇನ ಸ್ವರ್ಗಕಾಮೋ ಯಜೇತ'' ಸ್ವರ್ಗಾಪೇಕ್ಷೆಯುಳ್ಳವನು ಜ್ಯೋತಿಷ್ಟೋಮಯಾಗವನ್ನು ಮಾಡಬೇಕು - ಇತ್ಯಾದಿ ಕರ್ಮಕಾಂಡದಲ್ಲಿ ಹೇಳಲ್ಪಟ್ಟಿರುವ ಶಾಸ್ತ್ರಗಳೆಲ್ಲವೂ ''ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ'' ಪುಣ್ಯವು ಕಳೆದುಹೋಗಲು ಪುನಃ ಭೂಲೋಕವನ್ನು ಹೊಂದುವರು. ಇತ್ಯಾದಿ ಶಾಸ್ತ್ರಗಳಿಂದ ನಶ್ವರವಾದ ಫಲವನ್ನು ಸೂಚಿಸುತ್ತವೆಯಾದುದರಿಂದ ಸಾರಗಳೆನಿಸುತ್ತವೆ.

ವೇದದಲ್ಲಿ ಆತ್ಮತತ್ತ್ವಪ್ರತಿಪಾದಕಗಳಾಗಿ ವೇದದ ಉತ್ತರಭಾಗಗಳಾದ ಉಪನಿಷತ್ತುಗಳಲ್ಲಿ ಉಕ್ತವಾದ ಆತ್ಮತತ್ತ್ವ - ತತ್ಪ್ರಾಪ್ತಿ ಸಾಧನೋಪಾಯಗಳು ಸಾರತರಗಳೆನಿಸುವವು. ಆದರೂ ಅತ್ಯಂತಾತಿಶಯಿಕವಾದ ಪರಮಾತ್ಮಾನುಭವನ್ನ ಪೇಕ್ಷಿಸುವದರಿಗೆ ಅನುಪಾದೇಯವಾಗಿರುವದು.

ವಿಶಿಷ್ಟಾದ್ವೈತಸಿದ್ಧಾಂತರೀತಿಯಿಂದ ಭಕ್ತಿಪ್ರಪತ್ತಿಗಳೆರಡೇ ಮುಕ್ತಿ ಸಾಧನೋಪಾಯಗಳೆಂದು ಹೇಳಿರುವದರಿಂದಲೂ ''ಅನನ್ಯೇನೈವ ಯೋಗೇನ ಮಾಂ ಧ್ಯಾಯಂತ ಉಪಾಸತೇ । ತೇಪಿ ಚಾತಿತರಂತ್ಯೇವ ಮೃತ್ಯುಂ ಶ್ರುತಿಪರಾಯಣಾಃ ॥'' ಇತ್ಯಾದಿ ಗೀತಾವಾಕ್ಯಗಳಿಂದ ಅನನ್ಯಭಕ್ತಿಯು ಮೋಕ್ಷ ಸಾಧಕವಾದುದಾದರೂ ಅನುಷ್ಠಿಸುವದಕ್ಕೆ ದುಸ್ಸಾಧ್ಯವಾಗಿ ರುವದರಿಂದಲೂ ರಹಸ್ಯತ್ರಯದಿಂದ ಅಂದರೆ ಮೂಲಮಂತ್ರ ದ್ವಯಮಂತ್ರ ಚರಮಮಂತ್ರಗಳೆಂಬ ಮೂರು ಮುಖ್ಯವಾದ ಮಂತ್ರಗಳಲ್ಲಿ ''ಸರ್ವಮಷ್ಟಾಕ್ಷರಾಂತಸ್ಥಂ'' ಅಷ್ಟಾಕ್ಷರಮಂತ್ರದಲ್ಲಿ ಸರ್ವವೂ ಇರುವದು - ಎಂಬಂತೆ ಅಷ್ಟಾಕ್ಷರದಲ್ಲಿ ಸರ್ವಾರ್ಥಗಳೂ ಸಂಗೃಹೀತವಾಗಿರುವದರಿಂದಲೂ ಚರಮಶ್ಲೋಕದಲ್ಲಿ ''ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ'' ಎಂಬುವದರಿಂದ ಸರ್ವೋಪಾಯಗಳನ್ನೂ ನಿಷೇಧಮಾಡಿ ಪ್ರಪತ್ತಿರೂಪವಾದ ಒಂದೇ ಉಪಾಯದಿಂದ ಸರ್ವಫಲಸಿದ್ಧಿಯೂ ಉಂಟಾಗುವದೆಂದು ಹೇಳಿರುವದರಿಂದಲೂ ಉಪನಿಷತ್ತಿನಲ್ಲಿ ''ಯ ಏತದ್ದ್ವಯಂ ಸಕೃದುಚ್ಚಾರಯತಿ'' ಯಾವನು ಒಂದಾವರ್ತಿ ಈ ದ್ವಯವನ್ನು ಉಚ್ಚಾರಮಾಡುತ್ತಾನೋ, ಎಂದೂ

ಸಕೃದುಚ್ಚಾರಃ ಸಂಸಾರತಾರಕೋ ಭವತಿ'' ಒಂದಾವರ್ತಿ ಉಚ್ಚರಿಸುವದರಿಂದ ಸಂಸಾರವನ್ನು ದಾಟುತ್ತಾನೆ - ಇತ್ಯಾದಿ ಶ್ರುತಿಗಳಿಂದ ಮೂಲಮಂತ್ರವನ್ನು ಉಚ್ಚಾರಮಾಡುವವನನ್ನು ಸರ್ವಪ್ರಕಾರದಿಂದಲೂ ಕೃತಕೃತ್ಯನನ್ನಾಗಿ ಮಾಡುವ ಪ್ರಭಾವವುಳ್ಳದಾದುದರಿಂದಲೂ ಈ ಮಂತ್ರತ್ರಯಪ್ರತಿಪಾದ್ಯವಾದ ಮುಕ್ತಿಸಾಧನವಾದ ಪ್ರಪತ್ತಿಯನ್ನು ಬೋಧಿಸುವ ಶಾಸ್ತ್ರವು ಸಾರತಮವಾಗಿರುವದು.

ಆದುದರಿಂದ ಈ ಪ್ರಪತ್ತಿಯು ಮೋಕ್ಷಸಾಧನೋಪಾಯಗಳಲ್ಲಿ ಅತ್ಯಂತ ಸುಲಭವಾಗಿರುವದರಿಂದಲೂ ಈ ಉಪಾಯದಿಂದ ಮೋಕ್ಷಪ್ರಾಪ್ತಿಯು ನಿಶ್ಚಿತವಾಗಿರುವದರಿಂದಲೂ ರಾಮಾನುಜಾಚಾರ್ಯರೇ ಮೊದಲಾಗಿ ಸಕಲಾಚಾರ್ಯರಿಂದ ಪರಿಗ್ರಹಿಸಲ್ಪಟ್ಟ ಇದನ್ನು ವಿಶಿಷ್ಟಾದ್ವೈತ ಮತಾವಲಂಬಿಗಳೆಲ್ಲರೂ ಅತ್ಯವಶ್ಯಕವಾಗಿ ಆಚರಿಸಬೇಕು.

★★★★★

# ಅರ್ಥಪಂಚಕವು

ನಾವು ಹಿಂದೆ ಹೇಳಿದಂತೆ ಪ್ರಪತ್ತಿಯನ್ನು ಮಾಡುವದಕ್ಕೆ ಕೆಲವು ಸಾಧನಗಳು ಬೇಕಾಗಿರುತ್ತವೆ. ಸದಾ ಆಚಾರ್ಯರನ್ನು ಪ್ರಾರ್ಥನೆಮಾಡಿ ಈ ಅರ್ಥಪಂಚಕವನ್ನು ತಿಳಿದುಕೊಳ್ಳಬೇಕು. ಇಲ್ಲಿ ಸಂಸಾರಿಯಾದ ಚೇತನನು ತತ್ತ್ವಜ್ಞಾನವನ್ನು ಹೊಂದಿ ಉಜ್ಜೀವಿಸಬೇಕೆಂಬ ಅಭಿಪ್ರಾಯವಿದ್ದಲ್ಲಿ ಈ ಅರ್ಥಪಂಚಕಜ್ಞಾನವುಳ್ಳವನಾಗಿರಬೇಕು. ಕೆಲವರು ಮೂಲಮಂತ್ರದಲ್ಲಿಯೇ ಅರ್ಥಪಂಚಕವೂ ಅಡಕವಾಗಿರುವದೆಂದು ಹೇಳುತ್ತಾರೆ. ಕೆಲವರು ಶಾಸ್ತ್ರಸಂಬಂಧವನ್ನೂ ಸಹ ಸೇರಿಸಿಕೊಂಡು ಷಡರ್ಥಗಳೆಂದು ಹೇಳುತ್ತಾರೆ. ಆ ಅರ್ಥಪಂಚಕಗಳಾವುವೆಂದರೆ -

**ಪ್ರಾಪ್ಯಸ್ಯ ಬ್ರಹ್ಮಣೋ ರೂಪಂ ಪ್ರಾಪ್ತುಶ್ಚ ಪ್ರತ್ಯಗಾತ್ಮನಃ**
**ಪ್ರಾಪ್ತ್ಯುಪಾಯಃ ಫಲಂ ಚೈವ ತಥಾ ಪ್ರಾಪ್ತಿವಿರೋಧಿ ಚ ।**
**ವದಂತಿ ಸಕಲಾ ವೇದಾಸ್ಸೇತಿಹಾಸಪುರಾಣಕಾಃ ॥**

1. ಹೊಂದುವದಕ್ಕೆ ಯೋಗ್ಯವಾದ ಬ್ರಹ್ಮಸ್ವರೂಪವು, 2. ಬ್ರಹ್ಮವನ್ನು ಹೊಂದಬೇಕಾಗಿರುವ ಜೀವನ ಸ್ವರೂಪಜ್ಞಾನವು, 3. ಮೋಕ್ಷಪ್ರಾಪ್ತ್ಯುಪಾಯವು, 4. ಫಲವು, 5. ಮೋಕ್ಷಪ್ರಾಪ್ತಿಯ ಪ್ರತಿಬಂಧಕಗಳು – ಈ ಐದೂ ಅರ್ಥಪಂಚಗಳು ಎನಿಸುತ್ತವೆ.

ಇವುಗಳಲ್ಲಿ ಮೊದಲನೆಯದಾದ ಪರಬ್ರಹ್ಮನೆನಿಸಿದ ಶ್ರೀಮನ್ನಾರಾಯಣನ ಸ್ವರೂಪವನ್ನು ಮೂಲಮಂತ್ರ, ದ್ವಯ, ಚರಮಶ್ಲೋಕಗಳಲ್ಲಿಯೂ ಮತ್ತು ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ವಾಲ್ಮೀಕಿ ಮಹರ್ಷಿಗಳು ಹೇಳಿರುವಂತೆ ಅನಂತಗುಣಗಳಿಂದಲೂ ಶ್ರೀ ವೇದವ್ಯಾಸರು ಅನೇಕ ಪುರಾಣಗಳಲ್ಲಿ ಹೇಳಿರುವಂತೆಯೂ ಶ್ರೀಮದ್ರಾಮಾನುಜಾಚಾರ್ಯರೇ ಮೊದಲಾದ ಪೂರ್ವಾಚಾರ್ಯರು ಹೇಳಿರುವಂತೆ ಸಹಸ್ರಫಣಾಮಂಡಲ ಮಂಡಿತನಾದ ಆದಿಶೇಷನ ಮೇಲೆ ದಿವ್ಯಪರ್ಯಂಕಾಸೀನನಾಗಿ ಶ್ರೀಭೂನೀಳಾಸಮೇತನಾಗಿ ಅನಂತಕಲ್ಯಾಣಗುಣಗಳಿಂದ ಕೂಡಿದವನಾಗಿ ಅನಂತಗರುಡವಿಷ್ವಕ್ಸೇನಾದಿಪರಿದಾರಪರಿವೃತನಾಗಿ ಸರ್ವದೇಶಸರ್ವಕಾಲ ಸರ್ವಾವಸ್ಥೆಗಳಲ್ಲಿಯೂ ತನ್ನನ್ನು ಬಿಡದೆ ಅವಿನಾಭೂತಳಾದ ಲಕ್ಷ್ಮಿಯಿಂದೊಡಗೂಡಿದವನಾಗಿ ವಾತ್ಸಲ್ಯಸೌಶೀಲ್ಯಾದಿಗುಣಗಳುಳ್ಳವನಾಗಿಯೂ

**ಆನೃಶಂಸ್ಯಮನುಕ್ರೋಶಃ ಶ್ರುತಂ ಶೀಲಂ ದಮಶ್ಶಮಃ ।**
**ರಾಘವಂ ಶೋಭಯಂತ್ಯೇತೇ ಷಡ್ಗುಣಾಃ ಪುರುಷೋತ್ತಮಮ್ ॥**

ಎಂಬಂತೆಯೂ, (ಆನೃಶಂಸ್ಯ ಎಂದರೆ ಆಶ್ರಿತರನ್ನು ಕಾಪಾಡುವ ಸ್ವಭಾವವು, ಅನುಕ್ರೋಶಃ – ಕೃಪೆ, ಶ್ರುತಮ್ – ಶಾಸ್ತ್ರವಿಷಯಕವಾದ ಸರ್ವಜ್ಞಾನವು, ಶೀಲಮ್ – ಮಹತೋ ಮಂದೈಸ್ಸಹ ನೀರಂಧ್ರೇಣ ಸಂಶ್ಲೇಷಃ' ಅಂದರೆ ನಾನು ದೊಡ್ಡವನೆನಿಸಿದರೂ ಅಲ್ಪರೊಡನೆಯೂ ಕೂಡ ಸಹವಾಸ ಮಾಡುವದು, ದಮಃ – ಅಂತರಿಂದ್ರಿಯನಿಗ್ರಹವು, ಶಮಃ – ಬಾಹ್ಯೇಂದ್ರಿಯನಿಗ್ರಹವು) ಸರ್ವಜ್ಞನೂ ಸರ್ವಶಕ್ತಿಯುಳ್ಳವನೂ ಇತ್ಯಾದಿಯಾಗಿಯೂ ಇನ್ನೂ

**ವರ್ಷಾಯುತೈರ್ಯಸ್ಯ ಗುಣಾ ನ ಶಕ್ಯಾ ವಕ್ತುಂ ಸಮೇತೈರಪಿ ಸರ್ವದೇವೈಃ ।**
**ಚತುರ್ಮುಖಾಯುರ್ಯದಿ ಕೋಟಿವಕ್ತ್ರೋ ಭವೇನ್ನರಃ ಕ್ವಾಪಿ ವಿಶುದ್ಧಚೇತಾಃ ॥**

ದೇವತೆಗಳೆಲ್ಲರೂ ಸೇರಿ ಹತ್ತುಸಾವಿರ ವರ್ಷಗಳು ಹೊಗಳಿದರೂ ಆ ಶ್ರೀಮನ್ನಾರಾಯಣನ ಗುಣಗಳು ಮುಗಿಯಲಾರವು. ಒಬ್ಬ ಶುದ್ಧಚಿತ್ತನಾದ

ಮನುಷ್ಯನಿಗೆ ಒಂದುಕೋಟಿ ಬಾಯಿಗಳಿದ್ದು ಬ್ರಹ್ಮನಿಗಿರುವಷ್ಟಾಯುಸ್ಸಿದ್ದರೆ ಅವನು ಆ ಶ್ರೀಮನ್ನಾರಾಯಣನ ಗುಣಗಳನ್ನು ಹೊಗಳಬಹುದು. ಈ ರೀತಿಯಾಗಿ ಜಗದುತ್ಪತ್ತಿಸ್ಥಿತಿಸಂಹಾರಗಳಿಗೆ ಕಾರಣಕರ್ತನಾಗಿ ಸಕಲಶೇಷಿಯಾದ ಶ್ರೀಮನ್ನಾರಾಯಣನನ್ನು ತಿಳಿಯಬೇಕು. ಆದರೆ,

**ಇಷುಕ್ಷಯಾನ್ನಿವರ್ತಂತೇ ನಾಂತರಿಕ್ಷ ಕ್ಷಿತಿಕ್ಷಯಾತ್ ।**
**ಮತಿಕ್ಷ ಯಾನ್ನಿವರ್ತಂತೇ ನ ಗೋವಿಂದಗುಣಕ್ಷಯಾ ತ್ " ॥**

ಒಬ್ಬ ಬಿಲ್ಲುಗಾರನು ತನ್ನಲ್ಲಿರುವ ಬಾಣಗಳು ಮುಗಿದುಹೋದುರಿಂದ ಸುಮ್ಮನಾಗಬೇಕೇ ಹೊರತು ಭೂಮಿಯಾಗಲಿ ಅಂತರಿಕ್ಷವಾಗಲಿ ನಾಶವಾಯಿತೆಂಬ ಕಾರಣದಿಂದ ಸುಮ್ಮನಾಗಬೇಕಾಗಿಲ್ಲ; ಆದರೆ ನಮಗೆ ಬುದ್ಧಿಯು ಸಾಲದುದರಿಂದ ಗೋವಿಂದನ ಗುಣಗಳನ್ನು ವರ್ಣಿಸಲಾರದವರಾಗುವೆವೇ ಹೊರತು ಗೋವಿಂದನಲ್ಲಿ ಗುಣಾಭಾವದಿಂದಲ್ಲ. ಆದುದರಿಂದ ಆ ಶ್ರೀಮನ್ನಾರಾಯಣನ ಕಲ್ಯಾಣಗುಣಗಳನ್ನು ಭಕ್ತಿಶ್ರದ್ಧೆಗಳಿಂದ ಸರ್ವದೇಶ, ಸರ್ವಕಾಲ, ಸರ್ವಾವಸ್ಥೆಗಳಲ್ಲಿಯೂ ಧ್ಯಾನಮಾಡವುದೇ ಬ್ರಹ್ಮಸ್ವರೂಪಧ್ಯಾನವೆನಿಸುವದು.

## 1. ಬ್ರಹ್ಮಸ್ವರೂಪ

ಈ ಪರಬ್ರಹ್ಮವು ಭಕ್ತರ ಸೌಕರ್ಯಕ್ಕಾಗಿ ಪರ, ವ್ಯೂಹ, ವಿಭವ, ಅಂತರ್ಯಾಮಿ, ಅರ್ಚಾವತಾರ - ಎಂಬದಾಗಿ ಐದು ವಿಧವಾಗಿರುವದು.

ಪರತ್ವವೆಂದರೆ ಆದಿಮಧ್ಯಾಂತರಹಿತನಾಗಿ, ಅನಂತ ತೇಜೋವಿರಾಜ ಮಾನನಾಗಿ, ಶ್ರೀಭೂಮಿನೀಳಾಸಮೇತನಾಗಿ, ಅನಂತಗರುಡ ವಿಷ್ವಕ್ಸೇನಾದಿಗಳಿಂದ ಸೇವಿತನಾಗಿ, ಪಂಚೋಪನಿಷನ್ಮಯವಾದ ವಿಗ್ರಹವುಳ್ಳ ಪರವಾಸುದೇವನ ಸ್ವರೂಪವು.

ವ್ಯೂಹವೆಂದರೆ ಸೃಷ್ಟಿಸ್ಥಿತಿಲಯಗಳಿಗೆ ಕಾರಣಕರ್ತರಾಗಿರುವ ಸಂಕರ್ಷಣ, ಅನಿರುದ್ಧ, ಪ್ರದ್ಯುಮ್ನ, ಭಗವತ್ಸ್ವರೂಪವು.

**ವಿಭವವೆಂದರೆ** 'ಪರಿತ್ರಾಣಾಯ ಸಾಧೂನಾಂ' ಎಂಬ ಗೀತಾ ವಾಕ್ಯದಂತೆ ದುಷ್ಟದಮನ, ಶಿಷ್ಟರಕ್ಷಣ, ಧರ್ಮಸಂಸ್ಥಾಪನಾದಿಕಾರ್ಯಗಳಿಗಾಗಿ ಮಾಡಿದ ರಾಮ, ಕೃಷ್ಣ, ವತ್ಸ್ಯ ಕೂರ್ಮಾದ್ಯವತಾರಗಳು.

**ಅಂತರ್ಯಾಮಿತ್ವವೆಂದರೆ** ಉತ್ಪತ್ತಿಸ್ಥಿತಿಲಯಗಳಿಗೆ ಕರ್ತನಾಗಿ ಸಕಲಶರೀರಾತ್ಮಗಳಲ್ಲಿಯೂ ಸರ್ವಾತ್ಮರ ಹೃದಯಕಮಲಗಳಲ್ಲಿಯೂ ಇರುತ್ತಾ ಸರ್ವಾತ್ಮರೂ ತನಗೆ ಶರೀರಭೂತರಾಗಿರಲು ವಿಲಕ್ಷಣಶರೀರಯುಕ್ತನಾಗಿ ಸಕಲಪ್ರವೃತ್ತಿನಿವೃತ್ತಿಗಳಿಗೂ ಪ್ರೇರಕನಾಗಿರುವ ಪರಮಾತ್ಮಸ್ವರೂಪವು.

**ಅರ್ಚಾವತಾರವೆಂದರೆ** ಭಕ್ತಸಂರಕ್ಷಣಾರ್ಥವಾಗಿ ಅವತಾರಮಾಡಿ ರೂಪನಾಮಧೇಯಗಳೊಡನೆ ತಮ್ಮ ವಿಗ್ರಹಗಳನ್ನು ಪ್ರತಿಷ್ಠೆ ಮಾಡಿ ಆ ರೂಪವನ್ನೇ ಅನುಸಂಧಾನಮಾಡುತ್ತಾ ಆ ಪರಮಾತ್ಮನ ಹೆಸರುಗಳೇ ತಮಗೆ ಶ್ರೇಷ್ಠವಾದ ಹೆಸರುಗಳೆಂತಲೂ ಆ ಪರಮಾತ್ಮನ ಕಾಲವೇ ತಮಗೆ ಯೋಗ್ಯ ಕಾಲವಾಗಿಯೂ ಆ ಪರಮಾತ್ಮನ ವಾಸಸ್ಥಾನವೇ ತಮಗೆ ಶ್ರೇಷ್ಠವಾದ ವಾಸಸ್ಥಳ ವಾಗಿಯೂ ನಿಶ್ಚಯಿಸಿಕೊಂಡಿರುವ ಭಕ್ತರ ಅರ್ಚನೆಗೆ ಅಧೀನನಾಗಿ, ತಾನು ಸರ್ವಜ್ಞನಾದರೂ ಅಜ್ಞನಂತೆಯೂ ತಾನು ಸರ್ವಶಕ್ತಿಯುಳ್ಳವನಾಗಿದ್ದರೂ ಆಶಕ್ತನಂತೆಯೂ ಅವಾಪ್ತಸಮಸ್ತ ಕಾಮನಾಗಿದ್ದರೂ ಆ ಭಕ್ತರು ತನಗೆ ಯಾವದಾದರೂ ಪೂಜೆಯನ್ನು ಸಮರ್ಪಿಸುವರೋ ಎಂದು ಅಪೇಕ್ಷೆಯುಳ್ಳವನಾಗಿ ಆ ಭಕ್ತರ ಪೂಜೆಗಾಗಿ ಕಾಲಗಳನ್ನು ನಿರೀಕ್ಷಿಸುತ್ತಾ ತಾನು ಸಕಲ ಪ್ರಾಣಿಕೋಟಿಗೂ ಸ್ವಾಮಿಯಾಗಿದ್ದರೂ ತನ್ನಂತೆ ತನ್ನ ಭಕ್ತರಿಗೂ ಸ್ವಾಮಿತ್ವಾದಿಗಳನ್ನುಂಟುಮಾಡುವ ವನಾಗಿಯೂ ತಾನು ಸರ್ವಜ್ಞನಾಗಿ ಸರ್ವವನ್ನು ನೋಡುತ್ತಿದ್ದರೂ ಯಾವದನ್ನೂ ನೋಡದವನಂತೆ ಇರುತ್ತಾ ತನ್ನನ್ನು ಸೇವೆಮಾಡತಕ್ಕವರ ಕಣ್ಣುಗಳಿಗೆ ವಿಷಯನಾಗಿ ಶ್ರೀರಂಗ, ವೆಂಕಟಾದ್ರಿ, ಯಾದವಾದ್ರಿ, ಮೊದಲಾದ ದಿವ್ಯದೇಶಗಳಲ್ಲಿಯೂ ಪೂರ್ವಾಚಾರ್ಯರು ಮಂಗಳಾಶಾಸನಮಾಡಿದ ನೂರೆಂಟು ತಿರುಪತಿಗಳಲ್ಲಿಯೂ ಸಮಸ್ತ ಗ್ರಾಮಗಳಲ್ಲಿಯೂ ಮನೆಗಳಲ್ಲಿಯೂ ದೇಶಕಾಲವಧಿಯಿಲ್ಲದೆ ದಯ ಮಾಡಿರುವ ಭಗವನ್ಮೂರ್ತಿಯೇ ಆಗಿರುವದು.

★★★★★

# ಮೂಲಮಂತ್ರ

**- ಶ್ರೀಯುತ ನಾರಾಯಣ**

ತಾನು ಯಾರು? ತಾನು ಪಡೆಯಬೇಕಾಗಿರುವ ಉತ್ತಮಗತಿ ಯಾವುದು? ಆ ಗತಿಯನ್ನು ಹೊಂದುವ ಉಪಾಯವು ಯಾವುದು? ಈ ಮೂರೇ ಮನುಷ್ಯನಿಗೆ ಬೇಕಾಗಿರುವ ತಿಳಿವಳಿಕೆಗಳು. ಮನುಷ್ಯನು ಈ ಮೂರನ್ನಲ್ಲದೆ ಮತ್ತೆ ಯಾವದನ್ನೂ ತಿಳಿಯಬೇಕೆಂದು ಇಷ್ಟಪಡುವದಿಲ್ಲ. ಆದ್ದರಿಂದ ಈ ಮೂರನ್ನೂ ಅಡಕ ಮಾಡಿಕೊಂಡಿರುವ **ರಹಸ್ಯತ್ರಯ**ವನ್ನು ಕುರಿತು ಒಂದಿಷ್ಟು ಪ್ರಸ್ತಾಪಿಸಬೇಕೆಂದಿರುವೆನು.

ಮೂಲಮಂತ್ರ, ದ್ವಯಮಂತ್ರ, ಚರಮಮಂತ್ರ- ಈ ಮೂರಕ್ಕೂ **ರಹಸ್ಯತ್ರಯ**ವೆಂದು ಶ್ರೀವೈಷ್ಣವರ ಸಂಕೇತವಿದೆ. ರಹಸ್ಯತ್ರಯದಲ್ಲಿ ಸಕಲ ಶ್ರುತಿಸ್ಮೃತಿಪುರಾಣೇತಿಹಾಸಗಳ ಸಾರವೂ ಅಡಕವಾಗಿರುವವೆಂದು ಅವರು ನಂಬುತ್ತಾರೆ. ಶ್ರೀವೈಷ್ಣವರು ಮಾತ್ರವೇ ಅಲ್ಲದೆ ಎಲ್ಲರೂ ಅರಿತಿರಬೇಕಾದಂತಹ ಮಹಾವಿಷಯಗಳು ಇವುಗಳಲ್ಲಿ ಅಡಗಿರುತ್ತವೆ. ಆದ್ದರಿಂದ ಇವುಗಳ ವಿಚಾರದ ಲೇಖನವು ಅಧ್ಯಾತ್ಮಪ್ರಕಾಶದ ವಾಚಕರಿಗೆಲ್ಲ ಆದರಣೀಯವಾಗಿರುವುದೆಂದು ನಂಬಿರುತ್ತೇನೆ. ಮೊಟ್ಟಮೊದಲು ಮೂಲಮಂತ್ರದ ವಿಚಾರವನ್ನೇ ಈ ಲೇಖನದಲ್ಲಿ ತೆಗೆದುಕೊಂಡಿದೆ.

ಮಂತ್ರಗಳಲ್ಲೆಲ್ಲ ಶ್ರದ್ಧೆಯೇ ಮುಖ್ಯವಾದ್ದರಿಂದ ಇದರಲ್ಲಿ ಶ್ರದ್ಧೆಯಿಲ್ಲದ ನಾಸ್ತಿಕರಿಗೆ ಅಧಿಕಾರವಿಲ್ಲವು. ಮಂತ್ರದಲ್ಲಿಯಾಗಲಿ ಮಂತ್ರದ ದೇವತೆಯಲ್ಲಾಗಲಿ ಮಂತ್ರವನ್ನು ದಾನಮಾಡುವ ಗುರುವಿನಲ್ಲಾಗಲಿ ಶದ್ಧೆಯಿಲ್ಲದವನಿಗೆ ಮಂತ್ರವು ಎಂದೆಂದಿಗೂ ರಹಸ್ಯವಾಗಿಯೇ ಇರುವುದು. ಅಂಥವನ ಕಿವಿಗೆ ಮಂತ್ರದ ಅಕ್ಷರಗಳು ಬಿದ್ದರೂ ಅವು ಮಂತ್ರವಾಗುವುದಿಲ್ಲ; ಅವುಗಳ ಸಿದ್ದಿಯೂ ಅಂಥವನಿಗೆ ಅಲ್ಲವೇ ಅಲ್ಲ.

ಇಷ್ಟನ್ನು ಹೇಳಿ ಮೂಲಮಂತ್ರದ ಸ್ವರೂಪದ ಚರ್ಚೆಗೆ ಇನ್ನು ತೆರಳೋಣ. ಪರಮಾತ್ಮನ ಸ್ವರೂಪವನ್ನು ಹೇಳುವ ಮಂತ್ರಗಳಲ್ಲೆಲ್ಲ ಮೂರು ಮಂತ್ರಗಳು

ವ್ಯಾಪಕಮಂತ್ರಗಳು, ಎಂದರೆ ಪರಮಾತ್ಮನು ಸಕಲ ಜಗದ್ವ್ಯಾಪಕನೆಂದು ತಿಳಿಸುವ ಮಂತ್ರಗಳು. ನಾರಾಯಣಮಂತ್ರ, ವಾಸುದೇವಮಂತ್ರ, ವಿಷ್ಣುಮಂತ್ರ – ಎಂಬ ಹೆಸರಿನಿಂದ ಪ್ರಸಿದ್ಧವಾಗಿರುವ ಈ ಮೂರೂ "**ನಾರಾಯಣಾಯ ವಿದ್ಮಹೇ ವಾಸುದೇವಾಯ ಧೀಮಹಿ । ತನ್ನೋ ವಿಷ್ಣುಃ ಪ್ರಚೋದಯಾತ್ ॥**" ಎಂಬ ವಿಷ್ಣು ಗಾಯತ್ರಿಯಲ್ಲಿ ಸೂಚಿತವಾಗಿರುವವು. ಇವುಗಳಲ್ಲಿ ಮೊದಲನೆಯದಾದ ನಾರಾಯಣಾಷ್ಟಾಕ್ಷರಿಯೇ ಮೂಲಮಂತ್ರವು, ಇದು ಮಂತ್ರಗಳಲ್ಲೆಲ್ಲ ಪರಮಮಂತ್ರವೆಂದೂ ಗುಹ್ಯಗಳಲ್ಲೆಲ್ಲ ಗುಹ್ಯವಾದದ್ದೆಂದೂ ಪವಿತ್ರವಾದವುಗಳಲ್ಲೆಲ್ಲ ಪವಿತ್ರವಾದದ್ದೆಂದೂ ಶಾಸ್ತ್ರವಚನವಿರುವದು.

ನಾರಾಯಣಾಷ್ಟಾಕ್ಷರಿಯ ಒಟ್ಟರ್ಥವೇನು? ಇದಕ್ಕೆ ಬೇರೆಬೇರೆಯ ಸಿದ್ಧಾಂತದವರು ಬೇರೆಬೇರೆಯ ಅರ್ಥವನ್ನು ಹೇಳುತ್ತಾರೆ. ಶ್ರದ್ಧಾವಂತರಿಗೆ ಆಯಾ ಅರ್ಥದ ಅನುಸಂಧಾನವೇ ಫಲಕಾರಿಯಾಗುತ್ತದೆ. ವಿಶಿಷ್ಟಾದ್ವೈತ ಸಿದ್ಧಾಂತದಂತೆ ಮಂತ್ರದ ಭಾವಾರ್ಥವೇನಾಗುವದೆಂದರೆ, "ಸರ್ವಜಗದ್ರಕ್ಷಕನೂ ಸರ್ವಾನ್ತರ್ಯಾಮಿಯೂ ಶ್ರೀಯಃಪತಿಯೂ ಆಗಿರುವ ಭಗವನ್ನಾರಾಯಣನಿಗೇ ನಾನು ಶೇಷನಾಗಿರುವೆನು. ನನಗೆ ಯಾವ ಸ್ವಾತಂತ್ರ್ಯವೂ ಇರುವದಿಲ್ಲ; ಎಲ್ಲಕ್ಕೂ ಶೇಷಿಯಾಗಿರುವ ಶ್ರೀಮನ್ನಾರಾಯಣನಿಗಾಗಿಯೇ ಸರ್ವದೇಶದಲ್ಲಿಯೂ ಸರ್ವಕಾಲದಲ್ಲಿಯೂ ಸರ್ವಾವಸ್ಥೆಗಳಲ್ಲಿಯೂ ಸರ್ವವಿಧದಿಂದಲೂ ನಾನು ಕೈಂಕರ್ಯವನ್ನು ಮಾಡುವೆನು. ಈ ಅರ್ಥವು ಮಂತ್ರದ ಅಕ್ಷರಗಳಿಂದ ಹೇಗೆ ಹೊರಡುವದೆಂಬುದನ್ನು ಬಲ್ಲವರಿಂದ ಕೇಳಿತಿಳಿದುಕೊಳ್ಳಬೇಕು.

ಮಂತ್ರವನ್ನು ಭಕ್ತಿಯಿಂದ ಉಚ್ಚರಿಸುವಾತನು ಇದರ ಅರ್ಥವನ್ನು ಹೇಗೆ ಅನುಸಂಧಾನಮಾಡಬೇಕೆಂಬ ವಿಷಯದಲ್ಲಿ ಶ್ರೀಪರಾಶಭಟ್ಟಾರಕಸ್ವಾಮಿಗಳವರು ಹೀಗೆಂದು ಬರೆದಿರುವರು –

**ದೇಹಾಸಕ್ತಾತ್ಮಬುದ್ಧಿರ್ಯದಿ ಭವತಿ ಪದಂ ಸಾಧು ವಿದ್ಯಾತ್ ತೃತೀಯಮ್ ।**
**ಸ್ವಾತನ್ತ್ರ್ಯಾನ್ಧೋ ಯದಿ ಸ್ಯಾತ್ ಪ್ರಥಮಮಿತರಶೇಷತ್ವಧೀಶ್ಚೇದ್ದ್ವಿತೀಯಮ್ ॥**
**ಆತ್ಮತ್ರಾಣೋನ್ಮುಖಶ್ಚೇನ್ನಮ ಇತಿ ಚ ಪದಂ ಬಾನ್ಧವಾಭಾಸಲೋಲಃ ।**
**ಶಬ್ದಂ ನಾರಾಯಣಾಖ್ಯಂ ವಿಷಯಚಪಲಧೀಶ್ಚೇಚ್ಚತುರ್ಥೀಂ ಪ್ರಪನ್ನಃ॥**

ಇದರ ತಾತ್ಪರ್ಯವೇನೆಂದರೆ – ಭಗವಂತನಲ್ಲಿ ಪ್ರಸನ್ನನಾಗಿರುವಾತನಿಗೆ ತಾನೇ ದೇಹವೆಂಬ ಭ್ರಮೆಯು ಬಂದೊದಗಿದಾಗ ಪ್ರಣವದಲ್ಲಿರುವ ಮಕಾರಾರ್ಥವನ್ನು – ಎಂದರೆ ತಾನು ಜ್ಞಾನಾಶ್ರಯನೂ ಜ್ಞಾನಸ್ವರೂಪನೂ ಆಗಿರುವೆನೆಂಬುದನ್ನು – ಅನುಸಂಧಾನಮಾಡಬೇಕು; ತಾನು ಸ್ವತಂತ್ರನೆಂಬ ತಪ್ಪುತಿಳಿವು ಉಂಟಾದಾಗ ಪರಮಾತ್ಮನೇ ಸಕಲಜಗದ್ರಕ್ಷಕನು, ಸರ್ವಾನ್ತರ್ಯಾಮಿಯು ಎಂಬ ಅಕಾರಾರ್ಥವನ್ನು ಅನುಸಂಧಾನಮಾಡಬೇಕು; ತಾನು ಮತ್ತೊಬ್ಬರಿಗೆ ಶೇಷನೆಂಬ ಬುದ್ಧಿಯು ತಲೆ ಎತ್ತಿದಾಗ ಅನನ್ಯಶೇಷತ್ವವನ್ನು ತಿಳಿಸುವ ಉಕಾರಾರ್ಥವನ್ನು ಅನುಸಂಧಾನಮಾಡಬೇಕು. ತನ್ನನ್ನು ತಾನು ಕಾಪಾಡಿಕೊಳ್ಳುವದರಲ್ಲಿ ಪ್ರವೃತ್ತಿಯುಂಟಾದರೆ ಯಾವಾಗಲೂ ಭಗವಂತನ ಕಾರ್ಯವನ್ನೇ ಮಾಡಬೇಕೆಂಬರ್ಥದ 'ನಮಃ' ಎಂಬ ಪದವನ್ನು ನೆನಸಿಕೊಳ್ಳಬೇಕು; ಬಾಂಧವರಲ್ಲಿ ಆಸಕ್ತಿಯು ಮಿತಿ ಮೀರಿ ಬಲಿತುಕೊಂಡಾಗ ನಾರಾಯಣಶಬ್ದವನ್ನು ನೆನಸಿಕೊಳ್ಳಬೇಕು; ವಿಷಯಗಳಲ್ಲಿ ಬುದ್ಧಿಯು ಆಸಕ್ತವಾದಾಗ ಭಗವತ್ಕೈಂಕರ್ಯವೇ ಭೋಗ್ಯವು, ಮತ್ತು ಬೇಕಾದದ್ದು – ಎಂಬ ಚತುರ್ಥಿವಿಭಕ್ತಿಯರ್ಥವನ್ನು ನೆನಸಿಕೊಳ್ಳಬೇಕು. ಹೀಗೆ ಮಾಡುವದರಿಂದ ಸಕಲ ಅನಿಷ್ಟನಿವೃತ್ತಿಗಳೂ ಆಗುವವು, ಸಕಲ ಇಷ್ಟಾರ್ಥಗಳೂ ನೆರವೇರುವವು– ಎಂಬುದು ಮೇಲಿನ ಶ್ಲೋಕದ ಆಶಯವು.

★★★★★

# ದ್ವಯಮಂತ್ರ

–ಶ್ರೀಯುತ ನಾರಾಯಣ

ಶ್ರೀವೈಷ್ಣವರ ನಿಧಿಯಂತಿರುವ ರಹಸ್ಯತ್ರಯದಲ್ಲಿ ಒಂದಾದ ಮೂಲಮಂತ್ರದ ಪರಿಚಯವನ್ನು ಹಿಂದಿನ ಲೇಖನದಲ್ಲಿ ಸ್ವಲ್ಪಮಟ್ಟಿಗೆ ವಾಚಕರಿಗೆ ಮಾಡಿಕೊಟ್ಟಿರುತ್ತೇನೆ. ಈಗ ದ್ವಯಮಂತ್ರದ ವಿಷಯವಾಗಿ ಒಂದೆರಡು ವಿಚಾರಗಳನ್ನು ಬರೆಯುತ್ತೇನೆ.

ದ್ವಯಮಂತ್ರವು ಮೂಲಮಂತ್ರದ ವ್ಯಾಖ್ಯಾನರೂಪವಾಗಿರುವದು. ಮೂಲಮಂತ್ರದ ಎರಡನೆಯ ಪದವಾದ ''ನಮಃ'' ಎಂಬ ಮಾತಿನಲ್ಲಿ ಸಂಗ್ರಹವಾಗಿ ಹೇಳಿರುವ ಉಪಾಯವನ್ನೂ ಮೂರನೆಯ ಪದದಲ್ಲಿ ಸಂಗ್ರಹವಾಗಿ ಹೇಳಿರುವ ಪುರುಷಾರ್ಥವನ್ನೂ ಇಲ್ಲಿ ವಿಸ್ತರಿಸಿ ಹೇಳಿರುತ್ತದೆ. ಹೀಗೆ ಉಪಾಯ ಮತ್ತು ಪುರುಷಾರ್ಥ - ಎಂಬ ಎರಡನ್ನೂ ತಿಳಿಸಿಕೊಡುವದರಿಂದ ಇದಕ್ಕೆ ದ್ವಯಮಂತ್ರವೆಂಬ ಹೆಸರು ಬಂದಿರುತ್ತದೆ.

ದ್ವಯಮಂತ್ರವು ಶ್ರೌತವೊ, ತಾಂತ್ರಿಕವೊ?- ಎಂದು ವಿಚಾರಿಸಿದರೆ ಇದು ಶ್ರುತಿಮೂಲಕವಾದ ತಾಂತ್ರಿಕಮಂತ್ರವೆಂದು ಹೇಳಬೇಕಾಗುವದು.

**ಯೋ ಬ್ರಹ್ಮಾಣಂ ವಿಧಧಾತಿ ಪೂರ್ವಂ**
**ಯೋ ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ ।**
**ತಂ ಹ ದೇವಮಾತ್ಮಬುದ್ಧಿಪ್ರಕಾಶಂ**
**ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೇ ॥**

ಇದೇ ಮುಂತಾದ ಶ್ರುತಿಗಳಲ್ಲಿ ಈ ಮಂತ್ರದ ಅರ್ಥವು ಕಂಡುಬರುವದರಿಂದಲೂ ಶ್ರೀಪ್ರಶ್ನಸಂಹಿತೆಯೇ ಮುಂತಾದ ಕಡೆಯಲ್ಲಿ ಮಂತ್ರೋದ್ಧಾರವೇ ಮುಂತಾದದ್ದನ್ನು ಹೇಳಿರುವದರಿಂದಲೂ ಇದು ಶ್ರುತಿಮೂಲಕವಾದ ತಾಂತ್ರಿಕ ಮಂತ್ರವಾಗಿರುತ್ತದೆಯೆನ್ನಬೇಕಾಗಿದೆ.

ದ್ವಯಮಂತ್ರದಲ್ಲಿ ಎರಡು ಭಾಗಗಳಿರುವವು. ಇವುಗಳಲ್ಲಿ ಮೊದಲನೆಯ ಭಾಗವು ಉಪಾಯವನ್ನು ಎಂದರೆ ಸಾಧನವನ್ನು ಹೇಳುತ್ತದೆ; ಎರಡನೆಯದು ಉಪೇಯವನ್ನು ಎಂದರೆ ಪುರುಷಾರ್ಥವನ್ನು ಹೇಳುತ್ತದೆ. ಮೊದಲನೆಯ ಭಾಗವು ಹೇಗಿರುವದೆಂದರೆ''**ಶ್ರೀಮನ್ನಾರಾಯಣಚರಣೌಶರಣಂಪ್ರಪದ್ಯೇ**''ಎಂದು. ಇಲ್ಲಿ ಶ್ರೀಯೆಂದರೆ ಭಗವಂತನನ್ನು ಆಶ್ರಯಿಸಿರುವ ಲಕ್ಷ್ಮೀದೇವಿಯೆಂದರ್ಥ. ಶ್ರೀದೇವಿಯು ಸಮಸ್ತಚೇತನಾಚೇತನಗಳ ಪುರುಷಕಾರಭೂತಳೂ ಪ್ರಾಪ್ಯಳೂ ಆಗಿರುತ್ತಾಳೆ; ಆದರೆ ಇಲ್ಲಿ 'ಪುರುಷಕಾರಳಾದ' ಎಂಬುದಿಷ್ಟೇ ವಿವಕ್ಷಿತವಾಗಿದೆ. ಸಮಸ್ತಚೇತನರಿಗೂ ತಾಯಿಯಂತಿದ್ದು ಪರಮಾತ್ಮನ ಪತ್ನಿಯಾಗಿರುವದರಿಂದ ಆಕೆಯ ಮೂಲಕವಾಗಿ ಭಗವಂತನನ್ನು ಶರಣುಹೊಂದಿದವರನ್ನು ಆತನು

ಅವಶ್ಯವಾಗಿ ಕ್ಷಮಿಸುತ್ತಾನೆ. ನಾರಾಯಣಶಬ್ದಕ್ಕೆ ಆಶ್ರಯಿಸುವದಕ್ಕೆ ತಕ್ಕ ಗುಣಗಳುಳ್ಳಾತನು - ಎಂದರ್ಥ. ಪರಮಾತ್ಮನಲ್ಲಿ ವಾತ್ಸಲ್ಯ, ಸ್ವಾಮಿತ್ವ, ಸೌಲಭ್ಯ, ಸೌಶೀಲ್ಯ- ಎಂಬ ನಾಲ್ಕು ಗುಣಗಳಿರುವದರಿಂದ ಆತನನ್ನು ಆಶ್ರಯಿಸುವದು ಸುಕರವಾಗಿರುವದು. ಆತನಲ್ಲಿ ಜ್ಞಾನ, ಶಕ್ತಿ, ಪೂರ್ತಿ (ಆಪ್ತಕಾಮತ್ವ), ಪ್ರಾಪ್ತಿ (ಸರ್ವರಿಗೂ ಶೇಷಿಯಾಗಿಯೇ ಇರುವದು) - ಎಂಬ ಗುಣಗಳಿರುವದರಿಂದ ಆಶ್ರಯಿಸಿದವರ ಕಾರ್ಯವನ್ನು ಈಡೇರಿಸುವದಕ್ಕೆ ಆತನು ತಕ್ಕವನಾಗಿರುತ್ತಾನೆ. ಹೀಗೆ ಈ ಎರಡು ಬಗೆಯ ಗುಣಗಳಿರುವಾತನು ಎಂಬುದನ್ನು ನಾರಾಯಣ ಶಬ್ದವು ಸೂಚಿಸುತ್ತದೆ. ಇಂಥ ಶ್ರೀಮನ್ನಾರಾಯಣನ ಪದಕಮಲಗಳನ್ನು ನಾನು ಶರಣುಹೊಕ್ಕಿದ್ದೇನೆ - ಎಂಬುದು ಮಂತ್ರದ ಮೊದಲನೆಯ ಭಾಗದ ಅರ್ಥವು. ಶರಣವೆಂದರೆ ಇಲ್ಲಿ ಉಪಾಯವು - ಎಂದರ್ಥ. ಆತನೇ ಪ್ರಾಪ್ಯನು, ಆತನೇ ಪ್ರಾಪಕನು - ಎಂಬರ್ಥವು ಈ ಮಾತಿನಿಂದ ಸೂಚಿತವಾಗುವದು. ಮೇಲೆ ವಿವರಿಸಿದಂಥ ಪರಮಾತ್ಮನ ಪಾದಕಮಲಗಳನ್ನೇ ಪುರುಷಾರ್ಥಸಾಧನವೆಂದು ನಾನು ಮನಸ್ಸಿನಲ್ಲಿ ನೆರೆನಂಬಿರುತ್ತೇನೆ - ಎಂದು ಒಟ್ಟರ್ಥವಾಯಿತು.

ಇನ್ನು '**ಶ್ರೀಮತೇ ನಾರಾಯಣಾಯ ನಮಃ**' ಎಂಬ ಎರಡನೆಯ ಭಾಗದ ಅರ್ಥವಿವೇಚನೆಗೆ ತೆರಳೋಣ. ಇದು ಮೊದಲೇ ತಿಳಿಸಿರುವಂತೆ ಪ್ರಾಪ್ಯಸ್ವರೂಪವನ್ನು ತಿಳಿಸುವದು. ಉಪಾಯಪರವಾದ ಹಿಂದಿನಭಾಗದಲ್ಲಿ ಶ್ರೀಮತ್ ಎಂಬ ಶಬ್ದಕ್ಕೆ 'ಪುರುಷಕಾರಸ್ವರೂಪಗಳಾದ ಲಕ್ಷ್ಮಿಯಿಂದ ಯಾವಾಗಲೂ ಕೂಡಿದ' ಎಂದು ಅರ್ಥಮಾಡಿತ್ತಷ್ಟೆ; ಪ್ರಾಪ್ಯಪರವಾದ ಈ ಭಾಗದಲ್ಲಿ ಪ್ರಾಪ್ಯಳಾದ ಲಕ್ಷ್ಮಿಯಿಂದ ಕೂಡಿದ ಎಂದರ್ಥ. ಭಗವಂತನ ಪ್ರಾಪ್ಯತ್ವಾವಸ್ಥೆಯಲ್ಲಿ ತಾನೂ ಪ್ರಾಪ್ಯಳಾಗಿ ಶ್ರೀದೇವಿಯು ಕೈಂಕರ್ಯದ ವೃದ್ಧಿಯನ್ನುಂಟುಮಾಡುತ್ತಾಳೆ ಎಂಬುದನ್ನು ಈ ಶಬ್ದವು ಸೂಚಿಸುತ್ತದೆ. 'ನಾರಾಯಣಾಯ ನಮಃ' ಎಂಬುದಕ್ಕೆ ಸಮಸ್ತಕಲ್ಯಾಣಗುಣಾಕರನಾಗಿಯೂ ಸರ್ವಶೇಷಿಯಾಗಿಯೂ ದಿವ್ಯಮಂಗಲ ವಿಗ್ರಹಯುಕ್ತನಾಗಿಯೂ ಇರುವ ಭಗವಂತನ ಕೈಂಕರ್ಯವನ್ನು ಮಾಡುತ್ತೇನೆ- ಎಂದರ್ಥ. ಕೈಂಕರ್ಯವು ಸೇವಾರೂಪವಾಗಿರುವದರಿಂದ ಲೋಕದಲ್ಲಿ ದುಃಖರೂಪವಾಗಿದ್ದರೂ ತನಗೆ ಇಷ್ಟವಾದ ಕಡೆಯಲ್ಲಿ ಸುಖರೂಪವಾಗಿರುವದು ಪ್ರಸಿದ್ಧವಾಗಿರುತ್ತದೆ. ಆದ್ದರಿಂದ ಭಗವಂತನು ಎಲ್ಲರಿಗೂ ಬೇಕಾದವನಾಗಿ ರುವನಾದ್ದರಿಂದ ಆತನ ಕೈಂಕರ್ಯವು ಸುಖರೂಪವಾಗಿಯೇ ಇರುವದೆಂಬುದರಲ್ಲಿ ಆಶ್ಚರ್ಯವೇನೂ ಇಲ್ಲ.

ಅಂತೂ ದ್ವಯಮಂತ್ರದ ಒಟ್ಟು ತಾತ್ಪರ್ಯವೇನಾಯಿತೆಂದರೆ, ಪರಮಾತ್ಮನು ಆಶ್ರಯಣಕ್ಕೆ ತಕ್ಕ ಸಮಸ್ತಗಳಿಂದ ಕೂಡಿದವನು. ಆತನನ್ನು ಆಶ್ರಯಿಸುವದೆಂಬುದು ಸುಕರವಾಗಿರುವದು. ಆತನ ಆಶ್ರಯದಿಂದ ಸುಖೋಲ್ಲಾಸಕ್ಕೆ ಕಾರಣವಾಗಿರುವ ಆತನ ಕೈಂಕರ್ಯವು ದೊರಕುವದು. ಮನುಷ್ಯನಿಗೆ ಬೇಕಾದದ್ದು ಅದಷ್ಟು ಹೆಚ್ಚಿನ ಸುಖವು. ಇದು ಭಗವಂತನ ಕೈಂಕರ್ಯದಿಂದಲೇ ದೊರತು ಅದರಿಂದಲೇ ಬೆಳೆಯುತ್ತಿರುವದು. ಇದಕ್ಕೆ ಸಾಧನವೂ ಭಗವಂತನೇ. ಮನುಷ್ಯನು ತಪ್ಪು ತಿಳಿವಳಿಕೆಯಿಂದ ಸುಖಕ್ಕೆ ಸಾಧನವು ಯಾವದು, ಸುಖವು ಎಲ್ಲಿ ಹೇಗೆ ದೊರಕುತ್ತದೆ? - ಎಂಬುದನ್ನರಿಯದೆ ವಿಷಯಗಳನ್ನು ನಂಬಿ ಸಂಕಟಪಡುತ್ತಿರುವನು. ವಿಷಯಗಳಲ್ಲಿ ಸುಖವಿಲ್ಲ. ಅವುಗಳ ಸಂಗವನ್ನು ವಾಸನಾತ್ಯಾಗ ಪೂರ್ವವಾಗಿ ಕೈಬಿಟ್ಟು ಭಗವಂತನೇ ತನಗೆ ಗತಿಯೆಂದು ನಂಬಿ, ಆತನನ್ನೇ ತನ್ನ ಸಾಧನಕ್ಕೆ ನೆರವಾಗಿ ತೆಗೆದುಕೊಳ್ಳಬೇಕು. ಯಾವದೊಂದು ಸಂದೇಹವೂ ಇಲ್ಲದೆ ವಿಶ್ವಾಸದಿಂದ ಭಗವಂತನನ್ನು ಆಶ್ರಯಿಸಿದರೆ ಪರಮಪುರುಷಾರ್ಥವು ಅವಶ್ಯವಾಗಿ ದೊರೆಯುವದು. ಆದ್ದರಿಂದ ಇದೊಂದು ಸಾಧನವನ್ನೇ ಕೈಕೊಳ್ಳಬೇಕು, ಇದನ್ನುಪದೇಶಿಸುವ ಆಚಾರ್ಯರಲ್ಲಿ ಶ್ರದ್ಧೆಯನ್ನಿಡಬೇಕು. ಇದನ್ನನುಷ್ಠಾನಮಾಡುವಂಥ ಸಾತ್ತ್ವಿಕಸಹವಾಸದಿಂದ ಈ ಅನುಷ್ಠಾನದಲ್ಲಿ ಪ್ರೀತಿಯನ್ನು ಹೆಚ್ಚಿಸಿಕೊಳ್ಳಬೇಕು.

★★★★★

# ಅವಸ್ಥಾಪಂಚಕ

**- ಶ್ರೀಕಲ್ಕಿ ಜಿ.ಐ. । ಪ್ರೊ. ಎಂ.ಟಿ. ನರಸಿಂಹಯ್ಯಂಗಾರ್ಯರು**

## (ಸ್ಥೂಲಸೂಕ್ಷ್ಮಶರೀರಗುಳ್ಳ ವಿಚಿತ್ರವಾದ ದೇಹಯಂತ್ರ)

ಶ್ರೀಪರಮಾತ್ಮನು ಈ ಲೋಕದಲ್ಲಿರುವ ಪ್ರಾಣಿಗಳ ದೇಹಯಂತ್ರವನ್ನು ನಿರ್ಮಿಸಿರುವ ಪ್ರಕಾರವು ವಿಚಿತ್ರವಾಗಿರುವುದು. ಈ ದೇಹಯಂತ್ರವು ಮನುಷ್ಯಜಾತಿಯಲ್ಲಿ ಮಾತ್ರವೇ ಅಲ್ಲದೇ ಪಶುಪಕ್ಷಿಮೃಗಕೀಟಾದಿಗಳಲ್ಲೂ ವೃಕ್ಷಲತಾದಿಸಸ್ಯಜಾತಿಗಳಲ್ಲೂ ಅಚೇತನಗಳೆಂದು ಭಾವಿಸಲ್ಪಡುವ ಕೆಲವು ವಸ್ತುಗಳಲ್ಲೂ ಕೂಡ ಇರುವದರಿಂದ ಕರ್ಮಾನುಗುಣವಾದ ಶರೀರವು

ಜೀವಾತ್ಮನಿಗೆ ಭಗವತ್ಸಂಕಲ್ಪದಿಂದ ಇಂತಹ ನಾನಾಜಾತಿಗಳಲ್ಲೂ ಉತ್ಪನ್ನವಾಗುವುದೆಂದು ವ್ಯಕ್ತವಾಗುತ್ತದೆ. ಕರ್ಮದೋಷಗಳು ಮಾನಸ, ವಾಚಿಕ, ಕಾಯಿಕ – ಎಂದು ತ್ರಿವಿಧವಾಗಿವೆಯೆಂತಲೂ ಅವುಗಳ ಫಲಗಳೂ ತ್ರಿವಿಧವಾಗಿ ವೆಯೆಂತಲೂ ಈ ಕೆಳಗಿನ ಪ್ರಮಾಣಶ್ಲೋಕದಿಂದ ಸ್ಪಷ್ಟವಾಗಿದೆ:–

**ವಾಚಿಕೈಃ ಪಕ್ಷಿಮೃಗತಾಂ ಮಾನವೈರನ್ತ್ಯಜಾತಿತಾಮ್ ।**
**ಶರೀರಜೈಃ ಕರ್ಮದೋಷೈರ್ಯಾತಿ ಸ್ಥಾವರತಾಂ ನರಃ ॥**

ಈ ಶ್ಲೋಕದಿಂದ ಮಾನುಷಜಾತಿಯಲ್ಲಿರುವ ಜೀವಾತ್ಮನು ಕೂಡ ವಾಚಿಕದೋಷಗಳಿಂದ ಪಕ್ಷಿಮೃಗಾದಿಮೂಕಜಾತಿಯಲ್ಲಿ ಹುಟ್ಟುವನೆಂದೂ, ಮಾನಸದೋಷಗಳಿಂದ ಅಂತ್ಯಜಾತಿಯಲ್ಲಿ ಹುಟ್ಟುವನೆಂದೂ, ಕಾಯಿಕದೋಷಗಳಿಂದ (ಅಹಲ್ಯೆಯು ಶಿಲೆಯಾದಂತೆ) ಸ್ಥಾವರತ್ವವನ್ನು ಹೊಂದುವನೆಂದೂ ನಿರ್ಣೀತವಾಗಿದೆ.

ಈ ಪ್ರಕಾರ ಕರ್ಮಾನುಗುಣವಾಗಿ ಉತ್ಪನ್ನವಾಗುವ ದೇಹಯಂತ್ರದ ವೈಚಿತ್ರ್ಯವನ್ನು ಮಾನುಷಜಾತಿಗೆ ಸೇರಿದವರು ಕೂಡ ತಿಳಿದುಕೊಳ್ಳದೆ ಪುನಃ ಪುನಃ ಅಧೋಗತಿಯನ್ನೇ ಹೊಂದುತ್ತಿರುವುದು ಅತ್ಯಂತ ಶೋಚನೀಯವಾಗಿದೆ. ಅನೇಕ ಮಂದಿಪಾಶ್ಚಾತ್ತ್ಯಪೌರಸ್ತ್ಯಾದಿಶಾಸ್ತ್ರಜ್ಞರುಮಾನುಷದೇಹಯಂತ್ರವನ್ನುಪರಿಶೋಧಿಸಿ ಅನೇಕ ಶಾಸ್ತ್ರಗಳನ್ನು ಬರೆದಿರುತ್ತಾರೆ. ಆದಾಗ್ಯೂ ಪರಮೋತ್ಕೃಷ್ಟವಾದ ರಹಸ್ಯವನ್ನು ವೇದಾಂತಶಾಸ್ತ್ರರೀತ್ಯಾ ಪರಿಷ್ಕರಿಸಿ ಸುವ್ಯಕ್ತವಾಗಿ ಯಾರೂ ವಿಶದಪಡಿಸಿಲ್ಲ. ಆಯುರ್ವೇದ, ಮಂತ್ರ, ಯೋಗ, ಜ್ಯೋತಿಷ, ಸಾಮುದ್ರಿಕಾದಿಶಾಸ್ತ್ರಗಳಲ್ಲೂ ಕೂಡ ಜ್ಞಾನನಾಡೀಪ್ರಸರದ ಕ್ರಮವು ವೇದಾಂತಶಾಸ್ತ್ರಾನುಗುಣವಾಗಿ ವಿಶದವಾಗಿ ನಿರೂಪಿತವಾಗಿಲ್ಲ. ಆದುದರಿಂದ ಈಗ ನಾವು ಈ ರಹಸ್ಯವನ್ನು ಸಂಕ್ಷೇಪವಾಗಿ ಸೂಚಿಸುವೆವು ವಿಶ್ವಾಸಪೂರ್ವಕವಾಗಿ ಎಲ್ಲರೂ ತಿಳಿದು ಕೃತಾರ್ಥರಾಗಬಹುದು.

ಸಕಲ ಪ್ರಾಣಿಗಳಿಗೂ ಸ್ಥೂಲಶರೀರವೆಂತಲೂ, ಸೂಕ್ಷ್ಮಶರೀರವೆಂತಲೂ ಎರಡು ವಿಧವಾದ ಶರೀರಗಳಿವೆ. ಸ್ಥೂಲಶರೀರವು ಕೇವಲ ಬಾಹ್ಯಕವಚರೂಪವಾಗಿಯೇ ಇರುವುದರಿಂದ ಅಂತರವಾದ ಸೂಕ್ಷ್ಮಶರೀರವೇ ಮುಖ್ಯವಾದುದು. ಈ ಸೂಕ್ಷ್ಮಶರೀರದಲ್ಲೇ ಸಕಲೇಂದ್ರಿಯಗಳೂ ಸಕಲಾವಯವಗಳೂ ಸೇರಿಕೊಂಡಿವೆ. ಇವುಗಳ ಆರೋಗ್ಯಸ್ಥಿತಿಯಿಂದಲೇ ಪ್ರಾಣಿಗಳಿಗೆ ಆರೋಗ್ಯವೂ

ಇವುಗಳ ಅನಾರೋಗ್ಯದಿಂದಲೇ ರೋಗೋತ್ಪತ್ತಿಯೂ ಉಂಟಾಗುತ್ತಿದೆ. ಬಾಹ್ಯವಾದ ಸ್ಥೂಲಶರೀರದಲ್ಲಿ ಉಂಟಾಗುವ ರೋಗಗಳಿಗೆಲ್ಲಾ ಅಂತರವಾದ ಸೂಕ್ಷ್ಮಶರೀರದ ಅನಾರೋಗ್ಯವೇ ಕಾರಣವೆಂದು ಪ್ರಾಯೇಣ ನಿರ್ಣಯಿಸಬಹುದಾಗಿದೆ. ಹೇಗೆಂದರೆ:- ಈ ಬಾಹ್ಯಶರೀರಕ್ಕೂ ಅಂತರಶರೀರಕ್ಕೂ ಸಂಬಂಧವು ಜ್ಞಾನನಾಡೀದ್ವಾರಾ (nervous system) ನಿರ್ಮಿತವಾಗಿದೆ. ಸೂಕ್ಷ್ಮಶರೀರದ ಚಕ್ಷುಸ್ಸಿಗೂ ಸ್ಥೂಲಶರೀರದ ಚಕ್ಷುಸ್ಸಿಗೂ ಜ್ಞಾನನಾಡೀದ್ವಾರಾ ಸಂಬಂಧವು ಕಲ್ಪಿತವಾಗಿದೆ. ಇದೇ ಪ್ರಕಾರ ಶ್ರೋತ್ರಘ್ರಾಣಾದಿ ಸಕಲ ಜ್ಞಾನೇಂದ್ರಿಯಗಳಿಗೂ ವಾಕ್ಪಾಣಿಪಾದಾದಿ ಸಕಲ ಕರ್ಮೇಂದ್ರಿಯಗಳಿಗೂ ನಾಡೀದ್ವಾರಾ ಸಂಬಂಧವು ಈ ಎರಡು ಶರೀರಗಳಿಗೂ ಇದೆ. ಮನಇಂದ್ರಿಯವೂ ಕೂಡ ಸ್ಥೂಲಸೂಕ್ಷ್ಮಶರೀರಗಳಲ್ಲಿ ಶಿರಃಸ್ಥಾನದಲ್ಲೂ ಹೃದಯಸ್ಥಾನದಲ್ಲೂ ಪರಸ್ಪರ ಸಂಬದ್ಧವಾಗಿವೆ. ಈ ರೀತಿಯಲ್ಲಿ ಸೂಕ್ಷ್ಮಶರೀರಕ್ಕೂ ಸ್ಥೂಲಶರೀರಕ್ಕೂ ಸರ್ವೇಂದ್ರಿಯಸರ್ವಾವಯವಗಳಲ್ಲೂ ನಾಡೀದ್ವಾರಾಸಂಬಂಧವು ಇದ್ದೇ ಇದೆಯೆಂದು ತಿಳಿದ ಮೇಲೆ, ಸೂಕ್ಷ್ಮಶರೀರವು ಹೃದಯ ಸ್ಥಾನದಲ್ಲಿ (ಎದೆಯಲ್ಲಿ) ಇದೆಯೆಂದು ಪಂಚಕೋಶಾದಿಸ್ಥಾನದಿಂದ ನಿರ್ಣಯಿಸಿದರೆ ಈ ದೇಹಯಂತ್ರದ ಕ್ರಮವು ಸ್ವಲ್ಪಮಟ್ಟಿಗೆ ವಿದಿತವಾಗುವದು. 'ಸೆಂಟ್ರಲ್ ಸ್ಟೇಷನ್' (Central Station) - ಎಂಬ ಮಧ್ಯಸ್ಥಾನದಲ್ಲಿ ವಿದ್ಯುಚ್ಛಕ್ತಿಯು ಇರುತ್ತ, ತಂತೀದ್ವಾರಾ ಸುತ್ತಲೂ ಇರುವ ಬಾಹ್ಯಪ್ರದೇಶಗಳಿಗೆ ಪ್ರಸರಿಸುವಂತೆ ಸೂಕ್ಷ್ಮಶರೀರವು ಹೃದಯ ಸ್ಥಾನದಲ್ಲಿದ್ದುಕೊಂಡು ತನ್ನ ಶಕ್ತಿಯನ್ನೂ ಜ್ಞಾನನಾಡೀದ್ವಾರಾ ಬಾಹ್ಯವಾದ ಸ್ಥೂಲಶರೀರದ ಸರ್ವಾಯವಗಳಿಗೂ ಪ್ರಸರಿಸುವಂತೆ ಮಾಡುತ್ತಿದೆ. ಈ ಕ್ರಮವನ್ನು ತಿಳಿದುಕೊಂಡು **ಜಾಗ್ರತ್, ಸ್ವಪ್ನ, ಸುಷುಪ್ತಿ, ಮೂರ್ಛಾ, ಮರಣ** – ಎಂಬ 'ಅವಸ್ಥಾಪಂಚಕ'ವನ್ನು ಪರಿಶೀಲಿಸಬೇಕಾಗಿದೆ.

**1. ಜಾಗ್ರದವಸ್ಥೆ** – ಜಾಗ್ರದ್ದಶೆಯೆಂಬ (ಎಚ್ಚರವಾಗಿರುವ) ಅವಸ್ಥೆಯಲ್ಲಿ- ಸೂಕ್ಷ್ಮಶರೀರವೂ ಸ್ಥೂಲಶರೀರವೂ ಎರಡೂ ಕಾರ್ಯಗಳನ್ನು ಮಾಡುತ್ತಿವೆ. ತಂತೀರೂಪವಾದ ಜ್ಞಾನನಾಡಿಗಳ ಮೂಲಕ (ಜ್ಞಾನ)ಶಕ್ತಿಯು ಪ್ರಸರಿಸುತ್ತಲೇ ಇರುವುದರಿಂದ ಬಾಹ್ಯವ್ಯಾಪಾರವೂ ಅಂತರವ್ಯಾಪಾರವೂ ನಡೆಯುತ್ತಲೇ ಇವೆ.

**2. ಸ್ವಪ್ನಾವಸ್ಥೆ** - ಸ್ವಪ್ನ(ಕನಸು)ದಶೆಯಲ್ಲಿ ಬಾಹ್ಯವಾದ ಸ್ಥೂಲಶರೀರವು ಪ್ರಾಯೇಣ ನಿರ್ವ್ಯಾಪಾರವಾಗಿಯೇ ಇರುವುದರಿಂದ, ಅಂತರವಾದ ಸೂಕ್ಷ್ಮಶರೀರವು ಮಾತ್ರ ಸಕಲ ಕಾರ್ಯಗಳನ್ನೂ ಮಾಡುತ್ತಿದೆ. ಅಂತರವಾದ

ಸ್ವಾಪ್ನಪ್ರಪಂಚದಲ್ಲೇ ದರ್ಶನಶ್ರವಣಭಾಷಣಾದಿಸಕಲಕಾರ್ಯಗಳೂ ನಡೆಯುವ ದರಿಂದ, ಜ್ಞಾನೇಂದ್ರಿಯಪಂಚಕ, ಕರ್ಮೇಂದ್ರಿಯಪಂಚಕ, ಮತ್ತು ಮನಸ್ಸು- ಎಂಬ ಹನ್ನೊಂದು ಇಂದ್ರಿಯಗಳೂ ಸೂಕ್ಷ್ಮಶರೀರದಲ್ಲೇ ಇರುವುದರಿಂದ ಬಹಿಃಪ್ರಸರವಿಲ್ಲದಿದ್ದರೂ ಆ ಪ್ರಪಂಚದಲ್ಲೇ ಸ್ವಪ್ನದಲ್ಲಿ ವ್ಯಾಪಾರವಾಗಬಹುದು. ಈ ಸ್ವಪ್ನಾನುಭವವೂ ಕೂಡ ಜಾಗ್ರದ್ದಶೆಯ ಅನುಭವದಂತೆಯೇ ಕರ್ಮಾನು ಗುಣವಾಗಿರುವುದು.

3. **ಸುಷುಪ್ತ್ಯವಸ್ಥೆ** – ಸುಷುಪ್ತಿ (ಗಾಢನಿದ್ರೆ) ದಶೆಯಲ್ಲಿ ಸೂಕ್ಷ್ಮಶರೀರವೂ ನಿರ್ವ್ಯಾಪಾರವಾಗಿರುವುದು; ಸ್ಥೂಲಶರೀರವೂ ನಿರ್ವ್ಯಾಪಾರವಾಗಿರುವುದು. ಈ ಎರಡು ಶರೀರಗಳೂ ನಿರ್ವ್ಯಾಪಾರವಾಗಿರುವುದರಿಂದ ಯಾವ ಕಾರ್ಯವೂ ನಡೆಯುವುದಿಲ್ಲ. ಯಾವ ಇಂದ್ರಿಯವೂ ತನ್ನ ಕಾರ್ಯಮಾಡುವದಿಲ್ಲ. ಆದಾಗ್ಯೂ (ಪ್ರಾಣಧಾರಣರೂಪವಾದ) ಶ್ವಾಸೋಚ್ಛ್ವಾಸಗಳು ಮಾತ್ರ ನಡೆಯುತ್ತಲೇ ಇವೆ. ಜ್ಞಾನನಾಡೀಕಾರ್ಯವು ನಿಂತಿದೆ. ಆತ್ಮ, ಮನ, ಇಂದ್ರಿಯ, ಬಾಹ್ಯವಸ್ತು ಅಥವಾ ವಿಷಯ – ಈ ಕ್ರಮದಲ್ಲಿ ಜ್ಞಾನಪ್ರಸರವು ಜಾಗ್ರದ್ದಶೆಯಲ್ಲಿ ಉಂಟಾಗುತ್ತಿದೆ. ಸುಷುಪ್ತಿಯಲ್ಲಿ ಆತ್ಮ, ಮನಸ್ಸಂಯೋಗವು ಇಲ್ಲದೆ ಇರುವುದರಿಂದ ಗಾಢನಿದ್ರೆಯನ್ನು ಮಾಡಿ (ಸ್ವಪ್ನವಿಲ್ಲದೆ ನಿದ್ರೆಮಾಡಿ) ಎದ್ದವನಿಗೆ ಯಾವ ವಿಧವಾದ ಅನುಭವವೂ (ಆ ನಿದ್ರಾಕಾಲದಲ್ಲಿದಂತೆ) ತೋರುವದಿಲ್ಲ. (ಆ ಕಾಲದಲ್ಲಿ ಪರಮಾತ್ಮಸಾನ್ನಿಧ್ಯದಿಂದ ಪರಮಾತ್ಮನುಭವವು ಜೀವಾತ್ಮನಿಗೆ ಉಂಟಾಗುತ್ತದೆಯೆಂದು ಕೆಲವರು ಹೇಳುತ್ತಾರೆ. ಇದು ಸತ್ಯವಾಗಿದ್ದ ಪಕ್ಷದಲ್ಲಿ ಕುಂಭಕರ್ಣನ ನಿದ್ರೆಯಂತೆ ಅತ್ಯಂತ ತಾಮಸರೂಪವಾದ ದೀರ್ಘನಿದ್ರೆಯು ಕೂಡ ಮೋಕ್ಷಪ್ರಾಯವಾಗಬಹುದಷ್ಟೆ?)

4. **ಮೂರ್ಛಾವಸ್ಥೆ** - ಮೂರ್ಛಾವಸ್ಥೆಯೆಂಬುದು (ಜ್ಞಾನತಪ್ಪಿ ಹೋಗಿ ಬಿದ್ದಿರುವ ಅವಸ್ಥೆ) ಅರ್ಧಮರಣರೂಪವಾದುದು. ಈ ಅವಸ್ಥೆಯಲ್ಲಿ ಸೂಕ್ಷ್ಮಶರೀರದಿಂದ ಸ್ಥೂಲಶರೀರಕ್ಕೆ ಬರುತ್ತಿರುವ ಜ್ಞಾನನಾಡೀಪ್ರಸರವು ಕುಂಠಿತವಾಗಿಹೋಗಿದೆ. ವಿದ್ಯುಚ್ಛಕ್ತಿಯು (Central Station) ಮಧ್ಯಸ್ಥಾನದಿಂದ ಬಾಹ್ಯಸ್ಥಾನಗಳಿಗೆ ಬರುತ್ತಿರುವ ತಂತಿಗಳು ಛಿನ್ನವಾದರೆ, ಹೇಗೆ ಆಯಾ ಸ್ಥಾನಗಳಿಗೆ ಪ್ರಸರಿಸಲಾರದೋ, ಹಾಗೆಯೇ ಜ್ಞಾನನಾಡೀಚ್ಛೇದದಿಂದ ಜ್ಞಾನಶಕ್ತಿಯ ಪ್ರಸರವೇ ಇಲ್ಲದೆ ಅಂತರ್ಬಹಿಶ್ಚ ಜ್ಞಾನವೇ ಇಲ್ಲದೆ ಇದೆ. ಆದುದರಿಂದ ಹೊಸ

ತಂತಿಗಳನ್ನು ಪುನಃ ಸೇರಿಸಿ ಅಧಿಕಾರಿಗಳು ಬಂದು ರಿಪೇರಿಮಾಡಿದ ಮೇಲೆ ವಿದ್ಯುಚ್ಛಕ್ತಿಯು ಪ್ರಸರಿಸುವಂತೆ ಜ್ಞಾನನಾಡಿಗಳನ್ನು ಪುನಃ ಸೇರಿಸಿ ಅಧಿಕಾರಿಗಳು ರಿಪೇರ್‌ಮಾಡಿದ ಮೇಲೆ ಜ್ಞಾನಶಕ್ತಿಯು ಪ್ರಸರಿಸುವುದು. (ಸುಷುಪ್ತಿಕಾಲದಲ್ಲಿ) ನಾಡೀಚ್ಛೇದವಿಲ್ಲ; ಮೂರ್ಛಾಕಾಲದಲ್ಲಿ ನಾಡೀಚ್ಛೇದವಾದುದರಿಂದ ಜ್ಞಾನವಿಲ್ಲದೆ ಅರ್ಧಮರಣಪ್ರಾಯವಾಗುವುದು.

5. **ಮರಣಾವಸ್ಥೆ** – ಮರಣಾವಸ್ಥೆಯಲ್ಲಿ ಸೂಕ್ಷ್ಮಶರೀರದಿಂದ ಸ್ಥೂಲಶರೀರಕ್ಕೆ ಬರುವ ನಾಡಿಗಳೆಲ್ಲವೂ (ಆಯುಃಪೂರ್ತಿಯಾಗಿರುವುದರಿಂದ) ಆಯಾ ಅಧಿಕಾರಿಗಳಿಂದ ಸಂಪೂರ್ಣವಾಗಿ ಕತ್ತರಿಸಲ್ಪಡುವುವು. ಆದುದರಿಂದ ಸೂಕ್ಷ್ಮಶರೀರವೆಂಬ ರಥದಲ್ಲಿ ಕುಳಿತಿರುವ ಜೀವಾತ್ಮನು ಸ್ಥೂಲಶರೀರವನ್ನು ಬಿಟ್ಟು (ಪಕ್ಷಿಯು ತನ್ನ ಗೂಡನ್ನು ಬಿಟ್ಟು ಹೊರಗೆ ಹೊರಟು ಆಕಾಶಕ್ಕೆ ಹಾರಿ ಹೋಗುವಂತೆ) ಊರ್ಧ್ವಮುಖವಾಗಿ ಹೋಗಿ ತನ್ನ ಕರ್ಮಾನುಗುಣವಾಗಿ ಪುನಃ ದೇಹಾಂತರದಲ್ಲಿ ಪ್ರವೇಶಿಸುವುದೋ (ಧಮಾದಿಮಾರ್ಗ), ಅಥವಾ ಕರ್ಮಬಂಧವಿಮುಕ್ತನಾಗಿಮುಕ್ತಿಯನ್ನುಹೊಂದುವುದೋ (ಅರ್ಚಿರಾದಿಮಾರ್ಗ) – ಈ ಎರಡು ಮಾರ್ಗಗಳಲ್ಲಿ ಯಾವುದೋ ಒಂದು ಮಾರ್ಗವನ್ನು ಹೊಂದುವನು. (ಮೂರ್ಛಾವಸ್ಥೆಯಲ್ಲಿ ಸೂಕ್ಷ್ಮಶರೀರದೊಡನೆ ಜೀವಾತ್ಮನು ಸ್ಥೂಲಶರೀರದಲ್ಲೇ ಇದ್ದಾಗ್ಯೂ ತತ್ಕಾಲದಲ್ಲಿ ಜ್ಞಾನಶೂನ್ಯನಾಗಿರುವನು. ಮರಣಾವಸ್ಥೆಯಲ್ಲಿ ಸ್ಥೂಲಶರೀರವನ್ನು ಬಿಟ್ಟು ಹೊರಗೆ ಹೊರಟುಹೋಗುವುದರಿಂದ ಪುನಃ ಈ ಶರೀರಕ್ಕೆ ಬರುವ ಸಂಭವವೇ ಇಲ್ಲ. ಆದುದರಿಂದ ಮರಣವಾದ ಮೇಲೆ ಈ ಸ್ಥೂಲಶರೀರವನ್ನು ಖನನದಹನಾದಿಗಳಿಂದ ಸಂಸ್ಕರಿಸುತ್ತಾರೆ.) ಹೀಗೆ ಉತ್ಕ್ರಾಂತಿಯನ್ನು ಪಡೆದ ಜೀವಾತ್ಮನ ಗತಿಯು ಯಾವ ವಿಧವಾದುದೆಂದು ನಿರ್ಣಯಿಸೋಣವು ಪ್ರಾಯೇಣ ಬಹು ದುರವಗಾಹವಾಗಿರುವುದು. (ಶ್ರೀಭಗವದನುಗ್ರಹದಿಂದಲೆ ಮೋಕ್ಷವೆಂದು ಶಾಸ್ತ್ರಸಿದ್ಧಾಂತವು.)

ಈ ಅವಸ್ಥಾಪಂಚಕದ ಕ್ರಮವನ್ನೂ ಜೀವಾತ್ಮನ ಉತ್ಕ್ರಾಂತಿಪ್ರಕಾರವನ್ನೂ ತಿಳಿದು, ಶಾಸ್ತ್ರವಿಶ್ವಾಸಶಾಲಿಯಾಗಿರುವ ಚೇತನನು, ವೇದಾಂತಪ್ರತಿಪಾದ್ಯನಾಗಿ ರುವ ಸಾಕ್ಷಾತ್ ಪರಮಾತ್ಮನ್ನೇ ಶರಣವನ್ನಾಗಿ ಹೊಂದಿ, ಅವನ ಅನುಗ್ರಹದಿಂದ ತನ್ನ ಮೋಕ್ಷಕ್ಕೆ ಪ್ರತಿಬಂಧಕವಾಗಿರುವ ಐಹಿಕವಾದ ಪುಣ್ಯಪಾಪರೂಪಕರ್ಮಗಳಿಂದ ಮುಕ್ತನಾಗಿ ಉತ್ಕ್ರಾಂತಿಯನ್ನು ಪಡೆದು ಅರ್ಚಿರಾದಿ ಮಾರ್ಗದಿಂದ ಹೋಗಿ

ವಿರಜಾನದೀಸ್ನಾನಕಾಲದಲ್ಲಿ ತನ್ನ ಪ್ರಾಕೃತಸೂಕ್ಷ್ಮ ಶರೀರವನ್ನುಬಿಟ್ಟು ಅವ್ಯಾಕೃತವಾದ ದಿವ್ಯಮಂಗಳವಿಗ್ರಹವನ್ನು ಸ್ವೀಕರಿಸಿ ಅಮಾನವಕರಸ್ಪರ್ಶವನ್ನು ಪಡೆದು, ನಾನಾವಿಧದಿವ್ಯಾಲಂಕಾರಾಲಂಕೃತನಾಗಿ ಮಾರ್ಗದಲ್ಲಿ ಪರಮೋತ್ಕೃಷ್ಟವಾದ ಅತಿಥಿಸತ್ಕಾರವನ್ನು ಪಡೆದು ಶ್ರೀವೈಕುಂಠವೆಂಬ ಪರಮಪದದಲ್ಲಿ ನಿತ್ಯಮುಕ್ತರೆಂಬ ದಿವ್ಯಸೂರಿಗಳ ಗೋಷ್ಠಿಯನ್ನು ಪ್ರವೇಶಿಸಿ, ದಿವ್ಯಸಿಂಹಾಸನಾರೂಢನಾದ ಶ್ರೀಮನ್ನಾರಾಯಣನ ಪಾದಾರವಿಂದ ಸಾನ್ನಿಧ್ಯವನ್ನು ಹೊಂದಿ, ಅವನ ಅಂಕಾರೋಪಣವನ್ನು ಪಡೆದು, (ಅವನ ಕೌಸ್ತುಭಮಣಿಯಂತೆ ದಿವ್ಯಮಂಗಳವಿಗ್ರಹದಲ್ಲಿ ಏಕೀಭವಿಸಿ) ಪರಮಸಾಮ್ಯವನ್ನು ಪಡೆದು, ಸಾಯುಜ್ಯವೆಂಬ ಮೋಕ್ಷಸಾಮ್ರಾಜ್ಯವನ್ನು ಹೊಂದಿ ನಿತ್ಯನಿರತಿಶಯಾನಂದವನ್ನು ಅನುಭವಿಸುವನು. ಇದೇ ಸರ್ವವೇದಾಂತಸಾರಾರ್ಥವೆಂದು ಪ್ರಪನ್ನಾಗ್ರೇಸರರು ಅಂಗೀಕರಿಸಿರುತ್ತಾರೆ.

★★★★★

# ಗೀತಾಚಾರ್ಯಪ್ರಭಾವ

**ಶ್ರೀಕಲ್ಕಿ. ಜಿ.ಐ. I ಪ್ರೊ. ಎಂ.ಟಿ. ನರಸಿಂಹಯ್ಯಂಗಾರ್ಯರು**

ಗೀತಾಚಾರ್ಯನಾದ ಶ್ರೀಕೃಷ್ಣನ ಪ್ರಭಾವವು ಅನ್ಯಾದೃಶವಾದುದು ಶ್ರೀಭಗವಂತನ ಅವತಾರಗಳಲ್ಲೆಲ್ಲ ಅತ್ಯಂತ ಪ್ರಸಿದ್ಧವಾಗಿ ಆಚಾರ್ಯತ್ವ ಪ್ರಕಾಶವುಳ್ಳ ಅವತಾರವು ಶ್ರೀಕೃಷ್ಣಾವತಾರವೇ. ಶ್ರೀಭಗವಂತನು ತನ್ನ ಸಿದ್ಧಾಂತವನ್ನು ಚೆನ್ನಾಗಿ ವಿವರಿಸಿ ವೇದಾಂತಾರ್ಥಗಳನ್ನೆಲ್ಲ ಉಪದೇಶಿಸಿರುವುದು ಗೀತಾಶಾಸ್ತ್ರದಲ್ಲಿಯೇ. ಆದುದರಿಂದ ಈ ಗೀತಾಶಾಸ್ತ್ರಕ್ಕೆ ಇಷ್ಟು ಪ್ರಾಧಾನ್ಯವು ಉಂಟಾಗಿದೆ. ಇದನ್ನು ಅನೇಕ ಮತಸ್ಥರು ತಮ್ಮತಮ್ಮ ಭಾಷೆಗಳಿಗೆ ಪರಿವರ್ತನೆಮಾಡಿ ವ್ಯಾಖ್ಯಾನಗಳನ್ನೂ ಬರೆದು ಪ್ರಕಟಿಸಿರುತ್ತಾರೆ. ಆದಾಗ್ಯೂ ಶ್ರೀಕೃಷ್ಣಾವತಾರದ ಮಹಿಮೆಯನ್ನು ತಿಳಿದವರು ವಿರಳರು. ಶ್ರೀರಾಮಾವತಾರಕ್ಕಿಂತ ಶ್ರೀಕೃಷ್ಣಾವತಾರಕ್ಕೆ ಪ್ರಾಶಸ್ತ್ಯವು ಮುಖ್ಯವಾಗಿ ಆಚಾರ್ಯತ್ವಮಹಿಮೆಯಿಂದಲೆ ಎಂದು ಹೇಳಬಹುದಾಗಿದೆ.

ಅರ್ಜುನನಿಗೆ ಯುದ್ಧರಂಗದಲ್ಲಿ ಉಪದೇಶವೆಂಬ ವ್ಯಾಜದಿಂದ ಶ್ರೀಕೃಷ್ಣನು ಸಕಲಲೋಕೋಜ್ಜೀವನಕರವಾದ ವೇದಾಂತಾರ್ಥಗಳನ್ನು ಏಳು ನೂರು ಶ್ಲೋಕಗಳುಳ್ಳ ಹದಿನೆಂಟು ಅಧ್ಯಾಯಗಳಲ್ಲಿ ವಿವರಿಸಿರುವುದರಿಂದ ಇದು ಮೋಕ್ಷಶಾಸ್ತ್ರವೆಂದು ಪರಿಗಣಿತವಾಗಿ ದ್ವೈತಾದ್ವೈತವಿಶಿಷ್ಟಾದ್ವೈತಗಳೆಂಬ ಮತತ್ರಯದ ಭಾಷ್ಯಕಾರರಿಂದಲೂ ವ್ಯಾಖ್ಯಾನಮಾಡಲ್ಪಟ್ಟಿದೆ. ಇಂತಹ ಗೀತಾಶಾಸ್ತ್ರದ ಮುಖ್ಯತಾತ್ಪರ್ಯವೇನೆಂದು ಇಲ್ಲಿ ಸಂಗ್ರಹವಾಗಿ ಸೂಚಿಸಲು ಉದ್ದೇಶಿಸಿರುತ್ತೇನೆ.

ಅನೇಕರು ಅನೇಕಪ್ರಕಾರಗಳಲ್ಲಿ ವ್ಯಾಖ್ಯಾನಮಾಡಿದ್ದರೂ ಈ ಶಾಸ್ತ್ರದ ಪರಮೋತ್ಕೃಷ್ಟವಾದ ರಹಸ್ಯವು ಈಗಲೂ ಗುಪ್ತವಾಗಿಯೇ ಇದೆ. ಕೆಲವರು ಈ ಶಾಸ್ತ್ರದಲ್ಲಿ ಆಮೂಲಾಗ್ರವಾಗಿ ಒಂದೇ ಮತದ ಪ್ರಕ್ರಿಯೆಯು ವಿವರಿಸಲ್ಪಟ್ಟಿದೆಯೆಂದು ಭ್ರಾಂತರಾಗಿ ಆಯಾ ವಚನಗಳಿಗೆ ಇರುವ ಪರಸ್ಪರವಿರೋಧಗಳನ್ನು ಪರಿಹರಿಸಲಾರದೆ ಬಹು ಪ್ರಯಾಸದಿಂದ ಕ್ಲಿಷ್ಟಾರ್ಥಕಲ್ಪನೆಗಳನ್ನು ಮಾಡಿರುತ್ತಾರೆ. ಯುದ್ಧರಂಗದಲ್ಲಿ ಧರ್ಮಾಧರ್ಮಹಿತವಚನವನ್ನು ಮಾಡಲಾರದೆ ಭ್ರಾಂತನಾಗಿ, ಶಸ್ತ್ರಗಳನ್ನು ಕೆಳಗೆ ಹಾಕಿ ''ನಾನು ಯುದ್ಧಮಾಡುವದೇ ಇಲ್ಲ'' – ಎಂದು ಹಟವನ್ನು ಹಿಡಿದ ಅರ್ಜುನನನ್ನು ಕುರಿತು ಉಪದೇಶರೂಪವಾಗಿ ಇರುವ ಈ ಶಾಸ್ತ್ರದ ಉದ್ದೇಶವನ್ನು ಶ್ರೀಯಾಮುನಾಚಾರ್ಯರು (ಆಳವನ್ದಾರ್) ಗೀತಾರ್ಥಸಂಗ್ರಹದಲ್ಲಿ ಈ ಪ್ರಕಾರ ಸೂಚಿಸಿರುತ್ತಾರೆ :

**ಅಸ್ಥಾನಸ್ನೇಹಕಾರುಣ್ಯ ಧರ್ಮಾಧರ್ಮಧಿಯಾಕುಲಮ್।**
**ಪಾರ್ಥಂ ಪ್ರಪನ್ನಮುದ್ದಿಶ್ಯ ಶಾಸ್ತ್ರಾವತರಣಂ ಕೃತಮ್ ॥**

ಕೌರವರೆಂಬ ಅಪಾತ್ರರಲ್ಲಿ ಸ್ನೇಹವನ್ನೂ ಕಾರುಣ್ಯವನ್ನೂ ತೋರಿಸುತ್ತಾ, ತನ್ನ ಸ್ವಧರ್ಮದಲ್ಲಿ (ಯುದ್ಧಮಾಡೋಣವೆಂಬ ಕ್ಷತ್ರಿಯಧರ್ಮದಲ್ಲಿ) ಅಧರ್ಮಬುದ್ಧಿಯನ್ನೂ ಪರಧರ್ಮದಲ್ಲಿ (ವೈರಾಗ್ಯವೆಂಬ ಯುದ್ಧವೈಮುಖ್ಯದಲ್ಲಿ) ಧರ್ಮಬುದ್ಧಿಯನ್ನೂ ಮಾಡಿರುವ ಭ್ರಾಂತನಾದ ಅರ್ಜುನನು ಪ್ರಪನ್ನನಾಗಿ – ''**ಶಿಷ್ಯಸ್ತೇಽಹಂ ಶಾಧಿ ಮಾಂ ತ್ವಾಂ ಪ್ರಪನ್ನಮ್**'' (ನಾನು ನಿನ್ನ ಶಿಷ್ಯನಾಗಿರುವೆನು, ಶರಣುಬಂದಿರುವ ನನಗೆ ಏನು ಮಾಡಬೇಕೆಂಬುದನ್ನು ತಿಳಿಯಹೇಳು) ಎಂದು ಪ್ರಾರ್ಥಿಸಿದುದರಿಂದ ಶರಣಾಗತನಾದ ಅರ್ಜುನನಿಗೆ

ಮಾಡಿದ ಈ ಉಪದೇಶವು ಸಕಲರಿಗೂ ಸ್ವಧರ್ಮ ಬೋಧಕವಾದ ಮೋಕ್ಷ ಶಾಸ್ತ್ರವಾಗಿ ಪ್ರಕಾಶಿಸುತ್ತಿದೆ.

ಈ ಹದಿನೆಂಟು ಅಧ್ಯಾಯಗಳಲ್ಲಿ ನಾನಾಮತಪ್ರಕ್ರಿಯೆಗಳು ವಿವರಿಸಲ್ಪಟ್ಟಿರುವುದರಿಂದ- ಸಾಂಖ್ಯ, ಯೋಗ, ಕರ್ಮ, ಜ್ಞಾನ, ಭಕ್ತಿ, ಪ್ರಪತ್ತಿ- ಮುಂತಾದ ಮೋಕ್ಷಮಾರ್ಗೋಪದೇಶಗಳು ಇದ್ದಾಗ್ಯೂ, ಭ್ರಾಂತನಾದ ಅರ್ಜುನನಿಗೆ ತತ್ಕಾಲದಲ್ಲಿ ವೈರಾಗ್ಯವು ಕೂಡದೆಂತಲೂ, ಅವನಿಗೆ ಯುದ್ಧದಲ್ಲಿ ಆಸಕ್ತಿಯು ಉಂಟಾಗಿ ಸ್ವಧರ್ಮನಿಷ್ಠೆಯಿಂದ ಕಾರ್ಯಸಿದ್ಧಿಯಾಗಬೇಕೆಂತಲೂ, ಕೌರವನಾಶಬದ್ಧದೀಕ್ಷನಾದ ಶ್ರೀಕೃಷ್ಣನು ''**ಮಯ್ಯೈವೈತೇ ನಿಹತಾಃ ಪೂರ್ವಮೇವ ನಿಮಿತ್ತಮಾತ್ರಂ ಭವ ಸವ್ಯಸಾಚಿನ್**'' (ಇವರೆಲ್ಲರೂ ನನ್ನಿಂದ ಮುಂಚೆಯೇ ಕೊಲ್ಲಲ್ಪಟ್ಟಿರುವರು, ನೀನು ನೆಪಕ್ಕೆ ಕಾದುವನಾಗು) ಎಂದು ಉಪದೇಶಿಸಿದನು. ಮೊದಲು ಭ್ರಾಂತನಾಗಿ ''ತತ್ಕಿಂ ಕರ್ಮಣಿ ಘೋರೇ ಮಾಂ ನಿಯೋಜಯಸಿ ಕೇಶವ' (ಎಲೈ ಕೇಶವನೆ, ಹಾಗಾದಮೇಲೆ ನನ್ನನ್ನೇಕೆ ಕಾಳಗಕ್ಕೆ ಹೆಚ್ಚುತ್ತೀಯೆ?) ಎಂದೂ ''ನ ಯೋತ್ಸ್ಯೇ'' (ಕಾದಲೊಲ್ಲೆನು) ಎಂದು ಹಠವಾದದಿಂದ ಹೇಳಿದ ಅರ್ಜುನನು ಕೊನೆಯಲ್ಲಿ ''ಕರಿಷ್ಯೇ ವಚನಂತವ'' (ನಿನ್ನ ಮಾತಿನಂತೆ ಮಾಡುತ್ತೇನೆ) ಎಂದು ಯುದ್ಧಮಾಡಲು ಸನ್ನದ್ಧನಾದುದರಿಂದ ಗೀತಾಶಾಸ್ತ್ರದ ಪರಮಾರ್ಥವೇನೆಂದರೆ: **ಸಕಲಚೇತನರೂ ಶ್ರೀಭಗವಂತನ ಸಂಕಲ್ಪದಂತೆಯೇ ನಡೆಯಬೇಕೆಂತಲೂ, ಅದಕ್ಕೆ ಪ್ರತಿಕೂಲವಾಗಿ ನಡೆಯಕೂಡದೆಂತಲೂ ಸಿದ್ಧಾಂತವು ಈ ಶಾಸ್ತ್ರದಲ್ಲಿ ಮಾಡಲ್ಪಟ್ಟಿದೆ.** (Freewill must be always subject to the Divine Will or Conscience.) ಗೀತೆಯ ಹದಿನೆಂಟನೆಯ ಅಧ್ಯಾಯದಲ್ಲಿರುವ ''ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ'' (ಎಲ್ಲಾ ಧರ್ಮಗಳನ್ನೂ ಕೈಬಿಟ್ಟು ನನ್ನನ್ನೇ ಶರಣುಹೊಂದು) ಎಂಬ ಚರಮಶ್ಲೋಕದಲ್ಲಿರುವ ಪ್ರಪನ್ನಕೃತ್ಯವಾದ ಶರಣಾಗತಿಯು (Self - surrender to God) ಸರ್ವಗುಹ್ಯತಮವಾದ ರಹಸ್ಯವೆಂದು ಉಪದೇಶಿಸಲ್ಪಟ್ಟಿದೆ. ಶ್ರೀಭಗವಂತನೇ ಉಪಾಯವಾಗಿಯೂ ಉಪೇಯವಾಗಿಯೂ ಮೋಕ್ಷಪ್ರದನಾಗಿ ದಾನೆಂದು ಸಿದ್ಧಾಂತಮಾಡಲ್ಪಟ್ಟಿದೆ. ಈ ಸಿದ್ಧಾಂತವೇ ಈಗ ಶ್ರೀಭಗವನ್ಮತವೆಂಬ (ಶ್ರೀಕಲ್ಕಿಸಿಂಹರೂಪಿಯಾದ) ಗೀತಾಚಾರ್ಯನ ಸಿದ್ಧಾಂತವೆಂದು ನನ್ನಿಂದ ಪ್ರಕಾಶಿತವಾಗಿದೆ.

★★★★★

# ಮತತ್ರಯಸಾಮರಸ್ಯ

– ಶ್ರೀಕಲ್ಕಿ ಜಿ.ಐ. ಪ್ರೊ. ಎಂ.ಟಿ. ನರಸಿಂಹಯ್ಯಂಗಾರ್ಯರು

ಈ ಭರತಖಂಡದಲ್ಲಿ ಅದ್ವೈತ, ದ್ವೈತ, ವಿಶಿಷ್ಟಾದ್ವೈತ – ಎಂಬ ಮತತ್ರಯವು ಸರ್ವಲೋಕವಿದಿತವಾಗಿದೆ. ಈ ಮೂರು ಮತಗಳ ಶಾಖೋಪಶಾಖೆಗಳಾಗಿ ಇನ್ನೂ ಅನೇಕ ಮತಗಳು ಹುಟ್ಟಿವೆ. ಪಾಶ್ಚಾತ್ಯದೇಶಗಳಲ್ಲಿ ಪ್ರಚಾರದಲ್ಲಿರುವ ಮತಗಳನ್ನೂ ಯಾವದಾದರೊಂದು ರೀತಿಯಿಂದ ಈ ಮೂರು ಮತಗಳಲ್ಲೇ ಸೇರಿರುವಂತೆ ಭಾವಿಸಬಹುದು. ಈ ಮೂರು ಮತಗಳಿಗೂ ಸಾಮರಸ್ಯವನ್ನು ನಿರೂಪಿಸಿದರೆ ಸರ್ವಮತಸಾಮರಸ್ಯವನ್ನು ನಿರೂಪಿಸಿದಂತೆ ಆಗುವುದು. ಆದುದರಿಂದ ಇವುಗಳ ಸರ್ವಮತಸಾಮರಸ್ಯವು ಹೇಗೆ ಸಾಧ್ಯವೆಂಬುದನ್ನು ಇಲ್ಲಿ ಸಂಗ್ರಹವಾಗಿ ಸೂಚಿಸುವೆನು.

**ಅದ್ವೈತಮತ** – ಅದ್ವೈತವೆಂದರೆ ಅಭೇದ (ದ್ವಿತಾ – ಭೇದಃ; ದ್ವಿತೈವ ದ್ವೈತಮ್, ನ ದ್ವೈತಂ – ಅದ್ವೈತಮ್) ಜೀವಾತ್ಮನಿಗೂ ಪರಮಾತ್ಮನಿಗೂ ಅಭೇದವೇ ಅದ್ವೈತ. ಈ ಪ್ರಪಂಚವೆಲ್ಲಾ ಚೇತನಾಚೇತನಾತ್ಮಕವಾಗಿ ತೋರುತ್ತಿದೆ. ಚೇತನವರ್ಗವೇ ಜೀವಾತ್ಮವರ್ಗ. ಅಚೇತನವರ್ಗವು ಪ್ರಕೃತಿಯ ಪರಿಣಾಮವು. ಈ ಚೇತನಾಚೇತನಾತ್ಮಕವಾದ ಪ್ರಪಂಚವು ಸ್ವಪ್ನಪ್ರಾಯವಾಗಿ ಮಿಥ್ಯಾರೂಪವಾದುದು. ಆದುದರಿಂದಲೇ ಅದ್ವೈತಿಗಳು ''ಜಗನ್ಮಿಥ್ಯಾ'' ಎಂದು ಹೇಳುತ್ತಿದಾರೆ. ಮಾಯೆಯೆಂಬ ಅನಾದಿಯಾದ ಅವಿದ್ಯೆಯಿಂದ ಪರಮಾತ್ಮನಿಗೆ[1] ತಾನು ಜೀವಾತ್ಮನೆಂಬ ಭ್ರಾಂತಿಯು ಉಂಟಾಗುತ್ತದೆ. ಅನೇಕ ಜೀವರಾಶಿಗಳು ಇರುವಂತೆಯೂ ಅನೇಕ ಪ್ರಾಕೃತವಾದ ಅಚೇತನಪದಾರ್ಥಗಳು ಇರುವಂತೆಯೂ ಈ ಮಾಯೆಯಿಂದಲೇ ಕಾಣುತ್ತಿದೆ. ಈ ಮಾಯೆಯೆಂಬ ಉಪಾಧಿಯು ನಷ್ಟವಾದರೆ ಪ್ರಪಂಚಮಿಥ್ಯಾತ್ವವು ವ್ಯಕ್ತವಾಗಿ ಪರಮಾತ್ಮತತ್ತ್ವವೊಂದೇ ಸತ್ಯವೆಂಬ ಪರಮಾರ್ಥವು ಪ್ರಕಾಶಿಸುವುದು. ಇದೇ

---

1. ಪರಮಾತ್ಮನಿಗೆ ಭ್ರಾಂತಿಯುಂಟಾಗುತ್ತದೆಯೆಂದು ಹೇಳುವದು ಅದ್ವೈತಕ್ಕೆ ಒಪ್ಪಿಲ್ಲ, ಭ್ರಾಂತಿಯು ಯಾರಿಗೆಂಬ ಪ್ರಶ್ನೆಯನ್ನು ದ್ವೈತಿಗಳು ಅದ್ವೈತಿಗಳನ್ನು ಆಗಾಗ ಕೇಳುತ್ತಲೇ ಇರುವರು.

ಅದ್ವೈತ ಸಿದ್ಧಾಂತ.

**ದ್ವೈತಮತ** - ದ್ವೈತವೆಂದರೆ ಭೇದ. ಅಚೇತನವರ್ಗ, ಚೇತನವರ್ಗ, ಈಶ್ವರ - ಎಂಬೀ ಮೂರು ತತ್ತ್ವಗಳಿಗೂ ಪರಸ್ಪರಭೇದವೇ ಪರಮಾರ್ಥವು. ಸಕಲ ವಿಧವಾದ ಅಚೇತನವಸ್ತುಗಳಿಗೂ ಪರಸ್ಪರಭೇದವೂ ಸಕಲ ಚೇತನರಿಗೂ ಪರಸ್ಪರಭೇದವೂ ಇದ್ದೇ ಇರುವುದರಿಂದ ದ್ವೈತವೆಂಬ ಭೇದವೇ ಸಿದ್ಧಾಂತವು. ಇದು ದ್ವೈತಿಗಳ ಅಭಿಪ್ರಾಯ.

**ವಿಶಿಷ್ಟಾದ್ವೈತಮತ** - ವಿಶಿಷ್ಟವಾದ ಅದ್ವೈತವೇ ವಿಶಿಷ್ಟಾದ್ವೈತ. ಚೇತನಾಚೇತನವಿಶಿಷ್ಟವಾದ ಈಶ್ವರತತ್ತ್ವವೇ ವಿಶಿಷ್ಟಾದ್ವೈತ. ಈಶ್ವರ ತತ್ತ್ವವು ಒಂದೇ ಆಗಿರುವುದರಿಂದ ಅದ್ವೈತವೆಂದು ಕರೆಯಲ್ಪಡುತ್ತದೆ. ಕಾರಣಾವಸ್ಥೆಯಲ್ಲೂ ಕಾರ್ಯಾವಸ್ಥೆಯಲ್ಲೂ ಚಿದಚಿದ್ವಿಶಿಷ್ಟವಾಗಿಯೇ ಈಶ್ವರತತ್ತ್ವವು ಇರುವುದರಿಂದ ವಿಶಿಷ್ಟಾದ್ವೈತವೆಂದು ಸಿದ್ಧಾಂತಿತವಾಗಿದೆ. ಕಾರಣಾವಸ್ಥೆಯಲ್ಲೂ ವಿಶಿಷ್ಟಾದ್ವೈತ, ಕಾರ್ಯಾವಸ್ಥೆಯಲ್ಲೂ ವಿಶಿಷ್ಟಾದ್ವೈತ; ಆದುದರಿಂದ ಈ ಎರಡು ವಿಶಿಷ್ಟ ಗಳಿಗೂ ಅಭೇದವೇ ಪರಮಾರ್ಥವು (''ವಿಶಿಷ್ಟಂ ಚ ವಿಶಿಷ್ಟಂ ಚ - ವಿಶಿಷ್ಟೇ; ವಿಶಿಷ್ಟಯೋರದ್ವೈತಂ - ವಿಶಿಷ್ಟಾದ್ವೈತಮ್?' ಎಂದೂ ವ್ಯುತ್ಪತ್ತಿಯುಂಟು.) ಈಶ್ವರನಿಗೂ ಪ್ರಪಂಚಕ್ಕೂ ಶರೀರಶರೀರಿಭಾವವು ''ಯಸ್ಯಾತ್ಮಾ ಶರೀರಮ್'' ''ಯಸ್ಯಪೃಥಿವೀ ಶರೀರಮ್'' - ಇತ್ಯಾದಿ ಶ್ರುತಿವಚನಗಳಿಂದ ವ್ಯಕ್ತವಾಗಿ ರುವುದರಿಂದ, ಈಶ್ವರನು ಚಿದಚಿದಾತ್ಮಕಪ್ರಪಂಚಕ್ಕೆ ಶರೀರಿಯಾಗಿಯೇ ಇರುವನು. ಆದುದರಿಂದ ಚಿದಚಿದ್ವಿಶಿಷ್ಟವಾದ ಈಶ್ವರತತ್ತ್ವವೇ ಸತ್ಯವೆಂದು ವಿಶಿಷ್ಟಾದ್ವೈತಸಿದ್ಧಾಂತವು.

ಈ ಪ್ರಕಾರ ಮೂರು ಮತಗಳ ಪ್ರಕ್ರಿಯೆಗಳನ್ನೂ ಸಂಗ್ರಹವಾಗಿ ನಿರೂಪಿಸಿರುತ್ತೇನೆ. ಇವುಗಳಿಗೆ ಪರಸ್ಪರಸಾಮರಸ್ಯವನ್ನು ಹೇಗೆ ಸೂಚಿಸಬಹುದೆಂದರೆ, ಅದ್ವೈತಶ್ರುತಿಗಳೆಂತಲೂ ದ್ವೈತಶ್ರುತಿಗಳೆಂತಲೂ ಉಪನಿಷದ್ವಾಕ್ಯಗಳಲ್ಲಿ ಎರಡು ಬಗೆಯು ಕಾಣುತ್ತಿದೆ. ''ಏಕಮೇವಾ ದ್ವಿತೀಯಮ್'', ''ನೇಹ ನಾನಾಽಸ್ತಿ ಕಿಞ್ಚನ'' ಇತ್ಯಾದ್ಯಭೇದಪ್ರತಿಪಾದಕ ವಾಕ್ಯಗಳೇ ಅದ್ವೈತಶ್ರುತಿಗಳು; ''ದ್ವಾ ಸುಪರ್ಣಾ ಸಯುಜಾ ಸಖಾಯಾ'' - ಇತ್ಯಾದಿ ಭೇದಪ್ರತಿಪಾದಕವಾಕ್ಯಗಳೇ ದ್ವೈತಶ್ರುತಿಗಳು. ಈ ಪ್ರಕಾರ

ಪರಸ್ಪರವಿರುದ್ಧವಾದ ಅಭೇದಶ್ರುತಿಗಳಿಗೂ ಭೇದಶ್ರುತಿಗಳಿಗೂ ಸಾಮರಸ್ಯವನ್ನು ನಾವು ಘಟಕಶ್ರುತಿಗಳ ಮೂಲಕ ಸಾಧಿಸಬೇಕಾಗಿದೆ. ''ಯಸ್ಯಾತ್ಮಾ ಶರೀರಮ್'', ಯಸ್ಯ ಪೃಥಿವೀ ಶರೀರಮ್'', ''ನಿತ್ಯೋ ನಿತ್ಯಾನಾಂ ಚೇತನಶ್ಚೇತನಾನಾಮ್'' – ಇತ್ಯಾದಿ ಶ್ರುತಿವಾಕ್ಯಗಳೇ ಘಟಕ ಶ್ರುತಿಗಳು. ಈ ಘಟಕಶ್ರುತಿಗಳಿಂದ ಸಿದ್ಧವಾಗುವ ಪರಮಾರ್ಥವೇನೆಂದರೆ: ಈಶ್ವರನು ಒಬ್ಬನೇ ಆಗಿದ್ದಾಗ್ಯೂ ಅವನಿಗೆ ಚಿದ್ವರ್ಗವೂ (''ಯಸ್ಯಾತ್ಮಾ ಶರೀರಮ್'') ಅಚಿದ್ವರ್ಗವೂ (''ಯಸ್ಯ ಪೃಥಿವೀ ಶರೀರಮ್'') ಶರೀರವಾಗಿರುವುದರಿಂದ ಶರೀರಿಯಾದ ಈಶ್ವರನು ಚಿದಚಿದ್ವಿಶಿಷ್ಟನು. ಇವನೇ ಸಕಲ ನಿತ್ಯವಸ್ತುಗಳಿಗೂ ನಿತ್ಯನು, ಸಕಲ ಚೇತನರಿಗೂ ಚೈತನ್ಯಪ್ರದನಾದ ಅಂತರಾತ್ಮನು. (''ನಿತ್ಯೋ ನಿತ್ಯಾನಾಂ ಚೇತನಶ್ಚೇತನಾನಾಮ್''). ಈ ಪ್ರಕಾರ ಘಟಕಶ್ರುತಿಗಳು ಪರಸ್ಪರ ವಿರೋಧವನ್ನು ಪರಿಹಾರಮಾಡಿ ಅದ್ವೈತಶ್ರುತಿಗಳಿಗೂ ದ್ವೈತಶ್ರುತಿಗಳಿಗೂ ಸಾಮರಸ್ಯವನ್ನು ಪ್ರತಿಪಾದಿಸುತ್ತವೆ. ಆದುದರಿಂದ ಈಶ್ವರನು ಏಕತತ್ತ್ವವಾಗಿ ಅದ್ವೈತವೆಂದು ಕರೆಯಲ್ಪಟ್ಟಾಗ್ಯೂ ಚಿದಚಿದ್ವಿಶಿಷ್ಟನಾಗಿ ಯೇ ಚಿದಚಿದಾತ್ಮಕ ಪ್ರಪಂಚಕ್ಕೆ ಶರೀರಿಯಾಗಿಯೇ ಇರುವನು. ''ಜನ್ಮಿಥ್ಯಾ'' ಎಂದು ಅದ್ವೈತಿಗಳು ಪ್ರತಿಪಾದಿಸುತ್ತ ಚೇತನಾಚೇತನಾತ್ಮಕವಾದ ಪ್ರಪಂಚವು ಮಿಥ್ಯಾರೂಪವಾದುದೆಂದು ಹೇಳುವುದಕ್ಕೆ ತಾತ್ಪರ್ಯವೇನೆಂದರೆ, ಈ ಪ್ರಪಂಚವು ಅತಿನಶ್ವರವಾಗಿ ಅನಿತ್ಯವಾಗಿರುವುದರಿಂದ ಸ್ವಪ್ನಪ್ರಾಯವೆಂದೇ ಹೇಳಬಹುದು – ಎಂದು ಭಾವವು. ಅನಿತ್ಯವಾದ ವಸ್ತುಗಳೂ ನಿತ್ಯವಾಗಿರುವಂತೆ ತೋರುವುದು ಭ್ರಾಂತಿಯಿಂದಲೇ. ಇದೇ ಮಾಯೆಯ ಕಾರ್ಯವಾದುದರಿಂದ ನಿತ್ಯಾನಿತ್ಯವಿವೇಕವನ್ನು ಪಡೆದು, ಮಾಯೆಯ ನಿರ್ಮೂಲನವನ್ನು ಮಾಡಿ, ಈಶ್ವರನ ಕೃಪೆಗೆ ಪಾತ್ರರಾಗಿ ಮೋಕ್ಷಸಾಮ್ರಾಜ್ಯವನ್ನು ಸಕಲ ಚೇತನರೂ ಪಡೆಯಬೇಕೆಂಬುದೇ ಪರಮಾರ್ಥವು.

ಈ ಪ್ರಕಾರ ಮತತ್ರಯಸಾಮರಸ್ಯವನ್ನು ನಾವು ಘಟಕಶ್ರುತಿಗಳ ಮೂಲಕ ಸಾಧಿಸಿ, ಸರ್ವಶ್ರುತಿಗಳಿಗೂ ಸಾರ್ಥಕತ್ವವನ್ನು ಚೆನ್ನಾಗಿ ನಿರೂಪಿಸಬಹು ದಾಗಿದೆ. ಆದುದರಿಂದ ಪರಸ್ಪರವಿವಾದಗಳನ್ನು ಬಿಟ್ಟು, ಗೀತಾಚಾರ್ಯನಾದ ಶ್ರೀಭಗವಂತನ ಮತವು ಒಂದೇ ಮತವೆಂದು ಆಸ್ತಿಕರೆಲ್ಲರೂ ಅಂಗೀಕರಿಸಬೇಕಾಗಿ ದೆ. ಇದನ್ನೇ ಶ್ರೀಕಲ್ಕಿಸಿಂಹಾತ್ಮಕನಾದ ನಾನು ನನ್ನ 'ಶ್ರೀಭಗವನ್ಮತ'ವೆಂಬ ಪುಸ್ತಕದಲ್ಲಿ ನಿರೂಪಿಸಿ ಈ ಕೆಳಗೆಕಂಡ ಶ್ಲೋಕದಿಂದ ಸಂಗ್ರಹಿಸಿರುತ್ತೇನೆ :

ಏಕಂ ಮತಂ ಮಮ ಮತಂ ಭಗವನ್ಮತಾಖ್ಯಂ
ಸದ್ದರ್ಶನಂ ಸಕಲಸಾತ್ತ್ವಿಕಸೂರಿಸೇವ್ಯಮ್ ।
ಲೋಕಾ ಭಜನ್ತು ಸಕಲಾ ಅಪಿ ನಿರ್ವಿವಾದಾ
ಮಾಮೇವ ಕಲ್ಕಿನೃಹರಿಂ ಪರಮಾರ್ಥರೂಪಮ್॥

ಭಗವನ್ಮತವೆಂಬ ಒಂದು ಮತವೇ ನನ್ನ ಮತವು. ಅದೇ ಸಾತ್ತ್ವಿಕರಾದ ಸೂರಿಗಳೆಲ್ಲರೂ ಸೇವಿಸುವ ಸದ್ದರ್ಶನವು. ಪರಮಾರ್ಥರೂಪನಾದ ಕಲ್ಕಿನರಸಿಂಹನೆಂಬ ನನ್ನನ್ನೇ ಜನರು ವಿವಾದಗಳೆಲ್ಲವನ್ನೂ ಬಿಟ್ಟು ಭಜಸಲಿ.

★★★★★

# ಮತಜಿಜ್ಞಾಸೆಯ ಪ್ರಕಾರಗಳು

– ಮಂ. ಅ. ದೊರೆಸ್ವಾಮಿ ಅಯ್ಯಂಗಾರ್ಯರು, ಎಂ. ಎ, ಬಿ. ಎಲ್.

ಲೋಕದಲ್ಲಿ ಪ್ರತಿಯೊಂದು ಮತಧರ್ಮದಲ್ಲೂ ಸಿದ್ಧಾಂತಗಳೂ, ಪುರಾಣಗಳೂ, ಆಚಾರಗಳೂ, ಸಂಸ್ಥೆಗಳೂ ಅತ್ಯದ್ಭುತವಾಗಿ ಬೆಳೆದು ಜನರನ್ನು ಆಳುತ್ತಿರುವವು. ಮನುಷ್ಯನು ಸ್ವಭಾವತಃ ಸೋಮಾರಿಯಾದುದರಿಂದ ಇವುಗಳನ್ನೆಲ್ಲಾ ಹೊತ್ತು ನೀಸಬೇಕಾದರೆ ಇವನಿಗೆ ನೈಜವಾದ ಅಂಧಾನುಕರಣಪ್ರವೃತ್ತಿಯೊಂದೇ ಸಾಲುವದಿಲ್ಲ. ಮನುಷ್ಯನಿಗೆ ವಿಲಕ್ಷಣವಾದ ಯುಕ್ತಿವಿಮರ್ಶೆಯು ಕೈಹಾಕದೆ ಇದ್ದರೆ ಪರಂಪರೆಯಾಗಿ ಸೇರಿ ಬಂದಿರುವ ಮತಧರ್ಮದ ಸಂಪ್ರದಾಯಗಳ ಸಂಚಿತರಾಶಿಯು ಬಹಳ ಕಾಲ ನಿಲ್ಲುವದು ಅಸಾಧ್ಯ. ಆದರೆ ಮನುಷ್ಯನ ಜೀವನದಲ್ಲಿ ಯುಕ್ತಿ ವಿಮರ್ಶೆಯ ಆಧಿಪತ್ಯವು ಹೆಚ್ಚುತ್ತಾ ಬಂದಹಾಗೆಲ್ಲಾ ಅದು ಮತಸಂಪ್ರದಾಯಗಳ ಸಂಚಿತರಾಶಿಯನ್ನು ಸಮರ್ಥನಮಾಡಿ ಉಳಿಸುತ್ತಾ ಬರುವ ಕಾರ್ಯವನ್ನು ಹೊಸ ಹೊಸ ಪ್ರಕಾರಗಳಿಂದ ಮಾಡುತ್ತಾಬರುವದು. ಈ ಪ್ರಯತ್ನದಲ್ಲಿ ಹಳೆಯ ಆಚಾರಗಳೂ ಅಭಿಪ್ರಾಯಗಳೂ ಸಂಸ್ಥೆಗಳೂ ಹೊಸ ಅರ್ಥವನ್ನೂ ಹೊಸ ರೂಪವನ್ನೂ ಪಡೆಯಬಹುದು; ಅವುಗಳ

ತಾರತಮ್ಯವು ಅದಲುಬದಲಾಗಬಹುದು; ಅವುಗಳಲ್ಲಿ ಗೌಣವಾದುವು ಹಿಂದೆ ಬೀಳಬಹುದು; ಅವುಗಳಿಗೆ ಮೂಲಾಧಾರವಾದ ನಿಯಮಗಳ ಅವಲಂಬನೆಯಿಂದ ದೇಶಕಾಲಾನುಸಾರವಾಗಿ ಹೊಸ ಆಚಾರಗಳೂ ಸಂಸ್ಥೆಗಳೂ ಕಲ್ಪಿಸಲ್ಪಡಬಹುದು. ಎಂದರೆ ಸಾಂಪ್ರದಾಯಿಕವಾದ ಮತಧರ್ಮವನ್ನು ಯುಕ್ತಿವಿಮರ್ಶೆಯು ತದ್ವತ್ತಾಗಿ ಸಂರಕ್ಷಿಸಲು ಅಸಾಧ್ಯವಾದಾಗ ಸುಧಾರಣೆಯ ಮಾರ್ಗವಾಗಿ ಸಂರಕ್ಷಿಸಲು ಪ್ರಯತ್ನಿಸುವುದು.

ಮತವಿಚಾರಗಳನ್ನು ಕುರಿತು ಹುಟ್ಟತಕ್ಕ ಯುಕ್ತಿವಿಮರ್ಶೆಯ ಪ್ರಕಾರಗಳನ್ನೂ ತರಗತಿಗಳನ್ನೂ ಕೆಳಗೆ ಪಟ್ಟಿಮಾಡಿ ತಿಳಿಸಬಹುದು:

## 1. ತರ್ಕಹೀನ ಮತಶೀಲ

ನಮ್ಮ ಅಜ್ಜಿಮುತ್ತಜ್ಜಿಯರೂ ಪಾಮರಜನತೆಯೂ ಸಾಂಪ್ರದಾಯಿಕವಾಗಿ ಬಂದಿರುವ ತಮ್ಮತಮ್ಮ ಮತಶಾಖೆಯ ಅಭಿಪ್ರಾಯಗಳನ್ನೂ ಪುರಾಣಗಳನ್ನೂ ಆಚಾರಗಳನ್ನೂ ನಂಬುವುದಕ್ಕೆ ಯಾವ ತರ್ಕವನ್ನೂ ಬಯಸುವದಿಲ್ಲ, ನಂಬಿಕೆಯೇ ಇವರ ತರ್ಕವೆನ್ನಬಹುದು. ಮೂಢನಂಬಿಕೆಯ ಆಧಾರದಿಂದ ನಿಂತಿರುವ ಮತಾನುಷ್ಠಾನದಲ್ಲಿ ಸಹ ಹಲವು ತರಗತಿಗಳನ್ನು ಬೇರ್ಪಡಿಸಬಹುದು:

(ಅ) **ಮೂಢಶೀಲ** - ವ್ಯಕ್ತಿಯು ತಾನಾಗಿ ಯಾವ ಆಚಾರವನ್ನೂ ನಂಬಿಕೆಯನ್ನೂ ಆರಿಸುವದಕ್ಕಾಗಲಿ ತಿಳಿಯುವದಕ್ಕಾಗಲಿ ಪ್ರವರ್ತಿಸುವದಿಲ್ಲ. ತನ್ನ ಹುಟ್ಟಿನ ಮತಶಾಖೆಯು ವಿಧಿಸತಕ್ಕ ಆಚಾರಗಳನ್ನು ಅರ್ಥವಿಚಾರಮಾಡದೆ ಕುರುಡುಬುದ್ಧಿಯಿಂದ ಹುಳದಂತೆ ನಡೆಸುತ್ತಾ ಹೋಗುವನು.

(ಆ) **ಅಂಧಶೀಲ** - ಕದಾಚಿತ್ತಾಗಿ ತಿಳಿಯಬರತಕ್ಕ ಆಚಾರಗಳನ್ನು ಅರ್ಥವಿಚಾರವಿಲ್ಲದೆ ಜಾತಿಭಯದಿಂದ ಯಂತ್ರದಂತೆ ನಡೆಸುವನು, ಕಷ್ಟವಾದ ಕಡೆ ಆಚಾರವನ್ನು ಬಿಟ್ಟರೂ ಹೊರಗಡೆ ಆಚಾರಶೀಲನಾಗಿರುವಂತೆ ನಟನೆಮಾಡುವನು. ಜಾತಿಯವರ ವಿರೋಧವನ್ನು ಕೆರಳಿಸದಂತೆ ಆಚಾರವನ್ನು ಅನುಸರಿಸುವ ನಟನೆಮಾಡುವನು.

(ಇ) **ಶ್ರದ್ಧಾಶೀಲ** - ತನ್ನ ಮತಶಾಖೆಯ ಆಚಾರಗಳಲ್ಲಿ ಒಂದು ಮೂಢಮೋಹವಿಟ್ಟು ಅವುಗಳನ್ನು ಚಾಚೂ ತಪ್ಪದಂತೆ ಆಚರಿಸಲು ಶ್ರದ್ಧೆಪಡುವನು.

ಬುದ್ಧಿಪೂರ್ವಕ ಈ ಆಚಾರಗಳನ್ನು ತಿಳಿಯಲು ಪ್ರಯತ್ನಿಸುವದಿಲ್ಲ. ಆದರೆ ಅವುಗಳ ಅನುಷ್ಠಾನವನ್ನು ಮಾತ್ರ ಬುದ್ಧಿಪೂರ್ವಕ ಮಾಡಲು ಉದ್ಯಮಿಸುವನು.

**(ಈ) ಸಾಧನಶೀಲ** – ಸರ್ವಸಾಮಾನ್ಯವಾದ ಆಚಾರಗಳನ್ನು ಶ್ರದ್ಧೆಯಿಂದ ಅನುಷ್ಠಾನಮಾಡುವದರಲ್ಲಿ ಮಾತ್ರ ತೃಪ್ತನಾಗದೆ ಅದರಿಂದ ಮುಂದುವರಿದು ಮತ್ತಾವುದಾದರೂ ಉಪದೇಶ, ಅಭ್ಯಾಸ, ಮಂತ್ರ, ಜಪ, ಯೋಗ, ವ್ರತ, ದೀಕ್ಷೆ, ಉಪಾಸನೆ, ತಪಸ್ಸು – ಮೊದಲಾದ ಸಾಧನಗಳನ್ನು ಕೈಕೊಂಡು ನಡೆಸಲು ಪ್ರಯತ್ನಮಾಡುವನು. ಶ್ರದ್ಧಾಶೀಲರು ವಯಸ್ಸಾದ ಮೇಲೆ ಸಾಧಾರಣವಾಗಿ ಈ ಮಾರ್ಗವನ್ನು ಹಿಡಿಯುವುದು ವಾಡಿಕೆ. ಈ ಘಟ್ಟದಲ್ಲಿ ಸಹ ಅನುಷ್ಠಾನವು ಮಾತ್ರ ಬುದ್ಧಿಪೂರ್ವಕವೇ ಹೊರತು ತದ್ವಿಷಯಗಳು ಜ್ಞಾನದಿಂದ ತರ್ಕಿಸಲ್ಪಡುವದಿಲ್ಲ.

## 2. ಪಂಡಿತತರ್ಕ

ಮತಧರ್ಮದ ಆಚಾರಗಳನ್ನು ಕ್ರೋಢೀಕರಿಸಿ ವಿಸ್ತಾರವಾಗಿ ಗ್ರಂಥಗಳು ಹುಟ್ಟಿರುವುವಷ್ಟೆ. ಈ ಕ್ರೋಢೀಕರಣವು ಒಂದು ಬಗೆಯ ತರ್ಕವೇ ಆಗಿದೆ. ಈ ಶಾಸ್ತ್ರಗ್ರಂಥಗಳನ್ನೂ ಅವು ಅಂಗೀಕರಿಸಿರುವ ತರ್ಕವಿಮರ್ಶೆಯನ್ನೂ ವ್ಯಾಸಂಗಮಾಡಿ ಮತಾಚಾರಗಳ ಪ್ರಯೋಜನವನ್ನು ಜನರಿಗೆ ಸಮರ್ಥನೆಮಾಡಿ ಅವುಗಳನ್ನು ಸಂರಕ್ಷಿಸುವುದು ಕೆಲವರಿಗೆ ಕೆಲಸವಾಗುವದು. ಇಂಥವರು ಶಾಸ್ತ್ರಿಗಳು, ಪಂಡಿತರು – ಎನ್ನಿಸುವರು. ಆಚಾರಗಳನ್ನು ಚಾಚೂ ಮಾರ್ಪಡಿಸುವುದಕ್ಕೂ ಇವರು ಒಪ್ಪರು. ಅವುಗಳನ್ನು ಸಾಂಪ್ರದಾಯಿಕವಾದ ತರ್ಕದಿಂದಲೂ ಶಾಸ್ತ್ರಪಙ್ಕ್ತಿಗಳಿಂದಲೂ ಸಮರ್ಥನೆಮಾಡಲು ಇವರು ಬಲ್ಲರೇ ಹೊರತು ಸ್ವಬುದ್ಧಿಕಲ್ಪಿತವಾದ ಯುಕ್ತಿಯಿಂದ ಮಾಡಲು ಹೋಗರು. ಇಂಥ ತರ್ಕದಲ್ಲಿ ಎರಡು ಘಟ್ಟಗಳನ್ನು ಪ್ರತ್ಯೇಕಿಸಬಹುದು:

**(ಅ) ಪಾಂಡಿತ್ಯಶೀಲ** – ತನ್ನ ಶಾಖೆಯ ಮತದ ನಂಬಿಕೆಗಳೂ ಆಚರಣೆಗಳೂ ಯಾವವು? ಅವು ಎಲ್ಲಿ ದೊರೆಯುವವು? ಹೇಗೆ ನಿರೂಪಿಸಲ್ಪಟ್ಟಿವೆ? – ಎಂಬುದನ್ನು ತಿಳಿದು ಜನರಿಗೆ ಪ್ರಕಾಶಪಡಿಸುವದು. ಇವರು ಆಚಾರದ ನಿಘಂಟುವಿನಂತೆ ಇರುವರು.

**(ಆ) ಜಿಜ್ಞಾಸಾಶೀಲ** – ತನ್ನ ಧರ್ಮದ ಪ್ರಮಾಣ ಮತ್ತು ಪ್ರಮೇಯಶಾಸ್ತ್ರಗಳನ್ನೂ ದರ್ಶನಶಾಸ್ತ್ರಗಳನ್ನೂ ವ್ಯಾಸಂಗಮಾಡಿ ಈ ಧರ್ಮದ

ನಿರೂಪಣೆಯಲ್ಲಿ ಶಾಸ್ತ್ರಕಾರರೂ ಪೂರ್ವಾಚಾರ್ಯರೂ ಹೊರಪಡಿಸಿರುವ ತರ್ಕವಿಮರ್ಶೆಯನ್ನು ತಿಳಿಯುವುದು. ಈ ತರ್ಕವು ಹೋಗುವಷ್ಟು ದೂರ ಈ ಶಾಸ್ತ್ರಿಗಳು ಹಳೆಯ ಆಚಾರಗಳಿಗೂ ಅಭಿಪ್ರಾಯಗಳಿಗೂ ಅರ್ಥವನ್ನು ಹೇಳುವರು. ಈ ತರ್ಕಕ್ಕೆ ಅಧಿಕಾರಿಭೇದವೂ ಶಬ್ದಪ್ರಮಾಣದ ಆಧಾರವೂ ಉಂಟು. ಶಬ್ದಪ್ರಮಾಣವನ್ನೂ ಶಾಸ್ತ್ರಪ್ರಮಾಣವನ್ನೂ ಒಪ್ಪದಿರುವವರ ಮುಂದೆ ಈ ಪಂಡಿತರಿಗೆ ವಾಕ್‌ಸ್ತಂಭವಾಗುವದು.

## 3. ಸ್ವಾಭಿಮಾನತರ್ಕ

ನಮ್ಮದು ಎಂಬ ಅಭಿಮಾನದಿಂದ ಆಚಾರಾದಿಗಳಲ್ಲಿ ಒಂದು ಮೋಹವನ್ನಿಟ್ಟು ಅವುಗಳನ್ನು ಹೇಗಾದರೂ ಮಾಡಿ ಸರಿಯೆಂದು ಸಾಧಿಸಲು ಅನೇಕರು ಉದ್ಯಮಿಸುವರು; ಇಂಥವರು ಇತರ ಮತಗಳ ಹುಳುಕುಗಳನ್ನೂ ತಮ್ಮ ಮತದ ಮೇಲ್ಮೆಗಳನ್ನೂ ಪಟ್ಟಿಮಾಡಿ ಸಾರುವರು. ಸ್ವಧರ್ಮದಲ್ಲಿ ಪ್ರಾಣನಷ್ಟವಾದರೂ ಅದನ್ನು ಬಿಡದೆ ಪರಧರ್ಮವನ್ನು ದ್ವೇಷಿಸಬೇಕೆಂದುವಾದಿಸುವರು. ತಮ್ಮ ಹಳೆಯ ಆಚಾರಾದಿಗಳಲ್ಲಿ ಯಾವ ದೋಷವೂ ಇಲ್ಲವೆಂದೂ ನಮ್ಮ ಅಶಕ್ತಿ, ಭ್ರಮೆ, ಅಜ್ಞಾನ, ಕಾಪಟ್ಯ - ಮೊದಲಾದ ಕಾರಣಗಳಿಂದ ಅವುಗಳಲ್ಲಿ ದೋಷವು ಕಾಣಿಸುವುದೇ ಹೊರತು ಬೇರೇನೂ ಅಲ್ಲವೆಂದೂ, ನಾವು ಶ್ರದ್ಧಾಭಿಮಾನಪೂರಿತರಾದರೆ ಈ ದೋಷಗಳು ಮಾಯವಾಗುವುವೆಂದೂ ತಿಳಿಸುವರು. ಆಧುನಿಕವಿಜ್ಞಾನಶಾಸ್ತ್ರವು ಹಳೆಯ ಧರ್ಮಗಳನ್ನು ಎಳ್ಳಷ್ಟೂ ಅಳ್ಳಾಡಿಸಲಾರದೆಂದು ನಂಬುವದಲ್ಲದೆ ಅದು ಈಚೆಗೆ ಹೊಸದಾಗಿ ಕಂಡುಹಿಡಿದಂತೆ ಹೇಳಿಕೊಂಡು ಹೆಮ್ಮೆಪಡುತ್ತಿರುವ ಎಷ್ಟೋ ಅಂಶಗಳನ್ನು ತಮ್ಮ ಮತಧರ್ಮವು ಹಿಂದೆಯೇ ನಿರೂಪಿಸಿರುವುದೆಂದೂ ವಾಕ್ಯಾರ್ಥಮಾಡುವರು. ನಮ್ಮ ಆಚಾರಾದಿಗಳಿಗೆ ಪರಂಪರೆಯಾಗಿ ಬಂದಿರುವ ರಹಸ್ಯಾರ್ಥವುಂಟೆಂದೂ ಅದರ ಸಹಾಯದಿಂದ ಅವುಗಳನ್ನು ಈಗಿನ ವಿಜ್ಞಾನಶಾಸ್ತ್ರಸಮ್ಮತವಾಗಿ ಸಮರ್ಥಿಸುವುದು ಸುಲಭವೆಂದೂ ಹೇಳುವರು. ಈಗಿನ ದೈವಜ್ಞಾನಸಮಾಜ (Theosophy) ದವರಲ್ಲಿ ಅನೇಕರು ಹೀಗೆ ಮಾಡುತ್ತಿರುವ ಸಂಗತಿ ಎಲ್ಲರಿಗೂ ತಿಳಿದಿರಬಹುದು.

## 4. ಅಭ್ಯುತ್ಥಾನತರ್ಕ

ನಮ್ಮ ಆಚಾರಾದಿಗಳು ಸರ್ವೋತ್ಕೃಷ್ಟವಾಗಿದ್ದರೂ ಅವುಗಳಲ್ಲಿ ಕಾಣಿಸತಕ್ಕ ದೋಷಗಳು ಭ್ರಮಾತ್ಮಕವಾದುವಲ್ಲವೆಂದು ಹೇಳಿಬಿಡುವದು ಲೋಕಾನುಭವವಿರುದ್ಧವಾಗಿರುವುದೆಂದು ಕೆಲವರು ಒಪ್ಪುವರು. ಆದರೆ ಈ ದೋಷಗಳು ಸತ್ಯವಾದರೂ ಅವು ಕ್ಷಣಿಕವಾದುವೇ ಸರಿ. ಅವು ಹಿಂದಲ ದಿವ್ಯಯುಗದಲ್ಲಿ ಇರಲಿಲ್ಲ. ನಮ್ಮ ಅಶಕ್ತಿ, ಅಪ್ರಾಮಾಣಿಕತೆ, ಮತ್ತು ಅಜ್ಞಾನದಿಂದ ನಾವು ಇವುಗಳಿಗೆ ಅಪಾರ್ಥಮಾಡಿಕೊಂಡು ಕಷ್ಟಪಡುತ್ತಿರುವುದಲ್ಲದೆ ಅತ್ಯಂತ ಮಂಗಳಕರವಾದ ಬಹು ಆಚಾರಗಳನ್ನು ಕೈಬಿಟ್ಟಿರುವೆವು. ನಮ್ಮ ಕ್ಷೀಣತೆಗೂ ದುಃಖಕ್ಕೂ ಈ ಆಚಾರಭ್ರಷ್ಟತ್ವವೇ ಕಾರಣವಾಗಿದೆ. ಬ್ರಹ್ಮಚರ್ಯ, ಗುರುಕುಲವಾಸ, ಆಶ್ರಮಧರ್ಮ, ಯಾಗಾಚಾರಣೆ – ಮೊದಲಾದವುಗಳನ್ನು ದೇಶದಲ್ಲಿ ಪುನರುತ್ಥಾಪನೆಮಾಡುವುದರಿಂದ ದೇಶದ ಸಕಲ ಕಷ್ಟಗಳೂ ಪರಿಹಾರವಾಗುತ್ತವೆ – ಎಂದು ಈ ಪಕ್ಷದವರು ಸಾರುವರು.ಇವರಲ್ಲಿ ಎರಡು ಶಾಖೆಗಳುಂಟು:

**(ಅ) ಅಂಧಾನುಕರಣ** – ಸನಾತನವಾದುದೆಂಬುದರಲ್ಲಿ ನಿರ್ವಿವಾದವಾಗಿರುವ ಅಂಶಗಳನ್ನು ಅನುಕರಣಮಾಡಿ ಪುನಃ ಸ್ಥಾಪಿಸಬೇಕೆಂದು ಪ್ರಯತ್ನಪಡುವುದು.

**(ಆ) ಪರಿಷ್ಕೃತಾನುಕರಣ** – ಈಗಿನ ಸ್ಥಿತಿಯಲ್ಲಿ ಹಿತಕರವೆಂದು ಗೊತ್ತಾಗತಕ್ಕ ಪ್ರೌಢವಿವಾಹ, ವಿಧವಾವಿವಾಹ, ಸ್ತ್ರೀಸಂಸ್ಕಾರ, ಸಮುದ್ರಯಾನ, ಸ್ತ್ರೀವಿದ್ಯಾಭ್ಯಾಸ – ಮೊದಲಾದ ಪದ್ಧತಿಗಳು ಸನಾತನಶಾಸ್ತ್ರಸಮ್ಮತವಾದುವೆಂದು ಸಾಧಿಸಿ ಮರಳಿ ಸ್ಥಾಪಿಸಲು ಪ್ರಯತ್ನಿಸುವುದು. ಈ ಎರಡನೆಯ ಶಾಖೆಯು ಶುದ್ಧವಾಗಿ ಸುಧಾರಣೆಯ ಪಕ್ಷಕ್ಕೆ ಸೇರುವುದು.

## 5. ರೂಢಿಸಮ್ಮತ ಸುಧಾರಣೆ

ನಮ್ಮ ಮತದ ಆಚಾರಾದಿಗಳಲ್ಲಿ ಪ್ರಬಲದೋಷಗಳು ಇರುವವೆಂದೂ ಅವುಗಳನ್ನು ಸುಧಾರಿಸದಿದ್ದರೆ ಈ ದೋಷಗಳು ನಿವಾರಣೆಯಾಗುವದಿಲ್ಲವೆಂದೂ ಕೆಲವರು ವಾದಿಸಲಾರಂಭಿಸುವರು. ಆದರೆ ಈ ಸುಧಾರಣೆಯನ್ನು ಕೇವಲ ಯುಕ್ತಿಯ ಬಲದಿಂದ ಸ್ವೇಚ್ಛೆಯಾಗಿ ಮಾಡದೆ ನಮ್ಮ ಮತ ಶಾಖೆಯ ರೂಢಿಗೆ

ವಿರೋಧವಿಲ್ಲದಂತೆ ಮಾಡಬೇಕೆಂದು ಇವರು ಹೇಳುವರು. ಇವರಲ್ಲಿ ಪರಂಪರೆಯಾಗಿ ಮುಂದುವರಿಯುವ 3–4 ಶಾಖೆಗಳನ್ನು ವಿಂಗಡಿಸಬಹುದು:

**(ಅ) ಪರಿಷ್ಕೃತಾನುಕರಣ** - ಅಪೇಕ್ಷಿತ ಸುಧಾರಣೆಯ ವಿಷಯವು ಪ್ರಾಚೀನಶಾಸ್ತ್ರಸಮ್ಮತವೆಂದು ಸಾಧಿಸುವ ವ್ಯಾಖ್ಯಾನಪ್ರಯತ್ನ.

**(ಆ) ಆಚಾರಸುಧಾರಣೆ** - ನಮ್ಮ ಮತಧರ್ಮದ ಸನಾತನವಾದ ಅಭಿಪ್ರಾಯಗಳು, ಸಂಸ್ಥೆಗಳು, ಆಚಾರಗಳು – ಈ ಮೂರು ಕೂಟವೂ ಅತ್ಯುತ್ತಮವಾಗಿದ್ದರೂ ಈಗ ಎಲ್ಲಕ್ಕಿಂತಲೂ ಆಚಾರವು ಹೆಚ್ಚಾಗಿ ಕೆಟ್ಟಿರುವುದರಿಂದ ನಮ್ಮ ಸನಾತನ ಅಭಿಪ್ರಾಯಗಳನ್ನೂ ಸಂಸ್ಥೆಗಳನ್ನೂ ಹಾಗೆಯೇ ಉಳಿಸಿಕೊಂಡು ಆಚಾರಗಳಲ್ಲಿ ಅಲ್ಪಸ್ವಲ್ಪ ಸುಧಾರಣೆಮಾಡಿ ಕೊಳ್ಳಬಹುದೆಂದು ಈ ಪಕ್ಷದವರು ಹೇಳುವರು. ಜಾತಿ, ದೇವಾಲಯ, ಮಠ – ಮೊದಲಾದ ಸಂಸ್ಥೆಗಳು ನಾಶವಾಗಬಾರದು; ಬೇಕಾದರೆ ಅವುಗಳ ಕೆಲ ಆಚಾರಗಳನ್ನು ಸುಧಾರಿಸಿಕೊಳ್ಳಬಹುದು. ದೇವಾಲಯದಲ್ಲಿ ಹಿಂದಲ ಹಣತಿಯ ದೀಪಕ್ಕೆ ಪ್ರತಿಯಾಗಿ ಮಿಂಚಿನ ದೀಪಗಳನ್ನು ಉಪಯೋಗಿಸಿಕೊಳ್ಳಬಹುದು. ಯತಿಗಳು ಮೋಟಾರನ್ನು ಉಪಯೋಗಿಸಬಹುದು.

**(ಇ) ವ್ಯವಸ್ಥಾಸುಧಾರಣೆ** - ಮೇಲೆ ಹೇಳಿದ ಮೂರು ಕೂಟಗಳಲ್ಲಿ ಅಭಿಪ್ರಾಯಕೂಟವು ಮಾತ್ರ ಪ್ರಧಾನವಾದುದೆಂದೂ ಸಂಸ್ಥೆಗಳೂ ಆಚಾರಗಳೂ ಮತಧರ್ಮದ ಧ್ಯೇಯ ಅಥವಾ ಅಭಿಪ್ರಾಯಗಳ ಆಧಾರದಿಂದ ಹುಟ್ಟಿರುವುವೆಂದೂ ಈ ಸಂಸ್ಥೆಗಳೂ ಆಚಾರಗಳೂ ಇಂಥಾ ಮೂಲ ಧ್ಯೇಯಗಳಿಗೆ ವಿರುದ್ಧವಾಗಿ ಪರಿಣಾಮವನ್ನು ಪಡೆದಿದ್ದರೆ ಅವೆರಡನ್ನೂ ವಿಸ್ತಾರವಾಗಿ ಸುಧಾರಿಸಲು ಸ್ವಾತಂತ್ರ್ಯವಿರಬೇಕೆಂದೂ ಈ ಪಕ್ಷದವರು ವಾದಿಸುವದು. ಉದಾಹರಣೆಗಾಗಿ ತನ್ನನ್ನು ಆಶ್ರಯಿಸತಕ್ಕ ನಾಲ್ಕಾರು ಮಂದಿ ಶಿಷ್ಯರಿಗೆ ತನ್ನ ಮನೆಯಲ್ಲಿ ಪಾಠಹೇಳತಕ್ಕ ಪಂಡಿತವ್ಯಕ್ತಿಗಳದ್ವಾರಾ ಹಿಂದೆ ನಮ್ಮ ಪ್ರೌಢವಿದ್ಯಾಭ್ಯಾಸವು ನಿರ್ವಹಿಸಲ್ಪಡುತ್ತಿತ್ತು. ಈಗಿನ ಸ್ಥಿತಿಯಲ್ಲಿ ಇದು ಕಾರ್ಯಕಾರಿಯಲ್ಲವಾದ್ದರಿಂದ ಜಾತಿಯ ವಿದ್ಯಾಸಂಸ್ಥೆಯನ್ನೇ ಮಾರ್ಪಡಿಸಿ ನೂತನಕ್ರಮದ ವಿದ್ಯಾಪೀಠಗಳನ್ನು ಸ್ಥಾಪಿಸಿಕೊಳ್ಳಲು ನಾವು ಸ್ವತಂತ್ರರಾಗಿರಬೇಕು. ಪ್ರೌಢವಿದ್ಯಾಪ್ರವಚನವು ನಮ್ಮ ಲಕ್ಷ್ಯವೇ ಹೊರತು ಅದನ್ನು ನಿರ್ವಹಿಸುವ ಹಳೆಯ ಸಂಸ್ಥೆಯಲ್ಲ. ಮತ ಪ್ರಸಾರವನ್ನು ನಿರ್ವಹಿಸಲು ಮಠಗಳು ಹುಟ್ಟಿದವು. ಈ ಕಾರ್ಯವನ್ನು ಈಗ

ಕ್ರಿಸ್ತಮಿಶೆನರಿಗಳು ಮಾಡುವ ರೀತಿ ಮಾಡುವುದು ಹಿತಕರವೆಂದು ತೋರಿದರೆ ಈ ಮತಗಳನ್ನು ಆ ರೀತಿ ಮಾರ್ಪಡಿಸಲು ನಾವು ಪ್ರವರ್ತಿಸಬಹುದು.

**(ಈ) ಮೂಲಧ್ಯೇಯಪುರಸ್ಕಾರ** - ಹಿಂದಲ ಪಕ್ಷದ ತರ್ಕವನ್ನೇ ಸ್ವಲ್ಪ ಮುಂದುವರಿಸಿದರೆ ಈ ಪಕ್ಷವು ಹುಟ್ಟುವುದು. ನಮ್ಮ ಸಂಸ್ಥೆಗಳೂ ಆಚಾರಗಳೂ ಸರ್ವಕಾಲಕ್ಕೂ ಹಿತಕಾರಿಯಲ್ಲವೆಂದೂ ಅವುಗಳ ಉತ್ಪತ್ತಿಕಾಲದಲ್ಲಿ ಮಾತ್ರ ಘನವಾದ ಧ್ಯೇಯಗಳ ಮೂಲದಿಂದ ಹುಟ್ಟಿ ಅತಿ ಪ್ರಯೋಜನಕಾರಿಯಾಗಿದ್ದುವೆಂದೂ ಅವು ಈಗ ಅಹಿತಕಾರಿ ಎಂದೂ ಮಂದಟ್ಟಾದರೆ ಶುದ್ಧಾಂಗವಾಗಿ ಅವುಗಳನ್ನು ಬಿಟ್ಟು ಬಿಡಬಹುದೆಂದೂ ಈ ಪಕ್ಷದವರು ಹೇಳುವರು. ವಿಗ್ರಹಾರಾಧನೆ, ಗೋಪೂಜೆ, ಜಾತಿಧರ್ಮ, ಮುಖಚಿಹ್ನೆ - ಮೊದಲಾದವು ಅರ್ಥವಿಲ್ಲದ ಮೂಢಾಚಾರಗಳಲ್ಲ. ಅವು ಉತ್ಪತ್ತಿಯಲ್ಲಿ ಅತಿಘನವಾದ ಭಾವಮೂಲದಿಂದ ಹುಟ್ಟಿವೆ. ಆದಮಾತ್ರಕ್ಕೆ ನಮಗೆ ಅವು ಸರ್ವಕಾಲಕ್ಕೂ ಉಪಾದೇಯವಾಗಿರ ಬೇಕಾಗಿಲ್ಲ. ಅವುಗಳಲ್ಲಿ ಪ್ರಯೋಜನವನ್ನು ಕಾಣದಿರುವವರು ಅವುಗಳನ್ನು ತ್ಯಜಿಸಲು ಸ್ವತಂತ್ರರಾಗಿರುವರು. ನಮ್ಮ ಕುಲದ ಮತಧರ್ಮಕ್ಕೆ ತಳಹದಿಯಾಗಿ ರುವ ಉದಾತ್ತಧ್ಯೇಯಗಳನ್ನು ಪುರಸ್ಕರಿಸುವುದು ನಮ್ಮ ಕರ್ತವ್ಯವೇ ಹೊರತು ಅವುಗಳ ಹಳೆಯ ಅರ್ಥಕ್ಕೂ ವ್ಯವಸ್ಥೆಗೂ ನಾವು ದಾಸರಲ್ಲ. ಉದಾಹರಣೆಗಾಗಿ, ಗೋಪೂಜೆಗೆ ಕರುಣೆಯೇ ಮೂಲಕಾರಣವು. ಅವು ಕರುಣೆಯನ್ನು ಪುರಸ್ಕರಿಸುವುದನ್ನು ಇಟ್ಟುಕೊಂಡರೆ ಗೋಪೂಜೆಬಿಟ್ಟರೂ ಭಾಧಕವಿಲ್ಲ. ಈ ಪಕ್ಷವನ್ನು ಮಹಾತ್ಮಗಾಂಧಿಯವರು ಅಲ್ಲಲ್ಲಿ ಅನುವಾದಮಾಡುತ್ತಿರುವರು. ಈ ಪಕ್ಷದಲ್ಲಿ ಸುಧಾರಣೆಯು ಯುಕ್ತಿಯನ್ನೇ ಮುಖ್ಯವಾಗಿ ಕೈಹಿಡಿಯುವುದಾದರೂ ರೂಢಿಯ ಪ್ರಾಕಾರವನ್ನು ಬಿಟ್ಟು ಹೋಗಲು ಇಚ್ಛಿಸುವುದಿಲ್ಲ.

## 6. ಯುಕ್ತಿಸಮ್ಮತಸುಧಾರಣೆ

ಪ್ರತಿಯೊಂದು ಮತಧರ್ಮವೂ ಒಂದು ವಿಧವಾದ ಯುಕ್ತಿವ್ಯವಸ್ಥೆಯನ್ನು ಪಡೆದು ಜೀವಿಸುತ್ತಿದೆ. ಈ ಮತಧರ್ಮದ ಆಚಾರಾದಿಗಳನ್ನು ಈ ಯುಕ್ತಿಯ ಪಂಥವನ್ನೇ ಹಿಡಿದು ಖಂಡಿಸಿ ಸುಧಾರಣೆ ಕಲ್ಪಿಸುವುದು ಒಂದು ಕ್ರಮವು. ಮೇಲೆ ವಿವರಿಸಿದ ಸುಧಾರಣೆಯ ಪಕ್ಷಗಳೆಲ್ಲವೂ ಈ ಕ್ರಮಕ್ಕೆ ಸೇರಿದುವೆನ್ನಬಹುದು. ನಮ್ಮ ದೃಷ್ಟಿಯು ನಮ್ಮ ನಮ್ಮ ಮತಶಾಖೆಯ ಪ್ರಾಕಾರವನ್ನು ಬಿಟ್ಟು ಹೊರಕ್ಕೆ ಪ್ರಸರಿಸದೆ ಇರುವಾಗ ನಡೆಯಬಹುದಾದ ಸುಧಾರಣೆಯ ಕ್ರಮಗಳನ್ನು

ಮೇಲೆ ವಿವರಿಸಿದೆ. ಆದರೆ ಈ ಪ್ರಾಕಾರವನ್ನು ಬಿಟ್ಟು ಹೊರಕ್ಕೆ ಪ್ರಯಾಣಬೆಳೆಸಿ ಸ್ವತಂತ್ರಯುಕ್ತಿಯಿಂದ ಅದನ್ನು ಖಂಡಿಸಿ ಸುಧಾರಿಸುವುದು ಮತ್ತೊಂದು ಕ್ರಮವು. ನಮ್ಮ ಮತಶಾಖೆಯನ್ನು ದಾಟಿ ಬಂದ ಮೇಲೆ ನಾವು ತತ್ಸದೃಶವಾದ ಇತರ ಮತಧರ್ಮಗಳ ಯುಕ್ತಿವ್ಯವಸ್ಥೆಯ ಆಶ್ರಯದಿಂದಾಗಲಿ ಅಥವಾ ಅವುಗಳಿಂದಲೂ ಮುಂದುವರಿದು ಸ್ವತಂತ್ರತತ್ತ್ವಶಾಸ್ತ್ರ ಮತ್ತು ವಿಜ್ಞಾನಶಾಸ್ತ್ರಗಳ ಯುಕ್ತಿಯ ಆಶ್ರಯದಿಂದಾಗಲಿ ನಮ್ಮ ಮತಶಾಖೆಯ ಆಚಾರಾದಿಗಳನ್ನು ಪರೀಕ್ಷಿಸಿ ಸುಧಾರಣೆಗೆ ಪ್ರವರ್ತಿಸಬಹುದು. ಎಂದರೆ ಈ ಕ್ರಮದಲ್ಲಿ ಎರಡು ಘಟ್ಟಗಳು ಇರುವುವು:

**(ಅ) ಅಖಿಲಮತಧರ್ಮಸಮಷ್ಟಿ** - ತಾನು ಹುಟ್ಟಿದ ಮತ ಶಾಖೆಯ ಧರ್ಮದ ಜತೆಗೆ ಇತರ ಮತಧರ್ಮಗಳನ್ನೂ ಪರಿಚಯಮಾಡಿಕೊಂಡು, ಪರಸ್ಪರ ಹೋಲಿಸಿ, ಸರ್ವಕ್ಕೂ ಸಾಮಾನ್ಯವಾದ ಅಂಶಗಳನ್ನು ಪ್ರಧಾನವೆಂದು ಅಂಗೀಕರಿಸಿ, ಗೌಣಾಂಶಗಳ ವಿರೋಧವನ್ನು ಗಣನೆಗೆ ತಾರದೆ, ಅಖಿಲಮತಧರ್ಮಸಮಷ್ಟಿಯ ಮೂಲಾಧಾರವಾದ ಧ್ಯೇಯಗಳನ್ನೂ ಆಚಾರಗಳನ್ನೂ ಮಾತ್ರ ಅನುಷ್ಠಿಸಲು ಪ್ರಯತ್ನಿಸುವುದು ಇಂಥಾ ಪ್ರಯತ್ನದಿಂದ ಮತಧರ್ಮಗಳಲ್ಲಿ ತುಂಬಿರುವ ಅಪ್ರಯೋಜಕವೂ ದುಷ್ಟವೂ ಕಲಹಪ್ರದವೂ ತುಚ್ಛವೂ ಆದ ಅಭಿಪ್ರಾಯಗಳೂ ಆಚಾರಗಳೂ ಸಂಸ್ಥೆಗಳೂ ಮೂಲೆಗೆ ಬೀಳುವುವು.

**(ಆ) ತತ್ತ್ವಜ್ಞಾನ ಮತ್ತು ವಿಜ್ಞಾನದೊಡನೆ ಮತಧರ್ಮದ ಸಾಮರಸ್ಯ** - ಮತಧರ್ಮದ ಮೂಲಾಧಾರವಾದ ನಂಬಿಕೆಗಳನ್ನೂ ಆಚಾರಗಳನ್ನೂ ತತ್ತ್ವಜ್ಞಾನ ಮತ್ತು ವಿಜ್ಞಾನಗಳ ಸಾರಾಂಶಗಳೊಡನೆ ಹೋಲಿಸಿ ಒರೆಹಚ್ಚಿನೋಡಿ ಪರಸ್ಪರವಿರೋಧವನ್ನು ಕಳೆದು ಸರ್ವಸಮ್ಮತವಾದ ಸಿದ್ಧಾಂತಗಳನ್ನು ಮಾತ್ರ ಉದ್ಧರಿಸಿ ಉಳಿಸಿಕೊಳ್ಳಬೇಕು. ಎಂದರೆ ತತ್ತ್ವಜ್ಞಾನ ಮತ್ತು ವಿಜ್ಞಾನದ ಸಾರಾಂಶಗಳಿಗೆ ವಿರುದ್ಧವಿಲ್ಲದಂತೆ ಮತಧರ್ಮವನ್ನು ಸುಧಾರಿಸಿ ಸ್ಥಾಪಿಸುವುದು. ಪುರಾಣಾಶ್ರಿತವೂ ಧರ್ಮಾಚಾರ ಬದ್ಧವೂ ಮೂಢಶ್ರದ್ಧಾತ್ಮಕವೂ ಮಾಯಾಮಯವೂ ಆದ ಮತಧರ್ಮವನ್ನು ವಿಜ್ಞಾನವೂ ತತ್ತ್ವಜ್ಞಾನವೂ ಬಾಳಗೊಡಿಸುವುದಿಲ್ಲ. ಅವುಗಳೊಡನೆ ಸಾಮರಸ್ಯದಿಂದ ಬಾಳತಕ್ಕ ಮತಧರ್ಮವು ಶುದ್ಧ ಅಧ್ಯಾತ್ಮಧರ್ಮ ಮಾತ್ರವೇ ಆಗುವುದು.

ಮೇಲೆ ವಿವರಿಸಿರುವ ಜಿಜ್ಞಾಸೆಯ ಪ್ರಕಾರಗಳು ಪ್ರತಿಯೊಂದೂ ಭಿನ್ನ ಭಿನ್ನವಾಗಿಯೇ ನಡೆಯುತ್ತಾಬರುತ್ತಿವೆ ಎಂದು ಭಾವಿಸಬಾರದು. ಪ್ರತಿಯೊಂದು ಘಟ್ಟದಲ್ಲೂ ಇವುಗಳು ನಾನಾ ವಿಧವಾಗಿ ಸಂಕಲಿತವಾಗಿ ಹೊರಪಡುತ್ತಿರುವುವು. ಕೇವಲ ಮನೋಭಾವನೆಯಲ್ಲಿ ಮಾತ್ರ ಇವುಗಳ ಭೇದವನ್ನೂ ಪರಂಪರೆಯನ್ನೂ ಪಙ್ಕ್ತಿಯನ್ನೂ ಪ್ರತ್ಯೇಕಿಸಲು ಸಾಧ್ಯ. ಆ ಕಾರ್ಯವನ್ನು ಈ ಲೇಖನದಲ್ಲಿ ನಮ್ಮ ಅಭಿಪ್ರಾಯಾನುಸಾರ ಮಾಡಲಾಗಿದೆ.

★★★★★

# ವೈಖಾನಸರ ಧ್ಯೇಯ

**ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು**

ಇಲ್ಲಿ ''ವೈಖಾನಸಸ್ಮಾರ್ತಸೂತ್ರ''ವೆಂಬ ಗ್ರಂಥವನ್ನು ಅನುಸರಿಸಿ ''ವೈಖಾನಸರ ಧ್ಯೇಯವು ದ್ವೈತವೆ, ಅದ್ವೈತವೆ?'' ಎಂಬುದನ್ನು ವಿಚಾರಮಾಡಿದೆ. ಗ್ರಂಥವು ಕೃಷ್ಣಯಜುರ್ವೇದದ ವೈಖಾನಸರಿಗಾಗಿ ಬರೆದ ಗೃಹ್ಯಸೂತ್ರವಾಗಿ ರುತ್ತದೆ. ಅದಕ್ಕೆ ಅನುಗುಣವಾದ ಮಂತ್ರಪಾಠದ ಪುಸ್ತಕವು ಕುಂಭಕೋಣದಲ್ಲಿ ಗ್ರಂಥಾಕ್ಷರದಲ್ಲಿ ಅಚ್ಚಾಗಿರುವಂತೆಯೂ ಮೈಸೂರು ಒರಿಯಂಟೆಲ್ ಲೈಬ್ರರಿಯ 1359ನೆ ನಂ, ನಲ್ಲಿ ''**ವೈಖಾನಸೀಯಮಂತ್ರಸಂಹಿತೆ**''ಯೆಂಬ ಹೆಸರಿನಿಂದ ಕೈಪ್ರತಿಯಲ್ಲಿರುವದಾಗಿಯೂ ತಿಳಿಯಬರುತ್ತದೆ. ಕೃಷ್ಣರಾಜಪೇಟೆ ತಾಲ್ಲೂಕಿನ ಬಂಡಿಹೊಳೆಯಲ್ಲಿರುವ ಶ್ರೀಯುತ ಅರ್ಚಕ ಬಿ. ರಂಗಸ್ವಾಮಿ - ಎಂಬವರು ಅಚ್ಚುಮಾಡಿಸಿರುವ ಪೂಜಾಪದ್ಧತಿಯ ಗ್ರಂಥದಲ್ಲಿ ಈ ಸೂತ್ರದ (4-12) ಒಂದು ಭಾಗವು ಕಂಡುಬರುತ್ತದೆ.

ನಮ್ಮ ಸೀಮೆಯಲ್ಲಿ ವೈಖಾನಸರೆಂದು ಪ್ರಸಿದ್ಧಿಯಾಗಿರುವವರು ಶ್ರೀವೈಷ್ಣವರಂತೆ ಮೂರು ನಾಮವನ್ನು ಧರಿಸಿರುವದರಿಂದ ಇವರ ಸಿದ್ಧಾಂತವು ಶ್ರೀವೈಷ್ಣವರ ವಿಶಿಷ್ಟಾದ್ವೈತವನ್ನೂ ಹೋಲಬಹುದೆಂದು ಶಂಕಿಸುವದಕ್ಕೆ ಕಾರಣವಾಗಿದೆ. ಆದರೆ ಮೂಲಸೂತ್ರದಲ್ಲಿ ನೋಡಿದರೆ ವಿಶಿಷ್ಟಾದ್ವೈತದ ಗಂಧವೂ

ಅದರಲ್ಲಿ ಕಂಡುಬರುವುದಿಲ್ಲ. 'ಸ್ಥೂಲಚಿದಚಿತ್', 'ಸೂಕ್ಷ್ಮಚಿದಚಿತ್', 'ಪ್ರಕಾರ', 'ಶೇಷ' ಮುಂತಾದ ಶಬ್ದಗಳೊಂದೂ ಅಲ್ಲಿ ಕಂಡುಬರುವದಿಲ್ಲ. ಇಷ್ಟೇ ಅಲ್ಲ, **''ನಾರಾಯಣಂ ವಿಷ್ಣುಂ ಪುರುಷಂ ಸತ್ಯಮಚ್ಯುತಮನಿರುದ್ಧಂ ಶ್ರಿಯಂ ಮಹೀಮಿತಿ ನಾಮ್ನಾವಾಹ್ಯ''** (4-11) ಮುಂತಾಗಿ ಆರಾಧ್ಯದೈವವನ್ನು ಹೆಸರೆತ್ತಿ ಹೇಳುವಾಗ ಶ್ರೀರಾಮಾನುಜಾಚಾರ್ಯರು ಹೇಳುವ 'ವಾಸುದೇವ', 'ಸಂಕರ್ಷಣ', 'ಪ್ರದ್ಯುಮ್ನ', 'ಅನಿರುದ್ಧ'- ಎಂಬ ಹೆಸರುಗಳನ್ನು ಸೂತ್ರದಲ್ಲಿ ಎಲ್ಲಿಯೂ ಪ್ರಮುಖವಾಗಿ ಎತ್ತಿರುವದಿಲ್ಲ.

ಇದೇ ಕಾರಣದಿಂದ ವೈಖಾನಸರನ್ನು ಶ್ರೀಶಂಕರಾಚಾರ್ಯರು ಹೇಳಿರುವ ಭಾಗವತರಲ್ಲಿಯೂ ಅಡಕಮಾಡುವದಕ್ಕೆ ಬರುವಹಾಗಿಲ್ಲ. ಭಾಗವತರು ಹೇಳುವ ನಿರ್ವಿಶೇಷವಾಸುದೇವನ ಹೆಸರಾಗಲಿ ಅವರು ಭಗವಂತನ ಆರಾಧನೆಗೆಂದು ಉಪಯೋಗಿಸಿರುವ ಅಭಿಗಮನ ಉಪಾದಾನ, ಇಜ್ಯಾ, ಸ್ವಾಧ್ಯಾಯ, ಯೋಗ- ಎಂಬ ಪಾರಿಭಾಷಿಕಪದಗಳಾಗಲಿ ಇಲ್ಲಿ ಕಂಡುಬರುವದೇ ಇಲ್ಲ.

ಆದರೂ ವೈಖಾನಸರು ಅದ್ವೈತದಲ್ಲಿ ಕೊನೆಗಾಣುವ ಆರಾಧನಕ್ರಮವನ್ನನುಸರಿಸುವ ವೈಷ್ಣವರೆಂದು ಹೇಳುವದಕ್ಕೆ ಸಾಕಾದಷ್ಟು ಕಾರಣಗಳು ಈ ಗ್ರಂಥದಲ್ಲಿಯೇ ಕಂಡುಬರುತ್ತವೆ.

**ವಿಷ್ಣೋರ್ನಿತ್ಯಾರ್ಚಾ ಸರ್ವದೇವಾರ್ಚನಾ ಭವತಿ ।**
**ಅಗ್ನಿರ್ವೈ ದೇವಾನಾಮವಮೋ ವಿಷ್ಣುಃ ಪರಮಃ**
**ತದನ್ತರೇಣ ಸರ್ವಾ ಅನ್ಯಾ ದೇವತಾ ಇತಿ ಬ್ರಾಹ್ಮಣಮ್ ॥ (4-11)**

ವಿಷ್ಣುವನ್ನು ನಿತ್ಯವೂ ಅರ್ಚಿಸುವದು ಸರ್ವದೇವತೆಗಳನ್ನೂ ಅರ್ಚಿಸಿದಂತೆ ಆಗುವದು; ಅಗ್ನಿಯೇ ದೇವತೆಗಳಲ್ಲಿ ಕಡಿಮೆ. ವಿಷ್ಣುವೇ ಹೆಚ್ಚಿನವನು. ಈ ನಡುವೆ ಮಿಕ್ಕ ಎಲ್ಲಾ ದೇವತೆಗಳೂ ಇರುವರು ಎಂದು ಬ್ರಾಹ್ಮಣವಿದೆ - ಎಂಬ ವಾಕ್ಯದಲ್ಲಿ ಇವರು ವಿಷ್ಣುಪಾರಮ್ಯವಾದಿಗಳೆಂದು ಸ್ಪಷ್ಟಪಡುತ್ತದೆ.

**ತಸ್ಮಾದ್ಗೃಹೇ ಪರಮಂ ವಿಷ್ಣುಂ ಪ್ರತಿಷ್ಠಾಪ್ಯ**
**ಸಾಯಂಪ್ರಾತರ್ಹೋಮಾನ್ತೇಽರ್ಚಯತಿ ।**
**ಷಡಙ್ಗುಲಾದಹೀನಂ ತದ್ರೂಪಂ ಕಲ್ಪಯಿತ್ವಾ**
**ಪೂರ್ವಪಕ್ಷೇ ಪುಣ್ಯೇ ನಕ್ಷತ್ರೇ ಪ್ರತಿಷ್ಠಾಂ ಕುರ್ಯಾತ್ ॥ (4-11)**

ಎಂಬ ವಾಕ್ಯದಲ್ಲಿ ಮನೆಯಲ್ಲಿಕೂಡ ಆರಂಗುಲಗಳಿಗೆ ಕಡಿಮೆಯಿಲ್ಲದ ಪ್ರತಿಮೆಯನ್ನು ಪ್ರತಿಷ್ಠೆಮಾಡಿಕೊಳ್ಳಬೇಕು - ಎಂದು ಹೇಳಿದಂತೆ ತೋರುತ್ತದೆ. ಇದು ಹೇಗಾದರೂ ಇರಲಿ. ಪ್ರತಿಮಾರ್ಚನೆಯನ್ನು ಸ್ಪಷ್ಟವಾಗಿ ತಿಳಿಸುವ ಗೃಹ್ಯಸೂತ್ರವಿದೆಂಬುದು ಸ್ಪಷ್ಟವಾಗಿದೆ.

ಸಂನ್ಯಾಸಿಗಳ ವಿವರವನ್ನು ಮಾಡುವಾಗ -

**ಪರಮಹಂಸಾ ನಾಮ ವೃಕ್ಷೈಕಮೂಲೇ ಶೂನ್ಯಾಗಾರೇ**
**ಶ್ಮಶಾನೇ ವಾ ವಾಸಿನಃ ಸಾಂಬರಾ ದಿಗಂಬರಾ ವಾ ನ ಶೇಷಾಂ**
**ಧರ್ಮಾಧರ್ಮೌ ಸತ್ಯಾನೃತೇ ಶುದ್ಧ್ಯಶುದ್ಧ್ಯಾದಿದ್ವೈತಮ್ ॥ (8-9)**

ಎಂದು ಪರಮಹಂಸಾಶ್ರಮವನ್ನು ವರ್ಣಿಸಿರುವದು ದ್ವೈತಿಗಳಿಗೆ ಅಷ್ಟು ಒಪ್ಪಾಗಿರುವದಿಲ್ಲ. ಇದೇ ಪ್ರಸಂಗದಲ್ಲಿ ಸಂನ್ಯಾಸಿಗಳ ಪ್ರವೃತ್ತಿ, ನಿವೃತ್ತಿ- ಎಂಬ ಎರಡು ಬಗೆಯ ಸಾಧನಕ್ರಮವನ್ನು ಹೇಳುವಾಗ -

**ನಿವೃತ್ತಿರ್ನಾಮ ಲೋಕಾನಾಮನಿತ್ಯತ್ವಂ ಜ್ಞಾತ್ವಾ ಪರಮಾತ್ಮನೋಽನ್ಯನ್ನಕಿಂಚಿದಸ್ತೀತಿ ಸಂಸಾರಮನಾದೃತ್ಯ ಛಿತ್ವಾ ಭಾರ್ಯಾಮಯಂ ಪಾಶಂ ಜಿತೇಂದ್ರಿಯೋ ಭೂತ್ವಾ ಶರೀರಂ ವಿಹಾಯ ಕ್ಷೇತ್ರಜ್ಞಪರಮಾತ್ಮನೋರ್ಯೋಗಂ ಕೃತ್ವಾತೀಂದ್ರಿಯಂ ಸರ್ವಜಗದ್ಬೀಜಮಶೇಷವಿಶೇಷಂ ನಿತ್ಯಾನಂದಮಮೃತ ರಸಪಾನವತ್ಸರ್ವದಾ ತೃಪ್ತಿಕರಂ ಪರಂಜ್ಯೋತಿಃಪ್ರವೇಶಕಮಿತಿ ವಿಜ್ಞಾಯತೇ ॥**

ನಿವೃತ್ತಿಯೆಂದರೆ ಲೋಕಗಳೆಲ್ಲವೂ ಅನಿತ್ಯವೆಂದು ಅರಿತು ಪರಮಾತ್ಮನಿಗಿಂತ ಬೇರೆಯಾವದೂ ಇಲ್ಲವೆಂದು ಸಂಸಾರದಲ್ಲಿ ಅಸಡ್ಡೆಯಿಂದ ಹೆಂಡತಿಯೆಂಬ ಪಾಶವನ್ನು ಕಿತ್ತುಹಾಕಿ ಜಿತೇಂದ್ರಿಯನಾಗಿ ಶರೀರವನ್ನು ಬಿಟ್ಟು ಕ್ಷೇತ್ರಜ್ಞಪರಮಾತ್ಮರ ಸೇರುವೆಯನ್ನು ಮಾಡಿಕೊಂಡು ಅತೀಂದ್ರಿಯವಾಗಿಯೂ ಸರ್ವಜಗತ್ತಿಗೂ ಮೂಲವಾಗಿಯೂ ಯಾವ ವಿಶೇಷವೂ ಉಳಿಯದ್ದಾಗಿಯೂ, ನಿತ್ಯಾನಂದವಾಗಿಯೂ ಅಮೃತರಸವನ್ನು ಕುಡಿದಂತೆ ಯಾವಾಗಲೂ ತೃಪ್ತಿಯನ್ನುಂಟು ಮಾಡುವದಾಗಿಯೂ ಇರುವ ಪರಂಜ್ಯೋತಿಯನ್ನು ಹೊಗಿಸುವ ಸಾಧನವು ಎಂದು ಗೊತ್ತಾಗುತ್ತದೆ - ಎಂದು ಹೇಳಿರುವದರಿಂದ ನಿರ್ವಿಶೇಷಪರಮಾತ್ಮನಲ್ಲಿ ಸೇರುವದೇ ಮೋಕ್ಷವೆಂಬ ಅದ್ವೈತವಾದಿಗಳಿವರು ಎಂಬುದು ಸ್ಪಷ್ಟವಾಗಿರುತ್ತದೆ.

**ನಿವೃತ್ತ್ಯಾಚಾರಭೇದಾದ್ಧಿ ಯೋಗಿನಸ್ತ್ರಿವಿಧಾ ಭವನ್ತಿ ॥ (8-10)**

ನಿವೃತ್ತಿಯ ಆಚಾರವು ಬೇರೆಬೇರೆಯಾಗಿರುವದರಿಂದ ಯೋಗಿಗಳು ಮೂರು ಬಗೆಯಾಗಿರುತ್ತಾರೆ – ಎಂದು ಸಾರಂಗ, ಏಕಾರ್ಯ, ವಿಸರಗ – ಎಂಬ ಮೂರು ಬಗೆಯ ಸಾಧಕರನ್ನು ಇಲ್ಲಿ ವಿವರಿಸಿರುತ್ತದೆ.

**ತತ್ರ ಸಾರಂಗಾಸ್ತೇಷ್ವನಿರೋಧಕಾ ಅಹಂ ವಿಷ್ಣುರಿತಿ ಧ್ಯಾತ್ವಾ ಯೇ ಚರನ್ತಿ ।**
**ತೇಷಾಂ ಪ್ರಾಣಾಯಾಮಾದಯೋ ನ ಸನ್ತಿ ॥ (8-10)**

ಸಾರಂಗರಲ್ಲಿ ಅನಿರೋಧಕರು ಎಂಬವರು ನಾನೇ ವಿಷ್ಣುವೆಂದು ಧ್ಯಾನಮಾಡುವವರು; ಅವರಿಗೆ ಪ್ರಾಣಾಯಾಮವೇ ಮುಂತಾದ ಸಾಧನಗಳು ಇರುವದಿಲ್ಲ.

**ಅಥೈಕಾರ್ಯಾಃ ಯೇಽದೂರಗಾಸ್ತೇಷಾಮಯಂ ಧರ್ಮಃ ।**
**ಕ್ಷೇತ್ರಜ್ಞಪರಮಾತ್ಮನೋರ್ಯೋಗಂ ಕ್ಷೇತ್ರಜ್ಞದ್ವಾರೇಣ**
**ಕಾರಯಿತ್ವಾ ತತ್ರೈವ ಸಮಸ್ತವಿನಾಶಂ ಧ್ಯಾತ್ವಾಕಾಶವತ್ಸತ್ತಾ**
**ಮಾತ್ರೋಽಹಮಿತಿ ಧ್ಯಾಯನ್ತಿ ॥**

ಏಕಾರ್ಯರಲ್ಲಿ ಅದೂರಗರೆಂಬುವರ ಧರ್ಮವಿದು; ಜೀವ, ಪರಮಾತ್ಮ – ಇಬ್ಬರ ಯೋಗವನ್ನು ಜೀವನಮೂಲಕವಾಗಿ ಮಾಡಿಕೊಂಡು ಆ ಆತ್ಮನಲ್ಲಿಯೇ ಸಮಸ್ತವನ್ನೂ ಲಯವಾದಂತೆ ಧ್ಯಾನಿಸಿ ಆಕಾಶದಂತೆ ಬರಿಯ ಇರವಿನ ರೂಪದಲ್ಲಿರುವವನು ನಾನು ಎಂದು ಅವರು ಧ್ಯಾನಿಸುತ್ತಾರೆ.

**ಸಂಭಕ್ತಾನಾಮ ಬ್ರಹ್ಮಣಃ ಸರ್ವವ್ಯಾಪಕತ್ವಾದ್ವ್ಯುಕ್ತಮಯುಕ್ತಂ**
**ಯೋಽಸೌ ಪರಮಾತ್ಮಾ ತತ್ಸರ್ವಂ ವ್ಯಾಪ್ಯಾಕಾಶವತ್ತಿಷ್ಠತಿ ।**
**ತಸ್ಮಾದ್ಬ್ರಹ್ಮಣೋಽನ್ಯನ್ನ ಕುತ್ರಚಿದಾತ್ಮಾನಂ ಪ್ರತಿಪದ್ಯತೇಽಸೌ॥**

ಸಂಭಕ್ತರೆಂಬವರ ಮತದಲ್ಲಿ ಪರಮಾತ್ಮನೇ ಆಕಾಶದಂತೆ ಎಲ್ಲವನ್ನೂ ವ್ಯಾಪಿಸಿಕೊಂಡಿರುತ್ತಾನೆ; ಆದ್ದರಿಂದ ಅವನನ್ನು ಬಿಟ್ಟು ಯಾವದೊಂದೂ ಸ್ವತಂತ್ರವಾಗಿರುವದಿಲ್ಲ. ಈ ವಾಕ್ಯಗಳನ್ನು ನೋಡಿದರೆ ಯೋಗದಿಂದ ಪರಮಾತ್ಮನಲ್ಲಿ ಐಕ್ಯವನ್ನು ಹೊಂದಬೇಕೆಂದು ಹೇಳುವದು ವೈಖಾಸನರ ಪಕ್ಷವೆಂದು ಸ್ಪಷ್ಟವಾಗುತ್ತದೆ. ಈ ವಿಷಯದಲ್ಲಿ ಇದು ಭಾಗವತಮತವನ್ನೇ ಹೋಲುತ್ತದೆಯೆಂದು ಹೇಳಬಹುದು.

ಪರಮಾತ್ಮನೇ ಜೀವರೂಪದಿಂದ ನಮ್ಮಲ್ಲಿ ಪ್ರವೇಶಿಸಿರುತ್ತಾನೆಂದೂ ಅಜ್ಞಾನದಿಂದ ಉಂಟಾಗಿರುವ ಜೀವಭಾವವನ್ನು ಕಳೆದುಕೊಂಡರೆ ನಾವು ಪರಮಾತ್ಮಸ್ವರೂಪರೇ ಆಗಿರುವೆವೆಂದೂ ಹೇಳುವ ವೀರಾದ್ವೈತಿಗಳ ಪಕ್ಷವನ್ನು ವೈಖಾಸನರು ಒಪ್ಪಿರುವದಿಲ್ಲ.

**ಏಕೇ ಪರಮಾತ್ಮಸಂಯೋಗಮೇವನೇಚ್ಛಂತಿ ಹೃದಿಸ್ಥ ಏವ ಪುರುಷ ಇತಿ ವದಂತಿ ।**

ಕೆಲವರು ಪರಮಾತ್ಮನನ್ನು ಸೇರಬೇಕಾದದ್ದೇ ಇಲ್ಲವೆನ್ನುತ್ತಾರೆ, ಹೃದಯದಲ್ಲಿಯೇ ಪುರುಷನಿದಾನೆಂದು ಹೇಳುತ್ತಾರೆ – ಎಂದು ಆ ಪಕ್ಷವನ್ನು 'ವಿಸರಗ' ಎಂಬ ತಪ್ಪುಮಾರ್ಗದವರಲ್ಲಿ ಸೇರಿಸಿ,

**ತಸ್ಮಿನ್ನೇವ ಜನ್ಮನಿ ಮೋಕ್ಷಕಾಂಕ್ಷಿಣಾ ವಿಸರಗಪಕ್ಷೋ ನಾನುಷ್ಠೇಯಃ ॥**

ಈ ಜನ್ಮದಲ್ಲಿಯೇ ಮೋಕ್ಷವಾಗಬೇಕೆನ್ನುವವನು ವಿಸರಗ ಪಕ್ಷವನ್ನು ಹಿಡಿಯಬಾರದು – ಎಂದು ಎಚ್ಚರಿಕೆಕೊಟ್ಟಿರುತ್ತಾರೆ. ಆದ್ದರಿಂದ ಜ್ಞಾನಧ್ಯಾನಾದಿಗಳ ಬಲದಿಂದ ಕಲ್ಮಷವನ್ನು ತೊಳೆದುಕೊಂಡು ಪರಮಾತ್ಮನಲ್ಲಿ ಐಕ್ಯ ವಾಗಬೇಕೆಂಬ **ಔಡುಲೋಮಿಪಕ್ಷ**(ಬ್ರ.ಸೂ.1-4-21)ವನ್ನು ಈ ವೈಖಾನಸರು ಅನುಸರಿಸುತ್ತಾರೆಂದು ಹೇಳಬಹುದಾಗಿದೆ.

★★★★★

# ದ್ವೈತಸಿದ್ಧಾಂತ

# ಶ್ರೀಮನ್ಮಧ್ವಸಿದ್ಧಾಂತ

**– ಶ್ರೀ ಶ್ರೀ ಜ್ಞಾನಾನಂದೇಂದ್ರಸರಸ್ವತೀಸ್ವಾಮಿಗಳು**

ಶ್ರೀಮಧ್ವಾಚಾರ್ಯರವರು ರಚಿಸಿರುವ ಮೂವತ್ತೇಳು ಗ್ರಂಥಗಳಲ್ಲಿ ಪ್ರತಿಪಾದಿಸಿರುವ ಸಿದ್ಧಾಂತಕ್ಕೆ ಮಧ್ವಸಿದ್ಧಾಂತವೆಂದು ಹೆಸರು. ಇವರು ದ್ವೈತಸಿದ್ಧಾಂತವನ್ನೇ ಬೋಧಿಸಿರುತ್ತಾರಾದರೂ ಉಳಿದ ದ್ವೈತಸಿದ್ಧಾಂತಗಳಿಗೂ ಇವರ ಮತಕ್ಕೂ ಇರುವ ತಾರತಮ್ಯವನ್ನು ಸ್ಫುಟವಾಗಿ ತೋರಿಸುವದಕ್ಕಾಗಿ ಈ ದರ್ಶನವನ್ನು ಮಧ್ವಮತ, ಪೂರ್ಣಪ್ರಜ್ಞದರ್ಶನ – ಎಂದು ಮುಂತಾಗಿ ಈ ಆಚಾರ್ಯರ ಹೆಸರಿನ ಸಂಬಂಧವನ್ನಿಟ್ಟೇ ಕರೆಯುವದು ವಾಡಿಕೆಯಾಗಿದೆ.

ಶ್ರೀಮನ್ಮಧ್ವಮತದಲ್ಲಿ ತತ್ತ್ವವನ್ನು ಸ್ವತಂತ್ರ, ಅಸ್ವತಂತ್ರ – ಎಂದು ಎರಡು ದೊಡ್ಡ ಭಾಗವಾಗಿ ವಿಂಗಡಿಸಿರುತ್ತದೆ. ಶ್ರೀಹರಿಯೇ ಸ್ವತಂತ್ರನು, ಮಿಕ್ಕದ್ದೆಲ್ಲವೂ ಆತನ ಅಧೀನವು. ಆತನು ಸತ್ಯಜ್ಞಾನಾನಂದಸ್ವರೂಪನು. ಆತನಿಗೆ ಮಾತ್ರ ಸ್ವತಂತ್ರವಾದ ಇರುವಿಕೆ; ದ್ರವ್ಯ, ಕರ್ಮ, ಕಾಲ – ಮುಂತಾದವುಗಳಿಗೆ ಆತನ ಅನುಗ್ರಹದಿಂದಲೇ ಇರುವಿಕೆ. ಆತನೊಬ್ಬನು ಮಾತ್ರ ನಿತ್ಯಜ್ಞಾನವುಳ್ಳವನು; ಚೇತನರಾದ ಜೀವರಿಗೆ ಇರುವಷ್ಟು ತಿಳಿವು ಆತನ ಅನುಗ್ರಹದಿಂದ. ಆತನಿಗಿರುವ ಅನಂತಸುಖವು ನಿತ್ಯಸಿದ್ಧವಾಗಿರುವದು; ಮಿಕ್ಕವರಿಗೆ ದೊರೆಯುತ್ತಿರುವಷ್ಟು ವಿಷಯಸುಖವೂ ಮುಕ್ತಿಸುಖವೂ ಆತನ ಇಚ್ಛೆಯಿಂದಲೇ ದೊರೆಯುವವು. ಆತನು ನಿರಾಕಾರನು; ಎಂದರೆ ಅನಂತ ಆಕಾರಗಳುಳ್ಳವನು, ಇಂಥದ್ದೊಂದೆಂಬ ಗೊತ್ತಾದ ಆಕಾರವಿರುವವನಲ್ಲ. ಮತ್ಸ್ಯಾದ್ಯವತಾರಗಳನ್ನು ಮಾಡಿದಾಗ ಸಾಮಾನ್ಯರ ಕಣ್ಣಿಗೆ ಭೌತಿಕದೇಹವುಳ್ಳವನಾಗಿ ಕಂಡರೂ ಅವನು ಆಗಲೂ ಸಚ್ಚಿದಾನಂದಸ್ವರೂಪನಾಗಿಯೇ ಇರುತ್ತಾನೆ. ಹೀಗೆ ಸರ್ವಥಾ ಸ್ವತಂತ್ರನಾಗಿ, ಸರ್ವಜ್ಞನಾಗಿ, ಸರ್ವಶಕ್ತನಾಗಿ, ಸಕಲಗುಣಪರಿಪೂರ್ಣನಾಗಿ, ಸರ್ವದೋಷವರ್ಜಿತನಾಗಿರುವ ಶ್ರೀಹರಿಗೆ ಮಹಾಲಕ್ಷ್ಮಿ, ಬ್ರಹ್ಮ, ರುದ್ರ– ಮುಂತಾದವರು ಯಾರೂ ಸಮರಲ್ಲ; ಆತನಿಗಿಂತ ಅಧಿಕರಾಗಿರುವವರಂತೂ ಇಲ್ಲವೇ ಇಲ್ಲ.

ಹೀಗೆ ಸರ್ವೋತ್ತಮನಾದ ಶ್ರೀಹರಿಗೆ ಚಿತ್ಪ್ರಕೃತಿಯೆಂದೂ ಜಡಪ್ರಕೃತಿಯೆಂದೂ ಎರಡು ಪ್ರಕೃತಿಗಳಿರುವವು. ಚೇತನಪ್ರಕೃತಿಗೆ ಲಕ್ಷ್ಮಿಯೆಂದು ಹೆಸರು. ಲಕ್ಷ್ಮಿಯು ಸರ್ವವ್ಯಾಪಿನಿಯಾಗಿಯೂ ನಿತ್ಯಳಾಗಿಯೂ ಇರುವಳು. ಈಕೆಯೇ ಶ್ರೀ, ಭೂ, ದುರ್ಗಾ – ಎಂಬ ಹೆಸರುಗಳಿಂದ ಸತ್ತ್ವರಜಸ್ತಮೋಗುಣಗಳಿಗೆ ಅಭಿಮಾನದೇವತೆಯಾಗಿರುವಳು. ಈಕೆಯು ಸರ್ವಜೀವರಲ್ಲಿಯೂ ಇದ್ದುಕೊಂಡು ಅವರು ಪ್ರಾಣವನ್ನು ಧರಿಸುವದಕ್ಕೆ ಸಹಾಯಕಳಾಗಿರುತ್ತಾಳೆ. ವಿಷ್ಣುವಿನ ಜಡಪ್ರಕೃತಿಯು ತ್ರಿಗುಣಾತ್ಮಕವಾಗಿರುವದು. ಇದೂ ಚಿತ್ಪ್ರಕೃತಿಯಂತೆಯೇ ನಿತ್ಯವಾಗಿದ್ದರೂ ಇದಕ್ಕೆ ರೂಪಾಂತರವನ್ನು ಪಡೆಯುವದೆಂಬ ಮಾರ್ಪಾಡು ಉಂಟು. ಈ ಎರಡು ಪ್ರಕೃತಿಗಳೂ ಶ್ರೀಹರಿಯ ಅಧೀನದಲ್ಲಿಯೇ ಇರುವವು; ಈ ಪ್ರಕೃತಿಗಳ ಮೂಲಕವಾಗಿ ಆತನು ತನ್ನ ಸಂಕಲ್ಪದಿಂದಲೇ ಜಗತ್ತಿನ ಸೃಷ್ಟಿ, ಸ್ಥಿತಿ, ಸಂಹಾರ, ನಿಯಮ, ಅಜ್ಞಾನ, ಜ್ಞಾನ, ಬಂಧ, ಮೋಕ್ಷ, ಸುಖ, ದುಃಖ, ತೋರಿಕೊಳ್ಳದಂತೆ ಮೇಲ್ಮುಸುಕು, ತೋರಿಕೊಳ್ಳುವಂತೆ ಬೆಳಕು – ಇವುಗಳಿಗೆಲ್ಲ ಕಾರಣನಾಗಿರುವನು.

ಶ್ರೀಹರಿಯು ಜಗತ್ತಿನ ಸೃಷ್ಟಿಗೆ ನಿಮಿತ್ತಕಾರಣನೇ ಹೊರತು ಉಪಾದಾನಕಾರಣನಲ್ಲ; ಎಂದರೆ ಜಗತ್ತನ್ನು ಸೃಷ್ಟಿಮಾಡುವದಕ್ಕೆ ಆತನು ಸಂಕಲ್ಪವನ್ನು ಮಾಡುವನೇ ಹೊರತು ತಾನೇ ಜಗತ್ತಿಗೆ ಮಾರ್ಪಡುವದಿಲ್ಲ. ಜಗತ್ತಿಗೆ ಆತನ ಜಡಪ್ರಕೃತ್ತಿಯೇ ಉಪಾದಾನಕಾರಣವು. ಶ್ರೀಹರಿಯ ಸಂಕಲ್ಪದಂತೆ ಈ ಪ್ರಕೃತಿಯು ಮಹತ್ತು, ಅಹಂಕಾರ, ಬುದ್ಧಿ, ಮನಸ್ಸು, ಇಂದ್ರಿಯಗಳು, ತನ್ಮಾತ್ರೆಗಳು, ಪಂಚಭೂತಗಳು – ಎಂಬ ಬೇರೆ ಬೇರೆಯ ತತ್ತ್ವಗಳ ರೂಪನ್ನು ಪಡೆಯುವದು. ಪರಮಾತ್ಮನೇ ಜಗದ್ರೂಪನಾಗಿ ಪರಿಣಮಿಸುವನೆಂದು ಕೆಲವರು ಹೇಳುತ್ತಾರೆ; ಆದರೆ ಆತನು ನಿರ್ವಿಕಾರನಾದ್ದರಿಂದ ಅವರ ಮತವನ್ನು ಒಪ್ಪುವದಕ್ಕಿಲ್ಲವಾಗಿದೆ. ನಿತ್ಯವಾದ ಪ್ರಕೃತಿಯೂ ಅನಿತ್ಯವಾದ ಅದರ ವಿಕಾರಗಳೂ ಎರಡೂ ಆ ಭಗವಂತನ ಅಧೀನದಲ್ಲಿಯೇ ಇರುವವು. ಪ್ರಕೃತಿಯೊಂದೇ ಅಲ್ಲದೆ ಅವ್ಯಾಕೃತಾಕಾಶ, ಕಾಲ, ವೇದ – ಈ ಅಚೇತನಪದಾರ್ಥಗಳೂ ಸಕಲ ಚೇತನರೂ ನಿತ್ಯರೆನಿಸುವರು. ನಿತ್ಯವಾಗಲಿ, ಅನಿತ್ಯವಾಗಲಿ, ಚೇತನಾಚೇತನಾತ್ಮಕವಾದ ಸಕಲ ಪ್ರಪಂಚವೂ ಶ್ರೀಹರಿಯ ಸಂಕಲ್ಪಕ್ಕೆ ಒಳಪಟ್ಟೇ ಇರುವದರಿಂದ ಆತನೇ ಜಗತ್ತಿನ ಜನ್ಮಾಗಳಿಗೆ ಕಾರಣನೆಂದೂ ಯಾರಿಗೂ ಅಧೀನವಾಗಿರದ ಸ್ವತಂತ್ರತತ್ತ್ವವೆಂದೂ ಎನಿಸಿಕೊಳ್ಳುವನು.

ಶ್ರೀಹರಿಯ ಸತ್ಯಸಂಕಲ್ಪದಿಂದ, ಸತ್ಯವಾದ ಪ್ರಕೃತಿಗಳ ಮೂಲಕ ಸೃಷ್ಟವಾಗಿರುವ ಈ ಜಗತ್ತೂ ಸತ್ಯವೇ ಆಗಿರುತ್ತದೆ. ಈ ಜಗತ್ತು ಸತ್ಯವಲ್ಲವೆಂದು ಕೆಲವರು ಹೇಳುತ್ತಾರೆ. ಈ ಅಭಿಪ್ರಾಯವು ಸರಿಯಲ್ಲ. ಏಕೆಂದರೆ ಪ್ರತ್ಯಕ್ಷಪ್ರಮಾಣದಿಂದಲೂ ಅನುಮಾನಪ್ರಮಾಣದಿಂದಲೂ ಈ ಜಗತ್ತು ಸತ್ಯವೆಂದು ತಿಳಿಯಬರುತ್ತದೆ. ಈ ಪ್ರತ್ಯಕ್ಷವು ಭ್ರಾಂತಿಯೆನ್ನುವದಕ್ಕೂ ಇಲ್ಲ; ಏಕೆಂದರೆ ಜಗತ್ತು ಅರ್ಥಕ್ರಿಯೆಯನ್ನು ಉಂಟುಮಾಡುತ್ತಿರುವದು. ಭ್ರಾಂತಿಯಿಂದ ಕಾಣುವ ವಸ್ತುಗಳು ತೋರುವ ಕಾಲದಲ್ಲಿ ಅವುಗಳಿಂದ ಅರ್ಥಕ್ರಿಯೆಯುಂಟಾಗುವದಿಲ್ಲ; ಎಂದರೆ ಅವುಗಳ ಯೋಗ್ಯತೆಗೆ ತಕ್ಕ ಕೆಲಸಕ್ಕೆ ಉಪಯೋಗವಾಗುವದಿಲ್ಲ. ಉದಾಹರಣೆಗೆ, ಕಲ್ಪಿತವಾದ ಹೋಳಿಗೆಯನ್ನು ತಿಂದು ಹಸಿವನ್ನು ಅಡಗಿಸಿಕೊಳ್ಳುವದಕ್ಕೆ ಯಾರಿಗೂ ಆಗುವದಿಲ್ಲ. ಆದರೆ ಈ ಜಗತ್ತು ಹಾಗಲ್ಲ. ಇದರಲ್ಲಿರುವ ಪ್ರತಿಯೊಂದು ವಸ್ತುವೂ ತನ್ನತನ್ನ ಯೋಗ್ಯತೆಗೆ ತಕ್ಕಂತೆ ಕೆಲಸಕ್ಕೆ ಬರುವದು; ಆದ್ದರಿಂದ ಇದು ಸತ್ಯವೇ. ಪ್ರತ್ಯಕ್ಷಸಿದ್ಧವಾದ ವಸ್ತುವಿಗೆ ಬಾಧೆಯಾದ ಹೊರತು ಅದನ್ನು ಯಾರೂ ಭ್ರಾಂತಿಯೆನ್ನುವದಿಲ್ಲ. ಪ್ರಪಂಚವು ತೋರದೆ ಹೋಗಿ. 'ನಾವು ಸುಮ್ಮಸುಮ್ಮನೆ ಪ್ರಪಂಚವೆಂದು ತಪ್ಪಾಗಿ ತಿಳಿದುಕೊಂಡೆವು' ಎಂದು ಯಾರಿಗೂ ಜ್ಞಾನವಾಗುವದಿಲ್ಲ. ಆದ್ದರಿಂದಲೂ ಜಗತ್ತು ಸತ್ಯವೇ. ಇದಲ್ಲದೆ ಈ ಜಗತ್ತು ಭ್ರಾಂತಿಕಲ್ಪಿತವೆಂದಾದರೆ ಕಲ್ಪಿತವಲ್ಲದೆ ಸತ್ಯವಾಗಿರುವ ಮತ್ತೊಂದು ಪ್ರಪಂಚವಿದೆಯೆಂದು ಒಪ್ಪಿಕೊಳ್ಳಬೇಕಾಗುವದು; ಏಕೆಂದರೆ ಕಲ್ಪನೆಮಾಡಿಕೊಳ್ಳುವದಕ್ಕೆ ಆಧಾರವಾಗಿ ಮತ್ತೊಂದು ಸತ್ಯವಸ್ತುವು ಯಾವಾಗಲೂ ಇರುವದು. ಆದ್ದರಿಂದ ಜಗತ್ತು ಸತ್ಯವಾಗಿ ಕಾಣುವದರಿಂದ ಅದನ್ನು ಸತ್ಯವೆಂದು ಭಾವಿಸುವದು ಸರಿಯೇ ಹೊರತು, ಯಾವ ಯುಕ್ತಿಯೂ ಇಲ್ಲದೆ ಇದು ಮಿಥ್ಯೆಯೆಂದು ಹೇಳುವದು ನ್ಯಾಯವಲ್ಲ. ಶಾಸ್ತ್ರದಲ್ಲಿಯೂ ಜಗತ್ತು ಸತ್ಯವೆಂದೇ ಹೇಳಿದೆ. ಆದ್ದರಿಂದ ಜಗತ್ತು ಸತ್ಯವೇ.

ಜಗತ್ತಿನಲ್ಲಿ ಭಾವ, ಅಭಾವ– ಎಂದು ಎರಡು ಬಗೆಯ ಪದಾರ್ಥಗಳಿರುವವು. ಅಭಾವವು ಪ್ರಾಗಭಾವ, (ವಸ್ತುವು ಹುಟ್ಟುವದಕ್ಕೆ ಮುಂಚಿನ ಅಭಾವ), ಪ್ರಧ್ವಂಸಾಭಾವ (ಹಾಳಾದ ಮೇಲಿನ ಅಭಾವ), ಸದಾಭಾವ (ಎಂದೆಂದಿಗೂ ಇಲ್ಲದ್ದು) – ಎಂದು ಮೂರು ವಿಧ. ಭಾವಪದಾರ್ಥಗಳು ಚೇತನ, ಜಡ – ಎಂದು ಎರಡು ಬಗೆ. ಜೀವ, ಈಶ್ವರ– ಇಬ್ಬರೂ ಚೇತನರೇ ಆದರೂ ಜೀವನು ಕಿಂಚಿಜ್ಜ್ಞನು, ಈಶ್ವರನು ಸರ್ವಜ್ಞನು; ಜೀವನು ಅಪೂರ್ಣನು, ಈಶ್ವರನು ಪೂರ್ಣನು; ಜೀವನು ಅಸ್ವತಂತ್ರನು, ಈಶ್ವರನು ಸ್ವತಂತ್ರನು. ಹೀಗೆ ಇವರಿಬ್ಬರಿಗೂ

ಭೇದವಿದೆ. ಚೇತನರು ಅನೇಕರು, ಇವರೆಲ್ಲರೂ ಮಹಾವಿಷ್ಣುವಿಗೆ ಅಧೀನರೆ. ಆದರೆ ಲಕ್ಷ್ಮಿಯು ನಿತ್ಯಮುಕ್ತಳು, ಮಿಕ್ಕವರೆಲ್ಲರೂ ಸಂಸಾರಸಂಬಂಧವುಳ್ಳ ಜೀವರು. ಜೀವರೆಲ್ಲ ಸಂಸಾರಿಗಳೆಂಬ ವಿಷಯದಲ್ಲಿ ಸಮಾನರಾದರೂ ಅವರಲ್ಲಿಯೂ ಮುಂದೆ ತಿಳಿಸುವ ರೀತಿಯಲ್ಲಿ ಎಷ್ಟೋ ತಾರತಮ್ಯಗಳು ಇರುವವು. ಆದ್ದರಿಂದ ಜೀವರುಗಳಿಗೂ ಒಬ್ಬರೊಬ್ಬರಿಗೆ ಭೇದವುಂಟು. ಚೇತನವಲ್ಲವೆಂಬ ವಿಷಯದಲ್ಲಿಯೂ ಪರಮಾತ್ಮನ ಅಧೀನದಲ್ಲಿರುವವೆಂಬ ವಿಷಯದಲ್ಲಿಯೂ ಜಡವಸ್ತುಗಳೆಲ್ಲವೂ ಒಂದನ್ನೊಂದು ಹೋಲುವವಾದರೂ ಇವುಗಳೊಳಗೂ ಎಷ್ಟೋ ತಾರತಮ್ಯವಿರುವದು. ಉದಾಹರಣೆಗೆ ಕೆಲವು ನಿತ್ಯ, ಕೆಲವು ಅನಿತ್ಯ, ಕೆಲವು ನಿತ್ಯಾನಿತ್ಯ. ಜೀವಕ್ಕೂ ಜಡಕ್ಕೂ ಮತ್ತು ಈಶ್ವರನಿಗೂ ಜಡಕ್ಕೂ ಭೇದವಂತೂ ಸ್ಪಷ್ಟವಾಗಿಯೇ ಇದೆ. ಈ ಐದು ಬಗೆಯ ಭೇದಗಳೂ ಪರಮಾರ್ಥವಾಗಿವೆ; ಇತರ ವಾದಿಗಳು ಹೇಳುವಂತೆ ಉಪಾಧಿಯಿಂದಲಾಗಲಿ ಅಜ್ಞಾನದಿಂದಲಾಗಲಿ ಭೇದವು ಆಗಿರುವದಿಲ್ಲ, ಭೇದವೆಂಬುದು ಧರ್ಮಿಯ ಸ್ವರೂಪವೇ ಆಗಿರುವದರಿಂದ ಬರಿಯ ಭೇದವನ್ನು ಯಾರೂ ಕಂಡಿಲ್ಲವೆಂಬ ಕುತರ್ಕಕ್ಕೆ ಅವಕಾಶವಿರುವದಿಲ್ಲ.

ಲಕ್ಷ್ಮಿಯೊಬ್ಬಳನ್ನು ಬಿಟ್ಟರೆ ಮಿಕ್ಕ ಪರತಂತ್ರಚೇತನರೆಲ್ಲ ಜೀವರೆನಿಸುವರೆಂದು ಮೇಲೆಯೇ ತಿಳಿಸಿದೆಯಷ್ಟೆ. ಈ ಜೀವರಲ್ಲಿ ಕೆಲವರು ಮುಕ್ತರು, ಕೆಲವರು ಸಂಸಾರಿಗಳು, ಮುಕ್ತರಲ್ಲ; ಕೆಲವರು ದೇವತೆಗಳು, ಮತ್ತೆ ಕೆಲವರು ಋಷಿಗಳು, ಬೇರೆ ಕೆಲವರು ಪಿತೃಗಳು, ಇನ್ನೂ ಕೆಲವರು ಚಕ್ರವರ್ತಿಗಳು, ಉಳಿದ ಕೆಲವರು ಸಾಮಾನ್ಯಮನುಷ್ಯರು. ಸಂಸಾರಿಗಳಲ್ಲಿಯೂ ಕೆಲವರಿಗೆ ಮುಕ್ತಿಯನ್ನು ಹೊಂದುವ ಯೋಗ್ಯತೆ ಇರುವದು, ಮತ್ತೆ ಕೆಲವರಿಗೆ ಅಂಧಂತಮಸ್ಸೆಂಬ ನಿತ್ಯವಾದ ಕೇವಲ ದುಃಖಮಯವಾದ ಅಧೋಗತಿಯನ್ನು ಪಡೆಯುವ ಯೋಗ್ಯತೆಯಿರುವದು, ಇನ್ನೂ ಕೆಲವರು ಎಂದೆಂದಿಗೂ ಈ ಸಂಸಾರದಲ್ಲಿಯೇ ಇರತಕ್ಕವರಾಗಿರುವರು. ಹೀಗೆಲ್ಲ ಇರುವದಕ್ಕೆ ಅವರವರ ಸ್ವರೂಪ ಯೋಗ್ಯತೆಯೇ ಕಾರಣವು. ಹೇಗೆಂದರೆ ಯಾವ ಜೀವರು ಪರಮಾತ್ಮನಂತೆ ಸಚ್ಚಿದಾನಂದಸ್ವರೂಪರಾಗಿರುವರೋ ಅವರು ಮುಕ್ತಿಗೆ ತಕ್ಕವರು; ಯಾರು ದುಃಖಸ್ವರೂಪರಾಗಿರುವರೋ ಅವರು ಅಂಧಂತಮಸ್ಸಿಗೆ ತಕ್ಕವರು; ಯಾರು ಸುಖದುಃಖಸ್ವರೂಪರಾಗಿರುವರೋ ಅವರು ನಿತ್ಯಸಂಸಾರಕ್ಕೆ ತಕ್ಕವರು. ಜೀವರೆಲ್ಲರೂ ಅಣುಗಳು, ಜ್ಞಾನಸ್ವರೂಪರು, ಜ್ಞಾನವೆಂಬ ಗುಣಗಳುಳ್ಳವರು; ಇವರು ಕರ್ತೃಸ್ವರೂಪರು ಎಂದರೆ ಕರ್ಮವನ್ನು ಮಾಡಿ ಅದಕ್ಕೆ ತಕ್ಕ ಫಲವನ್ನೂ ಲೋಕಾಂತರವನ್ನೂ ಅನುಭವಿಸುವವರು.

ಜೀವರ ಸಚ್ಚಿದಾನಂದ ಸ್ವರೂಪವೂ ಕರ್ತೃತ್ವವೂ ಕರ್ಮಕ್ಕೆ ತಕ್ಕ ಫಲವನ್ನು ಅವರು ಅನುಭವಿಸುವದೆಂಬುದೂ ಪರಮಾತ್ಮನ ಸಂಕಲ್ಪಕ್ಕೇ ಒಳಪಟ್ಟಿರುವದು. ಜೀವರನ್ನು ಪರಮಾತ್ಮನ ಅಂಶವೆಂದು ಶಾಸ್ತ್ರಗಳಲ್ಲಿ ಹೇಳಿದೆಯಾದರೂ ಮತ್ಸ್ಯಾದಿಗಳಂತೆ ಇವರು ಪರಮಾತ್ಮನ ಅಂಶಗಳಲ್ಲ; ಮತ್ಸ್ಯಾದಿಗಳು ಪರಮಾತ್ಮನ ಸ್ವರೂಪಾಂಶ, ಜೀವರು ಭಿನ್ನಾಂಶ. ಸ್ವಲ್ಪಮಟ್ಟಿಗೆ, ಎಂದರೆ ಸಚ್ಚಿದಾನಂದಸ್ವರೂಪರಾಗಿರುವರೆಂಬಷ್ಟು ಮಟ್ಟಿಗೆ ಹೋಲಿಕೆ ಇರುವದರಿಂದ ಇವರನ್ನೂ ಅಂಶರೆಂದು ಕರೆದಿದೆ.

ಜೀವರ ನಿಜವಾದ ಸ್ವರೂಪದಲ್ಲಿ ತಾರತಮ್ಯವಿರುವದರಿಂದಲೇ ಅವರಲ್ಲಿ ಜ್ಞಾನ, ಕ್ರಿಯೆ, ಆನಂದ, ಬಲ – ಮುಂತಾದವುಗಳಲ್ಲಿ ಹೆಚ್ಚು ಕಡಿಮೆಯು ಕಂಡುಬರುವದು. ಸಂಸಾರದ ಸ್ಥಿತಿಯಲ್ಲಿ ಜೀವರ ನಿಜವಾದ ಸ್ವರೂಪದ ಮೇಲೆ ಪ್ರಕೃತಿಯ ಮುಸುಕು ಮುಚ್ಚಿಕೊಂಡಿರುವದರಿಂದ ಅದು ವ್ಯಕ್ತವಾಗಿ ತೋರಿಕೊಳ್ಳುವದಿಲ್ಲ. ಸ್ಥೂಲದೇಹ, ಲಿಂಗದೇಹ, ಅಜ್ಞಾನ, ಕಾಮ, ಕರ್ಮ – ಇವುಗಳು ಅನಾದಿಯಾಗಿ ಜೀವರನ್ನು ಪರಮಾತ್ಮನ ಇಚ್ಛೆಯಿಂದ ಮುಸುಕಿಕೊಂಡಿರುವವು; ಅವುಗಳಿಂದಾಗಿರುವ ಬಂಧವು ಆ ಶ್ರೀಹರಿಯ ಇಚ್ಛೆಯಿಂದಲೇ ತೊಲಗಬೇಕಾಗಿದೆ. ಆದ್ದರಿಂದ ಭಗವಂತನ ಪ್ರಸಾದವನ್ನು ಪಡೆಯುವದಕ್ಕೆ ಎಲ್ಲರೂ ಪ್ರಯತ್ನಿಸಬೇಕು. ಭಗವಂತನ ಸ್ವರೂಪವನ್ನು ತಿಳಿದು ಆತನಲ್ಲಿ ಅನನ್ಯವಾದ ಭಕ್ತಿಯನ್ನು ಬೆಳೆಯಿಸಿಕೊಂಡು ಆತನ ಪ್ರಸಾದದಿಂದ ಮುಕ್ತಿಯನ್ನು ಪಡೆಯಲು ಎಲ್ಲಾ ವರ್ಣದವರಿಗೂ ಎಲ್ಲಾ ಆಶ್ರಮದವರಿಗೂ ಅಧಿಕಾರವುಂಟು. ಹೀಗಿದ್ದರೂ ಕೆಲವರಿಗೆ ಭಗವಂತನಲ್ಲಿ ಭಕ್ತಿಯೇ ಇರುವದಕ್ಕೂ ಕೆಲವರಿಗೆ ಆತನಲ್ಲಿ ದ್ವೇಷವೇ ಇರುವದಕ್ಕೂ ಅವರವರ ಸ್ವರೂಪಯೋಗ್ಯತೆಯೇ ಕಾರಣವು. ಈ ಯೋಗ್ಯತೆಯ ತಾರತಮ್ಯಕ್ಕೆ ತಕ್ಕಂತೆ ಭಕ್ತಿದ್ವೇಷಗಳ ತಾರತಮ್ಯವೂ ಮುಕ್ತಿಯಲ್ಲಿ ಆನಂದತಾರತಮ್ಯವೂ ತಮಸ್ಸಿನಲ್ಲಿ ದುಃಖತಾರತಮ್ಯವೂ ಆಗುವವು.

ಭಕ್ತಿಯಿಂದ ಪರಮಾತ್ಮನ ಅನುಗ್ರಹವನ್ನು ಪಡೆದುಕೊಂಡವರು ಸಂಚಿತ ಕರ್ಮವನ್ನು ನಾಶಗೊಳಿಸಿಕೊಂಡು ಪ್ರಾರಬ್ಧಕರ್ಮದ ಫಲವನ್ನು ಅನುಭವಿಸಿದ ಮೇಲೆ ಸುಷುಮ್ನಾನಾಡಿಯಿಂದ ಹೊರಟು ಅರ್ಚಿರಾದಿಮಾರ್ಗದಿಂದ ತಮ್ಮ ತಮ್ಮ ಯೋಗ್ಯತಾನುಸಾರವಾಗಿ ವೈಕುಂಠ, ಅನಂತಾಸನ, ಶ್ವೇತದ್ವೀಪ – ಮುಂತಾದ ಪರಮಾತ್ಮನ ಸ್ಥಾನಗಳನ್ನು ತಲುಪಿ ಅಲ್ಲಿ ಶಾಶ್ವತವಾಗಿ ತಮ್ಮ ಸ್ವರೂಪಸುಖವನ್ನು ಅನುಭವಿಸುತ್ತಿರುವರು. ಮುಕ್ತರು ಕರ್ಮವನ್ನೂ ಭಕ್ತಿಯನ್ನೂ ಮಾಡುತ್ತಲೇ

ಇರುವರು. ಅವರಿಗೆ ಬೇಕಾದದ್ದೆಲ್ಲ ಸಂಕಲ್ಪಮಾತ್ರದಿಂದ ದೊರೆಯುವದಾದ್ದರಿಂದ ಕರ್ಮಭಕ್ತಿಗಳಿಂದ ಅವರು ಹೊಸದಾಗಿ ಪಡೆದುಕೊಳ್ಳಬೇಕಾದುದೇನೂ ಇರುವದಿಲ್ಲ. ಆದರೂ ಕರ್ಮಭಕ್ತಿಗಳನ್ನು ಮಾಡುವದೇ ಅವರಿಗೊಂದು ಆನಂದವಾಗಿರುವದು. ಮುಕ್ತರಲ್ಲಿ ಯಾರಿಗೂ ಶ್ರೀಹರಿಗೆ ಸಮವಾದ ಜ್ಞಾನವಾಗಲಿ, ಆನಂದವಾಗಲಿ, ಜಗತ್ತಿನ ಸೃಷ್ಟ್ಯಾದಿಗಳನ್ನು ಮಾಡುವ ಸ್ವಾತಂತ್ರ್ಯವಾಗಲಿ ಎಂದಿಗೂ ಬರುವದಿಲ್ಲ; ಅವರು ತಮ್ಮತಮ್ಮ ಯೋಗ್ಯತೆಗೆ ಮೀರಿದ ಆನಂದವನ್ನು ಬಯಸುವದೂ ಇಲ್ಲ.

ಪ್ರತ್ಯಕ್ಷ, ಅನುಮಾನ, ಶಬ್ದ – ಎಂಬ ಮೂರು ಪ್ರಮಾಣಗಳನ್ನು ಈ ಮತದಲ್ಲಿ ಒಪ್ಪಿಕೊಂಡಿರುತ್ತದೆ. ವಿಷ್ಣುವೇ ಸರ್ವೋತ್ತಮನೆನ್ನುವದಕ್ಕೂ ಆತನೇ ಸ್ವತಂತ್ರನೆನ್ನುವದಕ್ಕೂ ಆತನು ಜೀವಜಗತ್ತುಗಳೆರಡಕ್ಕಿಂತಲೂ ಬೇರೆಯಾಗಿ ರುವನೆನ್ನುವದಕ್ಕೂ ಶ್ರುತಿಯೇ ಪ್ರಮಾಣವು. ಯುಕ್ತಿಯನ್ನೂ ಈ ಶ್ರುತಿಗೆ ಸಹಾಯವಾಗಿ ಉಪಯೋಗಿಸಬಹುದು. ''ಇದೆಲ್ಲವೂ ಬ್ರಹ್ಮವು'' ಎಂಬುದೇ ಮುಂತಾದ ಶ್ರುತಿಗಳಲ್ಲಿ ಬ್ರಹ್ಮಕ್ಕೂ ಜಗತ್ತಿಗೂ ಐಕ್ಯವನ್ನು ಹೇಳಿರುವಂತೆ ತೋರುವದು; ಆದರೆ ''ಇದೆಲ್ಲವೂ ಬ್ರಹ್ಮವು'' ಎಂಬ ವಚನಕ್ಕೆ ಈ ಜಗತ್ತೆಲ್ಲವೂ ಬ್ರಹ್ಮವೆಂದು ಅರ್ಥವಲ್ಲ. ಸರ್ವಗುಣಗಳೂ ಬ್ರಹ್ಮದಲ್ಲಿರುವದರಿಂದಲೂ ಸಕಲ ಜಗತ್ತಿನ ಸೃಷ್ಟ್ಯಾದಿಗಳನ್ನು ಮಾಡುವ ಸ್ವಾತಂತ್ರ್ಯವು ಬ್ರಹ್ಮದಲ್ಲಿಯೇ ಇರುವದರಿಂದಲೂ ಸರ್ವವೂ ಬ್ರಹ್ಮವೆಂದು ಹೇಳಿದೆ. ಇದರಂತೆ 'ಅದೇ ನೀನು', 'ನಾನು ಬ್ರಹ್ಮವು' ಮುಂತಾದ ವಚನಗಳು ಜೀವಬ್ರಹ್ಮೈಕ್ಯವನ್ನು ಹೇಳುವಂತೆ ತೋರಿದರೂ ಅವಕ್ಕೆ ಅದು ತಾತ್ಪರ್ಯವಲ್ಲ; ಬ್ರಹ್ಮ ಗುಣಗಳೇ ಜೀವನಲ್ಲಿ ಸಾರವಾಗಿರುವದರಿಂದ ಜೀವನನ್ನು ಬ್ರಹ್ಮವೆಂದು ಈ ಶ್ರುತಿಗಳು ಹೇಳುತ್ತವೆ. ವೇದದಲ್ಲಿರುವ ಪ್ರತಿಯೊಂದು ವಾಕ್ಯಕ್ಕೂ ಮೂರು ಮೂರು ಅರ್ಥವಿರುವದು. ಅವುಗಳಲ್ಲಿ ಒಂದು ಯಾವಾಗಲೂ ವಿಷ್ಣುವನ್ನೇ ಬೋಧಿಸುವದು. ಶ್ರೀಹರಿಗೆ ವಿಷ್ಣು, ನಾರಾಯಣ, ವಾಸುದೇವ, ಬ್ರಹ್ಮ, ಈಶ್ವರ, ಪರಮಾತ್ಮ, ಭಗವಂತ – ಮುಂತಾದ ಅನೇಕ ಹೆಸರುಗಳಿರುವದಲ್ಲದೆ, ಸಕಲಶಬ್ದಗಳಿಗೂ ಪರಮಮುಖ್ಯ ವೃತ್ತಿಯಿಂದ ಆತನೇ ವಾಚ್ಯನಾಗಿರುವನೆಂದು ಶ್ರುತಿಯು ಹೇಳುವದು. ಹೀಗೆ ಸರ್ವೋತ್ತಮನಾದ ವಿಷ್ಣುವನ್ನು ತಿಳಿಯುವದಕ್ಕೆ ವೇದವೇ ಪ್ರಮಾಣವೆಂಬುದು ಮಾತ್ರವಲ್ಲದೆ ವೇದವೆಲ್ಲವೂ ವಿಷ್ಣುವನ್ನೇ ಬೋಧಿಸುತ್ತದೆಯೆಂದೂ ತಿಳಿಯಬೇಕು.

★★★★★

# ಮಾಂಡೂಕ್ಯೋಪನಿಷತ್ತಿನ ತಾತ್ಪರ್ಯವು

## (ಶ್ರೀ ಮಧ್ವಾಚಾರ್ಯರವರ ಭಾಷ್ಯಾನುಸಾರ)

ಮಾಂಡೂಕ್ಯೋಪನಿಷತ್ತಿಗೆ ಶ್ರೀ ಶಂಕರಚಾರ್ಯರವರ ಭಾಷ್ಯವನ್ನೂ ಶ್ರೀ ಗೌಡಪಾದರವರ ಕಾರಿಕೆಯನ್ನೂ ಬರೆದು ಆಮೇಲೆ ಶ್ರೀ ಮಧ್ವಾಚಾರ್ಯರವರ ಭಾಷ್ಯಾನುಸಾರವಾಗಿ ಇದರರ್ಥವನ್ನು ಬರೆಯಬೇಕೆಂದು ಮೊದಲು ಸಂಕಲ್ಪಿಸಿದ್ದೆವು; ಈಚೆಗೆ ''ಮಧ್ವಸಿದ್ಧಾಂತ ಪ್ರಕಾಶಿನಿ'' ಯಲ್ಲಿ ಇದೇ ಉಪನಿಷತ್ತು ಚೈತ್ರಮಾಸದ ಸಂಚಿಕೆಯಿಂದ ಪ್ರಕಟಿತವಾಗುತ್ತಿರುವುದೆಂದು ತಿಳಿಯಬಂದದ್ದರಿಂದ ಈ ಕೆಲಸವನ್ನು ನಿಲ್ಲಿಸಿರುತ್ತದೆ. ವಿಸ್ತಾರವಾಗಿ ತಿಳಿಯಬೇಕೆಂಬ ವಾಚಕರು ಆ ಪತ್ರಿಕೆಯನ್ನು ನೋಡಬೇಕು. ಇಲ್ಲಿ ಉಪನಿಷದರ್ಥವನ್ನು ಸಂಗ್ರಹವಾಗಿ ತಿಳಿಸುತ್ತೇವೆ.

ಆನಂದತೀರ್ಥರ (ಮಧ್ವಾಚಾರ್ಯರ) ಮತದಲ್ಲಿ ಉಪನಿಷತ್ತಿಗೆ ''**ಮಾಂಡೂಕೋಪನಿಷತ್ತು**'' ಎಂದು ಹೆಸರು. ಮಂಡೂಕರೂಪಿಯಾದ ವರಣನು ನಾಲ್ಕು ರೂಪದಲ್ಲಿರುವ ನಾರಾಯಣವನ್ನು ಇಲ್ಲಿ ಸ್ತೋತ್ರಮಾಡಿರುತ್ತಾನೆ. ಆಗಮಪ್ರಕರಣವೆಂದು ಪ್ರಸಿದ್ಧವಾಗಿರುವ ಶ್ರೀಗೌಡಪಾದರ ಕಾರಿಕೆಯು ಈ ಮತದಲ್ಲಿ ಬ್ರಹ್ಮದೃಷ್ಟವಾದ ಮಂತ್ರವೆಂದು ವ್ಯವಹರಿಸಲ್ಪಡುತ್ತದೆ. ಆದ್ದರಿಂದ ''**ಸಮುನಿರ್ನೇತರೋ ಜನಃ**'' ಎಂಬವರೆಗಿನ ಗ್ರಂಥವು ಒಟ್ಟು ಮಾಂಡೂಕೋಪನಿಷತ್ತೆನಿಸುವುದು. ಕಾರಿಕೆಯ ಪಾಠವು ಶಾಂಕರ ಭಾಷ್ಯದ ಸಹಿತವಾಗಿ ಆಗಮಪ್ರಕರಣದಲ್ಲಿ ಇರುವಂತೆಯೇ ಇದೆ. ಅರ್ಥಮಾತ್ರ ಬೇರೆಯಾಗಿರುವದು.

ಉಪನಿಷತ್ತಿನಲ್ಲಿ ನಾಲ್ಕು ಖಂಡಗಳಿರುವವೆಂದು ಆನಂದತೀರ್ಥರ ಮತವು. ''**ಓಮಿತ್ಯೇದಕ್ಷರಂ**'' ಮೊದಲುಮಾಡಿಕೊಂಡು ''ಆಪ್ತಕಾಮಸ್ಯ ಕಾ ಸ್ಪೃಹಾ'' ಎಂಬವರೆಗೆ ಮೊದಲನೆಯ ಖಂಡವು. ''**ನಾಂತಃಪ್ರಜ್ಞಂ ನ ಬಹಿಃಪ್ರಜ್ಞಮ್**'' ಇದು ಮೊದಲಾಗಿ ''**ಜ್ಞಾತೇ ದ್ವೈತಂ ನ ವಿದ್ಯತೇ**'' ಎಂಬವರೆಗೆ ಎರಡನೆಯ ಖಂಡವು. ''**ಸೋಽಯಮಾತ್ಮಾಧ್ಯಕ್ಷರಮ್**'' ಎಂಬುದರಿಂದ ''**ನಾಮಾತ್ರೇ ವಿದ್ಯತೇ ಗತಿಃ**'' ಎಂಬ ವರೆಗೆ ಮೂರನೆಯ

ಖಂಡವು ''**ಅಮಾತ್ರಶ್ಚತುರ್ಥೋ**'' ಎಂಬುದು ಮೊದಲು ಮಾಡಿಕೊಂಡು ''**ಸಮುನಿರ್ನೇತರೋ ಜನಃ**'' ಎನ್ನುವವರೆಗೆ ನಾಲ್ಕನೆಯ ಖಂಡವು.

ಆಚಾರ್ಯರವರು ತಮ್ಮ ಭಾಷ್ಯವನ್ನು ತಾತ್ಪರ್ಯಸೂಚನೆಮಾಡುತ್ತಾ ಪ್ರಮಾಣಗ್ರಂಥಗಳನ್ನೂ ಅಲ್ಲಲ್ಲಿ ಹೇಳುತ್ತಾ ಹೋಗಿರುವರು. ಈ ಉಪನಿಷದ್ಭಾಷ್ಯಕ್ಕೆ ಇವರು ಪ್ರಮಾಣವಾಗಿ ಉದಾಹರಿಸುವ ವಾಕ್ಯಗಳು, ಈ ಗ್ರಂಥಗಳಿಂದ ತೆಗೆದುಕೊಂಡವುಗಳಾಗಿರುತ್ತವೆ. ಬೃಹತ್ಸಂಹಿತೆ, ನೈರ್ಗುಣ್ಯ, ಹರಿವಂಶ, ಮಹಾಯೋಗ, ವಾರಾಹ, ಪ್ರಕಾಶಿಕೆ, ಮಾರ್ಕಂಡೇಯ, ಬ್ರಹ್ಮತರ್ಕ, ಗಾರುಡ, ಬ್ರಹ್ಮಾಂಡ, ಮಾಹಾತ್ಮ್ಯ, ಸಂಕಲ್ಪ, ಪ್ರತ್ಯಾಹಾರ, ಕೌಷಾರವಶ್ರುತಿ, ಮಹೋಪನಿಷತ್ತು, ಪ್ರತ್ಯಯ, ಆತ್ಮಸಂಹಿತೆ, ಈ ಗ್ರಂಥಗಳಲ್ಲಿ ಆಗಾಗ್ಯೆ ತಮಗೆ ಬೇಕಾದಷ್ಟು ವಾಕ್ಯಗಳನ್ನು ತೆಗೆದುಕೊಂಡಿರುತ್ತಾರೆ. ಇವುಗಳಲ್ಲನೇಕ ಗ್ರಂಥಗಳು ಸದ್ಯಕ್ಕೆ ಉಪಲಬ್ಧವಲ್ಲವಾದ್ದರಿಂದ ದ್ವೈತಕ್ಕೆ ಪ್ರಾಮಾಣ್ಯವನ್ನು ಒದಗಿಸಿರುವ ಎಷ್ಟೋ ಗ್ರಂಥಗಳು ಶೋಧಕರಿಗೆ ಇನ್ನೂ ಸಿಕ್ಕಿಲ್ಲವೆಂತ ಹೇಳಬೇಕಾಗಿದೆ. ಆಯಾ ಖಂಡದರ್ಥವನ್ನು **ಶ್ರೀನಿವಾಸತೀರ್ಥ**ರು ಸರಳವಾಗಿ ವಿವರಿಸಿರುತ್ತಾರೆ. ಇದರಿಂದ ಉಪನಿಷತ್ತಿನ ಒಟ್ಟರ್ಥವನ್ನು ತಿಳಿದುಕೊಳ್ಳುವದಕ್ಕೆ ಅನುಕೂಲವಾಗಿರುತ್ತದೆ.

**ಒಂದನೆಯ ಖಂಡ** – ಇಲ್ಲಿ ವಿಶ್ವ, ತೈಜಸ, ಪ್ರಾಜ್ಞ ಎಂಬ ಮೂರು ರೂಪಗಳಲ್ಲಿ ಭಗವಂತನನ್ನು ವರ್ಣಿಸಿರುತ್ತದೆ. ವಿಶ್ವಾದಿರೂಪನಾದ ಹರಿಯೇ ಭೋಕ್ತೃವೆಂದು ತಿಳಿಯುವದರಿಂದ ನಾನು ಭೋಕ್ತನು, ನನಗೆ ಇದು ಭೋಜ್ಯವು ಎಂದು ಅಭಿಮಾನಪಡುವದು ಹೋಗಿಬಿಡುವದು. ಈ ಪರಮಾತ್ಮನೆ ಎಲ್ಲಾ ಪ್ರಾಣಿಗಳ ಸೃಷ್ಟಿ, ಸ್ಥಿತಿ, ಲಯಕ್ಕೆ ಕಾರಣನಾಗಿರುವನು. ಈ ಪರಮಾತ್ಮನು ಜಗತ್ತಿಗೆ (ಗಡಿಗೆಗೆ ಮಣ್ಣು ಕಾರಣವಾಗಿರುವಂತೆ) ಉಪಾದಾನಕಾರಣನಲ್ಲ, (ಕುಂಬಾರನು ಗಡಿಗೆಗೆ ಕಾರಣನಾಗಿರುವಂತೆ) ನಿಮಿತ್ತ ಕಾರಣನೇ. ಆತನ ಇಚ್ಛಾಮಾತ್ರದಿಂದ ಸೃಷ್ಟಿಯಾಗುವದು, ಆತನಿಗೆ ಸೃಷ್ಟಿಯಿಂದ ಯಾವ ಸ್ವಪ್ರಯೋಜನವೂ ಇಲ್ಲ. ಪರರಿಗೆ ಪ್ರಯೋಜನವಾಗಲೆಂಬುದೇ ಆತನ ಸೃಷ್ಟಿಗೆ ಉದ್ದೇಶ. ಯೋಗ್ಯರಿಗೆ ತನ್ನ ಗುಣಗಳನ್ನು ತಿಳಿಸಿಕೊಡುವದಕ್ಕಾಗಿ ಆತನು ಸೃಷ್ಟಿಮಾಡುತ್ತಾನೆ. ಸೃಷ್ಟಿಯು ಪರಮೇಶ್ವರನ ವಿಸ್ತಾರವೆಂಬುದೂ ಸ್ವಪ್ನಮಾಯಗಳಂತೆ ಎಂಬುದೂ ಈಶ್ವರನು ತನ್ನ ಭೋಗಕ್ಕಾಗಿ ಅಥವಾ ಕ್ರೀಡೆಗಾಗಿ ಸೃಷ್ಟಿಮಾಡುತ್ತಾನೆಂಬುದೂ, ಸರಿಯಲ್ಲ.

**ಎರಡನೆಯ ಖಂಡ** – ಇಲ್ಲಿ ತುರೀಯ ವಿಚಾರವು ಬಂದಿರುವದು. ತುರೀಯ ಸ್ಥಾನವನ್ನು (ವಿಶ್ವಾದಿಗಳ ಸ್ಥಾನವನ್ನು ತಿಳಿಸಿದಂತೆ) ತಿಳಿಸಿಲ್ಲವಾದುದರಿಂದ, ನಾಸಿಕಾಮೂಲದಿಂದ ಹಿಡಿದು ಹನ್ನೆರಡಂಗುಲದ ಕೊನೆಯಲ್ಲಿ ಮಸ್ತಕ ಮಧ್ಯದಲ್ಲಿ ಆತನ ಸ್ಥಾನವೆಂದು ತಿಳಿಯಬೇಕು. ಮಸ್ತಕದಿಂದಲೇ ಮೇಲೆ ಹನ್ನೆರಡಂಗುಲದ ಪ್ರಮಾಣದಲ್ಲಿ ಆಕಾಶದಲ್ಲಿರುತ್ತಾನೆಂದೂ ಕೆಲವರು ಹೇಳುತ್ತಾರೆ. ತುರೀಯನು ಸರ್ವವಿಧವಾದ ಬಂಧನಗಳಿಂದಲೂ ಬಿಡುಗಡೆಯಾಗುವ ಜ್ಞಾನವನ್ನು ಕೊಡುವನು. ಇವನು ಪ್ರಪಂಚೋಪಶಮನು ಎಂದರೆ ಗುಣಾದಿಗಳಿಂದ ವಿಸ್ಮೃತನೂ ಉತ್ಕೃಷ್ಟಾನಂದರೂಪನೂ ಆಗಿರುವನು; ಶಿವನು ಎಂದರೆ ದುಃಖವಿಲ್ಲದ ಸುಖಸ್ವರೂಪನು; ಅದ್ವೈತನು ಎಂದರೆ ಅನ್ಯಥಾಜ್ಞಾನಕ್ಕೆ ಕಾರಣವಲ್ಲದವನು. ಇಂಥ ನಾಲ್ಕನೆಯ ರೂಪಿನಲ್ಲಿರುವ ಪರಮಾತ್ಮನನ್ನು ವಿಶೇಷವಾಗಿ ಅರಿಯತಕ್ಕದ್ದು. ವಿಶ್ವತೈಜಸರು ಕಾರ್ಯಕಾರಣಬಂಧಕ್ಕೆ ಎಂದರೆ ಅವಿದ್ಯಾಭ್ರಮರೂಪವಾದ ಬಂಧಕ್ಕೆ ಹೇತುವಾಗಿರುವರು. ಪ್ರಾಜ್ಞನು ಮೂಲಾವಿದ್ಯಾರೂಪಕಾರಣಬಂಧ ಪ್ರದನು; ತುರೀಯನಾದರೋ ಯಾವ ಬಂಧಕ್ಕೂ ಕಾರಣನಲ್ಲ. ಭಗವಂತನನ್ನು ತಿಳಿಯದ್ದೇ ನಿದ್ರೆಯು; ನಾನು ನನ್ನದು ಎಂದು ತಿಳಿಯುವದೇ ಸ್ವಪ್ನವು; ವಿಷ್ಣುವಿನ ಅನಾದಿಯಾದ ಇಚ್ಛೆಗೆ ಅಧೀನವಾದ ಪ್ರಕೃತಿಯಿಂದ ನಿದ್ರೆ ಹೊಂದಿರುವ ಜೀವನಿಗೆ ಅದೇ ಈಶ್ವರನ ಇಚ್ಛೆಯಿಂದ ಸದ್ಗುರೂಪದೇಶವಾಗಿ ಯಾವಾಗ ಎಚ್ಚರವಾಗುವದೋ ಆಗ ಯಾವ ಅವಸ್ಥೆಗಳೂ ಇಲ್ಲದ ಭಗವಂತನನ್ನು ಅಪರೋಕ್ಷವಾಗಿ ಅರಿತುಕೊಳ್ಳುತ್ತಾನೆ. ನಾನು, ನನ್ನದು – ಎಂಬ ಪ್ರಪಂಚವು ಭಗವದಿಚ್ಛಾಧೀನವಾಗಿರುವದರಿಂದ ಜ್ಞಾನದಿಂದ ನಿವೃತ್ತಿಯಾಗುವದು. ಆಗ ಆನಂದವು ತೋರಿಕೊಳ್ಳುವದು, ಅದೇ ಮುಕ್ತಿಯು. ಹೀಗೆಂಬುದು ಈ ಖಂಡದ ತಾತ್ಪರ್ಯವು.

**ಮೂರನೆಯ ನಾಲ್ಕನೆಯ ಖಂಡ** – ಇವುಗಳಲ್ಲಿ ವಿಶ್ವ, ತೈಜಸ, ಪ್ರಾಜ್ಞ, ತುರೀಯ – ಇವರು ಕ್ರಮವಾಗಿ ಪ್ರಣವಾಂಶಗಳಾದ 'ಅಕಾರ, ಉಕಾರ, ಮಕಾರ, ನಾದ' – ಇವುಗಳಿಂದ ಪ್ರತಿಪಾದ್ಯರಾಗಿರುವರೆಂದು ಹೇಳಿರುತ್ತದೆ. ಮೂರನೆಯ ಖಂಡದಲ್ಲಿ ವಿಶ್ವಾದಿ ಮೂವರು ಅಕಾರಾದಿ ಪ್ರತಿಪಾದ್ಯರೆಂದು ಹೇಳಿದೆ. ವಿಶ್ವನ ಅಕಾರವಾಚ್ಯತ್ವವನ್ನು ತಿಳಿದರೆ ಎಲ್ಲಾ ಕಾಮುಗಳೂ ಪ್ರಾಪ್ತವಾಗುತ್ತವೆ. ವಿಶ್ವನು ಆ ಉಪಾಸಕನಿಗೆ ಮುಕ್ತಿಕಾರಣನಾಗುವನು; ತೈಜಸನ ಉಕಾರವಾಚ್ಯತ್ವವನ್ನು ತಿಳಿದರೆ ಮುಕ್ತಿಯನ್ನು ಪಡೆದು ನಿತ್ಯಜ್ಞಾನವುಳ್ಳವನಾಗುವನು, ಸರ್ವಮುಕ್ತರಿಗೂ

ಮಧ್ಯಸ್ಥನಾಗುವನು, ಇವನ ಮಕ್ಕಳೂ ಜ್ಞಾನಿಗಳಾಗುವರು; ಪ್ರಾಜ್ಞನ ಮಕಾರವಾಚ್ಯತ್ವವನ್ನು ತಿಳಿದರೆ ಪ್ರಪಂಚದಲ್ಲಿರುವ ವಸ್ತುಗಳೆಲ್ಲ ಇವನಿಗೆ ತಿಳಿಯುವವು; ಇವನ ಸಂಸಾರದ ದುಃಖಾದಿಗಳೂ ಲಘುವಾಗುತ್ತವೆ. ಇದಲ್ಲದೆ ಆಕಾರಾದಿಯನ್ನು ತಿಳಿದು ಉಪಾಸನೆ ಮಾಡಿದರೆ ವಿಶ್ವಾದಿಗಳನ್ನು ಪಡೆಯುತ್ತಾರೆ.

ಇದರಂತಯೇ ಪ್ರಣವಾಂಶನಾದದಿಂದ ಪ್ರತಿಪಾದ್ಯನಾದ ತುರೀಯನ ಉಪಾಸನೆಯಿಂದ ದೇಹಾದಿಗಳೇ ತಾನೆಂಬ ಅಭಿಮಾನವನ್ನು ಬಿಟ್ಟು ಪರಮಾತ್ಮನಾದ ತುರೀಯನ ಪ್ರಸಾದದಿಂದ ತುರೀಯಾತ್ಮನನ್ನೇ ಪ್ರವೇಶ ಮಾಡುತ್ತಾರೆ. ವಾಸುದೇವನೇ ಮೊದಲಾದ ಪೂರ್ವದ ಅವತಾರಗಳಂತೆ ಈಚೆಗೆ ಆಗಿ ರುವ ವಿಶ್ವಾದಿರೂಪವಾದ ಅವತಾರಗಳೂ ಪೂರ್ಣವೇ ಆಗಿರುವವು. ಅವತಾರಗಳಲ್ಲಿ ಯಾವ ಹೆಚ್ಚುಕಡಿಮೆಯೂ ಇರುವದಿಲ್ಲ. ವಿಶ್ವಾದಿಚತೂರೂಪನಾದ ಭಗವಂತನೇ ಸೃಷ್ಟ್ಯಾದಿಗಳನ್ನು ಮಾಡುವವನು. ಆದ್ದರಿಂದ ಅವಶ್ಯವಾಗಿ ಚತೂರೂಪನಾದ ಓಂಕಾರಪ್ರತಿಪಾದ್ಯನನ್ನು ಧ್ಯಾನಿಸತಕ್ಕದ್ದು.

ತುರೀಯಾತ್ಮನ ಉಪಾಸನೆಯಿಂದ ಆತನನ್ನೇ ಪ್ರವೇಶಿಸುತ್ತಾನೆಂದೂ ಉಪಾಸ್ಯೋಪಾಸಕರಿಗೆ ಸಾಮ್ಯವಿರುವದೆಂದೂ ಹೇಳಿದ್ದರಿಂದ ಸರ್ವಥಾ ಸಾಮ್ಯವನ್ನು ತಿಳಿಯಬಾರದೆಂಬುದಕ್ಕೆ ಆಚಾರ್ಯರು ಒಂದು ವಾಕ್ಯವನ್ನು ಕೊಟ್ಟಿರುವರು.

**ತಮೇವ ಪ್ರವಿಶೇಚ್ಛುದ್ಧರೂಪೀ ತತ್ಸದೃಶಾತ್ಮವಾನ್ ।**
**ಜ್ಞಾನಾನಂದೌ ಚ ಶಕ್ತಿಶ್ಚ ತಥಾಪಿ ನ ಸಮಾಃ ಕ್ವಚಿತ್ ।**
**ವಿಮುಕ್ತಸ್ಯಾಪಿ ಜೀವಸ್ಯ ಪಾರತಂತ್ರ್ಯಂ ಚ ನಿತ್ಯದಾ ॥**

ಎಂದರೆ ಶುದ್ಧರೂಪದಿಂದ ಆತನಿಗೆ ಸಮನಾಗಿ ಆತನನ್ನೇ ಪ್ರವೇಶಿಸುವನು. ಆದರೂ ಜ್ಞಾನ, ಆನಂದ, ಶಕ್ತಿ – ಇವು ಎಂದಿಗೂ ಇಬ್ಬರಿಗೂ ಸಮವಾಗುವದಿಲ್ಲ. ಜೀವನು ಮುಕ್ತನಾದರೂ ಅವನು ಯಾವಾಗಲೂ ಪರತಂತ್ರನೇ ಆಗಿರುವನು.

★★★★★

# ಕರ್ಮಬಂಧ

**- ಸಿ. ರಘುನಾಥಾಚಾರ್ಯರವರು**

ಈ ಲೋಕದಲ್ಲಿ ನಾನಾವಿಧರಾದ ಜೀವರುಗಳು ನಾನಾ ಆಕಾರಗಳನ್ನು ಸ್ವೀಕರಿಸಿ ಅನಾದಿಕರ್ಮದಿಂದ ಬದ್ಧರಾಗಿ ಕರ್ಮಕ್ಷಯವಾಗುವವರೆಗೂ ಚಿತ್ರವಿಚಿತ್ರವಾಗಿ ಈ ಸಂಸಾರಚಕ್ರದಲ್ಲಿ ಸುತ್ತುತ್ತಿರುವರು. ಒಂದು ಶರೀರದಲ್ಲಿರುವ ಒಬ್ಬ ಜೀವನು ಸಹಸ್ರಶಃ, ಲಕ್ಷಗಟ್ಟಲೆಯಾಗಿ, ಕೋಟ್ಯನುಕೋಟಿಯಾಗಿ, ಕರ್ಮಾನುಭವಮಾಡಲಿಕ್ಕೆ ಅರ್ಹವಾದ ಕಾರ್ಯಕಾರಣಗಳನ್ನು ಮಾಡುವನು. ಆದ್ದರಿಂದ ಕೇವಲ ಅನುಭವದಿಂದಲೇ ಸಮಸ್ತ ಕರ್ಮಗಳನ್ನೂ ನಾಶಮಾಡಿಕೊಳ್ಳಲು ಶಕ್ಯವಲ್ಲ. ಈ ಮನುಷ್ಯ ದೇಹವನ್ನು ಸ್ವೀಕರಿಸಿ ವಿಧಿನಿಷೇಧಗಳಿಗೆ ಬದ್ಧರೂ ಪಾಪಭೀರುಗಳೂ ಆದ ಬ್ರಹ್ಮಕ್ಷತ್ರಿಯವೈಶ್ಯಶೂದ್ರಾದಿಜಾತಿಯವರು ಸಹ ತಮ್ಮ ಬಂಧನಕ್ಕೆ ಕಾರಣಗಳಾದ ಕರ್ಮಗಳನ್ನು ಅಹೋರಾತ್ರಿಗಳಲ್ಲಿಯೂ ಮಾಡುತ್ತಿರುವರು. ಇವರು ಒಂದು ಅಹಸ್ಸಿನಲ್ಲಿ ಮಾಡುವ ಕರ್ಮದ ಶುಭಾಶುಭ ಫಲಗಳನ್ನು ಭೋಗಿಸಲು ಮುಂದೆ ಹತ್ತು ಜನ್ಮವನ್ನೆತ್ತಬೇಕೆನ್ನ ಬಹುದಾಗಿರುವಾಗ, ವಿಧಿಬದ್ಧರಲ್ಲದೆ ಸ್ವೇಚ್ಛೆಯಿಂದ ಕಾರ್ಯಮಾಡುವವರ ಪಾಡೇನು? ಸಾತ್ತ್ವಿಕಜೀವರೇ ಹೀಗೆ ಪ್ರಾಯಶಃ ಬಹುಕರ್ಮನಿಷ್ಠರಾಗಿರುವಲ್ಲಿ ಉಳಿದ ರಾಜಸತಾಮಸ ಜೀವರಕರ್ಮಗಳು ಭೋಗದಿಂದ ಕ್ಷಯವಾಗಲು ಸಾಧ್ಯವೆ? ಅಂತು ಹೀಗೆ ಈ ಮನುಷ್ಯನು ಜೀವಿಸಿರುವಾಗ ಇವನ ದೇಹವು ಬಿದ್ದುಹೋಗುವವರೆಗೂ ತಾನು ಮುಂದೆ ಅಸಂಖ್ಯಾತಜನ್ಮಗಳಲ್ಲಿ ಒಂದೇಸಮನೆ ಅನುಭವಿಸಿದರೂ ಸವೆಯಲಾರದಷ್ಟು ಕರ್ಮಪರ್ವತವನ್ನೇ ರಾಶಿಹಾಕಿಡುವನೆನ್ನಬಹುದು.

ಇವನು ಈ ಕರ್ಮಫಲಗಳನ್ನು ಭೋಗಿಸುವದಕ್ಕಾಗಿ ಸೂರ್ಯ ಚಂದ್ರರುಗಳಿರುವ ಪರ್ಯಂತವೂ ಬಗೆಬಗೆಯ ಸ್ಥಾವರಜಂಗಮಜೀವರುಗಳ ರೂಪದಲ್ಲಿ ಹುಟ್ಟಿ ಸಾಯುತ್ತಿರುವನು. ಅಲ್ಲಲ್ಲಿ ಕರ್ಮಶೇಷದಿಂದ ಕೂಡಿ ಆಯಾಕರ್ಮದ ಅನುಸಾರವಾಗಿ, ಕರ್ಮಬದ್ಧನಾಗಿ, ಸುಖದುಃಖಗಳನ್ನು ಅನುಭವಿಸುವನು.

ಮೊದಲು ತೃಣ, ಗುಲ್ಮ, ಬಳ್ಳಿ-ಮುಂತಾದ ರೂಪಗಳನ್ನು ತೆಗೆದುಕೊಳ್ಳುತ್ತಾನೆ. ಆಗ ಚಳಿ, ಗಾಳಿ, ಮಳೆ, ಬಿಸಿಲು- ಇವುಗಳ ಬಾಧೆಯನ್ನೂ; ಕತ್ತರಿಸಿಕೊಳ್ಳುವದು, ತುಂಡುತುಂಡುಮಾಡಿಸಿಕೊಳ್ಳವದು, ಕಡಿಸಿಕೊಳ್ಳುವದು, ಸೀಳಿಸಿಕೊಳ್ಳುವದು ಮುಂತಾದ ಪಡಬಾರದ ದುಃಖಗಳನ್ನೂ ಅನುಭವಿಸಿ ಅನಂತರ ಜಂಗಮಪ್ರಾಣಿಯಾಗಿ ಜನಿಸುವನು. ಆಗ ಕ್ರಿಮಿ, ಕೀಟ, ಹುಳು, ಹುಪ್ಪಟೆ, ಮೃಗ, ಸರ್ಪ, ತೋಳ, ಹುಲಿ – ಮೊದಲಾದ ಜನ್ಮಗಳನ್ನೂ ಮೀನು ಮುಂತಾದ ಜಲಚರಗಳು, ಕಾಗೆ ಮುಂತಾದ ಖೇಚರಗಳು, ಗೋವು, ಕುದುರೆ, ಎಮ್ಮೆ ಮುಂತಾದ ಗ್ರಾಮ್ಯಮೃಗಗಳು – ಇವುಗಳ ಜನ್ಮಗಳನ್ನೂ ಯಥಾಯೋಗ್ಯವಾಗಿ ಭೋಗಕ್ರಮದಿಂದ ಪಡೆದು ಕೊನೆಗೆ ಮನುಷ್ಯ ಜನ್ಮಕ್ಕೆ ಬರುವನು.

ಅದರಲ್ಲಿಯೂ ಮೊದಲು ಕಾಡು, ಗುಡ್ಡ, ಗವಿ ಮುಂತಾದೆಡೆಗಳಲ್ಲಿ ಹುಟ್ಟಿ ಅಲ್ಲಿ ಕಾಡುಮೃಗಗಳಂತೆಯೇ ಗಡ್ಡೆಗೆಣಸು, ಹಣ್ಣು ಹಂಪಲು, ಸೊಪ್ಪು ಸದೆ, ಮಾಂಸ ನೆತ್ತರು – ಮುಂತಾದವುಗಳನ್ನು ವಿಧಿನಿಷೇಧವರ್ಜಿತನಾಗಿ ಭಕ್ಷಿಸುತ್ತಾ ಕೇವಲ ಜಿಹ್ವೋಪಸ್ಥಗಳ ಸುಖಮಾತ್ರದಿಂದ ತುಷ್ಟನಾಗಿ ವಿಶೇಷಜ್ಞಾನವಿಲ್ಲದೆ ಬೆಳೆಯುವನು. ಶೀತವಾತಾಕಫಗಳನ್ನು ಸಹಿಸಿಕೊಂಡು ಪಶುಪ್ರಾಯರಾಗಿರುವ ಕಿರಾತ, ಮ್ಲೇಂಛ ಶಬರ, ಬರ್ಬರ, ಪುಳಿಂದು ಮೊದಲಾದ ಪಂಗಡಗಳಲ್ಲಿ ಹುಟ್ಟಿರುವುದರಿಂದ ಕಳ್ಳತನ, ಕೊಲೆಪಾತಕ ಮುಂತಾದ ನಿಂದ್ಯಕರ್ಮಗಳಲ್ಲಿ ನಿರತನಾಗಿ ಜೀವನ ಮಾಡುವನು.

ಹೀಗೆ ಕಾಲಕ್ರಮದಿಂದ ದುಷ್ಕರ್ಮಗಳ ಭೋಗವೆಲ್ಲ ಮುಗಿದ ಮೇಲೆ ಪುಣ್ಯಲೇಶದಿಂದ ಶುಭಯೋನಿಗಳಲ್ಲಿ ವಿಧಿನಿಷೇಧಗಳಿಗೆ ವಿಷಯವಾದ ಬ್ರಾಹ್ಮಣಾದಿಜನ್ಮದಲ್ಲಿ ಹುಟ್ಟುವನು. ಅಲ್ಲಿಯೂ ಜನ್ಮದಿಂದ ಜನ್ಮಕ್ಕೆ ಹೋಗುತ್ತಾ, ದುರಾಚಾರ ಮಾಡಿದರೆ ನರಕಕ್ಕೆ ಹೋಗುತ್ತಾ, ತನ್ನ ಕರ್ಮದಿಂದ ಬಂದಿರುವ ಲೋಕಗಳನ್ನು ಅನುಭವಿಸಿ ಕರ್ಮಶೇಷದಿಂದ ಮತ್ತೆ ಸ್ಥಾವರಾದಿ ಜನ್ಮಗಳನ್ನು ಪಡೆಯುತ್ತಾ, ಮತ್ತೆ ವರ್ಣತ್ರಯಗಳನ್ನು ಕ್ರಮಕ್ರಮವಾಗಿ ಪಡೆಯುತ್ತಾ ಇರುವನು. ಹೀಗೆ ಸಂಸಾರಚಕ್ರದಲ್ಲಿ ಸುತ್ತುತ್ತಾ ಇರುವ ಈ ಜೀವನಿಗೆ ಮೋಕ್ಷವೆಂಬುದೆಲ್ಲಿ ಬಂತು?

ಶುಭಯೋನಿಯು ಪ್ರಾಪ್ತವಾಗಿರುವಾಗ ಶುಭಕರ್ಮವನ್ನೇ ಮಾಡಿದ ಪಕ್ಷದಲ್ಲಿ ಅದನು ಸ್ವರ್ಗವನ್ನು ಹೊಂದಿ ತಾನು ಮಾಡಿದ ಪುಣ್ಯದ ಫಲವನ್ನು ಅನುಭವಿಸಿ, ಕರ್ಮಶೇಷದಿಂದ ಚ್ಯುತನಾಗಿ ಮತ್ತೆ ಶುಭದೇಹಗಳನ್ನು ಪಡೆದು ಸತ್ಕರ್ಮನಿಷ್ಠನೂ ದಯಾದಾನರತನೂ ಶ್ರೀಮಂತನೂ ದೇವತೆಗಳ ಮತ್ತು ಅತಿಥಿಗಳ ಪೂಜಕನೂ ಆಗಿ, ತನ್ನ ಕರ್ಮಾರ್ಜಿತಗಳಾದ ಶುಭಯೋನಿಗಳ ದೇಹಗಳನ್ನು ಪಡೆದು ಮತ್ತೆಮತ್ತೆ ಸ್ವರ್ಗಕ್ಕೂ ಭೂಮಿಗೂ ಹೋಗಿಬರುತ್ತಾ ಸಂಸಾರದಲ್ಲಿ ಸುತ್ತುತ್ತಿರುವನು. ಒಂದೊಂದು ವೇಳೆ ಸ್ವಲ್ಪ ಪಾಪಯೋಗದಿಂದ ನರಕದಲ್ಲಿದ್ದು ಕುಯೋನಿಯಲ್ಲಿ ಜನನವು ಲಭಿಸುವದು. ಮತ್ತೆ ಮೇಲೆ ವರ್ಣಿಸಿದಂತೆ ಶುಭಯೋನಿಯಲ್ಲಿ ಜನಿಸುವನು. ಇದು ರಾಜಸಜೀವನ ವಿಚಾರವು.

ತಾಮಸಜೀವನಿಗಂತೂ ಉತ್ತಮಜನ್ಮವನ್ನು ಪಡೆಯುವದು ಬಹುಮಟ್ಟಿಗೆ ದುರ್ಲಭವೇ ಒಂದೊಂದು ವೇಳೆ ಅಂಥ ಜೀವನೂ ಸಹ ಸತ್ಕರ್ಮನಿಷ್ಟತೆಯ ಬಲದಿಂದ ಶುಭಯೋನಿಯನ್ನೂ ಸ್ವರ್ಗವನ್ನೂ ಪಡೆದಾಗ್ಯೂ ಮತ್ತೆ ಪಾಪದ ದೆಸೆಯಿಂದ ಕುಯೋನಿಯಲ್ಲಿಯೇ ಜನಿಸುವನು.

ಹೀಗೆ ಸಮಸ್ತ ಜೀವರುಗಳೂ ಭಗವಂತನ ಮಾಯಾಚಕ್ರದಲ್ಲಿ ಸಿಲುಕಿ ಕರ್ಮಬಂಧನದ ದೆಸೆಯಿಂದ ಮತ್ತೆ ಮತ್ತೆ ಸಂಸಾರದಲ್ಲಿ ತಿರುಗುತ್ತಿರುವರು. ಭಗವದನುಗ್ರಹವಾಗುವವರೆಗೂ ಮೋಕ್ಷದ ಹೆಸರೆಂಬುದೇ ಇಲ್ಲವು. ಕೆಲವು ವೇಳೆಗಳಲ್ಲಿ ಪುಣ್ಯಕರ್ಮಗಳನ್ನು ಮಾಡುವಾಗ ದೇವತೆಗಳೂ ವಿಘ್ನಮಾಡುವರೆನ್ನುವಾಗ ರಾಕ್ಷಸರು ದೈತ್ಯರು ಮೊದಲಾದ ಕುತ್ಸಿತಯೋನಿಗಳಲ್ಲಿ ಜನಿಸಿದವರು ಸಜ್ಜನರ ಸಚ್ಚರ್ಯೆಗಳಿಗೆ ವಿಘ್ನಗಳನ್ನು ಮಾಡುವರೆಂದು ಹೇಳತಕ್ಕದ್ದೇನಿದೆ? ಈ ರೀತಿಯಾಗಿ ಸರ್ವಸ್ವತಂತ್ರನಾದ ಭಗವಂತನು ಯಾರೊಬ್ಬರ ಅಧೀನದಲ್ಲಿಯೂ ಇಲ್ಲದೆ ಅನಾದ್ಯನಂತಕಾಲಗಳಿಂದಲೂ ಕರ್ಮಬದ್ಧರಾದ ಜೀವರುಗಳಿಂದ ಕ್ರೀಡಿಸುತ್ತಿರುವನು.

ಆದುದರಿಂದ ಭೋಗಮಾತ್ರದಿಂದ ಯಾವನೊಬ್ಬನು ಕರ್ಮವನ್ನು ದೂರ ಮಾಡಲು ಎಂದೆಂದಿಗೂ ಸಮರ್ಥನಾಗಲಾರನು. ಪೂರ್ವಕರ್ಮಗಳನ್ನು ಅನುಭವಿಸಲು ಶರೀರ ಪ್ರಾಪ್ತಿಯಾಯಿತೆಂದರೆ ಪ್ರಾರಬ್ಧಕರ್ಮಗಳ ಜತೆಗೆ ಅನೇಕಗಳಾದ ನಿತ್ಯಕರ್ಮಗಳನ್ನಾಚರಿಸುವನು. ಇವು ಪುನಃ ಕ್ರಿಯಮಾಣ

ಅಥವಾ ಆಗಾಮಿ ಕರ್ಮಗಳಾಗುವವು. ಶುಭಾಶುಭಗಳಾದ ಈ ಕರ್ಮಗಳೇ ಇನ್ನು ಮುಂದಿನ ಕಾಲಗಳಿಗೆ - ಪೂರ್ತಿಯಾಗಿ ಎಲ್ಲಾ ಕರ್ಮಗಳ ಭೋಗವೂ ಮುಗಿದಿರುವದಿಲ್ಲವಾಗಿ - ಸಂಚಿತಗಳಾಗುವವು. ಇಂಥ ಸಂಚಿತಗಳು ಕಾಲದಿಂದ ಲಭಿಸತಕ್ಕವುಗಳಿಗೆ ಸಹಕಾರಿಗಳಾಗಿ ಫಲೋನ್ಮುಖಗಳಾಗಿ ಪರಿಣಮಿಸುವವು. ಇವೇ ಮತ್ತೆ ಪ್ರಾರಬ್ಧಕರ್ಮಗಳೆನಿಸುವವು. ಇವುಗಳ ಫಲಭೋಗಕ್ಕೆ ಪುನಃ ಶರೀರವನ್ನು ಧರಿಸುವನು, ಮುಂದೆ ಶರೀರವನ್ನು ಧರಿಸಬೇಕಾದ ಕರ್ಮಗಳನ್ನು ಮತ್ತೆ ಮಾಡುವನು. ಹೀಗೆ ತಿರುಗಿತಿರುಗಿ ಜರುಗುವದಕ್ಕೇ, ಅನಾದಿಕಾಲಗಳಿಂದ ನಡೆದುಬರುತ್ತಿರುವ ಕರ್ಮದ ಪ್ರವಾಹ ಎಂದು ಹೆಸರಿಟ್ಟಿರುವರು. ಈ ಕರ್ಮಪ್ರವಾಹಕ್ಕೆ ಸಿಕ್ಕುಬಿದ್ದಿರುವ ಜೀವರು ಕಾಲಚಕ್ರದಲ್ಲಿ ತಿರುಗುತ್ತಾ ಭಗವದಪರೋಕ್ಷತಾಶೂನ್ಯರಾಗುವರು.

ಆದ್ದರಿಂದ ಈ ಕರ್ಮಪ್ರಕಾರವನ್ನು ತಿಳಿದ ಪ್ರಾಜ್ಞನು ಇಂದ್ರಿಯನಿಗ್ರಹಾದಿಗಳಿಂದ ಕೂಡಿ, ಆಲಸ್ಯಮಾಡದೆ, ತತ್ತ್ವಜ್ಞಾನವನ್ನು ಸಂಪಾದಿಸಿ ತದ್ದ್ವಾರಾ ಶ್ರವಣ, ಮನನ, ನಿಧಿಧ್ಯಾಸನಾದಿಗಳಿಂದ ಭಗವದಾಪರೋಕ್ಷ್ಯವನ್ನು ಪಡೆದು. ಮೋಕ್ಷವನ್ನು ಸಂಪಾದಿಸಲು ಸದಾ ಯತ್ನಿಸಿ ಕೃತಾರ್ಥನಾಗಬೇಕು.

★★★★★

### ಶ್ರೀಮದ್ವಾದಿರಾಜತೀರ್ಥ ಶ್ರೀಪಾದಂಗಳವರ

# ಚೌಪದ

**- ಸಂಗ್ರಹಕರ್ತರು : ಶ್ರೀಯುತ ಎಸ್. ವೆಂಕಟರಾವ್**

**ಶ್ರೀಮಧ್ವಾಚಾರ್ಯರಿಗೆ ಶರಣುಶರಣೆಂದೆ ।**
**ಕರಗಳೆರಡನು ಮುಗಿದು ಶಿರವೊಲಿದು ನಿಂದೆ ॥**
**ದುರಿತಭಯನರಹರಿಯ ಕರುಣ ನಮಗೆಂದು ।**
**ಒರೆವೆ ನಾ ಚೌ ಪದನ ಸುಜನರಿಗಿಂದು ॥ 1 ॥**

**ಈ ಲೋಕದೊಳಗುಳ್ಳ ಜನರೆಲ್ಲ ಕೇಳಿ ।**
**ಕಾಲರಿತು ತಾಪವನು ಸುಜನಗೆರೆಗೊಳ್ಳಿ ॥**

**ಏಳು ಭವಸಾಗರವು ದಾಟಿಸುವ ಘಾಳಿ ।**
**ಶ್ರೀಲೋಲ ಶರಣೆಂದು ಸಂತತವು ಕೇಳಿ ॥ 2 ॥**

**ನರನೊಬ್ಬ ದುಃಖಿ ಸಂಸಾರದೊಳಗಿದ್ದು ।**
**ಕಡುನೊಂದು ನೊಂದು ಶ್ರೀಹರಿಪದಕೆ ಬಿದ್ದು ॥**
**ಕರುಣದಲ್ಲಿ ಕಾಯಬೇಕೆನಲು ಹರಿ ಎದ್ದು ।**
**ಕರುಣೆಸುವ ಇಂತು ಭವಸಾಗರಕೆ ಮುದ್ದು ॥ 3 ॥**

**ಇಂದ್ರಿಯಂಗಳ ದೇಹ ಕೈಕೊಂಡು ಕೊಂಡು ।**
**ಮಂದಜನರುಗಳ ಮತಿಯ ಅಘಟಿಗಳ ಸಿಂಧು ॥**
**ಇಂದ್ರಜಾಲವು ಮಾಯ ಸಂಸಾರವೆಂದು । ಹಾಂ ।**
**ಗೆಂದು ನೀ ಡೇಸಿದರೆ ಹರಿ ನಿನಗೆ ಒಂದು ॥ 4 ॥**

**ಹರಿ, ಕೃಷ್ಣ, ಶರಣೆಂದರದು ನಿನಗೆ ಲೇಸು ।**
**ಹರಿನಾಮಕಥೆಗಳು ಜಗದೊಳಗೆ ಸೂಸು ॥**
**ಹಾರಿಭಕ್ತಿಯಿಲ್ಲದರ ಸಂಗಕ್ಕೆ ಹೇಸು । ಶ್ರೀ ।**
**ಹರಿಯ ಮರೆಹರೆ ಮುಂದೆ ನರಕವೇ ಹಾಸು ॥ 5 ॥**

**ಸರ್ವದಾ ಬ್ರಹ್ಮವಿದ್ಯವನೋದಬೇಕು ।**
**ನಿರ್ವಿಕಾರನ ಒಡನೆ ಕುಣಿದಾಡಬೇಕು ॥**
**ಸರ್ವಗ್ರಂಥಗಳಲ್ಲಿ ಕೃಷಿಮಾಡಬೇಕು ।**
**ಸರ್ವದಾ ಹೋಮದಲಿ ಕೈಮುಗಿಯಬೇಕು ॥ 6 ॥**

---

1. ಮೇಲಿನ ಚೌಪದವನ್ನು ಶ್ರೀಯುತ ಎಸ್. ವೆಂಕಟರಾವ್, ಕೋಟಿ ಮಿಡಲ್ ಸ್ಕೂಲ್, ಬೆಂಗಳೂರು- ಇವರು ಕಳುಹಿಸಿರುವ ಒಂದೇ ಒಂದು ಪ್ರತಿಯ ಆಧಾರದಿಂದ ಅಚ್ಚುಮಾಡಿಸಲಾಗಿದೆ. ಪಾಠಗಳನ್ನು ಶುದ್ಧಿಗೊಳಿಸುವದು ಅಗತ್ಯವೆಂದು ತೋರಿದ ಕಡೆಯಲ್ಲಿ (?) ಈ ಗುರುತನ್ನು ಹಾಕಿದೆ. ಪಾಠವು ಅಷ್ಟು ಶುದ್ಧವಾಗಿ ತೋರದಿದ್ದರೂ ವಿಷಯದ ಮೇಲಿನ ಪ್ರೇಮದಿಂದ ನಮಗೆ ಇದನ್ನು ಪ್ರಕಟಿಸಬೇಕೆಂಬ ಕುತೂಹಲವುಂಟಾಯಿತು. ಈಗ ದೊರೆತಂತೆಯೆ ಇದನ್ನು ವಾಚಕರಿಗೆ ಸಮರ್ಪಿಸಿರುತ್ತೇವೆ.
**- ಸಂ.ಅ.ಪ್ರ.**

ಎಳುತುಳಸಿಮಾಲೆಯನು ಧರಿಸಿಕೊಳಬೇಕು ।
ಕಳಕಳನೆ ಕಂಬನಿಯ ತುಂಬುತಿರಬೇಕು ॥
ಹರಿದಾಸರೊಂದಾಗಿ ನಲಿದಾಡಬೇಕು ।ಶ್ರೀ।
ಹರಿಗೆ ವಂದನೆಮಾಡಿ ಕುಣಿದಾಡಬೇಕು ॥ 7 ॥

ಎಲೆ ಮನುಜ, ಸಂಸಾರಸಾಗರದ ಕಟ್ಟಿ।
ಜಲಜನಾಭನ ಭಕ್ತಿ ಹರಿವದಕೆ ಮುಟ್ಟಿ॥
ಅಳಿದಿಯಾದರೆ ಮುಂದೆ ಮುಕ್ತಿಗಳು ಮಟ್ಟಿ।
ಅಳಿಸಿ ಉಳಿದರೆ ನೀನು ನಿನ್ನಿಂದ ಕೆಟ್ಟಿ॥ 8 ॥

ಹಿಂಡು ದೈತ್ಯರ ಸಂಗ ಸಂಸಾರ ಕಂಡ್ಯ ।
ಪಂಡಿತರೊಡನಾಡು ಅಲುಗದಿರು ಕಂಡ್ಯ ॥
................................. ।
...........................................॥ 9 ॥

ರಾಯ ನಿನಗೇನಾದರೇನದರ ಭ್ರಾಂತಿ ?।
ಮಾಯ ಹೋಗದು ಮುನ್ನ ಹರಿವೊಲಿದ ತನಕ ॥
ಆಯಾಸಪಟ್ಟು ನೀ ಕೆಡಬೇಡ ಮನುಜ ।
ವಾಯು ತೊಲಗಿದ ಮೇಲೆ ಯಮನ ವಶವಂತೆ ॥ 10 ॥

ಇದು ವಿಷ್ಣು ಸನ್ಮಾನ ಹೌದೆಂದು ತಿಳಿಯೊ ।
ಇದು ನಿನಗೆ ಅಜ್ಞಾನ ಕತ್ತಲೆಗೆ ಕಣ್ಣು ॥
ಹರಿಭಕ್ತಿ ಗುರುಭಕ್ತಿ ನರಹರಿಯ ಭಕ್ತಿ।
ಅಳಿದೆಯಾದರೆ ಮುಂದೆ ಮುಕ್ತಿಗಳು ಮಟ್ಟಿ॥ 11 ॥

ನರದೇಹ ನಾಮವನು ಕೈಕೊಂಡು ಕೊಂದು
ನರಕಬಾಧೆಯಲಿಪ್ಪದದು ಕಂದು ಕಂಡು ॥
ಇರುತಿರುತ ನಾಯ ತಿಪ್ಪದು ಕಂಡು ಕಂಡು
ನರರಥನ ಮಾಡಲಾತನ ಲಂಡು ಲಂಡು ॥

ಸಾಕಿನ್ನು ಸಂಸಾರವೆಂದು ಬಿಡು ನೀನು
ಬೇಕೆನ್ನು ದೃಷ್ಟಿಗೆ ಅದು ಕಾಮಧೇನು ॥
ಆಕಾಂಕ್ಷೆ ಬಿಟ್ಟು ಹರಿ ಶರಣೆನ್ನು ನೀನು ।
ನಾಲ್ಕರೊಳಗೊಂದ್‌ಹೌದು ಅದಕ್‌ಹೊಣೆಯು ನಾನು ॥ 13 ॥

ದುರ್ಜನರುಗಳ ಮನೆಯ ಹಾಲೆರತಕಿಂತ ।
ಸಜ್ಜನರ ಮನೆಯ ಫಲ ಮೂಲ ಲೇಸೆಂದ ॥
ಅಜ್ಞಾನಿಸಂಗಡ ಹೀವ್ರೋದಕಿಂತ ।
ನಿರ್ಜೀವವಾಗಿದ್ದ ಕಾಷ್ಠ ಲೇಸೆಂದ ॥ 14 ॥

ಮನವೆಂಬೊ ವನಕೆಂದು ಹರಿಯ ಬಿಡಬೇಡ ।
ಆನವರತವಾಗಿ ಶ್ರೀಹರಿಯ ಬಿಡಬೇಡ ।
ಅನುವಾದ ವಿಷಯದಲಿ ಹರಿಯ ಬಿಡಬೇಡ ।
ಜನನಮರಣದಲಿ ಶ್ರೀಹರಿಯ ಬಿಡಬೇಡ ॥ 15 ॥

ಉಂಟಾದರುಂಬುದುಡುವದು ತನ್ನ ದೇಹ ।
ಕಂಠಗತಿಗೆ ಬಂದರದೆ ನಿನಗೆ ಸಾವ ॥
ಗಂಟು ಕಟ್ಟಿದೆ... ಕೊಂದೊಯ್ದು ಹೋದ ।
ಕಂಠಗತಿಗೆ ಬಂದರದು ನಿನಗೆ ನಾದ ॥ 16 ॥

ನೆಚ್ಚಿಲ್ಲ ನೆರೆಯಿಲ್ಲ ಕಾಯದಿರು ಕಸರ ।
ಪುತ್ರಸತಿಮಿತ್ರರೆಲ್ಲರು ನಿನಗೆ ಕೇಳು ॥
ಸತ್ತ್ವಾದಿಗುಣಗಳಿಂದಲಿ ನೀನು ಬಾಳು ।
ಉತ್ತಮಾ ಧರ್ಮಸತಿಯಿಂದ ನೀ ಬಾಳು ॥ 17 ॥

ಜ್ಞಾನಸುತವರ್ಗದಲಿ ಧ್ಯಾನವನೆ ಮಾಡು ।
ವಾರಿಜನಾಥ ಹರಿಧ್ಯಾನವನೆ ಮಾಡು ॥
ಊರೊಳಗೆ ತಿಂದುಂಡು ಗುಹೆಯೊಳಗೆ ಬೀಳು ।
ನೀರ ತಾವರೆಯಂತೆ ಸುಖದಿ ನೀ ಬಾಳು ॥ 18 ॥

ಮೃತ್ತಿಕೆಯ ದೋಣಿಯಂತಿಹುದು ದುಸ್ಸಂಗ
ಬೆತ್ತಬಿದಿರಿನ ತೆಪ್ಪದಂತೆ ಸತ್ಸಂಗ ||
ವ್ಯರ್ಥವಾಗಿದೆ ಕ್ಲೇಶ(ದಿ ಮನದಿ) ಬಹಿರಂಗ |
ಸುತ್ತುಕನ್ನಡಿಯಂತೆ ಏನೆಂಬೆ ರಂಗ || 19 ||

ತೊಡಕು ಬಿಡಿಸಿದರು ಸಂಸಾರದುಃಖಿತನ |
ಇದು ಭಕ್ತಿಯಿಂದ ವೇಲಿದನು ಚವು ಪದನ ||
ಇದು ಭಕ್ತಿಯಿಂದ ವೇಳಿದ ಜಡಗೆ ಮತಿಯ | ಎ| ?
ನ್ನೊಡೆಯ ಹಯವದನ ತಾನೀವ ಸದ್ಗತಿಯ || 20 ||

★★★★★

# ಶ್ರೀಕೃಷ್ಣೋಪನಿಷತ್ ಸಾರ [1]

## (ಚೀಮನಹಳ್ಳಿ ರಘುನಾಥಾಚಾರ್ಯರು, ಜ್ಞಾನಗುಣಾಕರ, ಉಪನಿಷದ್ರತ್ನಾಕರ)

**ಹರಿಃ ಓಂ | ಶ್ರೀಮಹಾವಿಷ್ಣುಂ ಸಚ್ಚಿದಾನನ್ದಲಕ್ಷಣಂ ರಾಮಚನ್ದ್ರಂ ದೃಷ್ಟ್ವಾ ಸರ್ವಾಙ್ಗಸುನ್ದರಂ ಮುನಯೋ ವನವಾಸಿನೋ ವಿಸ್ಮಿತಾ ಬಭೂವುಃ | ತಂ ಹೋಚುರ್ನೋಽವದ್ಯಮವತಾರಾನ್ ವೈ ಗಣ್ಯನ್ತೇ ಆಲಿಙ್ಗಾಮೋ ಭವನ್ತಮಿತಿ||**

(ರುದ್ರಾದಿದೇವತೆಗಳ ಅಂಶರೂ) ವನವಾಸಿಗಳೂ ಆದ ಮುನಿಗಳು ಸಚ್ಚಿದಾನಂದರೂಪಿಯೂ ಶ್ರೀ ಮಹಾವಿಷ್ಣುವಿನ ಸಾಕ್ಷಾದವತಾರಿಯೂ, ಸರ್ವಾಂಗಸುಂದರನೂ ಮನೋಹರನೂ ಆದ ಶ್ರೀರಾಮಚಂದ್ರನ ದಿವ್ಯ ಸೌಂದರ್ಯವನ್ನು ನೋಡಿ ವಿಸ್ಮಿತರಾದರು. ಆ ಪರಮಾತ್ಮನನ್ನು ಕುರಿತು ''ದೋಷರಹಿತಗಳಾದ ನಿನ್ನ ಅನೇಕ ಅವತಾರಗಳು ಗಣನೆಮಾಡಲ್ಪಡುತ್ತವೆ. ಅಂಥಾ (ನಿರ್ದೋಷಗುಣಪೂರ್ಣನಾದ) ನಿನ್ನನ್ನು ಆಲಿಂಗನ ಮಾಡಿಕೊಳ್ಳುವೆವು''

---

1. ಭಾಗವತದಲ್ಲಿ ಶ್ರೀಕೃಷ್ಣಕಥೆಯಲ್ಲಿ ನಿರೂಪಿತವಾದ ವಸ್ತುಗಳು ಇದರಲ್ಲಿ - ಅಧಿಭೂತ ಅಧಿದೈವಪರವಾಗಿ ಹೇಳಿವೆಯೆಂದು ಗೊತ್ತಾಗುತ್ತದೆ.

ಎಂದರು.

**ಭವಾನ್ತರೇ ಕೃಷ್ಣಾವತಾರೇ ಯೂಯಂ ಗೋಪಿಕಾ ಭೂತ್ವಾ ಮಾಮಾಲಿಙ್ಗಥ ।**

(ಆಗ ಭಗವಂತನು ಅಪ್ಪಣೆಕೊಡಿಸಿದನೇನೆಂದರೆ) ''ನೀವು ಇನ್ನೊಂದು ಜನ್ಮದಲ್ಲಿ ನಾನು ಕೃಷ್ಣಾವತಾರಮಾಡಿದ ಕಾಲದಲ್ಲಿ ನನ್ನನ್ನು ಆಲಿಂಗನ ಮಾಡಿಕೊಳ್ಳಿರಿ.''

**ಅನ್ಯೇ ಯೇ ಅವತಾರಾಸ್ತೇ ಗೋಪಾ ನ ಸ್ತ್ರೀಶ್ಚ ನೋ ಕುರು ॥**

**ಅನ್ಯೋನ್ಯವಿಗ್ರಹಂ ಧಾರ್ಯಂ ತವಾಙ್ಗಸ್ಪರ್ಶನಾದಿಹ ।**
**ಶಶ್ವತ್ ಸ್ಪರ್ಶಯಿತಾಸ್ಮಾಕಂ ಗೃಹ್ಣೀಮೋಽವತಾರಾನ್ ವಯಮ್॥**

ನಮ್ಮ ಇತರ ಅಂಶಾವತಾರಗಳನ್ನೂ ಮತ್ತು ನಿನ್ನ ಇತರ ಅವತಾರಗಳನ್ನೂ ಗೋಪಾಲಕರನ್ನಾಗಿಯೂ, ನಮ್ಮಗಳನ್ನು ಗೋಪಿಕಾಸ್ತ್ರೀಯರನ್ನಾಗಿಯೂ ಮಾಡು. ಇಲ್ಲಿ ನಾವುಗಳು ನಿನ್ನ ಅಂಗಸ್ಪರ್ಶಸುಖಾರ್ಥಿಗಳಾಗಿ ನಾವೂ ಅನ್ಯೋನ್ಯವಾಗಿ ಶರೀರಗಳನ್ನು ಧರಿಸು(ಹುಟ್ಟು)ವೆವು. ಇದಕ್ಕಾಗಿ ಬಹುಕಾಲ ತಪಸ್ಸನ್ನು ಮಾಡಿದ ನಮ್ಮನ್ನು ನೀನು ಸ್ಪರ್ಶ ಮಾಡೋಣ ಮಾತ್ರದಿಂದ ನಿನ್ನ ಅವತಾರಗಳ ಸಂಬಂಧವನ್ನು ಹೊಂದುವೆವು. ನಾವೂ ಬೇರೆ ಬೇರೆ ರೂಪ (ಅವತಾರಗಳನ್ನು ನಿನ್ನ ಅನುಗ್ರದಿಂದಲೇ) ನಿನ್ನ ಅಂಗಸಂಗಾರ್ಥವಾಗಿ ಪಡೆಯುವೆವು'' ಎಂದು ದೇವರ್ಷಿಗಳೆಲ್ಲರೂ ಪ್ರಾರ್ಥಿಸಿದರು.

**ರುದ್ರಾದೀನಾಂ ವಚಃ ಶ್ರುತ್ವಾ ಪ್ರೋವಾಚ ಭಗವಾನ್ ಸ್ವಯಮ್ ।**
**ಅಙ್ಗಸಙ್ಗಂ ಕರಿಷ್ಯಾಮಿ ಭವದ್ವಾಕ್ಯಂ ಕರೋಮ್ಯಹಮ್ ॥**

ಈ ರೀತಿಯಾದ ರುದ್ರಾದಿಗಳ ವಾಕ್ಯಗಳನ್ನು ಕೇಳಿ ''ನಿಮಗೆ ನನ್ನ ಅಂಗಸಂಗವನ್ನು ಕೊಡುವೆನು, ನಿಮ್ಮ ಪ್ರಾರ್ಥನೆಯನ್ನು ನಡೆಸುವೆನು'' ಎಂದು ಸ್ವತಂತ್ರನಾದ ಭಗವಂತನು ಸ್ವಯಂ ನುಡಿದನು.

**ಮೋದಿತಾಸ್ತೇ ಸುರಾಃ ಸರ್ವೇ ಕೃತಕೃತ್ಯಾಧುನಾ ವಯಮ್ ।**

ಆ ದೇವತೆಗಳೆಲ್ಲರೂ ಅತ್ಯಂತಸಂತೋಷಪಟ್ಟು ''ಈಗ ನಾವು ಕೃತಕೃತ್ಯರಾದೆವು'' ಎಂದು ಹೇಳಿದರು.

**ಯೋ ನನ್ದಃ ಪರಮಾನನ್ದೋ ಯಶೋದಾ ಮುಕ್ತಿಗೇಹಿನೀ ॥**

**ಮಾಯಾ ಸಾ ತ್ರಿವಿಧಾ ಪ್ರೋಕ್ತಾ ಸತ್ತ್ವರಾಜಸತಾಮಸೀ ।**
**ಪ್ರೋಕ್ತಾ ಚ ಸಾತ್ತ್ವಿಕೀ ರುದ್ರೇ ಭಕ್ತೇ ಬ್ರಹ್ಮಣಿ ರಾಜಸೀ ॥**

**ತಾಮಸೀ ದೈತ್ಯಪಕ್ಷೇಷು ಮಾಯಾ ತ್ರೇಧಾ ಹ್ಯುದಾಹೃತಾ ।**
**ಅಜೇಯಾ ವೈಷ್ಣವೀ ಮಾಯಾ ಜಪ್ಯೇನ ಚ ಸತಾ ಪುರಾ ॥**

ಪರಮಾನಂದವೇ ನಂದನೆಂದೂ, ಮುಕ್ತಿಗೇಹಿನಿ(ಸ್ಥಾನಗಳು)ಯೇ ಯಶೋದಾದೇವಿಯೆಂತಲೂ ಜನಿಸಿದರು. ದುರ್ಗಾದೇವಿಯಿಂದ ಅಭಿಮನ್ಯಮಾನವಾದ ಪ್ರಕೃತ್ಯಾಖ್ಯ ಮಾಯೆಯು ಸಾತ್ತ್ವಿಕ, ರಾಜಸ, ತಾಮಸವೆಂದು ತ್ರಿವಿಧವು. ತಮೋಭಿಮಾನಿಯು, ಬ್ರಹ್ಮಾಖ್ಯ ವಿಷ್ಣುವಿನ ಭಕ್ತನಾದ ರುದ್ರನು, ಸತ್ತ್ವದ ಅಭಿಮಾನಿಯು ವಿಷ್ಣುವು, ರಜೋಗುಣಾಭಿಮಾನಿಯು ಹರಿಭಕ್ತನಾದ ಚತುರ್ಮುಖಬ್ರಹ್ಮನು. ದೈತ್ಯಪಕ್ಷದಲ್ಲಿ ತಮಸ್ತತ್ತ್ವಾಖ್ಯ ಮಾಯೆಯ (ಪ್ರಾಚುರ್ಯವು). ವೈಷ್ಣವೀ ಮಾಯೆ(ವಿಷ್ಣುವಿನ ಇಚ್ಛೆ)ಯನ್ನು ಬಹು ಪುರಾತನಕಾಲದಿಂದ ಎಷ್ಟು ತಪಶ್ಚರ್ಯಾದಿಗಳನ್ನು ಮಾಡಿದರೂ, ಯಾರೊಬ್ಬರಿಂದಲೂ (ಜಯಿಸಲು) ಮೀರಲು ಸಾಧ್ಯವಿಲ್ಲವು.

**ದೇವಕೀ ಬ್ರಹ್ಮಪುತ್ರಾ ಸಾ ಯಾ ವೇದೈರುಪಗೀಯತೇ ।**
**ನಿಗಮೋ ವಸುದೇವೋ ಯೋ ವೇದಾರ್ಥಃ ಕೃಷ್ಣರಾಮಯೋಃ ॥**

**ಸ್ತುವೀತ ಸತತಂ ಯಸ್ತು ಸೋಽವತೀರ್ಣೋ ಮಹೀತಲೇ ।**
**ವನೇ ವೃನ್ದಾವನೇ ಕ್ರೀಡನ್ ಗೋಪಗೋಪೀ ಸುರೈಃ ಸಹ ॥**

ವೇದಗಳಿಂದ ಸ್ತುತ್ಯಳಾದ ಯಾವ ದೇವತೆಯೋ ಆ ಬ್ರಹ್ಮಪುತ್ರಿಯೇ ದೇವಕೀದೇವಿಯಾಗಿ ಹುಟ್ಟಿದಳು. ವೇದವೇ ವಸುದೇವನು. ಕೃಷ್ಣ ರಾಮರೇ ವೇದಾರ್ಥ (ಪ್ರತಿಪಾದ್ಯರು)ಗಳು. ಇವು ಈ ಪರಮಾತ್ಮನನ್ನೇ ಸ್ತೋತ್ರಮಾಡುತ್ತವೆ. ಯಾವ ಕೃಷ್ಣರಾಮರನ್ನು ಸದಾ ಸ್ತೋತ್ರ ಮಾಡುತ್ತವೆಯೋ ಅಂಥಾ ವೇದಾರ್ಥ ಪ್ರತಿಪಾದ್ಯನಾದವನೇ, ವೃಂದಾವನವೆಂಬ ವನದಲ್ಲಿ ಗೋಪಾಲಕರೂ ಗೋಪಿಕೆಯರೂ ಕನಸಿದ್ದ ದೇವತೆಗಳೊಡನೆ ಕ್ರೀಡಿಸಲು ಈ ಭೂಲೋಕದಲ್ಲಿ ಅವಿರ್ಭವಿಸಿದನು.

**ಗೋಪ್ಯೋ ಗಾವ ಋಚಸ್ತಸ್ಯ ಯಷ್ಟಿಕಾ ಕಮಲಾಸನಃ ।**
**ವಂಶಸ್ತು ಭಗವಾನ್ ರುದ್ರಃ ಶೃಙ್ಗಮಿನ್ದ್ರಃ ಸಗೋಪು(ಸು)ರಃ ॥**

**ಗೋಕುಲಂ ವನವೈಕುಣ್ಠಂ ತಾಪಸಾಸ್ತತ್ರ ತೇ ದ್ರುಮಾಃ ।**
**ಲೋಭಕ್ರೋಧಾದಯೋ ದೈತ್ಯಾಃ ಕಲಿಕಾಲಸ್ತಿರಸ್ಕೃತಃ ॥**

**ಗೋಪರೂಪೋ ಹರಿಃ ಸಾಕ್ಷಾತ್ ಮಾಯಾವಿಗ್ರಹಧಾರಣಃ ।**
**ದುರ್ಬೋಧಂ ಕುಹಕಂ ತಸ್ಯ ಮಾಯಯಾ ಮೋಹಿತಂ ಜಗತ್ ॥**

ಪರಮಾತ್ಮನನ್ನು ಸುತ್ತಿಸುವ ವೇದದ ಋಕ್ಕುಗಳೇ ಗೋಪಿಯರು ಮತ್ತು ಗೋವುಗಳು. ಚತುರ್ಮುಖಬ್ರಹ್ಮನೇ (ಶ್ರೀಕೃಷ್ಣನು ತನ್ನ ಕೈಲಿ ಹಿಡಿದ ದನಕಾಯುವ) ಕಟ್ಟಿಗೆಯು. ದೇವೋತ್ತಮನೂ ಪೂಜ್ಯನೂ ಆದ ರುದ್ರನೇ (ಕೃಷ್ಣನು ಊದುತ್ತಿದ್ದ) ಬಿದರಿನ ಕೊಳಲು (ಪಿಳ್ಳಂಗೋವಿಯು). ಗೋಪುರದಿಂದ ಸಹಿತವಾದ ಗೋವರ್ಧನಪರ್ವತವೇ ಇಂದ್ರನು. ಎತ್ತಿನ ರೂಪಧರಿಸಿದವನೂ ವತ್ಸರೂಪಧಾರಿಯೂ ದೈತ್ಯರು. ಗೋಕುಲ ಮತ್ತು ವೃಂದಾವನವು ವೈಕುಂಠವು, ಅಲ್ಲಿದ್ದ ವೃಕ್ಷಗಳು ತಪಸ್ವಿಗಳು, ಲೋಭಕ್ರೋಧಾದಿಗಳು ದೈತ್ಯರು, ಕಲಿಕಾಲಕ್ಕೆ ವ್ಯತಿರಿಕ್ತವಾಗಿ ಜಗಳವು, ಮೃತ್ಯವು ತಿರಸ್ಕರಿಸಲ್ಪಟ್ಟಿತಾಗಿ ಕಲ್ಯಾದಿದೈತ್ಯರು ಪರಾಜಿತರಾಗಿ ಮಾಡಲ್ಪಟ್ಟರು. ಸಾಕ್ಷಾತ್ ಶ್ರೀಹರಿಯೂ ಗೋಪಾಲಕನಂತೆ ಮನುಷ್ಯ ಶರೀರವನ್ನು ತನ್ನ ಮಾಯೆಯಿಂದ ಧರಿಸಿದನಾಗಿ ಮಾಯಾವಿಗ್ರಹರೂಪನೆನಿಸಿರುವನು ಎಂದರೆ ತನ್ನ ಇಚ್ಛಾ ಮಾತ್ರದಿಂದ ಗೋಪವೇಷವನ್ನು ಧರಿಸಿದ ಗೊಲ್ಲನಂತಿರುವನು ಆತನು, (ಚೋರನಂತಲೂ ಚಾರನಂತಲೂ, ದುಷ್ಟನಂತಲೂ) ಅನೇಕ ಕುಹಕಗಳನ್ನು ಮಾಡಿದಂತೆ ತೋರಿಸಿದನಾಗಿ ಅವನ ಮಾಯೆ (ಇಚ್ಛೆ)ಯನ್ನು ಸುಲಭವಾಗಿ ತಿಳಿಯಲು ಸಾಧ್ಯವಿಲ್ಲವು. ಈ ಸಮಸ್ತ ಜಗತ್ತೂ ಆ ಮಹೇಶನ ಮಾಯೆಯಿಂದ ಮೋಹಿತವಾಗಿದೆ.

**ದುರ್ಜಯಾ ಸಾ ಸುರೈಃ ಸರ್ವೈರ್ಧೃಷ್ಟಿರೂಪೋಽಭವದ್ದ್ವಿಜಃ ।**
**ರುದ್ರೋ ಯೇನ ಕೃತೋ ವಂಶಸ್ತಸ್ಯ ಮಾಯಾ ಜಗತ್ಕಥಮ್ ॥**

**ಬಲಂ ಜ್ಞಾನಂ ಸುರಾಣಾಂ ವೈ ತೇಷಾಂ ಜ್ಞಾನಂ ಹೃತಂ ಕ್ಷಣಾತ್ ।**
**ಶೇಷನಾಗೋಽಭವದ್ರಾಮಃ ಕೃಷ್ಣೋ ಬ್ರಹ್ಮೈವ ಶಾಶ್ವತಮ್ ॥**

ಭಗವನ್ಮಾಯೆಯನ್ನು ಸಮಸ್ತ ಸುಜನರೂ ಮೀರಲು (ಜಯಿಸಲು) ಅಸಾಧ್ಯವು. ಯಾವ ಪರಮಾತ್ಮನಿಂದ ಚತುರ್ಮುಖಬ್ರಹ್ಮನು. ಯಷ್ಟಿ (ಕಟ್ಟಿಗೆ) ರೂಪನೂ, ರುದ್ರನು ಬಿದರಿನ ಕೊಳಲಿನ ರೂಪನೂ ಮಾಡಲ್ಪಟ್ಟರೋ ಅಂಥವನ ಇಚ್ಛಾಮಾತ್ರದಿಂದ ಈ ಜಗತ್ತು ಸೃಷ್ಟಿಸಲ್ಪಟ್ಟಿತೆಂದು ತಿಳಿಯುವುದು. ಇದು ಕೇವಲ ಮಿಥ್ಯೆ ಅಥವಾ ಮಾಯಾಪ್ರಪಂಚವು ಹೇಗಾದೀತು?

ಶ್ರೀಕೃಷ್ಣನಿಂದ ವಂಶರೂಪನಾಗಿ ವಿಕಾರವನ್ನು ಹೊಂದಿಸಲ್ಪಟ್ಟ ಅಸ್ವತಂತ್ರನಾದ ರುದ್ರನಿಂದ ಈ ಜಗತ್ತು ಹೇಗೆ ಸೃಷ್ಟವಾದೀತು? ಇವುಗಳಿಂದ ಅಘಟನಘಟನಾಸಾಮರ್ಥ್ಯವಿಶಿಷ್ಟನಾದ ಶ್ರೀಹರಿಯು ತನ್ನ ಇಚ್ಛಾಮಾತ್ರದಿಂದ ಈ ಯಥಾರ್ಥವಾದ ಪ್ರಪಂಚವನ್ನು ಸೃಷ್ಟಿಸಿದನೆಂದು ತಾತ್ಪರ್ಯವು.

ದೇವತೆಗಳ ಬಲಜ್ಞಾನಾದಿಗಳನ್ನು ಹೇಗೆ ತಿಳಿಯಲು ಸುಲಭಸಾಧ್ಯ? ಒಂದು ಕ್ಷಣಮಾತ್ರದಲ್ಲಿಯೇ ಅಂಥಾ ದೇವತೆಗಳ ಜ್ಞಾನ, ಬಲ, ಸಾಮರ್ಥ್ಯಾದಿಗಳನ್ನು ಅಪಹರಿಸಿಬಿಡುವ ಪರಮಾತ್ಮನನ್ನು ಅಥವಾ ಆತನ ಮಹಾಮಹಿಮೆಯನ್ನು ತಿಳಿಯಲು ಯಾರಿಗೆ ಸಾಧ್ಯ? ಆದಿಶೇಷ(ಸರ್ಪ)ವೇ ಬಲರಾಮನಾಗಿಯೂ, ಉತ್ಪತ್ತಿ, ಜರಾ, ಮರಣ, ಮತ್ತು ವೃದ್ಧಿಹ್ರಾಸ ರಹಿತನೂ, ಆದ್ದರಿಂದಲೇ ಶಶ್ವದೇಕಪ್ರಕಾರಕನೂ, ಅನಾದಿನಿತ್ಯನೂ, ಪರಮನಿತ್ಯನೂ, ಪರಮಚೇತನೂ, ಗುಣಪೂರ್ಣನೂ, ದೋಷದೂರನೂ ಆದ ಪರಬ್ರಹ್ಮಶಬ್ದವಾಚ್ಯನೇ ಶ್ರೀಕೃಷ್ಣನೂ ಆಗಿ ಅವತರಿಸಿದರು.

**ಅಷ್ಟಾವಷ್ಟಸಹಸ್ರೇ ದ್ವೇ ಶತಾಧಿಕ್ಯಾಃ ಸ್ತ್ರಿಯಸ್ತಥಾ ।**
**ಋಚೋಪನಿಷದಸ್ತಾ ವೈ ಬ್ರಹ್ಮರೂಪಾ ಋಚಃ ಸ್ತ್ರಿಯಃ ॥**

ಹದಿನಾರುಸಾವಿರದ ನೂರೆಂಟು ಜನ ಗೋಪಿಕಾಸ್ತ್ರೀಯರೂ ವೇದ ಮತ್ತು ಉಪನಿಷತ್ತುಗಳ ಋಗಭಿಮಾನಿದೇವತೆಗಳು. ಇವು ಪರಬ್ರಹ್ಮನ ರೂಪವು, ಪ್ರಬ್ರಹ್ಮಪ್ರತಿಪಾದಕಗಳು, ಉಪನಿಷತ್ತುಗಳು ವೇದಶಿರಸ್ಸಾದ್ದರಿಂದ ಪರಬ್ರಹ್ಮನೆಂತಲೂ, ಋಕ್ಕುಗಳು ಸ್ತ್ರೀರೂಪಗಳಾಗಿ ಬ್ರಹ್ಮನನ್ನು ಸ್ತುತಿಸಿ ಕ್ರೀಡಿಸುವುವೆಂದೂ ತಿಳಿಯುವುದು.

**ದ್ವೇಷಶ್ಚಾಣೂರಮಲ್ಲೋऽಯಂ ಮತ್ಸರೋ ಮುಷ್ಟಿಕೋ ಜಯಃ ।**
**ದರ್ಪಃ ಕುವಲಯಾಪೀಡೋ ಗರ್ವೋ ರಕ್ಷಃ ಖಗೋ ಬಕಃ ॥**

ದ್ವೇಷವೇ ಮಲ್ಲನಾದ ಚಾಣೂರನು. ಮತ್ಸರವೇ ಅಜೇಯ (ಜಯಿಸಲಸಾಧ್ಯ)ನಾದ ಮುಷ್ಟಿಕಾಸುರನೆಂಬ ಜಟ್ಟಿಯು, ದರ್ಪವೇ ಕುವಲಯಾಪೀಡನೆಂಬ (ಆನೆನಡಿಸುವ) ಮಾವಟಿಗನು ಗರ್ವವೇ ಬಕಾಸುರನೆಂಬ ಪಕ್ಷಿರೂಪಿಯಾದ ರಾಕ್ಷಸನು.

**ದಯಾ ಸಾ ರೋಹಿಣೀ ಮಾತಾ ಸತ್ಯಭಾಮಾ ಧರೇತಿ ವೈ ।**
**ಅಘಾಸುರೋ ಮಹಾವ್ಯಾಧಿಃ ಕಲಿಃ ಕಂಸಃ ಸ ಭೂಪತಿಃ ॥**

**ಶಮೋ ಮಿತ್ರಃ ಸುಧಾಮಾ ಚ ಸತ್ಯಾಕ್ರೂರೋದ್ಧವೋ ದಮಃ ।**
**ಯಃ ಶಂಖಃ ಸ ಸ್ವಯಂ ವಿಷ್ಣುರ್ಲಕ್ಷ್ಮೀರೂಪೋ ವ್ಯವಸ್ಥಿತಃ ॥**

**ದುಗ್ಧಸಿಂಧೌ ಸಮುತನ್ನೋ ಮೇಘಘೋಷಸ್ತು ಸಂಸ್ಮೃತಃ ।**

ದಯೆಯು ಶ್ರೀಕೃಷ್ಣನ ತಾಯಿಯೆನಿಸಿದ ರೋಹಿಣಿಯು, ಸತ್ಯಭಾಮೆಯು ಪ್ರಸಿದ್ಧಳಾದ ವಿಷ್ಣುಪತ್ನಿಯೆನಿಸಿದ ಭೂದೇವಿಯು. ಅಘಾಸುರನೆಂಬುವನು ಮಹಾವ್ಯಾಧಿರೂಪನು; ರಾಜನಾಗಿದ್ದ ಕಂಸಾಸುರನು ಕಲಿಯು ಎಂದರೆ ಕಲಿರಾಜನ ಆವೇಶವುಳ್ಳವನು. ಶಮವು, ಕೃಷ್ಣನ ಮಿತ್ರನೂ ಭಕ್ತನೂ ಆದ ಸುದಾಮನು, ಸತ್ಯವೇ ಅಕ್ರೂರನು. ದಮವೇ ಉದ್ಧವನು ಈ ರೀತಿಯಾಗಿ ಶಮದಮಾದಿಗಳು ವಿಷ್ಣುಭಕ್ತರಾಗಿ ಜನಿಸಿದರು. ಮೇಘಘರ್ಜನೆಯಂತೆ ಶತ್ರುಗಳಿಗೆ ಭಯವನ್ನುಂಟುಮಾಡುವ ಪಾಂಚಜನ್ಯವೆಂಬ ಶಂಖವೂ ಶ್ರೀಹರಿಯ ಸನ್ನಿಧಾನಯುಕ್ತವಾದುದೇ ಇದು ಕ್ಷೀರಸಮುದ್ರದಲ್ಲಿ ಉತ್ಪನ್ನವಾದ ಲಕ್ಷ್ಮೀದೇವಿಯ ರೂಪವಿಶೇಷವೆಂದು ವ್ಯವಸ್ಥೆಮಾಡಲ್ಪಟ್ಟು ಸ್ಮೃತವಾಗಿದೆ.

**ದುಗ್ಧೋದಧಿಃ ಕೃತಸ್ತೇನ ಭಗ್ನಭಾಂಡೋ ದಧಿಗ್ರಹೇ ।**
**ಕ್ರೀಡತೇ ಬಾಲಕೋ ಭೂತ್ವಾ ಪೂರ್ವವತ್ಸುಮಹೋದಧೌ ॥**

**ಸಂಹಾರಾರ್ಥಂ ಚ ಶತ್ರೂಣಾಂ ರಕ್ಷಣಾಯ ಚ ಸಂಸ್ಥಿತಃ ।**
**ಕೃಪಾರ್ಥೇ ಸರ್ವಭೂತಾನಾಂ ಗೋಪ್ತಾರಂ ಧರ್ಮಮಾತ್ಮಜಮ್ ॥**

ಶ್ರೀಕೃಷ್ಣನು (ಗೋಪಿಯರ ಮನೆಯಲ್ಲಿ) ಹಾಲು(ಮೊಸರು ಬೆಣ್ಣೆ)ಯನ್ನು ತೆಗೆದುಕೊಳ್ಳುವ ಮಿಮಿತ್ತದಿಂದ (ಮೊಸರಿನ) ಗಡಿಗೆಗಳನ್ನು ಒಡೆದು ಕ್ಷೀರ(ಮೊಸರಿನ)ಸಾಗರವನ್ನೇ ಮಾಡಿ, ತಾನು ಪೂರ್ವದಲ್ಲಿ ಕ್ಷೀರಸಮುದ್ರದಲ್ಲಿ ರಮಿಸಿದಂತೆ, ಬಾಲಕನಾಗಿ ಕ್ರೀಡಿಸುತ್ತಿರುವನು. ಶತ್ರುಗಳ ಸಂಹಾರಾರ್ಥವಾಗಿಯೂ, ಸಜ್ಜನರನ್ನು ಸಂರಕ್ಷಿಸುವದಕ್ಕೂ ಸರ್ವಭೂತಗಳಲ್ಲಿ ಕೃಪೆಮಾಡಿ, ತನ್ನಿಂದ ಸೃಷ್ಟವಾದ ಸಸ್ಕರ್ಮವನ್ನು ರಕ್ಷಿಸಲು ಅವತರಿಸಿದನು.

**ಯತ್ರಾಷ್ಟುಮೀಶ್ವರೇಣಾಸೀತಚ್ಚಕ್ರಂ ಬ್ರಹ್ಮರೂಪಧೃಕ್ ।**
**ಜಯಂತೀ ಸಂಭವೋ ವಾಯುಶ್ಚಾಮರೋ ಧರ್ಮಸಂಜ್ಞಿತಃ ॥**

**ಯಸ್ಯಾಸೌ ಜ್ವಲನಾಭಾಸಃ ಖಡ್ಗರೂಪೋ ಮಹೇಶ್ವರಃ ।**
**ಕಶ್ಯಪೋಲೂಖಲಃ ಖ್ಯಾತೋ ರಜ್ಜುರ್ಮಾತಾದಿತಿಸ್ತಥಾ ॥**

ಧರ್ಮರಕ್ಷಣಾರ್ಥವಾಗಿಯಾವಸುದರ್ಶನವೆಂಬಚಕ್ರವನ್ನುಸೃಜಿಸಿದನೋ ಅದೂ ಬ್ರಹ್ಮನ ರೂಪಧಾರಿಯೇ ಜಯಂತಿಯಿಂದ ಹುಟ್ಟಿದುದು ವಾಯುವು. ಚಾಮರವು ಧರ್ಮವೆಂಬ ಸಂಜ್ಞೆಯಿಂದ ಉತ್ಪನ್ನವಾದುದು, ಎಂದರೆ ಸ್ವಚ್ಛವಾಗಿ ಚಾಮರದಂತೆ ಬೆಳ್ಳಗೆ ಎಂದರೆ ದೋಷ ರಹಿತವಾದುದು. ಪ್ರಕಾಶವೂ ಹರಿತವೂ ಜ್ವಾಲಾಕಾರವೂ ಆದ ಭಗವಂತನು ಧರಿಸಿದ ಖಡ್ಗವು ಕ್ರೂರನಾದ ಮಹೇಶ್ವರನ ರೂಪವಿಶೇಷವು. ಕೃಷ್ಣನನ್ನು ಕಟ್ಟಿದ ಒರಳು ಕಶ್ಯಪಮಹರ್ಷಿಯ ಅವತಾರವು. ಕಟ್ಟಲು ಉಪಯೋಗಿಸಿದ್ದ ಹಗ್ಗವು ತಾಯಿಯೆನಿಸಿದ್ದ ಆದಿತಿದೇವಿಯು.

**ಚಕ್ರಂ ಶಂಖಂ ಚ ಸಂಸಿದ್ಧಂ ಬಿಂದುಂ ಚ ಸರ್ವಮೂರ್ಧನಿ ।**
**ಯಾವಂತಿ ದೇವರೂಪಾಣಿ ವದಂತಿ ಬಹುಧಾ ಜನಾಃ ॥**
**ನಮನ್ತಿ ದೇವರೂಪೇಭ್ಯ ಏವಮಾದಿ ನ ಸಂಶಯಃ ।**

ಚಕ್ರಶಂಖಗಳು ಪ್ರಸಿದ್ಧಗಳಾದ ಭಗವದವತಾರಗಳೇ ಎಷ್ಟು ದೇವತೆಗಳ ರೂಪುಗಳಿವೆಯೆಂದು ಜ್ಞಾನಿಗಳಾದ ಜನರು ಹೇಳುತ್ತಾರೆಯೋ ಎಷ್ಟು ಭಗವಂತನ ರೂಪಗಳೇಗೆ ಜನರೂ ಜ್ಞಾನಿಗಳೂ ನಮಸ್ಕರಿಸುತ್ತಾರೆಯೋ ಅವೆಲ್ಲವೂ ಆ ಪರಮಾತ್ಮನ ರೂಪಗಳೇ ಎಂದರೆ ಭಗವಂತನಿಂದ ಸೃಷ್ಟವಾಗಿ ಅವನಿಂದಲೇ ಆವಾಸಿತಗಳಾಗಿ ವ್ಯಾಪಿಸಲ್ಪಟ್ಟಿವೆ.

**ಗದಾ ಚ ಕಾಳಿಕಾ ಸಾಕ್ಷಾತ್ಸರ್ವಶತ್ರುನಿಬರ್ಹಣೀ ।**
**ಧನುಃ ಶಾರ್ಙ್ಗಂ ಸ್ವಮಾಯಾ ಚ ಶರತ್ ಕಾಲಃ ಸುಭೋಜನಃ ॥**

ಶ್ರೀಕೃಷ್ಣನ ಗದೆಯು ಸಕಲಶತ್ರುಗಳನ್ನೂ ಸಂಹರಿಸತಕ್ಕ ಸಾಕ್ಷಾತ್ ಕಾಳಿಕಾದೇವಿಯ ರೂಪವು. ಶಾರ್ಙಧನುಸ್ಸು ತನ್ನ ಇಚ್ಛಾಮಾತ್ರದಿಂದ ಬೇಕಾದ ಕಾರ್ಯವನ್ನು ಮಾಡತಕ್ಕದ್ದು ಅವನು ಬಿಡುವ ಬಾಣವು ಶತ್ರುಸಂಹಾರರೂಪವಾದ ಯಥೇಚ್ಛವಾಗಿ (ಅನ್ನಪಾನಾದಿ) ಸುಭೋಜನವುಳ್ಳ ಕಾಲ(ಮೃತ್ಯು) ರೂಪಿಯು.

**ಅಬ್ಜಕಾಂಡಂ ಜಗದ್ಬೀಜಂ ಧೃತಂ ಪಾದೌ ಸ್ವಲೀಲಯಾ ।**
**ಗರುಡೋ ವಟಿಭಾಂಡೀರಃ ಸುಧಾಮಾ ನಾರದೋ ಮುನಿಃ ॥**
**ವೃಂದಾ ಭಕ್ತೀಃ ಕ್ರಿಯಾ ಬುದ್ಧಿಃ ಸರ್ವಜಂತುಪ್ರಕಾಶಿನೀ ।**
**ತಸ್ಮಾನ್ನ ಭಿನ್ನಂ ನಾಭಿನ್ನಮಾಭಿರ್ಭಿನ್ನೋ ನ ವೈ ವಿಭುಃ ॥**

ಈ ಸಕಲ ಜಗತ್ತಿಗೆ ಬೀಜಭೂತವಾದ ಅಬ್ಜವನ್ನೂ (ಕಮಲವನ್ನೂ) ಅದರ ದಂಟನ್ನೂ (ಕಮಲಸಹಿತವಾದ ನಾಳವನ್ನೂ) ಲೀಲೆಯಿಂದ ಕೈಲಿ ಹಿಡಿದಿರುವನು. ಗರುಡನು ಪಟಭಾಂಡೀರ (ಸ್ಥಾನವಿಶೇಷವು). ನಾರದ ಮಹರ್ಷಿಯೇ ಸುಧಾಮನೆಂಬ ಭಕ್ತನು. ವೃಂದೆಯೂ ಭಕ್ತಿಯೇ ಸರ್ವಜಂತುಗಳಅ ಪ್ರಕಾಶಕ್ರಿಯೆಯನ್ನು ಮಾಡತಕ್ಕದ್ದು ಬುದ್ಧಿಯು. ಆದ್ದರಿಂದ ಭಗವಂತನ ಗುಣಕರ್ಮಕ್ರಿಯೆಗಳಿಗೆ ಭೇದವಿಲ್ಲವು, ಮತ್ತು ಭೇದ ರಹಿತವಾದ ವಸ್ತುವೇ ಇಲ್ಲವು; ಎಂದರೆ ಈಶನಿಂದ ಸೃಷ್ಟಿಸಲ್ಪಟ್ಟ ಜೀವ ಜಡಾತ್ಮಕವಾದ ಪ್ರಪಂಚವೆಲ್ಲವೂ ಪರಮಾತ್ಮನಿಂದ ಭಿನ್ನವಾದವುಗಳೇ ಇಂಥಾ ವಸ್ತುಗಳಅ ಸ್ಥಿತ್ಯಾದಿವ್ಯಾಪಾರಗಳಿಗೆ ಕಾರಣನಾದ ಭಗವಂತನ ಅಂತರ್ಗತರೇಗಳಿಗೂ ಭಗವಂತನ ಮೂಲ ಮತ್ತು ಇತರ ಮತ್ಸ್ಯಾದಿ ಅವತಾರರೂಪಗಳಿಗೂ ಲವವೇಶವೂ ಭೇದವಿಲ್ಲವೆಂದು ಶಾಸ್ತ್ರಗಳಲ್ಲಿ ಪ್ರಸಿದ್ಧವಾಗಿದೆಂದು ಹೇಳಲು ''ವೈ'' ಎಂದು ಹೇಳಲ್ಪಟ್ಟಿದೆ. ಸರ್ವಸಮರ್ಥನೂ, ಸರ್ವೈಶ್ವರ್ಯಶಾಲಿಯೂ, ಆದ ಭಗವಂತನು ಸ್ವಗತಭೇದ ಶೂನ್ಯನೂ ಸರ್ವರಿಂದ ಭಿನ್ನನೂ ಆಗಿದಾನೆ.

**ಭೂಮಾವುತ್ತಾರಿತಂ ಸರ್ವಂ ವೈಕುಂಠಂ ಸ್ವರ್ಗವಾಸಿನಾಮ್ ।**

ಸ್ವರ್ಗವಾಸಿಗಳಾದ ದೇವತೆಗಳ ಮತ್ತು ಭಗವದ್ಭಕ್ತರಾದ ಸಜ್ಜನರ ಸಂತೋಷ ಮತ್ತು ಉಪಯೋಗಾರ್ಥವಾಗಿ ವೈಕುಂಠ ಮತ್ತು ಸ್ವರ್ಗಾದಿ

ಲೋಕಾಂತರಗಳಲ್ಲಿರುವ ಸರ್ವವಸ್ತುಗಳೂ ಜೀವಾದಿಗಳೂ ಭಗವಂತನಿಂದ ಭೂಮಿಯಲ್ಲಿ ಸೃಷ್ಟಿಸಿ (ತರಲ್ಪಟ್ಟಿ)ದ್ದವ.

**ಸರ್ವತೀರ್ಥಫಲಂ ಲಭತೇ ಯ ಏವಂ ವೇದ ।**
**ದೇಹಬಂಧಾದ್ವಿಮುಚ್ಯತೇ ಇತ್ಯುಪನಿಷತ್ ಓಂ ತತ್ಸತ್ ॥**

ಯಾರು ಹೀಗೆ ತಿಳಿಯುತ್ತಾರೆಯೋ, ಅವರು ಸಮಸ್ತ ತೀರ್ಥ(ಯಾತ್ರಾ) ಸ್ನಾನದ ಫಲವನ್ನು ಹೊಂದುತ್ತಾರೆ. ದೇಹಬಂಧನ (ಸಂಸಾರ)ದಿಂದ ಬಿಡಲ್ಪಟ್ಟು (ಭಗವದನುಗ್ರಹದಿಂದಲೇ ಪರಮಾನಂದಪ್ರಾಪ್ತಿ ರೂಪವಾದ) ಮೋಕ್ಷವನ್ನು ಹೋಂದುತ್ತಾರೆ. ಹೀಗೆಂದು ಈ ಉಪನಿಷತ್ತಿನ ರಹಸ್ಯಪ್ರಮೇಯವು.

★★★★★

# ಹರಿಯೇ ಸರ್ವೋತ್ತಮನು

**(ಶ್ರೀಮಧ್ವಾಚಾರ್ಯರವರ ಕೃತಿ)**

**ಕುರು ಭುಙ್ಕ್ಷ್ವ ಚ ಕರ್ಮ ನಿಜಂ ನಿಯತಂ**
**ಹರಿಪಾದವಿನಮ್ರಧಿಯಾ ಸತತಮ್ ।**
**ಹರಿರೇವ ಪರೋ ಹರಿರೇವ ಗುರು**
**ರ್ಹರಿರೇವ ಜಗತ್ಪಿತೃಮಾತೃಗತಿಃ ॥ 1 ॥**

1. ಯಾವಾಗಲೂ ಶ್ರೀಹರಿಯ ಪಾದಕ್ಕೆರಗಿದ ಬುದ್ಧಿಯಿಂದೊಡಗೂಡಿ ಸ್ವಕರ್ಮವನ್ನು ಮಾಡಿ ಫಲವನ್ನನುಭವಿಸುತ್ತಿರು. ಹರಿಯೇ ಸರ್ವೋತ್ತಮನು, ಹರಿಯೇ ಗುರುವು, ಹರಿಯೇ ಜಗತ್ತಿಗೆ ತಂದೆಯು, ತಾಯಿಯು, ಗತಿಯು.

**ನ ತತೋಽಸ್ತ್ಯಪರಂ ಜಗತೀಡ್ಯತಮಂ**
**ಪರಮಾತ್ಪರತಃ ಪುರುಷೋತ್ತಮತಃ ।**
**ತದಲಂ ಬಹುಲೋಕವಿಚಿನ್ತನಯಾ**
**ಪ್ರವಣಂ ಕುರು ಮಾನಸಮೀಶಪದೇ ॥ 2 ॥**

2. ಜಗತ್ತಿನಲ್ಲಿ ಪರಾತ್ಪರನಾದ ಆ ಪುರುಷೋತ್ತಮನಿಗಿಂತಲೂ ಹೆಚ್ಚಾಗಿ ಸ್ತೋತ್ರಕ್ಕೆ ತಕ್ಕದ್ದು ಮತ್ತೊಂದು ಇಲ್ಲ. ಆದ್ದರಿಂದ ಲೋಕಚಿಂತೆಯನ್ನು ಬಹುವಾಗಿ ಹೆಚ್ಚಿಕೊಳ್ಳುವದನ್ನು ಸಾಕುಮಾಡು. ಈಶ್ವರನ ಪಾದದಲಿಯೇ ಮನಸ್ಸನ್ನು ತಿರುಗಿ ಸಿಕೊ.

**ಯತತೋಽಪಿ ಹರೇಃ ಪದಸಂಸ್ಮರಣೇ**
**ಸಕಲಂ ಹ್ಯಘಮಾಶು ಲಯಂ ವ್ರಜತಿ ।**
**ಸ್ಮರತಸ್ತು ವಿಮುಕ್ತಿಪದಂ ಪರಮಂ**
**ಸ್ಫುಟಮೇಷ್ಯತಿ ತತ್ಕಿಮಪಾಕ್ರಿಯತೇ ।। 3 ।।**

3. ಹರಿಯ ಪಾದದ ನೆನಹಿಗೆಂದು ಪ್ರಯತ್ನಮಾಡಿದರೂ ಸಾಕು, ಅಂಥವನ ಪಾಪವೆಲ್ಲವೂ ಲಯವಾಗುವದು; ಸ್ಮರಣೇಯನ್ನೇ ಮಾಡುವವನಿಗಂತೂ ಎಲ್ಲಕ್ಕೂ ಹೆಚ್ಚಿನ ಮೋಕ್ಷಸ್ಥಾನವು ತಾನೇ ದೊರಕುವದು. ಇಂಥ ಸ್ಮರಣೆಯನ್ನು ಬಿಡುವದೇಕೆ?

**ಶೃಣುತಾಮಲಸತ್ಯವಚಃ ಪರಮಂ**
**ಶಪಥೇರಿತಮುಚ್ಛ್ರಿತಬಾಹುಯುಗಮ್ ।**
**ನ ಹರೇಃ ಪರಮೋನ ಹರೇಃ ಸದೃಶಃ**
**ಪರಮಂ ಸ ತು ಸರ್ವಚಿದಾತ್ಮಗಣಾತ್ ।। 4 ।।**

4. ಶಪಥಪೂರ್ವಕವಾಗಿ ಎರಡು ಕೈಗಳನ್ನೂ ಎತ್ತಿ ಸಾರಿಹೇಳಿದ ಈ ನಿರ್ದುಷ್ಟವಾದ ಹೆಚ್ಚಿನ ಸತ್ಯವಚನವನ್ನು ಕೇಳಿರಿ; ಹರಿಗಿಂತ ಹೆಚ್ಚಿನವನು ಇಲ್ಲ. ಹರಿಗೆ ಸಮನಾದವನೂ ಇಲ್ಲ; ಆತನೇ ಎಲ್ಲಾ ಜೀವಸಮೂಹಕ್ಕಿಂತಲೂ ಉತ್ಕೃಷ್ಟನು.

**ಯದಿ ನಾಮ ಪರೋ ನ ಭವೇತ್ಸ ಹರಿಃ**
**ಕಥಮಸ್ಯ ವಶೇ ಜಗದೇತದಭೂತ್ ।**
**ಯದಿ ನಾಮ ನ ತಸ್ಯ ವಶೇ ಸಕಲಂ**
**ಕಥಮೇವ ತು ನಿತ್ಯಸುಖಂ ನ ಭವೇತ್ ।। 5 ।।**

5. ಆ ಹರಿಯು ಸರ್ವೋತ್ತಮನಲ್ಲದಿದ್ದರೆ ಈ ಜಗತ್ತೆಲ್ಲವೂ ಆತನ ವಶವಾದದ್ದು ಹೇಗೆ? ಇದೆಲ್ಲವೂ ಆತನ ವಶದಲ್ಲಿಲ್ಲವೆಂದರೆ ಇದರಲ್ಲಿ ನಿತ್ಯಸುಖವೇತಕ್ಕಿಲ್ಲ ?

**ನ ಚ ಕರ್ಮ ವಿಮಾಮಲ ಕಾಲಗುಣ ಪ್ರಭೃತೀಶಮಚಿತ್ತನು ತದ್ಧಿ ಯತಃ ।**
**ಚಿದಚಿತ್ತನು ಸರ್ವಮಸೌ ತು ಹರಿ ರ್ಯಮಯೇದಿತಿ ವೈದಿಕಮಸ್ತಿ ವಚಃ ॥ 6 ॥**

6. ಕರ್ಮ, ಅವಿದ್ಯೆ, ಪಾಪ, ಕಾಲ, ತ್ರಿಗುಣ ಇವು ಯಾವವೂ ಸ್ವತಂತ್ರ ಕಾರಣವಲ್ಲ; ಏಕೆಂದರೆ ಇದೆಲ್ಲವೂ ಜಡಸ್ವರೂಪವಾಗಿರುವದು. ಈ ಹರಿಯೋ ಎಂದರೆ ಚೇತನಾ ಚೇತನರೂಪವಾದ ಪ್ರಪಂಚವೆಲ್ಲವನ್ನೂ ಆಳುವನೆಂಬ ಶ್ರುತಿವಚನವಿರುವದು.

**ವ್ಯವಹಾರಭಿದಾಪಿ ಗುರೋರ್ಜಗತಾಂ**
**ನ ತು ಚಿತ್ತಗತಾ ಸ ಹಿ ಚೋದ್ಯಪರಮ್ ।**
**ಬಹವಃ ಪುರುಷಾಃ ಪುರುಷಾಃ ಪುರುಷಪ್ರವರೋ**
**ಹರಿತ್ಯವದತ್ಸ್ವಯಮೇವ ಹರಿಃ ॥ 7 ॥**

7. ಭೇದವು ವ್ಯಾವಹಾರಿಕವೆಂಬುದೂ ಜಗದ್ಗುರುವಾದ ವೇದವ್ಯಾಸದೇವರಿಗೆ ಸಮ್ಮತವಲ್ಲ; ಏಕೆಂದರೆ ಈ ವಿಷಯದಲ್ಲಿ ಪ್ರಶ್ನೆಯನ್ನು ಮಾಡಲಾಗಿ, ''ಪುರುಷರು ಅನೇಕ, ಹರಿಯು ಪುರುಷೋತ್ತಮನು'' ಎಂದು ವೇದವ್ಯಾಸರೂಪನಾದ ಆ ಹರಿಯೇ ಹೇಳಿರುತ್ತಾನೆ.

**ಚತುರಾನನಪೂರ್ವವಿಮುಕ್ತಗಣಾ ಹರಿಮೇತ್ಯ ತು ಪೂರ್ವವದೇವ ಸದಾ ।**
**ನಿಯತೋಚ್ಚವಿನೀಚತಯೈವ ನಿಜಾಂಸ್ಥಿತಿಮಾಪುರಿತಿ ಸ್ಮ ಪರಂ ವಚನಮ್ ॥ 8 ॥**

8. ಬ್ರಹ್ಮವೇ ಮೊದಲಾದ ಮುಕ್ತರು ಹರಿಯನ್ನು ಹೊಂದಿಯೂ ಮುನ್ನಿನಂತೆಯೇ ಯಾವಾಗಲೂ ತಾರತಮ್ಯದಿಂದಲೇ ಇದ್ದುಕೊಂಡು ತಮ್ಮತಮ್ಮ ಸ್ವರೂಪಾನಂದವನ್ನು ಹೊಂದುವರು ಎಂದು ಹೆಚ್ಚಿನ ಶಾಸ್ತ್ರವಚನವಿರುವದು.

**ಅನನ್ದತೀರ್ಥಸನ್ನಾಮ್ನಾ ಪೂರ್ಣಪ್ರಜ್ಞಾಭಿಧಾಯುಜಾ ।**
**ಕೃತಂ ಹರ್ಯಷ್ಟಕಂ ಭಕ್ತ್ಯಾ ಪಠತಃ ಪ್ರೀಯತೇ ಹರಿಃ ॥**

ಆನಂದತೀರ್ಥವೆಂಬ ಉತ್ತಮವಾದ ಹೆಸರಿನಿಂದಲೂ ಪೂರ್ಣಪ್ರಜ್ಞರೆಂಬ ಹೆಸರಿನಿಂಡಲೂ ಒಡಗೂಡಿದವರಿಂಡ ರಚಿತವಾದ ಈ ಹರ್ಯಷ್ಟಕವನ್ನು ಪಠಿಸಿದಾತನಿಗೆ ಹರಿಯು ಪ್ರೀತನಾಗುವನು.

★★★★

# ಶುದ್ಧಾದ್ವೈತ

**-ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು**

ಶ್ರೀವಲ್ಲಭಾಚಾರ್ಯರು[1] ಪ್ರಚಾರಕ್ಕೆ ತಂದಿರುವ ಸಿದ್ಧಾಂತಕ್ಕೆ ಶುದ್ಧಾದ್ವೈತವೆಂದು ಹೆಸರು. ಶಂಕರಾಚಾರ್ಯರು ಹೇಳುವಂತೆ ಮಾಯೆಯ ಸಂಬಂಧದಿಂದ ಬ್ರಹ್ಮವು ಜೀವಜಗತ್ತುಗಳ ರೂಪವಾಗಿ ತೋರುತ್ತಲಿಲ್ಲ, ಯಾವ ಮಾಯೆಯ ಸೋಂಕೂ ಇಲ್ಲದೆಯೇ ಬ್ರಹ್ಮವು ಜೀವಜಗತ್ತುಗಳಾಗಿರುವವು–ಎಂದು ತಿಳಿಸುವದರಿಂದ ಈ ಸಿದ್ಧಾಂತಕ್ಕೆ '**ಶುದ್ಧಾದ್ವೈತ**'ವೆಂಬ ಹೆಸರು ಬಂದಿರುತ್ತದೆ.

ಮಾಧ್ವರಾಮಾನುಜಮತಗಳಂತೆಯೇ ಈ ಮತದಲ್ಲಿಯೂ ಭಕ್ತಿಗೆ ಹೆಚ್ಚಿನ ಸ್ಥಾನವಿರುವದು. ಆ ಎರಡು ಮತಗಳಂತೆಯೇ ಇಲ್ಲಿಯೂ ಜಗತ್ತನ್ನು ಸತ್ಯವೆಂದೇ ಒಪ್ಪಿಕೊಂಡಿರುತ್ತದೆ. ಆದ್ದರಿಂದ ಒಂದೇ ಜಾತಿಗೆ ಸೇರಿದ ಈ ಮೂರು ವೈಷ್ಣವಮತಗಳಿಗೂ ಶಾಂಕರಸಿದ್ಧಾಂತಕ್ಕೂ ಇರುವ ತಾರತಮ್ಯವನ್ನೂ ಇವುಗಳಲ್ಲಿಯೇ ಒಂದಕ್ಕೊಂದಕ್ಕೆ ಇರಬಹುದಾದ ಭೇದಗಳನ್ನೂ ಗೊತ್ತುಪಡಿಸಿಕೊಳ್ಳುವದು ವೇದಾಂತದ ಇತಿಹಾಸವನ್ನು ತಿಳಿಯಬೇಕೆಂಬವರಿಗೆ ತುಂಬ ಪ್ರಯೋಜನಕರವಾಗಿರುತ್ತದೆ.

ಮಾಧ್ವರಾಮಾನುಜರು ಒಪ್ಪಿರುವ ಪ್ರತ್ಯಕ್ಷ, ಅನುಮಾನ, ಆಗಮ ಎಂಬ ಮೂರು ಪ್ರಮಾಣಗಳನ್ನೂ ಈ ಮತದಲ್ಲಿ ಒಪ್ಪಿರುವದಲ್ಲದೆ ವೇದಕ್ಕೆ ಅನುಕೂಲವಾದ ಪ್ರಮಾಣಗಳೆಲ್ಲವನ್ನೂ ಅಂಗೀಕರಿಸಿರುತ್ತದೆ. ಪ್ರಮಾಣವೆಂಬುದು ಆತ್ಮಾನಾತ್ಮಗಳ ಅಧ್ಯಾಸದಿಂದ ಉಂಟಾಗಿರುವ ವ್ಯವಹಾರದಲ್ಲಿ ಮಾತ್ರ ಸೇರಿರುವದೆಂದು ಶಂಕರಾಚಾರ್ಯರು ಹೇಳಿರುವದನ್ನು ಮಧ್ವರಾಮಾನುಜರುಗಳಂತೆ ವಲ್ಲಭರೂ ಕಡೆಗಣಿಸಿರುತ್ತಾರೆ. ಆಗಮ(ಶಾಸ್ತ್ರ)ದಿಂದಲೇ ಪರಮಾರ್ಥ ತತ್ತ್ವವನ್ನು ಅರಿತುಕೊಳ್ಳಬೇಕೆಂಬುದು ಈ ಮೂವರ ಸಿದ್ಧಾಂತವು. ವಲ್ಲಭಾಚಾರ್ಯರು ಮಧ್ವರಾಮಾನುಜರಂತೆಯೇ ಉಪನಿಷತ್ತುಗಳ ಜೊತೆಗೆ ನಾರದಪಾಂಚರಾತ್ರದಿಂದಲೂ ಬೇರೆ ಕೆಲವು ವೈಷ್ಣವ ಗ್ರಂಥಗಳಿಂದಲೂ

---

1. ವಲ್ಲಭಾಚಾರ್ಯರ ಅಣುಭಾಷ್ಯವೂ ಆದರ ಟೀಕಾಕಾರರಾದ ಪಂಡಿತ ಶ್ರೀಧರತ್ರ್ಯಂಬಕಪಾತಕರವರು ಬರೆದಿರುವ ಪೀಠಿಕೆಯೂ ಆಧಾರವಾಗಿವೆ.

ಪ್ರಮಾಣವಚನಗಳನ್ನು ಉದಾಹರಿಸಿರುತ್ತಾರೆ. ಉಪನಿಷತ್ತು, ಗೀತೆ, ಬ್ರಹ್ಮಸೂತ್ರ- ಇವುಗಳಲ್ಲದೆ ಋಗ್ವೇದವೂ ಒಂದು ಪ್ರಸ್ಥಾನವೆಂದು ಮಧ್ವಾಚಾರ್ಯರು ಒಪ್ಪಿರುವ ಹಾಗೆ ಇವರು ಭಾಗವತವನ್ನು ನಾಲ್ಕನೆಯ ಪ್ರಸ್ಥಾನವೆಂದು ಇಟ್ಟುಕೊಂಡಿರುತ್ತಾರೆ. ಮಧ್ವಾಚಾರ್ಯರಂತೆಯೇ ಇವರೂ ಪುರಾಣವಚನಗಳನ್ನು ಹೇರಳವಾಗಿ ಉದಾಹರಿಸಿರುತ್ತಾರಾದರೂ ಮುಖ್ಯವಾಗಿ ಭಾಗವತವಚನಗಳನ್ನೇ ಹೆಚ್ಚಾಗಿ ಮುಂದಕ್ಕೆ ತಂದಿರುವದಕ್ಕೆ ಇದೇ ಕಾರಣವೆಂದು ತೋರುವದು.

ಬ್ರಹ್ಮದಲ್ಲಿ ಕೆಟ್ಟ ಗುಣಗಳು ಇಲ್ಲವೇ ಇಲ್ಲವೆಂದೂ ಒಳ್ಳೆಯ ಗುಣಗಳು ಲೆಕ್ಕವಿಲ್ಲದಷ್ಟು ಇರುವವೆಂದೂ ಮಧ್ವರಾಮಾನುಜರು ಒಪ್ಪಿರುತ್ತಾರಷ್ಟೆ. ವಲ್ಲಭಾಚಾರ್ಯರ ಮತದಲ್ಲಿ ಬ್ರಹ್ಮವು ನಿರ್ಗುಣವೂ ಸಗುಣವೂ ಆಗಿ ರುತ್ತದೆ. ಅದು ಸಗುಣವಾಗಿರುವದೆಂಬುದು ಶಂಕರಾಚಾರ್ಯರು ಹೇಳುವಂತೆ ಮಾಯಿಕವಲ್ಲ, ಪರಮಾರ್ಥವೆ; ಬ್ರಹ್ಮದಲ್ಲಿ ಒಂದಕ್ಕೊಂದು ವಿರುದ್ಧವಾದ ಧರ್ಮಗಳು ಕೂಡ ಇರುವವೆಂಬುದು ಅದರ ಮಹಿಮೆಯನ್ನು ತೋರಿಸುತ್ತದೆ- ಎಂಬುದು ಈ ಆಚಾರ್ಯರ ಮತವು.

ಕುಂಬಾರನು ಮಣ್ಣಿನಿಂದ ಗಡಿಗೆಯನ್ನು ಮಾಡುವಂತೆ ಬ್ರಹ್ಮವು ಜಗತ್ತನ್ನು ಪ್ರಕೃತಿಯಿಂದ ಮಾಡುತ್ತದೆ ಎಂಬುದು ಮಧ್ವಾಚಾರ್ಯರ ಮತವು. ಗಡಿಗೆಗೆ ಕುಂಬಾರನಂತೆ ಬ್ರಹ್ಮವು ಜಗತ್ತಿಗೆ ನಿಮಿತ್ತಕಾರಣವಾಗಿರವದಲ್ಲದೆ ಗಡಿ ಗೆಗೆ ಮಣ್ಣಿನಂತೆ ಉಪಾದಾನಕಾರಣವೂ ಆಗಿರುವದೆಂಬುದು ರಾಮಾನುಜ, ಶಂಕರ, ವಲ್ಲಭ- ಈ ಮೂವರಿಗೂ ಸಮ್ಮತವು. ಬ್ರಹ್ಮದಲ್ಲಿರುವ ಚಿತ್ತು, ಅಚಿತ್ತು- ಎಂಬ ಎರಡು ಶರೀರಗಳು ಮೊದಲು ಸೂಕ್ಷ್ಮರೂಪದಲ್ಲಿದ್ದು ಸೃಷ್ಟಿಯ ಕಾಲದಲ್ಲಿ ಸ್ಥೂಲರೂಪವಾಗಿ ಜೀವ, ಜಗತ್ತು-ಎಂಬ ರೂಪದಲ್ಲಿ ಕಾಣಿಸಿಕೊಳ್ಳುವವೆಂಬುದು ರಾಮಾನುಜರ ಮತ; ಬ್ರಹ್ಮವು ತಾನು ಇದ್ದಂತೆಯೇ ಇದ್ದರೂ ಜೀವಜಗತ್ತುಗಳಾಗಿ ಮಾರ್ಪಟ್ಟಿರುವಂತೆ ಅಜ್ಞಾನಿಗಳಿಗೆ ತೋರುವದೆಂಬುದು ಶಂಕರರ ಮತ. ಆದರೆ ವಲ್ಲಭರ ಮತವೇ ಬೇರೆ. ನಿರ್ಗುಣವಾಗಿರುವ ಬ್ರಹ್ಮವೇ ಅವಿರ್ಭಾವ (ಹೊರತೋರುವದು), ತಿರೋಭಾವ (ಮರೆಯಾಗುವದು)- ಎಂಬ ಎರಡು ಶಕ್ತಿಗಳಿಂದ ಅಕ್ಷರ, ಜೀವ, ಜಗತ್ತು -ಎಂಬ ರೂಪಗಳನ್ನು ಧರಿಸಿರುವದು ಎಂಬುದು ಅವರ ಸಿದ್ಧಾಂತವು. ಕಾಮಧೇನು, ಕಲ್ಪವೃಕ್ಷ, ಚಿಂತಾಮಣಿಗಳು ಜನರಿಗೆ ಬೇಕುಬೇಕಾದ ಇಷ್ಟಾರ್ಥಗಳನ್ನು ಕಲ್ಪಿಸಿಕೊಡುವಾಗ ತಾವು ಯಾವ ಮಾರ್ಪಾಡನ್ನೂ ಹೊಂದದೆ ಇರುವಂತೆ ಬ್ರಹ್ಮವು ತಾನು ಇದ್ದಂತೆಯೇ ಇದ್ದುಕೊಂಡು ಈ ಮೂರು

ರೂಪಗಳನ್ನೂ ಪಡೆಯುವದು-ಎಂದು ಶುದ್ಧಾದ್ವೈತಿಗಳು ಹೇಳುವರು.

ವಲ್ಲಭಚಾರ್ಯರ ಮತದಲ್ಲಿ ಬ್ರಹ್ಮಕ್ಕೆ ಅಧಿದೈವಿಕ, ಅಧ್ಯಾತ್ಮಿಕ, ಅಧಿಭೌತಿಕ- ಎಂಬ ಮೂರು ರೂಪಗಳುಂಟು, ಅಧಿದೈವಿಕಕ್ಕೆ **ಪರಬ್ರಹ್ಮ**ವೆಂದು ಹೆಸರು; ಇದರಲ್ಲಿ ಅಲೌಕಿಕವಾದ ಸಕಲಧರ್ಮಗಳೂ ಪ್ರಕಟವಾಗಿರುವವು. ಹೀಗೆ ಸಂಪೂರ್ಣವಾಗಿ ಪ್ರಕಟವಾಗಿರುವ ಸಚ್ಚಿದಾನಂದ ಸ್ವರೂಪಕ್ಕೆ **ಶ್ರೀಕೃಷ್ಣ**ನೆಂದೂ **ಪುರುಷೋತ್ತಮ**ನೆಂದೂ ಹೆಸರುಗಳುಂಟು. ಅಧ್ಯಾತ್ಮಿಕರೂಪಕ್ಕೆ ಎಂದರೆ ನಮ್ಮೆಲ್ಲರಲ್ಲಿಯೂ ಇರುತ್ತಿರುವ ರೂಪಕ್ಕೆ **ಅಕ್ಷರಬ್ರಹ್ಮ**ವೆಂದು ಹೆಸರು; ಇದರಲ್ಲಿ ಪುರುಷೋತ್ತಮ ರೂಪಕ್ಕಿಂತ ಸ್ವಲ್ಪ ಆನಂದಾಂಶವು ಮರೆಯಾಗಿರುವದು. ಅಧಿಭೌತಿಕ ರೂಪಕ್ಕೆ ಎಂದರೆ ಹೊರಗೆ ನಮಗೆ ತೋರುತ್ತಿರುವ ರೂಪಕ್ಕೆ **ಜಗತ್ತು** ಎಂದು ಹೆಸರು.

ಮಧ್ವರಾಮಾನುಜರಂತೆ ವಲ್ಲಭರೂ ಜಗತ್ತನ್ನು ಸತ್ಯವೆನ್ನುತ್ತಾರೆ. ಬ್ರಹ್ಮನ ಅಧಿಭೌತಿಕರೂಪವು ಹೇಗೆ ಮಿಥ್ಯೆಯಾದೀತು? ಸ್ವಪ್ನದಲ್ಲಿ ತೋರುವ ಜಗತ್ತು ಆ ಕಾಲಕ್ಕೆ ನಿಜವಾಗಿ ಕಂಡರೂ ಎಚ್ಚತ್ತ ಮೇಲೆ ಬಾಧಿತವಾಗುವದರಿಂದ ಸತ್ಯವಲ್ಲ; ಆದರೆ ಈಗ ತೋರುವ ಜಗತ್ತು ಎಂದಿಗೂ ಬಾಧಿತವಾಗುವದಿಲ್ಲವಾದ್ದರಿಂದ ಇದು ಮಿಥ್ಯೆಯಲ್ಲ. ಇದಕ್ಕೆ ನಾಶವೂ ಇಲ್ಲ, ಇದು ನಿತ್ಯವು; ಪ್ರಲಯದಲ್ಲಿ ಇದು ಬ್ರಹ್ಮದಲ್ಲಿ ಅಡಗಿದ್ದು ಸೃಷ್ಟಿಯಲ್ಲಿ ಹೊರತೋರಿಕೊಳ್ಳುವದು- ಎಂಬುದು ಈ ಆಚಾರ್ಯರ ಮತ.

ಜಗತ್ತಿನಲ್ಲಿರುವ **ಜೀವರೆಲ್ಲ ಬ್ರಹ್ಮವೆ.** ಆದರೆ ಅವಿದ್ಯೆಯಿಂದ ಬ್ರಹ್ಮವು ಜೀವರಾಗಿ ತೋರುತ್ತಿರುವದೆಂಬ ಶಂಕರಮತವು ಸರಿಯಲ್ಲ. ಬ್ರಹ್ಮವು ತಾನು ಅನೇಕವಾಗಬೇಕೆಂದು ಬಯಸಲು ಬೆಂಕಿಯಿಂದ ಕಿಡಿಗಳು ಸಿಡಿದು ಬರುವಂತೆ ಮೇಲುಕೀಳೆಂಬ ತಾರತಮ್ಯದೊಡನೆ ಕೂಡಿದ ಸೂಕ್ಷ್ಮರೂ ಪರಿಚ್ಛಿನ್ನರೂ ಆದ ಜೀವರು ಬ್ರಹ್ಮದಿಂದ ಹೊರಕ್ಕೆ ಬಂದಿರುತ್ತಾರೆ. ಬ್ರಹ್ಮದ ಆನಂದಾಂಶವೂ ಐಶ್ವರ್ಯಾದಿಗಳೂ ಜೀವರಲ್ಲಿ ಮರೆಯಾಗಿರುವವಾದ್ದರಿಂದ ಇವರು ದೀನರಾಗಿ ಪರವಶರಾಗಿ ದುಃಖಿಗಳಾಗಿ ಅಜ್ಞಾನಿಗಳಾಗಿ ವಿಷಯಾಸಕ್ತರಾಗಿರುವರು. ಮಾಧ್ವರಾಮಾನುಜರು ಹೇಳುವಂತೆ ಜೀವರು ಬ್ರಹ್ಮದ ಅಂಶರೆಂಬುದು ನಿಜವಾದರೂ ಆ ಇಬ್ಬರು ಆಚಾರ್ಯರೂ ಹೇಳುವಂತೆ ಜೀವರು ಮುಕ್ತಿಯಲ್ಲಿಯೂ ಬ್ರಹ್ಮಕ್ಕಿಂತ ಬೇರೆಯಾಗಿರುವದಿಲ್ಲ; ಆನಂದಾಂಶವು ಪ್ರಕಟವಾದ ಮೇಲೆ

ಎಲ್ಲರೂ ಬ್ರಹ್ಮವೇ ಆಗಿಬಿಡುತ್ತಾರೆ. ಜೀವಬ್ರಹ್ಮೈಕ್ಯವನ್ನು ಹೀಗೆ ಒಪ್ಪುವದರಿಂದ ಅದ್ವೈತವಚನಗಳಿಗೂ ಸಾರ್ಥಕ್ಯವು ಬರುವದು, ಶಂಕರರ ಅನುಯಾಯಿಗಳಂತೆ ಮಾಯೆಯನ್ನು ಒಪ್ಪಬೇಕಾದದ್ದೂ ಅವಶ್ಯವಿಲ್ಲ-ಎಂಬುದು ವಲ್ಲಭಾಚಾರ್ಯರ ಅಭಿಪ್ರಾಯವು.

ವಲ್ಲಭಚಾರ್ಯರ ಮತದಲ್ಲಿ ಸಾಧನವು ಮೂರು ಬಗೆ. ಅಧಿಭೌತಿಕವಾದ **ಕರ್ಮಮಾರ್ಗ**ವನ್ನು ಅನುಸರಿಸುವವರು ಮತ್ತೆಮತ್ತೆ ಈ ಜಗತ್ತಿನಲ್ಲಿ ಹುಟ್ಟಿ ವಿಷಯಾನಂದವನ್ನು ಅನುಭವಿಸುತ್ತಾರೆ; ಅಧ್ಯಾತ್ಮಿಕಮಾರ್ಗವಾದ **ಜ್ಞಾನವನ್ನು** ಅನುಸರಿಸುವವರು ಅಕ್ಷರಬ್ರಹ್ಮದಲ್ಲಿ ಲಯವಾಗುತ್ತಾರೆ, ಇವರು ಮತ್ತೆ ಸಂಸಾರವನ್ನು ಹೊಂದುವದಿಲ್ಲ; ಆದರೆ ಈ ಎರಡಕ್ಕಿಂತಲೂ ಹೆಚ್ಚಿನದಾದ **ಭಕ್ತಿಮಾರ್ಗ**ವನ್ನು ಅನುಸರಿಸುವವರು ಪರಬ್ರಹ್ಮವಾದ ಶ್ರೀಕೃಷ್ಣನೊಡನೆ ಇದ್ದುಕೊಂಡು ಆತನ ಕೃಪೆಯ ಆನಂದವನ್ನು ಪಡೆಯುತ್ತಾರೆ. ಜ್ಞಾನಮಾರ್ಗದಿಂದ ಅಕ್ಷರಬ್ರಹ್ಮದಲ್ಲಿ ಲಯವಾದ ಜ್ಞಾನಿಜೀವರು ಕೂಡ ಭಗವದಿಚ್ಛೆಯಂತೆ ಮತ್ತೆ ಹೊರಕ್ಕೆ ಬಂದು ಈ ಮಾರ್ಗವನ್ನು ಅನುಸರಿಸುವರು.

ಭಕ್ತಿಯಲ್ಲಿ **ಮರ್ಯಾದಾಮಾರ್ಗ**ವೆಂತಲೂ **ಪುಷ್ಟಿಮಾರ್ಗ**ವೆಂತಲೂ ಎರಡು ಮಾರ್ಗಗಳನ್ನು ಈ ಆಚಾರ್ಯರು ಒಪ್ಪಿರುತ್ತಾರೆ. ಸಂಸಾರದಿಂದ ಬಿಡುಗಡೆಯಾಗಬೇಕೆಂಬ ಇಚ್ಛೆಯಿಂದ ಮಾಡುವ ಶ್ರವಣಾದಿಭಕ್ತಿಯು ಮರ್ಯಾದಾಮಾರ್ಗಕ್ಕೇ ಸೇರಿದ್ದು; ಇದು ವೇದೋಕ್ತಮಾರ್ಗವು. ಪರಮಾತ್ಮನ ಅನುಗ್ರಹಕ್ಕೆ **ಪುಷ್ಟಿ**ಯೆಂದು ಹೆಸರು. ಈ ಪುಷ್ಟಿಯಿಂದ ಉಂಟಾದ ಭಕ್ತಿಯು ಪುಷ್ಟಿಮಾರ್ಗಕ್ಕೆ ಸೇರಿದ್ದು. ಪುಷ್ಟಿಭಕ್ತಿಯು ಯಾವದೊಂದು ನಿಮಿತ್ತದಿಂದಲೂ ಉಂಟಾಗದೆ ಇರುವ ಸ್ವಾಭಾವಿಕವಾದ ಅತ್ಯುತ್ಕಟ ಸ್ನೇಹವಾದ್ದರಿಂದ ಇದು ಎಲ್ಲಾ ಸಾಧನಗಳಿಗಿಂತಲೂ ಶ್ರೇಷ್ಠವಾದದ್ದೆಂತಲೂ ಪುಷ್ಟಿಮಾರ್ಗದಲ್ಲಿ ಜ್ಞಾನಿಭಕ್ತನು ಸರ್ವಶ್ರೇಷ್ಠನೆಂತಲೂ ಪುಷ್ಟಿಮಾರ್ಗದಿಂದ ಸಿಕ್ಕುವ ಪುರುಷೋತ್ತಮಪ್ರಾಪ್ತಿಯೇ ಅತ್ಯಂತಪರಮಪುರುಷಾರ್ಥವೆಂತಲೂ ವಲ್ಲಭಾಚಾರ್ಯರು ಅಭಿಪ್ರಾಯ ಪಟ್ಟಿರುತ್ತಾರೆ.

★★★★★

# ಸದಾಚಾರವೃಕ್ಷದ ಸ್ವರೂಪ

(ಶ್ರೀ ವಿದ್ವಾನ್ ಕಾಶೀ ಪ್ರಾಣೇಶಾಚಾರ್ಯರು,
ಸಂಸ್ಕೃತಮಹಾಪಾಠಶಾಲಾ ಉಪಾಧ್ಯಾಯರು, ಮೈಸೂರು)

## 1. ಸದಾಚಾರವೃಕ್ಷಕ್ಕೆ ಧರ್ಮವೇ ಮೂಲ

ಸದಾಚಾರದ ವಿಷಯದಲ್ಲಿ ಹಿರಿಯರು ಒಂದು ಪದ್ಯವನ್ನು ಹೇಳುತ್ತಿರುವರು. ಅದರ ವ್ಯಾಖ್ಯಾನದಿಂದ ಸಾಮಾನ್ಯವಾಗಿ ಸದಾಚಾರದ ಸ್ವರೂಪಪ್ರಯೋಜನಗಳನ್ನು ತಿಳಿಯಬಹುದು. ಆ ಪದ್ಯವಾವುದೆಂದರೆ -

**ಧರ್ಮೋಽಸ್ಯ ಮೂಲಾನ್ಯಸವಃ ಪ್ರಕಾಂಡೋ**
**ವಿತ್ತಾನಿ ಶಾಖಾಶ್ಛದನಾನಿ ಕಾಮಾಃ ।**
**ಯಶಾಂಸಿ ಪುಷ್ಪಾಣಿ ಫಲಂ ಚ ಪುಣ್ಯ-**
**ಮಸೌ ಸದಾಚಾರತರುರ್ಮಹೀಯಾನ್ ॥**

ಈ ಪದ್ಯದ ಐದಂಶವನ್ನೂ ಒಂದೊಂದಾಗಿ ತೆಗೆದು ಸಾಧ್ಯವಾದಷ್ಟು ಅರ್ಥವನ್ನು ನಿರೂಪಿಸುವೆನು.

**ಧರ್ಮೋಽಸ್ಯ ಮೂಲಾನಿ** - ಸದಾಚಾರಕ್ಕೆ ಧರ್ಮವು ಮೂಲವು. ಧರ್ಮವೆಂದರೆ ಶಾಸ್ತ್ರವಿಧಿಯನ್ನು ಪ್ರತಿಪಾಲಿಸತಕ್ಕದ್ದಾಗಿರುವದು. ಈಗಿನ ಕಾಲದಲ್ಲಿ ವಿಧಿಪ್ರತಿಪಾಲನೆಗೆ ಐದು ಬಗೆಯಾದ ಎಡರು ಕಾಣಬರುತ್ತಿರುವದು: 1. ವಿಧಿಗಳ ಅರಿವಿಲ್ಲದಿರುವದು, 2. ವಿಧಿಗಳಲ್ಲಿ ಶ್ರದ್ಧೆಯಿಲ್ಲದಿರುವದು, 3. ವಿದೇಶೀಯರ ಅನುಕರಣದ ಹೆಚ್ಚಿಕೆ, 4. ತೋರಿದಂತೆ ನಡೆಯುವದರ ಪ್ರಾಬಲ್ಯ, 5. ಸ್ವಾಭಾವಿಕವಾದ ಪಾಲುಮಾರಿಕೆ (ಜಡತ್ವ).

ಸಾಮಾನ್ಯವಾಗಿ ನಮ್ಮೊಳಗೆ ಈ ಐದು ದೋಷಗಳೂ ಹೆಚ್ಚುತ್ತಿರುವಂತೆ ಕಾಣುತ್ತಿರುವದು. ಪಂಡಿತರು ಹೊಟ್ಟೆಗಿಲ್ಲದೆ ಅದರ ಚಿಂತೆಯಲ್ಲಿಯೇ ಒದ್ದಾಡಬೇಕಾಗಿರುವದು; ಅವರು ಹಿಂದಿನಂತೆ ಶಾಸ್ತ್ರಾಧ್ಯಯನ, ಅಧ್ಯಾಪನ- ಇವುಗಳಲ್ಲಿ ಹೆಚ್ಚು ಮನವನ್ನಿಡಲಾರದೆ ಹೋಗಿರುವರು; ಆದ್ದರಿಂದ ಶಾಸ್ತ್ರೀಯವಿಧಿಗಳ

ಸಂಬಂಧದಲ್ಲಿ ಅವರಿಗೂ ಉಳಿದ ಜನರಿಗೂ ಅಜ್ಞಾನವು ಕವಿದಿರುವದು; ತಿಳಿದ ಪಂಡಿತರಲ್ಲಿ ಅಶ್ರದ್ದೆಯೂ ಹೆಚ್ಚುತ್ತಿರುವದು. ವಿಜಾತೀಯಶಿಕ್ಷಣೆಯ ಪ್ರಭಾವವು ಹೆಚ್ಚುತ್ತಿರುವದರಿಂದ ಶಾಸ್ತ್ರೀಯವಿಧಿಗಳಲ್ಲಿ ಶ್ರದ್ಧೆಯು ತಪ್ಪುತ್ತಿರುವದು. ಈಗ ಹುಡುಗರಿಗೆ ಐದನೆಯ ವರ್ಷದಿಂದ ಆರಂಭಿಸಿ ನಡೆಯುವ ಇಂಗ್ಲಿಷ್‌ವಿದ್ಯೆಯ ಶಿಕ್ಷಣೆಯಲ್ಲಿ ಕೊಂಚವಾದರೂ ಭಾರತಶಾಸ್ತ್ರೀಯವಾದ ವಿಧಿಗಳ ಉಲ್ಲೇಖವು ಕಾಣಬರುವದಿಲ್ಲ; ಇದಕ್ಕೆ ಬದಲು ದೇಶೀಯಶಾಸ್ತ್ರಗಳಲ್ಲಿ ಅಶ್ರದ್ಧೆಯೇ ಪ್ರಕಾಶಿತವಾಗಿರುವದು. ಆದ್ದರಿಂದ ಶಿಕ್ಷಣೆಯ ಮೊದಲಿನಿಂದಲೂ ಜನಗಳ ಮನದಲ್ಲಿ ಶಾಸ್ತ್ರಾಚಾರದ ಅಶ್ರದ್ಧೆಯು ನೆಲೆಗೊಳ್ಳುತ್ತ ಬಂದಿರುವದು. ಈ ದೇಶದಲ್ಲಿರುವಶಾಸ್ತ್ರಾಚಾರವಿಲ್ಲದಪರಕೀಯರಸಿರಿಯನ್ನುನೋಡುವದರಿಂದಲೂ ಶಾಸ್ತ್ರಾಚಾರದ ಪ್ರಯೋಜನಬೋಧವು ಕಡಿಮೆಯಾಗುತ್ತಾ ನಡೆದಿರುವದು. ಹಾಗೆ ವಿಭವವನ್ನು ಪಡೆದ ವಿಜಾತೀಯರು ಹೇಗೆ ಮತ್ತೆ ಯಾವ ಬಗೆಯಿಂದ ಎಲ್ಲ ವಿಷಯಗಳಲ್ಲಿಯೂ ಮೇಲ್ಮೆಯನ್ನು ಪಡೆಯುತ್ತಿರುವರೆಂಬುದನ್ನು ಯೋಚಿಸಿದೆ ಮೋಹದಿಂದ ದೇಶೀಯರು ತಮ್ಮ ಶಾಸ್ತ್ರವಿರೋಧಿಯಾದ ವ್ಯವಹಾರದ ಅನುಕರಣವನ್ನು ಕೈಗೊಳ್ಳುತ್ತಿರುವರು.

ಶಾಸ್ತ್ರಾಚಾರದ ಲೋಪಕ್ಕೆ ಮೇಲೆ ಹೇಳಿದ ಮೂರು ಕಾರಣಗಳೂ ಆಗಂತುಕವಾದವುಗಳಾಗಿವೆ. ಇವು ಮೊದಮೊದಲು ಸ್ವಲ್ಪವಾಗಿದ್ದವು, ಈಗ ಪ್ರಬಲವಾಗಿರುವವು. ಇವುಗಳನ್ನು ಹೋಗಲಾಡಿಸುವದು ಅತಿಕಠಿನವಾಗಿದ್ದರೂ ಅಸಾಧ್ಯವೆಂದೇ ಹೇಳಲಾಗುವದಿಲ್ಲ. ಏಕೆಂದರೆ ಶಾಸ್ತ್ರೀಯವಾದ ವಿಧಿಗಳನ್ನು ತಿಳಿದುಕೊಳ್ಳಲು ಅಭಿಲಾಷೆಪಟ್ಟರೆ, ಅವನ್ನು ತಿಳಿಯಲು ಸಾಧ್ಯವಿರುವದು. ಈಗಲೂ ಬಹುಜನ ಶಾಸ್ತ್ರಪಂಡಿತರು ಇರುವರು, ಈಗಲೂ ಅನೇಕರು ಶಾಸ್ತ್ರದ ವಿಧಿಯನ್ನು ಪಾಲಿಸಲು ಯತ್ನಪಡುತ್ತಿರುವರು, ಪಾಲಿಸುತ್ತಲೂ ಇರುವರು. ವಿದೇಶೀಯಶಿಕ್ಷಣೆಯ ದೋಷವೂ ಶಿಷ್ಯವರ್ಗದ ಬಾಲ್ಯಯೌವನಗಳಲ್ಲಿಯೇ ಅತಿ ಪ್ರಬಲವಾಗಿರುವದು; ವಯಸ್ಸಾದವರ ಮತ್ತು ಚಿಂತಾಶೀಲರ ಮಧ್ಯದಲ್ಲಿ ಈ ದೋಷಗಳು ಬಹುಮಟ್ಟಿಗೆ ಕಡಿಮೆಯಾಗುವವು; ಮತ್ತು ಯಾವ ಶಿಕ್ಷಣೆಯ ದೋಷದಿಂದ ಶಾಸ್ತ್ರಾಚಾರಗಳಲ್ಲಿ ಅಶ್ರದ್ಧೆಯು ಹುಟ್ಟಿದೆಯೋ ಅದೇ ಶಿಕ್ಷಣೆಯ ವಿಶೇಷವಾದ ಅನುಶೀಲನದಿಂದಲೂ ಈ ದೋಷಗಳು ಬಹುಮಟ್ಟಿಗೆ ಕಳೆದು ಹೋಗುವವು. ಯೂರೋಪ್ಯರ ವಿಜ್ಞಾನವಿದ್ಯೆಯ ಚರ್ಚೆಯಿಂದ ಸ್ವದೇಶೀಯ ಶಾಸ್ತ್ರಾಚಾರಗಳ ಸಾರವತ್ತೆಯು

ಬಹುಮಟ್ಟಿಗೆ ಯುಕ್ತಿಮುಖದಿಂದಲೂ ಸುಪರಿಸ್ಫುಟವಾಗುವದು. ಹಿಂದೆ ಇಂಗ್ಲಿಷನ್ನು ಕಲಿತ ಹುಡುಗರು ಹೇಗೆ ಒಮ್ಮೆ ದಾರಿಯನ್ನು ಬಿಡುತ್ತಿದ್ದರೋ. ಈ ಈಗುಣ ಹುಡುಗರು ಹಾಗೆ ನಡೆಯುವದಿಲ್ಲ.

ಈಗ ಭಾರತವರ್ಷದಲ್ಲಿ ಪ್ರಾಧಾನ್ಯವನ್ನು ಪಡೆದ ಇಂಗ್ಲೀಷರ ಮೇಲ್ಮೆಗೆ ಕಾರಣವನ್ನು ಚೆನ್ನಾಗಿ ತಿಳಿಯಲು ಯತ್ನಪಟ್ಟರೆ ಗೊತ್ತಾಗುವದೇನೆಂದರೆ ಇವರ ಪ್ರಾಧಾನ್ಯತೆಗೆ ಪ್ರಕೃತಕಾರಣವು ಅನಾಚಾರ ಮತ್ತು ಅತ್ಯಾಚಾರಗಳಲ್ಲಿ, ಅವರ ಸ್ವದೇಶಸ್ವಧರ್ಮಗಳಿಗೆ ಉಪಯೋಗಿಯಾದ ಆಚಾರವನ್ನು ಕಾಪಾಡುವದರಿಂದ ಉಂಟಾದ ಶರೀರದ ಮತ್ತು ಮನಸ್ಸಿನ ದೃಢತ್ವಪಟುತ್ವಗಳು, ಮತ್ತು ಒಬ್ಬರಲ್ಲೊಬ್ಬರಿಗಿರುವ ಸಹಾನುಭೂತಿ. ನಮ್ಮ ಶಾಸ್ತ್ರದ ಆಚಾರಗಳ ಉದ್ದೇಶವನ್ನು ಆಲೋಚಿಸಿದರೂ ಶರೀರಕ್ಕೆ ಸಾರವತ್ತ್ವ, ತೇಜಸ್ವಿತ್ವ, ಪಟುತ್ವ – ಇವುಗಳೆಲ್ಲ ಉಂಟಾಗುವವು. ಮತ್ತು ಮನಸ್ಸಿಗೆ ಔದಾರ್ಯವೂ ಸಾತ್ತ್ವಿಕಭಾವಗಳೂ ಹೆಚ್ಚುವವು ಎಂಬುದು ಸ್ಪಷ್ಟವಾಗಿ ತೋರಿಬರುವದು. ಆದ್ದರಿಂದ ಶಾಸ್ತ್ರೋಕ್ತವಾದ ಆಚಾರದ ರಕ್ಷಣೆಯಿಂದಲೇ ಈ ದೇಶದವರು ಬೇರೆಯವರಿಗಿಂತಲೂ ಹೆಚ್ಚಾದ ಗುಣಕ್ಕೆ ಅಧಿಕಾರಿಗಳಾಗಬಹುದು. ಜನರು ಕ್ರಮಕ್ರಮವಾಗಿ ಈ ನಿಜವನ್ನು ಮನಗಾಣುತ್ತಿರುವರು. ಇತರರ ಅನುಕರಣೆಯು ದೇಶಕ್ಕೆ ಕೆಡುಕು, ಕೀಳುತನಕ್ಕೆ ಕುರುಹು – ಎಂಬುದಾಗಿ ಅನೇಕರು ತಿಳಿಯುತ್ತಿರುವರು. ಆದಕಾರಣ ಪ್ರಯತ್ನ ಪಟ್ಟರೆ ಶಾಸ್ತ್ರಾಚಾರಲೋಪಕ್ಕೆ ಕಾರಣವಾದ ಮೂರು ಆಗಂತುಕದೋಷಗಳನ್ನು ಕಳೆದುಕೊಳ್ಳುವದು ಅಸಾಧ್ಯವಲ್ಲ.

ಆದರೆ ಮನಸ್ಸಿಗೆ ತೋರಿದಂತೆ ನಡೆಯುವದು, ಪಾಲುಮಾರಿಕೆ – ಇವೆರಡೂ ಇಂಥ ದೋಷಗಳಲ್ಲ. ಇವು ಸಹಜವಾದ ದೋಷಗಳಾಗಿರುವದರಿಂದ ಇವುಗಳನ್ನು ಪರಿಹರಿಸಿಕೊಳ್ಳುವದಕ್ಕೆ ಸದಾಚಾರದಲ್ಲಿ ತೊಡಗುವದಕ್ಕೆ ಪ್ರಯತ್ನ ಮಾಡುವದೊಂದೇ ಉಪಾಯವಾಗಿರುವದು.

ಮನುಷ್ಯನಲ್ಲಿ ಪಶುಧರ್ಮ, ಜಡಧರ್ಮ – ಇವುಗಳೆರಡೂ ಇರುವವು. ಒಳ್ಳೆಯದು, ಕೆಟ್ಟದ್ದು – ಎಂಬುದನ್ನು ವಿಚಾರಿಸದೆ ಮನಸ್ಸಿಗೆ ಬಂದ ಹಾಗೆಲ್ಲ ಆ ಕೆಲಸವನ್ನು ಕೈಗೊಳ್ಳುವದು ಪಶುಧರ್ಮವು; ಈ ಪಶುಭಾವದ ನ್ಯೂನತೆಯನ್ನು ಸಾಧಿಸುವದು ನಮ್ಮ ಶಾಸ್ತ್ರಗಳಿಗೆ ಒಂದು ಮುಖ್ಯವಾದ

ಉದ್ದೇಶವು. ಮಾನವನು ತನ್ನ ಉದ್ದೇಶಸ್ಥೈರ್ಯವನ್ನೂ ಮನೋಯೋಗದ ಐಕಾಂತಿಕತ್ವವನ್ನೂ ಚಿತ್ತದ ಪ್ರಾಶಸ್ತ್ಯವನ್ನೂ ಶರೀರದ ಪಾಟವವನ್ನೂ ಹೆಚ್ಚಿಸುವ ಕಾರ್ಯವನ್ನು ಕೈಗೊಳ್ಳಬೇಕೆಂಬುದೇ ಶಾಸ್ತ್ರದ ಅಭಿಪ್ರಾಯವು. ತಿನ್ನುವ ವಸ್ತುವನ್ನು ನೋಡಿದಾಗೆಲ್ಲ ತಿನ್ನುವದು, ಮಲಗಬೇಕೆಂದು ಇಚ್ಛೆಬಂದಾಗೆಲ್ಲ ಮಲಗುವದು, ಸಿಟ್ಟಿಗೆದ್ದಾಗೆಲ್ಲ ತದನುಗುಣವಾದ ಕಾರ್ಯದಲ್ಲಿ ತೊಡಗುವದು – ಇವೇ ಮುಂತಾದ ಯಥೇಚ್ಛಾಚಾರಗಳು ಆರ್ಯಶಾಸ್ತ್ರದಲ್ಲಿ ವಿಗರ್ಹಿತವಾದವು. ಇವುಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವದು ಶಾಸ್ತ್ರಾಚಾರಪಾಲನವನ್ನುಳಿದು ಮತ್ತೆ ಯಾವ ಉಪಾಯದಿಂದಲೂ ಆಗಲಾರದು. ಶಾಸ್ತ್ರಾಚಾರಪಾಲನೆಯಿಂದಲೆ ಸತ್ತ್ವಗುಣದ ಸಂವರ್ಧನವಾಗಿ ರಜೋಗುಣದ ಪರಿಹಾರವಾಗುವದು.

ಮನುಷ್ಯನ 'ಜಡಧರ್ಮ'ಕ್ಕೆ ಸುಸ್ಪಷ್ಟವಾದ ಲಕ್ಷಣವು ಅವನ ಆಲಸ್ಯವು. ಶಾಸ್ತ್ರಾಚಾರವು ಈ ಆಲಸ್ಯ ಅಥವಾ ಪಾಲುಮಾರಿಕೆಯನ್ನು ಹುಟ್ಟಡಗಿಸುವದು. ಆಯಾಯ ವೇಳೆಗೆ ತಕ್ಕ ಆಯಾ ಶಾಸ್ತ್ರದ ಆಚರಣೆಗಳಿಂದ ಜಡತ್ವದ ಪ್ರಾಪ್ತಿಗೆ ಅವಕಾಶವೇ ಇರುವದಿಲ್ಲ. ಶಾಸ್ತ್ರಾಚಾರಗಳನ್ನು ನಿಯತವಾಗಿ ಅಭ್ಯಾಸಮಾಡುವವರಿಗೆ ಅವು ಶರೀರಕ್ಕೆ ಬಲವನ್ನೂ ತೇಜಸ್ಸನ್ನೂ ಕೊಡುವವು. ಶಾಸ್ತ್ರವು ನಮ್ಮನ್ನು ಯಾವಾಗಲೂ ನಿರ್ಬಂಧದಲ್ಲಿಡುವದಿಲ್ಲ, ಉಚಿತವಾದ ವೇಳೆಯಲ್ಲಿ ಯೋಗ್ಯವಾದ ಅವಸ್ಥೆಯಲ್ಲಿ ಆಹಾರವಿಹಾರನಿದ್ರಾದಿಗಳನ್ನು ಮಾಡುವದಕ್ಕೆ ಅನುಜ್ಞೆಯನ್ನು ಕೊಟ್ಟಿರುತ್ತದೆ. ಆದರೆ ಅದು ಲೋಭ, ಸುಖೇಚ್ಛೆ, ಅಥವಾ ಸೋಮಾರಿತನ ಇವುಗಳಿಗೆ ಅಡಿಯಾಳಾಗುವಂತೆ ಅವಕಾಶವನ್ನು ಸ್ವಲ್ಪವೂ ಕೊಡಲಾರದು. ಶಾಸ್ತ್ರಾಚಾರದಲ್ಲಿರುವ ಜಡತ್ವನಾಶಕವಾದ ಈ ಗುಣವನ್ನು ಮನಸ್ಸಿಗೆ ತಂದುಕೊಳ್ಳದೆ ಅದರ ಸ್ವೇಚ್ಛಾಚಾರನಿವಾರಣೆಯಲ್ಲಿ ಹೆಚ್ಚು ದೃಷ್ಟಿಕೊಡುವದರಿಂದ ಎರಡು ಬಗೆಯಾದ ಭ್ರಮೆಗಳು ತಲೆದೋರುವವು:

1. ''ಶಾಸ್ತ್ರಾಚಾರವು ಮಾನವನ ಎಲ್ಲ ಸ್ವತಂತ್ರಮಾರ್ಗಗಳನ್ನೂ ಹಾಳುಮಾಡುವದು, ಮನುಷ್ಯನ ಜೀವನದಲ್ಲಿ ಸ್ವಲ್ಪವೂ ತೇಜಸ್ವಿತೆಯನ್ನು ಕೊಡಲಾರದು; ಮನುಷ್ಯನನ್ನು ನಿರ್ಜೀವನಂತೆ ಮಾಡುವದು.''

ಶಾಸ್ತ್ರಾಚಾರದ ಸಂಬಂಧದಲ್ಲಿ ಈ ಬಗೆಯಾದ ಭ್ರಮೆಯು ಆಗಾಗ ತಲೆದೋರುತ್ತಿರುವದು. ಇದಕ್ಕೆ ಶಾಸ್ತ್ರಾಚಾರದ ಜಡತಾನಾಶಕ ಮತ್ತು ತೇಜಸ್ವಿತಾ

ಸಾಧಕವಾದ ಗುಣದ ಕಡೆಗೆ ಲಕ್ಷ್ಯಕೊಡದಿರುವದು ಒಂದು ಕಾರಣ. ಶಾಸ್ತ್ರಾಚಾರದ ಮಧ್ಯದಲ್ಲಿ ಗೃಹಸ್ಥನಕರ್ತವ್ಯ ಮತ್ತು ವಾನಪ್ರಸ್ಥಾದಿಗಳ ಕರ್ತವ್ಯ – ಇವುಗಳು ಬೇರೆ ಬೇರೆಯೆಂಬುದನ್ನು ಮರೆತುಬಿಡುವದು ಎರಡನೆಯ ಕಾರಣ. ಗೃಹಸ್ಥಾಶ್ರಮಿಯು ಶರೀರವನ್ನು ಒಣಗಿಸುವದು ಶಾಸ್ತ್ರದಲ್ಲಿ ನಿಷಿದ್ಧವು. ಹಿಂದಿನ ಕಾಲದವರು ಬಲುಮಟ್ಟಿಗೆ ಆಚಾರವನ್ನು ನೆರವೇರಿಸುತ್ತಿದ್ದರು. ಆದ್ದರಿಂದಲೇ ಅವರ ಒಲವೂ ಆಯುಸ್ಸೂ ಹೆಚ್ಚಾಗಿದ್ದವು. ಅವರ ಇಂದ್ರಿಯಗಳು ಈಗಿನ ಶಾಸ್ತ್ರಾಚಾರವಿಲ್ಲದವರ ಇಂದ್ರಿಯಗಳಂತೆ ಬಲಹೀನವಾಗಿರಲಿಲ್ಲ, ಅಕರ್ಮಣ್ಯಕಗಳಾಗಿರಲಿಲ್ಲ.

2. ''ಶಾಸ್ತ್ರೀಯವಿಧಿಯು ಬಹುಬಂಧನದಲ್ಲಿ ನಮ್ಮನ್ನು ದೂಡುವದು; ಅದರಿಂದ ನಮ್ಮ ಎಲ್ಲಾ ಸ್ವಾತಂತ್ರ್ಯವೂ ಕಡೆಗಂಡಿರುವದು.''

ಇದಕ್ಕೆ ನಾವು ಹೇಳುವದೇನೆಂದರೆ: ಶಾಸ್ತ್ರವು ಸ್ವಾತಂತ್ರ್ಯವನ್ನು ನಾಶಗೊಳಿಸುವದಿಲ್ಲ; ಅದಕ್ಕೆ ಬದಲಾಗಿ ಶಾಸ್ತ್ರಾಚರಣೆಯ ಮೂಲಕ ಜಡತ್ವವು ಹೋಗಿ ಪ್ರಕೃತವಾದ ಸ್ವಾತಂತ್ರ್ಯದ ವೃದ್ಧಿಯೇ ಆಗುತ್ತಿರುವದು. ಇದಕ್ಕೊಂದು ಸಾಧಾರಣವಾದ ದೃಷ್ಟಾಂತವನ್ನು ಕೊಡಬಹುದು. ಚಳಿಗಾಲದಲ್ಲಿ ಬೆಳಗ್ಗೆ ನಿದ್ರೆಯಿಂದೆಚ್ಚತ್ತಾಗ, ಬಹುಜನರು ಹಾಸಿಗೆಯನ್ನು ಬಿಟ್ಟೇಳಲಾರರು. ಅವರು ಬಿಸಿಲು ಬಲವಾದ ಮೇಲೆಯೇ ಏಳುವರು. ಇಲ್ಲದಿದ್ದರೆ ಹಾಸಿಗೆಯಲ್ಲಿ ಕುಳಿತೇ ಪಾನಾದಿಗಳನ್ನು ಆಚರಿಸುವರು. ಆ ದಿನವೆಲ್ಲಾ ಅಂಥವರು ಶರೀರದಲ್ಲಿ ಜಡತ್ವವಿರುವದು. ಆದರೆ ಶಾಸ್ತ್ರಾಚಾರವನ್ನು ಪಾಲಿಸುವವರು ನಿದ್ರೆಯಿಂದ ಎಚ್ಚೆತ್ತಕೂಡಲೆ ಈಶ್ವರನನ್ನು ನೆನೆಯುತ್ತ ಹಾಸಿಗೆಯನ್ನು ಬಿಡುವರು. ಪ್ರಾತಃ ಕಾಲಿಕವಾದ ಕೆಲಸವನ್ನು ಕೈಗೊಂಡು, ಮೊದಲು ಸ್ನಾನವನ್ನು ಮಾಡುವರು. ಅವರಿಗೆ ಚಳಿಗಾಳಿಯ ಅಂಜಿಕೆಯಿಲ್ಲ, ಜಡತ್ವವಿರುವದಿಲ್ಲ; ಸಜೀವತ್ವವೂ ಕಾರ್ಯಕ್ಷಮತ್ವವೂ ಉದ್ರಿಕ್ತವಾಗುವದು. ಅವರಿಗೆ ಆ ದಿನದ ಕಾರ್ಯಗಳೆಲ್ಲ ಸಲೀಸಾಗಿ ನಡೆದುಹೋಗುವದು. ಈ ಎರಡು ಬಗೆಯ ಮಾನವರಲ್ಲಿ ಯಾರು ಸ್ವಾಧೀನರು? ಚಳಿಗಾಳಿಗೆ ಹೆದರುವವರೆ, ಬೆಳಗ್ಗೆ ಸ್ನಾನಮಾಡುವವರೆ?

ಆಲೋಚಿಸಿ ನೋಡಿದರೆ ಎಲ್ಲಿಯೂ ಸಂಪೂರ್ಣವಾದ ಸ್ವಾತಂತ್ರ್ಯವು ಕಾಣಬರುವದಿಲ್ಲ. ಮನುಷ್ಯನು ಸಾಮಾನ್ಯವಾದ ಪ್ರವೃತ್ತಿಗೋ ಇಲ್ಲವೆ ವಿಧಿವ್ಯವಸ್ಥೆಗೋ ಅಡಿಯಾಳಾಗಿಯೇ ಇರುವನು. ಇವೆರಡರ

ಮಧ್ಯದಲ್ಲಿ ಶರೀರಾದಿಗಳಿಗೆ ಬಾಧಕವನ್ನು ನೀಡುವ ಅವಿಚಾರಿತಪ್ರವೃತ್ತಿಗೆ ವಶವಾಗುವದಕ್ಕಿಂತಲೂ ವಿಚಾರಿತವಿಧಿಗೆ ಅಡಿಯಾಳಾಗುವದೇ ಲೇಸಾದುದಲ್ಲವೆ? ಹೀಗೆ ಇಂದ್ರಿಯ ವೃತ್ತಿಯ ತಮೋಗುಣದ ಜಯವೇ ಶಾಸ್ತ್ರಾಚಾರದ ಫಲವು.

ಮೇಲೆ ಕಂಡ ವಿಚಾರಗಳಿಂದ ಸದಾಚಾರಕ್ಕೆ ಧರ್ಮವು ಮೂಲವೆಂತಲೂ ಆ ತಾಯಿಬೇರು ಗಟ್ಟಿಯಾಗಿದ್ದರೆ ಸದಾಚಾರವೃಕ್ಷವೂ ಬಲವಾಗಿರುವದೆಂತಲೂ ಮನುಷ್ಯನು ಕಷ್ಟಪರಂಪರೆಗಳ ತಾಪಕ್ಕೆ ಗುರಿಯಾಗದೆ ಸುಖವಾಗಿ ಜೀವಿಸುವದಕ್ಕೆ ಈ ಗಟ್ಟಿಬೇರಿನ ಮರದ ನೆರಳನ್ನೇ ಆಶ್ರಯಿಸುವದು ಉತ್ತಮವೆಂತಲೂ ಏರ್ಪಡುವದಿಲ್ಲವೆ?

## 2. ಸದಾಚಾರ ವೃಕ್ಷದ ಪ್ರಕಾಂಡವು

**ಅಸವಃ ಪ್ರಕಾಂಡಃ** – ಸದಾಚಾರವೆಂಬ ಮಹಾವೃಕ್ಷದ ಪ್ರಕಾಂಡವು ಎಂದರೆ ಬುಡವು ಪ್ರಾಣವು; ಏಕೆಂದರೆ ಸದಾಚಾರಸೇವನೆಯಿಂದ ಮಾನವನ ಆಯುಸ್ಸು ಧೃಢವೂ ದೀರ್ಘವೂ ಆಗುವದು. ಬಹುದಿವಸ ಬದುಕುವದಕ್ಕೆ ಹನ್ನೆರಡು ಮುಖ್ಯಕಾರಣಗಳೆಂದು ನಿರ್ಣಯಿಸಬಹುದು: (1) ತಂದೆ-ತಾಯಿಗಳು ಆಯುಷ್ಮಂತರಾಗಿರುವದು (2) ಕುಂದುಕೊರತೆಯಿಲ್ಲದ ಶರೀರವನ್ನೆತ್ತುವದು, (3) ದುರ್ಘಟನೆಯಿಲ್ಲದಿರುವಿಕೆ, (4) ಆರೋಗ್ಯಕರವಾದ ನಿವಾಸ, (5) ಸ್ವಾಸ್ಥ್ಯಕರವಾದ ಆಹಾರ, (6) ಉಪಯೋಗಿಯಾದ ಆವರಣ, (7) ಪರಿಚ್ಛನ್ನತಾ (8) ಮಿತಾಹಾರ, (9) ಮಿತಾಚಾರ (10) ನಿಯಮಕ್ಕನುಗಾಮಿಯಾಗಿರುವದು. (11) ದ್ವಂದ್ವಸಹಿಷ್ಣುತೆ (12) ಮನದ ಶಾಂತಿ.

ಈ ಹನ್ನೆರಡರೊಳಗೆ ಮೊದಲನೆಯ ಮೂರು ಯಾವ ಮನುಷ್ಯನಿಗೂ ಅಧೀನವಾದುದಲ್ಲ. ಏಕೆಂದರೆ ಜನ್ಮಗ್ರಹಣಮಾಡುವದು ಜೀವರಿಗೆ ಸ್ವೇಚ್ಛಾಧೀನವಾದ ಕೆಲಸವಲ್ಲ. ಹೆಚ್ಚು ಆಯುಸ್ಸುಳ್ಳವರಿಂದ ತಾನು ಹುಟ್ಟುವೆನೆಂದು ತಂದೆ ತಾಯಿಗಳನ್ನು ಆರಿಸಿಕೊಂಡು ಯಾವ ಹುಡುಗನೂ ಹುಟ್ಟುವದಿಲ್ಲ. ತಾನು ಕುಂದುಕೊರತೆಗಳಿಲ್ಲದ ದೇಹವನ್ನು ಹೊಂದಿ ಹುಟ್ಟುವೆನು. ವಿಕಲಾಂಗನಾಗಿ ಹುಟ್ಟುವದಿಲ್ಲದೆಂಬುದೂ ಮಗನ ಇಚ್ಛೆಗೆ ಸೇರಿದುದಲ್ಲ. ತಾನು ಬದುಕಿರುವಾಗ ಮುಖ್ಯವಾಗಿ ಶೈಶವದಲ್ಲಿ ಯಾವದಾದರೂ ಗಂಡಾಂತರಗಳು ಬಂದು ತನ್ನನ್ನು

ನೋಯಿಸಬಾರದು ಅಥವಾ ಕಣ್ಣು ಕೈಗಳನ್ನು ಊನಮಾಡಬಾರದು ಅಥವಾ ಪ್ರಾಣವನ್ನು ಕಳೆಯಬಾರದು ಎಂದು ಇವೆಲ್ಲವನ್ನೂ ಮೊದಲೇ ಚೆನ್ನಾಗಿ ತಿಳಿದುಕೊಂಡು ಉಪಾಯಗಳನ್ನು ಕಲ್ಪಿಸುವದೂ ಮಾನವನಿಗೆ ನಿಲುಕದ ವಿಷಯ. ಆದ್ದರಿಂದ ಈ ಮೂರನ್ನು ಹಿಂದಿನ ಜನ್ಮದ ಕರ್ಮಫಲವೆಂದು ಹೇಳಬಹುದಾಗಿದೆ. ಇವು ಪುರುಷಕಾರಕ್ಕೆ ಮೀರಿದವುಗಳಾಗಿವೆ.

ಆದರೆ ಇವು ವ್ಯಕ್ತಿವಿಶೇಷಕ್ಕೆ ಸ್ವಾಧೀನವಲ್ಲದಿದ್ದರೂ ಪುರುಷಪರಂಪರೆಗೆ ಅಷ್ಟು ಅಸಾಧ್ಯವಾದುದೆಂದು ತೋರುವದಿಲ್ಲ. ಹೇಗೆಂದರೆ ತಂದೆತಾಯಿಗಳೇ ತಮ್ಮ ತಮ್ಮ ಶರೀರವನ್ನು ಸ್ವಸ್ಥವಾಗಿರಿಸಿಕೊಳ್ಳುವದಕ್ಕೆ ಕೆಲವು ಉಪಾಯಗಳನ್ನು ಅವಲಂಬಿಸಬಹುದು; ತಾವು ಅವಲಂಬಿಸಿದ ಸದುಪಾಯಗಳನ್ನು ಮುಂದಾದ ಮಾನವರ ಮೂಲಕ ನಡೆಸಿದರೆ ವಂಶದಲ್ಲಿ ಬಹುದಿನದ ಬಾಳ್ವಿಕೆಯು ಹೆಚ್ಚಲೂ ಬಹುದು. ಅಂತಹ ಯತ್ನಗಳ ಮೂಲಕವೂ ವಂಶದೊಳಗೆ ವಿಕಲಾಂಗರ ಜನನವು ನಿವಾರಿತವಾಗಬಹುದು; ಹಿಂದಿನ ಮಾನವರ ಮತ್ತು ಸಮಾಜದ ಮಧ್ಯದಲ್ಲಿ ಜ್ಞಾನದ ಹೆಚ್ಚಿಗೆಯೂ ಸಹಾನುಭೂತಿಯ ಆಧಿಕ್ಯವೂ ಇದ್ದರೆ ದುರ್ಘಟನಾದಿ ದೋಷವು ಬಹುಮಟ್ಟಿಗೆ ಕಡಿಮೆಯಾಗಲೂಬಹುದು. ಅಜ್ಞರೊಳಗೂ ಬರ್ಬರಜನಗಳೊಳಗೂ ದುರ್ಘಟನೆಯ ಹೆಚ್ಚಿಗೆಯಿಂದ ಎಷ್ಟು ಶಿಶುಗಳೂ ದೊಡ್ಡವರೂ ಅಕಾಲಮೃತ್ಯುವಿಗೆ ತುತ್ತಾಗುವರೋ ಬುದ್ಧಿವಂತರೂ ಸಭ್ಯರೂ ಆಗಿರುವ ಜನರಲ್ಲಿ ಅಷ್ಟು ಆಗುವದಿಲ್ಲವೆಂದು ಕಂಡುಬಂದಿರುತ್ತದೆ.

ಆದ್ದರಿಂದ ಮೊದಲು ಹೇಳಿದ ಮೂರು ಕಾರಣಗಳು ಮನುಷ್ಯವಿಶೇಷಕ್ಕೆ ಅಧೀನವಲ್ಲದಿದ್ದರೂ ಪುರುಷಪರಂಪರೆಗೂ ಪುರುಷಸಮಷ್ಟಿಗೂ ಬಹುಮಟ್ಟಿಗೆ ಅಧೀನವಾಗುವದು. ಪುರುಷಪರಂಪರೆ ಮತ್ತು ಪುರುಷಸಮಷ್ಟಿ – ಇವುಗಳಿಂದ ಕೂಡಿದ ಸಮುದಾಯವೇ ಒಂದು ಸಮಾಜವೆನಿಸುವದು. ಆದ್ದರಿಂದ ಈ ಸಮಾಜಕ್ಕೆ ಮೊದಲಿನ ಮೂರು ಕಾರಣಗಳು ಅಧೀನವಾದವುಗಳೆನ್ನಬೇಕಾಯಿತು.

ಎರಡನೆಯ ಮೂರು ಕಾರಣಗಳು ಶೈಶವದಲ್ಲಿ ಯಾವ ವ್ಯಕ್ತಿಗೂ ಅಧೀನವಾದುದಲ್ಲ. ಸ್ವಾಸ್ಥ್ಯಕರವಾದ ಆವಾಸ, ಆಹಾರ ಮತ್ತು ಆವರಣ– ಇವುಗಳನ್ನು ಶಿಶುಗಳು ತಾವೇ ತಿಳಿದು ಸಂಗ್ರಹಿಸಿಕೊಳ್ಳಲಾರರು. ಆದರೆ ಶೈಶವದಿಂದಲೇ ಈ ವಿಷಯಗಳಲ್ಲಿ ನ್ಯೂನತೆಯಾದರೆ ಶರೀರದಲ್ಲಿ ದೌರ್ಬಲ್ಯ,

ಅಪಟುತ್ವ, ರೋಗ – ಇವುಗಳ ಸೂತ್ರಪಾತವಾಗುವದು. ತಂದೆತಾಯಿಗಳು ಮಗುವನ್ನು ಎಂತಹ ಮನೆಯಲ್ಲಿಡುವರೋ ಅದಕ್ಕೆ ಎಂತಹ ಅನ್ನಬಟ್ಟೆಯನ್ನು ಕೊಡುವರೋ ಮತ್ತು ದೇಶದ ಭಾವವು ಹೇಗೆ ಪವಿತ್ರ ಅಥವಾ ದೂಷಿತವಾಗಿ ರುವದೋ, ಹುಡುಗತನದಲ್ಲಿ ಶರೀರದ ಭಾವವು ಅವುಗಳಿಗೆ ತಕ್ಕಂತಿರುವದು. ಬಾಲ್ಯದಲ್ಲಿ ಅಭಿಭಾವಕರು ಸ್ವಾಸ್ಥ್ಯರಕ್ಷಣೆಯ ಉಪಾಯದಲ್ಲಿ ಅಭಿಜ್ಞರಾಗಿ ಅವುಗಳನ್ನು ಉಪಯೋಗಿಸಿಕೊಳ್ಳುವರಾದರೆ ಮತ್ತು ಸಾಮಾಜಿಕಶಾಸನದ ಪ್ರಭಾವದಿಂದ ದೇಶವು ಪವಿತ್ರವಾಗಿದ್ದು ಸಾಂಕ್ರಾಮಿಕಜಾಡ್ಯವಿಲ್ಲದೆ ಹೋದರೆ ಶಿಶುವು ನಿರೋಗವಾಗಿ ಬೆಳೆಯುವದು; ಇಲ್ಲದಿದ್ದರೆ ಅಕಾಲಮರಣವನ್ನು ಪಡೆಯುವದು. ಇಲ್ಲವೆ, ದುರ್ಬಲಶರೀರವನ್ನು ಹೊತ್ತು ಕೆಲವು ಕಾಲ ಹೇಗೋ ಬದುಕಿಕೊಂಡಿರುವದು. ಆದ್ದರಿಂದ ಈ ಮೂರು ವಿಷಯದಲ್ಲಿಯೂ ಮಾನವರ ಆಯುಸ್ಸು ಪುರುಷಪರಂಪರೆಗೆ ಮತ್ತು ಪುರುಷಸಮಷ್ಟಿಗೆ ಅಂದರೆ ಸಮಾಜಕ್ಕೆ ಒಳ್ಳಪಟ್ಟಿದ್ದು.

ಆಯುಸ್ಸಿಗೆ ಇನ್ನುಳಿದ ಆರು ಹೇತುಗಳ ಒಲವು ವಿಶೇಷವಾಗಿ ಬೇಕಾಗಿ ರುವದು. ಇವುಗಳಲ್ಲಿ ಪ್ರಾಕ್ತನ ಅಥವಾ ಪರಕಾಯಶಕ್ತಿಯ ಕೈಯು ಬಹುಮಟ್ಟಿಗೆ ಕಡಿಮೆಯಾಗಿರುವದು; ಪುರುಷಕಾರದ ಶಕ್ತಿಯೇ ಸ್ಫುಟವಾಗಿ ತೋರುತ್ತಿರುವದು. ಶುಭ್ರವಾಗಿರುವದು, ಮಿತಾಹಾರಿಯಾಗಿರುವದು, ಮಿತಾಚಾರನಾಗಿರುವದು. ಎಲ್ಲಾ ಕಾರ್ಯದಲ್ಲಿಯೂ ನಿಯಮಕ್ಕಡಿಯಾಳಾಗಿ ನಡೆಯುವದು, ಕ್ರಮ ಕ್ರಮವಾಗಿ ತನ್ನನ್ನು ದ್ವಂದ್ವಸಹಿಷ್ಣುವನ್ನಾಗಿ ಮಾಡಿಕೊಳ್ಳುವದು, ಮತ್ತು ಮನಸ್ಸನ್ನು ಉದ್ವೇಗವಿಲ್ಲದಂತೆ ಶಾಂತವಾಗಿಟ್ಟುಕೊಳ್ಳುವದು ಇವೆಲ್ಲವನ್ನೂ ಮಾನವನು ತಾನೇ ಕೈಲಾದಷ್ಟು ಸರಿಪಡಿಸಿಕೊಳ್ಳಬಹುದು.

ಈ ಎಲ್ಲಾ ಕಾರ್ಯಗಳಲ್ಲಿಯೂ ಪುರುಷಕಾರದ ಪ್ರಾಧಾನ್ಯವಿದೆಯೆಂದೂ ಇವೆಲ್ಲವೂ ಕೇವಲ ಪುರುಷಕಾರಕ್ಕೇ ಒಳಪಟ್ಟಿವೆಯೆಂದೂ ಪ್ರಾಕ್ತನ ಮತ್ತು ಪರಕೀಯಶಕ್ತಿಗೆ ಅಧೀನವಲ್ಲವೆಂದೂ ತಿಳಿಯಬಹುದು. ಮೊದಲನೆಯದು, ಕಾಲ ಕಾಲಕ್ಕನುಸರಿಸಿದ ಇವುಗಳ ತಿಳಿವಳಿಕೆಯನ್ನು ಬೇರೆಕಡೆಯಲ್ಲಿ ಹೊಂದಬೇಕು. ಎರಡನೆಯದು, ಹೊಂದಿದ ಜ್ಞಾನದ ಅಪ್ರಮಾದ, ಸ್ಮರಣ, ಮತ್ತು ಪ್ರಯೋಗ – ಇವುಗಳು ಹಿಂದಣ ಶಕ್ತಿಯಿಂದಲೂ ಬೇರೆಯವರ ದೃಷ್ಟಾಂತಗಳ ನೋಡುವಿಕೆಯಿಂದಲೂ ಸಾಧ್ಯವಾಗುವವು.

ಆದ್ದರಿಂದ ಆಯುಷ್ಮತ್ತೆಗೆ ಕಾರಣವಾಗಿ ಹೇಳಿದ ಹನ್ನೆರಡು ಹೇತುಗಳನ್ನು ಪ್ರಾಕ್ತನ, ಸಾಮಾಜಿಕ, ಪೌರುಷ– ಎಂದು ಮೂರು ಬಗೆಯಾಗಿ ವಿಂಗಡಿಸಬಹುದು; ಈ ಮೂರು ಬಗೆಯ ಶಕ್ತಿಗಳು ಒಂದೊಂದಕ್ಕೆ ಸೇರಿಕೊಂಡೇ ಇರುವವು. ಮೊದಲನೆಯದನ್ನು ಬಿಟ್ಟರೆ ಎರಡನೆಯದಕ್ಕೆ ಗತಿಯಿಲ್ಲ, ಇವೆರಡನ್ನು ಬಿಟ್ಟರೆ ಮೂರನೆಯದಕ್ಕೆ ಗತಿಯಿಲ್ಲ.

ಶಾಸ್ತ್ರೋಪದಿಷ್ಟವಾದ ಆಚಾರದ ಪದ್ದತಿಯು ಈ ಮೂರು ಬಗೆಯ ಶಕ್ತಿಗೆ ಅನುಕೂಲರೂಪವಾಗಿವ್ಯವಸ್ಥಿತವಾಗಿರುವದು, ಅಂದರೆಇದು ಸರ್ವದಿಗ್ದರ್ಶಿಯು. ಆದುದರಿಂದಲೇ ಯಾರು ಪಾಶ್ಚಾತ್ಯರ ಶಾಸ್ತ್ರದ ಕೇವಲ ಪುರುಷಕಾರಮೂಲಕವಾದ ವಿಚಾರದ ಪ್ರಣಾಲಿಯನ್ನು ಚಲುವಾದದ್ದೆಂದು ಭಾವಿಸುವರೋ, ಮತ್ತು ಆ ಪ್ರಣಾಲಿಯೊಂದಿಗೆ ಸೇರಿಸಿ ದೇಶೀಯ ಶಾಸ್ತ್ರಪದ್ಧತಿಯ ಗುಣಾವಗುಣಗಳನ್ನು ಚರ್ಚಿಸುವರೋ, ಅಂಥವರಿಗೆ ಆಚಾರಕಾಂಡದ ಬಹು ವಿಷಯಗಳು ಅಪ್ರಾಸಂಗಿಕ ಅಥವಾ ಕಲ್ಪಿತವೆಂಬ ಭ್ರಮೆಯು ಬರುವದು. ಈ ಕಾರಣದಿಂದ ಅವರು ಶಾಸ್ತ್ರವಿಹಿತ ಆಚಾರವನ್ನು ಅಮಾನ್ಯಮಾಡುವರು, ಶಾಸ್ತ್ರಾಚಾರಫಲದಿಂದಲೂ ವಂಚಿತರಾಗುವರು.

ಇಂತಹ ಜನರಿಗೆಲ್ಲ ಸದಾಚಾರವಿಧಿಯನ್ನು ತಿಳಿಯಲು ಮತ್ತೊಂದು ಅಡಚಣೆಯೂ ತಲೆಹಾಕುವದು. ಮನುಷ್ಯನಿಗೆ ಕರಣೀಯವಾದ ಎಲ್ಲ ವಿಷಯದಲ್ಲಿಯೂ, ಪ್ರಾಯಿಕವಾಗಿ ಮುಂದಾಗುವದನ್ನು ಹೆಚ್ಚು ವಿಚಾರಿಸುವ ವಾಡಿಕೆ ಇರುವದು; ಆದರೆ ಅದನ್ನು ಸರಿಯಾಗಿ ಕಂಡುಹಿಡಿಯುವದು ಬಹುಕಡಿಮೆ. ಮನುಷ್ಯನು ಯಾವದನ್ನು ಮಾಡುವದಕ್ಕೆ ತೊಡಗುವನೋ ಅದರಿಂದೇನಾಗಬಹುದೆಂಬುದನ್ನು ತಿಳಿದೇ ಅದನ್ನು ಮಾಡಬೇಕಾಗಿರುವದು. ಆದರೆ, ಇದರಿಂದ ಇದೇ ಆಗುವದೆಂದು ಕೆಲವು ಕಡೆ ಮಾತ್ರ ನಿಶ್ಚಿತವಾಗಿ ಕಂಡುಕೊಳ್ಳಬಹುದು. ಹೀಗಿದ್ದರೂ ಶಿಕ್ಷಕನೂ ಮುಂದಾಗುವದನ್ನು ಎಣಿಸುತ್ತ ಸಂದೇಹದ ಹವಣಿಕೆಯನ್ನೇ ಹೆಚ್ಚಿಸಬಾರದು. ಹಾಗೆ ಮಾಡುತ್ತ ಹೋದರೆ ಹುಡುಗರ ಮನಸ್ಸಿನಲ್ಲಿ ಶಿಕ್ಷೆಯ ದಾರ್ಢ್ಯವು ಸಡಿಲವಾಗುವದು. ಇದಕ್ಕಾಗಿಯೇ ಮೂಲದಲ್ಲಿ ಮುಂದಾಗುವದರ ಸೂಕ್ಷ್ಮಾನುಸೂಕ್ಷ್ಮವಿಚಾರಗಳ ಮೂಲಕ ಯಾವದು ಆಗಿಯೇ ಆಗುವದೋ ಅದೇ ಪರಮಸತ್ಯವೆಂದು ಶಿಷ್ಯರು ಉಪದೇಶಕ್ಕೆ ಒಳಪಡುವದು. ಎತ್ತರವಾದ ಗೋಡೆಯ ಮೇಲೆ ನಡೆಯುತ್ತಿರುವ

ಮನುಷ್ಯನಿಗೆ 'ನೀನು ತಲೆಯೆತ್ತಿ ನೋಡಿದರೆ ಸಾಯುವೆ' ಎಂದಿಷ್ಟೆ ಹೇಳಿ ಅವನನ್ನು ತಲೆಯೆತ್ತಿ ನೋಡದಂತೆ ಮಾಡಬೇಕು. ಅದನ್ನು ಬಿಟ್ಟು ''ಮೇಲಿಂದ ಬಿದ್ದವರೆಲ್ಲರೂ ಸಾಯುವವರೇ; ದೇಹದ ಪುಷ್ಟಿ, ಬೀಳುವ ಕ್ರಮ, ಕೆಳಗಿರುವ ಮಣ್ಣಿನ ಸ್ಥಿತಿ – ಮುಂತಾದ್ದರ ವಿಷಯಗಳನ್ನು ಯೋಚಿಸಿದಲ್ಲಿ ನೀನು ತಲೆಯೆತ್ತಿದರೆ ಸಾಯುವದಕ್ಕೆ ಕಾರಣಗಳು ಹೆಚ್ಚಾಗಿರುವವು'' ಎಂದು ಹೇಳುವದು ಸರಿಯಾಗುವದಿಲ್ಲ.

ಶಾಸ್ತ್ರವು ಶಿಕ್ಷಕಸ್ಥಾನದಲ್ಲಿರುವದು. ಅದು ಒಬ್ಬ ರಾಜನ ಹಾಗೆ ಅಪ್ಪಣೆಯನ್ನು ಮಾಡುವದು. ಅದು ಸರಿಯಾದ ಫಲಗಳನ್ನು ಕಾರ್ಯರೂಪವಾಗಿ ವ್ಯಕ್ತಮಾಡುವ ಸಲುವಾಗಿ ಸ್ಪಷ್ಟವಾದ ವಿಧಿಯನ್ನು ಅಥವಾ ನಿಷೇಧ ವಾಕ್ಯವನ್ನು ಪ್ರಯೋಗಮಾಡುವದು. ಅದು ವಿಧಿನಿಷೇಧವಾಕ್ಯಪ್ರಯೋಗದ ವೇಳೆ ಪ್ರಾಕ್ತನ ಮತ್ತು ಪುರುಷಕಾರ ಭೇದದಿಂದ ಬೇರೆಬೇರೆ ವ್ಯಕ್ತಿಯ ಪಕ್ಷದಲ್ಲಿ ಯಾವದಾದರೊಂದು ವಿಶೇಷವಿಷಯದಲ್ಲಿ ಸಂಭವಿತವ್ಯತೆಯನ್ನು ಮಾತ್ರ ತೋರಿ ನಿಶ್ಚಿಂತವಾಗಲಾರದು.

ಶಾಸ್ತ್ರವಿಧಿಯ ಈ ಶಿಕ್ಷಾದಾಯಕಪ್ರಭುಭಾವವನ್ನು ನೆನಪಿನಲ್ಲಿಟ್ಟು ಕೊಳ್ಳುವದರಿಂದ ತುಂಬ ಉಪಯೋಗವುಂಟು. ಇದನ್ನು ತಿಳಿಯದ ಈಗಿನ ಸುಧಾರಕರು ಒಂದೊಂದು ಕಡೆ ಶಾಸ್ತ್ರದಲ್ಲಿ ಹೇಳಿರುವದನ್ನು ಅಲ್ಲಗಳೆಯುವರು. ಅಷ್ಟೇ ಅಲ್ಲ, ಹಿಂದಿನ ಕೆಲವರೂ ಈ ಬಗೆಯ ಅಶ್ರದ್ಧೆಯನ್ನು ಹೊಂದಿರುವರು. ಈ ಆಯುಷ್ಮತ್ತೆಗೆ ಸಂಪಾದಕವಾದ ವಿಧಿಗಳನ್ನು ಫಲಾಪೇಕ್ಷೆಯಿಲ್ಲದೆ ನಡೆಸಿಕೊಂಡುಬರಬೇಕು. ಫಲವನ್ನು ಹುಡುಕಿಕೊಂಡು ಹೋದರೆ ರಜೋಗುಣದ ಪ್ರಸಕ್ತಿಯು ಬರುವದು; ಮತ್ತು ಆ ಫಲಗಳು ವಿಕೃತವಾಗಿ ಬರುವವು, ಇಲ್ಲದಿದ್ದರೆ ಬರುವದೇ ಇಲ್ಲ. ಒಬ್ಬನು ತನ್ನ ಮಗನಿಗೆ ಮಲ್ಲಿಗೆ ಪಂಟನ್ನು ಕೊಟ್ಟು ''ಇದನ್ನು ಭೂಮಿಯಲ್ಲಿ ಹುಟ್ಟಿಹಾಕಿ ಪ್ರತಿದಿನವೂ ನೀರುಹಾಕುತ್ತಾ ಬಾ, ಇದರ ಬೇರು ಒಡೆಯುತ್ತಲೇ ಹೂಗಳು ಹುಟ್ಟುವವು'' ಎಂದು ಹೇಳಿದನು. ಹುಡುಗನು ಗಿಡವನ್ನೇನೋ ಹೂತು ನೀರುಹಾಕುತ್ತಿದ್ದನು; ಆದರೆ ಪ್ರತಿದಿನದಲ್ಲಿಯೂ ಅದನ್ನು ಕಿತ್ತು ಅದರ ಬೇರು ಒಡೆಯಿತೋ ಇಲ್ಲವೋ ಎಂದೂ ನೋಡುತ್ತಿದ್ದನು. ಹೀಗೆ ಮಾಡಿದ್ದರಿಂದ ಆ ಪಂಟೆಯು ಒಣಗಿಹೋಯಿತು. ಆದ್ದರಿಂದ ವಿಧಿಯಲ್ಲಿ ಹೇಳಿದಂತೆ ಕೆಲಸಮಾಡಬೇಕು. ಈ ಹುಡುಗನಂತೆ ಫಲವನ್ನೇ ಹುಡುಕುತ್ತಾ ಹೋಗಬಾರದು. ಇದೇ ಅಭಿಪ್ರಾಯವು ಗೀತೆಯಲ್ಲಿ ''ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ'' ಎಂಬ ವಾಕ್ಯದಿಂದ ನಿರೂಪಿತವಾಗಿರುವದು.

ಹಾಗಾದರೆ ಯಾವ ನಿಧಿಯ ಪ್ರತಿಪಾಲನೆಯನ್ನು ಮಾಡಬೇಕೆಂದು ಶಾಸ್ತ್ರದಲ್ಲಿದೆಯೋ ಅದೇ ಸರಿಯಾದ ವಿಧಿಯೆಂದು ಹೇಗೆ ತಿಳಿಯಬೇಕು? ಹೀಗೆ ಈಗಿನ ಕೆಲವರು ಶಾಸ್ತ್ರಾಚಾರದ ಮೇಲೆ ಕೇಳುತ್ತಿರುವರು. ಒಂದು ಮಗು ತನ್ನತಂದೆಯ ತೊಡೆಯ ಮೇಲಿಂದೆದ್ದು ಆಕಾಶದ ಕಡೆಗೆ ಚಂದ್ರನನ್ನು ನೋಡುತ್ತಾ ''ಅಪ್ಪ! ಇದೇನು?'' ಎಂದು ಕೇಳಿತು. ತಂದೆಯು ''ಇದರ ಹೆಸರು ಚಂದ್ರ'' ಎಂದು ಹೇಳಿದನು. ಸರಳಮನಸ್ಸುಳ್ಳ ಮಗುವು ಮತ್ತೇನೂ ಕೇಳಲಿಲ್ಲ; ಸುಮ್ಮನಾಯಿತು. ಜ್ಞಾನವನ್ನು ತಡೆಯುವ ಸಂಶಯವು ಅದರ ಸರಳಹೃದಯದಲ್ಲಿ ಎಡೆಯನ್ನು ಪಡೆಯಲಿಲ್ಲ. ಆ ಮಗುವು ಬಾರಿಬಾರಿಗೂ ''ಚಂದ್ರ, ಚಂದ್ರ'' ಎಂದು ಹೇಳುತ್ತಾ ಕಲಿಯಲಾರಂಭಿಸಿತು. ಆದರೆ ಅದು ''ಇದಕ್ಕೇಕೆ ಚಂದ್ರನೆನ್ನುವರು?'' ಎಂದು ಕೇಳಿದ್ದರೆ ತಂದೆಯು ಇನ್ನೇನು ಹೇಳಿಯಾನು? ಹೇಳುವನಾದರೂ ಅದನ್ನು ಸಮಾಧಾನಪಡಿಸುವದಕ್ಕೆ ''ಎಲ್ಲರೂ ಚಂದ್ರನೆನ್ನುವರು'' ಎಂದಿಷ್ಟೇ ಹೇಳಲಾಪನು. ಆಮೇಲೆಯೂ ಇಬ್ಬರ ಮೂವರ ಕಡೆಯಿಂದ ಚಂದ್ರನೆಂಬ ಹೆಸರನ್ನು ಹೇಳಿಸಿ ಮಗುವಿಗೆ ತಿಳಿಸಿಕೊಡಬಲ್ಲನು; ಅಷ್ಟೇ ಅಲ್ಲವೆ? ಹಾಗೆ ಇಲ್ಲಿಯೂ ಆ ಮಾರ್ಗವನ್ನು ಆಶ್ರಯಿಸಬಹುದಾಗಿದೆ. ದೇಶೀಯ ಚಿಕಿತ್ಸೆ, ಯೂರೋಪ್ಯರ ವಿಜ್ಞಾನ, ಭಿನ್ನಭಿನ್ನದೇಶಗಳ ಆಚಾರ - ಇವುಗಳಿಂದೆಲ್ಲ ಶಾಸ್ತ್ರೋಕ್ತ ಆಚಾರದ ಉಪಕಾರಿತ್ವದ ಮೇಲ್ಮೆಯನ್ನು ಸಮರ್ಥಿಸಬಹುದು.

ಆದರೆ ದೇಶೀಯ ಚಿಕಿತ್ಸಾ ಶಾಸ್ತ್ರವಾಗಲಿ, ವಿದೇಶೀಯ ವಿಜ್ಞಾನವಾಗಲಿ, ದೇಶಾಂತರದ ಆಚಾರವಾಗಲಿ, ಯಾವವೂ ನಮ್ಮ ಸ್ಮೃತ್ಯುಕ್ತ ಆಚಾರಗಳಂತೆ ಸರ್ವದಿಗ್ದರ್ಶಿಯಾಗಿ ಸರ್ವತೋಭಾವದಿಂದ ನಮಗೆ ಉಪಯೋಗಿಯಾಗಲಾರವು. ಚಿಕಿತ್ಸಾಶಾಸ್ತ್ರ ವಿಜ್ಞಾನಶಾಸ್ತ್ರಗಳು ಏಕದೇಶದರ್ಶಿಗಳು; ಅನ್ಯದೇಶೀಯ ಆಚಾರಗಳಿಂದ ಸ್ಥಳವಿಶೇಷದಲ್ಲಿ ನಮಗೆ ಸ್ವಲ್ಪಮಟ್ಟಿಗೆ ಉಪಯೋಗವಾಗಬಹುದು; ಆದರೆ ಇವುಗಳಾವುವೂ ಶಾಸ್ತ್ರೋಕ್ತವಿಧಿಗಳಲ್ಲಿ ಪ್ರಮಾಣವಾಗಿ ಗಣ್ಯವಾಗಲಾರವು. ಅದಲ್ಲದೆ ಆಚಾರದ ಎಲ್ಲ ಗುಣದಲ್ಲಿಯೂ ಮೂಲವಾದ 'ಅಭ್ಯಾಸ'ದಲ್ಲಿ ಆರ್ಯಶಾಸ್ತ್ರವನ್ನುಳಿದು ಎಲ್ಲಿಯೂ ಸುಶಿಕ್ಷೆಯು ದೊರೆಯುವದಿಲ್ಲ. ಅಭ್ಯಾಸದ ಮೂಲಕ ದ್ವಂದ್ವಸಹಿಷ್ಣುತ್ವದ ಗುಣವು ಎಷ್ಟು ಹೆಚ್ಚುವದೋ ಅದನ್ನು ಯೋಗಶಾಸ್ತ್ರಕಾರರು ಬಲ್ಲರು. ಇನ್ನಾರೂ ಈ ವಿಚಾರದಲ್ಲಿ ಅಷ್ಟರಮಟ್ಟಿಗೆ ಮುಂದರಿದಿಲ್ಲ.

# 3. ಸದಾಚಾರವೃಕ್ಷದ ಕೊಂಬೆಗಳೂ ಎಲೆಗಳೂ

**ವಿತ್ತಾನಿಶಾಖಾಶ್ಛದನಾನಿ ಕಾಮಾಃ** – ಸದಾಚಾರವೆಂಬ ತರುವಿನ ಶಾಖೆಯು ಧನವು, ಅದರ ಪತ್ರಗಳು ಕಾಮನೆಗಳು – ಇದು ಹೇಗೆಂಬುದನ್ನು ಈಗ ವಿಚಾರಕ್ಕೆ ತೆಗೆದುಕೊಳ್ಳಬೇಕಾಗಿದೆ. ಧನದ ಅರ್ಜನ, ಧನದ ಸಂರಕ್ಷಣ, ಧನದ ಸಂವರ್ಧನ – ಈ ಮೂರಕ್ಕೂ ಸದಾಚಾರವು ಸಹಾಯಕವಾಗಿರುವದು. ಧನಾರ್ಜನೆಗೆ ಬೇಕಾದ ಅನುಕೂಲಗಳು ಯಾವುವು? ಶರೀರವು ಸುಸ್ಥವಾಗಿರಬೇಕು, ಪಟುವಾಗಿ ರಬೇಕು, ಕಾರ್ಯಕ್ಷಮವಾಗಿರಬೇಕು; ಬುದ್ಧಿಯು ಜಾಗ್ರತೆಯಾಗಿ ವಿಷಯವನ್ನು ಗ್ರಹಿಸಬೇಕು; ಮನವು ಸ್ಥಿರವಾಗಿಯೂ ಉತ್ಸಾಹಸಂಪನ್ನವಾಗಿಯೂ ಇರಬೇಕು; ಸ್ವಭಾವವು ವಿಶ್ವಾಸಪ್ರದವಾಗಿಯೂ ಲೋಕಾನುರಾಗಕ್ಕೆ ಆಕರ್ಷಕವಾಗಿಯೂ ಇರಬೇಕು. ಹೀಗಾದರೆ ಧನೋಪಾರ್ಜನವು ಕಠಿನವಾಗಲಾರದು. ಸದಾಚಾರದ ಮೂಲಕ ಶರೀರ, ಬುದ್ಧಿಶಕ್ತಿ, ಚಿತ್ತ, ಸ್ವಭಾವ– ಇವುಗಳ ಗುಣವು ಹೆಚ್ಚುವವು. ಇದರಿಂದ ಸುಲಭವಾಗಿ ಹಣವನ್ನು ಗಳಿಸಬಹುದು.

ಧನದ ಸಂರಕ್ಷಣಕ್ಕೆ ಏನೇನು ಬೇಕು? ಭೋಗೇಚ್ಛೆಯ ಸಂಯಮ, ವಿಲಾಸದ ದಮನ, ಬಾಹ್ಯಾಡಂಬರದ ಸಂಕೋಚ ಮತ್ತು ನ್ಯಾಯವನ್ನನುಸರಿಸುವದರ ಅಭ್ಯಾಸ. ಸದಾಚಾರದಿಂದ ಇವೆಲ್ಲವೂ ಹುಟ್ಟುವವು. ಆದ್ದರಿಂದ ಇಲ್ಲಿಯೂ ಸದಾಚಾರವು ಸಹಾಯಕವಾಗಿರುವದು.

ಧನವು ಬೆಳೆಯುವದು ಹೇಗೆ? ಮಿತವ್ಯಯ, ಪರಿಣಾಮದರ್ಶಿತ್ವ ಮತ್ತು ಸಮಾಜದ ಸುವ್ಯವಸ್ಥೆ – ಇವುಗಳಿಂದಲೇ. ಇವುಗಳೂ ಸದಾಚಾರದ ಮೂಲಕವೇ ಹುಟ್ಟುವವು, ಬೆಳೆಯುವವು. ಧನವೃದ್ಧಿಗೆ ಪ್ರಸಿದ್ಧ ಉಪಾಯವೆಂದರೆ ವಾಣಿಜ್ಯಾದಿಗಳು. ಇವುಗಳಲೆಲ್ಲ ಸತ್ಯನಿಷ್ಠೆ, ಸುಬುದ್ಧಿ, ಕೃತಿತ್ವ ಮತ್ತು ದೂರ ದರ್ಶನಗಳು ಮುಖ್ಯವಾಗಿ ಬೇಕಾಗಿರುವವು. ಅವಷ್ಟೂ ಈ ಆಚಾರದಿಂದ ಉಂಟಾಗುವವು.

ಧನಕ್ಕೂ ಧರ್ಮಕ್ಕೂ ವಿರೋಧವಿದೆಯೆಂದು ಈಗಿನ ಕಾಲದವರನೇಕರು ಭ್ರಮೆಗೊಂಡಿರುವರು. ಯೇಸುಕ್ರಿಸ್ತನು ‘‘ಒಂಟೆಯು ಸೂಜಿಯ ಗುಳಿಯಲ್ಲಿ ಹೋದರೂ ಹೋಗಬಹುದು, ಧನಶಾಲಿಯು ಸ್ವರ್ಗದ ಬಾಗಿಲ ಮೆಟ್ಟಿಲನ್ನು

ಮೆಟ್ಟಲಾರನು'' ಎಂದು ಹೇಳಿರುವನು. ಇದು ಸರಳದರ್ಶಿಯ ಮಾತು, ಸಂಸಾರದಲ್ಲಿ ಉತ್ಕಟವೈರಾಗ್ಯದಿಂದ ಹೇಳಿದ ಮಾತು. ಇದರ ಮರ್ಮವನ್ನರಿಯದ ಭಕ್ತಕ್ಯಾಥೊಲಿಕ್ ಪಂಗಡದವರು ಒಮ್ಮೆ ಮನೆಯನ್ನುಬಿಟ್ಟು ಸಂನ್ಯಾಸಿಯಾದರು; ಹಾಗೆ ಗೃಹಸ್ಥರೂ ಬಹುಮಟ್ಟಿಗೆ ಆ ಮಾತಿನಲ್ಲಿರುವ ತಥ್ಯವನ್ನು ಮನಗಾಣದೆ ಒಮ್ಮೆ ಧನಲೋಲುಪರಾಗಿಹೋದರು. ಎಲ್ಲಾ ಕಡೆಯನ್ನೂ ನೋಡುವ ಆರ್ಯಶಾಸ್ತ್ರವು ಇಂತಹ ಮಾತನ್ನಾಡಲಿಲ್ಲ. ಅದು ಧನವನ್ನು ಸಾತ್ತ್ವಿಕ, ರಾಜಸ, ತಾಮಸ – ಎಂದು ಮೂರು ಬಗೆಯಲ್ಲಿ ವಿಭಾಗಿಸಿತು. ಅದರಲ್ಲಿ ಪರಮಸಾತ್ತ್ವಿಕವಾದ ಧನವೇ 'ದೇಯ'ವೆಂಬುದಾಗಿಯೂ ನಿರೂಪಿಸಿತು. ಅದರ ಲಕ್ಷಣವು –

**ಅಪರಾಬಾಧಮಕ್ಲೇಶಂ ಪ್ರಯತ್ನೇನಾರ್ಜಿತಂ ಧನಂ ।**
**ಸ್ವಲ್ಪಂ ವಾ ಬಹುಲಂ ವಾಪಿ ದೇಯಮಿತ್ಯಭಿಧೀಯತೇ ॥**

ಇತರರಿಗೆ ತೊಂದರೆ ಕೊಡದೆ, ತಾನು ಹೆಚ್ಚು ಕಷ್ಟಕ್ಕೀಡಾಗದೆ, ತನ್ನ ದುಡಿತದಿಂದ ಸಂಪಾದಿಸಿದ ಸ್ವಲ್ಪ ಅಥವಾ ಹೆಚ್ಚಾದ ದ್ರವ್ಯಕ್ಕೆ ''ದೇಯ''ವೆಂದು ಹೆಸರು. ಅಂದರೆ ಅದರ ದಾನವೇ **ವಿಶುದ್ಧ**ದಾನವೆನಿಸುವದು – ಎಂಬುದಾಗಿ ರುವದು. ಹೀಗೆ ಗಳಿಸಿದ ಧನವೇ ಪುಣ್ಯಕೆಲಸಗಳಿಗೆ ಅನುಕೂಲವಾದುದು; ಆದ್ದರಿಂದ ಧನಿಯಾದ ಮಾನವನಿಗೆ ಅಂತಹ ಧನದಿಂದ ಸ್ವರ್ಗದ ಬಾಗಿಲು ತೆರದೇ ಇರುವದು. ಶಾಸ್ತ್ರದಲ್ಲಿ ರಾಜ ಧನದ ಲಕ್ಷಣವನ್ನು ಹೇಳಿರುವದು ಹೇಗೆಂದರೆ:–

**ಕುಸೀದಕೃಷಿವಾಣಿಜ್ಯ ಶುಲ್ಕಗಾನಾನುವೃತ್ತಿಭಿಃ ।**
**ಕೃತೋಪಕಾರಾದಾಪ್ತಂ ಚ ರಾಜಸಂ ಸಮುದಾಹೃತಮ್ ॥**

ಬಡ್ಡಿ, ಕೃಷಿ, ವಾಣಿಜ್ಯ, ಶುಲ್ಕ, ಸಂಗೀತ– ಮುಂತಾದವುಗಳಿಂದ ಮತ್ತು ಉಪಕೃತವ್ಯಕ್ತಿಯಿಂದ ಬೇಕಾದಾಗ ತೆಗೆದುಕೊಂಡ ಧನವು '**ರಾಜಸ**'ವು. ಈ ರಾಜಸಧನವು ಬ್ರಾಹ್ಮಣನಿಗೆ ಸಾಮಾನ್ಯವಾಗಿ ನಿಷಿದ್ಧವು; ಆದರೆ ಆಪತ್ಕಾಲದಲ್ಲಿ ಅವನೂ ಹೀಗೆ ಸಂಪಾದಿಸಬಹುದು. ಇನ್ನು ತಾಮಸಧನದ ಲಕ್ಷಣವೇನೆಂದರೆ–

**ಪಾರ್ಶ್ವಿಕದ್ಯೂತಚೌರ್ಯಾರ್ತಿಪ್ರತಿರೂಪಕಸಾಹಸೈಃ ।**
**ವ್ಯಾಜೇನೋಪಾರ್ಜಿತಂ ವಸ್ತು ತತ್ಕೃಷ್ಣಂ ಸಮುದಾಹೃತಮ್ ॥**

ಅಧಿಕಾರದರ್ಪದಿಂದ, ಜೂಜಿನಿಂದ, ಕಳ್ಳತನದಿಂದ, ನೋಯಿಸೋಣದರಿಂದ, ವಂಚಕತನದಿಂದ, ಸಾಹಸಕರ್ಮದಿಂದ, ಮತ್ತು ನೆಪದಿಂದ ಸಂಪಾದಿತವಾದ ಧನವು **ತಾಮಸ**ವೆನಿಸುವದು. ಇದರ ಉಪಾರ್ಜನವು ಯಾವಾಗಲೂ ನಿಷಿದ್ಧವು.

ಅನ್ಯಮತಾನುಯಾಯಿಗಳು ಈ ಮೂರು ವಿಭಾಗದ ವಿವರವನ್ನರಿತಿದ್ದರೆ, ''ಕಮಿಷನ್'' ಮುಂತಾದ ಹೆಸರಿನಿಂದ ಹಣವನ್ನು ಸುಲಿಯುತ್ತಿರಲಿಲ್ಲ; ಕುದುರೆ ಜೂಜು ಮುಂತಾದ್ದರಿಂದ ಬದುಕುತ್ತಿರಲಿಲ್ಲ; ಕೃತ್ರಿಮವಾದ ವಾಣಿಜ್ಯದಿಂದ ಹೊಟ್ಟೆಯನ್ನು ಹೊರೆಯುತ್ತಿರಲಿಲ್ಲ. ಪರಸ್ವಾಪಹರಣಪರಪೀಡನಗಳು ಬಹು ಮಟ್ಟಿಗೆಕಡಿಮೆಯಾಗುತ್ತಿದ್ದವು. ಅವರು ''ಧನವೆಲ್ಲವೂ ದುಷ್ಟವು'' ಎಂಬ ಉಪದೇಶವನ್ನು ಕೇಳಿದರು; ಆದರೆ ಅದನ್ನು ಅನುಸರಿಸಲಾರದೆಹೋದರು. ಅವರೇ ಏಕೆ? ಯಾವ ಜಾತಿಯವರೂ ಅದನ್ನು ಅನುಸರಿಸುವದಕ್ಕೆ ಸಮರ್ಥರಾಗುವದಿಲ್ಲ. ಅವರು ವಿಶುದ್ಧವಾದ ಧನಾರ್ಜನೆಯ ಉಪಾಯವನ್ನು ಅರಿಯದೆ ಹೋದರು; ಆದ್ದರಿಂದ ಸಾತ್ತ್ವಿಕರಾಜಸತಾಮಸವೆಂದೆಣಿಸದೆ ಹಣವನ್ನುಗಳಿಸಲು ತೊಡಗಿದರು.

ಶಾಸ್ತ್ರಾಚಾರವು ನಮ್ಮನ್ನು ಈ ಹಾದಿಯಲ್ಲಿ ಹೋಗಗೊಡಿಸುವದಿಲ್ಲ. ಈಗ ನಮಗೆ ಆಪತ್ಕಾಲವು. ಆದ್ದರಿಂದ ಈಗ ಸಾತ್ತ್ವಿಕರಾಜಸಧನಗಳನ್ನು ಗಳಿಸಲು ಯತ್ನಪಡಬಹುದು; ಆದರೆ ತಾಮಸಧನವನ್ನು ಮುಟ್ಟಲೂಬಾರದು.

ಧನದ ಪ್ರಯೋಜನವು ಸಾಮಾನ್ಯವಾಗಿ ಮೂರು ಬಗೆಯಾಗಿರುವದು: ತನ್ನ ಮತ್ತು ತನ್ನವರ ಕಾಪಾಡುವಿಕೆ, ಸುಖದ ಇಚ್ಛೆಗೆ ತೃಪ್ತಿಯನ್ನುಂಟು ಮಾಡುವಿಕೆ, ದಾನದ ಮೂಲಕ ಮತ್ತೊಬ್ಬರ ಕಷ್ಟವನ್ನು ನೀಗಿಸುವಿಕೆ. ಈ ಮೂರು ಪ್ರಯೋಜನದ ಮಧ್ಯದಲ್ಲಿ ಯಾವದೂ ಎಲ್ಲೆಯನ್ನು ಮೀರುವದಲ್ಲ. ಮತ್ತೆಲ್ಲದರ ಎಲ್ಲೆಯೂ ಸ್ವಲ್ಪವಾದುದಾಗಿರುವದು. ತನ್ನ ಮತ್ತು ತನ್ನವರಿಗಾಗಿ ಹೊಟ್ಟೆಬಟ್ಟೆಗೆ ಹೆಚ್ಚು ಹಣದ ಪ್ರಯೋಜನವಿಲ್ಲ. ಎಲ್ಲಿಯಾದರೊಮ್ಮೆ ಅದಕ್ಕೆ ತಗಲುವಷ್ಟು ಹಣವು ದೊರೆಯದಿದ್ದರೆ, ಸಾಮಾಜಮಧ್ಯದಲ್ಲಿ ತುಂಬ ತೊಂದರೆಯುಂಟಾಗುವದು; ಆದ್ದರಿಂದ ಅದನ್ನು ಕಳೆಯುವದಕ್ಕೆ ಯತ್ನಿಸುವದಾವಶ್ಯಕ. ಭೋಗಸುಖದ ಎಲ್ಲೆಯೂ ಬಹುಮುಂದರಿಯುವದಿಲ್ಲ. ವಿಷಯೇಂದ್ರಿಯಗಳ ಸಂಬಂಧದಿಂದ

ಭೋಗವಾಗುವದು, ಆದರೆ ಇಂದ್ರಿಯಗಳು ಬಲು ಬೇಗನೆ ಉಪಭೋಗ್ಯ ಗ್ರಹಣದಲ್ಲಿ ಅಶಕ್ತಗಳಾಗುವುವು. ಎಂಥ ಉತ್ತಮ ವಸ್ತುವಿನ ಭೋಜನ ಸುಖವಾಗಲಿ ಉದರಪೂರ್ತಿಯಾದ ಬಳಿಕ ಸ್ವಲ್ಪವೂ ಇರುವದಿಲ್ಲ. ಅಷ್ಟೇ ಅಲ್ಲ, ಇಂದ್ರಿಯಗಳ ಗ್ರಹಣಶಕ್ತಿಯು ಸ್ವಲ್ಪ ಉಳಿದಿರುವಾಗಲೇ ಭೋಗವನ್ನು ಬಿಡುವ ಅವಶ್ಯಕತೆಯಾಗುವದು. ತುಂಬ ಹೊಟ್ಟೆ ತುಂಬುವ ಮುಂಚೆಯೇ ಊಟವನ್ನು ಬಿಡದಿದ್ದರೆ ಊಟದ ಸುಖವು ತೋರಲಾರದು. ಇದರಂತೆ ದಾನದ ಗುಣವೂ ಮೇರೆಯನ್ನು ಮೀರುವದಲ್ಲ. ಯಾವ ದಾನದ ಮೂಲಕ ದಾತೃವಿನ ಸಹಾನುಭೂತಿಯೂ ತನಗಾಗಬೇಕಾದ ಪ್ರಯೋಜನವೂ ವೃದ್ಧಿಯಾಗು ವದಿಲ್ಲವೋ ಆ ದಾನದಲ್ಲಿ ಗುಣವಿಲ್ಲ. ಯಾವ ದಾನದಲ್ಲಿ ಗ್ರಹೀತೃವಿನ ಅಪಕರ್ಷವು ಏರ್ಪಡುವದೋ, ಅಂದರೆ ಅವನಿಗೆ ಆಲಸ್ಯ ಅಥವಾ ಆತ್ಮಗ್ಲಾನಿಯು ಹುಟ್ಟುವದೋ, ಅಂತಹ ದಾನದಲ್ಲಿಯೂ ಸರಿಯಾದ ಸುಖವಿಲ್ಲ, ಅದರಿಂದ ಉಪಕಾರವೂ ಇಲ್ಲ. ವ್ಯಕ್ತಿನಿಷ್ಠವಾದ ದಾನದ ಎಲ್ಲೆಯು ಈ ಬಗೆಯಾಗಿ ಅತಿಸಂಕೀರ್ಣವಾಗಿಯೇ ಇರುವದು. ಸಾಧಾರಣ ಹಿತಕರಕಾರ್ಯದಲ್ಲಿ ಮಾಡುವ ದಾನವು ಇದಕ್ಕಿಂತಲೂ ಹೆಚ್ಚಿನದಾದರೂ ಹೆಚ್ಚು ಎಲ್ಲೆಯನ್ನು ಮೀರುವದಿಲ್ಲ.

ನಮ್ಮ ಶಾಸ್ತ್ರಾಚಾರಗಳು ಧನಪ್ರಯೋಜನದ ಈ ಎಲ್ಲೆಗಟ್ಟನ್ನರಿತೇ ನಿರ್ದಿಷ್ಟ ಗಳಾಗಿವೆ. ಏಕೆಂದರೆ, ಧನದ ಪ್ರಯೋಜನವು ಮೇರೆಯಲ್ಲಿ ಬದ್ಧವಾದರೂ ಜನರ ಹಣದಾಸೆಯು ಬಹು ಎಲ್ಲೆಯನ್ನು ಮೀರಿರುವದು; ಶಾಸ್ತ್ರವು ಸಾತ್ತ್ವಿಕಧನೋಪಾರ್ಜನೆಯ ಉಪಾಯವನ್ನರುಹಿ ಗಳಿಸುವ ಆಶೆಯನ್ನು ಕಡಿಮೆಮಾಡುವ ಸಲುವಾಗಿ ಯತ್ನಪಡುತ್ತಿರುವದು. ಅದು ಗೃಹಸ್ಥನಿಗೆ ಹಣವನ್ನು ಸಂಪಾದಿಸುವದಕ್ಕೂ ಶೇಖರಿಸುವದಕ್ಕೂ ವಿಧಿಮಾಡಿ ಕೊನೆಗೆ –

**ಸಂತೋಷಂ ಪರಮಾಸ್ಥಾಯ ಸುಖಾರ್ಥೀ ಸಂಯತೋ ಭವೇತ್ ।**
**ಸಂತೋಷಮೂಲಂ ಹಿ ಸುಖಂ ದುಃಖಮೂಲಂ ವಿಪರ್ಯಯಃ ॥**

ಸುಖವನ್ನು ಬಯಸುವ ಮಾನವನು ಸಂತೋಷವನ್ನು ದೊಡ್ಡ ಅವಲಂಬನವನ್ನಾಗಿಮಾಡಿಕೊಂಡು, ಮನವನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕು; ಸಂತೋಷವೇ ಸುಖಕ್ಕೆ ಮೂಲ, ಅದಕ್ಕೆ ವಿಪರೀತವು ದುಃಖಕ್ಕೆ ಮೂಲವು ಎಂದುಪದೇಶಿಸುವದು. ಆದ್ದರಿಂದ ಸುಖಕ್ಕಾಗಿ ಧನವಲ್ಲ; ಏಕೆಂದರೆ ಭೋಗದಿಂದಲೇ

ಸುಖವಾಗುವದಿಲ್ಲ. ಹಣಗಳಿಸುವದರಲ್ಲಿಯೇ ಪ್ರಮತ್ತನಾಗುವದು ಶಾಸ್ತ್ರದಲ್ಲಿ ನಿಷಿದ್ಧವು, ಕಾಮನೆಯನ್ನು ಗೆಲ್ಲುವದೇ ಶಾಸ್ತ್ರದ ಉಪದೇಶ–

**ಇಂದ್ರಿಯಾರ್ಥೇಷು ಸರ್ವೇಷು ನ ಪ್ರಸಜ್ಜೇತ ಕಾಮತಃ ।**
**ಅತಿಪ್ರಸಕ್ತಶ್ಚೈತೇಷಾಂ ಮನಸಾ ಸನ್ನಿವರ್ತಯೇತ್ ॥**

ಇಂದ್ರಿಯಪ್ರಯೋಜನಗಳಲ್ಲೆಲ್ಲ ಕಾಮದಿಂದ ಪ್ರಸಕ್ತವಾಗಬಾರದು; ಇವುಗಳಲ್ಲಿ ಅತಿಪ್ರಸಕ್ತಿಯಾಗದಂತೆ ಮನವನ್ನು ಹತೋಟಿಯಲ್ಲಿಡಬೇಕು. ಈ ಸಂಯಮದ ಸಾಧನದ ಸಹಕಾರದಿಂದಲೇ ಪ್ರಕೃತದಲ್ಲಿ ಸುಖದ ಸಂಭಾವನೆಯಿರುವದು. ಕಾಮವನ್ನು ದಮನಮಾಡದೆಹೋದರೆ ಕಾಮದ ಉಪಭೋಗವಾಗುವದಿಲ್ಲ.

**ನ ಜಾತು ಕಾಮಃ ಕಾಮಾನಾಮುಪಭೋಗೇನ ಶಾಮ್ಯತಿ ।**
**ಹವಿಷಾ ಕೃಷ್ಣವರ್ತ್ಮೇವ ಭೂಯ ಏವಾಭಿವರ್ಧತೇ ॥**

ಕಾಮದ ಉಪಭೋಗದಿಂದ ಯಾವಾಗಲೂ ಕಾಮದ ಶಾಂತಿಯಾಗುವದಿಲ್ಲ; ತುಪ್ಪವನ್ನು ಹಾಕಿದರೆ ಬೆಂಕಿಯು ಹೆಚ್ಚುವಂತೆ ಇನ್ನೂ ಹೆಚ್ಚುವದು. ಅಂದರೆ ಕಾಮದ ಉಪಭೋಗದಿಂದ ಭೋಗಕಾಮನೆಯು ಹೆಚ್ಚೇ ಹೆಚ್ಚುವದು, ಭೋಗದ ಶಕ್ತಿಯು ಮಾತ್ರ ಹೆಚ್ಚಲಾರದು; ಆದ್ದರಿಂದ ಕಾಮನೆಯ ಬುದ್ಧಿಯಲ್ಲಿ ದುಃಖವೇ ಹೆಚ್ಚುವದು.

ವಾಸ್ತವಿಕವಾಗಿ ಶಾಸ್ತ್ರಕಾರರು ಕಾಮವನ್ನು ತಡೆಯುವದಕ್ಕೆ ಉಪದೇಶವನ್ನಿತ್ತೇ ಭೋಗದ ಹಾದಿಯನ್ನು ತೆರೆದಿರುವದು. ಮತ್ತು ಭಾರತವಾಸಿಗಳು ತಮ್ಮ ಸರ್ವದಿಗ್ದರ್ಶಿಯಾದ ಶಾಸ್ತ್ರದ ಉಪದೇಶಕ್ಕನುಸಾರವಾಗಿದ್ದರೆಂತಲೇ ಅವರ ಜೀವನವು ಕಾಮನೆ ಎಂಬ ಪತ್ರದಿಂದ ಮರೆಮಾಡಲ್ಪಟ್ಟದ್ದಾಗಿ ಪುಷ್ಪ ಮತ್ತು ಫಲಗಳನ್ನು ಪಡೆಯಿತು.

## 4. ಸದಾಚಾರವೃಕ್ಷದ ಹೂವು

**'ಯಶಾಂಸಿ ಪುಷ್ಪಾಣಿ'**– ಸದಾಚಾರತರುವಿಗೆ ಕೀರ್ತಿಗಳೇ ಹೂಗಳು ಎಂಬ ಉಕ್ತಿಯನ್ನೀಗ ವಿಚಾರಮಾಡಬಹುದು. ಸದಾಚಾರಸಂಪನ್ನರಾದ ಮಾನವರು

ಜನರಲ್ಲಿ ಕೀರ್ತಿಯನ್ನು ಪಡೆಯುವರೆಂಬುದು ಸ್ವಾಭಾವಿಕವಾಗಿರುತ್ತದೆ. ಸದಾಚಾರಸಂಪನ್ನನು ಅವಶ್ಯವಾಗಿ ಜನರ ಮನ್ನಣೆಗೆ ಪಾತ್ರನಾಗಿಯೇ ಆಗುವನು. ಏಕೆಂದರೆ, ಯಾವನು ಆಚಾರವ್ಯವಹಾರಗಳನ್ನು ಮಾಡಲು ಎಲ್ಲರೂ ಉಪದಿಷ್ಟರಾಗಿರುವರೋ, ಅವನ್ನು ಪಾಲಿಸುವವನು ಸುಖ್ಯಾತಿಯನ್ನೇಕೆ ಪಡೆಯಲಾರನು? ವಿದ್ಯಾಲಯದಲ್ಲಿ ಹುಡುಗನು ಸರಿಯಾಗಿ ಓದಿ ಬರೆದುಕೊಂಡರೆ ಸರಿಯಾದ ಬಹುಮಾನವನ್ನು ಪಡೆಯುವನು. ಸದಾಚಾರಪರಾಯಣನಾದವನಿಗೆ ಜನರಲ್ಲಿ ಬರುವ ಯಶಸ್ಸೂ ಪಾರಿತೋಷಕವೇ. ಐರೋಪ್ಯರು ಹೇಳುವದೇನೆಂದರೆ, ಯಾವದು ಸಾಧಾರಣರಿಗೆ ಅಭಿಮತವೋ ಆದರಂತೆ ನಡೆದುಕೊಂಡರೇ ಸುಖ್ಯಾತಿ, ನಡೆಯದಿದ್ದರೆ ಅಪನಿಂದೆಯೂ ಬರುವದು. ಯೂರೋಪಿಯನ್ನರ ಒಳಗೆ ಶಾಸ್ತ್ರಚಾರವಿಲ್ಲದಿದ್ದರೂ ಅವರು ವೇಳೆಗೆ ಮತ್ತು ದೇಶಕ್ಕೆ ತಕ್ಕಂತೆ ಆಚಾರವನ್ನು ಘುಣಾಕ್ಷರದಿಂದಲೂ ತಪ್ಪಿರುವದಿಲ್ಲವಾದಕಾರಣವೇ ಮಹೋನ್ನತಕೀರ್ತಿಗಳಿಗೆ ಭಾಗಿಗಳಾಗಿರುವರು.

ಆದರೆ ಸದಾಚಾರದ ಹೂವು ಯಶಸ್ಸೆಂದು ಬರೆದಿರುವದರ ತಾತ್ಪರ್ಯವನ್ನು ಮತ್ತಿಷ್ಟು ಹೆಚ್ಚಾಗಿ ವಿಚಾರಮಾಡಬೇಕಾಗಿದೆ. ಯಶಸ್ಸಿಗೆ ಮೂರು ಮುಖ್ಯವಾಗಿ ಕಾರಣಗಳೆಂದು ತಿಳಿದುಬರುವದು. ಅವು ಯಾವವೆಂದರೆ ಅಸಾಧಾರಣವಾದ ಗುಣಶಾಲಿತ್ವವು, ಪರೋಪಕಾರಪರಾಯಣತೆ, ನಮ್ರತೆ. ಇವುಗಳೊಳಗೆ ಮೊದನೆಯದು ಅಂದರೆ ಅಸಾಧಾರಣಗುಣಶಾಲಿತ್ವವು ಬಲುಮಟ್ಟಿಗೆ ಪ್ರಕೃತಿಯಿಂದ ಪ್ರದತ್ತವಾದದ್ದು. ಇದು ಯಾವದಾದರೂ ಸಾಧಾರಣವಾದ ಶಿಕ್ಷೆಯಿಂದ ಬರತಕ್ಕದ್ದಲ್ಲ; ಅಷ್ಟೇ ಅಲ್ಲ, ಶಿಕ್ಷೆಯಲ್ಲೇನಾದಾರೂ ದೋಷವಿದ್ದರೆ ಅದಕ್ಕೆ ಅಡ್ಡಿಯೇ ಆಗುವದು. ನಮ್ಮ ಶಾಸ್ತ್ರಾಚಾರವೆಂಬ ಶಿಕ್ಷೆಯಲ್ಲಿ ಅಂತಹ ದೋಷವಾವುದೂ ಕಾಣಬರುವದಿಲ್ಲವೆಂಬುದು ಕ್ರಮವಾಗಿ ಮುಂದೆ ತಿಳಿದುಬರುವದು.

ಪರೋಪಕಾರಪ್ರವಣನಾದವನ ಹೃದಯದಲ್ಲಿ ಪರದುಃಖಕಾತರತ್ವವಿರುವದು. ಅದರಿಂದ ಅವನಲ್ಲಿ ಸಮಾಜದ ಸಹಾನುಭೂತಿಯು ಏರ್ಪಡುವದು. ಸರಿಯಾದ ಪರೋಪಕಾರಿಯನ್ನಾರೂ ಸ್ವಾರ್ಥಪರನೆಂದೆನ್ನುವದಿಲ್ಲ. ಅವನು ಸಾಮಾಜಿಕಬಂಧನದ ಮೂಲಸೂತ್ರದಿಂದಲೇ ಕಟ್ಟಲ್ಪಟ್ಟವನಾಗಿರುತ್ತಾನೆ. ಪರೋಪಕಾರವ್ಯಕ್ತಿಯು ಸಮಾಜಕ್ಕೆ ಭಕ್ತನು, ಆದ್ದರಿಂದ ಸಮಾಜದ ಪ್ರೀತಿಗೆ

ಪಾತ್ರನಾಗುವನು. ಸದಾಚಾರವು ಜನರನ್ನು ಪರದುಃಖಕಾತರತೆ ಹಾಗೆ ಪರೋಪಕಾರ – ಇವುಗಳಲ್ಲಿ ಪ್ರೇರಣೆಮಾಡುವದು. ಇದು ಅತಿಥ್ಯ, ಸತ್ಕಾರ ಮುಂತಾದ ಎಲ್ಲ ಬಗೆಯದಾದ ದಾನಕಾರ್ಯದಲ್ಲಿಯೂ ಉನ್ಮುಖತೆಯನ್ನುಂಟುಮಾಡುವದು. ಇದರಿಂದ ಸದಾಚಾರವು ಯಶಸ್ಸಿಗೆ ಕಾರಣಾವಾಗುವದು.

ಪರೋಪಕಾರಕ್ಕಿಂತಲೂ ನಮ್ರತೆಯು ಬಲುಮಟ್ಟಿಗೆ ಪ್ರಶಸ್ತವಾದ ಉಪಾಯವು. ಯಾವನು ಪರೋಪಕಾರವನ್ನು ಮಾಡಿ ಅವಿನೀತಭಾವವನ್ನು ಹೊಂದುವನೋ, ತನ್ನ ಹೆಮ್ಮೆಯನ್ನು ಕೊಚ್ಚಿಕೊಳ್ಳುವನೋ ಉಪಕೃತರ ಗೌರವವನ್ನು ಕಳೆಯುವನೋ, ಹಾಗೂ ಅವರಲ್ಲಿ ತನ್ನ ಪ್ರಭುಭಾವವನ್ನು ತೋರ್ಪಡಿಸುವನೋ, ಅಥವಾ ಅವರನ್ನು ಪೀಡನೆಮಾಡುವನೋ, ಅವನ ಯಶಸ್ಸು ಮಲಿನವಾಗಿ ಹೋಗುವದು. ಆದರೆ ಯಾವನು ಜನರಲ್ಲಿ ನಮ್ರನಾಗಿ ನಡೆಯುವನೋ, ಅವನು ಹೆರರಿಗೆ ಉಪಕಾರಮಾಡಲಿ ಬಿಡಲಿ, ಜನರ ಅನುರಾಗಕ್ಕೆ ಪಾತ್ರನಾಗುವನು.

ದೀನಭಾವದಲ್ಲಿ ಒಂದು ಬಗೆಯಾದ ಜನರ ಅನುಗ್ರಹಪ್ರವಣತ್ವವನ್ನು ನೋಡಿ ಶಠರು ಬಹುವೇಳೆ ತಮ್ಮ ದೀನಭಾವವನ್ನು ಹೇಳಿಕೊಳ್ಳುತ್ತಿರುವರು. ಕೆಲವರು ದಾರಿದ್ರ್ಯವನ್ನು, ಕೆಲವರು ಅಸ್ವಾಸ್ಥ್ಯವನ್ನು ಕೆಲವರು ಅದೃಷ್ಟ ಚಕ್ರದಲ್ಲಿ ಭೀತಿಖ್ಯಾಪನವನ್ನು ಮಾಡುತ್ತ ತಮ್ಮ ಆಭ್ಯಂತರಿಕವಾದ ಹೆಮ್ಮೆಯನ್ನು ಕೊಚ್ಚುತ್ತ ಮತ್ತು ಸ್ವಾರ್ಥಪರತ್ವವನ್ನು ಮುಚ್ಚುತ್ತ ಪ್ರಾಯಿಕವಾಗಿ ಸ್ವಲ್ಪಸ್ವಲ್ಪವಾಗಿ ಜನರ ಅನುರಾಗವನ್ನೂ ಅನುಗ್ರಹವನ್ನೂ ಆಕರ್ಷಿಸುತ್ತಲಿರುವರು, ನಾನು ಒಬ್ಬನನ್ನು ನೋಡಿರುವೆನು; ಅವನು ತನ್ನ ಅಸ್ವಸ್ಥಾವಸ್ಥೆಯ ಮಾತಿಲ್ಲದೆ ಕಾಗದವನ್ನು ಬರೆಯುತ್ತಿದ್ದದ್ದೇ ಇಲ್ಲ, ಮತ್ತೊಬ್ಬನನ್ನು ನೋಡಿದ್ದೆನು; ಅವನು ಬೇಕಾದಷ್ಟು ಸಿರಿಗಾರನು, ಸ್ವಭಾವತಃ ಹೊಟ್ಟೇಕಿಚ್ಚಿನ ಮೊಟ್ಟೆಯಾಗಿದ್ದರೂ ಅವನೂ ಯಾವ ರೀತಿಯಿಂದಲಾದರೂ ತನ್ನ ಕಷ್ಟದ ಒಂದು ಮಾತನ್ನಾದರೂ ಹೇಳದೆ ತನ್ನ ಮಾತನ್ನು ಮುಗಿಸುತ್ತಿದ್ದಿಲ್ಲ, ಅವನೂ ಜನರ ಅನುಗ್ರಹಕ್ಕೆ ಭಿಕಾರಿಯಾಗಿದ್ದನು.

ಈ ಬಗೆಯಾದ ವೇಷವು ಸರಿಯಲ್ಲ, ಆದರೆ ದಾರಿದ್ರ್ಯದ ಭಾವವು ಮಾನವನ ಅವಸ್ಥೆಗೆ ಸಂಗತವೆಂದೇ ಅವನ ವೇಷವೂ ಜನರ ಮನಸ್ಸಿಗೆ ಚಲುವಾಗಿ ತೋರುವದು. ಸಮಾಜದ ಕಡೆಗೆ ನಮ್ರತೆಯೇ ನಮಗೆ ಸ್ಥಾಯಿಯಾಗುವಂತೆ ಮಾಡಿಕೊಳ್ಳಬೇಕು. ನಾವು ಮತ್ತೊಬ್ಬರ ಕಡೆಯಿಂದ

ಹುಟ್ಟಿದಂದಿನಿಂದ ಸಾಯುವವರೆಗೂ ತೀರಿಸಲಾರದಷ್ಟು ಸಾಲಗಾರರಾಗಿರುವೆವು. ನಾವೆಲ್ಲ ಕಡೆಯಲ್ಲಿಯೂ ಈಶ್ವರನ ಹೂವನ್ನೇ ಈಶ್ವರನಿಗೆ ಅರ್ಪಿಸುವೆವು, ಅಷ್ಟೇ; ಅಂದರೆ ಸಮಾಜವು ನಮಗಾವದನ್ನು ಇತ್ತಿರುವದೋ, ಅದನ್ನೇ ನಾವು ಹೀಗೆ ಹಾಗೆ ಮಾಡುವೆವು. ಅದನ್ನೇ ಒಬ್ಬೊಬ್ಬರಿಗೆ ಕೊಟ್ಟು ಉಪಕಾರಿಗಳೆಂದು ಹೇಳಿ ಕೊಳ್ಳುವೆವು. ಇದರಿಂದ ತನ್ನ ಗೌರವ, ಹೆಚ್ಚಿಗೆ, ಅಧಿಕಾರಗಳನ್ನಿಟ್ಟುಕೊಳ್ಳುವ ಕಾರಣವೇನೂ ಇರುವದಿಲ್ಲ. ಮತ್ತೆ ಇನ್ನೊಬ್ಬರಿಗೆ ಉಪಕಾರಮಾಡುವ ಸುಖ ಮತ್ತು ಸಾಮರ್ಥ್ಯವನ್ನು ಹೊಂದುವದರಿಂದ ಸಮಾಜದ ಕಡೆಗೆ ಹಿಂದಿನ ಸಾಲಕ್ಕಿಂತಲೂ ಹೆಚ್ಚಾದ ಸಾಲದ ಹೊರೆಯೇರುವದು. ಈ ಸಾಲದ ಭಾರದಿಂದ ತಗ್ಗಿರುವದೇ ಮನುಷ್ಯನ ಅವಸ್ಥೆಗೆ ತಕ್ಕುದು. ತಂದೆಯ ಬಳಿ ಮಗನಿಗೆ ಎಂತಹ ನಮ್ರತೆಯೋ ಎಲ್ಲ ಸಮಾಜದ ಬಳಿಯಲ್ಲಿಯೂ ಅಂತಹ ನಮ್ರತೆಯೇ ನ್ಯಾಯಸಂಗತವಾದುದು. ನಮ್ರಭಾವದಿಂದಲೇ ಸಮಾಜದ ತೀರಿಸಲಳವಿಲ್ಲದ ಸಾಲವನ್ನು ಹೊತ್ತ ಪರಿಯು ತಿಳಿದುಬರುವದು. ಮತ್ತು ಅದನ್ನೊಪ್ಪಿಕೊಳ್ಳುವದೇ ಅದರಿಂದ ಪಾರಾಗುವದಕ್ಕೆ ದಾರಿ, ಹಾಗೆ ಬಂದ ಯಶಸ್ಸೇ ಬಿಡುಗಡೆಯ ಪರಿಯ ಪ್ರಮಾಣಪತ್ರವು.

ನಮ್ಮ ಶಾಸ್ತ್ರೋಕ್ತ ಸದಾಚಾರಗಳು ಮೇಲೆ ಹೇಳಿದ ತೆರದಿಂದ ನಮ್ರಭಾವಕ್ಕೆ ಪೋಷಕವಾಗಿರುವವು. ಮತ್ತು ಆದರ ಅಭ್ಯಾಸವನ್ನುಂಟುಮಾಡುವವು. ಶಾಸ್ತ್ರವು ಗೃಹಸ್ಥಕರ್ಮಗಳನ್ನು ಸಾಲವನ್ನು ತೀರಿಸುವದಕ್ಕೆ ಸಲುವಾಗಿಯೋ ಅಥವಾ ಹಿಂದೆ ಮಾಡಿದ ಪಾಪಗಳನ್ನು ಕಳೆದುಕೊಳ್ಳುವದಕ್ಕಾಗಿಯೋ ಅವಶ್ಯ ಮಾಡಬೇಕೆಂದು ಸಾರುವದು. ಸಾಲವನ್ನು ತೀರಿಸುವದು, ಅಥವಾ ಪಾಪವನ್ನು ಕಳೆದುಕೊಳ್ಳೋಣ– ಇವೆರಡರಿಂದ ಶ್ಲಾಘೆಯು ಉದ್ರೇಕವಾಗುವದಿಲ್ಲ, ಮನಸ್ಸಿನ ಉದ್ವೇಗವು ಮಾತ್ರ ಶಾಂತವಾಗಬಹುದು. ಮತ್ತು ವಿಧಿಯ ಪ್ರತಿಪಾಲನೆಮಾಡುವದೇ ಧರ್ಮಾಚರಣೆ. ಶಾಸ್ತ್ರವು ಈ ಮಾತನ್ನು ಬಾರಿಬಾರಿಗೂ ಸಾರಿ ಹೇಳುತ್ತಿರುವದು. ಅದರಿಂದ ಅಧೀನತ್ವದ ಶಿಕ್ಷೆಯೂ ಮತ್ತು ಅದರ ಅಭ್ಯಾಸವೂ ಆಗುವದು. ಈ ಎಲ್ಲಾ ಕಾರಣದಿಂದ ಶಾಸ್ತ್ರಾಚಾರ ಅಥವಾ ಸದಾಚಾರವು ನಮ್ರತೆಗೆ ಸಾಧಕವಾದುದು. ಯಾವದು ನಮ್ರತೆಗೆ ಸಾಧಕವೋ ಅದು ಅವಶ್ಯವಾಗಿ ಯಶಸ್ಸನ್ನು ತಂದುಕೊಡುವದು.

ಆಚಾರವಂತರಾದ ಬಹುಜನರು ಅಹಂಕಾರಿಗಳಾಗಿಯೂ ದಾಂಭಿಕರಾಗಿಯೂ ಕಾಣಬರುವರು. ಇವರು ಪುಣ್ಯಕರ್ಮವನ್ನು ತಲೆಯಲ್ಲಿ

ಹೊತ್ತು ತಿರುಗುವಂತೆ ಜಂಭಕೊಚ್ಚುವರು. ವಾಸ್ತವಿಕವಾಗಿ ಇವರ ಶಾಸ್ತ್ರಾಚಾರವು ಭಾವದುಷ್ಟವಾಗಿಯೇ ಹೀಗಾಗಿರುವದು. ಇವರೆಲ್ಲರೂ ತಾವು ಮಾಡಿದ ಕರ್ಮಗಳೆಲ್ಲವನ್ನೂ ಅರ್ಥವಾದದ ಕಡೆಗೆ ಲಕ್ಷ್ಯವಿಟ್ಟು ಹೀಗೆ ತಿಳಿದಿರುವರು. ಮುಖ್ಯವಾಗಿ ನಾವು ಹಿಂದೆ ಹೇಳಿದಂತೆ ಇವೆಲ್ಲವೂ ಮಾಡಿದ ಸಾಲತೀರಿಸುವ ದಕ್ಕಾಗೀಯೇ ಹೊರಟವು. ಅವರದನ್ನು ಯೋಚಿಸದೆ ಫಲದ ಹೆಚ್ಚಾದ ಲೋಭದಿಂದ ಆ ಪರಿಯಾದ ಅಹಂಕಾರವನ್ನು ತಲೆಯಲ್ಲಿ ಹೊತ್ತು ತಿರುಗುವರು. ಆದ್ದರಿಂದಲೇ ಅವರ ಆಚಾರವು ರಜೋದೋಷದಿಂದ ಕೂಡಿದ್ದಾಗುವದು.

ಇಂಗ್ಲಿಷನ್ನು ಕಲಿತವರಿಗೆ ನಮ್ಮ ಶಾಸ್ತ್ರಾಚಾರವು ಅಪರಿಜ್ಞಾತ ಮತ್ತು ಅಸಭ್ಯವಾದುದು. ಅದಕ್ಕಾಗಿಯೇ ಅವರ ಮನಸ್ಸಿನಲ್ಲಿ ವಶ್ಯಭಾವದನ್ಯೂನತೆ ಮತ್ತು ಅವರ ವ್ಯವಹಾರದಲ್ಲಿ ನಮ್ರತೆಯ ಕೊರತೆಯು ಕಾಣಬರುವುದು. ಅದಕ್ಕಾಗಿ ಅವರ ಗುಣಗಳು ಜನರ ಎದುರಿಗೆ ಸ್ಪಷ್ಟವಾಗಿ ಸೇರಿದ್ದಾಗಿ ಕಾಣಬರುವದಿಲ್ಲ, ಮತ್ತು ಅವರು ಹೆಚ್ಚು ಖ್ಯಾತಿವಂತರಾಗಿಲ್ಲ. ನನಗೆ ತೋರುವದೇನೆಂದರೆ ಇಂಗ್ಲಿಷಿನಿಂದ ಇವರು ಯಾವ 'ನೈತಿಕಸಾಹಸ'ದ ಹೆಸರನ್ನು ಕೇಳಿರುವರೋ, ಅದರಿಂದಲೇ ಈ ಹಲವು ಅನಿಷ್ಟಗಳ ಉತ್ಪತ್ತಿಯಾಗಿದೆ. ಇವರು ವೀರಪ್ರಕೃತಿಗಳಾದ ಪಾಶ್ಚಾತ್ಯರ ಶಿಷ್ಯರು, ಆದ್ದರಿಂದ ವೀರಸ್ವಭಾವಸುಲಭವಾದ ಸಾಹಸಧರ್ಮದಲ್ಲಿವರು ತುಂಬ ಪಕ್ಷಪಾತಿಗಳು. ಅದರಿಂದಲೇ ಸಾಹಸದ ಪ್ರಮಾಣವನ್ನು ಕೂಡುವ ಸಲುವಾಗಿ ದೇಶದಲ್ಲಿ ಪ್ರಚಲಿತ ಆಚಾರವ್ಯವಹಾರವನ್ನು ಪಾಲಿಸದೆ, ದೇಶಾಚಾರವನ್ನು ಅಲ್ಲಗಳೆಯುತ್ತ ತಮ್ಮ ಸಮಾಜವನ್ನು ಕೀಳಾಗಿ ಕಾಣುತ್ತಿರುವರು.

ಆದರೆ ಸ್ವಲ್ಪ ಮನಸಿಟ್ಟು ನೋಡಿದರೆ ತಿಳಿದುಬರುವದೇನೆಂದರೆ, ಈಗಿನ ವೇಳೆಯಲ್ಲಿ ದೇಶಾಚಾರದ ಕಡೆಗೆ ಅಶ್ರದ್ಧಾಪ್ರದರ್ಶನಮಾಡುವದು ಸ್ವಲ್ಪವೂ ಸಾಹಸಿಕತೆಗೆ ಪ್ರಮಾಣವಾಗುವದಿಲ್ಲ. ಸಾಹಸವೆಂದರೆ ನಿರ್ಭೀತಕತ್ವವು. ಭಯಕ್ಕೆ ಪಾತ್ರರಾರು? ಯಾರಿಗೆ ಇಷ್ಟಾನಿಷ್ಟಮಾಡುವ ಶಕ್ತಿಯಿರುವದೊ ಅವರೇ ಭಯಕ್ಕೆ ಪಾತ್ರರು. ಈಗ ನಮ್ಮ ಸಮಾಜವು ಯಾರಿಗೂ ಅಂತಹ ಯಾವದಾದರೊಂದು ಇಷ್ಟಾನಿಷ್ಟಗಳ ಶಕ್ತಿಯು ಮತ್ತೊಬ್ಬರ ಕೈಯಲ್ಲಿ ಸೇರಿದೆ. ಆದ್ದರಿಂದ ಸಮಾಜವು ಅಂತಹ ಭಯಕ್ಕೆ ಪಾತ್ರವಾದುದಲ್ಲ, ಪಾಶ್ಚಾತ್ಯರೇ ಈಗ ಭಯಕ್ಕೆ ಪಾತ್ರರಾಗಿರುವರು. ಆದ್ದರಿಂದ ಸಮಾಜಕ್ಕೆ ಅವಮಾನಮಾಡುವದು ಪುತ್ರವತ್ಸಲನಾದ ತಂದೆಯನ್ನು ಅವಮಾನಗೊಳಿಸಿದ ಬಗೆಯಿಂದ ಪಾಪದಲ್ಲಿಯೇ ಪ್ರಮಾಣವಾಗುವದು.

ಇದು ಸಾಹಸದ ಪ್ರಮಾಣವಾಗುವದಿಲ್ಲ. ಈಗ ಇಂಗ್ಲಿಷಿನವರ ಅನುಕರಣವು ಸಾಹಸವಲ್ಲ. ಇದರಲ್ಲಿ ಪ್ರಬಲವಾದ ತೋಷಾಮೋದಮಾತ್ರವಾಗುವದು. ಮುಸಲ್ಮಾನರ ಆಮಲಿನಲ್ಲಿ ಯಾವ ಹಿಂದೂಸಂತಾನರು ಮುಸಲ್ಮಾನರಾಗಿರುವರೊ ಯಾವ ತುರುಕರ ಸುಲ್ತಾನರ ಕೈಕೆಳಗೆ ಚಾಕರಿಯನ್ನು ಮಾಡಲು ಹೋಗಿರುವ ಯುರೋಪಿಯನ್ನರು ಕ್ರಿಸ್ತಧರ್ಮವನ್ನು ಬಿಟ್ಟು ಮಹಮ್ಮದೀಯ ಧರ್ಮವನ್ನು ಕೈಕೊಂಡಿರುವರೋ ಮತ್ತು ಯಾವ ಚೀನಸಾಮ್ರಾಜ್ಯದ ಸೈನಿಕಕಾರ್ಯದಲ್ಲಿ ಪ್ರವೃತ್ತರಾಗಿರುವ ಆಮೆರಿಕನ್ ಮತ್ತು ಯೂರೋಪ್‌ಪುರುಷರು ತಮ್ಮ ಹೆಸರನ್ನೂ ಉಡುಪನ್ನೂ ಚೀನೀಯಜನರಂತೆ ಮಾಡಿಕೊಂಡಿರುವರೋ, ಅವರ ನೈತಿಕಸಾಹಸವು ಹೇಗೆ ಪ್ರದರ್ಶಿತವಾಗುವುದಿಲ್ಲವೋ ಹಾಗೆ ಇಂಗ್ಲಿಷರ ಅಧಿಕಾರಕಾಲದಲ್ಲಿ ದೇಶಾಚಾರಗಳನ್ನು ತೊರೆದು ಇಂಗ್ಲಿಷರ ಆಚಾರಗಳನ್ನು ಕೈಗೊಂಡಿರುವ ಭಾರತವಾಸಿಗಳ ನಿರ್ಭೀಕತೆಯೂ ಪ್ರಮಾಣಿತವಾಗಲಾರದು. ನೈತಿಕ ಸಾಹಸಿಕತೆಯ ಲಕ್ಷಣವು ಇದಕ್ಕೆ ಸಂಪೂರ್ಣವಾಗಿ ವಿರೋಧಿಯಾದುದು.

**ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ ಸ್ವನುಷ್ಠಿತಾತ್ ।**
**ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ ॥**

ತನ್ನ ಧರ್ಮವು ವಿಗುಣವಾದರೂ ಸರಿಯೆ, ಅದು ಸುಂದರವಾಗಿ ಅನುಷ್ಠಿತವಾದ ಪರಧರ್ಮಕ್ಕಿಂತಲೂ ಬಹು ಮಂಗಲಜನಕವಾದುದು, ಸ್ವಧರ್ಮದಲ್ಲಿ ಮೃತ್ಯುವೂ ಶ್ರೇಷ್ಠವಾದುದು, ಪರಧರ್ಮವು ಭಯಕ್ಕೆ ಆಕರವಾದುದು. ಇಲ್ಲಿ ಧರ್ಮಶಬ್ದದ ಅರ್ಥವು ದೇಶಾಚಾರವೆಂದು ಪ್ರಕರಣದಿಂದ ಸಿದ್ಧವಾಗುವದು. ಇದನ್ನು ಹೆಚ್ಚಾಗಿ ಹೇಳಬೇಕಾಗಿಲ್ಲ. ಅದರಲ್ಲಿ ಒಂದು ಮಾತು ಮಾತ್ರ ಬಹಳ ದೊಡ್ಡದು. ಮೃತ್ಯುವಿಗಿಂತಲೂ ಹೆಚ್ಚು ಭಯಕ್ಕೆ ಕಾರಣವಾದುದು ಮತ್ತೊಂದಾವದು? ಎಲ್ಲರೂ ಮೃತ್ಯುವಿನ ಮಾತೆತ್ತಿದಿರೆ ನಡುಗುವರು ಅದರಲ್ಲಿ ಮತ್ತೊಂದು ಭಯವನ್ನು ಪ್ರಸ್ತಾಪಿಸಿ ಅದಕ್ಕಿಂತ ಇಂತಹ ಮೃತ್ಯುವೂ ಶ್ರೇಯಸ್ಸೆಂದು ನಿರೂಪಿತವಾಗಿರುವದು. ಅದು ಪಾಪದಭಯ ಹೊರತು ಬೇರೆ ಯಾವದೂ ಅಲ್ಲ. ಶಾಸ್ತ್ರವು ಮೃತ್ಯುವಿಗಿಂತಲೂ ಪಾಪವನ್ನು ಹೆಚ್ಚು ಭಯಂಕರವೆಂದು ಹೇಳಿಬಿಟ್ಟಿರುವದು. ಇಂತಹ 'ನೈತಿಕಸಾಹಸ'ವು ಮತ್ತೊಂದೆಡೆ ಎಲ್ಲಾದರೂ ಶಿಕ್ಷಿತವಾಗುವದೆ? ನವೀನ

ಇಂಗ್ಲಿಷ್ ಶಿಕ್ಷಿತರಾದ ತರಣರು ನೋಡಲಿ. ತಮ್ಮ ದೇಶದ ಪೂರ್ವಶಿಕ್ಷಿತ ವರ್ಗದವರಿಗಿಂತಲೂ ಹೆಚ್ಚಾದ ನಿರ್ಭೀಕರಾರೂ ಜಗತ್ತಿನಲ್ಲಿಲ್ಲ, ಮುಂದಾರೂ ಆಗಲಾರದು. ಆ ತರುಣರ ಈಗಿನ ಅನುಕರಣೇಚ್ಛೆಯು ನೈತಿಕಸಾಹಸಿಕತೆಯ ಲಕ್ಷಣವಲ್ಲ, ಅಜ್ಞತೆ ಮತ್ತು 'ನೈತಿಕಭೀರುತೆ'ಗೇ ಪರಿಚಾಯಕವಾಗಿರುವದು.

ಯಾವ ಶಾಸ್ತ್ರಾಚಾರವು ಮನುಷ್ಯನ ಅವಶ್ಯಕರ್ತವ್ಯಕಾರ್ಯಗಳನ್ನು ಋಣದ ಪರಿಶೋಧ ಅಥವಾ ಕೃತಪಾಪದ ಪ್ರಾಯಶ್ಚಿತ್ತವೆಂದು ನಿರ್ದೇಶ ಮಾಡುವದೋ. ಯಾವ ಶಾಸ್ತ್ರಾಚಾರವು ಐಕಾಂತಿಕವಶ್ಯತೆಯ ಅಭ್ಯಾಸವನ್ನು ಮಾಡಿಸಿ ನಮ್ರತೆ ಮತ್ತು ಅಕಿಂಚನತ್ವವನ್ನು ಸ್ಥಾಯಿಯಾಗುವಂತೆ ಮಾಡುವದೋ ಯಾವ ಶಾಸ್ತ್ರಾಚಾರವು ಮೃತ್ಯುವಿಗಿಂತಲೂ ಪಾಸದಲ್ಲಿ ಹೆಚ್ಚು ಭಯವನ್ನು ಹುಟ್ಟಿಸುವದೋ ಅದಕ್ಕಿಂತಲೂ ಹೆಚ್ಚಿನದಾವುದೂ ಲೋಕದಲ್ಲಿರುವದಿಲ್ಲ. ಕೀರ್ತಿ ಮತ್ತು ಯಶಸ್ಸು ಆ ಶಾಸ್ತ್ರಾಚಾರಸದಾಚಾರಕ್ಕೆ ಕ್ಷಣಸ್ಥಾಯಿ(ಐಹಿಕ) ಶೋಭಾ ಮತ್ತು ಆನಂದದಾಯಕವಾದ ಪ್ರಸೂನಮಾತ್ರವಾಗಿರುವದು.

## 5. ಸದಾಚಾರವೃಕ್ಷದ ಫಲವು

**ಫಲಂ ಚ ಪುಣ್ಯಮ್** - ಸದಾಚಾರವೆಂಬ ತರುವಿಗೆ ಫಲವು ಪುಣ್ಯವು. ಅಂದರೆ ಸದಾಚಾರಪರಾಯಣನಾದ ನರನು ಪುಣ್ಯವಂತನಾಗುವನು. ನಿಷ್ಪಾಪತೆ, ಕೊಳೆಯಿಲ್ಲದಿರುವಿಕೆ, ಚಿತ್ತಶುದ್ಧಿ, ರಜಸ್ತಮಸ್ಸಿಲ್ಲದ ಶುದ್ಧವಾದ ಸಾತ್ತ್ವಿಕಭಾವ, ಅಸುರಭಾವವು ತೊಲಗಿ ದೇವಭಾವದ ಅಧಿಷ್ಠಾನ, ಸ್ವಭಾವಜಾತ ಪಾಶವಪ್ರವೃತ್ತಿಯನ್ನು ದಮನಮಾಡಿ ಜ್ಞಾನಲಾಭದ ದಾರಿಯನ್ನು ಹೊಂದುವಿಕೆ - ಈ ದಾರಿಯನ್ನು ಹೊಂದಿದರೆ ಪುಣ್ಯ ಬರುವದು.

ಈಗ ನೋಡಬೇಕು, ಈ ದಾರಿಗೆ ವಿಘ್ನವೇನು? ಸಹಜವಾಗಿಯೇ ಈ ದಾರಿಯನ್ನು ಹೊಂದುವದಕ್ಕೆ ನಾಲ್ಕು ತೊಂದರೆಗಳೆಂದು ತೋರಿಬರುವದು; ಅವು ಯಾವವೆಂದರೆ: ಶರೀರದ ಅಪಾಟವ, ಬುದ್ಧಿಯ ಜಡತ್ವ, ಮನದ ಚಾಂಚಲ್ಯ, ಕಾಮದ ಪ್ರಾಬಲ್ಯ. ಶಾಸ್ತ್ರಾಚಾರದ ಪಾಲನೆಯಿಂದ ಈ ನಾಲ್ಕೂ ತೊಲಗುವವು.

ಶರೀರವು ಸ್ವಸ್ಥವಿಲ್ಲದಿದ್ದರೆ ಹಾಗೂ ಬಲಹೀನವಾದರೆ ಪುಣ್ಯವನ್ನು ಕೂಡಿಡುವದು ಕಠಿನವಾಗುವದು. ಚಿರರೋಗಿಗಳ ಮನಸ್ಸು ಶುದ್ಧವಾಗಲಾರದು. ಅವರು ಯಾವಾಗಲೂ ಶಾರೀರಕ ಕಷ್ಟಗಳನ್ನು ಅನುಭವಿಸುವರು. ಅದರಿಂದ ಅವರ ಮನವು ದೂಷಿತವಾಗಿಹೋಗುವದು. ಸಂಸಾರದ ಕಡೆಗೆ ಅವರ ದೃಷ್ಟಿ ಅನುಕೂಲವಾಗಲಾರದು. ಅವರ ಹೃದಯದಲ್ಲಿ ಪ್ರೇಮದ ಮತ್ತು ಶ್ರದ್ಧೆಯ ಪಾತಿಯು ಒಣಗಿಹೋಗಿರುವದು. ಖಾಯಿಲೆಯುಳ್ಳ ಮತ್ತು ಒಲವಿಲ್ಲದ ಜನರ ಕಾರ್ಯಪ್ರವೃತ್ತಿ ಮತ್ತು ಕಾರ್ಯಕ್ಷಮತೆಯು ಕಡಿಮೆಯಾಗುವದು. ಯಾರ ಕಾರ್ಯಪ್ರವೃತ್ತಿ ಮತ್ತು ಕಾರ್ಯಕ್ಷಮತೆಗಳು ಕಡಿಮೆಯಾಗಿರುವವೋ. ಅವನ ಜೀವನದೊಂದಿಗೆ ಪ್ರಕೃತಿಯ ಸುಖಮಯವಾದ ಘನಿಷ್ಠತೆಯು ತಪ್ಪುವದು. ಆಲಸ, ಕುಟಿಲ, ಮತ್ತು ಖಲಸ್ವಭಾವವುಳ್ಳವರು ಲೋಕದಲ್ಲಿ ಎಷ್ಟು ಜನರು ಕಣ್ಣಿಗೆ ಬೀಳುವರೋ, ಅವರ ಬಾಲ್ಯದಿಂದ ಜೀವನವೃತ್ತವನ್ನು ಪರೀಕ್ಷಿಸಿದರೆ ತಿಳಿಯಬರುವದೇನೆಂದರೆ ಅವರು ಹುಡುಗತನದಲ್ಲಿ ಅನೇಕ ರೋಗವನ್ನನುಭವಿಸಿರುವರು; ಹಾಗೂ ಅವರ ಶರೀರದಲ್ಲಿ ಯಾವದೋ ಒಂದು ಬಗೆಯ ಬೇನೆಯು ತಲೆಹಾಕಿಕೊಂಡಿರುವದು. ಮನುಷ್ಯರ ಚರಿತ್ರ ಗತದೋಷವನ್ನು ಅನುಸಂಧಾನ ಮಾಡಿದರೂ ಬಲುಮಟ್ಟಿಗೆ ತಂದೆತಾಯಿಗಳ ದೋಷವು ಅಥವಾ ಶೈಶವದ ಶಾರೀರಕದುರವಸ್ಥೆಯೇ ಮೂಲಕಾರಣವೆಂದು ಕಾರಬರುವದು. ಇದಕ್ಕಾಗಿ ಶರೀರದ ಪಟುತ್ವ ಮತ್ತು ಸಬಲತ್ವ ಇವೆರಡೂ ಸಚ್ಚರಿತ್ರ್ಯಗೆ ಪ್ರಧಾನತಮವಾದ ಕಾರಣವು. ಮತ್ತು ಯಾವದು ಸಚ್ಚರಿತ್ರ ಅಥವಾ ಚಿತ್ತಶುದ್ಧಿಗೆ ಹೇತುವೋ, ಅದೇ ಜ್ಞಾನಲಾಭಕ್ಕೆ ಉಪಾಯವಾಗಿರುವದು. ಇದನ್ನು ಮುಂದುಮಾಡಿಯೇ "**ನಾಯಮಾತ್ಮಾ ಬಲಹೀನೇನ ಲಭ್ಯಃ**" ಎಂಬ ಶಾಸ್ತ್ರವು ಹೊರಟಿರುವದು. ಬಲಹೀನ ವ್ಯಕ್ತಿ ಆತ್ಮಲಾಭದಲ್ಲಿ ಸಮರ್ಥನಾಗಲಾರನು. ಅಂದರೆ ಅಪಟುಶರೀರನಾದ ಪುರುಷನು ಪುಣ್ಯಸಂಚಯವನ್ನು ಮಾಡಿ ತನ್ನ ಗಂತವ್ಯವಾದ ಜ್ಞಾನಲಾಭದ ದಾರಿಯಲ್ಲಿ ಮುಂದರಿಯಲಾರನು.

ಶರೀರದ ಸುಸ್ಥಾವಸ್ಥೆಯೊಂದಿಗೆ ಧರ್ಮದ ಯಾವ ಘನಿಷ್ಠವಾದ ಸಂಬಂಧವೋ, ಅದನ್ನು ಸರ್ವದಿಗ್ದರ್ಶಿಯಾದ ಆರ್ಯಶಾಸ್ತ್ರವೊಂದೇ ಮನಗಂಡಿರುವದು.

**ಧರ್ಮಾರ್ಥಕಾಮಮೋಕ್ಷಾಣಾಂ ಆರೋಗ್ಯಂ ಮೂಲಮುತ್ತಮಮ್ ।**

ಮತ್ತಾವ ಶಾಂತಿಯೂ ಧರ್ಮಶಾಸ್ತ್ರವೂ ಶರೀರದ ಪಟುತ್ವರಕ್ಷಣೆಯನ್ನು ಧರ್ಮಾರ್ಜನೆಗೆ ಮುಖ್ಯವೆಂದು ನಿರ್ಣಯಮಾಡಿಕೊಟ್ಟಿಲ್ಲ. ಆದರೆ ಸ್ವಲ್ಪ ಮನವಿಟ್ಟು ನೋಡಿದರೆ ತಿಳಿದುಬರುವದೇನೆಂದರೆ ಶಾರೀರಸ್ವಾಸ್ಥ್ಯದೊಂದಿಗೆ ಮಾನಸಿಕ ಸ್ವಾಸ್ಥ್ಯದ ಅಥವಾ ಧರ್ಮಭಾವದ ಸಂಬಂಧವು ಬಲುಹತ್ತಿರದ್ದು. ಒಂದಾನೊಂದು ವೇಳೆ ಒಬ್ಬ ಇಂಗ್ಲೀಷನ್ನು ಓದಿಕೊಂಡ ಶೂದ್ರತರುಣನು ಒಬ್ಬ ಬ್ರಾಹ್ಮಣಕುಮಾರನನ್ನು ಹೊಟ್ಟೆಕಿಚ್ಚಿನಿಂದ ''ನಾನು ಉಳಿದ ಎಲ್ಲಾ ಗುಣಕ್ಕಿಂತಲೂ ಇವನ ಶಾರೀರಕಪಟುತ್ವವನ್ನೇ ಹೆಚ್ಚಾಗಿ ಕೊಂಡಾಡುತ್ತಿರುವೆನು'' ಎಂದನು. ಬ್ರಾಹ್ಮಣತನಯನು ಆ ವಕ್ರೋಕ್ತಿಯ ತಾತ್ಪರ್ಯವನ್ನು ಮನಗಂಡು ಸ್ವಲ್ಪ ನಕ್ಕು ''ನೀನು ಮಾಡಿದ ಪ್ರಶಂಸೆಯೇ ಎಲ್ಲದಕ್ಕಿಂತಲೂ ಹೆಚ್ಚಾದ ಪ್ರಶಂಸೆಯಾಯಿತು; ಏಕೆಂದರೆ ನೀನು ಹೇಳಿದುದೇನೆಂದರೆ ನಾನು ಮತ್ತು ನನ್ನ ಪೂರ್ವಪುರುಷರೆಲ್ಲರೂ ಸದಾಚಾರಸಂಪನ್ನರು.'' ಎಂದು ಹೇಳಿದನು. ವಾಸ್ತವಿಕವಾಗಿ ಶಾಸ್ತ್ರಾಚಾರದ ಅನೇಕಾನೇಕನಿಯಮಗಳು ಶರೀರದ ಚಟುವಟಿಕೆಯನ್ನು ಹೆಚ್ಚಿಸುವ ಸಲುವಾಗಿ ಹೇಳಲ್ಪಟ್ಟಿದೆ. ಇದಕ್ಕಾಗಿಯೇ ಸದಾಚಾರದ ಅನೇಕ ನಿಯಮಗಳು ವ್ಯಾಯಾಮದ ನಿಯಮಗಳಿಗೆ ಹೊಂದಿಕೊಳ್ಳುವಂತಹವು. ಆದರೆ ಶುದ್ಧವಾದ ವ್ಯಾಯಾಮದಿಂದ ಮೈಯ ಬಲವನ್ನೇ ಹೆಚ್ಚಿಸಿಕೊಳ್ಳುವ ಉದ್ದೇಶವು ಆ ದೂರದರ್ಶಿಯ ಮನದಲ್ಲಿದ್ದರೆ, ಈ ಕ್ಷಣವಿಧ್ವಂಸಿಯಾದ ಶರೀರದ ವಿಷಯದಲ್ಲಿ ಹೆಚ್ಚಾದ ಯತ್ನವಾಗಿ ದೋಷವೇರ್ಪಡುವ ಸಂಭಾವನೆಯುಂಟು. ಅದಕ್ಕಾಗಿ ವ್ಯಾಯಾಮಚರ್ಚೆಯನ್ನೂ ಶಾಸ್ತ್ರಾಚಾರರೂಪವಾಗಿ ಪರಿಣತ, ಧರ್ಮಭಾವದಿಂದ ವಿಧೌತ, ಮತ್ತು ಆದರಿಂದ ವಿಶೋಧಿತವನ್ನಾಗಿ ಮಾಡಿರುವದು.

ಬುದ್ಧಿಯ ಜಡತ್ವವನ್ನು ನಾಶಗೊಳಿಸಲು ಶಾಸ್ತ್ರೋಕ್ತವಾದ ಉಪಾಯವು ಎರಡು ಬಗೆ: ಒಂದು ಮಾನಸಿಕ, ಮತ್ತೊಂದು ಶಾರೀರಕ. ಮಾನಸಿಕ ಉಪಾಯವು ಸ್ಮೃತಿ ಅಥವಾ ಎಲ್ಲಾ ಮಾನಸಿಕಶಕ್ತಿಯು ಅಭಿವರ್ಧನ, ಚಿತ್ತದ ಏಕಾಗ್ರತಾಸಂಪಾದನ, ನಿಯಮಿತವಾದ ಸ್ವಾಧ್ಯಾಯಾದಿಗಳ ಆಲೋಚನೆ, ಮತ್ತು ಶಾಸ್ತ್ರಚಿಂತೆಯ ಪರಿಚಾಲನೆ – ಇವುಗಳಿಂದ ಸಂಪಾದಿತವಾಗುವದು. ಜ್ಞಾನಶಕ್ತಿಯು ಜಡತಾನಿವಾರಣೆಯ ಶಾರೀರಕ ಉಪಾಯವು ಭಕ್ಷ್ಯಾಭಕ್ಷಣದ

ವಿಚಾರದಿಂದ ನಿರ್ವಾಹಿತವಾಗುವದು. ಈ ವಿಷಯದಲ್ಲಿಯೂ ನಮ್ಮ ಶಾಸ್ತ್ರವು ಅನನ್ಯಸಾಧಾರಣವಾದುದು. ಇನ್ನಾವ ಶಾಸ್ತ್ರದಲ್ಲಿಯೂ ಈ ಬಗೆಯಾದ ನಿಯಮವು ಕಾಣಬರುವದಿಲ್ಲ. ಇಂಥಿಂಥ ದ್ರವ್ಯವನ್ನು ತಿಂದರೆ ಬುದ್ಧಿಯು ಮಂದವಾಗುವದು, ಎಂಬುದಾಗಿ ಹೇಳಿ ಆಯಾಯ ದ್ರವ್ಯದ ಭಕ್ಷಣದ ನಿಷೇಧವು ಮತ್ತಾವ ಜಾತಿಯಲ್ಲಿಯೂ ಕಾಣಬರುವದಿಲ್ಲ. ಐರೋಪ್ಯರ ರಾಸಾಯನಿಕವಿಶ್ಲೇಷಣವು ಇನ್ನೂ ಇಲ್ಲಿಯವರೆಗೆ ಬಂದಂತೆ ಕಾಣುವದಿಲ್ಲ. ಬಲು ಈಚಿನ ಜನರೂ ಪಾನಭೋಜನಾದಿಗಳೊಂದಿಗೆ ಬುದ್ಧಿ, ಸ್ಮೃತಿ, ಧೃತಿ–ಮುಂತಾದ ಮಾನಸಿಕವೃತ್ತಿಗಳಿಗೆ ಯಾವ ಸಂಬಂಧವೂ ಇಲ್ಲವೆಂದೇ ತಿಳಿದಿರುವರು.

**ದಧ್ನಃ ಸೌಮ್ಯ ಮಥ್ಯಮಾನಸ್ಯ ಯೋಽಣಿಮಾ ಸ ಊರ್ಧ್ವಃ ಸಮುದೀಷತಿ**
**ತತ್ಸರ್ಪಿರ್ಭವತಿ । ಏವಮೇವ ಖಲು ಸೌಮ್ಯಾನ್ನಸ್ಯ ಅದ್ಯಮಾನಸ್ಯ**
**ಯೋಽಣಿಮಾ ಸ ಊರ್ಧ್ವಃ ಸಮುದೀಯತಿ, ತನ್ಮನೋ ಭವತಿ॥**

ಎಲೈ ಸೌಮ್ಯ! ಮೊಸರನ್ನು ಕಡೆದರೆ ಅದರ ಅತಿ ಲಘುವಾದ ಭಾಗವು ಮತ್ತು ಸೂಕ್ಷ್ಮವಾದ ಭಾಗವು ಮೇಲಕ್ಕೇಳುವದು. ಅದೇ ತುಪ್ಪವಾಗುವದು. ಹಾಗೆಯೇ ಹೇ ಸೌಮ್ಯ! ಭಕ್ಷ್ಯದ್ರವ್ಯವು ಭಕ್ಷಿತವಾದರೆ ಅದರ ಅತಿಸೂಕ್ಷ್ಮವಾದ ಅಂಶದಿಂದಲೇ ಮನಸ್ಸು ಉಂಟಾಗುವದು. ಆಹಾರವಿಷಯದಲ್ಲಿ ಎಂತಹ ಸುಂದರತಥ್ಯವು!

ಮನಸ್ಸಿನ ಚಾಂಚಲ್ಯವನ್ನು ಕಳೆಯುವ ಉಪಾಯವೂ ಎರಡು ಬಗೆ. ಧ್ಯಾನ, ಧಾರಣೆ ಮತ್ತು ಸಮಾಧಿ ಅಭ್ಯಾಸ. ಇವುಗಳಿಂದ ಮನಸ್ಸಿನ ಚಾಂಚಲ್ಯವು ಹೋಗುವದು. ಮತ್ತೆ ಪ್ರಾಣಾಯಮ, ವ್ರತಾನುಷ್ಠಾನ ಮತ್ತು ವೈಧವಾದ ಭಕ್ಷ್ಯದ ಭಕ್ಷಣ ಅವೈಧಪರಿಹಾರ–ಇವುಗಳು ಮನದ ಚಾಂಚಲ್ಯವನ್ನು ನೀಗಿಸುವದರಲ್ಲಿ ಶ್ರೇಷ್ಠವಾದ ಉಪಾಯವು. ಯಾವದರ ತಿನ್ನುವಿಕೆಯಿಂದ ಮನದ ಚಾಂಚಲ್ಯವು ಹೆಚ್ಚುವದೋ ಅವೆಲ್ಲವೂ ನಿಷಿದ್ಧವಾಗಿರುವದು.

ಕಾಮದದಮನ – ಇದು ಇಂದ್ರಿಯವನ್ನು ಹತೋಟಿಯಲ್ಲಿಟ್ಟುಕೊಳ್ಳುವದರಿಂದ ಸುಲಭವಾಗುವದು. ಕಾಮಜಯದ ಮತ್ತು ಇಂದ್ರಿಯಸಂಯಮದ ವಿಧಿ, ಉಪದೇಶ ಮತ್ತು ಅನುಷ್ಠಾನಸೂತ್ರವು ಆರ್ಯಶಾಸ್ತ್ರದಲ್ಲಿ ಸರ್ವಾಂಗವ್ಯಾಪಕವು. ಭಕ್ಷಾಭಕ್ಷ್ಯದ ವಿಚಾರದಲ್ಲಿಯೂ ಕಾಮದಮನದ ಮೇಲೆ ತೀಕ್ಷ್ಣದೃಷ್ಟಿಯಿರುವದು. ಎಂತಹ ದ್ರವ್ಯದ ಭೋಜನದಿಂದ

ಯಾವ ಇಂದ್ರಿಯವು ಕೊಬ್ಬಿಕೊಳ್ಳುವದು- ಇವುಗಳ ವಿಚಾರಮೂಲಕವೇ ಸಾಧಕನ ಪಕ್ಷದಲ್ಲಿ ಭಕ್ಷ್ಯಾಭಕ್ಷ್ಯದ ವ್ಯವಸ್ಥೆಯಿರುವದು. ಯಾರು ಯೂರೋಪಿಯನ್ನರ ರಾಸಾಯನಿಕ ವಿಶೇಷಣವನ್ನೇ ದ್ರವ್ಯಾದ್ರವ್ಯದ ಗುಣಾಗುಣವಿಚಾರಕ್ಕೆ ಮುಖ್ಯವಾದ ಉಪಾಯವೆನ್ನುವರೋ, ಅವರು ಹಿಂದಣ ಕಾಲದಲ್ಲಿ ಹೇಗೆ ದ್ರವ್ಯಗುಣವನ್ನು ಪರೀಕ್ಷಿಸುತ್ತಿದ್ದರೆಂದು ತಿಳಿಯಲೇ ಆರರು. ವಾಸ್ತವಿಕರಾಸಾಯನಿಕ ವಿಶ್ಲೇಷಣವು ಸ್ಥೂಲವಾದ ವ್ಯಾಪಾರವು. ಇದರಿಂದ ಸಮಷ್ಟಿಭೂತವಾದ ಕೆಲವು ದ್ರವ್ಯದ ವ್ಯಷ್ಟೀಕರಣವಾಗಲಾರದು, ಉಪಾಯದ ಮೂಲಕ ಯಾವದಾದರೊಂದು ದ್ರವ್ಯವು ಜೀವನಶರೀರದಲ್ಲಿ ಹೇಗೆ ಕಾರ್ಯಮಾಡುವದೆಂದು ವ್ಯಕ್ತವಾಗಿ ತಿಳಿಯಲಾಗುವದಿಲ್ಲ; ಭಕ್ಷ್ಯದ್ರವ್ಯದ ಗುಣಾವಗುಣಗಳನ್ನು ಅನುಭವಿಸುವ ಸೂಕ್ಷ್ಮದರ್ಶಿಗಳಾದವರೇ ತಿಳಿಯಬಹುದಾಗಿರುವದು. ಮುಖ್ಯವಾಗಿ ನಮ್ಮ ಶಾಸ್ತ್ರದಲ್ಲಿ ಶರೀರದ ಪಟುತ್ವಸಾಧನ ಬುದ್ಧಿವೃತ್ತಿಯ ಸಮ್ಮಾರ್ಜನ, ಚಿತ್ತದ ಚಾಂಚಲ್ಯ ನಿವಾರಣ, ಹಾಗೆಯೇ ಕಾಮದ ಸಂಯಮನ ಮುಂತಾದುವುಗಳಿಗೆ ಸಲಕರಣೆಗಳು ವರ್ಣಿತವಾಗಿವೆ, ಮತ್ತು ಪ್ರಶಂಸಿತವಾಗಿದೆ. ಅದಕ್ಕೆ ಬಾಹ್ಯ ಅಭ್ಯಂತರಿಕ - ಇವೆರಡು ಉಪಾಯಗಳು ಕಥಿತವಾಗಿರುವವು. ಹಾಗೆ ಇಂತಹ ನಿತ್ಯವ್ಯವಹಾರ ಮತ್ತು ಅನುಷ್ಠಾನವು ನಡೆದುಬರುತ್ತದೆ. ಇದರಿಂದ ಈ ಎಲ್ಲಾ ಕಾರ್ಯದಲ್ಲಿ ಅಭ್ಯಸ್ತನಾಗಿ ಸಮಸ್ತಮಾನವಜೀವನವು ಒಂದು ವಿಶುದ್ಧಪದಾರ್ಥವಾಗಿ ಪ್ರಕೃತಜ್ಞಾನಲಾಭಕ್ಕೆ ಸರ್ವತೋಭಾವದಿಂದ ಉಪಯೋಗಿಯಾಗುವದು. ಶಾಸ್ತ್ರದಲ್ಲಿ ಧೃಢವಿಶ್ವಾಸವನ್ನಿಟ್ಟು ಅದರ ವಿಧಿಯನ್ನೂ ನಿಷೇಧವನ್ನೂ ರಕ್ಷಿಸುತ್ತ ನಡೆಯಲು ಶಕ್ಯನಾದರೇ ಪುಣ್ಯವೆಂಬ ಮಹಾಫಲದ ಲಾಭವಾಗುವದು, ಎಂತಹ ಸುಂದರತತ್ತ್ವ! ಯಾವ ಧರ್ಮವೆಂಬ ಬೀಜದಿಂದ ಶಾಸ್ತ್ರಾಚಾರದ ಪ್ರವೃತ್ತಿಯೇ ಆ ಧರ್ಮವೇ ಪುಣ್ಯವೆಂಬ ಹೆಸರಿನಿಂದ ಶಾಸ್ತ್ರಾಚಾರದ ಶುಭಮಯವಾದ ಫಲವು. ಅಂದರೆ ಪ್ರಾಕೃತವೃಕ್ಷವು ಹೇಗೆಯೋ, ಹಾಗೆ ಸದಾಚಾರತರುವೂ ಯಾವದು ಮೂಲದಲ್ಲಿಯೋ ಅದೇ ಅದರ ಫಲವಾಗುವದು.

**ಧರ್ಮೋಽಸ್ಯ ಮೂಲಾನ್ಯಸವಃ ಪ್ರಕಾಣ್ಡೋ**
**ವಿತ್ತಾನಿ ಶಾಖಾಶ್ಛದನಾನಿ ಕಾಮಾಃ ।**
**ಯಶಾಂಸಿ ಪುಷ್ಪಾಣಿ ಫಲಂ ಚ ಪುಣ್ಯಮಸೌ**
**ಸದಾಚಾರತರುರ್ಮಹೀಯಾನ್ ॥**

ಎಂಬ ಶ್ಲೋಕದ ಅಭಿಪ್ರಾಯವರ್ಣನೆಯು ಇಲ್ಲಿಗೆ ಮುಗಿಯಿತು.

ಇದುವರೆಗಿನ ವಿಚಾರಗಳಿಂದ ನಿರ್ಣೀತವಾದ ಅಂಶಗಳ ಸಂಕ್ಷೇಪವಿದು:

1. ರಜೋಗುಣ ಮತ್ತು ತಮೋಗುಣ ಅಂದರೆ ಚಾಂಚಲ್ಯ ಆಲಸ್ಯಾದಿ ಗುಣಗಳನ್ನು ತೊಳೆದು ಇಂದ್ರಿಯವೃತ್ತಿಗಳನ್ನು ಹತೋಟಿಯಲ್ಲಿಟ್ಟುಕೊಳ್ಳಲು ಅನುಕೂಲವಾದ ಅಭ್ಯಾಸವು ಶಾಸ್ತ್ರಾಚಾರ ಅಥವಾ ಸದಾಚಾರವೆನಿಸುವದು.

2. ಸದಾಚಾರದ ಮೂಲಕ ಆಯುಸ್ಸಿನ ಅಭಿವೃದ್ಧಿಯು ಮೂರು ಬಗೆಯಾದಕಾರಣ ಸಮಷ್ಟಿಯ ಮೇಲೆ ನಿರ್ಧರವಾಗಿರುವದು. ಅವುಗಳಲ್ಲಿ ಒಂದು ಪುರುಷಪರಂಪರಾಗತ, ಇನ್ನೊಂದು ಸಮಾಜಗತ, ಮತ್ತೊಂದು ಪುರುಷಕಾರನಿಷ್ಠ- ಇವುಗಳಿಂದ ಆಚಾರಪದ್ಧತಿಯ ಕಾಲವ್ಯಾಪಕತ್ವ ಮತ್ತು ದೇಶವ್ಯಾಪಕತ್ವವು ತಿಳಿಯಲ್ಪಡುವದು. ಒಂದು ಎರಡನೆಯದರ ಕಡೆಗೆ ಲಕ್ಷ್ಯಕೊಟ್ಟರೆ ವಿಜ್ಞಾನ ಮತ್ತು ಚಿಕಿತ್ಸಾಶಾಸ್ತ್ರ ಹಾಗೆ ಅನ್ಯದೇಶಿಯ ಆಚಾರಗಳು ಯಾವ ಶಾಸ್ತ್ರಾಚಾರಕ್ಕೆ ಪರಿಪೋಷಕಗಳೆಂದು ಗ್ರಾಹ್ಯವಾಗುವವೋ ಅದು ತಿಳಿದುಬರುವದು.

3. ಸದಾಚಾರದ ಮೂಲಕ ಹಣದ ಗಳಿಸುವಿಕೆಯು ಮಿತಾಚಾರ ಮತ್ತು ಕಾಮನೆಯ ಸಂಯಮ- ಇವುಗಳಿಂದ ಆಗುವದು.

4. ಸದಾಚಾರವು ಕಾಮನೆಯ, ಸಂಯಮವನ್ನು ಅಭ್ಯಾಸಮಾಡಿಸಿ ಕೊಡುವದರಿಂದ ಇಂದ್ರಿಯಗಳು ಸತೇಜಗಳಾಗಿ ಭೋಗಸುಖದಲ್ಲಿ ಸಮರ್ಥಗಳಾಗುವವು.

5. ಸದಾಚಾರದಿಂದ ಸ್ವಭಾವಜಾತವಾದ ಶಕ್ತಿಯ ಉನ್ಮೇಷ, ಸಹಾನುಭೂತಿಯ ಸಂವರ್ಧನ, ಮತ್ತು ಅಕಿಂಚನತ್ವದ ಶಿಕ್ಷೆ- ಇವುಗಳೇರ್ಪಟ್ಟು ಯಶೋಲಾಭಕ್ಕೆ ಉಪಾಯವಾಗುವದು.

6. ಸದಾಚಾರವು ಶರೀರದ ಪಟುತ್ವ, ಬುದ್ಧಿಯ ಸಮ್ಮಾರ್ಜನ, ಚಿತ್ತದ ಚಾಂಚಲ್ಯನಿವಾರಣ, ಮತ್ತು ಕಾಮದ ಸಂಯಮದ ಅಭ್ಯಾಸ, ಇವುಗಳನ್ನುಂಟು ಮಾಡಿ ಮಾನವರನ್ನು ಪುಣ್ಯಶೀಲರನ್ನಾಗಿ ಅಂದರೆ ಜ್ಞಾನದ ದಾರಿಯಲ್ಲಿ ದಾರಿಗರನ್ನಾಗಿ ಮಾಡುವದು.

★★★★★

# ಅರವಿಂದಮತವಿಮರ್ಶೆ

-ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

## 1. ಆಧ್ಯಾತ್ಮಿಕ ಸಾಧನೆಗೆ ಸಹಕಾರಿ ಚತುಷ್ಟಯ

ಅರವಿಂದರ ದರ್ಶನಯೋಗಗಳ ವಿಷಯಕ್ಕೂ, ಶಾಂಕರದರ್ಶನದ ವಿಷಯವಾಗಿ ಅವರು ಹೊರಪಡಿಸಿರುವ ಅಭಿಪ್ರಾಯಗಳ ವಿಷಯಕ್ಕೂ, ನನ್ನ ಅಂತಃಕರಣದಲ್ಲಿ ಆಗಿರುವ ಪ್ರತಿಕ್ರಿಯೆಗಳನ್ನು ಪ್ರಕಟಿಸುವ ಕಾರ್ಯದಲ್ಲಿ ಈಗ ತೊಡಗಿರುತ್ತೇನೆ.

ಅರವಿಂದರ ದರ್ಶನಯೋಗಗಳಿಗೆ ಹಿಂದಿನವರ ಅನುಭವಗಳ ನೆರವೂ ಇದೆಯಾದರೂ ಅವರ ಪ್ರಕ್ರಿಯೆಯು ತನ್ನದೇ ಆದ ಹೊಸರೂಪವನ್ನು ತಳೆದಿದೆ. ಅವರ ಸಿದ್ಧಾಂತವೇ ಆಗಲಿ, ಅವರು ಅದನ್ನು ಮುಟ್ಟುವದಕ್ಕೆ ಉಪಯೋಗಿಸುವ ಸಾಧನವೇ ಆಗಲಿ, ಯಾವದೊಂದು ನಿರ್ದಿಷ್ಟದರ್ಶನದ ಕಟ್ಟುಪಾಡಿಗೂ ಸಿಕ್ಕುವಂಥದ್ದಲ್ಲ. ಆದ್ದರಿಂದ ಅದನ್ನು ಪರಿಚಯಮಾಡಿಕೊಳ್ಳಬೇಕೆನ್ನುವವರು ನಿಷ್ಪಕ್ಷಪಾತದೃಷ್ಟಿಯಿಂದ ಅದರ ಉಪಸತ್ತಿಗೆ ಅಣಿಯಾಗಬೇಕು. ಆದರೆ ನಮ್ಮ ದೇಶದಲ್ಲಿರುವ ವೇದಾಂತಿಗಳೂ ಯೋಗಿಗಳೂ ತಮ್ಮತಮ್ಮ ಸಂಪ್ರದಾಯದ ದೃಷ್ಟಿಕೋಣದಿಂದಲೇ ಎಲ್ಲವನ್ನೂ ಅಳೆದು ನೋಡುವ ಪದ್ಧತಿಯನ್ನು ಇಟ್ಟುಕೊಂಡುಬಿಟ್ಟಿರುತ್ತಾರೆ. ಆದ್ದರಿಂದಲೇ ನಾನು ನನ್ನ ವಿಮರ್ಶೆಗಳಲ್ಲಿ ನನಗೆ ಸ್ವಾಭಾವಿಕವಾಗಿರುವ ಶಾಂಕರವೇದಾಂತದ ದೃಷ್ಟಿಯಿಂದಲೇ ಈ ದರ್ಶನಯೋಗಗಳನ್ನು ನೋಡುವದು ಅನಿವಾರ್ಯವಾಗಿ ರುತ್ತದೆ. ಈ ಪದ್ಧತಿಯಲ್ಲಿ ದೋಷವೇನೆಂದರೆ ಇಲ್ಲಿ ನಮ್ಮ ಕಣ್ಣಿನಿಂದಲೇ ವಿಮರ್ಶನೀಯ ತತ್ತ್ವವನ್ನು ನೋಡಿ ತಪ್ಪುತಿಳಿಯುವ ಸಂಭವವಿದೆ; ಆದರೆ ಇದರಲ್ಲಿರುವ ಗುಣವೇನೆಂದರೆ, ಇಲ್ಲಿ ತಿಳಿದದ್ದರ ಆಧಾರದಿಂದ ತಿಳಿಯದ್ದನ್ನು ತಾರತಮ್ಯಜ್ಞಾನದಿಂದ ಆಳವಡಿಸಿಕೊಳ್ಳುವ ಸೌಲಭ್ಯವಿದೆ. ಈ ಕಾರಣದಿಂದ ನಾನು ವಾಚಕರಿಗೆ ಶಾಂಕರವೇದಾಂತದ ದೃಷ್ಟಿಯಿಂದ ನೋಡಿದಾಗ ಇಲ್ಲಿ ಯಾವ ಹೊಸಪರಿಯು ಕಾಣುವದೆಂಬುದನ್ನು ತಿಳಿಸುತ್ತಲೇ ಮುಂದೆ

ಸಾಗುವೆನು. ಈ ಪ್ರಯತ್ನದಲ್ಲಿ ನಾನು ಎಷ್ಟರಮಟ್ಟಿಗೆ ಜಯಶೀಲನಾಗುವೆನು, ಎಷ್ಟರಮಟ್ಟಿಗೆ ನಿಷ್ಪಕ್ಷಪಾತವಾಗಿ ಅರವಿಂದರ ಅಭಿಪ್ರಾಯಗಳನ್ನು ಹಿಡಿದು ಓದುಗರಿಗೆ ತಿಳಿಸಿಕೊಡುವೆನು, ಎಂಬುದನ್ನು ತಜ್ಞರಾದ ವಾಚಕರಿಗೂ ಅರವಿಂದಾನುಯಾಯಿಗಳಿಗೂ ಬಿಟ್ಟುಕೊಟ್ಟಿರುತ್ತೇನೆ.

ಮೊಟ್ಟಮೊದಲು, ಅರವಿಂದರು ಅಧ್ಯಾತ್ಮಸಿದ್ಧಿಯನ್ನು ಪಡೆಯುವವರಿಗೆ ಬೇಕಾಗಿರುವ ಸಹಕಾರಿಸಾಧನಗಳನ್ನು ವಿವರಿಸಿರುವ ಪರಿಯನ್ನು ವಿಚಾರಕ್ಕೆ ತೆಗೆದುಕೊಳ್ಳುವದು ಲಾಭದಾಯಕವಾಗಿರುತ್ತದೆ. ಏಕೆಂದರೆ ನಮ್ಮ ದೇಶದ ವಿಚಾರಕರಲ್ಲಿ ಎಲ್ಲರೂ ಶಾಸ್ತ್ರ, ಆಚಾರ್ಯ, ಆತ್ಮಪ್ರಯತ್ನ, ಕಾಲ – ಎಂಬ ನಾಲ್ಕು ಸಹಕಾರಿಗಳನ್ನು ಒಪ್ಪಿಕೊಂಡೇ ತತ್ತ್ವನಿರೂಪಣವನ್ನು ಮಾಡಿರುತ್ತಾರೆ.

ಇವುಗಳನ್ನು ಶ್ರೀರಾಮಚಂದ್ರ ವಿನೀತರು ''ಸಾಧನಚತುಷ್ಟಯ'' (ಸ. 1, ಪು. 110)[1] ಎಂದು ಕರೆದಿರುತ್ತಾರೆ. ಆದರೆ ಸಾಧನಚತುಷ್ಟಯವೆಂಬ ಶಬ್ದಕ್ಕೆ ಶಾಂಕರವೇದಾಂತದಲ್ಲಿ ಒಂದಾನೊಂದು ವಿಶೇಷಾರ್ಥವು ರೂಢವಾಗಿ ರುತ್ತದೆ. ನಿತ್ಯಾನಿತ್ಯವಿವೇಕ, ಇಹಾಮುತ್ರಾರ್ಥಫಲಭೋಗವಿರಾಗ, ಶಮಾದಿ ಸಾಧನಸಂಪತ್ತು, ಮುಮುಕ್ಷುತ್ವ – ಈ ನಾಲ್ಕಕ್ಕೆ ಸಾಧನಚತುಷ್ಟಯವೆಂಬ ಹೆಸರು ಬಂದು ನಮ್ಮ ದೇಶದಲ್ಲಿ ಬಳಕೆಯಲ್ಲಿರುತ್ತದೆ. ಈ ಸಾಧನಗಳು ಇದ್ದರೇ ಬ್ರಹ್ಮಜಿಜ್ಞಾಸೆಯನ್ನು ಮಾಡಬಹುದು, ಇಲ್ಲದಿದ್ದರೆ ಆ ಜಿಜ್ಞಾಸೆಯು ಶಕ್ಯವಿಲ್ಲ ಎಂಬುದು ಶಂಕರಾಚಾರ್ಯರ ಅಭಿಪ್ರಾಯ. ಆದರೆ ಅರವಿಂದರು ಹೇಳುವ ನಾಲ್ಕು ನೆರವುಗಳೂ ಸಾಧಕನಿಗೆ ಅತ್ಯಂತವಾಗಿ ಅವಶ್ಯವೆಂದೇನೂ ಅವರ ಅಭಿಪ್ರಾಯವಿರುವದಿಲ್ಲ. ಆದ್ದರಿಂದ ಇವನ್ನು ಸಹಕಾರಿಸಾಧನಗಳು ಎಂದು ಕರೆಯುವದೇ ಉತ್ತಮ ಎಂದು ನನ್ನ ಭಾವನೆ.

ಮೊಟ್ಟಮೊದಲು ಶಾಸ್ತ್ರವೆಂದರೇನೆಂಬುದನ್ನೂ ಆಚಾರ್ಯನೆಂದರೇನು ಎಂಬುದನ್ನೂ ವಿಚಾರಿಸೋಣ. ಅರವಿಂದರ ಮತದಲ್ಲಿ ಶಾಸ್ತ್ರವು ನಿತ್ಯವಾದದ್ದು, ಅದು ಪ್ರತಿಯೊಬ್ಬ ಜಿಜ್ಞಾಸುವಿನ ಹೃದಯದಲ್ಲಿರುವ ನಿತ್ಯಜ್ಞಾನವು. ಆ ಜ್ಞಾನವು

---

1 ''ಸಮರ್ಪಣ''ದ 1ನೆಯ ಸಂಪುಟದ 110ನೆಯ ಪುಟವೆಂದು ಈ ಸಂಕೇತದ ಅರ್ಥ. ಇನ್ನು ಮುಂದಿನ ಲೇಖನಗಳಲ್ಲಿಯೂ ಹೀಗೆಯೇ ಸಂಪುಟದ ಮತ್ತು ಪುಟದ ಸಂಖ್ಯೆಯನ್ನು ಸೂಚಿಸುವೆನು.

ಅಭಿವ್ಯಕ್ತವಾಗುವಂತೆ ಒಳಗಿರುವ ನಮ್ಮ ಆತ್ಮನಿಂದಲೋ, ನಮ್ಮ ಹೃದಯದಲ್ಲಿಯೇ ರಹಸ್ಯವಾಗಿ ಇದ್ದುಕೊಂಡಿರುವ ಜಗದ್ಗುರುವಿನಿಂದಲೋ ಬರುವ ಶಬ್ದವಾಗಿರಬಹುದು; ಅಥವಾ ಹಿಂದೆ ಆಗಿಹೋಗಿರುವವರ ಉಪದೇಶ ರೂಪವಾದ ಅಥವಾ ಜೀವಂತನಾಗಿರುವ ಗುರುವಿನ ಸದುಪದೇಶದಿಂದಲೂ ಬರುವ ಹೊರಗಿನ ಶಬ್ದವಾಗಿಯೂ ಇರಬಹುದು. ಉತ್ತಮಾಧಿಕಾರಿಗಳಾದವರಿಗೆ ತಮ್ಮ ತಮ್ಮ ಹೃದಯದ ಒಳಗಿರುವ ಶಾಸ್ತ್ರ ಮತ್ತು ಗುರು - ಇವುಗಳೇ ಸಾಕಾಗಿರುತ್ತವೆ. ಆದರೆ ಸಾಮಾನ್ಯವಾಗಿ ಮಿಕ್ಕವರಿಗೆಲ್ಲ ಗೀತೆ, ಉಪನಿಷತ್ತುಗಳು, ವೇದ - ಈ ರೂಪದ ಶಬ್ದಪ್ರಮಾಣದ ನೆರವು ಬೇಕಾಗುತ್ತದೆ. ಇವುಗಳಲ್ಲದೆ ಇನ್ನೂ ಬೇರೆಬೇರೆಯ ಧರ್ಮಗ್ರಂಥಗಳನ್ನೂ ಅವರು ಸಹಾಯಕ್ಕೆ ತೆಗೆದುಕೊಳ್ಳಬೇಕಾಗಬಹುದು. ಇವುಗಳ ಜೊತೆಗೆ ಸಾಧಕನು ಆರಿಸಿಕೊಳ್ಳುವ ಜ್ಞಾನ, ಭಕ್ತಿ- ಮುಂತಾದ ಪಂಥಗಳ ಸಾಂಪ್ರದಾಯಿಕೋಪದೇಶಗಳನ್ನು ಬಾಹ್ಯಶಾಸ್ತ್ರದಲ್ಲಿ ಸೇರಿಸಿಕೊಳ್ಳಬೇಕಾಗುವದು. ಇದರಂತೆ ಕೃಷ್ಣ, ಕ್ರೈಸ್ತ, ಬುದ್ಧ - ಮುಂತಾದ ಅವತಾರಪುರುಷರನ್ನೂ ಅಥವಾ ಹಿಂದಿನ ಆಚಾರ್ಯರುಗಳನ್ನೂ, ಇಷ್ಟೇ ಅಲ್ಲ, ತನ್ನ ಸಮಕಾಲದ ಬೋಧಕಗುರುವನ್ನೂ ಉಪಯೋಗಿಸಿಕೊಳ್ಳುವದೂ ಅವಶ್ಯವಾಗಬಹುದು.

ಆದರೆ ಅರವಿಂದರವರು ಉಪದೇಶಿಸಿರುವ ಸಂಪೂರ್ಣಯೋಗದ ಸಾಧಕರಿಗೆ ಯಾವದೊಂದು ಬಾಹ್ಯಶಾಸ್ತ್ರವೂ ಪರಮಪ್ರಮಾಣವಾಗಿರುವದಿಲ್ಲ. ಯಾವ ಶಾಸ್ತ್ರವನ್ನಾದರೂ ಉಪಯೋಗಿಸಿಕೊಳ್ಳಬಹುದು; ಆದರೆ ಎಂಥ ಉತ್ತಮವಾದ ಶಾಸ್ತ್ರರಜ್ಜುವೂ ಅವನನ್ನು ಬಂಧಿಸಕೂಡದು, ಯಾವನೊಬ್ಬ ಗುರುವಿನ ಅಭಿಪ್ರಾಯವೂ ಅವನನ್ನು ನಿರ್ಬಂಧಿಸಕೂಡದು. ಶಾಸ್ತ್ರಗುರುಗಳ ವಿವರವನ್ನು ಅರವಿಂದರ ಆಂಗ್ಲಮೂಲಗ್ರಂಥ (Synthosis of Yoga) ದಿಂದಲೂ ಸಮರ್ಪಣಗ್ರಂಥದಲ್ಲಿರುವ ಅನುವಾದದಿಂದಲೂ ತಿಳಿದುಕೊಳ್ಳಬೇಕು. ಆದರೆ ಶಾಸ್ತ್ರವೆಂದರೆ ಹಿಂದಿನವರ ಅನುಭವಮಾತ್ರ, ಗುರುವೆಂದರೆ ಪರಮಾತ್ಮನ ಪ್ರಕಾಶವನ್ನು ಉದ್ಬೋಧಗೊಳಿಸಿ ಆದರ ಕೆಲಸವನ್ನು ಮಾಡಿಸುವ ಸಾಧನ ಮಾತ್ರ-ಎಂಬುದನ್ನು ಇಲ್ಲಿ ನಾವು ನೆನಪಿನಲ್ಲಿಡಬೇಕು. ಆದ್ದರಿಂದಲೇ ನಾನು ಶಾಸ್ತ್ರಗುರುಗಳನ್ನು ಸಹಕಾರಿಮಾತ್ರವೆಂದು ಕರೆದಿರುವದು.

ಶಾಸ್ತ್ರಗುರುಗಳು ಎಷ್ಟುಮಟ್ಟಿಗೆ ಸೂಚನೆಯನ್ನು ಕೊಟ್ಟರೂ ಸಾಧಕನು ಸ್ವಪ್ರಯತ್ನದಿಂದಲೇ ಮುಂದಕ್ಕೆ ದಾಟಬೇಕಾಗಿರುತ್ತದೆ; ಶಾಸ್ತ್ರದಿಂದ ಹಿಂದಿನ

ಅನುಭವವನ್ನು ತೆಗೆದುಕೊಂಡು ತತ್ಕಾಲಕ್ಕೆ ಮತ್ತು ಭವಿಷ್ಯತ್ಕಾಲಕ್ಕೆ ತಕ್ಕಂತೆ ತಿಳಿವಳಿಕೆಯನ್ನು ಹೊಸಹೊಸ ರೀತಿಯಲ್ಲಿ ಮಾರ್ಪಡಿಸಿ ಬೆಳೆಯಿಸಿಕೊಳ್ಳುವದು ಸಾಧಕನಮೇಲೆಯೇ ಬಿದ್ದ ಹೊಣೆಗಾರಿಕೆಯಾಗಿದೆ. ಹಿಂದಿನ ಎಷ್ಟೋ ಕ್ರಮಗಳು ಈಗಿನ ಜೀವನಕ್ಕೆ ಹೊಂದುವಂತೆಯೇ ಇರುವದಿಲ್ಲ; ಆದ್ದರಿಂದ ಮತ್ತೆ ಈಗ ನಾವು ಇನ್ನೊಂದು ಪ್ರಕ್ರಿಯೆಯನ್ನೇ ಆವಲಂಬಿಸಬೇಕಾಗಿರುತ್ತದೆ. ಇದರಂತೆ ಗುರುವಿನ ಅನುಭವದಿಂದ ಲಾಭವನ್ನು ಪಡೆಯಬಹುದು; ಆದರೆ ತನ್ನತನ್ನ ಸ್ವಭಾವಕ್ಕೆ ಅನುಗುಣವಾಗಿಯೇ ಆ ಅನುಭವವನ್ನು ಆಳವಡಿಸಿಕೊಳ್ಳಬೇಕು. ಮುಖ್ಯವಾಗಿ ತನ್ನತನ್ನ ಹೃದಯದಲ್ಲಿರುವ ಗುರುವನ್ನೇ ನಂಬಿ ಸ್ವಪ್ರಯತ್ನದಿಂದಲೇ ಮುಂದುವರಿಯಬೇಕು; ಕ್ರಮಕ್ರಮವಾಗಿ ಈಶ್ವರ ಸಂಸ್ಪರ್ಶವನ್ನು ಹೊಂದಿ ಕೊನೆಗೆ ಆತನಿಗೇ ತನ್ನ ಸಂಕಲ್ಪವನ್ನೂ ಸಾಧನವನ್ನೂ ಒಪ್ಪಿಸಿಬಿಡಬೇಕು. ಕಾಲಕ್ರಮದಲ್ಲಿ ಈ ಸಮರ್ಪಣೆಯು ಪರಿಪೂರ್ಣವಾದಾಗ ಈಶ್ವರನು ಇವನನ್ನು ಲೋಕಸಂಗ್ರಹಕ್ಕೆ ಸಾಧನವಾಗಿ ಮಾಡಿಕೊಳ್ಳುವನು.

ಮೇಲಿನ ವಿವರಣೆಯಿಂದ ಶಾಂಕರವೇದಾಂತಕ್ಕೂ ಅರವಿಂದತತ್ತ್ವಜ್ಞಾನಕ್ಕೂ ಶಾಸ್ತ್ರಾಚಾರ್ಯಸ್ವಪ್ರಯತ್ನಗಳ ವಿಷಯದಲ್ಲಿರುವ ಅಭಿಪ್ರಾಯ ತಾರತಮ್ಯವನ್ನು ವಾಚಕರು ಸ್ವಲ್ಪಮಟ್ಟಿಗೆ ಗ್ರಹಿಸಬಹುದಾಗಿದೆ. ಶಂಕರಾಚಾರ್ಯರ ಮತದಲ್ಲಿ ಶಾಸ್ತ್ರವೆಂದರೆ ವೇದವೇ; ಈ ವೇದದಲ್ಲಿ ಉಪನಿಷತ್ತುಗಳೂ ಅಡಕವಾಗಿರುತ್ತವೆ. ವೇದಾರ್ಥದ ಉಪಬೃಂಹಣಕ್ಕಾಗಿ, ವಿವರಣೆಗಾಗಿ, ಮಿಕ್ಕ ವಿದ್ಯಾಸ್ಥಾನಗಳನ್ನೂ ಅನುಸರಿಸಬೇಕು. (ಸೂ.ಭಾ. 1–2–3, ಭಾ.ಭಾ. 72) ಉದಾಹರಣೆಗೆ ಭಗವದ್ಗೀತೆಯ ಹದಿನೈದನೆಯ ಅಧ್ಯಾಯದಲ್ಲಿ ಅರ್ಜುನನಿಗೆ ಭಗವಂತನು ''ನಿನಗೆ ಶಾಸ್ತ್ರವನ್ನು ಹೇಳಿದೇನೆ'' ಎಂದು ತಿಳಿಸಿರುವದನ್ನೂ ಶಂಕರಾಚಾರ್ಯರು ವ್ಯಾಖ್ಯಾನಮಾಡಿರುವದನ್ನೂ ನೋಡಿರಿ; ಆಗ ಅವರ ಅಭಿಪ್ರಾಯದಲ್ಲಿ ಶಾಸ್ತ್ರವೆಂದರೇನೆಂಬುದು ತಿಳಿಯುವದು. ಶಂಕರಾಚಾರ್ಯರು ಮಿಕ್ಕವರ ಮತವನ್ನು ವಿಚಾರಮಾಡಬಾರದೆನ್ನುವದಿಲ್ಲ, ಒಪ್ಪಬಾರದು ಎಂದು ನಿಷೇಧಿಸುವದೂ ಇಲ್ಲ. **''ಪರಮತಮಪ್ರತಿಷಿದ್ಧಮನುಮತಂ ಭವತಿ''**– ವೈದಿಕವಲ್ಲದ ಮತವು ವೇದವಿರುದ್ಧವಲ್ಲದಾಗ ಅದನ್ನು ಒಪ್ಪಿದೆಯೆಂದು ತಿಳಿಯಬೇಕು – ಎಂಬುದೊಂದು ಅವರ ತತ್ತ್ವವು. ಆದರೆ ಪುರಾತನಕಾಲದಲ್ಲಿ ಯಾರೋ ಋಷಿಗಳ ಬಾಯಿಂದ ಹೊರಟುಬಂದ ವೇದವನ್ನು ನಂಬುವ

ಒಂದು ಗುಂಪಿನವರು ಶಂಕರರು ಎಂದು ಮಾತ್ರ ತಿಳಿಯಬಾರದು. ಏಕೆಂದರೆ ವೇದವಚನವು ಜ್ಞಾಪಕವು, ಎಂದರೆ ಇರುವದನ್ನು ಅನುಭವಕ್ಕೆ ಬರುವಂತೆ ತಿಳಿಸಿ ಕೊಡುವ ವಾಕ್ಯವು, ಎಂಬುದೇ ಆಚಾರ್ಯರ ಅಭಿಪ್ರಾಯವಾಗಿದೆ, ಸುಮ್ಮನೆ ಒಬ್ಬರು ಹೇಳಿದ್ದನ್ನು ನಂಬುವ ಪ್ರಸಂಗವೇನೂ ಇಲ್ಲಿಲ್ಲ. ಮಿಕ್ಕ ಧರ್ಮ ಗ್ರಂಥಗಳಲ್ಲಿ ಹೇಳಿರುವದನ್ನು ಕಿತ್ತೊಗೆಯಬೇಕಾದದ್ದೇನೂ ಇಲ್ಲ; ಆದರೆ ಒಂದಾನೊಂದು ಮಹಾಜ್ಞೇಯವಿದೆ, ಅದನ್ನು ಅರಿತರೆ ಅಧ್ಯಾತ್ಮತತ್ತ್ವವೆಲ್ಲ ಅರಿತಂತೆಯೇ ಎಂದು ಶಾಂಕರವೇದಾಂತಿಗಳು ಹೇಳುತ್ತಾರೆ. ಇದನ್ನು ತಿಳಿಸಿಕೊಡುವದರಿಂದ ಶಾಸ್ತ್ರವು ಪರಮಪ್ರಮಾಣವಾಗಿದೆ; ನಾವು ಆ ಶಾಸ್ತ್ರಕ್ಕೆ ಹೊಸ ಅನುಭವವನ್ನು ಸೇರಿಸಿ ಅರಿತುಕೊಳ್ಳಬೇಕಾದದ್ದೇನೂ ಉಳಿಯುವದಿಲ್ಲ ಎಂಬುದು ವೇದಾಂತಿಗಳ ಹೇಳಿಕೆ. ಇದು ಹೇಗೆಂಬುದನ್ನು ನಾವು ಅನುಭವದಿಂದ ತಿಳಿದುಕೊಳ್ಳಬೇಕಾಗಿದೆ.

ಇನ್ನು ಆಚಾರ್ಯನು ಅಥವಾ ಗುರು ಎಂದರೇನೆಂಬುದನ್ನು ಶಾಂಕರವೇದಾಂತದಂತೆ ವಿಚಾರಿಸೋಣ. ಶಾಸ್ತ್ರವು ಅಥವಾ ವೇದವು ಎಂದರೆ ನಮ್ಮೊಳಗೆ ಇರುವ ಪರಮಾತ್ಮನೇ ಎಂಬುದು ಶಂಕರಭಗವತ್ಪಾದರಿಗೂ ಸಮ್ಮತವೇ; ಉಪದೇಶಸಾಹಸ್ರಿಯಲ್ಲಿ '**ವೇದಶ್ಚಾಪಿ ಸ ಏವಾದ್ಯಃ**' (17-14) ಎಂದು ಅವರು ಹೇಳಿರುತ್ತಾರೆ. ಆದರೆ ವೇದಶಬ್ದದಲ್ಲಿರುವ ಹೆಚ್ಚುಗಾರಿಕೆಯೇನೆಂದರೆ ಅದು ಈ ಆದ್ಯವೇದರೂಪನಾದ ಆತ್ಮನನ್ನೇ ತಿಳಿಸಿಕೊಡುತ್ತದೆ. (ತೈ. ಭಾ. 2-3, ಛಾ. ಭಾ. 133)ನ್ನು ನೋಡಿರಿ. ಉಪನಿಷದ್ರೂಪವಾದ ವೇದವು ಬರಿಯ ಶಬ್ದವೆಂದು ಭಾವಿಸುವವರುಕೂಡ ನಿಷ್ಪಕ್ಷಪಾತತೆಯಿಂದ ನೋಡಿದರೆ ಪ್ರಪಂಚದ ಧಾರ್ಮಿಕವಾಙ್ಮಯದಲ್ಲಿ ಇಷ್ಟು ಸ್ಫುಟತರವಾಗಿ ಆತ್ಮತತ್ತ್ವವನ್ನು ಮನಗಾಣಿಸುವ ಜ್ಞಾನವನ್ನು ಕೊಡುವ ಗ್ರಂಥವು ಮತ್ತೆಲ್ಲಿಯೂ ಸಿಕ್ಕುವದಿಲ್ಲವೆಂಬುದನ್ನು ಒಪ್ಪಲೇಬೇಕಾಗುವದು. ಇದರಂತೆ ಗುರುವೆಂದರೆ ಭಗವಂತನೇ ಎಂಬುದನ್ನು ಶ್ರೀಶಂಕರಾಚಾರ್ಯರೂ ಕಂಠೋಕ್ತವಾಗಿ ಒಪ್ಪಿರುತ್ತಾರೆ. ಭಗವದ್ಗೀತಾ ಭಾಷ್ಯದ ಅವತರಣಿಕೆಯಲ್ಲಿ ಹೇಳಿರುವದನ್ನು ನೋಡಿರಿ; '**ತಗ್ಂ ಹ ದೇವ ಮಾತ್ಮಬುದ್ಧಿಪ್ರಕಾಶಮ್**' ಪರಮಾತ್ಮಬುದ್ಧಿಯನ್ನು ಪ್ರಕಾಶಗೊಳಿಸುವ ದೇವನೇ ಬ್ರಹ್ಮದೇವನಿಗೂ ಗುರು ಎಂದು ಉಪನಿಷತ್ತಿನಲ್ಲಿಯೂ ಸಾರಿರುತ್ತದೆ. ಆದರೆ ವ್ಯವಹಾರದಲ್ಲಿ ಆಚಾರ್ಯನೆಂದರೆ ಪರಮಾತ್ಮನಲ್ಲಿ ಅನನ್ಯತೆಯನ್ನು ನೇರಾಗಿ ಅನುಭವಿಸಿದವನು; ಈ ಅರ್ಥದಲ್ಲಿ ಅವನಿಗೂ ಪರಮಾತ್ಮನಿಗೂ ಯಾವ ಭೇದವೂ

ಇರುವದಿಲ್ಲ. ಅವನೊಬ್ಬನಿಗೆ ತತ್ತ್ವವನ್ನು ಇದ್ದದ್ದು ಇದ್ದಂತೆ ತಿಳಿಸುವ 'ಆಗಮ'ವು, ಉಪದೇಶಕ್ರಮವು, ತಿಳಿದಿರುತ್ತದೆ. ಪರಮಾತ್ಮ ತತ್ತ್ವವು ಒಂದಾನೊಂದು ಗೊತ್ತಾದ ಕ್ರಮದಿಂದ ಮಾಡುವ ಉಪದೇಶದಿಂದಲೇ ತಿಳಿಯುವದೇ ಹೊರತು, ಯಾವದಾದರೊಂದು ಶಬ್ದದಿಂದ ತಿಳಿಯುವ ಸವಿಶೇಷ ವಸ್ತುವಲ್ಲ (ಕ. ಭಾ. 1-2-8, ಭಾ. ಭಾ. 57). ಈ ಕ್ರಮವನ್ನು ಗುರು ಪರಂಪರೆಯಿಂದಲೋ, ಭಗವಂತನ ಅನುಗ್ರಹದಿಂದಲೋ - ಎರಡೂ ಭಗವಂತನ ಅನುಗ್ರಹವೇ ಆದ್ದರಿಂದ ಅದರಿಂದಲೋ- ಯಾವನು ಮನಗಂಡಿರುವನೋ ಅವನೇ ನಿಜವಾದ ಗುರು.

ಶಾಸ್ತ್ರದಿಂದ ತಿಳಿದದ್ದು, ಆಚಾರ್ಯನಿಂದ ತಿಳಿದದ್ದು - ಇವೆರಡೂ ಪರೋಕ್ಷವಾಗಿರುವ ಸಾಧನಗಳಿಂದ ಬಂದವುಗಳಾಗಿರುತ್ತವೆ. ತನ್ನ ಅನುಭವಕ್ಕೆ ಇವೆರಡನ್ನೂ ಹೊಂದಿಸಿಕೊಂಡರೆ ನಿಜವಾದ ಆತ್ಮಜ್ಞಾನವಾಯಿತು ಎಂಬುದು ಶಂಕರಭಗವತ್ಪಾದರ ಹೇಳಿಕೆ. ಶ್ರವಣ, ಮನನ, ನಿದಿಧ್ಯಾಸನ - ಎಂದರೆ ಇವೇ. (ಬೃ.ಭಾ.2-4-4, ಭಾ. ಭಾ. 359; ಕೇ. ಭಾ. 2-2, ಭಾ. ಭಾ. 44) ಕಾಲಕ್ರಮದಲ್ಲಿ ಆತ್ಮಾನುಭವವಾಗಬೇಕೆಂಬುದು ಆಚಾರ್ಯರಿಗೂ ಸಮ್ಮತವೇ ಆಗಿರುತ್ತದೆ. (ಗೀ. ಭಾ. 4-38, ಭಾ. ಭಾ. 303). ಈ ಜನ್ಮದಲ್ಲಿಯೇ ಫಲವು ಸಿಕ್ಕದಿದ್ದರೂ ಪ್ರಯತ್ನವು ನಿಷ್ಫಲವಲ್ಲ; ಸದ್ಯಕ್ಕೆ ಆನುಷಂಗಿಕಫಲವನ್ನು ಕೊಟ್ಟು ಮುಂದಿನ ಜನ್ಮದಲ್ಲಿಯಾದರೂ ಪೂರ್ಣಫಲವನ್ನು ತಂದುಕೊಡುತ್ತದೆ ಎಂಬುದು ಎಲ್ಲಾ ಆಚಾರ್ಯರಿಗೂ ಸಮ್ಮತವಾದ ಅಭಿಪ್ರಾಯವಾಗಿರುತ್ತದೆ.

ಶಾಸ್ತ್ರ, ಆಚಾರ್ಯ, ಸ್ವಪ್ರಯತ್ನ - ಇವೆಲ್ಲವೂ ಭಗವಂತನ ಅನುಗ್ರಹದಿಂದಲೇ ಕೈಗೂಡುವವು. ''ಭಕ್ತಿಯಿಂದ ಭಗವಂತನನ್ನು ಸತತವಾಗಿ ಭಜಿಸುತ್ತಿರುವವರ ಹೃದಯದಲ್ಲಿಯೇ ಭಗವಂತನು ಜ್ಞಾನದೀಪವು ಬೆಳಗುವಂತೆ ಅನುಗ್ರಹಿಸುತ್ತಾನೆ'' ಎಂಬುದನ್ನು ಭಗವದ್ಗೀತೆಯಿಂದಲೇ ನಾವೆಲ್ಲರೂ ತಿಳಿದಿರುತ್ತೇವೆ. ಆದರೆ ಆ ಜ್ಞಾನದ ಸ್ವರೂಪವೇನು, ಭಗವಂತನ ಅನುಗ್ರಹವು ಹೇಗೆ ಆಗುವದು, ಅದಕ್ಕೆ ಬೇಕಾದ ಸಾಧನಗಳು ಯಾವುವು? - ಎಂಬ ವಿಷಯದಲ್ಲಿ ಅಭಿಪ್ರಾಯ ಭೇದಕ್ಕೆ ಅವಕಾಶವಿದೆ ಎಂಬುದು ಸ್ಪಷ್ಟ.

## 2. ವ್ಯಾಖ್ಯಾನಪ್ರಸ್ಥಾನ

ಶ್ರೀ ಅರವಿಂದರು ಶಾಸ್ತ್ರಕ್ಕೆ ಕೊಟ್ಟಿರುವ ಸ್ಥಾನವನ್ನು ಹಿಂದೆ ತಿಳಿಸಿರುತ್ತೇನೆ. ಅದರಮೇಲಿಂದ ಅವರು ವೇದವೇ ಮುಂತಾದ ಗ್ರಂಥಗಳಿಗೆ ವ್ಯಾಖ್ಯಾನವನ್ನು ಮಾಡುವದಕ್ಕೆ ಹೇಗೆ ಹೊರಡುತ್ತಾರೆಂಬುದನ್ನು ಸೂಕ್ಷ್ಮಮತಿಗಳಾದ ವಾಚಕರು ಊಹಿಸಿರಬಹುದು. ಇಲ್ಲಿ ಅರವಿಂದರು ವೇದ, ಉಪನಿಷತ್ತುಗಳು, ಗೀತೆ – ಇವುಗಳಿಗೆ ವ್ಯಾಖ್ಯಾನಮಾಡಿರುವ ರೀತಿಯ ದಿಗ್ದರ್ಶನವನ್ನು ಮಾಡುವೆನು. ಇಲ್ಲಿಯೂ ತುಲನಾತ್ಮಕದೃಷ್ಟಿಗೆ ಸಹಾಯವಾಗಲೆಂದು ಆಯಾ ವಿಷಯಕ್ಕೆ ಶಾಂಕರಪ್ರಸ್ಥಾನದ ಕ್ರಮವನ್ನೂ ತಿಳಿಸುತ್ತಾ ಹೋಗುವೆನು.

**ವೇದ –** ವೇದಕ್ಕೆ ಅರ್ಥವನ್ನು ಹೇಗೆ ಮಾಡಬೇಕು? ನಮ್ಮ ದೇಶದವರು ಬಹಳಮಟ್ಟಿಗೆ ವೇದವನ್ನು ಯಜ್ಞದ ಅಂಗವಾಗಿ ಮಾಡಿಬಿಟ್ಟಿರುತ್ತಾರೆ; ಪಾಶ್ಚಾತ್ಯರೂ ಅವರ ದೃಷ್ಟಿಯನ್ನವಲಂಬಿಸಿದವರೂ ಪ್ರಕೃತ್ಯುಪಾಸನಾ ಪ್ರಧಾನವಾದ ಅರ್ಥವನ್ನು ವೇದಕ್ಕೆ ಕೊಟ್ಟು ಅಂದಿನ ಜೀವನ, ರಾಜಕಾರಣವೇ ಮುಂತಾದವುಗಳನ್ನು ವಿಚಾರಿಸುವದಕ್ಕೆ ಆಧಾರವಾಗಿ ಮಾಡಿಕೊಂಡುಬಿಟ್ಟಿದ್ದಾರೆ. ಆದರೆ ನಿಜವಾಗಿ ವೇದದಲ್ಲಿ ಆಧ್ಯಾತ್ಮಿಕವಿಚಾರವಿದೆ, ಏಕದೇವನ ಪ್ರಾರ್ಥನೆಯಿದೆ, ದೈವೀಶಾಸನವನ್ನೂ ಸೃಷ್ಟಿಯ ಸೂತ್ರನಿಯಮಗಳನ್ನೂ ತಿಳಿಸುವ ದೃಷ್ಟಿಯಿದೆ. ಇದೆಲ್ಲವೂ ಅನುಭವದ ಆಧಾರದ ಮೇಲೆ ನಿಂತಿದೆ; ಆದ್ದರಿಂದ ಈ ಅನುಭವದ ಬಲವಿಲ್ಲದವರಿಗೆ ವೇದದ ಸಾಂಕೇತಿಕಭಾಷೆಯು ತಿಳಿಯದೆ ಇದೆ. (ಸ. 1–33, 34, 48) ಇದನ್ನು ತಿಳಿಸುವದೇ ಅರವಿಂದರ ಗುರಿಯು.

ವೇದದ ಸಾಂಕೇತಿಕಭಾಷೆಯನ್ನು ಅರವಿಂದರು '**ವೇದರಹಸ್ಯ**' ಎಂಬ (Secret of the Veda) ಎಂಬ ತಮ್ಮ ಗ್ರಂಥದಲ್ಲಿ ಪ್ರಕಟಿಸಿರುತ್ತಾರೆ. ನನಗೆ ಮೂಲಗ್ರಂಥವು ದೊರೆತಿಲ್ಲವಾಗಿ '**ಶ್ರೀ ದತ್ತಾತ್ರೇಯ ರಾಮಚಂದ್ರ ಬೇಂದ್ರೆ**'ಯವರು ಬರೆದಿರುವ ಒಂದೇ ಲೇಖನವನ್ನು ನಾನು ಆಧಾರವಾಗಿಟ್ಟು ಕೊಂಡಿರುತ್ತೇನೆ. ಅದರಿಂದ ತಿಳಿಯಬರುವದೇನೆಂದರೆ ಇಳಾ, ಸರಸ್ವತೀ, ಪರಮಾ, ಮತಿ, ಋತ, ಮನೀಷಾ– ಮುಂತಾದಶಬ್ದಗಳಿಗೆ ಯೌಗಿಕಾರ್ಥವನ್ನೇ ಮುಖ್ಯವಾಗಿ ಹಿಡಿಯಬೇಕು. ವೇದದಲ್ಲಿ 'ಜ್ಯೋತಿರ್ವಿಷಯದ ಅಥವಾ ಲೌಕಿಕಾಖ್ಯಾಯಿಕವಿಷಯಗಳೂ' ಇರಬಹುದು; ಆದರೆ ಅವೆಲ್ಲ ಆಧ್ಯಾತ್ಮಿಕದಲ್ಲಿ ಪರ್ಯವಸಾನವಾಗಿದೆ. ಅಗ್ನಿ, ಇಂದ್ರ – ಮುಂತಾದವುಗಳ ರಹಸ್ಯವನ್ನು ಅರಿತವರಿಗೆ ಅಧ್ಯಾತ್ಮಸಾಧನೆಯ

ಯೋಗಮಾರ್ಗವನ್ನೇ ಸಾಂಕೇತಿಕವಾಗಿ ವೇದದಲ್ಲಿ ತಿಳಿಸಿದೆ ಎಂದು ಗೊತ್ತಾಗುವದು. ಶ್ರೀಬೇಂದ್ರೆಯವರ ಪ್ರಥಮ ಲೇಖನದಿಂದ (ಸ. 1-48 ರಿಂದ 52) ಸ್ವಲ್ಪಮಟ್ಟಿಗೆ ಇದನ್ನು ತಿಳಿಯಬಹುದು. ಅರವಿಂದರು ತಮ್ಮ '**ಭಾಗವತಜೀವನ**' (Lite Divine) ಎಂಬ ಗ್ರಂಥದಲ್ಲಿ ಈ ತತ್ತ್ವವನ್ನು ಅಲ್ಲಲ್ಲಿ ಉಪಯೋಗಿಸಿಕೊಂಡು ವಿಷಯವಿವೇಚನೆಮಾಡಿರುವದು ಕಂಡುಬರುತ್ತದೆ.

**ಉಪನಿಷತ್ತುಗಳು** - '**ಶ್ರೀಮುಗಳಿ**'ಯವರು ಅರವಿಂದರ ಈಶೋಪನಿಷದ್ಭಾಷ್ಯದ ಮೂರು ಭಾಗಗಳನ್ನು ಮಾತ್ರ ಹೊರಕ್ಕೆ ತಂದಿರುತ್ತಾರೆ. ಆದ್ದರಿಂದ ಅರವಿಂದರ ಪೂರ್ಣಾಭಿಪ್ರಾಯವು ಕನ್ನಡಿಗರಿಗೆ ಈ ಅನುವಾದವು ಪೂರ್ಣವಾದ ಮೇಲೆಯೇ ಗೊತ್ತಾಗಬೇಕಾಗಿರುತ್ತದೆ. ಆದರೂ ನನ್ನ ವಿಮರ್ಶೆಯು ಒಂದು ರೂಪಕ್ಕೆ ಬರಬೇಕಾದರೆ ಈ ಗ್ರಂಥದ ಕೊನೆಯ ಭಾಗವನ್ನೂ ಸ್ವಲ್ಪಮಟ್ಟಿಗೆ ಅನುವಾದಮಾಡಿಕೊಳ್ಳಲೇಬೇಕಾಗುತ್ತದೆ. ಅರವಿಂದರ ಅಭಿಪ್ರಾಯದಂತೆ ಉಪನಿಷತ್ತುಗಳಲ್ಲಿ ವಿಚಾರಪದ್ಧತಿಯನ್ನು ಎರಡು ಯುಗಗಳಾಗಿ ವಿಂಗಡಿಸಿಕೊಳ್ಳಬೇಕು. ಮೊದಲನೆಯ ಯುಗದಲ್ಲಿ ಉಪನಿಷದ್ವಿಚಾರವು ವೇದಮೂಲಕ್ಕೆ ಹತ್ತಿರವಾಗಿಯೇ ಇದ್ದು ವೇದಕಾಲದ ಋಷಿಗಳ ವಿಚಾರಧಾರೆಯನ್ನೇ ಅನುಕರಿಸುತ್ತಿತ್ತು; ಅವರ ಕ್ರಿಯಾಪ್ರಧಾನವಾದ ಆಧ್ಯಾತ್ಮಿಕವ್ಯವಹಾರವನ್ನೇ ಇನ್ನೂ ಉಳಿಸಿಕೊಂಡಿತ್ತು. ಆದರೆ ಎರಡನೆಯ ಯುಗದಲ್ಲಿ ಉಪನಿಷತ್ತಿನ ರೂಪವೂ ವಿಚಾರವೂ ಹೆಚ್ಚು ಆಧುನಿಕವಾಯಿತು; ಪುರಾತನಸಂಕೇತಗಳನ್ನೂ ಪದ್ಧತಿಯನ್ನೂ ಕೈಬಿಡಲಾಯಿತು; ಆಗ ಹಿಂದಿನ ವಿಚಾರಧಾರೆಯ ಪ್ರಧಾನ ಭಾಗಗಳು ಬಿಟ್ಟುಹೋದವು ಅಥವಾ ಮೊದಲಿನ ರೂಪಾಂತರವಾದವು; ಮತ್ತು ಈಚಿನ ತಾಪಸವೃತ್ತಿಯ ಮತ್ತು ಕರ್ಮವಿರುದ್ಧವಾದ ವೇದಾಂತವು ಕಾಣಿಸಿಕೊಳ್ಳಲಾರಂಭಿಸಿತು. ಈಶೋಪನಿಷತ್ತು ಇವೆರಡರಲ್ಲಿ ಮೊದಲನೆಯ ಗುಂಪಿಗೆ ಸೇರಿದ್ದು. ಆದರೆ ಹೀಗೆಂದು ತಮ್ಮ ಸ್ವಂತಾಭಿಪ್ರಾಯವನ್ನು ಕೊಟ್ಟ ಬಳಿಕ ಅರವಿಂದರು ಈ ಉಪನಿಷತ್ತು ಛಾಂದೋಗ್ಯಬೃಹದಾರಣ್ಯಕಗಳಿಗಿಂತಲೂ (ತೈತ್ತಿರೀಯ ಐತರೇಯಗಳಿಗಿಂತಲೂ ಎನ್ನಬಹುದು) - ಈಚಿನದೇ ಎಂದಿರುತ್ತಾರೆ. (Isa Upanishad P 110)[1]

---

1 ಮೂರನೆಯ ಭಾಗದ ಅನುವಾದವು ಜೀವನಪತ್ರಿಕೆಯ ಅರವಿಂದಸಂಚಿಕೆಯಲ್ಲಿ ಪ್ರಕಟವಾಗಿದೆ ಎಂದು ಶ್ರೀ ಮುಗಳಿಯವರು (ಸ. 1-53) ತಿಳಿಸಿದ್ದಾರೆ. ಅಲ್ಲಿ ಈ ವಿಷಯವಿರಬಹುದು.

ಅತ್ಯಂತ ವಿರುದ್ಧವಾಗಿರುವ ಮೂಲದ್ವಂದ್ವಗಳನ್ನು ಸಮರಸಗೊಳಿಸುವದೇ ಈ ಉಪನಿಷತ್ತಿನ ಪ್ರತಿಪಾದನಾಕ್ರಮವೆಂಬುದು ಅರವಿಂದರ ಅಭಿಪ್ರಾಯವಾಗಿ ರುತ್ತದೆ (ಸ. 1-32, 2&54, 300 P. 111). ಈಚಿನ ವಿಚಾರಧಾರೆಯಲ್ಲಿ ಪ್ರಪಂಚ, ಭೋಗ, ಕರ್ಮ, ಅನೇಕತ್ವ, ಸಂಭವ (ಜನ್ಮ), ಅವಿದ್ಯೆ- ಇವುಗಳನ್ನು ಕೆಳಕ್ಕಿಳಿಸಿ ಈಶ್ವರ, ತ್ಯಾಗ, ನೈಷ್ಕರ್ಮ್ಯ, ಏಕತ್ವ, ಜನ್ಮನಾಶ, ವಿದ್ಯೆ - ಎಂಬ ಇವುಗಳ ಪ್ರತಿದ್ವಂದ್ವಿಗಳನ್ನು ಮೇಲಕ್ಕೇರಿಸಿದ್ದರಿಂದ ಕೊನೆಗೆ ಈ ಧಾರೆಯು ಮಾಯಾವಾದದಲ್ಲಿ ಪರ್ಯವಸಾನವಾಗಿ ಈ ಪ್ರಪಂಚದಲ್ಲಿರುವದೇ ಬಂಧವೆಂಬ ಭಾವಕ್ಕೆಡೆಗೊಟ್ಟಿತು. ಈ ಉಪನಿಷತ್ತಿನಲ್ಲಿ ಹಾಗೆ ಮಾಡದೆ ಈ ದ್ವಂದ್ವಗಳನ್ನು ಸಮರಸವಾಗಿ ಮಾಡಿದೆ - ಎಂಬುದೇ ಅವರ ಭಾಷ್ಯದ ಸಾರ.

**ಭಗವದ್ಗೀತೆ** - ಗೀತೆಯಲ್ಲಿರುವ ಉಪದೇಶಸಾರವನ್ನು ''ಗೀತೆಯ ಮೇಲಿನ ಪ್ರಬಂಧಗಳು'' (Essays on The Geetha) ಎಂಬ ಅರವಿಂದರಕೃತಿಯ ಇಪ್ಪತ್ತುಮೂರನೆಯ ಅಧ್ಯಾಯದಲ್ಲಿ ಕಾಣಬಹುದು. ಗೀತಾಶಾಸ್ತ್ರದ ಪ್ರಧಾನೋಪದೇಶವೆಂದರೆ ಒಳಗಿನ ಅತ್ಯಂತಪರಿಪೂರ್ಣವಾದ ಅಧ್ಯಾತ್ಮತತ್ತ್ವಕ್ಕೂ ಹೊರಗಿನ ಮಾನವಜೀವನಕರ್ಮಗಳಿಗೂ ಸಾಮರಸ್ಯ. ಗೀತೆಯ ಆದಿಮಧ್ಯಾಂತಗಳಲ್ಲಿ ಇದೊಂದೇ ಕಂಡುಬರುತ್ತದೆ. (ಪು.502). ಅಸುರಸಂಪತ್ತು ಕೊನೆಗೆ ನರಕದಲ್ಲಿಯೇ ಪರ್ಯಾವಸಾನವಾಗುತ್ತದೆ (507) ಎಂಬುದೊಂದು ಅದರ ಉಪದೇಶವು. ಧರ್ಮವನ್ನು ಆಚರಣೆಮಾಡುವದು ಸದ್ಗತಿಗೆ ಮಾರ್ಗವೇ ಸರಿ; ಆದರೆ ಅದಕ್ಕಿಂತಲೂ ಹೆಚ್ಚಿನದಾದ ತ್ರಿಗುಣಾತೀತನಾಗುವ ಧರ್ಮವೊಂದಿದೆ, ಅದನ್ನು ಅನುಸರಿಸುವದೇ ನಮ್ಮ ಕರ್ತವ್ಯವೆಂದೂ ಸರ್ವಧರ್ಮಗಳನ್ನೂ ಬಿಟ್ಟು ಈಶ್ವರನನ್ನೇ ಶರಣುಹೊಂದಬೇಕೆಂದೂ ತಿಳಿಸುವದು ಗೀತೆಯ ಮತ್ತೊಂದು ಉಪದೇಶವು. ಅಕ್ಷರೋಪಾಸನೆಯಿಂದ ಪರತತ್ತ್ವದಲ್ಲಿಯೇ ಐಕ್ಯವನ್ನು ಹೊಂದಬೇಕೆಂಬುದೊಂದು ಮಾರ್ಗವೇ ಸರಿ. ಆದರೆ ಅದು ಬಹಳ ಕ್ಲೇಶಕರವಾದದ್ದು, ಅದು ಪರಿಪೂರ್ಣಜ್ಞಾನವಲ್ಲ; ಅದೊಂದು ದೊಡ್ಡ ಮಾರ್ಗವೇ, ಆದರೂ ಮಾನವನಿಗೆ ಅತ್ಯಂತ ಉತ್ತಮವಾದ ಮಾರ್ಗವಲ್ಲ. ಈ ನೈಷ್ಕರ್ಮ್ಯ ಮಾರ್ಗವನ್ನು ಉಪದೇಶಿಸುವದೂ ಆಚರಿಸುವದೂ ಅಪಾಯಕರವಾದದ್ದು. ಪರಮೇಶ್ವರನನ್ನು ಇಲ್ಲಿಯೇ ಈ ಪ್ರಪಂಚದಲ್ಲಿಯೇ ಕಂಡುಕೊಂಡು ಮನೋಬುದ್ಧಿಗಳನ್ನು ಆತನಲ್ಲಿಯೇ ಇಡುವದರಿಂದ

ಒಳಗಿನ ಬ್ರಹ್ಮಾತ್ಮತತ್ತ್ವವನ್ನೂ ಹೊರಗಿನ ಕರ್ಮಪ್ರಧಾನವಾದ ಮಾನವಜೀವನದ ತತ್ತ್ವವನ್ನೂ ಅರಿತುಕೊಂಡು ಎಲ್ಲಾ ಸಮಸ್ಯೆಗಳನ್ನೂ ಬಗೆಹರಿಸಿಕೊಳ್ಳಬಹುದು – ಎಂಬುದು ಗೀತೆಯ ಮತ್ತೊಂದು ಉಪದೇಶವು (508). ಈ ಕೊನೆಯ ಉಪದೇಶವನ್ನು 'ಜ್ಞಾನಭಕ್ತಿಕರ್ಮಸಮುಚ್ಚಯ' ಎಂದು (ಸ. 3-98) ಶ್ರೀ ಮಧುರಚೆನ್ನರು ಕರೆದಿರುತ್ತಾರೆ.

ಆಧ್ಯಾತ್ಮಿಕ ಜೀವನಕ್ಕೆ ಬೇಕಾದ ಉಪದೇಶವೆಲ್ಲ ಗೀತೆಯಲ್ಲಿದೆ ಎಂಬುದು ಅರವಿಂದರಿಗೆ ಒಪ್ಪಿಲ್ಲ (501). ಆಧುನಿಕಮಾನವವರ್ಗದ ಸಮಸ್ಯೆಯಗಳನ್ನೆಲ್ಲ ಗೀತೆಯು ಬಿಡಿಸುವದಿಲ್ಲ; ಈಗಿನ ಮಾನವನು ಸಮಾಜವಾಗಿ ಮುಂದುವರಿಯಬೇಕು, ಮುಂದೆ ಕಾಲಾನುಕಾಲಕ್ಕೆ ಇನ್ನೂ ಹೆಚ್ಚಿನ ಬೌದ್ಧಿಕ, ನೈತಿಕ, ಕ್ರಿಯಾತ್ಮಕ, ಆಧ್ಯಾತ್ಮಿಕ ಧ್ಯೇಯವನ್ನು ಮುಟ್ಟಬೇಕು ಎಂದು ಹಾತುವರಿಯುತ್ತಿರುವದಕ್ಕೆ ಗೀತೆಯಲ್ಲಿ ಉತ್ತರವಿಲ್ಲ (507); ಅದರಲ್ಲಿ ಎಷ್ಟೋ ಚರ್ಚನೀಯಾಂಶಗಳು ಉಳಿದುಕೊಂಡಿವೆ, ಅದನ್ನು ಸಂಪೂರ್ಣವಾಗಿ ನಾವು ಒಪ್ಪದೆ ಇರಬಹುದು. ಅದರ ಉಪದೇಶವನ್ನೂ ಯೋಗವನ್ನೂ ಮೀರಿ ಮುಂದುವರಿಯುವದಕ್ಕೂ ಅವಕಾಶವಿದೆ (509) – ಎಂಬಿದು ಅರವಿಂದರ ಅಭಿಪ್ರಾಯವು.

ಈಗ **ಶಂಕರಾಚಾರ್ಯರ ವ್ಯಾಖ್ಯಾನಪ್ರಸ್ಥಾನವು** ಹೇಗಿರುವದೆಂಬುದನ್ನು ನೋಡುವದಕ್ಕೆ ಸಮಯವಾಗಿದೆ. ಈ ಆಚಾರ್ಯರು ವೇದದಲ್ಲಿ – ಸಂಹಿತೆ, ಬ್ರಾಹ್ಮಣ, ಮತ್ತು ಉಪನಿಷತ್ತುಗಳು ಎಲ್ಲವೂ ವೇದವೇ ಆಗಿರುವದರಿಂದ ಈ ರೂಪವಾಗಿರುವ ವೇದದಲ್ಲಿ – ಪರಮಾರ್ಥವನ್ನೇ ಹೇಳಿದೆ, ಅದು ಪಾಶ್ಚಾತ್ತ್ಯರು ಹೇಳುತ್ತಿರುವಂತೆ ಒಂದಾನೊಂದು ಕಾಲವಿಶೇಷದ ಆರ್ಯರ ಜೀವನ ಕ್ರಮವನ್ನು ನಿರ್ಣಯಿಸುವದಕ್ಕೆಂದು ಒಪ್ಪಬೇಕಾದ ವಾಙ್ಮಯಮಾತ್ರವಲ್ಲ ಎಂದೇ ಅಭಿಪ್ರಾಯಪಟ್ಟಿರುತ್ತಾರೆ. ವೇದದಲ್ಲಿ ಬೇರೆಬೇರೆಯ ಕಾಮಗಳನ್ನು ಪರಿಪೂರ್ತಿಮಾಡಿಕೊಳ್ಳುವದಕ್ಕೆಂದು ಕಾಮ್ಯಕರ್ಮಗಳನ್ನೂ ವಿಧಿಸಿದೆ; ಆ ಕರ್ಮಗಳನ್ನುಳಿದು ಮಿಕ್ಕ ಕರ್ಮಗಳೆಲ್ಲವೂ ಪರಬ್ರಹ್ಮಜ್ಞಾನಕ್ಕೇ ವಿನಿಯುಕ್ತವಾಗುವ ಸಾಧನಗಳಾಗಿವೆ ಎಂಬುದು ಶಾಂಕರವ್ಯಾಖ್ಯಾಪ್ರಸ್ಥಾನದ ಸಿದ್ಧಾಂತವು (ಬೃ. ಭಾ. 4-4-22, ಭಾ. ಭಾ. 304). ವೇದದಲ್ಲಿ ಸಾಂಕೇತಿಕಭಾಷೆಯಿಲ್ಲವೆಂದು ಹೇಳುವದಕ್ಕೆ ಬರುವದಿಲ್ಲ; ಆದರೆ ಆ ಸಂಕೇತವನ್ನು ನಿಗಮ

ನಿರುಕ್ತವ್ಯಾಕರಣಾದಿಗಳಿಂದ ತಿಳಿಯುವದಕ್ಕೆ ಬರುತ್ತದೆ. ವೇದದಲ್ಲಿರುವ ಶಬ್ದಗಳಿಗೆ ಲೋಕಸಿದ್ಧವಾದ ಅರ್ಥವಿಲ್ಲವೆಂಬುದೂ ಅವು ಅಲೌಕಿಕವಾದ ಅರ್ಥವನ್ನು ಒಳಗೊಂಡಿರುವವೆಂಬುದೂ ವೈದಿಕರಿಗೆ ಯಾರಿಗೂ ಒಪ್ಪಿಲ್ಲ; ಮೀಮಾಂಸಾ ಶಾಸ್ತ್ರದಲ್ಲಿ ಹೇಳಿರುವ ನ್ಯಾಯಗಳನ್ನು ಅನುಸರಿಸಿಯೇ ವೇದಕ್ಕೆ ಅರ್ಥವನ್ನು ಮಾಡಬೇಕು; ಬಾಧಕವಿಲ್ಲದ ಕಡೆಯಲ್ಲಿ ಯಾವ ಶಬ್ದಕ್ಕೂ ಅಲೌಕಿಕವಾದ ಅರ್ಥವನ್ನು ಹೇಳಬಾರದು - ಎಂದು ಪೂರ್ವಮೀಮಾಂಸಾ ದರ್ಶನದಲ್ಲಿ ತೀರ್ಮಾನವಾಗಿರುತ್ತದೆ. ಅದನ್ನೇ ಎಲ್ಲಾ ಭಾಷ್ಯಕಾರರೂ ಅನುಸರಿಸಿಕೊಂಡು ವೇದಕ್ಕೆ ಅರ್ಥವನ್ನು ಹೇಳುತ್ತಾ ಬಂದಿರುತ್ತಾರೆ. ವೇದಶಬ್ದಗಳಿಗೆಲ್ಲ ಯೌಗಿಕಾರ್ಥವನ್ನೇ ಮಾಡಬೇಕು ಎಂಬ ಹಠವನ್ನು ಹಿಡಿದರೆ ಯಾರು ಹೇಗೆಬೇಕಾದರೂ ಶಬ್ದವ್ಯುತ್ಪತ್ತಿಯನ್ನು ತೋರಿಸಿ ತಮತಮಗೆ ಸಮ್ಮತವಾದ ಹೊಸಹೊಸ ಅರ್ಥಗಳನ್ನು ಮಾಡಬಹುದಾಗಿರುತ್ತದೆ ಎಂಬುದು ಸ್ಪಷ್ಟ.

ವೈದಿಕಮಂತ್ರಗಳಿಗೆ ಅಧಿಯಜ್ಞವಾಗಿ ಅರ್ಥವನ್ನು ಹೇಳುವವರ ಪರಂಪರೆಯು ಇತ್ತೀಚಿನದಲ್ಲ; ವೇದಭಾಗವಾದ ಬ್ರಾಹ್ಮಣದಲ್ಲಿಯೇ ಈ ಪದ್ಧತಿಯಿದೆ. ಸಂಹಿತೆಯೂ ಬ್ರಾಹ್ಮಣವೂ ಬೇರೆಬೇರೆಯ ಕಾಲಗಳಲ್ಲಿ ರಚಿತವಾಗಿರಬೇಕು ಎಂದು ಊಹಿಸುವ ಐತಿಹಾಸಿಕರು ಕೂಡ ಬ್ರಾಹ್ಮಣಗಳ ಕಾಲವು ಸಂಹಿತಾಕಾಲಕ್ಕೆ ನಮಗಿಂತ ಸಮೀಪತರವಾಗಿತ್ತೆಂದೂ ವೇದಗಳ ಅರ್ಥವನ್ನು ಮಾಡುವದಕ್ಕೆ ಈಗಿನವರಾದ ನಮ್ಮಗಳಿಗಿಂತ ಬ್ರಾಹ್ಮಣಗಳ ಕರ್ತೃಗಳಾದ ಋಷಿಗಳಿಗೆ ಹೆಚ್ಚಿನ ಅವಕಾಶವಿತ್ತೆಂದೂ ಒಪ್ಪಬೇಕಾಗುವದು. ಈ ಅಭಿಪ್ರಾಯವನ್ನೇ ಶಂಕರಾಚಾರ್ಯರೂ ಇಟ್ಟುಕೊಂಡಿರುತ್ತಾರೆ. ಆದರೆ ಇಷ್ಟುಮಾತ್ರದಿಂದ ವೇದಗಳಲ್ಲಿ ಎಂದರೆ ಮಂತ್ರಬ್ರಾಹ್ಮಣಗಳಲ್ಲಿ ಆಧ್ಯಾತ್ಮಿಕ ತತ್ತ್ವಗಳು ಇರಬಾರದೆಂದಾಗಲಿ, ಉಪನಿಷತ್ತುಗಳಲ್ಲಿ ಕರ್ಮವಿಚಾರವು ಇರಬಾರದೆಂದಾಗಲಿ ನಿಯಮವು ಏರ್ಪಡುವುದಿಲ್ಲ. ಕರ್ಮಾಚರಣೆಯಿಂದ ಆರ್ಷದರ್ಶನವುಂಟಾಗುವದೆಂಬ ನಂಬಿಕೆಯು (ತೈ.ಭಾ. 1-10, ಛಾ.ಭಾ. 58) ಬಹುಕಾಲದಿಂದಲೂ ನಮ್ಮಗಳಲ್ಲಿರುತ್ತದೆ. ಇನ್ನು ಕರ್ಮಕಾಂಡವು ಸರ್ವಥಾಜ್ಞಾನಕಾಂಡಕ್ಕೆ ಸಂಬದ್ಧವಾಗಿಲ್ಲವೆಂದಾಗಲಿ, ಆ ಕಾಂಡದಲ್ಲಿ ಜ್ಞಾನವಿಚಾರವು ಬರಬಾರದೆಂದಾಗಲಿ ಆಚಾರ್ಯರು ಹೇಳಿರುವದಿಲ್ಲ. ಶತಪಥಬ್ರಾಹ್ಮಣದಲ್ಲಿ ಎಷ್ಟೋ ತತ್ತ್ವವಿಚಾರಗಳು ಬಂದಿರುತ್ತವೆ; ಆ ಬ್ರಾಹ್ಮಣದಲ್ಲಿ

ಕರ್ಮಪ್ರಕರಣದಲ್ಲಿದ್ದರೂ ಕೆಲವು ವಾಕ್ಯಗಳು ಶುದ್ಧೋಪಾಸನೆಯನ್ನೇ ಹೇಳುತ್ತವೆ ಎಂದು ಸೂತ್ರಭಾಷ್ಯದಲ್ಲಿ (3-3-44 ರಿಂದ 52) ನಿರ್ಣಯಿಸಲಾಗಿದೆ.

ಉಪನಿಷತ್ತುಗಳಿಗೆ ಅರ್ಥವನ್ನು ಶಂಕರಾಚಾರ್ಯರು ಮಾಡಿರುವ ಬಗೆಯು ಅರವಿಂದರ ಬಗೆಗಿಂತ ತೀರ ಭಿನ್ನವಾಗಿರುತ್ತದೆ. ಜ್ಞಾನಮಾತ್ರದಿಂದಲೇ ಮೋಕ್ಷವು ಎಂಬುದೇ ಸರ್ವವೇದಾಂತಗಳ ಸಿದ್ಧಾಂತವು ಎಂಬುದು ಆಚಾರ್ಯರ ಮತ. ಈಶಾವಾಸ್ಯೋಪನಿಷತ್ತಿನಲ್ಲಿ ವಿರುದ್ಧದ್ವಂದ್ವಗಳ ಸಮನ್ವಯವನ್ನು ಮಾಡಿರುವದರಿಂದ ಈಶಾವಾಸ್ಯದ ಮೊದಲನೆಯ ಮಂತ್ರಕ್ಕೆ ಮಾಡಿರುವ ಶಾಂಕರಭಾಷ್ಯವು ಉಪನಿಷತ್ತಿನ ತಾತ್ಪರ್ಯಕ್ಕೇ ವಿರುದ್ಧವಾಗುತ್ತದೆ ಎಂಬುದು ಅರವಿಂದರ ಅಭಿಪ್ರಾಯವು. ಆದರೆ ಉಪನಿಷತ್ತಿನ ತಾತ್ಪಾರ್ಯವೇನೆಂಬುದೇ ಇಲ್ಲಿ ವಾದಗ್ರಸ್ತವಿಷಯವಾಗಿದೆ. ಆತ್ಮತತ್ತ್ವವೊಂದೇ ಪರಮಾರ್ಥವು; ಅದನ್ನು ತಿಳಿದರೇ ಸರ್ವತ್ಯಾಗವಾಗುವದು, ತನ್ನನ್ನು ತಾನು ರಕ್ಷಿಸಿಕೊಂಡಂತೆ ಆಗುವದು - ಎಂಬುದನ್ನು ಹೇಳುವದರಲ್ಲಿಯೇ ಉಪನಿಷತ್ತುಗಳ ಪರಮ ತಾತ್ಪರ್ಯವಿದೆ ಎಂಬುದು ಆಚಾರ್ಯರ ಅಭಿಪ್ರಾಯ. '**ತೇನ ತ್ಯಕ್ತೇನ**' ಎಂಬುದಕ್ಕೆ ಅದರಿಂದ ತ್ಯಕ್ತವಾದುದನ್ನು (ಸ. 1-55) ಎಂಬುದು ಶ್ರೀಮುಗಳಿಯವರ ಅರ್ಥ; ಇದಂತೂ ಈಶಾ ಎಂಬ ಪುಲ್ಲಿಂಗಕ್ಕೆ ಹೊಂದುಗಡೆಯಲ್ಲ. 'By that renounced' ಆ ತ್ಯಕ್ತವಾದದ್ದರಿಂದ - ಎಂದು ಅರವಿಂದರ ಭಾಷ್ಯದ ಮೂಲ; ತ್ಯಕ್ತವಾದದ್ದರಿಂದ ಹೇಗೆ ಭೋಗವನ್ನು ಪಡೆಯಬೇಕೆಂಬುದು ತಿಳಿಯುವದಿಲ್ಲ. ಶ್ರೀ ಮುಗಳಿಯವರೇ ಅನುವಾದಿಸಿರುವಂತೆ 'ತ್ಯಾಗವೇ ದಿವ್ಯಜೀವನದ ನಿಯಮ (ಸಂ. 2-58, ನಂ.19), ತ್ಯಾಗದಿಂದಲೇ ಈ ದಿವ್ಯಭೋಗವುಂಟಾಗುತ್ತದೆ' - ಎಂಬುದು ಅರವಿಂದರ ಅಭಿಪ್ರಾಯ. ಇದು ನಿಜವಾದರೆ 'ಆದ್ದರಿಂದ ತ್ಯಾಗದಿಂದಲೇ ನಿನ್ನನ್ನು ನೀನು ಕಾಪಾಡಿಕೊ' (ಈ. ಭಾ. 1, ಭಾ. ಭಾ. 4) ಎಂಬ ಶಾಂಕರಭಾಷ್ಯವು ಸರ್ವಸಮ್ಮತವೆಂದಾಗುತ್ತದೆ. ಸರ್ವವೂ ಈಶ್ವರನೆಂಬ ಜ್ಞಾನದಿಂದ ಜಗತ್ತೆಲ್ಲವನ್ನೂ ಮುಚ್ಚಿಹಾಕಿ ಬಿಡುವದೇ, ದುರ್ಗಂಧವನ್ನು ಸುಗಂಧವು ಮುಚ್ಚಿಬಿಡುವಂತೆ ಇಲ್ಲವಾಗಿಸಿಬಿಡುವದೇ, ಈ ತ್ಯಾಗಕ್ಕೆ ಉಪಾಯವು ಎಂಬ ಪೂರ್ವಾರ್ಧದ ಭಾಷ್ಯವೂ ಹೊಂದುಗಡೆಯಾಗುತ್ತದೆ. ಏಳನೆಯ ಮಂತ್ರವೂ ಇದಕ್ಕೆ ಹೊಂದುಗಡೆಯಾಗುತ್ತದೆ. ಏಕೆಂದರೆ ಆ ಮಂತ್ರಕ್ಕೆ ಆತ್ಮವನ್ನರಿತವನಿಗೆ ಯಾವಾಗ ಎಲ್ಲವೂ ಆತ್ಮನೇ ಆಯಿತೋ ಆಗ ಶೋಕಮೋಹಗಳಿಲ್ಲ ಎಂಬರ್ಥವನ್ನು

ಆಚಾರ್ಯರು ತೆಗೆದಿರುತ್ತಾರೆ. ಅರವಿಂದರ ಅಭಿಪ್ರಾಯವು ಇದಕ್ಕೆ ವಿರುದ್ಧವಾಗಿದೆ ಎಂಬುದು ನಿಜ; ಏಕೆಂದರೆ ಅವರು ಆತ್ಮನೇ ಎಲ್ಲಾ ಭೂತಗಳೂ ಆಗಿರುವನು ಎಂದು ಪೂರ್ಣ ಜ್ಞಾನದಿಂದ ಯಾವನಿಗೆ ಆಗಿರುವದೋ ಅವನಿಗೆ ಶೋಕಮೋಹಗಳಿಲ್ಲ (ಸ. 1-61) ಎಂಬ ಭಾವಾರ್ಥವನ್ನು ಮಂತ್ರಕ್ಕೆ ಹೇಳಿರುತ್ತಾರೆ. ಆದರೂ '**ಯತ್ರ ತ್ವಸ್ಯ ಸರ್ವಮಾತ್ಮೈವಾಭೂತ್**' ಎಂಬ ವಾಕ್ಯವನ್ನೇ (ಬೃ. 2-4-14 ಭಾ. ಭಾ. 376, 377) ಬೃಹದಾರಣ್ಯಕದಲ್ಲಿ ಉಪಯೋಗಿಸಿ ಜ್ಞಾನಿಗೆ ಯಾವ ದ್ವೈತವ್ಯವಹಾರವೂ ಇರುವದೇ ಇಲ್ಲ ಎಂದೇ ವಿವರಿಸಿರುವದು ಶಾಂಕರಭಾಷ್ಯಕ್ಕೆ ಹೊಂದುಗಡೆಯಾಗಿದೆ ಎಂಬುದನ್ನು ನಾವು ಲಕ್ಷ್ಯಕ್ಕೆ ತಂದುಕೊಳ್ಳಬಹುದು. ಅದೇ ಉಪನಿಷತ್ತಿನಲ್ಲಿ ಏಷಣಾತ್ರಯತ್ಯಾಗವನ್ನು ಹೇಳಿದೆ ಎಂಬುದನ್ನು ಆಚಾರ್ಯರು ಈಶಭಾಷ್ಯ (ಈ. ಭಾ. 7, ಭಾ. ಭಾ. 18)ದಲ್ಲಿ ಸ್ಪಷ್ಟಪಡಿಸಿರುತ್ತಾರೆ. ಈ ಉಪನಿಷತ್ತಿನಲ್ಲಿ ವಿರುದ್ಧದ್ವಂದ್ವಗಳ ಸಾಮರಸ್ಯವನ್ನು ಹೇಳಿದೆ ಎಂಬುದು ಆಚಾರ್ಯರಿಗೆ ಒಪ್ಪಿಲ್ಲ; ಕರ್ಮ, ಉಪಾಸನೆ ಮತ್ತು ವ್ಯಾಕೃತಾವ್ಯಾಕೃತೋಪಾಸನೆಗಳು - ಇವುಗಳ ಸಮುಚ್ಚಯವನ್ನು ವಿಧಿಸುವದಕ್ಕಾಗಿ ಒಂದೊಂದನ್ನು ಪ್ರತ್ಯೇಕವಾಗಿ ವಿಧಿಸಿದೆ ಎಂದು ಅವರು ಹೇಳುತ್ತಾರೆ.

ಆಚಾರ್ಯರ ಭಗವದ್ಗೀತಾವ್ಯಾಖ್ಯಾನವೂ ಅವರ ಉಪನಿಷದ್ವ್ಯಾಖ್ಯಾನಕ್ಕೆ ಅನುಗುಣವಾಗಿಯೇ ಇರುತ್ತದೆ. ಸ್ವಕರ್ಮದಿಂದ ಈಶ್ವರನನ್ನು ಅಭ್ಯರ್ಚನೆ ಮಾಡುವ ಈಶ್ವರಶರಣತೆ ಮತ್ತು ಅದರ ಫಲವಾದ ಸರ್ವಕರ್ಮಸಂನ್ಯಾಸಪೂರ್ವಕ ಸಮ್ಯಗ್ದರ್ಶನ - ಇವೆರಡೇ ಗೀತೋಪದೇಶದ ಸಾರ ಎಂಬುದು (ಗೀ. ಭಾ. 18-66, ಭಾ. ಭಾ. 582) ಆಚಾರ್ಯರ ಮತವು. ಉಪನಿಷತ್ತುಗಳು, ಗೀತೆ- ಇವಕ್ಕೆ ಬ್ರಹ್ಮಸೂತ್ರಗಳಲ್ಲಿ ಹೇಳಿರುವ ನ್ಯಾಯದಂತೆಯೇ ಅರ್ಥಮಾಡಬೇಕೆಂಬ ಸಂಪ್ರದಾಯವನ್ನು ಅವರು ಅನುಸರಿಸಿರುತ್ತಾರೆ.

ವೇದಾಂತತತ್ತ್ವವು ವಾಗ್ಯುದ್ಧದಿಂದ ಎಂದಿಗೂ ನಿರ್ಣಯವಾಗಲಾರದು. ಅದಕ್ಕೆ ಅನುಭವವೇ ಕೊನೆಯ ನಿರ್ಣಯಸ್ಥಾನವು. ಆದ್ದರಿಂದ ಅನುಭವ ವಿಷಯವಾಗಿ ಅರವಿಂದರವರ ಮತ್ತು ಆಚಾರ್ಯರ ಅಭಿಪ್ರಾಯವೇನು?- ಎಂಬುದನ್ನು ಮುಂದೆ ವಿವರಿಸುವದಕ್ಕೆ ಹೊರಡುವೆನು.

# 3. ಅರವಿಂದದರ್ಶನ

ಅರವಿಂದರ ಜೀವನಚರಿತ್ರೆಯು ಅವರ ದರ್ಶನಯೋಗಗಳ ಬಾಗಿಲನ್ನು ತೆರೆಯುವ ಬೀಗದ ಕೈ ಎಂದು ಹಿಂದೆಯೇ ಹೇಳಿರುತ್ತೇನೆ. ಅವರು ಪಾಶ್ಚಾತ್ತ್ಯ ವಿದ್ಯಾಭ್ಯಾಸದ ಮತ್ತು ನಮ್ಮ ದೇಶದ ವಿದ್ಯಾಭ್ಯಾಸಕ್ರಮದ ಸಾರವನ್ನು ಗ್ರಹಿಸಿದವರು; ಆದ್ದರಿಂದ ಅವರ ದರ್ಶನದಲ್ಲಿ ಪೂರ್ವಪಶ್ಚಿಮವಿಚಾರಧಾರೆಗಳ ಸಮನ್ವಯಕ್ಕೆ ಮಾಡಿರುವ ಪ್ರಯತ್ನವು ಎದ್ದುಕಾಣುತ್ತದೆ. ಅವರು ರಾಜಕೀಯ ವ್ಯವಹಾರಕ್ಷೇತ್ರದಿಂದ ಅಧ್ಯಾತ್ಮಚಿಂತನಕ್ಷೇತ್ರಕ್ಕೆ ತಟ್ಟನೆ ಧುಮುಕಿದವರು; ಹೊರಗಿನ ವ್ಯಾವಹಾರಿಕ ಪ್ರಪಂಚದ ಸಂಬಂಧವನ್ನು ಕಡಿವಡೆಯಿದೆ ಇಟ್ಟುಕೊಂಡೇ ಅಧ್ಯಾತ್ಮವಿಚಾರವನ್ನೂ ಯೋಗವನ್ನೂ ಮುನ್ನಡೆಯಿಸಿದವರು. ಆದ್ದರಿಂದ ಅವರ ದರ್ಶನಯೋಗಗಳಲ್ಲಿ ಆಧ್ಯಾತ್ಮಿಕ, ಆಧಿಭೌತಿಕ – ಈ ಎರಡೂ ವಿಶ್ವಪಾರ್ಶ್ವಗಳ ಸಾಮರಸ್ಯಕ್ಕೆ ಪ್ರಾಧಾನ್ಯವಿರುತ್ತದೆ. ಅವರು ಬಂಗಾಲದ ವೈಷ್ಣವ ಶಾಕ್ತೇಯ ಮತಗಳ ನಿಕಟಸಂಬಂಧದಲ್ಲಿದ್ದವರು. ಆದ್ದರಿಂದ ಅವರ ದರ್ಶನಯೋಗಗಳಲ್ಲಿ ವೈದಿಕತಾಂತ್ರಿಕ ಪ್ರಕ್ರಿಯೆಗಳ ಬೆರಕೆಯಿರುತ್ತದೆ; ಅಲ್ಲಿ ಒಂದು ಬಗೆಯ ದ್ವೈತಾದ್ವೈತದೃಷ್ಟಿಗೆ ಎಡೆಯಿದೆ; ಈಶ್ವರನಿಗೂ ಆತನ ಶಕ್ತಿಗೂ, ಈಶ್ವರನಿಗೂ ಜಗತ್ತಿಗೂ, ಈಶ್ವರನಿಗೂ ಜೀವನಿಗೂ ಒಂದು ಬಗೆಯ ಅಚಿಂತ್ಯಭೇದಾಭೇದದ ಅಂಗೀಕಾರವಿದೆ. ತಮ್ಮ ದರ್ಶನಯೋಗಗಳಿಗೆ ಹೀಗೆ ಇಂಥಿಂಥ ಕಡೆಯಿಂದ ವಿಷಯಸಾಮಗ್ರಿಯ ಸಂಗ್ರವಾಗಿದೆ ಎಂದು ಅರವಿಂದರೇನೂ ಹೇಳಿಕೊಂಡಿಲ್ಲ, ನಿಜ; ಆದರೆ ಹಿಂದಿನ ಎಲ್ಲಾ ಶಾಸ್ತ್ರಗಳನ್ನೂ ಎಲ್ಲಾ ಯೋಗಗಳನ್ನೂ ಸಮಾಲೋಚನೆ ಮಾಡಿ ಅವುಗಳ ಸಾರವನ್ನು ಮೂಲಧನವಾಗಿಟ್ಟುಕೊಂಡೇ ತಮ್ಮ ವಿಚಾರ ಕ್ರಮವನ್ನು ಮುಂದುವರಿಸಿರುವದಾಗಿ ಅವರು ಬಾಯಿಬಿಟ್ಟು ಹೇಳಿರುತ್ತಾರೆ.

ಅರವಿಂದರ ದರ್ಶನಕ್ಕೆ ಮುಖ್ಯವಾಗಿ ಅವರ ಭಾಗವತ ಜೀವನ (Life Divine) ಎಂಬರ್ಥದ ಹೆಸರಿನ ಇಂಗ್ಲಿಷು ಗ್ರಂಥವೇ ನಮಗೆ ಮುಖ್ಯಾಧಾರ. ಅವರು ಶಿಷ್ಯರಿಗೆ ಬರೆದಿರುವ ಪತ್ರಗಳಲ್ಲಿಯೂ (Letters) ಕೆಲವು ಪ್ರಧಾನ ವಿಚಾರಗಳ ಸ್ಪಷ್ಟೀಕರಣವು ಸಿಕ್ಕುತ್ತದೆ. ಅರವಿಂದರು ಉಪನಿಷತ್ತುಗಳಲ್ಲಿ ಕಂಡುಬರುವ ವಿಚಾರಕ್ರಮವನ್ನು ಪ್ರಾಚೀನವೇದಾಂತ (Ancient Vedanta) ಎಂದು ಕರೆದಿರುತ್ತಾರೆ. ಉಪನಿಷತ್ತುಗಳಿಗೆ ಅವರು ಸ್ವತಂತ್ರವಾಗಿಯೇ

ವ್ಯಾಖ್ಯಾನವನ್ನು ಮಾಡಿರುವದರಿಂದ ಶಂಕರಾಚಾರ್ಯರೇ ಮೊದಲಾದ ಆಚಾರ್ಯರುಗಳ ಪ್ರಸ್ಥಾನಗಳನ್ನು ಈಚಿನ ವೇದಾಂತವೆಂದು ಅವರು ಭಾವಿಸಿ ಅವುಗಳಲ್ಲಿ ಕೆಲಕೆಲಭಾಗಗಳನ್ನು ಖಂಡಿಸಿರುತ್ತಾರೆ. ಪ್ರಾಚೀನ ವೇದಾಂತದಲ್ಲಿಯೂ ಭಾಗವತ ಜೀವನಕ್ಕೆ ಉಪಯೋಗಿಸುವಷ್ಟು ತೀರ್ಮಾನಗಳನ್ನು ಮಾತ್ರ ತಾವು ವಿವರಿಸಿರುವದಾಗಿ ಅವರು ಹೇಳಿರುತ್ತಾರೆ. (L.D. 85)[1] ಅರವಿಂದರು ತಮ್ಮ ಸಿದ್ಧಾಂತವೇ ನಿಜವಾದ ಅದ್ವೈತ (True Adwaita) ಎಂದಿರುತ್ತಾರೆ. ಶಾಂಕರಮತದಲ್ಲಿ ಬ್ರಹ್ಮ, ಮಾಯೆ ಎಂಬ ದ್ವೈತವನ್ನು ಒಪ್ಪಿದೆ ಎಂದು ಅವರ ಎಣಿಕೆ (L.D. 44). ಮಾಯಾವಾದದಲ್ಲಿ 'ಏಕಮೇವಾದ್ವಿತೀಯಮ್' ಎಂಬ ವೇದಾಂತವಾಕ್ಯವನ್ನು 'ಸರ್ವಂ ಖಲ್ವಿದಂ ಬ್ರಹ್ಮ' ಎಂಬ ವಾಕ್ಯಕ್ಕೆ ಹೊಂದುಗಡೆಮಾಡಿಲ್ಲವೆಂದು ಅವರ ಭಾವನೆ (L.D.80). ತಮ್ಮ ಸಿದ್ಧಾಂತವು ಏಕತ್ವವನ್ನೂ ನಾನಾತ್ವವನ್ನೂ ಒಪ್ಪಿರುವ ಭೇದಾಭೇದವಾದ(L.I. 51)ವೆಂದು ಅವರು ಹೇಳಿಕೊಂಡಿರುತ್ತಾರೆ. ಪರಮಾರ್ಥವಾಗಿರುವ ಸತ್ತತ್ತ್ವಕ್ಕೆ ಜಗತ್ಸೃಷ್ಟಿಯನ್ನು ಮಾಡಬಲ್ಲ ಅನಂತವಾದ ಚಿಚ್ಛಕ್ತಿಯೂ ಕ್ರಿಯಾಶಕ್ತಿಯೂ ಇದೆ (L.D.U. 86) ಎಂಬುದು ಅವರ ಮತವಾಗಿರುವದರಿಂದ ಈ ಸಿದ್ಧಾಂತವನ್ನು ಒಂದು ಬಗೆಯ ಶಕ್ತಿವಿಶಿಷ್ಟಾದ್ವೈತವೆಂದೂ ಕರೆಯಬಹುದಾಗಿದೆ.

ಪರಸ್ಪರವಿರುದ್ಧವಾದ ವಾದವಿಕಲ್ಪಗಳನ್ನು ಸಮನ್ವಯಮಾಡುವ ಪ್ರಯತ್ನವು ಈ ದರ್ಶನದಲ್ಲಿ ಒಂದು ವಿಶೇಷವೆನ್ನಬಹುದು. ಭೌತಿಕದ್ರವ್ಯವೇ ಪರಮಾರ್ಥವು, ಚೈತನ್ಯವೊಂದೇ ಪರಮಾರ್ಥವು; ಬ್ರಹ್ಮವು ಅಪರಿಚ್ಛಿನ್ನವು. ಅದು ಪರಿಚ್ಛಿನ್ನವಸ್ತುಗಳ ಪ್ರಪಂಚಕ್ಕೆ ಕಾರಣವು; ಬ್ರಹ್ಮವು ನಿರ್ಗುಣವು, ಬ್ರಹ್ಮವು ಸಗುಣವು; ಬ್ರಹ್ಮವು ಏಕವು, ಬ್ರಹ್ಮವು ಅನೇಕವು; ಬ್ರಹ್ಮವು ನಿಷ್ಕ್ರಿಯವು. ಬ್ರಹ್ಮವು ಸಕ್ರಿಯವು; ಬ್ರಹ್ಮವು ನಿರಾಕಾರ, ಬ್ರಹ್ಮವು ಸಾಕಾರ; ಬ್ರಹ್ಮವು ದೇಶಕಾಲಾತೀತ, ದೇಶಕಾಲಗಳಲ್ಲಿ ತೋರಿಕೊಳ್ಳತಕ್ಕದ್ದು; ಅದು ನಿರ್ವಿಕಾರವು, ಸವಿಕಾರವು; ಸನ್ಮಾತ್ರವು, ಸರ್ವಭೂತಗಳಿಗೂ ಈಶಾನವು- ಇವೇ ಮುಂತಾದ ದ್ವಂದ್ವಗಳು ಒಂದಕ್ಕೊಂದು ತೀರವಿರುದ್ಧವೆಂದೂ ಇವುಗಳಲ್ಲಿ ಒಂದೊಂದು ಮಾತ್ರ

1 . L D ಎಂದರೆ Life Divine ಪುಸ್ತಕದ ಪ್ರಥಮ ಸಂಪುಟದ ಪುಟ ಎಂದರ್ಥ; L.D.I.I ಎಂದರೆ ಇದೇ ಪುಸ್ತಕದ ಎರಡನೆಯ ಸಂಪುಟದ ಪುಟ ಎಂದರ್ಥ. 1 ಎಂದರೆ Letters ಅರವಿಂದರ ಪತ್ರಗಳು; ರೋಮನ್ ಅಂಕೆಯು ಪತ್ರಗಳ ಆಯಾ ಭಾಗವನ್ನು ಸೂಚಿಸುವದು.

ಪರಮಾರ್ಥವೆಂದೂ ಆಗ್ರಹವನ್ನು ತೊಡುವವರ ಜ್ಞಾನವು ಅಪೂರ್ಣವೆಂಬುದನ್ನು ತೋರಿಸಿ ಈ ದ್ವಂದ್ವಗಳನ್ನು ಸಮರಸವಾಗಿಸುವದೊಂದು ಈ ದರ್ಶನದ ಮುಖ್ಯಗುರಿಯು (L.D.44,288,289) ಪರಿಚ್ಛಿನ್ನತರ್ಕಕ್ಕೆ ಈ ದ್ವಂದ್ವಗಳು ವಿರುದ್ಧವಾಗಿ ಕಾಣಿಸಿದರೂ ನೇರಾದ ಅನುಭವಕ್ಕೆ (Instuition) ಹೊಂದಿಗೆಯಾಗಿರುವ ಅಪರಿಚ್ಛಿನ್ನತರ್ಕಕ್ಕೆ (Logic of the Infinite) ಅವಿರುದ್ಧವಾಗಿರುತ್ತವೆ. (L.D. II 46 - 56) ಎಂದು ಅರವಿಂದರು ಪ್ರತಿಪಾದಿಸಿರುತ್ತಾರೆ.

ಅರವಿಂದರ ಜ್ಞೇಯತತ್ತ್ವಪ್ರತಿಪಾದನೆಯನ್ನು (Ontology) ಅತಿಸಂಕ್ಷೇಪವಾಗಿತಿಳಿಸಿದರೆಇಷ್ಟಕ್ಕೆಇಳಿಯುತ್ತದೆ;ಅದ್ವಿತೀಯಬ್ರಹ್ಮವುಸಚ್ಚಿದಾನಂದ ಸ್ವರೂಪವಾಗಿರುತ್ತದೆ. ಇದನ್ನು ಸಾಮಾನ್ಯವಾದ ಮಾತಿನಿಂದ ವರ್ಣಿಸುವದಕ್ಕಾಗಲಾರದು, ಮನಃಪ್ರತ್ಯಯದಿಂದ ವಿಷಯಾಕರಿಸುವದೂ ಆಗಲಾರದು; ಆದರೂ ವೇದೋಪನಿಷತ್ತುಗಳಲ್ಲಿ ಕಾಣಬರುವಂಥ ಮೆದುಮೇಣದ (Plastic) ಭಾಷೆಯಿಂದ ಅದನ್ನು ತಿಳಿಸುವದಕ್ಕೆ ಬರುತ್ತದೆ, ಒಂದಾನೊಂದು ವಿಶಾಲವಾದ ಮೆದುಮೇಣದಂಥ ಪ್ರತ್ಯಯವಿಶೇಷಕ್ಕೆ ಎಟುಕಿಸಿಕೊಳ್ಳುವದಕ್ಕೂ ಆಗುತ್ತದೆ (L.D. II ,34,99) ಈ ಸಚ್ಚಿದಾನಂದ ತತ್ತ್ವವು ಅಪರಿಚ್ಛೇದ್ಯವಾದದ್ದು. ಇದನ್ನು ನಿಷೇಧಮುಖದಿಂದಲಾಗಲಿ ವಿಧಿಮುಖದಿಂದಲಾಗಲಿ ಪರಿಚ್ಛೇದಗೊಳಿಸುವದಕ್ಕೆ ಆಗುವಂತಿಲ್ಲ. ಆದ್ದರಿಂದಲೇ ಪ್ರಾಚೀನವೇದಾಂತದಲ್ಲಿ ಇದನ್ನು 'ನೇತಿ ನೇತಿ' (ಇದಲ್ಲ, ಅದಲ್ಲ) ಎಂದು ವರ್ಣಿಸಿದ್ದಲ್ಲದೆ, 'ಇದು', 'ಅದು', 'ಎಲ್ಲವೂ' ಎಂದೂ ವರ್ಣಿಸಿರುತ್ತದೆ (L.D. II 34,35,102).

ಸತ್ತು, ಚಿತ್ತು, ಆನಂದ- ಇವು ಬೇರೆಬೇರೆಯಲ್ಲ; ಬ್ರಹ್ಮವು ಸಚ್ಚಿದಾನಂದವೆಂಬ ಪ್ರಕಾರತ್ರಯದ ಒಂದೇ ತತ್ತ್ವ (Triune Absolute). ಆದರೂ ನಮ್ಮ ಮನಸ್ಸೂ, ಅಧಿಮನಸ್ಸೂ (Overmind) ಈ ಸತ್ತು, ಚಿತ್ತು ಮುಂತಾದವುಗಳನ್ನು ಬಿಡಿಸಿಬಿಡಿಸಿ ಇವುಗಳಲ್ಲೊಂದೊಂದನ್ನೇ ತತ್ತ್ವವೆಂದು ಅರಿಯಬಲ್ಲವು. ಈ ಸತ್ತು ಮುಂತಾದವುಗಳಲ್ಲಿ ಮತ್ತೂ ಕೆಲವು ಉಪಪ್ರಕಾರಗಳಿರುತ್ತವೆ, ಅವುಗಳಲ್ಲಿ ಒಂದೊಂದರಲ್ಲಿಯೂ ತ್ರಿಪುಟಿರೂಪವು ಕಂಡು ಬರುತ್ತದೆ (L.D.II 25).

ಸಚ್ಚಿದಾನಂದವಾಗಿರುವ ಬ್ರಹ್ಮವು ಅನಂತವಾಗಿ ಅಪರಿಚ್ಛಿನ್ನವಾಗಿರುವದಾದರೂ ಸ್ವಯಂಪರಿಚ್ಛಿನ್ನವಾಗುತ್ತದೆ. ಅನಂತವಾದದ್ದಕ್ಕೆ ಅನಂತಶಕ್ತಿಗಳಿರಬಹುದಾದ್ದರಿಂದ ಈ ತತ್ತ್ವವು ತನ್ನನ್ನು ತಾನು ಪರಿಚ್ಛೇದಗೊಳಿಸಿಕೊಳ್ಳುವದೆಂಬುದು ಯುಕ್ತಿವಿರುದ್ಧವಲ್ಲ. ಈ ಬ್ರಹ್ಮವು ತನ್ನನ್ನು ತಾನು ಬಗೆ ಬಗೆಯ ಪರಿಚ್ಛಿನ್ನರೂಪಗಳಿಂದ ಸೃಷ್ಟಿಸಿಕೊಳ್ಳುತ್ತಿರುವದು. ಇದರಿಂದ ಅದರ ಪರಿಚ್ಛಿನ್ನತ್ವಕ್ಕೆ ಯಾವ ಹಾನಿಯೂ ಇಲ್ಲ (L.D. II 47).

ಸಚ್ಚಿದಾನಂದವು ಪ್ರಕೃತಿಪುರುಷರ ರೂಪಕ್ಕೆ ಇಳಿಯುವಾಗ ಒಂದೊಂದು ಮೆಟ್ಟಲಿನಲ್ಲಿಯೂ ತನ್ನನ್ನು ತಾನು ಒಂದೊಂದು ಆವರಣದಿಂದ ಮರೆಮಾಡಿ ಕೊಂಡಿರುವದು; ಅನ್ವೇಷಕನಾದ ಭಕ್ತನಿಗೆ ಈ ಒಂದೊಂದು ಆವರಣವೂ ಭಗವಂತನನ್ನು ಹೆಚ್ಚುಹೆಚ್ಚಾಗಿ ಗುರುತಿಸುವ ಒಂದೊಂದು ನಿಚ್ಚಣಿಕೆಯ ಮೆಟ್ಟಲಾಗಿರುತ್ತದೆ (L.D. 56). ಭಗವಂತನು ಹೀಗೆ ಇಳಿಯುತ್ತಾ ಇಳಿಯುತ್ತಾ ತನ್ನ ಸ್ವರೂಪವನ್ನು ಹೆಚ್ಚುಹೆಚ್ಚಾಗಿ ಸಂಕುಚಿತವಾಗಿ ಮಾಡಿ ಕೊಂಡಿರುತ್ತಾನೆ; ತೀರ ಕೆಳಗಿನ ಮಟ್ಟಕ್ಕೆ ಇಳಿದಾಗ ಭೂತದ್ರವ್ಯದ (matter) ರೂಪದಲ್ಲಿ ಅಚೇತನ (In-conscient) ವಾಗಿರುವಂತೆ ತೋರುತ್ತಿರುತ್ತಾನೆ. ಈ ದ್ರವ್ಯದಿಂದ ಪ್ರಾಣ, ಮನಸ್ಸು - ಇವುಗಳು ವಿಕಾಸವಾಗಿರುತ್ತವೆ. ಮನಸ್ಸಿನ ಹಿಂಗಡೆಯಲ್ಲಿ ಪುರುಷ (Spirit) ರೂಪದಲ್ಲಿ ಕಾಣಿಕೊಳ್ಳುತ್ತಿದಾನೆ. ಮನಸ್ಸು ಅತಿಮನಸ್ಸೆಂಬ (Super-mind) ರೂಪದಿಂದ ಮಾರ್ಪಡುವಾಗ ಪರಮಾರ್ಥದ ಪೂರ್ಣವಾದ ಅರಿಕೆಯಾಗುವದು (L.D. 143) ಪಾಶ್ಚಾತ್ಯರ ವಿಕಾಸವಾದವನ್ನು ಆಧ್ಯಾತ್ಮಿಕ ವಿಕಾಸವಾದ ರೂಪದಿಂದ ಪೂರ್ಣಗೊಳಿಸಿಕೊಂಡು ವೇದಾಂತ ವಿಚಾರಕ್ಕೆ ಹೊಂದಿಸಿಕೊಳ್ಳುವದೇ ಸರಿಯಾದ ವಿಚಾರಕ್ರಮವು (L.D.ch. XXIII 148). ಸದ್ರೂಪವಾದ ಬ್ರಹ್ಮವು ತನ್ನ ಚಿಚ್ಛಕ್ತಿ, ಆನಂದ, ಅತಿಮನಸ್ಸು- ಇವುಗಳ ಮೂಲಕ ಬ್ರಹ್ಮಾಂಡದೊಳಕ್ಕೆ ಇಳಿಯುತ್ತದೆ; ನಾವು ಭೂತದ್ರವ್ಯ, ಪ್ರಾಣ, ಮನಸ್ಸು, ಪುರುಷ, ಅತಿಮನಸ್ಸು, ಈ ಕ್ರಮದಿಂದ ಸಚ್ಚಿದಾನಂದಕ್ಕೆ ಏರುತ್ತೇವೆ. ಭೂತದ್ರವ್ಯವು ಪರಮಾತ್ಮನ ಸತ್ತ್ವದ ರೂಪಾಂತರವು, ಪ್ರಾಣವು ಆತನ ಚಿಚ್ಛಕ್ತಿಯ ರೂಪಾಂತರವು, ಶುದ್ಧ ಜೀವನು ಆತನ ಆನಂದದ ರೂಪಾಂತರವು. ಮನಸ್ಸು ಆತನ ಅತಿಮನಸ್ಸಿನ ರೂಪಾಂತರವು. ಪರಮಾತ್ಮನು ಭೌತದ್ರವ್ಯದಲ್ಲಿ ಸಂಕುಚಿತನಾಗಿದ್ದು ಮತ್ತೆ ವಿಕಾಸಕ್ರಮದಿಂದ ತನ್ನ ಸ್ವರೂಪಕ್ಕೆ ಏರುತ್ತಿರುವದೆಂಬುದು ಆತನ ಲೀಲೆ (L.D. 104). ಮನಸ್ಸಿಗೂ ಅತಿಮನಸ್ಸಿಗೂ

ನಡುವೆಯಿರುವ ಆವರಣವನ್ನು ತಗೆದುಹಾಕಿದವರು ಅತಿಮನಸ್ಸನ್ನು ಪಡೆದುಕೊಂಡು ಸಚ್ಚಿದಾನಂದಸಾಯುಜ್ಯವನ್ನು ಪಡೆದು ಈಶ್ವರಲೀಲೆಯಲ್ಲಿ ಭಾಗವನ್ನು ವಹಿಸಿ ಆನಂದಿಸುವರು (L.D.55,56; L.D. 333).

ಈಗ ಶಾಂಕರದರ್ಶನವು ಹೇಗಿರುವದೆಂಬುದನ್ನು ಸಂಕ್ಷೇಪದಿಂದ ನಿರ್ದೇಶಿಸುವೆನು. ಶಾಂಕರದರ್ಶನವು ಕೇವಲಾದ್ವೈತವು; ಅದರಲ್ಲಿ ದ್ವೈತಕ್ಕೆ ಒಂದಿಷ್ಟೂ ಎಡೆಯಿರುವದಿಲ್ಲ. ಈ ದರ್ಶನದಲ್ಲಿ ಬ್ರಹ್ಮಕ್ಕಿಂತ ವ್ಯತಿರಿಕ್ತವಾಗಿ ಮಾಯೆಯನ್ನು ಒಪ್ಪಿಲ್ಲ; ಇದು ಹೇಗೆಂಬುದನ್ನು ಮುಂದಿನ ಲೇಖನದಲ್ಲಿ ಸ್ಪಷ್ಟಗೊಳಿಸುವೆನು. ವಿರುದ್ಧವಾದ ವಿಕಲ್ಪಗಳನ್ನು ಸಮನ್ವಯಮಾಡುವ ಕ್ರಮವೂ ಈ ದರ್ಶನದಲ್ಲಿದೆ; ಆದರೆ ಪ್ರಕ್ರಿಯೆಮಾತ್ರ ಅರವಿಂದದರ್ಶನಕ್ಕಿಂತ ಭಿನ್ನವಾಗಿದೆ. ನೇರವಾದ ಅನುಭವವನ್ನೇ ಮುಖ್ಯವೆಂದು ಎಣಿಸಬೇಕೆಂಬುದೂ ಅನುಭವಾನುಸಾರಿಯಾದ ತರ್ಕವನ್ನು ಹಿಡಿದರೆ ಎಲ್ಲವೂ ಅದ್ವೈತವೇ ಆಗಿರುತ್ತದೆ ಎಂಬುದೂ ಶಂಕರರ ಹೇಳಿಕೆ.

ಶಂಕರರ ಜ್ಞೇಯತತ್ತ್ವಪ್ರತಿಪಾದನೆಯು ಹೀಗಿದೆ: ಪರಮಾರ್ಥ ತತ್ತ್ವವು ಮನೋವಾಕ್ಕುಗಳಿಗೆ ಅಗೋಚರವಾಗಿರುತ್ತದೆ; ಜಾತ್ಯಾದಿವಿಕಲ್ಪಗಳಿದ್ದಾದ್ದರಿಂದ ಅದನ್ನು ಯಾವ ಬಗೆಯ ವಾಕ್ಕಾಗಲಿ ಮನಸ್ಸಾಗಲಿ ತಿಳಿಸಿ ಕೊಡಲಾರದು (ತೈ. ಭಾ. 2-9, ಭಾ. ಭಾ. 220; ಗೀ. ಭಾ 13-12. ಭಾ. ಭಾ. 252). ಉಪನಿಷದ್ರೂಪವಾದ ವಾಕ್ಕೂ ಅದನ್ನು ತಿಳಿಸಿಕೂಡಲಾರದು; ಆ ವಾಕ್ಯದಿಂದಾಗುವ ಜ್ಞಾನವೂ ಅದನ್ನು ವಿಷಯೀಕರಿಸಲಾರದು. ಏಕೆಂದರೆ ಬ್ರಹ್ಮವು ಎಲ್ಲಕ್ಕೂ ಆತ್ಮನಾಗಿರುವಂತೆ ಮನೋವಾಕ್ಕುಗಳಿಗೂ ಆತ್ಮನೇ ಆಗಿದ್ದು ಅವುಗಳನ್ನೂ ಬೆಳಗುತ್ತದೆ. ಅದಕ್ಕೆ ಮತ್ತೊಂದನ್ನು ಬೆಳಗುವ ಶಕ್ತಿಯೂ ಬ್ರಹ್ಮದಿಂದಲೇ ಬಂದಿರುತ್ತದೆ (ಕೇ.ಭಾ.1-4, ಭಾ. ಭಾ. 26, ಭಾ. ಭಾ. 21 ರಿಂದ 27). ಬ್ರಹ್ಮವು ಸತ್ಯಜ್ಞಾನನಂದರೂಪವೆಂಬುದೂ ಒಂದು ದೃಷ್ಟಿಯಿಂದ ಸರಿಯೇ. ಆದರೆ ಸತ್ಯಜ್ಞಾನಾನಂದಶಬ್ದಗಳೂ ಬ್ರಹ್ಮಕ್ಕೆ ವಾಚಕಗಳಲ್ಲ. ಸತ್ಯವೆಂದರೆ ಅನೃತವಾದ ಕಾರ್ಯವಲ್ಲ ಎಂದರ್ಥ; ಜ್ಞಾನವೆಂದರೆ ಅಚೇತನವಲ್ಲ ಎಂದರ್ಥ; ಆನಂದವೆಂದರೆ ದುಃಖವಲ್ಲ ಎಂದರ್ಥ (ತೈ. ಭಾ. 103, 105). ಬ್ರಹ್ಮವು ಸತ್ಯವೇ ಅಥವಾ ಜ್ಞಾನವೇ ಎಂದು ಬಿಡಿಸಿ ಅರಿಯುವದು ಆಗಲಾರದು; ಏಕೆಂದರೆ ಬ್ರಹ್ಮವು ಚೇತನವಾದ ನಮ್ಮ ಆತ್ಮನೇ ಆಗಿರುತ್ತದೆ. ಸತ್ತ್ವವಿಲ್ಲದ ಚೇತನವನ್ನು ಕಲ್ಪಿಸುವದಕ್ಕೂ ಆಗುವದಿಲ್ಲ (ಸೂ. ಭಾ. 3-2-21,

ಭಾ. ಭಾ. 289). ಹೀಗೆ ಯಾವ ಮಾತಿಗೂ ವಿಷಯವಲ್ಲದ್ದರಿಂದ ಬ್ರಹ್ಮವನ್ನು ಶಾಸ್ತ್ರವು ಇದಲ್ಲ. ಇದಲ್ಲ - ಎಂದೇ ತಿಳಿಸುತ್ತದೆ. (ಬೃ. ಭಾ. 2-3-6, ಭಾ. ಭಾ. 348, ಸೂ. ಭಾ. 1-1-4, ಭಾ. ಭಾ. 47). ಬ್ರಹ್ಮವನ್ನು ಮಿಕ್ಕೆಲ್ಲಕ್ಕಿಂತಲೂ ಬೇರೆ ಎಂದೇ ತಿಳಿಸಬೇಕಾಗಿದೆ; ನೇತಿ ನೇತಿ ಎಂಬುದಕ್ಕಿಂತ ಹೆಚ್ಚಿನ ಬ್ರಹ್ಮನಿರ್ದೇಶಕ್ರಮವೇ ಇಲ್ಲ (ಬೃ. ಭಾ. 2-3-6 ಭಾ. ಭಾ. 348, 350). ಆದರೂ ಬ್ರಹ್ಮವೆಂದರೆ ಶೂನ್ಯವೆಂದಾಗಲಿ (Nihil) ನಿಷೇಧಗಳ (Negations) ರಾಶಿ ಎಂದಾಗಲಿ ಹೇಳುವದಕ್ಕಿಲ್ಲ; ಬ್ರಹ್ಮವು ನಮ್ಮ ಆತ್ಮನೇ ಆಗಿದೆ. ನೇತಿ ನೇತಿ ಎಂಬಿದೇ ಮುಂತಾದವು ಬರಿಯ ನಿಷೇಧಗಳಲ್ಲ, ನಿರ್ವಿಶೇಷನಾದ ಆತ್ಮನ ಸ್ವರೂಪವನ್ನು ತಿಳಿಸುವ ಪ್ರಕಾರವೇ ಇದು. (ತೈ. ಭಾ. ಭಾ. 105, ಮಾಂ. ಭಾ. 6, ಭಾ. ಭಾ. 39; ಕಾ.ಭಾ. 2-32, ಭಾ. ಭಾ. 115).

ಬ್ರಹ್ಮವು ಜಗದ್ರೂಪವಾಗಿರುತ್ತದೆ. ತಾನೇ ಬಹುವಾಗುತ್ತದೆ ಎಂದು ಶ್ರುತಿಯಲ್ಲಿ ಹೇಳಿದೆಯಾದರೂ ಕಾರ್ಯವಾದ ಜಗತ್ತು ಕಾರಣವಾದ ಬ್ರಹ್ಮಕ್ಕಿಂತ ಬೇರೆಯಾಗಿಲ್ಲ. ಮಡಿಕೆ, ಕುಡಿಕೆ - ಮುಂತಾದವು ಅನೃತವಾಗಿದ್ದು ಮಣ್ಣೊಂದೇ ಸತ್ಯವಾಗಿರುವಂತೆ ಸದ್ರೂಪವಾದ ಬ್ರಹ್ಮವೊಂದೇ ಸತ್ಯವು, ಅದೇ ಆತ್ಮನು, ಅದೇ ನೀನು - ಎಂದು ಶ್ರುತಿಯು ನಮಗೆ ಉಪದೇಶಿಸಿರುತ್ತದೆ. (ಸೂ.ಭಾ.2-1-14, ಭಾ.ಭಾ.433, ಛಾಂ.6-8-7). 'ಸರ್ವಂ ಖಲ್ವಿದಂ ಬ್ರಹ್ಮ' ಎಂಬ ವಾಕ್ಯವು ಉಪಾಸನಾಪ್ರಧಾನವಾಗಿದೆ; ಅಲ್ಲಿಯೂ ಇದೆಲ್ಲವೂ ಬ್ರಹ್ಮವೇ ಎಂದಿದೆ, ಬ್ರಹ್ಮವು ಇದೆಲ್ಲವೂ ಆಗಿದೆ ಎಂದಿಲ್ಲ (ಸೂ.ಭಾ.1-2-1, ಭಾ.ಭಾ.169). 'ಅನ್ನಂ ಬ್ರಹ್ಮ', 'ಪ್ರಾಣೋ ಬ್ರಹ್ಮ' - ಮುಂತಾದ ವಾಕ್ಯಗಳು ಆನಂದಸ್ವರೂಪವಾದ ಬ್ರಹ್ಮವನ್ನು ನಿರ್ಣಯಿಸಿ ತಿಳಿಸುವದಕ್ಕೆ ಬಂದಿವೆ (ಸೂ.ಭಾ.1-1-2, ಭಾ.ಭಾ.30, ತೈ.ಭಾ.3-6-1). ಇದೆಲ್ಲವೂ ಬ್ರಹ್ಮವೇ. ಇದೆಲ್ಲವೂ ಆತ್ಮನೇ ಎಂದು ಅವಧಾರಣೆ ಮಾಡಿರುವಂತೆ ಬ್ರಹ್ಮವು ಇದೆಲ್ಲವೂ ಆಗಿಯೇ ಇದೆ ಎಂದು ಎಲ್ಲಿಯೂ ಅವಧಾರಣೆಮಾಡಿಲ್ಲ (2-1-14. ಭಾ.ಭಾ. 434). 'ನೀನೇ ಸ್ತ್ರೀಯು, ನೀನೇ ಪುರುಷನಾಗಿರುವೆ' ಮುಂತಾದ ವಾಕ್ಯಗಳಲ್ಲಿಯೂ ತ್ವಮ್ (ನೀನೇ) ಎಂಬ ಅಭ್ಯಾಸವಚನವಿರುವದರಿಂದ ಸರ್ವವೂ ನೀನೇ, ಬ್ರಹ್ಮವೇ, ಎಂದೇ ಅವಧಾರಣೆಯನ್ನು ಮಾಡಿರುತ್ತದೆ. ಸೃಷ್ಟಿಯನ್ನು ಹೇಳುವ ವಾಕ್ಯಗಳು ಸೃಷ್ಟಿಜ್ಞಾನಕ್ಕೆ ಯಾವ ಫಲವನ್ನೂ ಹೇಳದೆ ಬ್ರಹ್ಮಜ್ಞಾನಕ್ಕೆ ಮಾತ್ರವೇ ಫಲವನ್ನು

ಹೇಳಿರುವದರಿಂದ ಶ್ರುತಿಗೆ ಸೃಷ್ಟಿಯಲ್ಲಿ ತಾತ್ಪರ್ಯವಿಲ್ಲವೆಂದೂ ಸೃಷ್ಟಿಯನ್ನು ಬ್ರಹ್ಮಜ್ಞಾನಕ್ಕೆ ಅಂಗವಾಗಿ ಹೇಳಿದೆಯೆಂದೂ ಮೀಮಾಂಸಾನ್ಯಾಯದಿಂದ ಏರ್ಪಡುತ್ತದೆ (ಸೂ. ಭಾ. 2-1-14, ಭಾ. ಭಾ. 439). ಸೃಷ್ಟಿಯನ್ನು ಹೇಳಿದ ಬಳಿಕ ಬ್ರಹ್ಮದಲ್ಲಿ ಯಾವ ದ್ವೈತವೂ ಇಲ್ಲ; ಬ್ರಹ್ಮವು ನಿರ್ವಿಶೇಷವೇ ಎಂದು ಒತ್ತಿ ಹೇಳುವದು ಶ್ರುತಿಗಳ ಪದ್ಧತಿ (ಶ್ವೇ. 6-19, ಬೃ. 3-8-8, 4-4-25, ಮುಂ. 1-1-6, 2-1-2; ತೈ. 2-7-4). ಬೃಹದಾರಣ್ಯಕದಲ್ಲಂತೂ ನೇತಿ ನೇತಿ ಎಂಬಿದು (ಬೃ. 2-3-6, 3-9-26, 4-2-4, 4-4-2) ಪಲ್ಲವಿಯಾಗಿಬಿಟ್ಟಿದೆ. ಈ ಎಲ್ಲಾ ಕಾರಣಗಳಿಂದ ಬ್ರಹ್ಮವೇ ಸತ್ಯವು. ಜಗತ್ತು ಹುಟ್ಟಿಯೇ ಇಲ್ಲ- ಎಂಬಿದೇ ಶ್ರುತಿಸಮ್ಮತ, ಯುಕ್ತಿಸಮ್ಮತ (ಸೂ. ಭಾ. 4-3-14, ಭಾ. ಭಾ. 589, ಕಾ.ಭಾ. 2-26, ಭಾ.ಭಾ.175) ಎಂದು ಶಂಕರರು ನಿರ್ಣಯಿಸಿರುತ್ತಾರೆ.

ಬ್ರಹ್ಮದಲ್ಲಿ ಪ್ರಪಂಚವಾಗುವ ಶಕ್ತಿಯಿದೆ ಎಂಬುದು ಶಂಕರರಿಗೆ ಒಪ್ಪಿಲ್ಲ. ಕಾರ್ಯವಾದ ಪ್ರಪಂಚವು ಕಾರಣಬ್ರಹ್ಮಕ್ಕಿಂತ ಬೇರೆಯಲ್ಲ. ಬ್ರಹ್ಮವು ಕಾರ್ಯವಾಗಿಲ್ಲ (ಸೂ. ಭಾ. 2-1-9, ಭಾ. ಭಾ. 499), ಕಾರ್ಯವು ಬ್ರಹ್ಮಶಕ್ತಿಗಿಂತ ಬೇರೆಯಲ್ಲ, ಆ ಶಕ್ತಿಯು ಬ್ರಹ್ಮಕ್ಕಿಂತ ಬೇರೆಯಲ್ಲ. ಎಲ್ಲವೂ ನಿಜವಾಗಿ ಬ್ರಹ್ಮವೇ (ಸೂ. ಭಾ. 2-1-18, ಭಾ. ಭಾ. 446) ಎಂಬುದು ಅವರ ಮತವು. ಜಗತ್ತಿನ ಉತ್ಪತ್ತ್ಯಾದಿಗಳಿಗೆ ಕಾರಣವೆಂದು ಶ್ರುತಿಯಲ್ಲಿರುವದರಿಂದ ಆ ಬ್ರಹ್ಮದಲ್ಲಿ ಅನೇಕಶಕ್ತಿಗಳಿರಬೇಕು ಎಂಬ ತರ್ಕವನ್ನು ನಿರ್ವಿಶೇಷಶ್ರುತಿಗಳ ಪ್ರಾಬಲ್ಯದ ವಶದಿಂದ ಶಂಕರರು ಖಂಡಿಸಿರುತ್ತಾರೆ (ಸೂ. ಭಾ. 4-3-14, ಭಾ. ಭಾ. 583).

ಚೇತನಾಚೇತನವಿಭಾಗವು ಜಗತ್ತಿನಲ್ಲಿ ತೋರುತ್ತಿರುವದಾದರೂ ಎಲ್ಲವೂ ನಿಜವಾಗಿ ಚೇತನರೂಪವಾದ ಬ್ರಹ್ಮವೇ ಎಂಬುದನ್ನು ಶ್ರುತಿಯ ಆಧಾರದಿಂದ ಶಂಕರರು ಒಪ್ಪಿರುತ್ತಾರೆ (ಸೂ. ಭಾ. 2-1-6. ಭಾ. ಭಾ. 419). ಆದರೆ ಅಚೇತನದಿಂದ ಚೇತನವು ವಿಕಾಸವಾಗುವದೆಂಬುದನ್ನಾಗಲಿ ಚೇತನವಾದ ಮನಸ್ಸು ಅತಿಚೇತನಾವಸ್ಥೆಗೆ ಏರುವದೆಂಬುದನ್ನಾಗಲಿ ಅವರು ಒಪ್ಪಿರುವದಿಲ್ಲ ಏಕೆಂದರೆ ಅವರ ದರ್ಶನದಂತೆ ಚೈತನ್ಯವು ನಿರ್ವಿಶೇಷವಾದ ಸರ್ವಸಾಕ್ಷಿಯಾಗಿರುತ್ತದೆ; ಸಾಕ್ಷ್ಯವಾದ ಮನಸ್ಸು ಮುಂತಾದವುಗಳಲ್ಲಿ ಕಾಣುವ ಬೆಳಕು ಚಿದಾಭಾಸವೇ ಹೊರತು ಚಿತ್ತಲ್ಲ. ಚಿತ್ತು ಅಥವಾ ಜ್ಞಾನವು ದೇಶಕಾಲಾತೀತವಾದ ಅನಂತತತ್ತ್ವವಾಗಿರುವದರಿಂದ ನಿರ್ವಿಕಾರವಾದ ಬ್ರಹ್ಮವೇ ಆಗಿರುತ್ತದೆ; ಚಿತ್ತು ಬ್ರಹ್ಮದ ಗುಣವೂ

ಅಲ್ಲ, ಶಕ್ತಿಯೂ ಅಲ್ಲ (ತೈ. ಭಾ. 2-1, ಭಾ. ಭಾ.106). ನಿತ್ಯನಿರ್ವಿಕಾರವಾದ ಸಾಕ್ಷಿಚೈತನ್ಯವೇ ಉಪನಿಷತ್ಪ್ರತಿಪಾದ್ಯನಾದ ಪುರುಷನು ಅಥವಾ ಅದ್ವಿತೀಯ ಪರಮಾತ್ಮನು ಎಂಬಿದು (ಸೂ. ಭಾ. 1-1-4, ಭಾ. ಭಾ. 54) ಶಂಕರರ ಮತವು. ಈ ಬ್ರಹ್ಮವನ್ನು ಅರಿತವರಿಗೇ ಪರಮ ಪುರುಷಾರ್ಥವು ದೊರಕುವದು ಎಂದು ಅವರು (ತೈ. ಭಾ. 1-1, ಭಾ. ಭಾ 93) ಹೇಳಿರುತ್ತಾರೆ.

ನಿರ್ವಿಶೇಷವಾದ ಬ್ರಹ್ಮವೊಂದೇ ಪರಮಾರ್ಥವು, ಮಿಕ್ಕದ್ದೆಲ್ಲವೂ ಮಾಯಿಕವು - ಎಂಬ ಶಂಕರರ ಕೇವಲಾದ್ವೈತದಲ್ಲಿ ಕೆಲವು ದೋಷಗಳನ್ನು ಅರವಿಂದರು ತರ್ಕಬಲದಿಂದ ತೋರಿಸಿರುವಂತಯೇ ಬ್ರಹ್ಮವು ದ್ವೈತಾದ್ವೈತ ರೂಪವಾದದ್ದು, ಬ್ರಹ್ಮವು ಜಗತ್ತಾಗಿ ಪರಿಣಮಿಸುವ ಶಕ್ತಿಯುಳ್ಳದ್ದು - ಎಂಬ ಭೇದಾಭೇದವಾದದಲ್ಲಿಯೂ ಶಂಕರರು ಕೆಲವು ಯುಕ್ತಿವಿರೋಧಗಳನ್ನೂ ಶ್ರುತಿ ವಿರೋಧಗಳನ್ನೂ ತಮ್ಮ ಭಾಷ್ಯಗಳಲ್ಲಿ ಅಲ್ಲಲ್ಲಿ ತೋರಿಸಿರುತ್ತಾರೆ. ಅನುಭವಾನು ಸಾರಿಯಾದ ತರ್ಕವನ್ನೇ ಒಪ್ಪಬೇಕೆಂಬುದು ಈ ಎರಡು ವಾದಗಳಿಗೂ ಸಮಾನವಾಗಿದೆ.

## 4. ವಿದ್ಯಾವಿದ್ಯೆಗಳು

ಪ್ರತಿಯೊಂದು ದರ್ಶನದಲ್ಲಿಯೂ ವಿದ್ಯಾವಿದ್ಯೆಗಳ ವಿವೇಕವನ್ನು ತಿಳಿಸುವದು ಕರ್ತವ್ಯವಾಗಿರುತ್ತದೆ. ಏಕೆಂದರೆ ತಪ್ಪುತಿಳಿವಳಿಕೆಯನ್ನು ತೆಗೆದುಹಾಕಿ ಸರಿಯಾದ ತಿಳಿವಳಿಕೆಯನ್ನುಂಟು ಮಾಡುವದಕ್ಕೆಂದೇ ದರ್ಶನಕಾರರು ಹೊರಡುತ್ತಾರೆ. ಎಲ್ಲವೂ ಸಚ್ಚಿದಾನಂದ ಬ್ರಹ್ಮವೇ, ಸಚ್ಚಿದಾನಂದಬ್ರಹ್ಮವೇ ಜೀವಜಗತ್ತುಗಳಾಗಿದೆ- ಎಂಬ ಅರವಿಂದದರ್ಶನದಲ್ಲಿ ಅಜ್ಞಾನವು (Ignorance) ಜ್ಞಾನವಾಗುವದಕ್ಕೆ ಹವಣಿಸುವದೆಂಬುದು ಹೇಗೆ ಸರಿಯಾದೀತು? ಸಚ್ಚಿದಾನಂದತತ್ತ್ವದಲ್ಲಾಗಲಿ ಅದರ ರೂಪಾಂತರಗಳಲ್ಲಾಗಲಿ ಅಜ್ಞಾನಕ್ಕೆ ಅವಕಾಶವು ಹೇಗೆ ಉಂಟಾಯಿತು? ಅಜ್ಞಾನವು ಮಿಥ್ಯಾಜ್ಞಾನಕ್ಕೆ (error) ಹೇಗೆ ಕಾರಣವಾಗುತ್ತದೆ?- ಎಂಬ ಪ್ರಶ್ನೆಯು ಎದ್ದುಕೊಳ್ಳುವದು ಸಹಜವಷ್ಟೆ? ಇದಕ್ಕೆ ಉತ್ತರವನ್ನು ಕಂಡುಕೊಳ್ಳುವವರು ಈ ಪ್ರಕ್ರಿಯೆಯ ಜ್ಞಾನತತ್ತ್ವವನ್ನು (epistemology) ವಿಚಾರಿಸುವದು ಅವಶ್ಯವಾಗುತ್ತದೆ.

ಬ್ರಹ್ಮವು ಸಚ್ಚಿದಾನಂದರೂಪವಾಗಿರುವದಷ್ಟೆ? ಅದರ ಚಿದ್ರೂಪವು ಜ್ಞಾನೇಚ್ಛಾಕ್ರಿಯಾಶಕ್ತಿಗಳುಳ್ಳದ್ದು (L.D.I 145). ಅದಕ್ಕೆ ಮಾಯೆಯೆಂದೂ ಹೆಸರು. ಮಾಯಾಶಬ್ದಕ್ಕೆ ಸರ್ವವ್ಯಾಪಕವಾದ ತಿಳಿವಳಿಕೆ ಎಂಬಿದೇ ಮೊದಲಿದ್ದ ಅರ್ಥ; ಈಚೆಗೆ ಅದಕ್ಕೆ ಕುತಂತ್ರ, ಭ್ರಾಂತಿ, ಕಣ್ಣುಕಟ್ಟು- ಎಂಬ ಕೆಟ್ಟರ್ಥವು ಬಂದಿರುತ್ತದೆ (L.D.II 127). ಜಗತ್ತಿನ ಸ್ರಷ್ಟೃವಾದ 'ಮಾಯೆ'ಯೂ ಪುರುಷನ ಮುಂದೆ ತೋರಿಕೊಳ್ಳುವ' ಪ್ರಕೃತಿ'ಯೂ ಈಶ್ವರನ 'ಶಕ್ತಿ'ಯೂ ಈ ಚಿದ್ರೂಪವೇ (L.D. II 37). ಬ್ರಹ್ಮದ ಸದ್ರೂಪದ ದೃಷ್ಟಿಯಿಂದ ನೋಡಿದರೆ ಜಗತ್ತು ಅದರ ಸ್ವರೂಪಸತ್ತೆಯಲ್ಲ (essential truth), ಅದರ ದೃಶ್ಯರೂಪಸತ್ತೆ (phenomenal truth); ಈ ಅರ್ಥದಲ್ಲಿ ಅದನ್ನೂ ಮಾಯೆ ಎಂದು ಕರೆಯಬಹುದು. ಬ್ರಹ್ಮದ ಚಿದ್ರೂಪದ ದೃಷ್ಟಿಯಿಂದ ನೋಡಿದರೆ ಜಗತ್ತು ಪ್ರಕೃತಿಯ ಕ್ರೀಡರೂಪವಾದ (play of Prakriti) ಚಲನೆಯಾಗಿರುತ್ತದೆ; ಇನ್ನು ಬ್ರಹ್ಮದ ಆನಂದದ ದೃಷ್ಟಿಯಿಂದ ನೋಡಿದ ಇದೇ ಜಗತ್ತು ಬ್ರಹ್ಮದ 'ಲೀಲೆ'ಯಾಗಿರುತ್ತದೆ (L.D.129).

ಮಾಯೆಯು ಉತ್ಕೃಷ್ಟವೆಂದೂ ನಿಕೃಷ್ಟವೆಂದೂ ಎರಡು ಬಗೆ. ತಾನೇ ತಾನಾಗಿರುವ ಸರ್ವಾತ್ಮಕಬ್ರಹ್ಮದಿಂದ ಎಲ್ಲವೂ ಒಬ್ಬೊಬ್ಬನಲ್ಲಿಯೂ ಒಬ್ಬೊಬ್ಬನೂ ಎಲ್ಲದರಲ್ಲಿಯೂ ಇರುವ ದೃಶ್ಯಜಗತ್ತು ಉಂಟಾಗಿರುತ್ತದೆ. ಹೀಗೆ ಭಿನ್ನವಾಗಿ ರುವ ಒಂದು ಸತ್ತು ಮತ್ತೊಂದು ಸತ್ತಿನೊಡನೆಯೂ ಒಂದು ಚಿತ್ತು ಮತ್ತೊಂದು ಚಿತ್ತಿನೊಡನೆಯೂ ಒಂದು ಆನಂದವು ಮತ್ತೊಂದು ಆನಂದದೊಡನೆಯೂ ಆಡುತ್ತಿರುವದೆಂಬುದನ್ನು ಕಾಣದಂತೆ ಮರೆಮಾಡಿರುವ ಮಾನಸ ಮಾಯೆಯೇ (mental maya) ನಿಕೃಷ್ಟಮಾಯೆ. ಈ ಮಾಯೆಯನ್ನು ದಾಟಿ ಅತಿಮಾನಸಕ್ರೀಡಾರೂಪವಾದ ಉತ್ಕೃಷ್ಟಮಾಯಾತತ್ತ್ವ (truth of maya) ವನ್ನು ಮುಟ್ಟುವದು ಸಾಧ್ಯವಾಗಿರುತ್ತದೆ. ಮಾಯಾವಾದಿಗಳಾದ ಬೌದ್ಧರೂ ವೇದಾಂತಿಗಳೂ ಈ ಎರಡು ಮಾಯೆಗಳ ತಾರತಮ್ಯವನ್ನು. ಅರಿತುಕೊಳ್ಳದ್ದರಿಂದ ಪ್ರಪಂಚವೆಲ್ಲವೂ ಮಾಯಿಕವೆನ್ನುತ್ತಿದಾರೆ (L.D.I 46). ನಮ್ಮಗಳ ಮನಸ್ಸಿಗೆ ಅವಿದ್ಯೆಯಿಂದಾದ ಪ್ರವಿಭಾಗಗಳೇ ತೋರುತ್ತಿರುತ್ತವೆ; ಅದಕ್ಕೆ ಅನಂತವಾದ ಅಥವಾ ಬ್ರಹ್ಮಾಂಡರೂಪದ ಪೂರ್ಣದ (infinite or cosmic whole) ಅರಿವೇ ಇಲ್ಲ (L.D.357). ಅಧಿಮನಸ್ಸು (overmind) ಎಂಬ ಸಮಷ್ಟಿಮನಸ್ಸು ವಿದ್ಯಾರೂಪವಾದ ಮೂಲಮಾಯೆ, ಮೂಲಸಮಷ್ಟಿಮಾಯೆ (original cos-

mic maya); ಒಂದೊಂದು ತತ್ತ್ವವೂ ತನ್ನತನ್ನ ರೂಪಾಂತರವನ್ನು ಹೊಂದುವದಕ್ಕೆ ಇಂಬುಗೊಡುವ ಸ್ವರೂಪವೇ ಅದಾಗಿರುವದರಿಂದ ಅದರಲ್ಲಿ ಅವಿದ್ಯೆಗೂ ಎಡೆಯಿದೆ. ಅದು ಕೆಳಕ್ಕೆ ಇಳಿದಂತೆಲ್ಲ ಅವಿದ್ಯೆಗೆ ಹತ್ತಿರವಾಗಿ ಕೊನೆಗೆ ಸಮಷ್ಟ್ಯವಿದ್ಯೆ (cosmic ignorance)ಯಾಗಿಬಿಡುತ್ತದೆ. ಅತಿಮನಸ್ಸಿಗೂ ಅಧಿಮನಸ್ಸಿಗೂ ಇರುವಷ್ಟು ನಿಕಟಸಂಬಂಧವು ಅಧಿಮನಸ್ಸಿಗೂ ವೈಯಕ್ತಿಕ ಮನಸ್ಸಿಗೂ ಇರುವದಿಲ್ಲ; ಏಕೆಂದರೆ ವೈಯಕ್ತಿಕ ಮನಸ್ಸು ಬಿಡಿಸಿಬಿಡಿಸಿಯೇ ತಿಳಿದುಕೊಳ್ಳುವ ಅವಿದ್ಯೆಯಾಗಿರುವದರಿಂದ ಅದಕ್ಕೂ ಅಧಿಮನಸ್ಸಿಗೂ ಇರುವ ಸಂಬಂಧವು ಒಂದು ರಹಸ್ಯ (occult)ವಾಗಿರುತ್ತದೆ.

ಈ ದರ್ಶನದಲ್ಲಿ ಅವಿದ್ಯೆಯೆಂದರೇನು, ವಿದ್ಯೆಯೆಂದರೇನು?–ಎಂಬುದನ್ನು ಈಗ ಓದುಗರು ಊಹಿಸಬಹುದಾಗುತ್ತದೆ. ಅವಿದ್ಯೆ ಎಂದರೆ ಜ್ಞಾನಾಭಾವವಲ್ಲ, ಅಚೈತನ್ಯ(Inconscicnce)ವಲ್ಲ. ಪರಿಚ್ಛಿನ್ನವಾದ ಜ್ಞಾನವೇ, ಬಿಡಿಸಿಬಿಡಿಸಿ ಭಾಗಭಾಗವಾಗಿ ಅರಿಯುವ ಜ್ಞಾನವೇ, ಅವಿದ್ಯೆ. ಇದನ್ನು ಅದೇವಿಮಾಯೆಯಾದ 'ಅಚಿತ್ತಿ' ಎಂಬ ಹೆಸರಿನಿಂದ ವೇದದಲ್ಲಿ ಕರೆದಿದೆ (L.D. II 237). ಅಚಿತ್ತಿ ಎಂಬ ಶಬ್ದವು ಹೋಗಿ ಅದರ ಸ್ಥಾನವನ್ನು ಅವಿದ್ಯೆ ಎಂಬ ಶಬ್ದವು ಉಪನಿಷತ್ತಿನಲ್ಲಿ ಅಕ್ರಮಿಸಿಕೊಂಡಾಗ ವಿದ್ಯಾವಿದ್ಯಾಶಬ್ದಗಳ ಅರ್ಥವೂ ಮಾರ್ಪಟ್ಟಿತು; ವಿದ್ಯೆ ಎಂದರೆ ಏಕತ್ವಜ್ಞಾನ, ಅವಿದ್ಯೆ ಎಂದರೆ ಅನೇಕತ್ವಜ್ಞಾನ–ಎಂಬ ಹೊಸ ಅರ್ಥಗಳು ಆಗ ಬಂದವು. ಆಗಲೂ ಈಚಿನ ವೇದಾಂತಿಗಳು ಹೇಳುವಂಥ ಅತಿರೇಕದ ಅರ್ಥವು ಮಾತ್ರ ಅದಕ್ಕಿರಲಿಲ್ಲ; ಅವಿದ್ಯೆಯೆಂದರೆ ಕನಸಿನರಿವಿನಂಥ ಭ್ರಾಂತಿ ಎಂಬ ಮತವು ಉಪನಿಷತ್ತಿನಲ್ಲಿಲ್ಲ ಎಂದು ಅರವಿಂದರ ಹೇಳಿಕೆ (L.D. II 338-239). ಈ ಅವಿದ್ಯಾರೂಪವಾದ ತಿಳಿವಿನಲ್ಲಿ ತಪ್ಪಿಗೆ ಅವಕಾಶವೂ ಇದೆ. ಏಕೆಂದರೆ ಸರಿಯಾಗಿ ನೋಡದಿರುವದು, ನೋಡಿದ್ದರೆ ಕೆಲವು ಭಾಗವನ್ನು ಬಿಟ್ಟುಬಿಡುವದು, ತಪ್ಪಾಗಿ ಆರಿಸಿಕೊಳ್ಳುವದು, ಆರಿಸಿದ್ದನ್ನು ತಪ್ಪಾಗಿ ಜೋಡಿಸಿಕೊಳ್ಳುವದು, ಅದಕ್ಕೆ ಹೊಸ ಅಂಶಗಳನ್ನು ತನಗೂ ಗೊತ್ತಿಲ್ಲದಂತೆಯೆ ಸೇರಿಸಿಕೊಳ್ಳುವದು – ಮುಂತಾದ ಕಾರಣಗಳಿಂದ ಮಿಥ್ಯಾಜ್ಞಾನವು ಆಗುವದೆಂಬುದು ಸ್ವಾಭಾವಿಕ(L.D. II 394)ವಾಗಿದೆ. ಈ ಅವಿದ್ಯೆಯು ಮುಂದುಮುಂದಕ್ಕೆ ತಪ್ಪನ್ನು ತಿದ್ದಿಕೊಂಡು ಶುದ್ಧಜ್ಞಾನರೂಪಕ್ಕೇರುವದಕ್ಕೇ ಉಂಟಾಗಿರುವದರಿಂದ ವಿಕಾಸಕ್ರಮದಲ್ಲಿ ಈ ಅವಿದ್ಯೆಯು ಅನಿವಾರ್ಯವೂ ಅವಶ್ಯವೂ ಆಗಿರುತ್ತದೆ (L.D. II 249).

ಎಲ್ಲವೂ ಜ್ಞಾನವೇ ಆದರೂ ತಾದಾತ್ಮ್ಯದಿಂದ ಅರಿತುಕೊಳ್ಳುವದೇ (Knowledge by identity) ಪೂರ್ಣವಾದ ಜ್ಞಾನ ಅಥವಾ ವಿದ್ಯೆ. ಸಾಕ್ಷಾತ್ಸನ್ನಿಕರ್ಷದಿಂದ ಅರಿತುಕೊಳ್ಳುವದು (direct contact), ಅಥವಾ ಪರಂಪರಾಸಂನಿಕರ್ಷದಿಂದ (indirect contact) ಅರಿತುಕೊಳ್ಳುವದಕ್ಕಿಂತ ಮೇಲೆನಿಸಿರುವಂತೆ ತಾದಾತ್ಮ್ಯದಿಂದ ಅರಿಯುವದು ಎಲ್ಲಕ್ಕೂ ಉತ್ಕೃಷ್ಟವಾದ ಜ್ಞಾನವೆಂಬುದು ಸ್ಪಷ್ಟ. ಇಂದ್ರಿಯಗಳ ಮೂಲಕವಾಗಿ ಮನಸ್ಸಿನಿಂದ ಅರಿಯುವದಕ್ಕಿಂತ ನೇರಾಗಿ ಸ್ವತಂತ್ರವಾದ ಸೂಕ್ಷ್ಮಮನಸ್ಸಿನಿಂದ (sublimi-nal mind) ಅರಿಯುವದು ಮೇಲು; ಆದರೆ ನಮ್ಮೊಳಗಿನ ಪುರುಷತತ್ತ್ವವನ್ನು (spirit or soul) ಅರಿಯುವಾಗ ತಾದಾತ್ಮ್ಯಜ್ಞಾನದಿಂದಾಗುವ ಅನುಭವವು ಪ್ರಾರಂಭವಾಗುವದು, ಅತಿಮನಸ್ಸನ್ನು ಮುಟ್ಟದಾಗ ಅದು ಪೂರ್ಣವಾಗುವದು.

ಈ ಮತದಲ್ಲಿ ಅವಿದ್ಯೆಯ ದ್ವಾರದಿಂದಲೇ ಏರಿ ನಾವು ವಿದ್ಯೆಯನ್ನು ಮುಟ್ಟಬೇಕಾಗಿರುತ್ತದೆಯಾದ್ದರಿಂದ ಅವಿದ್ಯೆಯ ಈ ನಿಚ್ಚಣಿಕೆಯ ವಿಧಾಭೇದಗಳನ್ನು ಅರಿಯುವದು ಲಾಭದಾಯಕವಾಗಿರುತ್ತದೆ. ಜಗತ್ತಿನ ಮೂಲವಾದ ಬ್ರಹ್ಮವನ್ನರಿಯದಿರುವದು ಮೂಲಾವಿದ್ಯೆ (original ig-norance). ದೇಶಕಾಲಾತೀತತತ್ತ್ವವನ್ನರಿಯದೆ ದೇಶಕಾಲದಲ್ಲಿ ತೋರುವ ವಿಕಾರವನ್ನೇ ಪೂರ್ಣತತ್ತ್ವವೆನ್ನುತ್ತಿರುವದು ಜಗದವಿದ್ಯೆ (cosmic igno-rance). ನಮ್ಮ ನಿಜವಾದ ಇರವನ್ನೂ ಅರಿವನ್ನೂ ಸರ್ವೈಕ್ಯವನ್ನೂ ಅರಿಯದೆ ಈಗ ತೋರುವ ಪರಿಚ್ಛಿನ್ನ ಸ್ವರೂಪವೇ ನಮ್ಮ ಆತ್ಮನೆಂಬುದು ಅಹಂಕಾರಿಕಾವಿದ್ಯೆ (egoistic ignorance). ನಾವು ಕಾಲದಲ್ಲಿಯೂ ನಿತ್ಯವೆಂಬುದನ್ನರಿಯದೆ ಗೊತ್ತಾದ ಕಾಲದೇಶಗಳಲ್ಲಿರುವವರು ಎಂದೆಣಿಸುವದು ದೇಶಕಾಲಾವಿದ್ಯೆ (special and .....................). ಈ ಅತ್ಯಲ್ಪಸ್ವರೂಪವನ್ನು ಪೂರ್ಣವಾಗಿ ಅರಿಯದೆ ಅತಿಚೇತವನಾಗಿಯೂ ಅಧಶ್ಚೇತನಾಗಿಯೂ ಅಂತಶ್ಚೇತನವಾಗಿ ಯೂ ಪರಿತಶ್ಚೇತನವಾಗಿಯೂ ಇರುವ ಅಂಶಗಳನ್ನು ಬಿಟ್ಟು – ಮೇಲುಮೇಲೆ ಕಾಣಿಸುದಷ್ಟನೇ ನಮ್ಮ ಪೂರ್ಣಸತ್ತೆಯೆಂದೆಣಿಸಿರುವದು ಮಾನಸಾವಿದ್ಯೆ(). ದೇಶಪ್ರಾಣಮನಸ್ಸುಗಳನ್ನೇ, ಅಥವಾ ಅವುಗಳ ಅಂಶಗಳನ್ನೇ ಪೂರ್ಣಾತ್ಮನೆಂದು ನಂಬಿ ಇವುಗಳ ಸಾರವಾಗಿರುವದು ಯಾವದೆಂಬುದನ್ನರಿಯದೆ ಇರುವದು ರಚನಾವಿದ್ಯೆ (constitutional ignorance). ಈ ಆರು ವಿದ್ಯೆಗಳ

ಫಲವಾಗಿ ತಪ್ಪುತಿಳಿಯುತ್ತಾ ಕಾಮದಿಂದ ನಿಷ್ಫಲಪ್ರಯತ್ನಗಳನ್ನು ಮಾಡುತ್ತಾ ಪ್ರಿಯಾಪ್ರಿಯಗಳ ಹೊಡೆತಕ್ಕೆ ಸಿಕ್ಕಿ .............. ಹಾದಿಯಲ್ಲಿ ಎಡವತ್ತಲೂ ಮುಗ್ಗರಿಸುತ್ತಲೂ ನಡೆಯುತ್ತಿರುವದು ವ್ಯಾವಹಾರಿಕಾವಿದ್ಯೆ (Pratical ignorance). ವ್ಯಾವಹಾರಿಕಾವಿದ್ಯೆಯಿಂದ ಮೇಲುಮೇಲಿನ ಅವಿದ್ಯೆಯನ್ನು ದಾಟುತ್ತಾ ನಿಜವಾದ ತತ್ತ್ವವನ್ನು ಕಂಡುಕೊಳ್ಳುವದೇ ವಿದ್ಯೆ (L. D. II III, 442). ಇದಿಷ್ಟೂ ಅರವಿಂದರ ವಿದ್ಯಾ ವಿದ್ಯಾಪ್ರಕ್ರಿಯೆ.

ಈಗ ಶಂಕರರ ದರ್ಶನವು ಈ ವಿಷಯದಲ್ಲಿ ಏನು ಹೇಳುತ್ತದೆ ಎಂಬುದನ್ನು ನೋಡೋಣ. ಮಾಯಾಶಬ್ದಕ್ಕೆ ವೇದದಲ್ಲಿ ಜ್ಞಾನ ಎಂಬರ್ಥವಿರುವದು ನಿಜ. ಆದರೆ ಆ ಜ್ಞಾನವು ಅವಿದ್ಯಾಮನಯವಾದ ಇಂದ್ರಿಯಗಳ ಜ್ಞಾನ, ಪರಮಾರ್ಥಜ್ಞಾನವಲ್ಲ. 'ಪರಮೇಶ್ವರನು ಮಾಯೆಗಳಿಂದ ಬಹುರೂಪನಾಗಿ ತೋರುತ್ತಾನೆ' (ಬೃ.2-5-1) ಎಂಬ ವಾಕ್ಯಕ್ಕೆ ಪರಮೇಶ್ವರನು ಒಬ್ಬನೇ ಆಗಿದ್ದರೂ ಅವಿದ್ಯೆಯಿಂದ ನಾನಾರೂಪನಾಗಿರುವಂತೆ ಕಾಣಿಸುತ್ತಿದ್ದಾನೆ ಎಂದೇ ಅಭಿಪ್ರಾಯ. ಇಂದ್ರಿಯಗಳು ಅನೇಕ, ಅವುಗಳ ಪ್ರಜ್ಞೆಗಳ ರೂಪದಲ್ಲಿರುವ ಮಾಯೆಗಳೂ ಅನೇಕ (ಬೃ.ಭಾ.2-5-19, ಭಾ,ಭಾ.407, ಮಾಂ.ಕಾ.ಭಾ.3 24, ಭಾ.ಭಾ.172). ಮಾಯೆ ಎಂಬ ಶಬ್ದಕ್ಕೆ ಮತ್ತೊಂದರ್ಥವುಂಟು. ಸರ್ವಜ್ಞನೂ ಸರ್ವಶಕ್ತನೂ ಆಗಿರುವ ಪರಮೇಶ್ವರನಲ್ಲಿ ಅವಿದ್ಯಾಕಲ್ಪಿತವಾಗಿರುವ ನಾಮರೂಪಗಳೇ ಮಾಯೆ. ಈ ಮಾಯೆಯು ಪರಮಾತ್ಮನ ಸ್ವರೂಪವೆಂದಾಗಲಿ ಅವನಿಗಿಂತ ಬೇರೆಯಾಗಿರುವ ತತ್ತ್ವಾಂತರವೆಂದಾಗಲಿ ನಿರ್ವಚನಮಾಡಿ ತಿಳಿಸುವದಕ್ಕೆ ಬರುವಂತಿಲ್ಲ. ಅದನ್ನು ಈಶ್ವರನ ಶಕ್ತಿ, ಪ್ರಕೃತಿ, ಅವ್ಯಕ್ತ, ಆಕಾಶ - ಎಂದು ಮುಂತಾಗಿ ಬೇರೆಬೇರೆಯ ಹೆಸರುಗಳಿಂದ ಶ್ರುತಿಸ್ಮೃತಿಗಳಲ್ಲಿ ಕರೆದಿರುತ್ತದೆ. ಶಕ್ತಿ ಎಂದರೆ ಪರಮೇಶ್ವರನು ತನ್ನ ಕ್ರಿಯೆಗೆ ಉಪಯೋಗಿಸುವ ಒಂದಾನೊಂದು ಸಾಧನವೆಂದು ತಿಳಿಯಬಾರದು; ಪ್ರಪಂಚವುಂಟಾಗುವದಕ್ಕೆ ಈಶ್ವರನನ್ನು ಕಾರಣವಾಗಿ ಎಣಿಸುವಂತೆ ಮಾಡುವ ಬೀಜಶಕ್ತಿಯೇ (Potential seed) ಅದು. ''ಮಾಯಾಂ ತು ಪ್ರಕೃತಿಂ ವಿದ್ಯಾತ್'' (ಶ್ವೇ. 4-10) ಎಂಬುದಕ್ಕೆ ಪ್ರಕೃತಿಯನ್ನು ಮಾಯೆ ಎಂದು ತಿಳಿಯಬೇಕು, ಅದು ಮಾಯೆಯಾದ್ದರಿಂದ ಜಗತ್ತು ತಾನು ತೋರುವ ರೂಪದಲ್ಲಿ ಹುಸಿಯೇ ಎಂದರ್ಥ. ಅರವಿಂದರು ಮಾಯೆಯನ್ನು ಪ್ರಕೃತಿ ಎಂದು ತಿಳಿಯ ಬೇಕು ಎಂದು ಈ ವಾಕ್ಯದ ಅಭಿಪ್ರಾಯವನ್ನು ವರ್ಣಿಸಿರುತ್ತಾರೆ. ಆದರೆ 'ಮಾಯಿನಂ ತು ಮಹೇಶ್ವರಮ್'

ಎಂಬ ವಾಕ್ಯಶೇಷವು ಅವರಿಗೆ ಹೊಂದುವದಿಲ್ಲ; ಏಕೆಂದರೆ ಮಾಯಾವಿಯು ಮಹೇಶ್ವರನು ಎಂದೇನೂ ಅವರ ಮತವಿಲ್ಲ. ಆದ್ದರಿಂದ ಪ್ರಕೃತಿಯೇ ಮಾಯೆ. ಮಹೇಶ್ವರನೇ ಅದನ್ನು ವಶದಲ್ಲಿಟ್ಟುಕೊಂಡಿರುವ ಮಾಯಾವಿಯು ಎಂದು ಅರ್ಥಮಾಡುವದು ಯುಕ್ತವಾಗುತ್ತದೆ. ಗೀತೆಯಲ್ಲಿಯೂ ''ನನ್ನ ದೈವೀಮಾಯೆಯು ದಾಟಲಶಕ್ಯವಾದದ್ದು; ಮಾಯಾವಿಯಾದ ನನ್ನನ್ನೇ ಶರಣುಹೊಂದಿದವರು ಅದನ್ನು ದಾಟುತ್ತಾರೆ'' (ಗೀ.3-14) ಎಂದಿದೆಯಷ್ಟೆ; ಅಲ್ಲಿ ಮಾಯೆ ಎಂದರೆ ಈಶ್ವರಶರಣತೆಯಿಂದ ದಾಟಬೇಕಾದ ಮೋಹಿನೀಶಕ್ತಿ ಎಂದಭಿಪ್ರಾಯವಾಗುವದೇ ಹೊರತು ಪರಮಾತ್ಮನ ಚಿಚ್ಛಕ್ತಿ ಎಂದೇನೂ ಆಗುವದಿಲ್ಲ. ಇದಿಷ್ಟೂ ಮಾಯೆಯ ವಿಚಾರವಾಯಿತು.

ಇನ್ನು ವಿದ್ಯಾವಿದ್ಯೆಗಳ ವಿಚಾರ. ಅವಿದ್ಯೆ ಎಂಬ ಶಬ್ದಕ್ಕೆ ಉಪನಿಷತ್ತುಗಳಲ್ಲಿ ಅನೇಕ ಅರ್ಥಗಳುಂಟು. ಆತ್ಮನು ಈ ಶರೀರವನ್ನು ಬಿಟ್ಟು ಮತ್ತೊಂದಕ್ಕೆ ಹೋಗುವಾಗ ಇದನ್ನು 'ಅವಿದ್ಯೆಯನ್ನು ಹೊಂದಿಸಿ ಹೋಗುತ್ತಾನೆ' (ಬೃ. 4-3-30) ಎಂಬ ವಾಕ್ಯದಲ್ಲಿ ಅವಿದ್ಯೆ ಎಂದರೆ ಅಚೈತನ್ಯವು (inconscience) ಎಂದರ್ಥ. 'ಕನಸಿನಲ್ಲಿರುವವನು ಬಗೆಬಗೆಯ ಭಯವನ್ನು ಅವಿದ್ಯೆಯಿಂದ ಕಾಣುತ್ತಿರುತ್ತಾನೆ' (ಬೃ. 4-3-20) ಎಂಬಲ್ಲಿ ಅವಿದ್ಯೆ ಎಂದರೆ ತಪ್ಪುತಿಳಿವಳಿಕೆ ಎಂದರ್ಥ. 'ವಿದ್ಯೆಯನ್ನೂ ಅವಿದ್ಯೆಯನ್ನೂ ಯಾವನು ಒಟ್ಟಿಗೆ ಅರಿಯುವನೋ ಅವನು ಅವಿದ್ಯೆಯಿಂದ ಮೃತ್ಯುವನ್ನು ದಾಟಿ ವಿದ್ಯೆಯಿಂದ ಅಮೃತವನ್ನು ಹೊಂದುತ್ತಾನೆ' (ಈ.) ಎಂಬ ವಾಕ್ಯಕ್ಕೆ ಬ್ರಹ್ಮದಲ್ಲಿ ಈ ಎರಡನ್ನೂ ಅರಿಯಬೇಕು ಎಂದು ಅರವಿಂದರು ಅರ್ಥವನ್ನು ಮಾಡಿರುತ್ತಾರಷ್ಟೆ; ಅಲ್ಲಿ ಮೂಲದಲ್ಲಿ ಬ್ರಹ್ಮಶಬ್ದವನ್ನು ಅಧ್ಯಾಹಾರಮಾಡಿಕೊಳ್ಳ ಬೇಕಾದ ಕೊರತೆಯಿರುತ್ತದೆ. ಶಂಕರರು ಅವಿದ್ಯೆ ಎಂದರೆ ಕರ್ಮ ಎಂದು ಕಾಣ್ವಪಾಠದಲ್ಲಿಯೂ (ಈ.ಭಾ.11 ಭಾ.ಭಾ.23) ಜ್ಞಾನಕರ್ಮಸಮುಚ್ಚಯವೆಂದು (ಈ. 16) ಮಾಧ್ಯಂದಿನಪಾಠದಲ್ಲಿಯೂ (ಮಾಂ. ಕಾ. ಭಾ. 3-25, ಭಾ. ಭಾ. 173) ಅರ್ಥಮಾಡಿರುತ್ತಾರೆ. ಈ ಎರಡು ಪಾಠಗಳಲ್ಲಿಯೂ ಅವಿದ್ಯೋಪಾಸನೆ, ವಿದ್ಯೋಪಾಸನೆ – ಇವೇ ಪ್ರಕೃತವಾಗಿವೆ; ಆದ್ದರಿಂದ ಇಲ್ಲಿ ಅನುಷ್ಠಾನಸಮುಚ್ಚಯವಿದೆಯೇ ಹೊರತು ಜ್ಞಾನಸಮುಚ್ಚಯವಿಲ್ಲ ಎಂಬುದು ಸ್ಪಷ್ಟವಾಗಿದೆ. ಅರವಿಂದರ ಮತದಲ್ಲಿಯೂ ವ್ಯಷ್ಟಿಜೀವನ ದೃಷ್ಟಿಯಿಂದ ಅವಿದ್ಯೆಯು ರೂಪಾಂತರವನ್ನು ಹೊಂದಿಯೇ ವಿದ್ಯೆಯಾಗಬೇಕಾಗಿದೆಯಾಗಿ

ವಿದ್ಯಾವಿದ್ಯೆಗಳು (knowledge and ignorance) ಜೊತೆಯಲ್ಲಿ ('ಸಹ') ಇರುವದು ಹೇಗೆ? ಎಂಬಿದು ವಿಚಾರಣೀಯವಾಗುತ್ತದೆ.

ಶಂಕರರ ಪ್ರಕ್ರಿಯೆಯಲ್ಲಿ ಪರಮಾರ್ಥವಾದ ಆತ್ಮ. ಅದರಲ್ಲಿ (ತತ್ತ್ವಾನ್ಯತ್ವಾಭ್ಯಾಮನಿರ್ವಚನೀಯವಾಗಿ) ಕಲ್ಪಿತವಾಗಿರುವ ಅನಾತ್ಮ- ಇವೆರಡನ್ನೂ ಬೆರಕೆಮಾಡಿಕೊಂಡಿರುವ ತಪ್ಪುತಿಳಿವಳಿಕೆಯೇ ಜ್ಞಾನರೂಪನಾದ ಅವಿದ್ಯೆ (ಸೂ.ಭಾ.ಭಾ.4). ನಾನು ಪ್ರಮಾತೃ, ದೇಹೇಂದ್ರಿಯಮನಸ್ಸುಗಳುಳ್ಳವನು, ಎಂಬ ತಪ್ಪುತಿಳಿವನ್ನು ಇಟ್ಟುಕೊಳ್ಳದೆ ವಿಚಾರಸಾಮಾನ್ಯವೇ ಉಂಟಾಗುವಂತಿಲ್ಲವಾದ್ದರಿಂದ ಅವಿದ್ಯೆಯ ಸ್ವರೂಪವನ್ನು ಕುರಿತು ಮಾಡುವ ವಿಚಾರವೂ ಅವಿದ್ಯೆಯನ್ನಿಟ್ಟುಕೊಂಡೇ ಹೊರಟಿರುತ್ತದೆ ಎಂದು ಒಪ್ಪಬೇಕಾಗುವದು. ವಿದ್ಯೆ ಎಂದರೆ ವಸ್ತುಸ್ವರೂಪನಿರ್ಧಾರಣ (ಸೂ.ಭಾ.4). ಆತ್ಮವಸ್ತುವು ನಿರ್ವಿಶೇಷವು, ಅನಾತ್ಮವು ಮಾಯಾಸ್ವಪ್ನಾದಿಗಳಂತೆ ಅಸತ್ತಾಗಿ ತೋರುತ್ತಿರುವದು (ಗೀ. ಭಾ. 13-26, ಭಾ. ಭಾ. 283) ಎಂಬ ನಿರ್ಣಯವೇ ವಿದ್ಯೆಯ ಸ್ವರೂಪವು. ಈ ಶಾಸ್ತ್ರೀಯ ವ್ಯವಹಾರವೂ ಅವಿದ್ಯಾಭೂಮಿಯಲ್ಲಿಯೇ (ಸೂ. ಭಾ. ಭಾ. 5). ಮಿಥ್ಯಾಜ್ಞಾನರೂಪವಾದ ಅವಿದ್ಯೆಗೆ ಆತ್ಮಾನಾತ್ಮಗಳನ್ನು ವಿಂಗಡಿಸಿಕೊಳ್ಳದಿರುವ ವಿವೇಕಾಭಾವವೇ ನಿಮಿತ್ತವು (ಸೂ.ಭಾ.1, ಗೀ.ಭಾ.13-26, ಭಾ.ಭಾ.283). ಆದ್ದರಿಂದ ವಿವೇಕಾಭಾವವೂ ಒಂದರ್ಥದಲ್ಲಿ ಅವಿದ್ಯೆಯೇ. ಜ್ಞಾನಾಭಾವ, ಸಂಶಯಜ್ಞಾನ, ಮಿಥ್ಯಾಜ್ಞಾನ- ಈ ಮೂರು ಅವಿದ್ಯೆಗಳೂ ವಿದ್ಯೆಯ ಬೆಳಕುಬಿದ್ದಾಗ ತೊಲಗುವ ಕತ್ತಲೆಯಾಗಿವೆ (ಗೀ.ಭಾ.13-2 ಭಾ.ಭಾ.218).

ಆತ್ಮನಿಗೆ ಜಾಗ್ರತ್ಸ್ವಪ್ನಸುಷುಪ್ತಿಗಳೆಂಬ ಅವಸ್ಥೆಗಳನ್ನನುಭವಿಸುವ ರೂಪವು ಹುಸಿ, ಚೈತನ್ಯಸ್ವರೂಪವು ಮಾತ್ರ ಪರಮಾರ್ಥವು; ಏಕೆಂದರೆ ಈ ರೂಪಗಳು ಹಗ್ಗದಲ್ಲಿ ತೋರುವ ಸರ್ಪಾದಿಗಳಂತೆ ವ್ಯಭಿಚರಿತವಾಗಿರುತ್ತವೆ, ಚೈತನ್ಯಸ್ವರೂಪವು ಮಾತ್ರ ಯಾವಾಗಲೂ ಒಂದೇ ರೂಪದಲ್ಲಿರುತ್ತದೆ (ಮಾಂ. ಭಾ. 7, ಭಾ. ಭಾ.41) ಎಂಬ ಸಾರ್ವತ್ರಿಕಾನುಭವಸಮ್ಮತವಾದ ಯುಕ್ತಿಯನ್ನು ಶಂಕರರು ಒಡ್ಡಿರುತ್ತಾರೆ. ಜಾಗ್ರದ್ರೂಪಕ್ಕೂ ಸ್ವಾಪ್ನರೂಪಕ್ಕೂ ತಾರತಮ್ಯವಿರುವಂತೆ ಕಂಡರೂ ನಿಜವಾಗಿ ಅವಕ್ಕೆ ಯಾವ ಹೆಚ್ಚುಕಡಿಮೆಯೂ ಇರುವದಿಲ್ಲ ಎಂದು ಅನುಭವದ ಆಧಾರದಿಂದ ವೈತಥ್ಯಪ್ರಕರಣದಲ್ಲಿಯೂ ಸೂತ್ರಭಾಷ್ಯದಲ್ಲಿಯೂ (ಸೂ.ಭಾ.3-2-4, ಭಾ.ಭಾ.259) ಅವರು ತಿಳಿಸಿಕೊಟ್ಟಿರುತ್ತಾರೆ. ಅವಸ್ಥಾತ್ರಯವೂ

ಮಾಯಿಕವೆಂಬುದು ಮಾಂಡೂಕ್ಯ, ಐತರೇಯ, ಬೃಹದಾರಣ್ಯಕಗಳಲ್ಲಿ ಸ್ಫುಟವಾಗಿದೆ ಎಂಬುದು ಶಂಕರರ ಅಭಿಪ್ರಾಯ. ಈ ಮಾಯಾವಾದವನ್ನು ಶಂಕರರು ಬೌದ್ಧರಿಂದ ತೆಗೆದುಕೊಂಡು ಪರಿಪೂರ್ತಿಗೊಳಿದರೆಂದು ಉಳಿದ ಕೆಲವರು ಆಚಾರ್ಯರುಗಳಂತೆ ಅರವಿಂದರೂ ಅಭಿಪ್ರಾಯಪಟ್ಟಿರುತ್ತಾರೆ. ಇದು ಐತಿಹಾಸಿಕರು ನಿರ್ಣಯಿಸಬೇಕಾದ ವಿಷಯವಾಗಿದೆ. ಆದರೆ ಕನಸಿಗೂ ಎಚ್ಚರಕ್ಕೂ ತಾರತಮ್ಯವುಂಟೆಂದು ಅರವಿಂದರು ಯುಕ್ತಿಯಿಂದ ತೋರಿಸುವದಕ್ಕೆ ಹೊರಟಿರುವದು (L.D.II 153, 154) ಎಚ್ಚರದ ದೃಷ್ಟಿಯಿಂದ ನೋಡಿದ ಪಕ್ಷಪಾತದ ದೃಷ್ಟಿಯಿಂದ ಎಂದು ವೈತಥ್ಯಪ್ರಕರಣವನ್ನು ವಿಮರ್ಶಿಸಿದವರಿಗೆ ಹೊಳೆಯದೆ ಇರದು. ಈ ಎರಡವಸ್ಥೆಗಳೂ ತತ್ಕಾಲಕ್ಕೆ ಎಚ್ಚರವೆಂದೇ ತೋರುತ್ತಾ ಸರ್ವಾಂಶದಲ್ಲಿಯೂ ತಮ್ಮತಮ್ಮ ಕಾಲಕ್ಕೆ ಸಮವಾಗಿರುವದೆಂಬುದನ್ನು ಗೌಡಪಾದರೂ ಶಂಕರರೂ ಅನುಭವಕ್ಕೆ ಹೊಂದಿಸಿ ತೋರಿಸಿಕೊಟ್ಟಿರುತ್ತಾರೆ. ಸ್ವಪ್ನವು ಅರೆಯರಿವಿನ ಸ್ಥಿತಿ, ಸುಷುಪ್ತಿಯು ಮರವಿನ ಸ್ಥಿತಿ ಎಂಬ ಅಭಿಪ್ರಾಯವನ್ನು ಹೊರಪಡಿಸಿರುವನು; ಮನೋವಿಶ್ಲೇಷಣವೇ (psyco-analysis)- ಮುಂತಾದ ವೈಜ್ಞಾನಿಕರ ಪ್ರಯೋಗಗಳ ಆಧಾರದಿಂದ ಸ್ವಪ್ನವೂ ಸತ್ಯವೆಂದು ಸಾಧಿಸಿರುವದು; ಸುಷುಪ್ತಿಯಲ್ಲಿಯೂ ಕನಸುಗಳಿರುತ್ತವೆ ಎಂದು ಅಗ್ರಹವನ್ನು ತೊಟ್ಟಿರುವದು (L.D.II 155-163)- ಇವೆಲ್ಲ ಜಾಗ್ರದ್ದೃಷ್ಟಿಯಿಂದ ನೋಡಿ ಮಾಡಿದ ತೀರ್ಮಾನಗಳೆಂಬುದು ಶಂಕರರ ಪ್ರಕ್ರಿಯೆಯನ್ನೂ ಅರವಿಂದರ ಪ್ರಕ್ರಿಯೆಯನ್ನೂ ತುಲನಮಾಡುವ ವಿಮರ್ಶಕರಿಗೆ ತೋರದೆ ಇರದು.

ಮೂರವಸ್ಥೆಗಳನ್ನೂ ಸಮದೃಷ್ಟಿಯಿಂದ ನೋಡದೆ ಇರುವದು ಅರವಿಂದರ ಅವಸ್ಥಾತ್ರಯಪರೀಕ್ಷೆಯಲ್ಲಿರುವ ಒಂದು ದೊಡ್ಡ ಲೋಪವಾಗಿರುತ್ತದೆ. ಜಾಗ್ರತ್ಸ್ವಪ್ನಗಳೆಂಬ ಅವಸ್ಥೆಗಳಲ್ಲಿ ಸಮಾನವಾಗಿಯೇ ದೇಶಕಾಲನಿಮಿತ್ತಗಳು ತೋರುತ್ತಿದ್ದರೂ ಜಾಗ್ರತ್ಸ್ವಪ್ನಗಳಿಗೆ ಕಾರ್ಯಕಾರಣಭಾವವನ್ನು ಕಲ್ಪಿಸಿರುವದೂ ಜಾಗ್ರತ್ಸ್ವಪ್ನಸುಷುಪ್ತಿಗಳು ಮೂರು ಬೇರೆಬೇರೆಯ ಚೈತನ್ಯಾವಸ್ಥೆಗಳು ಎಂದು ಕಲ್ಪಿಸಿರುವದೂ ಅನುಭವದ ಆಪಲಾಪವಾಗಿದೆ. ಏಕೆಂದರೆ ಅವಸ್ಥೆಗಳಿಗೆ ಅನ್ಯೋನ್ಯವ್ಯಭಿಚಾರವೂ ಆತ್ಮನಿಗೆ ಅವ್ಯಭಿಚರಿತತ್ವವೂ ಸರ್ವಾನುಭವಸಿದ್ಧವಾಗಿದೆ. ಹೀಗಿರುವದರಿಂದ ಚೈತನ್ಯಕ್ಕೆ ಭೂಮಿಕೆಗಳನ್ನಾಗಲಿ (grades) ಅವಸ್ಥೆಗಳನ್ನಾಗಲಿ (states) ಕಲ್ಪಿಸುವದಕ್ಕೆ (L.D. II 162) ಯಾವ ಅನುಭವದ ಆಧಾರವೂ

ಕಾಣುವದಿಲ್ಲ. ಶಂಕರರು ಈ ಅವಸ್ಥಾತ್ರಯಾನುಭವದ ಆಧಾರದಿಂದಲೇ ಅದ್ವಿತೀಯಾತ್ಮಚೈತನ್ಯವೊಂದೇ ಪರಮಾರ್ಥ ಎಂದು ನಿರ್ಣಯಿಸಿರುತ್ತಾರೆ.

ಅವಿದ್ಯೆಯಲ್ಲಿ ಅನೇಕಾಕಾರಗಳನ್ನು ಕಲ್ಪಿಸಿರುವದು ಅರವಿಂದಪ್ರಕ್ರಿಯೆಯ ಒಂದು ವಿಶೇಷವಾಗಿರುತ್ತದೆ. ಈ ಅವಿದ್ಯಾವಿಶೇಷಗಳನ್ನು ಶಂಕರರ ಅನುಯಾಯಿಗಳು ವ್ಯವಹಾರದಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳಬೇಕಾದದ್ದು ಯುಕ್ತವೇ ಆಗಿರುತ್ತದೆ. ಆದರೆ ಈ ಅವಿದ್ಯೆಗಳು ಕ್ರಮಕ್ರಮವಾಗಿ ವಿಕಾಸವನ್ನು ಹೊಂದುವವೆಂಬುದಾಗಲಿ ಅವಿದ್ಯೆಯು ವಿದ್ಯಾರೂಪಕ್ಕೆ ತಿರುಗುವದೆಂಬುದಾಗಲಿ ಶಂಕರರಿಗೆ ಸಮ್ಮತವಾಗಲಾರದು. ಸುರೇಶ್ವರರು ತಮ್ಮ ಸಂಬಂಧವಾರ್ತಿಕದಲ್ಲಿ ಹೇಳಿರುವಂತೆ ನಿಗಿಷ್ಪ್ರಪಂರುಚಾತ್ಮನೇ ನಾನು ಎಂಬ ಜ್ಞಾನವು ವೇದಾಂತವಾಕ್ಯದಿಂದ ಆಯಿತೆಂದರೆ ಅವಿದ್ಯೆಯಾಗಲಿ ಅದರ ಕಾರ್ಯವಾಗಲಿ ಹಿಂದೆ ಇರಲಿಲ್ಲ, ಈಗ ಇಲ್ಲ, ಮುಂದೆಯೂ ಇರುವದಿಲ್ಲ.

## 5. ಸಾಧನವೂ ಫಲವೂ

ಯಾವದಾದರೊಂದು ತತ್ತ್ವಶಾಸ್ತ್ರದ ಪ್ರಕ್ರಿಯೆಯ ನಿಜವಾದ ಯೋಗ್ಯತೆಯನ್ನು ಪರೀಕ್ಷಿಸುವದಕ್ಕೆ ಅನುಭವದ ಒರೆಗಲ್ಲಿಗೆ ಹಚ್ಚುವದಲ್ಲದೆ ಈಗಿನ ಜನ ಜೀವನಕ್ಕೆ ಹೊಂದುವಂತೆ ಸುಸ್ಪಷ್ಟವಾದ ಸಾಧನಫಲಗಳ ವಿವರವನ್ನು ಆ ಪ್ರಕ್ರಿಯೆಯಲ್ಲಿ ಎಷ್ಟರಮಟ್ಟಿಗೆ ವಿವರಿಸಿದೆ ಎಂಬುದನ್ನು ತಿಳಿದುಕೊಳ್ಳುವದೂ ಅತ್ಯವಶ್ಯವಾಗಿರುತ್ತದೆ. ಅರವಿಂದರು ತಮ್ಮ ಗ್ರಂಥರಾಜವಾದ ‘ಭಾಗವತ ಜೀವನ’ (Life Divine) ಎಂಬ ಪುಸ್ತಕವನ್ನು ಈ ಗುರಿಯನ್ನೇ ಮುಖ್ಯವಾಗಿಟ್ಟುಕೊಂಡು ಬರೆದಿರುವದರಿಂದ ಸಾಧಕರಾದವರು ಯಾವದೊಂದು ವಿಮರ್ಶೆಯಿಂದಲಾದರೂ ಅವರ ಪ್ರಕ್ರಿಯೆಯ ಬೆಲೆಯನ್ನು ಕಟ್ಟುವದಕ್ಕೆ ಹೋಗುವವರ ಬದಲು ಅವರು ಉಪದೇಶಿಸಿರುವ ಸಾಧನಗಳನ್ನು ಅನುಷ್ಠಾನ ಮಾಡಿಯೇ ನಿರ್ಣಯಿಸಬೇಕೆಂಬ ಸದುದ್ದೇಶವುಳ್ಳವರಾಗುವದು ಮೇಲು. ಈ ದೃಷ್ಟಿಯಿಂದ ಶ್ರೀಗಳಾದ ಪ್ರಹ್ಲಾದ ನರೇಗಲ್ಲ, ವಸಂತಕುಲಕರ್ಣಿ, ದೇಸಾಯಿ ದತ್ತಮೂರ್ತಿ, ವಾಳವೇಕರ್ ಮತ್ತು ಆದಮ ಸಾಹೇಬ – ಇವರುಗಳು ‘ಸಮರ್ಪಣ’ದ ಮೂರು ಸಂಪುಟಗಳಲ್ಲಿ ಬರೆದಿರುವ ಲೇಖನಗಳು ಮನನೀಯವಾಗಿರುತ್ತವೆ.

ಅರವಿಂದರು ಉಪದೇಶಿಸಿರುವ ಸಾಧನಗಳಲ್ಲಿ ಅಂತಃಕರಣದ ಬುದ್ಧಿ, ವೇದನಾ ಮತ್ತು ಸಂಕಲ್ಪ - ಎಂಬ ಮೂರು ಭಾಗಗಳಿಗೂ ಸಮವಾಗಿ ಬೆಲೆ ಕೊಟ್ಟಿರುತ್ತದೆ (L.D.II ಅಧ್ಯಾಯ XXV). ಅವರ ಅಭಿಪ್ರಾಯದಂತೆ ಅವಿದ್ಯೆ ಎಂದರೆ ಪರಿಚ್ಛಿನ್ನಜ್ಞಾನವೇ ಆಗಿದೆ. ಅದರ ಸ್ವಭಾವವೆಂದರೆ ನಮ್ಮ ಪರಿಪೂರ್ಣತೆಯ ಸ್ವಭಾವದಿಂದ ನಮ್ಮನ್ನು ಬೇರ್ಪಡಿಸಿಟ್ಟಿರುವದು (L. D. II 415). ಆದ್ದರಿಂದ ಈಗಿನ ಪರಿಚ್ಛೇದವೂ ಅಪೂರ್ಣತೆಯೂ ಹೋಗಿ ಅವುಗಳ ಸ್ಥಾನದಲ್ಲಿ ಸ್ವಾಭಾವಿಕವಾದ ಪರಿಪೂರ್ಣಜ್ಞಾನವುಂಟಾಗುವದೇ ಪುರುಷಾರ್ಥವೆಂದು ತಾನೇ ಏರ್ಪಡುತ್ತದೆ. ಈ ಜ್ಞಾನವು ಈಗ ಇಲ್ಲದೆ ಇದ್ದು ಹೊಸದಾಗಿ ಸೃಷ್ಟಿಯಾಗತಕ್ಕದ್ದಲ್ಲ, ಕಲಿತುಕೊಳ್ಳತಕ್ಕದ್ದಲ್ಲ, ಸಂಪಾದಿಸತಕ್ಕದ್ದಲ್ಲ, ಶೋಧನೆ ಮಾಡಿ ನಿರ್ಮಿಸಿಕೊಳ್ಳತಕ್ಕದ್ದಲ್ಲ ಅಥವಾ ಮನಸ್ಸಿನಿಂದ ಕಟ್ಟಬೇಕಾದದ್ದಲ್ಲ; ಅವನ್ನು ಕಂಡುಕೊಳ್ಳಬೇಕು, ಅನಾವರಣಮಾಡಬೇಕು. ಅಧ್ಯಾತ್ಮಿಕಸಾಧನಕ್ಕೆ ಅದು ತಾನೇ ಪ್ರಕಟವಾಗತಕ್ಕದ್ದು. (L. D. II 115).

ಅತೀಂದ್ರಿಯವಾದ ಸಚ್ಚಿದಾನಂದತತ್ತ್ವವೇ, ಸಮಷ್ಟಿಪ್ರಪಂಚದ ಆತ್ಮನಾಗಿರುವ ಈಶ್ವರತತ್ತ್ವವೂ, ನಮ್ಮ ವ್ಯಕ್ತಿಗತಾತ್ಮನೂ ಆಗಿರುವದೆಂಬುದನ್ನು ಮನಗಂಡು, ಸಾಧನವನ್ನು ಮಾಡಬೇಕಾಗಿರುತ್ತದೆ. ಈ ಲೋಕ, ಪರಲೋಕಗಳು ಮತ್ತು ಅತಿಲೋಕವಾದ ಪರತತ್ತ್ವ - ಇವುಗಳಿಗೆಲ್ಲ ಸಮಾನವಾದ ಬೆಲೆಯಿರಬೇಕು. ಅಚೇತನದಲ್ಲಿ ಸಂಕುಚಿತವಾಗಿರುವ ಚೇತನವು. ಅವಿದ್ಯಾವಸ್ಥೆಗೆ ಏರಿ. ತನ್ನ ಜ್ಞಾನಶಕ್ತಿಗಳು ಪರಿಪೂರ್ಣತೆಯ ವಿಕಾಸಕ್ಕೆ ಏರುವದೇ ಚೇತನದ ವಿಕಾಸಕ್ರಮವೆಂಬುದನ್ನು ಲೆಕ್ಕದಲ್ಲಿಟ್ಟುಕೊಂಡಿರಬೇಕು. ನಮ್ಮ ಐಹಿಕಜೀವನವು ಎಲ್ಲಾ ಬಗೆಯಿಂದಲೂ ಪರಿಪೂರ್ಣತೆಯನ್ನು ಹೊಂದಿದ ಭಾಗವತ ಜೀವನವನ್ನೇ ಕೊನೆಗೆ ಮುಟ್ಟಬೇಕಾಗಿರುತ್ತದೆ. ಇಲ್ಲಿಯೇ ಪರಮಶಾಂತಿಸಮಾಧಿಗಳನ್ನು ಮುಟ್ಟುವದಕ್ಕೆಂದಾಗಲಿ ಈಶಸಾಂನಿಧ್ಯದ ಆನಂದವನ್ನು ಪಡೆಯುವದಕ್ಕೆಂದಾಗಲಿ ಇಹಜೀವನವನ್ನು ಲೆಕ್ಕಿಸಿದೆ ಹಿಂತೆರಳುವದಕ್ಕೂ ಬರುತ್ತದೆ; ಆದರೆ ಈ ಜೀವನದ ಪರಮೋದ್ದೇಶವೇನೂ ಆ ನಿವೃತ್ತಿಗಳಲ್ಲ (L. D. II 473-174). ಪರತತ್ತ್ವವು ಸ್ವತಃಸಿದ್ಧವೂ ಸ್ವಯಂಪೂರ್ಣವೂ ಆಗಿದ್ದರೂ ಅದನ್ನು ಅದರ ವಿಭೂತಿಗಳೇ ಆಗಿರುವ ಪುರುಷ ಮತ್ತು ಪ್ರಪಂಚ ಇವೆರಡರ ಮೂಲಕವೇ ಅರಿತುಕೊಳ್ಳಬೇಕಾಗಿರುತ್ತದೆ (L. D. II 473-474).

ಜೀವನಿಗೆ ಅಮೃತತ್ವಸ್ವಭಾವವೇ ಸ್ವಾಭಾವಿಕವಾಗಿದ್ದರೂ ಅದನ್ನು ಚೇತನ ವಿಕಾಸಕ್ರಮದಿಂದಲೇ ಕಂಡುಕೊಳ್ಳಬೇಕಾಗಿರುತ್ತದೆ. ಜನ್ಮಾಂತರವಾದಕ್ಕೆ ಈ ದೃಷ್ಟಿಯಿಂದ ಬಹಳ ಬೆಲೆಯಿದೆ. ಪ್ರಪಂಚವು ಮಾಯಿಕವೆಂಬ ವೇದಾಂತದಲ್ಲಾಗಲಿ, ಕ್ಷಣಿಕವಿಜ್ಞಾನವನ್ನೊಪ್ಪುವ ಬೌದ್ಧವಾದದಲ್ಲಾಗಲಿ, ಜನ್ಮಾಂತರ ಪ್ರಾಪ್ತಿಗೆ ಪ್ರಯೋಜನವೇನೂ ಇರುವದಿಲ್ಲ. ಅವರ ಮತದಲ್ಲಿ ಮುಕ್ತಿಯು ಕೂಡ ಮಿಥ್ಯೆಯೇ ಆಗಿರುತ್ತದೆ. (L. D. II 559-560). ವಿಕಾಸವಾದದಲ್ಲಿ ಇದಕ್ಕೆ ಸಂಪೂರ್ಣವಾದ ಬೆಲೆಯುಂಟು (L. D. II 567), ಲೋಕಾಂತರವಾದಕ್ಕೂ ಬೆಲೆಯುಂಟು (L. D. II, ಅಧ್ಯಾಯ XXII).

ಚೇತನವಿಕಾಸಕ್ಕೆ ಈವರೆಗೆ ಉಪಯೋಗಿಸಿರುವ ಕ್ರಮಗಳು ನಾಲ್ಕು ಎಂದು ಅರವಿಂದರು ಪರಿಗಣನೆಮಾಡಿರುತ್ತಾರೆ: ಮತಾವಲಂಬನೆ (Religion), ಗುಪ್ತವಿದ್ಯೆ (Occultism), ತತ್ತ್ವವಿಚಾರ (Spiritual Thought), ಅಧ್ಯಾತ್ಮಾನುಭವ (Inner realisation and experience). ಈ ಮಾರ್ಗಗಳು ಕೆಲವು ವೇಳೆ ಸ್ವತಂತ್ರವಾಗಿರುವದಕ್ಕೆ ಪ್ರಯತ್ನಿಸಿವೆಯಾದರೂ ಇದಕ್ಕೆ ಪರಸ್ಪರಸಹಾಯವೂ ಉಂಟಾಗಿದೆ. ಇವುಗಳಲ್ಲಿ ನಾಲ್ಕನೆಯದೇ ಬಹಳ ಮುಖ್ಯವಾದದ್ದು (L. D. II 717). ಅದಕ್ಕೆ ಹಿಂದಿನ ಮೂರೂ ದ್ವಾರಗಳಾಗಿ ರುತ್ತವೆ. ಈವರೆಗಿನ ಅನುಭವದ ಪರಕಾಷ್ಠೆಎಂದರೆ ಸರ್ವಸಾಧನಗಳಿಂದಲೂ ಸರ್ವಾತ್ಮಭಾವವನ್ನು ಪಡೆದು ಈಶ್ವರತತ್ತ್ವದಲ್ಲಿ ಸಾಯುಜ್ಯಭಾವನೆಯನ್ನು ಪಡೆಯುವದು. ಇದೇ ಗೀತೆಯನ್ನು ಉಪದೇಶಿಸಿರುವ ಹೆಗ್ಗುರಿ? (L. D. II 719).

ಹಿಂದಿನ ಸಾಧನಗಳೆಲ್ಲವನ್ನೂ ಉಪಯೋಗಿಸಿಕೊಂಡು ಅರವಿಂದರು ತಮ್ಮದೇ ಆದ ಒಂದು ಹೊಸ ಯೋಗವನ್ನು ಉಪದೇಶಿಸಿರುತ್ತಾರೆ. ಅವರು ಉಪದೇಶಿಸಿರುವದರಲ್ಲಿ ಹೊಸದೆಂಬುದು ಏನೇನೆಂದರೆ ಅವರ ಉತ್ತರವಿದು: (1) ಈ ಯೋಗಕ್ಕೆ ಪರಲೋಕಪ್ರಾಪ್ತಿಯಾಗಲಿ ನಿರ್ವಾಣವಾಗಲಿ ಗುರಿಯಲ್ಲ; ಪರಿಪೂರ್ಣವಾದ ಭಾಗವತಜೀವನವೇ ಅದಕ್ಕೆ ಗುರಿ. (2) ಈ ಯೋಗಕ್ಕೆ ಒಬ್ಬೊಬ್ಬ ವ್ಯಕ್ತಿಗೆ ಸಾಕ್ಷಾತ್ಕಾರವನ್ನು ತಂದುಕೊಡುವದು ಉದ್ದೇಶವಲ್ಲ. ಈ ಲೋಕದ ಜನರಿಗೆಲ್ಲ ಒಂದಾನೊಂದು ಜ್ಞಾನಶಕ್ತಿಯನ್ನು ತಂದುಕೊಡುವದೇ ಇಲ್ಲಿ ಮುಖ್ಯೋದ್ದೇಶ. ಇದುವರೆಗಿನ ಸಾಧನಗಳಿಂದ ಈ ಶಕ್ತಿಯು ಜನಜೀವನದಲ್ಲಿ

ಸುವ್ಯವಸ್ಥಿತವಾಗಿ ವ್ಯಾಪಾರಮಾಡುತ್ತಲೇ ಇಲ್ಲ. (3) ಈ ಉದ್ದೇಶವು ನೆರವೇರುವದಕ್ಕೆ ಪರಿಪೂರ್ಣವಾಗಿರುವ ಜ್ಞಾನವನ್ನು ಪೂರ್ಣವಾಗಿ ಮಾರ್ಪಡಿಸುವ – ಪ್ರಕ್ರಿಯೆಯೊಂದನ್ನು ಇಲ್ಲಿ ಹೇಳಿರುತ್ತದೆ. ಹಳೆಯ ಮಾರ್ಗಗಳನ್ನು ಮಾತ್ರ ತುಳಿದರೆ ಆಗಲಿಲ್ಲ. ಹೊಸದಾಗಿರುವ ಸಾಧನಗಳೂ ಇಲ್ಲಿರುತ್ತವೆ (L. D 26-28).

ಅತಿಮಾನಸಸ್ಥಿತಿಯನ್ನು ಮುಟ್ಟುವ ಕ್ರಮಗಳನ್ನೂ ಭಾಗವತಜೀವನದ ವಿವರವನ್ನೂ 'ಭಾಗವತಜೀವನ'[1] (Life Divine) ಗ್ರಂಥದ ಕೊನೆಯಲ್ಲಿ ಕಾಣಬಹುದು. ಭಾಗವತಜೀವನದಲ್ಲಿ ನಮ್ಮ ಪರಿಪೂರ್ಣತೆಯು ನಮಗೆ ಸಿಕ್ಕಿರುವದು; ನಮ್ಮ ಸುತ್ತುವೆಳೆಯವೆಲ್ಲದರೊಡನೆಯೂ ನಮ್ಮ ಸಂಬಂಧವು ಪರಿಪೂರ್ಣವಾಗಿರುವದು; ಮಾನವಜೀವನದಲ್ಲಿ ಮಾರ್ಪಾಡಾಗಿ ಭೂಲೋಕದ ಜನರ ಜೀವನವೇ ಹೊಸ ಪರಿಯದಾಗುವದು. ಅನೇಕಜ್ಞಾನಿಗಳಿರುವ ಒಂದಾನೊಂದು ಸಾಮಾಜಿಕ ಜೀವನವು ಆಗ ಏರ್ಪಡುವದು; ಅವರಲ್ಲೆಲ್ಲ ಋತಚಿತ್ತೆಂಬ ಅರಿವು ವಿಕಸಿತವಾಗಿರುವದು, ಅವರೆಲ್ಲರೂ ಒಂದೇ ಪರಮಾರ್ಥದ ಅಂಶಗಳಾಗಿರುವ ಆತ್ಮರಾಗಿರುವೆಂಬ ಅರಿವು ಎಲ್ಲರಿಗೂ ಇರುವುದು (L.D.II 898, 899) - ಎಂದು ಮುಂತಾಗಿ ಆ ದಿವ್ಯಜೀವನವನ್ನು ಅರವಿಂದರು ಹೊಗಳಿರುತ್ತಾರೆ.

ಈಗ ಶಾಂಕರವೇದಾಂತದಲ್ಲಿ ಸಾಧನಫಲಗಳ ಸ್ವರೂಪವು ಹೇಗಿರುವದೆಂಬುದನ್ನು ಸಂಗ್ರಹವಾಗಿ ತಿಳಿಯೋಣ. ವೇದೋಕ್ತವಾದ ಕರ್ಮ, ಉಪಾಸನೆ, ಮತ್ತು ಜ್ಞಾನ – ಇವು ಮೂರೂ ಸಾಧನಗಳಲ್ಲಿ ಪ್ರಧಾನವಾಗಿರುತ್ತವೆ. ಕರ್ಮಯೋಗವೆಂದರೆ ''ಕರ್ಮದಲ್ಲಿ ನಾನು ಮಾಡುವನೆಂಬ ಸಂಗವಿಲ್ಲದೆ ದ್ವಂದ್ವಗಳನ್ನು ಮೀರಿ ಈಶ್ವರಾರಾಧನಾರ್ಥವಾಗಿ ಕರ್ಮಗಳನ್ನು ಮಾಡುವದು (ಗೀ. ಭಾ. 2–39, ಭಾ. ಭಾ. 76). ಕರ್ಮಗಳು ಎಂದರೆ ಇಲ್ಲಿ ವೇದೋಕ್ತಕರ್ಮಗಳಾದ ಯಜ್ಞದಾನತಪಸ್ಸುಗಳೇ ಆಗಿವೆ ಎಂಬುದು ಗೀತಾಭಾಷ್ಯದಿಂದ ಸ್ಪಷ್ಟವಾಗುತ್ತದೆ. ಈಗಿನ ಕಾಲದಲ್ಲಿ ವೈದಿಕರಿಗೆಕೂಡ ಈ ಕರ್ಮಗಳು ಪೂರ್ಣವಾಗಿ ದಕ್ಕುವಂತಿಲ್ಲ; ಆದ್ದರಿಂದ ಬಹುಜನರಿಗೆ ಈ ಸಾಧನವು ಎಟಕುವದೇ ಇಲ್ಲವೆಂಬುದು ನಿಜ. ಆದರೆ ಅನಾಶ್ರಮಿಗಳಿಗೂ

1. ಶರೀರದ ಅಸ್ವಸ್ಥತೆಯ ನಿಮಿತ್ತದಿಂದಲೂ ನನ್ನ ತಿಳಿವಳಿಕೆಗೆ ಇರುವ ಸ್ವಾಭಾವಿಕಮಿತಿಯಿಂದಲೂ ಅರವಿಂದರ ಸಾಧನಯೋಗದ ಸ್ವಭಾವವನ್ನು ಇನ್ನಷ್ಟು ವಿವರವಾಗಿ ತಿಳಿಸಲು ಸಾಧ್ಯವಾಗಿಲ್ಲವೆಂದು ನನಗೆ ವಿಷಾದವಾಗಿರುತ್ತದೆ.

ವೇದಾಧಿಕಾರವಿಲ್ಲದವರಿಗೂ ಜಪೋಪವಾಸದೇತಾರಾಧನಾದಿಗಳು. (ಸೂ. ಭಾ. 3-4-34, ಭಾ. ಭಾ.482) ಇತಿಹಾಸಪುರಾಣಾಧಿಗಮ(ಸೂ.ಭಾ.1-3-38, ಭಾ.ಭಾ 313) ಭಗವದ್ಭಕ್ತಿ (ಗೀ. ಭಾ. 9-30 ರಿಂದ 32) - ಇವುಗಳಲ್ಲಿ ಅಧಿಕಾರವಿರುವದರಿಂದ ಭಗವದಾಶ್ರಯದಿಂದ ಮಾಡಬಹುದಾದ ಸಾರ್ವತ್ರಿಕ ಸಾಧನಗಳೂ ಈ ಮತದಲ್ಲಿರುತ್ತವೆ ಎಂದು ಹೇಳಬೇಕಾಗುತ್ತದೆ.

ಪರಮೇಶ್ವರನ ಅನುಗ್ರಹದಿಂದಲೇ ಸಾಧನವು ಪಕ್ವವಾಗುವದೆಂಬುದೂ ಜ್ಞಾನವು ಉತ್ಪನ್ನವಾಗುವದೆಂಬುದೂ ಶಂಕರಾಚಾರ್ಯರ ಉಪದೇಶವು. ಅದಕ್ಕೆ ಭಕ್ತಿಪ್ರಸಾದ, ಭಗವದ್ಭಾವನಾಭಿನಿವೇಶ, ಬ್ರಹ್ಮಚರ್ಯಾದಿಸಾಧನ ಸಂಸ್ಕಾರ, ವಿರಕ್ತಿ, ರಾಗದ್ವೇಷರಾಹಿತ್ಯ, ಏಕಾಗ್ರಧ್ಯಾನ- ಇವೇ ಮುಂತಾದವುಗಳು ಸಹಕಾರಿಗಳೆಂದೇ ಅವರ ಮತವಾಗಿರುತ್ತದೆ (ಗೀ. ಭಾ. 10-10, ಭಾ. ಭಾ. 72, 10-11, ಭಾ. ಭಾ. 74). ಸರ್ವಕರ್ಮಸಂನ್ಯಾಸವೆಂಬುದೂ ಒಂದು ಸಾಧನವೆಂದು ಅವರು ಅಲ್ಲಲ್ಲಿ ಒತ್ತಿಹೇಳಿರುತ್ತಾರೆ; ಆದರೆ ಸಂನ್ಯಾಸವೆಂದರೆ ಏಷಣಾತ್ರಯವನ್ನು ತೊರೆದು ನಿಷ್ಕ್ರಿಯಾತ್ಮರೂಪದಲ್ಲಿ ನೆಲೆನಿಲ್ಲುವದೇ ಹೊರತು ಬರಿಯ ಆಶ್ರಮರೂಪವಲ್ಲ (ಗೀ. ಭಾ. 5-1, ಭಾ. ಭಾ. 316; ಬೃ. ಭಾ. 3-5-1, ಭಾ. ಭಾ. 60, 61).

ಜಾನ್ಮಾಂತರವಾದ, ಲೋಕಾಂತರವಾದ - ಇವುಗಳಲ್ಲಿ ಶಂಕರರು ವೇದ ಪ್ರಮಾಣವನ್ನೇ ಅನುಸರಿಸಿರುತ್ತಾರೆ. ಕರ್ಮವೂ ಉಪಾಸನೆಯೂ ಬೇರೆ ಬೇರೆಯ ನಿಮಿತ್ತದಿಂದ ಜನ್ಮಾಂತರಲೋಕಾಂತರಗಳಿಗೆ ಕಾರಣವಾಗಿರುತ್ತವೆ. ಅರವಿಂದರು ಈ ವಾದಗಳಿಗೆ ತರ್ಕದ ಬೆಂಬಲವನ್ನು ಕೊಟ್ಟು ತಮ್ಮ ಕಲ್ಪನೆಯಿಂದ ಕೆಲವು ಸುಧಾರಣೆಗಳನ್ನು ಸೂಚಿಸಿರುತ್ತಾರೆ; ಇದೂ ವೈದಿಕ ಪ್ರಕ್ರಿಯೆಗೆ ಅವಿರುದ್ಧವಾದ ಕಡೆಯಲ್ಲಿ ಅಂಗೀಕರಣೀಯವೇ ಆಗಿದೆ. ಜೀವನು ವಿಕಾಸಕ್ರಮದಿಂದ ಪರಮಪುರುಷಾರ್ಥವನ್ನು ಮುಟ್ಟುತ್ತಾನೆಂಬುದು ವ್ಯವಹಾರದೃಷ್ಟಿಯಿಂದ ಅವಶ್ಯವಾಗಿ ಒಪ್ಪತಕ್ಕದ್ದಾಗಿದೆ. ಇದಕ್ಕೆ ಗೀತೆಯ ಆಧಾರವೂ ಇದೆ. (ಗೀ. ಭಾ. 6-44. 45, ಭಾ. ಭಾ. 440, 442). ಆದರೆ ಈ ವಿಕಾಸವು ಪರಮಾರ್ಥವೆಂದೇ ಇಟ್ಟುಕೊಳ್ಳುವದಕ್ಕೆ ಇರುವ ಅಡಚಣೆಯನ್ನು ವಿದ್ಯಾವಿದ್ಯೆಗಳ ವಿವೇಚನೆಯ ಲೇಖನದಲ್ಲಿ ತಿಳಿಸಿರುತ್ತೇನೆ. ಜೀವನೂ ಜಗತ್ತೂ ಜನ್ಮಾಂತರವೂ ಲೋಕಾಂತರವೂ ಸಾಧನವೂ ಫಲವೂ ಮಾಯಿಕವೇ ಎಂಬ ವಾದವನ್ನು ಶಂಕರೇತರಭಾಷ್ಯಕಾರರಂತೆ ಅರವಿಂದರೂ ಉಪಹಾಸಮಾಡಿರುತ್ತಾರೆ. ಇಷ್ಟರಿಂದಲೇ ಶಂಕರಾನುಯಾಯಿಗಳು ಬೆಚ್ಚಿ ಬೆದರುವ ಕಾರವಿಲ್ಲ, ಏಕೆಂಡರೆ ಮಾಯಿಕವಾಗಿ ಕಾಣುವ

ವ್ಯಾವಹಾರಿಕಸಾಧನಾದಿಗಳು ಸ್ವಾಪ್ನಪ್ರಪಂಚದ ದೃಶ್ಯಗಳಂತೆ ವ್ಯವಹಾರವು ಮುಗಿಯುವವರೆಗೂ ಸತ್ಯವೇ ಆಗಿರುತ್ತವೆ - ಎಂಬುದು ಅನುಭವಸಿದ್ಧ. ಸ್ವಪ್ನದಲ್ಲಿರುವವರಿಗೆ ಇದೆಲ್ಲವೂ ಸ್ವಾಪ್ನಿಕ ಎಂದು ವಾದಿಸಿ ಒಪ್ಪಿಸುವುದು ಯಾವನಿಗೂ ಸಾಧ್ಯವಾಗಲಾರದು; ಅದರ ಅವಶ್ಯಕತೆಯೂ ಇಲ್ಲ. ಪರಮಾರ್ಥದೃಷ್ಟಿಯಿಂದ ತತ್ತ್ವವು ಸಾಧನಾದಿಗಳ ಹಂಗಿಲ್ಲದೆ ಇರುತ್ತದೆ ಎಂಬುದನ್ನು ಶಾಂಕರರಲ್ಲದವರೂ ಒಪ್ಪಲೇಬೇಕು. ಆದ್ದರಿಂದಲೇ ಅರವಿಂದರು ಕೂಡ ''ಈಶ್ವರನು ತನ್ನಿಂದತಾನು ಸಿದ್ಧನಾಗಿರುವನೇ ಹೊರತು ಜಗಜ್ಜೀವರುಗಳ ಇರುವಿಕೆಯಿಂದಲ್ಲ; ಆದರೆ ಜಗಜ್ಜೀವರುಗಳು ಮಾತ್ರ ಸ್ವತಃಸಿದ್ಧರಲ್ಲ, ಈಶ್ವರನಿಮಿತ್ತದಿಂದಲೇ ಇರುವಿಕೆಯುಳ್ಳವರಾಗಿರುತ್ತಾರೆ (L. D. II 484) ಎಂದು ಒಪ್ಪಿರುತ್ತಾರೆ. ಇದೇ ಮಾಯಾವಾದದ ತಿರುಳು.

ಜ್ಞಾನಿಗಳು ಜೀವನ್ಮುಕ್ತರಾಗಿ ವ್ಯವಹರಿಸುತ್ತಾರೆಂಬುದನ್ನು ಗೀತಾಭಾಷ್ಯ (ಗೀ. ಭಾ. 5-15, ಭಾ. ಭಾ. 353, 6-17, ಭಾ. ಭಾ. 415), ಉಪನಿಷದ್ಭಾಷ್ಯ (ಮುಂ. ಭಾ. 3-2-9, ಭಾ. ಭಾ. 123) ಮುಂತಾದ ಕಡೆಗಳಲ್ಲಿ ಶಂಕರರು ಹೇಳಿರುತ್ತಾರೆ. ಪ್ರಪಂಚವನ್ನೆಲ್ಲ ಮಾಯೆಯೆಂದು ಹಳಿದು ಅದನ್ನು ಬಿಟ್ಟು ನಿರ್ವಾಣವನ್ನು ಹೊಂದುವ ಜೀವನ್ಮುಕ್ತಿಯನ್ನು ಅವರು ಹೇಳುವದಿಲ್ಲ; ಪ್ರಪಂಚವೆಲ್ಲವನ್ನೂ ಬ್ರಹ್ಮವಾಗಿಯೇ ಕಾಣುವ ಮುಕ್ತಿಯನ್ನೇ ಅವರು ಉಪದೇಶಿಸಿರುತ್ತಾರೆ. ಜ್ಞಾನಿಗೆ ಲೋಕಸಂಗ್ರಹವೊಂದೇ ಕರ್ತವ್ಯವೆಂದೂ (ಗೀ. ಭಾ. 3-20, ಭಾ. ಭಾ. 179, 3-26, ಭಾ. ಭಾ. 188) ಅವರು ಹೇಳಿದ್ದಾರೆ. ಇದರಿಂದ ಜ್ಞಾನಿಗಳ ವ್ಯವಹಾರವು ಅವರ ಸುತ್ತುವಳೆಯದಮೇಲೆ ತನ್ನ ಪ್ರಭೆಯನ್ನು ಅವಶ್ಯವಾಗಿ ಬೀರುತ್ತದೆ ಎಂದು ಹೇಳಬೇಕಾಗುತ್ತದೆ. ಆದರೆ ಈ ಲೋಕವನ್ನೇ ಮಾರ್ಪಡಿಸುವ ಯೋಗವೊಂದನ್ನು ಸಾಧಕನು ಅಂಗೀಕರಿಸಬೇಕೆಂಬುದನ್ನು ಶಂಕರರು ಉಪದೇಶಿಸಿಲ್ಲ; ಏಕೆಂದರೆ ಹೀಗೆ ಜನಗಳಿಗೆ ಉಪದೇಶಮಾಡಿ ಸನ್ಮಾರ್ಗಕ್ಕೆ ಎಳೆಯವದು ಅಧಿಕಾರಿಕಪುರುಷರ, ಪರಮೇಶ್ವರನಿಂದ ನಿಯುಕ್ತರಾಗುವ ಕೆಲಕೆಲವು ಮಹಾಪುರುಷರ, ಕರ್ತವ್ಯ ವಾಗಿದೆ ಎಂಬುದು ಅವರ ಮತವಾಗಿದೆ (ಸೂ. ಭಾ. 3-3-32, ಭಾ. ಭಾ. 380). ಸಾಧಕರಾದವರು ತಮ್ಮ ತಮ್ಮ ಮುಕ್ತಿಯನ್ನು ಮಾತ್ರ ಗಳಿಸಿಕೊಳ್ಳಬೇಕೆನ್ನುವದು ಸ್ವಾರ್ಥವಲ್ಲವೆ?- ಎಂದು ಕೆಲವರು ಶಂಕಿಸಬಹುದು. ಆದರೆ ಪಶುಜೀವನವನ್ನು ನಡೆಯಿಸುವದಕ್ಕಿಂತ ಇದೇ ಮಾನವನ ಅದ್ಯಕರ್ತವ್ಯವಾಗಿರುತ್ತದೆ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಅಂಥ ಪ್ರಯತ್ನದಿಂದ ತನಗೂ ಪುರುಷಾರ್ಥವು ದೊರೆಯುತ್ತದೆ, ತನ್ನ ನೆರೆಯವರಿಗೂ ಉಪಕಾರವಾಗುತ್ತದೆ - ಎಂಬುದಕ್ಕೆ

ವೇದಾಂತವು ಇಂದಿನವರೆಗೂ ಜನಜೀವನದ ಮೇಲೆ ಬೀರುವ ಶುಭಪರಿಣಾಮವೇ ಸಾಕ್ಷಿಯಾಗಿರುತ್ತದೆ.

ಅರವಿಂದಮತವಿಮರ್ಶೆಯ ಲೇಖನಗಳಲ್ಲಿ ಇದೇ ಕೊನೆಯದು. ಆದ್ದರಿಂದ ಉಪಸಂಹಾರದಲ್ಲಿ ನನ್ನ ಅಭಿಪ್ರಾಯವನ್ನು ಸ್ಪಷ್ಟವಾಗಿ ತಿಳಿಸುವದು ಕರ್ತವ್ಯವಾಗಿರುತ್ತದೆ. ಶಾಂಕರವೇದಾಂತವು ಕಾಲಕ್ರಮದಲ್ಲಿ ನಾನಾ ರೂಪವನ್ನು ತಾಳಿ ಈಗಿನ ಸ್ಥಿತಿಯಲ್ಲಿ ಅದರ ನಿಜರೂಪವು ಯಾವದೆಂಬುದೇ ಜನರಿಗೆ ನಿಶ್ಚಯವಾಗದಂತೆ ಆಗಿರುತ್ತದೆ. ಇದಲ್ಲದೆ ಆ ಆಚಾರ್ಯರಿಂದೀಚೆಗೆ ಜನರ ಜೀವನಕ್ರಮವು ಬಹುಮುಖವಾಗಿ ಮಾರ್ಪಾಡನ್ನು ಹೊಂದಿರುತ್ತದೆ. ಆದ್ದರಿಂದ ಶಾಂಕರವೇದಾಂತವು ಈಗಿನ ಜೀವನಕ್ಕೆ ಎಷ್ಟರಮಟ್ಟಿಗೆ ಪ್ರಯೋಜನಕಾರಿ ಎಂಬುದನ್ನು ಈಗಿನ ಭಾಷೆಯಲ್ಲಿ ತಿಳಿಸುವದು ಬಲ್ಲವರ ಆದ್ಯಕರ್ತವ್ಯವಾಗಿದೆ. ಶ್ರೀ ಅರವಿಂದರು ತಮ್ಮ ವೇದಾಂತವನ್ನು ಭೇದಾಭೇದವಾದವೆಂದು ಕರೆದಿದ್ದರೂ, ಶಾಂಕರಪ್ರಕ್ರಿಯೆಯನ್ನು ತಮ್ಮ ದೃಷ್ಟಿಯಿಂದ ಮತ್ತೆಮತ್ತೆ ಹಳಿದು ಖಂಡಿಸಿದ್ದರೂ, ಅವರು ವ್ಯವಹಾರದೃಷ್ಟಿಯಿಂದ ಲೋಕಕ್ಕೆ ವೇದಾಂತದಿಂದ ಆಗಬೇಕಾಗಿರುವ ಪ್ರಯೋಜನಗಳನ್ನು ನಮ್ಮ ಕಣ್ಣುಮುಂದೆ ಪರಿಣಾಮಕರವಾದ ರೀತಿಯಲ್ಲಿ ಇಟ್ಟಿರುತ್ತಾರೆ. ಶಂಕರರು ವ್ಯಾವಕಾರಿಕದೃಷ್ಟಿಯೆಂದು ಕರೆಯುವದೂ ಪರಮಾರ್ಥವೆಂದೇ ಅವರು ಅಭಿಪ್ರಾಯಪಟ್ಟಿರುತ್ತಾರೆ ಎಂಬುದೊಂದು ಸ್ವಯೂಥ್ಯಕಲಹಕ್ಕೆ ಕಾರಣವಾಗಬಹುದು; ಆದರೆ ಅವರು ಸಾಧಕರಿಗೆ ಬೇಕಾದ ಉತ್ತಮವಾದ ಅನುಷ್ಠೇಯ ಸೂಚನೆಗಳನ್ನು ತಮ್ಮ ಗ್ರಂಥಗಳಲ್ಲಿಟ್ಟದಾರೆಂಬುದು ನಿಃಸಂಶಯವಾಗಿದೆ. ಶಾಂಕರರೆಂದು ಹೇಳಿಕೊಳ್ಳುವ ಅನೇಕರಿಗೆ ಈಗ ವೇದಾಂತವು ಅನುಭವಕ್ಕೆ ಸಂಬದ್ಧವಲ್ಲದೆ ಕೇವಲ ತರ್ಕಮಾತ್ರವಾಗಿ ಪರಿಣಮಿಸಿದೆ; ಮತ್ತೆ ಕೆಲವರಿಗೆ ಕೆಲವು ಶ್ರುತಿವಾಕ್ಯಗಳೂ ಭಾಷ್ಯಪಂಕ್ತಿಗಳೂ ಪಾಂಡಿತ್ಯಪ್ರದರ್ಶನಕ್ಕೆ ಮಾತ್ರ ಉಪಕರಣವಾಗಿಬಿಟ್ಟಿವೆ. ಅರವಿಂದದರ್ಶನವನ್ನು ಅಭ್ಯಾಸಮಾಡುವವರೂ ಕನ್ನಡದಲ್ಲಿ ವಿವರಿಸುವವರೂ ಇಂಥ ವೇದಾಂತಿಗಳ ಮಾಯಾನಿದ್ರೆಯನ್ನು ಪರಿಹರಿಸುವದಕ್ಕೂ ವೇದಾಂತಾಭ್ಯಾಸವು ಅನುಭವೈಕಗಮ್ಯವೆಂಬುದನ್ನು ಮನಗಾಣಿಸುವದಕ್ಕೂ ಪರಮಸಾಧನವಾಗಿರುತ್ತಾರೆಂಬುದು ನಿರ್ವಿವಾದವಾಗಿರುತ್ತದೆ. ಇದಕ್ಕಾಗಿ ಅದ್ವೈತಿಗಳೆಲ್ಲರ ಧನ್ಯವಾದಗಳು ಅವರಿಗೆ ಸಲ್ಲತಕ್ಕವಾಗಿವೆ.

★★★★★

# ವೀರಶೈವ ಸಿದ್ಧಾಂತ

## ವೀರಶೈವಮತ

– ಶ್ರೀಯುತ ಎಚ್. ಆರ್. ಸಿದ್ದವೀರಪ್ಪನವರು

**ಅವಾಚ್ಯಾತ್ಮಸ್ವರೂಪಾಯ ಶಿವಭಾವಪ್ರದಾಯಿನೇ ।**
**ನಮಸ್ಸದ್ಗುರುನಾಥಾಯ ಷಟ್ಸ್ಥಲಬ್ರಹ್ಮಮೂರ್ತಯೇ ॥**

ಚರಾಚರಾತ್ಮಕವಾದ ಪ್ರಪಂಚದಲ್ಲಿ ಮನುಷ್ಯಜನ್ಮವೇ ಶ್ರೇಷ್ಠವಾದದ್ದು. ರಾಜರು, ಧನಿಕರು, ಮೊದಲಾದವರು ಬಹು ಧನವ್ಯಯದಿಂದ ಸುಂದರವಾದ ಮನೆಯನ್ನು ಕಟ್ಟಿಸಿ ಅದರಲ್ಲಿ ತಾವು ವಾಸಮಾಡುವ ಸಂದರ್ಭದಲ್ಲಿ ಪ್ರಕಾಶವುಳ್ಳ ಅನೇಕದೀಪಗಳನ್ನು ಹಚ್ಚುತ್ತಾರೆ. ಹಾಗೆಯೇ ದೇವರು ಸಕಲಪದಾರ್ಥಗಳನ್ನೂ ಮನುಷ್ಯನ ಪ್ರಯೋಜನಕ್ಕಾಗಿ ಸೃಷ್ಟಿಸಿದನೇ ಹೊರತು, ಪದಾರ್ಥಗಳಿಗಾಗಿ ಮನುಷ್ಯನನ್ನು ಸೃಷ್ಟಿಸಲಿಲ್ಲ. ಮನುಷ್ಯನನ್ನು ಹೊರತು ಯಾವ ಪದಾರ್ಥವನ್ನು ಸೃಷ್ಟಿಸಿದ್ದಾಗ್ಯೂ ಅದೆಲ್ಲಾ ನಿಷ್ಪ್ರಯೋಜನವಾಗುತ್ತಿತ್ತು. ಅಂತಹ ಪದಾರ್ಥಗಳನ್ನೆಲ್ಲಾ ಅನುಭವಿಸಿ ಸಂತೋಷಪಡುವ ಯೋಗ್ಯತೆಯು ಮನುಷ್ಯನಿಗಲ್ಲದೆ ಬೇರೆ ಯಾವ ಪ್ರಾಣಿಗೂ ಇಲ್ಲ. ಮನುಷ್ಯನಿಂದನುಭವಿಸಲ್ಪಡುವ ವಸ್ತುಗಳಿಲ್ಲಿ ಒಳ್ಳೆಯದು ಕೆಟ್ಟದ್ದು – ಎಂದು ಎರಡು ವಿಧವು. ಇವೆರಡನ್ನು ವಿಚಾರಮಾಡುವ ಯೋಗ್ಯತೆಯನ್ನೂ ಇವೆರಡರ ಸ್ವರೂಪವನ್ನೂ ನಿಶ್ಚಯಿಸಿ ಕೆಟ್ಟದ್ದದನ್ನು ನಿರಾಕರಿಸಿ, ಒಳ್ಳೆಯದನ್ನು ಪರಿಗ್ರಹಿಸುವ ಗುಣವನ್ನೂ ದೇವರು ಮನುಷ್ಯನಿಗೆ ಮಾತ್ರ ಕರುಣಿಸಿದ್ದಾನೆಯಲ್ಲದೆ ಇನ್ನಾವ ಪ್ರಾಣಿಗೂ ಕರುಣಿಸಿಲ್ಲ. ಈ ಗುಣಕ್ಕೆ ವಿವೇಕವೆಂಬ ಹೆಸರು. ಇದೇ ಮನುಷ್ಯಜಾತಿಗೆ ಮುಖ್ಯಲಕ್ಷಣವು. ವಿವೇಕವಿಲ್ಲದ ಮನುಷ್ಯನಿಗೂ ಪಶುಗಳಿಗೂ ಭೇದವಿಲ್ಲವೆಂಬುದು ಸತ್ಯವು. ಅದುದರಿಂದ ಮನುಷ್ಯನಾದವನು ಕೆಟ್ಟದ್ದನ್ನು ನಿರಾಕರಿಸಿ ಒಳ್ಳೆಯದನ್ನೇ ಪರಿಗ್ರಹಿಸಬೇಕು. ಮನುಷ್ಯನಿಗೆ ಧರ್ಮ, ಅರ್ಥ, ಕಾಮ, ಮೋಕ್ಷ–ಎಂದು ನಾಲ್ಕು ಪುರುಷಾರ್ಥಗಳುಂಟು. ಧರ್ಮವೆಂದರೆ ಪುಣ್ಯಪಾಪವಿಧಿ; ಅರ್ಥವೆಂದರೆ ಧನ, ಧಾನ್ಯ, ವಸ್ತ್ರ, ಅಭರಣ– ಮುಂತಾದವುಗಳು; ಕಾಮವೆಂದರೆ ಸ್ತ್ರೀ ಭೋಗ; ಮೋಕ್ಷವೆಂದರೆ ಜನನಮರಣಗಳನ್ನು ತಪ್ಪಿಸುವ ನಿತ್ಯಾನಂದಪ್ರಾಪ್ತಿ.

ಇವುಗಳೊಳಗೆ ಅರ್ಥ, ಕಾಮ - ಎಂಬ ಎರಡು ಪುರುಷಾರ್ಥಗಳನ್ನು ಸಂಪಾದಿಸುವ ವಿಷಯದಲ್ಲಿ ಅನೇಕರು ಪ್ರಯತ್ನಿಸುತ್ತಾರೆ. ಕೆಲವರು ಅವುಗಳನ್ನು ಪಡೆದು ಅನುಭವಿಸುತ್ತಾರೆ. ಇವೆರಡರಿಂದಾಗುವ ಸುಖಕ್ಕೆ ಐಹಿಕವೆಂದು ಹೆಸರು. ಧರ್ಮಸಂಪಾದನೆಯಲ್ಲಿ ಅಪೇಕ್ಷೆಯುಳ್ಳವರು ಕೆಲವರು ಮಾತ್ರವೇ ಧರ್ಮದಿಂದ ದೇಹಾನಂತರದಲ್ಲಾಗುವ ಸ್ವರ್ಗ ಮುಂತಾದ ಲೋಕಾಂತರಗಳಲ್ಲಿ ಲಭಿಸುವ ಸುಖವನ್ನು ಪಡೆಯುವದಕ್ಕೆ ಪ್ರಯತ್ನಿಸುತ್ತಾರೆ. ಇದಕ್ಕೆ ಆಮುಷ್ಮಿಕವೆಂದು ಹೆಸರು. ಮೋಕ್ಷವನ್ನಪೇಕ್ಷಿಸುವವರು ಬಹಳ ವಿರಳ. ಅಂದರೆ ಲಕ್ಷಕ್ಕೆ ಒಬ್ಬನಿರಬಹುದು. ಭಕ್ತಿ, ಜ್ಞಾನ, ವೈರಾಗ್ಯ - ಇವುಗಳೇ ಮೋಕ್ಷಸಾಧನಗಳು. ಮನುಷ್ಯರೊಳಗೆ ಅಸ್ತಿಕರು ನಾಸ್ತಿಕರು ಎಂದು ಎರಡು ವಿಧದವರುಂಟು. ಪರಲೋಕವುಂಟು ಎಂದು ತಿಳಿದು ನಡೆಯುವವರೇ ಆಸ್ತಿಕರು. ದೇವರಿಲ್ಲ, ಪರಲೋಕವಿಲ್ಲ ಎಂದು ತಿಳಿದು ಮನಬಂದಂತೆ ನಡೆಯುವವರೇ ನಾಸ್ತಿಕರೆನಿಸುವರು. ಆಸ್ತಿಕರಲ್ಲಿ ಆರ್ಯರೆಂತಲೂ ಅನಾರ್ಯರೆಂತಲೂ ಎರಡು ವಿಧವು. ಶ್ರುತಿ, ಸ್ಮೃತಿ, ಪುರಾಣ, ಆಗಮ, ಉಪನಿಷತ್ತು - ಮೊದಲಾದವುಗಳನ್ನು ನಂಬುವ ಭಾರತೀಯರೇ ಆರ್ಯರು. ಅವುಗಳನ್ನು ನಂಬದವರೆಲ್ಲರೂ ಅನಾರ್ಯರೆನಿಸುವರು. ಅನಾರ್ಯರು ಭರತಖಂಡ ಮೊದಲಾದ ಎಲ್ಲಾ ಭೂಭಾಗಗಳಲ್ಲಿಯೂ ಇದ್ದಾರೆ. ಅವರು ದೇವರಿಗೆ ಬೇರೆ ಬೇರೆ ಹೆಸರನ್ನಿಟ್ಟುಕೊಂಡು ಬೇರೆಬೇರೆ ರೀತಿಯಿಂದ ಆರಾಧಿಸುತ್ತಾರೆ.

ಆರ್ಯರಲ್ಲಿ ಸಾಂಖ್ಯ, ಯೋಗ, ನ್ಯಾಯ, ವೈಶೇಷಿಕ, ಪೂರ್ವ ಮೀಮಾಂಸೆ, ಉತ್ತರಮೀಮಾಂಸೆ ಎಂಬ ಷಡ್ದರ್ಶನಗಳೂ ಶೈವ, ವೈಷ್ಣವ, ಶಾಕ್ತೇಯ, ಗಾಣಪತ, ಸೌರ, ಕಾಪಾಲಿಕ ಎಂಬ ಷಣ್ಮತಗಳೂ ಪ್ರಸಿದ್ಧವಾಗಿವೆ. ಈ ಮತಗಳು ಉಪಾಸ್ಯದೇವತಾಭೇದದಿಂದುಂಟಾದವು. ಸಾಂಖ್ಯ ಮುಂತಾದ ದರ್ಶನಗಳಲ್ಲಿ ಪ್ರಾಯಶಃಉಪಭೇದವಿಲ್ಲ. ಉತ್ತರಮೀಮಾಂಸೆಯಲ್ಲಿ ಮಾತ್ರ ದ್ವೈತ, ಅದ್ವೈತ, ಶಕ್ತಿವಿಶಿಷ್ಟಾದ್ವೈತ - ಮುಂತಾದ ಭೇದಗಳುಂಟಾದವು.

ಶೈವದಲ್ಲಿ ಸಾಮಾನ್ಯಶೈವ, ಮಿಶ್ರಶೈವ, ಶುದ್ಧಶೈವ, ವೀರಶೈವ ಎಂದು ನಾಲ್ಕು ವಿಧ. ಶಿವಲಿಂಗವನ್ನು ಕಂಡಾಗ ಪ್ರದಕ್ಷಿಣ ನಮಸ್ಕಾರಗಳನ್ನು ಮಾಡುವವರೇ ಸಾಮಾನ್ಯಶೈವರು. ಸೂರ್ಯ, ಗಣಪತಿ, ವಿಷ್ಣು, ಪಾರ್ವತಿ - ಇವರೊಡನೆ ಶಿವನನ್ನು ಆರಾಧಿಸುವವರೇ ಮಿಶ್ರಶೈವರು. ಗುರುಮುಖದಿಂದ ಶಿವಲಿಂಗವನ್ನು ಪಡೆದು ಕರಪೀಠದಲ್ಲಾಗಲಿ, ದಾರಪೀಠದಲ್ಲಾಗಲಿ ಇಟ್ಟು ಪೂಜಿಸುತ್ತಾ ಲಿಂಗಲೋಪಾದಿಗಳಲ್ಲಿ ಪ್ರಾಯಶ್ಚಿತ್ತದಿಂದ ಶುದ್ಧರಾಗುವವರೇ ಶುದ್ಧಶೈವರು.

ಶಿವದೀಕ್ಷಾಪೂರ್ವಕವಾಗಿ ಗುರುವಿನಿಂದ ಇಷ್ಟಲಿಂಗವನ್ನು ಪಡೆದು ಶಿರಸ್ಸು, ಕಂಠ, ವಕ್ಷ, ಹಸ್ತ, ಉದರ, ಕಕ್ಷ - ಎಂಬ ಆರುಸ್ಥಾನಗಳೊಳಗೆ ಒಂದು ಸ್ಥಾನದಲ್ಲಿ ಎಡೆಬಿಡದೆ ಧರಿಸಿ ತ್ರಿಕಾಲದಲ್ಲಾಗಲಿ, ದ್ವಿಕಾಲದಲ್ಲಾಗಲಿ, ಏಕಕಾಲದಲ್ಲಾಗಲಿ ಭಕ್ತಿಯಿಂದ ಶಿವಾರ್ಚನೆಯನ್ನು ಮಾಡುತ್ತ ಲಿಂಗಲೋಪವಾದಲ್ಲಿ ಪ್ರಾಣತ್ಯಾಗವ್ರತವುಳ್ಳವರೇ ವೀರಶೈವರೆನಿಸುವರು ವೀರಶೈವರೇ ಶಕ್ತಿವಿಶಿಷ್ಟಾದ್ವೈತಿಗಳು.

ವೀರಶೈವರಿಗೆ ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ಭಸ್ಮ, ರುದ್ರಾಕ್ಷ, ಮಂತ್ರ - ಎಂಬ ಅಷ್ಟಾವರಣಗಳೂ ಲಿಂಗಾಚಾರ, ಸದಾಚಾರ, ಭೃತ್ಯಾಚಾರ, ಗಣಾಚಾರ, ಶಿವಾಚಾರ - ಎಂಬ ಪಂಚಾಚಾರಗಳೂ ಮುಖ್ಯವಾರಬೇಕು. ವೀರಶೈವನಾದವನು ನಡೆಯುವಲ್ಲಿಯೂ ನಿಂತಿರುವಲ್ಲಿಯೂ ನಿದ್ರಿಸುವಲ್ಲಿಯೂ ಎಚ್ಚರದಲ್ಲಿಯೂ ಕಣ್ಣಬಿಡುವಲ್ಲಿಯೂ ಕಣ್ಣುಮುಚ್ಚುವಲ್ಲಿಯೂ ಅಶುಚಿಯಾಗುವಲ್ಲಿಯೂ ಇಷ್ಟಲಿಂಗವನ್ನು ಯಾವಾಗಲೂ ಧರಿಸಿರಬೇಕು. ಈ ಸಂದರ್ಭದಲ್ಲಿ

**ಗಚ್ಛಂಸ್ತಿಷ್ಠನ್ ಸ್ವಪನ್ ಜಾಗ್ರದುನ್ನಿಮಿಷನ್ನಪಿ ।**
**ಶುಚಿರ್ವಾಪ್ಯಶುಚಿರ್ವಾಪಿ ಲಿಂಗಂ ಸರ್ವತ್ರ ಧಾರಯೇತ್ ॥**

ಎಂದು ಲಿಂಗಧಾರಣಚಂದ್ರಿಕೆಯಲ್ಲಿ ಉದಾಹರಿಸಲ್ಪಟ್ಟಿರುವದು.

ವೀರಶೈವಮತಕ್ಕೆ ಶಿವಾಗಮಗಳೂ ಉತ್ತರಮೀಮಾಂಸೆಯೂ ಮುಖ್ಯಾಧಾರಗಳ ವೇದಪುರಾಣಾದಿಗಳು ಸಹಾಯಕಗಳಾಗಿವೆ. ದೇವತೆಗಳಲ್ಲಿ ಅನೇಕರೂ ಋಷಿಗಳಲ್ಲಿ ಅನೇಕರೂ ಲಿಂಗವನ್ನು ಧರಿಸಿರುವರೆಂದು ಪ್ರಮಾಣವುಂಟು.

ಉದಾಹರಣೆ :- **ಸ್ಕಾಂದಪುರಾಣದಲ್ಲಿ** -

**ಬ್ರಹ್ಮವಿಷ್ಣ್ವಾದಯೋ ದೇವಾ ಮುನಯೋ ಗೌತಮಾದಯಃ ।**
**ಧಾರಯಂತಿ ಸದಾಲಿಂಗಮುತ್ತಮಾಂಗೇ ವಿಶೇಷತಃ ॥**

ಬ್ರಹ್ಮ, ವಿಷ್ಣು ಮೊದಲಾದ ದೇವತೆಗಳೂ ಗೌತಮರೇ ಮೊದಲಾದ ಮಹರ್ಷಿಗಳೂ ಯಾವಾಗಲು ಮುಖ್ಯವಾಗಿ ತಮ್ಮ ಶಿರಸ್ಸಿನಲ್ಲಿ, ಲಿಂಗವನ್ನು ಧರಿಸಿರುವರು.

**ಲೈಂಗಪುರಾಣದಲ್ಲಿ-**

**ಕಶ್ಯಪಾತ್ರಿಭರದ್ವಾಜಗೌತಮಾದ್ಯಾ ಮಹರ್ಷಯಃ।**
**ಧಾರಯಂತಿ ಸದಾ ಲಿಂಗಮುತ್ತಮಾಂಗೇ ವಿಶೇಷತಃ॥**

ಕಶ್ಯಪ, ಅತ್ರಿ, ಭರದ್ವಾಜ, ಗೌತಮ ಇವರೇ ಮೊದಲಾದ ಮಹರ್ಷಿಗಳು, ಮುಖ್ಯವಾಗಿ ತಮ್ಮ ಶಿರಸ್ಸಿನಲ್ಲಿ, ಲಿಂಗವನ್ನು ಧರಿಸಿರುವರು.

**ನಾರಾಯಣೋಽಪಿ ಭಗವಾನ್ ದೇವಾ ಬ್ರಹ್ಮಾದಯೋಽನಘಮ್ ।**
**ಧಾರಯಂತ್ಯುತ್ತಮಾಂಗೇಷು ಶಿವಲಿಂಗಮನಾಮಯಮ್ ॥**

ಭಗವಂತನಾದ ನಾರಾಯಣನೂ ಬ್ರಹ್ಮನೇ ಮೊದಲಾದ ದೇವತೆಗಳೂ ಶ್ರೇಷ್ಠವಾಗಿಯೂ ನಿರ್ದುಷ್ಟವಾಗಿಯೂ ಇರುವ ಶಿವಲಿಂಗವನ್ನು ಶಿರಸ್ಸುಗಳಲ್ಲಿ ಧರಿಸಿರುವರು.

**ಲಕ್ಷ್ಮೀಸರಸ್ವತೀಮುಖ್ಯಾಸ್ಸ್ವಕಿರೀಟೋರ್ಧ್ವದೇಶಕೇ ।**
**ಧಾರಯಂತ್ಯಪ್ರಮಾದೇನ ಲಿಂಗಂ ತ್ರಿಭುವನೇಶ್ವರಮ್ ॥**

ಲಕ್ಷ್ಮೀ, ಸರಸ್ವತಿ ಮುಂತಾದವರು ತಮ್ಮ ಕಿರೀಟದ ಮೇಲುಗಡೆಯಲ್ಲಿ ಮೂರು ಲೋಕಕ್ಕೂ ಒಡೆಯನಾದ ಶಿವನ ಲಿಂಗವನ್ನು ತಪ್ಪದೆ ಧರಿಸಿರುವರು.

ಹೀಗೆ ಸಿದ್ಧಾಂತಾಗಮಗಳಲ್ಲಿಯೂ ಉಳಿದ ಪುರಾಣಗಳಲ್ಲಿಯೂ ಪ್ರಮಾಣವಿದೆ. ವೀರಶೈವರು ಅಪ್ರಾಕೃತರೆಂತಲೂ ಅಲಿಂಗಿಗಳು ಪ್ರಾಕೃತರೆಂತಲೂ ಹೇಳಲ್ಪಡುತ್ತಾರೆ. ವೀರಶೈವಮತಕ್ಕೆ ರೇಣುಕ, ಮರುಳುಸಿದ್ಧ, ಪಂಡಿತಾರಾಧ್ಯ, ಏಕೋರಾಮಾರಾಧ್ಯ – ಇವರೇ ಚತುರಾಚಾರ್ಯರು.

## ಲಿಂಗಾರಾಧನೆ

ಶೈವರೊಳಗೆ ಸ್ಥಾವರಲಿಂಗಾರಾಧಕರಿಗಿಂತಲೂ ಇಷ್ಟಲಿಂಗಾರಾಧಕರು ಶ್ರೇಷ್ಠರೆನಿಸಿಕೊಳ್ಳುವರು. ಈ ವಿಷಯದಲ್ಲಿ,

**ಸ್ಥಿರಲಿಂಗಾರ್ಚಕೋ ಮರ್ತ್ಯೋ ನ ಶುದ್ಧಃ ಪಙ್ಕ್ತಿಕರ್ಮಸು ।**
**ಇಷ್ಟಲಿಂಗಾರ್ಚಕೋ ಮರ್ತ್ಯಃ ಪಾವನಃ ಪಙ್ಕ್ತಿಕರ್ಮಸು ॥**

ಸ್ಥಿರಲಿಂಗವನ್ನು ಅರ್ಚನೆಮಾಡುವ ಮನುಷ್ಯನು ಪಙ್ಕ್ತಿಕರ್ಮಗಳಲ್ಲಿ ಶುದ್ಧನಲ್ಲ; ಆದರೆ ಇಷ್ಟಲಿಂಗವನ್ನು ಅರ್ಚಿಸುವಾತನು ಪಙ್ಕ್ತಿಕರ್ಮಗಳಲ್ಲಿ ಇತರರನ್ನು ಪವಿತ್ರಗೊಳಿಸುವವನಾಗಿರುತ್ತಾನೆ. ಹೀಗೆಂದು ವೀರಶೈವೋತ್ಕರ್ಷ ಪ್ರದೀಪಿಕೆಯಲ್ಲಿ ಹೇಳಿರುತ್ತಾರೆ.

ಸ್ಥಾವರಲಿಂಗಾರಾಧಕನಿಗಿಂತಲೂ ಇಷ್ಟಲಿಂಗವನ್ನು ಆರಾಧನೆ ಮಾಡುವಾತನು ಶ್ರೇಷ್ಠನು – ಎಂಬುವದಕ್ಕೆ ಕಾರಣವೇನೆಂದರೆ ಸ್ಥಾವರಲಿಂಗವನ್ನು ಆರಾದನೆಮಾಡುವವನು ಪೂಜಾಕಾಲದಲ್ಲಿ ಮಾತ್ರ ಸ್ನಾನವನ್ನು ಮಾಡಿ ಮಡಿಯುಟ್ಟು ಶಿವಸನ್ನಿಧಿಯಲ್ಲಿರುವತನಕ ಭಯಭಕ್ತಿಯುಕ್ತನಾಗಿರುತ್ತಾನೆ. ಆತನಿಗೆ ಶಿವಸನ್ನಿಧಿ ತಪ್ಪಿದಾಗ ಕಾಯಿಕ, ವಾಚಿಕ, ಮಾನಸಿಕ – ಎಂಬ ಮೂರು ವಿಧವಾದ ಪಾಪಗಳನ್ನು ಮಾಡುವ ವಿಷಯದಲ್ಲಿ ಅವಕಾಶವುಂಟಾಗುವದು. ಲಿಂಗವನ್ನು ಧರಿಸಿರುವವನು ತಾನು ಯಾವಾಗಲೂ ಶಿವಸನ್ನಿಧ್ಧಿಯಲ್ಲಿರುತ್ತೇನೆಂದು ಭಾವಿಸಿ ಯಾವ ಪಾಪವನ್ನೂ ಮಾಡದೆ ತ್ರಿಕಾಲದಲ್ಲಿಯೂ ಶಿವಸ್ಮರಣ, ಶಿವನಾಮಕೀರ್ತನ, ಶಿವಕಥಾಶ್ರವಣ, ಶಿವಸೇವನ, ಶಿವಾರ್ಚನ, ಶಿವವಂದನ, ಶಿವಕೈಂಕರ್ಯ, ಶಿವಸಖ್ಯ, ಆತ್ಮಾರ್ಪಣ – ಎಂಬ ನವವಿಧಭಕ್ತಿಯುಳ್ಳವನಾಗಿ ರಬೇಕು. (ಇದೇ ಲಿಂಗಧಾರಣೆಯ ಉದ್ದೇಶವು). ಈ ಅರ್ಥವನ್ನು ಸಿದ್ಧಾಂತಶಿರೋಮಣಿಯಲ್ಲಿ ಶ್ರೀರೇಣುಕಾಚಾರ್ಯರು ಅಗಸ್ತ್ಯಮಹಾಮುನಿಗೆ –

**ಲಿಂಗಧಾರೀ ಸದಾ ಶುದ್ಧೋ ನಿಜಲಿಂಗಂ ಮನೋಹರಮ್ ।**
**ಅರ್ಚಯೇದ್ಗಂಧಪುಷ್ಪಾದ್ಯೈಃ ಕರಪೀಠೇ ಸಮಾಹಿತಃ ॥**

ಲಿಂಗಧಾರಿಯು ಯಾವಾಗಲೂ ಶುಚಿಯಾಗಿ ಮನಸ್ಸಿಗೆ ಹರ್ಷವನ್ನುಂಟುಮಾಡುವ ತನ್ನ ಇಷ್ಟಲಿಂಗವನ್ನು ಹಸ್ತಪೀಠದಲ್ಲಿಟ್ಟು ಗಂಧಪುಷ್ಪಾದಿಗಳಿಂದ ಪೂಜಿಸಬೇಕು – ಎಂದು ಬೋಧಿಸಿರುತ್ತಾರೆ.

ಲಿಂಗಧಾರಣವು ಬಾಹ್ಯವೆಂತಲೂ ಅಭ್ಯಂತರವೆಂತಲೂ ಎರಡು ಪ್ರಕಾರವು. ಆಧಾರವೇ ಮುಂತಾದ ಸ್ಥಾನಗಳಲ್ಲಿ ಜ್ಯೋತಿರ್ಲಿಂಗದ ಅನು ಸಂಧಾನವನ್ನು ಮಾಡುವದೇ ಅಭ್ಯಂತರ (ಒಳಗಣ) ಲಿಂಗಧಾರಣವು. ಮಸ್ತಕವೇ ಮುಂತಾದ ಸ್ಥಾನಗಳಲ್ಲಿ ಗುರುಮುಖದಿಂದ ಬಂದ ಪಂಚಸೂತ್ರಘಟಿತವಾದ ಶಿಲಾಮಯವಾದ ಶಿವಲಿಂಗವನ್ನು ಧರಿಸುವದೇ ಬಾಹ್ಯ (ಹೊರಗಣ)

ಲಿಂಗಧಾರಣವು. ಅಂತರ್ಲಿಂಗವನ್ನು ಧಾರಣೆಮಾಡಲೂ ಶಕ್ತನಾದವನಾಗಲಿ ಅಶಕ್ತನಾದವನಾಗಲಿ ಬಾಹ್ಯಲಿಂಗವನ್ನು ಸಚ್ಚಿದಾನಂದಸ್ವರೂಪನಾದ ಸಾಕ್ಷಾಚ್ಛಿವನೆಂತಲೇ ನಿಶ್ಚಯಿಸಿ ಧರಿಸಬೇಕು. ಈ ಅರ್ಥವು **ಲಿಂಗಧಾರಣಚಂದ್ರಿಕೆ**ಯಲ್ಲಿ ಉಕ್ತವಾಗಿರುತ್ತವೆ.

ಹೀಗಿರುವದರಿಂದ ಮೋಕ್ಷಾರ್ಥಿಯಾದ ವೀರಶೈವಮತಸ್ಥನು ಅಂಗದಮೇಲೆ ಲಿಂಗವನ್ನು ಯಾವಾಗಲೂ ಧರಿಸಿ ಆಯಾಯ ಕಾಲದಲ್ಲಿ ಪೂಜಿಸಿ ಶಿವಪ್ರಸಾದವನ್ನು ಸ್ವೀಕರಿಸಬೇಕು.

**ಅಸಮರ್ಚ್ಯ ಪದಂ ಶಂಭೋರ್ಭುಙ್ಕ್ತೇ ಖಾದತಿ ಪಾತಿ ಯಃ।**
**ಶ್ವಮಾಂಸಮಸ್ಥಿಮೂತ್ರಂ ಚ ಭುಙ್ಕ್ತೇ ಖಾದತಿ ಪಾತಿ ಸಃ॥**

ಶಿವಪೂಜೆಯನ್ನು ಮಾಡದೆ ಉಂಡ ಅನ್ನವು ನಾಯಿಯ ಮಾಂಸಕ್ಕೂ ತಿಂದ ಭಕ್ಷ್ಯವು ನಾಯಿಯ ಮೂಳೆಗೂ ಕುಡಿದ ನೀರು ನಾಯಿಯ ಮೂತ್ರಕ್ಕೂ ಸಮಾನವೆಂದು ಪ್ರಮಾಣವಚನವಿರುವದು. ಇದಲ್ಲದೆ–

**ಸರ್ವಂ ಲಿಂಗಾಕಿತಂ ಶ್ರೇಷ್ಠಮನ್ಯಚ್ಚಂಡಾಲವದ್ಭವೇತ್॥**

ಲಿಂಗದಚಿಹ್ನೆಯಿರುವದೆಲ್ಲವೂ ಶೇಷ್ಠವು, ಮಿಕ್ಕದ್ದೆಲ್ಲ ಚಂಡಾಲನಂತೆ ಇರುವದು – ಎಂದು ಶಂಕರಸಂಹಿತೆಯಲ್ಲಿ ವೀರಮಾಹೇಶ್ವರ ಪ್ರಶಂಸೆಯೆಂಬ ಪ್ರಕರಣದಲ್ಲಿ ಹೇಳಿರುವದರಿಂದ ವೀರಶೈವನಾದವನು ತಾನು ಲಿಂಗಧಾರಣವುಳ್ಳವನಾಗಿರಬೇಕು; ಪತ್ನಿ, ಪುತ್ರ, ಭೃತ್ಯ – ಮುಂತಾದವರನ್ನು ಲಿಂಗಧಾರಣವುಳ್ಳವರನ್ನಾಗಿ ಮಾಡಬೇಕು. ವಾಸಿಸುವ ಮನೆಗೂ ಗೋವು ಮುಂತಾದವುಗಳಿಗೂ ಲಿಂಗ ಮುದ್ರೆಯನ್ನು ಹಾಕಬೇಕು; ಉಪಯೋಗಿಸುವ ಸಕಲ ಪದಾರ್ಥಗಳೂ ಲಿಂಗಮುದ್ರಾಂಕಿತವಾಗಿದ್ದರೆ ಶ್ರೇಷ್ಠ, ಹಾಗಿಲ್ಲದಿದ್ದರೆ ಚಂಡಾಲನಿಗೆ ಸಮಾನ – ಎಂದು ಭಾವಿಸಬೇಕು.

ವೀರಶೈವಕುಲದಲ್ಲಿ ಹುಟ್ಟಿದಾಗ್ಯೂ ಅಂಗದಲ್ಲಿ ಲಿಂಗವನ್ನು ಧರಿಸದವರು

**ಮದ್ಯಪಾನೀ ಮಾಂಸಭಕ್ಷೀ ಚಾನ್ಯದೇವಸ್ಯ ಪೂಜಕಃ।**
**ಅಲಿಂಗ್ಯಪಿ ಚ ತತ್ಸಂಗೀ ಪಂಚೈತೇ ಭವಿನಃ ಸ್ಮೃತಾಃ॥**

ಮದ್ಯಪಾನಿ, ಮಾಂಸಭಕ್ಷಕನು, ಶಿವೇತರದೇವತಾ ಭಜಕನು, ಅಲಿಂಗಕುಲೋತ್ಪನ್ನನು, ತತ್ಸಂಪರ್ಕವುಳ್ಳವನು – ಇವರೆಲ್ಲಾ ಭವಿಗಳೆನಿಸುವರು ಎಂಬ ಪ್ರಮಾಣದಂತೆ ಭವಿಗಳಾಗಿರುವರು. ವೀರಶೈವಮತದಲ್ಲಿ ಹುಟ್ಟಿ ನಿತ್ಯವೂ ಲಿಂಗಧಾರಣ, ಗುರುಸೇವೆ, ಸ್ನಾನ, ಲಿಂಗ ಪೂಜನ, ಜಂಗಮಾರಾಧನ, ಪಾದೋದಕಪ್ರಸಾದ ಸ್ವೀಕರಣ, ಭಸ್ಮ ರುದ್ರಾಕ್ಷಧಾರಣ, ಪಂಚಾಕ್ಷರೀಮಂತ್ರಪಠನ – ಇವುಗಳನ್ನಾದರೂ ಆಚರಿಸದವನು ಶಿವದ್ರೋಹದಿಂದ ಘೋರವಾದ ನರಕವನ್ನು ಹೊಂದುವನು.

★★★★★

# ಎರಡು ಬಗೆಯ ಉಪಾಸನೆಗಳು

### (ವೀರಶೈವಸಿದ್ಧಾಂತ: 'ಪಂಚಾಚಾರ್ಯಪ್ರಭಾ' ಪತ್ರಿಕೆಯಿಂದ)

**ಇಷ್ಟಲಿಂಗಂ ಪ್ರಾಣಲಿಂಗಮೇಕೀಕೃತ್ಯ ಸಮರ್ಚಯೇತ್ ।**
**ಮಣಿಮಾಲಾಂ ಮಂತ್ರಮಾಲಾಮೇಕೀಕೃತ್ಯ ಜಪೇತ್ಸದಾ ॥**

ಗುರುವಿನಿಂದ ಅನುಗ್ರಹೀತವಾದ ಇಷ್ಟಲಿಂಗವನ್ನೂ ಹೃದಯದಲ್ಲಿ ವಿರಾಜಮಾನವಾದ ಪ್ರಾಣಲಿಂಗವನ್ನೂ ರುದ್ರಾಕ್ಷಮಾಲೆಯನ್ನೂ ಮಂತ್ರಮಾಲೆಯನ್ನೂ ಒಂದುಮಾಡಿ ಪೂಜಿಸುತ್ತಲೂ ಜಪಿಸುತ್ತಲೂ ಇರುವವನೇ ವೀರಶೈವನೆಂದು ಶಿವಾಗಮಗಳು ಎರಡು ಉಪಾಸನೆಗಳಿಗೂ ಅವಕಾಶವನ್ನು ಕೊಟ್ಟಿರುತ್ತವೆ. ಗುರುವಿನಿಂದ ಅನುಗ್ರಹೀತವಾದ ಇಷ್ಟಲಿಂಗವನ್ನು ಯಾವಾಗಲೂ ಆರಾಧಿಸುತ್ತಿರುವುದೇ ಬಹಿರುಪಾಸನೆಯು; ಹೃದಯಾಕಾಶದಲ್ಲಿ ಪ್ರಾಣಲಿಂಗವನ್ನು ಆರಾಧಿಸುತ್ತಿರುವುದೇ ಅಂತರುಪಾಸನೆಯು.

ಮನಸ್ಸಿನಲ್ಲಿ ಯಾವ ವಿಧವಾದ ಜ್ಞಾನವಿರುವುದೋ ಆ ಜ್ಞಾನಾನುಗುಣವಾದ ಫಲವು ಕೈಸೇರಬೇಕಾದರೆ ಆ ಜ್ಞಾನವು ಕ್ರಿಯಾರೂಪದಿಂದ ಪರಿಣಮಿಸಲೇಬೇಕು. ಲೋಕದಲ್ಲಿ ಒಬ್ಬನು ಧನಾರ್ಜನೆಯನ್ನು ಮಾಡಿ ಸುಖವನ್ನು ಸಂಪಾದಿಸಬೇಕೆಂಬ ಜ್ಞಾನವಿದ್ದು ಅದಕ್ಕನುಗುಣವಾದ ಬಹಿರ್ವ್ಯಾಪಾರದಲ್ಲಿ

ತೊಡಗಿ ಜನಾನುರಾಗಿಯಾಗಿಯೂ, ಸತ್ಯಶೀಲನಾಗಿಯೂ ವರ್ತಿಸಬೇಕಾಗುವಂತೆ ಮನಸ್ಸಿನಲ್ಲಿ ಲಿಂಗರೂಪನಾದ ಈಶ್ವರನ ಜ್ಞಾನವೊಂದಿದ್ದರೆ ಅಷ್ಟು ಮಾತ್ರದಿಂದ ಇವನು ಭವಸಮುದ್ರದಿಂದೆದ್ದು ಸುಖ ಪಡೆಯಲಾರನು. ಅಂತರ್ವ್ಯಾಪ್ತವಾದ ಆ ಈಶ್ವರನ ಜ್ಞಾನಕ್ಕನುಗುಣವಾಗಿ ಸತ್ಯ, ಅಶೌಚಾದಿವ್ರತಗಳನ್ನು ಪಾಲಿಸುತ್ತ ಗುರುವಿನ ಅನುಜ್ಞೆಯನ್ನು ಸ್ವಲ್ಪವೂ ಮೀರದಂತೆ ಲಿಂಗ ಮೂರ್ತಿಯನ್ನು ಧೂಪದೀಪಾದಿಗಳಿಂದ ಅರ್ಚಿಸುತ್ತಾ ಬರುವುದರಿಂದ ಕ್ರಿಯಾಜ್ಞಾನವು ಏಕತ್ರ ಸಮ್ಮಿಳಿತವಾಗಿ ಈ ಕ್ರಿಯಾಜ್ಞಾನಾಶ್ರಯನಾದ ಈಶ್ವರನು ಪ್ರಸನ್ನನಾಗುತ್ತಾನೆ. ಹಾಗಿಲ್ಲದೆ ತಿಳಿವಳಿಕೆಯಿಲ್ಲದೆ ಬಹಿರಾಡಂಬರದಿಂದ ವ್ಯಾಪಾರವನ್ನು ಮಾಡುವವನಾಗಲಿ ಬಹಿರ್ವ್ಯಾಪಾರವನ್ನೇ ಮಾಡದೆ ಸೋಮಾರಿಯಾಗಿ ಕುಳಿತುಕೊಂಡು ಮನಸ್ಸಿನಲ್ಲಿ ಸುಖವನ್ನು ನೆನಸುವವನಾಗಲಿ ಇಬ್ಬರಿಗೂ ಧನಾರ್ಜನೆಯಾಗದೆ ದುಃಖಪಡುವಂತೆ ಮನಸಾ ಪರಮಾತ್ಮನನ್ನು ಸ್ಮರಿಸುತ್ತಿರುವವನಾಗಲಿ ಅಥವಾ ಜ್ಞಾನವಿಲ್ಲದೆ ಹೊರಗೆ ಈಶ್ವರಪೂಜಾದಿ ಕ್ರಿಯೆಗಳನ್ನು ಮಾಡುವವನಾಗಲಿ ಒಬ್ಬರೂ ಮುಕ್ತಿಸಾಮ್ರಾಜ್ಯಸೌಖ್ಯವನ್ನು ಪಡೆಯದೆ ದುಃಖಿಗಳಾಗಬೇಕಾಗುವುದು.

ಆದ್ದರಿಂದ ಮೋಕ್ಷ ಸೌಖ್ಯವನ್ನು ಅಪೇಕ್ಷಿಸುವ ಮನುಷ್ಯನಿಗೆ ಪರಮಾತ್ಮಸಂಬಂಧವಾದ ಕ್ರಿಯೆಯೂ, ಒಳಗೆ ಪರಮಾತ್ಮಸಂಬಂಧವಾದ ಜ್ಞಾನವೂ ಇವೆರಡೂ ಹಾರುವ ಪಕ್ಷಿಗೆ ಸಹಾಯವಾಗಿರುವ ಎರಡು ರೆಕ್ಕೆಗಳಂತೆ ಸದಾ ಸಹಾಯಕಗಳಾಗಿವೆಯೆಂದು ಭಗವತ್ಪಾದ ರೇಣುಕಾಚಾರ್ಯರು ಜ್ಞಾನಕ್ರಿಯೆಗಳಿಗೆ ಸಮಸಮುಚ್ಚಯವನ್ನು ಬೋಧಿಸಿರುತ್ತಾರೆ.

★★★★★

# ವೀರಶೈವಧರ್ಮವು

**- ಶ್ರೀಯುತ ಜೇರಿಗೆ ಬಸವಲಿಂಗಪ್ಪನವರು**

ವೀರಶೈವರು ಶಿವನನ್ನು ಅಥವಾ ಲಿಂಗವನ್ನು ಜಗತ್ತಿಗೆ ಮೂಲಚೈತನ್ಯವೆಂದು ಅರಿಯುತ್ತಾರೆ; ಅಂದರೆ ಶಿವ ಲಿಂಗ - ಎಂಬ ಶಬ್ದಗಳನ್ನು ಬ್ರಹ್ಮಶಬ್ದಕ್ಕೆ ಪರ್ಯಾಯನಾಮವಾಗಿ ಅಂಗೀಕರಿಸಿರುತ್ತಾರೆ. ಇವರು ಬ್ರಹ್ಮಪದವಾಚ್ಯವಾದ ಲಿಂಗದಲ್ಲಿ ಶಕ್ತಿಯೆಂಬುದೊಂದು ಅಡಗಿರುತ್ತದೆಂದು ನಂಬಿರುತ್ತಾರೆ. ಈ ಲಿಂಗವೂ ತದ್ಗತಶಕ್ತಿಯೂ ನಿತ್ಯವೆಂದು ತಿಳಿಯುತ್ತಾರೆ. ಎರಡೂ ಯಾವಾಗ್ಯೂ ಇದ್ದೇ ಇರುವವೆಂದು ತಿಳಿಯುತ್ತಾರೆ. ವಿಜ್ಞಾನಶಾಸ್ತ್ರದ (Science) ಚೈತನ್ಯ (Force), ಸಾಮಗ್ರಿ (Matter) ಎರಡೂ - ನಿತ್ಯವಾದವುಗಳೆಂತಲೂ ಎರಡೂ ಸೃಷ್ಟಿಸಲ್ಪಡಿಸ ತಕ್ಕವುಗಳಲ್ಲವೆಂತಲೂ ಮತ್ತು ನಾಶಮಾಡಲ್ಪಡತಕ್ಕವುಗಳಲ್ಲವೆಂತಲೂ ಹೇಳುವಂತೆ, ಲಿಂಗವೂ ಶಕ್ತಿಯೂ ಯಾವಾಗ್ಯೂ ಇರುವವುಗಳೆಂದು ತರ್ಕಿಸುತ್ತಾರೆ. ಲಿಂಗವು ಯಾವಾಗಲೂ ಒಂದೇ ರೀತಿಯಾಗಿರುತ್ತದೆಂತಲೂ ಶಕ್ತಿಯು ಅದರೊಳಗಡಗಿ ಕೊಂಡಿದ್ದು ಸಂಕುಚಿತಸ್ಥಿತಿಯಲ್ಲಿರುವಾಗ ಜಗತ್ತಿಲ್ಲದೆ ಬಟ್ಟಬಯಲಾಗಿ ರುತ್ತದೆಂತಲೂ, ವಿಕಸನಸ್ಥಿತಿಯಲ್ಲಿರುವಾಗ ಜಗತ್ತು ತೋರುವದೆಂತಲೂ ಹೇಳುತ್ತಾರೆ. ಇಂಗಡಲಿನಲ್ಲಿ ಇಂಪೂ, ಬೆಳದಿಂಗಳಿನಲ್ಲಿ ತಂಪೂ ಕುಸುಮಗಳಲ್ಲಿ ಕಂಪೂ - ಹೇಗೆ ಅಭೇದ್ಯವಾಗಿ ಅಡಗಿರುತ್ತವೋ ಹಾಗೇ ಲಿಂಗದಲ್ಲಿ ಶಕ್ತಿಯು ಅಡಗಿರುತ್ತದೆಂದು ಹೇಳುತ್ತಾರೆ.

ಮೊಟ್ಟಮೊದಲು ಜಗತ್ತಿಲ್ಲದಿದ್ದಾಗ ಅಂದರೆ ಭೂಮಿಯಿಲ್ಲದಿದ್ದಾಗ, ಆಕಾಶವಿಲ್ಲದಿದ್ದಾಗ, ಕತ್ತಲಿಲ್ಲದಿದ್ದಾಗ, ಬೆಳಕಿಲ್ಲದಿದ್ದಾಗ, ಕೆಳಗೆಂಬುದಿಲ್ಲದಿದ್ದಾಗ, ಮೇಗೆಂಬುದಿಲ್ಲದಿದ್ದಾಗ, ಚಲನವೆಂಬುದಿಲ್ಲದಿದ್ದಾಗ, ಅಚಲನವೆಂಬುದಿಲ್ಲದಿದ್ದಾಗ, ನಾನೆಂಬುದಿಲ್ಲದಿದ್ದಾಗ, ನೀನೆಂಬುದಿಲ್ಲದಿದ್ದಾಗ, ಏನೇನೂ ಇಲ್ಲದಿದ್ದಾಗ - ಲಿಂಗದಲ್ಲಿ ಶಕ್ತಿಯು ಅಡಗಿ ತಾನೇ ತಾನಾಗಿತ್ತು. ಶಕ್ತಿಯು ಸ್ಫುರಣವಾಗಲು ಆ ಲಿಂಗದಲ್ಲಿ ನಾದ, ಬಿಂದು, ಕಳೆಗಳುಂಟಾಗಿ ಅವುಗಳ ವ್ಯಾಪನೆಯಿಂದ ಸೂರ್ಯ, ಚಂದ್ರ, ಪೃಥ್ವಿ, ಪಂಚಭೂತಗಳು, ಜೀವರಾಶಿಗಳು - ಮೊದಲಾದವುಗಳುಂಟಾದವು. ಮೊದಲು ಲಿಂಗದಲ್ಲಿ ಶಕ್ತಿಯು ಸಂಕುಚಿತವಾಗಿದ್ದು ಜಗತ್ತಿಲ್ಲದೆ ಬಯಲಾಗಿದ್ದಾಗ

ಆ ಲಿಂಗಕ್ಕೆ ನಿರಂಜನಲಿಂಗವೆಂದು ಹೆಸರು. ಆಮೇಲೆ ಮೇಲೆ ಹೇಳಿದಂತೆ ಶಕ್ತಿಯ ಸ್ಫುರಣದಿಂದ ಆ ಲಿಂಗದಲ್ಲಿ ಜಗತ್ತುಂಟಾಗಲು ಅದೇ ಲಿಂಗಕ್ಕೆ ಮಹಾಲಿಂಗವೆಂದು ಹೆಸರುಕೊಟ್ಟಿರುತ್ತಾರೆ. ಲಿಂಗ ಶಕ್ತಿಗಳ ವಿಚಾರಕ್ಕೆ ಸಿದ್ಧಾಂತಶಿಖಾಮಣಿಯಲ್ಲಿಯೂ ವಚನಗ್ರಂಥಗಳಲ್ಲಿಯೂ ಬೇರೆ ಬೇರೆ ಉಪಮಾನಗಳನ್ನು ಕೊಟ್ಟಿರುತ್ತಾರೆ. ಲಿಂಗವು ಸಮುದ್ರದ ನೀರಿನಂತೆ ಏಕವಾಗಿರುತ್ತದೆಂತಲೂ, ಶಕ್ತಿಯು ಸಮುದ್ರದ ಮೇಲಿನ ಗಾಳಿಯಂತಿರುತ್ತದೆಂತಲೂ, ಗಾಳಿಯು ಸುಮ್ಮನಿರುವಾಗ ಸಮುದ್ರದ ನೀರು ಅಳ್ಳಾಡದಿರುವಂತೆ ಶಕ್ತಿಯು ಸ್ತಂಭೀಭೂತವಾಗಿರುವಾಗ ಲಿಂಗದಲ್ಲಿ ಯಾವ ಜಗತ್ತೂ ಕಾಣದೆ ತಾನೇ ಆಗಿರುತ್ತದೆಂತಲೂ, ಗಾಳಿಯು ಚಲಿಸಿದಾಗ ಸಮುದ್ರದಲ್ಲಿ ಅಲೆಗಳುಂಟಾಗುವಂತೆ ಲಿಂಗದಲ್ಲಿ ಜಗತ್ತು ಕಾಣಿಸುತ್ತದೆಂತಲೂ ಹೇಳುತ್ತಾರೆ. ಇನ್ನೊಂದು ಉಪಮಾನವನ್ನು ಕೊಡುತ್ತಾರೆ: ಲಿಂಗವು ಬಿಳಿಯ ಪತ್ರದಂತೆ ನಿಷ್ಕಲ್ಮಷವಾಗಿರುತ್ತದೆಂತಲೂ, ಶಕ್ತಿಯು ಉಪಯೋಗಿಸಲ್ಪಡದೆ ಇರುವ ಬಣ್ಣದ ಕಡ್ಡಿಯಂತಿರುತ್ತದೆಂತಲೂ, ಬಣ್ಣದ ಕಡ್ಡಿಯು ಸುಮ್ಮನಿರುವಾಗ ಪತ್ರವು ಯಾವ ಚಿತ್ರವೂ ಇಲ್ಲದೆ ಬರಿದಾಗಿರುವಂತೆ ಲಿಂಗದಲ್ಲಿ ಯಾವ ಜಗತ್ತೂ ಕಾಣದೆ ತಾನೇ ಆಗಿರುತ್ತದೆಂತಲೂ, ಬಣ್ಣದ ಕಡ್ಡಿಯು ಉಪಯೋಗಿಸಲ್ಪಟ್ಟಾಗ ಪತ್ರದಲ್ಲಿ ನಾನಾ ವಿಧವಾದ ಚಿತ್ರಗಳು ಕಾಣುವಂತೆ ಲಿಂಗದಲ್ಲಿ ಜಗತ್ತು ಕಾಣಿಸುತ್ತದೆಂತಲೂ ಹೇಳುತ್ತಾರೆ.

ಈ ರೀತಿಯಾಗಿ ಲಿಂಗದಲ್ಲಿ ಜಗತ್ತು ಉತ್ಪತ್ತಿಯಾದ ಒಡನೆಯೆ ಆ ಲಿಂಗಕ್ಕೆ ಮಹಾಲಿಂಗವೆಂಬ ಹೆಸರು ಕೊಡಲ್ಪಟ್ಟಿತೆಂದು ಮೇಲೆ ಹೇಳಿದೆನಷ್ಟೆ. ಈ ಮಹಾಲಿಂಗೋದ್ಭವಾದ ಕೂಡಲೆ ಅಂಗಲಿಂಗೋದ್ಭವಗಳಾದವೆಂದು ಅಂದರೆ ಆ ಮಹಾಲಿಂಗವು ಅಂಗವೆಂತಲೂ, ಲಿಂಗವೆಂತಲೂ – ಎರಡು ವಿಧವಾಯಿತೆಂದು ಹೇಳುತ್ತಾರೆ. ಜಗತ್ತಿನಲ್ಲಿ ಎಲ್ಲಾ ವಸ್ತುಗಳೂ ಒಂದಕ್ಕೊಂದು ಅಧೀನವಾಗಿಯೂ ಆಧಾರವಾಗಿಯೂ ಇರುವದನ್ನು ವಿಮರ್ಶೆಮಾಡಿ ಅಧೀನವಸ್ತುವೇ ಅಂಗವೆಂತಲೂ, ಆಧಾರವಸ್ತುವೇ ಲಿಂಗವೆಂತಲೂ ವಿಭಜಿಸಿ ತಿಳಿಯಬೇಕು, ಹೇಗೆಂದರೆ – ಗಂಡಹೆಂಡರಲ್ಲಿ ಹೆಂಡತಿಯೇ ಅಂಗವೆನಿಸುತ್ತಾಳೆ, ಗಂಡನೇ ಲಿಂಗವೆನಿಸುತ್ತಾನೆ. ಗುರುಶಿಷ್ಯರಲ್ಲಿ ಶಿಷ್ಯನೇ ಅಂಗವೆನಿಸುತ್ತಾನೆ, ಗುರುವೇ ಲಿಂಗವೆನಿಸುತ್ತಾನೆ. ಭೂಮಿವೃಕ್ಷಗಳಲ್ಲಿ ವೃಕ್ಷವೇ ಅಂಗವೆನಿಸುತ್ತದೆ, ಭೂಮಿಯೇ ಲಿಂಗವೆನಿಸುತ್ತದೆ. ತಾಯಿಶಿಶುವಿನಲ್ಲಿ ಶಿಶುವೇ

ಅಂಗವೆನಿಸುತ್ತದೆ, ತಾಯಿಯೇ ಲಿಂಗವೆನಿಸುತ್ತಾಳೆ. ಭೂಮಿಚಂದ್ರದಲ್ಲಿ ಚಂದ್ರನೇ ಅಂಗವೆನಿಸುತ್ತಾನೆ, ಭೂಮಿಯೇ ಲಿಂಗವೆನಿಸುತ್ತದೆ. ಸೂರ್ಯಭೂಮಿಗಳಲ್ಲಿ ಭೂಮಿಯೇ ಅಂಗವೆನಿಸುತ್ತದೆ, ಸೂರ್ಯನೇ ಲಿಂಗವೆನಿಸುತ್ತಾನೆ. ಇದೆಲ್ಲ ಸಾರ್ವತ್ರಿಕಭಾವಾಯಿತು. ಧಾರ್ಮಿಕವಿಧಾನದಿಂದ ಅಂಗವೆಂದರೆ ಜೀವಿಯೆಂದೂ ಲಿಂಗವೆಂದರೆ ಜಗಚ್ಚೇತನವಾದ ವಸ್ತುವೆಂದೂ ವಿಭಜನೆಮಾಡಿರುತ್ತಾರೆ.

ಈ ರೀತಿ ಮೊದಲು ಸಂಕುಚಿತಶಕ್ತಿಯಿಂದೊಡಗೂಡಿದ ಲಿಂಗವೊಂದೇ ಇದ್ದದ್ದು ಶಕ್ತಿಸ್ಫುರಣದಿಂದ ಜಗತ್ತಾಗಿ ಅಂಗವೆಂಬ ಜೀವನೂ ಲಿಂಗವೆಂಬ ಪರಮನೂ ಆಗಿ ಲೋಕವ್ಯವಹಾರವೆಂಬ ತೊಡರುಂಟಾಗಿ ಮೋಕ್ಷವೆಂಬ ಬಿಡುಗಡೆಯನ್ನು ಹೊಂದುವದಕ್ಕೆ ಒಂದು ಸಾಧನವು ಬೇಕಾದುದರಿಂದ ಬಸವಾದಿ ಪ್ರಮಥರು ಷಟ್ಸ್ಥಲವೆಂಬ ಸಾಧನವನ್ನು ತಮ್ಮ ಅಮೋಘವಾದ ವಚನಗಳಿಂದ ಜಗತ್ತಿಗೆ ಕೊಟ್ಟಿರುತ್ತಾರೆಂದು ನಾನು ತಿಳಿಯುತ್ತೇನೆ. ಶರೀರಶಕ್ತಿಯನ್ನು ಪಡೆಯುವದಕ್ಕೆ ಬೇರೆ ಬೇರೆ ದೇಶಗಳಲ್ಲೂ ಬೇರೆ ಬೇರೆ ಜನಾಂಗಗಳಲ್ಲೂ ಬೇರೆ ಬೇರೆ ವ್ಯಾಯಾಮಗಳು ಹೇಗೆ ಉಂಟಾಗಿರುತ್ತವೋ ಹಾಗೆಯೇ ಮೋಕ್ಷ ಪ್ರಾಪ್ತಿಗೆ ಬೇರೆ ಬೇರೆ ಧರ್ಮಗಳಲ್ಲಿ ಅಂದರೆ ಕ್ರಿಸ್ತಧರ್ಮ, ಇಸ್ಲಾಂಧರ್ಮ, ಬುದ್ಧಧರ್ಮ, ಜೈನಧರ್ಮ, ದ್ವೈತಧರ್ಮ, ಅದ್ವೈತಧರ್ಮಗಳಲ್ಲಿ ಬೇರೆ ಬೇರೆ ಸಾಧನಗಳುಂಟಾಗಿರುವಂತೆ ವೀರಶೈವರಲ್ಲಿ ಷಟ್ಸ್ಥಲವೆಂಬ ಸಾಧನವುಂಟಾಗಿರುತ್ತದೆ. ಶಿವೈಕ್ಯತೆಗೆ ಈ ಷಟ್ಸ್ಥಲಸಾಧನವು ಅತ್ಯುತ್ಕೃಷ್ಟವಾದ ಸಾಧನವೆಂದು ಲಿಂಗವಂತರು ತಿಳಿದಿರುತ್ತಾರೆ. ಲಿಂಗಾಯತರು ಹೇಳುವದೇನೆಂದರೆ - ಕಾಯಪುಷ್ಟಿಯು ಕೆಲವು ವ್ಯಾಯಾಮಗಳಿಂದ ಬೇಗನೆ ಬರುವಂತೆಯೂ, ಕೆಲವು ವ್ಯಾಯಾಮಗಳಿಂದ ನಿಧಾನವಾಗಿ ಬರುವಂತೆಯೂ ಬೇರೆ ಬೇರೆ ಧರ್ಮಗಳ ಸಾಧನದಿಂದ ಮೋಕ್ಷವು ನಿಧಾನವಾಗಿ ಆಗುತ್ತದೆಂತಲೂ, ಲಿಂಗಾಯತಧರ್ಮದ ಷಟ್ಸ್ಥಲಸಾಧನದಿಂದ ಮೋಕ್ಷವು ಒಂದೇ ಜನ್ಮದಲ್ಲಿ ಆಗುತ್ತದೆಂತಲೂ ಅಭಿಮಾನದಿಂದ ಹೇಳುತ್ತಾರೆ. ಅದು ಹೇಗಾದರೂ ಇರಲಿ, ಷಟ್ಸ್ಥಲವನ್ನು ಶೋಧನೆಮಾಡಿ ನೋಡಿದರೆ ಇಹದಲ್ಲಿ ಸೌಖ್ಯಪ್ರಾಪ್ತಿಗೂ, ಪರದಲ್ಲಿ ಮೋಕ್ಷಪ್ರಾಪ್ತಿಗೂ ಇದು ಉತ್ತಮಸಾಧನವೆಂದು ಸಾಧಕರಿಗೆ ಮನದಟ್ಟಾಗಬಹುದೆಂದು ಕಾಣುತ್ತದೆ.

ಲಿಂಗಾಯತಷಟ್ಸ್ಥಲಶಾಸ್ತ್ರವು ತಾತ್ತ್ವಿಕವೆನ್ನುವದಕ್ಕಿಂತಲೂ (theoretical) ಹೆಚ್ಚು ವ್ಯಾವಹಾರಿಕವಾಗಿರುತ್ತದೆ (practical) ಎನ್ನಬೇಕು.

ವೀರಶೈವರು ಷಟ್ಸ್ಥಲಸಾಧನವನ್ನು ಆರು ಮೆಟ್ಟಿಲುಗಳಾಗಿ ಮಾಡಿರುತ್ತಾರೆ. ಅವು ಯಾವವೆಂದರೆ: ಭಕ್ತ, ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ. ಈ ಆರನ್ನೂ ಅಂಗಸ್ಥಲವೆಂದು ಕರೆದಿರುತ್ತಾರೆ. ಈ ಆರು ಅಂಗಸ್ಥಲಕ್ಕೂ ಆರು ಲಿಂಗಸ್ಥಲಗಳನ್ನು ಹೇಳಿರುತ್ತಾರೆ. ಅವು ಯಾವವೆಂದರೆ: ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗ, ಆರು ಲಿಂಗಸ್ಥಲಕ್ಕೂ ಆರು ಶಕ್ತಿಗಳು ಕೂಡಿರುತ್ತವೆ. ಇವುಗಳಿಗೆ ಕ್ರಮವಾಗಿ ಕ್ರಿಯಾಶಕ್ತಿ, ಜ್ಞಾನಶಕ್ತಿ, ಇಚ್ಛಾಶಕ್ತಿ, ಆದಿಶಕ್ತಿ, ಪರಾಶಕ್ತಿ, ಚಿಚ್ಛಕ್ತಿ – ಎಂದು ಹೆಸರು. ಈ ಆರು ಶಕ್ತಿಗಳೂ ಜೀವಿಯನ್ನು ಪ್ರವೃತ್ತಿಯಿಂದ ಲೋಕದ ಕಡೆಗೆ ಎಳೆಯುತ್ತಿರುತ್ತವೆ. ಇದನ್ನು ತಡೆದು ನಿವೃತ್ತಿಯಿಂದ ಪರಮನ ಕಡೆಗೆ ಹೋಗುವದಕ್ಕೆ ಆರು ಭಕ್ತಿಗಳು ಕೆಲಸಮಾಡುತ್ತವೆ. ಅವುಗಳು ಯಾವವೆಂದರೆ: ಸದ್ಭಕ್ತಿ, ನಿಷ್ಠಾಭಕ್ತಿ, ಅವಧಾನಭಕ್ತಿ, ಅನುಭವಭಕ್ತಿ, ಆನಂದಭಕ್ತಿ, ಸಮರಭಕ್ತಿ, ಆಯುಧಗಳೋಪಾಧಿಯಲ್ಲಿರುವ ಈ ಆರು ಭಕ್ತಿಗಳನ್ನು ಹಿಡಿದುಕೊಂಡು, ಆತಂಕಗಳಾಗಿರುವ ಆರು ಶಕ್ತಿಗಳನ್ನೂ ನಿಗ್ರಹಿಸಿಕೊಂಡು, ಭಕ್ತಸ್ಥಲದಿಂದ ಮಾಹೇಶ್ವರಸ್ಥಲಕ್ಕೂ, ಮಾಹೇಶ್ವರ ಸ್ಥಲದಿಂದ ಪ್ರಸಾದಿಸ್ಥಲಕ್ಕೂ ಪ್ರಸಾದಿಸ್ಥಲದಿಂದ ಪ್ರಾಣಲಿಂಗಿಸ್ಥಲಕ್ಕೂ, ಪ್ರಾಣಲಿಂಗಿ ಸ್ಥಲದಿಂದ ಶರಣಸ್ಥಲಕ್ಕೂ, ಶರಣಸ್ಥಲದಿಂದ ಐಕ್ಯಸ್ಥಲಕ್ಕೂ ಹತ್ತಿ ಶಿವೈಕ್ಯತೆಯನ್ನು ಹೊಂದುವುದೇ ಈ ಷಟ್ಸ್ಥಲವೆಂಬ ಸಾಧನದ ಮುಖ್ಯೋದ್ದೇಶವಾಗಿರುತ್ತದೆ.

## ಷಟ್ಸ್ಥಲ

ವೀರಶೈವಧರ್ಮದಲ್ಲಿ ಷಟ್ಸ್ಥಲಕ್ಕೆ ಇರುವ ಮುಖ್ಯಸ್ಥಾನವನ್ನು ಹಿಂದೆ ಸೂಚಿಸಿದ್ದೆನಷ್ಟೆ, ಈಗ ಇದರ ವಿವರವನ್ನು ಕುರಿತು ಸ್ವಲ್ಪಮಟ್ಟಿಗೆ ಪ್ರಸ್ತಾಪಿಸುವೆನು.

ಮೊದಲು ಭಕ್ತಸ್ಥಲದಲ್ಲಿದ್ದುಕೊಂಡು ಏನು ಮಾಡಬೇಕು, ಮಾಹೇಶ್ವರ ಸ್ಥಲದಲ್ಲಿದ್ದುಕೊಂಡು ಏನು ಮಾಡಬೇಕು, ಪ್ರಸಾಧಿಸ್ಥಲದಲ್ಲಿದ್ದುಕೊಂಡು ಏನು ಮಾಡಬೇಕು, ಪ್ರಾಣಲಿಂಗಸ್ಥಲದಲ್ಲಿದ್ದುಕೊಂಡು ಏನು ಮಾಡಬೇಕು, ಶರಣ ಸ್ಥಲದಲ್ಲಿದ್ದುಕೊಂಡು ಏನು ಮಾಡಬೇಕು, ಐಕ್ಯಸ್ಥಲದಲ್ಲಿದ್ದುಕೊಂಡು ಏನು ಮಾಡಬೇಕು – ಎಂಬ ವಿಚಾರವು ವೀರಶೈವಮತಕರ್ತೃವಾದ ಬಸವಣ್ಣನ ವಚನದಲ್ಲಿ ಉತ್ತೇಜಕವಾಗಿ ಹೇಳಿರುತ್ತದೆ. ಇತರ ಶರಣರ ವಚನಗಳಲ್ಲೂ ಹೇಳಿರುತ್ತದೆ. ಈ ಆರು ಸ್ಥಲದ ಆಚರಣೆಗೂ ಅರ್ಥಗರ್ಭಿತವಾದ ಆರು ಕನ್ನಡಶಬ್ದಗಳನ್ನು ಕೊಡುತ್ತೇನೆ:

| | | |
|---|---|---|
| ಭಕ್ತಸ್ಥಲ - | ಕೊಡು - | ದಾಸೋಹ |
| ಮಾಹೇಶ್ವರಸ್ಥಲ - | ನಡೆ - | ಸದ್ವರ್ತನೆ |
| ಪ್ರಸಾದಿಸ್ಥಲ - | ಪಡೆ - | ಪ್ರಸಾದಸ್ವೀಕಾರ |
| ಪ್ರಾಣಲಿಂಗಿಸ್ಥಲ - | ನೋಡು - | ಶಿವಸಾಕ್ಷಾತ್ಕಾರ |
| ಶರಣಸ್ಥಲ - | ತಡೆ - | ವೈರಾಗ್ಯ |
| ಐಕ್ಯಸ್ಥಲ - | ಕೂಡು - | ಶಿವಜೀವೈಕ್ಯ |

1. ಭಕ್ತಸ್ಥಲದಲ್ಲಿ – 'ಕೊಡು' ಎಂಬುದರಲ್ಲಿ ಶಿವನಿಗೂ ಶಿವಭಕ್ತರಿಗೂ ದಾಸೋಹಮಾಡಬೇಕು. ಇದಕ್ಕೆ ಬಸವಣ್ಣನ ವಚನದಲ್ಲಿ ಹೀಗೆ ಬರೆದಿರುತ್ತದೆ:

**ಭಕ್ತನು ಭಕ್ತನ ಕಾಂಬುದು ಸದಾಚಾರ**
**ಅಲ್ಲಿ ಕೂಡಿ ದಾಸೋಹವ ಮಾಡಿದರೆ**
**ಕೂಡಿಕೊಂಬನು ನಮ್ಮ ಕೂಡಲ ಸಂಗಮದೇವಯ್ಯ ॥**

2. ಮಾಹೇಶ್ವರಸ್ಥಲದಲ್ಲಿ – 'ನಡೆ' ಎಂಬುದರಲ್ಲಿ ಸದ್ವರ್ತನದಿಂದ ನಡೆಯಬೇಕು. ಇದಕ್ಕೆ ಬಸವಣ್ಣನ ವಚನದಲ್ಲಿ ಹೀಗೆ ಬರೆದಿರುತ್ತದೆ:

**ಕೊಲ್ಲೆನಯ್ಯಾ ಪ್ರಾಣಿಗಳನು,**
**ಮೆಲ್ಲೆನಯ್ಯಾ ಬಾಯಿಚ್ಚೆಗೆ,**
**ಒಲ್ಲೆನಯ್ಯಾ ಪರಸತಿಯರ ಸಂಗವ .....॥**

3. ಪ್ರಸಾದಿಸ್ಥಲದಲ್ಲಿ – ('ಪಡೆ' ಎಂಬುದರಲ್ಲಿ) ಪ್ರಸಾದಸ್ವೀಕಾರ ಮಾಡಬೇಕು. ಇದಕ್ಕೆ ಬಸವಣ್ಣನ ವಚನದಲ್ಲಿ ಹೀಗೆ ಬರೆದಿರುತ್ತದೆ:

**ನಿಮ್ಮ ನಂಬಿದ ಸದ್ಭಕ್ತರ ಒಕ್ಕುದ ನಾನುಂಬೆ ......॥**

4. ಪ್ರಾಣಲಿಂಗಿಸ್ಥಲದಲ್ಲಿ – 'ನೋಡು' ಎಂಬುದರಲ್ಲಿ ಶಿವಸಾಕ್ಷಾತ್ಕಾರವನ್ನು ಹೊಂದಬೇಕು. ಇದಕ್ಕೆ ಬಸವಣ್ಣನ ವಚನದಲ್ಲಿ ಹೀಗೆ ಬರೆದಿರುತ್ತದೆ:

**ಪಶ್ಚಿಮಸದ್ಮಾಸನದಲ್ಲಿ ಕುಳಿತು, ನಿಟ್ಟಿಲುಮುರಿದು,**
**ತುಟಿಮಿದಕದೆ ಆಟ್ಟೆ ಆಡಿತ್ತಲ್ಲಾ! ಬಿಟ್ಟ ಕಣ್ಣು ಬಿಗಿದ ಹುಬ್ಬು,**
**ಬ್ರಹ್ಮರಂಧ್ರದಲ್ಲಿ ಕಟ್ಟಿ ಗುಡಿಯ ಕೂಡಲಸಂಗಮದೇವ ಹಿಡಿವಡೆದ ॥**

**5. ಶರಣಸ್ಥಲದಲ್ಲಿ** – 'ತಡೆ' ಎಂಬುದರಲ್ಲಿ ವೈರಾಗ್ಯ ಶಾಲಿಯಾಗಬೇಕು. ಇದಕ್ಕೆ ಬಸವಣ್ಣನ ವಚನದಲ್ಲಿ ಹೀಗೆ ಬರೆದಿರುತ್ತದೆ:

**ಕುಲಮದವಳಿಯ ದನ್ನಕ್ಕರ ಶರಣನಾಗಬೇಕೊ?.... ಹಮ್ಮು, ಬಿಮ್ಮು,**
**ಸೊಮ್ಮಿನ ಸಂಬಂಧವ ಬಿಟ್ಟು ಕಿಂಕರರ ಕಿಂಕರನಾಗಿರಬೇಕು ॥**

**6. ಐಕ್ಯಸ್ಥಲದಲ್ಲಿ** – 'ಕೊಡು' ಎಂಬುದರಲ್ಲಿ ಶಿವಜೀವೈಕ್ಯವನ್ನು ಪಡೆಯಬೇಕು. ಇದಕ್ಕೆ ಬಸವಣ್ಣನ ವಚನದಲ್ಲಿ ಹೀಗೆ ಬರೆದಿರುತ್ತದೆ:

**ಘನಗಂಭೀರ ಮಹಾಘನದೊಳಗೆ ಘನಕ್ಕೆ**
**ಘನನಾಗಿದ್ದೆನಯ್ಯ, ಕೂಡಲಸಂಗಯ್ಯ**
**ನೆಂಬ ಮಹಾಬೆಳಗಿನ ಬೆಳಗಿನೊಳಗಿರ್ದನೆಂಬ**
**ಶಬ್ದಮುಗ್ಧವಾದುದನೇನೆಂಬೆನಯ್ಯಾ ॥**

ಈ ವಿಧವಾದ ಆರು ಸ್ಥಲದ ಆಚರಣೆಯಿಂದ ಆರು ವಿಧವಾದ ಫಲಗಳುಂಟಾಗುವವೆಂದು ಹೇಳಲ್ಪಟ್ಟಿದೆ. ಹೇಗೆಂದರೆ:

ಭಕ್ತಸ್ಥಲದಿಂದ – ಭಕ್ತಿಯುಂಟಾಗುತ್ತದೆ; ಮಾಹೇಶ್ವರಸ್ಥಲದಿಂದ– ಕರ್ಮಕ್ಷಯವಾಗುತ್ತದೆ; ಪ್ರಸಾದಿಸ್ಥಲದಿಂದ – ನಿರ್ಮಲಮತಿ ಉಂಟಾಗುತ್ತದೆ: ಪ್ರಾಣಲಿಂಗಸ್ಥಲದಿಂದ – ವಿಚಾರವುಂಟಾಗುತ್ತದೆ; ಶರಣಸ್ಥಲದಿಂದ – ದರ್ಪಸಂಕ್ಷಯವಾಗುತ್ತದೆ; ಐಕ್ಯಸ್ಥಲದಿಂದ – ಸಮ್ಯಗ್‌ಜ್ಞಾನವಾಗುತ್ತದೆ.

ಈ ಷಟ್ಸ್ಥಲಾಚರಣೆಯಲ್ಲಿ ಸಮಾಜಸುಧಾರಣೆಗಳೂ ಅಡಕವಾಗಿರುತ್ತವೆ ಹೇಗೆಂದರೆ –

**1. ಭಕ್ತಸ್ಥಲದಲ್ಲಿ** – ಉದ್ಯೋಗದ ಘನತೆಯು ಹೇಳಲ್ಪಟ್ಟಿರುತ್ತದೆ ಇದಕ್ಕೆ ಬಸವಣ್ಣನು ವಚನದಲ್ಲಿ ಹೀಗೆ ಹೇಳಿರುತ್ತಾನೆ:

**ದೇವಸಹಿತ ಭಕ್ತನು ಮನೆಗೆ ಬಂದೊಡೆ,**
**ನಿನ್ನ ಕಾಯಕವಾವುದೆಂದು ಬೆಸಗೊಂಡೆ**
**ನಾದೊಡೆ ನಿನ್ನಾಣೆ ನಿನ್ನ ಪ್ರಮಥರಾಣೆ............।**

**2. ಮಾಹೇಶ್ವರಸ್ಥಲದಲ್ಲಿ** – ಶಕ್ತಿ ಸಂಪಾದನೆಯು ಹೇಳಲ್ಪಟ್ಟಿರುತ್ತದೆ. ಇದಕ್ಕೆ ಬಸವಣ್ಣನು ವಚನದಲ್ಲಿ ಹೀಗೆ ಹೇಳಿರುತ್ತಾನೆ:

**ವೀರವ್ರತಿಭಕ್ತರೆಂದು ಹೊಗಳಿಸಿಕೊಂಡಿರಿ ಹೇಳಿರಯ್ಯ**
**ವೀರನಾದರೆ ವೈರಿಗಳುಮೆಚ್ಚಬೇಕು**
**ವ್ರತಿಯಾದರೆ ಅಂಗನೆಯರು ಮೆಚ್ಚಬೇಕು ॥**
**ಭಕ್ತನಾದರೆ ಜಂಗಮರು ಮೆಚ್ಚಬೇಕು**
**ಈ ನುಡಿಯೊಳಗೆ ತನ್ನ ಬಗೆ ಇರೆ ಬೇಡಿದ**
**ಪದವಿಯನೀವ ಕೂಡಲಸಂಗಮದೇವ ॥**

**3. ಪ್ರಸಾದಿಸ್ಥಲದಲ್ಲಿ** – ಜಾತಿಭೇದವಿನಿರ್ಮೂಲವು ಹೇಳಲ್ಪಟ್ಟಿದೆ. ಇದಕ್ಕೆ ಬಸವಣ್ಣನು ವಚನದಲ್ಲಿ ಹೀಗೆ ಹೇಳೀರುತ್ತಾನೆ –

**ಹೊಲೆಯುಂಟೆ ಲಿಂಗವಿದ್ದೆಡೆಯಲ್ಲಿ?**
**ಕುಲವುಂಟೆ ಜಂಗಮವಿದ್ದೆಡೆಯಲ್ಲಿ?....**

4. **ಪ್ರಾಣಲಿಂಗಿಸ್ಥಲದಲ್ಲಿ** – ಪ್ರಾಣಿದಯೆ ಹೇಳಲ್ಪಟ್ಟಿದೆ. ಇದಕ್ಕೆ ಬಸವಣ್ಣನು ವಚನದಲ್ಲಿ ಹೀಗೆ ಹೇಳಿರುತ್ತಾನೆ –

**ತನ್ನ ಮನದಲ್ಲಿ 'ಯತ್ರ ಜೀವಸ್ತತ್ರ ಶಿವ'ನೆಂದು**
**ಸರ್ವಜೀವದಯಾಪಾರಿಯಾದರೆ**
**ಕೂಡಲಸಂಗಮದೇವಯ್ಯ ಕೈಲಾಸದಿಂದ**
**ಬಂದು ಎತ್ತಿಕೊಳ್ಳದಿಪ್ಪನೇ ಅವರನು?**

**5. ಶರಣಸ್ಥಲದಲ್ಲಿ** – ಕಷ್ಟಸಹಿಷ್ಣುತೆಯು ಹೇಳಲ್ಪಟ್ಟಿರುತ್ತದೆ. ಇದಕ್ಕೆ ಬಸವಣ್ಣನು ವಚನದಲ್ಲಿ ಹೀಗೆ ಹೇಳಿರುತ್ತಾನೆ:

**ಧನದಲ್ಲಿ ಶುಚಿ, ಪ್ರಾಣದಲ್ಲಿ ನಿರ್ಭಯ**
**ಇದಾರಿಂಗಳವಡುವದಯ್ಯಾ?....**
**ನಿರಾಶೆ ನಿರ್ಭಯ ಕೂಡಸಂಗಮದೇವ**
**ನೀನೊಲಿದ ಶರಣಂಗಲ್ಲದಿಲ್ಲ ॥**

**6. ಐಕ್ಯಸ್ಥಲದಲ್ಲಿ** - ವಿಶ್ವೈಕ್ಯವು ಹೇಳಲ್ಪಟ್ಟಿದೆ. ಇದಕ್ಕೆ ಬಸವಣ್ಣನು ವಚನದಲ್ಲಿ ಹೀಗೆ ಹೇಳಿರುತ್ತಾನೆ:

**ಏನೆಂಬನೇನೆಂ ಬೆನೆಂದೆರದಾಡುವ!**
**ಏನೆಂಬೆನೇನೆಂಬೆನೆರಡೊಂದಾಡುವ;**
**ಏನೆಂಬೆ ನೇನೆಂಬೆವಿರರಘನದ!....**

ಮೇಲಿನ ಸಂಕ್ಷಿಪ್ತವರ್ಣನೆಯಿಂದ ವೀರಶೈವಷಟ್ಸ್ಥಲವು ಧಾರ್ಮಿಕ ಮತ್ತು ಸಾಮಾಜಿಕ ಸಾಧನಗಳಿಂದ ಕೂಡಿರುತ್ತದೆಯೆಂದು ಗೊತ್ತಾಗುವದು.

## ಲಿಂಗವಿಚಾರ

ಲಿಂಗವೆಂದರೆ ಪರಬ್ರಹ್ಮಕ್ಕೆ ಪರ್ಯಾಯನಾಮವೆಂದು ವೀರಶೈವರು ಗಣಿಸಿರುತ್ತಾರೆ. (ಲೀ=) ಯಾವ ವಸ್ತುವಿನಲ್ಲಿ ಸಕಲ ಚರಾಚರಾತ್ಮಕವಾದ ಜಗತ್ತು ಲೀನವಾಗುತ್ತದೋ, (ಗ=) ಯಾವ ವಸ್ತುವಿನಲ್ಲಿ ಸಕಲ ಚರಾಚರಾತ್ಮಕವಾದ ಜಗತ್ತು ಗತವಾಗುತ್ತದೋ, ಅಂತಹ ಪರಬ್ರಹ್ಮವೇ ಲಿಂಗವು.

**ಲಯಂ ಗಚ್ಛತಿ ಯತ್ರೈವ ಜಗದೇತಚ್ಚರಾಚರಮ್ ।**
**ಪುನಃ ಪುನಃ ಸಮುತ್ಪತ್ತಿಂ ತಲ್ಲಿಙ್ಗಂ ಬ್ರಹ್ಮ ಶಾಶ್ವತಮ್ ॥**

ಎಂಬ ಆಗಮವಚನವು ಇದಕ್ಕೆ ಪ್ರಮಾಣವು. ಶ್ರೀಪಂಡಿತಾಚಾರ್ಯರ ಭಾಷ್ಯದಲ್ಲಿಯೂ ಶ್ರೀನಿರ್ವಾಣಮಂತ್ರಿಯು ಬರೆದಿರುವ ನೀಲಕಂಠಭಾಷ್ಯ ಕಾರಿಕೆಯ ವ್ಯಾಖ್ಯಾನದಲ್ಲಿಯೂ ಇದೇ ಅರ್ಥದ ವಚನಗಳಿರುತ್ತವೆ.

ಇಂತಹ ಜಗತ್ಕಾರಣವಾದ, ಅವಯವರಹಿತವಾದ, ಪ್ರತ್ಯಕ್ಷಾದಿ ಪ್ರಮಾಣಗಳಿಗೆ ಆಗಮ್ಯವಾದ, ವಾಙ್ಮನಸಾತೀತವಾದ, ಬ್ರಹ್ಮಪದವಾಚ್ಯವಾದ, ಲಿಂಗವನ್ನೇ ವೀರಶೈವರು ಉಪಾಸ್ಯವಸ್ತುವನ್ನಾಗಿ ಇಟ್ಟುಕೊಂಡಿರುತ್ತಾರೆ. ಆದರೆ ಆದ್ಯಂತರಹಿತವಾದ ಲಿಂಗವನ್ನು ಧ್ಯಾನಿಸುವದು ಹೇಗೆ, ಉಪಾಸಿಸುವದು ಹೇಗೆ?– ಎಂಬ ತೊಡರು ಬರುವದರಿಂದ, ಇದರ ಪ್ರತಿರೂಪವಾದ ಲಿಂಗವನ್ನು ಗುರುವಿನಿಂದ ಪಡೆದು ಅದನ್ನು ಸಾಕ್ಷಾನ್ಮಹಾಲಿಂಗವೆಂದೇ ಧ್ಯಾನಮಾಡುವ ಮತ್ತು ಪೂಜಿಸುವ ಏರ್ಪಾಟನ್ನು ವೀರಶೈವಶರಣರು ಮಾಡಿರುತ್ತಾರೆ. ಇದನ್ನೇ

ಬಸವೇಶ್ವರರಾದಿ ವಚನಕಾರರು- ''ನಿರಾಕಾರವಸ್ತುವನ್ನು ಸಾಕಾರಮಾಡಿದ,'' ''ಅನಾದಿವಿಡಿದುಬಂದ ಅನುಪಮಲಿಂಗವು ಎನ್ನ ಕರಸ್ಥಲಕ್ಕೆ ಸಾಧ್ಯವಾಯಿತ್ತು,'' ''ಮನಭಾವಕರಣೇಂದ್ರಿಯಗಳ ಸ್ವರೂಪೀಕರಿಸಿ ದೃಷ್ಟಿಗೆ ತೋರಿ ಕೈಯಲ್ಲಿ ಲಿಂಗವಕೊಟ್ಟ'' ಎಂದು ಅನಂತವಾಗಿ ವರ್ಣಿಸಿರುತ್ತಾರೆ.

ವಾಙ್ಮನಕ್ಕೆ ಅಗೋಚರವಾದ. ಆದ್ಯಂತರಹಿತವಾದ ಮಹಾಲಿಂಗವನ್ನು ರೂಪೀಕರಿಸಿ ಏಕೆ ಪೂಜಿಸಬೇಕು? ''**ಅಣೋರಣೀಯಾನ್ ಮಹತೋ ಮಹೀಯಾನ್**'' (ಅಣುವಿಗಿಂತಲೂ ಅಣುವಾದವನು, ದೊಡ್ಡದಕ್ಕಿಂತಲೂ ದೊಡ್ಡವನು) ಎಂಬ ವಾಕ್ಯದ ಪ್ರಕಾರ ವಿಶಾಲವಾದ ಜಗತ್ತನ್ನೊಳಕೊಂಡಿರುವ ಮಹಾಲಿಂಗವು ಅಣುವಾಗಿ ಪ್ರತಿಜೀವಿಗಳ ಹೃದಯಾಂತಸ್ಥವಾಗಿರುವದರಿಂದ ಅಲ್ಲಿಯೇ ಧ್ಯಾನಿಸಿದರೆ ಸಾಲದೆ? ಎಂದರೆ, ಅದು ಅಶಕ್ಯವಾಗಿರುತ್ತದೆ. ಏಕೆಂದರೆ ತನ್ನಲ್ಲಿರುವ ಪರಮಾತ್ಮನನ್ನು ನೋಡುವದಕ್ಕೆ ಹೊರಗಣದೊಂದು ಗುರುತು ಬೇಕಾಗಿರುತ್ತದೆ. ತನ್ನ ಕಣ್ಣನ್ನು ತಾನೇ ನೋಡುವದಕ್ಕಾಗುವದಿಲ್ಲ. ತನ್ನ ಕಣ್ಣನ್ನು ನೋಡುವದಕ್ಕೆ ಹೊರಗಣದೊಂದು ದರ್ಪಣವು ಬೇಕು. ವೀರಶೈವರಿಗೆ ತಮ್ಮ ಒಳಗಣ ಜ್ಯೋತಿಯನ್ನು ನೋಡುವದಕ್ಕೆ ಲಿಂಗವು ದರ್ಪಣದಂತಿರುತ್ತದೆ. ಈ ವಿಚಾರಕ್ಕೆ ಮೊಗ್ಗೆಮಾಯಿದೇವರು, ಮರಿತೋಂಟದಾರ್ಯರು – ಮೊದಲಾದವರು ಅನೇಕ ದೃಷ್ಟಾಂತಗಳನ್ನು ಕೊಡುತ್ತಾರೆ. ಇಲ್ಲಿ ಒಂದೆರಡನ್ನು ಕೊಡುತ್ತೇನೆ. ಒಂದು ಕುಂಭದಲ್ಲಿ ಜಲವನ್ನು ಕಾಯಿಸಬೇಕಾದರೆ ಕುಂಭದೊಳಕ್ಕೆ ಬೆಂಕಿಯನ್ನಿಟ್ಟರೆ ಅದು ಕಂದಿಹೋಗುತ್ತದೆ; ಆದರೆ ಹೊರಗಣಿಂದ ಬೆಂಕಿಯನ್ನಿಟ್ಟರೆ ಒಳಗಣ ನೀರು ಕಾಯುತ್ತದೆ. ಅದರಂತೆಯೇ ಒಳಗಣ ಜ್ಯೋತಿಯನ್ನು ಅರಿಯಬೇಕಾದರೆ, ಹೊರಗಣ ಇಷ್ಟಲಿಂಗವು ಅವಶ್ಯವಾಗಿರುತ್ತದೆ. ಒಂದು ಹಸುವಿಗೆ ಘೃತವನ್ನು ತಿನ್ನಿಸಬೇಕಾದರೆ, ಅದರ ಹೊಟ್ಟೆಯಲ್ಲೇ ಕ್ಷೀರವು ಉತ್ಪನ್ನವಾಗಿರುತ್ತದೆಯಾದಕಾರಣ ಹೊರಗಣಿಂದ ಘೃತವನ್ನು ತಿನ್ನಿಸಲವಶ್ಯವಿಲ್ಲವೆನ್ನಲಾಗದು; ಏತಕ್ಕೆಂದರೆ, ಒಳಗಣ ಕ್ಷೀರವು ಹೊರಕ್ಕೆ ಬಂದ ಹೊರತು ಭೋಜ್ಯವಸ್ತುವಾಗುವದಿಲ್ಲ. ಅದರಂತೆಯೇ ಒಳಗಣ ಆತ್ಮನನ್ನು ನೋಡಬೇಕಾದರೆ, ಬಾಹ್ಯದ ಇಷ್ಟಲಿಂಗವು ಅತ್ಯವಶ್ಯಕವಾಗಿರುತ್ತದೆ. ಈ ವಿಷಯದಲ್ಲಿ ಬಸವಾದಿವಚನಕಾರರು ''ಭಾವಸ್ಥಲದಿಂದ ಮನಸ್ಥಲಕ್ಕೆ ತಂದ, ಮನಸ್ಥಲದಿಂದ ಕರಸ್ಥಲಕ್ಕೆ ತಂದ ಗುರುವೆ'' ಎಂದು ಎಲ್ಲೆಲ್ಲಿಯೂ ಹಾಡಿರುತ್ತಾರೆ. ಈ ಕಾರಣದಿಂದ ಪರಬ್ರಹ್ಮದ ಪ್ರತಿರೂಪವಾದ ಇಷ್ಟಲಿಂಗವನ್ನು ಬಾಹ್ಯದಲ್ಲಿ ಧ್ಯಾನಿಸುವ ಮತ್ತು ಪೂಜಿಸುವ ಅವಶ್ಯಕತೆಯು ಸಿದ್ಧವಾಯಿತು.

ಇಂತಹ ಲಿಂಗವನ್ನು ದೇಹದ ಮೇಲೆಯೇ ಧರಿಸಬೇಕೆಂಬುದರ ಅವಶ್ಯಕತೆ ಏನು? ಎಲ್ಲಿಯಾದರೂ ಇಟ್ಟು ಏಕೆ ಪೂಜಿಸಬಾರದು? – ಎಂದು ಪ್ರಶ್ನೆಮಾಡಬಹುದು. ಅಮನಸ್ಕಯೋಗದ ಪ್ರಕಾರ ಧ್ಯಾನಮಾಡತಕ್ಕವರು, ತಮ್ಮ ಯೋಗ ಕ್ರಿಯೆಯಲ್ಲಿ ಹೊರಗೆ ಯಾವದಾದರೂ ಒಂದು ಮರದ ಕೊಂಬೆಯನ್ನೋ ಅಥವಾ ಶಿಖರದ ತುದಿಯನ್ನೋ ಅಥವಾ ಒಂದು ನಕ್ಷತ್ರವನ್ನೋ ಗುರಿಯಾಗಿಟ್ಟುಕೊಂಡು ಧ್ಯಾನಮಾಡುತ್ತಾರೆ. ಅಂತಹವರು ಬೇರೆ ಬೇರೆ ಕಡೆಗೆ ಹೋದಾಗ ಬೇರೆ ಬೇರೆ ಗುರುತುಗಳನ್ನು ಹವಣಿಸಿಕೊಳ್ಳಬೇಕಾಗಿಬರುವದು. ಮತ್ತು ಸ್ಥಾವರಲಿಂಗ ಪೂಜಕರು ಬೇರೆಬೇರೆ ದೇವಸ್ಥಾನಗಳನ್ನು ಹುಡುಕಿಕೊಳ್ಳಬೇಕಾಗಿ ಬರುತ್ತದೆ. ಇಷ್ಟಲಿಂಗಧಾರಣದಿಂದ ಎಲ್ಲಿ ಹೋದರೂ ಗುರುತುಗಳನ್ನಾಗಲಿ ದೇವಸ್ಥಾನಗಳನ್ನಾಗಲಿ ಹುಡುಕುವ ಅವಶ್ಯಕತೆಯಿರುವದಿಲ್ಲ. ಈ ಕಾರಣದಿಂದಲೆ ಅಂಗಲಿಂಗಸಂಬಂಧದ ವಿಚಾರವಾಗಿ ಬಸವಾದಿಶರಣರು ಅತ್ಯಂತಕಠಿನವಾದ ವಿಧಿಗಳನ್ನು ಏರ್ಪಡಿಸಿರುತ್ತಾರೆ. ಬಸವೇಶ್ವರನು ತನ್ನ ವಚನದಲ್ಲಿ ಹೀಗೆ ಹೇಳುತ್ತಾನೆ:

**ಗಂಡನ ಮೇಲೆ ಸ್ನೇಹವಿಲ್ಲದ ಹೆಂಡತಿ,**
**ಲಿಂಗದ ಮೇಲೆ ನಿಷ್ಠೆಯಿಲ್ಲದ ಭಕ್ತ, ಇದ್ದರೇನೋ ಶಿವಶಿವಾ?**
**ಹೋದರೇನೋ ಶಿವಶಿವಾ? ಕೂಡಲಸಂಗಮದೇವಯ್ಯ,**
**ಊಡದ ಆವಿಂಗೆ ಉಣ್ಣದ ಕರುವ ಬಿಟ್ಟಂತೆ**

ಚನ್ನಬವೇಶ್ವರನು ತನ್ನ ವಚನದಲ್ಲಿ ಹೀಗೆ ಹೇಳುತ್ತಾನೆ:

**ಅಂಗದ ಮೇಲಣಲಿಂಗ ಹಿಂಗಿತ್ತೆಂಬರು,**
**ಅಂಗಲಿಂಗಸಂಬಂಧಿಯಾದಲ್ಲಿ ಫಲವೇನು?**
**ಮನಲಿಂಗಸಂಬಂಧಿಯಾಗದನ್ನಕ್ಕರ ಮನದಿಂದಲೇನು**
**ಫಲವಿಲ್ಲವಯ್ಯ ನಮ್ಮ ಕೂಡಲಚನ್ನಸಂಗಯ್ಯನಲ್ಲಿ**

ಸಿದ್ಧರಾಮೇಶ್ವರನು ತನ್ನ ವಚನದಲ್ಲಿ ಹೀಗೆ ಹೇಳುತ್ತಾನೆ:

**ಲಿಂಗ ಹೋದರೇನು ಗುರುವುಂಟೆಂಬ ಬಾಲಭಾಷೆಯ ಕೇಳಲಾಗದು.**
**ಕೇಳಿದವರ ಸಂಗ ಸಿಂಗಿಕಾಳಕೂಟವಿಷವು. ಆತನ ಸಂಗದಲ್ಲಿರಲು**
**ಪಂಚಮಹಾಪಾತಕ ತಪ್ಪದಯ್ಯ, ಕಪಿಲಸಿದ್ಧಮಲ್ಲಿಕಾರ್ಜುನ**

ಲಿಂಗವನ್ನು ಸದಾಕಾಲವೂ ಧರಿಸಿರಬೇಕೆಂಬುದಕ್ಕೆ **ವಿಶ್ವೇಶ್ವರಸಂಹಿತೆ**ಯಲ್ಲಿ ಹೀಗೆ ಬರೆದಿರುತ್ತದೆ:

**ಪೂಜಾಂ ಕೃತ್ವಾಥ ತಲ್ಲಿಂಗಂ ಮಸ್ತಕೇ ಧಾರಯೇತ್ಸದಾ ။**

**ಶಂಕರಸಂಹಿತೆ**ಯಲ್ಲಿ ಹೀಗೆ ಬರೆದಿರುತ್ತದೆ:

**ಧಾರಯೇದವಧಾನೇನ ಲಿಂಗಂ ಸದ್ಗುರುಣಾರ್ಪಿತಮ್ ။**

ಲಿಂಗವನ್ನು ತಲೆ, ಕುತ್ತಿಗೆ, ತೋಳು, ಕೈ, ಎದೆ, ಹೊಕ್ಕುಳು – ಇವುಗಳಲ್ಲಿ ಯಾವದಾದರೊಂದು ಜಾಗದಲ್ಲಿ ಧರಿಸಬೇಕೆಂದು **ವಾತುಲಾಗಮ**ದಲ್ಲಿ ಹೀಗೆ ಬರೆದಿರುತ್ತದೆ:

**ಮೂರ್ಧ್ನಿ ಕಂಠೇ ಭುಜೇ ಹಸ್ತೇ ಹೃತ್ಸ್ಥಲೇ ನಾಭಿಮಣ್ಡಲೇ ।**
**ಏತೇಷಾಮೇಕದೇಶೇ ತು ಧಾರಯೇತ್ ಶಿವಲಿಙ್ಗಕಮ್ ॥**

ಋಗ್ವೇದದಲ್ಲಿ **'ಅತಪ್ತತನೂರ್ನತದಾಮೋ ಅಶ್ನುತೇ ಶೃತಾಸ ಇದ್ವಹನ್ತಃ'** ಎಂಬ ವಾಕ್ಯವನ್ನು ನಂದೀಶ್ವರನು ತನ್ನ ಲಿಂಗಧಾರಣಚಂದ್ರಿಕೆಯಲ್ಲಿ ವೀರಶೈವಲಿಂಗಧಾರಣಪರವಾಗಿ ತರ್ಕಿಸಿ ಅರ್ಥಮಾಡಿರುತ್ತಾನೆ.

ವೀರಶೈವರಲ್ಲಿ ಲಿಂಗಧಾರಣವು ಅತ್ಯವಶ್ಯಕವಿಧಿ ಎಂಬುದಕ್ಕೆ ಕೆಲವು ಶರಣರು ಹಿಂದೆ ಕಟ್ಟಾಚರಣೆಯನ್ನು ಮಾಡಿರುತ್ತಾರೆ. ಆದಿಶೆಟ್ಟಿ ಎಂಬ ಶಿವಶರಣನು ಜೈನಳಾದ ಪದ್ಮಾವತಿಯಲ್ಲಿ ಮೋಹಿಸಿ ಅವಳಿಗೆ ಲಿಂಗಧಾರಣೆಮಾಡಿಸಿದನು. ಸಿದ್ಧರಾಮೇಶನು ಬಸವನ ಅರಮನೆಯನ್ನು ಹೊಗುವದಕ್ಕೆ ತಡೆಯಲ್ಪಟ್ಟವನಾಗಿ ಚನ್ನಬಸವೇಶನಿಂದ ಲಿಂಗಧಾರಣೆ ಹೊಂದಿದನು. ಶಂಕರದಾಸೀಮಯ್ಯನು ತನ್ನ ಇಷ್ಟದೇವರಾದ ಜಡೆಯ ಶಂಕರಮೂರ್ತಿಯಿಂದ ಲಿಂಗಧಾರಣವನ್ನು ಹೊಂದಿ ತನ್ನ ಹೆಂಡತಿಗೆ ತಾನೇ ಲಿಂಗಧಾರಣ ಮಾಡಿದನು. ಬೊಮ್ಮಯ್ಯನೆಂಬ ಶರಣನು ಬಸವೇಶ್ವರನ ಅರಮನೆಯಲ್ಲಿ ಶಿವಪೂಜೆಮಾಡುತ್ತಿರಲು, ಇನ್ನೊಬ್ಬ ಬೊಮ್ಮಯ್ಯನೆಂಬ ಶರಣನು ಅವನ ಲಿಂಗವನ್ನು ಮುಟ್ಟಲು, ಇಬ್ಬರ ಪ್ರಾಣವೂ ಹೋಗಲಾಗಿ, ಮತ್ತೊಬ್ಬ ಬೊಮ್ಮಯ್ಯನು ಇದನ್ನು ನೋಡಲು ಅವನ ಪ್ರಾಣವೂ ಹೋಗಲಾಗಿ, ಇವರು ಮೂವರನ್ನೂ ನೋಡಿ ಬಸವೇಶ್ವರನ ಪ್ರಾಣವೂ ಹೋಗಲು,

ವೀರಬಂಕಯ್ಯನೆಂಬವನು ಶಿವಾನುಗ್ರಹವನ್ನು ಪಡೆದು ಎಲ್ಲರ ಪ್ರಾಣವನ್ನೂ ಬರಿಸಿದನು. ಕಲಿಗಣನಾಥನೆಂಬ ಶರಣನು ತಾನು ಲಿಂಗಧಾರಿಯಾಗಿರಲು ಶಿವನು ಭವಿರೂಪದಲ್ಲಿ ಬರಲು ಅವನಿಗೆ ಲಿಂಗಧಾರಣೆಮಾಡಿಸಿ ಅತಿಥ್ಯವನ್ನು ಮಾಡಿದನು. ಈ ಕಥೆಗಳು ಅದ್ಭುತಕಥೆಗಳೆಂದು ಪತ್ರಿಕಾವಾಚಕರು ತಿಳಿಯಬಹುದಾದಾಗ್ಯೂ ವೀರಶೈವರಲ್ಲಿ ಲಿಂಗಧಾರಣೆಯ ವಿಧಿಯು ಎಷ್ಟು ಮುಖ್ಯವಾದದ್ದೆಂಬುದನ್ನು ತೋರಿಸುವದಕ್ಕೆ ಕೊಂಚ ಮಾತ್ರ ಬರೆದನು.

## ಗುರುವಿಚಾರ

ಷಟ್ಸ್ಥಲಸಾಧನದಲ್ಲಿ ಕೋಟೆಯೋಪಾದಿಯಲ್ಲಿ ರಕ್ಷಣಸಾಮಗ್ರಿಗಳಾಗಿರುವ ಗುರು, ಲಿಂಗ, ಜಂಗಮ, ವಿಭೂತಿ, ರುದ್ರಾಕ್ಷಿ, ಪಾದೋದಕ, ಪ್ರಸಾದ, ಪಂಚಾಕ್ಷರಿ – ಎಂಬ ಅಷ್ಟಾವರಣಗಳಲ್ಲಿ ''ಗುರು'' ಎಂಬುದರ ವಿಚಾರವನ್ನು ಇಲ್ಲಿ ಪ್ರಸ್ತಾಪಿಸುವೆನು.

'ಗುರು' ಎಂದರೆ ಮೂಲಾರ್ಥದಲ್ಲಿ 'ದೊಡ್ಡದು' ಎಂದು ತಿಳಿಯಬೇಕು. ಲೋಕದಲ್ಲಿ ಗುರು ಎಂಬುದು ಬಹಳ ಶ್ರೇಷ್ಠವಾದದ್ದು. ಯಾವುದು ಸಕಲ ಜ್ಞಾನಪ್ರಸರಣೆಗೂ ಮೂಲವಾದದ್ದೋ ಅದೇ ಗುರು ಎಂದು ತಿಳಿಯತಕ್ಕದ್ದು. ಪ್ರಕೃತಿಯಲ್ಲಿ ಎಲ್ಲಾ ಜೀವಿಗಳಲ್ಲೂ ಗುರುವ್ಯವಹಾರವಿರುತ್ತದೆಂಬುದು ನಾವು ಸೂಕ್ಷ್ಮದೃಷ್ಟಿಯಿಂದ ಪರೀಕ್ಷಿಸಿ ನೋಡಿದರೆ ಚೆನ್ನಾಗಿ ಗೋಚರವಾಗುವದು. ಪ್ರತಿಜೀವಿಗಳಲ್ಲೂ ಪ್ರಪಂಚದಲ್ಲಿ ಉದ್ಭವವಾದ ಕೂಡಲೆ ತಾಯಿಯು ಗುರುವಾಗಿ ಪರಿಣಮಿಸಿ ಮಗುವಿಗೆ ಉಪಕ್ರಮವಾಗಿ ವ್ಯವಹಾರಬೋಧೆಯನ್ನು ಮಾಡುವದಕ್ಕೆ ಪ್ರಾರಂಭಮಾಡುತ್ತಾಳೆ. ದಿನಗಳಾಗುತ್ತ ದಿನಗಳಾಗುತ್ತ ಮಗುವಿಗೆ ಶಬ್ದಗಳನ್ನು ಆಲಿಸುವುದನ್ನೂ ಪದಾರ್ಥಗಳನ್ನು ಹಿಡಿಯುವದನ್ನೂ ಪುಟ್ಟ ಶಬ್ದಗಳನ್ನು ಉಚ್ಚರಿಸುವದನ್ನೂ ಕೆಲಕಾಲದ ಮೇಲೆ ನಡೆಯುವದನ್ನೂ, ಇನ್ನೂ ಕೆಲಕಾಲದ ಮೇಲೆ ಬೇರೆ ಬೇರೆ ಕೆಲಸಗಳನ್ನು ಮಾಡುವದನ್ನೂ ತಾಯಿಯು ಹೇಳಿಕೊಡುತ್ತಾಹೋಗುತ್ತಾಳೆ. ಈ ಗುರುಬೋಧೆಯ ಕೆಲಸದಲ್ಲಿ ಮಗುವಿಗೆ ಹೆಚ್ಚು ವಯಸ್ಸಾಗುತ್ತ ಬಂದ ಹಾಗೆಲ್ಲಾ ತಂದೆಯೂ ಭಾಗವನ್ನು ವಹಿಸುತ್ತಾನೆ. ಅನಂತರ ತಕ್ಕ ವಯಸ್ಸಾದ ಮೇಲೆ ಹೆಚ್ಚು ವಿಷಯಗಳನ್ನು ಹೇಳಿ ಕೊಡುವದಕ್ಕೆ

ಪಾಠಶಾಲೆಗಳಿಗೆ ಕಳುಹಿಸಿ ಅಲ್ಲಿ ಉಪಾಧ್ಯಾಯರೆಂಬ ಗುರುಗಳಿಂದ ಪಾಠಗಳನ್ನು ಹೇಳಿಸಿಕೊಡುತ್ತಾರೆ. ಈ ರೀತಿ ತಾಯಿ, ತಂದೆ, ಉಪಾಧ್ಯಾಯರು, ತರುಣರಿಗೆ ಗುರುಗಳಾದಹಾಗಾಯಿತು. ಇನ್ನೂ ಮುಂದುವರಿಯುತ್ತ ಮುಂದುವರಿಯುತ್ತ ಜ್ಞಾನಸಂಪಾದನೆ ಹೆಚ್ಚಾಗುತ್ತಾ ಹೋದಹಾಗೆಲ್ಲಾ ಬೇರೆ ಬೇರೆ ಶಾಸ್ತ್ರಜ್ಞರು ಬೇರೆಬೇರೆಯ ಗುರುಗಳಾಗುತ್ತಾರೆ. ಕಡೆಗೆ ಸ್ವಾನುಭವವೇ ಒಂದು ಗುರುವಾಗುತ್ತದೆ.

ಈ ವಿಮರ್ಶೆಯಿಂದ ಜಗತ್ತಿನ ಸರ್ವಪ್ರವೃದ್ಧಿಗೂ ಗುರುವೇ ಕಾರಣವೆಂದು ಸ್ಪಷ್ಟವಾಗುತ್ತದೆ. ಈ ಶ್ರೇಷ್ಠವಾದ ಗುರುವೆಂಬುದನ್ನು ಲಿಂಗವಂತರು ತಮ್ಮ ಅಷ್ಟಾವರಣಗಳಲ್ಲಿ ಮೊದಲನೆಯದನ್ನು ಮಾಡಿರುತ್ತಾರೆ. ಲೌಕಿಕಪ್ರವೃದ್ಧಿಗೆ ಗುರು ಹೇಗೆ ಬೇಕೊ ಧಾರ್ಮಿಕ ಪ್ರವೃದ್ಧಿಗೂ ಗುರು ಹಾಗೆಯೇ ಬೇಕಾಗಿರುತ್ತಾನೆ. ಈ ಗುರುಸರ್ವೋತ್ತಮತ್ವವು ಎಲ್ಲ ಧರ್ಮದವರಲ್ಲೂ ಉಂಟು. ಅದರಂತೆಯೇ ಲಿಂಗವಂತಧರ್ಮದವರಲ್ಲೂ ಉಂಟು; ಲಿಂಗವಂತರಲ್ಲಿ ಅತ್ಯಧಿಕವಾಗಿ ಉಂಟು. ಲಿಂಗವಂತರಲ್ಲಿ ಗುರುತ್ವವನ್ನು ಪಡೆಯಬೇಕಾದರೆ ಹೆಚ್ಚಿನ ಯೋಗ್ಯತೆಯನ್ನು ಸಂಪಾದಿಸಬೇಕಾಗಿರುತ್ತದೆ. ಗುರುತ್ವವೆಂಬುದು ವಂಶದಿಂದ ಬರುವದಿಲ್ಲ. ಯಾವನೇ ಆಗಲಿ ಲಿಂಗಧಾರಣಹೊಂದಿದ ಮೇಲೆ ಭಕ್ತಸ್ಥಲವನ್ನು ಅಭ್ಯಾಸಮಾಡಿ, ಅನಂತರ ಮಾಹೇಶ್ವರಸ್ಥಲವನ್ನೂ, ಅನಂತರ ಪ್ರಸಾದಿಸ್ಥಲವನ್ನೂ, ಅನಂತರ ಪ್ರಾಣಲಿಂಗಿಸ್ಥಲವನ್ನೂ, ಅನಂತರ ಶರಣಸ್ಥಲವನ್ನೂ, ಅನಂತರ ಐಕ್ಯಸ್ಥಲವನ್ನೂ ಅಭ್ಯಾಸಮಾಡಿ ಅವುಗಳಲ್ಲಿ ಪರಿಣತನಾದ ಮೇಲೆ ಆಚಾರಲಿಂಗ. ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗ – ಎಂಬ ಲಿಂಗಸ್ಥಲಗಳಿಗೆ ಬರುತ್ತಾನೆ. ಈ ರೀತಿಯಾಗಿ ಮೊದಲು ಭಕ್ತಸ್ಥಲದಲ್ಲಿದ್ದವನೇ ತನ್ನ ಶ್ರಮೆಯಿಂದ ಲಿಂಗಸ್ಥಲಕ್ಕೆ ಬಂದ ಮೇಲೆ ಗುರುವಾಗುತ್ತಾನೆ. ಈ ರೀತಿಯಾಗಿ ಗುರುಸ್ಥಾನಕ್ಕೆ ಎಲ್ಲರಿಗೂ ಏರುವದಕ್ಕೆ ಶಕ್ತಿ ಇರುವದಿಲ್ಲ. ಬಿ.ಎ., ಎಮ್.ಎ. ಮೊದಲಾದ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ದೊಡ್ಡ ಅಧಿಕಾರಸ್ಥಾನಗಳನ್ನು ಹೊಂದುವದಕ್ಕೆ ಎಲ್ಲರಿಗೂ ಶಕ್ತಿಯಿಲ್ಲದೆ ಕೆಲವರು ಮಾತ್ರ ಹೊಂದುವಂತೆ ಗುರುಸ್ಥಾನಗಳಿಗೂ ಷಟ್ಸ್ಥಲವಿದ್ಯಾಭ್ಯಾಸದಿಂದ ಬರುವವರು ಕೆಲವರೇ ಇರುತ್ತಾರೆ.

ಇದು ಹಾಗಿರಲಿ. ಲಿಂಗವಂತರಲ್ಲಿ ಗುರುಸ್ಥಾನವೆಂಬುದು ಬಹಳ ಶ್ರೇಷ್ಠವಾಗಿ ಗಣಿಸಲ್ಪಟ್ಟಿರುತ್ತದೆ. ಗುರುವಿನ ವಿಚಾರದಲ್ಲಿ ಭಕ್ತರು ಹೇಗೆ

ನಡೆದುಕೊಳ್ಳಬೇಕೆಂಬ ಸಂಗತಿಗೆ ಅನೇಕ ಕಟ್ಟಪ್ಪಣೆಗಳು ಇರುತ್ತವೆ. ಗುರುವನ್ನು ಕಂಡು ಉದಾಸೀನಭಾವದಿಂದ ಇರಕೂಡದು, ಹಾಗೆ ಮಾಡಿದರೆ ಘೋರನರಕದಲ್ಲಿ ಬೀಳುತ್ತಾನೆ ಎಂದು ''ಕ್ರಿಯಾಸಾರ'' ಗ್ರಂಥದಲ್ಲಿ ಹೇಳಿರುತ್ತದೆ. ಇದೂ ಅಲ್ಲದೆ ಗುರುವಿಗೆ ಭೂಮಿಯ ಮೇಲೆ ದಂಡಪ್ರಣಾಮವನ್ನು ಮಾಡಿ ಅಷ್ಟಮಂತ್ರಗಳ ಪೂರ್ವಕವಾಗಿ ಗಂಧಪುಷ್ಪಾದಿಗಳಿಂದ ಪಾದಾರ್ಚನೆಮಾಡಬೇಕು:

**ಪ್ರಣಮ್ಯ ದಂಡವದ್ಭೂಮಾವಷ್ಟ ಮಂತ್ರೇಣ ಚಾರ್ಚಯೇತ್ ।**
**ಗುರೋಃ ಶ್ರೀಪಾದಪದ್ಮಂ ಚ ಗಂಧಪುಷ್ಪಾಕ್ಷತಾದಿಭಿಃ ॥**

ಗುರುವಿನ ಆಕಾರವೇ ಧ್ಯಾನಕ್ಕೆ ಮೂಲವು, ಗುರುವಿನಚರಣವೇ ಅರ್ಚನಕ್ಕೆ ಮೂಲವು, ಗುರುವಿನ ವಾಕ್ಯವೇ ಮಂತ್ರಕ್ಕೆ ಮೂಲವು, ಗುರುವಿನ ಕೃಪೆಯೇ ಮುಕ್ತಿಗೆ ಮೂಲವು. ಗುರುವೇ ತಂದೆ, ಗುರುವೇ ತಾಯಿ, ಗುರುವೇ ಬಂಧು, ಗುರುವೇ ದೇವರು, ಗುರುವನ್ನು ಬಿಟ್ಟು ಮತ್ತಾರೂ ಇಲ್ಲ ಹೀಗೆಂದು ಶಾಸ್ತ್ರವಚನವಿರುವದು.

ವೀರಶೈವಮತಸ್ಥಾಪಕನಾದ ಶ್ರೀಬಸವೇಶ್ವರನು ಗುರುವಿನ ಮೂಲಕರ್ತೃತ್ವ ವನ್ನು ಮನಸ್ಸಿಗೆ ಹಿಡಿಯುವಂತೆ ಬಹುಸ್ವಾರಸ್ಯವಾಗಿ ವರ್ಣಿಸಿ ಹೇಳಿರುತ್ತಾನೆ. ಹೇಗೆಂದರೆ:

**ಮಡಕೆಯ ಮಾಡುವರೆ ಮಣ್ಣೇ ಮೊದಲು, ತೊಡಿಗೆಯ ಮಾಡುವರೆ**
**ಹೊನ್ನೇ ಮೊದಲು, ಶಿವಪಥ ವನರಿವಡೆ ಗುರುಪಥವೇ ಮೊದಲು,**
**ಕೂಡಲಸಂಗಮದೇವರನರಿದಡೆ ಶರಣರ ಸಂಗವೇ ಮೊದಲು**

ಗುರುವಿನ ವಿಚಾರದಲ್ಲಿ ಭಕ್ತರು ಎಷ್ಟು ಕಟ್ಟಾಚರಣೆಯಲ್ಲಿರಬೇಕೆಂಬುದಕ್ಕೆ ಕೆಲವು ಶರಣರ ಕಥೆಗಳನ್ನು ಹೇಳುತ್ತೇನೆ. **ಗುರುಭಂಡಾರಿ** ಎಂಬ ರಾಜನು ಕರಿತುರಗರಥಾದಿಗಳಿಂದ ಕೂಡಿಕೊಂಡು ಪಟ್ಟಣದ ಬೀದಿಯಲಿ ಬರುತ್ತಿರುವಾಗ್ಯೆ ತನ್ನ ಗುರುವಿನ ವೇಶ್ಯೆಯಾದ ಪ್ರೌಢಾವತಿಯನ್ನು ನೋಡಿ ತನ್ನ ಗುರುವಿನವಳೆಂದು ಅರಿಯದೆ ಅವಳಲ್ಲಿ ವ್ಯಾಮೋಹಿತನಾಗಲು ಅವಳು ಎಷ್ಟು ಹೇಳಿದರೂ ಕೇಳದಿರಲು ಕಡೆಗೆ ಅವಳು ತನ್ನ ಗುರುವಿನ ವೇಶ್ಯೆ ಎಂದು ಹೇಳಲು ಚಿಂತಾಕ್ರಾಂತನಾಗಿ ಮರುಗಿ ಅವಳ ವಿಚಾರವನ್ನು ಬಿಟ್ಟುಬಿಟ್ಟನು.

ವೆಲ್ಲಗೊಂಡದ **ಮಹಾದೇವಯ್ಯ**ನೆಂಬ ಭಕ್ತನು ತನ್ನ ಗುರುವಿನ ಲಿಂಗಪೂಜೆಗೆ ಹೂವನ್ನು ತರುವದಕ್ಕೆ ಹೋಗಿಬರಲು, ತನ್ನ ಗುರುವಿನ ಪಾದುಕೆಗೆ ತನ್ನ ಚರಣವು ಅಂಟಲು ಮಹಾದೋಷವಾಯಿತೆಂದು ಕತ್ತರಿಸಿಕೊಳ್ಳಲು ಗುರುವು ಮೆಚ್ಚಿ ದೀಪದೆಣ್ಣೆಯಿಂದ ಸವರಿ ಪುನಃ ಪಾದವು ಬರುವಂತೆ ಮಾಡಿದನು.

ಒಂದು ದಿನ ಗುರುವು ತನ್ನ ಮಂಚವನ್ನು ಅಲಂಕಾರಮಾಡಿ ತಾನು ನೆಲದ ಮೇಲೆ ಕುಳಿತುಕೊಂಡು ಶಿಷ್ಯರೆಲ್ಲರನ್ನೂ ಕರೆದು ಮಂಚದ ಮೇಲೆ ಕುಳಿತುಕೊಳ್ಳಬೇಕೆಂದು ಕೇಳಲು ಅವರು ಕುಳಿತುಕೊಳ್ಳಲಿಲ್ಲ. ಆಮೇಲೆ **ಗುರುಭಕ್ತ**ನೆಂಬ ಶಿಷ್ಯನನ್ನು ಕರೆದು ಕುಳಿತುಕೊಳ್ಳುವದಕ್ಕೆ ಹೇಳಲು ಅವನು ಕುಳಿತುಕೊಂಡನು. ಮತ್ತೊಂದು ದಿನ ಒಂದು ನಿಶಿತವಾದ ಶೂಲವನ್ನು ನೆಟ್ಟು, ಅದರ ಮೇಲೆ ಕುಳಿತುಕೊಳ್ಳಬೇಕೆಂದು ಶಿಷ್ಯರಿಗೆ ಹೇಳಲು, ಅವರು ಕುಚೇಷ್ಟೆಯಿಂದ 'ಮಂಚದ ಮೇಲೆ ಕುಳಿತುಕೊಂಡವನು ಕುಳಿತುಕೊಳ್ಳಲಿ' ಎಂದರು. ಆಮೇಲೆ ಗುರುಭಕ್ತನಿಗೆ ಹೇಳಲ ಅವನು ನಿಶ್ಚಲಚಿತ್ತದಿಂದ ಶೂಲದ ಮೇಲೆ ಕುಳಿತುಕೊಂಡನು ಗುರುಕೃಪೆಯಿಂದ ಅವನಿಗೆ ಅಪಾಯವೇನೂ ಆಗಲಿಲ್ಲ.

ಈ ಕಥೆಗಳು ಅಧ್ಭುತಗಳಾದಾಗ್ಯೂ ವೀರಶೈವರಲ್ಲಿ ಅಷ್ಟಾವರ್ಣದೊಳಗೆ ಮೊದಲನೆಯವನಾದ ಗುರುವಿನ ವಿಚಾರದಲ್ಲಿ ಎಷ್ಟು ಕಟ್ಟಾಚರಣೆ ಇದೆ ಎಂಬುದನ್ನು ತೋರಿಸುತ್ತವೆ.

ವೀರಶೈವರಿಗೆ ಮುಖ್ಯಕ್ರಿಯೆಯಾದದ್ದು ಲಿಂಗಧಾರಣವು. ಇದಕ್ಕೂ ಇದಕ್ಕೆ ಸಂಬಂಧಪಟ್ಟ ಆಚಾರಕ್ಕೂ ಜ್ಞಾನಾರ್ಜನೆಗೂ ವೀರಶೈವರಲ್ಲಿ ಗುರುವು ಅತ್ಯವಶ್ಯಕವಾದವನೂ ಅತಿಶ್ರೇಷ್ಠವಾದವನೂ ಆಗಿರುತ್ತಾನೆ. ಇದಕ್ಕಾಗಿ ವೀರಶೈವರಲ್ಲಿ ಮೂರು ವಿಧವಾದ ಗುರುಗಳು ಗುರುಸ್ಥಲವಾದ ಆಚಾರಲಿಂಗಸ್ಥಲದಲ್ಲಿ ವಿಂಗಡಿಸಲ್ಪಟ್ಟಿರುತ್ತಾರೆ. ಮೊದಲು ಲಿಂಗಧಾರಣ ಮಾಡುವವನಿಗೆ ದೀಕ್ಷಾಗುರುವೆಂತಲೂ, ಆಮೇಲೆ ಆಚಾರವನ್ನು ಬೋಧಿಸುವಾತನಿಗೆ ಶಿಕ್ಷಾಗುರುವೆಂತಲೂ, ಅನಂತರ ಮೋಕ್ಷಕಾರಣವಾದ ಷಟ್ಸ್ಥಲಜ್ಞಾನವನ್ನು ಬೋಧಿಸುವಾತನಿಗೆ ಮೋಕ್ಷಗುರು ಅಥವಾ ಜ್ಞಾನಗುರುವೆಂತಲೂ ಹೆಸರು. ಈ ವಿಚಾರವು ಮೊರಡಿಯ ಮುದ್ದುಗೌಡ ಸುಗ್ಗಾಯಿಗಳ ಮಗನಾದ ಸಿದ್ಧರಾಮೇಶ್ವರನ ಸಂಪ್ರದಾಯಾನುಗತ ಶಿವಯೋಗೀ

ಶ್ವರನಿಂದ ರಚಿತವಾದ ''ಸಿದ್ಧಾಂತಶಿಖಾಮಣಿ''ಯ ಆಚಾರಲಿಂಗಸ್ಥಳದಲ್ಲಿ ಹೇಳಲ್ಪಟ್ಟಿರುತ್ತದೆ.

## ಜಂಗಮವಿಚಾರ

ಹಿಂದೆ ವೀರಶೈವರ ಅಷ್ಟಾವರಣಗಳಲ್ಲಿ ಸೇರಿದ ಗುರುವಿನ ಮತ್ತು ಲಿಂಗದ ವಿಚಾರವನ್ನು ತಿಳಿದಿದ್ದಾಯಿತು. ಈಗ ಜಂಗಮವಿಚಾರವನ್ನು ತಿಳಿಯಬೇಕಾಗಿದೆ.

ಎಲ್ಲಾ ಜೀವಿಗಳಲ್ಲೂ ಆತ್ಮನಿದ್ದಾನೆ ಎಂಬುದು ಸರ್ವಮತಗಳಲ್ಲೂ ಹೇಳಿರುತ್ತದೆ; ಅದರೊಳಗೂ ನರಜೀವಿಗಳಲ್ಲಿ ಆತ್ಮನು ಹೆಚ್ಚು ಪ್ರಕಾಶವುಳ್ಳವನಾಗಿ ರುತ್ತಾನೆಂದು ಎಲ್ಲ ಧರ್ಮಗಳಲ್ಲೂ ಹೇಳಿರುತ್ತದೆ. ವೀರಶೈವಧರ್ಮದ ಪ್ರಕಾರ ಕ್ರಿಮಿಕೀಟಗಳಿಂದ ಹಿಡಿದು ಮನುಷ್ಯನವರೆಗಿನ ಪ್ರಾಣಿಗಳಲ್ಲಿ ಆತ್ಮನಿದ್ದಾಗ್ಯೂ ಲಿಂಗಾಂಗಿಯಾದ ಶಿವಭಕ್ತನು ಇವರೆಲ್ಲರಿಗಿಂತಲೂ ಅಧಿಕನೆಂಬ ಭಾವವು ಹೇಳಲ್ಪಟ್ಟಿರುವುದು. **ನಿಜಗುಣಶಿವಯೋಗಿಯ ''ವಿವೇಕಚಿಂತಾಮಣಿ''**ಯಲ್ಲಿ ಹೀಗೆ ಬರೆದಿದೆ:

> **ಬಳಿಕೀ ಷಟ್ಸ್ಥಲಜ್ಞಾನಿಯಾದ ವೀರಶೈವನೆ ಸರ್ವೋತ್ಕೃಷ್ಟನೆಂಬಲ್ಲಿ,**
> **ಕ್ರಿಮಿಕೀಟಪತಂಗ ಜಾತಿಯಿಂದ, ಪಶುಗಳಧಿಕ, ಆ ಪಶುಗಳಿಂ**
> **ಮನುಷ್ಯರಧಿಕ, ಆ ಮನಷ್ಯರಿಂ ದ್ವಿಜರಧಿಕ, ಆ ದ್ವಿಜರಿಂ**
> **ವಿಪ್ರರಧಿಕ, ಅವರಿಂ ಜ್ಞಾನಿಗಳಧಿಕ, ಆ ಜ್ಞಾನಿಗಳಿಂಗಿಂತಲೂ**
> **ಶಿವಾರ್ಚಕರಧಿಕ, ಆ ಶಿವಾರ್ಚಕರಿಗಿಂತಲೂ**
> **ಲಿಂಗಾಂಗಸಂಗಿಗಳಧಿಕ, ಆ ಲಿಂಗಾಂಗಸಂಗಿಗಳಿಂ ಷಟ್ಸ್ಥಲಜ್ಞಾನಿಗಳಧಿಕ,**
> **ಅವರಿಂ ಲೋಕದಲ್ಲಿಯೂ ಸಮಾನವಿಲ್ಲವಾಗಿ ...........''**

ಮನಷ್ಯವರ್ಗದಲ್ಲಿ ಎಲ್ಲರಿಗಿಂತಲೂ ಲಿಂಗದೇಹಿಯಾದ ವೀರಶೈವನಲ್ಲಿ ಆತ್ಮನು ಹೆಚ್ಚು ಪ್ರಕಾಶವುಳ್ಳವನಾಗಿರುತ್ತಾನೆಂದು ಈ ವಚನದ ಭಾವವು. ಅದರೊಳಗೆ ಷಟ್ಸ್ಥಲಜ್ಞಾನವುಳ್ಳವನಂತೂ ಸಾಕ್ಷಾತ್ ಶಿವನೆಂದೇ ತಿಳಿಯಬೇಕೆಂಬ ಅಭಿಪ್ರಾಯವಿರುತ್ತದೆ. ಈ ರೀತಿ ಲಿಂಗದೇಹಿಗಳಾದ ಶರಣರಿಗೆ ಬಸವೇಶ್ವರಾದಿಗಳು ಜಂಗಮರೆಂದು ಕರೆದಿರುತ್ತಾರೆ. ಲೌಕಿಕರೀತಿಯಲ್ಲಿ ನೋಡಿದರೆ ಎಲ್ಲಾ ಪ್ರಾಣಿಗಳೂ ಸ್ವಯಂ ಚಲಿಸುತ್ತವೆಯಾಗಿ ಅವು ಜಂಗಮಗಳೆನಿಸುವವಾದಾಗ್ಯೂ,

ಅವುಗಳೆಲ್ಲದರಲ್ಲೂ ಆತ್ಮ ಅಂದರೆ ಶಿವನಿರುತ್ತಾನಾಗಿ ಅವುಗಳೂ ಶಿವಸಮಾನಗಳೆಂದು ಭಾವಿಸಬಹುದಾದಾಗ್ಯೂ, ಮೇಲೆ ಕಂಡ ಉದಾಹರಣೆಯ ಪ್ರಕಾರ ವೀರಶೈವರ ಭಾವದಲ್ಲಿ ಷಟ್ಸ್ಥಲಜ್ಞಾನಿಯಾದ ಲಿಂಗಾಂಗಿಯಲ್ಲಿ ಶಿವನು ಪರಿಪೂರ್ಣವಾಗಿ ಹೊರಹೊಮ್ಮಿರುತ್ತಾನಾದುದರಿಂದಲೂ ಅವನು ಲೋಕವನ್ನು ಪಾವನಮಾಡುವದಕ್ಕಾಗಿ ಚರಿಸುತ್ತಾನಾದುದರಿಂದಲೂ, ಅವನನ್ನೇ ಬಸವಾದಿಗಳು ಜಂಗಮನೆಂಬ ಸಂಕೇತದಿಂದ ಕರೆದಿರುತ್ತಾರೆ.

ಸಕಲ ಜೀವಿಗಳಲ್ಲೂ ಶಿವನಿರುತ್ತಾನಾಗಿ ಸಕಲ ಜೀವಿಗಳನ್ನೂ ಸತ್ಕರಿಸುವದು ನೈಜವಾದಾಗ್ಯೂ ಲಿಂಗದೇಹಿಯಾದವನೇ ಹೆಚ್ಚು ಪ್ರಕಾಶವುಳ್ಳ ಜಂಗಮವಾಗಿ ರುತ್ತಾನಾಗಿ ಅವನನ್ನು ಅತ್ಯಂತ ಭಕ್ತಿಯಿಂದ ಸತ್ಕರಿಸಬೇಕೆಂದು ವೀರಶೈವ ಧರ್ಮವು ಸಾರುತ್ತದೆ. ಗುರುಸೇವೆಯು ಹೇಗೆ ಮುಖ್ಯವೋ, ಲಿಂಗಧ್ಯಾನವು ಹೇಗೆ ಮುಖ್ಯವೋ ಜಂಗಮದಾಸೋಹವೂ ಹಾಗೆಯೇ ಮುಖ್ಯವಾಗಿ ರುತ್ತದೆ. ಗುರುವಿನ ಸದ್ಬೋಧೆಯಿಂದ ಸದಾಚಾರವುಂಟಾಗುತ್ತದೆ: ಲಿಂಗದ ಧ್ಯಾನದಿಂದ ಪರಮಾತ್ಮಜ್ಞಾನವಾಗುತ್ತದೆ; ಜಂಗಮದ ದಾಸೋಹದಿಂದ ಪರಹಿತಕಾರ್ಯವಾಗುತ್ತದೆ. ಈ ಮೂರರಿಂದಲೂ ಮೂರು ಫಲಗಳನ್ನು ಬಸವೇಶ್ವರಾದಿಗಳು ತಮ್ಮ ಗೀತೆಗಳಲ್ಲಿ ಹೇಳಿರುತ್ತಾರೆ. ಗುರುವಿನಿಂದ ತನು ಶುದ್ಧವಾಗುತ್ತದೆಂತಲೂ, ಲಿಂಗದಿಂದ ಮನವು ಶುದ್ಧವಾಗುತ್ತದೆಂತಲೂ, ಜಂಗಮದಿಂದ ಧನವು ಶುದ್ಧವಾಗುವದೆಂತಲೂ ಹೇಳಿರುತ್ತಾರೆ. ಗುರುವಿಗೆ ತನುವನರ್ಪಿಸುವದರಿಂದ ತನು ಶುದ್ಧವಾಗುವದು; ಲಿಂಗಕ್ಕೆ ಮನವನರ್ಪಿಸುವದರಿಂದ ಮನವು ಶುದ್ಧವಾಗುವದು; ಜಂಗಮಕ್ಕೆ ಧನವನರ್ಪಿಸುವದರಿಂದ ಧನವು ಶುದ್ಧವಾಗುವದು.

ಅಷ್ಟಾವರಣಗಳಲ್ಲಿ ಪ್ರತಿಯೊಂದೊಂದನ್ನೂ ಪ್ರಸ್ತಾಪಿಸುವಾಗ್ಯೆ ಅದರದರ ಅಧಿಕ್ಯವನ್ನು ಹೇಳುತ್ತಾರೆ. ಬಸವನು ತನ್ನ ಭಕ್ತ್ಯತಿಶಯದಲ್ಲಿ ಲಿಂಗಕ್ಕಿಂತಲೂ ಜಂಗಮವು ಅಧಿಕವೆಂದು ವರ್ಣಿಸಿರುತ್ತಾನೆ. ಹೇಗೆಂದರೆ –

**ಎರೆದರೆ ನೆನೆಯದು, ಮರೆದರೆ ಬಾಡದು, ಹುರುಳಿಲ್ಲ, ಹುರುಳಿಲ್ಲ**
**ಲಿಂಗಾರ್ಚನೆ. ಕೂಡಲ ಸಂಗಮದೇವ ಜಂಗಮಕ್ಕೆರದರೆ ಸ್ಥಾವರ**
**ನೆನೆಯಿತ್ತು ॥**

**ಮರಕ್ಕೆ ಬಾಯಿ ಬೇರೆಂದು ತಳಕ್ಕೆ ನೀರನೆರೆದರೆ ಮೇಲೆ ಪಲ್ಲವಿಸಿತ್ತು ನೋಡ,**
**ಲಿಂಗದಬಾಯಿ ಜಂಗಮವೆಂದು ಪಡಿಪದಾರ್ಥವ ನೀಡಿದೊಡೆ ಮುಂದೆ**
**ಸಕಲಾರ್ಥವನೀವನು. ಆ ಜಂಗಮನ ಹರನೆಂದು ಕಂಡು ನರನೆಂದು**
**ಭಾವಿಸಿದರೆ ನರಕ ತಪ್ಪದು ಕಾಣಾ ಕೂಡಲಸಂಗಮದೇವ**

ಬಸವೇಶ್ವರನು ಪ್ರಾಣಲಿಂಗಿಸ್ಥಲದಲ್ಲಿ ಸರ್ವಜೀವಿಗಳೊಳಗೆ ಶಿವಸಿದ್ಧಾನೆಂದು ಹೇಳುತ್ತಾನೆ. ಹೇಗೆಂದರೆ –

**ತನ್ನ ಮನದಲ್ಲಿ 'ಯತ್ರ ಜೀವಸ್ತತ್ರ ಶಿವ'ನೆಂದು,**
**ಸರ್ವಜೀವದಯಾಪಾರಿಯಾದರೆ, ಕೂಡಲಸಂಗಮದೇವ**
**ಕೈಲಾಸದಿಂದ ಬಂದು ಎತ್ತಿಕೊಳ್ಳದಿದ್ದನೇ ಆವರನು?**

ಹೀಗೆ ಸಕಲಪ್ರಾಣಿಗಳಲ್ಲಿ ಶಿವನಿರುವದರಿಂದ ಅವುಗಳೆಲ್ಲವನ್ನೂ ಸತ್ಕರಿಸುವದರಿಂದ ಎಷ್ಟೇ ಹಿತವಿರುವಾಗ್ಯ, ಲಿಂಗಧಾರಣಯುಕ್ತನಾಗಿ ಶಿವಭಕ್ತಿ ಶಿವ ಜ್ಞಾನಯುತನಾದ ಶಿವಭಕ್ತನನ್ನು, ಅಂದರೆ ಜಂಗಮನನ್ನು ದಾಸೋಹದಿಂದ ಸತ್ಕರಿಸಿದರೆ, ಅತ್ಯಂತ ಪುಣ್ಯಕಾರ್ಯವೆಂಬುದು ಸ್ವತಃಸಿದ್ಧವೆಂದು ಬಸವಾದಿ ಪ್ರಮಥರ ಆಸಕ್ತಿಯು, ಶಿವಭಕ್ತನ ಪೂಜೆಯನ್ನು ಅತ್ಯಂತ ಶ್ರೇಷ್ಠವೆಂದು ಶರಣರು ಉದಾತ್ತಧ್ವನಿಯಿಂದ ಹೇಳುತ್ತಾರೆ. ಜಂಗಮನು ಸಾಕ್ಷಾಚ್ಛಿವನೆಂದು ಆನಂದಿಸಿರುತ್ತಾರೆ. ನಿರಾಕಾರಪರಶಿವನನ್ನು ಸಂಬೋಧಿಸುವಂತೆ ಜಂಗಮನನ್ನು ಸಂಬೋಧಿಸಿರುತ್ತಾರೆ.

ಬಸವೇಶ್ವರನು ಜಗತ್ತಿನೊಳಗಿರುವ ಲಿಂಗಧಾರಿಗಳಾದ ಶಿವಭಕ್ತರೆಲ್ಲರೂ ಜಂಗಮರೆಂತಲೂ ತಾನೊಬ್ಬನೇ ಭಕ್ತನಂತ ತನ್ನ ವಚನದಲ್ಲಿ ಉದ್ಘೋಷಿಸಿರುತ್ತಾನೆ. ಹೇಗೆಂದರೆ –

**ಬಸವ ಬಾರಯ್ಯ! ಮರ್ತಲೋಕದೊಳಗೆ ಭಕ್ತರುಂಟೆ ಹೇಳಯ್ಯ!**
**ಮತ್ತಾರೂ ಇಲ್ಲವಯ್ಯ, ನಾನೊಬ್ಬನೇ ಭಕ್ತನು ಮರ್ತಲೋಕದೊಳಗಣ**
**ಭಕ್ತರೆಲ್ಲರೂ ಜಂಗಮರು, ಲಿಂಗ ನೀನೇ ಅಯ್ಯ, ಕೂಡಲಸಂಗಮದೇವ ||**

ಜಂಗಮನನ್ನು ಸತ್ಕರಿಸಬೇಕೆಂಬ ವಿಚಾರದಲ್ಲಿ ಅನಂತಕಥೆಗಳಿರುತ್ತವೆ. ಕೆಲವನ್ನು ಸೂಚನಾರ್ಥವಾಗಿ ಸಂಕ್ಷಿಪ್ತವಾಗಿ ಇಲ್ಲಿ ಬರೆಯುತ್ತೇನೆ –

**ಇಳೆಯಾಂಡಗುಡಿಮಾರ**ನೆಂಬ ಶಿವಶರಣನಿರುತಿರಲು, ಮಳೆ ಬಲುವಾಗಿ ಸುರಿಯುತ್ತಿರುವಾಗ ಶಿವನು ಜಂಗಮನಾಗಿ ಬಂದು ಓಗರವನ್ನು ನೀಡಬೇಕೆಂದು ಕೇಳಲು, ಆಗ ಮನೆಯಲ್ಲಿ ಧಾನ್ಯವೆಲ್ಲ ಮುಗಿದಿರಲು, ಆ ಮಳೆಯೊಳಗೆ ಹೊಲಕ್ಕೆ ಹೋಗಿ ಆಗತಾನೆ ಬಿತ್ತಿದ್ದ ಭತ್ತಗಳನ್ನು ಮನೆಗೆ ತಂದು ಓಗರವನ್ನು ಮಾಡಿ ಜಂಗಮನಿಗೆ ನೀಡಿ ತೃಪ್ತಿ ಪಡಿಸಿದನು.

**ಆಯ್ದಕ್ಕಿಯ ಮಾರಯ್ಯ**ನೆಂಬ ಶಿವಶರಣನು ಬಸವೇಶ್ವರನ ಅರಮನೆಯ ಬಳಿ ಬಿದ್ದಿರುವ ಅಕ್ಕಿಯ ಕಾಳುಗಳನ್ನು ಆಯ್ದುಕೊಂಡು ಬಂದು ಜಂಗಮವಿತತಿಗೆ ಮೃಷ್ಟಾನ್ನವನ್ನು ಮಾಡಿ ನೀಡಿದನು.

**ಬೊಂತಲದೇವಿ** ಎಂಬ ಶರಣೆಯು ಭಕ್ತಿಯಿಂದಿರುತ್ತಿರಲು ಶಿವನು ಜಂಗಮಾಕಾರದಿಂದ ಒಂದು ಹೊನ್ನುಗಳನ್ನು ಬೇಡಲು, ಆಕೆಯು ತನ್ನ ಬೊಂತೆಯನ್ನು ಝಾಡಿಸಿ ಅದರಿಂದ ಹೊನ್ನುಗಳನ್ನು ಉದುರಿಸಿ ಕೊಟ್ಟಳು.

ಈ ಕಥೆಗಳು ಅದ್ಭುತಗಳೆನಿಸಿದಾಗ್ಯೂ ಪ್ರತಿಯೊಬ್ಬ ಲಿಂಗವಂತನೂ ಲಿಂಗವಂತನಲ್ಲಿ ಹೇಗೆ ನಿಷ್ಠೆಯಿಂದ ನಡೆದುಕೊಳ್ಳಬೇಕೆಂಬುದನ್ನು ತೋರಿಸುತ್ತವೆ. ಇದರಲ್ಲಿ ಲಿಂಗವಂತನು ಕೊಡುವಾಗ ಹೇಗೆ ನಿಶ್ಚಲಭಕ್ತಿಯಿಂದ ನಡೆದುಕೊಳ್ಳಬೇಕೆಂಬುದೂ ತೆಗೆದುಕೊಳ್ಳುವಾಗ ಹೇಗೆ ಶಿವಸ್ವರೂಪಿಯಾಗಿರಬೇಕೆಂಬುದ ದ್ಯೋತವಾಗುತ್ತದೆ.

★★★★★

# ವೀರಶೈವಸಿದ್ಧಾಂತ ಸ್ವರೂಪ

ವೇ। ಕೀರ್ತನ ಕೇಸರಿ ಬಿ. ಶಿವಮೂರ್ತಿಶಾಸ್ತ್ರಿಗಳವರು

ಹಿಂದೂಧರ್ಮದಲ್ಲಿಸಿದ್ಧಾಂತಮತ, ವೇದಾಂತಮತ - ಎಂದು ಮತಗಳು ಎರಡು ವಿಧವಾಗಿವೆ. ವೀರಶೈವಮತವು ಸಿದ್ಧಾಂತಭಾಗಕ್ಕೆ ಸೇರಿದುದಾಗಿದೆ. ವೀರಶೈವಸಿದ್ಧಾಂತವು ಈ ಮುಂದೆ ಹೇಳುವ ಲಕ್ಷಣಗಳಿಂದ ಕೂಡಿದೆ :

1. ವೀರಶೈವಸಿದ್ಧಾಂತದಲ್ಲಿ ಶಿವ-ಶಕ್ತಿ ಎಂಬ ಎರಡು ಮೂಲತತ್ತ್ವಗಳು ಸೃಷ್ಟಿಯ ಬುನಾದಿಯಾಗಿವೆ. ಇವು ತೋರಿಕೆಗೆ ಎರಡರಂತೆ ಕಂಡರೂ ಅವಿನಾಭಾವದಿಂದ ಶಬ್ದಾರ್ಥದಂತೆ, ರತ್ನಕಾಂತಿಗಳಂತೆ ಒಂದಾಗಿದೆ. ಆದ್ದರಿಂದಲೇ ಶಕ್ತಿವಿಶಿಷ್ಟನಾದ ಶಿವನನ್ನು ತಿಳಿಯುವ ಮತವಾದುದರಿಂದ ಈ ಮತಕ್ಕೆ ಶಕ್ತಿವಿಶಿಷ್ಟಾದ್ವೈತ ಎಂದು ಹೆಸರಾಗಿದೆ. ವೀರಶೈವದರ್ಶನದ ಮೂಲಭೂತವಾದ ಶಿವಶಕ್ತಿಗಳು ಆಧುನಿಕವೈಜ್ಞಾನಿಕರು ಹೇಳುವ Matter and Energy ಸೃಷ್ಟಿಯ ಮೂಲತತ್ತ್ವಗಳಿಗೆ ಸಮಾನವೆಂದು ನಾವು ತಿಳಿಯಬಹುದಾಗಿದೆ.

2. ವೀರಶೈವಸಿದ್ಧಾಂತದಲ್ಲಿ ಜೀವನಿಗೆ ಸಾಧಕಾವಸ್ಥೆಯಲ್ಲಿ ದ್ವೈತವೂ ಸಿದ್ಧಾವಸ್ಥೆಯಲ್ಲಿ ಅದ್ವೈತವೂ ಪರಿಗ್ರಹಿಸಲ್ಪಟ್ಟಿದೆ. ಆದುದರಿಂದಲೇ ಈ ಮತಕ್ಕೆ ದ್ವೈತಾದ್ವೈತ ಮತ್ತು ಶಿವಾದ್ವೈತ ಎಂಬ ಹೆಸರುಗಳೂ ರೂಢಿಗೆ ಬಂದಿವೆ.

3. ವೀರಶೈವದರ್ಶನವು ಜೀವಿಗಳಲ್ಲಿ ಸ್ತ್ರೀಪುರುಷಭೇದವನ್ನು ಕಲ್ಪಿಸುವದಿಲ್ಲವಾದುದರಿಂದ ಈ ಧರ್ಮದಲ್ಲಿ ಸ್ತ್ರೀಪುರುಷರಿಬ್ಬರೂ ಮೋಕ್ಷಾಧಿಕಾರಿಗಳಾಗಿದ್ದಾರೆ. ಮತ್ತೆ ಕೆಲವು ವೈದಿಕಾವೈದಿಕದರ್ಶನಗಳಲ್ಲಿ ಸ್ತ್ರೀಯರಿಗೆ ಮೋಕ್ಷಾಧಿಕಾರವಿಲ್ಲವೆಂಬುದು ಇಲ್ಲಿ ನಾವು ನೆನಪಿಡತಕ್ಕ ವಿಚಾರ.

4. ವೀರಶೈವದರ್ಶನದ ಪ್ರಕಾರ ಜೀವಿಯು ಜನ್ಮತಃ ಪ್ರಾಪ್ತವಾದ ತನ್ನ ಕುಲಜಾತಿಗಳಿಗೆ ಸಿಕ್ಕಿ ನರಳುವ ಅವಶ್ಯಕತೆಯಿಲ್ಲ. ಅವನು ಶಿವಸಂಸ್ಕಾರದಿಂದ ಪುನೀತನಾಗಿ ಉತ್ತಮನೆನಿಸಬಹುದು. ಹಾಗೂ ಮೋಕ್ಷವನ್ನು ಸಂಪಾದಿಸಬಹುದು.

5. ವೀರಶೈವಧರ್ಮದಲ್ಲಿ ಕ್ರಿಯೆ ಮತ್ತು ಜ್ಞಾನ - ಇವೆರಡೂ ಸಮಾನ ಪ್ರಧಾನವಾದವುಗಳು. ಮತ್ತೆ ಕೆಲವು ಮತಗಳು ಕರ್ಮಕ್ಕೆ ಅಥವಾ ಜ್ಞಾನಕ್ಕ ಮಾತ್ರ ಪ್ರಾಮುಖ್ಯತೆ ಕೊಟ್ಟಿವೆ.

6. ಯಜ್ಞಯಾಗಗಳ ನಿಮಿತ್ತವಾಗಿಯಾಗಲಿ ಮತ್ತಾವ ಕಾರಣದಿಂದ ಆಗಲಿ ಪ್ರಾಣಿ ಹಿಂಸೆಯ ಈ ಧರ್ಮದಲ್ಲಿ ನಿಷೇಧವಾದುದು. ಆದ ಕಾರಣ ವೀರಶೈವದರ್ಶನವು ಅಹಿಂಸಾಮಯವಾದುದು.

7. ವೀರಶೈವ ಧರ್ಮವು ಕೇವಲ ಮೂರ್ತಿಪೂಜೆಯನ್ನು ಪ್ರರಸ್ಕರಿಸುವದೂ ಇಲ್ಲ, ಸಂಪೂರ್ಣ ತಿರಸ್ಕರಿಸುವದೂ ಇಲ್ಲ. ವೀರಶೈವರಿಗೆ ಪೂಜ್ಯವಾದ ಲಿಂಗವು ಜೀವರ ನಿರಾಕಾರಭಾವನೆಯ ಹೆಗ್ಗುರುತು. ದೇವಾಲಯಗಳಿಗೂ ತೀರ್ಥಕ್ಷೇತ್ರ ಗಳಿಗೂ ಲಿಂಗವಂತನು ಶ್ರಮಿಸುವ ಕಾರಣವಿಲ್ಲ.

8. ವೀರಶೈವರಿಗೆ ಪೂರ್ವಜನ್ಮವುಂಟು; ಆದರೆ ಪುನರ್ಜನ್ಮವಿಲ್ಲ. ಏಕೇನ ಜನ್ಮನಾ ಮುಕ್ತಿಃ' ಎಂಬ ಆಗಮವಾಕ್ಯವು ಇದಕ್ಕೆ ಪ್ರಮಾಣವಾಗಿದೆ.

9. ವೀರಶೈವರ್ಶನವು ಸೃಷ್ಟಿಕರ್ತನೊಬ್ಬನುಂಟೆಂದು ನಂಬುತ್ತದೆ. ಆತನು ಸಗುಣನಿರ್ಗುಣರೂಪನೆಂದು ನಂಬುತ್ತದೆ. ಆದ್ದರಿಂದ ಇದು ಆಸ್ತಿಕಮತವಾಗಿದೆ.

10. ವೀರಶೈವಮತವು ತನ್ನದೇ ಆದ ಒಂದು ಅಪ್ರಾಕೃತಸೃಷ್ಟಿಯನ್ನು ಹೇಳಿದೆ. ಅದಕ್ಕೆ ಶಿವಸೃಷ್ಟಿಯೆಂದು ಹೆಸರು.

11. ವೀರಶೈವಮತವು ವೇದ ಮತ್ತು ಆಗಮಗಳೆರಡನ್ನೂ ನಂಬುವ ತಾಂತ್ರಿಕವೈದಿಕಮತವಾಗಿದೆ.

12. ವೀರಶೈವಮತವು ಅನುಭವಪ್ರಧಾನವಾದರೂ ಧರ್ಮಶ್ರದ್ಧೆಯನ್ನು ಅಲ್ಲಗಳೆದಿಲ್ಲ, ಶಬ್ದಪ್ರಮಾಣವನ್ನು ತಿರಸ್ಕರಿಸಿಲ್ಲ. ಆದುದರಿಂದ ಅದು ಕರ್ಮ ಜ್ಞಾನಗಳೆರಡಕ್ಕೂ ಪ್ರಧಾನವೆನಿಸಲು ಕಾರಣವಾಗಿದೆ. '**ಕ್ರಿಯಾಜ್ಞಾನ ಸಮಾಯುಕ್ತಂ ವೀರಶೈವಸ್ಯ ಲಕ್ಷಣಮ್**' ಎಂಬ ವಾಕ್ಯ ಇದಕ್ಕೆ ಪ್ರಮಾಣ.

13. ವೀರಶೈವದರ್ಶನವು, ಉಪನಿಷತ್ತಿನ ತತ್ತ್ವಜ್ಞಾನ, ಬೌದ್ಧರ ಸಮಾನಧರ್ಮ, ಜೈನರ ಅಹಿಂಸಾಧರ್ಮ, ದ್ರಾವಿಡರ ಭಕ್ತಿಮಾರ್ಗ - ಇವೆಲ್ಲವುಗಳ ಸಾರಸರ್ವಸ್ವವಾದ್ದರಿಂದ ಒಂದು ಪರಿಪೂರ್ಣಧರ್ಮವೆನಿಸಿದೆ.

14. ವೀರಶೈವದರ್ಶನದಲ್ಲಿ ಜೀವಿಯ ಸಾಧಕಾವಸ್ಥೆಯಲ್ಲಿಯೂ ಪಂಚಸೂತಕಗಳಿಗೆ ಬದ್ಧನಲ್ಲ.

(ಕೆಲವು ಮತೀಯರಲ್ಲಿ ಸೂತಕಕಾಲದಲ್ಲಿ ದೇವರಪೂಜೆಯು ಸ್ಮೃತಿವಾಕ್ಯಗಳಿಂದ ನಿಷೇಧಿಸಲ್ಪಟ್ಟಿದೆ. ವೀರಶೈವರಿಗೆ ಪ್ರತಿದಿನವೂ ಶಿವಪೂಜೆಯು ಅನಿವಾರ್ಯವಾದ ವ್ರತವಾದುದರಿಂದಲೂ ದೇಹಸಂಬಂಧವಾದ ಸೂತಕಕ್ಕಾಗಿ ಜೀವಸಂಬಂಧವಾದ ಪೂಜಾದಿಗಳನ್ನು ನಿಲ್ಲಿಸುವದು ಯುಕ್ತವಲ್ಲವಾದುದರಿಂದಲೂ ಸೂತಗಳು ಲಿಂಗವಂತರಲ್ಲಿ ತಾತ್ತ್ವಿಕದೃಷ್ಟಿಯಿಂದ ನಿರಾಕರಿಸಲ್ಪಟ್ಟಿದೆ.)

15. ವೀರಶೈವದರ್ಶನವು ಯಾವದಾದರೊಂದು ವ್ಯಕ್ತಿಯಿಂದ ಒಂದೇ ಒಂದು ಕಾಲದಲ್ಲಿ ನಿರೂಪಿತವಾದುದಲ್ಲ. ಅದು ದಾರ್ಶನಿಕರಾದ ಹಲವರು ಅನುಭವ, ತಪಸ್ಸು, ಪ್ರತಿಭೆ ಮತ್ತು ಪಾಂಡಿತ್ಯ ಇವುಗಳ ಫಲವಾಗಿ ಈಗಿನ ರೂಪದಲ್ಲಿ ಹೊರಬಿದ್ದಿವೆ. ಆದ್ದರಿಂದ ಇದು ಪರಿಪೂರ್ಣಧರ್ಮವಾಗಿದೆ.

16. ವೀರಶೈವದರ್ಶನವು ಜಗತ್ತಿನ ಜನರನ್ನು ಭವಿ, ಭಕ್ತ- ಎಂದು ಎರಡು ಭಾಗವಾಗಿ ತಿಳಿಯುತ್ತದೆ. ಬದ್ಧಜೀವಿಗಳು ಭವಿಗಳು, ಸಿದ್ಧಜೀವಿಗಳು ಭಕ್ತರು.

17. ವೀರಶೈವಧರ್ಮವು ದೀಕ್ಷಾಪ್ರಧಾನವಾದುದರಿಂದ ಜನ್ಮಪ್ರಧಾನವಾದ ವರ್ಣಾಶ್ರಮಗಳನ್ನು ಅಂಗೀಕರಿಸುವದಿಲ್ಲ. ಆದ್ದರಿಂದ ಇದು ಅತಿವರ್ಣಾಶ್ರಮಧರ್ಮವೆನಿಸಿದೆ.

18. ವೀರಶೈವದರ್ಶನವು ಅಹಿಂಸೆ ಮತ್ತು ಪವಿತ್ರತೆಗಳಿಗೆ ಪ್ರಾಮುಖ್ಯತೆಯನ್ನು ಕೊಟ್ಟಿದೆಯಾದ್ದರಿಂದ ಮದ್ಯಮಾಂಸಗಳನ್ನು ನಿಷೇಧಿಸಿದೆ.

19. ವೀರಶೈವಧರ್ಮವು ವೇದದ ಜ್ಞಾನಕಾಂಡ, ಶಿವಾಗಮಗಳು, ಶಿವಶರಣರ ವಚನಗಳು, ಪೂರ್ವಾಚಾರ್ಯರ ಗ್ರಂಥಗಳು - ಇವನ್ನೆಲ್ಲ ಪ್ರಮಾಣಾರ್ಹವೆಂದು ನಂಬುತ್ತದೆ.

20. ವೀರಶೈವಧರ್ಮವು ಆರ್ಯದ್ರಾವಿಡಸಂಸ್ಕೃತಿಗಳ ಸಮ್ಮಿಶ್ರಣ ರೂಪವಾಗಿದೆ. **– ಶರಣಸಾಹಿತ್ಯದಿಂದ**

★★★★★

**ಪರಮಾತ್ಮನ ಮೂಲರೂಪ**

ಧರೆಯಾಕಾಶವಿಲ್ಲದಂದು, ಎಂಬತ್ತುನಾಲ್ಕುಲಕ್ಷಜೀವಜಂತುಗಳಿಲ್ಲದಂದು, ಸಚರಾಚರಂಗಳು ಪಸರಕ್ಕೆ ಬಾರದಂದು, ಇಹಪರಸ್ವರ್ಗನರಕಾದಿಗಳಿಲ್ಲದಂದ ು, ಸುರಾಳನಿರಾಳಂಗಳೇನೂ ಇಲ್ಲದಂದು, ಸೌರಾಷ್ಟ್ರಸೋಮೇಶ್ವರಾ ಆನು ನೀನು ಇಲ್ಲದಂದು, ಅಂದೇನೊ ಇಂದೇನೊ **– ಆದಯ್ಯನ ವಚನ**

★★★★★

# ಜೈನಸಿದ್ಧಾಂತ

## ಆತ್ಮನಾರು?

**– ವಿಶ್ವಬಂಧು ಪತ್ರಿಕೆಯಿಂದ**

ಪ್ರಪಂಚದ ಸುಪ್ರಸಿದ್ಧ ತತ್ತ್ವಜ್ಞಾನಿಗಳು ಜೀವಿಗಳ ಜೀವನದ ಅವಸ್ಥಾಂತರಗಳನ್ನು ಕುರಿತು ಬಹಳವಾಗಿ ಯೋಚಿಸಿರುವರು. ಅಚೇತನವಾದ ಶರೀರ, ಮತ್ತು ಅದಕ್ಕೆ ಚೈತನ್ಯವನ್ನಿತ್ತಿರುವ ಶಕ್ತಿ – ಇವುಗಳು ಪ್ರತಿತತ್ತ್ವಸಿದ್ಧಾಂತದಲ್ಲಿಯೂ ಬಹುಭಾಗವನ್ನಾಕ್ರಮಿಸಿರುವವು. ಶರೀರವೇನೋ ಜಡವೆನ್ನುವುದನ್ನು ಸ್ಥೂಲಜ್ಞಾನಿಗಳಾದ ಪ್ರತ್ಯಕ್ಷಪ್ರಮಾಣಿಗಳೂ ಒಪ್ಪುವರು. ಮಾತನಾಡುತ್ತಾ ಓಡಾಡುತ್ತಾ ಪ್ರಪಂಚದ ವ್ಯವಹಾರಗಳಲ್ಲಿ ಮಗ್ನವಾಗಿ ಎಷ್ಟೋ ಕಾರ್ಯಗಳನ್ನು ಮಾಡುತ್ತಿರುವ ಶರೀರಕ್ಕೆ ಯಾವದೋ ಒಂದು ನೆಪದಿಂದ ವ್ಯಾಧಿಪೀಡಿತವಾಗಿ ತನ್ನ ಚಟುವಟಿಕೆಯ ಕಾರ್ಯವನ್ನು ನಿಲ್ಲಿಸಿ ಅಚೇತನವಾಗಿ

ಬಿದ್ದುಹೋಗುವದು. ಅದರಲ್ಲಿದ್ದ ಚೈತನ್ಯವು ಎಲ್ಲಿ ಹೋಯಿತು? ಶರೀರವು ಬಿದ್ದುಹೋದ ಕೂಡಲೆ ಅ ಚೈತನ್ಯವು ನಾಶವಾಯಿತೆ? ಅಥವಾ ಆ ಚೈತನ್ಯದ ಇರುವಿಕೆಯು ಮುಂದುವರಿಯತೆ? ಮುಂದುವರಿದರೆ ಆ ಚೈತನ್ಯವು ಎಲ್ಲಿ, ಹೇಗೆ ಇರುವುದು? ಎಂಬ ಪ್ರಶ್ನೆಗಳಿಗೆ ಉತ್ತರವನ್ನು ಕೊಡುವಾಗ ಸ್ಯಾದ್ವಾದವು ಅಂದರೆ ಜೈನ ಸಿದ್ಧಾಂತವು ಹೀಗೆ ಹೇಳುವುದು:

ಶರೀರವು ಅಚೇತನವಾದುದು. ಅದಕ್ಕೆ ಚೈತನ್ಯವನ್ನು ಕೊಟ್ಟು ಓಡಾಡುವ ಮಾತಾಡುವ - ಮೊದಲಾದ ಕಾರ್ಯಗಳನ್ನು ಮಾಡಿಸುವ ಶಕ್ತಿಯೇ ಆತ್ಮನು. ಈ ಆತ್ಮನು ಕಲ್ಲಿನೊಂದಿಗೆ ಚಿನ್ನವು ಸೇರಿರುವಂತೆಯೂ, ಹಾಲಿನೊಂದಿಗೆ ತುಪ್ಪವು ಕೂಡಿರುವಂತೆಯೂ, ಪುಷ್ಪದೊಂದಿಗೆ ಸುವಾಸನೆ ಇರುವಂತೆಯೂ, ಕಟ್ಟಿಗೆಯಲ್ಲಿ ಕಿಚ್ಚಿರುವಂತೆಯೂ, ಶರೀರದೊಂದಿಗೆ ಸೇರಿರುವನು. ಕಲ್ಲಿನಿಂದ ಚಿನ್ನವನ್ನು ಶೋಧಿಸಿ ತೆಗೆಯುವಂತೆಯೂ, ಹಾಲನ್ನು ಕಡೆದು ತುಪ್ಪದ ಅಂಶವನ್ನು ಬೇರೆ ಮಾಡುವಂತೆಯೂ, ಕಟ್ಟಿಗೆಗಳು ಒಂದಕ್ಕೊಂದು ಮಸೆಯುವದರಿಂದ ಬೆಂಕಿಯನ್ನು ಕಾಣುವಂತೆಯೂ, ಶರೀರದ ಆತ್ಮನನ್ನು ಬೇರೆಮಾಡಿ ನೋಡಬಹುದು. ಆತ್ಮನು ಬಿಸಿಲಿಗೆ ಕಂದುವನಲ್ಲ, ನೀರಿನಲ್ಲಿ ನೆನೆಯುವನಲ್ಲ, ಶಕ್ತಿಯ ಹೊಡೆತದಿಂದ ತುಂಡಾಗುವವನಲ್ಲ. ಆತ್ಮನು ಚಿನ್ಮಯನು. ಜ್ಞಾನಸ್ವರೂಪನು, ಸ್ವಭಾವವಾಗಿ ಪರಿಶುದ್ಧನು. ಇಂತಹ ಪರಿಶುದ್ಧಾತ್ಮನು ತನ್ನ ನೈಜಸ್ವಭಾವವನ್ನುಮರೆತು ತನ್ನದಲ್ಲದ ಬಾಹ್ಯವಸ್ತುಗಳ ಮೇಲೆ ಪ್ರೀತಿಯಿಟ್ಟು ಭ್ರಾಂತನಾಗಿ ಹೆಣ್ಣು, ಹೊನ್ನು, ಮಣ್ಣು - ಮೊದಲಾದ ನಶ್ವರಪದಾರ್ಥಗಳಲ್ಲಿ ಮೋಹಿತನಾಗಿ ತನ್ನ ಪರಿಶುದ್ಧತೆಯನ್ನು ಕಳೆದುಕೊಂಡು ಈ ಸಂಸಾರಕಾಂತಾರದಲ್ಲಿ ಅಲೆದಾಡುತ್ತಿರುವನು.

ಆತ್ಮನು ಅನಾದಿಯು, ಅನಾದಿಯಿಂದಲೂ ಇವನಿಗೆ ಕರ್ಮದ ಹೊದ್ದಿಕೆ ಇದ್ದೇ ಇರುವುದು. ಕರ್ಮವು ಜಡವು. ಈ ಜಡಕರ್ಮದ ಭಾರದಿಂದ ಆತ್ಮನು ತಗ್ಗಿಹೋಗಿರುವನು. ಬೂರುಗದ ಕಾಯಿಂದ ಹೊರಡುವ ದೂದವೆಂಬ ಹಗುರ ಪದಾರ್ಥವು ಆಕಾಶದಲ್ಲಿ ಹಾರುತ್ತಿರುವಾಗ ನೀರಿನ ಸಂಪರ್ಕವಾಯಿತು. ಆದಾದ ಕೂಡಲೆ ಆ ಹಗುರವಾದ ದೂದವು ಭೂಮಿಯ ಮೇಲೆ ಬಿದ್ದಿತು. ಭೂಸಂಪರ್ಕವಾದ ಕೂಡಲೆ ಧೂಳು ಮೆತ್ತಿಕೊಂಡಿತು. ಆಗ ಅದಕ್ಕೆ ಮೇಲಕ್ಕೆ ಹೋಗುವ ಸ್ವಭಾವವು ನಾಶವಾಗಿ ಗಾಳಿ ಹೊಡೆತದಿಂದ ಆಕಡೆಯಿಂದೀಕಡೆಗೆ ಈಕಡೆಯಿಂದಾಕಡೆಗೆ ಸುತ್ತುತ್ತಿರುವಂತೆ ಸ್ವಭಾವವಾಗಿ ಊರ್ಧ್ವಗಮನವುಳ್ಳ ಆತ್ಮನು

ಕರ್ಮವೆಂಬ ಪದಾರ್ಥದಿಂದ ತೇದುಹೋಗಿ ಆ ಕರ್ಮಾಧೀನನಾಗಿ ಆ ಕರ್ಮವು ಯಾವ ಕಡೆಗೊಯ್ಯುವುದೋ ಆ ಕಡೆಗೆ ಹೋಗುತ್ತಾ ಸಂಚರಿಸುತ್ತಿರುವನು. ಈ ಕರ್ಮವು ಆತ್ಮನೊಡನೆ ಸೇರುವ ಬಗೆಯೆಂತು? ಪುನಃ ಬಿಡುಗಡೆಯಾಗಬೇಕಾದರೆ ಆತ್ಮನು ಮಾಡಬೇಕಾದ ಕಾರ್ಯಗಳಾವುವು? ಮುಂದೆ ವಿವರಿಸಲಾಗುವುದು.

## ಆತ್ಮವೂ ಕರ್ಮವೂ

ಆತ್ಮನು ಚೇತನನು; ಕರ್ಮವು ಅಚೇತನವು. ಆತ್ಮನು ಜ್ಞಾನಸ್ವರೂಪನು; ಕರ್ಮವು ಜಡವು. ಈ ಜ್ಞಾನಮಯನಾದ ಆತ್ಮನಿಗೆ ಕರ್ಮಬಂಧವಾಗುವುದೆಂತು? ಆತ್ಮನೂ ಅನಾದಿಯು; ಕರ್ಮವೂ ಅನಾದಿಯು. ಅನಾದಿಕಾಲದಿಂದಲೂ ಆತ್ಮನೂ ಅನಾದಿಯು; ಕರ್ಮವೂ ಅನಾದಿಯು, ಅನಾದಿಕಾಲದಿಂದಲೂ ಆತ್ಮನು ಕರ್ಮದೊಡನೆ ಕೂಡಿರುವನು. ಕರ್ಮವನ್ನು ಪ್ರತಿ ನಿಮಿಷದಲ್ಲಿಯೂ ಆಕರ್ಷಿಸುತ್ತಿರುವನು. ಕರ್ಮವು ಬಹಳ ಸೂಕ್ಷ್ಮವಾದ ಜಡಪದಾರ್ಥವು. ಕರ್ಮಾಣುಗಳು ವಿಶ್ವವನ್ನು ವ್ಯಾಪಿಸಿರುವುವು. ಬಹಳ ಸೂಕ್ಷ್ಮವಾದ ಧೂಳುಮಣ್ಣು ವಿಶ್ವವನ್ನು ವ್ಯಾಪಿಸಿರುವುದಲ್ಲವೆ? ಈ ಧೂಳು ಮಣ್ಣು ತೇವವಾದ ಪದಾರ್ಥಗಳ ಮೇಲೂ, ಜಿಡ್ಡಾದ ವಸ್ತುಗಳ ಮೇಲೂ ಕುಳಿತುಕೊಳ್ಳುತ್ತದೆ. ಅಂದರೆ ತೇದು(ತೊಯ್ದು?) ಹೋದ ಮತ್ತು ಜಿಡ್ಡಿನಿಂದ ಕೂಡಿದ ವಸ್ತುಗಳು ಧೂಳು ಬಂದು ಮುಸುಕಲು ಅವಕಾಶವೀಯುವುವೆಂದಾಯಿತು. ಈ ಧೂಳು ಸಕ್ಕರೆಯ ಪಾಕಕ್ಕೆಬಿದ್ದರೆ ಸಕ್ಕರೆಯ ಸ್ವಭಾವವನ್ನು ಧರಿಸುತ್ತದೆ. ಅಂದರೆ ಸಿಹಿಗುಣವನ್ನು ಪಡೆಯುತ್ತದೆ – ಅದೇ ಧೂಳು ವಿಷದಪಾಕದೊಡನೆ ಸಂಪರ್ಕವಾಗಲು ವಿಷದ ಗುಣವನ್ನೇ ಅವಲಂಬಿಸುವುದು. ಅಂತೂ ಧೂಳಿನ ಗುಣವು ಅದು ಯಾವ ರೀತಿಯ ವಸ್ತುವನ್ನಾಚ್ಛಾದಿಸುವುದೋ ಆ ವಸ್ತುವಿನ ಸ್ವಭಾವವನ್ನನುಸರಿಸುವುದೆಂದಾಯಿತು. ಹಾಗೆಯೇ ಆತ್ಮನು ಒಳ್ಳೆಯ ಮತ್ತು ಕೆಟ್ಟ ಪರಿಣಾಮಗಳಿಂದ ಕೂಡಿದವನಾಗಿ ಈ ಕರ್ಮಾಣುಗಳನ್ನು ಆಕರ್ಷಿಸುತ್ತಾನೆ. ಶುಭಪರಿಣಾಮಯುಕ್ತನಾದ ಆತ್ಮನೊಡನೆ ಸೇರುವ ಕರ್ಮಾಣುಗಳು ಶುಭಕರ್ಮಗಳಾಗುವುವು: ಅಶುಭಪರಿಣಾಮದಿಂದ ಕೂಡಿರುವ ಆತ್ಮನೊಡನೆ ಸೇರುವ ಕರ್ಮಾಣುಗಳು ಅಶುಭಕರ್ಮಗಳಾಗಿ ಪರಿಣಮಿಸುವುವು. ಅಂದರೆ ಶುಭಕರ್ಮವೇ ಪುಣ್ಯ; ಅಶುಭಕರ್ಮವೇ ಪಾಪ. ಶುಭಕರ್ಮವು ಆತ್ಮನಿಗೆ

ಭೋಗೋಪಭೋಗವಸ್ತುಗಳನ್ನೊದಗಿಸಿ ಸುಖಪಡಿಸುವುದು; ಅಶುಭಕರ್ಮವು ಬಡತನ, ರೋಗ, ಅಪಜಯ, ದುಃಖ – ಇವುಗಳನ್ನುಂಟುಮಾಡುವುದು. ಪರಹಿತಕಾರ್ಯದಲ್ಲಿ ಮಗ್ನನಾಗಿ ಯಾವಾಗಲೂ ಯಾರಿಗೂ ಯಾವ ತರಹದ ಭಾಧೆಯನ್ನೂ ಕೊಡದಿರುವ ದೈವಭಕ್ತನಾದ ಆತ್ಮನು ಯಾವಾಗಲೂ ಶುಭಕರ್ಮಾಣುಗಳನ್ನು ಆಕರ್ಷಿಸುತ್ತಿರುವನು. ಕೋಪ, ಅಸೂಯೆ, ಸಿಡಿಮಿಡುಕತನ, ಹಿಂಸೆಯನ್ನು ಮಾಡಬೇಕೆಂಬಭಾವನೆ. ದುಷ್ಟಯೋಚನೆ, ದುರಾಶೆ, ಬಡವರನ್ನು ಗೋಳಿಡಿಸುವುದು, ಸತ್ಪುರುಷರ ಮನಸ್ಸನ್ನು ನೋಯಿಸುವುದು – ಇವುಗಳಿಂದ ಆತ್ಮನ ಪರಿಣಾಮವು ಕೆಟ್ಟು ಅಶುಭಕರ್ಮಗಳನ್ನು ಅಂದರೆ ಪಾಪಗಳನ್ನು ಗಳಿಸುವನು.

ಆದರೂ ಪ್ರಪಂಚದಲ್ಲಿ ಕಣ್ಣೆದುರಿಗೆ ಕಾಣುತ್ತಿರುವ ದೃಶ್ಯವಾವುದು? ಪರರಿಗೆ ಹಿಂಸೆಯನ್ನು ಮಾಡಿ, ಪ್ರಾಣಿಕೋಟಿಯ ರಕ್ತವನ್ನು ಹೀರಿ ಜೀವನಮಾಡುತ್ತಿರುವ ಕೆಲವು ಮಾನವರು ಅಭಿವೃದ್ಧಿಯಲ್ಲಿದ್ದಂತೆಯೂ ಸುಖಿಗಳಾಗಿರುವಂತೆಯೂ ನಮಗೆ ಬೋಧೆಯಾಗುವುದು. ಪರಹಿತಕಾಂಕ್ಷಿಗಳಾಗಿ ಸದ್ವರ್ತನೆಯುಳ್ಳವರಾಗಿ, ಆಚಾರಶೀಲವ್ರತಗಳನ್ನು ಕೈಕೊಂಡವರಾಗಿರುವ ಕೆಲವು ಮನುಷ್ಯರು ಕಷ್ಟಪರಂಪರೆಗಳನ್ನನುಭವಿಸುವಂತೆ ಕಾಣುವುದು. ಇದಕ್ಕೆ ಕಾರಣಗಳೇನು? ಆತ್ಮನು ಯಾವಾಗಲೂ ಶುಭಕರ್ಮಗಳನ್ನೇ ಆಕರ್ಷಿಸುತ್ತಿರುವುದಿಲ್ಲ. ಯಾವಾಗಲೂ ಅಶುಭಕರ್ಮಗಳನ್ನೇ ಸೆಳೆಯುತ್ತಿರುವುದಿಲ್ಲ. ಹೊಸ ಹೊಸ ಕರ್ಮಗಳು ಉದಯಿಸುತ್ತವೆ. ಮೊದಲು ಬಂಧವಾಗಿದ್ದ ಕರ್ಮಗಳು ಫಲವನ್ನು ಕೊಡುತ್ತಿರುತ್ತವೆ. ಎಷ್ಟೋ ಜನ್ಮಗಳಿಂದ ಆತ್ಮನೊಡನೆ ಕೂಡಿರುವ ಕರ್ಮವು ಈಗ ಫಲವನ್ನು ಕೊಡುತ್ತಿರಬಹುದು. ಹಿಂದೆ ಮಾಡಿದ ಪುಣ್ಯದಿಂದ ಒಬ್ಬ ಮನುಷ್ಯನು ಈಗ ಐಶ್ವರ್ಯವಂತನಾಗಿಯೋ, ಅಧಿಕಾರಿಯಾಗಿಯೋ, ದುರ್ವ್ಯಾಪಾರಿಯಾಗಿ, ಕ್ರೂರಿಯಾಗಿ ಪಾಪಕಾರ್ಯಗಳನ್ನೆಸಗುತ್ತಾ ಹಿಂದಿನ ಪುಣ್ಯದ ಫಲವಾಗಿ ಈಗ ಪಾಪವನ್ನೇ ಗಳಿಸುತ್ತಾನೆ. ಹಾಗೆಯೇ ಹಿಂದಿನ ಪಾಪದಿಂದ ಈಗ ಒಬ್ಬನು ದುಃಖವನ್ನನುಭವಿಸುತ್ತ ಸದಾಚಾರಿಯಾಗಿ ದೈವಭಕ್ತಸಂಪನ್ನನಾಗಿ, ಅಹಿಂಸಾವ್ರತಿಯಾಗಿ ಪುಣ್ಯವನ್ನು ಗಳಿಸುತ್ತಿರಬಹುದು. ಅಂದರೆ ಹಿಂದಿನ ಪಾಪಫಲವು ಈಗಿನ ಪುಣ್ಯವನ್ನುಗಳಿಸುವುದಕ್ಕೆ ಕಾರಣಭೂತವಾದಂತಾಯಿತು.

ಇದಲ್ಲದೆ ಹಿಂದಿನ ಜನ್ಮದ ಪುಣ್ಯದಿಂದ ಐಶ್ವರ್ಯಸುಖಸಂತೋಷಗಳನ್ನು ಹೊಂದಿರುವ ಮನುಷ್ಯನು ಈಗಲೂ ಪುಣ್ಯವನ್ನು ಮಾಡಿ ಪುಣ್ಯಾಣುಗಳನ್ನು ಆಕರ್ಷಿಸಬಹುದು. ಹಿಂದಿನ ಪುಣ್ಯಬಂಧಕ್ಕೂ ಸಹಾಯಮಾಡಿದಂತಾಯಿತು. ಹಿಂದಿನ ಪಾಪದಿಂದ ಈಗ ದುಃಖಿಸುತ್ತಿರುವ ಮನುಷ್ಯನು ಪುನಃ ಪಾಪಗಳನ್ನು ಮಾಡಿ ಅಶುಭಕರ್ಮಗಳನ್ನೇ ಆಕರ್ಷಿಸಬಹುದು. ಇಲ್ಲಿ ಹಿಂದಿನ ಪಾಪವು ಈಗಿನ ಪಾಪಬಂಧಕ್ಕೆ ಕಾರಣವೆಂದಾಯಿತು. ಆತ್ಮಕ್ಕೂ ಕರ್ಮಕ್ಕೂ ಇಷ್ಟು ನಿಕಟಸಂಬಂಧವಿರುವುದು.

★★★★★

# ಶ್ರೀಮಹಾವೀರಸ್ವಾಮಿಯ ಆದೇಶ

ಶ್ರೀಯುತ ಕೆ. ಭುಜಬಲಶಾಸ್ತ್ರಿಗಳು, ನ್ಯಾಯಭೂಷಣಾಚಾರ್ಯ. ಆರಾ

ಪ್ರಂಪಚದಲ್ಲಿ ಪ್ರತ್ಯೇಕ ಪ್ರಾಣಿಯೂ ಸುಖ ಹಾಗೂ ಶಾಂತಿ - ಇವುಗಳನ್ನು ಬಯಸುತ್ತೆದೆ. ಇವು ತನ್ನ ಆತ್ಮದಲ್ಲಿಯೇ ಇವೆ. ಆತ್ಮದ ಸತ್ತ್ವರೂಪದಲ್ಲಿ ನಂಬಿಕೆಯನ್ನಿಟ್ಟು ಅದನ್ನು ಧ್ಯಾನಿಸುವುದರಿಂದ ಉಕ್ತ ಆ ಸುಖಶಾಂತಿಗಳು ಸ್ವಯಂಪ್ರಾಪ್ತವಾಗುತ್ತವೆ.

★★★★★

ಚೈತನ್ಯವೇ ಆತ್ಮದ ಲಕ್ಷಣ. ಇದು ಜಡಪದಾರ್ಥಗಳಿಂದ ಭಿನ್ನವಾಗಿದೆ ಯಥಾರ್ಥವಾಗಿ ಆತ್ಮದ ಸತ್ಸ್ವರೂಪವು ಶುದ್ಧವೂ ಆನಂದಮಯವೂ ನಿತ್ಯವೂ ಕ್ರೋಧ, ಮಾನ, ಮಾಯೆಯೇ ಮೊದಲಾದ ವಿಕಾರಗಳಿಂದ ರಹಿತವೂ ಆಗಿದೆ. ಆತ್ಮವು ದೇಹಸ್ರಮಾಣವಾಗಿರುವುದು. ಪ್ರತ್ಯೇಕ ಆತ್ಮದ ಆಸ್ತಿತ್ವವು ಸದಾ ಭಿನ್ನವಾಗಿದ್ದು ನಿತ್ಯವಾಗಿದೆ. ಆತ್ಮದಲ್ಲಿ ಸದಾ ಹೊಸ ಹೊಸ ಪರಿಣಾಮಗಳು ಹುಟ್ಟುತ್ತಿರುವದರಿಂದ ಆರು ಕಥಂಚಿತ್ ಅನಿತ್ಯವೂ ಆಗಿದೆ.

★★★★★

ಯದ್ಯಪಿ ಸಾಂಸಾರಿಕ ಆತ್ಮಗಳು ಅಶುದ್ಧವಾಗಿವೆ. ಆದರೂ ಆತ್ಮದ ಶುದ್ಧಸ್ವರೂಪವನ್ನು ಗೊತ್ತುಮಾಡಿಕೊಂದು ಏಕಾಂತದಲ್ಲಿ ಮಾತ್ರ ಪ್ರತಿದಿವಸ ಸ್ವಲ್ಪ ಹೊತ್ತು ಅದರ ಸ್ತವನ ಮನನ ಪೂಜನ, ಧ್ಯಾನ, ಮುಂತಾದವುಗಳನ್ನು ಅವಶ್ಯ ಮಾಡಬೇಕು.

★★★★★

ಪ್ರತ್ಯೇಕ ಆತ್ಮಗಳು ತಮಗೆ ಯಾರೂ ಯಾವ ಪ್ರಕಾರವಾದ ದುಃಖವನ್ನೂ ಕೊಡಬಾರದೆಂದು ಬಯಸುವರು ಸರಿಯಷ್ಟೆ. ಆದುದರಿಂದ ಯಾರೂ ಯಾವ

ಪ್ರಾಣಿಗಳಿಗೂ ಯಾವ ಪ್ರಕಾರವಾದ ಶಾರೀರಕ ಮಾನಸಿಕಾದಿ ದುಃಖಗಳನ್ನೂ ಕೊಡಬಾರದು. ಪ್ರಾಣಿಮಾತ್ರದಲ್ಲಿ ಪ್ರೇಮಭಾವನ್ನೂಟ್ಟು ಯಾವಾಗಲೂ ಪರಹಿತವನ್ನು ಚಿಂತಿಸಬೇಕು

★★★★★

ಸಮಸ್ತ ಮನುಷ್ಯರೂ ಸುಶಿಕ್ಷಿತರೂ ಸ್ವಾಸ್ಥ್ಯಸಂಪನ್ನರೂ ನ್ಯಾಯ ಮಾರ್ಗಿಗಳೂ ಆತ್ಮಜ್ಞಾನಿಗಳೂ ಆಗುವಂತೆ ಪ್ರಯತ್ನಿಸಬೇಕು. ಭೋಜನ ಪಾನ, ಔಷಧಿ, ಪೂಜೆ, ಭಕ್ತಿ, ಕ್ರೀಡೆಯೇ ಮೊದಲಾದವುಗಳಿಗೋಸ್ಕರ ಪಶುಹತ್ಯವನ್ನು ಮಾಡಬಾರದು. ಎತ್ತು, ಕೋಣ, ಕುದುರೆಯೇ ಮೊದಲಾದ ಪಶುಗಳಿಂದ ತಮ್ಮ ಕಾರ್ಯವನ್ನು ಮಾಡಿಸುತ್ತಿದ್ದೂ ಅವುಗಳೇಗೆ ಕಷ್ಟವನ್ನು ಕೊಡಬಾರದು. ವೃಕ್ಷಗಳಅ ಸಂಬಂಧದಲ್ಲಿಯೂ ದಯೆಯನ್ನು ತೋರಿಸಬೇಕು ಅವುಗಳನ್ನು ವ್ಯರ್ಥವಾಗಿ ಪೀಡಿಸಬಾರದು.

★★★★★

ಶುದ್ಧ ಅನ್ನ, ಶಾಕ, ಫಲ, ಹಾಲು, ತುಪ್ಪ – ಮುಂತಾದವುಗಳನ್ನು ಸೇವಿಸಬೇಕು. ಯಾವಾಗಲೂ ನೀರನ್ನು ಶೋಧಿಸಿ ಕುಡಿಯಬೇಕು. ಕೊಲೆ, ಹುಸಿ, ಕಳವು – ಮೊದಲಾದ ಪಂಚಮಹಾ ಪಾಪಗಳನ್ನು ತ್ಯಾಗಮಾಡಿ ಮಧ್ಯಪಾನ, ದ್ಯೂತ, ಬೇಟೆಯೇ ಮೊದಲಾದ ಸಪ್ತಮಹಾವ್ಯಸನಗಳನ್ನು ತೊರೆದುಬಿಡಬೇಕು.

★★★★★

ನಿಜವಾದ ವೈರಾಗ್ಯವು ಹುಟ್ಟಿದರೆ ಗೃಹತ್ಯಾಗವನ್ನು ಮಾಡಿ ಆತ್ಮಕಲ್ಯಾಣವನ್ನು ಮಾಡುತ್ತಾ ಪರೋಪಕಾರದಲ್ಲಿ ಜೀವನವನ್ನು ಕಳೇಯಬೇಕು. ಶತ್ರುವಿನಲ್ಲಿಯೂ ಕೆಟ್ಟ ಭಾವನೆಗೆ ಎಡೆಗೊಡದೆ ಪ್ರಾಣಿಮಾತ್ರದ ದುಃಖಕ್ಲೇಶವನ್ನು ದೂರಮಾಡುವುದಕ್ಕೋಸ್ಕರ ಯತ್ನಿಸಬೇಕು.

★★★★★

ಪಾಪದಲ್ಲಿ ಘೃಣೆಯನ್ನು ಮಾಡಬೇಕೇ ಹೊರತು ಪಾಪಿಯಲ್ಲಿ ಮಾಡಬಾರದು. ಏಕಾಂತ ಕದಾಗ್ರಹ, ದುರ್ಗುಣ - ಇವುಗಳನ್ನು ತ್ಯಾಗಮಾಡಿ ಉದಾರಿ, ನಿರಾಗ್ರಹಿ ಹಾಗೂ ಗುಣಿಯಾಗಿ ಪ್ರಸನ್ನ ಚಿತ್ತದಿಂದ ತತ್ತ್ವವನ್ನು ಮನನಮಾಡಬೇಕು.

★★★★★

ರಾಗ, ದ್ವೇಷ, ಮೋಹ, ಮದ, ಮಾತ್ಸರ್ಯ, ಲೋಭ - ಮುಂತಾದುವುಗಳನ್ನು ಜಯಿಸಿ ಸುಖದುಃಖಗಳಲ್ಲಿ ಸಮಭಾವವನ್ನಿಡಬೇಕು. ಆತ್ಮಾವನತಿಗೆ ಹೇತುವಾದ ಅಹಂಕಾರಮಮಕಾರಾದಿಗಳಿಗೆ ಹೃದಯದಲ್ಲಿ ಸ್ಥಾನವನ್ನು ಕೊಡದೆ ಸದಾ ತಪ, ಸಂಯಮ, ತ್ಯಾಗ, ಮಾರ್ದವ ಅರ್ಜನ ಮುಂತಾದವುಗಳಿಗೆ ಹೃದಯದಲ್ಲಿ ಸ್ಥಾನವನ್ನು ಕೊಡಬೇಕು.

★★★★★

ಮಿಥ್ಯಾಭಿನಿವೇಶವನ್ನು ತ್ಯಾಗಮಾಡಿ ಸರ್ವದಾ ಸತ್ಯಮಾರ್ಗವನ್ನು ಆವಲಂಬಿಸಬೇಕು ವಿಪತ್ತುಗಳಿಂದ ಧೈರ್ಯಗೆಟ್ಟು ಸಂಕ್ಲೇಶಭಾವಗಳಿಗೆ ಅವಕಾಶವನ್ನು ಕೊಡಬಾರದು.

★★★★★

ಪ್ರಮಾದಕ್ಕೆ ಎಡೆ ಕೊಡದೆ ಲೋಕಹಿತವನ್ನು ಚಿಂತಿಸುತ್ತಾ ಯಾವಾಗಲೂ ಲೋಕಹಿತದಲ್ಲಿ ಭತ್ತಚಿತ್ರರಾಗಬೇಕು. ಇವುಗಳಿಂದಲೇ ಪೂರ್ವೋಕ್ತ ಆ ನಿತ್ಯವೂ ಆತ್ಮವಿಕಾಸರೂಪವೂ ಸರ್ವಜನ ಲಭ್ಯವೂ ಆದ ನೈಜಸುಖವು ಪ್ರಾಪ್ತವಾಗುವುದು.

★★★★★

# ಜೀವ ಅಥವಾ ಆತ್ಮ

ಶ್ರೀ ಜಿ. ಶಿಶುಪಾಲಪಾರ್ಶ್ವನಾಥಶಾಸ್ತ್ರಿಗಳು, ವ್ಯಾಖ್ಯಾನವಿಲಕ್ಷಣ

ಲೋಕದಲ್ಲಿರುವ ದ್ರವ್ಯಗಳೆಂದರೆ ಎರಡು: ಒಂದು ಜೀವ ಅಥವಾ ಆತ್ಮ: ಇನ್ನೊಂದು ಜೀವ ಅಥವಾ ಅನಾತ್ಮ. ಜೀವ(ಆತ್ಮ)ದ್ರವ್ಯಕ್ಕೆ ಚೇತನದ್ರವ್ಯವೆಂದೂ ಅಜೀವ(ಅನಾತ್ಮ)ದ್ರವ್ಯಕ್ಕೆ ಅಚೇತನದ್ರವ್ಯವೆಂದೂ ಹೆಸರುಂಟು. ಈ ಎರಡು ದ್ರವ್ಯಗಳ ಹೊರತು ಮೂರನೆಯ ವಸ್ತುವೇ ಲೋಕದಲ್ಲಿರುವುದಿಲ್ಲ. ಇತರ ಎಲ್ಲಾ ದ್ರವ್ಯಭೇದಗಳೂ ಇವೆರಡರೊಳಗೇ ಸಮಾವೇಶವಾಗುತ್ತವೆ.

ಜೀವದ್ರವ್ಯದಲ್ಲಿ ಸಂಸಾರಿಜೀವ, ಮುಕ್ತಜೀವ-ಎಂಬುದಾಗಿ ಎರಡು ಭೇದವಿರುವುದು.

ಅಜೀವದ್ರವ್ಯದಲ್ಲಿ ಐದು ಭೇದಗಳಿವೆ: ಪುದ್ಗಲ, ಧರ್ಮ, ಅಧರ್ಮ[1] ಆಕಾಶ, ಕಾಲ ಆದರೆ ಪುದ್ಗಲ, ಆಕಾಶ, ಕಾಲ – ಈ ಮೂರು ದ್ರವ್ಯಭೇದಗಳಲ್ಲಿ ಕ್ರಮವಾಗಿ ಕರ್ಮಪುದ್ಗಲ, ಇತರಪುದ್ಗಲ, ಲೋಕಾಕಾಶ, ಅಲೋಕಾಕಾಶ, ವ್ಯವಹಾರಕಾಲ, ನಿಶ್ಚಯಕಾಲ- ಹೀಗೆ ಮರಳಿ ಎರಡೆರಡು ಒಳಭೇದಗಳಿರುತ್ತವೆ.

ಈ ಭೇದಗಳನ್ನೇ ಭೇದಿಸುತ್ತಾ ಮತ್ತೂ ಮುಂದರಿಸಿದರೆ ಒಳ ಒಳಭೇದಗಳು ವಿಚಾರಶಕ್ತಿಗೆ ನಿಲುಕಲಾರದಷ್ಟಾಗಬಹುದು. ಪ್ರಕೃತಕ್ಕೆ ನಾನು ಬರೆಯಲಿರುವ ಲೇಖಾಂಕಗಳಲ್ಲಿ ಮೇಲೆ ಆರಿಸಲ್ಪಟ್ಟ ಭೇದಗಳೇ ಪ್ರಾಮುಖ್ಯವನ್ನು ಹೊಂದುವುವು. ಅವುಗಳನ್ನು ಅನುಸರಿಸಿಯೇ ನನ್ನೀ ಲೇಖನವು ಮುಂದುವರಿಯುವುದರಿಂದ ಆ ಭೇದಗಳೆಲ್ಲ – ವಾಚಕರು ಲಕ್ಷ್ಯದಲ್ಲಿರುವುದು ಅತ್ಯಗತ್ಯ.

'ನಾನು ತಿಳಿಯುತ್ತೇನೆ'. 'ನಾನು ನೋಡುತ್ತೇನೆ'. 'ನಾನು ಕೇಳುತ್ತೇನೆ'- ಎಂದು ಮೊದಲಾಗಿ ನಾವು ಹಲವು ಬಾರಿ ಹೇಳುತ್ತಿರುತ್ತೇವೆ. ಮೇಲಿನ ವಾಕ್ಯಗಳಲ್ಲಿ ಮತ್ತೆ ಮತ್ತೆ ಬರುವ ಆ ಎರಡಕ್ಷರದ 'ನಾನು' ಎಂಬುದೇನೆಂದು ಸ್ವಲ್ಪ ಹೊತ್ತು ಸೂಕ್ಷ್ಮದೃಷ್ಟಿಯಿಂದ ವಿಚಾರಮಾಡಿ ನೋಡಿದರೆ ನಮ್ಮೀ ಶರೀರದೊಳಗೆ ಒಂದು

---

1 ಗುಣರೂಪಗಳಲ್ಲ, ದ್ರವ್ಯರೂಪದವುಗಳು.

ಅತಿಮಹತ್ತ್ವಶಾಲಿಯಾದ ಪದಾರ್ಥವು ಅಡಗಿರುವುದೆಂಬುದನ್ನು ತಿಳಿದು ಆಶ್ಚರ್ಯವಾಗುವುದು. ಆ ಗುಪ್ತಪದಾರ್ಥವೇ ಜೀವ ಅಥವಾ ಆತ್ಮನೆನಿಸುವುದು.

ಜೀವಪದಾರ್ಥವೇ ಇಲ್ಲವೆನ್ನುವ ಭೌತಿಕವಾದಿಗಳು – 'ನಾನು ತಿಳಿಯುತ್ತೇನೆ', 'ನೋಡುತ್ತೇನೆ' – ಮುಂತಾದ ವಾಕ್ಯಗಳಲ್ಲಿ ಕರ್ತೃಪದವಾದ 'ನಾನು' ಎಂಬುದು ಪಂಚಭೂತಮಯವಾದ ಈ ಶರೀರವನ್ನು ಬೋಧಿಸುವುದಲ್ಲದೆ ಬೇರೆ ಇಲ್ಲವೆಂದು ತರ್ಕಿಸಬಹುದು. ಅಂಥವರನ್ನು ಕುರಿತು ಒಂದು ಪ್ರಶ್ನೆ– ನಾನು ಎಂಬುದು ಬರಿಯ ಭೌತಿಕಶರೀರವೇ ಆದ ಪಕ್ಷದಲ್ಲಿ ಸತ್ತ ಹೆಣದ ಶರೀರವೂ ಕೂಡ ನೋಡಬೇಕಿತ್ತು, ಕಣ್ಣು ಅಲ್ಲೂ ಇದೆ; ಕೇಳಬೇಕಿತ್ತು, ಕಿವಿಯು ಅಲ್ಲೂ ಇದೆ; ಪರಿಮಳವನ್ನು ತಿಳಿಯಬೇಕಿತ್ತು, ಮೂಗು ಅಲ್ಲೂ ಇದೆ. ಆದರೆ ಹೆಣವು ನೋಡುವದೂ ಇಲ್ಲ, ಕೇಳುವುದೂ ಇಲ್ಲ, ಮೂಸುವುದು ಮೊದಲೇ ಇಲ್ಲ. ಹೀಗಾಗಲು ಕಾರಣವೇನು?

ಈ ಪ್ರಶ್ನೆಗೆ ಉತ್ತರವಾಗಿ – 'ಹೆಣದ ಶರೀರಮೊಳಗಿಂದ ಮೊದಲಿದ್ದ ನೋಡುವುದೇ ಮೊದಲಾದ ಶಕ್ತಿಯು ಹೊರಟುಹೋಗಿದೆ' ಎಂದು ಅವರು ಹೇಳಲೇಬೇಕಾಗುವದು. ಹಾಗಾದರೆ ಆ ಶಕ್ತಿಯೇ ಜೀವ ಅಥವಾ ಆತ್ಮ. ಮೋಟಾರುಯಂತ್ರಕ್ಕೆ ಅದರ ಡ್ರೈವರಿನಂತೆ ಜೀವನು ಈ ನಮ್ಮ ಶರೀರಯಂತ್ರದ ಡ್ರೈವರನಾಗಿರುತ್ತಾನೆ. ಅವನಿಲ್ಲದೆ ಹೋದರೆ ದೇಹಯಂತ್ರವು ಒಂದು ಕ್ಷಣ ಕಾಲವೂ ನಡೆಯಲಾರದು. ಯಂತ್ರಸಂಚಾಲಕನಿಲ್ಲದೆ ಯಂತ್ರಚಲನೆಯು ಹೇಗಾಗಬೇಕು?

ಚೈತನ್ಯವು (ಜ್ಞಾನ, ದರ್ಶನ) ಅಂದರೆ ತಿಳಿವಳಿಕೆಯು ಜೀವನ ಮುಖ್ಯಗುಣ, ಲಕ್ಷಣ, ಅಥವಾ ಸ್ವರೂಪವಾಗಿದೆ. ತಿಳಿವಳಿಕೆಯಿಲ್ಲದೆ ಕಣ್ಣು ತಾನಾಗಿ ನೋಡಲಾರದು, ಕಿವಿ ತಾನಾಗಿ ಕೇಳಲಾರದು, ಮೂಗು ತಾನಾಗಿ ಪರಿಮಳವನ್ನು ತಿಳಿಯಲಾರದು, ನಾಲಗೆ ತಾನಾಗಿ ರುಚಿನೋಡಲಾರದು, ಮೈ ತಾನಾಗಿ ಮುಟ್ಟಿದುದನ್ನು ಗ್ರಹಿಸಲಾರದು.

ಕಣ್ಣು ಮೊದಲಾದ ಇಂದ್ರಿಯಗಳು ಜೀವನ ಗುಣವಾದ ತಿಳಿವಳಿಕೆಗೆ ಕೇವಲ ನಿಮಿತ್ತ (ಬಾಹ್ಯ)ಕಾರಣಗಳು ನೋಡುವುದು. ಕೇಳುವುದು ಮೂಸುವುದು. ರುಚಿಸುವುದು. ಮುಟ್ಟುವುದು – ಇವೆಲ್ಲವೂ ಮೂರ್ತಿ (ರೂಪರಸಗಂಧ

ಸ್ಪರ್ಶಗುಣಯುಕ್ತವಾದ) ವಸ್ತುವಿನ ತಿಳಿವಳಿಕೆಯ ಭೇದಗಳು ಮಾತ್ರ. ಕಣ್ಣು ರೂಪದ ತಿಳಿವಳಿಕೆಯನ್ನೂ, ಕಿವಿಯು ಶಬ್ದದ ತಿಳಿವಳಿಕೆಯನ್ನೂ, ನಾಲಗೆಯು ರಸದ ತಿಳಿವಳಿಕೆಯನ್ನೂ, ಮೈಯು, ಸ್ಪರ್ಶದ ತಿಳಿವಳಿಕೆಯನ್ನೂ ಮಾಡಿಸುತ್ತವೆ.

ಜೀವನ ತಿಳಿವಳಿಕೆಯೆಂಬ (ಜ್ಞಾನವು) ಗುಣದ ಪರಾಕಾಷ್ಠತೆ (ಕೊನೆ)ಯೇ **ಕೇವಲಜ್ಞಾನವೆ**ನಿಸುವುದು. ಅದಕ್ಕೆ ತಿಳಿಯದ ವಿಷಯವೇ ಇರುವುದಿಲ್ಲ. (ಅಧೋ, ಮಧ್ಯ, ಊರ್ಧ್ವ - ಎಂಬ) ಮೂರು ಲೋಕ, ಮತ್ತು (ಭೂತ, ವರ್ತಮಾನ, ಭವಿಷ್ಯತ್ - ಎಂಬ) ಮೂರು ಕಾಲ - ಇವುಗಳ ಪದಾರ್ಥಗಳನ್ನು ಒಂದೇ ಸಮಯದಲ್ಲಿ ತಿಳಿಯುವ ಶಕ್ತಿಯು ಕೇವಲಜ್ಞಾನಕ್ಕಿರುವುದು. ಅದು ಮುಕ್ತ ಜೀವನಿಗಿರುತ್ತದೆ. ಕರ್ಮಸಂಯುಕ್ತನಾದ ಸಂಸಾರಿಜೀವನಿಗೆ ಕೇವಲಜ್ಞಾನವಿರುವುದು ಸಂಭವವಲ್ಲ. **ಕರ್ಮವು** ಜೀವನ ಜ್ಞಾನಾದಿಗುಣಗಳನ್ನು ಮುಚ್ಚಿಬಿಡುತ್ತದೆ. ಕರ್ಮವು ಹೆಚ್ಚಿದ್ದರೆ ಜ್ಞಾನಾದಿಗಳು ಕಡಿಮೆಯಾಗಿಯೂ ಕಡಿಮೆ ಇದ್ದರೆ ಹೆಚ್ಚಾಗಿಯೂ ಸಂಸಾರದಲ್ಲಿರುವತನಕ ಕರ್ಮಾವರಣ (ಅದೃಷ್ಟ)ಕ್ಕನುಸಾರವಾಗಿ ಉತ್ತಮಜ್ಞಾನವು, ಅಲ್ಪಜ್ಞಾನ, ಸುಖದುಃಖಾದಿಗಳು ಲಭಿಸುತ್ತವೆ. ಕರ್ಮಗಳನ್ನು ಮಾಡುವುದಕ್ಕೂ ಅವುಗಳ ಫಲಗಳನ್ನು ಭೋಗಿಸುವುದಕ್ಕೂ ಜೀವನೇ ಕಾರಣನಲ್ಲದೆ ಇತರರು ಎಂದರೆ ಈಶ್ವರಾದಿಗಳು ಅಲ್ಲ; ಸಂಚಯಿಸಿದ ಕರ್ಮಗಳನ್ನು ನಾಶಮಾಡುವದಕ್ಕೂ ಜೀವನೇ ಕಾರಣನಾಗುತ್ತಾನೆ. ಕರ್ಮಗಳನ್ನೂ ನಾಶಮಾಡಿ ಅವುಗಳಿಂದ ಬಿಡುಗಡೆ (ಮುಕ್ತಿ)ಹೊಂದಿದರೆ ಸಂಸಾರಿ ಜೀವನು ಮುಕ್ತಜೀವನಾಗುವನು.

ಮುಕ್ತಜೀವನೇ ಜೈನರ ಆರಾಧ್ಯ(ಪೂಜ್ಯ)ವಸ್ತು ಅಥವಾ ದೇವರು. ದೇವರಿಗೆ ಅರಹಂತ, ತೀರ್ಥಂಕರ, ಕೇವಲಿ, ಪರಮಾತ್ಮ, ಪರಮೇಶ್ವರ - ಇತ್ಯಾದಿ ನಾಮಾಂತರಗಳಿಂದ ಕರೆಯುವುದು ಜೈನರಲ್ಲಿ ರೂಢಿಯಿದೆ. ಅದು ಕೇವಲ ರೂಢಿಯೇ ಅಲ್ಲ, ಅನ್ವರ್ಥವೂ ಅಹುದು. ಮುಕ್ತಜೀವನಲ್ಲಿ ಕರ್ಮಸಂಪರ್ಕವಿಲ್ಲದಿರುವುದರಿಂದ ಜ್ಞಾನದಿಗುಣಗಳು ಅಂತಿಮಸೀಮೆಯನ್ನು ತಲುಪುವುದು ಸ್ವಾಭಾವಿಕವೇ ಆಗಿದೆ. ಜ್ಞಾನಾದಿಗುಣಗಳು ಹೆಚ್ಚುತ್ತ ಹೋದಂತೆ ಲೋಕದಲ್ಲಿಯೂ ಮನ್ನಣೆ, ಪೂಜ್ಯತೆ - ಮೊದಲಾದವು ಹೆಚ್ಚುತ್ತ ಹೋಗುವುದು ನಮಗೆ ಕಾಣುತ್ತದೆ. ಜ್ಞಾನಾದಿಗುಣಗಳ ಪರಾಕಾಷ್ಠತೆಯನ್ನು ಹೊಂದಿರುವ ಪರಮಾತ್ಮನು ಎಲ್ಲರಿಗೂ ಪೂಜ್ಯನಾಗಿರುತ್ತಾನೆ.

# ಪುದ್ಗಲದ್ರವ್ಯ

ಜೈನಸಿದ್ಧಾಂತರೀತಿಯಲ್ಲಿ ಜೀವದ್ರವ್ಯದ ಸಾಮಾನ್ಯನಿರೂಪಣೆಯನ್ನು ಈ ಹಿಂದೆ ಮಾಡಿದೆ. ಎರಡನೆಯದಾದ ''ಅಜೀವದ್ರವ್ಯ''ವು ಮೊದಲು ಸೂಚಿಸಿದಂತೆ ಪುದ್ಗಲ, ಧರ್ಮ, ಅಧರ್ಮ, ಆಕಾಶ, ಕಾಲ – ಎಂಬುದಾಗಿ ಐದು ತೆರನಾಗಿದೆ. ಆ ಪೈಕಿ ಈ ಲೇಖದಲ್ಲಿ ಪುದ್ಗಲದ್ರವ್ಯವನ್ನು ಸಂಕ್ಷೇಪವಾಗಿ ವಿವರಿಸುವೆನು.

ಪಂಚೇಂದ್ರಿಯಗಳಿಗೆ ಗೋಚರಿಸುವ ವಸ್ತುವೇ **ಪುದ್ಗಲ**ವೆನಿಸುವುದು. ರೂಪ, ರಸ, ಗಂಧ, ಸ್ಪರ್ಶಗಳಿಂದ ಕೂಡಿರುವಿಕೆಯೇ ಪುದ್ಗಲದ ಪ್ರಮುಖ ಲಕ್ಷಣವು (ಗುರುತು). ಇದೇ ಅಭಿಪ್ರಾಯವನ್ನು ಸುಪ್ರಸಿದ್ಧಜೈನಾಚಾರ್ಯರಾದ **ಶ್ರೀಮದುಮಾಸ್ವಾಮಿಗಳವರು** ತಮ್ಮ ''**ತತ್ತ್ವಾರ್ಥಸೂತ್ರ**'' (ಮೋಕ್ಷಶಾಸ್ತ್ರ)ವೆಂಬ ಗ್ರಂಥರತ್ನದಲ್ಲಿ ''**ಸ್ಪರ್ಶರಸಗಂಧವರ್ಣವನ್ತಃ ಪುದ್ಗಲಾಃ**'' ಎಂದು ಸೂತ್ರಿಸಿರುತ್ತಾರೆ. ಸ್ಪರ್ಶಾದಿ ನಾಲ್ಕುಗುಣಗಳುಳ್ಳದೇ ಪುದ್ಗಲವೆಂದು ಸೂತ್ರದರ್ಥವು. ಯಾವ ವಸ್ತುವು ಕಣ್ಣಿಗೆ ಕಾಣಿಸುವುದೋ, ಕಿವಿಗೆ ಕೇಳಿಸುವುದೋ, ಬಾಯಿಗೆ ರುಚಿಸುವುದೋ, ಮೈಗೆ ಸೋಂಕುವುದೋ, ಮೂಗಿಗೆ ವಾಸನೆಬರುವುದೋ, ಅದೆಲ್ಲವೂ ಸಾಮಾನ್ಯವಾಗಿ ಪುದ್ಗಲದ್ರವ್ಯವೆನಿಸುವುದು.

ಆದರೆ ಇಂದ್ರಿಯಗಳಿಗೆ ಗೋಚರವಾಗುವುದೇ ಪುದ್ಗಲದ ಲಕ್ಷಣವೆಂದು ನಿಯತವಾಗಿ ಹೇಳಬರುವುದಿಲ್ಲ. ಏಕೆಂದರೆ ಪುದ್ಗಲದಲ್ಲಿಯೂ ಇಂದ್ರಿಯಗತ, ಇಂದ್ರಿಯಾತೀತ – ಎಂದು ಪ್ರಧಾನವಾಗಿ ಎರಡು ಭೇದಗಳನ್ನು ಮಾಡಬಹುದು; ಇಂದ್ರಿಯಗತಕ್ಕೆ **ಸ್ಕಂಧ**ವೆಂದೂ ಇಂದ್ರಿಯಾತೀತಕ್ಕೆ **ಅಣು** ಅಥವಾ **ಪರಮಾಣು**ವೆಂದೂ ನಾಮಾಂತರವಿರುವುದು. ಸ್ಕಂಧಪುದ್ಗಲವು ಇಂದ್ರಿಯ ಗೋಚರವಾಗಿಯೂ, ಅಣು (ಅಥವಾ ಪರಮಾಣು) ಪುದ್ಗಲವು ಇಂದ್ರಿಯಕ್ಕೆ ಅಗೋಚರವಾಗಿಯೂ ಇರುವುದರಿಂದ ಪುದ್ಗಲವೆಲ್ಲವೂ ಇಂದ್ರಿಯಗೋಚರವೆಂದೂ ಇಂದ್ರಿಯಗೋಚರಗಳೇ ಪುದ್ಗಲವೆಂದೂ ಹೇಳಬರುವುದಿಲ್ಲ.

ಪುದ್ಗಲಪರಮಾಣುಗಳು ಲೋಕದಲ್ಲಿ ಅನಂತಾನಂತವಿರುತ್ತವೆ. ಅವುಗಳು ನಮ್ಮ ಲೈಂಗಿಕ (ಐಂದ್ರಿಯಕ) ಜ್ಞಾನಕ್ಕೆ ಗೋಚರವಾಗದಿದ್ದರೂ ಪುದ್ಗಲವು ಇಂದ್ರಿಯಪ್ರತ್ಯಕ್ಷಕ್ಕೆ ವಿಷಯವಾಗಿರುವುದರಿಂದ ಅದನ್ನು ಹೆಗ್ಗುರುತಾಗಿ ಇಟ್ಟುಕೊಂಡು ಅನುಮಾನದ ಮೂಲಕ ಪರಮಾಣುವು ಸಿದ್ಧವಾಗುವುದು. ಲೋಕದಲ್ಲಿಯೂ ಶಾಸ್ತ್ರದಲ್ಲಿಯೂ ಕಾರ್ಯದಿಂದ ಕಾರಣವನ್ನು ಊಹಿಸುವುದು ಕಂಡುಬರುತ್ತಿದೆ. ಉದಾಹರಣೆಗಾಗಿ ಒಂದು ಚಿತ್ರಪಟವನ್ನು ತೆಗೆದುಕೊಳ್ಳಿರಿ. ಚಿತ್ರವು ಚಿತ್ರಗಾರನ ಅದೊಂದು ಕಾರ್ಯವಾಗಿರುವುದರಿಂದ ಚಿತ್ರ (ಕಾರ್ಯ) ವನ್ನು ನೋಡಿ ಅದನ್ನು ಚಿತ್ರಿಸಿದ ಅದೊಬ್ಬ ಚಿತ್ರಗಾರ(ಕಾರಣ)ನಿರಲೇಬೇಕೆಂದೂ ಊಹಿಸಬೇಕಾಗುತ್ತದೆ, ಪುದ್ಗಲಪರಮಾಣುವನ್ನೂಹಿಸುವದೂ ಹೀಗೆಯೇ.

ಎರಡು ಅಥವಾ ಹೆಚ್ಚು ಪರಮಾಣುಗಳ ಸಂಘಟನಾರೂಪ (ಸೇರುವಿಕೆ) ವಾದ ಪುದ್ಗಲಸ್ಕಂದ (ಕಾರ್ಯ)ವನ್ನು ನೋಡಿ ಅದಕ್ಕೆ ಕಾರಣವಾದ ಸೂಕ್ಷ್ಮ ಪರಮಾಣುಗಳ ಜ್ಞಾನವು ನಮಗೆ ಪ್ರತ್ಯಕ್ಷವಲ್ಲದಿದ್ದರೂ ಅನುಮಾನ (ಪರೋಕ್ಷ)ದಿಂದಲಾದರೂ ಉಂಟಾಗುವುದು ಸ್ವಾಭಾವಿಕವೇ ಆಗಿದೆ. ಹಾಗೆಂದ ಮಾತ್ರಕ್ಕೆ ಪರಮಾಣುಗಳು ಪರೋಕ್ಷವೆಂದೇ ಹೇಳಲಾಗುದು. ಸರ್ವಜ್ಞನಾದ ಪರಮಾತ್ಮನ ನಿರಂಕುಶವಾದ ಅನಂತಜ್ಞಾನರೂಪ (ಪಾರಮಾರ್ಥಿಕಪ್ರತ್ಯಕ್ಷ) ವಾದ ಅಪೂರ್ವಪ್ರಕಾಶದಲ್ಲಿ ಯಾವ ಪರಮಾಣುವೂ ತಲೆತಪ್ಪಿಸಿಕೊಳ್ಳಲಾರದು. ಭಗವಂತನ ಕೇವಲ ಜ್ಞಾನಕ್ಕೆ ಅಪ್ರತ್ಯಕ್ಷವಾದುದು ಯಾವುದೂ ಇರುವುದಿಲ್ಲ; ಲೋಕದ ಸರ್ವಪದಾರ್ಥಗಳೂ ಪರ್ಯಾಯಗಳೊಂದಿಗೆ ಪರಮಾತ್ಮನ ದಿವ್ಯಜ್ಞಾನದೃಷ್ಟಿಗೆ ಗೋಚರವಾಗುತ್ತವೆ. ನಮ್ಮ ಪ್ರತ್ಯಕ್ಷವು ಲೈಂಗಿಕ ಹಾಗೂ ವ್ಯಾವಹಾರಿಕವೆಂಬುದನ್ನು ಈ ಪೂರ್ವದಲ್ಲೇ ತಿಳಿಸಿರುತ್ತೇವೆ.

ನಾಸ್ತಿಕರೆನಿಸುವ ಆಧುನಿಕವಿಜ್ಞಾನಶಾಸ್ತ್ರಜ್ಞರು ಕೂಡ ಅದೊಂದು ರೂಪದಿಂದ ಪರಮಾಣುವಿನ ಅಸ್ತಿತ್ವವನ್ನು ಒಪ್ಪಿಕೊಂಡುತಾಗುವುದೆಂಬುದಕ್ಕೆ ಎಲೆಕ್ಟ್ರಿಸಿಟಿಯ ದೃಷ್ಟಾಂತವೇ ಸಾಕು. ಮೊಟ್ಟಮೊದಲು ಎಲೆಕ್ಟ್ರಿಸಿಟಿಯ ಆವಿಷ್ಕಾರವನ್ನು ಕಂಡುಕೊಂಡ ಆದೊಬ್ಬ ಭೌತಿಕವಿದ್ವಾಂಸನು ಹೇಳುವುದೇನೆಂದರೆ:

''ನನಗೆ ಎಲೆಕ್ಟ್ರಿಸಿಟಿಯನ್ನು ಕಂಡುಹಿಡಿಯುವ ಮೊದಲು ಪರಮಾಣುವಿನ ಆಸ್ತಿತ್ವವನ್ನು ಊಹಿಸಬೇಕಾಯಿತು. ಒಂದು ಗುಂಡುಸೂಚಿಯ ದುಂಡಗಾದ ಮೇಲ್ಭಾಗದಲ್ಲಿ ಲಕ್ಷಾಂತರ ಪರಮಾಣುಗಳು ಕೂತುಕೊಳ್ಳಬಹುದಾದಷ್ಟು ಸ್ಥಳವಿದೆ.'' ಹೀಗಿರುವಾಗ ಪರಮಾಣುವಿನ ಎಷ್ಟಿರಬಹುದೆಂದು ಪಾಠಕರೇ ಊಹಿಸಲಿ!

ತಿರುಗಿ ಅದರೊಳಗೆ ಎರಡೆರಡರಂತೆ ಅಣುಗಳಿವೆಯೆಂದೂ ಅದಕ್ಕೂ ಸೂಕ್ಷ್ಮವಾದ ಅಣುಗಳು ಲೋಕದಲ್ಲಿರಬೇಕೆಂದೂ ಅವನು ಹೇಳಿರುವುದನ್ನು ನೋಡಿದರೆ ಯಾರಿಗೆ ಆಶ್ಚರ್ಯವಾಗುವುದಿಲ್ಲ[1] ಅದೇ ಪುದ್ಗಲಪರಮಾಣಿವಿನ ಶಕ್ತಿಯ ಮೇಲಿಂದ ವರ್ತಮಾನದಲ್ಲಿ ಪ್ರಚಲಿತವಾಗಿರುವ - ನಾವೆಲ್ಲರೂ ಅದ್ಭುತಗಳೆಂದು ಪರಿಗಣಿಸುತ್ತಿರುವ - ರೇಡಿಯೋ, ವೈರ್‌ಲೆಸ್, ಗ್ರಾಮೋಫೋನು, ಚಲಚ್ಚಿತ್ರ, ಟ್ರಾಂಗಾಡಿ-ಮುಂತಾದ ಅನೇಕ ವಿಚಿತ್ರಕಾರ್ಯಗಳು ಪ್ರತ್ಯಕ್ಷದಲ್ಲಿಯೇ ಕಾಣುತ್ತಿವೆ.

ಈ ಕಾರ್ಯಗಳ ಮೇಲಿಂದ ಇವುಗಳ ಕಾರಣಗಳಾದ ಪುದ್ಗಲ-ಪರಮಾಣುವಿನ ಅಸ್ತಿತ್ವವನ್ನು ನಾಸ್ತಿಕನೂ ಸಹ ಅಲ್ಲಗಳೆಯಲಾರದ ವನಾಗುತ್ತಾನೆ. ಇಂತಹ ಪುದ್ಗಲಪರಮಾಣುಗಳ ಸಂಬಂಧದಿಂದಲೇ ಈ ಎಲ್ಲಾ ದೃಶ್ಯಲೋಕವೂ ಇರುವುದಾಗಿದೆ. ಆತ್ಮನು ಕರ್ಮವಶದಿಂದ ಈ ಪುದ್ಗಲದ್ರವ್ಯದ ಸಂಪರ್ಕವನ್ನು ಕಳೆದು ಸಶರೀರಿಯೆನಿಸುತ್ತಾನೆ.

ಆತ್ಮನಿರ್ವಾಣಕ್ಕೆ ಪುದ್ಗಲಮಯವಾದ ಶರೀರ ಮತ್ತು ಆತ್ಮ - ಇವೆರಡರ ಭೇದವಿಜ್ಞಾನವೇ ಮುಖ್ಯಕಾರಣವು. ಆತ್ಮನು ಪುದ್ಗಲಪ್ರಭಾವವನ್ನರಿತು ಅದರ ಪ್ರಯೋಜನಮಾತ್ರವನ್ನು ಹೊಂದಿ ಅದರ ಮೂಲಕ ಮೋಕ್ಷವನ್ನು ಪಡೆಯಬಹುದು. ಮುಳ್ಳನ್ನು ಮುಳ್ಳಿಂದ ತೆಗೆಯುವಂತೆ ಆತ್ಮನು ಧಾರ್ಮಿಕ ತಪಸ್ಸೇ ಮೊದಲಾದ ಶರೀರಕಾರ್ಯದಿಂದಲೇ ಶರೀರವನ್ನು ಬೇರ್ಪಡಿಸಿ ಮರಳಿ ಈ ಶರೀರವನ್ನೂ ಶರೀರದ ಕಾರಣವಾದ ಕರ್ಮವನ್ನೂ ಕಿತ್ತೊಗೆದು ಮೋಕ್ಷಕ್ಕೆ

1. ಅಧ್ಯಾತ್ಮಲೇಖನಗಳ ಸವಿಯು ಹತ್ತಬೇಕಾದರೆ ಇಂದ್ರಿಯಗಳಿಗಲ್ಲ, ಬುದ್ಧಿಗೂ ಅಲ್ಲ, ಸಾಧನಗಳಿಂದ ಅರಳಿದ ಹೃದಯಕ್ಕೆ.

ತೆರಳುತ್ತಾನೆ. ಮುಳ್ಳನ್ನು ತೆಗೆದ ಮೇಲೆ ಮತ್ತೆ ಮುಳ್ಳಿಂದೇನು ಲಾಭ[1] ಹಾಗೆಯೇ ಶರೀರವನ್ನು ಧಾರ್ಮಿಕರೀತಿಯಿಂದ ನಾಶಪಡಿಸಿದ ಮೇಲೆ ಮತ್ತಾಶರೀರದಿಂದಲೂ ಪ್ರಯೋಜನವಿರುವುದಿಲ್ಲ.

ಆದರೆ ಮುಳ್ಳಿಂದ ಮುಳ್ಳನ್ನು ತೆಗೆವಾಗ ಹೊಸ ಮುಳ್ಳು, ತಾಗದ ಹಾಗೆ ಜಾಗ್ರತೆಯಿಂದಿರುವುದು ಜ್ಞಾನಿಯಾದವನ ಪರಮಕರ್ತವ್ಯವು. ಯಾವನು ಅಂಥ ಜಾಗ್ರತೆಯವನೋ ಮತ್ತು ಅಂತಹ ಜಾಗ್ರತೆಯಿಂದ ತನ್ನ ಜ್ಞಾನದ ನೆಲೆಯಾದ ಮೋಕ್ಷವನ್ನು ತಿಳಿದು ಪಡೆದು ಅನಂತಸುಖಕ್ಕೆ ಪಾತ್ರನಾದನೋ ಲೋಕದಲ್ಲಿ ಅವನೇ ಧನ್ಯನು. ಅಂಥವನಿಗೆ ಅನಂತಧನ್ಯವಾದಗಳು.

★★★★★

# ಜೈನಶಾಸ್ತ್ರದ ನಯ

**– ಶ್ರೀ|| ಕೆ. ಭುಜಬಲಿಶಾಸ್ತ್ರಿಗಳು, ನ್ಯಾಯಭೂಷಣಾಚಾರ್ಯ, ಆರಾ**

## 1. ಸಪ್ತಭಂಗೀನಯ

ಇದು ಜೈನಶಾಸ್ತ್ರದ ಒಂದು ಪ್ರಸಿದ್ಧ ಹಾಗೂ ಗೌರವಶಾಲಿ ನಯವಾಗಿದೆ. ಜೈನಶಾಸ್ತ್ರಜ್ಞರು ಇದರ ಮೂಲಕವಾಗಿಯೇ ಸಮಸ್ತ ಚೇತನಾಚೇತನವಸ್ತುಗಳ ನಿರ್ಣಯವನ್ನೂ ಮಾಡುವರು. ಜೈನಧರ್ಮದ ಜೀವ, ಅಜೀವ, ಅಸ್ರವ, ಬಂಧ, ಸಂವರ, ನಿರ್ಜರ, ಮೋಕ್ಷ, ಪಾಪ ಮತ್ತು ಪುಣ್ಯ – ಈ ಒಂಬತ್ತು ತತ್ತ್ವಗಳ ಜ್ಞಾನವು ಪ್ರಮಾಣ ಮತ್ತು ನಯಗಳ ಮೂಲಕವಾಗಿಯೇ ಉಂಟಾಗುವುದು. ಯಾವುದರಿಂದ ಸಂಪೂರ್ಣವಾಗಿ ತತ್ತ್ವಗಳ ಪರಿಜ್ಞಾನವು ಆಗುವುದೋ ಅದು **ಪ್ರಮಾಣಾತ್ಮಕ ಅಧಿಗಮವು**: ಯಾವುದರಿಂದ ತತ್ತ್ವಗಳ ಕೇವಲ ಏಕ ದೇಶಜ್ಞಾನವು ಆಗುವುದೋ ಅದು **ನಯಾತ್ಮಕ ಅಧಿಗಮವು**. ಈ ಎರಡು

1. ತನುಮನೋಧನಗಳು ಪುರುಷಾರ್ಥವಲ್ಲ, ಪುರುಷಾರ್ಥಕ್ಕೆ ಸಾಧನಗಳು, ಇವುಗಳನ್ನು ಚೆನ್ನಾಗಿ ಕಾಪಾಡಿಕೊಳ್ಳಬೇಕು, ಸರಿಯಾಗಿ ಉಪಯೋಗಿಸಬೇಕು.

ಪ್ರಕಾರವಾದ ಭೇದಗಳೂ ಸಪ್ತಭಂಗೀನಯದಲ್ಲಿ ವಿಧಿ ಮತ್ತು ಪ್ರತಿಷೇಧ - ಇವುಗಳ ಪ್ರಧಾನತೆಯಿಂದ ಉಂಟಾಗುವುವು. ಅದುದರಿಂದಲೇ ಇದು ಪ್ರಮಾಣ ಸಪ್ತಭಂಗೀ - ಎಂದೂ ನಯಸಪ್ತಭಂಗೀ - ಎಂದೂ ಎರಡು ಪ್ರಕಾರವಾಗಿ ಕರೆಯಲ್ಪಡುವದು. ಯಾವುದರಲ್ಲಿ ಏಳು ಭಂಗಗಳು (ವಾಕ್ಯಗಳು) ಇರುವವೋ ಅದು **ಸಪ್ತಭಂಗಿ**ಯೆಂದು ಕರೆಯಲ್ಪಡುವುದು. ಒಂದು ವಸ್ತುವಿನಲ್ಲಿ ಹಲವು ಧರ್ಮಗಳಿರುವುವು. ಇವು ಒಂದು ಮತ್ತೊಂದರೊಡನೆ ಪರಸ್ಪರವಿರುದ್ಧವಾಗಿಲ್ಲ. ಈ ಅವಿರುದ್ಧ ನಾನಾಧರ್ಮಗಳ ನಿಶ್ಚಯಜ್ಞಾನವು ಸಪ್ತಭಂಗೀನಯದ ಏಳು ವಾಕ್ಯಗಳ ಮೂಲಕವಾಗಿಯೇ ಆಗುವುದು. ಅದುದರಿಂದ ಯಾವುದು ಏಳು ವಾಕ್ಯಗಳ ಮೂಲಕವಾಗಿಯೇ ಯಾವುದಾದರೊಂದು ವಸ್ತುವಿನ ಪರಸ್ಪರ ವಿರುದ್ಧವಾದ ಅನೇಕ ಧರ್ಮಗಳ ನಿಶ್ಚಯವನ್ನುಂಟುಮಾಡುವುದೋ ಅದು ಸಪ್ತಭಂಗೀನಯವೆಂದು ಕರೆಯಲ್ಪಡುವುದು.

ಈ ನಯದಲ್ಲಿ ಏಳು ವಿಧವಾದ ವಾಕ್ಯಗಳೇ ಏಕೆ ಆಗುವುವು? ಇದಕ್ಕಿಂತ ಹೆಚ್ಚಿನ ಅಥವಾ ಕಡಿಮೆಯ ವಾಕ್ಯಗಳು ಏಕೆ ಆಗಲಾರವು?- ಎಂದು ಕೆಲವರು ಕೇಳಬಹುದು. ಯಾವುದಾದರೊಂದು ವಸ್ತುವಿನ ನಿಶ್ಚಯವನ್ನು ಮಾಡುವಾಗ ಜಿಜ್ಞಾಸುವಿಗೆ ಏಳು ಪ್ರಕಾರವಾದ ಸಂಶಯಗಳಿಂಗಿಂತ ಹೆಚ್ಚು ಸಂಶಯಗಳು ಆಗುವುದಿಲ್ಲವೆಂದೇ ಇದಕ್ಕೆ ಉತ್ತರ. ಅದುದರಿಂದ ಈ ನಯವು ಆ ಎಲ್ಲಾ ಸಂಶಯಗಳ ನಿವಾರಕವಾಗಿದೆ. ಜೈನಶಾಸ್ತ್ರದ ಪ್ರಸಿದ್ಧವಾದ **ಅನೇಕಾಂತವಾದ**ಕ್ಕೆ ಈ ನಯವೇ ಆಧಾರ. ಇದರ ಪರಿಜ್ಞಾನವನ್ನು ಮಾಡಿಕೊಳ್ಳದ ಹೊರತು ಅನೇಕಾಂತದ ಮಹತ್ತ್ವಪೂರ್ಣಜ್ಞಾನವು ಉಂಟಾಗಲಾರದು.

ಈ ನಯದ ಏಳು ಭಂಗಗಳು ಈ ಪ್ರಕಾರವಾಗಿವೆ. 1. 'ಸ್ಯಾದಸ್ತಿ ಘಟಃ'- ಪ್ರಾಯಃಘಟವು ಇದೆ. 2. 'ಸ್ಯಾನ್ನಾಸ್ತಿ ಘಟಃ' - ಪ್ರಾಯಃಘಟವು ಇಲ್ಲ. 3. 'ಸ್ಯಾದಸ್ತಿ ನಾಸ್ತಿ ಚ ಘಟಃ' - ಪ್ರಾಯಃ ಘಟವು ಇದೆ ಮತ್ತು ಇಲ್ಲ. 4. 'ಸ್ಯಾದವಕ್ತವ್ಯೋ ಘಟಃ'- ಪ್ರಾಯಃ ಘಟವು ಅವಕ್ತವ್ಯವಾಗಿದೆ (ಅಂದರೆ ವಚನಾತೀತವಾಗಿದೆ). 5. 'ಸ್ಯಾದಸ್ತಿ ಚಾವಕ್ತವ್ಯಶ್ಚ ಘಟಃ'- ಪ್ರಾಯಃ ಘಟವು ಇದೆ, ಹಾಗೂ ಅವಕ್ತವ್ಯವಾಗಿದೆ. 6. 'ಸ್ಯಾನ್ನಾಸ್ತಿ ಚಾವಕ್ತವ್ಯಶ್ಚ ಘಟಃ'- ಪ್ರಾಯಃ ಘಟವು ಇಲ್ಲ ಹಾಗೂ ಅವಕ್ತವ್ಯವಾಗಿದೆ. (ಅಂದರೆ ವಚನಾತೀತವಾಗಿದೆ). 7 'ಸ್ಯಾದಸ್ತಿ ನಾಸ್ತಿ ಚಾ ವಕ್ತವ್ಯಶ್ಚ ಘಟಃ'- ಪ್ರಾಯಃ ಘಟವು ಇದೆ ಮತ್ತು ಇಲ್ಲ, ಹಾಗೂ ಅವಕ್ತವ್ಯವೂ ಆಗಿದೆ.

ಪ್ರತ್ಯೇಕ ಈ ಭಂಗಗಳ ವಿಸ್ತೃತವರ್ಣನೆಯನ್ನು ಮಾಡುವ ಮೊದಲು ಅವುಗಳ ಪರಿಜ್ಞಾನಕ್ಕೆ ಸಹಾಯಕಗಳಾದ ಕೆಳಗೆ ಬರೆದಿರುವ ವಾಕ್ಯಗಳ ಉಲ್ಲೇಖವು ಅತ್ಯಾವಶ್ಯಕ: (1) ಪ್ರತ್ಯೇಕ ಭಂಗಗಳಲ್ಲಿ ಜೋಡಿಸಲ್ಪಟ್ಟ 'ಸ್ಯಾತ್' ಶಬ್ದದ ಅರ್ಥ; (2) ಈ ವಾಕ್ಯಗಳಲ್ಲಿ ವಸ್ತುಧರ್ಮದ ಸ್ಥಿತಿಯನ್ನು ಸಂಬೋಧಿಸುವ 'ಅಸ್ತಿ' ಶಬ್ದದ ಗೂಢಾಶಯ, ಅಂದರೆ ವಸ್ತುವಿನಲ್ಲಿ ಧರ್ಮದ ಸ್ಥಿತಿಯು ಯಾವ ರೀತಿಯಲ್ಲಿದೆಯೆಂಬುದು: (3) ಈ ಭಂಗಗಳಲ್ಲಿ ಕೊಡಲ್ಪಟ್ಟ ಘಟವಸ್ತುವಿನ ನಿಜರೂಪ, ಪರರೂಪ, ದ್ರವ್ಯರೂಪ ಮತ್ತು ಪರ್ಯಾಯರೂಪ ಇವುಗಳ ವರ್ಣನೆ – ಇವುಗಳನ್ನು ಮೊದಲು ತಿಳಿದುಕೊಳ್ಳಬೇಕು.

**'ಸ್ಯಾತ್'** ಶಬ್ದವು ಅನೇಕಾಂತರೂಪವಾದ ಅರ್ಥವನ್ನು ಬೋಧಿಸುವುದು ವಾಕ್ಯದಲ್ಲಿ ನಿಶ್ಚಯರೂಪವಾದ ಒಂದೇ ಅರ್ಥವನ್ನು ಮಾಡದೆ ಇದರಲ್ಲಿ ಸೇರಿಕೊಂಡಿರುವ ಇತರ ಅಂಶಗಳ ಕಡೆಗೂ ದೃಷ್ಟಿಪಾತವನ್ನು ಮಾಡಬೇಕೆಂದು ಈ ಶಬ್ದದ ಅಭಿಪ್ರಾಯ. **'ಅಸ್ತಿ'** ಶಬ್ದದಿಂದ ವಸ್ತುವಿನ ಧರ್ಮದ ಸ್ಥಿತಿಗಳು ಸೂಚಿಸಲ್ಪಡುವವು. ಅವು ಯಾವದೆಂದರೆ: (ಅ) ಕಾಲ (ಆ) ಆತ್ಮರೂಪ (ಇ) ಅರ್ಥ (ಡಿ) ಸಂಬಂಧ (ಉ) ಉಪಕಾರ (ಊ) ಗುಣಿದೇಶ (ಋೂ) ಸಂಸರ್ಗ (ಋ) ಶಬ್ದ – ಇವು ಎಂಟನ್ನೂ ಈಗ ಕ್ರಮವಾಗಿ ವಿವರಿಸುವೆವು.

(ಅ) **ಕಾಲ** – ಯಾವ ಕಾಲದಲ್ಲಿ ಘಟದಲ್ಲಿ 'ಅಸ್ತಿತ್ವ'ಧರ್ಮವು ಇದೆಯೋ ಅದೇ ಕಾಲದಲ್ಲಿ ಅದರಲ್ಲಿ 'ಪಟನಾಸ್ತಿತ್ವ' ಧರ್ಮವು ಅಥವಾ 'ಅವಕ್ತವ್ಯತ್ವಾದಿ' ಧರ್ಮಗಳೂ ಇರುವುವು. ಆದುದರಿಂದ ಘಟದಲ್ಲಿ ಒಂದೇ ಸಮಯದಲ್ಲಿ ಈ ಎಲ್ಲಾ ಅಸ್ತಿತ್ವಧರ್ಮಗಳ ಸ್ಥಿತಿಯು ಇದೆ. ಅಂದರೆ ಕಾಲದ ಮೂಲಕವಾಗಿ ಅಭೇದಸ್ಥಿತಿಯು ಇರುವುದು. ಕಾಲದ ಸಂಬಂಧದಿಂದ ಎಲ್ಲಾ ಧರ್ಮಗಳೂ ಅಭಿನ್ನ ರೂಪವಾಗಿಯೇ ಇರುವುವು. ಏತಕ್ಕೆಂದರೆ – ಈ ಎಲ್ಲಾ ಧರ್ಮಗಳೂ ಸಮಾನ ಕಾಲದಲ್ಲಿಯೇ ಇರುವುವೆಂದೇ ಪ್ರಕಾರಾಂತರದಿಂದ ಇದರ ಕಥನ.

(ಆ) **ಆತ್ಮರೂಪ** – ಯಾವ ಪ್ರಕಾರವಾಗಿ ಘಟವು ಅಸ್ತಿತ್ವದ ಸ್ವರೂಪವನ್ನು ಹೊಂದಿರುವದೋ ಅದೇ ಪ್ರಕಾರವಾಗಿ ಅದು ಮಿಕ್ಕ ಧರ್ಮಗಳ ರೂಪವನ್ನೂ ಹೊಂದಿರುವುದು. ಅಂದರೆ: ಘಟದಲ್ಲಿ ಅಸ್ತಿತ್ವವೊಂದೇ ಗುಣವಲ್ಲ. ಇನ್ನೂ ಗುಣಗಳಿರುವುವು. ಧರ್ಮವು ಯಾವ ಸ್ವರೂಪದಲ್ಲಿ ವಸ್ತುವಿನಲ್ಲಿದೆಯೋ ಅದೇ

ಅದರ ನಿಜರೂಪ ಅಥವಾ ಆತ್ಮರೂಪ. ಈ ಪ್ರಕಾರವಾಗಿ ಒಂದು ಘಟರೂಪ ಅಧಿಕರಣದಲ್ಲಿ ಆತ್ಮರೂಪದಿಂದ ಎಲ್ಲಾ ಧರ್ಮಗಳೂ ಇರುವುವು. ಅದುದರಿಂದಲೇ ಆತ್ಮಸ್ವರೂಪದಿಂದ ಎಲ್ಲಾ ಧರ್ಮಗಳೂ ಅಭೇದಸ್ವರೂಪದಿಂದಿರುವುವು. ಅಂದರೆ ಅಭೇದವೃತ್ತಿಯಿಂದ ಸ್ಥಿತಿಯು.

(ಇ) **ಅರ್ಥ** – ಯಾವ ಘಟರೂಪದ್ರವ್ಯವು ಪದಾರ್ಥದ ಅಸ್ತಿತ್ವಧರ್ಮದ ಆಧಾರವೋ ಅದೇ ಘಟದ್ರವ್ಯವು ಅನ್ಯಧರ್ಮಗಳ ಆಧಾರವೂ ಆಗಿದೆ. ಇದೇ ಪ್ರಕಾರವಾಗಿ ಒಂದೇ ಆಧಾರದಲ್ಲಿ ಅಂದರೆ ಒಂದೇ ಪದಾರ್ಥದಲ್ಲಿ ಎಲ್ಲಾ ಧರ್ಮಸ್ಥಿತಿಯೂ ಪದಾರ್ಥದೊಡನೆ ಅಭೇದವ್ಯತ್ತಿಯಿಂದಿರುವುದು.

(ಈ) **ಸಂಬಂಧ** – ಅಭೇದರೂಪ ಅಸ್ತಿತ್ವದ ಯಾವ 'ಪ್ರಾಯಃ' ಸಂಬಂಧವು ಘಟದೊಡನೆ ಇದೆಯೋ ಅನ್ಯ ಸರ್ವದ್ರವ್ಯಗಳ ಅದೇ 'ಪ್ರಾಯಃ' ಸಂಬಂಧವೂ ಘಟದೊಡನೆ ಇದೆ.

(ಉ) **ಉಪಕಾರ** – ವಸ್ತುವನ್ನು ತನ್ನ ಸ್ವರೂಪಮಯವನ್ನಾಗಿ ಮಾಡುವುದೇ ಉಪಕಾರ. ಹೇಗೆ ಘಟದೊಡನೆ ಆಸ್ತಿತ್ವದ ಉಪಕಾರವು ಇರುವುದೋ ಹಾಗೆಯೇ ಅದರೊಡನೆ ಅನ್ಯಧರ್ಮಗಳ ಅದೇ ತನ್ನ ವೈಶಿಷ್ಟ್ಯ ಸಂಪಾದನಾರೂಪವಾದ ಉಪಕಾರವೂ ಇರುವುದು. ಇದು ಉಪಕಾರದಿಂದ ಅಭೇದವೃತ್ತಿಯು.

(ಊ) **ಗುಣಿದೇಶ** – ಘಟದ ಯಾವ ಪ್ರದೇಶದಲ್ಲಿ ಸ್ವಸ್ವರೂಪದಿಂದ ಅಸ್ತಿತ್ವಧರ್ಮವು ಇರುವುದೋ ಅದೇ ಪ್ರದೇಶದಲ್ಲಿ ಅನ್ಯಾಪೇಕ್ಷೆಯಿಂದ ನಾಸ್ತಿತ್ವಾದಿ ಸಂಪೂರ್ಣಧರ್ಮಗಳೂ ಇರುವುವು. ಆದುದರಿಂದ ದೇಶಭೇದವೂ ಇಲ್ಲ.

(ಋ) **ಸಂಸರ್ಗ** – ಯಾವ ಪ್ರಕಾರವಾಗಿ ಏಕವಸ್ತುತ್ವಸ್ವರೂಪದಿಂದ ಅಸ್ತಿತ್ವಧರ್ಮದ ಸಂಸರ್ಗವು ಘಟದಲ್ಲಿದೆಯೋ ಅದೇ ಪ್ರಕಾರವಾಗಿ ಏಕವಸ್ತುತ್ವಸ್ವರೂಪದಿಂದ ಅದರಲ್ಲಿ ಅನ್ಯಸಂಪೂರ್ಣಧರ್ಮಗಳ ಸಂಸರ್ಗವೂ ಇರುವುದು. ಅದುದರಿಂದಲೇ ಸಂಸರ್ಗದೊಡನೆ ಅಭೇದವೃತ್ತಿಯು.

(ೠ) **ಶಬ್ದ** – ಯಾವ 'ಅಸ್ತಿ' ಶಬ್ದವು ಅಸ್ತಿತ್ವಧರ್ಮದ ಸ್ವರೂಪವಾದ ಘಟಾದಿವಸ್ತುಗಳ ವಾಚಕವೋ ಅದೇ ವಾಚ್ಯಸ್ವರೂಪಶಬ್ದದಿಂದ ಸಂಪೂರ್ಣ ಧರ್ಮಗಳ ವೃತ್ತಿಯು ಘಟಾದಿಪದಾರ್ಥಗಳೊಡನೆ ಅಭೇದರೂಪದಿಂದಿರುವುದು.

ಈಪ್ರಕಾರವಾಗಿ ಎಲ್ಲಾ ಧರ್ಮಗಳ ಸ್ಥಿತಿಯೂ ಘಟದೊಡನೆ ಅಭೇದರೂಪದಿಂದಿದೆ. ದ್ರವ್ಯಾರ್ಥಿಕನಯದ ಪ್ರಧಾನತೆಯಿಂದ ವಸ್ತುವಿನಲ್ಲಿ ಸಂಪೂರ್ಣಧರ್ಮಗಳ ಸ್ಥಿತಿಯು ಅಭೇದರೂಪದಿಂದಿರುವುದು. ಪರ್ಯಾಯಾರ್ಥಿಕನಯದ ಪ್ರಧಾನತೆಯಿಂದ ಈ ಸ್ಥಿತಿಯು ಅಭೇದೋಪಚಾರರೂಪದಿಂದಿರುವುದು. ಹೀಗೆ ಈ ಎರಡರ ಮೂಲಕವಾಗಿ ಅನೇಕಾಂತವಾದದ ಸೂಚನೆಯು ಸಿಗುವುದು.

ಯಾವ ಪ್ರಕಾರವಾಗಿ ವಸ್ತುವಿನಲ್ಲಿ ಧರ್ಮದ ಸ್ಥಿತಿಯು ಎಂಟು ಪ್ರಕಾರವಾಗಿರುವುದೋ ಅದೇ ಪ್ರಕಾರವಾಗಿ ಯಾವುದಾದರೊಂದು ವಸ್ತುವಿನ **ನಿಜರೂಪವು** ನಾಲ್ಕು ಪ್ರಕಾರವಾಗಿರುವುದು. ನಾಮ, ಸ್ಥಾಪನ, ದ್ರವ್ಯ ಮತ್ತು ಭಾವ – ಇವುಗಳೇ ಆ ನಾಲ್ಕು ಪ್ರಕಾರಗಳು. ಹೇಗೆಂದರೆ – ಮಣ್ಣಿನಿಂದ ಹಲವು ವಸ್ತುಗಳು ಮಾಡಲ್ಪಟ್ಟರೂ ಒಂದಕ್ಕೇನೇ ಘಟವೆಂದು ಹೆಸರಿರುವುದು. ಘಟವು ಯಾವ ಸ್ಥಾನದಲ್ಲಿ ಇಡಲ್ಪಟ್ಟಿದೆಯೋ ಅದು ಅದರ ಕ್ಷೇತ್ರ ಹೇಗೆಂದರೆ:– ಘಟವು ಒಂದು ಕಲ್ಲಿನಲ್ಲಿ ಇಡಲ್ಪಟ್ಟಿದ್ದರೆ ಅದೇ ಅದರ ಕ್ಷೇತ್ರ. ಹೇಗೆಂದರೆ:– ಘಟವು ಇಲ್ಲವೊ ಅಂತಹ ಬೇರೊಂದು ಕಲ್ಲು ಅಥವಾ ಆಧಾರಾರ್ಹವಾದ ಮತ್ತೊಂದು ವಸ್ತುವೇ ಇದರ ಪರಕ್ಷೇತ್ರ. ಇದಕ್ಕೇನೇ 'ಸ್ಥಾಪನ' ಎಂದೂ ಹೇಳಬಹುದು. ಘಟದಲ್ಲಿ ಮೃತ್ತಿಕಾದ್ರವ್ಯವು ಇದೆ, ಸುವರ್ಣದ್ರವ್ಯವು ಇಲ್ಲ – ಎಂಬುದೇ 'ದ್ರವ್ಯ' ಎನಿಸಿಕೊಳ್ಳುವುದು. ಯಾವ ವಿವಕ್ಷಿತಕಾಲದಲ್ಲಿ ಘಟವು ಇದೆಯೋ ಅದು ಅದರ ಭಾವ; ಅಂದರೆ – ವರ್ತಮಾನ ಕಾಲವೇ ಭಾವವೆನಿಸಿಕೊಳ್ಳುವುದು. ವಸ್ತುವಿನ ನಿಜರೂಪವನ್ನು ತಿಳಿದುಕೊಳ್ಳುವದಕ್ಕೋಸ್ಕರ ವಸ್ತುವಿನ ನಾಮ, ಸ್ಥಾಪನ (ಕ್ಷೇತ್ರ), ದ್ರವ್ಯ, ಭಾವ(ಕಾಲ)– ಈ ನಾಲ್ಕು ಮಾತುಗಳನ್ನು ಧ್ಯಾನದಲ್ಲಿಡಬೇಕು. ಉದಾಹರಣೆ:– ಘಟದ ಹೆಸರು ಘಟವೇ ಹೊರತು ಶರಾವಾದಿಗಳಲ್ಲ. ಶರಾವಾದಿಗಳು ಘಟದ ಪರಿಣಾಮಗಳಾಗಿರುವುವು. ಘಟದ ಸ್ಥಾಪನಾ ಅಥವಾ ಕ್ಷೇತ್ರವು ಘಟವು ಎಲ್ಲಿ ಇಡಲ್ಪಟ್ಟಿದೆಯೋ ಅದೇ ಹೊರತು ಅನ್ಯಕ್ಷೇತ್ರವಲ್ಲ. ಘಟದ ದ್ರವ್ಯವು ಮೃತ್ತಿಕೆಯೇ ಹೊರತು ಸುವರ್ಣವಲ್ಲ. ಘಟದ ಕಾಲವು ವರ್ತಮಾನವೇ ಹೊರತು ಭೂತ ಭವಿಷ್ಯತ್ಕಾಲಗಳಲ್ಲ. ಮೃತ್ತಿಕಾದಿಗಳು ಘಟಕ ದ್ರವ್ಯರೂಪಗಳು, ಅಂದರೆ ನಿಜರೂಪಗಳು ಮೃತ್ತಿಕೆಯಿಂದ ಮಾಡಲ್ಪಡುವ ಶರಾವವೇ ಮುಂತಾದ ನೂರಾರು ಪಾತ್ರೆಗಳು ಅದರ **ಪರ್ಯಾಯ**ಗಳಾಗಿರುವುವು.

## 2. ಸಪ್ತಭಂಗಗಳ ವಿಶೇಷವಿವರಣೆ

ಸಪ್ತಭಂಗ(ವಾಕ್ಯ)ಗಳ ಸ್ಪಷ್ಟವಿವರಣೆಯನ್ನು ಇನ್ನು ಪ್ರಾರಂಭಿಸುವೆನು:

**1. ಪ್ರಾಯಃ ಘಟವು ಇದೆ** – ಘಟವು ತನ್ನ ನಿಜರೂಪದಿಂದಿದೆಯೆಂದೇ ಈ ವಾಕ್ಯದ ಅರ್ಥ. ಅಂದರೆ ನಾಮ, ಸ್ಥಾಪನಾ (ಕ್ಷೇತ್ರ), ದ್ರವ್ಯ ಮತ್ತು ಭಾವ (ಕಾಲ)– ಇವುಗಳ ಅಪೇಕ್ಷೆಯಿಂದ ಘಟವು ಇದೆ. ವಕ್ರಕಂಠದ ರೂಪದಲ್ಲಿರುವದೆಂಬುದನ್ನು ತಿಳಿಯಿಸುವದು 'ಘಟ' (ಗಡಿಗೆ) ಎಂಬ ಹೆಸರು. ಮೃತ್ತಿಕೆಯು ಇದರ ದ್ರವ್ಯ. ಯಾವ ಸ್ಥಾನದಲ್ಲಿ ಘಟವು ಇಡಲ್ಪಟ್ಟಿದೆಯೋ ಅದೇ ಸ್ಥಾನ, ಅದರ ಕ್ಷೇತ್ರ. ಯಾವ ಕಾಲದಲ್ಲಿ ಘಟವು ಇದೆಯೋ, ಅದೇ ಅದರ ಕಾಲ. 'ಪ್ರಾಯಃ' ಎಂಬರ್ಥದ 'ಸ್ಯಾತ್' ಶಬ್ದವು ಘಟದಲ್ಲಿ ಪ್ರಧಾನವಾಗಿ ಹೇಳಲ್ಪಟ್ಟ ಈ ವಸ್ತುಗಳೇ ಹೊರತು ಮಿಕ್ಕ ವಸ್ತುಗಳು ಇಲ್ಲವೆಂದು ತಿಳಿದು ಕೊಂಡಾರೆಂಬ ಸಂದೇಹದಿಂದ ಪ್ರಯೋಗಿಸಲ್ಪಟ್ಟಿದೆ. ಇದು ಅನೇಕಾಂತರೂಪವಾದ ಅರ್ಥದ ವಾಚಕವು. ಈ ವಾಕ್ಯದಲ್ಲಿ ಸತ್ತೆ (ಇರುವಿಕೆ)ಯೇ ಪ್ರಧಾನವಾಗಿರುವುದು.

**2. ಪ್ರಾಯಃ ಘಟವು ಇಲ್ಲ** – ಪರನಾಮ, ಪರರೂಪ, ಪರದ್ರವ್ಯ, ಪರಕ್ಷೇತ್ರ, ಪರಕಾಲ – ಇವುಗಳ ಅಪೇಕ್ಷೆಯಿಂದ ಘಟವು ಇಲ್ಲವೆಂದೇ ಈ ವಾಕ್ಯದ ಅರ್ಥ. ಘಟದ ಸ್ವಸ್ವರೂಪವು ವಕ್ರಕಂಠವಾಗಿದೆ; ಈ ರೂಪದಿಂದ ಭಿನ್ನವಾದ ಚಪ್ಪಟೆ, ಉದ್ದ – ಮುಂತಾದ ರೂಪಗಳು ಇದರಲಿಲ್ಲ. ಅಂದರೆ ಸ್ವಸ್ವರೂಪವೊಂದೇ ಇದೆಯೇ ಹೊರತು ಬಟ್ಟೆ, ಮರ ಮುಂತಾದವುಗಳ ರೂಪವು ಇದರಲ್ಲಿಲ್ಲವೆಂದಭಿಪ್ರಾಯ. ತನ್ನ ದ್ರವ್ಯವು ಮೃತ್ತಿಕೆಯಾಗಿದೆ, ಘಟದಲ್ಲಿ ತನ್ನ ಈ ನಿಜದ್ರವ್ಯವೇ ಹೊರತು ಇದರಿಂದ ಭಿನ್ನವಾದ ಪರದ್ರವ್ಯವಾದ ಚಿನ್ನ, ಕಬ್ಬಿಣ, ಕಲ್ಲು–ಮುಂತಾದುವುಗಳು ಇದರಲ್ಲಿಲ್ಲ. ಯಾವ ಸ್ಥಾನದಲ್ಲಿ ಘಟವು ಇಡಲ್ಪಟ್ಟಿದೆಯೋ ಅದೇ ಅದರ ಸ್ವಕ್ಷೇತ್ರ. ತನ್ನಲ್ಲಿ ಸ್ವಕ್ಷೇತ್ರವು ಇದೆಯೇ ಹೊರತು ಮತ್ತೊಂದರ ಕ್ಷೇತ್ರವು ಇಲ್ಲ. ತನ್ನ ಕಾಲವು ವರ್ತಮಾನಕಾಲವಾಗಿದೆ; ಇದಕ್ಕಿಂತ ಬೇರೆಯಾದ ಭೂತಭವಿಷ್ಯತ್ಕಾಲಗಳು ಪರಕಾಲಗಳು. ತನ್ನಲ್ಲಿ ಸ್ವಕಾಲವಿರುವದೇ ಹೊರತು ಪರಕಾಲಗಳಿಲ್ಲ. ಈ ಭಂಗಗಳಲ್ಲಿ ಅಸತ್ತೆಯು (ಇಲ್ಲದಿರುವಿಕೆಯನ್ನು ತಿಳಿಸುವುದು) ಪ್ರಧಾನವಾಗಿರುವುದು. ಈ ವಾಕ್ಯದಲ್ಲಿ ಘಟದ ನಿಷೇಧವನ್ನು ಮಾಡಲಿಲ್ಲ; ಇಲ್ಲವೆಂದು ಹೇಳಿದುದರಿಂದ ಘಟದ ಆಸ್ತಿತ್ವವು ಹೊರಟೇಹೋಯಿತೆಂದು ತಿಳಿಯಬಾರದು.

ಆದರೆ ಸ್ವಸ್ವರೂಪವು ಗೌಣವಾಗಿದೆ, ಪರರೂಪವು ಪ್ರಧಾನವಾಗಿದೆ- ಎಂದು ತಿಳಿಯಬೇಕು. ಈ ವಾಕ್ಯವು ಮೊದಲಿನ ವಾಕ್ಯಕ್ಕೆ ಸರ್ವಥಾ ವಿರುದ್ಧವಾಗಿಲ್ಲ. ಇದರಲ್ಲಿ ಅಸತ್ತೆಯು ಪ್ರಧಾನವಾಗಿದೆ: ಸತ್ತೆಯು ಗೌಣವಾಗಿದೆ.

**3. ಪ್ರಾಯಃ ಘಟವು ಇದೆ, ಮತ್ತು ಇಲ್ಲ** - ಮೊದಲು ಘಟದ ನಿಜರೂಪ ಸಂಬಂಧಿ 'ಸತ್ತೆ'ಯ ಪ್ರಧಾನತೆಯಿಂದ ಘಟವು ಇದೆಯೆಂದೂ ಆಮೇಲೆ ಘಟದ ಪರರೂಪಸಂಬಂಧಿ 'ಅಸತ್ತೆ'ಯ ಪ್ರಧಾನತೆಯಿಂದ ಘಟವು ಇಲ್ಲವೆಂದೂ ಹೇಳಿದ್ದಾಗಿದೆಯಷ್ಟೆ. ಘಟದ ನಿಜರೂಪದ ಕಡೆಗೆ ನೋಡುವದರಿಂದ ಘಟವು ಇದೆಯೆಂದೂ ಪರರೂಪದ ಕಡೆಗೆ ನೋಡುವದರಿಂದ ಅದು ಇಲ್ಲವೆಂದೂ ತೋರುವುದೆಂದು ಈ ಭಂಗದ ಅಭಿಪ್ರಾಯ.

**4. ಪ್ರಾಯಃ ಘಟವು ಅವಕ್ತವ್ಯವಾಗಿದೆ** - ಅಂದರೆ ವಚನಾತೀತವಾಗಿದೆ. ಒಂದೇ ಸಮಯದಲ್ಲಿ ಘಟದ ನಿಜರೂಪದ 'ಸತ್ತೆ' ಪರರೂಪದ 'ಅಸತ್ತೆ' - ಇವೆರಡರ ಪ್ರಧಾನತೆಯಿಂದ ಘಟವು ಅವಕ್ತವ್ಯವಾಗುವುದು. ಯಾವ ವಸ್ತುವು ಒಂದೇ ಸಮಯದಲ್ಲಿ ತನ್ನ ನಿಜರೂಪ ಮತ್ತು ಪರರೂಪ- ಇವುಗಳೆರಡನ್ನೂ ಪ್ರಧಾನವಾಗಿಟ್ಟುಕೊಳ್ಳುವುದೋ ಅದು ಅವಕ್ತವ್ಯವೇ ಹೊರತು ಇನ್ನಾವುದಾದೀತು?

**5. ಪ್ರಾಯಃ ಘಟವು ಇದೆ, ಮತ್ತು ಅವಕ್ತವ್ಯವೂ ಆಗಿದೆ** - ದ್ರವ್ಯರೂಪದಿಂದ ಘಟವು ಇದೆ. ಆದರೆ ದ್ರವ್ಯ ಮತ್ತು ಪರ್ಯಾಯ- ಇವುಗಳೆರಡೂ ಏಕಕಾಲದಲ್ಲಿ ಪ್ರಧಾನಭೂತವಾಗಿಲ್ಲ. ಸತ್ತಾಸಹಿತವಾದ ಅವಕ್ತವ್ಯತ್ವವೇ ಪ್ರಧಾನವಾಗಿರುವುದು. ಘಟದ ದ್ರವ್ಯದ ಅಂದರೆ ಮೃತ್ತಿಕೆಯ ರೂಪದಿಂದ ನೋಡಿದರೆ ಘಟವು ಇದೆ; ಆದರೆ ದ್ರವ್ಯ(ಮೃತ್ತಿಕೆ) ಮತ್ತು ಅದರ ಪರ್ಯಾಯ[1] ಇವೆರಡನ್ನೂ ಏಕಕಾಲದಲ್ಲಿ ನೋಡಿದರೆ ಅದು ಅವಕ್ತವ್ಯವಾಗಿರುವುದು.

**6. ಪ್ರಾಯಃ ಘಟವು ಇಲ್ಲ, ಮತ್ತು ಅವಕ್ತವ್ಯವೂ ಆಗಿದೆ** - ಘಟವು ತನ್ನ ಪರ್ಯಾಯದ ಅಪೇಕ್ಷೆಯಿಂದ ಇಲ್ಲ. ಏತಕ್ಕೆಂದರೆ- ಪರ್ಯಾಯಗಳು ಕ್ಷಣಕ್ಷಣದಲ್ಲಿ ಬದಲಾಗುತ್ತಿರುವುದು. ಆದರೆ ಪ್ರಧಾನವಾದ ದ್ರವ್ಯ, ಪರ್ಯಾಯ ಇವುಗಳೆಂಡರ ಅಪೇಕ್ಷೆಯಿಂದ ಅದು ಅವಕ್ತವ್ಯವಾಗಿದೆ.

---

1 ಘಟದ ಪರ್ಯಾಯಗಳೆಂದರೆ ಅದರ ದ್ರವ್ಯವಾದ ಮೃತ್ತಿಕೆಯಿಂದ ಮಾಡಲ್ಪಡುವ ನೂರಾರು ಪಾತ್ರೆಗಳು: ಇದನ್ನು ಹಿಂದಿನ ಲೇಖನದಲ್ಲಿಯೇ ತಿಳಿಸಿರುತ್ತದೆ.

**7. ಪ್ರಾಯಃ ಘಟವು ಇದೆ, ಹಾಗೂ ಇಲ್ಲ, ಮತ್ತು ಅವಕ್ತವ್ಯವೂ ಆಗಿದೆ -** ದ್ರವ್ಯಪರ್ಯಾಯಗಳ ಬೇರೆಬೇರೆಯ ಅಪೇಕ್ಷೆಯಿಂದ ಘಟವು ಸತ್ತೆ, ಅಸತ್ತೆ-ಇವುಗಳಿಂದ ಕೂಡಿರುವುದು. ಏಕಕಾಲದಲ್ಲಿ ದ್ರವ್ಯಪರ್ಯಾಯಗಳೆರಡರ ಅಪೇಕ್ಷೆಯಿಂದ ಅವಕ್ತವ್ವವಾಗಿರುವುದು. ಅಂದರೆ ಘಟವು ಮೃತ್ತಿಕೆಯ ದೃಷ್ಟಿಯಿಂದ ಇದೆ, ಪರ್ಯಾಯದ ದೃಷ್ಟಿಯಿಂದ ಇಲ್ಲ; ಇವೆರಡನ್ನೂ ಏಕಕಾಲದಲ್ಲಿ ನೋಡಿದರೆ ಅವಕ್ತವ್ಯವಾಗಿದೆ.

ಯಾವುದಾದರೊಂದು ವಸ್ತುವಿನ ನಿರ್ಣಯವನ್ನು ಮಾಡುವಾಗ ಕೇವಲ ಒಂದೇ ದೃಷ್ಟಿಯಿಂದ ನೋಡಿ ಆ ವಸ್ತುವಿನ ನಿರ್ಣಯವನ್ನು ಮಾಡಬಾರದೆಂದೇ ಈ ವಾಕ್ಯಗಳ (ಭಂಗಗಳ) ಅಭಿಪ್ರಾಯ. ಒಂದೊಂದು ವಸ್ತುವಿನಲ್ಲಿಯೂ ಅನೇಕ ಧರ್ಮಗಳಿರುವವು. ಈ ಎಲ್ಲಾ ಧರ್ಮಗಳನ್ನೂ ನೋಡಿ ವಸ್ತುವಿನ ನಿರ್ಣಯವನ್ನು ಮಾಡುವುದು ಜಿಜ್ಞಾಸುವಿನ ಧರ್ಮವಾಗಿರುವುದು. ಪ್ರತ್ಯೇಕ ವಸ್ತುವು ಏಳು ಪ್ರಕಾರವಾದ ದೃಷ್ಟಿಯಿಂದ - ಸಪ್ತಭಂಗಗಳಿಂದ - ಪರೀಕ್ಷಿಸಲ್ಪಡುವುದೆಂದು ಜೈನಶಾಸ್ತ್ರದ ಮತವು. ಇವುಗಳ ಪ್ರತ್ಯೇಕದೃಷ್ಟಿಯು - ಭಂಗವು - ತಥ್ಯವಾಗಿರುವುದು; ಆದರೆ - ಈ ಏಳು ದೃಷ್ಟಿಗಳನ್ನು ಪರಸ್ಪರಸಮ್ಮಿಶ್ರಣ ಮಾಡುವುದರಿಂದಲೇ ಆ ವಸ್ತುವಿನ ಪೂರ್ಣಜ್ಞಾನವು ಆಗುವುದು. ಈ ಪ್ರಕಾರವಾಗಿ ಯಾವುದಾದರೊಂದು ವಸ್ತುವಿನ **ವಿಷಯದಲ್ಲಿ ವ್ಯವಸ್ಥೆಯನ್ನು** ಮಾಡುವುದು ಜೈನಶಾಸ್ತ್ರದ ಅದ್ಭುತವಾದ ಗಂಭೀರ ಹಾಗೂ ಗವೇಷಣಾಪೂರ್ಣವಾದ ವಿಲಕ್ಷಣಸಿದ್ಧಾಂತವು.

ಯಾವ ಪ್ರಕಾರವಾಗಿ ಪ್ರತ್ಯೇಕ ವಸ್ತುವಿನಲ್ಲಿ ''ಅಸ್ತಿ'' ಶಬ್ದವನ್ನು ಸೇರಿಸಿ ವಾಕ್ಯಗಳನ್ನು ಮಾಡುತ್ತಾರೆಯೋ ಅದೇ ಪ್ರಾಕಾರವಾಗಿ ನಿತ್ಯ, ಅನಿತ್ಯ, ಏಕ, ಅನೇಕಾದಿ ಶಬ್ದಗಳನ್ನು ಸೇರಿಸಿಯೂ ವಾಕ್ಯಗಳನ್ನು ಮಾಡುತ್ತಾರೆ. ನಿತ್ಯತ್ವ, ಅನಿತ್ಯತ್ವ, ಏಕತ್ವ, ಅನೇಕತ್ವವೇ ಮುಂತಾದ ಧರ್ಮಗಳಿಂದಲೂ ಸಪ್ತಭಂಗಿಯ ನಿರೂಪಣೆಯನ್ನು ಮಾಡಬೇಕು. ಹೇಗೆಂದರೆ- 'ಪ್ರಾಯಃ ಘಟವು ನಿತ್ಯವಾಗಿದೆ' (ದ್ರವ್ಯರೂಪದಿಂದ), 'ಪ್ರಾಯಃ ಘಟವು ಅನಿತ್ಯವಾಗಿದೆ' (ಪಾರ್ಯಾಯರೂಪದಿಂದ). ಇದೇ ಪ್ರಕಾರವಾಗಿ ಏಕತ್ವ ಮತ್ತು ಅನೇಕತ್ವಗಳ ರೂಪದಿಂದ: 'ಪ್ರಾಯಃ ಘಟವು ಏಕವಾಗಿದೆ'. 'ಪ್ರಾಯಃ ಘಟವು ಅನೇಕವಾಗಿದೆ'. ಅಂದರೆ- ದ್ರವ್ಯರೂಪದಿಂದ ಏಕವಾಗಿದೆ, ಏಕೆಂದರೆ

ಮೃತ್ತಿಕಾರೂಪದ್ರವ್ಯವು ಒಂದೇ; ಪರ್ಯಾಯರೂಪದಿಂದ ಅನೇಕವಾಗಿದೆ, ಏಕೆಂದರೆ - ರಸ, ಗಂಧ - ಮುಂತಾದ ಅನೇಕ ಪರ್ಯಾಯಗಳಿರುವುವು.

## 3. ಏಕಾಂತ ಮತ್ತು ಅನೇಕಾಂತ

ಏಕಾಂತವು ಸಮ್ಯಗೇಕಾಂತವೆಂದೂ ಮಿಥ್ಯೈಕಾಂತವೆಂದೂ ಎರಡು ಪ್ರಕಾರವಾಗಿರುವುದು. ಇದೇ ಪ್ರಕಾರವಾಗಿ ಅನೇಕಾಂತವೂ ಎರಡು ವಿಧವಾಗಿ ರುವುದು. ಒಂದೇ ವಸ್ತುವಿನಲ್ಲಿ ಅನೇಕಧರ್ಮಗಳಿರುವವು; ಇವುಗಳಲ್ಲಿ ಯಾವುದಾದರೊಂದು ಧರ್ಮವನ್ನು ಪ್ರಧಾನರೂಪವಾಗಿ ಹೇಳಿ ಉಳಿದ ಧರ್ಮಗಳನ್ನು ನಿಷೇಧಮಾಡುವುದೇ **ಸಮ್ಯಗೇಕಾಂತ.** ಯಾವುದಾದರೊಂದು ಧರ್ಮವನ್ನು ನಿಶ್ಚಯಿಸಿ ಆ ಪದಾರ್ಥದ ಉಳಿದ ಧರ್ಮಗಳನ್ನೆಲ್ಲ ನಿಷೇಧ ಮಾಡುವುದೇ **ಮಿಥ್ಯೈಕಾಂತ.** ಪ್ರತ್ಯಕ್ಷ, ಅನುಮಾನ ಮತ್ತು ಆಗಮ - ಈ ಪ್ರಮಾಣಗಳಿಗೆ ವಿರೋಧಮಾಡದೆ ವಸ್ತುವಿನಲ್ಲಿ ಅನೇಕಧರ್ಮಗಳ ನಿರೂಪಣೆಯನ್ನು ಮಾಡುವುದೇ **ಸಮ್ಯಗನೇಕಾಂತ;** ಪ್ರತ್ಯಕ್ಷಾದಿಪ್ರಮಾಣಗಳಿಗೆ ವಿರುದ್ಧವಾಗಿ ವಸ್ತುವಿನಲ್ಲಿ ಅನೇಕ ಧರ್ಮಗಳ ಕಲ್ಪನೆಯನ್ನು ಮಾಡುವುದು **ಮಿಥ್ಯಾನೇಕಾಂತ.** ಸಮ್ಯಗೇಕಾಂತವು ನಯವಾಗಿರುವುದು, ಮಿಥ್ಯೈಕಾಂತವು ನಯಾಭಾಸವಾಗಿರುವುದು. ಇದೇ ಪ್ರಕಾರವಾಗಿ ಸಮ್ಯಗನೇಕಾಂತವು ಪ್ರಮಾಣವಾಗಿರುವುದು, ಮಿಥ್ಯಾನೇಕಾಂತವು ಪ್ರಮಾಣಾಭಾಸವಾಗಿರುವುದು. ಜೈನಶಾಸ್ತ್ರವು ಸಮ್ಯಗೇಕಾಂತ ಮತ್ತು ಸಮ್ಯಗನೇಕಾಂತ. ಇವುಗಳನ್ನು ಸ್ವೀಕರಿಸುತ್ತದೆ: ಮಿಥ್ಯೈಕಾಂತ ಮಿಥ್ಯಾನೇಕಾಂತ ಇವುಗಳನ್ನು ನಿಷೇಧಿಸುತ್ತದೆ.

ಸಪ್ತಭಂಗೀನಯದಲ್ಲಿ ಸಮ್ಯಗೇಕಾಂತ ಮತ್ತು ಸಮ್ಯಗನೇಕಾಂತ - ಇವೆರಡೂ ಸೇರಿಕೊಂಡಿವೆ. ಸಪ್ತಭಂಗಿಯ ಮೊದಲನೆಯ ವಾಕ್ಯವು ಏಕಾಂತದ ಅಪೇಕ್ಷೆಯಿಂದಲೂ, ಎರಡನೆಯ ವಾಕ್ಯವು ಅನೇಕಾಂತದ ಅಪೇಕ್ಷೆಯಿಂದಲೂ, ಮೂರನೆಯ ವಾಕ್ಯವು ಎರಡರ ಅಪೇಕ್ಷೆಯಿಂದಲೂ, ನಾಲ್ಕನೆಯ ವಾಕ್ಯವು ಏಕಾಂತ, ಅನೇಕಾಂತ - ಇವುಗಳ ಏಕಕಾಲದಲ್ಲಿ ಯೋಜನೆಯ ಅಪೇಕ್ಷೆಯಿಂದಲೂ, ಐದನೆಯ ವಾಕ್ಯವು ಏಕಾಂತ ಮತ್ತು ಉಭಯ ವಾದಗಳ ಏಕಕಾಲದಲ್ಲಿ ಯೋಜನೆಯ ಅಪೇಕ್ಷೆಯಿಂದಲೂ, ಆರನೆಯ ವಾಕ್ಯವು ಅನೇಕಾಂತ ಮತ್ತು ಉಭಯವಾದಗಳ ಒಂದೇ ಕಾಲದಲ್ಲಿ ಯೋಜನೆಯ ಅಪೇಕ್ಷೆಯಿಂದಲೂ, ಏಳನೆಯ ವಾಕ್ಯವು ಏಕಾಂತ ಅನೇಕಾಂತ ಮತ್ತು ಉಭಯವಾದಗಳ ಏಕಕಾಲದಲ್ಲಿ

ಯೋಜನೆಯ ಅಪೇಕ್ಷೆಯಿಂದಲೂ ಹೇಳಲ್ಪಟ್ಟಿವೆ. ಈ ನಯವು ಕೇವಲ ಅನೇಕಾಂತ ರೂಪವಾಗಿಯೇ ಇಲ್ಲ; ಇದರೊಡನೆ ಏಕಾಂತವೂ ಸೇರಿಕೊಂಡಿದೆ. ಏಕಾಂತದ ಅಭಾವದಲ್ಲಿ ಏಕಾಂತದ ಸಮೂಹಭೂತವಾದ ಅನೇಕಾಂತದ ಅಭಾವವೂ ಅನಿವಾರ್ಯವಾಗಿದೆ. ಕೊಂಬೆಗಳ ಅಭಾವದಿಂದ ಶಾಖಾಸಮೂಹಭೂತವಾದ ಮರದ ಅಭಾವವು ಅನಿವಾರ್ಯವಷ್ಟೆ? ಈ ನಯದಲ್ಲಿ 'ಅಸ್ತಿ', 'ನಾಸ್ತಿ'- ಇವೆರಡೇ ಮೂಲಭಂಗಗಳು. ಮೂರರಿಂದ ಏಳರವರೆಗಿನ ಮುಂದಿನ ಭಂಗಗಳು ಪ್ರಥಮದ್ವಿತೀಯಭಂಗಗಳ ಸಂಯೋಗದಿಂದಲೇ ಆಗುವುವು.

ಜೈನೇತರಮತಗಳು ಯಾವುದಾದರೊಂದು ತತ್ತ್ವವನ್ನು ಪ್ರಧಾನವಾಗಿಟ್ಟು ಕೊಂಡು ಕೇವಲ ಏಕಾಂತವಾದವನ್ನು ಪುಷ್ಟಿಮಾಡುವ ಮತಗಳು. ಆದುದರಿಂದಲೇ ಈ ಮತಾವಲಂಬಿಗಳ ಅಂದರೆ ಏಕಾಂತವಾದಿಗಳ ಪಕ್ಷವು ನಿರ್ಬಲವಾಗಿರುವುದು. ಜೈನಮತವು ಸಮ್ಯಗೇಕಾಂತವನ್ನು ಒಪ್ಪುವ ಸಮ್ಯಗನೇಕಾಂತ ಮತವಾಗಿ ದೆ. ಆದುದರಿಂದಲೇ ಜೈನಮತದ ಪಕ್ಷವು ಅತಿಬಲಿಷ್ಠವೂ ಸರ್ವವ್ಯಾಪಕವೂ ಆಗಿರುತ್ತದೆ.

ಕೇವಲ ಏಕಾಂತವಾದವನ್ನು ಒಪ್ಪುವುದರಿಂದ ಉಂಟಾಗುವ ದೋಷವನ್ನು ಮತಾಂತರಗಳ ಸಿದ್ಧಾಂತಾನುಸಾರವಾಗಿ ಇಲ್ಲಿ ತೋರಿಸುವೆನು- (1) ಸಾಂಖ್ಯಶಾಸ್ತ್ರವು ಕೇವಲ ದ್ರವ್ಯವನ್ನು ಒಪ್ಪುವುದು; ಅದರ ಪರ್ಯಾಯಗಳನ್ನು ಒಪ್ಪುವುದಿಲ್ಲ. ಆದುದರಿಂದ ಸಾಂಖ್ಯಸಿದ್ಧಾಂತದ ದೃಷ್ಟಿಯಿಂದ ಈ ನಯದ ಒಂದೇ ಒಂದು ಭಂಗವು ತಥ್ಯವಾಗಿರುವುದು. ಆದರೆ ಪರ್ಯಾಯಗಳೂ ಅನುಭವಸಿದ್ಧವಾಗಿರುವುದರಿಂದ ಹೀಗೆ ಹೇಳುವುದು ಯಥಾರ್ಥವಲ್ಲ. (2) ಪರ್ಯಾಯವೇ ತತ್ತ್ವವಾಗಿರುವುದೆಂದು **ಬೌದ್ಧಮತದ** ಆಶಯ. ಒಂದೊಂದು ಪದಾರ್ಥವೂ ಒಂದೊಂದು ಕ್ಷಣದಲ್ಲಿಯೂ ಬದಲಾಗುತ್ತಿರುವುದರಿಂದ ಕ್ಷಣಿಕ ಪರ್ಯಾಯವೇ ತತ್ತ್ವವಾಗಿದೆ. ಇದರಿಂದ ಭಿನ್ನವಾದ ಒಂದು ಮುಖ್ಯದ್ರವ್ಯವು ಇಲ್ಲವೆಂದು ಅವರ ಮತ. ಈ ಮತದ ದೃಷ್ಟಿಯಿಂದ ದ್ವಿತೀಯಭಂಗವೇ ಸತ್ಯವಾಗಿರುವುದು. ಆದರೆ ಘಟಾದಿಪರ್ಯಾಯಗಳಲ್ಲಿ ಮೃತ್ತಿಕಾರೂಪದ್ರವ್ಯವೂ ಕಟಕಕುಂಡಲಾದಿಗಳಲ್ಲಿ ಸುವರ್ಣದ್ರವ್ಯವೂ ಅನುಭವಸಿದ್ಧವಾಗಿದೆ. ಆದುದರಿಂದ ಸುಗತಮತವೂ ಯಥಾರ್ಥವಾದುದಲ್ಲ. (3) ವಸ್ತುವು ಸರ್ವಥಾ ಅವಕ್ತವ್ಯವಾಗಿ ರುವುದೆಂದು ಕೆಲವರ ಮತವಾಗಿದೆ. ಈ ಪಕ್ಷವೂ ನಿರ್ದೋಷವಾದುದಲ್ಲ; ಏತಕ್ಕೆಂದು ಈತನು ಅವಕ್ತವ್ಯಶಬ್ದದಿಂದ ವಸ್ತುವನ್ನು ಹೇಳುತ್ತಿರುವಾಗ ವಸ್ತುವಿಗೆ ಸರ್ವಥಾ

ಅವಕ್ತವ್ಯತ್ವವು ಎಲ್ಲಿ ಬಂತು? ಒಬ್ಬನು ನಾನು ಸದಾ ಮೌನವಾಗಿರುತ್ತೇನೆಂದು ಹೇಳಿದರೆ ಸ್ವವಚನವಿರೋಧವು ಬರುವುದಿಲ್ಲವೆ? ಸರ್ವದಾ ಮೌನವಾಗಿರುವ ಪಕ್ಷದಲ್ಲಿ ಈತನು 'ನಾನು ಮೌನವಾಗಿರುವೆನು' ಎಂಬ ವಾಕ್ಯವನ್ನು ಹೇಗೆ ಆಡಿದನು? ಆದುದರಿಂದ ಕೇವಲ ತೃತೀಯಭಂಗವನ್ನು ಒಪ್ಪುವುದೂ ಸರಿಯಲ್ಲ. ಉಳಿದ ಮತಗಳಲ್ಲಿಯೂ ಇದೇ ಪ್ರಕಾರವಾದ ಅನಿವಾರ್ಯದೋಷಗಳು ತಪ್ಪದೆ ಬಂದೊದಗುವುವು.

## 4. ಅನೇಕಾಂತವಾದವು ನಿರಾಕ್ಷೇಪವಾದದ್ದು, ಸರ್ವಸಮ್ಮತವಾದದ್ದು[1]

ಅನೇಕಾಂತವಾದದ ಸಂಬಂಧದಲ್ಲಿ ಜೈನೇತರರು ಮಾಡಿರುವ ಕುತರ್ಕಗಳಿಗೆ ಈಗ ನಿವಾರಣೆಯನ್ನು ಬರೆಯುವೆವು. ಅನೇಕಾಂತವಾದವು ಛಲಮಾತ್ರವಾಗಿದೆಯೆಂದು ಕೆಲವರ ಅಭಿಪ್ರಾಯ. ಆದರೆ ಇದರಲ್ಲಿ ಛಲದ ಲಕ್ಷಣವು ಘಟಿಸದಿರುವುದರಿಂದ ಇವರ ಅಭಿಪ್ರಾಯವು ಸದೋಷವಾಗಿರುವುದು. ಏತಕ್ಕೆಂದರೆ ಛಲದಲ್ಲಿ ಒಂದೇ ಶಬ್ದಕ್ಕೆ ಎರಡು ಅರ್ಥಗಳು ತೋರುವುವು. ಹೇಗೆಂದರೆ 'ನವಕಮ್ಬಲೋಽಯಂ ದೇವದತ್ತಃ' (ಈ ದೇವದತ್ತನು ನವಕಂಬಲವುಳ್ಳಾತನು); ಇಲ್ಲಿ ನವಶಬ್ದಕ್ಕೆ ಹೊಸ, ಒಂಬತ್ತು - ಎಂಬ ಎರಡು ಅರ್ಥಗಳಿರುವವು ಅಂದರೆ - ದೇವದತ್ತನ ಹತ್ತಿರ ಹೊಸ ಕಂಬಳಿ ಇದೆ; ಮತ್ತು ದೇವದತ್ತನ ಹತ್ತಿರ ಒಂಬತ್ತು ಕಂಬಳಿಗಳಿರುವುವು - ಹೀಗೆ ಈ ವಾಕ್ಯಕ್ಕೆ ಎರಡು ಬಗೆಯ ಅರ್ಥವಾಗುವದು. ಆದರೆ ಈ ಪ್ರಕಾರವಾದ ಎರಡು ಅರ್ಥವು ಅನೇಕಾಂತವಾದದಲ್ಲಿಲ್ಲ. ಒಂದು ವಸ್ತುವನ್ನು ಒಂದು ದೃಷ್ಟಿಯಿಂದ ನೋಡುವಾಗ ಅದರ ಸಂಭವವನ್ನೂ ಇನ್ನೊಂದು ದೃಷ್ಟಿಯಿಂದ ನೋಡುವಾಗ ಅದರ ಅಸಂಭವವನ್ನೂ ಹೇಳುವದರಿಂದ ಒಂದು ಶಬ್ದಕ್ಕೆ ಎರಡರ್ಥವನ್ನು ಹೇಳಿದ ಹಾಗಾಗಲಿಲ್ಲ. ಹೀಗೆ ಅನೇಕಾಂತದಲ್ಲಿ ಛಲದ ಲಕ್ಷಣವು ಘಟಿಸದಿರುವದರಿಂದ ಇದು ಛಲವಲ್ಲ.

---

1. ಇಲ್ಲಿಯವರೆಗೆ ಬರೆದಿರುವ ವಿಷ್ಯಗಳು ಸುಪ್ರಸಿದ್ಧ ಜೈನೇತರದಾರ್ಶನಿಕರಾದ ಶ್ರೀಯುತ ಕನ್ನೋಮಲ್ ಎಮ್.ಎ., ಸೆಷನ್ ಜಡ್ಜ್, ಧೌಲಪುರ, ಇವರು ಬರೆದಿರುವ ಒಂದು ಹಿಂದಿಲೇಖನದ ಭಾವಾನುವಾದವಾಗಿದೆ.

ಕೆಲವರು ಅನೇಕಾಂತವಾದವನ್ನು ಸಂಶಯದ ಕಾರಣವನ್ನಾಗಿ ಹೇಳುತ್ತಾರೆ. ಇದೂ ಯುಕ್ತಿಯುಕ್ತವಾದ ಮಾತಲ್ಲ. ಸಂಶಯದ ಉತ್ಪತ್ತಿಗೆ ಸಾಮಾನ್ಯಾಂಶದ ಪ್ರತ್ಯಕ್ಷ, ವಿಶೇಷಾಂಶದ ಅಪ್ರತ್ಯಕ್ಷ, ಹಾಗೂ ವಿಶೇಷದ ಸ್ಮೃತಿಯು ಅತ್ಯಾವಶ್ಯಕ. ಹೇಗೆಂದರೆ ಬೆಳಕೂ ಕತ್ತಲೆಯೂ ಸೇರಿರುವ ಸಮಯದಲ್ಲಿ ಮನುಷ್ಯನಂತಿರುವ ಒಂದು ಮೋಟುಮರವನ್ನು ಕಂಡು ಅದರ ವಿಶೇಷಾಂಶವನ್ನು (ಪಕ್ಷಿಯ ಗೂಡು ಅಥವಾ ಮನುಷ್ಯಸಂಬಂಧವಾದ ಕೈ, ಕಾಲು, ಬಟ್ಟೆ, ಜುಟ್ಟು-ಮುಂತಾದವುಗಳನ್ನು) ಕಾಣದೆ, ಮನುಷ್ಯಸಂಬಂಧವಾದ ಉಳಿದ ಅಂಗಗಳನ್ನು ನೆನಪಿಗೆ ತಂದುಕೊಂಡಾಗ ಆ ಮರದಲ್ಲಿ ಮನುಷ್ಯನೆಂಬ ಭ್ರಮೆಯು ಹುಟ್ಟುವುದು. ಆದರೆ - ಈ ಲಕ್ಷಣವು ಅನೇಕಾಂತವಾದದಲ್ಲಿಲ್ಲ. ಏತಕ್ಕೆಂದರೆ ಸ್ವರೂಪ ಪರರೂಪಗಳೆರಡೂ ಪ್ರತ್ಯೇಕವಸ್ತುವಿನಲ್ಲಿ ಸ್ಪಷ್ಟವಾಗಿ ಅನುಭವದಲ್ಲಿ ತೋರಿ ಬರುವವು. ಹೀಗೆ ವಿಶೇಷವು ತೋರಿಬರುವದರಿಂದ ಅನೇಕಾಂತವಾದವು ಸಂಶಯಕ್ಕೆ ಕಾರಣವಲ್ಲ.

**1. ಶಂಕೆ** – ಒಂದೇ ವಸ್ತುವಿನಲ್ಲಿ ಅಸ್ತಿತ್ವ, ನಾಸ್ತಿತ್ವ – ಈ ಧರ್ಮಗಳೆರಡನ್ನೂ ಹೇಳುವುದರಿಂದ ವಿರೋಧಿದೋಷವು ಬರುವುದಲ್ಲ!

**ಉತ್ತರ** – ವಿರೋಧದ ಸಾಧಕವು ಅಭಾವವಾಗಿರುವುದು. ಹೇಗೆಂದರೆ – ಒಂದೇ ವಸ್ತುವಿನಲ್ಲಿ ಘಟತ್ವ, ಪಟತ್ವ – ಇವೆರಡನ್ನೂ ಹೇಳುವುದರಿಂದ ವಿರೋಧವು ಬರುವುದು; ಏತಕ್ಕಂದರೆ ಇವು ಪರಸ್ಪರವಿರುದ್ಧವಸ್ತುಗಳು. ಆದರೆ ದ್ರವ್ಯವನ್ನು ಬಿಟ್ಟು ಕೇವಲ ವಸ್ತುವಿನ ರೂಪವನ್ನು ವಿಚಾರಮಾಡುವಾಗ ಈ ರೂಪಗಳಲ್ಲಿ ವಿರೋಧವು ಬರುವುದಿಲ್ಲ.

**2. ಶಂಕೆ** - ಅಸ್ತಿತ್ವ, ನಾಸ್ತಿತ್ವ- ಈ ಧರ್ಮಗಳನ್ನು ಒಂದೇ ವಸ್ತುವಿನಲ್ಲಿ ಹೇಳುವುದರಿಂದ ಇವುಗಳೆರಡಕ್ಕೂ ಒಂದೇ ಅಧಿಕರಣವು ಸಿದ್ಧವಾಗುವುದು. ಆದರೆ ಇವು ಎರಡೂ ಬೇರೆಬೇರೆಯ ಧರ್ಮಗಳಾಗಿರುವುದರಿಂದ ಇವುಗಳಿಗೆ ಬೇರೆ ಬೇರೆ ಅಧಿಕರಣವನ್ನು ಹೇಳಬೇಕಲ್ಲವೆ?

**ಉತ್ತರ-** ವೃಕ್ಷರೂಪವಾದ ಒಂದೇ ಅಧಿಕರಣದಲ್ಲಿ ಅಲುಗಾಡುವದು, ಅಲುಗಾಡದಿರುವದು - ಇವೆರಡೂ ಧರ್ಮಗಳಿರುವುವು: ಹಾಗೆಯೇ ಒಂದೇ

ವಸ್ತುವಿನಲ್ಲಿ ಕೆಂಪು, ಹಳದಿ, ಕಪ್ಪು ಮುಂತಾದ ಹಲವು ಬಣ್ಣಗಳಿರುವುವು. ಇದರಂತೆ ಒಂದೇ ಅಧಿಕರಣದಲ್ಲಿ ಅಸ್ತಿತ್ವನಾಸ್ತಿತ್ವವೇ ಮುಂತಾದ ಹಲವು ಧರ್ಮಗಳಿರುವುದು ದೋಷವಲ್ಲ.

3. **ಶಂಕೆ** – ಅಪ್ರಮಾಣಿಕಪದಾರ್ಥಗಳ ಪರಂಪರಾಕಲ್ಪನೆಗೆ ನಿಲುಗಡೆಯಿಲ್ಲದಿರುವದೇ ಅನವಸ್ಥಾದೋಷವು. ಅಸ್ತಿತ್ವನಾಸ್ತಿತ್ವಗಳನ್ನು ಒಂದೇ ರೂಪದಿಂದ ಒಪ್ಪದೆ ಸ್ವಪರರೂಪದಿಂದ ಒಪ್ಪುವುದರಿಂದ ಈ ದೋಷವು ಬಂದೊದಗುವದಲ್ಲ!

**ಉತ್ತರ**– ವಸ್ತುವು ಅನೇಕ ಧರ್ಮಸ್ವರೂಪವಾದುದೆಂದು ಈ ಮೊದಲೇ ಸಿದ್ಧವಾಗಿರುವುದು. ಆದುದರಿಂದ ಇಲ್ಲಿ ಅಪ್ರಮಾಣಿಕಪದಾರ್ಥಗಳ ಪರಂಪರಾಕಲ್ಪನೆಯು ಸರ್ವಥಾ ಇರುವದಿಲ್ಲವೆಂಬುದು ಸ್ಪಷ್ಟವಾಗಿರುತ್ತದೆ.

4. **ಶಂಕೆ** – ಒಂದೇ ಕಾಲದಲ್ಲಿ ಒಂದೇ ವಸ್ತುವಿನಲ್ಲಿ ಎಲ್ಲಾ ಧರ್ಮಗಳ ವ್ಯಾಪ್ತಿಯೇ ವ್ಯತಿಕರವೆಂಬ ದೋಷವು. ಅನೇಕಾಂತವಾದದಲ್ಲಿ ಈ ದೋಷವನ್ನು ತಪ್ಪಿಸಿಕೊಳ್ಳುವದಕ್ಕೆ ಆಗುವದೇ ಇಲ್ಲವಲ್ಲ!

**ಉತ್ತರ** – ಅನುಭವಸಿದ್ಧವಾದ ಪದಾರ್ಥವು ಸಿದ್ಧವಾಗುವಾಗ ವಸ್ತುವು ಯಾವ ದೋಷಕ್ಕೂ ಅವಕಾಶವನ್ನು ಕೊಡುವುದಿಲ್ಲ. ವಸ್ತುಸಿದ್ಧಿಯು ಅನುಭವಕ್ಕೆ ವಿರುದ್ಧವಾಗಿರುವುದರಿಂದಲೇ ಈ ದೋಷಗಳು ಬಂದೊದಗುವವು.

5. **ಶಂಕೆ** – ಪರಸ್ಪರವಿಷಯಗಮನಕ್ಕೆ ವ್ಯತಿಕರವೆಂದು ಹೆಸರು. ಹೇಗೆಂದರೆ– ಯಾವ ರೂಪದಲ್ಲಿ ಸತ್ತ್ವವು ಇದೆಯೋ ಅದೇ ರೂಪದಲ್ಲಿ ಅಸತ್ತ್ವವೂ ಇರುವುದು: ಯಾವ ರೂಪದಲ್ಲಿ ಅಸತ್ತ್ವವು ಇರುವುದೋ ಅದೇ ರೂಪದಲ್ಲಿ ಸತ್ತ್ವವೂ ಇರುವುದು; ಆದುದರಿಂದ ವ್ಯತಿಕರದೋಷವು ಬಂತಲ್ಲ!

**ಉತ್ತರ** – ಸ್ವರೂಪದಿಂದ ಸತ್ತ್ವವೂ ಪರರೂಪದಿಂದ ಅಸತ್ತ್ವವೂ ಅನುಭವ ಸಿದ್ಧವಾಗಿರುವುದರಿಂದ ವ್ಯತಿಕರದೋಷಕ್ಕೂ ಅವಕಾಶವಿಲ್ಲ.

6. **ಶಂಕೆ** – ಒಂದೇ ವಸ್ತು ಸತ್ತ್ವ, ಅಸತ್ತ್ವ, ಉಭಯ, ಅನುಭಯ– ಈ

ರೂಪದಿಂದಿರುವುದರಿಂದ ಆ ವಸ್ತುಗಳನ್ನು ತಿಳಿಯುವುದು ಅಶಕ್ಯ. ಆದುದರಿಂದ ಸಂಶಯದೋಷವು ಅನಿವಾರ್ಯವಾಗಿದೆ.

**ಉತ್ತರ** – ಸಂಶಯದೋಷವನ್ನು ಈ ಮೊದಲೇ ದೂರ ಮಾಡಿರುವೆವು.

7. **ಶಂಕೆ** – ಸಂಶಯದಿಂದ ವಸ್ತುವನ್ನರಿಯುವದಕ್ಕಾಗುವದಿಲ್ಲವೆಂಬ ದೋಷವು. ಆದುದರಿಂದ ಅಪ್ರತಿಪತ್ತಿದೋಷವು ಬರುವದಲ್ಲ!

**ಉತ್ತರ** – ಯಾವಾಗ ಸಂಶಯವೇ ಇಲ್ಲವೋ ಆಗ ವಸ್ತುವಿನ ಬೋಧದ ಅಭಾವವು ಹೇಗೆ ಉಂಟಾದೀತು? ಉಂಟಾಗಲಾರದು. ಆದುದರಿಂದ ಅಪ್ರತಿಪತ್ತಿದೋಷವೂ ಇಲ್ಲ.

8. **ಶಂಕೆ** – ಅಪ್ರತಿಪತ್ತಿಯಿಂದ ಸತ್ತ್ವಾಸತ್ತ್ವರೂಪವಾದ ವಸ್ತುವಿನ ಅಭಾವವು ಅನಿವಾರ್ಯವಾಗುವುದು. ಆದುದರಿಂದ ಅಭಾವ ದೋಷ.

**ಉತ್ತರ** – ಯಾವಾಗ ಅಪ್ರತಿಪತ್ತಿದೋಷವೇ ಇಲ್ಲವೋ ಆಗ ಅಭಾವವು ಹೇಗೆ? ಅಪ್ರತಿಪತ್ತಿಯಾಗುವುದರಿಂದಲೇ ಅಲ್ಲವೆ, ಸತ್ತ್ವಾಸತ್ತ್ವರೂಪವಾದ ವಸ್ತುವಿನ ಅಭಾವವಾಗುವುದು?

ಈಗ ಇತರ ಶಾಸ್ತ್ರಗಳ ಮತವೂ ವಾಸ್ತವವಾಗಿ ಅನೇಕಾಂತ ರೂಪವಾಗಿಯೇ ಇದೆ: ಏಕಾಂತರೂಪವಾಗಿಲ್ಲವೆಂಬುದನ್ನು ತೋರಿಸುತ್ತೇವೆ. **ಸಾಂಖ್ಯರು** ಸತ್ತ್ವರಜಸ್ತಮೋಗುಣಗಳ ಸಾಮ್ಯಾವಸ್ಥೆಗೆ ಪ್ರಕೃತಿ ಅಥವಾ ಪ್ರಧಾನವೆಂದೆನ್ನುವರು. ಲಾಘವ, ಶೋಷ, ತಾಪಾದಿ ಭಿನ್ನಭಿನ್ನಸ್ವಭಾವವುಳ್ಳ ಅನೇಕ ಸ್ವರೂಪವನ್ನೊಳಗೊಂಡ ಪದಾರ್ಥದ ಒಂದು ಪ್ರಧಾನಸ್ವರೂಪವನ್ನು ಸ್ವೀಕಾರಾಮಾಡಿರುವುದರಿಂದಲೇ ಏಕಾನೇಕಸ್ವರೂಪವುಳ್ಳ ಪದಾರ್ಥವನ್ನು ಅವರು ಒಪ್ಪಿದ ಹಾಗಾಯಿತು. ಪ್ರಧಾನರೂಪಪದಾರ್ಥವು ಒಂದೇ ಆಗಿದ್ದರೂ ಅದರ ಸ್ವರೂಪವು ಅನೇಕವಾಗಿದೆ, ಗುಣತ್ರಯಗಳ ಸಮೂಹಕ್ಕೇ ಪ್ರಧಾನವೆಂದು ಹೆಸರಿಟ್ಟರೂ ಒಂದು ವಸ್ತುವೇ ಅನೇಕಾತ್ಮಕವೆಂದು ಅವರು ಒಪ್ಪಲೇ ಬೇಕಾಗುವುದು. **ನೈಯಾಯಿಕರು** ದ್ರವ್ಯಾದಿಪದಾರ್ಥಗಳನ್ನು ಸಾಮಾನ್ಯವಿಶೇಷಾತ್ಮಕವಾಗಿ ಸ್ವೀಕಾರಮಾಡುತ್ತಾರೆ. ಅನೇಕದಲ್ಲಿ ಏಕದ ವ್ಯಾಪಕತ್ವವು ಸಾಮಾನ್ಯವು, ಅನ್ಯಪದಾರ್ಥಗಳಿಂದ ಏಕದ ಬೇರ್ಪಡಿಸೋಣವು

ವಿಶೇಷವು. ಹೇಗೆಂದರೆ ಗುಣವು ದ್ರವ್ಯವಲ್ಲ; ಕರ್ಮವೂ ದ್ರವ್ಯವಲ್ಲ. ಇವರು ಒಂದೇ ವಸ್ತುವಿನಲ್ಲಿ ಸಾಮಾನ್ಯವಿಶೇಷಗುಣಗಳನ್ನು ಒಪ್ಪಿರುತ್ತಾರೆ. ಬೌದ್ಧರು ಮೇಚಕಮಣಿಯ ಜ್ಞಾನವನ್ನು ಏಕಾನೇಕಾಂತವಾಗಿ ತಾವೇ ಒಪ್ಪುತ್ತಾರೆ. ಪಂಚವರ್ಣದ ಮಣಿಗೆ ಮೇಚಕಮಣಿಯೆಂದು ಹೆಸರು. ಇದರ ಜ್ಞಾನವು ಏಕಪ್ರತಿಭಾಸರೂಪವಾಗಿಲ್ಲ, ಏಕಜ್ಞಾನವೂ ಅಲ್ಲ, ಅನೇಕಜ್ಞಾನವೂ ಅಲ್ಲ, ಪರಂತು ಒಂದು ಪದಾರ್ಥದಲ್ಲಿ ನಾನಾಧರ್ಮಗಳಿವೆ; ಇದರಲ್ಲಿ ಅನೇಕಾಂತ ಮತ್ತು ಏಕಾಂತಮಿಶ್ರಿತವಾದ ಜ್ಞಾನವು ಉಂಟಾಗುವುದು. ಹೇಗ ಕೋದ್ರವಾದಿಗಳಿಂದ ಮಾದಕಶಕ್ತಿಯು ವ್ಯಕ್ತವಾಗುವುದೋ ಅದರಂತೆ ಪೃಥ್ವೀಜಲತೇಜೋ ವಾಯುಗಳೆಂಬ ತತ್ತ್ವಚತುಷ್ಟಯದಿಂದ ಚೈತನ್ಯವು ವ್ಯಕ್ತವಾಗುವುವೆಂದು **ಚಾರ್ವಾಕರ** ಸಿದ್ಧಾಂತವು. ಪೃಥ್ವೀಜಲಾದಿಗಳು ಅನೇಕ ಸ್ವರೂಪಗಳಾಗಿದ್ದರೂ ಚೈತನ್ಯವು ಏಕವೇ ಆಗಿರುವುದೆಂದು ಇವರ ಮತ. ಆದುದರಿಂದ ಇದರ ತತ್ತ್ವವೂ ಏಕಾನೇಕವಾಗಿಯೇ ಇರುವುದೆಂದು ಸಿದ್ಧವಾಗುವುದು. **ಮೀಮಾಂಸಕರ** ಮತದಲ್ಲಿ ಪ್ರಮಾತೃಪ್ರಮಿತಿಪ್ರಮೇಯಾಕಾರಿಗಳ ಒಂದು ಜ್ಞಾನವಾಗುವುದು. ಹೇಗೆಂದರೆ 'ಘಟವನ್ನು ನಾನು ತಿಳಿಯುತ್ತೇನೆ' ಈ ಉದಾಹರಣೆಯಲ್ಲಿ ಅನೇಕ ಪದಾರ್ಥಗಳನ್ನು ವಿಷಯಮಾಡತಕ್ಕ ಒಂದೇ ಜ್ಞಾನವನ್ನು ಅವರು ತಾವೇ ಸ್ವೀಕಾರಮಾಡಿರುವರು ಆದುದರಿಂದ ಇದೂ ಅನೇಕಾಂತರೂಪವೇ ಆಗಿದೆ.

★★★★★

# ಜೈನರ ಭಕ್ತಿಯೋಗ

**– ಕೆ. ಭುಜಬಲಿಶಾಸ್ತ್ರಿಗಳು, ನ್ಯಾಯಭೂಷಣಾಚಾರ್ಯ, ಆರಾ**

ಜೈನಧರ್ಮಾನುಸಾರವಾಗಿ ಎಲ್ಲಾ ಜೀವಗಳೂ ದ್ರವ್ಯದೃಷ್ಟಿಯಿಂದ ಪರಸ್ಪರಸಮಾನವಾಗಿರುವುವು. ಇವುಗಳಲ್ಲಿ ಯಾವ ಭೇದವೂ ಇಲ್ಲ, ಎಲ್ಲವುಗಳ ವಾಸ್ತವಿಕಸ್ವಭಾವವು ಒಂದೇ ಆಗಿದೆ.

ಪ್ರತಿಯೊಂದು ಜೀವವೂ ಸ್ವಭಾವದಿಂದಲೇ ಪೂರ್ಣಜ್ಞಾನ, ಪೂರ್ಣ ದರ್ಶನ, ಪೂರ್ಣಬಲ, ಪೂರ್ಣಸುಖ – ಮೊದಲಾದ ಅನಂತಶಕ್ತಿಗಳ ಪಿಂಡವು;

ಆದರೆ ಅನಾದಿಕಾಲದಿಂದ ಜೀವಗಳೊಡನೆ ಕರ್ಮಮಲವು ಅಂಟಿಕೊಂಡಿದೆ. ಈ ಕರ್ಮಮಲದಿಂದಲೇ ಜೀವಗಳ ನಿಜಸ್ವಭಾವವು ಆಚ್ಛಾದಿಸಲ್ಪಟ್ಟು ಇವುಗಳ ಪೂರ್ವೋಕ್ತಶಕ್ತಿಗಳು ಪ್ರಕಟವಾಗದೆ ಪರತಂತ್ರಕ್ಕೊಳಗಾದ ಇವು ನಾನಾ ಪ್ರಕಾರವಾದ ಪರ್ಯಾಯ ಅವಸ್ಥೆಗಳನ್ನು ಧರಿಸುತ್ತಿರುವುವು. ಕರ್ಮದ ಪ್ರಭಾವದಿಂದಲೇ ಪ್ರಾಣಿವರ್ಗವು ಸಂಸಾರದಲ್ಲಿ ಅನೇಕ ಅವಸ್ಥೆಗಳನ್ನು ಹೊಂದುತ್ತಿವೆ. ಕರ್ಮದ ಭೇದದಿಂದಲೇ ಈ ಸಂಪೂರ್ಣ ಜೀವಲೋಕವು ಭೇದರೂಪವಾಗಿದೆ. ಜೀವದ ಈ ಅವಸ್ಥೆಗೆ **ವಿಭಾವಪರಿಣತಿ**ಯೆಂದು ಹೆಸರು.

ಎಷ್ಟರವರೆಗೆ ಯಾವುದೊಂದು ಜೀವದ ಈ ವಿಭಾವಪರಿಣತಿಯು ನಷ್ಟವಾಗುವದಿಲ್ಲವೋ ಅಷ್ಟರವರೆಗೆ ಆ ಜೀವವು ಸಂಸಾರಿಯೆಂದು ಕರೆಯಲ್ಪಡುತ್ತದೆ. ವಿಭಾವಪರಿಣತಿಯು ಇರುವವರೆಗೆ ಜೀವಕ್ಕೆ ಸಂಸಾರದಲ್ಲಿ ಕರ್ಮಾನುಸಾರವಾಗಿ ನಾನಾವಿಧವಾದ ರೂಪವನ್ನು ಧರಿಸಿ ತೊಳಲುತ್ತಾ ದುಃಖವನ್ನನುಭವಿಸಬೇಕಾಗುವುದು. ಯೋಗ್ಯಸಾಮಗ್ರಿಗಳ ಸಾಮರ್ಥ್ಯದಿಂದ ಈ ವಿಭಾವ ಪರಿಣತಿಯು ನಷ್ಟವಾಗುವುದುಂಟು. ಆಗ ಜೀವವು ಕರ್ಮದ ಬೇಡಿಯಿಂದ ಬಿಡುಗಡೆಯನ್ನು ಹೊಂದಿ ನಿಜಸ್ವಭಾವವನ್ನು ಪೂರ್ಣವಾಗಿ ಪಡೆದು ಸಂಸಾರಭ್ರಮಣದಿಂದ ಮುಕ್ತವಾಗಿ ''ಮುಕ್ತಿ''ಯನ್ನು ಪಡೆಯುವುದು.

ಜೀವವು ಮುಕ್ತಾವಸ್ಥೆಯಲ್ಲಿ ಮುಕ್ತ, ಸಿದ್ಧ, ಪರಮಾತ್ಮ, ಪರಮೇಶ್ವರ- ಮೊದಲಾದ ಹೆಸರುಗಳಿಂದ ಸಂಬೋಧಿಸಲ್ಪಡುವುದು. ಹೀಗೆ ಪರ್ಯಾಯ ದೃಷ್ಟಿಯಿಂದ ಸಂಸಾರಿಜೀವಗಳೆಂದೂ ಮುಕ್ತಜೀವಗಳೆಂದೂ ಜೀವಗಳಲ್ಲಿ ಎರಡು ಮುಖ್ಯಭೇದಗಳು. ಅವಿಕಸಿತ, ಅಲ್ಪವಿಕಸಿತ, ಬಹುವಿಕಸಿತ ಮತ್ತು ಪೂರ್ಣವಿಕಸಿತ – ಹೀಗೆ ಅವುಗಳನ್ನು ನಾಲ್ಕು ತರಗತಿಗಳಾಗಿ ವಿಭಾಗಿಸಬಹುದು. ಆತ್ಮಗುಣಗಳ ವಿಕಾಸವು ಎಲ್ಲರಿಗೂ ಅಧೀಷ್ಟವಾಗಿರುವುದರಿಂದ ಅವಿಕಸಿತ ಅಥವಾ ಅಲ್ಪವಿಕಸಿತ ಜೀವಗಳಿಗೆ ಅಧಿಕಾಧಿಕವಿಕಸಿತಜೀವಗಳು ಸ್ವಭಾವದಿಂದಲೆ ಪೂಜ್ಯವೂ ಆರಾಧ್ಯವೂ ಆಗಿದೆ.

ಆದುದರಿಂದ ಹಿತವನ್ನು ಕೋರುವ ಪ್ರತಿಯೊಂದು ಸಂಸಾರಿಜೀವವೂ ತನ್ನ ವಿಭಾವಪರಿಣತಿಯನ್ನು ಬಿಟ್ಟು ಸ್ವಭಾವಪರಿಣತಿರೂಪವಾದ ಮುಕ್ತಿಗೋಸ್ಕರ ಪ್ರಯತ್ನಮಾಡಬೇಕು. ಇದಕ್ಕೋಸ್ಕರ ಆತ್ಮಗುಣಗಳ ಪರಿಚಯವೂ ಆ

ಗುಣಗಳಲ್ಲಿ ಹೆಚ್ಚು ಹೆಚ್ಚಾಗಿ ಬೆಳೆಯುತ್ತಿರುವ ಅನುರಾಗವೂ ವಿಕಾಸಮಾರ್ಗದಲ್ಲಿ ದೃಢನಂಬಿಕೆಯೂ ಅವಶ್ಯಕ. ಅನುರಾಗದ ಹೊರತು ಯಾವುದೊಂದು ಗುಣವೂ ಪ್ರಾಪ್ತವಾಗಲಾರದು. ಅನನುರಾಗಿಯು ಅಥವಾ ಅಭಕ್ತನು ಗುಣಗ್ರಹಣಕ್ಕೆ ಪಾತ್ರನೇ ಅಲ್ಲ. ಪರಿಚಯದ ಹೊರತು ಅನುರಾಗವು ವೃದ್ಧಿಯಾಗಲಾರದು. ಹಾಗೆಯೇ ವಿಕಾಸಮಾರ್ಗದಲ್ಲಿ ದೃಢನಂಬಿಕೆಯು ಇಲ್ಲದೆ ಹೋದರೆ ಗುಣಗಳ ವಿಕಾಸವು ಹಾಗೂ ಯಥೇಷ್ಟಪ್ರವೃತ್ತಿಯು ಉಂಟಾಗಲಾರದು. ಅದುದರಿಂದ ಸ್ವಕಲ್ಯಾಣಾಪೇಕ್ಷಿಗಳು ಪೂಜ್ಯರಾದ ಆ ಮುಕ್ತಾತ್ಮರ ಶರಣವನ್ನು ಹೊಂದಬೇಕು. ಆ ಮಹಾಪುರುಷರ ಉಪಾಸನೆಯನ್ನು ಮಾಡಬೇಕು; ಅವರ ಗುಣಗಳಲ್ಲಿ ಅನುರಾಗವನ್ನು ವೃದ್ಧಿಮಾಡಬೇಕು, ಅವರನ್ನು ಮಾರ್ಗದರ್ಶಕರನ್ನಾಗಿ ಟ್ಟುಕೊಂಡು ಅವರ ಹಿತಶಿಕ್ಷೆಗಳನ್ನು ಪ್ರೀತಿಯಿಂದ ಗ್ರಹಣಮಾಡಿ ಅವರು ತೋರಿಸಿಕೊಡುವ ಮಾರ್ಗದಲ್ಲಿ ನಡೆಯಬೇಕು.

ಆ ಹಿತಶಿಕ್ಷೆಗಳಿಂದಲೇ ಆತ್ಮಗುಣಗಳ ವಿಕಾಸವು ಅಧಿಕಾಧಿಕರೂಪದಲ್ಲಿ ಅಥವಾ ಪೂರ್ಣರೂಪದಲ್ಲಿ ವಿಕಾಸವನ್ನು ಹೊಂದುವವು. ಇದೇ ಪ್ರತಿಯೊಂದು ಜೀವಕ್ಕೆ ಆತ್ಮಕಲ್ಯಾಣದ ಸರಲಮಾರ್ಗವು. ನಿಜವಾಗಿ ಅಂತಹ ಮಹಾತ್ಮರ ವಿಕಸಿತ ಆತ್ಮಸ್ವರೂಪದ ಭಜನಕೀರ್ತನಾದಿಗಳೇ ಸಂಸಾರಿಗಳಾದ ನಮಗೆ ನಮ್ಮ ಆತ್ಮಗಳ ಅನುಭವ ಮತ್ತು ಮನನ. ನಾವು ''**ಸೋಽಹಮ್**'' (ಅವನೇ ನಾನು) ಎಂಬ ಭಾವನೆಯ ಮೂಲಕವಾಗಿ ಅವರನ್ನು ನಮ್ಮ ಜೀವನದಲ್ಲಿ ಕಾಣಬಲ್ಲೆವು; ಅವರ ಆದರ್ಶವನ್ನು ಮುಂದಿಟ್ಟು ನಮ್ಮ ಚಾರಿತ್ರ್ಯವನ್ನು ದೃಢಮಾಡಬಲ್ಲೆವು; ಆತ್ಮೀಯ ಗುಣಗಳ ವಿಕಾಸವನ್ನು ಸಿದ್ಧಮಾಡಿ ನಾವು ತದ್ರೂಪವಾಗಬಲ್ಲೆವು. ಈ ಎಲ್ಲಾ ಅನುಷ್ಠಾನಗಳು ಆ ಮಹಾಪುರುಷರನ್ನು ಸಂತೋಷಪಡಿಸುವು ದಕ್ಕೋಸ್ಕರವಲ್ಲ. ಈ ಅನುಷ್ಠಾನಗಳಿಂದ ಅವರಿಗೆ ಯಾವುದೊಂದೂ ಲಾಭವಿಲ್ಲ. ಇವು ನಮ್ಮ ಉನ್ನತಿಗೋಸ್ಕರವೇ ಆಚರಿಸಲ್ಪಡುವುವು. ಅದುದರಿಂದಲೇ ಮುಕ್ತಿಸಿದ್ಧಿಯ ಸಾಧನಗಳಲ್ಲಿ ''**ಭಕ್ತಿಯೋಗ**''ವು ಒಂದು ಪ್ರಧಾನಸಾಧನವಾಗಿದೆ. ಇದನ್ನು ''**ಭಕ್ತಿಮಾರ್ಗ**''ವೆಂದೂ ಕರೆಯುತ್ತಾರೆ.

ಆತ್ಮೋತ್ಕರ್ಷಕ್ಕಾಗಿ ಸಿದ್ಧಿಯನ್ನು ಪಡೆದ ಶುದ್ಧಾತ್ಮರನ್ನು ಭಕ್ತಿಯ ಮೂಲಕವಾಗಿ ಆರಾಧಿಸುವುದೇ ಭಕ್ತಿಯೋಗ. ಗುಣಗಳಲ್ಲಿ ಅನುರಾಗವನ್ನಿಡು ವುದು, ತದನುಕೂಲವಾಗಿ ವರ್ತಿಸುವುದು ಅಥವಾ ಗುಣಾನುರಾಗಪೂರ್ವಕವಾಗಿ

ಮಾಡಲ್ಪಡುವ ಆದರ ಸತ್ಕಾರವು ಭಕ್ತಿಯೆಂದು ಕರೆಯಲ್ಪಡುತ್ತದೆ. ಸ್ತುತಿ, ಪ್ರಾರ್ಥನೆ, ವಂದನೆ, ಉಪಾಸನೆ, ಪೂಜೆ, ಸೇವೆ, ಶ್ರದ್ಧೆ, ಆರಾಧನೆ - ಮೊದಲಾದುವುಗಳೆಲ್ಲಾ ಭಕ್ತಿಯ ರೂಪಗಳು ಅಥವಾ ನಾಮಾಂತರಗಳು.

ಸದ್ಭಕ್ತಿಯಿಂದ ಅಹಂಕಾರಾದಿದೋಷಗಳು ನಷ್ಟವಾಗಿ ಗುಣಾನುರಾಗವು ಹೆಚ್ಚುವದರಿಂದ ಶುಭಪರಿಣಾಮವು ದೊರಕುವದು. ಪರಿಣಾಮಗಳ ಶುದ್ಧಿಯಿಂದ ಸಂಚಿತಕ ಕರ್ಮವು ನಷ್ಟವಾಗುತ್ತದೆ. ಸಂಚಿತಕರ್ಮಗಳ ನಾಶದಿಂದಲೇ ಗುಣಾನುರೋಧಕರ್ಮಗಳ ಬಲವು ಕುಂದಿ ಅಭೀಷ್ಟಗುಣಗಳು ತಲೆದೋರುವವು. ಇದರಿಂದಲೂ ಆತ್ಮವಿಕಾಸವನ್ನು ಸಾಧಿಸಬಹುದಾಗಿರುತ್ತದೆ. ಆದುದರಿಂದಲೇ ದೊಡ್ಡ ದೊಡ್ಡ ಮಹರ್ಷಿಗಳು ಪರಮಾತ್ಮನ ಸ್ತುತಿರೂಪದಲ್ಲಿ ಪ್ರಯೋಗಿಸಲ್ಪಟ್ಟ ಈ ಭಕ್ತಿಯನ್ನು ಶುಭಪರಿಣಾಮಕ್ಕೆ ಕಾರಣವನ್ನಾಗಿ ತಿಳಿಸಿ ಇದರಿಂದ ಮೋಕ್ಷಮಾರ್ಗವು ಸುಲಭವಾಗಿ ಸ್ವಾಧೀನವಾಗುವುದೆಂದು ಅಪ್ಪಣೆ ಕೊಡಿಸಿರುತ್ತಾರೆ.

★★★★★

# ಜೈನರ ದೇವರಪೂಜೆ

**- ಕೆ. ಭುಜಬಲಿಶಾಸ್ತ್ರಿಗಳು, ನ್ಯಾಯಭೂಷಣಾಚಾರ್ಯ ಆರಾ**

ದೇವರ ಪೂಜೆ, ಗುರುಸೇವೆ, ಸ್ವಾಧ್ಯಾಯ (ಶಾಸ್ತ್ರಾಧ್ಯಯನ), ಸಂಯಮ (ಇಂದ್ರಿಯನಿಗ್ರಯ ಮತ್ತು ಪ್ರಾಣಿರಕ್ಷಣ), ತಪಸ್ಸು (ಸಾಮಯಿ ಕಾದಿ), ದಾನ- ಇವು ಆರು ಜೈನರ ದೈನಿಕ ಷಟ್‌ಕರ್ಮಗಳು. ಇವು ಆವಶ್ಯಕಕ್ರಿಯೆಗಳೆಂದೂ ಕರೆಯಲ್ಪಡುವುವು. ಪ್ರತಿಯೊಬ್ಬ ಜೈನಗೃಹಸ್ಥನು ಒಂದೊಂದು ದಿನವೂ ಈ ಆರು ಧಾರ್ಮಿಕಕರ್ಮಗಳನ್ನು ಆಚರಿಸಲೇಬೇಕೆಂದು ಜೈನಾಗಮದಕಟ್ಟಪ್ಪಣೆ. ಈ ಷಟ್‌ಕರ್ಮಗಳಲ್ಲಿ ಒಂದಾದ ದೇವರಪೂಜೆಯ ಸಂಬಂಧದಲ್ಲಿ ಸಂಕ್ಷೇಪವಾಗಿ ವಿಚಾರಮಾಡುವುದೇ ಈ ಲೇಖದ ಉದ್ದೇಶ. ಮೇಲೆ ಹೇಳಿದ ಅವಶ್ಯಕಕ್ರಿಯೆಗಳಲ್ಲಿ ದೇವಪೂಜೆಗೆ ಪ್ರಥಮಸ್ಥಾನವು ದೊರೆತಿದೆ. ಹೀಗೆ ಅದಕ್ಕೆ ಈ ಅಗ್ರಸ್ಥಾನವು ದೊರೆತಿರುವುದು ಸ್ವಾಭಾವಿಕ.

ಜೈನರು "ಇದು ರಾಗದ್ವೇಷಮದಮಾತ್ಸರ್ಯಾದಿದೋಷ ರಹಿತನೂ ದುಷ್ಟರಲ್ಲಿಯೂ ಶಿಷ್ಯರಲ್ಲಿಯೂ ಸಮಭಾವವುಳ್ಳವನೂ ಶತ್ರುಮಿತ್ರಭಾವವಿಲ್ಲದಿರುವವನೂ ಅಸ್ತ್ರಶಸ್ತ್ರಾದಿಗಳನ್ನು ಧರಿಸದಿರುವವನೂ ಅಲಂಕಾರಾರ್ಥವಾಗಿ ಆಭರಣಗಳನ್ನು ಧರಿಸದಿರುವವನೂ ಅನಂತವಾದ ಜ್ಞಾನದರ್ಶನಸ್ವರೂಪನೂ ಪತ್ನೀಪುತ್ರಾದಿ ವ್ಯಾಮೋಹರಹಿತನೂ ನಾಶರಹಿತನೂ ಆನಂದಮಯನೂ ಲೋಕವ್ಯವಹಾರದ ಜಂಜಾಟದಲ್ಲಿ ಬೀಳದಿರುವವನೂ ವಿಕಾರರಹಿತನೂ ಆದ ಪರಿಶುದ್ಧ ಪರಮಾತ್ಮನ (ದೇವರ) ಪ್ರತಿಕೃತಿಯು" ಎಂದು ಭಾವಿಸಿ ಭಕ್ತಿಯಿಂದ ಉತ್ತಮವಾದ ಜಲ, ಚಂದನ – ಮೊದಲಾದ ಎಂಟು ವಸ್ತುಗಳಿಂದ ಭಗವಂತನನ್ನು ಪೂಜಿಸುತ್ತಾರೆ.

ಜೈನಸಿದ್ಧಾಂತಾನುಸಾರವಾಗಿ ಸಂಪೂರ್ಣಮುಕ್ತಾತ್ಮರೂ ಪ್ರತಿಯೊಂದು ಕಾಲದಲ್ಲಿ ಧರ್ಮೋದ್ಧಾರಕ್ಕಾಗಿಯೇ ಅವತರಿಸುವ ಇಪ್ಪತ್ತನಾಲ್ಕು **ತೀರ್ಥಂಕರರೂ** ದೇವರೆಂದು ಕರೆಯಲ್ಪಡುವರು. ಜೈನದೇವಸ್ಥಾನಗಳಲ್ಲಿ ಮುಖ್ಯವಾಗಿ ತೀರ್ಥಂಕರ ಮೂರ್ತಿಗಳೇ ಪ್ರತಿಷ್ಠಿಸಲ್ಪಡುವುವು. ಮನುಷ್ಯರೂಪದಲ್ಲಿ ಪೃಥ್ವಿಯಲ್ಲಿ ಅವತರಿಸಿ ತಪಸ್ಸೇ ಮೊದಲಾದವುಗಳ ಪ್ರಭಾವದಿಂದ ಕರ್ಮಬಂಧನವನ್ನು ನಷ್ಟಮಾಡಿ ಮುಕ್ತಿಯನ್ನು ಪಡೆದ ಪವಿತ್ರಾತ್ಮರೇ ತೀರ್ಥಂಕರರು. ಸರ್ವಜ್ಞತ್ವಾದಿವಿಶಿಷ್ಟ ಗುಣಗಳನ್ನು ಪಡೆದು ಪ್ರಾಣಿಮಾತ್ರಕ್ಕೆ ಮೋಕ್ಷಮಾರ್ಗದ ಉಪಾಯವನ್ನು ಬೋಧಿಸಿರುವದರಿಂದಲೇ ಇವರು ತೀರ್ಥಂಕರರೆಂದು ಕರೆಯಲ್ಪಟ್ಟರು. ಮೇಲೆ ಹೇಳಿದ ಕಾರಣದಿಂದ ಪ್ರತ್ಯೇಕ ಜೈನಶ್ರಾವಕ ಅಥವಾ ಗೃಹಸ್ಥನಿಗೆ ತೀರ್ಥರಿಕರರು ಆದರ್ಶರೂಪರು. ಅವರ ಮಾರ್ಗವನನ್ನುಸರಿಸಿ ಅವರ ಆಚರಣೆಯನ್ನು ಮುಂದಿಟ್ಟುಕೊಂಡು ಅವರಂತೆ ಮುಕ್ತಿಪ್ರಾಪ್ತಿಗೋಸ್ಕರ ಪ್ರಯತ್ನಿಸುವುದು. ಪ್ರತ್ಯೇಕ ಜೈನಮತಾನುಯಾಯಿಯ ಲಕ್ಷ್ಯವಾಗಿದೆ. ಜೈನಗೃಹಸ್ಥನ ಜೀವನದ ಲಕ್ಷ್ಯವು ಮುಕ್ತಿಯನ್ನು ಬಿಟ್ಟು ಬೇರೊಂದಿಲ್ಲ. ಮುಕ್ತಿಪ್ರಾಪ್ತಿಯೇ ಈ ಜಿನ(ದೇವ)ಪೂಜೆಯ ಪ್ರಧಾನ ಮತ್ತು ಏಕಮಾತ್ರ ಉದ್ದೇಶವಾಗಿದೆ.

ಪೂಜೆಯ ಸಮಯದಲ್ಲಿ ಜೈನರು ಪುತ್ರಪೌತ್ರ ಧನಧಾನ್ಯ ಸ್ವರ್ಗವೈಭವ ಮೊದಲಾದ ನಶ್ವರವಸ್ತುಗಳ ಕಾಮನವನ್ನು ಮಾಡುವುದಿಲ್ಲ. ಮುಕ್ತಿ ಪ್ರಾಪ್ತಿಯೇ ಪ್ರತ್ಯೇಕ ಜೈನಿಯ, ಮುಖ್ಯಲಕ್ಷ್ಯವಾಗಿರುವುದರಿಂದ ಈ ನಿತ್ಯಪೂಜೆಯ ಸಮಯದಲ್ಲಿಯೂ ಅವನು ಮುಕ್ತಿಪ್ರಾಪ್ತಿಗೆ

ಅನುಕೂಲವಾದ ವಿಷಯಗಳನ್ನೇ ಇಚ್ಛಿಸುತ್ತಾನೆ. ಈ ಅಭಿಪ್ರಾಯವು ಈ ಕೆಳಗೆ ಕೊಟ್ಟಿರುವ ಮಂತ್ರಗಳಿಂದ ಸ್ವಯಂವ್ಯಕ್ತವಾಗುವುದು:

(1) ಜನ್ಮಮೃತ್ಯುವಿನಾಶಯ ಜಲಂ ನಿರ್ವಪಾಮಿ ಸ್ವಾಹಾ
(2) ಸಂಸಾರತಾಪವಿನಾಶನಾಯ ಚಂದನಂ ನಿರ್ವಪಾಮಿ ಸ್ವಾಹಾ
(3) ಅಕ್ಷಯಪದಪ್ರಾಪ್ತಯೇ ಅಕ್ಷತಾನ್ ನಿರ್ವಪಾಮಿ ಸ್ವಾಹಾ
(4) ಕಾಮಬಾಣವಿಧ್ವಂಸನಾಯ ಪುಷ್ಪಂ ನಿರ್ವಪಾಮಿ ಸ್ವಾಹಾ
(5) ಕ್ಷುಧಾರೋಗವಿನಾಶನಾಯ ನೈವೇದ್ಯಂ ನಿರ್ವಪಾಮಿ ಸ್ವಾಹಾ
(6) ಮೋಹಾಂಧಕಾರ ವಿನಾಶನಾಯ ದೀಪಂ ನಿರ್ವಪಾಮಿ ಸ್ವಾಹಾ
(7) ಅಷ್ಟಕರ್ಮದಹನಾಯ ಧೂಪಂ ನಿರ್ವಪಾಮಿ ಸ್ವಾಹಾ
(8) ಅನರ್ಘ್ಯಪದಪ್ರಾಪ್ತಯೇ ಅರ್ಘ್ಯಂ ನಿರ್ವಹಾಮಿ ಸ್ವಾಹಾ

ಪ್ರಾರಂಭದಿಂದಲೇ ಸ್ವಜೀವನವನ್ನು ತನ್ನ ಚರಮಲಕ್ಷ್ಯದ ಕಡೆಗೆ ದೃಷ್ಟಿಯನ್ನಿಟ್ಟು ಕಳೆಯುವುದು ಉತ್ತಮವೆಂದು ಯಾವನು ತಾನೆ ಒಪ್ಪಲಾರನು? ಜೈನರ ಪ್ರತಿಯೊಂದು ಧರ್ಮಾನುಷ್ಠಾನದಲ್ಲಿಯೂ ಕೊನೆಯ ಲಕ್ಷ್ಯದ ಸ್ಮೃತಿಯು ಇದ್ದೇ ಇರಬೇಕು. ಇಂತಹ ಆದರ್ಶವನ್ನು ನಾವು ಎಲ್ಲರ ಮುಂದಿಡುವುದರಿಂದ ಅವರ ಚರಮಲಕ್ಷ್ಯವು ಸದಾ ಜಾಗರೂಕವಾಗಿರುವುದು.

ಒಂದು ಮಾತು. ದೇವಪೂಜೆಗೆ ದೇವರಮೂರ್ತಿಯು ಮುಂದುಗಡೆ ಇರಲೇಬೇಕೆಂಬ ನಿಯಮವಿಲ್ಲ. ಅಂದರೆ ದೇವಮೂರ್ತಿಯ ಅನುಪಸ್ಥಿತಿಯಲ್ಲಿಯೂ ಸಹ ದೇವಪೂಜೆಯನ್ನು ಮಾಡಬಹುದು. ದೇವಪೂಜೆಯ ಕೊನೆಯಲ್ಲಿ ಮಾಡಲ್ಪಡುವ ಶಾಂತಿಪಾಠವೂ ಜೈನಪೂಜೆಯ ಉದಾರತೆಯನ್ನು ಪ್ರಕಟಮಾಡುವುದು. ಪಾಠಕರ ಅವಲೋಕನಾರ್ಥವಾಗಿ ಅದರಿಂದ ಕೇವಲ ಒಂದೇ ಒಂದು ಪದ್ಯವು ಉದ್ಧೃತಮಾಡಲ್ಪಡುತ್ತದೆ:

**ಕ್ಷೇಮಂ ಸರ್ವಪ್ರಜಾನಾಂ ಪ್ರಭವತು ಬಲವಾನ್ ಧಾರ್ಮಿಕೋ ಭೂಮಿಪಾಲಃ ।**
**ಕಾಲೇ ಕಾಲೇ ಚ ಸಮ್ಯಗ್ ವರ್ಷತು ಮಘವಾ ವ್ಯಾಧಯೋ ಯಾನ್ತು ನಾಶಮ್ ॥**
**ದುರ್ಭಿಕ್ಷಂ ಚೌರಮಾರೀ ಕ್ಷಣಮಪಿ ಜಗತಾಂ ಮಾಸ್ಮಭೂಜ್ಜೀವಲೋಕೇ ।**
**ಜೈನೇನ್ದ್ರಂ ಧರ್ಮಚಕ್ರಂ ಪ್ರಭವತು ಸತತಂ ಸರ್ವಸೌಖ್ಯಪ್ರದಾಯಿ ॥''**

ಸರ್ವಪ್ರಜೆಗಳಿಗೂ ಕ್ಷೇಮವಾಗಲಿ: ಅರಸನು ಬಲಿಷ್ಠನೂ ಧಾರ್ಮಿಕನೂ ಆಗಿರಲಿ; ಮಘವಂತನು ಕಾಲಕಾಲಕ್ಕೆ ಮಳೆಗರೆಯಲಿ; ರೋಗಗಳು ನಾಶವಾಗಲಿ: ಕ್ಷಾಮ, ಕಳ್ಳರು, ಮಾರಿಕಾ – ಇವುಗಳು ಜೀವರಿಗೆ ಕ್ಷಣವೂ ಆಗದಿರಲಿ: ಜೈನೇಂದ್ರ ಧರ್ಮಚಕ್ರವು ಸರ್ವರಿಗೂ ಸೌಖ್ಯವನ್ನು ಕೊಡುವದಾಗಲಿ.

★★★★★

# ಗುರುಶಿಷ್ಯಸಂವಾದ

### ಶ್ರೀ ಕೆ. ಭುಜಬಲಿಶಾಸ್ತ್ರಿಗಳು, ನ್ಯಾಯಭೂಷಣಚಾರ್ಯ, ಆರಾ

ಶಿಷ್ಯ : ಮನುಷ್ಯನ ಲಕ್ಷ್ಯ ಯಾವುದು?

ಗುರು : ಆತ್ಮೋಪಲಬ್ಧಿ ಅಥವಾ ಮುಕ್ತಿ.

ಶಿಷ್ಯ : ಧರ್ಮ ಯಾವುದು?

ಗುರು : ಕ್ಷಮಾ, ಮಾರ್ದವ, ಆರ್ಜವ, ಸತ್ಯ, ಶೌಚ, ಸಂಯಮ, ತಪ, ತ್ಯಾಗ, ಆಕಿಂಚನ್ಯ, ಬ್ರಹ್ಮಚರ್ಯ.

ಶಿಷ್ಯ : ಮಹಾಶತ್ರುಗಳು ಯಾರು?

ಗುರು : ಕಾಮ, ಕ್ರೋಧ, ಮಾನ, ಮಾಯಾ, ಲೋಭಾದಿಗಳು.

ಶಿಷ್ಯ: ದೈನಿಕ ಕರ್ತವ್ಯವು ಯಾವುದು?

ಗುರು: ಆತ್ಮಬೋಧ, ಆತ್ಮಸ್ಮೃತಿ, ಆತ್ಮಾನುಭವ.

ಶಿಷ್ಯ : ಮಹಾಪಾಪಗಳು ಯಾವುವು?

ಗುರು : ಕೊಲೆ, ಹುಸಿ, ಕಳವು, ಪರದಾರಗಮನ, ಅತಿಕಾಂಕ್ಷೆ.

ಶಿಷ್ಯ : ಮಹಾಶಕ್ತಿಗಳು ಯಾವುವು?

ಗುರು : ಧೈರ್ಯ, ಸ್ಥೈರ್ಯ, ಸಹನಾದಿಗಳು.

ಶಿಷ್ಯ : ಮಹಾಬಲಗಳು ಯಾವುವು?

ಗುರು : ಆತ್ಮವಿಶ್ವಾಸ, ಆತ್ಮಾನುರಕ್ತತೆ ಮೊದಲಾದವುಗಳು.

ಶಿಷ್ಯ : ಮಿತ್ರರು ಯಾರು?

ಗುರು : ಉದ್ಯಮ, ಉತ್ಸಾಹ, ಅಧ್ಯವಸಾಯಾದಿಗಳು.

ಶಿಷ್ಯ : ಯಾವ ಉಪಾಯದಿಂದ ಹೃದಯದಲ್ಲಿ ಸದಾ ಆತ್ಮಸ್ಮೃತಿ ಜಾಗರೂಕವಾಗಿ ರಬಲ್ಲದು?

ಗುರು: ಆತ್ಮವಿಚಾರ, ಆತ್ಮಾನುಶೀಲನ ಮುಂತಾದವುಗಳಿಂದ.

ಶಿಷ್ಯ : ಯಾವ ವಸ್ತುಗಳ ಅವಲಂಬನೆಯಿಂದ ಮನುಷ್ಯನ ಹೃದಯದಲ್ಲಿ ಕಾಮವು ಉದಯವಾಗುತ್ತದೆ?

ಗುರು : ಕಾಮೋತ್ತೇಜಕಪುಸ್ತಕಗಳನ್ನು ಓದುವುದು, ರಾಗದಿಂದ ಸ್ತ್ರೀಯರ ಅಂಗೋಪಾಂಗಗಳನ್ನು ನೋಡುವುದು, ಶರೀರವನ್ನು ಅಲಂಕರಿಸಿಕೊಳ್ಳುವುದು, ಪೂರ್ವಾನುಭೂತ ವಿಷಯಭೋಗವನ್ನು ಸ್ಮರಿಸುವುದು, ಪುಷ್ಟಿಕಾರಕ ಪದಾರ್ಥಗಳನ್ನು ಸೇವಿಸುವುದು – ಮೊದಲಾದುವುಗಳಿಂದ.

ಶಿಷ್ಯ : ಮನುಷ್ಯನ ಮನಸ್ಸು ಹೇಗೆ ದುರ್ಬಲವಾಗುತ್ತದೆ?

ಗುರು : ಭೋಗವಿಲಾಸಗಳ ಆಕಾಂಕ್ಷೆಯಿಂದ, ಇಂದ್ರಿಯಸುಖೇಚ್ಛೆಯಿಂದ, ವಿವೇಕವಿಚಾರವೈರಾಗ್ಯಾದಿಗಳ ಅಭಾವದಿಂದ.

ಶಿಷ್ಯ : ಯಾವುದರಿಂದ ನಮ್ಮ ಮನಸ್ಸು ಸಬಲವಾಗಬಲ್ಲದು?

ಗುರು : ಪ್ರತಿದಿನ ಪರಮಪೂತ ಪೂರ್ವಪುರುಷರ ಪವಿತ್ರಸ್ಮರಣೆಯಿಂದ.

ಶಿಷ್ಯ : ಪಾಪಕ್ಕೆ ಕಾರಣಭೂತವಾದ ವಿಕಥೆಗಳು ಯಾವುವು?

ಗುರು : ಸ್ತ್ರೀಕಥೆ, ರಾಜಕಥೆ, ಭೋಜನಕಥೆ, ದೇಶಕಥೆ.

ಶಿಷ್ಯ : ಗರ್ವಗಳು ಯಾವುವು?

ಗುರು : ಜಾತಿಮದ, ಕುಲಮದ, ಬಲಮದ, ರೂಪಮದ, ಜ್ಞಾನಮದ, ತಪೋಮದ, ದ್ರವ್ಯಮದ, ಐಶ್ವರ್ಯಮದ.

ಶಿಷ್ಯ : ವ್ಯಸನಗಳು ಯಾವುವು?

ಗುರು : ಜೂಜಾಡುವುದು, ಮಾಂಸ ತಿನ್ನುವುದು, ಮದ್ಯಕುಡಿಯುವುದು, ವೇಶ್ಯಾಗಮನಮಾಡುವುದು, ಬೇಟೆಯಾಡುವುದು, ಕಳವುಮಾಡುವುದು, ಪರಸ್ತ್ರೀಯನ್ನು ಬಯಸುವುದು.

ಶಿಷ್ಯ : ಸಮಿತಿಗಳು ಯಾವುವು?

ಗುರು : ಮುಂದೆ ನೋಡಿ ಹೆಜ್ಜೆಯಿಡುವುದು, ಹಿತಮಿತಮಾತಾಡುವುದು, ಶುದ್ಧಾಹಾರವನ್ನು ತೆಗೆದುಕೊಳ್ಳುವುದು, ನೋಡಿ ಶೋಧಿಸಿ ವಸ್ತುಗಳನ್ನು ಇಡುವುದು ಎತ್ತುವುದು, ಪ್ರಾಣಿರಹಿತಸ್ಥಾನದಲ್ಲಿ ಮಲಮೂತ್ರಗಳನ್ನು ತ್ಯಾಗಮಾಡುವುದು.

ಶಿಷ್ಯ : ದೈನಿಕಕರ್ಮಗಳು ಯಾವುವು?

ಗುರು : ಈಶ್ವರೋಪಾಸನೆ, ಗುರುಸೇವೆ, ಶಾಸ್ತ್ರಾಧ್ಯಯನ, ವ್ರತೋಪವಾಸಾದಿಗಳು, ತಪ, ದಾನ.

ಶಿಷ್ಯ : ದಾನಗಳು ಯಾವುವು?

ಗುರು : ಅನ್ನದಾನ, ಔಷಧದಾನ, ಅಭಯದಾನ, ಜ್ಞಾನದಾನ.

ಶಿಷ್ಯ : ಗುರು ಯಾರು?

ಗುರು : ಹಿತೋಪದೇಶಿ.

ಶಿಷ್ಯ : ಜ್ಞಾನಿಗಳು ಯಾರು?

ಗುರು : ಆತ್ಮಾನುಭವಿಗಳು.

ಶಿಷ್ಯ : ಸಂಸಾರಭ್ರಮಣವು ಯಾವುದರಿಂದ?

ಗುರು : ಅಜ್ಞಾನದಿಂದ.

ಶಿಷ್ಯ : ಯತಿಗಳು ಯಾರು?

ಗುರು : ಇಂದ್ರಿಯವಿಜಯಿಗಳು.

ಶಿಷ್ಯ : ಸಾಧುಗಳು ಯಾರು?

ಗುರು : ಸಮತಾಭಾವವುಳ್ಳವರು.

★★★★★

# ಈಶ್ವರೋಪಾಸನೆ

**– ಶ್ರೀ ಕೆ. ಭುಜಬಲಿಶಾಸ್ತ್ರಿಗಳು, ನ್ಯಾಯಭೂಷಣಾಚಾರ್ಯ, ಆರಾ**

ಈಶ್ವರೋಪಾಸನೆಯ ವ್ರತವು ಬಹಳ ಕಠಿನವಾದುದು. ಐಹಿಕಲೋಭಗಳಿಂದ ಪ್ರೇರೇಪಿಸಲ್ಪಟ್ಟು ಉಪಾಸಕರ ವೇಷದಲ್ಲಿ ಉಪಾಸನಾಭೂಮಿಯ ರಂಗಸ್ಥಳದಲ್ಲಿ ಅಭಿನಯಮಾಡುವವರು ಹಲವರು ದೃಷ್ಟಿಗೋಚರವಾಗಬಹುದು. ದರ್ಶಕರೂ ಅವರ ಆ ಅಭಿನಯವನ್ನು ನೋಡಿ ಪ್ರಸನ್ನರಾಗಿ ಅವರನ್ನು ಮುಕ್ತಕಂಠದಿಂದ ಹೊಗಳಬಹುದು. ಆದರೆ ಜಗತ್ತಿನ ಪ್ರಸನ್ನತೆಯಿಂದ ಈಶ್ವರನು ಪ್ರಸನ್ನನಾಗುವುದಿಲ್ಲ. ಅಧ್ಯಾತ್ಮರಹಸ್ಯವನ್ನರಿಯದ ದಾಂಭಿಕ ಉಪಾಸನೆಯು ಉಪಾಸನೆಯಲ್ಲ. ಸೂಕ್ಷ್ಮರಹಸ್ಯವನ್ನರಿಯದೆ ಮೋಹೋನ್ಮತ್ತನಾಗಿ ಮಾಡತಕ್ಕ

ಉಪಾಸಕನ ಅಜ್ಞಾನೋಪಾಸನೆಯು ವಾಸ್ತವಿಕ ಉಪಾಸನೆಯಲ್ಲ. ಇಂತಹ ಅಭಿನಯದಿಂದ ಒಂದಲ್ಲ. ಅನೇಕ ಯುಗಗಳು ಕಳೆಯಲಿ; ಆದರೆ ಆ ದಾಂಭಿಕ ಉಪಾಸಕನ ಹೃದಯವು ಮಾತ್ರ ಈಶ್ವರನನ್ನು ಕೂರಿಸುವದಕ್ಕೆ ಯೋಗ್ಯವಾದ ಮನೋಹರವೂ ಉನ್ನತವೂ ಪವಿತ್ರವೂ ಆದ ಪೀಠವಾಗುವುದು ಅಸಂಭವ. ಮದ, ಮಾತ್ಸರ್ಯ, ಕಾಮ, ಕ್ರೋಧಾದಿ ಶತ್ರುಗಳೇ ಈ ಈಶ್ವರೋಪಾಸನೆಗೆ ಬಾಧಕಗಳು. ಭಾವಹೀನ ಭಜನೆ, ಭಕ್ತಿ – ಮೊದಲಾದವುಗಳು ದಾಂಭಿಕನಿಗೆ ಎಂದಿಗೂ ಸಹಾಯಕವಾಗಲಾರವು. ಈಶ್ವರನು ಸಮೀಪದಲ್ಲಿದ್ದೂ ಅವನಿಗೆ ಸಿಗಲೊಲ್ಲನು. ಲೋಕವು ತ್ಯಾಗಿ, ತಪಸ್ವಿ, ಉಪಾಸಕ – ಮೊದಲಾದ ಬಿರುದುಗಳಿಂದ ಅವನನ್ನು ಸಂಬೋಧಿಸಲಿ; ಇದರಿಂದ ಈಶ್ವರನು ಅವನಿಗೆ ದರ್ಶನಕೊಡಲಾರನು. ವಿವೇಕವು ಅಜ್ಞಾನಾಂಧಕಾರದಿಂದ ಮುಕ್ತವಾಗದ ಹೊರತು ಮೇಲಿನ ಕ್ರಿಯೆಗಳೆಲ್ಲಾ ಗಜಸ್ನಾನದಂತೆ. ಈ ವಿಡಂಬನೆಗಳಿಂದ ಉಪಾಸಕನು ಹಲವು ಭವಿಷ್ಯಕಾಮನೆಗಳನ್ನು ಚಿಂತಿಸುತ್ತಿರಬಹುದು. ಆದರೆ ಜೀವನವು ಸಮಾಪ್ತವಾದೊಡನೆ ವಾಸ್ತವಿಕ ಫಲಿತಾಂಶವು ಪ್ರಕಟವಾಗುವುದು. ಅವನು ಫಲ, ಪುಷ್ಪ, ನೈವೇದ್ಯ– ಮೊದಲಾದ ಉತ್ತಮೋತ್ತಮ ದ್ರವ್ಯಗಳನ್ನು ಈಶ್ವರನಿಗೆ ಅರ್ಪಿಸಲಿ, ಭಾವವು ಇಲ್ಲದೆ ಹೋದರೆ ಎಲ್ಲವೂ ನೀರಿನಲ್ಲಿಟ್ಟ ಹೋಮ.

ಈ ಸಂದರ್ಭದಲ್ಲಿ ನನಗೆ ಜ್ಞಾನಿಗಳೊಬ್ಬರ ಒಂದು ಹಿತೋಕ್ತಿಯು ಸ್ಮರಣೆಗೆ ಬರುತ್ತದೆ. ಮಂದಬುದ್ಧಿಯಾದ ಶಿಷ್ಯನೊಬ್ಬನು ಪ್ರತಿದಿನವೂ ಅವರನ್ನು ಈಶ್ವರನನ್ನು ತೋರಿಸಬೇಕೆಂದು ಕಾಡುತ್ತಿದ್ದನಂತೆ. ಇದಕ್ಕವರು ಏನೊಂದೂ ಉತ್ತರಕೊಡದೆ ಸುಮ್ಮನಾಗುತ್ತಿದ್ದರು. ಒಂದು ದಿವಸ ಗುರುಶಿಷ್ಯರಿಬ್ಬರೂ ನೆರೆಯೂರಿಗೆ ಪ್ರಯಾಣಮಾಡುತ್ತ ಮಾರ್ಗದಲ್ಲಿ ಒಂದು ಸಣ್ಣನದಿಯನ್ನು ದಾಟುತ್ತಿದ್ದರು. ಇಬ್ಬರೂ ನದಿಯ ಮಧ್ಯಕ್ಕೆ ತಲುಪುತ್ತಲೇ ಗುರುಗಳು ಶಿಷ್ಯನನ್ನು ನೀರಿನೊಳಗೆ ಮುಳುಗುವುದಕ್ಕೆ ಹೇಳಿದರು. ಶಿಷ್ಯನು ಗುರುಗಳ ಸಂದೇಶವನ್ನು ನೆರವೇರಿಸಿದನು. ಶಿಷ್ಯನು ನೀರಿನೊಳಗೆ ಮುಳುಗುತ್ತಲೇ ಗುರುಗಳು, ಅವನ ಕತ್ತನ್ನು ಹಿಡಿದು ಸ್ವಲ್ಪಹೊತ್ತು ಅವನನ್ನು ನೀರಿನೊಳಗೇನೇ ಅವುಕಿ ಹಿಡಿದರು. ಶಿಷ್ಯನು ಉಸಿರುಕಟ್ಟಿ ಸ್ವಲ್ಪಹೊತ್ತು ಪೇಚಾಡಿದನು. ಗುರುಗಳು ಅವನ ಕತ್ತನ್ನು ಬಿಟ್ಟು ಅವನು ಮೇಲಕ್ಕೆದ್ದ ಕೂಡಲೇ ''ನೀನು ನೀರಿನೊಳಗೆ ಮುಳುಗಿದ್ದಾಗ ಯಾವುದಕ್ಕೋಸ್ಕರ ಅಷ್ಟೊಂದು ಕಷ್ಟಪಟ್ಟೆ?'' ಎಂದು ಕೇಳಿದರು. ಅದಕ್ಕವನು ''ಗಾಳಿಗೋಸ್ಕರ''ವೆಂದು

ಉತ್ತರಕೊಟ್ಟವನು. ''ಗಾಳಿಗೋಸ್ಕರ ನೀನು ಪೇಚಾಡಿದಷ್ಟೇ ಈಶ್ವರನ ದರ್ಶನಕ್ಕಾಗಿ ಪೇಚಾಡಬೇಕಾಗುವುದೆಂದು ಗುರುಗಳು ಶಿಷ್ಯನಿಗೆ ಬೋಧಿಸಿದರಂತೆ. ಎಷ್ಟೊಂದು ಉತ್ತಮಹಿತೋಕ್ತಿ!

★★★★★

# ಪ್ರಾಣಾಯಾಮದಿಂದುಂಟಾಗುವ ಲಾಭ

**- ಶ್ರೀ ಶಿಶುಪಾಲಪಾರ್ಶ್ವನಾಥಶಾಸ್ತ್ರಿಗಳು, ವ್ಯಾಖ್ಯಾನವಿಚಕ್ಷಣ**

ಪ್ರಾಣಾಯಾಮವು ಜೀವನಾಧಾರವಾಗಿದೆ. ಆದುದರಿಂದ ಇದರ ಮಹತ್ತ್ವವನ್ನು ತಿಳಿಯದಿರುವುದು ದೊಡ್ಡ ತಪ್ಪು. ಬೇರೆಬೇರೆ ವಿದ್ಯೆಗಳಿಗೆ ಪ್ರಯತ್ನಿಸುವಂತೆ ಇದರ ವಿಷಯದಲ್ಲಿಯೂ ಪ್ರಯತ್ನಿಸುವುದು ಪ್ರತಿಯೊಬ್ಬನ ಧರ್ಮವಾಗಿದೆ.

ನಮ್ಮ ಧರ್ಮವು ಸರ್ವಾಂಗದಿಂದಲೂ ವಿಜ್ಞಾನಮೂಲಕವಾಗಿರುವುದರಿಂದ ತನ್ಮೂಲಕವೇ ಪ್ರಕೃತವಾದ ಈ ವಿಷಯವನ್ನು ತರ್ಕಿಸೋಣ. ಶರೀರದ ಎಲ್ಲಾ ಅವಯವಗಳ ಕಾರ್ಯವೂ ಸರಿಯಾಗಿ ನಡೆಯುವದಕ್ಕೇ ಸ್ವಾಸ್ಥ್ಯವೆಂದು ಹೆಸರು. ಪ್ರಾಣಾಯಾಮವು ಈ ಎಲ್ಲಾ ಅವಯವಗಳ ಕಾರ್ಯವು ಸರಿಯಾಗಿ ನಡೆಯುವುದಕ್ಕೆ ಸಹಕಾರಿಯಾಗಿದೆ. ಅಸ್ವಸ್ಥಶರೀರದಿಂದ ಸ್ವಾರ್ಥ, ಪರಾರ್ಥ, ಲೌಕಿಕ, ಪಾರಲೌಕಿಕ - ಮೊದಲಾದ ಯಾವದೊಂದೂ ಸಿದ್ಧವಾಗುವುದಿಲ್ಲ. ಆದುದರಿಂದಲೇ ವಿಜ್ಞರು ಚತುರ್ವಿಧಪುರುಷಾರ್ಥಸಿದ್ಧಿಗೆ ಆರೋಗ್ಯವೇ ಮೂಲವೆಂದು ಹೇಳಿರುವುದು.

ಡಾಕ್ಟರ್ ವಾಲ್ಟರ್ ಎಂಬುವರು ಸನ್ 1919ನೆಯ ಮೇ ತಿಂಗಳ ತಮ್ಮ ಲೇಖನದಲ್ಲಿ ಪ್ರಾಣಾಯಾಮದ ವಿಷಯದಲ್ಲಿ ಈ ಪ್ರಕಾರವಾಗಿ ಬರೆದಿರುವರು: 'ಸರ್ವಸಮಾನ್ಯವಾದ ಶ್ವಾಸೋಚ್ಛ್ವಾಸಕ್ಕಿಂತಲೂ ಪ್ರಾಣಾಯಾಮವು ಸ್ವಾಸ್ಥ್ಯರಕ್ಷಣೆಗೆ ಹೆಚ್ಚು ಪ್ರಧಾನವಾಗಿದೆ. ಸಾಮಾನ್ಯಶ್ವಾಸೋಚ್ಛ್ವಾಸವು ಪ್ರಾಣಾಯಾಮದಂತೆ ಶ್ವಾಸಕೋಶದೊಳಗಿನ ದೂಷಿತವಾಯುವನ್ನು ಸಂಪೂರ್ಣವಾಗಿ ಹೊರಹಾಕಿ ಶುದ್ಧವಾಯುವಿನ ಪ್ರವೇಶಕ್ಕೆ ಅವಕಾಶವನ್ನು ಕೊಡುವುದಿಲ್ಲ.' ಶ್ವಾಸಕೋಶದ

ದೂಷಿತವಾಯುವು ಸರಿಯಾಗಿ ಹೊರಬೀಳದಿರುವುದರಿಂದ ಕೆಮ್ಮು, ಕ್ಷಯ, ರಾಜಯಕ್ಷ್ಮ - ಮುಂತಾದ ರೋಗಗಳು ತಲೆದೋರುವುವೆಂದೂ ಪ್ರಾಣಾಯಾಮದಿಂದಲೇ ಜೀರ್ಣಶಕ್ತಿಯು ಹೆಚ್ಚಿ ಹೃದಯದ ಕಾರ್ಯವು ಸರಿಯಾಗಿ ನಡೆಯುವುದೆಂದೂ ಅನೇಕ ಡಾಕ್ಟರುಗಳು ಮತ್ತು ವೈದ್ಯರ ಅಭಿಪ್ರಾಯವಾಗಿದೆ. ಪ್ರಾಣಾಯಾಮವು ಮಲಬದ್ಧತೆಯನ್ನು ದೂರಮಾಡಿ ಶರೀರವನ್ನು ಸ್ವಸ್ಥವಾಗಿಡುವುದು. ಮಲಬದ್ಧತೆಯೇ ವಿವಿಧ ರೋಗಗಳಿಗೂ ಮುಪ್ಪಿಗೂ ಮೂಲಕಾರಣವಾಗಿದೆ. ಮಷಿಯನಿನ ಋಷಿಯೆಂದು ಕರೆಯಲ್ಪಡುವ ಡಾಕ್ಟರ್ 'ಮೆಕನಿಕೋಪ' ಇವರು 'Prolongation of Life' (ದೀರ್ಘಾಯಸ್ಸು) ಎಂಬ ತಮ್ಮ ಪುಸ್ತಕದಲ್ಲಿ ''ವ್ಯಾಧಿ ಹಾಗೂ ಜರೆಗೆ ಶ್ವಾಸಕೋಶವೇ ಮೂಲಕಾರಣ ವಾಗಿದೆ. ಈ ಶ್ವಾಸಕೋಶವು ಸ್ವಚ್ಛವಾಗಿರುವುದರಿಂದ ಜರಾವ್ಯಾಧಿಗಳ ಭಯವು ಇಲ್ಲ. ಶ್ವಾಸಕೋಶದ ಸ್ವಚ್ಛತೆಯು ಪ್ರಾಣಾಯಾಮದಿಂದಲೇ ಲಭಿಸುವುದು'' ಎಂದು ಹೇಳಿರುತ್ತಾರೆ.

ಪ್ರಾಣಾಯಾಮದಿಂದ ಅನ್ನವು ಜೀರ್ಣವಾಗಿ ರಕ್ತಶುದ್ಧಿಯೊಡನೆ ಮಲಶುದ್ಧಿಯೂ ಆಗುವುದಲ್ಲದೆ ಶ್ವಾಸಕೋಶದ ಮತ್ತು ಹೃದಯದ ಕೆಲಸವೂ ಸರಿಯಾಗಿ ನಡೆಯುವುದು. ಹೀಗಿರುತ್ತಾ ವ್ಯಾಧಿಗವಕಾಶವೆಲ್ಲಿ? ಪ್ರಾಣಾಯಾಮವನ್ನು ಮಾಡಿದಿದ್ದರೆ ರಕ್ತಹೀನತೆಯೇ ಮುಂತಾದ ರೋಗಗಳು ಪ್ರವೇಶವಾಗುವುವೆಂದೂ ಉಕ್ತಮಹಾಶಯರು ಹೇಳಿರುತ್ತಾರೆ. ಶುದ್ಧವಾದ ಗಾಳಿಯಿರುವ ಪ್ರದೇಶದಲ್ಲಿಯೇ ಪ್ರಾಣಾಯಾಮವನ್ನು ಮಾಡಬೇಕು. ಅದಕ್ಕೋಸ್ಕರವೇ ಶಾಸ್ತ್ರದಲ್ಲಿ ನಿರ್ಮಲಪ್ರದೇಶದಲ್ಲಿಯಾಗಲೀ ನದೀತೀರದಲ್ಲಿಯಾಗಲಿ ಪ್ರಾಣಾಯಾಮವನ್ನು ಮಾಡಬೇಕೆಂದು ಆದೇಶಮಾಡಿರುವುದು.

★★★★★

# ಧ್ಯಾನ

**- ಶ್ರೀ ಕೆ. ಭುಜಬಲಿಶಾಸ್ತ್ರಿಗಳು, ನ್ಯಾಯಭೂಷಣಾಚಾರ್ಯ, ಆರಾ**

ಯಾವುದಾದರೊಂದರ ಚದರಿಹೋಗಿರುವ ಶಕ್ತಿಗಳನ್ನು ಒಟ್ಟು ಮಾಡುವುದಕ್ಕೆ 'ಯೋಗ'ವೆಂದು ಹೆಸರು.

ಚದರಿರುವ ಶಕ್ತಿಗಳು ಪ್ರತ್ಯೇಕವಾಗಿ ಯಾವುದಾದರೊಂದು ಕಾರ್ಯವನ್ನು ಸುಚಾರುರೂಪದಲ್ಲಿ ಸಂಪನ್ನ ಮಾಡಲಾರವು. ಈ ಜಟಿಲನಿಯಮಾನುಸಾರವಾಗಿ ಮನುಷ್ಯನ ಚದರಿಹೋಗಿರುವ ಶಕ್ತಿಗಳೂ ಯಾವುದಾದರೊಂದು ಕೆಲಸವನ್ನು ಸುಸಂಪನ್ನ ಮಾಡಲಾರವು. ಆದರೆ ಆ ಶಕ್ತಿಗಳನ್ನು ಏಕತ್ರಮಾಡಿ ತನ್ಮೂಲಕ ನಾವು ಯಾವುದಾದರೊಂದು ಮಹತ್ವಪೂರ್ಣವಾದ ಕಾರ್ಯವನ್ನು ಮಾಡಬಲ್ಲೆವು.

ಜೈನಶಾಸ್ತ್ರದಲ್ಲಿ ಧ್ಯಾನವೇ ಯೋಗಶಬ್ದದ ಸ್ಥಾನಾಪನ್ನ ಶಬ್ದವಾಗಿರುತ್ತದೆ. ಯೋಗದ ಮೂಲಕ ಪ್ರಾಪ್ತವಾಗುವ ಸಂಪೂರ್ಣ ವಿಭೂತಿಗಳು ಧ್ಯಾನದ ಮೂಲಕವಾಗಿ ಪ್ರಾಪ್ತವಾಗುವುದೆಂದು ಜೈನಶಾಸ್ತ್ರವು ಹೇಳುವುದು. ಆದುದರಿಂದ ಜೈನಾಗಮನದ ಪ್ರಕಾರ ಧ್ಯಾನವುಯೋಗದ ಪರ್ಯಾಯವಾದದ್ದೆಂದು ಸಿದ್ಧವಾಯಿತು.

ಜ್ಞಾನವು ಆತ್ಮನ ಸ್ವಾಭಾವಿಕಗುಣವಾಗಿದೆ. ಆದರೆ ಅದು ಮನವಚನ ಕಾಯಗಳ ಪ್ರವೃತ್ತಿಯಿಂದ ಭಿನ್ನಭಿನ್ನವಾಗಿ ಹೋಗುವುದುಂಟು. ಧ್ಯಾನವು ಆ ಪ್ರವೃತ್ತಿಗಳನ್ನು ಏಕತ್ರ ಮಾಡುತ್ತದೆ. ಇದರ ಪ್ರಭಾವವು ಬಹಳ ವಿಚಿತ್ರವಾಗಿದೆ. ನಿಶ್ಚಿಂತ ಅವಸ್ಥೆಯಲ್ಲಿ ಮೆದುಳಿನಲ್ಲಿ ಮೊಳೆಯುವ ಅಪೂರ್ವಶಕ್ತಿಗೂ ಇದೇ ತಾಯಿಬೇರು. ಮನವಚನಕಾಯಗಳ ಪ್ರವೃತ್ತಿಯಿಂದ ಮೆದುಳು ಸ್ಥಿರವಾಗಿರುವುದಿಲ್ಲ. ಅದರ ಸ್ಥಿರ ಹಾಗೂ ಸ್ಥಿರಾಚಲ ಅವಸ್ಥೆಯು ಕೇವಲ ಧ್ಯಾನದಿಂದಲೇ ಪ್ರಾಪ್ತವಾಗುವುದು. ಧ್ಯಾನದಿಂದ ಆತ್ಮನಲ್ಲಿ ಅನ್ಯ ಅನೇಕ ವಿಭೂತಿಗಳೂ ಪ್ರಾಪ್ತವಾಗುವವು. ಆದರೆ ಅವು ಇದರೊಂದು ಸಾಮಾನ್ಯಫಲ; ಆದರಿಂದಾಗುವ ಮುಖ್ಯ ಫಲವೇನೆಂದರೆ ಆತ್ಮನು ಕರ್ಮಬಂಧದಿಂದ ಮುಕ್ತನಾಗಿ ಅನಂತ-ಅಕ್ಷಯಸುಖಕ್ಕೆ ಸ್ವಾಮಿಯಾಗುವನು.

ಧ್ಯೇಯರೂಪಪದಾರ್ಥಗಳ ಭೇದದಿಂದ ಧ್ಯಾನವು ಅನೇಕ ಪ್ರಕಾರವಾಗಿರುವುದಾದರೂ ಜೈನಶಾಸ್ತ್ರದಲ್ಲಿ ಆರ್ತ, ರೌದ್ರ, ಧರ್ಮ, ಶುಕ್ಲ ಅಥವಾ ಪಿಂಡಸ್ಥ, ಪದಸ್ಥ, ರೂಪಸ್ಥ, ರೂಪಾತೀತ – ಎಂಬ ಹೆಸರುಗಳಿಂದ ಅದರ ಭೇದಗಳು ವಿಶದವಾಗಿ ವರ್ಣಿಸಲ್ಪಟ್ಟಿರುವುವು. ಈ ವಿಷಯವನ್ನು ಸಂಪೂರ್ಣವಾಗಿ ತಿಳಿದುಕೊಳ್ಳಬೇಕೆಂದಿದ್ದವರು. ಜೈನರ '**ಜ್ಞಾನಾರ್ಣವ**', '**ಯೋಗವಿಂಶತಿಕಾ**'– ಮೊದಲಾದ ಗ್ರಂಥಗಳನ್ನು ನೋಡಬೇಕು.

ಮೇಲೆ ಹೇಳಿದ ಧ್ಯಾನದ ಭೇದಗಳಲ್ಲಿ ಆರ್ತ ಮತ್ತು ರೌದ್ರಭೇದಗಳು ಅಶುಭಗಳಾಗಿರುವುದರಿಂದ ಯೋಗ ಅಥವಾ ಧ್ಯಾನದಿಂದ ಪ್ರಾಪ್ತವಾಗತಕ್ಕ ಅಪೂರ್ವಶಕ್ತಿಯು ಇವುಗಳಿಂದ ಪ್ರಾಪ್ತವಾಗಲಾರದು.

ಧ್ಯಾನವೆಂಬುದು ಒಂದು ಕ್ರಿಯೆಯ ಹೆಸರು. ಆ ಕ್ರಿಯೆಯ ಕರ್ಮಕ್ಕೆ 'ಧ್ಯೇಯ'ವೆಂದೂ ಕರ್ತನಿಗೆ 'ಧ್ಯಾತೃ'ವೆಂದೂ ಸಂಕೇತ. ಈ ಮೂರು ಭೇದಗಳು ಕೇವಲ ಪರರಿಗೆ ತಿಳಿಸುವುದಕ್ಕೋಸ್ಕರವಷ್ಟೇ ಹೊರತು ಯಥಾರ್ಥವಾಗಿ ಧ್ಯಾನಾವಸ್ಥೆಯಲ್ಲಿ ಈ ವಿಕಲ್ಪಗಳು ಕಂಡುಬರುವುದಿಲ್ಲ. ನಿರ್ವಿಕಲ್ಪ ಈ ಅವಸ್ಥೆಯನ್ನೇ ಯೋಗಶಾಸ್ತ್ರದಲ್ಲಿ 'ನಿರ್ವಿಕಲ್ಪಸಮಾಧಿ'ಯೆಂದು ಕರೆದಿರುವರು.

ಮಾನಸಿಕ ಮತ್ತು ಶಾರೀರಕಸ್ವಾಸ್ಥ್ಯವನ್ನು ಸರಿಯಾಗಿ ಕಾಪಾಡಿಕೊಳ್ಳುವುದಕ್ಕೋಸ್ಕರವೂ ಧ್ಯಾನವು ಒಂದು ಉಪಯೋಗಿ ಸಾಧನವಾಗಿದೆ. ಆದುದರಿಂದಲೇ ಬಲ್ಲವರು ಇದನ್ನೊಂದು ಬಹುಮೂಲ್ಯ ವಸ್ತುವನ್ನಾಗಿ ಹೇಳುತ್ತಾರೆ.

ಯೋಗಶಬ್ದಕ್ಕೆ ಸಂಬಂಧವೆಂದೂ ಅರ್ಥವಾಗುವುದು. ಇದು ಮೋಕ್ಷದೊಡನೆ ಆತ್ಮನ ಸಂಬಂಧವನ್ನು ಮಾಡಿಸುವುದರಿಂದ ಇದರ ಅರ್ಥವೂ ಅನ್ವರ್ಥವಾಗಿದೆ. ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣಾ, ಧ್ಯಾನ ಮತ್ತು ಸಮಾಧಿ– ಇವು ಎಂಟು ಯೋಗದ ಅಂಗಗಳು.

★★★★★

# ಸಮಾಧಿಮರಣ [1]

## ಶ್ರೀ ಕೆ. ಭುಜಬಲಿಶಾಸ್ತ್ರಿಗಳು, ನ್ಯಾಯಭೂಷಣಾಚಾರ್ಯ, ಆರಾ

ಸಮಾಧಿಮರಣ 'ಸಲ್ಲೇಖನಾ' ಅಥವಾ ಸಂನ್ಯಾಸಮರಣವೆಂದೂ ಕರೆಯಲ್ಪಡುತ್ತದೆ. ಹೀಗೆ ವ್ಯುತ್ಪತ್ತ್ಯರ್ಥದ ದೃಷ್ಟಿಯಿಂದ ಈ ಮೂರು ಶಬ್ದಗಳು ಭಿನ್ನ ಭಿನ್ನವಾಗಿವೆ. ಧ್ಯೇಯವಸ್ತುವಿನಲ್ಲಿ ಏಕಾಗ್ರತೆಯಿಂದ ಮನಸ್ಸನ್ನು ನಿಲ್ಲಿಸುವದಕ್ಕೆ ಸಮಾಧಿಯೆಂದೂ ಉತ್ತಮರೀತಿಯಿಂದ ಕೃಶಮಾಡುವದಕ್ಕೆ ಸಲ್ಲೇಖನವೆಂದೂ ಸಮೀಚೀನರೂಪದಿಂದ ತ್ಯಾಗಮಾಡುವದಕ್ಕೆ ಸಂನ್ಯಾಸವೆಂದೂ ಅರ್ಥ. ಆದರೆ ಕಾಯ ಮತ್ತು ಕಷಾಯಗಳನ್ನು ಕೃಶಮಾಡುತ್ತ ಸ್ವಸ್ವರೂಪದಲ್ಲಿ ಲೀನನಾಗಿ ಬಾಹ್ಯ ಪದಾರ್ಥಗಳ ತ್ಯಾಗಪೂರ್ವಕರ ಭಪರಿಣಾನುದಿಂದ ದೇಹತ್ಯಾಗಮಾಡುವುದೇ ಈ ಮೂರರ ಆಶಯವಾಗಿದೆ.

ಇದರಲ್ಲಿ ಆತ್ಮಘಾತದ ಸಂದೇಹವು ಹುಟ್ಟಲು ಕಾರಣವಿಲ್ಲ. ಏಕೆಂದರೆ ಕ್ರೋಧಾದಿಕಷಾಯಗಳ ತೀವ್ರತೆಯಿಂದ ಮನಸ್ಸನ್ನು ತೀರ ಕೆಡಿಸಿಕೊಂಡು ವಿಷಶಾಸ್ತ್ರಾದಿಗಳ ಮೂಲಕ ಅಕಾಲದಲ್ಲಿ ತನ್ನನ್ನು ಕೊಂದುಹಾಕುವುದೇ ಆತ್ಮಘಾತ. ಇಲ್ಲಾದರೊ ಕಷಾಯ ಭಾವವೇ ಇಲ್ಲ. ಶರೀರಸ್ವಸ್ಥವಾಗಿರುವವರೆಗೆ ಅದನ್ನು ಯೋಗ್ಯವಾದ ಆಹಾರಪಾನಾದಿಗಳಿಂದ ಕಾಪಾಡಿ ಅದರ ಮೂಲಕ ಧಾರ್ಮಿಕ ಹಾಗೂ ತದವಿರುದ್ಧಲೌಕಿಕಕಾರ್ಯಗಳು ಯಥೇಷ್ಟವಾಗಿ ಸಾಧಿಸಲ್ಪಡುತ್ತವೆ. ಈ ಉಭಯ ಕಾರ್ಯಗಳನ್ನು ಮಾಡಲು ಅದು ಸಂಪೂರ್ಣ ಅಸಮರ್ಥವಾದ ಮೇಲೆಯೇ ನಿರ್ಮಮತೆಯಿಂದ ಧರ್ಮಪೂರ್ವಕ ಅದು ತ್ಯಜಿಸಲ್ಪಡುತ್ತದೆ. ಜೈನಶಾಸ್ತ್ರವು ಉಪಾಯರಹಿತ ಉಪಸರ್ಗ, ದುರ್ಭಿಕ್ಷ, ಮುಪ್ಪುರೋಗಾದಿಗಳ ಉಪಸ್ಥಿತಿಯಲ್ಲಿಯೇ ಸಮಾಧಿಮರಣವನ್ನು ಕೈಕೊಳ್ಳಬೇಕೆಂದು ಆದೇಶಮಾಡುತ್ತದೆ. ಉಪಾಯ ಅಥವಾ ಪ್ರತೀಕಾರವುಳ್ಳ ಸಂದರ್ಭದಲ್ಲಿ ಸಂನ್ಯಾಸಧಾರಣಮಾಡುವುದು ಧರ್ಮವೆಂದು ಜೈನಶಾಸ್ತ್ರವು ಹೇಳುವುದಿಲ್ಲ. 'ಶರೀರಮಾದ್ಯಂ ಖಲು ಧರ್ಮಸಾಧನಮ್' ಎಂಬೀ ನೀತಿಯನ್ನು

1 ವಿವೇಕಾಭ್ಯುದಯಪತ್ರಿಕೆಯಲ್ಲಿ ಪ್ರಕಟವಾದ ಒಂದು ಲೇಖನವಿದು.

ಮುಂದಿಟ್ಟುಕೊಂಡು ಮೇಲೆ ಹೇಳಿದ ಆಪತ್ತಿಮಯ ಅವಸರಗಳಲ್ಲಿಯೂ ಶರೀರರಕ್ಷಣಾರ್ಥಧರ್ಮಾನುಕೂಲ ಯಾವಚ್ಛಕ್ಯ ಪ್ರಯತ್ನಿಸುವುದು ಪ್ರತಿಯೊಬ್ಬ ಜೈನಮತಾವಲಂಬಿಯ ಲಕ್ಷ್ಯವಾಗಿರುತ್ತದೆ. ನಿಷ್ಪಕ್ಷಪಾತದಿಂದ ವಿಚಾರಮಾಡಿ ನೋಡಿದರೆ ಸಮಾಧಿಮರಣದ ಉದ್ದೇಶವು ಬಹಳ ದೊಡ್ಡದೆಂದು ಎಲ್ಲರೂ ಒಪ್ಪಬೇಕು. ಸಮಾಧಿಮರಣವನ್ನು ಆತ್ಮಘಾತವಾಗಿ ಹೇಳುವವರು ಈಗಿನ ಕಾಂಗ್ರೆಸ್ಸಿನ ಅನುಯಾಯಿಗಳು ಮಾಡುವ ಆಮರಣ ಅನಶನವನ್ನು ಆತ್ಮಘಾತವಾಗಿ ಒಪ್ಪಬೇಕಾದೀತು. ಯಥಾರ್ಥವಾಗಿ ಸ್ವಯಂ ನಷ್ಟವಾಗುವ ಮಲಮೂತ್ರ ಪೂರಿತ ಈ ಶರೀರವನ್ನು ಧರ್ಮತ್ಯಾಗ ಪೂರ್ವಕ ಶುಭ ಪರಿಣಾಮದಿಂದ ಪರಿತ್ಯಾಗ ಧ್ಯಾನ ಮಾಡುವುದು ತಪ್ಪಲ್ಲ. ಪ್ರತಿಯೊಂದು ಆಸ್ತಿಕಧರ್ಮದ ಸಿದ್ಧಾಂತಾನುಸಾರ ಶರೀರವು ಪುನಃ ಪುನಃ ಸಿಗಬಹುದು. ಆದರೆ ಧರ್ಮವು ಸಿಗಲಾರದು. ಆದುದರಿಂದಲೇ ಎಲ್ಲಾ ಧರ್ಮಗಳಲ್ಲಿ ಧರ್ಮಕ್ಕೆ ಉಚ್ಚಾಸನವು ದೊರೆಕಿದೆ.

ಸಮಾಧಿಮರಣ ಜೈನಧರ್ಮದಲ್ಲಿ ಒಂದು ಮಹತ್ತ್ವಪೂರ್ಣವಾದ ಕ್ರಿಯೆಯಾಗಿದೆ. ಇದೊಂದು ಪರಮಾವಶ್ಯಕ ಅನುಷ್ಠಾನ. ಇದರ ಮೂಲಕವೇ ಜನ್ಮ ಸಫಲವಾಗುವದೆಂದು ಪೂರ್ವಾಚಾರ್ಯರ ಅಪ್ಪಣೆ. ಇದು ಕೇವಲ ಗೃಹಸ್ಥರಿಗೆ ಮಾತ್ರವಲ್ಲ; ಮುನಿಗಳಿಗಿಳೂ ಅತ್ಯಗತ್ಯ. ಆಚಾರ್ಯಪ್ರವರ ಸ್ವಾಮಿ ಸಮಂತ ಭದ್ರರಂತು ಇದನ್ನು ತಪಸ್ಸಿನ ಫಲವನ್ನಾಗಿ ಹೇಳಿರುತ್ತಾರೆ. ಅದುದರಿಂದಲೇ ದೊಡ್ಡ ದೊಡ್ಡ ಋಷಿ ಮಹರ್ಷಿಗಳೂ ಮರಣಸಮಯದಲ್ಲಿ ತಮಗೆ ಸಮಾಧಿಮರಣವು ಸಿಗಬೇಕೆಂದು ಪ್ರತಿದಿನ ಭಾವಿಸುತ್ತಿರುತ್ತಾರೆ. ಬೇರೆಬೇರೆ ಪುಷ್ಪಪ್ರಮಾಣಗಳಿಂದ ತನ್ನ ಮರಣವು ಬೇಗನೆ ಆಗುವುದೆಂದು ಗೊತ್ತಾದೊಡನೆಯೇ ಸಮೀಪದಲ್ಲಿರುವ ಯಾವುದಾದರೊಂದು ಪುಣ್ಯಕ್ಷೇತ್ರಕ್ಕೆ ಹೋಗಿ ಅನಾಸದ್ದಾರಾ ಸಮಾಧಿ ಮರಣಪೂರ್ವಕ ಶರೀರತ್ಯಾಗವನ್ನು ಮಾಡುವ ಪದ್ಧತಿಯ ಉಲ್ಲೇಖವು ನಮಗೆ ಇತಿಹಾಸದಲ್ಲಿಯೂ ಪ್ರಚುರಪರಿಮಾಣದಲ್ಲಿ ಸಿಗುವುದು. ಇಷ್ಟೇಅಲ್ಲ ಅ ಸ್ಥಾನದಲ್ಲಿ ಸಮಾಧಿಯನ್ನು ಹೊಂದಿದ ಆ ದಿವಂಗತ ಮಹಾಪುರುಷರ ಬಂಧುಗಳ ಅಥವಾ ಶಿಷ್ಯರ ಮೂಲಕ ಸ್ಮಾರಕರೂಪದಲ್ಲಿ ಸುಂದರ ಹಾಗೂ ಸದೃಢ ನಿಷಿಧಿಕೆಗಳನ್ನು ನಿರ್ಮಾಣ ಮಾಡಿಸಿ ಗುರುಪರಂಪರೆಯೊಡನೆ ಅವರ ಮರಣ ಕಾಲದ ವಾರ, ತಿಥಿ, ತಿಂಗಳು, ಸಂವತ್ಸರ– ಮೊದಲಾದವುಗಳ ಉಲ್ಲೇಖಪೂರ್ವಕ ಶಿಲಾಲೇಖಗಳನ್ನು ಸ್ಥಾಪಿಸುವ ಅಥವಾ ಕೆತ್ತಿಸುವ ಪರಿಪಾಟಿಯೂ ಪೂರ್ವದಲ್ಲಿತ್ತು.

ಇಂತಹ ಶಿಲಾಲೇಖಗಳು ಇತಿಹಾಸನಿರ್ಮಾಣಕ್ಕೂ ವಿಶೇಷಸಹಕಾರಿಗಳಾಗಿವೆ. ಇದಕ್ಕೆ ನಾವು ಕೇವಲ ಶ್ರವಣಬೆಳ್ಗೊಳ ಒಂದನ್ನೇ ದೃಷ್ಟಾಂತರೂಪದಲ್ಲಿ ತೆಗೆದುಕೊಳ್ಳೋಣ. ಅಲ್ಲಿ ಸಮಾಧಿಮರಣಕ್ಕೆ ಸಂಬಂಧಪಟ್ಟ ಸುಮಾರು ಒಂದು ನೂರು ಲೇಖಗಳಿರುವುವು. ಈ ಲೇಖಗಳಲ್ಲಿ ಅಧಿಕಾಂಶ ಲೇಖಗಳು ಕ್ರಿ.ಶ.ಏಳನೆಯ ಎಂಟನೆಯ ಶತಮಾನಗಳ ಅಥವಾ ಅವಕ್ಕಿಂತ ಪೂರ್ವದ್ದಾಗಿವೆ. ಇದರಿಂದ ಈ ಶತಮಾನಗಳಲ್ಲಿ ಸಮಾಧಿಮರಣದ ಪ್ರಚಾರಣವು ವಿಶೇಷವಾಗಿತ್ತೆಂದೂ ತಿಳಿದುಬರುತ್ತದೆ. ಅಲ್ಲಿ ಸಮಾಧಿಮರಣಮಾಡಿದವರಲ್ಲಿ ಮುನಿ, ಅರ್ಜಿಕೆ, ಶ್ರಾವಕಾ, ಶ್ರಾವಿಕಾ-ಮೊದಲ್ಗೊಂಡು ರಾಜಕುಟುಂಬದವರೂ ಸೇರಿರುವರು.

ಕೆಲವು ಶಿಲಾಲೇಖಗಳಲ್ಲಿ ಸಮಾಧಿಮರಣಪೂರ್ವಕ ದಿವಂಗತವ್ಯಕ್ತಿಗಳ ಉಪವಾಸಸಂಖ್ಯೆಯೂ ಕೊಡಲ್ಪಟ್ಟಿದೆ. ಇತಿಹಾಸವಿಶಾರದರ ದೃಷ್ಟಿಯಿಂದ ಜೈನ ಇತಿಹಾಸದ ನಿರ್ಮಾಣಕ್ಕೋಸ್ಕರ ಈ ಲೇಖಗಳು ಅಧಿಕಮಹತ್ತ್ವಪೂರ್ಣವಾದವು. ಈ ಸಮಾಧಿಮರಣರೂಪ ಮರಣಕಾಲಸಂಬಂಧಿ ಧಾರ್ಮಿಕಶುಭಾನುಷ್ಠಾನವನ್ನು ಪ್ರತಿಯೊಂದು ಆಸ್ತಿಕಧರ್ಮವು ಒಂದಲ್ಲ ಒಂದು ರೂಪದಲ್ಲಿ ಒಪ್ಪಿಯೇ ಒಪ್ಪುತ್ತದೆಂಬುದನ್ನು ಅವರವರ ಮಾನ್ಯಗ್ರಂಥಗಳ ಪ್ರಮಾಣಗಳನ್ನು ಕೊಟ್ಟು ಸ್ಪಷ್ಟಮಾಡಬೇಕಾಗಿದೆ.

★★★★★

# ಜೈನದರ್ಶನದಲ್ಲಿ ಕರ್ಮಸಿದ್ಧಾಂತ

**-ಆಸ್ಥಾನಮಹಾವಿದ್ವಾನ್, ನ್ಯಾಯತೀರ್ಥ, ಶ್ರೀಶಾಂತಿರಾಜ ಶಾಸ್ತ್ರಿಗಳವರು, ಮೈಸೂರು- ಇವರು ಮೈಸೂರು ಆಕಾಶವಾಣಿಯಲ್ಲಿ ಮಾಡಿರುವ ಭಾಷಣ**

ಇದು ಜೈನಸಿದ್ಧಾಂತಕ್ಕೆ ಸಂಬಂಧಪಟ್ಟವಿಷಯ. ಇದರಲ್ಲಿ ಪಾರಿಭಾಷಿಕ ಶಬ್ದಗಳು (Technical Words) ಹೆಚ್ಚು. ಆ ಶಬ್ದಗಳನ್ನೇ ಉಪಯೋಗಿಸಿದರೆ ವಿಷಯವು ಬಿರುಸಾಗುವುದೆಂದು ಬಗೆದು ಕೂಡಿದಮಟ್ಟಿಗೂ ಸುಲಭವಾದ

ಪದಗಳಿಂದಲೇ ಪ್ರಕೃತ ವಿಷಯವನ್ನು ಹೇಳಲು ಪ್ರಯತ್ನಿಸುವೆನು.

ಕರ್ಮವೆಂದರೆ ಮಾಡಲ್ಪಡುವ ಕೆಲಸವೆಂದು ಅರ್ಥವಾಗುವುದು. ಆದರೂ ಪ್ರಕೃತಸಂದರ್ಭದಲ್ಲಿ ಅದಲ್ಲ, ಅರ್ಥ. ಕರ್ಮವೆಂದರೆ ಪ್ರತಿಯೊಬ್ಬ ಜೀವಾತ್ಮನಿಗೆ ಪ್ರತಿ ಸಮಯದಲ್ಲಿ ಬಂದು ಸೇರುವ ಜಡಪದಾರ್ಥದ ಬಹುಸೂಕ್ಷ್ಮವಾದ ಪರಮಾಣುಗಳ ಸಮೂಹವೆಂದರ್ಥವು. ಆ ಪರಮಾಣುಗಳ ಪೈಕಿ ಕೆಲವು ಪರಮಾಣುಗಳಲ್ಲಿ ಜಿಗುಟಾದ (ಸ್ನಿಗ್ಧ) ಗುಣವೂ ಮತ್ತೆ ಕೆಲವು ಪರಮಾಣುಗಳಲ್ಲಿ ಒರಟಾದ (ರೂಕ್ಷ) ಗುಣವೂ ಇರುವುದರಿಂದ ಅವು ಒಂದಕ್ಕೊಂದು ಸೇರಿ ಪಿಂಡರೂಪವಾಗುವ ಶಕ್ತಿಯೂ ಅವುಗಳಲ್ಲಿದೆ; ಹೊರಗಿನ ನಿಮಿತ್ತಕಾರಣಗಳಿಂದ ಆ ಪರಮಾಣುಗಳು ಚದರಿ ಬೇರೆ ಬೇರೆಯಾಗುವ ಶಕ್ತಿಯೂ ಇದೆ. ಈ ಕರ್ಮಕ್ಕೆ **ಅದೃಷ್ಟ**ವೆಂದೂ ಹೆಸರಿದೆ. ಅದೃಷ್ಟವೆಂದರೆ ಇಂದ್ರಿಯಕ್ಕೆ ಗೋಚರವಾಗದಿರುವ ಸೂಕ್ಷ್ಮವಸ್ತುವೆಂರ್ಥವು. ಹಾಗಾದರೆ ಅಂತಹ ಸೂಕ್ಷ್ಮವಾದ ಕರ್ಮವು ಅಂದರೆ ಅದೃಷ್ಟವು ಇದೆಯೆಂದು ಹೇಗೆ ಗೊತ್ತು ಮಾಡುವದು? ಎಂದರೆ ಪ್ರಾಣಿಗಳಲ್ಲಿ ಸುಖೀ-ದುಃಖೀ, ಜ್ಞಾನೀ-ಅಜ್ಞಾನೀ, ರೋಗೀ-ನೀರೋಗೀ, ಧನೀ-ದರಿದ್ರ, ಕುಂಟ - ಕುರುಡ - ಪೂರ್ಣಾವಯವೀ ಮೊದಲಾದ ನಾನಾವ್ಯತ್ಯಾಸಗಳು ಕಂಡುಬರುವುದರಿಂದ ಇವುಗಳಿಗೆ ಯಾವುದೋ ಕಾರಣ ಇರಲೇಬೇಕೆಂದು ಊಹೆಯುಂಟಾಗುವುದು. ಇದಕ್ಕೆ ಅನುಮಾನಪ್ರಮಾಣವೆಂದು ಹೆಸರು. ಆ ಕಾರಣವಿಲ್ಲದಿರುತ್ತಿದ್ದರೆ ಎಲ್ಲಾ ಪ್ರಾಣಿಗಳೂ ಸಮಾನಗಳಾಗಿರುತ್ತಿದ್ದವು. ಆ ವ್ಯತ್ಯಾಸಗಳಿಗೆ ಕಾರಣವಾದ ವಸ್ತುವಿಗೇ ಕರ್ಮವೆಂದೂ ಅದೃಷ್ಟವೆಂದೂ ಹೆಸರು.

ಕರ್ಮವು ಪುಣ್ಯವೆಂದೂ ಪಾಪವೆಂದೂ ಎರಡು ಪ್ರಕಾರವಾಗಿರುತ್ತದೆ. ಪುಣ್ಯಕರ್ಮದಿಂದ ಸುಖವೂ ಪಾಪಕರ್ಮದಿಂದ ದುಃಖದುರವಸ್ಥೆಗಳೂ ಉಂಟಾಗುತ್ತವೆ. ಕರ್ಮವು ಪ್ರತಿ ಸಮಯದಲ್ಲಿಯೂ ಜೀವಾತ್ಮನಿಗೆ ಬಂದು ಸೇರುತ್ತಲೂ ಅವರ ಅವಧಿಯು ತೀರದಮೇಲೆ ಹೊರಟುಹೋಗುತ್ತಲೂ ಇರುತ್ತದೆ. ಕರ್ಮವು ಜೀವಾತ್ಮನಿಗೆ ಬಂದು ಸೇರುವಾಗ ಇವನ ಭಾವನೆಯು ಅಹಿಂಸಾ, ಪರೋಪಕಾರ, ಗುರುದೈವ ಭಕ್ತಿ- ಮೊದಲಾದ ವಿಷಯಗಳಲ್ಲಿದ್ದರೆ ಪುಣ್ಯರೂಪವಾಗಿಯೂ ಹಿಂಸಾ, ಅಸತ್ಯ, ಕ್ರೋಧ, ದ್ವೇಷ, ಮದ, ಮಾತ್ಸರ್ಯ ಮೊದಲಾದ ವಿಷಯಗಳಲ್ಲಿದ್ದರೆ ಪಾಪರೂಪವಾಗಿಯೂ ಪರಿಣಮಿಸುವುದು. ಪುಣ್ಯಕ್ಕೆ ಕಾರಣವಾದ ಭಾವನೆಗೆ ಶುಭೋಪಯೋಗವೆಂದೂ ಪಾಪಕ್ಕೆ ಕಾರಣವಾದ

ಭಾವನೆಗೆ **ಅಶುಭೋಪಯೋಗ**ವೆಂದೂ ಹೆಸರು. ಇದಕ್ಕೊಂದು ದೃಷ್ಟಾಂತ:

ಒಂದು ಪಾತ್ರೆಯಲ್ಲಿ ಅಮೃತವನ್ನು ತುಂಬಿರುವಾಗ ಅದರೊಳಗೆ ಬಂದು ಬೀಳುವ ಧೂಳಿವ ಸೂಕ್ಷ್ಮಕಣಗಳು ಅಮೃತರೂಪವಾಗಿ ಪರಿಣಮಿಸುತ್ತವೆ. ಆ ಪಾತ್ರೆಯಿಂದ ಅಮೃತವನ್ನು ತೆಗೆದು ಅದರಲ್ಲಿ ವಿಷವನ್ನು ತುಂಬಿಸಿದರೆ ಆಗ ಆದರೊಳಗೆ ಬಂದು ಬೀಳುವ ಧೂಳಿನ ಸೂಕ್ಷ್ಮಕಣಗಳು ವಿಷರೂಪವಾಗಿ ಪರಿಣಮಿಸುತ್ತವೆ. ಅದರಂತೆ ಕರ್ಮವು ಜೀವಾತ್ಮನ ಭಾವನೆಗೆ ಅನುಸಾರವಾಗಿ ಪುಣ್ಯರೂಪವಾಗಿ ಅಥವಾ ಪಾಪರೂಪವಾಗಿ ಪರಿಣಮಿಸುತ್ತದೆ. ಈ ಪುಣ್ಯಪಾಪರೂಪವಾದ ಮತ್ತು ಜಡವಾದ ಕರ್ಮಪರಮಾಣುಗಳು ಆತ್ಮನಿಗೆ ಹೇಗೆ ಬಂದು ಸೇರುತ್ತವೆ?– ಎಂದು ಕೇಳುವುದಾದರೆ, ಸೂಜಿಗಲ್ಲು ಸೂಜಿಯನ್ನು ಹೇಗೆ ಎಳೆಯುತ್ತದೋ ಕಾಯಿಸಿದ ಕಬ್ಬಿಣವನ್ನು ನೀರಿನಲ್ಲಿ ಹಾಕಿದರೆ ಅದು ನೀರನ್ನು ಹೇಗೆ ಹೀರುತ್ತದೋ ಹಾಗೆ ರಾಗ, ದ್ವೇಷ, ಮೋಹಾದಿ ಭಾವನೆಗಳಿಂದ ಕೂಡಿರುವ ಜೀವಾತ್ಮನಲ್ಲಿ ಕರ್ಮಾಣುಗಳು ಆಕರ್ಷಿಸಲ್ಪಟ್ಟು ಬಂದು ಸೇರುತ್ತವೆ. ಹಾಗೆ ಸೇರಿದ ಕರ್ಮಗಳ ಅಣುಗಳು ಜೀವಾತ್ಮನ ತೀವ್ರವಾದ ಅಥವಾ ಮಂದವಾದ ಭಾವನೆಗೆ ಅನುಸಾರವಾಗಿ ಅಂಟಿಕೊಂಡಿದ್ದು ಕಾಲದ ಅವಧಿಯು ತೀರಿದ ಬಳಿಕ ಪುಣ್ಯಕರ್ಮಾಣುಗಳು ಸುಖವನ್ನೂ ಪಾಪಕರ್ಮಾಣುಗಳು ದುಃಖವನ್ನೂ ಉಂಟುಮಾಡಿ ಜೀವಾತ್ಮನಿಂದ ಬೇರೆಯಾಗುತ್ತವೆ. ಆಗ ನೂತನವಾದ ಕರ್ಮಪರಮಾಣುಗಳು ಬಂದು ಸೇರುತ್ತಲೂ ಇರುತ್ತಲೂ ಇರುತ್ತವೆ. ಈ ಪರಂಪರೆಯು, ಬೀಜವೃಕ್ಷ ಪರಂಪರೆಯಂತೆ, ಅನಾದಿಕಾಲದಿಂದ ಬಂದಿದೆ. ಒಂದು ಸರ್ತಿ ಬೀಜವನ್ನು ಅಥವಾ ವೃಕ್ಷವನ್ನು ನಾಶಮಾಡಿದರೆ ಗೊತ್ತಾದ ಆ ಬೀಜದ ಅಥವಾ ವೃಕ್ಷದ ಪರಂಪರೆಯು ಅಲ್ಲಿಗೆ ಕೊನೆಗಾಣುವದು. ಹಾಗೆಯೇ ಒಂದು ಸರ್ತಿ ಜೀವಾತ್ಮನು ಅಸಮಸಾಹಸವನ್ನು ಮಾಡಿ ತಪಸ್ಸು, ಭೇದವಿಜ್ಞಾನತತ್ತ್ವ ಭಾವನಾಪರಮಸಮಾಧಿರೂಪವಾದ ಸಾಧನವಿಶೇಷಗಳಿಂದ ನೂತನಕರ್ಮಗಳನ್ನು ತಡೆಯುತ್ತಲೂ ಪುರಾತನಕರ್ಮಗಳನ್ನು ನಾಶಮಾಡುತ್ತಲೂ ಬಂದು ಶುದ್ಧ–ಪರಮಾತ್ಮನಾದರೆ ಆಗ ಆ ಕರ್ಮಪರಮಾಣುಗಳ ಆಗಮನನಿರ್ಗಮನಗಳು ನಿಂತು ಹೋಗುವುವು.

ಮೋಡವು ಸೂರ್ಯನನ್ನು ಆವರಿಸಿಕೊಂಡು ಅವನ ಪ್ರಕಾಶಗುಣವನ್ನು ಮರೆಮಾಡುವಂತೆ, ಕರ್ಮಪರಮಾಣುಗಳು ಜೀವಾತ್ಮನಲ್ಲಿ ಸೇರಿಕೊಂಡು ಇವನ

ಅನಂತವಾದ ಜ್ಞಾನದರ್ಶನಸುಖಶಕ್ತಿ ಮೊದಲಾದ ಗುಣಗಳನ್ನು ಮರೆಮಾಡುತ್ತವೆ. ಆ ಮೋಡವು ಚದರಿಹೋದರೆ ಸೂರ್ಯನ ಪ್ರಕಾಶವು ವ್ಯಕ್ತವಾಗುವಂತೆ ಜೀವಾತ್ಮನಲ್ಲಿ ಸೇರಿರುವ ಕರ್ಮಪರಮಾಣುಗಳು ಮೇಲೆ ಹೇಳಲ್ಪಟ್ಟ ಸಾಧನ ವಿಶೇಷಗಳಿಂದ ಸಂಪೂರ್ಣವಾಗಿ ಬಿಟ್ಟು ಹೋದರೆ ಆಗ ಜೀವಾತ್ಮನಲ್ಲಿ ಅಡಗಿರುವ ಅನಂತವಾದ ಜ್ಞಾನಾದಿಗುಣಗಳು ಅಭಿವ್ಯಕ್ತವಾಗುವುವು. ಅಂತಹ ಜೀವಾತ್ಮನೇ ಪರಮಾತ್ಮನೆನಿಸುವನು.

ಒಂದು ವಸ್ತ್ರವನ್ನು ಏಳೆಂಟು ಮಡಿಕೆಮಾಡಿ ಅದರಿಂದ ದೀಪವನ್ನು ಮುಚ್ಚಿದರೆ ಅದರ ಪ್ರಕಾಶವು ಈಚೆಗೆ ಬರುವುದಿಲ್ಲ. ಆ ವಸ್ತ್ರದ ಒಂದೊಂದು ಮಡಿಕೆಯನ್ನು ತೆಗೆದಹಾಗೆಲ್ಲ ದೀಪದ ಪ್ರಕಾಶವು ವ್ಯಕ್ತವಾಗುತ್ತಿದ್ದು ಆ ವಸ್ತ್ರವೆಲ್ಲವೂ ದೂರವಾದರೆ ದೀಪದ ಪ್ರಕಾಶವು ಸಂಪೂರ್ಣವಾಗಿ ವ್ಯಕ್ತವಾಗುವದಷ್ಟೆ, ಅದರಂತೆ ಜೀವಾತ್ಮನ ಪ್ರಯತ್ನವಿಶೇಷದಿಂದ ಕರ್ಮಪರಮಾಣುಗಳ ಆವರಣವು ದೂರವಾದ ಹಾಗೆಲ್ಲ ಜ್ಞಾನಾದಿಗುಣಗಳು ಹೆಚ್ಚುಹೆಚ್ಚಾಗಿ ವ್ಯಕ್ತವಾಗುತ್ತಿದ್ದು ಆ ಕರ್ಮಾವರಣವು ಸಂಪೂರ್ಣವಾಗಿ ದೂರವಾದರೆ ಸರ್ವಜ್ಞತ್ವಾದಿಗುಣಗಳು ಸಂಪೂರ್ಣವಾಗಿ ಅಭಿವ್ಯಕ್ತವಾಗುವವು.

ಜೀವಾತ್ಮನು ಮುಕ್ತಾತ್ಮ-ಪರಮಾತ್ಮನಾಗ ಬೇಕಾದರೆ ಪುಣ್ಯಕರ್ಮಪಾಪ ಕರ್ಮಗಳೆರಡರಿಂದಲೂ ಸಂಪೂರ್ಣವಾಗಿ ಬಿಡುಗಡೆಯನ್ನು ಹೊಂದಬೇಕು. ಪುಣ್ಯಕರ್ಮದಿಂದ ಸುಖವುಂಟಾಗುವದೆಂದಮೇಲೆ ಅದೇಕೆ ಜೀವಾತ್ಮನು ಆ ಕರ್ಮದಿಂದಲೂ ಬಿಡುಗಡೆಯನ್ನು ಹೊಂದಬೇಕು?- ಎಂದು ಕೇಳಿದರೆ ಪುಣ್ಯಕರ್ಮದಿಂದುಂಟಾಗುವ ಸುಖವು ಅನಿತ್ಯವಾದುದು, ಅಲ್ಪವಾದುದು, ಮತ್ತು ಅಸ್ವಾಭಾವಿಕವಾದುದು. ಪುಣ್ಯಕರ್ಮವು ತೀರಿದಬಳಿಕ ಜೀವಾತ್ಮನು ದುಃಖಕ್ಕೇ ಬೀಳಬೇಕಾಗುವುದು. ಒಬ್ಬ ಅಪರಾಧಿಯನ್ನು ಚಿನ್ನದ ಸಂಕಲೆಯಿಂದ ಬಂಧಿಸಿದರೂ ಕಬ್ಬಿಣದ ಸಂಕಲೆಯಿಂದ ಬಂಧಿಸಿದರೂ ಬಂಧನಗಳೆರಡೂ ಸಮಾನವೇ. ಅದರಂತೆ ಪುಣ್ಯಕರ್ಮವಾದರೂ ಜೀವಾತ್ಮನನ್ನು ಭವಬಂಧನದಲ್ಲಿರಿಸುವುದು; ಪಾಪಕರ್ಮವಾದರೂ ಭವಬಂಧನದಲ್ಲಿರಿಸುವುದು. ಕನ್ನಡಿಗೆ ಗಂಧವನ್ನು ಬಳಿದರೂ ಅದು ಮಂಕಾಗುವುದು; ಕೆಸರನ್ನು ಬಳಿದರೂ ಮಂಕಾಗುವುದು ಹಾಗೆ ಜೀವಾತ್ಮನ ಅನಂತಜ್ಞಾನ ಆನಂದಾದಿ ಗುಣಗಳ ವಿಶುದ್ಧತೆಯನ್ನು ಪುಣ್ಯಕರ್ಮಪಾಪಕರ್ಮಗಳೆರಡೂ ಹಾಳು ಮಾಡುವದರಿಂದ ಅವೆರಡೂ ಆತ್ಮಜ್ಞಾನಿಗೆ ಹೇಯಗಳೇ ಅಗಿರುತ್ತವೆ.

ಮೇಲೆ ಹೇಳಿರುವಂತೆ ತಪಸ್ಸು ನಿರ್ವಿಕಲ್ಪಪರಮಸಮಾಧಿ ಮೊದಲಾದ ಸಾಧನಗಳಿಂದ ಜೀವಾತ್ಮನು ಶಿಲೆಯಿಂದ ಸುವರ್ಣವು ಬೇರೆಯಾಗುವಂತೆಯೂ ಹೊಟ್ಟಿನಿಂದ ಅಕ್ಕಿಯು ಬೇರೆಯಾಗುವಂತೆಯೂ ಶರೀರ ಮೊದಲಾದ ಸಮಸ್ತಪುಣ್ಯಪಾಪಕರ್ಮಗಳಿಂದ ಬಿಡುಗಡೆಯನ್ನು ಹೊಂದಿ ಪರಮಾತ್ಮನಾಗುವದಕ್ಕೆ ಮೋಕ್ಷವೆಂದೂ ಕೈವಲ್ಯವೆಂದೂ ಹೆಸರು. ಒಣಗಿರುವ ಸೋರೆಕಾಯಿಗೆ ಮಣ್ಣನ್ನು ಮೆತ್ತಿ ಒಣಗಿಸಿ ನೀರಿನಲ್ಲಿ ಬಿಟ್ಟರೆ ಅದು ತಳದಲ್ಲಿ ಹೋಗಿ ನಿಲ್ಲುವದು. ಆ ಮಣ್ಣಿನ ಲೇಪವು ಕರಗಿದ ಬಳಿಕ ಆ ಕಾಯಿಯು ತನ್ನ ಸ್ವಾಭಾವಿಕವಾದ ಹಗುರವಾಗಿರುವಿಕೆಯೆಂಬ ಗುಣದಿಂದ ನೀರಿನಮೇಲೆ ಬಂದುನಿಲ್ಲುವದು. ಅದರಂತೆ ಜೀವಾತ್ಮಾನು ಕರ್ಮ ಲೇಪದಿಂದ ಬಿಡುಗಡೆಯನ್ನು ಹೊಂದಿದ ಬಳಿಕ ಪರಮಾತ್ಮನಾಗಿ ''ತದನಂತರಮೂರ್ಧ್ವಂ ಗಚ್ಛತ್ಯಾಲೋಕಾಂತಾತ್'' ಎಂಬ ಸೂತ್ರದಲ್ಲಿ ಹೇಳಿರುವಂತೆ ಊರ್ಧ್ವಗಮನ ಸ್ವಭಾವದಿಂದ ಲೋಕದ ತುತ್ತುತುದಿಗೆ ಹೋಗಿ ''ಲೋಯಗ್ಗಟ್ಟ ದಾಣಿಚ್ಚಾ-ಲೋಕಾಗ್ರಸ್ಥಿತಾ ನಿತ್ಯಾಃ'' ಎಂದು ದ್ರವ್ಯಸಂಗ್ರಹವೆಂಬ ಗ್ರಂಥದಲ್ಲಿಯೂ ''ಲೋಯಗ್ಗಮತ್ಥಯತ್ಥಾ-ಲೋಕಾಗ್ರಮಸ್ತಕಸ್ಥಾಃ'' ಎಂದು **ಸಿದ್ಧಭಕ್ತಿ**ಯೆಂಬ ಗ್ರಂಥದಲ್ಲಿಯೂ ಹೇಳಿರುವಂತೆ ಲೋಕಾಗ್ರಸ್ಥಾಪದಲ್ಲಿರುವ ವನಾಗಿಯೂ ನಿತ್ಯನಿರುಪಮ ಚಿದಾನಂದಸ್ವರೂಪನಾಗಿಯೂ ವಿರಾಜಮಾನನಾಗಿ ರುತ್ತಾನೆ. ಅಂತಹ ಮುಕ್ತಾತ್ಮರಿಗೆ ಪರಮಾತ್ಮರೆಂದೂ ಸಿದ್ಧಪರಮೇಷ್ಠಿಗಳೆಂದೂ ಚಿದಂಬರ ಪುರುಷರೆಂದೂ ನಿರಂಜನ ಸಿದ್ಧರೆಂದೂ ಹೆಸರು. ಮುಕ್ತಾತ್ಮರ ಆ ಪದವೇ ಬದ್ಧಾತ್ಮರ ಧ್ಯೇಯವಾಗಿರತಕ್ಕುದು. ಅದೇ ಕೊನೆಯ ಪುರುಷಾರ್ಥ ಅದೇ ನಿಜವಾದ ಸ್ವರಾಜ್ಯ.

ಅದುದರಿಂದ ಲೌಕಿಕವಿಷಯಗಳಲ್ಲೇ ಅಲ್ಲದೆ ಪಾರಲೌಕಿಕ ವಿಷಯಗಳಲ್ಲಿಯೂ ಪ್ರೀತಿವಿಶ್ವಾಸವುಳ್ಳ ವಿವೇಕಿಗಳು **ರತ್ನಾಕರಶತಕ**ದಲ್ಲಿ ರತ್ನಾಕರ ಕವಿಪುಂಗವನು-

**''ಉಂಬೂಟಂಮಿಗಿಲಾಗೆ ಏರುವ ಹಂಬಂ ಬೆಚ್ಚಲ್ಕೆ ನೀರ್ಮೂಗಿನೊಳ್**
**ತುಂಬಲ್ ಪೋಗುತೆ ಮುಗ್ಗೆಯುಂ ಮರಣಮಕ್ಕುಂ ಜೀವಕೀ ದೇಹವೆಷ್ಟಂ**
**ಬಾಳ್ದಷ್ಟದು ಲಾಭವೀ ಕಿಡುವ ಮೆಯ್ಯಂ ಕೊಟ್ಟು ನಿತ್ಯತ್ವವಾದಿಂಬಂ**
**ಧರ್ಮದೆ ಕೊಂಬವಂ ಚದುರನೈ ರತ್ನಾಕರಾಧೀಶ್ವರಾ ॥''**

ಎಂದು ಹೇಳಿರುವಂತೆ ಈ ಅನಿತ್ಯವಾದ ದೇಹವನ್ನು ದಿನರಾತ್ರಿ ವಿಷಯಭೋಗ ಲಂಪಟತೆಗೇ ಉಪಯೋಗಿಸದೆ ಇದನ್ನು ಧರ್ಮಸಾಧನೆಗೂ ಉಪಯೋಗಿಸಬೇಕೆಂಬುದು ಜೈನಸಿದ್ಧಾಂತದ ಮುಖ್ಯತತ್ತ್ವ.

ವಿ.ಸೂ: ಕರ್ಮವು ಘಾತಿಕರ್ಮವೆಂದೂ ಅಘಾತಿಕರ್ಮವೆಂದೂ ಎರಡು ಪ್ರಕಾರವಾಗಿದೆ. ಘಾತಿಕರ್ಮವು ಆತ್ಮನ ಅನಂತಜ್ಞಾನಾದಿಗುಣಗಳನ್ನು ಘಾತಮಾಡುವದು. ಆ ಗುಣಗಳನ್ನು ನಾಶಮಾಡದಿರುವ ಲಘುಕರ್ಮಕ್ಕೆ ಅಘಾತಿಕರ್ಮವೆಂದು ಹೆಸರು. ಘಾತಿಕರ್ಮವು ಜ್ಞಾನಾವರಣ, ದರ್ಶನಾವರಣ, ಮೋಹನೀಯ, ಅಂತರಾಯಗಳೆಂದು ನಾಲ್ಕು ಪ್ರಭೇದಗಳುಳ್ಳದಾಗಿದೆ. ಅಘಾತಿಕರ್ಮವೂ ವೇದನೀಯ, ಆಯುಷ್ಯ, ನಾಮ, ಗೋತ್ರಗಳೆಂದು ನಾಲ್ಕು ಪ್ರಭೇದಗಳುಳ್ಳುದಾಗಿದೆ. ಈ ಜಡರೂಪವಾದ ಕರ್ಮಪರಮಾಣುಗಳ ಪಿಂಡಕ್ಕೆ ದ್ರವ್ಯಕರ್ಮವೆಂದೂ ಅವುಗಳ ಪ್ರೇರಣೆಯಿಂದುಂಟಾಗುವ ಕ್ರೋಧ, ರಾಗ, ದ್ವೇಷ, ಮೋಹ, ಮದ, ಮಾತ್ಸರ್ಯ, ಭಕ್ತಿ, ಪ್ರೀತಿ, ಮೊದಲಾದ ಭಾವನೆಗಳಿಗೆ ಭಾವಕರ್ಮವೆಂದೂ ಹೆಸರು. ಕರ್ಮವು ಆತ್ಮಪ್ರದೇಶಕ್ಕೆ ಬಂದು ಸೇರುವದಕ್ಕೆ ಆಸ್ರವತತ್ತ್ವವೆಂದೂ ಆತ್ಮಪ್ರದೇಶಗಳಲ್ಲಿ ಕರ್ಮವು ಕ್ಷೀರದಂತೆ ಬೆರೆಯುವದಕ್ಕೆ ಬಂಧತತ್ತ್ವವೆಂದೂ ಕರ್ಮದ ಬರುವಿಕೆಯನ್ನು ವ್ರತಾದಿಗಳಿಂದ ತಡೆಯುವದಕ್ಕೆ ಸಂವರತತ್ತ್ವವೆಂದೂ ಕರ್ಮವು ಸ್ವಲ್ಪಸ್ವಲ್ಪವಾಗಿ ಆತ್ಮನಿಂದ ಬೇರೆಯಾಗುವದಕ್ಕೆ ನಿರ್ಜರತತ್ತ್ವವೆಂದೂ ಕರ್ಮವು ಸಂಪೂರ್ಣವಾಗಿ ಆತ್ಮನಿಂದ ಬೇರೆಯಾಗುವದಕ್ಕೆ ಮೋಕ್ಷತತ್ತ್ವವೆಂದೂ ಹೆಸರು.

ಸಿದ್ಧ ಪರಮಾತ್ಮರು ಘಾತಿ ಅಘಾತಿರೂಪವಾದ ಅಷ್ಟ ಕರ್ಮಗಳಿಂದ ಎಲ್ಲಿ ಮುಕ್ತರಾಗುತ್ತಾರೋ ಅಲ್ಲೇ ಇರೆದೆ ಉರ್ದ್ವಗಮನಸ್ವಭಾವದಿಂದ ಲೋಕಾಗ್ರಕ್ಕೆ ಹೋಗಿ ಅಲ್ಲಿ ಸುಖದಿಂದ ತಣಿದವರೂ ನಿರಂಜನರೂ ನಿತ್ಯರೂ ಆವಿರ್ಭೂತವಾದ ಕ್ಷಾಯಿಕ ಸಮ್ಯಕ್ತ್ವ, ಜ್ಞಾನದರ್ಶನ, ಶಕ್ತಿ, ಸೂಕ್ಷ್ಮತ್ವ, ಅವಗಹನತ್ವ, ಅಗುರುಲಘುತ್ವ, ಅವ್ಯಾಬಾಧತ್ವಗಳೆಂಬ ಎಂಟು ಗುಣಗಳುಳ್ಳವರೂ ಕೃತಕೃತ್ಯರೂ ಲೋಕಾಗ್ರನಿವಾಸಿಗಳೂ ಆಗಿರುತ್ತಾರೆಂದು ಅನೇಕ ಜೈನಗ್ರಂಥಗಳಲ್ಲಿರುವ ಉಲ್ಲೇಖನಗಳಿಂದ ಗೊತ್ತಾಗುವದು. ಇಲ್ಲಿ ಒಂದು ಉಲ್ಲೇಖನವು ಮಾತ್ರ ಕೊಡಲ್ಪಡುವುದು:

**ಅಟ್ಠವಿಹಕಮ್ಮವಿಯಲಾ ಸೀದೀಭೂದಾಣಿರಂಜಣಾ ಣಿಚ್ಚಾ**
**ಅಟ್ಠಗುಣಾ ಕಿದಕಿಚ್ಚಾ ಲೋಯಗ್ಗಣಿವಾಸಿಣೋ ಸಿದ್ಧಾ ॥**

**ಗೋಮಟಸಾರ – ಜೀವಕಾಂಡ**

**(ಸಂಸ್ಕೃತಛಾಯಾ)**
**ಅಷ್ಟವಿಧಕರ್ಮವಿಕಲಾಃ ಶೀತೀಭೂತಾ ನಿರಂಜನಾ ನಿತ್ಯಾಃ।**
**ಅಷ್ಟಗುಣಾಃ ಕೃತಕೃತ್ಯಾ ಲೋಕಾಗ್ರನಿವಾಸಿನಃ ಸಿದ್ಧಾಃ ॥**

ಹೀಗೆ ಜೈನಸಿದ್ಧಾಂತದಲ್ಲಿ ಉಲ್ಲೇಖವಿದ್ದರೂ ಕೆಲವರು ''ಜೈನಸಿದ್ಧಾಂತದಲ್ಲಿ ಮುಕ್ತಾತ್ಮರು ಯಾವಾಗಲೂ ಮೇಲೆ ಹೋಗುತ್ತಲೇ ಇರುತ್ತಾರೆಂದು ಹೇಳಿದೆ'' ಎಂದು ತಿಳಿದಿರುವದೂ ಉಲ್ಲೇಖಿಸಿರುವದೂ ಸರಿಯಲ್ಲವೆಂದು ಮೇಲಿನ ವಿವರಣೆಯಿಂದ ವ್ಯಕ್ತವಾಗುವದು.

ಆತ್ಮನು ಯಾವಾಗಲೂ ಕರ್ಮರಹಿತನೆಂದು ಸದಾಶಿವಮತವೂ ಸುಖರಹಿತನೆಂದು ಸಾಂಖ್ಯಮತವೂ ಮುಕ್ತಾತ್ಮನು ಪುನಃ ಭವಕ್ಕೆ ಬರುತ್ತಾನೆಂದು ಮಸ್ಕರಿ ಮತವೂ ಆತ್ಮನು ಕ್ಷಣಿಕನೆಂದು ಬೌದ್ಧಮತವೂ ಆತ್ಮನು ನಿರ್ಗುಣನೆಂದು ಯೌಗ ಮತವೂ ಕೃತಕೃತ್ಯನೆಂದು ಈಶ್ವರಮತವೂ ಮುಕ್ತಾತ್ಮನು ಯಾವಾಗಲೂ ಮೇಲೆ ಹೋಗುತ್ತಿರುತ್ತಾನೆಂದು ಮಂಡಲಿಮತವೂ ಹೇಳುತ್ತದೆಂದು ಈ ಕೆಳಗಿನ ಶ್ಲೋಕಗಳಿಂದ ಗೊತ್ತಾಗುವದು:

**ಸದಾಶಿವಃ ಸದಾಽಕರ್ಮಾ ಸಾಂಖ್ಯೋ ಮುಕ್ತಂ ಸುಖೋಜ್ಝಿತಂ ।**
**ಮಸ್ಕರೀ ಕಿಲ ಮುಕ್ತಾನಾಂ ಮನ್ಯತೇ ಪುನರಾಗತಿಂ ॥**
**ಕ್ಷಣಿಕಂ ನಿರ್ಗುಣಂ ಚೈವ ಬುದ್ಧೋ ಯೌಗಶ್ಚ ಮನ್ಯತೇ ।**
**ಕೃತಕೃತ್ಯಂ ತಮೀಶಾನೋ ಮಂಡಲೀ ಚೋರ್ಧ್ವಗಾಮಿನಂ ॥**

**ಇತಿ ಓಂ ಶಾಂತಿಃ**

★★★★★

# ವಿದುಷಿ ಜಯಂತಿ

## ಶ್ರೀ ಕೆ. ಭುಜಬಲಿಶಾಸ್ತ್ರಿಗಳು, ನ್ಯಾಯಭೂಷಣಾಚಾರ್ಯ, ಆರಾ

ಜಯಂತಿಯು ರಾಜ ಸಹಸ್ರಾನಿಕನ ಪುತ್ರಿಯೂ ಕೌಶಂಬಿಯ ದೊರೆಯಾದ ಉದಯನನ ಅತ್ತೆಯೂ ಆಗಿದ್ದಳು. ದೊರೆಯು ಅವಳನ್ನು ಬಹಳ ಗೌರವದಿಂದ ನೋಡುತ್ತಿದ್ದನು. ಭಗವಾನ್ ಮಹಾವೀರರು ಆ ಸಮಯದಲ್ಲಿ ಭಾರತವರ್ಷದಲ್ಲಿ ಜೈನಧರ್ಮದ ಪ್ರಚಾರವನ್ನು ಮಾಡುತ್ತಿದ್ದರು. ತಿರುಗುತ್ತಾ ತಿರುಗುತ್ತಾ ಅವರು ಕೌಶಂಬಿಗೂ ದಯಮಾಡಿಸಿದ್ದರು. ರಾಜ ಉದಯನನು ಅವರ ಶುಭಾಗಮನದಿಂದ ಸಂತುಷ್ಟನಾಗಿ ಸಂಪೂರ್ಣ ನಗರವನ್ನು ತಳಿರುತೋರಣಾದಿಗಳಿಂದ ಅಲಂಕರಿಸಿ ಅವರನ್ನು ಅತ್ಯಂತಭಕ್ತಿಯಿಂದ ಪೂಜಿಸಿದ್ದನು. ರಾಜಪರಿವಾರವೂ ಅವರ ದರ್ಶನಕ್ಕಾಗಿ ಹೋಗಿತ್ತು. ದರ್ಶನಾರ್ಥ ಹೋದ ರಾಜಕುಟುಂಬದ ಮಹಿಳೆಯರಲ್ಲಿ ಜಯಂತಿಯೂ ಒಬ್ಬಳಾಗಿದ್ದಳು. ಮಿಕ್ಕ ಮಹಿಳೆಯರು ಮಹಾವೀರರ ದರ್ಶನಮಾಡಿ ಹಿಂತಿರುಗಿದರೂ ಜ್ಞಾನಪಿಪಾಸುವಾದ ವಿದುಷಿ ಜಯಂತಿಯು ಮಾತ್ರ ಅವರ ಉಪದೇಶವನ್ನು ಕೇಳುವುದಕ್ಕೋಸ್ಕರ ಬಹಳ ಹೊತ್ತು ಅಲ್ಲಿಯೇ ಕೂತುಬಿಟ್ಟಳು. ಶ್ರೀ ಮಹಾವೀರರ ಉಪದೇಶವು ಮುಗಿದ ಮೇಲೆ ಆಕೆಯು ಅವರಲ್ಲಿ ತತ್ತ್ವಜ್ಞಾನಸಂಬಂಧವಾಗಿ ಅನೇಕ ಗೂಢಪ್ರಶ್ನೆಗಳನ್ನು ಮಾಡಿದಳು. ಅವುಗಳಲ್ಲಿ ಕೆಲವು ಇವು:

''ಭಗವನ್! ಜೀವನು ಹೇಗೆ ಭಾರ ಕರ್ಮಿಯಾಗುವನು?''

''ಜಯಂತಿ! ಹಿಂಸೆ, ಅಸತ್ಯ, ಕಳವು – ಮೊದಲಾದ ಹದಿನೆಂಟು ಪ್ರಕಾರವಾದ ಪಾಪಗಳನ್ನು ಮಾಡುವುದರಿಂದ ಜೀವನು ಭಾರಕರ್ಮಿಯಾಗುವನು.''

''ಭಗವನ್! ಸ್ವಪ್ನಾವಸ್ಥೆಗಿಂತಲೂ ಜಾಗರಣಾವಸ್ಥೆಯಲ್ಲಿ ಜೀವನು ಹೆಚ್ಚಾಗಿ ಪಾಪಮಾಡುತ್ತಾನೆ. ಆದುದರಿಂದ ಸದಾ ಮಲಗಿರುವುದು ಉತ್ತಮವೋ, ಅಥವಾ ಎಚ್ಚರದಿಂದಿರುವುದು ಉತ್ತಮವೋ?''

''ಜಯಂತಿ! ಸದಾಚರಣವನ್ನು ಆಚರಿಸದಿರುವವನೂ ಹಿರಿಯರ ಹಾಗೂ ಪೂಜ್ಯರ ಆಜ್ಞೆಯನ್ನು ಉಲ್ಲಂಘಿಸುವವನೂ ಧರ್ಮವಿಮುಖನೂ

ಸ್ವಕುಲಾಚಾರವನ್ನು ಬಿಟ್ಟವನೂ ಅನೀತಿದುರಾಚಾರಗಳನ್ನು ಸೇವಿಸುವವನೂ ಹಾಸಿಗೆಯ ಮೇಲೆ ಬಿದ್ದುಕೊಂಡು ಗೊರಕಿಹೊಡೆಯುವದೇ ಲೇಸು. ಏತಕ್ಕೆಂದರೆ ಅಂತಹ ವ್ಯಕ್ತಿಗಳಿಂದ ಪರರಿಗೆ ಪೀಡೆಯೇ ಹೊರತು ಉಪಕಾರವು ಆಗುವಹಾಗಿಲ್ಲ. ಇದಕ್ಕೆ ವಿಪರೀತವಾಗಿ ಸದಾಚಾರಿಯೂ ಧಾರ್ಮಿಕನೂ ಪರೋಪಕಾರಿಯೂ ಗುರುಹಿರಿಯರಲ್ಲಿ ಭಕ್ತಿಯುಳ್ಳವನೂ ನೀತಿಗೂ ಧರ್ಮಕ್ಕೂ ಅನುಕೂಲವಾಗಿ ನಡೆಯುವವನೂ ಎಚ್ಚರವಾಗಿರುವುದು ಮೇಲು. ಏತಕ್ಕೆಂದರೆ ಅವನು ಸಮಾಜಕ್ಕೂ ಅನ್ಯಪ್ರಾಣಿಗಳಿಗೂ ಯಥೇಚ್ಛಹಿತವನ್ನು ಮಾಡಬಲ್ಲನು.''

''ಭಗವನ್! ಬಲಿಷ್ಠರಾಗಿರುವುದು ಉತ್ತಮವೆ, ನಿರ್ಬಲರಾಗಿರುವುದು ಉತ್ತಮವೆ?''

''ಜಯಂತಿ! ಮೇಲೆ ಹೇಳಿದ ಪಾಪಾತ್ಮರು ನಿರ್ಬಲರಾಗಿರುವದೇ ಒಳ್ಳೆಯದು. ಅವರು ದುರ್ಬಲರಾಗಿರುವುದರಿಂದ ಅನ್ಯಪ್ರಾಣಿಗಳು ಅವರ ಪೀಡೆಯಿಂದ ಬದುಕುತ್ತಾರೆ. ಆದರೆ ಧರ್ಮಾತ್ಮರು ಬಲಿಷ್ಠರಾಗಿರುವುದೇ ಉತ್ತಮ. ಏತಕ್ಕೆಂದರೆ, ಅವರು ತಮ್ಮ ಬಲದಿಂದ ಇತರರಿಗೆ ಕಲ್ಯಾಣವನ್ನು ಮಾಡಬಲ್ಲರು.''

''ಭಗವನ್! ಜೀವನು ಉದ್ಯಮಿ (ಪುರಾಷಾರ್ಥಿ)ಯಾಗಿರುವುದು ಉತ್ತಮವೆ, ಆಲಸಿಯಾಗಿರುವುದು ಉತ್ತಮವೆ?''

''ಜಯಂತಿ! ಧರ್ಮಾತ್ಮರು ಉದ್ಯೋಗಿಗಳಾಗಿರುವುದೇ ಲೇಸು. ಆದರೆ ಪಾಪಾತ್ಮರು ಆಲಸಿಗಳಾಗಿರುವುದೇ ಮೇಲು. ಏತಕ್ಕೆಂದರೆ ಅಷ್ಟು ಹೊತ್ತಾದರೂ ಅವರು ದುಷ್ಕಾರ್ಯಗಳಿಂದ ಬದುಕುವರು.''

ಜಯಂತಿಯ ಈ ತತ್ತ್ವಜಿಜ್ಞಾಸೆಯಿಂದ ನಮಗೆ ಸಹಸಾ ಪ್ರಾಚೀನ ಕಾಲದ ಮೈತ್ರೇಯಿ. ಗಾರ್ಗಿ–ಮೊದಲಾದ ಬ್ರಹ್ಮಜಿಜ್ಞಾಸುಗಳಾದ ಆದರ್ಶ ವಿದುಷಿಯರು ನೆನಪಾಗುವರು.

★★★★★

# ಅನಾಥೀ ಮುನಿ

## -ಶ್ರೀಮದ್ರಾಜಚಂದ್ರ ಎಂಬ ಜೈನಗ್ರಂಥದಿಂದ ಕನ್ನಡಿಸಿದ್ದು

ಸರ್ವಸಂಪದ್ಯುಕ್ತವಾದ ಮಗಧದೇಶದ ಶ್ರೇಣಿಕನೆಂಬ ರಾಜನು ಕುದುರೆಯ ಸವಾರಿಗಾಗಿ ಹೊರಟು ಮಂಡಿಕುಕ್ಷ ಎಂಬ ವನಕ್ಕೆ ಬಂದನು. ವನದ ವೈಚಿತ್ರ್ಯವು ಮನೋಹರವಾಗಿತ್ತು. ಅಲ್ಲಿ ಬಗೆಬಗೆಯ ಮರಗಳು ನಿಂತಿದ್ದವು. ಬಗೆಬಗೆಯ ಬಳ್ಳಿಗಳು ಬಳುಬಳುಕುತ್ತಾ ಹಬ್ಬಿದ್ದವು; ಬಗೆಬಗೆಯ ಪಕ್ಷಿಗಳು ಆ ಬಳ್ಳಿಗಳ ಮೇಲೆ ಕುಳಿತಿದ್ದವು; ಬಗೆಬಗೆಯ ಪಕ್ಷಿಗಳ ಇಂಪಿನ ಗಾನವು ಅಲ್ಲಿ ಕೇಳಬರುತ್ತಿತ್ತು; ಬಗೆಬಗೆಯ ಹೂಗಳು ಆ ವನದಲ್ಲಿ ಘಮಘಮಿಸುತ್ತಿದ್ದವು; ಬಗೆಬಗೆಯ ನೀರಿನ ಝುರಿಗಳು ಅಲ್ಲಿ ಹರಿದುಬರುತ್ತಿದ್ದವು. ಸ್ವಲ್ಪದರಲ್ಲಿ ಹೇಳಿದರೆ ಆ ವನವು ನಂದನವನದಂತೆ ಕಾಣಬರುತ್ತಿತ್ತು. ಪ್ರಶಾಂತವಾದ ಈ ವನದಲ್ಲಿ ಒಂದು ಮರದ ಬುಡದಲ್ಲಿ ಒಬ್ಬ ಸುಕುಮಾರ ಸುಖೋಚಿತ ಮುನಿಯು ಕುಳಿತಿದ್ದನು. ಇದನ್ನು ಕಂಡು ಆ ಶ್ರೇಣಿಕ ರಾಜನಿಗೆ ಅತ್ಯಂತ ಆನಂದವಾಯಿತು. ನಿರುಪಮವಾದ ಆತನ ರೂಪವನ್ನು ಕಂಡು ಬೆರಗಾಗಿ ಅವನು ತನ್ನಲ್ಲಿ ತಾನು ಹೀಗೆಂದು ಆತನನ್ನು ಕೊಂಡಾಡುವದಕ್ಕೆ ಮೊದಲುಮಾಡಿದನು. ''ಅಹ! ಈ ಮುನಿಯ ವರ್ಣವು ಎಂಥ ಅದ್ಭುತವಾದದ್ದು! ಈತನ ರೂಪವು ಎಂಥ ಮನೋಹರವಾದದ್ದು ! ಈತನ ಸೌಮ್ಯತೆಯು ಎಷ್ಟು ಅದ್ಭುತವಾಗಿದೆ! ಈತನು ಎಂಥ ವಿಸ್ಮಯಕಾರಕವಾದ ಕ್ಷಮೆಯನ್ನು ಧರಿಸಿರುವನು! ಈತನ ಶರೀರದಿಂದ ಎಂಥ ಉತ್ತಮವಾದ ವೈರಾಗ್ಯದ ಬೆಳಕು ಬೀರುತ್ತಿರುವದು! ಈತನ ನಿರ್ಲೋಭವು ಹೇಗೆ ಕಂಡುಬರುತ್ತಿದೆ, ಈ ಸಂಯಮಿಯ ಎಂಥ ನಿರ್ಭಯ ನಮ್ರತೆಯನ್ನು ತಾಳಿರುವನು! ಎಲ್ಲಾ ಭೋಗಗಳಿಂದಲೂ ಹೇಗೆ ವಿರಕ್ತನಾಗಿರುವನು!'' ಹೀಗೆಂದು ಚಿಂತಿಸುತ್ತ ಚಿಂತಿಸುತ್ತ, ಮೇಲಿಂದ ಮೇಲೆ ಆನಂದವನ್ನು ಹೊಂದಿ, ಆತನನ್ನು ಹೊಗಳುತ್ತಾಹೊಗಳುತ್ತಾ ಮೆಲ್ಲಮೆಲ್ಲಗೆ ನಡೆಯುತ್ತಾ ಆ ಮುನಿಯನ್ನು ಬಲವಂದು ತಲೆಬಾಗಿ ಬಹಳ ಹತ್ತಿರವೂ ಅಲ್ಲದೆ ಬಹಳ ದೂರವೂ ಅಲ್ಲದೆ ಆ ಶ್ರೇಣಿಕನು ಕುಳಿತುಕೊಂಡನು. ಬಳಿಕ ತನ್ನ ಎರಡು ಕೈಗಳನ್ನೂ ಜೋಡಿಸಿಕೊಂಡು ವಿನಯದಿಂದ ಆ ಮುನಿಯನ್ನು ಕುರಿತು ಹೀಗೆಂದು ಕೇಳಿದನು: ''ಆರ್ಯನೆ,

ನೀನು ಪ್ರಶಂಸನೀಯ ತಾರುಣ್ಯವಂತನು. ನಿನ್ನ ವಯಸ್ಸು ಭೋಗವಿಲಾಸಕ್ಕೆ ಅನುಕೂಲವಾಗಿದೆ. ಈ ಸಂಸಾರದಲ್ಲಿ ವಿಧವಿಧವಾದ ಸುಖವುಂಟು. ಒಂದೊಂದು ಋತುವಿನಲ್ಲಿಯೂ ಬೇರೆಬೇರೆಯ ಕಾಮ ಭೋಗಗಳಿವೆ, ಜಲಸಂಬಂಧದ ವಿಲಾಸಗಳಿವೆ, ಮನೋಹರಿಯರಾದ ಹೆಂಗಳೆಯರ ಮುಖವಾಣಿಯ ಮಧುರಶ್ರವಣವಿದೆ. ಇಷ್ಟೆಲ್ಲ ಇದ್ದರೂ ಇದೆಲ್ಲವನ್ನೂ ತ್ಯಜಿಸಿ ಮುನಿತ್ವವನ್ನು ಮಹಾಪ್ರಯತ್ನದಿಂದ ಸಾಧಿಸುತ್ತಿರುವೆಯಲ್ಲ! ಇದಕ್ಕೆ ಕಾರಣವೇನು? ಇದನ್ನು ನನಗೆ ಅನುಗ್ರಹಮಾಡಿ ಹೇಳಬೇಕು.'' ಆಗ ಮುನಿಯು ''ರಾಜನೆ, ನಾನು ಅನಾಥವಾಗಿದ್ದೆನು. ನನಗೆ ಅಪೂರ್ವ ವಸ್ತುವನ್ನು ತಂದು ಕೊಡುವ, ನನ್ನ ಯೋಗಕ್ಷೇಮವನ್ನು ನೋಡಿಕೊಳ್ಳುವ, ನನ್ನ ಮೇಲೆ ಕನಿಕರವನ್ನು ತೋರಿಸಬಲ್ಲ, ಕರುಣೆಯಿಂದ ಪರಮಸುಖವನ್ನು ಕೊಡಬಲ್ಲ ಮಿತ್ರನು ಯಾರೂ ಇಲ್ಲದಂತಾಯಿತು. ಆದ್ದರಿಂದ ನಾನು ಅನಾಥಿಯಾದೆನು'' ಎಂದನು. ಅರಸನು ಮುಗುಳುನಗೆಯಿಂದ ಇಂತೆಂದನು. ''ನೀನು ಏತಕ್ಕೆ ಮಹಾಭಾಗ್ಯವಂತರಿಗೆ ನಾಥನಾಗಬಾರದು? ನಿನಗೆ ಮತ್ತೆ ಯಾರೂ ನಾಥರಿಲ್ಲದಿದ್ದರೆ ನಾನೇ ಆಗುವೆನು. ಎಲೈ ಭಯತ್ರಾಣನೆ, ನೀನು ಭೋಗಗಳನ್ನು ಚೆನ್ನಾಗಿ ಅನುಭವಿಸು; ಮಿತ್ರರಿಂದಲಾಗಲಿ ನೆಂಟರಿಂದಲಾಗಲಿ ಪಡೆಯುವದಕ್ಕಾಗದ ಈ ನಿನ್ನ ಮನುಷ್ಯಜನ್ಮವನ್ನು ಸಫಲಮಾಡಿಕೊ!''

ಅನಾಥಿಯಿಂತೆಂದನು – ''ಆದರೆ ಶ್ರೇಣಿಕರಾಜನೆ, ನೀನೇ ಮೊದಲು ಅನಾಥನಾಗಿರುವೆ; ಹೀಗಿರುವಲ್ಲಿ ನನಗೆ ಹೇಗೆ ನಾಥನಾದೀಯೆ? ಹಣವಿಲ್ಲದವನು ಮತ್ತೊಬ್ಬನನ್ನು ಹೇಗೆ ಸಾಹುಕಾರನನ್ನಾಗಿ ಮಾಡಿಯಾನು? ಅವಿವೇಕಿಯು ಹೇಗೆತಾನೆ ವಿವೇಕವನ್ನು ಕೊಟ್ಟಾನು? ಬಂಜೆಯು ಹೇಗೆತಾನೆ ಪುತ್ರಸಂತಾನವನ್ನು ಕೊಟ್ಟಾಳು?''

ಮುನಿಯ ವಚನದಿಂದ ರಾಜನು ಪರ್ಯಾಕುಲಚಿತ್ತನಾದನು, ವಿಸ್ಮಿತನಾದನು. ತಾನು ಹಿಂದೆ ಎಂದೂ ಕೇಳದೆ ಇದ್ದ ಈ ವಚನವನ್ನು ಕೇಳಿ ಶಂಕಿತನಾಗಿ ''ಪೂಜ್ಯರೆ, ನಾನು ಅನೇಕ ಪ್ರಕಾರದ ಅಶ್ವಗಳನ್ನು ಭೋಗಿಸುತ್ತಿರುವೆನು, ಅನೇಕ ಪ್ರಕಾರದ ಮದ್ದಾನೆಗಳ ಒಡೆಯನಾಗಿರುವೆನು; ವಿಧವಿಧವಾದ ಸೇವೆಯು ನನ್ನ ವಶದಲ್ಲಿರುವದು. ನಗರ, ಗ್ರಾಮ, ಅಂತಃಪುರ, ಪಶುಪ್ರಾಣಿಗಳು–ಇವುಗಳಲ್ಲಿ ಯಾವದರ ಕೊರತೆಯೂ ನನಗಿಲ್ಲ. ಎಲ್ಲಾ ಬಗೆಯ ಮಾನವ ಭೋಗಗಳೂ ನನಗೆ

ದೊರಕಿರುವವು. ಸೇವಕರು ನನ್ನ ಅಣತಿಯನ್ನು ಸ್ವಲ್ಪವೂ ತಪ್ಪದೆ ಪಾಲಿಸುತ್ತಿರುವರು. ಹೀಗಿದ್ದರೂ ನಾನು ಹೇಗೆ ಅನಾಥನು? ದಯವಿಟ್ಟು ಹೇಳಿರಿ. ತಾವು ಎಂದಿಗೂ ಸುಳ್ಳು ಹೇಳುವರಲ್ಲವಲ್ಲ!'' ಎಂದನು.

ಮುನಿಯು ''ಅರಸೇ, ನೀನು ನನ್ನ ಮಾತನ್ನು ಸರಿಯಾಗಿ ತಿಳಿದುಕೊಳ್ಳಲಿಲ್ಲ. ನಾನು ಹೇಗೆ ಅನಾಥನಾದೆನೆಂಬುದನ್ನು, ಹೇಗೆ ಸಂಸಾರವನ್ನು ತ್ಯಜಿಸಿದೆ ನೆಂಬುದನ್ನು, ನಿನಗೆ ಹೇಳುವೆನು. ಅದನ್ನು ಚಿತ್ತವಿಟ್ಟು ಅಲೈಸು; ಆ ಬಳಿಕ ನಿನ್ನ ಶಂಕೆಯು ಸರಿಯಾದದ್ದೋ ಅಲ್ಲವೋ ನಿಶ್ಚಯಿಸುವೆಯಂತೆ. ಅತಿಪ್ರಾಚೀನವಾಗಿ ಯೂ ವಿವಿಧಪ್ರಕಾರದ ಭವ್ಯತೆಯಿಂದ ತುಂಬಿರುವದಾಗಿಯೂ ಇರುವ ಕೌಶಾಂಬಿ ಎಂಬ ಸುಂದರನಗರಿಯೊಂದುಂಟು. ಅಲ್ಲಿ ಐಶ್ವರ್ಯವಂತನಾದ ಧನಸಂಚಯ ಎಂಬ ಹೆಸರಿನ ನನ್ನ ತಂದೆ ಇದ್ದನು. ಎಲೈ ಮಹಾರಾಜನೆ, ಯೌವನದ ಮೊದಲ ಭಾಗದಲ್ಲಿ ನನ್ನ ಕಣ್ಣುಗಳಲ್ಲಿ ಭಾರಿಯ ನೋವು ಕಾಣಿಸಿಕೊಂಡಿತು. ಮೈಯಲ್ಲೆಲ್ಲ ಉರಿ ಎದ್ದುಕೊಂಡಿತು. ಶಸ್ತ್ರಕ್ಕಿಂತಲೂ ತೀಕ್ಷ್ಣವಾದ ಈ ಬೇನೆಯು ಶತ್ರುವಿನಂತೆ ನನ್ನ ಮೇಲೆ ಕೋಪಿಸಿಕೊಂಡಿತು. ಈ ಅಸಹ್ಯವಾದ ಕಣ್ಣು ಬೇನೆಯಿಂದ ನನ್ನ ತಲೆಯಲ್ಲಿ ನೋವು ಕಾಣಿಸಿಕೊಂಡಿತು. ಸಿಡಿಲು ಬಡಿದಂತೆ ಉಳಿದವರಿಗೂ ಮಹಾಭಯವನ್ನುಂಟುಮಾಡುವ ಈ ದಾರುಣವಾದ ನೋವಿನಿಂದ ನನಗೆ ಅತ್ಯಂತ ಶೋಕವುಂಟಾಯಿತು. ವೈದ್ಯಶಾಸ್ತ್ರದಲ್ಲಿ ನಿಪುಣರಾದವರನೇಕರು ಈ ನೋವನ್ನು ಕಳೆಯುವದಕ್ಕೆ ಬಂದು ಅನೇಕ ಔಷಧಗಳನ್ನು ಉಪಚಾರಗಳನ್ನೂ ಮಾಡಿದರು. ಆದರೆ ಅದೆಲ್ಲ ವ್ಯರ್ಥವಾಯಿತು. ಮಹಾನಿಪುಣರೆಂದೆನಿಸಿಕೊಂಡ ವೈದ್ಯರಾಜರುಕೂಡ ನನ್ನನ್ನು ರೋಗಮುಕ್ತನಾಗಿ ಮಾಡಲಾರದೆ ಹೋದರಷ್ಟೆ; ಎಲೈ ರಾಜನೆ, ಇದೇ ನನ್ನ ಅನಾಥತ್ವವು. ನನ್ನ ಕಣ್ಣುಬೇನೆಯನ್ನು ತೊಲಗಿಸುವದಕ್ಕೆ ನಮ್ಮ ತಂದೆಯು ತನ್ನ ಹಣವೆಲ್ಲವನ್ನೂ ವೆಚ್ಚಮಾಡಲಾರಭಿಸಿದನು; ಆದರೆ ಅದರಿಂದಲೂ ನನ್ನ ಆ ವೇದನೆ ಹೋಗಲಿಲ್ಲ. ರಾಜನೆ, ಇದೇ ನನ್ನ ಅನಾಥತ್ವವು. ನನ್ನ ತಾಯಿ ಪುತ್ರನಿಗಾಗಿ ಬಹಳ ದುಃಖಾರ್ತಳಾದಳು; ಆದರೆ ಆಕೆಯಿಂದಲೂ ನನ್ನನ್ನು ಬೇನೆಯಿಂದ ಬಿಡುಗಡೆಮಾಡಲಾಗಲಿಲ್ಲ. ರಾಜನೇ, ಇದೇ ನನ್ನ ಅನಾಥತ್ವವು. ಒಂದೇ ಹೊಟ್ಟೆಯಲ್ಲಿ ಒಡಹುಟ್ಟಿದ ನನ್ನ ಅಣ್ಣತಮ್ಮಂದಿರು ತಮ್ಮ ಕೈಯಲ್ಲಾದ ಪ್ರಯತ್ನವನ್ನೆಲ್ಲ ಮಾಡಿದರು; ಆದರೂ ಆ ನೋವು ಹೋಗಲಿಲ್ಲ. ರಾಜನೆ, ಇದೇ ನನ್ನ ಅನಾಥತ್ವವು. ಒಂದೇ ಹೊಟ್ಟೆಯಲ್ಲಿ ಹುಟ್ಟಿದ ನನ್ನ ಅಕ್ಕತಂಗಿ

ಯರಿಂದಲೂ ಆ ನನ್ನ ದುಃಖವು ಹೋಗಲಿಲ್ಲ; ರಾಜನೆ, ಇದೇ ನನ್ನ ಅನಾಥತ್ವವು. ಪತಿವ್ರತೆಯಾದ ನನ್ನ ಪತ್ನಿಯು ನನಲ್ಲಿ ಅನುರಕ್ತಳೂ ಪ್ರೇಮ ಯುಕ್ತಳೂ ಆಗಿದ್ದಳು; ಆಕೆ ತನ್ನ ಕಣ್ಣೀರಿನಿಂದ ನನ್ನ ಹೃದಯವನ್ನೇ ಕರಗಿಸಿದರೂ ಆಕೆಯು ಕೊಟ್ಟ ಅನ್ನಪಾನಗಳಿಂದಲೂ ಬಗೆಬಗೆಯ ಪರಿಮಳಯುಕ್ತ ವಿಲೇಪನಗಳಿಂದಲೂಕೂಡ ನನ್ನ ರೋಗವನ್ನು ಶಾಂತಿಗೊಳಿಸುವದಾಗಲಿಲ್ಲ. ಒಂದು ಕ್ಷಣವಾದರೂ ನನ್ನನ್ನಗಲಿರದ ಪತ್ನಿಯುಕೂಡ ನನ್ನ ರೋಗವನ್ನು ಕಳೆಯಲಾರದೆ ಹೋದಳಲ್ಲ! ಅರಸೇ, ಇದೇ ನನ್ನ ಅನಾಥತ್ವವು.

ಹೀಗೆ ಯಾರೊಬ್ಬರ ಪ್ರೇಮದಿಂದಲೂ ಯಾರೊಬ್ಬರ ಔಷಧಿಯಿಂದಲೂ ಯಾರೊಬ್ಬರ ಅಳುವಿನಿಂದಲೂ ಯಾರೊಬ್ಬರ ಪರಿಶ್ರಮದಿಂದಲೂ ಈ ರೋಗವು ಶಾಂತವಾಗಲಿಲ್ಲ. ಹೀಗೆ ನಾನು ಮತ್ತೆಮತ್ತೆ ಅಸಹ್ಯವಾದ ವೇದನೆಯನ್ನು ಅನುಭವಿಸಲಾರಂಭಿಸಿದೆನು. ಕೊನೆಗೆ ಸಂಸಾರದಲ್ಲಿ ವೈರಾಗ್ಯವುಂಟಾಯಿತು. ''ಈ ವಿಚಿತ್ರವಾದ ವೇದನೆಯು ನನ್ನನ್ನು ಒಂದು ವೇಳೆ ಬಿಟ್ಟು ಹೋದರೆ ಆಗ ನಿರಾರಂಭೀ ಪ್ರವ್ರಜ್ಯೆಯನ್ನು ಧರಿಸುವೆನು'' ಎಂದು ಸಂಕಲ್ಪಸಿಕೊಂಡು ನಿದ್ರೆ ಹೋದೆನು. ರಾತ್ರೆಯು ಕಳೆಯುವಷ್ಟರೊಳಗೆ ನನ್ನ ವೇದನೆಯು ಇಲ್ಲವಾಯಿತು. ಬೆಳಗಾಗುತ್ತಲೂ ತಾಯಿ, ತಂದೆ, ಸ್ವಜನ, ಬಾಂಧವರು–ಎಲ್ಲರನ್ನೂ ಬೀಳ್ಕೊಂಡು ನಾನು ಮಹಾಕ್ಷೇಮಾವಂತನಾಗಿ, ಇಂದ್ರಿಯನಿಗ್ರಹವನ್ನು ಮಾಡುವ, ಯಾವ ಆರಂಭವೆಂಬ ಉಪಾಧಿಯೂ ಇಲ್ಲದ ಸಂನ್ಯಾಸಿಯಾದೆನು.

ಎಲೈ ಶ್ರೇಣಿಕ ರಾಜನೆ, ಅಂದಿನಿಂದ ನಾನು ನನಗೂ ಮತ್ತೊಬ್ಬರಿಗೂ ನಾಥನಾದೆನು. ಈಗ ನಾನು ಎಲ್ಲಾ ಜೀವರಿಗೂ ನಾಥನು. ಈಗ ನಿನ್ನ ಶಂಕೆಯು ದೂರವಾಗಿರಬಹುದು ಈ ರೀತಿಯಲ್ಲಿ ಜಗತ್ತೆಲ್ಲವೂ–ಚಕ್ರವರ್ತಿಯವರೆಗೂ –ಅಶರಣ, ಅನಾಥವಾಗಿರುವದು. ಎಲ್ಲೆಲ್ಲಿ ಉಪಾಧಿಯಿರುವದೋ ಅಲ್ಲಲ್ಲಿ ಅನಾಥತ್ವವಿರುವದು, ಆದ್ದರಿಂದ ನಾನು ಹೇಳುವದನ್ನು ಚೆನ್ನಾಗಿ ಆಲೋಚಿಸು. ನೀನೇ ದುಃಖಮಯವಾದ ವೈತರಣಿಯ ಕರ್ತನು, ನೀನೇ ಕ್ರೂರಶಾಲ್ಮಲೀ ವೃಕ್ಷದ ದುಃಖವನ್ನುಂಟುಮಾಡಿಕೊಳ್ಳುವವನು; ನೀನೇ ಕೇಳಿದ ವಸ್ತುವನ್ನೆಲ್ಲ ಕೊಡುವ ಕಾಮಧೇನುವಿನಂತೆ ಸುಖವನ್ನು ಉಂಟುಮಾಡಿಕೊಳ್ಳಬಲ್ಲವನು, ನೀನೇ ನಂದನವನಕ್ಕೆ ಸಮಾನವಾದ ಆನಂದಕಾರಿಯು. ನೀನೇ ಕರ್ಮವನ್ನು ಮಾಡುವವನು, ನೀನೇ ಆ ಕರ್ಮದಿಂದ ಬಿಡುಗಡೆಹೊಂದಿಸಿಕೊಳ್ಳಬಲ್ಲವನು.

ಭರತಖಂಡಕ್ಕೆ ತಂದು ಅದನ್ನು ಇಲ್ಲಿಯ ಜನರಲ್ಲಿ ಪ್ರಸಾರಮಾಡಬೇಕೆಂದು ಸಂಕಲ್ಪಮಾಡಿ ಅದರ ಪ್ರಯತ್ನವನ್ನೇ ಈಗಲೂ ನಡೆಯಿಸುತ್ತಿದ್ದಾನೆ. ಆತನ ಸಾಹಸದಿಂದಲೇ ಇಂಡಿಯದೇಶದಲ್ಲಿ ಅನೇಕ ಕಡೆಗಳಲ್ಲಿ ಬೌದ್ಧಧರ್ಮಶಾಲೆಗಳೂ ಪಾಠಶಾಲೆಗಳೂ ವಿಹಾರಗಳೂ ಏರ್ಪಟ್ಟಿವೆ; ಆತನ ಸಾಹಸದಿಂದಲೇ ಈಗ ಕಾಶಿಯ ಬಳಿಯಿರುವ ಸಾರನಾಥವೆಂಬ ಸ್ಥಳದಲ್ಲಿ **ಮೂಲಗಂಧಕುಟೀವಿಹಾರ**ವೆಂಬ ಒಂದು ಮಹಾವಿಹಾರವು ಕಟ್ಟಿ ಪೂರೈಸಿ 1924 ನವೆಂಬರು ತಿಂಗಳ 11ನೆಯ ತಾರೀಖಿನ ದಿನದಲ್ಲಿ ಬಹು ವಿಜೃಂಭಣೆಯಿಂದ ಅದರ ಪ್ರವೇಶೋತ್ಸವವು ನಡೆಯಿತು. ಆ ಕಾಲದಲ್ಲಿ ನೆರೆದಿದ್ದ ಪ್ರಪಂಚದ ನಾನಾಭಾಗಗಳ ಬೌದ್ಧಧರ್ಮೀಯರ ಮತ್ತು ಬೌದ್ಧಧರ್ಮಸಹಾನುಭೂತಿಗಳ ಉಪನ್ಯಾಸಗಳೂ, ಬರುವದಕ್ಕೆ ಅನುಕೂಲವಿಲ್ಲದವರು ಕಳುಹಿಸಿದ ಆನಂದಸಂದೇಶಗಳೂ ಬೌದ್ಧಧರ್ಮದ ಮಹಿಮೆಯನ್ನೂ ಆ ಧರ್ಮದ ಪ್ರಸಾರಕ್ಕಾಗಿ ಮಹಾಬೋಧಿಸಂಘದವರು – ಮುಖ್ಯವಾಗಿ ಪೂಜ್ಯ ಅನಾಗರಿಕ ಧರ್ಮಪಾಲನು – ಪಟ್ಟಿರುವ ಶ್ರಮವನ್ನೂ ವ್ಯಕ್ತಗೊಳಿಸುವವು. ಸಾರನಾಥದ ವಿಹಾರವನ್ನು ಇಂಥ ರೂಪಕ್ಕೆ ತಂದ ಈ ಮಹನೀಯನು ಈಗ ಶ್ರೀ ದೇವಮಿತ್ತಧಮ್ಮಪಾಲನೆಂಬ ಹೆಸರಿಂದ ಬೌದ್ಧಭಿಕ್ಕುವಾಗಿ ಆ ವಿಹಾರದಲ್ಲಿಯೇ ಇರುತ್ತಾನೆ.

ಸಾರನಾಥ, ಮಿಗದಾಯ ಎಂಬೀ ಎರಡೂ ಕಾಶಿಗೆ ಹತ್ತಿರವಿರುವ ಒಂದು ಪವಿತ್ರಕ್ಷೇತ್ರದ ಹೆಸರು. ಬುದ್ಧನು ತನ್ನ ಹಿಂದಿನ ಒಂದು ಜನ್ಮದಲ್ಲಿ 'ಸಾರಂಗ ನಾಥನಾಗಿ ಎಂದರೆ ಜಿಂಕೆಗಳ ಗುಂಪಿನ ಒಡೆಯನಾಗಿ ಹುಟ್ಟಿದ್ದನೆಂದೂ ಆಗ ಬೇಟೆಗೆ ಬಂದಿದ್ದ ಒಬ್ಬ ರಾಜನ ಮನಸ್ಸನ್ನು ತನ್ನ ಸಾತ್ತ್ವಿಕವರ್ತನೆಯಿಂದ ಸದ್ವರ್ತನೆಗೆ ಒಲಿಸಿಕೊಂಡದ್ದರಿಂದ ಆ ಅರಸನು 'ಮೃಗದಾವ' (ಎಂದರೆ ಜಿಂಕೆಯ ಕಾವಲು) ಎಂಬ ಹೆಸರಿನ ಒಂದು ಕಾಡನ್ನು ಜಿಂಕೆಗಳಿಗಾಗಿ ಬಿಟ್ಟು ಕೊಟ್ಟನೆಂದೂ, ಈ ವೃತ್ತಾಂತದ ಸ್ಮಾರಕವಾಗಿ 'ಸಾರನಾಥ'. 'ಮಿಗದಾಯ' ಎಂಬ ಪಾಳಿಯ ಹೆಸರುಗಳು ಆ ಸ್ಥಳಕ್ಕೆ ಬಂದವೆಂದೂ ಬುದ್ಧಜಾತಕದ ಕಥೆ. ಸಿದ್ಧಾರ್ಥನು ಜ್ಞಾನವನ್ನು ಹೊಂದಿ ಬುದ್ಧನೆಸಿಕೊಂಡ ಬಳಿಕ ಕಾಶಿಗೆ ಬಂದು ತನ್ನ ಗಳೆಯರಾಗಿದ್ದ ಐದು ಜನ ಬ್ರಾಹ್ಮಣರಿಗೆ 'ಧರ್ಮಚಕ್ರಪ್ರವರ್ತನ' ಎಂಬ ಮೊದಲನೆಯ ಉಪದೇಶವನ್ನು ಮಾಡಿದ ಸ್ಥಳವೇ ಸಾರನಾಥವು. ಹಿಂದೆ ಕಾಶಿಯ ಒಂದು ಭಾಗದಲ್ಲಿ ಋಷಿಪಟ್ಟಣವೆಂಬ ಒಂದು ಭಾಗವಿದ್ದಿತೆಂದೂ ಅದರಲ್ಲಿ

ನೀನೇ ದುಃಖವನ್ನಾಗಲಿ ಸುಖವನ್ನಾಗಲಿ ಉಂಟುಮಾಡಿಕೊಳ್ಳುವವನು. ನೀನೇ ನಿನಗೆ ಮಿತ್ರನು, ನೀನೇ ನಿನಗೆ ಶತ್ರು. ದುರಾಚಾರದಲ್ಲಿರುವವನೂ ನೀನೇ, ಸದಾಚಾರದಲ್ಲಿರಬಲ್ಲವನೂ ನೀನೇ.

ಈ ರೀತಿಯಲ್ಲಿ ಅನಾಧೀಮುನಿಯು ಆತ್ಮಸ್ವರೂಪವನ್ನು ತಿಳಿಸುವ ಉಪದೇಶವನ್ನು ಮಾಡುವನು. ಶ್ರೇಣಿಕರಾಜನು ಇದನ್ನು ಕೇಳಿ ಬಹಳ ಸಂತೋಷಪಟ್ಟನು.

★★★★★

# ಬೌದ್ಧದರ್ಶನ

## ಬೌದ್ಧಧರ್ಮಕ್ಕೆ ಭರತಖಂಡದಲ್ಲಿ ಸ್ವಾಗತ

ಬೌದ್ಧಧರ್ಮವುನ್ನು ಭರತಖಂಡದಲ್ಲಿ ಹುಟ್ಟಿ ಬೆಳೆದು ಪ್ರಪಂಚವನ್ನೆಲ್ಲ ಹರಡಿಕೊಂಡಿರುವದು. ಈಗಿನ ಪ್ರಪಂಚದಲ್ಲಿ ಸುಮಾರು ಮೂರರಲ್ಲಿ ಒಂದು ಭಾಗದಷ್ಟು ಜನರು ಈ ಧರ್ಮದ ಯಾವದಾದರೊಂದು ಪಂಗಡಕ್ಕೆ ಸೇರಿದವರಾಗಿ ರುವರು. ಹೀಗಿದ್ದರೂ ಅದು ತನ್ನ ತವರು ಮನೆಯಾದ ಭರತಖಂಡದಲ್ಲಿ ಏತಕ್ಕೋ ಖಿಲವಾಗಿ ಇದುವರೆಗೆ ಗ್ರಂಥಗಳಲ್ಲಿ ಮಾತ್ರ ಉಳಿದುಕೊಂಡಿತ್ತು; ಈಗ ಮಹಾಬೋಧಿಸಂಘದವರ ಸಾಹಸದಿಂದ ಮತ್ತೆ ಭರತಖಂಡದಲ್ಲಿ ಬಂದು ಕಾಲೂರಿದೆ; ಈ ಸಲ ಅದಕ್ಕೆ ಪ್ರಪಂಚದ ಎಲ್ಲಾ ನಾಗರಿಕಜನರಂತೆ ಭರತಖಂಡದವರೂ ಆದರದಿಂದ ಸ್ವಾಗತವನ್ನಿತ್ತಿದಾರೆ.

ಮಹಾಬೋಧಿಸಂಘದವರು ಮಹಾಸಾಹಸಿಗಳು. ಈ ಸಂಘದ ಮೂಲಸ್ಥಾನವು ಸಿಂಹಳದ್ವೀಪದಲ್ಲಿದೆ. ಇದರ ಶಾಖೆಗಳು ಕಲ್ಕತ್ತ, ಗಯ, ಮದ್ರಾಸ್, ನ್ಯೂಯಾರ್ಕ್, ಲಂಡನ್ ನಗರಗಳಲ್ಲಿರುತ್ತವೆ. ಇವರು ಸಿಂಹಳೀ ಮತ್ತು ಇಂಗ್ಲೀಷುಭಾಷೆಗಳಲ್ಲಿ ಪತ್ರಿಕೆಗಳನ್ನು ಹೊರಡಿಸುತ್ತಾರೆ. ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ ಬೌದ್ಧಧರ್ಮದವರೂ ಈ ಧರ್ಮದಲ್ಲಿ ಸಹಾನುಭೂತಿಯುಳ್ಳವರೂ ಸಿಕ್ಕುತ್ತಾರೆ; ಅವರು ತನು, ಮನ, ಧನ- ಎಲ್ಲವನ್ನೂ ಈ ಧರ್ಮಕ್ಕೆ ಹಾಕುವದಕ್ಕೆ ಸಿದ್ಧವಾಗಿರುತ್ತಾರೆಂಬುದನ್ನು ಮಾತಿನಿಂದಲೇ ಅಲ್ಲದೆ ಕಾರ್ಯದಿಂದಲೂ ತೋರಿಸಿರುತ್ತಾರೆ. ಇದಕ್ಕೆಲ್ಲ ಬೌದ್ಧಧರ್ಮದ ಉದಾತ್ತ ತತ್ತ್ವಗಳೇ ಅಲ್ಲದೆ ಮಹಾಬೋಧಿಸಂಘದವರು ಮಾಡಿರುವ ಉದ್ಯಮಗಳೂ ಬಹು ಮುಖ್ಯಕಾರಣ.

ಈ ಸಂಘದ ಸೇವಾಕಾರ್ಯವನ್ನು ಮಾಡಿರುವವರಲ್ಲಿ **ಪೂಜ್ಯ ಅನಾಗರಿಕ ಧರ್ಮಪಾಲ**ನೆಂಬಾತನು ಸೂತ್ರಧಾರಿಯೆನ್ನಬಹುದು. ಈತನು ಸಿಂಹಳದ್ವೀಪದ ಒಬ್ಬ ಐಶ್ವರ್ಯವಂತನಾದ ವರ್ತಕನ ಮಗನು. ಈತನು ಇಂಡಿಯದ ಬುದ್ಧ ಗಯೆಗೆ ಬಂದಂದಿನಿಂದಲೂ ಬೌದ್ಧಧರ್ಮವನ್ನು ಅದರ ಮಾತೃಸ್ಥಾನವಾದ

ಋಷಿಗಳೂ ಸಾಧುಗಳೂ ಸಂನ್ಯಾಸಿಗಳೂ ಇರುತ್ತಿದ್ದರೆಂದೂ ಹೇಳುತ್ತಾರೆ; ಆ ಭಾಗಕ್ಕೆ ಪಾಳಿಭಾಷೆಯಲ್ಲಿ ಇಸಿಪಟಣವೆಂದು ಹೆಸರು. ಅದು ಸಾರನಾಥದ ಸಮೀಪದಲ್ಲಿಯೇ ಇದೆ, ಅಲ್ಲಿಯೂ ಒಂದು ವಿಹಾರವಿದೆ. ಇಲ್ಲಿ ಬುದ್ಧನ ಶಿಷ್ಯರು ಅವನಿಗೆ 'ಗಂಧಕುಟಿ' (ಸುವಾಸನೆಯ ಗುಡಿಸಲು) ಎಂಬ ಒಂದು ವಾಸಸ್ಥಾನವನ್ನು ಕಟ್ಟಿಕೊಟ್ಟಿದ್ದರಂತೆ; ಅದರ ನೆನಪಿಗಾಗಿಯೇ ಈಗ 'ಮೂಲ ಗಂಧಕುಟೀವಿಹಾರ'ವನ್ನು ಕಟ್ಟಿಸಿರುವರು.

ಗೌತಮಬುದ್ಧನು ತನ್ನ ಐದು ಗೆಳೆಯರಿಗೆ ತನ್ನ ಹೊಸ ಧರ್ಮವನ್ನು ಬೋಧೆಮಾಡಿದ ಅಷಾಢಪೂರ್ಣಿಮೆಯ ದಿನವೇ ಬೌದ್ಧರ ಮೊದಲನೆಯ ಸಂಘವು ಸ್ಥಾಪಿತವಾಯಿತು. ಬೌದ್ಧಧರ್ಮದಲ್ಲಿ ಜಗತ್ಕರ್ತನಾದ ಈಶ್ವರನೊಬ್ಬನು ಇದಾನೆಂದು ನಂಬುವದಿಲ್ಲ; ಬುದ್ಧ, ಧರ್ಮ, ಸಂಘ – ಇವೇ ಅವರಿಗೆ ದೇವರ ಸ್ಥಾನದಲ್ಲಿರುವವು. ಆದ್ದರಿಂದಲೇ ಬೌದ್ಧನಾದವನು **'ಬುದ್ಧಂ ಶರಣಂ ಗಚ್ಛಾಮಿ' 'ಧರ್ಮಂ ಶರಣಂ ಗಚ್ಛಾಮಿ', 'ಸಂಘಂ ಶರಣಂ ಗಚ್ಛಾಮಿ'**– ಎಂದು ಈ ಮೂರನ್ನೇ ಪರಮಭಕ್ತಿಯಿಂದ ಶರಣುಹೋಗುವವನು. ಧರ್ಮವನ್ನು ತಾವು ಅವಲಂಬಿಸುವದಲ್ಲದೆ ಪ್ರಪಂಚದ ಎಲ್ಲರಿಗೂ ಅದನ್ನು ತಿಳಿಸಬೇಕೆಂಬುದೇ ಬುದ್ಧನು ಸಂನ್ಯಾಸಿಗಳಿಗೆ ಮಾಡಿರುವ ಉಪದೇಶವು. ಅವನು ಧರ್ಮಚಕ್ರಪ್ರವರ್ತನೆಯನ್ನು ಸಾರನಾಥದಲ್ಲಿ ಮಾಡಿದ್ದು ಈಗ 2520 ವರ್ಷಗಳ ಹಿಂದೆ. ಆ ವರ್ಷದ ಕಾರ್ತಿಕದಲ್ಲಿ ಬುದ್ಧನು ಅರುವತ್ತು ಜನ ಧರ್ಮೋಪದೇಶಕರನ್ನು ಒಬ್ಬೊಬ್ಬರು ಒಂದೊಂದು ದಿಕ್ಕಿಗೆ ಹೋಗಿ ಬೋಧಿಸುವಂತೆ ಹೀಗೆ ಹೇಳಿಕಳುಹಿಸಿದನು:

**ಚರಥ ಭಿಕ್ಖವೇ ಚಾರಿಕಂ ಬಹುಜನಹಿತಾಯ ಬಹುಜನಸುಖಾಯ ಲೋಕಾನುಕಂಪಾಯ ಅತ್ಥಾಯ ಹಿತಾಯ ಸುಖಾಯ ದೇವಮನುಸ್ಸಾನಂ । ದೇಸೇಥ ಭಿಕ್ಖವೇ ಧಮ್ಮಂ ಆದಿಕಲ್ಲಾಣಂ ಮಜ್ಝೇಕಲ್ಲಾಣಂ ಪರಿಯೋಸಾನಕಲ್ಲಾಣಂ ಸಾತ್ಥಂ ಸವ್ಯಞ್ಜನಂ ಕೇವಲಪರಿಪುಣಂ ಪರಿಸುದ್ಧಂ ಬ್ರಹ್ಮಚರಿಯಂ ಪಕಾಸೇಥ ॥**

**–ಮಹಾವಗ್ಗ, ವಿನಯಪಿಟಕ**

ಎಲೈ ಭಿಕ್ಕುಗಳೆ, ಹೊರಡಿರಿ, ಬಹುಜನರ ಹಿತಕ್ಕಾಗಿಯೂ ಬಹು ಜನರ ಸುಖಕ್ಕಾಗಿಯೂ ಲೋಕದ ಮೇಲಿನ ದಯೆಗಾಗಿಯೂ ದೇವತೆಗಳ ಮತ್ತು ಮನುಷ್ಯರ ಪ್ರಯೋಜನಕ್ಕಾಗಿಯೂ ಹಿತಕ್ಕಾಗಿಯೂ ಸುಖಕ್ಕಾಗಿಯೂ ಸಂಚಾರಮಾಡಿರಿ. ಎಲೈ ಭಿಕ್ಕುಗಳೆ, ಮೊದಲಿನಲ್ಲಿ ಕಲ್ಯಾಣವಾಗಿ ನಡುವೆಯೂ ಕಲ್ಯಾಣವಾಗಿ ಕೊನೆಯಲ್ಲಿಯೂ

ಕಲ್ಯಾಣವೇ ಆಗಿರುವ ಧರ್ಮವನ್ನು ಉಪದೇಶಮಾಡಿರಿ, ಪ್ರಯೋಜನಕರವಾಗಿಯೂ ಸದಾಚಾರಯುಕ್ತವಾಗಿಯೂ ಪರಿಪೂರ್ಣವಾಗಿಯೂ ಪರಿಶುದ್ಧವಾಗಿಯೂ ಇರುವ ಬ್ರಹ್ಮಚರ್ಯವನ್ನು ನಡತೆಯಲ್ಲಿ ತೋರಿಸಿರಿ.

ಬೌದ್ಧಧರ್ಮವು ಪ್ರಪಂಚದಲ್ಲೆಲ್ಲ ಹರಡುವದಕ್ಕೆ ಈ ಉಪದೇಶಪದ್ಧತಿಯೇ ಕಾರಣವು. ಈಚೆಗೆ ಕ್ರಿಸ್ತಿಯನ್ ಮಿಷನೆರಿಗಳು ನಮ್ಮ ದೇಶಕ್ಕೆ ಉಪದೇಶಕ್ಕೆ ಬಂದಿರುವದೂ ಈ ಪದ್ಧತಿಯ ಅನುಕರಣದಿಂದಲೇ.

ಸಾರನಾಥದಲ್ಲಿ ಅಶೋಕನೇ ಮುಂತಾದ ಚಕ್ರವರ್ತಿಗಳು ಅನೇಕ ವಿಹಾರಗಳನ್ನೂ ಸ್ತೂಪಗಳನ್ನೂ ಕಟ್ಟಿದ್ದರು. ಈಚೆಗೆ ಹಿಂದುಗಳೂ ದೇವಾಲಯಗಳನ್ನು ಕಟ್ಟಿಸಿದ್ದರು. ಅಕ್ಬರ್‌ಚಕ್ರವರ್ತಿಯು ಸಹ ಒಂದು ಗೋಪುರವನ್ನೂ ಮುರಿದು ಹೋಗಿದ್ದ ಸ್ತೂಪದ ಮೇಲೆ ಒಂದು ದುಂಡುಮಾಳಿಗೆಯನ್ನೂ ಕಟ್ಟಿಸಿರುತ್ತಾನೆ. ಅಕ್ಬರನ ಈ ಕಟ್ಟಡಗಳು ಚೌಖಂಡಿಯೆಂಬ ಹೆಸರಿನಿಂದ ಈಗಲೂ ಇವೆ. ಹೂಣರು, ಮುಸಲ್ಮಾನರು- ಮುಂತಾದವರ ಹಾವಳಿಯಿಂದ ಮಿಕ್ಕಕಟ್ಟಡಗಳು ಮುರಿದುಬಿದ್ದು ಸಾರನಾಥವು ಬರಿಯ ಬಯಲಾಗಿ ಹಂದಿಗಳನ್ನು ಸಾಕುವವರ ಕಾವಲಾಗಿತ್ತು. ಈಚೆಗೆ ಈ ಸ್ಥಳದ ಅದೃಷ್ಟವು ತಿರುಗಿ ಪ್ರಾಚೀನ ತತ್ತ್ವಶೋಧಕರ ಉದ್ಯೋಗದಿಂದಲೂ ಪೂಜ್ಯ ಅನಾಗರಿಕ ಧಮ್ಮಪಾಲನ ಸಾಹಸದಿಂದಲೂ ಕೆಲವು ಪ್ರಾಚೀನವಿಗ್ರಹಗಳು ದೊರೆತಿವೆ. ಈಗ ಅಲ್ಲಿ ಒಂದು ಮಹಾಬೋಧಿ ಪಾಠಶಾಲೆಯಿದೆ. ಸಂಸ್ಕೃತ, ಪಾಳಿ ಮತ್ತು ದೇಶಭಾಷೆಗಳ ಮೂಲಕ ಬೌದ್ಧಧರ್ಮವನ್ನು ಬೋಧಿಸುವ ಒಂದು ಸಕಲವಿದ್ಯಾನಿಲಯವನ್ನು ಅಲ್ಲ ಏರ್ಪಡಿಸಬೇಕೆಂಬ ಆಲೋಚನೆಯು ನಡೆಯುತ್ತಿರುವದು.

ಭರತಖಂಡದಲ್ಲಿ ಬೌದ್ಧಧರ್ಮವು ಖಿಲವಾದದ್ದಕ್ಕೆ ಕಾರಣವೇನೆಂಬ ವಿಷಯದಲ್ಲಿ ಇತಿಹಾಸಜ್ಞರು ಬೇರೆಬೇರೆ ಅಭಿಪ್ರಾಯವುಳ್ಳವರಾಗಿರುವರು. ಆಗಿನ ಕಾಲದ ರಾಜರೂ ಹಿಂದೂಮತದ ಕೆಲವು ಮುಂದಾಳುಗಳೂ ಈ ಮತದವರನ್ನು ಹಿಂಸೆಪಡಿಸಿ ಆ ಮತವನ್ನು ಇಲ್ಲದಂತೆ ಮಾಡಿದರೆಂದು ಕೆಲವರ ಅಭಿಪ್ರಾಯವಿರುವದು. ಬೌದ್ಧಧರ್ಮದವರು ಬರುಬರುತ್ತಾ ತಮ್ಮ ಶುದ್ಧವಾದ ಉಪದೇಶಗಳನ್ನು ಅನುಸರಿಸದೆ ವಾಮಾಚಾರಗಳಿಗೆ ತುತ್ತಾದದ್ದರಿಂದಲೂ ಹಿಂದುಗಳು ಬೌದ್ಧಧರ್ಮದಲ್ಲಿದ್ದ ಉತ್ತಮವಾದ ಆಚಾರವಿಚಾರಗಳನ್ನು ತಮ್ಮ ಮತದಲ್ಲಿ ಸೇರಿಸಿಕೊಂಡು ಅಥವಾ ಮೊದಲೇ ತಮ್ಮಲ್ಲಿದ್ದ ಇವುಗಳನ್ನು

ಬೆಳೆಸಿಕೊಂಡು ಜನರನ್ನು ತಮ್ಮ ಕಡೆಗೆ ಸೆಳೆದುಕೊಂಡದ್ದರಿಂದಲೂ ಬೌದ್ಧಧರ್ಮವು ತನ್ನ ವ್ಯಕ್ತಿತ್ವವನ್ನು ಕಳೆದುಕೊಂಡು ಹಿಂದೂಧರ್ಮದಲ್ಲಿಯೇ ಅಡಗಿ ಹೋಯಿತೆಂದು ಬಹು ಜನರು ಅಭಿಪ್ರಾಯಪಡುವರು. ಇದು ಹೇಗೆಯೇ ಇರಲಿ. ''ಯೇ ಯಥಾ ಮಾಂ ಪ್ರಪದ್ಯಂತೇ ತಾಂಸ್ತಥೈವ ಭಜಾಮ್ಯಹಮ್'' (ಯಾರು ಹೇಗೆ ನನ್ನನ್ನು ಭಜಿಸುವರೋ ಅವರನ್ನು ನಾನು ಹಾಗೆಯೇ ಅನುಗ್ರಹಿಸುವೆನು), ''ಮಮ ವರ್ತ್ಮಾನುವರ್ತನ್ತೇಮನುಷ್ಯಾಃ ಪಾರ್ಥ ಸರ್ವಶಃ'' (ಅರ್ಜುನನೆ, ಜನರು ಯಾವ ಮಾರ್ಗದಿಂದ ನನ್ನ ಬಳಿಗೆ ಬಂದರೂ ನನ್ನ ದಾರಿಯನ್ನೇ ಅನುಸರಿಸಿದಂತೆ)- ಎಂಬ ಭಗವದ್ಗೀತೆಯ ಉದಾರವಾದ ಅಭಿಪ್ರಾಯವನ್ನು ಹಿಂಬಾಲಿಸುವ ಹಿಂದುಗಳು ಯಾವ ಧರ್ಮವನ್ನೂ ಕಡೆಗಣ್ಣಿಂದ ಕಾಣುವಹಾಗಿಲ್ಲ; ವೈದಿಕಧರ್ಮದಿಂದಲೇ ಹುಟ್ಟಿದ ಬೌದ್ಧಧರ್ಮಕ್ಕಂತೂ ನಮ್ಮೆಲ್ಲರ ಸ್ವಾಗತವೇ ಇರುವದು. ಈ ಧರ್ಮದವರು ಉಪದೇಶಿಸುವ ತತ್ತ್ವಗಳನ್ನೂ ಅವುಗಳಿಗೂ ನಮ್ಮ ವೈದಿಕಧರ್ಮಕ್ಕೂ ಇರುವ ಸಾಮ್ಯವೈಷಮ್ಯಗಳನ್ನೂ ಎಲ್ಲರಿಗೂ ತಿಳಿಯುವಂತೆ ಈ ಪತ್ರಿಕೆಯಲ್ಲಿ ಆಗಿಂದಾಗ್ಗೆ ಸಪ್ರಮಾಣವಾಗಿ ತಿಳಿಸುತ್ತಾ ಬರುವೆವು.

★★★★★

# ಸಮಾಜದ ಏಳಿಗೆಯ ವಿಷಯದಲ್ಲಿ ಬುದ್ಧನ ಉಪದೇಶ

## ('ಮಹಾಬೋಧಿ'ಪತ್ರಿಕೆಯಲ್ಲಿ ಶ್ರೀಯುತ ಶಿವಚರಣಲಾಲರು ಬರೆದಿರುವದರ ಸಾರಾಂಶ)

ಭಗವಾನ್ ಬುದ್ಧನು ರಾಜಗೃಹದ ಬಳಿಯಲ್ಲಿರುವ ಗೃಧ್ರಕೂಟದಲ್ಲಿ ವಾಸವಾಗಿದ್ದಾಗ ಮಗಧರಾಜನಾದ ಅಜಾತಶತ್ರುವು[1] ವಜ್ಜಿಯರೆಂದು ಒಂದಾನೊಂದು ಗುಂಪಿನ ಜನರ ಮೇಲೆ ಬೀಳುವದಕ್ಕೆ ಪ್ರಯತ್ನಮಾಡಿದ್ದನು.

1. ಬಿಂಬಸಾರನ ಮಗನು.

ಆದರೆ ದಂಡಯಾತ್ರೆಯು ಹೊರಡುವದಕ್ಕೆ ಮೊದಲು ಈ ದಾಳಿಯಲ್ಲಿ ತನಗೆ ಜಯವಾದೀತೋ ಇಲ್ಲವೋ ಎಂಬುದನ್ನು ಭಗವಂತನನ್ನೇ[1] ಕೇಳಿಬಿಡಬೇಕೆಂದು ತನ್ನ ಪ್ರಧಾನಮಂತ್ರಿಯಾದ ವರ್ಷಕರನೆಂಬಾತನನ್ನು ಕರೆದು ''ಎಲೈ, ಕೂಡಲೆ ಭಗವಂತನ ಬಳಿಗೆ ಹೋಗಿ ನನ್ನ ಮನಸ್ಸಿನ ಯೋಚನೆಯನ್ನು ತಿಳಿಸು; ಆತನು ಏನು ಅಪ್ಪಣೆ ಕೊಡುತ್ತಾನೋ ಅದನ್ನು ಅಕ್ಷರಶಃ ನನಗೆ ಹೇಳಬೇಕು; ಅದೇಕೆಂದರೆ ಯಾವದು ಅಧರ್ಮವೋ, ಯಾವುದನ್ನು ಮಾಡುವದಕ್ಕಿಂತ ಬಿಡುವದೇ ಲೇಸೋ, ಅಂಥದನ್ನು ಬುದ್ಧರಾದವರು[2] ಎಂದಿಗೂ ಹೇಳಲಾರರು'' ಎಂದನು.

ವರ್ಷಕರನು ಭಗಂವತನ ಬಳಿಗೆ ಬಂದಾಗ ವೃದ್ಧನಾದ ಆನಂದನು[3] ಬುದ್ಧನ ಹಿಂದುಗಡೆಯಲ್ಲಿ ಬೀಸಣಿಗೆಯಿಂದ ಗಾಳಿಹಾಕುತ್ತಾ ನಿಂತುಕೊಂಡಿದ್ದನು. ಮಂತ್ರಿಯು ತಾನು ಬಂದಿದ್ದ ಕಾರ್ಯವನ್ನು ತಿಳಿಸಲು ಭಗವಂತನು ಮೊದಲು ಆನಂದನ ಕಡೆ ತಿರುಗಿ ''ಆನಂದನೆ, ವಜ್ಜಿಯರು ಆಗಾಗ್ಗೆ ಎಲ್ಲರೂ ಸಭೆಸೇರುತ್ತಾರೆಂಬುದು ನಿನಗೆ ತಿಳಿದಿದೆಯೆ?'' ಎಂದು ಕೇಳಲು ಆನಂದನು ''ಹಾಗೆಂದು ಹೇಳುತ್ತಾರೆ, ಸ್ವಾಮಿ'' ಎಂದನು. ಅದಕ್ಕೆ ಬುದ್ಧನು ''ಅಯ್ಯ ಆನಂದ, ಎಲ್ಲಿಯವರೆಗೆ ಈ ವಜ್ಜಿಯರು ಹೀಗೆ ಮತ್ತೆ ಮತ್ತೆ ಸೇರುತ್ತಿರುವರೋ, ಅಲ್ಲಿಯವರೆಗೆ ಅವರಿಗೆ ಏಳಿಗೆಯಾಗುತ್ತಲೇ ಇರುವದು. ಎಲ್ಲಿಯವರೆಗೆ ಅವರು ಸಭೆಗಳಲ್ಲಿ ಒಂದೇ ಅಭಿಪ್ರಾಯವುಳ್ಳವರಾಗಿರುವರೋ, ಎಲ್ಲಿಯವರೆಗೆ ಅವರು ತಮ್ಮ ಗುರುಹಿರಿಯರಲ್ಲಿ ಭಕ್ತಿಯುಳ್ಳವರಾಗಿರುವರೋ, ಎಲ್ಲಿಯವರೆಗೆ ಅವರು ಸ್ತ್ರೀಜನರನ್ನು ಗೌರವಿಸುತ್ತಿರುವರೋ, ಎಲ್ಲಿಯವರೆಗೆ ಅವರು ನಿಜವಾಗಿ ಧರ್ಮರತರಾಗಿಯೇ ಇರುವರೋ, ಎಲ್ಲಿಯವರೆಗೆ ಅವರು ಸಾಧುಗಳನ್ನು

---

1. ಭಗವಂತನೆಂಬುದು ಗೌತಮಬುದ್ಧನ ಅನೇಕ ಹೆಸರುಗಳಲ್ಲಿ ಒಂದು; ಶ್ರೀಕೃಷ್ಣನನ್ನು ಹಿಂದುಗಳು ಭಗವಂತನೆಂದು ಗೌರವಕ್ಕೆ ಕರೆಯುವಂತೆಯೇ ಬೌದ್ಧರು ಆ ಹೆಸರನ್ನು ಬುದ್ಧನಿಗೆ ಉಪಯೋಗಿಸುವರು.

2. ಬುದ್ಧರೆಂದರೆ ಎಲ್ಲವನ್ನೂ ಬಲ್ಲ ಜ್ಞಾನಿಗಳು; ಇವರಿಗೆ ತ್ರಿಕಾಲಜ್ಞಾನವು ಇರುವದೆಂದು ಬೌದ್ಧರು ನಂಬಿರುತ್ತಾರೆ. ಸಾಮಾನ್ಯಜನರು ಜ್ಯೋತಿಷ್ಕರನ್ನು ಪ್ರಶ್ನೆಕೇಳುವಂತೆ ಅಜಾತಶತ್ರುವೂ ಸರ್ವಜ್ಞಬಾದ ಬುದ್ಧನನ್ನು ಕೇಳಬೇಕೆಂದು ಯೋಚಿಸಿರಬಹುದು.

3. ಗೌತಮಬುದ್ಧನ ಬಲತಮ್ಮನು.

ಆದರಿಸುತ್ತಾ ಅವರಿಗೆ ಒದಗುವ ಕಷ್ಟಗಳನ್ನು ಪರಿಹರಿಸುತ್ತಿರುವರೋ, ಅಲ್ಲಿಯವರೆಗೂ ಈ ವಜ್ಜಿಯರಿಗೆ ಏಳಿಗೆಯೇ ಆಗುವದು''-ಎಂದನು.

ಆಮೇಲೆ ಮಂತ್ರಿಯ ಕಡೆಗೆ ತಿರುಗಿ ಭಗವಂತನು ಹೀಗೆಂದನು:

''ಎಲೈ ಬ್ರಾಹ್ಮಣನೆ, ನಾನು ವೈಶಾಲಿಯಲ್ಲಿದ್ದಾಗ ಈ ವಚ್ಚಿಯರಿಗೆ ಹೀಗೆ ಇದ್ದರೆ ನಿಮಗೆ ಏಳಿಗೆಯಾಗುವದೆಂದು ಉಪದೇಶಿಸಿದೆನು. ಅವರು ಎಲ್ಲಿಯವರೆಗೆ ಹೀಗೆಯೇ ನಡೆದುಕೊಳ್ಳುವರೋ, ಅಲ್ಲಿಯವರೆಗೆ ಅವರು ಉತ್ತಮ ಸ್ಥಿತಿಯಲ್ಲಿಯೇ ಇರುವರು.''

ಇದನ್ನು ಕೇಳಿ ಆ ಪ್ರಧಾನಿಯು ಭಗವಂತನಿಗೆ ನಮಸ್ಕರಿಸಿ ಹೊರಟುಹೋದನು. ಆಮೇಲೆ ಬುದ್ಧನು ಇದೇ ವಿಷಯವನ್ನು ವಿಸ್ತರಿಸಿ ವಿಹಾರದಲ್ಲಿ[1] ರುವ ಭಿಕ್ಕುಗಳಿಗೆಲ್ಲ[2] ಉಪದೇಶಿಸಿದ ಪರಿ ಹೇಗೆಂದರೆ:

''ಎಲೈ ಭಿಕ್ಕುಗಳೇ, ಎಲ್ಲಿಯವರೆಗೆ ಸಂಘದವರೆಲ್ಲರೂ[3] ಆಗಾಗ್ಗೆ ಸಭೆಗಳಲ್ಲಿ ಸೇರುತ್ತಿರುವರೋ, ಎಲ್ಲಿಯವರೆಗೆ ಒಂದೇ ಅಭಿಪ್ರಾಯದಿಂದ ಸಭೆಯಲ್ಲಿ ಸೇರಿ ಒಂದೇ ಅಭಿಪ್ರಾಯದಿಂದ ಸಭೆಯನ್ನು ಮುಗಿಸುತ್ತಾ ಒಂದೇ ಅಭಿಪ್ರಾಯದಿಂದ ಸಂಘದ ಆಗುಹೋಗುಗಳನ್ನು ನೋಡಿಕೊಳ್ಳುತ್ತಿರುವರೋ ಎಲೈ ಸಹೋದರರೆ, ಎಲ್ಲಿಯವರೆಗೆ ಸರಿಯಾದ ಮಾರ್ಗವೆಂದು ಅನುಭವದಿಂದ ಗೊತ್ತಾಗಿರುವದನ್ನು ಬಿಡದೆ ಚೆನ್ನಾಗಿ ಪರೀಕ್ಷಿಸಿದ್ದಲ್ಲದೆ ಯಾವ ಹೊಸ ಪದ್ಧತಿಗಳನ್ನೂ ಅವರು ಆಚರಣೆಗೆ ತರುವದಿಲ್ಲವೋ, ಎಲ್ಲಿಯವರೆಗೆ ಗುರುಹಿರಿಯರನ್ನು ಗೌರವಿಸುತ್ತಲೂ ಪೂಜಿಸುತ್ತಲೂ ಸತ್ಕರಿಸುತ್ತಲೂ ಅವರ ಉಪದೇಶಕ್ಕೆ ಕಿವಿಗೊಡುತ್ತಲೂ ಇರುವರೋ, ಎಲ್ಲಿಯವರೆಗೆ ಅತ್ಯಾಶೆಗೆ ಒಳಗಾಗದೆ ಧರ್ಮಮಾರ್ಗದ ಆನಂದವನ್ನೇ

1. ಬೌದ್ಧಸಂನ್ಯಾಸಿಗಳು ಇರುವ ಮಗಳಿಗೆ 'ವಿಹಾರ'ಗಳೆಂದು ಹೆಸರು.

2. :ಭಿಕ್ಷು' ಎಂಬ ಸಂಸ್ಕೃತಮಾತಿಗೆ ಪಾಲಿಯಲ್ಲಿ 'ಭಿಕು' ಎಂಬ ತದ್ಭವವಾಗಿರುವದು: ಬೌದ್ಧಸಂನ್ಯಾಸಿಗಳು ಭಿಕ್ಷೆಯಿಂದಲೇ ಜೀವನಮಾಡುತ್ತಿದ್ದದ್ದರಿಂದ ಅವರಿಗೆ ಈ ಹೆಸರು ಬಂತು.

3. ಬೌದ್ಧಸಂನ್ಯಾಸಿಗಳ ಗುಂಪಿಗೆ ಸಂಘವೆಂದು ಹೆಸರು.

ಅನುಭವಿಸುತ್ತ ಸಾಧುಗಳೂ ಮಹಾತ್ಮರೂ ಅವರಲ್ಲಿಗೆ ಬಂದು ಸುಖವಾಗಿರುವದಕ್ಕೆ ಅವಕಾಶವನ್ನು ಕೊಡುತ್ತಿರುವರೋ, ಎಲ್ಲಿಯವರೆಗೆ ಅವರು ಪಾಲು ಮಾರಿಕೆಯಿಂದಲೂ ಸೋಮಾರಿ ತನದಿಂದಲೂ ಕೂತಲ್ಲಿ ಕೂತು ಕಾಲಹಾಕದೆ ಇರುವರೋ, ಎಲ್ಲಿಯವರೆಗೆ ವಿಚಾರ, ತತ್ತ್ವಾನ್ವೇಷಣ, ಉತ್ಸಾಹ, ಸಂತೋಷ, ವಿನಯ, ಶಮ, ಸಮಾಧಾನ - ಎಂಬ ಏಳು ಬಗೆಯ ಜ್ಞಾನಮಾರ್ಗವನ್ನು ಬಿಡದೆ ಅನುಷ್ಠಾನದಲ್ಲಿಟ್ಟುಕೊಂಡಿರುವರೋ, ಅಲ್ಲಿಯವರೆಗೆ ಸಂಘವು ಅಭಿವೃದ್ಧಿಯಲ್ಲಿರುವದು, ಆದ್ದರಿಂದ ಎಲೈ ಭಿಕ್ಕುಗಳೇ, ಶ್ರದ್ಧೆಯಿಂದ ತುಂಬಿರಿ, ವಿನಯದಿಂದ ಕೂಡಿರಿ, ಪಾಪಕ್ಕೆ ಹೆದರುತ್ತಿರಿ, ತತ್ತ್ವವನ್ನು ತಿಳಿಯುವದರಲ್ಲಿ ಆಶೆಯುಳ್ಳವರಾಗಿರಿ, ಉತ್ಸಾಹವನ್ನು ಬಲವಾಗಿಟ್ಟುಕೊಳ್ಳಿರಿ, ವಿಚಾರವನ್ನು ಬಿಡಬೇಡಿ, ಜ್ಞಾನವನ್ನು ಕೈಕೊಳ್ಳಿರಿ.''

ಸಮಾಜದ ಏಳಿಗೆಗೆ ಬೇಕಾದುದೇನೆಂಬುದರ ವಿಷಯದಲ್ಲಿ ಇದಕ್ಕಿಂತಲೂ ಹೆಚ್ಚಿನ ಉಪದೇಶವನ್ನು ಯಾರು ಮಾಡಿರುವರು?

★★★★★

# ಬೌದ್ಧಸಿದ್ಧಾಂತದ ಮೂಲತತ್ತ್ವಗಳು[1]

ಬೌದ್ಧರು ತಮ್ಮ ಧರ್ಮದ ಸಿದ್ಧಾಂತದ ಮೂಲತತ್ತ್ವಗಳು ಯಾವವೆಂದು ಎಣಿಸುತ್ತಾರೆಂಬ ವಿಷಯದಲ್ಲಿ ನಮ್ಮವರು ಬರೆದಿರುವ ಶಾಸ್ತ್ರಗ್ರಂಥಗಳೇ ಇದುವರೆಗೆ ನಮಗೆ ಆಧಾರವಾಗಿದ್ದವು. ಬೌದ್ಧಮತದ ತತ್ತ್ವಗಳನ್ನು ಖಂಡನೆಗಾಗಿ ಅಲ್ಲಲ್ಲಿ ನಮ್ಮ ಶಾಸ್ತ್ರಕಾರರು ಉದಾಹರಿಸಿರುತ್ತಾರೆ; ಆದರೆ ಅವು ಬೌದ್ಧರೂ ಒಪ್ಪಿರುವ ಸಿದ್ಧಾಂತಗಳೆ? - ಎಂದು ಅನೇಕರಿಗೆ ಸಂಶಯವು ಉಂಟಾಗಿ ಈಗಿನ ಬೌದ್ಧರು ಈ ವಿಷಯದಲ್ಲಿ ಏನು ಹೇಳುತ್ತಾರೋ ಅವರ ಮೂಲಗ್ರಂಥಗಳಲ್ಲಿ ಏನು ಹೇಳಿದೆಯೋ ಅದನ್ನೇ ನೇರವಾಗಿ ನೋಡಬೇಕೆಂಬ ತವಕವು ಸಹಜವಾಗಿ ಉಂಟಾಯಿತು. ಪಾಶ್ಚಾತ್ಯವಿದ್ವಾಂಸರು ಅನೇಕ ಬೌದ್ಧಗ್ರಂಥಗಳನ್ನು ಪರಿಶೋಧಿಸಿ

---

1 ಶ್ರೀ ಯಾಮಕಾಮಿ ಸೋಚೆನ್ ಇವರು ಬರೆದಿರುವ (Systems of Buddhistic Thought) ಎಂಬ ಗ್ರಂಥದ ಆಧಾರದಿಂದ ಬರೆದದ್ದು.

ಅವುಗಳನ್ನು ಇಂಗ್ಲಿಷು ಮುಂತಾದ ಭಾಷೆಗಳಿಗೆ ಪರಿವರ್ತನೆ ಮಾಡಿರುತ್ತಾರೆ; ಸಿಂಹಳ, ಬರ್ಮ, ಟಿಬೆಟ್, ಚೀನ, ಜಪಾನು- ಮುಂತಾದ ಸೀಮೆಗಳಲ್ಲಿರುವ ಬೌದ್ಧರೂ ಈ ಕಾರ್ಯಕ್ಕೆ ಸಹಾಯಮಾಡಲು ಈಗ ಮುಂದಕ್ಕೆ ಬರುತ್ತಿದ್ದಾರೆ. ಆದ್ದರಿಂದ ನಾವು ದುರಭಿಮಾನವನ್ನು ಬಿಟ್ಟು ಆಯಾ ಮತದ ತತ್ತ್ವಗಳನ್ನು ಆಯಾ ಮತದವರಿಂದಲೇ ತಿಳಿಯಬೇಕೆಂಬ ಕುತೂಹಲವುಳ್ಳವರಾಗಿದ್ದರೆ ಈಗ ನಾವು ನಮ್ಮವರು ಹೇಳಿರುವ ಬೌದ್ಧವಿಚಾರಗಳನ್ನು ಒತ್ತಟ್ಟಿಗೆ ಇಟ್ಟು ನೇರಾಗಿ ಬೌದ್ಧಧರ್ಮದ ವಿಚಾರಗಳನ್ನು ತಿಳಿಯಲು ತಕ್ಕ ಕಾಲವಾಗಿದೆ. ಇದರಿಂದ ಬೌದ್ಧರ ವಿಷಯದಲ್ಲಿ ನಮಗಿರುವ ಅಸಡ್ಡೆಯೂ ಕರಗಿಹೋಗುವದು; ಒಬ್ಬರನ್ನೊಬ್ಬರು 'ವೇದಬಾಹ್ಯ', 'ಪ್ರಚ್ಛನ್ನಬೌದ್ಧ', 'ಶೂನ್ಯವಾದಿ' - ಎಂದು ಮುಂತಾಗಿ ಬಯ್ಯುವ ಚಟವೂ ನಿಂತುಹೋಗುವ ಸಂಭವವಿರುವದು. ಆದ್ದರಿಂದ ಬೌದ್ಧರ ಸಿದ್ಧಾಂತಗಳನ್ನು ಸ್ವಲ್ಪದರಲ್ಲಿ ಅಡಗಿಸಿ ಆಗಿಂದಾಗ್ಗೆ ತಿಳಿಸಬೇಕೆಂದು ನಿಶ್ಚಯಿಸಿ ಈ ಲೇಖನವನ್ನು ಪೀಠಿಕೆಯಾಗಿ ಬರೆದಿರುತ್ತೇವೆ.

ಬೌದ್ಧರ ಸಿದ್ಧಾಂತವನ್ನು ಮುಖ್ಯವಾಗಿ ಮೂರು ವಾಕ್ಯಗಳಿಂದ ತಿಳಿಸಬಹುದು. **ಎಲ್ಲವೂ ಅನಿತ್ಯ, ಎಲ್ಲವೂ ಅನಾತ್ಮ, ನಿರ್ವಾಣವೇ ಶಾಂತವಾದದ್ದು.** ಬೌದ್ಧರಲ್ಲಿ ಅನೇಕ ಪಂಗಡಗಳಿರುವವು. ಅವರಲ್ಲಿ ಅನೇಕ ಮತಭೇದಗಳಿರುವವು; ಆದರೆ ಈ ಮೂರನ್ನು ಒಪ್ಪದೆ ಇರುವ ಬೌದ್ಧನಿಲ್ಲ; ಯಾವನಾದರೂ ಈ ಮೂರನ್ನೂ ಒಪ್ಪಿದರೆ ಬೌದ್ಧನಾದಂತೆಯೆ. ಮಹಾಯಾನದವರು 'ಸರ್ವವೂ ತಾನು ಇರುವಂತೆಯೇ ಇರುವದು' ಎಂಬ ಮತ್ತೊಂದು ತತ್ತ್ವವನ್ನೂ ತಾವು ಒಪ್ಪಿರುವದಾಗಿ ಹೇಳಿಕೊಳ್ಳುವರು; ಆದರೆ ಇದು ಮೂರನೆಯ ತತ್ತ್ವದಿಂದ ಸಿದ್ಧವಾಗುವದಾದ್ದರಿಂದ ಇದನ್ನು ಸ್ವತಂತ್ರವಾಗಿರುವ ತತ್ತ್ವವೆಂದು ಭಾವಿಸಬೇಕಾದದ್ದಿಲ್ಲ. ಇದರಂತೆಯೇ 'ಸರ್ವವೂ ದುಃಖವು' ಎಂಬ ತತ್ತ್ವವು 'ಸರ್ವವೂ ಅನಿತ್ಯ'ವೆಂಬದರಲ್ಲಿಯೇ ಸೇರಿಹೋಗಿರುವದರಿಂದ ಅದೂ ಹೊಸದಲ್ಲ. ಇಲ್ಲಿ ಹೇಳಿರುವ ಮೂರು ತತ್ತ್ವಗಳನ್ನೂ ಬೌದ್ಧರು '**ಮುದ್ರೆ**'ಗಳೆಂದು ಕರೆಯುತ್ತಾರೆ.

**ಸರ್ವವೂ ಅನಿತ್ಯ**ವೆಂಬ ಮುದ್ರೆಯಲ್ಲಿ ಮೂರು ವಿಷಯಗಳು ಅಡಕವಾಗಿ ರುವವು. ಈ ಪ್ರಪಂಚದಲ್ಲಿ ನಮಗೆ ತೋರುವದು ಯಾವದೂ ನಾಶವಾಗದೆ ಇರುವದಿಲ್ಲ; ಹುಟ್ಟಿದ್ದು ಸಾಯಲೇಬೇಕು. ಯಾವದು ಉಂಟಾಯಿತೋ ಅದು

ಇಲ್ಲವಾಗಲೇಬೇಕು. ಇದು ಮೊದಲನೆಯ ಭಾಗ. ಪ್ರತಿಯೊಂದು ವಸ್ತುವೂ ಕ್ಷಣಿಕವಾಗಿರುವದು. ಒಂದೊಂದು ಕ್ಷಣದಲ್ಲಿಯೂ ಹುಟ್ಟಿ ಸವೆಯುತ್ತಿರುವದು, ಒಂದು ಕ್ಷಣದಲ್ಲಿ ಇದ್ದಂತೆ ಮತ್ತೊಂಡು ಕ್ಷಣದಲ್ಲಿ ಇರುವದಿಲ್ಲ. ಹಿಂದಿನ ಕ್ಷಣವು ಆಗಿಹೋಯಿತು, ಈಗ ಇರುವದಿಲ್ಲ, ಮುಂದಕ್ಕೂ ಇರುವದಿಲ್ಲ; ಈಗಿನ ಕ್ಷಣವು ಹಿಂದೆ ಇರಲಿಲ್ಲ, ಮುಂದೆಯೂ ಇರುವದಿಲ್ಲ; ಮುಂದಿನ ಕ್ಷಣವೆಂಬುದು ಈಗ ಇಲ್ಲ, ಹಿಂದೆಯೂ ಇರಲಿಲ್ಲ. ಪ್ರತಿಯೊಂದು ವಸ್ತುವೂ ಹುಟ್ಟುವದು, ಇರುವದು, ಸವೆಯುವದು, ಹಾಳಾಗುವದು. ಈ ನಾಲ್ಕೂ ವಸ್ತುವಿಗೆ ಗಂಟುಬಿದ್ದ ಸ್ವಭಾವಗಳು; ಈ ಚತುರ್ಲಕ್ಷಣವಿಲ್ಲದ ವಸ್ತುವೇ ಇಲ್ಲ. ಹೀಗಿರುವದರಿಂದ ಎರಡು ಕ್ಷಣಗಳವರೆಗಾದರೂ ಯಾವ ವಸ್ತುವೂ ಇರುವದಕ್ಕಿಲ್ಲ. ಇದು ಅನಿತ್ಯವಾದದ ಎರಡನೆಯ ಭಾಗ. ಇನ್ನು ಎಲ್ಲವೂ ಶೂನ್ಯವೆಂಬುದು ಈ ವಾದದ ಮೂರನೆಯ ಭಾಗವು. ವಸ್ತುವು ನಾಶವಾಗುವದಕ್ಕೆ ಅದು ಕ್ಷಣಿಕವಾಗಿರುವದೆಂಬುದು ಹೇಗೆ ಅವಶ್ಯಕವೋ, ಹಾಗೆಯೇ ವಸ್ತುವು ಕ್ಷಣಿಕವಾಗಿರುವದಕ್ಕೆ ಆರು ಶೂನ್ಯವಾಗಿ ರುವದೂ ಅವಶ್ಯಕವು. ಶೂನ್ಯವೆಂದರೆ ಬರಿದಾಗಿರುವುದೆಂದಾಗಲಿ, ಏನೂ ಇಲ್ಲದುದೆಂದಾಗಲಿ ಅರ್ಥವಲ್ಲ. ಸ್ವಭಾವವಿಲ್ಲದಿರುವದು, ಸ್ವರೂಪವಿಲ್ಲದಿರುವದು – ಎಂಬುದೇ ಶೂನ್ಯವೆಂಬ ಮಾತಿನ ಅರ್ಥವು. ಈ ತೋರಿಕೆಯ ಪ್ರಪಂಚದಲ್ಲಿ ಎಡೆಬಿಡದೆ ಮಾರ್ಪಾಡುಗಳು ಆಗುತ್ತಲೇ ಇರುವವು. ಯಾವದೊಂದಕ್ಕೂ ನಿಲುಗಡೆಯುಳ್ಳ ಅದರ ಸ್ವಭಾವವೆಂಬುದು ಇಲ್ಲವೇ ಇಲ್ಲ – ಎಂಬುದು ಅನಿತ್ಯವಾದದ ಜೀವಾಳವು.

**ಎಲ್ಲವೂ ಅನಾತ್ಮವು** ಯಾವದೊಂದಕ್ಕೂ ಆತ್ಮವಿಲ್ಲ – ಎಂಬ ಎರಡನೆಯ ಮುದ್ರೆಯನ್ನು ಕುರಿತು ಈಗ ವಿಚಾರಿಸಬಹುದು. ನಮ್ಮೊಳಗಿನ ಆತ್ಮವೂ ಇಲ್ಲ, ಹೊರಗಿನ ವಸ್ತುಗಳ ಆತ್ಮವೂ ಇಲ್ಲ–ಎಂಬುದೇ ನೈರಾತ್ಮ್ಯವಾದವು. ಆತ್ಮವೆಂದರೆ ಸ್ವತಂತ್ರವಾಗಿ ನಿತ್ಯವಾಗಿ ನಿರಪೇಕ್ಷವಾಗಿರುವ ವಸ್ತು. ಶರೀರವೂ ಮನಸ್ಸೂ ಸೇರಿ 'ನಾನು' ಎಂಬ ಒಂದು ವಸ್ತುವಾಗಿರುವದೆಂದು ಕೆಲವರು ಭಾವಿಸುವರು. ಇದು ಸಾಮಾನ್ಯರ ಭಾವನೆ; ಅವರಿಗೆ 'ನಾನು' ಎಂಬ ಪದಾರ್ಥವು ಯಾವದೆಂಬ ವಿಷಯದಲ್ಲಿ ನಿಶ್ಚಯವಿಲ್ಲ. ಶರೀರಮನಸ್ಸುಗಳಿಗಿಂತ ಬೇರೆಯಾಗಿ ಇವುಗಳೆರಡನ್ನೂ ತನ್ನ ಹಿಡಿತದಲ್ಲಿಟ್ಟುಕೊಂಡಿರುವ ಪದಾರ್ಥವೇ 'ನಾನು' ಎಂದು ಕೆಲವರು ತಿಳಿದಿರುವರು. ಇನ್ನು ಕೆಲವರಿಗೆ ಶರೀರ ಮನಸ್ಸುಗಳಿಗಿಂತ ಈ 'ನಾನು'

ಎಂಬುದು ಬೇರೆಯೂ ಅಲ್ಲ, ಅವುಗಳೇ ಎಂದೂ ಅಲ್ಲ; ಇಂಥ ವಿಚಿತ್ರಸ್ವಭಾವದ ವಸ್ತು. ಈ ಮೂರು ವಿಧವಾದ ಆತ್ಮವನ್ನೂ ಬೌದ್ಧರು ಒಪ್ಪುವದಿಲ್ಲ. ಸ್ಥಿರವಾದ ಸ್ವತಂತ್ರವಸ್ತುವಿಲ್ಲವೇ ಇಲ್ಲವೆಂದು ಅವರು ಅಭಿಪ್ರಾಯಪಟ್ಟಿರುವದರಿಂದ ಅವರ ಮತದಲ್ಲಿ ಇಂಥ ಆತ್ಮವು ಇರುವದೆಂಬುದಕ್ಕೆ ಸಾಧಕವೇನೂ ಇರುವದಿಲ್ಲ; ಅನಿತ್ಯವಸ್ತುವಿಗೆ ಸ್ವಾತಂತ್ರ್ಯವೆಲ್ಲಿ ಬಂದೀತು? ಬೌದ್ಧಮತದಲ್ಲಿ ಆತ್ಮವುಂಟೆಂದು ಕೆಲವು ಕಡೆಗಳಲ್ಲಿ ಹೇಳಿರುವದು ವ್ಯವಹಾರದೃಷ್ಟಿಯಿಂದಲೇ ಹೊರತು ಅದೇನೂ ಪರಮಾರ್ಥವಲ್ಲ.

ಅನಾತ್ಮವಾದದಲ್ಲಿ ಶರೀರಕ್ಕಿಂತ ಬೇರೆಯಾಗಿ ಸ್ವತಂತ್ರವಾಗಿರುವ ಆತ್ಮವನ್ನು ಒಪ್ಪಿರುವದಿಲ್ಲವೆಂಬುದೊಂದೇ ಅಲ್ಲ; ಇದರಂತೆ ಜಗತ್ಕರ್ತನಾದ ಈಶ್ವರಾತ್ಮನೊಬ್ಬನು ಇದಾನೆಂಬುದನ್ನೂ ಒಪ್ಪಿರುವದಿಲ್ಲ. **ಯದೃಚ್ಛಾ** (ಎಂದರೆ ಹೇಗೋ ಕಾರಣವಿಲ್ಲದೆ ಆಗುವದು), **ನಿಯತಿ** (ಎಂದರೆ ಹೀಗೆ ಆಗಿಯೇ ತೀರ ಬೇಕೆಂಬ ಅದೃಷ್ಟನಿಯಮ), **ಈಶ್ವರ** (ದೇವರು)- ಇಂಥ ಕಾರಣಗಳಿಂದ ಮನುಷ್ಯನ ಸುಖದುಃಖಾದಿಗಳು ಉಂಟಾಗುವವೆಂದು ನಂಬುವದು ಮನುಷ್ಯನ ಸೋಮಾರಿತನಕ್ಕೆ ಕಾರಣವೆಂದು ಬೌದ್ಧರ ಅಭಿಪ್ರಾಯವು. ಈ ಮತದಲ್ಲಿ ಜೀವಾತ್ಮ, ಈಶ್ವರಾತ್ಮ - ಈ ಎರಡು ಆತ್ಮರನ್ನೂ ತಿರಸ್ಕರಿಸಿ ಮಹಾತ್ಮ, ಪರಮಾತ್ಮ- ಎಂಬ ಒಂದು ಆತ್ಮವನ್ನು ಬೋಧಿಸುವದುಂಟು. ಇದಕ್ಕೆ **ತಥಾಗತಗರ್ಭ**ವೆಂದೂ ಹೆಸರು. ತಥಾಗತನೆಂದರೆ ಬುದ್ಧನು. ಪ್ರತಿಯೊಂದು ಪ್ರಾಣಿಯಲ್ಲಿ ತಥಾಗತಸ್ವಭಾವವು ಇದ್ದೇ ಇರುವದಾದರೂ ಕ್ಲೇಶಗಳ ಮುಸುಕಿನಲ್ಲಿ ಈ ಸ್ವಭಾವವು ಸಿಕ್ಕಿರುವದರಿಂದ ಹೊರತೋರಿಕೊಳ್ಳದೆ ಇರುವದೆಂದು ಹೇಳುವರು. ಬೌದ್ಧರು ಹೇಳುವ ಈ ತಥಾಗತಗರ್ಭಕ್ಕೂ ವೇದಾಂತಿಗಳು ಹೇಳುವ ನಿರ್ಗುಣಪರಮಾತ್ಮನಿಗೂ ಬಹಳ ಹೋಲಿಕೆಯುಂಟೆಂದು ಮೇಲೆ ನೋಡುವದಕ್ಕೆ ತೋರುವದು, ಆದರೆ ಆತ್ಮವಾದಿಗಳನ್ನು ತಮ್ಮ ಕಡೆಗೆ ಎಳೆದುಕೊಳ್ಳುವದಕ್ಕೂ, ಅನಾತ್ಮವಾದವೆಂದರೆ ಬೆಚ್ಚಿ ಬೇಳುವವರ ಹೆದರಿಕೆಯನ್ನು ತಪ್ಪಿಸುವದಕ್ಕೂ ಬುದ್ಧರು ತಥಾಗತಗರ್ಭವನ್ನುಪದೇಶಿಸುವರೆಂದು **ಲಂಕಾವತಾರಸೂತ್ರವೇ** ಮುಂತಾದ ಗ್ರಂಥಗಳಲ್ಲಿ ಹೇಳಿರುವದರಿಂದ ನೈರಾತ್ಮ್ಯವೆಂದರೆ ಆತ್ಮವು ಇಲ್ಲವಾಗುವದೆಂಬ ಅರ್ಥವನ್ನು ಮಾಡಿಕೊಳ್ಳಬಾರದೆಂಬುದೇ ಈ ವಾದದ ತಿರುಳೆಂದು ತೋರುವದು.

**ನಿರ್ವಾಣವೇ ಶಾಂತವಾದದ್ದು** ಎಂಬ ಮೂರನೆಯ ಮುದ್ರೆಯು ಬೌದ್ಧ

ಸಿದ್ಧಾಂತಕ್ಕೆಲ್ಲ **ಕೇಂದ್ರರೂಪವಾದ್ದದ್ದು.** ಎಲ್ಲವೂ ಅನಿತ್ಯವಾಗಿ ಯಾವದಕ್ಕೂ ತಿರುಳಿಲ್ಲವೆಂಬುದು ನಿಜವಾದರೆ, ನಿರ್ವಾಣವೇ ಶಾಂತನೆಂಬುದು ತಾನೇ ಸಿದ್ಧವಾಗುವದು. ಈ ನಿರ್ವಾಣವೆಂಬುದರ ಸ್ವಭಾವವನ್ನು ಮಾತುಗಳಿಂದ ತಿಳಿಯಪಡಿಸುವದು ಆಗಲಾರದು; ಅದನ್ನು ಶಾಸ್ತ್ರದಲ್ಲಿ ಹೇಳಿರುವ ಸಾಧನಗಳ ಅಭ್ಯಾಸದಿಂದ ಪಡೆದ ಅನುಭವದಿಂದಲೇ ಕಂಡುಕೊಳ್ಳಬೇಕು. ಅದು ಸಾಧನದಿಂದ ಪಡೆಯತಕ್ಕದ್ದಲ್ಲ, ಹೋಗಿ ತಲುಪತಕ್ಕ ಸ್ಥಳವಲ್ಲ, ತಾನೇ ಹುಟ್ಟತಕ್ಕದ್ದಲ್ಲ, ಯಾವದಾದರೂ ನಾಶವಾಗಿ ಬರತಕ್ಕದ್ದಲ್ಲ. ಬಯಕೆ ಹೊಟ್ಟೆಯ ಕಿಚ್ಚು, ಕೆಟ್ಟ ಬುದ್ಧಿ- ಎಂಬ ಮೂರು ದೋಷಗಳೂ ಹೋಗಿ, ಎಲ್ಲಾ ವಿಧವಾದ ದುಃಖವೂ ತೊಲಗಿ, ಹುಟ್ಟುಹೊಂದುಗಳಲ್ಲಿ ತೊಳಲುವದು ನಿಂತುಹೋಗುವದು ನಿರ್ವಾಣವು; ಪರೋಪಕಾರ, ಪ್ರೇಮ, ಜ್ಞಾನ - ಇವುಗಳಿಂದ ಹೃದಯವನ್ನು ಶುದ್ಧಿಗೊಳಿಸಿಕೊಂಡು ಅಜ್ಞಾನವೇ ಮುಂತಾದವುಗಳ ಸಂಕೋಲೆಯನ್ನು ಕಳಚಿ ಕೊಳ್ಳುವದೇ ನಿರ್ವಾಣವು.

ನಿರ್ವಾಣವೆಂದರೆ ಮಾಡಬೇಕಾದ ಯಾವ ಕಾರ್ಯವೂ ಇಲ್ಲದೆ ಧ್ಯಾನದಿಂದ ಕಾಲವನ್ನು ಕಳೆಯುವ ಸ್ಥಿತಿಯೆಂದು **ಹೀನಯಾನಮಾರ್ಗದ** ಕೆಲಬೌದ್ಧರ ಅಭಿಪ್ರಾಯವಿರುವುದು. ಯಾರು ಹಳೆಯ ಕರ್ಮವನ್ನು ತೀರಿಸಿಕೊಂಡು ಹೊಸದಾಗಿ ಕೂಡಿಹಾಕಿಕೊಳ್ಳದೆ. ಮುಂದೆ ಹುಟ್ಟಬಾರದೆಂಬ ಉದ್ದೇಶದಿಂದ ವಾಸನೆಯನ್ನೆಲ್ಲ ಕಳೆದುಕೊಂಡು ಆಶೆಯನ್ನೆಲ್ಲ ಕತ್ತರಿಸಿಕೊಂಡಿರುವರೋ ಅವರು ದೀಪವು ಆರಿಹೋಗುವಂತೆ ನಿರ್ವಾಣವನ್ನು ಹೊಂದುವರೆಂಬುದು ಹೀನಯಾನದ ಸಿದ್ಧಾಂತವು.

**ಮಹಾಯಾನಮಾರ್ಗದ** ಬೌದ್ಧರ ಅಭಿಪ್ರಾಯವು ಹೀಗಿಲ್ಲ. ಅವರು ಹೇಳುವದೇನೆಂದರೆ ಮಾಯಾಸಮಾಧಿಯೇ ಮುಂತಾದ ಎಲ್ಲಾ ಸಮಾಧಿಗಳ ಅಂತಸ್ತುಗಳನ್ನೂ ಏರಿ ತಥಾಗತಸ್ಥಿತಿಗೆ ಏರುವದರಿಂದ ಮನಸ್ಸನ್ನು ಲಯಗೊಳಿಸುವದೇ ನಿರ್ವಾಣವೆನಿಸುವದು. ಅದಕ್ಕೆ ಮೊದಲು ಹೊರಗಿನ ವಸ್ತುಗಳೆಲ್ಲ ಮನಸ್ಸಿನ ಕಲ್ಪನೆಯೆಂಬುದನ್ನು ತಿಳಿದಿರಬೇಕು; ವಸ್ತುಸ್ಥಿತಿಯಲ್ಲಿ (ಇರುವಿಕೆ, ಇಲ್ಲದಿರುವಿಕೆ, ಇದ್ದೂ ಇಲ್ಲದಿರುವಿಕೆ, ಇರುವದು ಇಲ್ಲದ್ದು- ಎಂಬ ಎರಡೂ ಅಲ್ಲದಿರುವಿಕೆ ಎಂಬ) ನಾಲ್ಕು ಕೋಟಿಗಳೂ ಇಲ್ಲವೆಂದು ತಿಳಿದಿರಬೇಕು; ಅರಿಯುವದು ಅರಿಯಲ್ಪಡುವದು ಎಂಬಿವೆರಡೂ ಮನಃಕಲ್ಪಿತವೆಂಬುದನ್ನು

ತಿಳಿದು ಅವುಗಳು ಕಾಣದಂತೆ ಮಾಡಿಕೊಂಡಿರಬೇಕು; ಯಾವ ಪ್ರಮಾಣವೂ ನೆಲೆಗೆ ನಿಲ್ಲದೆಂಬುದನ್ನು ಗೊತ್ತುಮಾಡಿಕೊಂಡಿರಬೇಕು; ತತ್ತ್ವವೆಂಬುದೂ ಭ್ರಾಂತಿಯೇ ಎಂದು ತಿಳಿದಿರಬೇಕು; ಆರ್ಯಧರ್ಮವೇ ಸಕಲ ಪ್ರಮಾಣಗಳನ್ನೂ ಒಳಗೊಂಡಿರುವದೆಂದು ತಿಳಿದಿರಬೇಕು; ಎರಡು ನೈರಾತ್ಮ್ಯವನ್ನೂ ಮನಗಂಡಿರಬೇಕು; ಎರಡು ಕ್ಲೇಶಗಳೂ, ಎರಡು ಮುಸುಕುಗಳೂ ಹೋಗಿರಬೇಕು; ಅಂಥವರಿಗೆ ನಿರ್ವಾಣವಾಗುವದೆಂಬುದು ಮಹಾಯಾನದ ಸಿದ್ಧಾಂತವು.

ಮೇಲೆ ಕೊಟ್ಟಿರುವ ನಿರ್ವಾಣದ ವರ್ಣನೆಯನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬೇಕಾದರೆ ಅದರಲ್ಲಿ ಹೇಳಿರುವ ಒಂದೊಂದು ಸಾಧನೆಯ ಸ್ವರೂಪವನ್ನೂ ಬಿಚ್ಚಿ ತಿಳಿದುಕೊಳ್ಳಬೇಕಾಗುವದು. ಈ ವಿಷಯವನ್ನು ಮುಂದಿನ ಲೇಖನಗಳಲ್ಲಿ ವಿವರಿಸಲಾಗುವದು.

★★★★★

# ಆರ್ಯಸತ್ಯಗಳು

**ಯೋ ಚ ಬುದ್ಧಂ ಚ ಧಮ್ಮಂ ಚ ಸಂಘಂ ಚ ಸರಣಂ ಗತೋ ।**
**ಚತ್ತಾರಿ ಅರಿಯಸಚ್ಚಾನಿ ಸಮ್ಮಪ್ಪಞ್ಞಾಯ ಪಸ್ಸತಿ ॥**

**– ಧಮ್ಮಪದ 14-12**

''ಯಾವನು ಬುದ್ಧನನ್ನೂ, ಧರ್ಮವನ್ನೂ, ಸಂಘವನ್ನೂ, ಶರಣುಹೊಂದಿರುವನೋ, ನಾಲ್ಕು ಆರ್ಯಸತ್ಯಗಳನ್ನೂ ಶರಣುಹೊಂದಿರುವನೋ ಅವನೇ ತತ್ತ್ವವನ್ನು ಚೆನ್ನಾಗಿ ಬಲ್ಲವನು'' – ಎಂಬುದು ಬೌದ್ಧರ ಸಿದ್ಧಾಂತವು. ಗೌತಮನು ಸಂಸಾರವನ್ನು ತೊರೆದು ಅರಣ್ಯಕ್ಕೆ ತೆರಳಿ ಎಷ್ಟೋ ದಿನ ತಪಸ್ಸುಮಾಡಿದ ಮೇಲೆ ಕೊನೆಗೆ ಕಂಡುಹಿಡಿದ ನಾಲ್ಕು ತತ್ತ್ವಗಳಿಗೆ **ಆರ್ಯಸತ್ಯ**ಗಳೆಂದು ಹೆಸರು. ಈ ಸತ್ಯಗಳನ್ನು ಕಂಡುಕೊಂಡ ಮೇಲೆ ಗೌತಮನು **ಬುದ್ಧ**ನಾದನು. ಈ ತತ್ತ್ವಗಳನ್ನು ಅವನು ವಾರಾಣಸಿಯಲ್ಲಿ 'ಮಿಗದಾಯ'ವೆಂಬ ಆಶ್ರಮದಲ್ಲಿ ಕೌಂಡಿನ್ಯನೇ ಮೊದಲಾದ ಐದು ಜನ ಭಿಕ್ಷುಗಳಿಗೆ ಬೋಧಿಸಿ ಧರ್ಮಚಕ್ರವನ್ನು ಹರಿಯಬಿಟ್ಟನು. ಆ ಮಹಾಕಾರ್ಯಕ್ಕೆ '**ಧರ್ಮಚಕ್ರಪ್ರವರ್ತನ**'ವೆಂದು ಹೆಸರು.

ಬುದ್ಧನು ಕಂಡುಹಿಡಿದ ಈ ನಾಲ್ಕು ಸತ್ಯಗಳು ಯಾವವೆಂದರೆ; ದುಃಖ, ದುಃಖಸಮುದಯ, ದುಃಖನಿರೋಧ, ದುಃಖನಿರೋಧಪ್ರತಿಪತ್ತು. ಈ ನಾಲ್ಕನ್ನೂ ಚೆನ್ನಾಗಿ ತಿಳಿದುಕೊಂಡರೆ ಸರ್ವದುಃಖಗಳಿಂದಲೂ ಮನುಷ್ಯನು ಬಿಡುಗಡೆ ಯಾಗುವನೆಂಬುದು ಗೌತಮಬುದ್ಧನ ಮತವು. ಈ ನಾಲ್ಕು ಸತ್ಯಗಳನ್ನೂ ಧರ್ಮಚಕ್ರಪ್ರವರ್ತನಸೂತ್ರದಲ್ಲಿ ವರ್ಣಿಸಿರುವ ರೀತಿಯನ್ನು ಇಲ್ಲಿ ವಾಚಕರಿಗೆ ತಿಳಿಸಿಕೊಡುವೆವು.

'**ದುಃಖ**'ದ ಸಂಬಂಧವಾದ ಆರ್ಯಸತ್ಯವೇನೆಂದರೆ, ಸಂಸಾರವೆಲ್ಲವೂ ದುಃಖಮಯವಾಗಿರುವದೆಂಬುದು. ಹುಟ್ಟುವದೊಂದು ದುಃಖವು, ಸೊರಗುವದೊಂದು ದುಃಖವು, ಬೇನೆಬೀಳುವದೊಂದು ದುಃಖವು, ಸಾಯುವದೊಂದು ದುಃಖವು; ನಮಗೆ ಬೇಕಿಲ್ಲದ್ದು ಗಂಟುಬೀಳುವದೊಂದು ದುಃಖ, ನಮಗೆ ಬೇಕಾದದ್ದು ಕೈಬಿಟ್ಟು ಹೋಗುವದೊಂದು ದುಃಖ; ಯಾವದು ನಮಗೆ ಬೇಕೆನಿಸುವದೋ ಅದು ದೊರೆಯದಿರುವದೂ ದುಃಖವೆ. ಹೆಚ್ಚೇಕೆ. ಅದು ಬೇಕು, ಇದು ಬೇಕು– ಎಂಬ ಆಸಕ್ತಿಯಿಂದ ಉಂಟಾಗಿರುವ ಐದು ಸ್ಕಂಧಗಳೂ[1] ದುಃಖಮಯವೆ. ಹೀಗೆ ಸರ್ವವೂ ದುಃಖಮಯವಾಗಿರುವದೆಂಬುದನ್ನು ಮನಗಂಡರೆ 'ದುಃಖ'ವೆಂಬ ಆರ್ಯಸತ್ಯವನ್ನು ಅರಿತಂತಾಯಿತು.

ಇನ್ನು '**ದುಃಖಸಮುದಯ**'ವೆಂಬ ಎರಡನೆಯ ಸತ್ಯದ ವಿಚಾರಕ್ಕೆ ತೆರಳೋಣ. ಸಮುದಯವೆಂದರೆ ಹುಟ್ಟುವ ಬಗೆ. ಪ್ರಪಂಚದಲ್ಲಿ ದುಃಖವಿದೆಯೆಂದೂ ಸಂಸಾರವು ದುಃಖಮಯವಾಗಿರುವದೆಂದೂ ಕಂಡುಕೊಂಡರೆಸಾಲದು; ಈ ದುಃಖವು ಉಂಟಾಗುವ ಬಗೆ ಹೇಗೆಂಬುದನ್ನೂ ತಿಳಿದು ಕೊಳ್ಳಬೇಕು. ದುಃಖಕ್ಕೆಲ್ಲ ವಿಷಯಗಳ ಬಯಕೆಯೇ ಕಾರಣವು. ಈ ಬಯಕೆಯನ್ನು ಬೌದ್ಧರು '**ತೃಷ್ಣೆ**' (**ತಣ್ಹಾ**) ಎಂದು ಕರೆಯುತ್ತಾರೆ. ಈ ತೃಷ್ಣೆಯು ಕಾಮತೃಷ್ಣೆ, ಭವತೃಷ್ಣೆ, ವಿಭವತೃಷ್ಣೆ ಎಂದು ಮೂರು ಬಗೆ. '**ಕಾಮತೃಷ್ಣೆ**'ಯೆಂದರೆ ವಿಷಯ ಭೋಗಗಳಿಗಾಗಿ ಹಾತುವರಿಯುತ್ತಿರುವದು. ಭೋಗಕ್ಕೆ ವಿಷಯಗಳು ಎಲ್ಲೆಲ್ಲಿಯೂ ಸಿಕ್ಕಲೆಂದೂ ಮತ್ತೆ ಮತ್ತೆ ಹುಟ್ಟುವಾಗಲೆಲ್ಲ ತಾನು ಇದ್ದುಕೊಂಡು

---

1. ರೂಪಸ್ಕಂಧ, ವೇದನಾಸ್ಕಂಧ, ಸಂಜ್ಞಾಸ್ಕಂಧ, ಸಂಸ್ಕಾರಸ್ಕಂಧ, ವಿಜ್ಞಾನಸ್ಕಂಧ – ಈ ಐದು ಸ್ಕಂಧಗಳಿಂದಲೇ ಪ್ರಾಣಿಗಳು ಆಗಿರುವವೆಂಬುದು ಬೌದ್ಧರವಾದವು. ಈ ಸ್ಕಂಧಗಳ ವಿವರಣೆಯನ್ನು ಮತ್ತೊಂದು ಲೇಖನದಲ್ಲಿ ಕೊಡುವೆವು.

ಸುಖವನ್ನು ಹೊಂದುತ್ತಿರುವಂತಾಗಲೆಂದೂ ಬಯಸುವದು '**ಭವತೃಷ್ಣೆ**'ಯು. ಸತ್ತ ಮೇಲೆ ನಾವಿರುವದೇ ಇಲ್ಲವೆಂದು ಬಗೆದು ಈ ಜನ್ಮದಲ್ಲಿಯೇ ಆದಷ್ಟು ಸುಖವನ್ನು ಅನುಭವಿಸೋಣವೆಂದು ಬಯಸುವದು '**ವಿಭವತೃಷ್ಣೆ**'ಯು. ಈ ಮೂರು ಬಗೆಯ ತೃಷ್ಣೆಗಳೂ ದುಃಖಕ್ಕೆ ಕಾರಣವೆಂದು ತಿಳಿಯುವದು 'ದುಃಖಸಮುದಯ'ವೆಂಬ ಎರಡನೆಯ ಆರ್ಯಸತ್ಯದ ಪರಮಾರ್ಥಜ್ಞಾನವೆನಿಸುವದು.

'**ದುಃಖನಿರೋಧ**'ವೆಂಬ ಮೂರನೆಯ ಸತ್ಯದ ತಿಳಿವಳಿಕೆಯ ಸ್ವರೂಪವೇನೆಂದರೆ ಈ ತೃಷ್ಣೆಯ ಜೋರು ಒಂದಿಷ್ಟೂ ಉಳಿಯದಂತೆ ಇದನ್ನು ನಾಶಪಡಿಸಿಕೊಂಡರೆ ಎಲ್ಲಾ ಬಗೆಯ ದುಃಖವೂ ನಾಶವಾಗುವದೆಂದು ಅರಿತುಕೊಳ್ಳುವದು. ಸರ್ವವೂ ದುಃಖಮಯವೆಂದೂ ಸರ್ವದುಃಖವೂ ತೃಷ್ಣೆಯಿಂದಾಗಿರುವದೆಂದೂ ತಿಳಿದುಕೊಂಡಷ್ಟೇ ಬಲವಾಗಿ ತೃಷ್ಣೆಯನ್ನು ನಾಶಗೊಳಿಸುವದೇ ದುಃಖನಿವಾರಣೆಗೆ ಉಪಾಯವೆಂದೂ ತಿಳಿಯುವದು ಅವಶ್ಯಕವು.

'**ದುಃಖನಿರೋಧಗಾಮಿಯಾದ ಪ್ರತಿಪತ್ತು**'- ಎಂದರೆ ದುಃಖವನ್ನು ನಾಶಗೊಳಿಸುವ ಮಾರ್ಗವು ಇಂಥದೆಂದು ತಿಳಿಯುವದು - ನಾಲ್ಕನೆಯ ಆರ್ಯಸತ್ಯವು. ಈ ಮಾರ್ಗಕ್ಕೆ 'ಅಷ್ಟಾಂಗಮಾರ್ಗ'ವೆಂದು ಹೆಸರು. ಸಮ್ಯಗ್ದೃಷ್ಟಿ (ಸರಿಯಾದ ಅರಿವು), ಸಮ್ಯಕ್ಸಂಕಲ್ಪ (ಸರಿಯಾದ ಗುರಿ), ಸಮ್ಯಗ್ವಾಚಾ (ಸರಿಯಾದ ಮಾತು), ಸಮ್ಯಕ್ಕರ್ಮಾನ್ತ (ಸರಿಯಾದ ನಡತೆ), ಸಮ್ಯಗಾಜೀವ (ಸರಿಯಾದ ಬಾಳು), ಸಮ್ಯಗ್ವ್ಯಾಯಾಮ (ಸರಿಯಾದ ಪ್ರಯತ್ನ), ಸಮ್ಯಕ್ ಸ್ಮೃತಿ (ಸರಿಯಾದ ಎಚ್ಚರಿಕೆ), ಸಮ್ಯಕ್ಸಮಾಧಿ (ಸರಿಯಾದ ಚಿಂತೆ) - ಎಂದು ಎಂಟು ಅಂಗಗಳಿಂದ ಕೂಡಿರುವ ಮಾರ್ಗವೇ ದುಃಖವನ್ನು ನಾಶಗೊಳಿಸುವದಕ್ಕೆ ಉಪಾಯವೆಂದು ನಂಬಿ ಆ ಮಾರ್ಗವನ್ನು ಶರಣುಹೊಂದುವದೇ ನಾಲ್ಕನೆಯ ಆರ್ಯಸತ್ಯದ ತಿಳಿವಳಿಕೆ.

ಈ ನಾಲ್ಕು ಆರ್ಯಸತ್ಯಗಳನ್ನು ಹಿಂದೆ ಯಾರೂ ಉಪದೇಶಮಾಡಿರಲಿಲ್ಲವೆಂದೂ, ಇವುಗಳ ವಿಷಯವಾದ ದೃಷ್ಟಿಯು ತನ್ನಲ್ಲಿಯೇ ಮೊದಲು ಉಂಟಾಯಿತೆಂದೂ, ಇವುಗಳ ಸ್ವರೂಪವನ್ನು ತಾನು ವಿಚಾರಮಾಡಿ, ಮನಗಂಡು, ಅನುಭವಕ್ಕೆ ತಂದುಕೊಂಡ ಮೇಲೆಯೇ ತನ್ನ ಹೃದಯದ

ಬಂಧವೆಲ್ಲ ಬಿಡುಗಡೆಯಾಯಿತೆಂದೂ, ಇದನ್ನು ಅರಿತುಕೊಂಡದ್ದರಿಂದ ಇನ್ನು ಮೇಲೆ ತನಗೆ ಪುನರ್ಜನ್ಮವೇ ಆಗುವದಿಲ್ಲವೆಂದೂ ಬುದ್ಧನು ಹೇಳಿಕೊಂಡಂತೆ ಧರ್ಮಚಕ್ರಪ್ರವರ್ತನಸೂತ್ರದಲ್ಲಿ ಬರೆದಿರುತ್ತದೆ. ಅಷ್ಟಾಂಗಮಾರ್ಗಕ್ಕೆ ಬೌದ್ಧಧರ್ಮದಲ್ಲಿ ಎಲ್ಲಕ್ಕೂ ಹೆಚ್ಚಿನ ಮಹತ್ತ್ವವಿರುವದು.

★★★★★

# ಪ್ರತೀತ್ಯಸಮುತ್ಪಾದ- 1

## (ಬೌದ್ಧಸಿದ್ಧಾಂತ – ಬೇರೆ ಬೇರೆ ಗ್ರಂಥಗಳ ಆಧಾರದಿಂದ ಬರೆದದ್ದು)

**– ಸಂಗ್ರಹ: ಶ್ರೀಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು**

ಎಲ್ಲವೂ ಅನಿತ್ಯವು, ಎಲ್ಲವೂ ನಿರಾತ್ಮವು – ಎಂಬೀ ಎರಡು ಸಿದ್ಧಾಂತಗಳು ಬೌದ್ಧಮತದಲ್ಲಿ ಬಹು ಮುಖ್ಯವಾಗಿವೆ, ಯಾವದೊಂದು ವಸ್ತುವೂ ತಾನು ಇದ್ದಂತೆ ಒಂದು ಕ್ಷಣವೂ ಇರುವದೇ ಇಲ್ಲ; ಕ್ಷಣಕ್ಷಣಕ್ಕೂ ಪ್ರತಿಯೊಂದು ವಸ್ತುವೂ ಮಾರ್ಪಡುತ್ತಿರುವದು, ಈ ಮಾರ್ಪಾಡಾಗುತ್ತಿರುವಾಗ ಮಾರ್ಪಾಡೆಲ್ಲ ಎರಡು ಕ್ಷಣಗಳವರೆಗಾದರೂ ಇದ್ದಂತೆ ಇದ್ದುಕೊಂಡಿರುವ ತಿರುಳೆಂಬುದು ಇಲ್ಲವೇ ಇಲ್ಲ. ತಮ್ಮೆದುರಿಗೇ ಪ್ರತಿಯೊಂದೂ ಒಂದು ಕ್ಷಣವೂ ಬಿಡುವಿಲ್ಲದೆ ಮಾರ್ಪಡುತ್ತಿದ್ದರೂ ಈ ಕ್ರಿಯಾಪ್ರವಾಹದಲ್ಲಿ ಸ್ಥಾಯಿಯಾದ ವಸ್ತುಗಳೂ ಇರುವವೆಂದು ಜನರು ನಂಬಿರುತ್ತಾರೆ. ಇದಕ್ಕಿಂತ ಭ್ರಾಂತಿಯು ಬೇರೊಂದಿಲ್ಲ – ಎಂಬುದು ಬೌದ್ಧರ ಮತವು.

ಒಟ್ಟು ಜಗತ್ತು ಶಾಶ್ವತವೊ ಅಲ್ಲವೊ? ಈ ಜಗತ್ತು ಹೇಗುಂಟಾಯಿತು?– ಎಂಬೀ ಪ್ರಶ್ನೆಗಳಿಗೆ ಬೌದ್ಧಮತದಲ್ಲಿ ಉತ್ತರವಿಲ್ಲ. ಇಂಥ ಪ್ರಶ್ನೆಗಳನ್ನು ಕೇಳುವದೂ ಇವಕ್ಕೆ ಉತ್ತರವನ್ನು ಹೇಳುವದಕ್ಕೆ ಪ್ರಯತ್ನ ಮಾಡುವದೂ ಅವಿವೇಕ, ನಿಷ್ಪ್ರಯೋಜನ – ಎಂದು ಬೌದ್ಧರ ಭಾವನೆ. ಚಾರಾಚರರೂಪವಾದ ಈ ಜಗತ್ತು ಕರ್ಮದ ನಿಯಮಕ್ಕೊಳಪಟ್ಟು ಮಾರ್ಪಡುತ್ತಲೇ ಇರುವದು ನಮಗೆ ಗೋಚರವಾಗಿದೆ. ಇದರಲ್ಲಿರುವ ಕಾರ್ಯಕಾರಣಭಾವನಿಯಮವನ್ನು ನಾವು

ತಿಳಿದುಕೊಳ್ಳಲೂಬಹುದು, ತಿಳಿದುಕೊಂಡರೆ ಪ್ರಯೋಜನವೂ ಉಂಟು. ಇದನ್ನು ಬಿಟ್ಟು ಜಗತ್ತು ನಿತ್ಯವು, ಅನಿತ್ಯವು, ನಿತ್ಯಾನಿತ್ಯವು; ಜಗತ್ತು ಅನಂತವಾದದ್ದು, ಅಂತವುಳ್ಳದ್ದು, ಒಂದು ಬಗೆಯಲ್ಲಿ ಸಾಂತವೂ ಒಂದು ಬಗೆಯಲ್ಲಿ ಅನಂತವೂ ಆದದ್ದು – ಎಂದು ಮುಂತಾಗಿ ಕಲ್ಪಿಸುವದು ವ್ಯರ್ಥ – ಎಂದು ಬುದ್ಧನೇ ಹೇಳಿರುತ್ತಾನೆ.

ಈ ಲೋಕದಲ್ಲಿರುವವರಲ್ಲಿ ಕೆಲವರು ಪುಣ್ಯವನ್ನು ಮಾಡಿ ದೇವಲೋಕಕ್ಕೆ ಹೋಗಬಹುದು, ಕೆಲವರು ಪಾಪವನ್ನು ಮಾಡಿ ನರಕಕ್ಕೂ ಹೋಗಬಹುದು. ಆದರೆ ಯಾವ ಲೋಕವೇ ಆಗಲಿ, ಯಾವ ಬಗೆಯ ಜನ್ಮವೇ ಆಗಲಿ, ಶಾಶ್ವತವಲ್ಲ; ಅದು ಯಾವಾಗಲೂ ಮಾರ್ಪಡುತ್ತಲೇ ಇದ್ದು, ಕೊನೆಗೆ ಆಯಾ ಕರ್ಮಫಲದ ಅವಧಿಯು ಮುಗಿಯುತ್ತಲೂ ನಾಶವಾಗಿಬಿಡುತ್ತವೆ. ಕರ್ಮದ ನಿಯಮದಿಂದ ಇಡಿಯ ಜಗತ್ತೇ ಬದ್ಧವಾಗಿರುತ್ತದೆ; ಎಲ್ಲಿ ನೋಡಿದರೂ ಕಾರ್ಯಕಾರಣಗಳ ಸಾಲುಗಳೇ ಇರುತ್ತವೆ – ಎಂಬುದು ಬುದ್ಧನ ಮತವು.

ಬುದ್ಧನು ಉಪದೇಶಿಸಿರುವ ಈ ಕಾರ್ಯಕಾರಣನಿಯಮಕ್ಕೆ **ಪ್ರತೀತ್ಯಸಮುತ್ಪಾದ**ವೆಂದು ಹೆಸರು. ಯಾವದು ಇರುವದರಿಂದಲೇ ಯಾವದು ಉಂಟಾಗುವದೊ, ಯಾವದು ಇಲ್ಲದಿದ್ದರೆ ಅದು ತಾನೂ ಇಲ್ಲದೆ ಹೋಗುವದೋ ಅದು ಅದರ **ಹೇತು**ವೆನಿಸುವದು. ಉದಾಹರಣೆಗೆ ಬೀಜವಿಲ್ಲದೆ ಗಿಡವಾಗುವದಿಲ್ಲ. ಇಂಥ ಬೀಜವಿದ್ದರೇ ಇಂಥ ಗಿಡವಾಗಬೇಕೆಂಬ ನಿಯಮವುಂಟು. ಆ ಬೀಜವಿದ್ದರೆ ಆ ಗಿಡವಾಗುವದು, ಇಲ್ಲದಿದ್ದರೆ ಆಗುವದಿಲ್ಲ. ಆದ್ದರಿಂದ ಬೀಜವು ಗಿಡಕ್ಕೆ ಹೇತುವಾಯಿತು. ಇಲ್ಲಿ ಗಿಡವಾಗುವದಕ್ಕೆ ಬೀಜವೊಂದೇ ಕಾರಣವಾಗಿರುವದಿಲ್ಲ; ನೆಲ, ನೀರು, ಗಾಳಿ, ಬೆಳಕು, ಬಯಲು – ಇವೆಲ್ಲ ಇರಲೇಬೇಕು. ಈ ಕಾರಣಗಳ ಒಟ್ಟೇ **ಪ್ರತ್ಯಯ**ವೆನಿಸುವದು. ಹೀಗೆ ಹೇತುಪ್ರತ್ಯಯಗಳಿಂದಲೇ ಪ್ರತಿಯೊಂದು ಕಾರ್ಯವೂ ಆಗುತ್ತಿರುವದು – ಎಂಬುದು ಪ್ರತೀತ್ಯಸಮುತ್ಪಾದದ ನಿಯಮವು. ಈ ನಿಯಮದಲ್ಲಿ ಕಾರ್ಯವನ್ನುಂಟುಮಾಡುವ ಕರ್ತೃವನ್ನು ಅಂಗೀಕರಿಸಿರುವದಿಲ್ಲ, ಯಾವದಾದರೊಂದು ವಸ್ತುವು ಹೇತುವಿನ ರೂಪದಲ್ಲಿದ್ದುಕೊಂಡು ಫಲವಾಗಿ ಪರಿಣಮಿಸುವದೆಂದೂ ಇಟ್ಟುಕೊಂಡಿಲ್ಲ; ಇಂಥದ್ದೊಂದು ಮೊದಲಿದ್ದರೆ ಇಂಥದ್ದೊಂದಾಗುವದು – ಎಂಬುದಿಷ್ಟೇ, ಪ್ರತೀತ್ಯಸಮುತ್ಪಾದ್ಯಕ್ಕೆ ಬೇಕಾದದ್ದು.

ಹೇತುವು ಮೊದಲಿರುತ್ತದೆ, ಫಲವು ಆಮೇಲೆ ಆಗುತ್ತದೆ. ಇದಕ್ಕೆ ಯಾರೊಬ್ಬರೂ ಕಾರಣಕರ್ತರಿರುವದಿಲ್ಲ.

ಪತ್ರೀತ್ಯಸಮುತ್ಪಾದದ ನಿಯಮದಲ್ಲಿ ಯಾವದೊಂದು ವಸ್ತುವಿನ ಸ್ವರೂಪವೂ ಇಂಥದ್ದೊಂದೆಂದು ಗೊತ್ತಾಗಿ ನಿಂತಿರುವ ಹಾಗಿಲ್ಲವಾದ್ದರಿಂದ ಹೇತುಫಲಗಳೆಂಬ ಮಾತು ವಸ್ತುಗಳ ಗೊತ್ತಾದ ಸ್ವಭಾವವನ್ನು ಹೇಳುವದಿಲ್ಲವೆಂಬುದನ್ನು ಮರೆಯದಿರಬೇಕು. ಒಂದು ಹೇತುವಿನಿಂದ ಒಂದು ಫಲವುಂಟಾದರೆ ಆ ಫಲವು ಮತ್ತೊಂದು ಫಲದ ದೃಷ್ಟಿಯಿಂದ ತಾನೂ ಹೇತುವೆನಿಸಿರುವದು; ಆದ್ದರಿಂದ ಪ್ರಪಂಚಕ್ಕೆ ಪ್ರಪಂಚವೇ ಹೇತುಫಲಗಳ ಸಾಲುಗಳಾಗಿರುತ್ತದೆ. ಇಲ್ಲಿ ಯಾವದೊಂದೂ ಸ್ವತಂತ್ರವಿಲ್ಲ. ತನ್ನ ತನ್ನ ಹೇತುಪ್ರತ್ಯಯಗಳ ವಶವಾಗಿಯೇ ಎಲ್ಲವೂ ಉಂಟಾಗುತ್ತವೆ. ಬೀಜ, ಮೊಳಕೆ, ಎಲೆ, ಕವಲು, ದಂಟು, ಕುಡಿ, ಮೊಗ್ಗು, ಹೂ – ಮುಂತಾದವುಗಳಂತೆ ಒಂದೊಂದೂ ತನ್ನ ಮುಂದಿನ ಮತ್ತೊಂದಕ್ಕೆ ಹೇತುವಾಗಿರುವದು, ಒಂದೊಂದೂ ತನ್ನ ಹಿಂದಿನ ಮತ್ತೊಂದು ಹೇತುವನ್ನು ಅವಲಂಬಿಸಿರುವದು. ಆದರೆ ಹೇತುವಿಗೆ ನಾನು ಇಂಥ ಫಲವನ್ನು ಏರ್ಪಡಿಸುವೆನೆಂಬ ತಿಳಿವಿಲ್ಲ, ಅಂಥ ತಿಳಿವಳಿಕೆಯಿಂದ ಅದು ಯಾವ ಕಾರ್ಯವನ್ನು ಮಾಡುವದೂ ಇಲ್ಲ; ಇದರಂತೆಯೇ ಫಲಕ್ಕೂ ನಾನು ಇಂಥ ಹೇತುವಿನಿಂದುಂಟಾಗಿರುವೆನೆಂಬ ತಿಳಿವಿಲ್ಲ. ಆ ತಿಳಿವಿನಿಂದ ತಾನು ಏನೂ ಆಗುವದೂ ಇಲ್ಲ.

ಇದುವರೆಗೆ ನಾವು ವರ್ಣಿಸಿರುವದು **ಬಾಹ್ಯಪ್ರತೀತ್ಯಸಮುತ್ಪಾದವು.** ಇದರಂತೆ ಆಧ್ಯಾತ್ಮಿಕಪ್ರತೀತ್ಯಸಮುತ್ಪಾದವನ್ನೂ ತಿಳಿಯಬೇಕು. ಈ ಸಮುತ್ಪಾದದ ಕ್ರಮವನ್ನರಿತರೆ ಮನುಷ್ಯನು ಸಂಸಾರದಲ್ಲಿ ಅಲೆಯುತ್ತಾ ದುಃಖಪಡುತ್ತಿರುವದಕ್ಕೆ ಕಾರಣವೂ ಗೊತ್ತಾಗುತ್ತದೆ, ಆ ದುಃಖವನ್ನು ಹೋಗಲಾಡಿಸಿಕೊಳ್ಳಬೇಕಾದರೆ ಏನು ಮಾಡಬೇಕೆಂಬುದೂ ಗೊತ್ತಾಗುತ್ತದೆ. ಬೌದ್ಧನು ಉಪದೇಶಿಸಿರುವ **ಅಷ್ಟಾಂಗಮಾರ್ಗ**ದ ಬೆಲೆಯನ್ನು ತಿಳಿದುಕೊಳ್ಳುವ ಮುಂಚೆ ಈ ಪ್ರತೀತ್ಯಸಮುತ್ಪಾದವನ್ನು ತಿಳಿದುಕೊಳ್ಳಲೇಬೇಕು. ಆದ್ದರಿಂದ ಅಧ್ಯಾತ್ಮಿಕ ಪ್ರತೀತ್ಯಸಮುತ್ಪಾದವನ್ನು ತಿಳಿದುಕೊಂಡವನು ಬುದ್ಧನನ್ನು ಕಂಡಂತೆಯೇ – ಎಂದು ಬೌದ್ಧರು ಎಣಿಸುತ್ತಾರೆ.

★★★★★

# ಪ್ರತೀತ್ಯಸಮುತ್ಪಾದ -2

**- ಶ್ರೀಸಚ್ಚಿದಾನಂದೇದ್ರಸರಸ್ವತೀ ಸ್ವಾಮಿಗಳವರು**

ಗೌತಮಬುದ್ಧನ ಜಯಂತಿ, ಮಹಾಬೋಧಿಪ್ರಾಪ್ತಿ ಮತ್ತು ಪರಿನಿರ್ವಾಣ ಈ ಮೂರೂ ವೈಶಾಖ ಶುದ್ಧ ಪೂರ್ಣಿಮೆಯ ದಿನವೇ ಆಯಿತೆಂದು ಬೌದ್ಧರ ಸಾಂಪ್ರದಾಯಿಕವಾದ ನಂಬಿಕೆಯಿರುತ್ತದೆ. ಬುದ್ಧನು ತನ್ನ ಕಾಲಕ್ಕೆ ಜನರಿಗೆ ಬೋಧಿಸಿದ ದುಃಖನಿವೃತ್ತಿಯ ಉಪಾಯವು ನಮ್ಮ ಭರತಖಂಡದಮೇಲೆ ಮಾತ್ರವೇ ಅಲ್ಲದೆ ಕಾಲಕ್ರಮದಲ್ಲಿ ಸಿಂಹಳ, ಬರ್ಮಾ, ಚೀನ, ಜಪಾನ್, ನೈರುತ್ಯ ಏಷ್ಯ- ಈ ದೇಶಗಳ ಮೇಲೂ ಹರಿಡಿಕೊಂಡಿರುತ್ತದೆ. ಆ ಮಹಾತ್ಮನ ಮಹಾಕರುಣೆಯ ಪರಿಣಾಮವು ಭೂಮಂಡಲದ ಬಹುಭಾಗದ ಜನರ ಮೇಲೆ ಆಗಿರುತ್ತದೆ. 1956ರ ಮೇ 24ನೆಯ ಗುರುವಾರ ನಮ್ಮ ದೇಶದಲ್ಲೆಲ್ಲ ಎರಡು ಸಾವಿರದ ಐನೂರನೆಯ ಬುದ್ಧಭಗವಂತನ ದಿನದ ಉತ್ಸವವನ್ನು ಭಾರತವರ್ಷದ ನಿವಾಸಿಗಳು ಆಚರಿಸುವರು. ಇದಕ್ಕೆ ಸರ್ಕಾರದವರ ಸಹಾನುಭೂತಿಯೂ ದೊರೆತಿರುವದು. ಈ ದಿನವು ಆತನ ಜಯಂತಿಯ ಸ್ಮಾರಕವೇ ಆಗಲಿ ಪರಿನಿರ್ವಾಣನಿಮಿತ್ತದ ಆರಾಧನೆಯ ದಿನವೇ ಆಗಲಿ, ಆ ಮಹಾತ್ಮನು ಮಾಡಿದ ಪರಮೋಪದೇಶವನ್ನು ಮನದಂದುಕೊಂಡು ಶಾಂತಿಸುಖಗಳಿಗೆ ಮಾರ್ಗವನ್ನು ಕಂಡುಕೊಳ್ಳಬೇಕೆನ್ನುವವರಿಗೆ ಸಹಾಯಕವಾಗಿರುವದೆಂಬಲ್ಲಿ ಸಂಶಯವಿಲ್ಲ. ಬುದ್ಧನು ಈಗಿನ ಬುದ್ಧಗಯೆಯಲ್ಲಿ ಕಂಡುಕೊಂಡ ಆರ್ಯಸತ್ಯಚತುಷ್ಟವೂ ಕ್ಯಾತಿಯ ಸಮೀಪದಲ್ಲಿರುವ ಸಾರನಾಥ ಎಂಬಲ್ಲಿ 'ಧರ್ಮಚಕ್ರಪ್ರವರ್ತನ' ಎಂಬ ಹೆಸರಿನಿಂದ ಮಾಡಿದ ಮೊಟ್ಟಮೊದಲಿನ ಉಪದೇಶವೂ ಹುಣ್ಣಿಮೆಯ ದಿನವೇ ಆಗಿರುತ್ತವೆ; ಆ ಪ್ರಥಮೋಪದೇಶವು ಮಾತ್ರ ಆಷಾಢಶುದ್ಧಪೂರ್ಣಿಮೆಯ ದಿನವಾಯಿತು. ಆದ್ದರಿಂದ ಬುದ್ಧನು ಮಾಡಿದ ಮುಖ್ಯೋಪದೇಶವು ಯಾವದೆಂಬುದನ್ನು ವಿಚಾರ ಮಾಡುವವರಿಗೆ ಇದು ಒಂದು ಸುಸಂದರ್ಭವಾಗಿದೆ ಎನ್ನಬಹುದು.

ಬುದ್ಧನ ಅಭಿಪ್ರಾಯದಂತೆ ದುಃಖ, ದುಃಖಸಮುದಯ, ದುಃಖನಿರೋಧ; ದುಃಖನಿರೋಧಮಾರ್ಗ- ಇವೇ ನಾಲ್ಕು **ಆರ್ಯಸತ್ಯ**ಗಳು. ಸಂಸಾರವೆಲ್ಲವೂ

ದುಃಖಮಯವಾಗಿದೆ ಎಂಬುದು ದುಃಖಸತ್ಯವು. ಈ ದುಃಖಕ್ಕೆ ಒಂದು ಕಾರಣವಿದೆ ಎಂಬುದು ದುಃಖಸಮುದಯಸತ್ಯವು. ದುಃಖವು ನಾಶವಾಗಬಹುದು ಎಂಬುದು ದುಃಖನಿರೋಧಸತ್ಯವು. ಈ ದುಃಖವನ್ನು ನಾಶಮಾಡಿಕೊಳ್ಳುವದಕ್ಕೆ ಒಂದು ಉಪಾಯವಿದೆ ಎಂಬುದು ದುಃಖನಿರೋಧಮಾರ್ಗಸತ್ಯವು (ಅಥವಾ ದುಃಖನಿರೋಧಮಾರ್ಗಗಾಮಿನೀಪ್ರತಿಪತ್ ಎಂಬ ಸತ್ಯವು).

ದುಃಖವೆಂದರೆ ಯಾವದು? ಹುಟ್ಟಿದವನಿಗೆ ಆಗುವ ಮುಪ್ಪು, ರೋಗ, ಮರಣ- ಇವೇ ದುಃಖಗಳು. ಕ್ಲೇಶಗಳೂ ಕರ್ಮವೂ ದುಃಖವೂ ಮತ್ತೆಮತ್ತೆ ಚಕ್ರದಂತೆ ತಿರುಗಿತಿರುಗಿ ಜನ್ಮಜನ್ಮಕ್ಕೂ ಬರುತ್ತಿರುವದೇ ಸಂಸಾರವು. ಇದಕ್ಕೆ ಕಾರಣವನ್ನು ಪ್ರತೀತ್ಯಸಮುತ್ಪಾದ - ಕಾರ್ಯಕಾರಣನಿಯಮದಿಂದ ಪ್ರತಿಯೊಂದೂ ಉಂಟಾಗುತ್ತಿದೆ ಎಂಬ ಸಿದ್ಧಾಂತವನ್ನು ವಿಮರ್ಶೆಮಾಡಿ ಕೊಳ್ಳುವದರಿಂದ ಗೊತ್ತುಮಾಡಿಕೊಳ್ಳಬಹುದೆಂದು ಗೌತಮಬುದ್ಧನ ಅಭಿಪ್ರಾಯ ವಾಗಿತ್ತು. ತೃಷ್ಣೆ ಅಥವಾ ಆತ್ಯಾಶೆ ಎಂಬುದೇ ಜನ್ಮಕ್ಕೆ ಮುಖ್ಯಕಾರಣವೆಂಬುದನ್ನು ಬುದ್ಧನು ಬುದ್ಧಗಯೆಯಲ್ಲಿ ಕಂಡುಹಿಡಿದು ಕೊಂಡನೆಂದು ಹೇಳುತ್ತಾರೆ. ಆಗ್ಗೆ, ಬುದ್ಧನು ತಾನು ಕಂಡುಹಿಡಿದ ಸಂಸಾರದ ಮೂಲವನ್ನು ಅತಿಹರ್ಷದಿಂದ ಹೀಗೆ ಪದ್ಯಮಯನಾಗಿ ಹಾಡಿನಂತೆ:

**ಅನೇಕಜಾತಿಸಂಸಾರಂ ಸಂಧಾವಿಸ್ಸಂ ಅನಿಬ್ಬಿಸಮ್ ।**
**ಗಹಕಾರಕಂ ಗವೇಸಂತೋ ದುಃಕ್ಖಾಜಾತಿ ಪುನಃಪುನಮ್ ॥ 153॥**
**ಗಹಕಾರಕ ದಿಟ್ಠೋಸಿ ಪುನಗೇಹಂ ನ ಕಾಹಸಿ ।**
**ಸಬ್ಬಾತೇ ಪಾಸುಕಾ ಭಗ್ಗಾ ಗಹಕೂಟಂ ವಿಸಙ್ಖಾತಮ್ ॥**
**ವಿಸಙ್ಖಾರಗತಂ ಚಿತ್ತಮ್ ತಣ್ಹಾನು ಖಯಮಜ್ಝಗಾ ॥ 154॥**

'ಧಮ್ಮಪದ'ದಲ್ಲಿರುವ ವಿಜಯಗಾಥೆಯ ಈ ಎರಡು ಪದ್ಯಗಳ ಅರ್ಥವೇನೆಂದರೆ, 'ಈ ಶರೀರರೂಪವಾದ ಮನೆಯನ್ನು ನಿರ್ಮಿಸುವವನು ಯಾರೆಂದು ಹುಡುಕಿಕೊಂಡು ದುಃಖಮಯವಾದ ಜನ್ಮಗಳ ಸಾಲಿನಲ್ಲಿ ಎಡೆಬಿಡದೆ ತೊಳಲುತ್ತಿದ್ದೆನು. ಎಲೈ ಗೃಹಕಾರಕನೆ! ನಿನ್ನನ್ನು ಗುರುತುಹಿಡಿದು ಕಂಡುಕೊಂಡಿರುತ್ತೇನೆ. ಇನ್ನು ಮೇಲೆ ನೀನು ಮನೆಯನ್ನು ನಿರ್ಮಿಸಲಾರೆ. ನಿನ್ನ ಪಕ್ಕೆಗಳೆಲ್ಲ ಮುರಿದುಹೋದವು. ಮನೆಯ ಬೇಂಟೆಯು ಸಡಿಲವಾಯಿತು. ಚಿತ್ತವು ಸಡಿಲ ಬಿಟ್ಟುಕೊಂಡು ತೃಷ್ಣೆಗಳ ಕ್ಷಯವನ್ನು ಪಡೆಯಿತು!'

ತೃಷ್ಣೆಯ ಕ್ಷಯವು ಪರಮಸುಖದಾಯಕವೆಂಬುದನ್ನು ಭಾರತಾದಿಇತಿಹಾಸ ಪುರಾಣಗಳಲ್ಲಿಯೂ ಪ್ರತಿಪಾದಿಸಿರುತ್ತದೆ. ಈ ಲೋಕದಲ್ಲಿ ಆಗುವ ವಿಷಯ ಭೋಗಗಳ ಸುಖವೂ ಮತ್ತು ಪರಲೋಕದಲ್ಲಿ ಆಗುವ ಪುಣ್ಯಸಂಚಯದ ಸುಖವೂ ಎಷ್ಟೇ ಹೆಚ್ಚಿನದಾಗಲಿ ತೃಷ್ಣಾಕ್ಷಯಸುಖದ ವೀಸಪಾಲಿಗೂ ಸಮನಾಗಲಾರವು ಎಂದು ಅಲ್ಲಿ ಮತ್ತೆಮತ್ತೆ ಹೇಳಿರುತ್ತದೆ. ಆದರೆ ಈ ತೃಷ್ಣೆಗೆ ಹಿಂದೂಮುಂದೂ ಇರುವ ಕಾರ್ಯಕಾರಣಗಳ ಕೊಂಡಿಗಳನ್ನು ಕ್ರಮಪಡಿಸಿ 'ಇದು ಇರುವದರಿಂದ ಇದು ಆಗುತ್ತಿದೆ' ಎಂದು ನಿಷ್ಕೃಷ್ಟವಾಗಿ ತಿಳಿಸಿದ ಕೀರ್ತಿಯು ಗೌತಮಬುದ್ಧನಿಗೆ ಸೇರಿದ್ದು ಎನ್ನಬಹುದು. ಅವಿದ್ಯೆ, ಸಂಸ್ಕಾರ, ವಿಜ್ಞಾನ, ನಾಮರೂಪ, ಷಡಾಯತನ, ಸ್ಪರ್ಶ, ವೇದನ, ತೃಷ್ಣಾಉಪಾದಾನ, ಭವ, ಜಾತಿ, ಜರಾಮರಣ – ಈ ಹನ್ನೆರಡೂ ದ್ವಾದಶನಿದಾನಗಳೆಂದು ಪ್ರಸಿದ್ಧವಾಗಿವೆ. ಇವುಗಳು ಒಂದರಿಂದೊಂದು ಕಾರ್ಯಕಾರಣಭಾವದಿಂದ ಉಂಟಾಗುತ್ತಿರುವದರಿಂದ ಈ ಉತ್ಪತ್ತಿ ಕ್ರಮಕ್ಕೆ ಪ್ರತೀತ್ಯಸಮುತ್ಪಾದವೆಂದು ಹೆಸರು.

ಈ ಹನ್ನೆರಡರಲ್ಲಿ **ಅವಿದ್ಯೆ** ಎಂದರೆ ದುಃಖವಿಷಯದಲ್ಲಿಯೂ, ದುಃಖ ಸಮುದಯ ವಿಷಯದಲ್ಲಿಯೂ, ದುಃಖನಿರೋಧವಿಷಯದಲ್ಲಿಯೂ, ದುಃಖನಿರೋಧಗಾಮಿನೀಪ್ರತಿಪತ್ತಿನ ವಿಷಯದಲ್ಲಿಯೂ ಇರುವ ಅಜ್ಞಾನವು. ಇದರಿಂದಲೇ ಆಸ್ರವಗಳು ಅಂದರೆ ಚಿತ್ತಮಲಗಳು ಉಂಟಾಗುತ್ತವೆ. ಅವಿದ್ಯೆಯಿಂದ ಮನೋವಾಕ್ಕಾಯಗಳ ಸಂಸ್ಕಾರವು ಅಂದರೆ ವ್ಯಾಪಾರಗಳು ಉಂಟಾಗುವವು. ಅವಿದ್ಯೆಯಿಲ್ಲದಿದ್ದರೆ ಸಂಸ್ಕಾರಗಳ ನಿರೋಧವಾಗುವದು. **ಸಂಸ್ಕಾರವು** ಉಂಟಾದಾಗಲೇ **ವಿಜ್ಞಾನವು** ಉಂಟಾಗುವದು, ಎಂದರೆ ಚಕ್ಷುರಾದಿಗಳಲ್ಲಿ ಅರಿವು ಉಂಟಾಗುತ್ತಿರುವದು; ಸಂಸ್ಕಾರವು ಇಲ್ಲವಾದರೆ ವಿಜ್ಞಾನದ ನಿರೋಧವು ಆಗುವದು – ವಿಜ್ಞಾನವುಂಟಾದಾಗ ನಾಮರೂಪವುಂಟಾಗುವದು. ವೇದನ, ಸಂಜ್ಞಾ, ಸ್ಪರ್ಶ– ಇವುಗಳು ನಾಮವೆನಿಸುವವು. ನಾಲ್ಕು ಮಹಾಭೂತಗಳೂ ಮಹಾಭೂತಗಳಿಂದಾದದ್ದೂ – ಇವೆರಡೂ **ರೂಪ**ವೆನಿಸುವದು. ವಿಜ್ಞಾನದ ಸಮುದಯದಿಂದ ನಾಮರೂಪದ ಸಮುದಯವೂ ವಿಜ್ಞಾನನಿರೋಧದಿಂದ ನಾಮರೂಪದ ನಿರೋಧವೂ ಆಗುವದು; ಚಕ್ಷುರಾಯತನ, ಶ್ರೋತ್ರಾಯತನ, ಘ್ರಾಣಾಯತನ, ಜಿಹ್ವಾಯತನ ಕಾಯಾಯತನ, ಮನಆಯತನ – ಇವು ಆರಕ್ಕೆ **ಷಡಾಯತನ**ವೆಂದು ಹೆಸರು. ನಾಮರೂಪದ ಸಮುದಯದಿಂದ

ಷಡಾಯತನದ ಸಮುದಯವು ಆಗುವದು; ನಾಮರೂಪದ ನಿರೋಧದಿಂದ ಷಡಾಯತನನಿರೋಧವೂ ಆಗುವದು. ಚಕ್ಷುರಾದಿಇಂದ್ರಿಯಗಳಿಂದ ಆಗುವ ವಿಷಯಸಂಯೋಗವೇ **ಸ್ಪರ್ಶವು.** ಷಡಾಯತನಸಮುದಯದಿಂದ ಸ್ಪರ್ಶಸಮುದಯವೂ ಷಡಾಯತನ ನಿರೋಧದಿಂದ ಸ್ಪರ್ಶನಿರೋಧವೂ ಆಗುವದು; ಇಂದ್ರಿಯಸ್ಪರ್ಶದಿಂದ ಆಗುವ ಶುಭಾಶುಭ ಅನುಭವವೇ **ವೇದನೆ.** ಸ್ಪರ್ಶಸಮುದಯದಿಂದ ವೇದನೆಯು ಸಮುದಯವೂ ಆಗುವದು; ಸ್ಪರ್ಶನಿರೋಧದಿಂದ ವೇದನೆಯ ನಿರೋಧವೂ ಆಗುವದು. ರೂಪಶಬ್ದ ಗಂಧಾದಿಗಳ ಬಯಕೆಯೇ **ತೃಷ್ಣೆ.** ವೇದನೆಯ ಸಮದಯದಿಂದ ತೃಷ್ಣೆಯ ಸಮುದಯವು ಆಗುವದು; ವೇದನೆಯ ನಿರೋಧದಿಂದ ತೃಷ್ಣೆಯ ನಿರೋಧವೂ ಆಗುವದು. ಯಾವದಾದರೊಂದು ವಸ್ತುವನ್ನು ಆಗ್ರಹದಿಂದ ಗ್ರಹಿಸುವದೇ **ಉಪಾದಾನ**ವೆನಿಸುವದು. ತೃಷ್ಣೆಯ ಸಮುದಯದಿಂದ ಉಪಾದಾನದ ಸಮುದಯವೂ ತೃಷ್ಣೆಯ ನಿರೋಧದಿಂದ ಉಪಾದಾನದ ನಿರೋಧವೂ ಆಗುವದು. ಹೀಗೆಯೇ ಉಪಾದಾನದಿಂದ **ಭವ**(ಇರ)ವೂ ಆಗುವದು. ಉಪಾದಾನದ ಸಮುದಯದಿಂದ ಭವದ ಸಮುದಯವೂ ಉಪಾದಾನದ ನಿರೋಧದಿಂದ ಅದರ ನಿರೋಧವೂ ಆಗುವದು. ಭವದ ಸಮುದಯದಿಂದ **ಜಾತಿಯ** ಸಮುದಯವೂ ಅದರ ನಿರೋಧದಿಂದ ಜಾತಿಯ ನಿರೋಧವೂ ಆಗುವದು. ಜಾತಿಯಸಮುದಯದಿಂದ **ಜರಾಮರಣ**ದ ಸಮುದಯವೂ ಜಾತಿಯ ನಿರೋಧದಿಂದ ಜರಾಮರಣದ ನಿರೋಧವೂ ಆಗುವದು.

ಈ ರೀತಿಯಲ್ಲಿ ಹಿಂದಿನ ಅವಿದ್ಯಾಸಂಸ್ಕಾರಗಳಿಂದ ಈ ಜನ್ಮದ ವಿಜ್ಞಾನ, ನಾಮರೂಪ, ಷಡಾಯತನ, ಸ್ಪರ್ಶ, ವೇದನ - ಇವುಗಳೂ ಈಗಿನ ತೃಷ್ಣೆ, ಉಪಾದಾನ, ಭವ - ಇವುಗಳಿಂದ ಮುಂದಿನ ಜಾತಿಜರಾಮರಣಗಳೂ ಆಗುತ್ತಿರುವದರಿಂದ ಕಾರಣಗಳನ್ನು ತೆಗೆದುಹಾಕಿದರೆ ಅವುಗಳ ಕಾರ್ಯಗಳು ತಾವೇ ನಿಂತು ಹೋಗುವವು ಎಂಬುದು ಬುದ್ಧನು ಉಪದೇಶಿಸಿದ ದುಃಖನಿರೋಧೋಪಾಯದ ಮರ್ಮವು ಎಂದು ಸ್ಪಷ್ಟವಾಗುತ್ತದೆ.

ಅವಿದ್ಯೆಯನ್ನು ಪರಿಹರಿಸಿಕೊಂಡರೆ ಎಲ್ಲಾ ದುಃಖಗಳನ್ನೂ ಪರಿಹರಿಸಿಕೊಂಡಂತೆ. ಆದ್ದರಿಂದ ಅವಿದ್ಯೆಯ ಪರಿಹಾರಕ್ಕೆ ಅಥವಾ ನಿರ್ವಾಣಕ್ಕೆ **ಅಷ್ಟಾಂಗಮಾರ್ಗ**ವನ್ನು ಬುದ್ಧನು ಉಪದೇಶಿಸಿರುತ್ತಾನೆ. ಅವು: -

1. **ಸಮ್ಯಗ್ದೃಷ್ಟಿ** - ಎಂದರೆ ದುಃಖ ದುಃಖಸಮುದಯ, ದುಃಖನಿರೋಧ, ದುಃಖನಿರೋಧಗಾಮಿನೀ ಪ್ರತಿಪತ್ತು- ಇವುಗಳ ವಿಷಯವಾದ ಸರಿಯಾದ ತಿಳಿವಳಿಕೆ ದ್ವೇಷವನ್ನು ಬಿಡುವದು, ಮತ್ತೊಬ್ಬರಿಗೆ ಕೇಡುಮಾಡುದೇ ಇರುವುದು.

2. **ಸಮ್ಯಕ್ಸಂಕಲ್ಪ** - ಎಂದರೆ ವಿಷಯಾಸಕ್ತಿಯನ್ನು ಬಿಡುವದು.

3. **ಸಮ್ಯಗ್ವಾಕ್** - ಎಂದರೆ ಸುಳ್ಳು ಹೇಳದೆ ಇರುವದು, ನಿಷ್ಠುರೋಕ್ತಿಯನ್ನಾಡದಿರುವದು, ವ್ಯರ್ಥಾಲಾಪವನ್ನು ಬಿಡುವದು.

4. **ಸಮ್ಯಕ್ಕರ್ಮಾಂತ** - ಎಂದರೆ ಪ್ರಾಣಿವಧೆಯನ್ನು ಮಾಡದಿರುವದು, ತನಗೆ ಕೊಡದ್ದನ್ನು ತೆಗೆದುಕೊಳ್ಳದಿರುವದು, ಅಧರ್ಮದಿಂದ ಇಂದ್ರಿಯತೃಪ್ತಿಯನ್ನು ಮಾಡಿಕೊಳ್ಳದಿರುವದು.

5. **ಸಮ್ಯಗಾಜೀವ** - ಎಂದರೆ ಕೆಟ್ಟ ಜೀವನಕ್ರಮವನ್ನು ಬಿಟ್ಟು ಉತ್ತಮವೃತ್ತಿಯನ್ನು ಕೈಕೊಳ್ಳುವದು.

6. **ಸಮ್ಯಗ್ವ್ಯಾಯಾಮ** - ಎಂದರೆ ಕೆಟ್ಟ ಪಾಪವಾಸನೆಗಳನ್ನು ಏಳಗೊಡದಿರುವದು, ಎದ್ದಿರುವ ಅಂಥ ವಾಸನೆಗಳನ್ನು ಪರಿಹರಿಸಿಕೊಳ್ಳುವದು, ಶುಭವಾಸನೆಗಳನ್ನು ಎಬ್ಬಿಸಿಕೊಳ್ಳುವದು ಎದ್ದಿರುವ ಶುಭವಾಸನೆಗಳನ್ನು ಮುಂದುವರಿಸಿ, ಆಳವಡಿಸಿಕೊಂಡು, ಅಭ್ಯಾಸಮಾಡಿ, ಹಿಗ್ಗಿಸಿಕೊಂಡು, ಧ್ಯಾನಿಸಿ, ಪರಿಪೂರ್ತಿಗೊಳಿಸಿಕೊಳ್ಳುವದು.

7 - **ಸಮ್ಯಕ್ಸ್ಮೃತಿ** - ಎಂದರೆ ಆದರಪೂರ್ವಕವಾಗಿ, ಪ್ರಜ್ಞಾಪೂರ್ವಕವಾಗಿ, ಮನಃಪೂರ್ವಕವಾಗಿ ಲೋಭವನ್ನೂ ವಿಷಾದವನ್ನೂ ಗೆದ್ದುಕೊಂಡು ಶರೀರವನ್ನು ಶರೀರವೆಂದೂ ವೇದನೆಗಳನ್ನು ವೇದನೆಗಳೆಂದೂ ಚಿತ್ತವನ್ನು ಚಿತ್ತವೆಂದೂ ಚೈತ್ತಗಳನ್ನು ಚೈತ್ತಗಳೆಂದೂ ನೆನಸಿಕೊಳ್ಳುತ್ತಿರುವದು.

8. **ಸಮ್ಯಕ್ಸಮಾಧಿ** - ಎಂದರೆ ನಾಲ್ಕು ಭೂಮಿಕೆಯ ಧ್ಯಾನಗಳನ್ನೂ ಕ್ರಮದಿಂದ ಅಳವಡಿಸಿಕೊಳ್ಳುವದು, - ಇದೇ ಅಷ್ಟಾಂಗಮಾರ್ಗವು.

★★★★★

# ಹನ್ನೆರಡು ನಿದಾನಗಳು

**- ಶ್ರೀಸಚ್ಚಿದಾನಂದೇದ್ರಸರಸ್ವತೀ ಸ್ವಾಮಿಗಳವರು**

ಯಾವದೊಂದು ಕಾರ್ಯವೇ ಆಗಲಿ ಕಾರಣವಿಲ್ಲದೆ ಆಗದು. ಕಾರಣವಿದ್ದರೆ ತಾನೂ ಇರುವದು, ಅದು ನಿಂತುಹೋದರೆ ತಾನೂ ನಿಂತುಹೋಗುವದು. ಆದ್ದರಿಂದ ಈ ದುಃಖರೂಪವಾಗಿರುವ ಸಂಸಾರದ ತೊಳಲು ಏತರಿಂದ ಆಗಿರುವದೆಂಬುದನ್ನು ತಿಳಿದುಕೊಂಡು ಆ ಕಾರಣವನ್ನು ತೆಗೆದು ಹಾಕಿದರೆ ಅದರ ಕಾರ್ಯವಾದ ಸಂಸಾರವೂ ಇಲ್ಲವಾಗುವದು. ಆದಕಾರಣ ಸಂಸಾರದ ತೊಳಲೆಂಬ ಹೇತುಫಲಗಳ ಸಾಲನ್ನು ಪರೀಕ್ಷಿಸುವದು ಅಗತ್ಯವಾಗುತ್ತದೆ. ಇದನ್ನು ತಿಳಿಸುವ ನಿಯಮಕ್ಕೆ ಬೌದ್ಧಸಿದ್ಧಾಂತದಲ್ಲಿ **ಅಧ್ಯಾತ್ಮಿಕಪ್ರತೀತ್ಯಸಮುತ್ಪಾದ**ವೆಂದು ಹೆಸರು.

ಈ ಪ್ರತೀತ್ಯಸಮುತ್ಪಾದವೆಂಬ ಸರಪಳಿಯಲ್ಲಿ ಹನ್ನೆರಡು ಕೊಂಡಿಗಳಿರುವವು. ಪ್ರಪಂಚದಲ್ಲಿರುವ ದುಃಖವು ಮುಖ್ಯವಾಗಿ ಮುಪ್ಪು, ಬೇನೆ, ಸಾವು- ಎಂಬ ಮೂರು ಬಗೆಯಾಗಿರುವದು. ಐದು ಸ್ಕಂಧಗಳು ಸೇರಿಕೊಂಡು ಒಬ್ಬ ವ್ಯಕ್ತಿಯಾಗುವದೇ ಹುಟ್ಟು; ಇವುಗಳಲ್ಲಿ ಆಗುವ ಏರುಪೇರೇ ಬೇನೆ; ಇವುಗಳು ಮಾಗುವದೇ ಮುಪ್ಪು; ಇವುಗಳು ಒಂದನ್ನೊಂದು ಆಗಲಿ ನಾಶವಾಗಿಬಿಡುವದೇ ಸಾವು. ಈ ಮೂರು ಬಗೆಯ ದುಃಖಗಳಿಂದ ಪ್ರತಿಯೊಬ್ಬನೂ ದುಃಖಪಡುತ್ತಿರುವನು. ನಾವು ಈಗ ವಿಚಾರಕ್ಕೆ ತೆಗೆದುಕೊಂಡಿರುವ ಸರಪಳಿಗೆ ಈ **ಜರಾಮರಣ** ದುಃಖವು ಕೊನೆಯ ಕೊಂಡಿಯು. ಇದರ ಹಿಂದಿನ ಕೊಂಡಿ ಯಾವದು? ಈ ಬೇನೆಮುಪ್ಪುಸಾವುಗಳೆಂಬ ದುಃಖಕ್ಕೆ ಕಾರಣವೇನು?- ಎಂದರೆ ಹುಟ್ಟುವದೇ **(ಜಾತಿ)**; ಏಕೆಂದರೆ ಹುಟ್ಟದೆ ಇದ್ದರೆ ಯಾವ ದುಃಖವೂ ನಮಗೆ ಆಗುತ್ತಿರಲಿಲ್ಲ. ಆದ್ದರಿಂದ ಜರಾಮರಣವೆಂಬ ದುಃಖದ ಕೊಂಡಿಗೆ ಹಿಂದಿನ ಕೊಂಡಿಯು ಹುಟ್ಟುವಿಕೆ (ಜಾತಿ)ಯೇ.

ಈ ಹುಟ್ಟುವಿಕೆಗೆ ಹಿಂದಿನ ಕೊಂಡಿ ಯಾವದು? ಎಂಬುದನ್ನು ವಿಚಾರಿಸಿದರೆ ಕರ್ಮವೇ ಆ ಕೊಂಡಿಯೆಂದು ಗೊತ್ತಾಗುವದು. ಧರ್ಮಾಧರ್ಮಗಳ ಫಲವಾಗಿ ನಾನೆಂಬ ವಾಸನೆಯೊಂದು ಉಳಿದುಕೊಂಡಿರುವದು. ಅಲೆಯಿಂದ ಅಲೆ ಹುಟ್ಟುವ ಹಾಗೂ ದೀಪದಿಂದ ಮತ್ತೊಂದು ದೀಪವು ಹೊತ್ತಿಕೊಳ್ಳುವ ಹಾಗೂ ಹಿಂದಿನ

ಕರ್ಮಗಳ ವಾಸನೆಯು ಫಲವಾಗಿ ನಾಮರೂಪಗಳು ಮುಂದುವರಿಯುವದೇ **(ಭವವೇ)** ಈ ಹುಟ್ಟುವಿಕೆಗೆ ಕಾರಣವು. ಬೌದ್ಧಸಿದ್ಧಾಂತದಲ್ಲಿ ಬೇರೆಬೇರೆ ಜನ್ಮಗಳನ್ನು ತಾಳುವ ಒಬ್ಬ ಆತ್ಮನು ಇದ್ದಾನೆಂದು ಒಪ್ಪಿಲ್ಲವಾದರೂ ಕರ್ಮದಿಂದ ಜನ್ಮಾಂತರವಾಗುವದುಂಟೆಂದು ಒಪ್ಪಿರುತ್ತದೆ. ಇದು ಹೇಗೆಂಬುದನ್ನು ಮತ್ತೊಮ್ಮೆ ವಿವರಿಸುವೆನು. ಅದಿರಲಿ, ಸದ್ಯಕ್ಕೆ ಭವ-ಎಂದರೆ ಧರ್ಮಧರ್ಮಗಳ ಫಲವೇ ಹುಟ್ಟುವಿಕೆಗೆ ಹೇತುವೆಂಬುದನ್ನು ಇಲ್ಲಿ ಅರಿತುಕೊಳ್ಳಬೇಕು. ದುಃಖದಿಂದ ಹಿಂದಕ್ಕೆಣಿಸಿದರೆ ಇದು ಮೂರನೆಯ ಕೊಂಡಿಯಾಗುವದು.

ಈ ಭವಕ್ಕೇನು ಕಾರಣ?-ಎಂದರೆ **ಉಪಾದಾನವು**- ಉಪಾದಾನವೆಂದರೆ ಹಿಡಿದುಕೊಳ್ಳುವದು. ಮನಸ್ಸು ಸುಖದ ಹವಣಿಕೆಯಿಂದ ವಿಷಯಗಳನ್ನು ಹಿಡಿದುಕೊಳ್ಳುತ್ತಿರುವದೇ ಧರ್ಮಾಧರ್ಮಗಳ ಫಲವಾದ ಭವಕ್ಕೆ ಹೇತುವು. ಈ ಉಪಾದಾನವಿಲ್ಲದಿದ್ದರೆ ಧರ್ಮಾಧರ್ಮಗಳಿಲ್ಲ; ಧರ್ಮಾಧರ್ಮಗಳ ಫಲವಾದ ಭವವಿದ್ದ ಹೊರತು ಜನ್ಮವೆಂಬುದಿಲ್ಲ. ಆದ್ದರಿಂದ ವಿಷಯಗಳ ಮೇಲೆ ಎರಗಿ ಬೀಳುತ್ತಿರುವದೆಂಬ ಉಪಾದಾನವೇ ದುಃಖಕ್ಕೆ ಕಾರಣವೆನ್ನಬೇಕಾಯಿತು.

ಆದರೆ ಈ ಉಪಾದಾನಕ್ಕೇನು ಕಾರಣ? ಈ ಕೊಂಡಿಯ ಹಿಂದಿನ ಕೊಂಡಿಯಾವದು?- ಎಂದರೆ **ತೃಷ್ಣೆಯೇ**. ತೃಷ್ಣೆಯೆಂದರೆ ಇಂಥಿಂಥ ವಿಷಯಗಳು ತನಗೆ ಆಗಬೇಕೆಂದು ಬಾಯಿನೀರುಕರೆಯುವದು. ಇದೇ ಉಪಾದಾನಕ್ಕೆ ಕಾರಣವು; ಏಕೆಂದರೆ ವಿಷಯಗಳ ನೀರಡಿಕೆಯಿಲ್ಲದವರು ಯಾರು ಅವುಗಳ ಕಡೆಗೆ ಕಣ್ಣು ಹಾಕುವದಿಲ್ಲ, ಅವುಗಳನ್ನು ಅವರು ಹಿಡಿಯುವದಕ್ಕೆ ಹೋಗರು, ಆಗ ಮಾಡಬೇಕಾದ ಕರ್ಮದಿಂದಾದ ಫಲಕ್ಕೂ ಹೊಣೆಯಾಗಲಾರರು; ಆದ್ದರಿಂದ ತೃಷ್ಣೆಯಿಲ್ಲದಿದ್ದರೆ ನಮಗೆ ಜನ್ಮವೇ ಇರುತ್ತಿರಲಿಲ್ಲ, ದುಃಖವೂ ಇರುತ್ತಿರಲಿಲ್ಲ- ಎಂದಾಯಿತು.

ಹಾಗಾದರೆ ಈ ತೃಷ್ಣೆಯು ಹೇಗುಂಟಾಗುವದು? ಎಂದರೆ **ವೇದನೆಯಿಂದ**. ವೇದನೆಯೆಂದರೆ ಬಗೆಬಗೆಯ ಸುಖದುಃಖಗಳ ಅನುಭವವು. ಇಂದ್ರಿಯಗಳು ವಿಷಯಗಳನ್ನು ಮುಟ್ಟುವದರಿಂದ ನಮಗೆ ಆಯಾ ವೇದನೆಗಳುಂಟಾಗುತ್ತವೆಯೆಂಬುದು ಪ್ರಸಿದ್ಧವು; ಆದ್ದರಿಂದ ತೃಷ್ಣೆಯಾಗುವದಕ್ಕೆ ಪೂರ್ವದಲ್ಲಿ ವೇದನೆಯಾಗಬೇಕು. ಈ ವೇದನೆಗೆ **ಸ್ಪರ್ಶವು** ಅಗತ್ಯ; ಸ್ಪರ್ಶವೆಂದರೆ ಇಂದ್ರಿಯಗಳು ವಿಷಯಗಳನ್ನು ಮುಟ್ಟುವದೇ. ಆದ್ದರಿಂದ

ಸ್ಪರ್ಶಕ್ಕೆ ಹೇತು **ಷಡಾಯತನವು**, ಎಂದರೆ ಆರು ಬಗೆಯ ಇಂದ್ರಿಯಗಳು ಮತ್ತು ವಿಷಯಗಳು. ಇಂದ್ರಿಯಗಳೂ ಅವುಗಳಿಂದಾಗುವ ಬಗೆಬಗೆಯ ಅರಿವುಗಳೂ ಅವುಗಳನ್ನು ಹೊಂದುವ ಮನಸ್ಸೂ ಇಲ್ಲದಿದ್ದರೆ ವೇದನೆಯೇ ಇರುತ್ತಿರಲಿಲ್ಲ; ವೇದನೆಯಿಲ್ಲದಿದ್ದರೆ ತೃಷ್ಣೆಯೂ ಇರುತ್ತಿರಲಿಲ್ಲ. ಆದ್ದರಿಂದ ಇಲ್ಲಿಯವರೆಗೆ ನೋಡಿದ್ದರಲ್ಲಿ ಈ ಷಡಾಯತನವೇ ದುಃಖಕ್ಕೆ ಕಾರಣವೆನ್ನಬೇಕಾಯಿತು.

ಇನ್ನು ಈ ಷಡಾಯತನಕ್ಕೆ ಹೇತುವೇನು? – ಎಂಬುದನ್ನು ವಿಚಾರಿಸಬೇಕಷ್ಟೆ. **ನಾಮರೂಪವೇ** ಇದಕ್ಕೆ ಕಾರಣವು. ನಾಮರೂಪವೆಂದರೆ ನಾಮ ಮತ್ತೊಂದೆಂಬ ಅರಿವನ್ನುಂಟುಮಾಡುವ ಶರೀರ ಮತ್ತು ಮನಸ್ಸು. ಪ್ರತಿಯೊಂದು ಪ್ರಾಣಿಯೂ ಒಂದೊಂದು ವ್ಯಕ್ತಿಯಾಗಿರುವದಕ್ಕೆ ಈ ನಾಮರೂಪವೇ ಕಾರಣವು. ನಾಮರೂಪವನ್ನೇ ಆರು ಬಗೆಯ ಇಂದ್ರಿಯಗಳೂ ಆಶ್ರಯಿಸಿರುವವು. ಆದ್ದರಿಂದ ನಾಮರೂಪವಿಲ್ಲದಿದ್ದರೆ ಷಡಾಯತನವೂ ಇರಲಾರದು. ಅದಿಲ್ಲದಿದ್ದರೆ ವೇದನೆಯೆಲ್ಲಿಯದು? ಅದೂ ಇಲ್ಲದಿದ್ದರೆ ತೃಷ್ಣೆಯಾಗಲಿ ಉಪಾದಾನವಾಗಲಿ ಎಲ್ಲಿ ಬಂದಾವು? ಆದ್ದರಿಂದ ನಾಮರೂಪವೇ ದುಃಖಕ್ಕೆ ಕಾರಣವೆಂದು ಏರ್ಪಟ್ಟಿತು.

ಇನ್ನು ನಾಮರೂಪಕ್ಕೆ ಹೇತುವೇನು? ಎಂದರೆ ವಿಜ್ಞಾನವು, ಎಂದರೆ ಅರಿವು. ಅರಿವೆಂಬುದೇ ಇಲ್ಲದಿದ್ದರೆ ನಾಮವೂ ಇಲ್ಲ, ರೂಪವೂ ಇಲ್ಲ; ಇನ್ನು ನಾಮರೂಪದಿಂದುಂಟಾಗುವ ದುಃಖವೆಲ್ಲಿಯದು? ಹಾಗಾದರೆ ಈ ವಿಜ್ಞಾನವೋ? ಇದು ಏತರಿಂದ ಉಂಟಾಗುವದು? – ಎಂದರೆ ಇದು ಸಂಸ್ಕಾರಗಳಿಂದ ಉಂಟಾಗುವದು. ಒಂದು ಜನ್ಮದಲ್ಲಿ ಪ್ರಾಣಿಗೆ ಯಾವ ಬಗೆಯ ಸಂಸ್ಕಾರಗಳುಂಟಾಗಿರುವವೋ ಅದಕ್ಕೆ ಅನುಗುಣವಾಗಿ ಆ ಬಗೆಯ ಸಂಸ್ಕಾರಗಳೇ ಮತ್ತೊಂದು ಜನ್ಮದಲ್ಲಿಯೂ ಉಂಟಾಗುವವು. ಈ ಸಂಸ್ಕಾರಗಳೇ ವಿಜ್ಞಾನಕ್ಕೆ ಕಾರಣವು. ಮನಸ್ಸಿನಲ್ಲಿ ಎಂಥ ಸಂಸ್ಕಾರಗಳಿರುವವೋ ಅಂಥ ಅರಿವು ಆಗುತ್ತದೆ. ನಾವು ಎಂಥೆಂಥ ಅನುಭವಗಳನ್ನು ಹೊಂದಿರುವೆವೋ ಅದಕ್ಕೆ ತಕ್ಕಂತೆ ನಮ್ಮಲ್ಲಿ ವಾಸನೆಗಳು ಉಳಿದುಕೊಳ್ಳುವವು. ಆದ್ದರಿಂದ ಈ ವಾಸನೆಗಳೇ, ಈ ಸಂಸ್ಕಾರಗಳೇ, ವಿಜ್ಞಾನವೇ ಮುಂತಾದವುಗಳಿಗೂ ಕೊನೆಯಲ್ಲಾಗುವ ದುಃಖಕ್ಕೂ ಕಾರಣವಾಗಿ ರುವವೆಂದಾಯಿತು.

ಈಗ ಇವೆಲ್ಲಕ್ಕೂ ಮೂಲವಾದ ಮತ್ತೊಂದು ಕೊಂಡಿಯನ್ನು ಕಂಡುಕೊಳ್ಳುವದು ಅವಶ್ಯವಾಗಿರುತ್ತದೆ. ಸಂಸ್ಕಾರಗಳು ಉಂಟಾಗುವದು

ಹೇಗೆ? ಇವು ಅವಿದ್ಯೆಯಿಂದ ಆಗುತ್ತವೆ. ಪ್ರಪಂಚದಲ್ಲಿ ದುಃಖವಿರುವದೆಂದೂ ತೃಷ್ಣೆಯೇ ಇದಕ್ಕೆ ಕಾರಣವೆಂದೂ ಇದನ್ನು ತೊಲಗಿಸಿಕೊಂಡರೆ ದುಃಖವು ಪರಿಹಾರವಾಗುವದೆಂದೂ ಅರಿತುಕೊಳ್ಳದಿರುವದೇ ಅವಿದ್ಯೆಯು. ಇದು ಸ್ವಭಾವವಾಗಿ ಜನರಿಗೆಲ್ಲರಿಗೂ ಇರುವದರಿಂದ ಸಂಸ್ಕಾರವೇ ಮುಂತಾದ ಕೊಂಡಿಗಳ ಸರಪಳಿಯು ಸುತ್ತಿಕೊಳ್ಳುವದಕ್ಕೆ ಕಾರಣವಾಗಿರುತ್ತದೆ.

ಹುಟ್ಟಿದ ಪ್ರಾಣಿಮಾತ್ರಕ್ಕೆ ಅವಿದ್ಯೆಯು ಸ್ವಭಾವದಿಂದ ಹತ್ತಿಕೊಂಡಿರುವದು. ಇದು ಇರುವವರೆಗೂ ಹಿಂದಿನ ಜನ್ಮದ ಸಂಸ್ಕಾರಗಳು, ಇದರಿಂದ **ವಿಜ್ಞಾನ**(ಅರಿವು), ಇದರಿಂದ **ನಾಮರೂಪ** (ಶರೀರಮನಸ್ಸುಗಳು), ಇದರಿಂದ **ಷಡಾಯತನ** (ಇಂದ್ರಿಯಮನಸ್ಸುಗಳು, ವಿಷಯಗಳು) ಇದರಿಂದ **ಸ್ಪರ್ಶ** (ವಿಷಯಗಳನ್ನು ಮುಟ್ಟುವದು), ಇದರಿಂದ **ವೇದನೆ** (ಅನುಭವ), ಇದರಿಂದ **ತೃಷ್ಣೆ** (ಬಾಯಾರಿಕೆ, ಹಂಬಲು), ಇದರಿಂದ **ಉಪಾದಾನ** (ವಿಷಯಗಳನ್ನು ಬೇಕೆಂದು ಹಿಡಿಯುವದು), ಇದರಿಂದ **ಭವ** (ಧರ್ಮಾಧರ್ಮಗಳ ಫಲ)ವುಂಟಾಗಿ ಮತ್ತೆ ಹೊಸ ಜನ್ಮಕ್ಕೆ ಕಾರಣವಾಗುವದು. ಹೀಗೆ ಮತ್ತೆ ಮತ್ತೆ ಜನ್ಮವುಂಟಾಗಿ ಜರಾಮರಣ (ಮುಪ್ಪುಸಾವು)ಗಳೇ ಮುಂತಾದ ದುಃಖವಾಗುತ್ತಿರುವದು.

ಹೀಗೆ ಅವಿದ್ಯೆಯೇ ಮುಂತಾದ ಹನ್ನೆರಡು ಕಾರಣಗಳ ಮಾಲೆಯು ಒಂದರಿಂದೊಂದುಂಟಾಗುತ್ತಲೇ ಇರುವದರಿಂದಲೇ ದುಃಖವುಂಟಾಗುವದೆಂಬುದನ್ನು ತೋರಿಸುವದಕ್ಕೆ ಈ ಹನ್ನೆರಡನ್ನೂ **ನಿದಾನ**ಗಳೆಂದೂ ಇವುಗಳು ಸುತ್ತಿ ಸುತ್ತಿ ಬರುವ ಸಂಸಾರವನ್ನು **ಭವಚಕ್ರ**ವೆಂದೂ ಬೌದ್ಧರು ಕರೆಯುವರು.

★★★★★

# ವಿಜ್ಞಾನವಾದ

**- ಶ್ರೀಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳವರು**

ಅರಿವಿನ ವಿಷಯದಲ್ಲಿ ಪುರಾತನಚಾರ್ವಾಕರ, ಈಗಿನ ಭೌತಿಕಶಾಸ್ತ್ರಜ್ಞರ, ಮತ್ತು ಭರತಖಂಡದ ಪ್ರಾಚೀನತಾರ್ಕಿಕರ ಮತಗಳನ್ನು ಸ್ವಲ್ಪಮಟ್ಟಿಗೆ ವಿವರಿಸಿದ್ದಾಗಿದೆ. ಅರಿವೆಂದರೇನು. ಅದು ಎಲ್ಲಿ ಹೇಗೆ ಉತ್ಪತ್ತಿಯಾಗುವದು?- ಎಂಬುದನ್ನು ಕಾಣಲಾರದೆ ಇವರೆಲ್ಲರೂ ಸಂಕಟಪಡುತ್ತಿರುವರೆಂಬುದನ್ನೂ ತಿಳಿಯಿಸಿದ್ದಾಗಿದೆ. ಇದು ಅರಿವಿಗಿಂತಲೂ ಹೊರಗಣ ವಸ್ತುವಿನ ಇರವಿಗೆ ಹೆಚ್ಚು ಪ್ರಾಧಾನ್ಯವನ್ನು ಕೊಟ್ಟ ಗುಂಪಿನವರ ಮಾತಾಯಿತು. ಈಗ ಅರಿವಿಗೇ ಹೆಚ್ಚು ಪ್ರಾಮುಖ್ಯವನ್ನೊಪ್ಪುವ ಮತ್ತೊಂದು ಗುಂಪಿನವರ ಮತವನ್ನು ಬಿಚ್ಚಿ ತೋರಿಸುವದಕ್ಕೆ ಪ್ರಯತ್ನಿಸುವೆವು.

ಭರತಖಂಡದಲ್ಲಿ ಅರಿವಿನ ಪಕ್ಷವನ್ನು ಮೇಲಕ್ಕೆತ್ತಿ ಹಿಡಿದವರು ಮುಖ್ಯವಾಗಿ ಬೌದ್ಧರು. ಇದರಲ್ಲಿ ಎರಡು ತಂಡಗಳಿದ್ದವು; ಅರಿವನ್ನೂ ಅರಿವಿನ ವಿಷಯವನ್ನೂ ಒಪ್ಪಿದ್ದವರು ಒಂದು ತಂಡ, ಅರಿವಿಗಿಂತ ಬೇರೆಯಾಗಿ ಅದರ ವಿಷಯವೆಂಬುದು ಇಲ್ಲವೆಂದು ಹೇಳುತ್ತಿದ್ದ ವಾದಿಗಳು ಮತ್ತೊಂದು ತಂಡ. ಮೊದಲನೆಯ ತಂಡದವರಿಗೆ **ಸೌತ್ರಾಂತಿಕ**ರೆಂದು ಹೆಸರು, ಎರಡನೆಯವರಿಗೆ **ವಿಜ್ಞಾನವಾದಿ**ಗಳೆಂದು ಹೆಸರು. ಈ ಇಬ್ಬರೂ ನಾವು ಹಿಂದೆ ಹೇಳಿರುವ ತಾರ್ಕಿಕರಿಗೆ ಅರಿವಿನ ವಿಷಯದಲ್ಲಿ ಸಂಪೂರ್ಣವಿರೋಧಿಗಳಾಗಿದ್ದರು.

ತಾರ್ಕಿಕರ ಮತದಂತೆ ಹೊರಗೆ ಬಗೆಬಗೆಯ ಗುಣಗಳಿಂದ ಕೂಡಿದ ದ್ರವ್ಯವೊಂದು ಇರುತ್ತದೆ; ಅದಕ್ಕೂ ಇಂದ್ರಿಯಕ್ಕೂ ಸಂಯೋಗವಾದಮೇಲೆ ಅದರ ಅರಿವು ಉಂಟಾಗುತ್ತದೆ. ಆದರೆ ಸೌತ್ರಾಂತಿಕರ ಮತವು ಹಾಗಲ್ಲ. ವಸ್ತುವೆಲ್ಲವೂ ಕ್ಷಣಿಕವೇ ಎಂಬುದು ಬೌದ್ಧರ ಅಂಗೀಕಾರವಾದ್ದರಿಂದ ತಾರ್ಕಿಕರು ಹೊರಗಿನ ವಸ್ತುವಿಗೆ ಕೊಟ್ಟಿದ್ದ ಹೆಚ್ಚುಗಾರಿಕೆಯು ಇವರ ಮತದಲ್ಲಿ ಅದಕ್ಕೆ ಇಲ್ಲದೆ ಹೋಯಿತು. ಅವರು ಹೇಳುವದೇನೆಂದರೆ ಹೊರಗಿನ ವಸ್ತುವು ಕ್ಷಣಿಕವಾದ್ದರಿಂದಲೂ ಅದರ ಅರಿವಿನ ಮೂಲಕವೇ ಅದನ್ನು ನಾವು ಗೊತ್ತುಪಡಿಸಿಕೊಳ್ಳಬೇಕಾಗಿರುವದರಿಂದಲೂ ನಾವು ನೇರಾಗಿ ವಸ್ತುವನ್ನು

ಅದು ಇರುವಂತೆಯೇ ಅರಿತುಕೊಂಡೆವೆಂಬುದು ಭ್ರಾಂತಿಯೇ ಸರಿ. ಆದರೆ ಹೊರಗಿನ ವಸ್ತುವಿಗೆ ಅರಿವಿನಲ್ಲಿ ಒಂದಾನೊಂದು ಆಕಾರವನ್ನುಂಟುಮಾಡುವ ಶಕ್ತಿಯಿರುವದು; ಅದರಿಂದಲೇ ನಮ್ಮ ಅರಿವಿನಲ್ಲಿ ಬಗೆಬಗೆಯ ಆಕಾರಗಳು ಆಗುತ್ತಿರುವವು. ಈ ಆಕಾರಗಳು ಯಾವದರಿಂದಾಗುವದೋ ಅದೇ ವಸ್ತುವು- ಎಂದು ನಾವು ಹೊರಗಿನ ವಸ್ತುವಿನ ಇರವನ್ನು ಊಹಿಸಬೇಕಾಗಿರುವದೇ ಹೊರತು ನೇರಾಗಿ ಅದನ್ನು ಅರಿವಿನಿಂದ ನೋಡುವದೆಂಬುದಿಲ್ಲ.

ಈ ಮತದ ನಿಜವನ್ನರಿಯಲಾರದವರಿಗೆ ಇಲ್ಲಿ ಒಂದು ಸಣ್ಣ ಸಂದೇಹವು ಬರಬಹುದು. ಮೇಲೆ ಹೇಳಿದಂತೆ ನಾವು ಹೊರಗಿನ ವಸ್ತುವನ್ನು ಊಹಿಸಬೇಕೇ ಹೊರತು ನೇರಾಗಿ ಅರಿಯುವದಿಲ್ಲವೆಂಬುದೇ ನಿಜವಾದರೆ, ಕೆಲವು ವಸ್ತುಗಳನ್ನು ನಾವು ಕಂಡೆವೆಂದೂ ಮತ್ತೆ ಕೆಲವನ್ನು ಊಹಿಸಿದೆವೆಂದೂ ಅನುಭವದಲ್ಲಿ ತೋರಿಬರುವದೇಕೆ? ಉದಾಹರಣೆಗೆ ಒಲೆಯಲ್ಲಿ ಬೆಂಕಿಯನ್ನು ನೇರಾಗಿ ನೋಡುವೆವು; ದೂರದಲ್ಲಿ ಗುಡ್ಡದ ಮೇಲೆ ಹೊಗೆಯನ್ನು ನೋಡಿ ಅಲ್ಲಿಯೂ ಬೆಂಕಿಯಿರಬೇಕೆಂದು ಊಹಿಸಿಕೊಳ್ಳುವೆವು. ಹೀಗೆ ಒಲೆಯಲ್ಲಿ ಕಣ್ಣಿನಿಂದ ನೇರಾಗಿ ಕಾಣುವ ಬೆಂಕಿಯ **ಪ್ರತ್ಯಕ್ಷವೂ** ಗುಡ್ಡದ ಮೇಲೆ ಅದು ಇದೆಯೆಂದು ನಾವು ಹೊಗೆಯ ಹೆಗ್ಗುರುತಿನಿಂದ ಊಹಿಸುವ **ಅನುಮಾನವೂ** ಈ ಸೌತ್ರಾಂತಿಕಮತದಲ್ಲಿ ಒಂದೇ ಬಗೆಯೆಂದಾಗುವದಲ್ಲ! ಅನುಭವಕ್ಕೆ ವಿರೋಧವಾಗಿರುವ ಈ ದರ್ಶನವನ್ನು ಹೇಗೆ ಒಪ್ಪೋಣ? - ಎಂದು ಕೆಲವರು ಆಕ್ಷೇಪಿಸಬಹುದು. ಇದಕ್ಕೆ ಸೌತ್ರಾಂತಿಕರ ಉತ್ತರವೇನೆಂದರೆ: ವಿಷಯವು ನಮ್ಮ ಅರಿವಿಗೆ ಎರಡು ರೀತಿಯಿಂದ ಆಕಾರವನ್ನು ಕೊಡಬಹುದಾಗಿರುವದು: ಪ್ರತ್ಯಕ್ಷಜ್ಞಾನದಲ್ಲಿ ಬೆಂಕಿಯು ನೇರಾಗಿ ತನ್ನ ಆಕಾರವನ್ನುಂಟುಮಾಡುವದು, ಅನುಮಾನಜ್ಞಾನದಲ್ಲಿ ಹೊಗೆಯ ಮೂಲಕವಾಗಿ ಆಕಾರವನ್ನುಂಟು ಮಾಡುವದು. ಹೀಗೆ ಈ ಎರಡು ಜ್ಞಾನಗಳಲ್ಲಿಯೂ ಅರಿವಿನ ಆಕಾರದಿಂದಲೇ ಹೊರಗಿನ ವಸ್ತುವಿನ ಇರವನ್ನು ನಾವು ಗೊತ್ತುಪಡಿಸುತ್ತೇವಾದರೂ ಒಂದರಲ್ಲಿ ಆಕಾರವು ನೇರಾಗಿ ಆಗುವದರಿಂದ ಅಲ್ಲಿ ವಸ್ತುವನ್ನು ಕಂಡೆವೆಂದೂ ಮತ್ತೊಂದರಲ್ಲಿ ಪರಂಪರೆಯಾಗಿ ಆಗುವದರಿಂದ ಅಲ್ಲಿ ವಸ್ತುವನ್ನು ಊಹಿಸಿಕೊಂಡೆವೆಂದೂ ವ್ಯವಹಾರವುಂಟಾಗಿರುವದು. ಆದ್ದರಿಂದ ನಮ್ಮ ಮತವು ಅನುಭವಕ್ಕೇನೂ ವಿರೋಧವಾಗಿಲ್ಲ. ವಸ್ತುವು ಯಾವಾಗಲೂ ಅರಿವಿನ ಆಕಾರದಿಂದ ಊಹಿಸ ತಕ್ಕದಾಗಿರುವದೆಂಬುದು ನಿರಾಕ್ಷೇಪವಾಗಿರುವದು. ಹೀಗೆಂಬುದು ಒಂದನೆಯ ತಂಡವರಾದ ಸೌತ್ರಾಂತಿಕರ ಮತವು.

ಇನ್ನು ಎರಡನೆಯ ತಂಡದವರಾದ ವಿಜ್ಞಾನವಾದಿಗಳ ಮತದ ಕಡೆಗೆ ತಿರುಗೋಣ. ಸೌತ್ರಾಂತಿಕರು ಹೇಳುವಂತೆ ವಸ್ತುವು ನಮಗೆ ತೋರುವದೇ ಇಲ್ಲವೆಂದೂ ಅದರಿಂದಾಗುವ ಅರಿವಿನ ಆಕಾರವೊಂದೇ ತಿಳಿಯಬರುವದೆಂದೂ ಆದರೆ, ಅರಿವಿನ ಆಕಾರದಿಂದಲೇ ಪ್ರತ್ಯಕ್ಷಾದಿವ್ಯವಹಾರವೆಲ್ಲ ಸಾಗುವದೆಂದ ಹಾಗಾಯಿತು. ಹೀಗಿರುವಲ್ಲಿ ಅರಿವಿಗಿಂತ ಬೇರೆಯಾಗಿ ಒಂದು ವಸ್ತುವನ್ನೇಕೆ ಕಲ್ಪಿಸಿಕೊಳ್ಳಬೇಕು? ಅರಿವೇ ವಿಷಯದ ಆಕಾರದಲ್ಲಿಯೂ ತೋರುವದೆಂದು ಏತಕ್ಕೆ ಇಟ್ಟುಕೊಂಡುಬಿಡಬಾರದು? ಒಂದೇ ಅರಿವಿನಲ್ಲಿ ಕಪ್ಪು, ಹಳದಿ-ಮುಂತಾದ ಬೇರೆ ಬೇರೆ ಆಕಾರಗಳು ಕಾರಣವಿಲ್ಲದೆ ತೋರಿಕೊಳ್ಳಲಾರವಾದ್ದರಿಂದ ಅರಿವಿನ ಆಕಾರಭೇದಕ್ಕೆ ಕಾರಣವಾದ ವಿಷಯವನ್ನು ಒಪ್ಪಬೇಕು - ಎಂಬುದು ಬಾಹ್ಯ ವಸ್ತುವಾದಿಯ ಅಭಿಪ್ರಾಯವು. ಆದರೆ ಕನಸನ್ನು ನೋಡಿ: ಅಲ್ಲಿಯೂ ಬಗೆಬಗೆಯ ವಿಷಯಗಳನ್ನು ನೇರಾಗಿ ಕಂಡಂತೆ ನಮಗೆ ತೋರುತ್ತದೆ, ಆದರೂ ಅಲ್ಲಿ ಅರಿವಿಗಿಂತ ಹೊರಚ್ಚಾಗಿ ಯಾವದೊಂದು ವಿಷಯವೂ ಇಲ್ಲವೆಂಬುದು ಎಲ್ಲರಿಗೂ ಸಮ್ಮತವಾಗಿರುವದು. ಹೀಗೆ ಹೊರಗೆ ವಿಷಯವಿಲ್ಲದೆಯೇ ಹಿಂದಿನ ಅರಿವಿನ ವಾಸನೆಯಿಂದಲೇ ಬಗೆಬಗೆಯ ವಿಷಯಾಕಾರಗಳು ಅರಿವಿನಲ್ಲಿ ತೋರಿಕೊಳ್ಳಬಹುದೆಂದು ಕನಸಿನ ದೃಷ್ಟಾಂತವು ತೋರಿಸಿಕೊಡುತ್ತಿರುವದರಿಂದ ಎಚ್ಚರದಲ್ಲಿಯೂ ಅರಿವಿನ ಆಕಾರಗಳು ಮಾತ್ರವೆ ಇರುತ್ತವೆಯೇ ಹೊರತು ಅವಕ್ಕೆ ಕಾರಣವಾಗಿರುವ ಹೊರಗಿನ ವಿಷಯಗಳಿಲ್ಲವೇ ಇಲ್ಲವೆಂದು ಇಟ್ಟುಕೊಳ್ಳುವದು ಯುಕ್ತವಾಗಿರುವದು.

ಇದಲ್ಲದೆ ಹೊರಗೆ ವಿಷಯವನ್ನು ಒಪ್ಪುವವರು ಕೂಡ ಅದು ಅರಿವಿನ ಜೊತೆಯಲ್ಲಿಯೇ ತೋರುವದೆಂದು ಒಪ್ಪಿಕೊಳ್ಳುತ್ತಾರೆ; ಕಪ್ಪಾಗಿರುವ ವಸ್ತುವಿನ ಅರಿವನ್ನು ಬಿಟ್ಟು ಕರಿಯ ವಸ್ತುವನ್ನು ನಾವು ಅನುಭವದಲ್ಲಿ ಎಂದೂ ಕಂಡದ್ದಿಲ್ಲ. ಅರಿವಿಗಿಂತ ವಿಷಯವು ಬೇರೆಯಾಗಿದ್ದರೆ ಅದು ಅರಿವನ್ನು ಕುರಿಯದೆಯೆ ಏತಕ್ಕೆ ಸ್ವತಂತ್ರವಾಗಿರಬಾರದು? ಮತ್ತೊಂದು ವಿಚಾರ; ಅರಿವಿಗೆ ವಿಷಯವಾಗಿ ರುವದೆಂದರೇನು? ಅರಿವಿನ ಆಕಾರವಾಗಿರುವದೆಂದೇ ಅಲ್ಲವೆ? ಇದರಿಂದಲೇ ಅರಿವಿನ ವಿಷಯವು ಅರಿವಿನ ಆಕಾರಮಾತ್ರವೆಂದು ಏರ್ಪಡುತ್ತದೆ. ಹಾಗಿ ಲ್ಲದೆ ಆಕಾರಕ್ಕಿಂತ ವಿಷಯವು ಬೇರೆಯೇ ಆಗಿ ಸ್ವತಂತ್ರವಾಗಿದ್ದರೆ, ಆಕಾರಕ್ಕೂ ವಿಷಯಕ್ಕೂ ಯಾವ ಸಂಬಂಧವೂ ಇಲ್ಲವೆಂದಾಗುವದು; ಯಾವದು ಬೇಕಾದರೂ

ಯಾವ ಅರಿವಿಗಾದರೂ ವಿಷಯವಾಗಬಹುದಾಗುವದು. ಇದು ಯಾರಿಗೂ ಒಪ್ಪಿಲ್ಲವಾದ್ದರಿಂದ ಅರಿವು ತನ್ನನ್ನು ತಾವೇ ಅರಿಯುತ್ತದೆಂದೂ ಅರಿವಿಗಿಂತ ಬೇರೆಯಾದ ವಿಷಯವೆಂಬುದು ಇಲ್ಲವೇ ಇಲ್ಲವೆಂದೂ ಸಿದ್ಧವಾಗುತ್ತದೆ. ಹೀಗೆಂಬುದು ವಿಜ್ಞಾನವಾದಿಯ ಸಿದ್ಧಾಂತವು.

ನಮ್ಮ ದೇಶದಲ್ಲಿ ತಾರ್ಕಿಕರ ಪ್ರತ್ಯಕ್ಷವಾದವು ಕ್ರಮಕ್ರಮವಾಗಿ ವಿಜ್ಞಾನವಾದಕ್ಕೆ ತಿರುಗಿದಂತೆಯೇ ಪಾಶ್ಚಾತ್ಯದೇಶದಲ್ಲಿಯೂ ಬಾಹ್ಯಸತ್ಯತ್ವವಾದಿಗಳ ಮತವೂ ಬರುಬರುತ್ತಾ ವಿಜ್ಞಾನವಾದಕ್ಕೆ ದಾರಿಯನ್ನು ಮಾಡಿಕೊಟ್ಟಿತು. ಇದರ ವಿವರವನ್ನು ಸ್ವಲ್ಪಮಟ್ಟಿಗೆ ತಿಳಿದುಕೊಳ್ಳುವದರಿಂದ ಪ್ರಯೋಜನವುಂಟು. ಆ ದೇಶದಲ್ಲಿಯೂ ನಮ್ಮ ಹಾಗೆಯೇ ಪ್ರತ್ಯಕ್ಷಜ್ಞಾನವನ್ನು ವಿರಿಸುವದಕ್ಕೆ ಮೊದಮೊದಲು ಹೊರಗಿನ ವಿಷಯದಿಂದಲೇ ಹೊರಡುತ್ತಿದ್ದರು. ವಸ್ತುವಿನ ಮೇಲೆ ಬಿದ್ದಬೆಳಕಿನ ಕಿರಣವು ಹಿಂದಿರುಗಿ ಕಣ್ಣಿಗೆ ತಗಲಿದ ಮೇಲೆ ಈ ಉತ್ತೇಜನವು ನರಗಳ ಮೂಲಕ ಮೆದುಳನ್ನು ಮಾರ್ಪಡಿಸುವದೆಂದು ಹೇಳುವ ಭೌತಿಕಶಾಸ್ತ್ರಜ್ಞರ ಕಲ್ಪನೆಯನ್ನು ಹಿಂದೆಯೇ ವಿವರಿಸಿರುತ್ತೇವಷ್ಟೇ; ಮೆದುಳಿಗಿಂತ ಬೇರೆಯಾಗಿ ಮನಸ್ಸೆಂಬುದೊಂದು ಇರುವದೆಂದು ಒಪ್ಪುತ್ತಿದ್ದವಾದಿಗಳು ಭೌತಿಕಜ್ಞರ ಹಾಗೆ ಮೆದುಳಿನ ಪ್ರತಿಕ್ರಿಯೆಯೇ ಅರಿವು ಎನ್ನುವದಕ್ಕೆ ಬದಲಾಗಿ ಮೆದುಳಿನ ಮೂಲಕವಾಗಿ ಹೊರಗಿನ ಉತ್ತೇಜನವು ಮನಸ್ಸಿಗೆ ಮುಟ್ಟುವದರಿಂದ ಹೊರಗಿನ ವಸ್ತುವಿನ ಅರಿವು ಉಂಟಾಗುವದೆಂದು ವಾದಿಸುತ್ತಿದ್ದರು. ಇವರ ಮತವು ಹೊರಗಿನ ವಸ್ತುವನ್ನು ಸತ್ಯವೆಂದು ಅಂಗೀಕರಿಸಿದ್ದರೂ ನಮ್ಮ ದೇಶದ ಸೌತ್ರಾಂತಿಕಮತಕ್ಕೇ ಸಮಾನವಾಗಿತ್ತೆಂದು ಹೇಳಬೇಕಾಗುವದು. ಏಕೆಂದರೆ ಇವರ ಅಭಿಪ್ರಾಯದಲ್ಲಿ ಹೊರಗಿನ ವಸ್ತುವಿನ ಸಂಬಂಧದಿಂದ ನಮಗೆ ನೇರವಾಗಿ ತಿಳಿಯಬರುವದೆಲ್ಲ ಶಬ್ದ, ಸ್ಪರ್ಶ, ರೂಪ, ರಸ – ಮುಂತಾದ ಕೆಲವು ವೇದನೆಗಳೇ; ಈ ವೇದನೆಗಳು ಹೊರಗಿನ ವಸ್ತುವಿನಿಂದ ನಮ್ಮ ಇಂದ್ರಿಯಗಳಲ್ಲಿ ಅಥವಾ ಮನಸ್ಸಿನಲ್ಲಿ ಉಂಟಾಗುವ ಕಾರ್ಯಗಳೆಂದು ನಮಗೆ ಭರವಸೆಯಾಗುತ್ತಿರುವದರಿಂದ ವೇದನೆಗಳು ಹೊರಗಿನ ವಸ್ತುಗಳ ಪ್ರತಿನಿಧಿಗಳಾದವು. ನಮಗೆ ಹೊರಗಿನ ವಸ್ತುವಿನ ನೇರವಾದ ತಿಳಿವು ಆಗುವದಕ್ಕೆ ಬದಲು ಆದರಿಂದಾಗುವ ವೇದನೆಗಳ ಮೂಲಕವಾಗಿ ಪರಂಪರೆಯಾಗಿಯೇ ನಾವು ಅದನ್ನು ಊಹಿಸುತ್ತೇವೆಂದಾಯಿತು. ಇದನ್ನು ಪ್ರತೀಕಪ್ರತ್ಯಕ್ಷವಾದ (Theory of Representtative Preception) ಎಂದು ಕರೆಯುತ್ತಾರೆ. ಸೌತ್ರಾಂತಿಕರ

ಮತದಲ್ಲಿ ಜ್ಞಾನಾಕಾರಗಳು ವಿಷಯವನ್ನೂಹಿಸುವದಕ್ಕೆ ಸಾಧನವಾಗಿರುವಂತೆಯೇ ಈ ಮತದಲ್ಲಿ ವೇದನೆಗಳು ಸಾಧನವಾಗಿರುವವೆಂಬುದು ಸ್ಪಷ್ಟವಾಗಿರುತ್ತದೆ.

ಈ ಮೆಟ್ಟಿಲಿಗೆ ಇಳಿಯುವದೆಂಬುದು ವಿಜ್ಞಾನವಾದದ ಪ್ರವೇಶಕ್ಕೆ ಹೆಬ್ಬಾಗಿಲನ್ನು ತೆರೆದಂತೆಯೆ ಆಗುವದು. ಏಕೆಂದರೆ ನಮಗೆ ಗೊತ್ತಿರುವದೆಲ್ಲ ನಮ್ಮ ವೇದನೆಗಳೇ ಆದರೆ, ಈ ವೇದನೆಗಳಿಗಿಂತ ಬೇರೆಯಾಗಿ ಸ್ವತಂತ್ರವಾದ ಬಾಹ್ಯ ವಸ್ತುಗಳು ಇವೆಯೆಂಬುದಕ್ಕೆ ಪ್ರಮಾಣವೇನೂ ಇರುವದಿಲ್ಲ. ಆದ್ದರಿಂದ ಈ ವೇದನೆಗಳು ಬಾಹ್ಯವಸ್ತುಗಳಿಂದಾಗಿವೆಯೆಂದಾಗಲಿ ಅವುಗಳಿಗೆ ಪ್ರತೀಕವಾಗಿ ನಮಗೆ ತಿಳಿದುಬರುವವೆಂದಾಗಲಿ ಹೇಳುವದಕ್ಕೆ ಆಧಾರವಿಲ್ಲ. ನಮ್ಮ ಮನಸ್ಸಿಗೆ ಗೋಚರವಾಗುವದೆಲ್ಲ ಅದರ ವೃತ್ತಿಗಳೇ. ನೇರಾಗಿ ಅರಿಯುವದು, ನೆನಪಿಗೆ ತಂದುಕೊಳ್ಳುವದು, ಕಲ್ಪಿಸಿಕೊಳ್ಳುವದು – ಮುಂತಾದ ಮನಸ್ಸಿನ ಪ್ರವೃತ್ತಿಗಳಲ್ಲಿ ಎಲ್ಲಿ ನೋಡಿದರೂ ವೃತ್ತಿಗಿಂತ ಬೇರೆಯಾದ ವಿಷಯವೊಂದು ಇದೆಯೆಂದಿಟ್ಟುಕೊಳ್ಳುವದಕ್ಕೆ ಕಾರಣವೇನೂ ಇರುವದೇ ಇಲ್ಲ. ನಮಗೆ ವಿಷಯವಾಗುವದೆಲ್ಲ ವೇದನೆಗಳೇ ಆಗಿರುವದರಿಂದ ಇವುಗಳ ಗುಂಪನ್ನೇ ನಾವು ಒಂದೊಂದು ವಸ್ತುವೆಂದು ವ್ಯವಹರಿಸುತ್ತಿರುವೆವು. ಹೀಗೆಂಬುದು ಪಾಶ್ಚಾತ್ಯರಲ್ಲಿ ಹುಟ್ಟಿದ ಮೊಟ್ಟಮೊದಲನೆಯ ವಿಜ್ಞಾನವಾದವು.

ವಿಜ್ಞಾನವಾದಿಗಳೂ ವಿಷಯಸತ್ಯತ್ವವಾದಿಗಳೂ ಒಬ್ಬರ ಮತದಲ್ಲೊಬ್ಬರು ದೋಷವನ್ನು ತೆಗೆದು ತೋರಿಸುತ್ತಾ ಬಂದಹಾಗೆಲ್ಲ ಅವರ ಮೂಲಾಭಿಪ್ರಾಯಗಳೂ ಮಾರ್ಪಡುತ್ತಾ ಬಂದಿರುತ್ತವೆ. ಆದ್ದರಿಂದ ಈಗ ಪಾಶ್ಚಾತ್ಯರಲ್ಲಿ ವಿಜ್ಞಾನವಾದದ ಕವಲುಗಳೂ ವಿಷಯಸತ್ಯತ್ವವಾದದ ಕವಲುಗಳೂ ಬೇಕಾದಷ್ಟಾಗಿರುವವಲ್ಲದೆ ಇವುಗಳು ಮೊದಲಿದ್ದಂತೆ ತೀರ ಬೇರೆ ಬೇರೆಯಾಗಿರದೆ ಒಂದರೊಳಗೊಂದು ಸೇರಿ ಹೆಣೆದುಕೊಂಡುಬಿಟ್ಟಿವೆ. ಪಾಶ್ಚಾತ್ಯರ ತತ್ತ್ವಶಾಸ್ತ್ರದ ಇತಿಹಾಸವನ್ನು ಬರೆಯುವದು ನಮ್ಮ ಉದ್ದೇಶವಲ್ಲವಾದ್ದರಿಂದ ಆ ವಿಚಾರವನ್ನು ಇಲ್ಲಿಗೆ ಕೈಬಿಟ್ಟು ಪ್ರಕೃತವಾಗಿರುವ ಅರಿವಿನ ವಿಚಾರಕ್ಕೆ ಹಿಂತಿರುಗುವೆವು.

ಅರಿವಿನ ವಿಷಯವು ಸ್ವತಂತ್ರವೆಂದೂ, ಅದರ ಸಂಬಂಧದಿಂದ ಮೆದುಳಿನಲ್ಲಿ ಅಥವಾ ಮನಸ್ಸಿನಲ್ಲಿ ಅರಿವು ಉಂಟಾಗುವದೆಂದೂ, ಹೇಳುವವರು ಅರಿವೆಂಬುದೇನೆಂಬುದನ್ನು ಬೆಟ್ಟಿಟ್ಟು ತೋರಿಸಲಾರದೆ ಹೋಗಿರುವಂತೆಯೇ ಅರಿವಿನ

ಆಕಾರಕ್ಕಿಂತ ಅಥವಾ ಅರಿವಿನಲ್ಲಿ ಕಾರಣಬರುವ ವೇದನೆಗಳಿಗಿಂತ ಬೇರೆಯಾದ ವಿಷಯವೇ ಇಲ್ಲವೆಂದು ಹಟಹಿಡಿದಿರುವ ವಿಜ್ಞಾನವಾದಿಗಳೂ ಅರಿವಿನ ಸ್ವರೂಪವು ಇಂಥದ್ದೆಂದು ತೋರಿಸಿಕೊಡುವದಕ್ಕೆ ಸಮರ್ಥರಾಗಿರುವದಿಲ್ಲ. ಅರಿವಿನಲ್ಲಿ ಆಗಾಗ್ಗೆ ಆಗುತ್ತಿರುವ ಮಾರ್ಪಾಡುಗಳು ಹೊರಗಿನ ಉತ್ತೇಜಕಸಾಮಗ್ರಿಯಿಂದಲೇ ಆಗಿರಲಿ, ಮನಸ್ಸಿನೊಳಗಿನ ಕಾರಣಗಳಿಂದಲೇ ಆಗಿರಲಿ, ಮೊದಲು ಇಲ್ಲದೆ ಇದ್ದ ಅರಿವಿನ ಪ್ರಭೇದಗಳು ಹೇಗೆ ಉಂಟಾಗುವವು? ಅರಿವಿನ ತಿರುಳಾಗಿರುವ ವಸ್ತುವೊಂದು ಯಾವದಾದರೂ ಇದೆಯೆ ಇಲ್ಲವೆ? ಇಲ್ಲದಿದ್ದರೆ ಇಂಥಿಂಥ ಅರಿವು ನಮಗೆ ಆಯಿತೆಂಬ ಅನುಭವವು ಹೇಗೆ ಆಗುತ್ತದೆ?- ಇದನ್ನು ಇವರೂ ಸ್ಪಷ್ಟಪಡಿಸಿರುವದಿಲ್ಲ.

ವಿಷಯಸ್ವಾತಂತ್ರ್ಯವಾದಿಗಳಿಗೆ ಹೊರಗಿನ ಪ್ರಪಂಚವೇ ಸರ್ವಸ್ವವಾಗಿರುವಂತೆ ವಿಜ್ಞಾನವಾದಿಗಳಿಗೆ ಮನಸ್ಸೇ ಸರ್ವಸ್ವವಾಗಿರುವದು. ಇವರಿಬ್ಬರೂ ವಿಷಯವಿಷಯಿವಿಭಾಗವನ್ನು ಲಕ್ಷ್ಯದಲ್ಲಿಟ್ಟು ವಿಚಾರಮಾಡಿರುವದಿಲ್ಲ. ವಿಷಯವಾದಿಗಳಿಗೆ ಅದನ್ನರಿಯುವ ವಿಜ್ಞಾನವೂ ಒಂದು ವಿಷಯವೇ ಆಗಿರುವದು; ವಿಜ್ಞಾನವಾದಿಗಳಿಗೂ ಮನಸ್ಸು ಮತ್ತು ಅದರ ವೃತ್ತಿಗಳು ವಿಷಯವೇ ಆಗಿರುವದು. ವಿಷಯಿಯೆಂಬುದು ವಿಷಯವನ್ನು ಹೊರದೂಡುವದೆಂಬುದೂ ವಿಷಯದ ಸ್ವಭಾವವು ವಿಷಯಿಯಲ್ಲಿ ಬರಲಾರದೆಂಬುದೂ ಇಬ್ಬರು ವಾದಿಗಳಿಗೂ ಹೊಳೆದೇ ಇರುವದಿಲ್ಲ.

ವಿಜ್ಞಾನವು ವಿಷಯವು, ಅದನ್ನರಿಯುವ ಆತ್ಮಚೈತನ್ಯವು ಅದಕ್ಕಿಂತ ಅತ್ಯಂತ ವಿಲಕ್ಷಣವಾದ ವಿಷಯಿಯು. ಮನಸ್ಸೆಂಬುದೂ ಭೌತಿಕವೇ ಆಗಿರುವದರಿಂದ ಅದು ಬೆಳೆಯುವದು, ಹಿಗ್ಗುವದು, ಕುಗ್ಗುವದು, ಸೊರಗುವದು; ಅದರಲ್ಲಿ ನಮಗೆ ತೋರಿಕೊಳ್ಳುತ್ತಿರುವ ಅರಿವಿನ ತಿರುಳು ನಿಜವಾಗಿ ಆತ್ಮಚೈತನ್ಯವೇ ಆಗಿದ್ದು ಈ ಯಾವ ಮಾರ್ಪಾಡುಗಳ ಲೇಪವನ್ನೂ ಪಡೆಯದೆ ಇರುವದು. ಈ ಗುಟ್ಟನ್ನರಿಯದೆ ಇಬ್ಬರು ವಾದಿಗಳೂ ಯಾವಯಾವ ತೊಡಕುಗಳಿಗೆ ಸಿಕ್ಕಿಕೊಂಡಿರುವರೆಂಬುದನ್ನು ಇನ್ನು ಕ್ರಮ ಕ್ರಮವಾಗಿ ಬಯಲಿಗೆ ತರುವೆವು.

★★★★★

# ಬೌದ್ಧಮತದಲ್ಲಿ ಕರ್ಮವಿಪಾಕ

**- ಶ್ರೀಸಚ್ಚಿದಾನಂದೇದ್ರಸರಸ್ವತೀ ಸ್ವಾಮಿಗಳವರು**

ಭರತಖಂಡದಲ್ಲಿ ಹುಟ್ಟಿರುವ ದರ್ಶನಗಳಿಗೂ ಮಿಕ್ಕ ದರ್ಶನಗಳಿಗೂ ಕರ್ಮವಿಚಾರದಲ್ಲಿ ಒಂದು ಮುಖ್ಯವಾದ ಮತಭೇದವುಂಟು. ಮಾಡಿದ ಕರ್ಮಕ್ಕೆ ತಕ್ಕಂತೆ ಫಲವು ಆಗಲೇಬೇಕೆಂಬುದನ್ನು ಎಲ್ಲರೂ ಒಪ್ಪಿರುತ್ತಾರಾದರೂ ಈ ಫಲವು ಈ ಜನ್ಮದಲ್ಲಿ ಆಗದಿದ್ದರೆ ಮತ್ತೊಂದು ಜನ್ಮದಲ್ಲಿಯಾದರೂ ಆಗಿಯೇ ತೀರುವದೆಂಬ ಅಭಿಪ್ರಾಯವು ನಮ್ಮ ದೇಶದ ಸಿದ್ಧಾಂತಗಳಲ್ಲಿ ಮಾತ್ರವೇ ಕಂಡುಬರುತ್ತದೆ. ಬುದ್ಧನು ಕ್ಷತ್ರಿಯನಾಗಿ ಹುಟ್ಟಿ ವೈದಿಕ ಸಂಸ್ಕಾರದಿಂದ ಬೆಳದವನಾದ್ದರಿಂದ ಅವನಿಗೆ ಜನ್ಮಾಂತರದಲ್ಲಿ ನಂಬಿಕೆಯು ಸ್ವಾಭಾವಿಕವಾಗಿಯೇ ಉಂಟಾಗಿತ್ತು.

ಆದರೆ ಬೌದ್ಧಮತದಲ್ಲಿ ಆತ್ಮನೊಬ್ಬನಿದಾನೆಂಬುದನ್ನು ಅಂಗೀಕರಿಸಿರುವದಿಲ್ಲ. ಸಕಲವೂ ನಿರಾತ್ಮಕವಾಗಿರುವದು; ನಮ್ಮ ಹೊರಗೆ ಕಾಣಿಸುವ ಪದಾರ್ಥಗಳಲ್ಲಾಗಲಿ, ನಮ್ಮಲ್ಲಾಗಲಿ ಹೊರಗೆ ತೋರುವ ವಿಕಾರರಾಶಿಯನ್ನು ಬಿಟ್ಟು ಅದಕ್ಕೆ ಆಧಾರವಾಗಿರುವ ಸ್ಥಿರವಸ್ತುವೊಂದು ಇರುವದೆಂಬುದೇ ಭ್ರಾಂತಿಯು ಎಂಬುದು ಈ ಮತದಲ್ಲಿ ಒಂದು ಬಹು ಮುಖ್ಯವಾದ ತತ್ತ್ವವಾಗಿರುತ್ತದೆ. ಹೀಗೆ ನಿರಾತ್ಮವಾದವನ್ನು ಇಟ್ಟುಕೊಂಡಿದ್ದರೂ ಭರತಖಂಡದ ಮಿಕ್ಕ ದರ್ಶನಗಳಂತೆ ಜನ್ಮಾಂತರವನ್ನೂ ಒಪ್ಪಿರುವರು ಈ ಮತದಲ್ಲಿ ಒಂದು ವಿಶೇಷವಾಗಿರುತ್ತದೆ.

ಲೋಕದಲ್ಲಿ ಜನರ ಶರೀರಬಲ, ಆರೋಗ್ಯ, ಬುದ್ಧಿ, ಐಶ್ವರ್ಯ - ಮುಂತಾದವುಗಳು ಎಲ್ಲರಲಿಯೂ ಒಂದೇ ಸಮನಾಗಿರುವದಿಲ್ಲ; ತಾವು ತಾವು ಮಾಡಿದ ಕರ್ಮಗಳಿಗೆ ಫಲಗಳನ್ನು ಈ ಜನ್ಮದಲ್ಲಿಯೇ ಎಲ್ಲರೂ ಹೊಂದುವದೂ ಕಂಡುಬರುವದಿಲ್ಲ. ಹೀಗಿರುವ ಜನರ ಸ್ಥಿತಿಯ ವೈಚಿತ್ರ್ಯವನ್ನೂ ಕರ್ಮದ ಫಲದ ನಿಯಮವನ್ನೂ ತೃಪ್ತಿಕರವಾಗಿ ಬಿಡಿಸಿ ಹೇಳಬೇಕಾದರೆ ಲೋಕಾಂತರಗತಿಯನ್ನೂ ಜನ್ಮಾಂತರವಾದವನ್ನೂ ಇಟ್ಟುಕೊಳ್ಳಲೇಬೇಕಾಗುವದೆಂಬುದು ಈ ದೇಶದ ಕರ್ಮವಾದಿಗಳಿಗೆಲ್ಲ ಸಮವಾಗಿರುವದು; ಆದರೆ ಬೌದ್ಧಮತದಲ್ಲಿ ಕರ್ಮವನ್ನು ಮಾಡುವ ಆತ್ಮನೇ ಇಲ್ಲವಾದ ಮೇಲೆ, ಅದರ ಫಲವನ್ನು ಅನುಭವಿಸುವದಕ್ಕೆ

ಲೋಕಾಂತರಕ್ಕೆ ಹೋಗುವವನು ಯಾರು? ದೇಹಾಂತರವನ್ನು ಪಡೆಯುವವನು ಯಾರು? - ಎಂಬ ಪ್ರಶ್ನೆಯು ಸಹಜವಾಗಿ ತಲೆದೋರುವದಷ್ಟೆ. ಅದಕ್ಕೆ ಬೌದ್ಧರ ಉತ್ತರವು ಹೀಗಿರುವದು: ರೂಪ, ವೇದನಾ, ವಿಜ್ಞಾನ, ಸಂಜ್ಞಾ, ಸಂಸ್ಕಾರ- ಎಂಬ ಐದು **ಸ್ಕಂಧ**ಗಳ ಗುಂಪನ್ನೇ ನಾವು ಮನುಷ್ಯನೆಂದು ಕರೆಯುವೆವು. ಈ ಸ್ಕಂಧಗಳಲ್ಲಿ ಯಾವದೊಂದೂ ನಿತ್ಯವಲ್ಲ; ಪ್ರತಿಯೊಂದೂ ಕ್ಷಣ ಕ್ಷಣಕ್ಕೂ ಮಾರ್ಪಡುತ್ತಲೇ ಇರುವದು. ಇವುಗಳಲ್ಲಿ ಯಾವದೊಂದೂ ಆತ್ಮನಲ್ಲ. ಇವುಗಳಿಗಿಂತ ಬೇರೆಯಾಗಿ ಆತ್ಮನೊಬ್ಬನು ಇಲ್ಲವೂ ಇಲ್ಲ. ಆದರೂ ಒಂದು ಪ್ರಾಣಿಯು ಸತ್ತಮಾತ್ರದಿಂದ ಅದರ ಕರ್ಮಗಳೆಲ್ಲವೂ ಅಲ್ಲಿಗೇ ತೀರುವದಿಲ್ಲ; ಅವುಗಳ ಫಲವನ್ನು ಅನುಭವಿಸುವದಕ್ಕೆ ತಕ್ಕ ಮತ್ತೊಂದು ಪ್ರಾಣಿಯು ಹುಟ್ಟುವದು. ಒಂದು ದೀಪದಿಂದ ಮತ್ತೊಂದು ದೀಪವಿರುವ ಹಚ್ಚಿಕೊಂಡರೆ, ಮೊದಲನೆಯ ದೀಪವು ಎರಡನೆಯ ದೀಪವನ್ನು ಸ್ಥಳಕ್ಕೇನೂ ದಾಟಿ ಬಂದಿರುವದಿಲ್ಲ; ಒಂದು ಪದ್ಯವನ್ನು ಮತ್ತೊಬ್ಬರಿಂದ ನಾವು ಕಲಿತುಕೊಂಡರೆ ಆ ಪದ್ಯವು ಅವರಿಂದ ಹೊರಟು ನಮ್ಮ ಬಳಿಗೇನೂ ಬರುವದಿಲ್ಲ. ಈ ದೃಷ್ಟಾಂತಗಳಲ್ಲಿ ಹೊಸ ದೀಪವು ಹಳೆಯ ದೀಪದ ಸಂಬಂಧದಿಂದ ಹುಟ್ಟಿರುವಂತೆಯೂ ಮತ್ತೊಬ್ಬರ ಉಪದೇಶದಿಂದ ನಮ್ಮಲ್ಲಿ ಪದ್ಯವು ತಲೆದೋರಿರುವಂತೆಯೂ ಒಂದು ಸ್ಕಂಧಗಳ ರಾಶಿಯು ನಾಶವಾಗುತ್ತಲೂ ಅದರ ಕರ್ಮದ ಫಲವಾಗಿ ಅದರಂತೆಯೇ ಇರುವ ಮತ್ತೊಂದು ಸ್ಕಂಧರಾಶಿಯು ಯೋಗ್ಯ ಕಾಲದಲ್ಲಿ ಯೋಗ್ಯದೇಶದಲ್ಲಿ ಹುಟ್ಟಿ ತೋರುತ್ತದೆ. ಇದೇ ಕರ್ಮವಿಪಾಕದ ಫಲವಾದ ಪುನರ್ಜನ್ಮವು.

ಈಗ ಮತ್ತೊಂದು ಪ್ರಶ್ನೆಯು ಮುಂದಕ್ಕೆ ಬರುವದು. ಒಂದೊಂದು ಸಲವೂ ಹೀಗೆ ಬೇರೆಬೇರೆಯ ಸ್ಕಂಧಗಳಗುಂಪೇ ಹುಟ್ಟುವದೆಂದ ಮೇಲೆ ಹಿಂದಿನ ಜನ್ಮದಲ್ಲಿ ಮಾಡಿದ್ದ ಪಾಪದ ಫಲವನ್ನು ಈ ಜನ್ಮದಲ್ಲಿ ಅನುಭವಿಸುತ್ತೇವೆಂಬ ನಂಬಿಕೆಗೇನು ಗತಿ? ಇದಕ್ಕೆ ಬೌದ್ಧರ ಉತ್ತರವೇನೆಂದರೆ, ಒಬ್ಬನು ಮೊತ್ತೊಬ್ಬನ ತೋಟದಲ್ಲಿ ಮಾವಿನ ಹಣ್ಣುಗಳನ್ನು ಕದಿಯುತ್ತಾನೆಂದು ಇಟ್ಟುಕೊಳ್ಳಿ; ಆಗ ಅವನನ್ನು ಕಳ್ಳನೆಂದು ಹಿಡಿದು ಶಿಕ್ಷಿಸುತ್ತಾರೆ. ಆದರೆ ಅವನು ''ತೋಟದವನು ಬಿತ್ತಿದ ಹಣ್ಣನ್ನೇನೂ ನಾನು ಕದ್ದಿರುವದಿಲ್ಲ, ನಾನು ನಿರಪರಾಧಿ''- ಎಂದು ವಾದಿಸಬಹುದೆ? ಕೂಡದು. ''ನೀನು ಕದ್ದ ಹಣ್ಣುಗಳು ಅವನು ಹಾಕಿದ ಬೀಜದ ಫಲವೇ, ಆದ್ದರಿಂದ ನೀನು ಅಪರಾಧಿಯೇ'' ಎಂದು ತೀರ್ಪುಕೊಡುತ್ತೇವಲ್ಲವೆ? ಇದರಂತೆ ಒಂದು ಸ್ಕಂಧಗಳ

ಗುಂಪಾದ ನಾಮರೂಪವು ಮಾಡಿದ ಒಳ್ಳೆಯ ಮತ್ತು ಕೆಟ್ಟಕರ್ಮಗಳ ಫಲವಾಗಿ ಮತ್ತೊಂದು ನಾಮರೂಪವು ಹುಟ್ಟುತ್ತದೆ. ಆದ್ದರಿಂದ ಹಿಂದಿನ ಕರ್ಮದ ಫಲವು ಅದಕ್ಕೂ ಗಂಟುಬಿದ್ದೇತೀರುವದು.

ಸ್ವಲ್ಪದರಲ್ಲಿ ಹೇಳಿದರೆ ಬೌದ್ಧರ ಕರ್ಮವಿಪಾಕವಾದವು ಇಷ್ಟರಲ್ಲಿ ಅಡಕವಾಗುವದು; ಕರ್ಮವೆಂಬುದು ವೈದಿಕರು ಹೇಳುವಂತೆ ಶರೀರಕ್ಕಿಂತ ಬೇರೆಯಾಗಿರುವ ಜೀವನ ಕ್ರಿಯೆಯಲ್ಲ, ಜೈನರು ಹೇಳುವಂತೆ ಆತ್ಮನಿಗೆ ಅಂಟಿಕೊಂಡಿರುವ ಒಂದು ಬಗೆಯ ದ್ರವ್ಯವೂ ಅಲ್ಲ. ಪ್ರಪಂಚದಲ್ಲಿರುವ ಚೇತನಾಚೇತನ ವಸ್ತುಗಳಲ್ಲಿ ಕಾಣಬರುವ ವ್ಯಾಪಾರವೇ ಕರ್ಮವು. ಇಡಿಯ ಪ್ರಪಂಚವೇ ಹೇತುಫಲಾತ್ಮಕವಾಗಿರುವದು; ಎಂದರೆ ಒಂದೊಂದು ಬಗೆಯ ಕರ್ಮಗಳ ಫಲವಾಗಿ ಒಂದೊಂದು ಮಾರ್ಪಾಡು ಎಲ್ಲೆಲ್ಲಿಯೂ ಆಗುತ್ತಲೇ ಇರುವದು. ಹಿಂದಿನ ಕರ್ಮದ ಫಲವು ಈಗ ತೋರುವಂತೆ ಈಗಿನ ಕರ್ಮದ ಫಲವು ಮುಂದೆ ತೋರಿಯೇ ತೋರುವದು. ಜಿಗಣಿಯ ಹುಳು ಗಿಡದ ಒಂದು ಎಲೆಯಿಂದ ಮತ್ತೊಂದು ಎಲೆಗೆ ದಾಟಿಹೋಗುವಂತೆ ಜೀವನು ಈ ಲೋಕವನ್ನೂ ಜನ್ಮವನ್ನೂ ಬಿಟ್ಟು ಲೋಕಾಂತರಕ್ಕೂ ಜನ್ಮಾಂತರಕ್ಕೂ ಹೋಗುವನೆಂಬ **ಶಾಶ್ವತವಾದವೂ**[1] ತಪ್ಪು; ಇಲ್ಲಿ ಮಾಡಿದ್ದು ಇಲ್ಲಿಗೇ ತೀರಿತೆಂಬ **ಉಚ್ಛೇದವಾದವೂ** ತಪ್ಪು. ಕರ್ಮಕ್ಕೆ ಅನುಗುಣವಾಗಿ ಫಲವು ಇಲ್ಲಿಯೋ ಜನ್ಮಾಂತರದಲ್ಲಿಯೋ ಆಗಿಯೇ ತೀರುವದು. ಮನುಷ್ಯನು ಸತ್ತು ಐದು ಸ್ಕಂಧಗಳೂ ಒಂದನ್ನೊಂದು ಅಗಲಿದರೂ ಅವನ ಕರ್ಮವು ಮಾತ್ರ ಹಾಗೆಯೇ ಇರುತ್ತದೆ. ಇದರ ಫಲವಾಗಿ ಮತ್ತೊಂದು ಜನ್ಮದಲ್ಲಿ ಹುಟ್ಟುವ ಪ್ರಾಣಿಯಲ್ಲಿರುವ ಸ್ಕಂಧಗಳು ಯಾವ ಪರಿಮಾಣದಲ್ಲಿಯೇ ಸೇರಿಕೊಂಡಿರಲಿ. ಅದರ ಸಾಧನವಾದ ಕರ್ಮವು ಮಾತ್ರ

---

1. ಪ್ರತಿಸಂಧಿವಿಜ್ಞಾನವೆಂಬ ಒಂದಾನೊಂದು ವಿಜ್ಞಾನವು ಸತ್ತವನ ಶರೀರದಿಂದ ಹೊಸದಾಗಿ ಹುಟ್ಟುವ ಮಗುವಿನೊಳಕ್ಕೆ ಬಂದು ಸೇರುವದೆಂದು ಬೌದ್ಧರಲ್ಲಿಯೂ ಕೆಲವರು ಈಚೆಗೆ ಅಭಿಪ್ರಾಯಪಟ್ಟಿರುತ್ತಾರೆ. ಆದರೆ ವಿಜ್ಞಾನವು ಬರಿಯ ಮನಃಸ್ಥಿತಿಯಾದ ಒಂದು ಸ್ಕಂಧವಾದ್ದರಿಂದ ಅದು ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗಲಾರದು; ಈ ವಾದವು ಪಾಲಿ ಗ್ರಂಥಗಳಲ್ಲಿರುವ ಪ್ರಾಚೀನಬೌದ್ಧಮತಕ್ಕೆ ವಿರುದ್ಧವಾಗಿರುತ್ತದೆ. ಸ್ವರ್ಗ, ನರಕ, ದೇವಲೋಕ, ಅಸುರಲೋಕ, ಮನುಷ್ಯಲೋಕ, ತಿರ್ಯಕ್ಪ್ರಾಣಿಕಗಳ ಲೋಕ, ಶ್ರಾವಕ, ಪ್ರತ್ಯೇಕಬುದ್ಧ, ಬೋಧಿಸತ್ತ್ವ, ಬುದ್ಧ- ಇವೆಲ್ಲ ಕರ್ಮಫಲಗಳೆಂದು ಬೌದ್ಧರು ಹೇಳುತ್ತಾರಾದರೂ ಒಬ್ಬನೇ ಜೀವನು ಒಂದು ಕಡೆಯಿಂದ ಹೋಗಿ ಮತ್ತೊಂದು ಕಡೆಯಲ್ಲಿ ಈ ಫಲವನ್ನು ಅನುಭವಿಸುತ್ತಾನೆಂದು ಅವರು ನಂಬುವದಿಲ್ಲ.

ಮೊದಲಿನ ಕರ್ಮಕ್ಕನುಗುಣವಾಗಿಯೇ ಇರುತ್ತದೆ. ಹೀಗೆ ನೋಡಿದರೆ ಸಂಸಾರವೆಲ್ಲ ಕರ್ಮದ ವಿಪಾಕವಾಗಿರುತ್ತದೆ ಎನ್ನಬಹುದು.

ಬೌದ್ಧರ ಮತದಲ್ಲಿ ಅನಾತ್ಮವಾದವು ಬಹುಮುಖ್ಯವಾದದ್ದು; ಅನಾತ್ಮವಾದವನ್ನು ತಿಳಿಯಬೇಕಾದರೆ ಐದು ಸ್ಕಂದಗಳ ವಿಚಾರವನ್ನು ಚೆನ್ನಾಗಿ ತಿಳಿದುಕೊಳ್ಳುವದು ಅತ್ಯವಶ್ಯವಾಗುವದು.

★★★★★

# ಬೌದ್ಧಮತದಲ್ಲಿ ಅನಾತ್ಮವಾದ

**- ಶ್ರೀಸಚ್ಚಿದಾನಂದೇದ್ರಸರಸ್ವತೀ ಸ್ವಾಮಿಗಳವರು**

ಬೌದ್ಧಮತದಲ್ಲಿ ವೈದಿಕಮತದಂತೆಯೇ ಬಂಧಮೋಕ್ಷಗಳನ್ನು ಒಪ್ಪಿರುತ್ತದೆಯಾದರೂ ಈ ಎರಡು ಮತಗಳಲ್ಲಿ ಜೀವ, ಈಶ್ವರ, ವೇದ - ಇವುಗಳ ವಿಷಯಕ್ಕೆ ಅತ್ಯಂತ ಭಿನ್ನಾಭಿಪ್ರಾಯಗಳಿರುವವು. ಬೌದ್ಧರು ಕರ್ಮವಿಪಾಕದಿಂದ ಜನ್ಮಾಂತರವುಂಟಾಗುವದೆಂಬದನ್ನು ವೈದಿಕರಂತೆಯೇ ನಂಬುತ್ತಾರೆ. ಆದರೆ ದೇಹಕ್ಕಿಂತ ಬೇರೆಯಾದ ಆತ್ಮನನ್ನಾಗಲಿ ಜೀವರುಗಳಿಂದ ಉಪಾಸ್ಯನಾದ ಈಶ್ವರನನ್ನಾಗಲಿ ಅವರು ನಂಬುವದಿಲ್ಲ, ವೇದಪ್ರಾಮಾಣ್ಯವನ್ನಂತೂ ನಂಬುವದೇ ಇಲ್ಲ. ಈ ಭಾಗದಲ್ಲಿಯೇ ಇವೆರಡು ಮತಗಳಿಗೂ ಅತ್ಯಂತ ವೈಲಕ್ಷಣ್ಯವುಂಟಾಗಿರುವದು. ಬೌದ್ಧರು ಕರ್ಮವಿಪಾಕದಿಂದ ಜನ್ಮಾಂತರವು ಉಂಟಾಗುವ ಪರಿಯನ್ನು ಹೇಗೆ ವರ್ಣಿಸಿರುವರೆಂಬುದನ್ನು ಈ ಪತ್ರಿಕೆಯ ಕಳೆದ ಸಂಪುಟದಲ್ಲಿ (156ನೆಯ ಪುಟದಲ್ಲಿ) ತಿಳಿಸಿರುತ್ತೇನೆ. ಈ ಲೇಖನದಲ್ಲಿ ಅವರ ಅನಾತ್ಮವಾದದ ಸ್ವರೂಪವನ್ನು ಸ್ವಲ್ಪಮಟ್ಟಿಗೆ ವಿವರಿಸುವೆನು.[1]

---

1. ಬುದ್ಧರೂ ಆತ್ಮನನ್ನು ಅಂಗೀಕರಿಸಿದ್ದಾರೆಂದು ಈಗಿನವರು ಕೆಲವರು ವಾದಿಸುತ್ತಿದಾರೆ; ಆದರೆ ಅತ್ಯಂತ ಪ್ರಾಚೀನವಾದ ಪಾಲಿಗ್ರಂಥಗಳಲ್ಲಿ ಅನಾತ್ಮವಾದವೇ ಎದ್ದು ಕಾಣುತ್ತಿರುವದು. ಮೇಲೆ ಬರೆದಿರುವ ವಿವರಕ್ಕೆ ಮಜ್ಝಿಮನಿಕಾಯದ 'ಚೂಲಸಚ್ಚಕಸುತ್ತಂತ', ಮಹಾಪುಣ್ಣಮಸುತ್ತಂತ, ಮಹಾಹತ್ಥಿಪದೋಪಮಸುತ್ತಂತ, ಛಛಕ್ಕಕಸುತ್ತಂತ ಇವುಗಳೇ ಆಧಾರವಾಗಿವೆ.

ಅನಾತ್ಮವಾದಕ್ಕೆ ಸ್ಕಂಧವಾದವೇ ಮೂಲಾಧಾರವು. ರೂಪ, ವೇದನಾ, ಸಂಜ್ಞಾ, ಸಂಸ್ಕಾರ, ವಿಜ್ಞಾನ – ಎಂಬ **ಐದು ಸ್ಕಂಧ**ಗಳು ಜಗನ್ಮಯವಾಗಿರುವವೆಂದು ಒಪ್ಪಿರುತ್ತಾರೆ. ಶರೀರದ ಒಳಗಿರುವ ಅಥವಾ ಹೊರಗಿರುವ, ಸ್ಥೂಲವಾಗಿರುವ ಅಥವಾ ಸೂಕ್ಷ್ಮವಾಗಿರುವ, ಹೀನವಾದ ಅಥವಾ ಉತ್ತಮವಾದ, ದೂರದಲ್ಲಿರುವ ಅಥವಾ ಹತ್ತಿರವಿರುವ **ರೂಪವು**, ಎಂದರೆ ಪೃಥ್ವೀಜಲತೇಜೋವಾಯುಗಳೆಂಬ ಭೂತಗಳು ಮತ್ತು ಭೌತಿಕವಸ್ತುಗಳು – **ರೂಪಸ್ಕಂಧ**ವೆನಿಸುವದು. ಇದರಂತೆಯೇ ಒಳಗಿರುವ ಮತ್ತು ಹೊರಗಿರುವ ಎಲ್ಲಾಬಗೆಯ ಸುಖದುಃಖಭಾವವೂ **ವೇದನಾಸ್ಕಂಧವು**; ಎಲ್ಲಾ ಬಗೆಯ ಇಂದ್ರಿಯಜ್ಞಾನವೂ **ಸಂಜ್ಞಾಸ್ಕಂಧವು**; ಎಲ್ಲಾ ಬಗೆಯ ಸಂಸ್ಕಾರಗಳೂ **ಸಂಸ್ಕಾರಸ್ಕಂಧವು**, ಎಲ್ಲಾ ಬಗೆಯ ಅರಿವೂ **ವಿಜ್ಞಾನಸ್ಕಂಧವು**. ಈ ಸ್ಕಂಧಗಳೊಂದೂ ಆತ್ಮನಲ್ಲ ಎಂಬುದೇ ಅನಾತ್ಮವಾದವು.

ಸ್ಕಂಧಗಳ ತಿಳಿವಳಿಕೆ ನಮಗೆ ಹೇಗೆ ಆಗುತ್ತದೆ? ಶರೀರದಲ್ಲಿರುವ ಕೂದಲು ಉಗುರು ಮುಂತಾದವುಗಳು, ಇನ್ನೂ ಒಳಗಿರುವ ಎಲುಬು ಮಜ್ಜೆ ಮುಂತಾದವುಗಳು, ಹೊರಗಿನ ಕಲ್ಲು ಮಣ್ಣು ಮುಂತಾದವುಗಳು– ಇವೆಲ್ಲ ಪೃಥಿವೀಧಾತು. ಶರೀರದೊಳಗಿನ ಪಿತ್ತ, ಶ್ಲೇಷ್ಮ, ಬೆವರು–ಮುಂತಾದವೂ ಹೊರಗಿನ ಕೆರೆ ಕಟ್ಟೆ ಸಮುದ್ರ ಮೋಡ ಮುಂತಾದವುಗಳೆಲ್ಲವೂ ಆಪಧಾತು. ಶರೀರದಲ್ಲಿರುವ ಉಷ್ಣವು, ಅರಗಿಸುವ ಶಕ್ತಿಯು, ಹೊರಗಿನ ಬೆಂಕಿ ಮುಂತಾದವು ತೇಜೋಧಾತು. ಒಳಗಿರುವ ಉಸಿರು ಮುಂತಾದದ್ದು ಹೊರಗಿನ ಗಾಳಿ ಮುಂತಾದದ್ದು ವಾಯುಧಾತು. ಇವುಗಳೂ ಇವುಗಳ ವಿಕಾರಗಳೂ ರೂಪಸ್ಕಂಧವೇ. ಆದ್ದರಿಂದ ಮಹಾಭೂತಗಳ ತಿಳಿವಳಿಕೆಯಿಂದ ರೂಪಸ್ಕಂಧದ ತಿಳಿವಳಿಕೆಯುಂಟಾಗುತ್ತದೆ; ಇಂದ್ರಿಯವಿಷಯಗಳ ಸ್ಪರ್ಶದಿಂದ ವೇದನಾಸ್ಕಂಧದ ತಿಳಿವು ಆಗುತ್ತದೆ; ಇಂದ್ರಿಯಜ್ಞಾನದಿಂದ ಸಂಜ್ಞಾಸ್ಕಂಧದ ತಿಳಿವು ಆಗುತ್ತದೆ; ವಿಷಯವಿಷಯಿಭಾವದ ತಿಳಿವಿನಿಂದ ವಿಜ್ಞಾನಸ್ಕಂಧದ ತಿಳಿವು ಆಗುತ್ತದೆ.

ಇಂದ್ರಿಯಗಳು ಆರು (ಚಕ್ಷು, ಶ್ರೋತ್ರ, ಘ್ರಾಣ, ಜಿಹ್ವಾ, ಕಾಯ, ಮನ); ಹೊರಗಿನ ವಿಷಯಗಳು ಆರು (ರೂಪ, ಶಬ್ದ, ಗಂಧ, ರಸ, ಸ್ಪ್ರಷ್ಟವ್ಯ, ಧರ್ಮ; ಈ ಇಂದ್ರಿಯಗಳಿಂದ ಆಗುವ ವಿಷಯವಿಜ್ಞಾನಗಳು ಆರು; ಇಂದ್ರಿಯಗಳ ಮೂಲಕ ವಿಜ್ಞಾನವಾಗುವಾಗ ಇಂದ್ರಿಯ, ವಿಷಯ, ವಿಜ್ಞಾನ – ಇವುಗಳ ಸೇರುವಿಕೆಯೆಂಬ ಸ್ಪರ್ಶಗಳು ಆರು; ಆ ಸ್ಪರ್ಶಗಳಿಂದ ಆಗುವ ವೇದನೆಗಳು ಆರು; ಆ ವೇದನೆಗಳಿಂದ

ಆಗುವ ತೃಷ್ಣೆಗಳು ಆರು. ಇಷ್ಟನ್ನೂ ವಿಂಗಡಿಸಿ ಚೆನ್ನಾಗಿ ನೋಡಿದವನಿಗೆ ಇವುಗಳಿಗೆ ಒಂದೂ ತಾನೆಂದಾಗಲಿ ತನ್ನದೆಂದಾಗಲಿ ಹೇಳುವದಕ್ಕೆ ಬರುವದೇ ಇಲ್ಲ. ಇವುಗಳೆಲ್ಲ ಸ್ಕಂಧಮಯವಾಗಿರುವವು; ಸ್ಕಂಧಗಳಲ್ಲಿ ಯಾವದೊಂದೂ ತಾನಲ್ಲ, ತನ್ನದೂ ಅಲ್ಲ.

ಸ್ಕಂಧಗಳ ಸ್ವಭಾವವೇನು? ಇವುಗಳು ಯಾವವೂ ನಮ್ಮ ವಶದಲ್ಲಿರುವದಿಲ್ಲ. 'ನನ್ನ ರೂಪವು ಹೀಗಾಗಬೇಕು, ಹೀಗಾಗಬಾರದು' ಎಂದು ಸುಮ್ಮನೆ ಇಚ್ಛೆಯಂತೆ ಈ ರೂಪಾದಿಗಳನ್ನು ಮಾರ್ಪಡಿಸುವದಕ್ಕೆ ಆಗುವದೇ ಇಲ್ಲ. ಸ್ಕಂಧಗಳೆಲ್ಲವೂ ಅನಿತ್ಯವಾಗಿರುತ್ತವೆ. ಇವುಗಳಲ್ಲಿ ಯಾವದೊಂದೂ ಇದ್ದಂತೆ ಇರುವದಿಲ್ಲ. ಇವುಗಳೆಲ್ಲವೂ ದುಃಖಮಯವಾಗಿರುತ್ತವೆ. ಏಕೆಂದರೆ ಇಂದ್ರಿಯ, ವಿಷಯ, ವಿಜ್ಞಾನ – ಈ ಮೂರರ ಸಂಗಮರೂಪವಾದ ಸ್ಪರ್ಶದಿಂದ ಸುಖವುಂಟಾದಾಗ ರಾಗವೂ ದುಃಖವುಂಟಾದಾಗ **ಪ್ರತಿಘವೂ** (ಪ್ರತೀಕಾರಬುದ್ಧಿಯೂ), ಸುಖ ದುಃಖೋದಾಸೀನವಾದ ವೇದನೆಯುಂಟಾದಾಗ **ಅವಿದ್ಯೆ**ಯೂ ಉಂಟಾಗುತ್ತದೆ. ಯಾವನಿಗೆ ರಾಗವು ತೊಲಗಿಲ್ಲವೋ ಪ್ರತಿಘವು ಅತ್ತ ಸರಿಯಲಿಲ್ಲವೋ ಅವಿದ್ಯೆಯು ನಾಶವಾಗಿಲ್ಲವೋ ಅವನಿಗೆ ಈ ಜನ್ಮದಲ್ಲಿ ಸಂಸಾರದುಃಖವು ಕೊನೆಗಾಣುವ ಸಂಭವವಿರುವದೇ ಇಲ್ಲ.

ಯಾವದು ಅನಿತ್ಯವಾಗಿಯೂ ದುಃಖರೂಪವಾಗಿಯೂ ಮಾರ್ಪಡುತ್ತಲೇ ಇರುವ ಸ್ವಭಾವವುಳ್ಳದ್ದಾಗಿಯೂ ಇರುವದೋ ಅದನ್ನು ವಿವೇಕಿಯಾದವನು ತಾನೆಂದಾಗಲಿ ತನ್ನದೆಂದಾಗಲಿ ಎಣಿಸಲಾರನು. ''ಈ ಚಕ್ಷುರಿಂದ್ರಿಯವು ಹುಟ್ಟು ಹೊಂದುಗಳುಳ್ಳದ್ದು ದುಃಖರೂಪವಾದದ್ದು, ನಾನು ಚಕ್ಷುವಲ್ಲ; ರೂಪವು ಹುಟ್ಟುಹೊಂದುಗಳುಳ್ಳದ್ದು ದುಃಖರೂಪವಾದದ್ದು, ನಾನು ರೂಪವಲ್ಲ; ಚಕ್ಷುವಿನಿಂದ ಆಗುವ ರೂಪವಿಜ್ಞಾನವು ಹುಟ್ಟುಹೊಂದುಗಳುಳ್ಳದ್ದು ದುಃಖರೂಪವಾದದ್ದು, ನಾನು ರೂಪವಿಜ್ಞಾನವಲ್ಲ; ಚಕ್ಷು, ರೂಪ, ವಿಜ್ಞಾನ– ಇವುಗಳ ಸ್ಪರ್ಶವು ಹುಟ್ಟುಹೊಂದುಗಳುಳ್ಳದ್ದು ದುಃಖರೂಪವಾದದ್ದು, ನಾನು ಚಕ್ಷುವಿನ ಸ್ಪರ್ಶವಲ್ಲ; ಚಕ್ಷುವಿನ ಸ್ಪರ್ಶದಿಂದ ಆಗುವ ವೇದನೆಯು ಹುಟ್ಟುಹೊಂದುಗಳುಳ್ಳದ್ದು ದುಃಖರೂಪವಾದದ್ದು, ನಾನು ಈ ವೇದನೆಯಲ್ಲ; ಚಕ್ಷುವಿನಿಂದ ಆಗುವ ವೇದನೆಯು ಹುಟ್ಟಿಸುವ ತೃಷ್ಣೆಯು ಹುಟ್ಟು ಹೊಂದುಗಳುಳ್ಳದ್ದು ದುಃಖರೂಪವಾದದ್ದು ನಾನು ಈ ತೃಷ್ಣೆಯಲ್ಲ''– ಎಂದೀ

ಪರಿಯಲ್ಲಿ ಮೇಲೆ ಹೇಳಿದ ಚಕ್ಷು, ಶ್ರೋತ್ರ, ಘ್ರಾಣ, ಜಿಹ್ವಾ, ಕಾಯ, ಮನ – ಎಂಬ ಷಡಾಯತನಗಳು, ಅವುಗಳಿಗೆ ವಿಷಯವಾಗಿರುವ ಹೊರಗಿನ ಆರು ಆಯತನಗಳು, ಈ ಆಯತನಗಳ ವಿಜ್ಞಾನಗಳು, ಅವುಗಳಿಂದಾಗುವ ಸ್ಪರ್ಶಗಳು, ಅವುಗಳಿಂದಾಗುವ ವೇದನೆಗಳು, ಅವುಗಳ್ಳಿಂದಾಗುವ ತೃಷ್ಣೆಗಳು 'ಇವುಗಳಲ್ಲಿ ಯಾವದೊಂದೂ ನಾನಲ್ಲ, ಇವುಗಳಲ್ಲಿ ಯಾವದೊಂದೂ ನನ್ನದಲ್ಲ' ಎಂಬ ವಿವೇಕವುಂಟಾದವನಿಗೆ ರಾಗಾದ್ಯನುಶಯಗಳಿರುವದಿಲ್ಲ. ಅವನಿಗೆ ಸಂಸಾರದ ದುಃಖವೂ ಕೊನೆಗಾಣುವದು – ಹೀಗೆಂಬುದು ಬೌದ್ಧರ ಅನಾತ್ಮವಾದದ ಸಾರವು.

ಮೇಲೆ ವರ್ಣಿಸಿರುವ ಅನಾತ್ಮವಾದವನ್ನು ಅವಧಾನವಿಟ್ಟು ನೋಡಿದವರಿಗೆ ಒಂದು ಮುಖ್ಯ ವಿಷಯವು ಹೊಳೆಯುವದು. ಅದೇನೆಂದರೆ ಪ್ರಕೃತಿಯು ಪುರುಷನ ಧರ್ಮವಲ್ಲವೆಂದು ಸಾಂಖ್ಯರು ಹೇಳುವಂತೆಯೇ ಬೌದ್ಧರೂ ಸ್ಕಂಧಪಂಚಕವೆಂಬ ಹೆಸರಿನಿಂದ ಅದೇ ಪ್ರಕೃತಿಯ ಅನಾತ್ಮತೆಯನ್ನು ಪ್ರಕಟಪಡಿಸಿರುತ್ತಾರೆ. ಆದರೆ ಸಾಂಖ್ಯ ಮತದಲ್ಲಿ ಪ್ರಕೃತಿಯು ಸ್ಕಂಧಪಂಚಕ ದಂತೆಯೇ ಯಾವಾಗಲೂ ಮಾರ್ಪಡುವದಾದರೂ ಅವರ ಮತದಲ್ಲಿ ಪ್ರಕೃತಿಯು ನಿತ್ಯವಾಗಿರುತ್ತದೆ. ಅನಿತ್ಯವಲ್ಲ. ಈ ಪ್ರಕೃತಿಯನ್ನು ಯಾವಾಗಲೂ ಬೆಳಗುತ್ತಿರುವ ಪುರುಷನು ಶುದ್ಧನಾಗಿ ಚೈತನ್ಯಸ್ವರೂಪನಾಗಿರುತ್ತಾನೆಂಬುದೊಂದು ಸಾಂಖ್ಯರಲ್ಲಿರುವ ಹೆಚ್ಚಿನ ವಾದವಾಗಿರುತ್ತದೆ.

ಬೌದ್ಧರ ಅನಾತ್ಮವಾದದ ಯುಕ್ತಿಗಳು ವೇದಾಂತದ ಗ್ರಂಥಗಳಲ್ಲಿ ಹೇರಳವಾಗಿ ಕಂಡುಬರುತ್ತವೆ. ನಮ್ಮ ಹೊರಗೆ ಇರುವ ಭೂತಭೌತಿಕವಸ್ತುಗಳು ಹೇಗೆ ನಮ್ಮ ಸ್ವರೂಪವಲ್ಲವೋ ಹಾಗೆಯೇ ನಮ್ಮ ಶರೀರ, ಪ್ರಾಣ, ಮನಸ್ಸು, ಬುದ್ಧಿ, ಅಹಂಕಾರ – ಇವೂ ನಮ್ಮ ಸ್ವರೂಪವಲ್ಲ, ನಮ್ಮ ಆತ್ಮನಲ್ಲ – ಎಂದು ವೇದಾಂತಿಗಳೂ ಹೇಳುವರು. ಆದರೆ ಈ ಅನಾತ್ಮಸಮುದಾಯವನ್ನೆಲ್ಲ ತನ್ನ ಇರವಿನಿಂದ ಬೆಳಗುತ್ತಿರುವ ಆತ್ಮನು ಸ್ವಯಂಪ್ರಕಾಶನೆಂಬುದೂ, ಆ ಆತ್ಮನ ಇರವಿನ ದೃಷ್ಟಿಯಿಂದ ನೋಡಿದಾಗ ಬೌದ್ಧರ ಸ್ಕಂಧಗಳು ಅಥವಾ ಸಾಂಖ್ಯರ ಪ್ರಕೃತಿಯು ಅಪರಮಾರ್ಥವಾಗಿಬಿಡುವವೆಂಬುದೂ, ವೇದಾಂತದರ್ಶನಕ್ಕೆ ಮೀಸಲು. ಆ ತತ್ತ್ವದ ಭೂಮಿಕೆಯನ್ನು ಸಾಂಖ್ಯವಾಗಲಿ ಬೌದ್ಧಮತವಾಗಲಿ ಏರಲೇ ಇಲ್ಲ.

★★★★★

# ಭರತಖಂಡದಲ್ಲಿ ಬೌದ್ಧಮತವು ಕಣ್ಮರೆಯಾದದ್ದು

**- ಶ್ರೀ ಶ್ರೀಸಚ್ಚಿದಾನಂದೇದ್ರಸರಸ್ವತೀ ಸ್ವಾಮಿಗಳವರು**

ಬೌದ್ಧಮತವು ತನ್ನ ಮಾತೃಭೂಮಿಯಲ್ಲಿ ಅದು ಏಕೆ ಮಾಯವಾಯಿತು ಎಂದು ವಿಚಾರಮಾಡುವ ಮೊದಲು **ಶ್ರೀಯುತ ಟಿ.ಆರ್.ವಿ.ಮೂರ್ತಿ**ಯವರು ಬರೆದಿರುವ "**ಬೌದ್ಧತತ್ತ್ವವಿಚಾರದ ಕೇಂದ್ರ ಸಿದ್ಧಾಂತ (The Central Philosophy of Buddhism)**" - ಎಂಬ ಗ್ರಂಥದ ಪರಿಚಯವನ್ನು ಮೊದಲು ಮಾಡಿಕೊಳ್ಳೋಣ.

ಸಂಸ್ಕೃತ ಭಾಷೆಯನ್ನು ಅಭ್ಯಾಸಮಾಡುವದು ದೂರಸರಿಯುತ್ತಾ ಬಂದಿರುವ ಈ ಕಾಲದಲ್ಲಿ ನಮ್ಮ ದೇಶದ ಪುರಾತನಸಂಸ್ಕೃತಿಯನ್ನು ಮನವರಿಕೆ ಮಾಡಿಕೊಳ್ಳುವದು ಜನರಿಗೆ ಕಡುಕಷ್ಟವಾಗಿರುವದೆಂಬುದು ಸ್ವಾಭಾವಿಕವಾಗಿದೆ. ಆದರೆ ಈಶ್ವರನ ಕೃಪೆಯಿಂದ ಅನಿರೀಕ್ಷಿತ ಸ್ಥಲಗಳಲ್ಲಿ ಅನೇಕ ಕಾರಣಗಳಿಂದ ಮತ್ತೆ ಸಂಸ್ಕೃತ ಗ್ರಂಥಗಳ ಅಭ್ಯಾಸಕ್ಕೆ ಉತ್ತೇಜನವು ದೊರೆಯುತ್ತಿದೆ. ಪಾಶ್ಚಾತ್ತ್ಯರ ನಾಗರಿಕತೆಯ ಸಂಪರ್ಕದಿಂದ ನಮಗೆ ಪುರಾತತ್ತ್ವಶೋಧ ಶಾಸ್ತ್ರ, ಮಾನವಶಾಸ್ತ್ರ ಭಾಷಾಶಾಸ್ತ್ರ, ಪುರಾಣಚಿಂತನಶಾಸ್ತ್ರ, ತುಲಾನಾತ್ಮಕಮತ ವಿಮರ್ಶನ ಶಾಸ್ತ್ರ ಮುಂತಾದವುಗಳಲ್ಲಿ ಆಸಕ್ತಿಯುಂಟಾಗಿ ಭಾರತದೇಶದವರ ವಿಚಾರಸರಣಿಯ ಮತ್ತು ವಾಙ್ಮಯದ ವಿಷಯದಲ್ಲಿ ಹೊಸಹೊಸ ಶೋಧಗಳು ಗೋಚರವಾಗಿ ರುತ್ತವೆ.

ಪೌರಸ್ತ್ಯ ವಾಙ್ಮಯವಿಚಾರದಲ್ಲಿ ಪರಿಣತರಾದ ಆಧುನಿಕವಿಜ್ಞರು ಅನೇಕ ವೈದಿಕ, ಜೈನಬೌದ್ಧ ಗ್ರಂಥಗಳನ್ನು ಹೊರಗೆಡಹಿರುತ್ತಾರೆ. ಅವುಗಳಿಂದ ನಮ್ಮ ಹಲವು ಅಭಿಪ್ರಾಯಗಳನ್ನು ಸಂಪೂರ್ಣವಾಗಿ ಬದಲಾಯಿಸಿಕೊಳ್ಳಬೇಕಾಗಿ ಬಂದಿರುತ್ತದೆ. ಇಂಥ ವಿಚಾರಪ್ರಚೋದಕ ವಾದ ಗ್ರಂಥಗಳ ಪೈಕಿ ವಾರಾಣಸಿಯ ಹಿಂದೂ ಸಕಲವಿದ್ಯಾನಿಲಯದಲ್ಲಿ ಭಾರತನಾಗರಿಕತೆ ಮತ್ತು ಸಂಸ್ಕೃತಿಯ ಮಹಾಧ್ಯಾಪಕರಾಗಿರುವ ಶ್ರೀ ಟಿ.ಆರ್.ವಿ. ಮೂರ್ತಿ ಎಂ.ಎ, ಡಿ.ಲಿಟ್. ಇವರು

ಇಂಗ್ಲಿಷಿನಲ್ಲಿ ಬರೆದಿರುವ ಮಾಧ್ಯಮಿಕ ಸಿದ್ಧಾಂತವಿಚಾರಪ್ರಧಾನವಾಗಿರುವ '**ಬೌದ್ಧ ತತ್ತ್ವವಿಚಾರದ ಕೇಂದ್ರಸಿದ್ಧಾಂತ**' ಎಂಬರ್ಥದ ನಾಮಧೇಯವುಳ್ಳ ಇಂಗ್ಲಿಷು ಗ್ರಂಥವು ಒಂದಾಗಿರುತ್ತದೆ.

ಈ ಗ್ರಂಥವನ್ನು ಬರೆದಿರುವ ಶ್ರೀ ಮೂರ್ತಿಯವರು ವೇದಾಂತದ ಶಾಸ್ತ್ರಿ ಪರೀಕ್ಷೆಯಲ್ಲಿಯೂ ವ್ಯಾಕರಣದ ಆಚಾರ್ಯಪರೀಕ್ಷೆಯಲ್ಲಿಯೂ ಉತ್ತೀರ್ಣರಾಗಿದ್ದು ಆಕ್ಸ್‌ಫರ್ಡ್ ಸಕಲವಿದ್ಯಾ ನಿಲಯದಲ್ಲಿ ಭಾಷಣಮಾಡಿದ ಪ್ರೌಢವಿದ್ವಾಂಸರಾಗಿರುತ್ತಾರೆ. ಇವರು ವಿಚಾರಕ್ಕೆ ತೆಗೆದುಕೊಂಡಿರುವ ವಿಷಯವು ಭಾರತತತ್ತ್ವಶಾಸ್ತ್ರದ ಜಿಜ್ಞಾಸುಗಳಿಗೆಲ್ಲ ಆತ್ಮವಶ್ಯವಾಗಿ ವಿಚಾರಣೀಯವಾದದ್ದಾಗಿರುತ್ತದೆ. ಬೌದ್ಧಮತವು ನಮ್ಮ ದೇಶದಲ್ಲಿ ಪ್ರಚಾರಕ್ಕೆ ಬಂದದ್ದು ಇಪ್ಪತ್ತು ಶತಮಾನಗಳ ಹಿಂದೆ. ಅದು ವೈದಿಕಧರ್ಮದಲ್ಲಿ ಅನೇಕ ಸುಧಾರಣೆಗಳನ್ನು ಮಾಡುವದಕ್ಕೆ ಯತ್ನಿಸಿತು. ಬುದ್ಧನೂ ಅವನ ಅನುಯಾಯಿಗಳೂ ಜನರ ನೀತಿಯನ್ನೇ ಅಲ್ಲದೆ ವಿಚಾರಸರಣಿಯನ್ನೂ ಸಂಪೂರ್ಣವಾಗಿ ಮಾರ್ಪಡಿಸಿದ ಅದ್ಭುತವನ್ನು ತೋರಿಸಿರುತ್ತಾರೆ. ಈಗ ನಮ್ಮ ಧಾರ್ಮಿಕ ವಾಙ್ಮಯದಲ್ಲಿ ಬೌದ್ಧಪ್ರಚಾರಕ್ಕೆ ಒಳಗಾಗದ ಭಾಗವನ್ನು ಕಾಣುವದೇ ಕಷ್ಟವಾಗಿಬಿಟ್ಟಿರುತ್ತದೆ. ಪ್ರಚಾರದಲ್ಲಿರುವ ಷಡ್ದರ್ಶನಗಳಲ್ಲಿಯೂ ಬೌದ್ಧರ ವಿಚಾರಗಳ ವಿಮರ್ಶೆಯು ಕಾಣಬರುತ್ತಿದೆ; ಅವರ ವಿಚಾರಸರಣಿಯನ್ನು ಆಯಾ ದರ್ಶನಕಾರರೂ ಭಾಷ್ಯಕಾರರೇ ಮುಂತಾದವರೂ ಅನುಸರಿಸಿರುತ್ತಾರೆ. ಸದ್ಯಕ್ಕೆ ಬೌದ್ಧಧರ್ಮವು ಭಾರತಭೂಮಿಯಲ್ಲಿ ನಾಮಾವಶೇಷವಾಗಿದ್ದು ಈಗತಾನೆ ಅಲ್ಲಲ್ಲಿ ತನ್ನ ಹೆಚ್ಚುಗಾರಿಕೆಯನ್ನು ಜನರ ಮುಂದಿಡುವದಕ್ಕೆ ಪ್ರಾರಂಭಿಸಿದೆ. ಆ ಧರ್ಮಕ್ಕೆ ಸಂಬಂಧಪಟ್ಟ ಗ್ರಂಥಗಳು ಸಂಸ್ಕೃತ, ಪಾಲಿ, ತಿಬ್ಬೆತ್ತಿ, ಚೀನ, ಮುಂತಾದ ಭಾಷೆಗಳಲ್ಲಿ ಹೇರಳವಾಗಿರುತ್ತವೆ; ಅವುಗಳಲ್ಲಿ ಹಲವು ಅಜ್ಞಾತವಾಸದಲ್ಲಿದ್ದುಕೊಂಡಿದ್ದು ಈಗ ಮತ್ತೆ ಬೆಳಕಿಗೆ ಬರುತ್ತಿವೆ. ಆ ಗ್ರಂಥಗಳನ್ನು ಇಂಗ್ಲಿಷಿನಲ್ಲಿಯೂ ಇನ್ನು ಕೆಲವು ಪಾಶ್ಚಾತ್ಯ ಭಾಷೆಗಳಲ್ಲಿಯೂ ವಿಮರ್ಶಿಸಿ ವಿದ್ವಾಂಸರು ಬೌದ್ಧಸಿದ್ಧಾಂತದ ನಿಜವನ್ನು ಕಂಡುಹಿಡಿಯುವದಕ್ಕೆ ಪ್ರಯತ್ನಿಸುತ್ತಿರುತ್ತಾರೆ. ಈ ವಿವಿಧಾಭಿಪ್ರಾಯಗಳನ್ನೆಲ್ಲ ವಿಮರ್ಶಿಸಿ ವಾಚಕರಿಗೆ ಕುತೂಹಲ ನಿವೃತ್ತಿಯಾಗುವಂತೆಯೂ ವಿಷಯವಿಮರ್ಶೆಯಲ್ಲಿ ಆದರವುಂಟಾಗುವಂತೆಯೂ ಶ್ರೀ ಮೂರ್ತಿಯವರ, ಇಲ್ಲಿ ಸಂಗ್ರಹಿಸಿಕೊಟ್ಟಿರುತ್ತಾರೆ. ಈ ಎಲ್ಲಾ ಕಾರಣಗಳಿಂದ ಗ್ರಂಥವು ವಿಚಾರ ಶೀಲರಿಗೆ ಮನನೀಯವಾಗಿರುತ್ತದೆ.

ಪ್ರಕೃತಗ್ರಂಥವನ್ನು ಚೆನ್ನಾಗಿ ವಿಮರ್ಶೆ ಮಾಡಬೇಕೆಂಬುದಕ್ಕೆ ಮತ್ತೊಂದು ಮಹಾಕಾರಣವಿರುತ್ತವೆ. ಅದೇನೆಂದರೆ ಇತರ ದೇಶಗಳಿಗಿಂತಲೂ ನಮ್ಮ ದೇಶದಲ್ಲಿ ಬೌದ್ಧಮತದ ವಿಷಯಕ್ಕೆ ಅಜ್ಞಾನವು ಹೆಚ್ಚಿನ ಅಂಧತಾಮಿಸ್ರಸ್ಥಿತಿಯಲ್ಲಿರುತ್ತದೆ. ಬೌದ್ಧರು ನಾಸ್ತಿಕರು, ಆಚಾರವಿರೋಧಿಗಳು, ಕ್ಷಣಿಕವಾದಿಗಳು, ಶೂನ್ಯವಾದಿಗಳು ಎಂದು ಹಗುರವಾದ ಮಾತುಗಳಿಂದ ಅವರ ಮತದಲ್ಲಿ ಅನಾದರವನ್ನು ಹುಟ್ಟಿಸುವ ವಾಕ್ಯಗಳು ಈಚಿನವರ ಗ್ರಂಥಗಳಲ್ಲಿ ಮಾತ್ರವೇ ಅಲ್ಲ, ಮಾನ್ಯರೆಂದು ನಾವು ಭಾವಿಸಿರುವ ಆಚಾರ್ಯರುಗಳ ಗ್ರಂಥಗಳಲ್ಲಿಯೂ ಕಂಡುಬರುತ್ತವೆ. ಈ ಅಭಿಪ್ರಾಯಗಳಿಗೆ ಯಾವ ಬುಡವೂ ಇಲ್ಲವೆಂದು ಈ ಗ್ರಂಥಕರ್ತರು ತೋರಿಸಿಕೊಟ್ಟಿರುತ್ತಾರೆ. ಪಾಶ್ಚಾತ್ಯರಲ್ಲಿಯೂ ಅನೇಕರು ಬೌದ್ಧರ ಶೂನ್ಯವಾದದ ಸಿದ್ಧಾಂತವು ಪರಮಾರ್ಥವೆ ಇಲ್ಲವೆಂದು ಬೋಧಿಸುತ್ತದೆಯೆಂಬ ನಿರ್ಣಯಕ್ಕೆ ಬಂದಿರುತ್ತಾರೆ; ಮತ್ತೆ ಕೆಲವರು ಬೌದ್ಧರ ಈ ಸಿದ್ಧಾಂತಕ್ಕೆ ವೇದಾಂತಕ್ಕೂ ಯಾವ ಹೆಚ್ಚು ಕಡಿಮೆಯೂ ಇಲ್ಲವೆಂದು ವಾದಿಸುತ್ತಾರೆ. ಅವರ ಮತವೂ ಸರಿಯಲ್ಲವೆಂದು ಶ್ರೀಮೂರ್ತಿಗಳವರು ಇಲ್ಲಿ ಪ್ರತಿಪಾದಿಸಿರುತ್ತಾರೆ. ಹಾಗಾದರೆ, ಬೌದ್ಧರ ಮತಪ್ರಭೇದಗಳು ಯಾವವು? ನಿಜವಾದ ಶೂನ್ಯವಾದವು ಯಾವದು? ಎಂಬ ಪ್ರಶ್ನೆಯು ನಿಜವನ್ನು ತಿಳಿಯಬೇಕೆನ್ನುವವರ ಮನಸ್ಸಿನಲ್ಲಿ ಏಳುವದು ಸ್ವಾಭಾವಿಕವಷ್ಟೆ? ಈ ಪ್ರಶ್ನೆಗಳಿಗೆ ಇಲ್ಲಿ ತೃಪ್ತಿಕರವಾದ ಉತ್ತರವು ದೊರೆಯುವಂತಿದೆ. ಆದ್ದರಿಂದ ಪ್ರಕೃತಗ್ರಂಥವು ವಿಚಾರಕರಿಗೆ ಮನನೀಯವಾಗಿರುತ್ತದೆ.

ಭಾರತತತ್ತ್ವಶಾಸ್ತ್ರದಲ್ಲಿ ಮುಖ್ಯವಾಗಿ ಎರಡು ಸಂಪ್ರದಾಯಗಳು ಬೆಳೆದುಬಂದಿಸುತ್ತವೆ ಎಂಬುದು ಗ್ರಂಥಕರ್ತರ ಪ್ರಧಾನಾಶಯವು. ಉಪನಿಷತ್ತುಗಳು ಅವುಗಳ ಕಾರಣದಿಂದ ಹುಟ್ಟಿ ಬೆಳೆದಿರುವ ಬ್ರಾಹ್ಮಣರ ದರ್ಶನಗಳೂ ಆತ್ಮ – ಸರ್ವವಿಕಾರಗಳಿಗೂ ಆಧಾರವಾಗಿರುವ ಕೂಟಸ್ಥವಾಗಿರುವ ಒಳಗಿರುವ ಒಂದೇ ಒಂದಾದ ತಿರುಳು ಇವೆ ಎಂಬ ದೃಷ್ಟಿಯನ್ನವಲಂಬಿಸಿಕೊಂಡಿರುತ್ತವೆ. ಬುದ್ಧನೂ ಅವನ ಅನುಯಾಯಿಗಳೂ ನೈರಾತ್ಮ್ಯದೃಷ್ಟಿಯನ್ನು ಅವಲಂಬಿಸಿಕೊಂಡು ಬೆಳೆದಿರುತ್ತಾರೆ (ಪುಟ 10-11). ಈ ಸಂಪ್ರದಾಯಗಳೆರಡರಲ್ಲಿಯೂ ಶಾಖೋಪಶಾಖೆಗಳು ಒಡೆದುಕೊಂಡಿವೆ, ಸ್ವಯಂ ಕಲಹಗಳು, ಸಾಮರಸ್ಯ ಪ್ರಯತ್ನಗಳೂ ನಡೆದಿರುತ್ತವೆ; ಇವೆರಡು ಸಂಪ್ರದಾಯಗಳಿಗೂ ವಾದಪ್ರತಿವಾದಗಳು ಆಗಿರುತ್ತವೆ. ಆದರೆ ಇವುಗಳು ಎಂದು ಒಂದಾದದ್ದಾಗಲಿ,

ಅಥವಾ ಎರಡನ್ನೂ ಒಳಗೊಂಡ ಹೊಸದೊಂದು ದರ್ಶನವ ಉದಯವಾಗಲಿ ಆದದ್ದಿಲ್ಲ. ಬ್ರಾಹ್ಮಣದರ್ಶನಗಳು ಇರವೇ ಪರಮಾರ್ಥವೆಂಬುದನ್ನೂ ಬೌದ್ಧ ಸಂಪ್ರದಾಯಗಳು ಆಗುವಿಕೆಯೇ ಪರಮಾರ್ಥವೆಂಬುದನ್ನೂ ಪಟ್ಟಾಗಿ ಹಿಡಿದುಕೊಂಡಿವೆ. ವೈದಿಕ ಸಂಪ್ರದಾಯಕ್ಕೆ ಸಾಮಾನ್ಯವೂ ಇದ್ದು ಕೊಂಡಿರುವದೂ ಸ್ಥಿತವಾಗಿರುವದೂ ಬೇಕಾಗಿವೆ; ಬೌದ್ಧ ಸಂಪ್ರದಾಯಕ್ಕೆ ವಿಶೇಷವೂ, ಅನುಕ್ರಮವೂ, ಗತಿಯೂ ಬೇಕಾಗಿದೆ. ಬ್ರಾಹ್ಮಣದರ್ಶನಗಳು ವಿಧಿಮುಖಪ್ರತಿಪಾದನೆಗೂ ಬೌದ್ಧದರ್ಶನಗಳು ನಿಷೇಧಮುಖ ಪ್ರತಿಪಾದನೆಗೂ ಒಲಿಯುತ್ತವೆ. ಮೊದಲನೆಯ ಸಂಪ್ರದಾಯವು ಮತಪ್ರಧಾನವಾಗಿಯೂ ತರ್ಕಾವಲಂಬಿಯಾಗಿಯೂ ಇರುತ್ತದೆ. ಎರಡನೆಯದು ವ್ಯವಹಾರಪ್ರಧಾನವಾಗಿಯೂ ಚಿಕಿತ್ಸಾ ಬುದ್ಧಿಪ್ರಧಾನವಾಗಿಯೂ ಇದೆ. ಬ್ರಾಹ್ಮಣದರ್ಶನಗಳು ಮೂಲಪ್ರಮಾಣವಾಗಿ ವೇದವನ್ನು ನಂಬಿಕೊಂಡಿವೆ; ಬೌದ್ಧಸಂಪ್ರದಾಯವು ಅನುಭವವಿಮರ್ಶೆಗೇ ಉತ್ತೇಜಕವಾಗಿವೆ. ಹೀಗೆಂಬುದು ಗ್ರಂಥಕರ್ತರ ಅಭಿಪ್ರಾಯ.

ಗ್ರಂಥಕರ್ತರು ಮತ್ತೊಂದು ಅಭಿಪ್ರಾಯವನ್ನು ಹೊರಗೆಡವಿರುತ್ತಾರೆ. ಈ ಎರಡ ಸಂಪ್ರದಾಯಗಳಲ್ಲಿಯೂ ಪೂರ್ವಾಪರಸಂಗತವಾಗಿರಬೇಕಾಗಿಬಂದ ಆವಶ್ಯಕತೆಯಿಂದ ಕಾಲ ಕ್ರಮದಲ್ಲಿ ನಿರಪೇಕ್ಷಸಿದ್ಧಾಂತವು (Absolutism) ಅಥವಾ ಅದ್ವೈತಸಿದ್ಧಾಂತವು ಕೊನೆಯ ಮಾತಾಯಿತು. ಅದ್ವೈತಸಿದ್ಧಾಂತಕ್ಕೂ ಏಕತ್ವಸಿದ್ಧಾಂತಕ್ಕೂ ತಾರತಮ್ಯವಿದೆ. ಏಕತ್ವಸಿದ್ಧಾಂತದಲ್ಲಿ ಪರಮಾರ್ಥವು ಒಂದೇ ಎಂದು ಮಾತ್ರ ಹಿಡಿಯಲಾಗಿರುತ್ತದೆ; ಅದ್ವೈತದಲ್ಲಿ ದ್ವೈತಮಿಥ್ಯಾತ್ವವನ್ನು ಬಾಯಿಬಿಟ್ಟು ಅಲ್ಲಗಳೆದಿರುತ್ತದೆ. ಇದಕ್ಕೆ ಸಾಕ್ಷಾತ್ತಾಗಿ ಯುಕ್ತಿಗಳನ್ನು ಕೊಡದೆ, ಹುಸಿತೋರಿಕೆಯ ನಿಷೇಧದಿಂದಲೇ ಇದನ್ನು ಸಾಧಿಸಿರುತ್ತದೆ. ಉಪನಿಷತ್ತುಗಳಲ್ಲಿ ಏಕತ್ವವಾದವು ಇದ್ದೇ ಇತ್ತು; ಇದನ್ನು ಉತ್ತರಮೀಮಾಂಸೆಯ ಸಹಾಯದಿಂದ ಪ್ರಾಚೀನ ವೇದಾಂತದರ್ಶನದಲ್ಲಿ ಸಾಧಿಸಲಾಗಿತ್ತು. ಆ ವೇದಾಂತಕ್ಕೆ ಪ್ರಪಂಚಮಿಥ್ಯಾತ್ವವನ್ನಾಗಲಿ ಕರ್ಮಗಳ ನಿಷ್ಪ್ರಯೋಜನತೆಯನ್ನಾಗಲಿ ತೋರಿಸಬೇಕಾದದ್ದಿರಲಿಲ್ಲ. ಗೌಡಪಾದರು ಮತ್ತು ಶಂಕರಾಚಾರ್ಯರ ಕಾಲಕ್ಕೆ ಇದೆಲ್ಲ ಬದಲಾಯಿತು; ಶಬ್ದ ಬ್ರಹ್ಮವಾದವೂ ಈ ಕಾಲಕ್ಕೆ ಬಂದಿತು. ಇದಕ್ಕೆ ಬೌದ್ಧರ ಅದ್ವೈತವಾದದ ಮಾಧ್ಯಮಿಕರ ಶೂನ್ಯವಾದ ಮತ್ತು ಯೋಗಾಚಾರರ ವಿಜ್ಞಪ್ತಿ ಮಾತ್ರವಾದದ ಪ್ರಭಾವವೇ ಕಾರಣ ಎಂಬುದು ಗ್ರಂಥಕರ್ತರ ಸಿದ್ಧಾಂತವು.

ಬೌದ್ಧರ ಮತ್ತು ಜೈನರ ಸಿದ್ಧಾಂತಗಳು ಉಪನಿಷತ್ಸಂಪ್ರದಾಯದಿಂದಾದ ಸೀಳುಹಾದಿಗಳು ಎಂಬ ಪಾಶ್ಚಾತ್ಯವಿಚಾರಶೀಲ ಮತವನ್ನು ಗ್ರಂಥಕರ್ತರು ತಳ್ಳಿಹಾಕಿರುತ್ತಾರೆ. ಬೌದ್ಧ ಮತದಲ್ಲಿ ಸಿದ್ಧಾಂತಪ್ರಭೇದಗಳನ್ನು ಅಸಡ್ಡೆ ಮಾಡುವದೂ ಯುಕ್ತವಲ್ಲವೆಂದೂ ಅವರು ಪ್ರತಿಪಾದಿಸುತ್ತಾರೆ. ಶ್ರೀಮತಿ ರಿಸ್ ಡೇವಿಡ್ಸ್ ಮುಂತಾದವರು ಬೌದ್ಧ ಮತದ ಪ್ರಾರಂಭ ಸ್ಥಿತಿಯಲ್ಲಿ ಆತ್ಮವಾದವೂ ಇತ್ತೆಂದು ಪ್ರತಿಪಾದಿಸಿರುವದನ್ನೂ ಶೀಲಸಮಾಧಿಗಳು ಮಾತ್ರವೇ ಆ ಮತಕ್ಕೆ ಪ್ರಧಾನವಾಗಿತ್ತೆಂದು ವಾದಿಸಿರುವದನ್ನೂ ಗ್ರಂಥಕರ್ತರು ಘಂಟಾಘೋಷವಾಗಿ ತಿರಸ್ಕರಿಸಿರುತ್ತಾರೆ; ಬೌದ್ಧರೆಲ್ಲರೂ ತಮ್ಮ ಸಿದ್ಧಾಂತವು ನೈರಾತ್ಮ್ಯವಾದವೆ ಎಂದಿರುವಂತೆ ಅವರ ಖಂಡನೆಯನ್ನು ಮಾಡಿರುವವರೆಲ್ಲರೂ ಹಾಗೆಂದೇ ಸಾರಿರುತ್ತಾರೆ ಎಂಬುದನ್ನು ತಮ್ಮ ಅಭಿಪ್ರಾಯಕ್ಕೆ ಅವರು ಸಾಕ್ಷಿಯಾಗಿ ಹಿಡಿದಿರುವದಲ್ಲದೆ ಬುದ್ಧನು ನೈರಾತ್ಮವಾದಿಯಾಗಿರಲಾರನೆಂಬುದಕ್ಕೆ ಪ್ರತಿವಾದಿಗಳು ಕೊಟ್ಟಿರುವ ಕಾರಣಗಳನ್ನು ಅವರು ತಿರಸ್ಕರಿಸಿರುತ್ತಾರೆ.

ಮುಖ್ಯವಾಗಿ ಮಾಧ್ಯಮಿಕರ ಸಿದ್ಧಾಂತವು ಹೇಗೆ ಕ್ರಮಕ್ರಮವಾಗಿ ಬೆಳೆಯಿತು ಅದರಿಂದ ಮಿಕ್ಕ ವೈದಿಕಾವೈದಿಕವಿಚಾರಸರಣಿಯ ಮೇಲೆ ಯಾವ ಪರಿಣಾಮವಾಯಿತು, ಆ ಸಿದ್ಧಾಂತದ ಹೆಚ್ಚುಗಾರಿಕೆಯೇನು? ಎಂಬುದನ್ನು ತೋರಿಸಿಕೊಡುವದೇ ಈ ನೂತನ ಗ್ರಂಥದ ಪರಮೋದ್ದೇಶವಾಗಿರುತ್ತದೆ, ಬೌದ್ಧ ಮತದ ವಿಷಯದಲ್ಲಿ ಗ್ರಂಥಕರ್ತರು ಮಾಡಿರುವ ಶೋಧನೆಗಳು ಒಂದು ಮಹಾಸಾಹಸಕೃತ್ಯವಾಗಿರುತ್ತದೆ; ಅವರು ಈ ವಿಷಯದಲ್ಲಿ ಓದಬೇಕಾದದ್ದೆಲ್ಲ ವನ್ನೂ ಓದಿ ತಮ್ಮದೇ ಆದ ಒಂದು ತೀರ್ಮಾನವನ್ನು ಮಾಡಿರುತ್ತಾರೆ.

The Central Philosophy of Buddhism (ಬೌದ್ಧತತ್ತ್ವವಿಚಾರದ ಕೇಂದ್ರ ಸಿದ್ಧಾಂತ) ಎಂಬೀ ಗ್ರಂಥವನ್ನು ಇನ್ನೂ ಒಳಹೊಕ್ಕು ವಿಮರ್ಶೆಗೆ ಕೈಹಾಕುವ ಮುಂಚೆ ಒಂದು ಪ್ರಶ್ನೆಗೆ ನಾವು ಉತ್ತರವನ್ನು ಕಂಡುಕೊಳ್ಳುವದಕ್ಕೆ ಪ್ರಯತ್ನಿಸಬೇಕು. ಬೌದ್ಧಮತವು ಭರತಖಂಡದಲ್ಲಿ ಹುಟ್ಟಿತು, ಬೆಳೆಯಿತು, ಎಲ್ಲೆಲ್ಲಿಯೂ ವ್ಯಾಪಿಸಿತು, ಕೊನೆಗೆ ಹೇಗೋ ಮೈಗರೆಯಿತು. ಈ ಮತದ ಗ್ರಂಥಗಳು ಇನ್ನೂ ಜೀವಂತವಾಗಿವೆ. ಇದರ ಉಪದೇಶಗಳನ್ನು ಇನ್ನೂ ದೇಶಾಂತರದಲ್ಲಿ ಗೌರವದಿಂದ ಕಾಣುವ ಜನರು ಹೆಚ್ಚಿನ ಸಂಖ್ಯೆಯಲ್ಲಿ ಚೀನ, ಜಪಾನ್, ಟಿಬೆಟ್, ಸಿಂಹಳ, ಬರ್ಮ– ಮುಂತಾದ ದೇಶಗಳಲ್ಲಿರುತ್ತಾರೆ; ಅದರ ತತ್ತ್ವೋಪದೇಶದ ಶಾಖೋಪಶಾಖೆಗಳನ್ನು

ಅನುಸರಿಸುವವರೂ ಇರುತ್ತಾರೆ. ಆದರೂ ಈ ತನ್ನ ಮಾತೃಭೂಮಿಯಲ್ಲಿ ಮಾತ್ರ ಅದು ಎಚ್ಚರದಿಂದ ದೀರ್ಘಸ್ವಪ್ನವು ಮಾಯಾವಾಗುವಂತೆ ಮಾಯವಾಗಿಬಿಟ್ಟಿತಲ್ಲ ಇದೇಕೆ?

ಈ ಪ್ರಶ್ನೆಯನ್ನು ಹಿಂದುಗಳು, ಬೌದ್ಧರು, ಮತಗಳ ಇತಿಹಾಸದಲ್ಲಿ ಆದರ ವಿರುವವರು - ಎಲ್ಲರೂ ವಿಚಾರಮಾಡತಕ್ಕದ್ದು ಅವಶ್ಯವು. ಇದುವರೆಗೆ ಈ ವಿಷಯದಲ್ಲಿ ಹೊರಕ್ಕೆ ಬಂದಿರುವ ಅಭಿಪ್ರಾಯಗಳನ್ನು ಇಲ್ಲಿ ವಾಚಕರಮುಂದೆ ಇಡುತ್ತೇನೆ. ವಾಚಕರೂ ಇದನ್ನು ಮನಮುಟ್ಟಿ ವಿಚಾರಮಾಡುವದು ಲಾಭದಾಯಕವೆಂದು ನನ್ನ ಅಭಿಪ್ರಾಯ.

ವೈದಿಕಧರ್ಮದವರ ಪ್ರೋತ್ಸಾಹದಿಂದ ಹಿಂದೂರಾಜರು ಬೌದ್ಧರನ್ನು ಹಿಂಸಿಸಿ ಬಲಾತ್ಕಾರದಿಂದ ಬೌದ್ಧರನ್ನು ಓಡಿಸಿಬಿಟ್ಟರೆಂದು ಕೆಲವರು ಅಭಿಪ್ರಾಯಪಟ್ಟಿರುತ್ತಾರೆ. ಅಭಿನವಶಂಕರವಿಜಯವೇ ಮುಂತಾದ ಗ್ರಂಥಗಳಲ್ಲಿ ಕೆಲವು ಕಾಲ್ಪನಿಕ ಕಥೆಗಳು ಈ ಅಭಿಪ್ರಾಯಕ್ಕೆ ಒತ್ತಾಸೆಕೊಡುವಂತೆಯೂ ಕಾಣಿಸುತ್ತಿವೆ. ಕುಮಾರಿಲಭಟ್ಟರೇ ಮುಂತಾದ ವೈದಿಕರು ತಮ್ಮ ಗ್ರಂಥಗಳಲ್ಲಿ ಈ ಮತದ ಮೇಲೆ ಬರೆದಿರುವ ಖಂಡನೆಯ ಹೊಡೆತವನ್ನು ತಡೆಯಲಾರದೆ ಬೌದ್ಧಮತವು ಕ್ಷೀಣವಾಯಿತೆಂದು ಕೆಲವರೆನ್ನುತ್ತಾರೆ. ತಂತ್ರವಾರ್ತಿಕವೇ ಮುಂತಾದ ಗ್ರಂಥಗಳಲ್ಲಿ ಬೌದ್ಧರ ಉಪದೇಶವನ್ನೂ ಬುದ್ಧನನ್ನೂ ಜರಿದು ಬರೆದಿರುವದೂ ಕಾಣಬರುತ್ತಿದೆ. ಆದರೆ ಹೀಗೆ ಮತಗಳ ಪ್ರತಿಸ್ಪರ್ಧೆಯನ್ನೂ ಉಪಟಳವನ್ನೂ ತಡೆಯಲಾರದ್ದೇ ಬೌದ್ಧಮತದ ಕ್ಷೀಣದೆಸೆಗೆ ಕಾರಣವೆನ್ನುವವರು ಒಂದು ಪ್ರಶ್ನೆಗೆ ಉತ್ತರವನ್ನು ಕೊಡಲಾರದವರಾಗಿರುತ್ತಾರೆ. ವೈದಿಕರ ಹಿಂಸೆಯಿಂದಲೇ ಬೌದ್ಧಧರ್ಮವು ಈ ದೇಶದಲ್ಲಿ ಹಾಳಾಯಿತೆಂದರೆ ಆ ವಿಷಯವಾಗಿ ಬೌದ್ಧಗ್ರಂಥಗಳಲ್ಲಿ ಏತಕ್ಕೆ ಉಲ್ಲೇಖವಿಲ್ಲ? - ಎಂಬುದೇ ಆ ಪ್ರಶ್ನೆ.

ಗೌತಮಬುದ್ಧನು ಉಪನಿಷತ್ತುಗಳಲ್ಲಿ ಪ್ರತಿಪಾದಿಸಿರುವ ಪರಮಾರ್ಥವನ್ನು ಸಿದ್ಧಾಂತರೂಪವಾಗಿ ಬೋಧಿಸದೆ ಅದನ್ನು ಪಡೆಯುವ ಸಾಧನಗಳನ್ನು ಮಾತ್ರ ಬೋಧಿಸಿದನು. ಈ ಸಾಧನಪರವಾದ ಬೋಧನೆಯೇ ಭರತಖಂಡದಲ್ಲಿ ಆ ಮತವು ಹಬ್ಬುವದಕ್ಕೆ ಕಾರಣವಾಯಿತು. ಅದರಿಂದೀಚೆಗೆ ಬೌದ್ಧಭಿಕ್ಷುಗಳು ಬುದ್ಧನ ಉಪದೇಶಗಳಿಗೆ ವಿಪರೀತಾರ್ಥವನ್ನು ಕಲ್ಪಿಸಿ ಅದನ್ನು ಅನಾತ್ಮವಾದವಾಗಿ

ಮಾಡಿಬಿಟ್ಟರು. ಗೌತಮನ ಉಪದೇಶದಲ್ಲಿ ಸರ್ವರಿಗೂ ಸ್ವಾತಂತ್ರ್ಯವನ್ನು ಕೊಟ್ಟಿದೆ, ಅದರಲ್ಲಿ ಕರ್ಮಕ್ಕಿಂತಲೂ ಶೀಲವೇ ಹೆಚ್ಚಿನದೆಂದು ಬೋಧಿಸಿರುತ್ತದೆ; ಇದೆಲ್ಲದರಜೊತೆಗೆ ಅನಾತ್ಮವಾದವೂ ಸೇರಿಬಿಟ್ಟರೆ ಹೇಳುವದೇನು? ಅಂದಿನಿಂದ ಆ ಮತವು ಭರತಖಂಡಕ್ಕೆ ಪರಕೀಯವಾಯಿತು ಎಂದು ಕೆಲವರು ಪಾಶ್ಚಾತ್ಯರ ಅಭಿಪ್ರಾಯ. ಆದರೆ ಬೌದ್ಧಗ್ರಂಥಗಳಲ್ಲಿ ಆತ್ಮವಾದದ ಸೊಲ್ಲೇ ಇರುವದಿಲ್ಲ; ಹೀಗಿರುವಲ್ಲಿ ಮೊದಲು ಆ ಮತದಲ್ಲಿ ಆತ್ಮವಾದವಿತ್ತೆಂತಲೂ ಆಮೇಲೆ ಅದು ಅನಾತ್ಮವಾದವಾಯಿತೆಂತಲೂ ಹೇಳುವದು ಹೇಗೆ? ಮಿಸೆಸ್ ಡೇವಿಡ್ಸ್ ಮುಂತಾದ ಕೆಲವರು ಪಾಶ್ಚಾತ್ಯವಿದ್ವಾಂಸರು ಬೌದ್ಧಗ್ರಂಥಗಳಲ್ಲಿ ದೂರದೂರಕ್ಕೆ ಸಿಕ್ಕುವ ಆತ್ಮ, ಬ್ರಹ್ಮ- ಮುಂತಾದ ಶಬ್ದಗಳಿರುವ ಕೆಲವು ವಾಕ್ಯಗಳನ್ನು ಆರಿಸಿತೆಗೆದು ಪ್ರಾಚೀನಬೌದ್ಧಮತದಲ್ಲಿ ಆತ್ಮವಾದಕ್ಕೆ ಪುರಸ್ಕಾರವಿತ್ತೆಂದೂ ಈಚಿನ ಬೌದ್ಧಭಿಕ್ಷುಗಳು ಅದರಲ್ಲಿ ಅನಾತ್ಮವಾದವನ್ನು ಸೇರಿಸಿರುತ್ತಾರೆಂದೂ ವಾದಿಸಹತ್ತಿರುತ್ತಾರೆ, ಆದರೆ ಇಂಥ ವಾಕ್ಯಗಳಲ್ಲಿ ಆತ್ಮಶಬ್ದಕ್ಕೆ ವೈದಿಕರು ಹೇಳುವ ಆತ್ಮನೇ ಅರ್ಥವೆಂತಲಾಗಲಿ ಬ್ರಹ್ಮಶಬ್ದಕ್ಕೆ ಜಗತ್ಕಾರಣವಾದ ಬ್ರಹ್ಮವೆಂಬ ಅರ್ಥವಿದೆಯೆಂದಾಗಲಿ ತೋರಿಸಿಕೊಡುವದು ಕಷ್ಟ. ಇದಲ್ಲದೆ ಆ ವಾಕ್ಯಗಳುಮಾತ್ರ ಮೂಲಗ್ರಂಥಕ್ಕೆ ಸೇರಿದವೆಂದೂ ಹೇರಳವಾಗಿರುವ ಉಳಿದ ವಾಕ್ಯಗಳೆಲ್ಲ ಪ್ರಕ್ಷಿಪ್ತವೆಂದೂ ಸಾಧಿಸುವದಕ್ಕೆ ಹೊರಡುವದು ಸಾಹಸವೇ ಸರಿ. ಬೌದ್ಧರ ಸಾಂಪ್ರದಾಯಿಕ ವ್ಯಾಖ್ಯಾನವನ್ನು ತಿರಸ್ಕರಿಸುವದಕ್ಕಾಗಲಿ, ಆತ್ಮವಾದವನ್ನು ಪುರಸ್ಕರಿಸುವದಕ್ಕಾಗಲಿ ಬೌದ್ಧರ ತ್ರಿಪಿಟಕಗಳಲ್ಲಿ ಯಾವ ಆಧಾರವೂ ದೊರೆಯುವದಿಲ್ಲ.[1] ಈ ಎಲ್ಲಾ ಕಾರಣಗಳಿಂದ ಪ್ರಾಚೀನ ಬೌದ್ಧಮತದಲ್ಲಿ ಆತ್ಮವಾದವಿತ್ತೆಂಬ ಮತವು ಒಪ್ಪತಕ್ಕದ್ದಲ್ಲ - ಎಂದು ಶ್ರೀಮೂರ್ತಿಯವರು ತಮ್ಮ ಗ್ರಂಥದಲ್ಲಿ ಪ್ರತಿಪಾದಿಸಿರುತ್ತಾರೆ. ಬ್ರಾಹ್ಮಣರು ಜೈನರು ಮುಂತಾದವರೂ ಬೌದ್ಧರನ್ನು ನೈರಾತ್ಮ್ಯವಾದಿಗಳೆಂದೇ ಭಾವಿಸುತ್ತಾರೆಂಬುದೂ ಲಕ್ಷ್ಯದಲ್ಲಿಡತಕ್ಕದ್ದಾಗಿದೆಯೆಂಬುದೂ ಅವರ ಮತ.

ಇನ್ನು ಬೌದ್ಧನು ಯಾವ ಸಿದ್ಧಾಂತವನ್ನೂ ಲೆಕ್ಕಕ್ಕೆ ತರಲಿಲ್ಲ ಎಂಬ ವಾದವೂ ನಿಲ್ಲುವಂತೆ ಇಲ್ಲ. ಏಕೆಂದರೆ ಶರೀರೇಂದ್ರಿಯಸಂಘಾತದಲ್ಲಿ ತಾನೆಂಬ

1. ವಾತ್ಸಿಪುತ್ರೀಯರೆಂಬ ಒಂದು ಗುಂಪಿನವರು ಮಾತ್ರ ಆತ್ಮ, ಪುದ್ಗಲ - ಎಂಬ ಶಬ್ದಗಳಿರುವ ಪಿಟಕವಾಕ್ಯಗಳನ್ನು ಆಧಾರವಾಗಿ ಹಿಡಿದು, ಆತ್ಮವಾದವನ್ನು ಅವಲಂಬಿಸಿದ್ದರೆಂದು ತಿಳಿಯಬರುತ್ತದೆ. ಈ ವಿಷಯವನ್ನು ಸ್ಥಲಾಂತರದಲ್ಲಿ ವಿಚಾರಕ್ಕೆ ತೆಗೆದುಕೊಳ್ಳಲಾಗುವದು.

ಅಭಿಮಾನವಿಡುವದು ತಪ್ಪೆಂಬುದನ್ನು ತೋರಿಸುವದಕ್ಕೆ ಅವನು ಬಗೆಬಗೆಯ ದೃಷ್ಟಿಗಳಿಂದ ಅವುಗಳ ತತ್ತ್ವವನ್ನು ವಿಚಾರಿಸಿರುವನೆಂಬುದಕ್ಕೆ ಪಿಟಕಗಳಲ್ಲಿ ಉದಾಹರಣೆಗಳು ಸಿಕ್ಕುತ್ತವೆ. ಅವನ ಕಾಲದಲ್ಲಿ ಅನೇಕ ಪ್ರಕಾರದ ಸಿದ್ಧಾಂತಗಳು ಪ್ರಚಾರದಲ್ಲಿದ್ದದ್ದರಿಂದ ಅವನು ಪರಸ್ಪರವಿರುದ್ಧಕೋಟಿಗಳನ್ನು ತ್ಯಜಿಸಿ ಮಧ್ಯಮ ಕೋಟಿಯನ್ನು ಅನುಸರಿಸಿದನೆಂದು ಬೌದ್ಧರೆಲ್ಲರೂ ಹೇಳಿರುತ್ತಾರೆ.

ಇನ್ನೊಂದು ಅಭಿಪ್ರಾಯವಿದೆ, ಗೌತಮಬುದ್ಧನು ಮೊದಲಿನಿಂದಲೂ ವರ್ಣಾಶ್ರಮವಿರೋಧಿಯಾಗಿರುತ್ತಿದ್ದನು; ಅವನಿಗಾಗಲಿ ಅವನ ಅನುಯಾಯಿ ಗಳಿಗಾಗಲಿ ವೇದದಲ್ಲಿ ಪ್ರಾಮಾಣ್ಯಬುದ್ಧಿಯಿರಲಿಲ್ಲ, ಅವನು ಒಪ್ಪಲಿಲ್ಲ. ಇಂಥ ಮತವು ಜನರ ಪ್ರೀತಿಗೆ ಹೇಗೆ ಈಶ್ವರನನ್ನಾಗಲಿ ಆತ್ಮನನ್ನಾಗಲಿ ಪಾತ್ರವಾದೀತು? ಜನಸಾಮಾನ್ಯಕ್ಕೆ ಬೇಕಾಗಿದ್ದ ಆಸ್ತಿಕ್ಯಕ್ಕೆ ಅವನು ವಿರೋಧಿಯಾಗಿದ್ದದ್ದರಿಂದ ಆ ಮತವು ಬೇಗನೆ ಅಳಿಯಿತು ಎಂದು ಕೆಲವರು ವಿಮರ್ಶಕರ ಅಭಿಪ್ರಾಯ. ಆದರೆ ಇದೂ ಒಪ್ಪತಕ್ಕದ್ದಾಗಿ ಕಾಣುವದಿಲ್ಲ. ವರ್ಣಾಶ್ರಮಗಳಿಗೆ ವಿರೋಧಿಯೆಂಬ ಕಾರಣದಿಂದ ಬುದ್ಧನು ಜನರಿಗೆ ಬೇಡವಾಗಿದ್ದಿದ್ದರೆ ಅವನ ಮತವು ದೇಶದಲ್ಲೆಲ್ಲ ಹಬ್ಬುವದಕ್ಕೆ ಕಾರಣವೇ ಇರಲಿಲ್ಲ. ಬುದ್ಧನ ಶಿಷ್ಯರಲ್ಲಿ ಕೆಲವರು ಬ್ರಾಹ್ಮಣರು, ಜೈನರು - ಮುಂತಾದವರೂ ಇದ್ದರೆಂದು ತಿಳಿಯಬರುತ್ತದೆ. ಅವನಲ್ಲಿ ಹಲವು ಜನರಿಗೆ ಮಹಾಪೂಜ್ಯಬುದ್ಧಿಯೂ ಇದ್ದಿತೆಂದು ತಿಳಿಯಬರುತ್ತದೆ. ಬ್ರಾಹ್ಮಣ ಮತದ ಹಲವು ದೇವತೆಗಳ ಹೆಸರುಗಳು ಪಿಟಕದಲ್ಲಿ ಕಾಣಬರುತ್ತವೆ; ಅವನು ಹೇಳುವ ಶೀಲಸಮಾಧಿಗಳನ್ನು ಯಾರೂ ತಿರಸ್ಕರಿಸುವಂತೆ ಇರಲಿಲ್ಲ. ಇದೂ ಅಲ್ಲದೆ ತತ್ತ್ವಜಿಜ್ಞಾಸೆಯಲ್ಲಿ ನಿರತರಾಗಿದ್ದ ಭಾರತ ನಿವಾಸಿಗಳು ಬುದ್ಧನ ಮತವನ್ನೂ ಉಪದೇಶವನ್ನೂ ವಿಚಾರದ ಒರೆಗಲ್ಲಿಗೆ ತಿಕ್ಕದೆ ಕೆಲಕೆಲವು ಆಚಾರವಿಚಾರಭೇದಗಳಿದ್ದ ಮಾತ್ರದಿಂದಲೇ ಅವನನ್ನೂ ಆಸಡ್ಡೆ ಮಾಡಿದರೆಂಬುದು ನಂಬಿಕೆಗೆ ಅರ್ಹವಾಗಿ ರುವದಿಲ್ಲ.

ಈ ವಿಷಯದಲ್ಲಿ ಕೆಲವರು ವಿಮರ್ಶಕರು ಹೊರಪಡಿಸಿರುವ ಅಭಿಪ್ರಾಯವೊಂದಿದೆ. ಅದು ನನಗೂ ಮಾನ್ಯವಾಗಿ ತೋರುತ್ತದೆ. ಅದೇನೆಂದರೆ ಗೌತಮ ಬುದ್ಧನು ಆರ್ಯರ ಕ್ಷತ್ರಿಯವಂಶಕ್ಕೆ ಸೇರಿದವನು; ಅವನು ಪ್ರಾಚೀನರ ಪದ್ಧತಿಯನ್ನೇ ಅನುಸರಿಸಿ ತತ್ತ್ವವನ್ನು ಶ್ರವಣಮನನನಿದಿಧ್ಯಾಸನಗಳಿಂದ ಬೋಧಿಸುವದಕ್ಕೆ ಪ್ರಯತ್ನಮಾಡಿದನು. ಆಗಿನಕಾಲದಲ್ಲಿದ್ದ ಬಗೆಬಗೆಯ

ಮತ ಭೇದಗಳಲ್ಲಿ ಅವನಿಗೆ ಯಾವದೂ ರುಚಿಸದೆ ತಪಸ್ಸಿನಿಂದ ತನಗೆ ಹೊಳೆದ ನಿರ್ವಾಣ ಮಾರ್ಗವನ್ನೇ ಅವನು ಬೋಧಿಸಿದನು. ಅವನ ಬೋಧೆಗೆ ಹಿಂದಿನವರ ಸಂಮತಿಯು ಇರಲೇಇಲ್ಲವೆಂದು ಹೇಳುವದಕ್ಕೆ ಆಗುವದಿಲ್ಲ. ಧಮ್ಮಪದವೇ ಮುಂತಾದ ಬೌದ್ಧಗ್ರಂಥಗಳಲ್ಲಿರುವ ಸುಭಾಷಿತಗಳೂ ನೀತಿವಚನಗಳೂ ಭಾರತವೇ ಮುಂತಾದ ಪುರಾಣಗಳಲ್ಲಿ ಹೇರಳವಾಗಿ ಸಿಕ್ಕುತ್ತವೆ. ಅವುಗಳಲ್ಲಿ ಕೆಲವು ಬೌದ್ಧಮತದ ಉದಯಕಾಲಕ್ಕಿಂತಲೂ ಹಿಂದಿನವಾಗಿರಬಹುದು; ಮತ್ತೆ ಕೆಲವು ಬೌದ್ಧ ಮತದಿಂದಲೇ ಸಾರಗ್ರಹಣದೃಷ್ಟಿಯಿಂದ ಆರಿಸಿಕೊಂಡು ತಮ್ಮ ಸಿದ್ಧಾಂತಕ್ಕೆ ತಕ್ಕಂತೆ ವೈದಿಕರು ಮಾರ್ಪಡಿಸಿಕೊಂಡವುಗಳಾಗಿರಬಹುದು. ಬೌದ್ಧಮತದಲ್ಲಿ ನಾನಾ ಅನಾರ್ಯಕುಲದವರು, ದೀಕ್ಷೆಯನ್ನು ವಹಿಸಿ ಅವನ ಬೋಧನೆಯ ಆಳವನ್ನು ಹಿಡಿಯಲಾರದೆ ವೈದಿಕಾಚಾರಗಳೂ ಇಲ್ಲದವರಾಗಿ ಕೊನೆಗೆ ವೈದಿಕಧರ್ಮವನ್ನೇ ಮರೆಹೊಕ್ಕಿರಬಹುದು. ಬೌದ್ಧಧರ್ಮದಲ್ಲಿ ಅಸಾಧಾರಣವೆಂದು ಬೆಟ್ಟಿಟ್ಟು ತೋರಿಸುವದಕ್ಕಾಗುವ ಅಮೋಘತತ್ತ್ವಗಳೆಲ್ಲವೂ ಸನಾತನಧರ್ಮದಲ್ಲಿಯೇ ಸಮಾವೇಶವಾಗಿಬಿಟ್ಟದ್ದರಿಂದ ಅದೊಂದು ಬೇರೆಯ ಧರ್ಮವಾಗಿ ಉಳಿಯದೆ ಹೋಗಿರಬಹುದು. ಈ ಕಲ್ಪನೆಯು ಎಷ್ಟರಮಟ್ಟಿಗೆ ಒಪ್ಪತಕ್ಕದ್ದೆಂಬುದನ್ನು ವಾಚಕರು ವಿಮರ್ಶಿಸಬೇಕೆಂದು ಪ್ರಾರ್ಥಿಸುತ್ತೇನೆ.

★★★★★

# ಬುದ್ಧನ ಉಪದೇಶವೂ ಅದಕ್ಕೆ ವ್ಯಾಖ್ಯಾನಗಳೂ

– ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳವರು

ಬುದ್ಧನ ಮೂಲ ಉಪದೇಶವು ಅವನ ಮಾತುಗಳಲ್ಲಿಯೇ ಈಗಲೂ ಸಿಕ್ಕುತ್ತದೆಯೆ?– ಎಂಬ ಪ್ರಶ್ನೆಗೆ ಉತ್ತರವನ್ನು ಕೊಡುವದು ಬಹಳ ಕಷ್ಟ. ಬೌದ್ಧರೊಳಗೆ ಈಗ ಅನೇಕ ಒಳಪಂಗಡಗಳು ಆಗಿಬಿಟ್ಟಿವೆ; ಅವರೆಲ್ಲರೂ ತಾವು ಹೇಳುವದೇ ಬುದ್ಧನ ನಿಜವಾದ ಉಪದೇಶವೆಂದು ಹಟದಿಂದ ಹೇಳುತ್ತಿದಾರೆ. ವೈದಿಕ ಧರ್ಮದವರೂ ಜೈನಧರ್ಮದವರೂ ಸಾಮಾನ್ಯವಾಗಿ ವೈಭಾಷಿಕರು, ಸೌತ್ರಾಂತಿಕರು, ಯೋಗಾಚಾರರು ಅಥವಾ ವಿಜ್ಞಾನವಾದಿಗಳು, ಮತ್ತು ಮಾಧ್ಯಮಿಕರು – ಎಂಬ ನಾಲ್ಕು ಬೌದ್ಧವಾದಿಗಳನ್ನು ಮಾತ್ರ ಪರಾಮರ್ಶೆಮಾಡುತ್ತಿದಾರೆ. ಆದರೆ ಮೂಲಬೌದ್ಧಗ್ರಂಥಗಳನ್ನು ನೋಡಿದರೆ ಈ ನಾಲ್ಕು ವಿಭಾಗಗಳೇನೂ ಬೌದ್ಧರಲ್ಲಿ ಕಾಣಿಸುವದಿಲ್ಲ. ಬುದ್ಧನ ವಿಚಾರವನ್ನೂ ಉಪದೇಶವನ್ನೂ ತಿಳಿಸುವ ಅತ್ಯಂತ ಪ್ರಾಚೀನವಾದ ಪಾಲಿಭಾಷೆಯಲ್ಲಿರುವ 'ಪಿಟಕ'ಗಳನ್ನು ನೋಡಿದರೆ ಅವುಗಳೂ ಮೂಲೋಪದೇಶವನ್ನೊಳಗೊಂಡಿವೆ ಎನ್ನುವಹಾಗಿಲ್ಲ. ಏಕೆಂದರೆ ಅವುಗಳಲ್ಲಿ ಪ್ರತಿಯೊಂದು ವೃತ್ತಾಂತವೂ 'ಏವಂ ಮೇ ಸುತಮ್' (ಹೀಗೆಂದು ನಾನು ಕೇಳಿರುತ್ತೇನೆ) ಎಂದು ಪ್ರಾರಂಭವಾಗಿರುತ್ತದೆ!

ಗೌತಮಬುದ್ಧನ ಪರಿನಿರ್ವಾಣವಾದ ಮೇಲೆ ಅವನ ಶಿಷ್ಯರುಗಳ ಒಗ್ಗಟ್ಟು ಮುರಿಯಿತು. ಅವನು ದೇಹವನ್ನು ಬಿಟ್ಟ ಕೆಲವು ದಿನಗಳಲ್ಲಿಯೇ ರಾಜಗೃಹದಲ್ಲಿ ವರ್ಷಾಕಾಲದಲ್ಲಿ ಐನೂರು ಭಿಕ್ಷುಗಳ 'ಸಂಗೀತಿ' (ಸಭೆ)ಯಲ್ಲಿ ಸ್ಥವಿರವಾದ (ಥೇರವಾದ)ದಂತೆ 'ಸೂತ್ರ' (ಬುದ್ಧನ ಉಪದೇಶ)ಗಳನ್ನೆಲ್ಲ ಒಟ್ಟಿಗೆ ಗಾನಮಾಡಿದರಂತೆ; ಉಪಾಲಿಯು ವಿನಯ (ಭಿಕ್ಷುಗಳ ನಿಯಮ)ವನ್ನೂ ಆನಂದನು ಸಾಮಾನ್ಯ ಧರ್ಮವನ್ನೂ ಉಪದೇಶಿಸಿದರಂತೆ. ಈ ಸಂಗೀತಿಯು ಆದ ಒಂದು ನೂರು ವರ್ಷಗಳ ಮೇಲೆ ವೈಶಾಲಿಯಲ್ಲಿ ಮತ್ತೊಂದು ಸಭೆ ನಡೆಯಿತು; ಅಲ್ಲಿ ವಿನಯಕ್ಕೆ ಸಂಬಂಧ ಪಟ್ಟ ಕೆಲವು ವಿಷಯಗಳನ್ನು ಚರ್ಚಿಸಿ

ನಿರ್ಣಯಿಸಿದರಂತೆ. ಆದರೆ ಕೆಲವರು ಅಲ್ಲಿ ಆದ ನಿರ್ಣಯಗಳನ್ನು ಒಪ್ಪದೆ 'ಮಹಾಸಂಗೀತಿ' ಎಂಬ ಒಂದು ದೊಡ್ಡ ಸಭೆಯನ್ನು ಏರ್ಪಡಿಸಿ ಬುದ್ಧನ ಉಪದೇಶಗಳ ವ್ಯವಸ್ಥೆಯನ್ನು ಮಾಡಿಕೊಂಡರು. ಇದರ ಫಲವಾಗಿ ಬೌದ್ಧಭಿಕ್ಷುಗಳು ಎರಡು ಬೇರೆಬೇರೆಯ '**ನಿಕಾಯ**' (ಸಂಪ್ರದಾಯ)ಗಳಾಗಿ ಒಡೆದುಕೊಂಡರು. ಇದರಲ್ಲಿ ಪ್ರಾಚೀನಮತವನ್ನೇ ಪಟ್ಟುಹಿಡಿದು ಅಂಟಿಕೊಂಡವರು 'ಸ್ಥವಿರ'ರೆಂದೂ ಹೊಸ ಕೆಲವು ನಿಯಮಗಳನ್ನು ಆಚರಣೆಗೆ ತಂದವರು 'ಮಹಾಸಾಂಘಿಕ'ರೆಂದೂ ಪ್ರಸಿದ್ಧರಾದರು. ಈ ಎರಡು ಶಾಖೆಗಳೂ ಉಪಶಾಖೆಗಳಾಗಿ ಒಡೆದುಕೊಂಡು ಕೊನೆಗೆ ಬೌದ್ಧರಲ್ಲಿ ಒಟ್ಟು ಹದಿನೆಂಟು ನಿಕಾಯಗಳಾದವು. ಈ ನಿಕಾಯಗಳು ಯಾವಯಾವವೆಂಬ ಬಗ್ಗೆ ಮತಭೇದವಿರುತ್ತದೆ. ಕ್ರಿಸ್ತಶಕ ನಾಲ್ಕು ಐದನೆಯ ಶತಮಾನಗಳಲ್ಲಿ ಭಾರತದಲ್ಲಿ ಸ್ವಲ್ಪ ಹೆಚ್ಚುಕಡಿಮೆ ಈ ಎಲ್ಲಾ ನಿಕಾಯದವರೂ ಇರುತ್ತಿದ್ದರು; ಇವರಲ್ಲಿ ದಕ್ಷಿಣಭಾರತದಲ್ಲಿ ಸಂಮಿತೀಯ ಮತ್ತು **ಚೈತ್ಯವಾದಿ**ಗಳೂ ಸಿಂಹಳದಲ್ಲಿ ಸ್ಥವಿರವಾದಿಗಳೂ ಉತ್ತರಭಾರದಲ್ಲಿ **ಸರ್ವಾಸ್ತಿತ್ವವಾದಿ**ಗಳೂ ಪ್ರಧಾನರಾಗಿದ್ದರು. ಈ ಹದಿನೆಂಟು ನಿಕಾಯಗಳಲ್ಲಿಯೂ ಸೂತ್ರ, ವಿನಯ ಮತ್ತು ಅಭಿಧರ್ಮ- ಎಂಬ ಮೂರು ಪಿಟಕಗಳೂ ಇದ್ದವು; ಆದರೆ ಈಗ ಆ ನಿಕಾಯಗಳೂ ಇಲ್ಲ, ಅವರ ಪಿಟಕಗಳೂ ಲುಪ್ತವಾಗಿರುತ್ತವೆ. ಆದರೆ ಮಹಾಸಾಂಘಿಕ, ಸರ್ವಾಸ್ತಿತ್ವವಾದಿ, ಮತ್ತು ಏಕಾಧ- ಇವರ ಗ್ರಂಥಗಳು ಚೀನ ಮತ್ತು ತಿಬ್ಬತಭಾಷೆಗಳಲ್ಲಿ ಅನುವಾದವಾಗಿ ಈಗಲೂ ಇರುತ್ತವೆಯೆಂದು ಹೇಳುತ್ತಾರೆ.

ಕಾನಿಷ್ಕಚಕ್ರವರ್ತಿಯ ಕಾಲಕ್ಕೆ ಆದ ಮೊದಲನೆಯ ಸಂಗೀತಿಯಲ್ಲಿ ತ್ರಿಪಿಟಕಗಳನ್ನು ಗಾನಮಾಡಿದ್ದಲ್ಲದೆ ಈ ಮೂರು ಪಿಟಕಗಳಮೇಲೂ 'ವಿಭಾಷಾ' ಎಂಬ ಹೆಸರಿನ ಭಾಷ್ಯಗಳನ್ನು ಬರೆಯಿಸಲಾಯಿತು. ಈ ಕಾರಣದಿಂದ ಸರ್ವಾಸ್ತಿತ್ವವಾದಿಗಳಿಗೆ '**ವೈಭಾಷಿಕ**'ರೆಂಬ ಹೆಸರು ಬಂದಿತು. ಸ್ಥವಿರವಾದಿಗಳ ವಿನಯಪಿಟಕವು ಅಶೋಕನ ಕಾಲಕ್ಕೆ ಪಾಟಲೀಪುತ್ರದಲ್ಲಿ ಸಭೆಯು ಸೇರಿದ ಬಳಿಕ ಅಶೋಕಚಕ್ರವರ್ತಿಯ ಪುತ್ರ ಮಹೇಂದ್ರ ಮತ್ತು ಪುತ್ರಿ ಸಂಘಮಿತ್ರಾ- ಇವರ ಮೂಲಕವಾಗಿ ಸಿಂಹಲಕ್ಕೆ ಬಂದಿತು. ಆಗಿನಿಂದ ಇಲ್ಲಿಯವರೆಗೂ ಸಿಂಹಲವು ಸ್ಥವಿರ(ಥೇರಾ)ವಾದದ ಕೇಂದ್ರವಾಗಿರುತ್ತದೆ. ಈ ಪಿಟಕದ ಮೇಲಿನ 'ಅಟ್ಟಕಥಾ'ಎಂಬ ಟೀಕೆಗಳು ಹಿಂದಿನ ಸಿಂಹಲಭಾಷೆಯಲ್ಲಿದ್ದದ್ದು ಕ್ರಿ.ಶ. ಐದನೆಯ ಶತಮಾನದಲ್ಲಿ ಬುದ್ಧಘೋಷನೆಂಬ ಆಚಾರ್ಯನು ಪಾಲಿಭಾಷೆಗೆ

ಮಾಡಿದ ಅನುವಾದವು ಪ್ರಚಾರವಾದಮೇಲೆ ಲುಪ್ತವಾಯಿತು. ಸಿಂಹಳಕ್ಕೆ ಬಂದಮೇಲೆ ತ್ರಿಪಿಟಿಕವನ್ನು ನಾನೂರು ವರ್ಷಗಳವರೆಗೆ ಕಂಠಪಾಠದಿಂದಲೇ ರಕ್ಷಿಸಿಕೊಂಡುಬರಲಾಗಿತ್ತು; ವಟ್ಟಗಾಮನಿ ಎಂಬ ರಾಜನ ಕಾಲಕ್ಕೆ ಅವುಗಳನ್ನು ಲಿಪಿಯಲ್ಲಿ ಬರೆದಿಟ್ಟರಂತೆ. ಈವರೆಗೆ ಕಂಠಪಾಠವಾಗಿಬಂದಿದ್ದರ ಪರಿಣಾಮವಾಗಿ ಮೂಲಮಾಗಧೀಭಾಷೆಯ ಉಚ್ಚಾರಣೆಯು ಮಾರ್ಪಟ್ಟು ಈಗಿನ ಪಾಲಿ ತ್ರಿಪಿಟಕವು ಪ್ರಾಚೀನಗುಜರಾತಿಯನ್ನು ಹೋಲುವ ಭಾಷೆಯಲ್ಲಿದೆಯೆಂದು ಹೇಳುತ್ತಾರೆ.

ಇದುವರೆಗಿನ ಐತಿಹಾಸಿಕವಿವರಣೆಯಿಂದ ತಿಳಿಯಬೇಕಾದದ್ದು ಏನೆಂದರೆ, ಬುದ್ಧನ ಮೂಲೋಪದೇಶವು ಇಂಥದ್ದೆಂದು ತಿಳಿಯುವದಕ್ಕೆ ನಮಗೆ ನಂಬಲರ್ಹವಾದ ಪ್ರಮಾಣವು ಪಾಲಿತ್ರಿಪಿಟಿಕಗಳಿಗಿಂತ ಹೆಚ್ಚಿನದು ಯಾವದೂ ಇರುವದಿಲ್ಲ. ಅವುಗಳಲ್ಲಿ ಥೇರವಾದಿಗಳು ಹೆಚ್ಚುಕಡಿಮೆಮಾಡಿರುತ್ತಾರೆಂದು ಶೋಧಕರು ಹೇಳುತ್ತಾರಾದರೂ ಸದ್ಯಕ್ಕೆ ನಾವು ಅವನ್ನೇ ಪ್ರಾಚೀನತಮವಾದ ಪ್ರಮಾಣವೆಂದು ಹಿಡಿಯಬೇಕಾಗಿದೆ.

ಬುದ್ಧನು ಆತ್ಮವಾದವನ್ನು ತಿರಸ್ಕರಿಸಿರುತ್ತಾನೆಂಬುದು 'ಮಜ್ಝಿಮ ನಿಕಾಯ'ವೇ ಮುಂತಾದ ಪಾಲಿಗ್ರಂಥಗಳಿಂದ ತಿಳಿಯಬರುತ್ತದೆ. ಅವನು ಈಶ್ವರನ ಆಸ್ತಿತ್ವವನ್ನು ಒಪ್ಪಿರುವದಿಲ್ಲ, ಆದ್ದರಿಂದ ಮತ್ತೊಬ್ಬ ದೇವತೆಯ ಅಥವಾ ಈಶ್ವರನ ಆರಾಧನೆಯಿಂದ ಅಥವಾ ಆಶ್ರಯದಿಂದ ತನ್ನ ಪುರುಷಾರ್ಥವನ್ನು ಕಂಡುಕೊಳ್ಳಬೇಕೆಂಬ ವಾದವನ್ನು ಅವನು ಎಂದಿಗೂ ಒಪ್ಪಲಿಲ್ಲ. ವೇದದಲ್ಲಿ ಹೇಳಿರುವ ಯಜ್ಞಯಾಗಾದಿಕರ್ಮಗಳನ್ನಂತೂ ಹಿಂಸಾರೂಪವೆಂಬ ಕಾರಣದಿಂದ ಅವನು ಸಾಕ್ಷಾತ್ತಾಗಿ ಹಳಿದಿರುತ್ತಾನೆ. ಹಾಗಾದರೆ ಈ ಮತದಲ್ಲಿ ಮೋಕ್ಷದ ಸ್ವರೂಪವೇನು? ಅದು ಯಾರಿಗೆ ಆಗಬೇಕು? ಅವನವನು ಮಾಡಿದ ಕರ್ಮಗಳಿಗೆ ಅವನು ಹೊಣೆಗಾರನೆಂಬ ವಾದವನ್ನು ಇಲ್ಲಿ ಹೇಗೆ ಸಾಧಿಸಬೇಕು? - ಎಂಬ ಪ್ರಶ್ನೆಗಳು ಏಳುತ್ತವೆಯಷ್ಟೆ? ಇದಕ್ಕೆ ಉತ್ತರವೇನೆಂದರೆ ನಾಮರೂಪಾತ್ಮಕವಾದ ಶರೀರವು ಮಾಡಿದ ಕರ್ಮದ ಫಲವಾಗಿ ಮತ್ತೆಮತ್ತೆ ಅದಕ್ಕನುಗುಣವಾದ ನಾಮರೂಪಾತ್ಮಕಶರೀರವು ಹುಟ್ಟುತ್ತಿರುವದು; ಈ ಜನ್ಮಾಂತರಪ್ರಾಪ್ತಿರೂಪವಾದ ಸಂಸಾರವು ದುಃಖಮಯವಾಗಿರುತ್ತದೆ. ದುಃಖ, ದುಃಖಸಮುದಯ, ದುಃಖನಿರೋಧ ಮತ್ತು ದುಃಖನಿರೋಧ ಮಾರ್ಗಪ್ರತಿಪತ್ತು - ಎಂಬ

'**ಆರ್ಯಸತ್ಯಚತುಷ್ಟಯ**'ದ ಜ್ಞಾನದಿಂದ ಮೋಕ್ಷವಾಗುತ್ತದೆ. ಈ ಮತದಲ್ಲಿ ಮೋಕ್ಷವೆಂದರೆ ಪರಮಾತ್ಮನಲ್ಲಿ ಒಂದಾಗುವ ಸಾಯುಜ್ಯವಲ್ಲ, ಏಕೆಂದರೆ ಪರಮಾತ್ಮನನ್ನೇ ಇಲ್ಲಿ ಒಪ್ಪಿರುವದಿಲ್ಲ. ಮೋಕ್ಷವು ಬರಿಯ ನಿರ್ವಾಣವು, ಎಂದರೆ ದೀಪವು ಆರಿಹೋದಂತೆ ತೃಷ್ಣೆಯು ಆತ್ಯಂತಿಕವಾಗಿ ಇಲ್ಲವಾಗಿಬಿಡುವದು. ತೃಷ್ಣೆಯು ಸಂಪೂರ್ಣವಾಗಿ ಹೋದರೆ ಮತ್ತೊಂದು ಶರೀರಪ್ರಾಪ್ತಿಯೂ ಆಗಲಾರದಾದ್ದರಿಂದ ನಿರ್ವಾಣವೆಂದರೆ ಮರಣವೂ ಅಲ್ಲ; ಅದು ಸಾವಿನ ಸಾವು. ಈ ನಿರ್ವಾಣಕ್ಕೆ ಗಾರ್ಹಸ್ಥ್ಯವನ್ನು ಬಿಟ್ಟು ಭಿಕ್ಷುವಾಗುವದೇ ಹೆಚ್ಚು ಉಪಕಾರಕವೆಂಬುದು ಬುದ್ಧನ ಉಪದೇಶದಿಂದಲೂ ಉದಾಹರಣೆಯಿಂದಲೂ ಸ್ಪಷ್ಟವಾಗುತ್ತದೆ.

ಉಪನಿಷತ್ತುಗಳಲ್ಲಿ ಆತ್ಮನಿಷ್ಠೆ, ಅನಾತ್ಮತಿರಸ್ಕಾರ - ಎಂಬ ಎರಡು ಮಾರ್ಗಗಳನ್ನು ಉಪದೇಶಿಸಿದೆ ಎಂದು ಸಂಗ್ರಹವಾಗಿ ಹೇಳಬಹುದಾಗಿದೆ. ಇವುಗಳಲ್ಲಿ ಆತ್ಮವಿಚಾರವನ್ನು ಬಿಟ್ಟು ತೃಷ್ಣಾತ್ಯಾಗ, ವೈರಾಗ್ಯ, ಕರ್ಮತ್ಯಾಗ- ಇವುಗಳಲ್ಲಿ ಮಾತ್ರ ಗೌತಮಬುದ್ಧನು ವೈದಿಕಮತವನ್ನು ಅನುಕರಿಸಿರುತ್ತಾನೆಂದು ಹೇಳಬಹುದಾಗುತ್ತದೆ.

ಗೌತಮಬುದ್ಧನು ಆತ್ಮತಿರಸ್ಕಾರವನ್ನು ಸುಸ್ಪಷ್ಟವಾಗಿ ಮಾಡಿದ್ದರೂ ಅವನ ಅನುಯಾಯಿಗಳು ಒಂದಲ್ಲ ಒಂದು ಬಗೆಯಿಂದ ಮತ್ತೆ ಆತ್ಮಾಸ್ತಿತ್ವವನ್ನು ಒಪ್ಪಿಕೊಳ್ಳುವದಕ್ಕೆ ಪ್ರಾರಂಭಿಸಿದರೆಂಬುದು ಮನನೀಯವಾಗಿರುತ್ತದೆ. ದೀರ್ಘ ಕಾಯಕ್ಕೆ ಸೇರಿದ 'ಬ್ರಹ್ಮಜಾಲಸೂತ್ರ'ವೆಂಬ ಪ್ರಕರಣದಲ್ಲಿ ಬುದ್ಧನು ಆತ್ಮನೂ ಪ್ರಪಂಚವೂ ನಿತ್ಯವೆನ್ನುವ ಮತವನ್ನು ಖಂಡಿಸಿರುವದಲ್ಲದೆ ಆತ್ಮನ ವಿಷಯದಲ್ಲಿ ಮೂವತ್ತೆರಡು ಮಿಥ್ಯಾದೃಷ್ಟಿಗಳನ್ನು ವರ್ಣಿಸಿರುತ್ತಾನೆ. ಆತ್ಮನು ಸತ್ತಬಳಿಕ ಸವಿಜ್ಞಾನನಾಗಿರುತ್ತಾನೆ, ಅವಿಜ್ಞಾನನಾಗಿರುತ್ತಾನೆ; ಸವಿಜ್ಞಾನನೂ ಆಗಿರುವದಿಲ್ಲ, ಅವಿಜ್ಞಾನನೂ ಆಗಿರುವದಿಲ್ಲ- ಎಂಬ ವಿಕಲ್ಪಗಳನ್ನೂ ಒಂದೊಂದಾಗಿ ವಿವರಿಸಿ ಸುಸ್ಪಷ್ಟರೀತಿಯಲ್ಲಿ ಖಂಡಿಸಿರುತ್ತಾನೆ. ಹೀಗಿದ್ದರೂ ಮುಂದೆ ವಾತ್ಸೀಪುತ್ರೀಯರೆಂಬ ಒಂದು ಪಂಗಡದವರು '**ಪುದ್ಗಲಾತ್ಮವಾದ**'ವೆಂಬ ಒಂದು ವಾದವನ್ನು ಹೂಡಿದರು; ಆತ್ಮನು ಒಂದು ಬಗೆಯಲ್ಲಿ ನಿತ್ಯನಾಗಿರುತ್ತಾನೆ, ಅವನು ಪಂಚಸ್ಕಂಧಗಳಿಗಿಂತ ಭಿನ್ನನೆಂದಾಗಲಿ ಅಭಿನ್ನನೆಂದಾಗಲಿ ಹೇಳುವದಕ್ಕೆ ಬರುವದಿಲ್ಲ- ಎಂಬುದು ಅವರ ಮತವಾಗಿತ್ತು.

ಗೌತಮನು ಈಶ್ವರನು ನಿತ್ಯನಾಗಿರುವನೆಂಬುದನ್ನೂ ತಿರಸ್ಕರಿಸಿದ್ದನಾದರೂ ಮುಂದೆ ಅವನ ಅನುಯಾಯಿಗಳಲ್ಲಿ ಮಹಾಯಾನಪಕ್ಷದವರು ಕೆಲವರು ಬುದ್ಧನನ್ನೇ ಸರ್ವಜ್ಞನೆಂದೂ ಪರಮಪುರುಷನೆಂದೂ ಭಗವಂತನೆಂದೂ ಕರೆದು ಪರಮೇಶ್ವರನ ಸ್ಥಾನಕ್ಕೆ ಏರಿಸಿ ಆರಾಧಿಸಿರುತ್ತಾರೆ. ಸನಾತನಧರ್ಮದವರಂತೆಯೇ ಮಂಜುಶ್ರೀ, ಅವಲೋಕಿತೇಶ್ವರ- ಮುಂತಾದ ದೇವತೆಗಳನ್ನು ಒಪ್ಪಿರುತ್ತಾರೆ. ಬುದ್ಧನು ಯಾವ ಅಧ್ಭುತಪವಾಡಗಳನ್ನೂ ಮೆಚ್ಚುತ್ತಲಿರಲಿಲ್ಲವಾದರೂ ಅವನ ಅನುಯಾಯಿಗಳು ಅವನ ಜೀವನಚರಿತ್ರೆಯ ವಿಷಯದಲ್ಲಿಯೇ ಚಿತ್ರವಿಚಿತ್ರ ಅದ್ಭುತಗಳ ಕಥೆಗಳನ್ನು ಕಲ್ಪಿಸಿರುತ್ತಾರೆ. ಈಚಿನ ಬೌದ್ಧರಲ್ಲಿ ಅನೇಕ ಮಂತ್ರತಂತ್ರಗಳೇ ಮುಂತಾದ ಕಲಾಪಗಳೂ ಹೇರಳವಾಗಿ ಹಬ್ಬಿಕೊಂಡಿರುತ್ತವೆ. ಇದೆಲ್ಲ ಹೇಗಾದರೂ ಇರಲಿ, ಬುದ್ಧನು ಪ್ರಧಾನವಾಗಿ ಉಪದೇಶಿಸಿದ ಪ್ರತೀತ್ಯಸಮುತ್ಪಾದದ ಅರ್ಥವೇನೆಂಬುದೇ ವಿವಾದಾಸ್ಪದವಾಗಿಬಿಟ್ಟಿದೆ. ಹೀನಯಾನದವರ ಮತದಂತೆ **ಧರ್ಮಗಳು**- ಸ್ಕಂಧ, ಆಯತನ, ಧಾತು- ಇವು ಬೇರೆಬೇರೆಯಾಗಿ ಅನಿತ್ಯವಾಗಿದ್ದರೂ ಸತ್ಯವಾಗಿರುತ್ತವೆ; ಆದರೆ ಮಹಾಯಾನದವರ ಮತದಲ್ಲಿ ಅವು ವಿಜ್ಞಾನಮಾತ್ರವಾಗಿರುತ್ತವೆ, ಅಥವಾ ಶೂನ್ಯ (ನಿಃಸ್ವಭಾವ)ವಾಗಿರುತ್ತವೆ. ಹೀಗೆ ಭರತಖಂಡದಲ್ಲಿ ಯಾವ ಸನಾತನವೈದಿಕಮತದಿಂದ ಬೌದ್ಧಮತವು ಒಡೆದುಕೊಂಡು ಬೇರೆಯಾಗಿದ್ದಿತೋ ಆ ಮತದಲ್ಲಿಯೇ ಈಚೆಗೆ ಅನೇಕ ಕಾರಣಗಳಿಂದ ಬೇರೆಬೇರೆಯ ಪ್ರಕಾರದಿಂದ ಒಂದಾಗಿಬಿಟ್ಟಿದೆಯೆಂದು ಹೇಳಬಹುದು. ಗೌತಮಬುದ್ಧನ ಹೆಸರನ್ನು ತಮ್ಮ ಕರ್ಮಗಳಲ್ಲಿ ಮಾಡುವ ಸಂಕಲ್ಪದಲ್ಲಿ 'ಬೌದ್ಧಾವತಾರೇ' ಎಂಬ ಹೆಸರಿನಲ್ಲಿ ಹಿಂದುಗಳು ಇನ್ನೂ ಉಳಿಸಿಕೊಂಡಿರುತ್ತಾರೆ. ಆದರೆ ಅವನೇ ಐತಿಹಾಸಿಕಬುದ್ಧನು ಎಂಬ ವಿಷಯಕ್ಕೂ ಭಿನ್ನಾಭಿಪ್ರಾಯವಿಲ್ಲದೆ ಇಲ್ಲ.

★★★★★

# ಬುದ್ಧನ ಜಯಗಾಥಾ

(ಬುದ್ಧನು ಮಾರನನ್ನು ಜಯಿಸಿದಾಗ ಈ ಗಾಥೆಗಳನ್ನು ಹೇಳಿದನೆಂದು ಬೌದ್ಧರು ಹೇಳುವರು. ಇವು ಧಮ್ಮಪದದ ಜರಾವರ್ಗವೆಂಬ 11ನೆಯ ಅಧ್ಯಾಯ ದಲ್ಲಿವೆ. ಇಲ್ಲಿ ಮನೆಕಟ್ಟುವವನೆಂದರೆ ಬಯಕೆಯು (ತೃಷ್ಣೆ); ಮನೆಯೆಂದರೆ ಶರೀರವು.)

**ಅನೇಕಜಾತಿಸಂಸಾರಂ ಸಂಧಾವಿಸ್ಸಂ ಅನಿಬ್ಬಿಸಂ**
**ಗಹಕಾರಕಂ ಗವೇಸನ್ತೋ ದುಃಖಾ ಜಾತಿ ಪುನಪ್ಪುನಂ ॥**

ಭಾವಾರ್ಥ:- ಎಷ್ಟೋ ಜನ್ಮಗಳನ್ನು ಹೊಂದುತ್ತಾ ಸಂಸಾರದಲ್ಲಿ ಒಂದೇಸಮನೆ ತೊಳಲಿದೆನು; ಮನೆಯನ್ನು ಕಟ್ಟುವಾತನನ್ನು ಹುಡುಕಿಕೊಂಡು ಹೊರಟು ದುಃಖಮಯವಾದ ಜನ್ಮಗಳನ್ನು ಮತ್ತೆ ಮತ್ತೆ ಹೊಂದಿದೆನು.

**ಗಹಕಾರಕ, ದಿಟ್ಠೋಽಸಿ ಪುನ ಗೇಹಂ ನ ಕಾಹಸಿ।**
**ಸಬ್ಬಾ ತೇ ಫಾಸುಕಾ ಭಗ್ಗಾ ಗಹಕೂಟಂ ವಿಸಙ್ಖಿತಂ ।**
**ವಿಸಙ್ಖಾರಗತಂ ಚಿತ್ತಂ ತಣ್ಹಾ ಕ್ಖಯಮಿಧಜ್ಝಗಾ ॥**

ಭಾವಾರ್ಥ:- ಎಲೈ ಮನೆಕಟ್ಟುವಾತನೆ, ನಿನ್ನನ್ನು ಕಂಡುಬಿಟ್ಟೆನು; ಇನ್ನು ಮೇಲೆ ಮತ್ತೆ ಮನೆಯನ್ನು ಕಟ್ಟಲಾರೆ, ಇಗೋ ನಿನ್ನ ತೀರುಗಳೆಲ್ಲವೂ ಮುರಿದವು; ಬೆಂಗಟೆಯು ಸೀಳಿ ಹೋಯಿತು, ಚಿತ್ತವು ಬಿಚ್ಚಿಕೊಂಡಿತು, ಇಲ್ಲಿಯೇ ತೃಷ್ಣೆಯು ಸವೆದುಹೋಯಿತು.

★★★★★

# ತಿಳಿದವರು ವಾದಮಾಡುವ ರೀತಿ

## (‘ಮಿಳಿಂದಪ್ರಶ್ನೆ’ಯೆಂಬ ಬೌದ್ಧರ ಗ್ರಂಥದಿಂದ)

**ಮಿಳಿಂದ:** ಪೂಜ್ಯರೆ ಇನ್ನೊಂದು ಸಲ ನಾವಿಬ್ಬರೂ ತತ್ತ್ವವಿಚಾರವಾಗಿ ವಾದಮಾಡೋಣವೆ?

**ನಾಗಸೇನ:** ಮಹಾರಾಜನೆ, ನೀನು ಪಂಡಿತನಾಗಿ ವಾದಮಾಡುವದಾದರೆ ಆಗಲಿ, ಆದರೆ ನೀನು ರಾಜನಾಗಿ ವಾದಮಾಡಬೇಕೆಂದಿದ್ದರೆ ನನ್ನಿಂದಾಗದು.

**ಮಿಳಿಂದ:** ಹಾಗಾದರೆ ಪಂಡಿತರು ವಾದಮಾಡುವ ಬಗೆ ಹೇಗೆ?

**ನಾಗಸೇನ:** ಪಂಡಿತರು ಒಬ್ಬರೊಡನೊಬ್ಬರು ತತ್ತ್ವವಿಚಾರಮಾಡುತ್ತಿರುವಾಗ ಏನಾದರೂ ಗೊತ್ತಾದ ಉಪಸಂಹಾರವಾಗುವದು, ಯಾವದಾದರೂ ಒಂದು ತತ್ತ್ವವು ಹೊರಬೀಳುವದು; ಅವರಲ್ಲಿ ಯಾರಾದರೊಬ್ಬರದು ತಪ್ಪೆಂದು ಗೊತ್ತಾಗುವದು. ಆಗ ಅವರು ತಮ್ಮದು ತಪ್ಪೆಂದು ಒಪ್ಪಿಕ್ಕೊಳ್ಳುವರು. ಪಕ್ಷಪ್ರತಿಪಕ್ಷಗಳು ನಡೆದೇ ಇರುತ್ತವೆ, ಆದರೂ ಅವರು ಸಿಟ್ಟಿಗೇಳುವದಿಲ್ಲ. ರಾಜನೆ, ಪಂಡಿತರು ವಾದಮಾಡುವ ಬಗೆ ಹೀಗೆ.

**ಮಿಳಿಂದ:** ಸರಿ, ದೊರೆಗಳು ವಾದಮಾಡುವ ರೀತಿಯೊ?

**ನಾಗಸೇನ:** ಮಹಾರಾಜನೆ, ಒಬ್ಬ ಅರಸು ವಾದಮಾಡುತ್ತಿರುವಾಗ ಅವನು ಏನಾದರೂ ಒಂದು ವಿಷಯವನ್ನು ಹೇಳಿದ ಮೇಲೆ ಅದೇ ವಿಷಯದಲ್ಲಿ ಮತ್ತೊಬ್ಬರು ಬೇರೆ ಅಭಿಪ್ರಾಯವನ್ನು ಕೊಟ್ಟರೆ, ‘‘ಎಲಾ, ಇವನಿಗೆ ಇಂಥ ಶಿಕ್ಷೆಯನ್ನು ಮಾಡಿರೊ!’’ ಎಂದು ದಂಡಿಸುವನು. ಮಹಾಪ್ರಭುವೆ, ದೊರೆಗಳು ವಾದಮಾಡುವ ಪರಿ ಹೀಗೆ.

**ಮಿಳಿಂದ:** ಒಳ್ಳೇದು, ನಾನು ಪಂಡಿತರಂತೆಯೇ ವಾದಮಾಡುವೆನೇ ಹೊರತು ರಾಜರ ವಾದವನ್ನು ಮಾಡುವದಿಲ್ಲ. ತಾವು ತಮ್ಮ ಸಹೋದರನೊಂದಿಗೋ ಅಥವಾ ಹೊಸಬನೊಂದಿಗೋ, ಅಥವಾ ಏನೂ ತಿಳಿಯದ ಶಿಷ್ಯನೊಂದಿಗೋ, ಅದೂ ಇಲ್ಲದಿದ್ದರೆ ಒಬ್ಬ ಸೇವಕನೊಂದಿಗೋ ಮಾತಾಡುವ ಹಾಗೆಯೇ ಯಾವ ಸಂಕೋಚವೂ ಇಲ್ಲದಂತೆ ಮಾತಾಡಿರಿ, ಹೆದರಬೇಕಾದದ್ದೇನೂ ಇಲ್ಲ.

★★★★★

# ಭಿಕ್ಷುಗಳೇಕೆ ತಮ್ಮ ದೇಹದ ಪೋಷಣೆಯನ್ನು ಮಾಡಿಕೊಳ್ಳುವರು?

### ('ಮಿಳಿಂದಪ್ರಶ್ನೆ'ಯೆಂಬ ಬೌದ್ಧರ ಗ್ರಂಥದಿಂದ)

**ರಾಜ:-** 'ನಾಗಸೇನರೆ, ಬೌದ್ಧಭಿಕ್ಕುಗಳಾದ ನಿಮ್ಮಗಳಿಗೆ ದೇಹದಲ್ಲಿ ಅಭಿಮಾನವುಂಟೆ?'

**ನಾಗಸೇನ:-** 'ಇಲ್ಲವಯ್ಯ, ನಮಗೆ ಅದರಲ್ಲೇನೂ ಪ್ರೀತಿಯಿರುವದಿಲ್ಲ.'

**ರಾಜ:-** 'ಹಾಗಾದರೆ ತಾವು ಅದನ್ನು ಪೋಷಣೆಮಾಡಿಕೊಳ್ಳುವದೇಕೆ? ಅದನ್ನು ಅಷ್ಟೊಂದು ಬಗೆಯಿಂದ ನೋಡಿಕೊಳ್ಳುವದೇಕೆ?'

**ನಾಗಸೇನ:-** 'ಪ್ರಭುವೆ, ನೀನು ಎಷ್ಟೋ ಸಲ ಎಷ್ಟೋ ಕಡೆಗಳಲ್ಲಿ ಯುದ್ಧಕ್ಕೆ ಹೋಗಿರುವೆಯಷ್ಟೆ. ನಿನಗೆ ಬಾಣದಿಂದ ಗಾಯವಾದದ್ದೇ ಇಲ್ಲವೆ?'

**ರಾಜ:-** 'ಉಂಟು. ಕೆಲವು ವೇಳೆ ಆಗಿರುತ್ತದೆ.'

**ನಾಗಸೇನ:-** 'ಇಂಥ ಸಂದರ್ಭಗಳಲ್ಲಿ ಗಾಯಕ್ಕೆ ಮುಲಾಮುಹಾಕಿ, ಎಣ್ಣೆಯನ್ನು ಸವರಿ, ಮೇಲೆ ಬಟ್ಟೆ ಕಟ್ಟುವುದಿಲ್ಲವೆ?'

**ರಾಜ:-** 'ಉಂಟು, ಹಾಗೆ ಮಾಡಿರುವದುಂಟು.'

**ನಾಗಸೇನ:-** 'ಹಾಗಾದರೇನು ಗಾಯವನ್ನು ಕಂಡರೆ ನಿನಗೆ ಅಷ್ಟೊಂದು ಪ್ರೀತಿಯೆ; ಅದನ್ನು ಹೀಗೆಲ್ಲ ಉಪಚರಿಸಿ, ಇಷ್ಟೊಂದು ಬಗೆಯಿಂದ ನೋಡಿ ಕೊಂಡೆಯಲ್ಲ?'

**ರಾಜ:-** 'ಇಲ್ಲ, ಇಷ್ಟೆಲ್ಲ ಮಾಡಿದರೂ ನನಗೇನೂ ಅದು ಪ್ರಿಯವಾದದ್ದಲ್ಲ; ನಾನು ಹೀಗೆಲ್ಲ ಮಾಡಿದ್ದು ಮಾಂಸವು ಸರಿಯಾಗಿ ಬೆಳೆದುಕೊಳ್ಳಲೆಂದೇ ಆಗಿ ರುತ್ತದೆ.'

**ನಾಗಸೇನ:-** 'ಮಹಾರಾಜನೆ, ಭಿಕ್ಕುಗಳ ಮತ್ತು ಅವರ ಶರೀರದ ವಿಚಾರವೂ ಹೀಗೆಯೇ. ಶರೀರದಲ್ಲಿ ಆಸಕ್ತಿಯಿಲ್ಲದೆಯೆ ಧರ್ಮಕ್ಕಾಗಿ ಅವರು ಅದನ್ನು ಪೋಷಿಸುತ್ತಿರುವರು.'

★★★★★

# ಶುದ್ಧವಾದ ನಿರ್ವಾಣಕ್ಕೆ ಹಾದಿ

1. ಸಂಸ್ಕಾರಗಳೆಲ್ಲ ಅನಿತ್ಯವೆಂದು ಯಾವಾಗ ಪ್ರಜ್ಞೆಯಿಂದ ಕಂಡುಕೊಳ್ಳುವನೋ, ಆಗ ದುಃಖಕ್ಕೆ ಬೇಸರುವನು, ವಿಶುದ್ಧಿಗೆ ಇದೇ ಹಾದಿಯು.

2. ಸಂಸ್ಕಾರಗಳೆಲ್ಲ ದುಃಖವೆಂದು ಯಾವಾಗ ಪ್ರಜ್ಞೆಯಿಂದ ಕಂಡುಕೊಳ್ಳುವನೋ, ಆಗ ದುಃಖಕ್ಕೆ ಬೇಸರುವನು, ವಿಶುದ್ಧಿಗೆ ಇದೇ ಹಾದಿಯು.

3. ಧರ್ಮಗಳೆಲ್ಲ ಆತ್ಮವಿಲ್ಲದವು ಎಂದು ಯಾವಾಗ ಪ್ರಜ್ಞೆಯಿಂದ ಕಂಡುಕೊಳ್ಳುವನೋ ಆಗ ದುಃಖಕ್ಕೆ ಬೇಸರುವನು, ವಿಶುದ್ಧಿಗೆ ಇದೇ ಹಾದಿಯು.

**- ಧಮ್ಮಪದ**

★★★★★

# ಕ್ರೈಸ್ತಮತ

## ಏಸುಕ್ರಿಸ್ತ

### ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳು

ಡಿಸೆಂಬರು 24ನೆಯ ತಾರೀಖು ಜಗತ್ಪ್ರಸಿದ್ಧನಾದ ಏಸುಕ್ರಿಸ್ತಸ್ವಾಮಿಯ ಜನ್ಮದಿನವು. ಆತನ ಅನುಯಾಯಿಗಳೆಂದೂ ಕ್ರಿಸ್ತಿಯನ್ನರೆಂದೂ ಕರೆದುಕೊಳ್ಳುತ್ತಿರುವವರು ನಾಗರಿಕಪ್ರಪಂಚದ ಎಲ್ಲಾ ಭಾಗದಲ್ಲಿಯೂ ಇರುತ್ತಾರೆ. ನಮ್ಮ ಭರತಖಂಡದಲ್ಲಿಯೂ ಆತನ ವಚನವನ್ನು ಸತ್ಯವೇದವೆಂದು ನಂಬುವವರು ಲಕ್ಷಗಟ್ಟಲೆಯಾಗಿರುತ್ತಾರೆ. ಆತನ ಸೂಕ್ತಿಯಿಂದೊಡಗೂಡಿದ ಬೈಬಲು ಪತ್ರಿಗಳನ್ನು ಕೋಟಿಗಟ್ಟಲೆಯಾಗಿ ಜನರ ಕಲ್ಯಾಣಕ್ಕೆಂದು ಪ್ರಪಂಚದಲ್ಲಿ ಕ್ರಿಸ್ತಿಯನ್ನರು ಹಂಚುವರು; ತಮ್ಮ ಮತದ ಹೆಚ್ಚುಗಾರಿಕೆಯನ್ನು ಬೋಧಿಸುವದಕ್ಕಾಗಿ ಅಗಣಿತ ಸಂಸ್ಥೆಗಳನ್ನು ಏರ್ಪಡಿಸಿರುತ್ತಾರೆ. ಸ್ಕೂಲುಗಳು, ಆಸ್ಪತ್ರೆಗಳು, ಪುಸ್ತಕ ಪ್ರಚಾರ ಸಂಘಗಳು, ಪ್ರಾಚೀನತತ್ತ್ವಶೋಧನಾಲಯಗಳು – ಇವುಗಳನ್ನೆಲ್ಲ ಪ್ರಪಂಚದ ಎಲ್ಲಾ ಕಡೆಯಲ್ಲಿಯೂ ಹೇಗೋ ಹಾಗೆ ನಮ್ಮ ದೇಶದಲ್ಲಿಯೂ ಹರಡುತ್ತಾ ತಮ್ಮ ಮತಪ್ರಸಾರವನ್ನೂ ಮಾಡುತ್ತಿರುವ ಲೆಕ್ಕವಿಲ್ಲದಷ್ಟು ಮಿಷನರಿಗಳು ಇರುವರು. ಭರತಖಂಡಕ್ಕೆ ಸದ್ಯಕ್ಕೆ ಪ್ರಭುಗಳಾಗಿರುವ ಆಂಗ್ಲೇಯರು ಈ ಮತದವರು. ಈ ಎಲ್ಲಾ ಕಾರಣಗಳಿಂದ ಕ್ರಿಸ್ತನ ಜೀವನಚರಿತ್ರೆಯನ್ನು ನೆನಪಿಗೆ ತಂದುಕೊಳ್ಳುವದು ನಮಗೆಲ್ಲರಿಗೂ ಯೋಗ್ಯವಾಗಿರುವದು.

ಸೇಂಟ್ ಮಾಥ್ಯು, ಸೇಂಟ್ ಮಾರ್ಕ್, ಸೇಂಟ್ ಲ್ಯೂಕ್, ಸೇಂಟ್ ಜಾನ್ – ಎಂಬ ನಾಲ್ಕು ಜನ ಮಹಾತ್ಮರು ಆತನ ದಿವ್ಯಚರಿತ್ರೆಯನ್ನು ಬರೆದಿರುತ್ತಾರೆ. ಅವರು ಬರೆದಿರುವದರಲ್ಲಿ ಕೆಲಕೆಲವು ಸಂಗತಿಗಳು ಒಂದಕ್ಕೊಂದು ಹೊಂದುವದಿಲ್ಲವಾದರೂ ಮುಖ್ಯವಾದ ವಿಷಯಗಳೆಲ್ಲವೂ ಸಮಾನವಾಗಿರುತ್ತವೆ. ಆತನ ಜನ್ಮದಿಂದ ಹಿಡಿದು ಸ್ವರ್ಗಾರೋಹಣದವರೆಗಿನ ಚರಿತ್ರೆಯು ಅದ್ಭುತಲೀಲೆಗಳಿಂದ ತುಂಬಿತುಳುಕುತ್ತಿರುವದು. ಮೇರಿ ಎಂಬ ಕನ್ಯೆಯಲ್ಲಿ ಜನನ, ಹುಟ್ಟುವ ವೇಳೆಗೆ ಉದಿಸಿದ ಒಂದಾನೊಂದು ನಕ್ಷತ್ರದ ಸಂಚಾರಕ್ರಮವನ್ನನುಸರಿಸಿ ಪೂರ್ವದೇಶದ

ಕೆಲವು ಋಷಿಗಳು ಬಂದು ಆತನನ್ನು ಪೂಜೆಸಿದ್ದು, ಹನ್ನೆರಡನೆಯ ವರ್ಷದಲ್ಲಿಯೇ ಜೆರೂಸಲೆಮ್ಮಿನಲ್ಲಿ ವಿದ್ವಾಂಸರೊಡನೆ ಧಾರ್ಮಿಕ ವಿಚಾರವನ್ನು ಚರ್ಚೆಮಾಡಿದ್ದು ಜಾನನಿಂದ ಜ್ಞಾನಸ್ನಾನವನ್ನು ಹೊಂದಿದ ಬಳಿಕ ಧರ್ಮಪೀಠಗಳಲ್ಲಿ ನಿಂತು ಅಲ್ಲಲ್ಲಿ ಉಪದೇಶಮಾಡಿ ಜನರನ್ನು ಬೆರಗು ಮಾಡಿದ್ದು, ನೀರನ್ನು ದ್ರಾಕ್ಷಾಮದ್ಯವಾಗಿ ಮಾಡಿದ್ದು, ರೋಗಿಗಳನ್ನು ವಚನ ಮಾತ್ರದಿಂದಲೂ ಸ್ಪರ್ಶಮಾತ್ರದಿಂದಲೂ ವಾಸಿಮಾಡಿದ್ದು. ಮೂಕರಿಗೆ ಮಾತುಕೊಟ್ಟಿದ್ದು, ಕುರುಡರಿಗೆ ಕಣ್ಣುಕೊಟ್ಟಿದ್ದು, ಸತ್ತವರನ್ನು ಬದುಕಿಸಿದ್ದು, ಅನ್ನವನ್ನು ಅಕ್ಷಯಮಾಡಿದ್ದು, ನೀರಿನ ಮೇಲೆ ನಡೆದದ್ದು. ಬಿರುಗಾಳಿಯನ್ನು ಶಾಂತಿಗೊಳಿಸಿದ್ದು, ತನ್ನ ಮರಣವಿಚಾರವನ್ನು ಮೊದಲೇ ತಿಳಿಸಿದ್ದು. ಶಿಲುಬೆಯ ಮೇಲೆ ಮರಣವನ್ನು ಹೊಂದಿದ ಮೇಲೆ ಮತ್ತೆ ಎದ್ದದ್ದು ಆಮೇಲೂ ಬೇರೆಬೇರೆ ಸ್ಥಳಗಳಲ್ಲಿ ಜನರಿಗೆ ಕಾಣಿಸಿಕೊಂಡದ್ದು ಎಲ್ಲರೂ ನೋಡುತ್ತಿದ್ದ ಹಾಗೆಯೇ ಆಕಾಶಕ್ಕೇರಿ ಬಳಿಗೆ ದೇವರ ಹೋದದ್ದು – ಇಂಥ ಲೀಲೆಗಳು ನಮ್ಮ ದೇಶದ ಓದುಗರಿಗೆ ಮಹಾರಾಷ್ಟ್ರದ ಭಕ್ತಿವಿಜಯದ ನೆನಪನ್ನು ತಪ್ಪದೆ ತಂದು ಕೊಡುತ್ತವೆ.

ಯಹೂದ್ಯರಲ್ಲಿ ಕ್ರೈಸ್ತನೆಂಬ ಮಾತನ್ನು ನಾವು ಕಲ್ಕಿ ಎಂಬ ಶಬ್ದವನ್ನುಪಯೋಗಿಸುವಂತೆ ಉಪಯೋಗಿಸುತ್ತಿದ್ದರು, ಕಲ್ಕ್ಯವತಾರವಾಗಿ ಧರ್ಮಸ್ಥಾಪನೆಯಾಗುವದೆಂದು ಹಿಂದುಗಳು ನಂಬುವಂತೆ ಒಬ್ಬಾನೊಬ್ಬ ಮುಕ್ತಿದಾಯಕನು ಮುಂದೆ ಅವತರಿಸುವನೆಂದು ಆ ಜನರು ನಂಬಿಕೊಂಡಿದ್ದರು. ಏಸುಸ್ವಾಮಿಯು ತಾನೇ ಆ ರಕ್ಷಕನೆಂದು ಹೇಳಿಕೊಂಡಿದ್ದಲ್ಲದೆ. ತಾನು ಈಶ್ವರನ ಪ್ರೇಮಪುತ್ರನೆಂದೂ ಜನರಿಗೆ ದೇವರಾಜ್ಯವನ್ನು ಬೋಧಿಸುವದಕ್ಕಾಗಿ ಬಂದಿರುವನೆಂದೂ ತಿಳಿಸಿದನು. ಆತನಿಗೆ ಜ್ಞಾನಸ್ನಾನವನ್ನು ಮಾಡಿಸಿದ ಜಾನನೂ ಇನ್ನೂ ಅನೇಕರೂ ಆತನೇ ಇಂಥ ಕ್ರೈಸ್ತಭಗವಂತನೆಂಬ ವಾರ್ತೆಯನ್ನು ಹರಡಿದರು.

ಕ್ರಿಸ್ತನು ಮಾಡಿತೋರಿಸಿದ ಅದ್ಭುತಲೀಲೆಗಳು, ಆತನು ಯಹೂದ್ಯರ ಧರ್ಮಪೀಠಗಳಲ್ಲಿ ನಿಂತು ಮಾಡಿದ ಹೊಸ ಬೋಧನೆಗಳು, ಸಂಪ್ರದಾಯ ಶರಣರ ಮತ್ತು ಶಾಸ್ತ್ರದ ಅಕ್ಷರವನ್ನು ಮಾತ್ರ ಹಿಡಿದಿದ್ದವರ ದೋಷಗಳನ್ನು ಬೆಳಕಿಗೆ ತಂದು ಮುಚ್ಚುಮರೆಯಿಲ್ಲದೆ ಆತನು ಆಡಿದ ಖಂಡಿತವಾದ ವಚನಗಳು, ಯಹೂದ್ಯರ ಕೆಲವು ಆಚಾರಗಳಿಗೆ ವಿರೋಧವಾಗಿ ಆಗಾಗ್ಗೆ ಆತನು ನಡೆದದ್ದು – ಇವೆಲ್ಲ ಯಹೂದ್ಯಜನರು ಆತನನ್ನು ದ್ವೇಷಿಸುವಂತೆ ಮಾಡಿದವು. ಕ್ರೈಸ್ತನು ದೇವರ

ರಾಜ್ಯವು ಇಷ್ಟರಲ್ಲಿಯೇ ಬರುವದೆಂದು ಮಾಡುತ್ತಿದ್ದ ಉಪದೇಶದ ತಿರುಳನ್ನು ಆ ಜನರು ಹಿಡಿಯಲಾರದೆ ಅದರ ಅಕ್ಷರಾರ್ಥವನ್ನು ಮುಂದುಮಾಡಿ ತಾನೇ ಎಲ್ಲರಿಗೂ ರಾಜನೆಂದು ಇವನು ಹೇಳಿಕೊಳ್ಳುತ್ತಾನೆಂಬ ಬಣ್ಣವನ್ನು ಅದಕ್ಕೆ ಕೊಟ್ಟು ಸರಕಾರದವರ ಸಹಾಯದಿಂದ ಅವನನ್ನು ಶಿಲುಬೆಗೇರಿಸಿ ಕೊಲ್ಲಿಸುವ ಏರ್ಪಾಡು ಮಾಡಿಸಿದರು. ಹೀಗೆ ಕ್ರೈಸ್ತನನ್ನು ಕೊಂದದ್ದೂ ಅವನ ಶಿಷ್ಯರಿಗೆ ಚಿತ್ರಹಿಂಸೆಯನ್ನು ಕೊಟ್ಟದ್ದೂ ಆತನ ಉಪದೇಶಗಳು ಹೆಚ್ಚಾಗಿ ಹರಡಿಕೊಳ್ಳುವದಕ್ಕೆ ಮತ್ತಷ್ಟು ಸಹಾಯವಾದವು.

ಇತಹಾಸದ ದೃಷ್ಟಿಯಿಂದ ಏಸುಕ್ರಿಸ್ತನ ಜೀವನಚರಿತ್ರೆಯು ಯಾವುದೋ ಒಂದು ಸಣ್ಣ ದೇಶಕ್ಕೆ ಸೇರಿದ್ದಾದರೂ ಆತನು ಮಾಡಿರುವ ಉಪದೇಶದ ಘನತೆಯ ದೃಷ್ಟಿಯಿಂದ ಅದು ಇಡಿಯ ಭೂಮಂಡಲಕ್ಕೇ ಸಂಬಂಧಪಟ್ಟದ್ದಾಗಿರುತ್ತದೆ. ಕ್ರೈಸ್ತನು ಜನರಿಗೆ ಮಾಡಿರುವ ಉಪದೇಶಗಳನ್ನು ಮುಖ್ಯವಾಗಿ **ಈಶ್ವರ ಪ್ರೇಮ, ಜನತಾಪ್ರೇಮ** – ಎಂಬ ಎರಡು ಮಾತುಗಳಲ್ಲಿ ಅಡಕಮಾಡಬಹುದಾಗಿರುತ್ತದೆ. ಗೌತಮಬುದ್ಧನ ಹಾಗೆಯೇ ಕ್ರಿಸ್ತನು ಬಡವರ ಮೇಲೆ ಕರುಣ, ಪಾಪಿಗಳಿಗೆ ಪಶ್ಚಾತ್ತಾಪದಿಂದ ಶುದ್ಧಿ, ಧರ್ಮಕ್ಕಾಗಿ ತನುಮನಧನಗಳನ್ನು ಧಾರೆ ಎರೆಯುವವರ ಧನ್ಯತೆ, ಅಪಕಾರಿಗಳಿಗೆ ಕೂಡ ಉಪಕಾರವನ್ನು ಮಾಡಿ ಅವರನ್ನು ಪ್ರೇಮದಿಂದ ಕಾಣುವದರ ಘನತೆ – ಇಂಥ ಸಾಧನಗಳನ್ನೇ ಮುಖ್ಯವಾಗಿ ಉಪದೇಶಿಸಿದನು ಬುದ್ಧನಂತೆಯೇ ಧರ್ಮೋಪದೇಶಕರ ಸಂಘವೊಂದನ್ನು ಏರ್ಪಡಿಸಿ ಧರ್ಮವನ್ನು ಹರಡುವಂತೆ ಪ್ರೋತ್ಸಾಹಪಡಿಸಿದನು, ಬುದ್ಧನ ಉಪದೇಶಗಳಂತೆಯೇ ಇವನ ಧರ್ಮೋಪದೇಶಗಳು ಉಪಕಥೆಗಳಿಂದಲೂ ದೃಷ್ಟಾಂತಗಳಿಂದಲೂ ತುಂಬಿತುಳುಕುತ್ತಿರುವವು. ಆದರೆ ಬುದ್ಧನು ತಾನು ಅವತರಿಸಿದ ಭೂಮಿಯಲ್ಲಿ ಬಹುಕಾಲ ಮತೋಪದೇಶವನ್ನು ಮಾಡುತ್ತಿದ್ದು ಕೊನೆಗೆ ಈಶ್ವರನ ಅವತಾರವೆಂದು ಜನರಿಂದ ಪೂಜ್ಯತೆಯನ್ನು ಪಡೆದನು; ಇದಕ್ಕೆ ಬದಲು ಕ್ರೈಸ್ತನು ತನ್ನ ಜನರಾದ ಯಹೋದ್ಯರಿಗೆ ಪರಮವೈರಿಯಾಗಿ ತೋರಿ ಆತನ ಉದಾತ್ತವಾದ ಉಪದೇಶಗಳು ದೇಶದಲ್ಲಿ ಹರಡುವದಕ್ಕೆ ಮೊದಲಾದ ಮೂರು ನಾಲ್ಕು ವರ್ಷದಲ್ಲಿಯೇ ಅವರಿಂದ ಚಿತ್ರಹಿಂಸೆಯನ್ನನುಭವಿಸಿದನೆಂಬುದು ಮಾತ್ರ ತುಂಬ ಶೋಚನೀಯವು.

★★★★★

# ಕ್ರೈಸ್ತಜಯಂತಿ

## ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು

ಕ್ರಿಸಮಸ್ ಹಬ್ಬವನ್ನು ಕ್ರಿಸ್ತಿಯನ್ನರು ಮಾಡುತ್ತಾರೆ. ಆದರೆ ಕೆಲ ವಿದ್ಯಾಶಾಲೆಗಳು, ನ್ಯಾಯಸ್ಥಾನಗಳು, ಕಚೇರಿಗಳು–ಮುಂತಾದವುಗಳಲ್ಲಿ ಕೆಲಸ ಮಾಡುವವರಿಗೆ ''ಕ್ರಿಸಮಸ್ ರಜ'' ಎಂಬುದು ಕೇಳಿಕೇಳಿ ರೂಢಿಯಾಗಿ ಬಿಟ್ಟಿರುತ್ತದೆ. ಡಿಸೆಂಬರು 25 ರಿಂದ ಜನವರಿ 6ರ ವರೆಗೆ ಕ್ರಿಸ್ತರ ಹಬ್ಬವೆಂದು ನಮ್ಮಲ್ಲಿ ಅನೇಕರಿಗೆ ಗೊತ್ತು; ಆದರೆ ಆ ದಿನಗಳಲ್ಲಿ ಯಾವ ನಿಮಿತ್ತದಿಂದ ಅವರು ಹಬ್ಬವನ್ನು ಆಚರಿಸುತ್ತಾರೆ ಎಂಬುದು ನಮಗೆ ಅಷ್ಟು ಸರಿಯಾಗಿ ತಿಳಿಯದು. ಈ ಲೇಖನದಲ್ಲಿ ಕ್ರಿಸಮಸ್ ಡೇ–ಕ್ರೈಸ್ತ ಜಯಂತಿಯ ವಿಷಯವಾಗಿ ಕೆಲವು ವಾಕ್ಯಗಳನ್ನು ಬರೆಯಬೇಕೆಂದಿರುವೆನು.

ಜೀಸಸ್ ಕ್ರೈಸ್ತನು ಹುಟ್ಟಿದ್ದು ಡಿಸೆಂಬರು 25 ನೆಯ ದಿನ. ಆದ್ದರಿಂದ ಆ ದಿನ ''ಕ್ರಿಸಮಸ್ ದಿನ''ವೆಂದು ಪ್ರಸಿದ್ಧವಾಗಿರುತ್ತದೆ. ಆತನ ಜನ್ಮವು ಹೇಗೆ ಆಯಿತು? ಶ್ರೀ ಕೃಷ್ಣನ ಜಯಂತಿಯು ನಂದನ ಮನೆಯಲ್ಲಿ ಆದಂತೆ ಎಲ್ಲಿಯೋ ಒಂದು ಅ ಪ್ರಸಿದ್ಧ ಮೂಲೆಯಲ್ಲಿ ಆಯಿತು. ಆಗಿನ ಕಾಲದ ಯಹೂದ್ಯರು ರೋಮನರ ಆಳ್ವಿಕೆಯಲ್ಲಿದ್ದರು. ತಾವು ಸ್ವರಾಜ್ಯವನ್ನು ಪಡೆಯುವ ಕಾಲವು ಒಂದಲ್ಲ ಒಂದು ದಿನ ಪ್ರಾರಂಭವಾದೀತೆಂದು ಅವರ ಆಶೆ. ಅವರನ್ನೆಲ್ಲ ಬಿಡುಗಡೆ ಮಾಡುವ ಒಬ್ಬಾನೊಬ್ಬ ರಕ್ಷಕನು ಉದಯಿಸುವನೆಂದು ಅವರಿಗೆ ಅನೇಕರು ಭವಿಷ್ಯನುಡಿದದ್ದು ತಿಳಿದಿತ್ತು. ಆದರೆ ಅವನು ಜೆರುಸಲಂ ನಗರಿಯಲ್ಲಿ, ಅರಮನೆಯಲ್ಲಿ ಹುಟ್ಟುವನೆಂದೇ ಅವರ ಭಾವನೆಯಿತ್ತು. ಆದರೆ ಅವನು ಹುಟ್ಟಿದ್ದು 'ಬೆತ್ಲೆಹೆಂ' ಎಂಬ ಊರಿನಲ್ಲಿ; ಅದರಲ್ಲಿಯೂ ಮನೆಯ ಒಳಗಲ್ಲ, ಒಂದು ಕೊಟ್ಟಿಗೆಯಲ್ಲಿ!

ರೋಮನ್ನರು ಒಂದು ತಲೆಗಂದಾಯವನ್ನು ಹಾಕಿದರು. ಪ್ರತಿಯೊಬ್ಬರೂ ಕಂದಾಯವನ್ನು ಕೊಟ್ಟು ತಮ್ಮ ತಮ್ಮ ಹೆಸರನ್ನು ರಿಜಸ್ಟರಿನಲ್ಲಿ ಬರೆಯಿಸಬೇಕಾಯಿತು. ಯಹೂದ್ಯರು ತಮ್ಮ ಕಂದಾಯವನ್ನು ಎಲ್ಲಿ ಬೇಕಾದರೂ ಕೊಡಬಹುದೆಂದು ಅಧಿಕಾರಿಗಳ ಅನುಜ್ಞೆಯಿತ್ತು. ಆದರೆ ಅವರು ತಮ್ಮ ತಮ್ಮ ಮನೆತನದ ಊರಿನಲ್ಲಿಯೇ ಕಂದಾಯವನ್ನು ಕೊಟ್ಟು, ತಮ್ಮ ಹೆಸರುಗಳನ್ನು

ಅಲ್ಲಿಯೇ ಬರೆಯಿಸಿಕೊಳ್ಳಬೇಕೆಂದು ಹವಣಿಸುತ್ತಿದ್ದರು. ಆದ್ದರಿಂದ ಜೋಸೆಫ್ ಮತ್ತು ಮೇರಿ ಎಂಬ ದಂಪತಿಗಳು ತಮ್ಮ ಪಟ್ಟಣವಾದ ಬೆತ್ಲೆಹೆಮ್ ಎಂಬಲ್ಲಿಯೇ ಕಂದಾಯಕೊಡುವದಕ್ಕೆಂದು ಅಷ್ಟು ದೂರ ಪ್ರಯಾಣವನ್ನು ಮಾಡಬೇಕಾಯಿತು. ಜೋಸೆಫನು ನಾಜರೆತ್ ನಗರಿಯಲ್ಲಿದ್ದರೂ ಡೇವಿಡ್ಡನ ಪಟ್ಟಣವಾದ ಬೆತ್ಲೆಹೆಂಗೆ ಬಂದದ್ದು ತಾನು ಆ ಕಾಲಕ್ಕೆ ಸೇರಿದವನೆಂದು ಲೆಕ್ಕದಲ್ಲಿ ಸೇರಿಸುವದಕ್ಕೆ.

ದಂಪತಿಗಳು ಬರುವ ಹೊತ್ತಿಗೆ ಅಲ್ಲಿಯ ಛತ್ರದಲ್ಲಿ ಜನರು ತುಂಬಿದ್ದರು; ಆದ್ದರಿಂದ ಅವರು ಸ್ಥಲವಿಲ್ಲದೆ ಛತ್ರಕ್ಕೆ ಸೇರಿದ ಕೊಟ್ಟಿಗೆಯಲ್ಲಿ ಅಥವಾ ಲಾಯದಲ್ಲಿ ಇಳಿದುಕೊಳ್ಳಬೇಕಾಯಿತು. ಅಲ್ಲಿ ಆಯಿತು, ಕ್ರೈಸ್ತನ ಜನನ!

ಕ್ರೈಸ್ತನು ಮಹಾತ್ಮನೆಂದು ತಿಳಿಸುವದಕ್ಕೆ ಬೈಬಲಿನಲ್ಲಿ ಕೆಲವು ಘಟನೆಗಳನ್ನು ಬರೆದಿದೆ. ಕೆಲವರು ಕುರುಬರು ಊರ ಹೊರಗೆ ಹೊಲಗಳಲ್ಲಿ ಕುರಿಗಳನ್ನು ಕಾಯುತ್ತಿದ್ದರು; ರಾತ್ರೆಕುರಿಗಳ ರಕ್ಷಣೆಗೆಂದು ಅವರು ಒಬ್ಬರೊಡನೊಬ್ಬರು ಮಾತನಾಡುತ್ತಾ ಎಚ್ಚರವಾಗಿದ್ದಿರಬಹುದು. ಆ ಸಮಯಕ್ಕೆ ಒಬ್ಬ ದೇವದೂತನು ಎಲ್ಲೆಲ್ಲಿಯೂ ತನ್ನ ಶರೀರಕಾಂತಿಯ ಪ್ರಕಾಶವನ್ನು ಬೀರುತ್ತಾ ಬಂದು ''ಹೆದರದಿರಿ, ನಿಮಗೊಂದು ಆನಂದದ ಒಸಗೆಯನ್ನು ತಂದಿರುತ್ತೇನೆ, ಡೇವಿಡ್ಡನ ಬೆತ್ಲೆಹೆಂ ನಗರದಲ್ಲಿ ಎಲ್ಲರಿಗೂ ರಕ್ಷಕನಾದ ಕ್ರೈಸ್ತನ ಜನನವಾಗಿದೆ, ಹೋಗಿ ಬೇಕಾದರೆ ಅಲ್ಲಿರುವ ಕೊಟ್ಟಿಗೆಯಲ್ಲಿ ನೋಡಿರಿ, ದಟ್ಟಗಳನ್ನು ಸುತ್ತಿ ಮಗುವನ್ನು ಮಲಗಿಸಿರುತ್ತಾರೆ!'' ಎಂದನು. ಆಕಾಶದಲ್ಲಿ ದೇವತೆಗಳು ''ಪರಮೇಶ್ವರನಿಗೆ ಜಯವಾಗಲಿ! ಭೂಲೋಕದಲ್ಲಿ ಶಾಂತಿಯಾಗಲಿ! ಜನರಲ್ಲಿ ಒಬ್ಬರೊಬ್ಬರಿಗೆ ಶುಭ ಸಂಕಲ್ಪವುಂಟಾಗಲಿ!'' – ಎಂದು ಗಟ್ಟಿಯಾಗಿ ಹಾಡುತ್ತಿದ್ದರು!

ಮಗುವಿಗೆ ಜೀಸಸ್ ಎಂದು ನಾಮಕರಣವಾಯಿತು. ಜಾತಾಶೌಚವು ಮುಗಿದ ಬಳಿಕ ದಂಪತಿಗಳು ಜೆರೂಸಲೆಂ ನಗರಕ್ಕೆ ಬಂದು ಈಶ್ವರನಿಗೆ ಕಾಣಿಕೆಯನ್ನು ಒಪ್ಪಿಸಿದರು. ಅಲ್ಲಿ ಸಿಮಿಯಾನ್ ಎಂಬ ಒಬ್ಬ ದೈವಭಕ್ತಿಯುತನಾದ ವೃದ್ಧನಿದ್ದನು. ಅವನು ''ಪರಮೇಶ್ವರನು, ನೀನು ಕ್ರೈಸ್ತನನ್ನು ಕಾಣುವವರೆಗೆ ಸಾಯುವದಿಲ್ಲ!'' ಎಂದು ನನಗೆ ಆಭಯವಚನವನ್ನಿತ್ತಿದ್ದನು. ಇಂದಿಗೆ ಆತನ ವಚನವು ಪರಿಪೂರ್ತಿಯಾಯಿತು. ''ಈ ಮಗುವು ಯಹೂದಿಯರಿಗೇ ಕೀರ್ತಿಯನ್ನು

ತರುವಂಥದ್ದು, ಇತರರಿಗೆ ಅಜ್ಞಾನವನ್ನು ಕಳೆಯುವ ಜ್ಯೋತಿಯು!'' ಎಂದು ಹರಸಿದನು!

ಕ್ರಿಸ್ತಿಯನ್ನರು ಕ್ರೈಸ್ತನ ಅವತಾರವು ಲೋಕಕ್ಕೇ ಅನಂದವನ್ನು ತಂದಿತೆಂದು ಭಾವಿಸುತ್ತಾರೆ. ಆತನು ಸರ್ವರ ಪಾಪವನ್ನೂ ಕಳೆಯುವ ಮಾರ್ಗವನ್ನು ತೋರಿಸಿದನು. ಪರಮೇಶ್ವರನಲ್ಲಿ ಭಯವಿರುವ ಅವಶ್ಯಕತೆಯಿಲ್ಲ; ಆತನು ಪ್ರೇಮಮಯನಾದ ತಂದೆ - ಎಂಬುದನ್ನು ತಿಳಿಸಿಕೊಟ್ಟನು. ಮನುಷ್ಯನು ತನ್ನ ಜೀವಿತವನ್ನು ಹೇಗೆ ಸುಖದಿಂದ ಕಳೆಯಬೇಕು, ಮಾನವರೆಲ್ಲರೂ ಹೇಗೆ ಅಣ್ಣ ತಮ್ಮಂದಿರಂತೆ ಇರಬಹುದು? - ಎಂಬುದನ್ನು ಉಪದೇಶಿಸಿದನು. ಪರಮೇಶ್ವರನನ್ನು ನಂಬಿದವರಿಗೆ ಮರಣದ ಭೀತಿಯಿರುವ ಕಾರಣವಿಲ್ಲ; ಅವರಿಗೆ ಪರಲೋಕದಲ್ಲಿ ಎಂದೆಂದಿಗೂ ಸುಖಶಾಂತಿಗಳು ಉಂಟಾಗುವವು ಎಂಬುದನ್ನು ತಿಳಿಸಿದನು - ಎಂದು ಕ್ರೈಸ್ತಭಕ್ತರೆಲ್ಲರೂ ಭಾವಿಸುತ್ತಾರೆ. ಪರಮೇಶ್ವರನು ಭಕ್ತರನ್ನು ತನ್ನ ಹೃದಯದಲ್ಲಿಟ್ಟುಕೊಂಡಿರುವನೆಂಬ ಉಕ್ತಿಯು ಯಾರಿಗೆ ತಾನೆ ಆನಂದದಾಯಕವಲ್ಲ!

ಸನಾತನಿಗಳು ಶ್ರೀಕೃಷ್ಣಭಗವಂತನ ಉಪದೇಶವನ್ನೂ ಬೌದ್ಧನರು ಬುದ್ಧನ ಉಪದೇಶವನ್ನೂ ಕಡೆಗಣಿಸಿರುವಂತೆ ಕ್ರಿಸ್ತಿಯನ್ನರೂ ಕ್ರೈಸ್ತನ ಉಪದೇಶಗಳನ್ನು ವಾಙ್ಮಾತ್ರದಲ್ಲಿ ಗೌರವಿಸುತ್ತಿರುವರು. ಇಂದಿಗೆ ಕ್ರಿಸ್ತಿಯನ್ನರಿರುವ ಪಾಶ್ಚಾತ್ಯ ದೇಶಗಳೆಲ್ಲವೂ ಪರಸ್ಪರಪ್ರೇಮದ ಸ್ವಾರಾಜ್ಯವಾಗಿರುವ ಬದಲು ರಾಗದ್ವೇಷಗಳ ತವರುಮನೆಯಾಗಿರುತ್ತವೆ. ಪ್ರಪಂಚದ ಅತ್ಯಂತ ಭೀಕರವಾದ ಯುದ್ಧವನ್ನು ಹೂಡಿ ನರಲೋಕವನ್ನೆಲ್ಲ ನಿರಾಶೆಯ ಬಯಲಾಗಿ ಮಾಡಿರುವವರೇ ಕ್ರಿಸ್ತಿಯನ್ನರು! ಅಟಂಬಾಂಬ್ ಮುಂತಾದ ಕ್ರೂರವಾದ ನರಹತ್ಯದ ಸಹಸ್ರಘ್ನಿಗಳನ್ನು ತಯಾರಿಸಿರುವವರು ಕ್ರಿಸ್ತಿಯನ್ನರು! ಕ್ರೈಸ್ತನು ಹುಟ್ಟಿದ್ದು ಬಡವರ ಮಗನಾಗಿ, ಓಡಾಡಿದ್ದೂ ಉಪದೇಶಿಸಿದ್ದೂ ಬಡವರ ನಡುವೆ. ಬಡವರಿಗೆ ಮಾಡಿದ, ಹೆಂಗಸರು ಮಕ್ಕಳನ್ನು ಪೋಷಿಸಿದ ಉಪಕಾರಗಳೆಲ್ಲವೂ ತನ್ನ ಅರ್ಚನೆ ಎಂದು ಆತನು ಭಾವಿಸುತ್ತಾನೆ. ಕ್ರೈಸ್ತನು ಅವತರಿಸಿದ್ದು ನಮ್ಮ ರಕ್ಷಣೆಗಾಗಿ ಎಂದು ನಂಬುವದು, ಕ್ರೈಸ್ತನು ಮಾಡಿರುವ ಉಪದೇಶಗಳಿಗಾಗಿ ಆತನನ್ನು ಕೃತಜ್ಞತೆಯಿಂದ ಸ್ಮರಿಸುವದು,

''ಈ ಲೋಕದಲ್ಲಿ ಯಾರುಯಾರಿಗೆ ಸುಖಶಾಂತಿಗಳು ಲಭಿಸುವದಕ್ಕೆ ಅಡ್ಡಿಯಿರುವದೋ ಅವರಮೇಲೆ ನಿನ್ನ ದೆಯೆಯಿರಲಿ; ನನ್ನ ಕೈಯಲ್ಲಾದಷ್ಟು ಅಂಥವರಿಗೆ ಉಪಕಾರವನ್ನು ನಾನು ಮಾಡುವಂತಾಗಲಿ!'' ಎಂದು ಪ್ರಾರ್ಥಿಸುವದು.. ಇವನ್ನು ಯಾವನು ಹೃತ್ಪೂರ್ವಕವಾಗಿ ಮಾಡುವನೋ ಆತನೇ ಕ್ರೈಸ್ತ ಜಯಂತಿಯನ್ನು ಸರಿಯಾಗಿ ಆಚರಿಸಿದ ಕ್ರಿಸ್ತಿಯನ್ನನಾಗಿರುವನು.

★★★★★

# ಉಪನಿಷತ್ಸಿದ್ಧಾಂತವೂ ಕ್ರೈಸ್ತಮತವೂ

ಉಪನಿಷತ್ಸಿದ್ಧಾಂತವು ಕ್ರೈಸ್ತಮತಕ್ಕೆ ಎಷ್ಟರ ಮಟ್ಟಿಗೆ ನಿಕಟಸಂಬಂಧವುಳ್ಳದ್ದೆಂಬುದನ್ನೂ ಈ ಸಿದ್ಧಾಂತವನ್ನು ಅಂಗೀಕರಿಸಿದರೆ ಕ್ರೈಸ್ತಮತಕ್ಕೆ ಯಾವ ಪ್ರಯೋಜನವುಂಟೆಂಬದನ್ನೂ ಡಾಕ್ಟರ್ ಪಾಲ್ ಡಾಯ್ಸನ್- ಎಂಬಾತನು ಈ ರೀತಿ ವರ್ಣಿಸಿರುವನು:

ಬೈಬಿಲ್‌ಗ್ರಂಥಕ್ಕೆ ''ನ್ಯೂಟೆಸ್ಟಮೆಂಟ್'' (ಹೊಸ ಒಡಂಬಡಿಕೆ) ಎಂಬ 'ಉತ್ತರಾರ್ಧವು' ಹೇಗೋ, ವೇದಕ್ಕೆ ಉಪನಿಷತ್ತುಗಳೂ ಹಾಗಿರುವವು. ಹೀಗೆ ಹೋಲಿಸುವದು, ಸುಮ್ಮನೆ ಬಾಹ್ಯದೃಷ್ಟಿಯಿಂದಲ್ಲ, ಅಥವಾ ಇದು ನಿರ್ನಿಮಿತ್ತವಾದ ಹೋಲಿಕೆಯೂ ಅಲ್ಲ. ಧರ್ಮಬುದ್ಧಿಯೆಂಬುದು ಬೆಳೆಯುವದಕ್ಕೆ ಇರುವ ಒಂದಾನೊಂದು ನಿಯಮವನ್ನನುಸರಿಸಿಯೇ ಇದು ಹುಟ್ಟಿರುವದು. ಈ ಅಭಿಪ್ರಾಯವು ಬೈಬಿಲ್ ಮತ್ತು ವೇದ - ಈ ಎರಡು ಗ್ರಂಥಗಳಿಗೂ ಸಮ್ಮತವಾಗಿರುವದು.

ಮಾನವಜಾತಿಯು ಇನ್ನೂ ಶೈಶವದಲ್ಲಿರುವಾಗ, ಧರ್ಮವೆಂದಿರ ವಿಧಿನಿಷೇದರೂಪವಾಗಿರುವದು. ಆ ಧರ್ಮಶಾಸ್ತ್ರದಲ್ಲಿ ಉತ್ತಮವಾದದ್ದನ್ನು ವಾಗ್ದಾನಮಾಡುವದು, ಮತ್ತು ಪುಷ್ಪಫಲಗಳಿಂದ ಬೆದರಿಸುವದು. ಹೀಗೆ ಈ ವಿಧಿನಿಷೇಧಗಳಲ್ಲಿ ಮಹತ್ತ್ವವನ್ನೂ ತೋರಿಸಿರುತ್ತದೆ. ಈ ವಿಧಿನಿಷೇಧರೂಪವಾಗಿರುವ ಧರ್ಮವು ಸ್ವಾರ್ಥವನ್ನೇ ಪ್ರಧಾನವಾಗಿಟ್ಟುಕೊಂಡು ಹೊರಡವದು ಈ ಸ್ವಾರ್ಥವೆಂಬುದೇ ಮಾನವನ ಸ್ವಭಾವಕ್ಕೆ ಕೇಂದ್ರವೆಂದೂ ಸಾರವೆಂದೂ

ಈ ಧರ್ಮದಲ್ಲಿ ನಿಶ್ಚಯಮಾಡಿರುತ್ತದೆ. ಈ ಸ್ವಾರ್ಥವನ್ನು ಮೀರಿ ಉಪದೇಶವನ್ನು ಮಾಡುವದು ಈ ಧರ್ಮದ ಕೈಲಾಗುವದಿಲ್ಲ. ಆದರೆ ಇಂಥ ಫಲವಾಗಬೇಕೆಂಬ ಆಸೆ, ಇಂಥ ಕೆಟ್ಟಫಲವಾದೀತೆಂಬ ಭಯ - ಇವುಗಳನ್ನು ಇಟ್ಟುಕೊಂಡು ಮಾಡುವ ಕರ್ಮಗಳು ಪರಮಪುರುಷಾರ್ಥಕ್ಕೆ ಯಾವ ಪ್ರಯೋಜನವನ್ನೂ ಉಂಟುಮಾಡಲಾರವೆಂದು ಯಾವಾಗ ತಿಳಿವಾಗುವದೋ, ಆಗ ಧರ್ಮಜ್ಞಾನವು ಇದಕ್ಕಿಂತ ಹೆಚ್ಚಿನ ಅಂತಸ್ತಿಗೆ ಬಂದಂತಾಗುವದು. ಸ್ವಾರ್ಥವನ್ನು ಪೂರ್ತಿಗೊಳಿಸಿಕೊಂಡಮಾತ್ರಕ್ಕೆ ಜನ್ಮಸಾರ್ಥಕ್ಯವಾಗಲಾರದೆಂತಲೂ ಈ ಸ್ವಾರ್ಥವನ್ನು ಪ್ರಯತ್ನದಿಂದ ತಡೆಯುವದೇ ನಾವು ಮಾಡಬೇಕಾದ ಕರ್ತವ್ಯವೆಂತಲೂ ತಿಳಿಯುವದೇ ಈ ಅಂತಸ್ತಿನ ಧರ್ಮದ ತಿರುಳು. ನಮ್ಮ ಜೀವತ್ವವೆಂಬುದು ಧಾನ್ಯದ ಹೊರಗಿನ ಹೊಟ್ಟಿನಂತೆ ಇರುವದೆಂತಲೂ ನಿಷ್ಕಾಮಕರ್ಮದಿಂದಲೇ ನಮ್ಮ ಸಹಜವಾದ ಈಶ್ವರತ್ವವು ವ್ಯಕ್ತವಾಗುವದೆಂತಲೂ ಈ ಸ್ಥಿತಿಯಲ್ಲಿ ಗೊತ್ತಾಗುವದು.

ಕರ್ಮಗಳಿಂದಲೇ ಪುರುಷಾರ್ಥವನ್ನು ಪಡೆಯಬೇಕೆಂಬ ಬಾಲ್ಯದೃಷ್ಟಿಯು ಬೈಬಿಲಿನಲ್ಲಿ ''ಓಲ್ಡ್ ಟೆಸ್ಟಮೆಂಟ್'' (ಹಳೇ ಒಡಂಬಡಿಕೆ) - ಎಂಬ ಪೂರ್ವಾರ್ಧದಲ್ಲಿರುವ ವಿಧಾನದಲ್ಲಿ ಕಂಡುಬರುವದು. ಇದು ಇಂಡಿಯದ ಮೀಮಾಂಸಕರು ಕರ್ಮಕಾಂಡವೆಂದು ಕರೆಯುವ ಭಾಗಕ್ಕೆ ಸಮವಾಗಿರುವದು. ಕರ್ಮಕಾಂಡವೆಂದರೆ (ಉಪನಿಷತ್ತುಗಳ ಅಭಿಪ್ರಾಯವು ಬರುವಂತೆ ಅಲ್ಲಲ್ಲಿ ಸೇರಿಸಿರುವ ವಾಕ್ಯಗಳನ್ನು ಬಿಟ್ಟು) ಸಂಹಿತೆ, ಬ್ರಾಹ್ಮಣ - ಎಂಬ ಎರಡು ಭಾಗಗಳಿಂದ ಕೂಡಿದ ವೇದಭಾಗವು. ಓಲ್ಡ್‌ಟೆಸ್ಟಮೆಂಟು ಮತ್ತು ಕರ್ಮಕಾಂಡ- ಇವೆರಡರಲ್ಲಿಯೂ ಒಂದಾನೊಂದು ವಿಧಾನವನ್ನು ಮಾಡಿ ಅದನ್ನು ಅನುಸರಿದವರಿಗೆ ಇಂಥ ಉತ್ತಮಫಲವುಂಟೆಂತಲೂ ಅದನ್ನು ಮೀರಿದವರಿಗೆ ಇಂಥ ದುರ್ಗತಿಯುಂಟೆಂತಲೂ ಹೇಳಿರುತ್ತದೆ. ಮಾಡಿದ ಕರ್ಮಕ್ಕೆಲ್ಲ ಇಲ್ಲಿಯೇ ಫಲವಾಗುವದೆಂದು ಓಲ್ಡ್‌ಟೆಸ್ಟಮೆಂಟ್‌ನಲ್ಲಿ ಹೇಳಿರುವದು ಅನುಭವಕ್ಕೆ ವಿರೋಧವಾಗಿರುವದರಿಂದ, ಅದನ್ನು ಹೊಂದಿಸುವದಕ್ಕೆ ಎಷ್ಟೋ ಕಷ್ಟವಾಗುತ್ತದೆ. ಇಂಡಿಯನರ ಸಿದ್ಧಾಂತದಲ್ಲಿ ಸ್ವಲ್ಪಮಟ್ಟಿಗೆ ಫಲವು ಲೋಕಾಂತರದಲ್ಲಿಯೂ ಆಗುವವೆಂದು ಹೇಳಿರುವದರಿಂದ ಈ ಕಷ್ಟವೇನೂ ಇರುವದಿಲ್ಲ. ಆದರೆ ಬೈಬಿಲಿನಲ್ಲಿರುವ ಧರ್ಮವಿಧಾನದಲ್ಲಿ ಒಂದು ವಿಶೇಷವುಂಟು. ಹಿಂದುಗಳ

ಧರ್ಮಶಸ್ತ್ರದಲ್ಲಿ ಕರ್ಮಮಾತ್ರಕ್ಕೆ ಕೊಟ್ಟಿರುವ ಪ್ರಾಶಸ್ತ್ಯವನ್ನು ತುಸು ಕಡಿಮೆಮಾಡಿ, ಪರಿಶುದ್ಧವಾದ ನಡೆತೆಗೇ ಈ ಬೈಬಿಲಿನಲ್ಲಿ ಹೆಚ್ಚು ಪ್ರಾಮುಖ್ಯವನ್ನು ಕೊಟ್ಟಿರುತ್ತದೆ. ಮಾನವಸಂಘವು ಏಳಿಗೆಗೆ ಬರುವದಕ್ಕೆ ಅದು ತುಂಬ ಅನುಕೂಲವಾಗಿರುವದು. ಆದರೆ ಕರ್ಮವು ಎಷ್ಟರ ಮಟ್ಟಿಗೆ ಧರ್ಮವೆನಿಸೀತೆಂಬ ದೃಷ್ಟಿಯಿಂದ ನೋಡಿದರೆ, ಕರ್ಮವನ್ನು ಕಲ್ಪಿತ ದೇವತೆಗಳಿಗಾಗಿ ಮಾಡಲಿ, ಪರೋಪಕಾರದೃಷ್ಟಿಯಿಂದ ಮಾಡಲಿ, ಎರಡೂ ಒಂದೇ. ಸ್ವಾರ್ಥವೇ ಪ್ರಧಾನವಾಗಿರುವವರೆಗೂ ಈ ಎರಡುಬಗೆಯ ಕರ್ಮಕ್ಕೂ ತನ್ನನುಕೂಲತೆಗೆ ಸಾಧನವೆಂಬುದರ ಮೇಲೆಯೇ ಬೆಲೆ. ಆದ್ದರಿಂದ ಧರ್ಮದೃಷ್ಟಿಯಿಂದ ಈ ಫಲವೂ ಸಾಧನವೂ ಎರಡೂ ನಿರುಪಯೋಗವೇ ಆಗುವವು.

ಇದನ್ನು ನ್ಯೂಟೆಸ್ಟಮೆಂಟಿನಲ್ಲಿ ಅಂಗೀಕರಿಸಿರುತ್ತದೆ. ಏಕೆಂದರೆ ಅಲ್ಲಿ ಉತ್ತಮಕರ್ಮಗಳನ್ನು ಕೂಡ ನಿರುಪಯೋಗವೆಂದು ಪ್ರತಿಪಾದಿಸಿದೆ. ಈ ಭಾಗಕ್ಕೆ ಸರಿಹೋಲುವ ಉಪನಿಷತ್ತಿನಲ್ಲಿಯೋ ಎಂದರೆ ಕರ್ಮಗಳನ್ನು ಸಂಪೂರ್ಣವಾಗಿ ಕೈಬಿಟ್ಟಿರುತ್ತದೆ. ಈ ಎರಡು ಗ್ರಂಥಗಳಲ್ಲಿಯೂ ಯಾವದನ್ನಾದರೂ ಮಾಡಿದರೆ ಅಥವಾ ಬಿಟ್ಟರೆ ಮೋಕ್ಷವಾಗುವದೆಂದು ಹೇಳದೆ ಸ್ವಾಭಾವಿಕವಾಗಿರುವ ಮನುಷ್ಯಸ್ಥಿತಿಯನ್ನೇ ರೂಪಾಂತರಗೊಳಿಸಿಕೊಳ್ಳುವದು ಅಗತ್ಯವೆಂದು ಹೇಳಿರುತ್ತದೆ. ವ್ಯಾವಹಾರಿಕಸತ್ಯವಾಗಿರುವ ಈ ಪ್ರಪಂಚಬಂಧಕ್ಕೆ ಅಹಂಕಾರವೇ ಮೂಲವೆಂದೂ ಅದರಿಂದ ಬಿಡುಗಡೆಯಾಗುವದಕ್ಕೆ ಈ ಸ್ವಭಾವಪರಿವರ್ತನೆಯೇ ಬೇಕೆಂದೂ ಎರಡು ಗ್ರಂಥಗಳಲ್ಲಿಯೂ ಎಣಿಸಲ್ಪಟ್ಟಿರುತ್ತದೆ.

★★★★★

# ಥಿಯಾಸೊಫಿ ಮತ್ತು ಕ್ರಿಸ್ತಿಯನ್ ಮತ

## (ಡಾನ್ ಪತ್ರಿಕೆಯಲ್ಲಿ ಶ್ರೀಮತಿ ಜೇನ್ ಡಿಲೇರ್ ಎಂಬುವರು ಬರೆದಿರುವದರ ಅನುವಾದ)

'ನಿಮ್ಮ ಮತದ ಮೂಲತತ್ತ್ವಗಳು ಯಾವುವು?' ಎಂದು ಕೇಳಿದರೆ ಸಾಂಪ್ರದಾಯಿಕ ಕ್ರಿಸ್ತಿಯನರಲ್ಲಿ ಮುಕ್ಕಾಲು ಪಾಲು ಜನರು ಕ್ರಿಸ್ತನ ಅವತಾರ, ಕ್ರಿಸ್ತನು ಮಾಡಿಸಿಕೊಟ್ಟಿರುವ ಪ್ರಾಯಶ್ಚಿತ್ತ (Atonement) - ಇವೇ ಎನ್ನುವರು. ಕ್ರಿಸ್ತಿಯನ್‌ಮತದ ಮೂಲತತ್ತ್ವಗಳು ಯಾವವೆಂಬ ಇದೇ ಪ್ರಶ್ನೆಯನ್ನು ತತ್ತ್ವಜ್ಞಾನಸಮಾಜದವರನ್ನು (Theosophists) ಕೇಳಿದರೆ ದೇವರು ತಂದೆಯೆಂಬುದು, ಮನುಷ್ಯರ ಭ್ರಾತೃಭಾವ- ಇವೇ ಎಂದು ಅವರಲ್ಲಿ ಬಲು ಮಂದಿ ಉತ್ತರವನ್ನೀಯುವರು. ಸಾಂಪ್ರದಾಯಿಕ ಕ್ರಿಸ್ತಿಯನರಿಗೆ ಕ್ರಿಸ್ತಿಯನ್ ಮತವೆಂದರೆ ಕೆಲವು ನಂಬಿಕೆ, ಕೆಲವು ಉಪದೇಶಗಳ ಗುಂಪು; ಈ ಉಪದೇಶಗಳ ಅರ್ಥವು ಕ್ರಿಸ್ತಿಯನ್ ಮತಕ್ಕೆಸೇರಿದ ಒಂದೊಂದು ಸಂಘದವರಲ್ಲಿ ಮತ್ತು ಒಂದೊಂದು ಪಂಗಡದಲ್ಲಿ ಒಂದೊಂದು ಬಗೆಯಾಗಿರುವದು ತತ್ತ್ವಜ್ಞಾನಸಮಾಜದವರಿಗೆ ಹಾಗಲ್ಲ; ತಾನು ಪರಮೇಶ್ವರನಿಂದ ಬಂದಿರುತ್ತೇನೆಂಬುದನ್ನೂ, ಪರಮೇಶ್ವರನನ್ನೇ ಸೇರಬೇಕಾದವನೆಂಬುದನ್ನೂ ತನ್ನ ಅಂತರಂಗದಲ್ಲಿ ಸಾಕ್ಷಾತ್ಕಾರಮಾಡಿಕೊಳ್ಳುವದೇ ಕ್ರಿಸ್ತಿಯನ್ ಮತವೆಂದು ಅವರ ಅಭಿಪ್ರಾಯವಾಗಿರುವದು. ಯಾವ ಯಾವ ಸಮಾಜದವರು ತಾವು ಕ್ರಿಸ್ತಿಯನ್ ತತ್ತ್ವಸಮಾಜದವರೆಂದು ಹೇಳಿಕೊಳ್ಳುವರೋ ಅವರೆಲ್ಲಾ ಯೋಗಿಗಳೆ; ಅವರ ನಂಬಿಕೆಯು ಕ್ರಿಸ್ತಿಯನ್ ಸಂಘಕ್ಕೆ ಸೇರಿದ ಯೋಗಿಗಳ ನಂಬಿಕೆಯೆ. ದೇವರು ನಮ್ಮೆಲ್ಲರ ತಂದೆಯೆಂಬುದನ್ನೂ ನಾವೆಲ್ಲರೂ ಭ್ರಾತೃಗಳೆಂಬುದನ್ನೂ ಜೀಸಸ್ ಕ್ರೈಸ್ತನು ತೋರಿಸಿಕೊಟ್ಟನಷ್ಟೆ? ಇದರ ಕಟ್ಟಕಡೆಯ ಫಲಿತಾಂಶವೇನೆಂದರೆ ಮನುಷ್ಯರ ಹೃದಯದಲ್ಲಿ ಪರಮಾತ್ಮನು ವ್ಯಾಪಿಸಿರುತ್ತಾನೆ, ಈ ಪ್ರಪಂಚದಲ್ಲಿ ಕಾಣುವ ಬೇರೆ ಬೇರೆ ಜೀವವಿಶೇಷಗಳೆಲ್ಲ ಈ ಪರಮಾತ್ಮನೊಬ್ಬನೇ. ಈ ನಂಬಿಕೆಯು ಥಿಯಾಸೊಫಿಯ ಮೂಲತತ್ತ್ವಗಳಲ್ಲಿ ಒಂದು. ಅದು ಕ್ರಿಸ್ತಿಯನ್ ಮತಕ್ಕೂ ಮೂಲತತ್ತ್ವವೆಂದೇ ನಾವು ಭಾವಿಸುತ್ತೇವೆ.

'ಥಿಯಾಸೊಫಿ' ಎಂಬ ಹೆಸರೇ ಮನುಷ್ಯನು ದೇವರನ್ನು ಅರಿತುಕೊಳ್ಳಬಹುದೆಂಬುದನ್ನು ಸೂಚಿಸುವದು. 'ಥಿಯಾ' ಎಂದರೆ ದೇವರು, 'ಸೊಫೈ' ಎಂದರೆ ವಿದ್ಯೆ; ಆದ್ದರಿಂದ 'ಥಿಯಾಸೊಫಿ' ಎಂದರೆ ಬ್ರಹ್ಮವಿದ್ಯೆಯೆಂದರ್ಥ. ಮನುಷ್ಯನಿಗೆ ದೇವರ ಸ್ವರೂಪವನ್ನು ಅರಿತುಕೊಳ್ಳುವದು ಸಾಧ್ಯವಾಗಿರುವದೇಕೆಂದರೆ ಅವನೇ ಬೀಜರೂಪನಾಗಿ ದೇವರಾಗಿರುವದರಿಂದ; ಅವನು ದೇವರಿಂದಲೇ ಬಂದಿರುತ್ತಾನೆ; ಈ ಭೂಮಿಯಲ್ಲಿ ಅವನು ಹೊಂದಬೇಕಾಗಿರುವ ಜನ್ಮಗಳ ತೊಳಲು ಮುಗಿಯುತ್ತಲೂ ದೇವರಲ್ಲಿಯೇ ಹೋಗಿ ಸೇರುತ್ತಾನೆ. ಮನುಷ್ಯನ ತೀರ ಒಳಗಿನ ಸ್ವಭಾವವನ್ನು ನೋಡಿದರೆ ಅವನು ದೇವರೆ; ಅವನು ತನ್ನ ಸ್ವಭಾವಸಿದ್ಧವಾದ ಹಕ್ಕನ್ನು ಕೆಲವು ವೇಳೆ ಎಷ್ಟೆ ಮರೆಯಲಿ, ಎಷ್ಟೇ ದೂರವಾಗಿ ಅಲೆದಾಡಿಕೊಂಡು ಹೋಗಿ ಕಾಡುಮೇಡುಗಳನ್ನು ಸೇರಿ ಹಂದಿಗಳಂತೆ ಹೊಟ್ಟನ್ನು ತಿಂದುಕೊಂಡು ಜೀವಿಸುತ್ತಿರಲಿ, ಅವನು ನಿಜವಾಗಿ ದೇವರ ಮಗನೆ. ಅವನು ದೇವರಿಂದಲೇ ಬಂದಿರುತ್ತಾನೆ. ಈ ಸಂಸಾರವೆಂಬ ವಿದ್ಯಾಶಾಲೆಯಲ್ಲಿ ಅವನು ಕಲಿಯಬೇಕಾದ ಪಾಠಗಳನ್ನೆಲ್ಲಾ ಕಲಿತುಕೊಂಡಾದ ಮೇಲೆ ಅವನು ದೇವರಲ್ಲಿಗೇ ಹಿಂತಿರುಗುವನು.

ಈ ತತ್ತ್ವವನ್ನು ಕ್ರಿಸ್ತಿಯನ್ ಸಂಘದವರು ಬಹುಮಟ್ಟಿಗೆ ಮರೆತುಬಿಟ್ಟಿರುತ್ತಾರೆ. ದೇವರು ಪ್ರಪಂಚಾತೀತನೆಂಬುದೊಂದನ್ನೇ[1] ಅವರು ಉಪದೇಶಿಸುತ್ತಿದ್ದಾರೆ, ದೇವರು ಸರ್ವವ್ಯಾಪಕನಾಗಿರುವನೆಂಬ ಇನ್ನೊಂದು ತತ್ತ್ವವನ್ನು ಅವರು ಸ್ವಲ್ಪ ಹೆಚ್ಚು ಕಡಿಮೆ ಕೈಬಿಟ್ಟೇ ಇರುತ್ತಾರೆ. ಇದರಿಂದ ಕ್ರಿಸ್ತಿಯನ್ ಪ್ರಪಂಚದಲ್ಲೆಲ್ಲಾ ಈಗ ಏನಾಗಿಬಿಟ್ಟಿರುವದೆಂದರೆ ಅವರಲ್ಲಿ ದೇವರಿದಾನೆಂದು ನಂಬುವ ಪ್ರತಿಯೊಬ್ಬನೂ ದೇವರೆಂದರೆ ಎಲ್ಲಿಯೋ ದೂರದಲ್ಲಿ ವಿವಿಕ್ತವಾಗಿರುವ ತತ್ತ್ವವೆಂದೂ ಎಲ್ಲಿಯೋ ಬಹುದೂರದ ಪರಲೋಕದಲ್ಲಿರುವ ಒಂದು ಆಜ್ಞೇಯ ವಸ್ತುವೆಂದೂ ಭಾವಿಸಿರುತ್ತಾನಲ್ಲದೆ ಆತನು ಇರುವದರೆಲ್ಲದರೊಳಗಿನ ಜೀವಕಳೆಯಾಗಿರುವನೆಂದಾಗಲಿ ಆತನಿಂದಲೇ ನಾವು ಬಂದು, ಆತನಲ್ಲಿಯೇ ಇದ್ದುಕೊಂಡಿರುವೆಂದಾಗಲಿ ಎಂದಿಗೂ

---

1. ದೇವರು ಪ್ರಪಂಚದ ಹೊರಗಿದ್ದು ಹೊರಗಿನಿಂದ ಅದನ್ನು ಆಳುತ್ತಿದ್ದಾನೆಂಬ ವಾದವನ್ನು ಪಾಶ್ಚಾತ್ಯರು ಪ್ರಪಂಚಾತೀತತತ್ವವಾದ (transcendance) ವೆನ್ನುವರು, ಪ್ರಪಂಚವೂ ದೇವರೂ ಅತ್ಯಂತ ಭಿನ್ನವೆಂಬ ಮತಗಳಲ್ಲಿ ಈ ವಾದವೇ ಮುಖ್ಯ.

ಎಣಿಸುವದಿಲ್ಲ. ಹೀಗಿದ್ದರೂ ತತ್ತ್ವಜ್ಞಾನಸಮಾಜದವರು ಮಾತ್ರ ಪರಮೇಶ್ವರನು ಪ್ರಪಂಚಾತೀತನೆಂಬ ತತ್ತ್ವಕ್ಕಿಂತಲೂ ಆತನು ಸರ್ವವ್ಯಾಪಿಯೆಂಬುದನ್ನೇ ಹೆಚ್ಚು ಬಲವಾಗಿ ಯೇಸುಗುರುವು ಬೋಧಿಸಿದನೆಂದು ನಂಬುತ್ತಾರೆ. ಪರಮೇಶ್ವರನು ಪ್ರಪಂಚಾತೀತನೆಂಬುದನ್ನು ಅಷ್ಟು ಹೆಚ್ಚಾಗಿ ಬೋಧಿಸಬೇಕಾದದ್ದೇನೂ ಆತನಿಗೆ ಅವಶ್ಯಕವಿರಲಿಲ್ಲ, ಏಕೆಂದರೆ ಅದು ಮೊದಲೇ ಇಸ್ರೆಎಲ್ ಮತದ[1] ಹಾಸುಹೊಕ್ಕಾಗಿ ಇದ್ದಿತು. ಒಂದಿಷ್ಟು ವಿಚಾರಮಾಡಿದರೂ ಇದು ಯಾರಿಗಾದರೂ ಗೊತ್ತಾಗುತ್ತದೆ. ಬ್ರಾಹ್ಮಣ ಮತ,[2] ಬೌದ್ಧಮತ – ಇವೆರಡನ್ನು ಬಿಟ್ಟರೆ ದೇವರು ಪ್ರಪಂಚಾತೀತ ನೆಂಬುದು ಬಾಹ್ಯದೃಷ್ಟಿಯಲ್ಲಿ ಎಲ್ಲಾ ಮತಗಳಿಗೂ ಮೂಲಸ್ತಂಭವಾಗಿರುವದು; ಅವುಗಳ ರಹಸ್ಯಭಾಗವನ್ನು ಒಳಹೊಕ್ಕು ಅದರಲ್ಲಿರುವ ಸೂಕ್ಷ್ಮೋಪದೇಶಗಳನ್ನು ನೋಡಿದಾಗ ಮಾತ್ರ ಅವುಗಳಲ್ಲಿ ದೇವರು ಸರ್ವವ್ಯಾಪಿಯೆಂಬುದನ್ನೂ– ಎಂದರೆ ಆತನು ನಕ್ಷತ್ರಮಂಡಲದಾಚೆ ಇರುವ ಯಾವದೋ ಪರಲೋಕದಲ್ಲಿಲ್ಲ, ಟೆನ್ನಿಸನ್ ಕವಿಯು ಹೇಳಿರುವಂತೆ ''ಆತನು ನಮ್ಮ ಉಸಿರಿಗಿಂತಲೂ ಹತ್ತಿರದಲ್ಲಿ ಕೈಕಾಲು ಗಳಿಗಿಂತಲೂ ಹತ್ತಿರದಲ್ಲಿ ಇರುತ್ತಾನೆ'' ಎಂಬುದನ್ನೂ–ಬೋಧಿಸಿರುತ್ತದೆಯೆಂದು ಕಂಡುಬರುವದು.

ಹೀಗಿರುವದರಿಂದ ದೇವರು ಪ್ರಪಂಚಾತೀತನೆಂಬುದನ್ನೇನೂ ಯೇಸು ಸ್ವಾಮಿಯು ಬೋಧಿಸಬೇಕಾದದ್ದಿರಲಿಲ್ಲ. ಇದಕ್ಕೆ ಬದಲು ಪರಮಾತ್ಮನು ನಮ್ಮೊಳಗೇ ಇರುವನೆಂಬುದನ್ನು ಕಂಡುಕೊಳ್ಳುವಂತೆ ಮನುಷ್ಯರನ್ನು ಎಚ್ಚರ ಗೊಳಿಸುವದೇ, ಈ ಸಾಕ್ಷಾತ್ಕಾರವೇ ನಿಜವಾದ ಶಕ್ತಿಪ್ರದವಾದ ಧರ್ಮವೆಂಬುದನ್ನು ತಿಳಿಸುವದೇ ಆತನ ಮುಖ್ಯಪ್ರಯತ್ನವಾಗಿದ್ದಿತು. ''ಈಶ್ವರನ ರಾಜ್ಯವೆಂಬುದು

---

1. ಮೋಸಸ್ ಎಂಬಾತನ ಮತವನ್ನು ನಂಬುವ ಯಹೂದ್ಯರ ಮತಕ್ಕೆ ಇಸ್ರಎಲ್ ಎಂದು ಹೆಸರು. ಯೇಸುಕ್ರಿಸ್ತನು ಯಹೂದ್ಯರ ಮತವನ್ನೇ ಆಧಾರವಾಗಿಟ್ಟುಕೊಂಡು ಅವರ ಭಾವನೆಗಳನ್ನು ಪರಿಪೂರ್ತಿಗೊಳಿಸುವದಕ್ಕಾಗಿ ತನ್ನ ಹೊಸ ಮತವನ್ನುಪದೇಶಿಸಿದನು.

2. ಹಿಂದೂಮತಕ್ಕೆ ಬ್ರಾಹ್ಮಣರು ಮುಖ್ಯೋಪದೇಶಕರೆಂಬ ಕಾರಣದಿಂದ ಕೆಲವರು ಇದನ್ನು ಬ್ರಾಹ್ಮಣಮತವೆಂದು ಕರೆಯುವರು. ಈಗ ಈ ಹೆಸರು ಅಷ್ಟು ಪ್ರಸಾರವಿಲ್ಲ. ದೇವರು ಪ್ರಪಂಚದ ಯಾವ ಕಟ್ಟಿಗೂ ಒಳಪಟ್ಟಿಲ್ಲವೆಂಬ ಅರ್ಥದಲ್ಲಿ ಪ್ರಪಂಚಾತೀತನಾದರೂ ದೇವರಿಂದಲೇ ಪ್ರಪಂಚಕ್ಕೆ ಇರವು ಬಂದಿರುವದೆಂದೂ ಪ್ರಪಂಚದಲ್ಲೆಲ್ಲಾ ಆತನ ಸತ್ತೆಯು ತುಂಬಿ ತುಳುಕುತ್ತಿರುವದೆಂದೂ ಬೋಧಿಸುವದೇ ಹಿಂದೂಮತದ ಸಾರವೆಂಬುದನ್ನು ವಾಚಕರು ಇಲ್ಲಿ ನೆನಪಿಡಬೇಕು.

ನಿಮ್ಮಲ್ಲಿದೆ'' ಎಂಬ ಆತನ ಗಂಭೀರೋಕ್ತಿಯಿದೆಯಷ್ಟೆ, ಅದರ ವಿಚಾರವೇನು? ಈ ಮಾತಿನ ಅಭಿಪ್ರಾಯವೇನು? ನಾವು ಇದನ್ನು ಎಷ್ಟೋ ಸಲ ಕೇಳಿರುತ್ತೇವೆ, ಎಷ್ಟೋ ಸಲ ನಾವೂ ಹೇಳಿರುತ್ತೇವೆ. ಆದರೆ ಇದರ ಅರ್ಥವೇನೆಂಬುದು ಮಾತ್ರ ನಮಗೆ ಚೆನ್ನಾಗಿ ತಿಳಿಯದು. ಈ ವಾಕ್ಯದಲ್ಲಡಗಿರುವ ಉಪದೇಶವೇ ಕ್ರಿಸ್ತಿಯನ್ ಮತದ ತಳಹದಿಯ ಅಡಿಗಲ್ಲು. ''ರಾಜನಾದ ದೇವರು ಯಾವಾಗಲೂ ತನ್ನ ರಾಜ್ಯದ ಒಳಗೇ ಇದ್ದು ಕೊಂಡಿರುತ್ತಾನೆ.'' ಎಂದರೆ ಶಿಲುಬೆಯ **ಸೇಂಟ್‌ಜಾನ್** ಎಂಬ ಸ್ಪೇನ್‌ದೇಶದ ಮಹಾಯೋಗಿಯು ಹೇಳಿರುವಂತೆ ''ದೇವರು ಪ್ರತಿಯೊಬ್ಬ ಜೀವನಲ್ಲಿಯೂ ಎಂದೆಂದಿಗೂ ವಾಸಮಾಡಿಕೊಂಡಿರುತ್ತಾನೆ.'' ಇದೇ ಕ್ರಿಸ್ತಿಯನ್ ಮತದ ಮೂಲವು.

★★★★★

# ಕ್ರೈಸ್ತನಂತೆ ನಡೆಯುವದು

## (ಟಾಮಸ್ ಎ ಕೆಂಪಿನ್ ಎಂಬಾತನು ಬರೆದಿರುವ ''ಇಮಿಟೇಷನ್ ಆಫ್ ಕ್ರೈಸ್ಟ್'' ಎಂಬ ಗ್ರಂಥದಿಂದ)

1. ''ನನ್ನನ್ನು ಹಿಂಬಾಲಿಸುವವನು ಕತ್ತಲೆಯಲ್ಲಿ ನಡೆಯಬೇಕಾದುದಿಲ್ಲ'' ಎಂಬುದು ಭಗವಂತನ ವಚನವು. ಹೀಗೆಂದು ಕ್ರೈಸ್ತನು ನುಡಿದಿರುತ್ತಾನೆ; ನಮಗೆ ನಿಜವಾಗಿಯೂ ಜ್ಞಾನದ ಬೆಳಕು ಬೇಕಾಗಿದ್ದರೆ ಹೃದಯ ಅಂಧಕಾರವು ತೊಲಗಿ ಹೋಗಬೇಕೆಂದು ನಮಗೆ ಇಚ್ಛೆಯಿದ್ದರೆ, ಆತನ ಚರಿತೆಯನ್ನೂ ನಡತೆಯನ್ನೂ ನಾವು ಮೇಲುಪಜ್ಕ್ತಿಯಾಗಿಟ್ಟುಕೊಳ್ಳಬೇಕೆಂದು ನೆನಪುಕೊಟ್ಟಂತೆ ಆಯಿತು.

ಆದ್ದರಿಂದ ಈತನ (Jesus) ಚರಿತ್ರೆಯನ್ನು ಕುರಿತು ಧ್ಯಾನಮಾಡುವದೇ ನಮಗೆ ಪಾರಯಣವಾಗಿರಬೇಕು.

2. ಆತನ ಉಪದೇಶವು ಮಿಕ್ಕ ಮಹಾತ್ಮರು ಮಾಡಿರುವ ಬೋಧೆಯೆಲ್ಲಕ್ಕೂ ಹೆಚ್ಚಿನದಾಗಿರುವದು; ಯಾರಿಗೆ ಇದಕ್ಕೆ ಅನುಗುಣವಾದ ಸದ್ಭಾವನೆಯಿರುವದೋ ಅವರಿಗೆ ಅದರಲ್ಲಿ ಅಮೃತವು ಅಡಗಿರುವದೆಂಬುದು ಕಂಡುಬರುತ್ತದೆ.

ಆದರೆ ಅನೇಕರು ಈ ಪವಿತ್ರೇತಿಹಾಸವನ್ನು ಕೇಳಿರುತ್ತಾರಾದರೂ ಅವರಿಗೆ ಅದರಲ್ಲಿ ಅಷ್ಟೇನೂ ಆದರವುಂಟಾಗಿರುವದಿಲ್ಲ; ಏಕೆಂದರೆ ಅವರಲ್ಲಿ ಕ್ರೈಸ್ತನ ಪವಿತ್ರಭಾವನೆಯಿರುವದಿಲ್ಲ. ಕ್ರೈಸ್ತನ ವಚನಗಳನ್ನು ಪೂರ್ಣವಾಗಿ ಅರಿತು ಆನಂದಪಡಬೇಕಾದರೆ ನಮ್ಮ ಜೀವನವನ್ನು ಆತನ ಜೀವನದಂತೆಯೇ ಮಾಡಿ ಹೊಂದಿಸಿಕೊಳ್ಳುವದಕ್ಕೆ ಪ್ರಯತ್ನಿಸುವದು ಅಗತ್ಯವು.

3. ವ್ಯೂಹತ್ರಯದ[1] ವಿಷಯವಾಗಿ ಬೇಕಾದ ಹಾಗೆ ವಾದ ಮಾಡುತ್ತಿದ್ದರೂ ನಮ್ರತೆಯಿಲ್ಲದೆ ಆ ವ್ಯೂಹತ್ರಯಕ್ಕೂ ಅಸಮಾಧಾನವಾಗುವಂತೆ ನಡೆಯುತ್ತಿದ್ದರೆ ಆ ವಾದದಿಂದ ಏನು ಪ್ರಯೋಜನ? ದೊಡ್ಡ ದೊಡ್ಡ ವಿಷಯಗಳನ್ನು ಕುರಿತು ಮಾತನಾಡಿದ ಮಾತ್ರದಿಂದ ಮನುಷ್ಯನು ಪರಿಶುದ್ಧನೂ ಧರ್ಮಾತ್ಮನೂ ಆಗುವದಿಲ್ಲ; ಧಾರ್ಮಿಕ ವರ್ತನೆಯಿಂದಲೇ ಈಶ್ವರನಿಗೆ ಪ್ರಿಯನಾಗುತ್ತಾನೆ. ಪಶ್ಚಾತ್ತಾಪವೆಂದರೇನೆಂಬ ಲಕ್ಷಣಪರಿಷ್ಕಾರವನ್ನು ಮಾಡುವ ತಿಳಿವಳಿಕೆಗಿಂತ ಪಶ್ಚಾತ್ತಾಪವನ್ನು ತಳೆಯುವದೇ ಮೇಲು. ಬೈಬಲನ್ನೆಲ್ಲವನ್ನೂ ತತ್ತ್ವಜ್ಞಾನಿಗಳ ಸೂಕ್ತಿಗಳೆಲ್ಲವನ್ನೂ ತಿಳಿದುಕೊಂಡಿದ್ದರೂ ದೈವಭಕ್ತಿಯಿಲ್ಲದೆ ದೇವರ ಪ್ರಸಾದಕ್ಕೆ ಪಾತ್ರನಲ್ಲದೆ ಇದ್ದರೆ ಅಂಥ ತಿಳಿವಳಿಕೆಯಿಂದ ಪ್ರಯೋಜನವೇನು?

★★★★★

# ಜೀಸಸ್ಸನು ಬೋಧಿಸಿದ ಕ್ರೈಸ್ತಧರ್ಮ

## (Brotherhood ಎಂಬ ಪತ್ರಿಕೆಯಲ್ಲಿ ಪ್ರಕಟವಾದ ಒಂದು ಲೇಖನಭಾಗದ ಅನುವಾದ)

ಜೀಸಸ್ಸನ ಸೂಕ್ತಿಗಳಲ್ಲಿ ಕೆಲವು ಖಂಡವಚನಗಳು ಮಾತ್ರ ನಮ್ಮ ಈ ತಲಾಂತರದವರೆಗೆ ಬಂದು ತಲುಪಿರುತ್ತವೆ. ಇವುಗಳು ನಮಗೆ ಬಂದಿರುವದೆಂಬುದೂ ಆತನ ಭಾಷಣವನ್ನು ಕೇಳಿದರೂ ಆತನ

1. ತಂದೆ, ಮಗ, ಪವಿತ್ರಾತ್ಮ– ಎಂದು ಈಶ್ವರತತ್ತ್ವದಲ್ಲಿ ಮೂರು ವ್ಯೂಹಗಳುಂಟೆಂದು ಕ್ರೈಸ್ತರ ನಂಬಿಕೆಯುಂಟು.

ಅಭಿಪ್ರಾಯವನ್ನೆಲ್ಲ ಪೂರ್ಣವಾಗಿ ತಿಳಿದುಕೊಳ್ಳಲಾರದೆ ಇದ್ದ ಕೆಲವು ಜನರ ಅಪೂರ್ಣವಾದ ಸ್ಮರಣೆಯ ಆಧಾರದಿಂದ ಆದರೆ ಈ ಅಮೂಲ್ಯವಾದ ಖಂಡವಚನಗಳು ಅಧುನಿಕವಿಮರ್ಶಕರಿಗೂ ಭಾಷಾಂತರಕಾರರಿಗೂ ಎಷ್ಟೋ ಅಡಚಣೆಗಳನ್ನೂ ವಿರೋಧಾಭಾಸಗಳನ್ನೂ ತಂದೊಡುತ್ತಿರುವವಾದರೂ ಆತನ ಪರಮೋದ್ದೇಶವೇನೆಂಬುದನ್ನು ಸ್ಪಷ್ಟಗೊಳಿಸುವದಕ್ಕೆ ಸಾಕಾಗಿರುತ್ತವೆ.

ಆತನ ಉಪದೇಶವು ಸ್ವಲ್ಪ ಹೆಚ್ಚು ಕಡಿಮೆ ಹೀಗಿದ್ದಿತು:

ಪಾಪಿಗಳಾಗಿರುವ ನೀವುಗಳು ಇಲ್ಲಿ, ಈಗ, ಎಲ್ಲೆಲ್ಲಿಯೂ, ಯಾವಾಗಲೂ ಯಾರಿಗೂ ಕಾಣದೆ ಎಂದೆಂದಿಗೂ ಇರುವ, ಪರಮಪ್ರೇಮಾಸ್ಪದನಾದ, ದಯಾಳುವಾದ ತಂದೆಯ, ಏಕದೇವನ, ಶರಣುಹೊಗಬೇಕು. ಆ ದೇವನ ರಾಜ್ಯವೂ ಆತನು ನಿಮಗೆ ದಯಪಾಲಿಸಿರುವ, ಆತನು ನಿಮ್ಮಿಂದ ನಿರೀಕ್ಷಿಸುವ, ಧರ್ಮಾಚರಣೆಯೂ, ಸಾತ್ತ್ವಿಕತನವೂ ನಿಮ್ಮ ಪರಮಧ್ಯೇಯವಾಗಿರಲಿ. ನಮ್ಮೆಲ್ಲರಿಗೂ ತಂದೆಯಾಗಿರುವ ಆತನ ಸಂಕಲ್ಪವು ಪರಮಾನಂದದ ಅಧ್ಯಾತ್ಮಿಕರಾಜ್ಯದಲ್ಲಿ ನಡೆಯುತ್ತಿರುವಂತೆಯೇ ಈ ಭೂಲೋಕದಲ್ಲಿಯೂ ಎಲ್ಲರ ವಿಷಯದಲ್ಲಿಯೂ ಎಲ್ಲರಿಂದಲೂ ನಡೆಯುವಂತಾಗಲೆಂಬುದು ನಿಮ್ಮ ಎಡೆಬಿಡದ ಅಭಿಲಾಷೆಯಾಗಿರಲಿ, ಪ್ರಾರ್ಥನೆಯಾಗಿರಲಿ, ಪ್ರಯತ್ನವಾಗಿರಲಿ. ಈಶ್ವರನನ್ನೂ ಧನ ಶಕ್ತಿಯನ್ನೂ ಏಕಕಾಲದಲ್ಲಿ ಭಜಿಸುವದೆಂಬುದು ಆಗದ ಮಾತು. ಗ್ರಾಮ್ಯರಾದವರು ಅನ್ನ, ಬಟ್ಟೆ, ವಿಷಯಭೋಗ- ಮುಂತಾದವುಗಳನ್ನೇ ಮುಖ್ಯವಾಗಿ ಎಣಿಸುತ್ತಾರೆ; ಆದರೆ ನೀವುಗಳು ಇಂಥ ವಿಷಯಗಳ ಯೋಚನೆಯಿಂದ ತಲ್ಲಣ ಗೊಳ್ಳಬೇಡಿ. ನಿಮಗೆ ಏನೇನು ಬೇಕೆಂಬುದು ನಿಮ್ಮ ತಂದೆಗೆ ಚೆನ್ನಾಗಿ ತಿಳಿದಿದೆ; ಎಲ್ಲಾ ವಿಚಾರಗಳಲ್ಲಿಯೂ ಆತನ ಪ್ರೇರಣೆಯಂತೆಯೇ ನಡೆಯುವದಕ್ಕೆ ನೀವು ಪ್ರಯತ್ನ ಮಾಡುತ್ತಿದ್ದರೆ ಇಂಥ ಜೀವನದ ಅವಶ್ಯಕತೆಗಳು ತಮಗೆ ತಾವೇ ಬಂದುಸೇರುತ್ತವೆ.

ನಿಮ್ಮ ಯೋಗಕ್ಷೇಮದ ವಿಚಾರದಲ್ಲಿ ಎಷ್ಟು ಆದರವುಳ್ಳವರಾಗಿರುವಿರೋ ನಿಮ್ಮ ನೆರೆಯವರ ಯೋಗಕ್ಷೇಮದ ವಿಚಾರದಲ್ಲಿಯೂ ಅಷ್ಟೇ ಆದರವುಳ್ಳವರಾಗಿರಿ. ಜನರು ನಿಮ್ಮ ವಿಷಯದಲ್ಲಿ ಹೇಗೆ ನಡೆದುಕೊಳ್ಳಬೇಕೆಂದು ನಿಮಗೆ ತೋರುವದೋ ಹಾಗೆಯೇ ಅವರ ವಿಷಯದಲ್ಲಿಯೂ ನಡೆಯಿರಿ.

ಇದೇ ಧರ್ಮದ ಮತ್ತು ಧರ್ಮಾಚಾರ್ಯರಬೋಧನೆಯ ಸಾರವು. ನಿಮ್ಮ ಪ್ರೇಮವೂ ಪರೋಪಕಾರವೂ ಎಲ್ಲೆಲ್ಲಿಯೂ ಹಬ್ಬಲಿ. ನಿಮ್ಮ ಹಗೆಗಳನ್ನು ಕೂಡ ಪ್ರೀತಿಸಿರಿ. ಎಂದಿಗೂ ಮನಸ್ಸಿನ ಸಮಾಧಾನವನ್ನು ಕಳೆದುಕೊಳ್ಳಬೇಡಿರಿ; ಸಿಟ್ಟಿನ ಪರಿಣಾಮವು ಖಂಡಿತವಾಗಿಯೂ ಕೆಟ್ಟದ್ದಾಗಿರುವದು. ನಿಮಗೆ ಏನಾದರೂ ಅಪಕಾರವಾಗಿದ್ದರೆ ಅದಕ್ಕೆ ತಕ್ಕ ಪ್ರತೀಕಾರವನ್ನು ಮಾಡಬೇಕೆಂಬ ತಪ್ಪು ನೀತಿಯು ಕೆಲವು ಪುರಾತನಧರ್ಮ ಗ್ರಂಥಗಳಲ್ಲಿರುವಂತೆ ಕಂಡುಬಂದರೆ ಬರಲಿ ನೀವು ಮಾತ್ರ ಎಂದಿಗೂ ಅದನ್ನು ಅನುಸರಿಸಬೇಡಿರಿ. ಔದಾರ್ಯದಿಂದ ಮನ್ನಿಸುವ ಕ್ಷಮಾಗುಣವು ಇಂತಿಷ್ಟೇ ಇರಬೇಕೆಂದು ನಿಯಮವನ್ನು ಎಂದಿಗೂ ಕಲ್ಪಿಸಬೇಡಿರಿ. ಪೂರ್ಣಪ್ರೇಮಕ್ಕಿಂತ ಕಡಿಮೆಯ ಅಂತಸ್ತನ್ನು ಎಂದಿಗೂ ಒಪ್ಪಬೇಡಿರಿ. ನಿಮ್ಮ ತಂದೆಯಾದ ಪರಮೇಶ್ವರನು ಒಳ್ಳೆಯವರ ಮೇಲೆಯೂ ಕೆಟ್ಟವರ ಮೇಲೆಯೂ ಒಂದೇ ಸಮನಾಗಿ ಸೂರ್ಯನ ಬಿಸಿಲು ಕಾಯುವಂತೆ ಮಾಡಿರುತ್ತಾನೆ, ನ್ಯಾಯವಂತರಿಗೂ ಅನ್ಯಾಯವಂತರಿಗೂ ಒಂದೇ ಸಮನಾಗಿ ಮಳೆಯು ಸುರಿಯುವಂತೆ ಮಾಡಿರುತ್ತಾನೆ. ನಿಮ್ಮ ತಂದೆಯು ಹೇಗೆ ಪೂರ್ಣನಾಗಿರುತ್ತಾನೋ ಹಾಗೆಯೇ ನೀವೂ ಪೂರ್ಣರಾಗಬೇಕು; ಜಗತ್ತೆಲ್ಲವನ್ನೂ ವಶಗೊಳಿಸಿಕೊಳ್ಳುವ ಪ್ರೇಮಪರೋಪಕಾರಗಳಲ್ಲಿ ಪೂರ್ಣರಾಗಬೇಕು. ತಾಳ್ಮೆಯಿಂದ ಒಂದೇ ಸಮನೆ ಮನ್ನಿಸುವದರಲ್ಲಿಯೂ ಪೂರ್ಣರಾಗಬೇಕು. ನಿಮ್ಮ ಧರ್ಮವರ್ತನೆಯು ಧರ್ಮಧ್ವಜಿಗಳಾಗಿರುವ ಶಾಸ್ತ್ರವಾದಿಗಳಲ್ಲಿಯೂ ದಂಭಾಚಾರಿಗಳಲ್ಲಿಯೂ ಇರುವದಕ್ಕಿಂತ ದಿವ್ಯತರವಾದ ಹೊರತು ನಿಜವಾದ ಪರಮಾನಂದಸ್ಥಿತಿಯನ್ನು ನೀವು ಎಂದಿಗೂ ಪಡೆದುಕೊಳ್ಳಲಾರಿರಿ. ನಿಮಗೆ ವಿರೋಧಿಗಳಾಗಿರುವ ಜನರು ಈ ಪ್ರಪಂಚದಲ್ಲಿರುವದರಿಂದ, ಪೂರ್ಣಪ್ರೇಮವನ್ನು ಸಾಧಿಸಿಕೊಳ್ಳುವದಕ್ಕಾಗಿ ತೋರಿಸಬೇಕಾದ ಅನನ್ಯಭಕ್ತಿಗಾಗಿ ನೀವು ಸಂಕಟಪಡಬೇಕಾಗಿ ಬಂದರೂ ಅಥವಾ ಪ್ರಾಣವನ್ನೇ ಒಪ್ಪಿಸಬೇಕಾಗಿಬಂದರೂ ಹಿಂಜರಿಯಬೇಡಿರಿ; ಸಾಮಾನ್ಯವಾಗಿ ನೋಡಿದರೆ ಇದರಿಂದ ನಷ್ಟವಾಗುವಂತೆ ತೋರಿದರೂ ನಿಜವಾಗಿ ಇದರಿಂದ ಶಾಶ್ವತವಾದ ಲಾಭವೂ ಜಯವೂ ಸಿಕ್ಕುವದು. ಆದ್ದರಿಂದ ಇಂಥ ಸಂದರ್ಭಗಳಲ್ಲಿ ಅತ್ಯಂತ ಸಂತೋಷದಿಂದ ವರ್ತಿಸಿರಿ.

★★★★★

# ಕ್ರೈಸ್ತನ ಕೆಲವು ಉಪದೇಶಗಳು

## (ಬೈಬಲ್‌ಗ್ರಂಥದಿಂದ ಆರಿಸಿ ಭಾವಾರ್ಥವನ್ನು ಮಾತ್ರ ಕೊಟ್ಟಿದೆ)

1. ದಾನವನ್ನು ಕೊಡುವಾಗ ನಿಮ್ಮ ಬಲಗೈ ಮಾಡುವದನ್ನು ಎಡಗೈ ಕೂಡ ಅರಿಯದೆ ಇರಲಿ.

2. ಪ್ರಾರ್ಥನೆಯನ್ನು ಮಾಡುವಾಗ ಧ್ಯಾನಮಂದಿರದ ಬಾಗಿಲನ್ನು ಮುಚ್ಚಿ ಏಕಾಂತದಲ್ಲಿ ಭಗವಂತನನ್ನು ಪ್ರಾರ್ಥಿಸಿರಿ. ರಹಸ್ಯದಲ್ಲಿ ನೀವು ಪ್ರಾರ್ಥಿಸಿದ ಆ ನಿಮ್ಮ ತಂದೆಯು ಬಹಿರಂಗವಾಗಿ ನಿಮಗೆ ಫಲವನ್ನು ಕೊಡುವನು.

3. ಈ ಪ್ರಕಾರದಲ್ಲಿ ಪ್ರಾರ್ಥಿಸಿರಿ: ದಿವ್ಯಲೋಕದಲ್ಲಿರುವ ತಂದೆಯೆ, ನಿನ್ನ ನಾಮವು ಪವಿತ್ರವಾಗಿರುವದು. ನಿನ್ನ ರಾಜ್ಯವು ಬರಲಿ! ನಿನ್ನ ಸಂಕಲ್ಪವು ದಿವ್ಯಲೋಕದಲ್ಲಿ ಸಾಗುತ್ತಿರುವಂತೆಲ, ಭೂಲೋಕದಲ್ಲಿಯೂ ನಡೆಯಲಿ! ಇಂದಿನ ಅನ್ನವನ್ನು ನಮಗೆ ಕೊಡು. ನಮ್ಮ ಕರ್ತವ್ಯಗಳನ್ನು ಬಿಟ್ಟಿದ್ದಕ್ಕೆ ನಮ್ಮನ್ನು ಮನ್ನಿಸು. ನಾವು ಆಶೆಗಳಿಗೆ ಒಳಗಾಗದಿರುವಂತೆ ಮಾಡು, ದುಷ್ಟ ಮಾರ್ಗದಿಂದ ತಪ್ಪಿಸು! ನಿನ್ನದೇ ರಾಜ್ಯವು, ನಿನ್ನದೇ ಅಧಿಕಾರವು, ನಿನ್ನದೇ ಈ ಮಹಿಮೆಯು! ಸ್ವಸ್ತಿ!

4. ಯಾವನೊಬ್ಬನೂ ಇಬ್ಬರು ಧಣಿಗಳನ್ನು ಸೇವಿಸಲಾರನು. ಹಾಗೆ ಮಾಡಿದರೆ ಅವನು ಒಬ್ಬನನ್ನು ಹಗೆಮಾಡಿ ಇನ್ನೊಬ್ಬನನ್ನು ಪ್ರೀತಿಸುವನು; ಅಥವಾ ಒಬ್ಬನ ಸೇವೆಯಲ್ಲಿ ನಿಂತು ಮತ್ತೊಬ್ಬನನ್ನು ಅಸಡ್ಡೆಮಾಡುವನು. ಈಶ್ವರನನ್ನೂ ಐಸಿರಿಯನ್ನೂ ಒಮ್ಮೆಗೇ ಸೇವಿಸುವದು ಎಂದಿಗೂ ಆಗದು.

5. ನಮಗೆ ತಿನ್ನುವದಕ್ಕೇನು? ಕುಡಿಯುವದಕ್ಕೇನು ಗತಿ? ಹೊದೆಯುವ ಬಟ್ಟೆಗೇನಯ ಗತಿ?– ಎಂದು ಚಿಂತಿಸದಿರಿ. ಮೊದಲು ಈಶ್ವರನ ರಾಜ್ಯವನ್ನು ಹುಡುಕಿಕೊಳ್ಳಿರಿ, ಆತನ ಧರ್ಮವನ್ನು ಹುಡುಕಿಕೊಳ್ಳಿರಿ ಹಾಗಾದರೆ ಈ ಪದಾರ್ಥಗಳೆಲ್ಲವೂ ತಮಗೆತಾವೇ ನಿಮಗೆ ದೊರಕುವವು.

6. ಜನರು ನಿಮಗೆ ಏನೇನು ಮಾಡಬೇಕೆಂದು ನೀವು ಅಪೇಕ್ಷಿಸುವಿರೋ ಅದನ್ನು ಅವರಿಗೂ ಮಾಡಿರಿ. ಇಷ್ಟೇ ಶಾಸ್ತ್ರೋಪದೇಶವು. ಇಷ್ಟೇ ಗುರುಗಳ ಅನುಶಾಸನವು.

7. ಯಾವನು ಈ ನನ್ನ ಉಪದೇಶಗಳನ್ನು ಶ್ರವಣಮಾಡಿ ಅವುಗಳಂತೆ ನಡೆಯುವನೋ ಅವನು ಬಂಡೆಯಮೇಲೆ ಮನೆಯನ್ನು ಕಟ್ಟಿಕೊಂಡ ವಿವೇಕಿಯಾಗುವನು. ಮಳೆಯು ಸುರಿದರೂ ನೀರು ಕೊಚ್ಚಿಕೊಂಡು ಬಂದರೂ ಗಾಳಿಯು ಹೊಡೆದರೂ ಆ ಮನೆ ಬೀಳದು. ಆದರೆ ಈ ಉಪದೇಶಗಳನ್ನು ಕೇಳಿ ಇದರಂತೆ ನಡೆಯದೆ ಇರುವವನು ಮರಳಮೇಲೆ ಮನೆಯನ್ನು ಕಟ್ಟಿಕೊಂಡ ಅವಿವೇಕಿಯು. ಮಳೆ ಬಂದು ನೀರು ಕೊಚ್ಚಿಕೊಂಡುಬಂದರೆ, ಗಾಳಿ ಬೀಸಿದರೆ ಅದು ಧಡಿಲ್ ಎಂದು ಬೀಳುವದು!

★★★★★

# ಜೀಸಸ್ ಕ್ರೈಸ್ತನ ಕೆಲವು ಸೂಕ್ತಿಗಳು

## (‘ಸಾಧುಪ್ರೇಮಿ’)

ಕ್ರಿಸ್ತಿಯನ್ನರಾದವರು ಈ ವಾಕ್ಯಗಳನ್ನು ಮನನಮಾಡುವದು ಒಳ್ಳೆಯದು. ಕ್ರಿಸ್ತಿಯನರಲ್ಲದ ಮತಾಂತರದವರೂ ಮನನಮಾಡುವದಕ್ಕೆ ಯೋಗ್ಯವಾದ ಸೂಕ್ತಿಗಳಿವು. ಈಗಿನ ಕಾಲಕ್ಕೆ ಬೇಕಾದ ಎಚ್ಚರಿಕೆಯನ್ನು ಕೊಡುತ್ತವೆ:

1. ಶಾಂತಿಯನ್ನುಂಟುಮಾಡುವವರು ಧನ್ಯರು; ಅವರು ಈಶ್ವರನ ಪುತ್ರರೆಂಬ ಪದವಿಯನ್ನು ಪಡೆಯುವರು.

2. ದೇವರು ಡಬ್ಬಿಗಡಿಗೆಗೆ ಧರ್ಮಾರ್ಥವಾಗಿ ಹಣವನ್ನು ಹಾಕುತ್ತಿರುವಾಗ ಕೂಡ ಯಾವನೊಬ್ಬನಿಗಾದರೂ ನೀನು ಕೆಟ್ಟದ್ದುಮಾಡಿದ್ದು ನೆನಪು ಬಂದರೆ ಆ ದಾನದ ಹಣವನ್ನು ಅಲ್ಲಿಯೇ ಬಿಟ್ಟುಹೋಗಿ ಮೊಟ್ಟ ಮೊದಲು ಅವನೊಡನೆ ಸಂಧಿಮಾಡಿಕೊಂಡು ಬಾ; ಆಮೇಲೆ ದಾನಮಾಡು.

3. ಶತ್ರುಗಳನ್ನು ಪ್ರೀತಿಸಿರಿ, ನಿಮ್ಮನ್ನು ಹಿಂಸೆಮಾಡುವವರಿಗಾಗಿ ಭಗವಂತನಲ್ಲಿ ಪ್ರಾರ್ಥಿಸಿ. ಆಗ ನೀವು ಪರಲೋಕದಲ್ಲಿರುವ ನಿಮ್ಮ ತಂದೆಯಾದ ಈಶ್ವರನ ಮಕ್ಕಳೆನಿಸುವಿರಿ.

4. ನಿಮ್ಮ ದಿವ್ಯಲೋಕದ ತಂದೆಯಾದ ಈಶ್ವರನಂತೆಯೇ ನೀವೂ

ಪರಿಪೂರ್ಣರಾಗಿರಬೇಕು.

5. ಭಿಕ್ಷವನು ಕೊಡುವಾಗ ನಿಮ್ಮ ಬಲಗೈ ಮಾಡುತ್ತಿರುವದು ನಿಮ್ಮ ಎಡಗೈಗೆ ಕೂಡ ತಿಳಿಯಬಾರದು.

6. ಪ್ರಾರ್ಥನೆಮಾಡುವಾಗ ನಿಮ್ಮ ಏಕಾಂತದ ಕೋಣೆಗೆ ಹೋಗಿ ಬಾಗಿಲು ಮುಚ್ಚಿಕೊಳ್ಳಿರಿ. ರಹಸ್ಯದಲ್ಲಿರುವ ಆ ನಿಮ್ಮ ತಂದೆಯನ್ನು ರಹಸ್ಯವಾಗಿಯೇ ಪ್ರಾರ್ಥಿಸಿರಿ.

7. ನಿಮಗೆ ಏನು ಬೇಕಾಗಿದೆ ಎಂಬುದು ನೀವು ಕೇಳುವ ಮುಂಚೆಯೇ ನಿಮ್ಮ ತಂದೆಯಾದ ಈಶ್ವರನಿಗೆ ತಿಳಿದಿರುತ್ತದೆ.

8. ನಿಮಗಾಗಿ ಭೂಲೋಕದಲ್ಲಿ ಯಾವ ನಿಧಿಯನ್ನೂ ಕೂಡಿಹಾಕಿ ಕೊಳ್ಳದಿರಿ; ಅಲ್ಲಿ ಗೆದ್ದಲು ತಿನ್ನುವದು, ತುಕ್ಕು ಹಿಡಿಯುವದು, ಕಳ್ಳರು ನುಗ್ಗಿ ಕಳುವರು, ಪರಲೋಕದಲ್ಲಿ ನಿಮಗೆ ಒದಗುವ ನಿಧಿಯನ್ನು ಕೂಡಿಹಾಕಿಕೊಳ್ಳಿರಿ; ಅಲ್ಲಿ ಗೆದ್ದಲು ತಿನ್ನುವದಿಲ್ಲ, ತಕ್ಕು ಹಿಡಿಯುವದಿಲ್ಲ, ಕಳ್ಳರು ನುಗ್ಗಿ ಕಳ್ಳುವದೂ ಇಲ್ಲ.

★★★★★

# ಕ್ರೈಸ್ತನೂ ಅವನ ಉಪದೇಶವೂ

**- ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳವರು**

ಕ್ರೈಸ್ತನ ಸ್ವರೂಪವು ಯಾವುದು? ಅವನಿಗೂ ನಮಗೂ ಸಂಬಂಧವೇನು? ಅವನು ಜನಸಾಮಾನ್ಯಕ್ಕೆ ಏನು ಉಪದೇಶಮಾಡಿದ್ದಾನೆ?- ಎಂಬೀ ಪ್ರಶ್ನೆಗಳಿಗೆ ಪಾದ್ರಿಗಳ ಉತ್ತರಗಳನ್ನು ನಾವು ಕೇಳಿರುತ್ತೇವೆ. ಆದರೆ ಈ ಮಹಾತ್ಮನ ಜಯಂತಿಯಾದ ಈ ಡಿಸೆಂಬರ ತಿಂಗಳಲ್ಲಿ ವಾಚಕರು ಮನನಮಾಡುವದಕ್ಕೆಂದು **ಸೇಂಟ್ ಜಾನ್** ಎಂಬಾತನು ಬರಿದಿರುವ ಕೆಲವು ವಾಕ್ಯಗಳನ್ನು ಬೈಬಲ್ಲಿನಿಂದ ಆರಿಸಿ ಅವುಗಳ ಅಭಿಪ್ರಾಯವು ವೇದಾಂತಿಗಳ ಕಣ್ಣಿನಿಂದ ನೋಡಿದಾಗ ಹೇಗೆ ಕಾಣುವದೆಂಬುದನ್ನು ಇಲ್ಲಿ ತಿಳಿಸುವದಕ್ಕೆ ಪ್ರಯತ್ನಿಸುವೆನು.

''ಆದಿಯಲ್ಲಿ ಶಬ್ದವಿತ್ತು ಆ ಶಬ್ದವು ಈಶ್ವರನೊಡನೆ ಇತ್ತು. ಆ ಶಬ್ದವು

ಈಶ್ವರನೇ ಆಗಿತ್ತು'' ಈ ವಾಕ್ಯದಲ್ಲಿ ಕ್ರೈಸ್ತನು ಸೃಷ್ಟಿಗೆ ಆದಿಯಲ್ಲಿ ಆತ್ಮನಲ್ಲಿ ಒಂದಾಗಿದ್ದನೆಂದಿದೆ.

''ಸೃಷ್ಟಿಯ ಆದಿಯಲ್ಲಿಯೇ ಅವನು ದೇವನೊಡನಿದ್ದನು. ಎಲ್ಲವೂ ಆತ್ಮನಿಂದಲೇ ಸೃಷ್ಟವಾಯಿತು. ಅವನನ್ನು ಬಿಟ್ಟು ಯಾವದೊಂದೂ ಆಗಲಿಲ್ಲ'' ಇಲ್ಲಿ ಪರಮೇಶ್ವರನಿಗಿಂತ ವ್ಯತಿರಿಕ್ತವಾಗಿ ಯಾವದೊಂದೂ ಇಲ್ಲ; ಯಾವದು ಸೃಷ್ಟಯಾದರೂ ಪರಮಾತ್ಮನಿಗಿಂತ ವ್ಯತಿರಿಕ್ತವಾಗಿರುವದಿಲ್ಲವೆಂದೇ ಹೇಳಿದೆ.

''ಆತನಲ್ಲಿ ಜೀವವಿತ್ತು. ಈ ಜೀವವೇ ಜನರಿಗೇ ಜ್ಯೋತಿಯು. ಕತ್ತಲೆಯಲ್ಲಿಯೂ ಆ ಜ್ಯೋತಿಯು ಬೆಳಗುತ್ತಿತ್ತು, ಆದರೆ ಕತ್ತಲೆಯು ಅದನ್ನು ಅರಿಯಲಾರದಿತ್ತು.'' ಇಲ್ಲಿ ಪರಮಾತ್ಮನು ನಿತ್ಯಪರಂಜ್ಯೋತಿಯೆಂದಿದೆ. ಅವ್ಯಾಕೃತಾವಸ್ಥೆಯಲ್ಲಿಯೂ ಪರಂಜ್ಯೋತಿಸ್ವರೂಪನೇ ಆಗಿದ್ದರೂ ಆತನು ಯಾವ ವಿಶೇಷಜ್ಞಾನಕ್ಕೂ ಆಗ ವಿಷಯನಾಗಿರುವದಿಲ್ಲ; ನಾಮರೂಪವ್ಯಾಕರಣವಾದ ಬಳಿಕ ಆ ಜ್ಯೋತಿಯಿಂದ ಎಲ್ಲಾ ಜನರೂ ವ್ಯವಹಾರಮಾಡುತ್ತಿರುವರು.

''ಆ ಜ್ಯೋತಿಯೇ ಈ ಪ್ರಪಂಚಕ್ಕೆ ಬರುವ ಪ್ರತಿಯೊಬ್ಬ ಮನುಷ್ಯನಿಗೂ ಬೆಳಕುಕೊಡತಕ್ಕದ್ದು, ಆತನು ಈ ಪ್ರಪಂಚವನ್ನು ಒಳಹೊಕ್ಕನು, ಅವನಿಂದಲೇ ಪ್ರಪಂಚವು ಇದ್ದದ್ದು; ಆದರೂ ಈ ಪ್ರಪಂಚವು ಆತನನ್ನು ಅರಿಯಲಿಲ್ಲ'' ಇಲ್ಲಿ ಪರಮಾತ್ಮನು ಜಗತ್ತನ್ನು ಸೃಷ್ಟಿಸಿ ಜೀವನೆಂಬ ಆತ್ಮಜ್ಯೋತಿಯಾಗಿ ಎಲ್ಲದರ ಒಳಗೂ ಹೊಕ್ಕಿರುತ್ತಾನೆ ಎಂಬ ಮಹಾತತ್ತ್ವವನ್ನು ಹೇಳಿದೆ. ಜೀವನಿಗೂ ಮೂಲದಲ್ಲಿ ಪರಂಜ್ಯೋತಿಗೂ ಯಾವ ಹೆಚ್ಚುಕಡಿಮೆಯೂ ಇರುವದಿಲ್ಲ; ಈ ಜ್ಯೋತಿಯನ್ನು ಬಿಟ್ಟು ಪ್ರಪಂಚವು ಇರಲೇ ಆರದು. ಪ್ರಪಂಚವು ಆ ಆತ್ಮನ ಬೆಳಕಿನಿಂದ ಬೆಳಗಬೇಕೇ ಹೊರತು ಪ್ರಪಂಚದಲ್ಲಿ ಯಾವದೊಂದೂ ಆತನ ಸ್ವರೂಪವನ್ನು ವಿಷಯೀಕರಿಸಿ ಬೆಳಗಲಾರದು.

ಬೈಬಲ್ಲು ಗ್ರೀಕ್‌ಭಾಷೆಯಲ್ಲಿದ್ದು ಯೂರೋಪಿನ ನಾನಾಭಾಷೆಗಳಿಗೆ ಪರಿವರ್ತನವಾಗಿದೆ. ಇಂಗ್ಲಿಷುಭಾಷೆಯಲ್ಲಿ ಅದಕ್ಕೆ ಅನೇಕ ಅನುವಾದಗಳಾಗಿವೆ. ಆ ಅನುವಾದಗಳ ಮೂಲಕವೇ ನಾವುಗಳು ಮೂಲದ ಆಶಯವನ್ನು ತಿಳಿದುಕೊಳ್ಳಬೇಕಾಗಿದೆ. ಕ್ರಿಸ್ತಿಯನ್ನರು ಮೇಲೆ ನಾನು ಕೊಟ್ಟಿರುವ ಅರ್ಥವನ್ನು ಒಪ್ಪುತ್ತಾರೋ ಇಲ್ಲವೋ ನಾನರಿಯೆ. ಬಲುಮಟ್ಟಿಗೆ ಈಗಿನ ಕ್ರಿಸ್ತಿಯನ್ನರಿಗೆ ಇದು ಒಪ್ಪಾಗಲಾರದು: ಆದರೆ ಕ್ರೈಸ್ತನು ಮಾಡಿದ ಈ ಉಪದೇಶವು ನಮ್ಮ ದೇಶದಲ್ಲಿ ಪ್ರಚಾರದಲ್ಲಿರುವ ಉಪನಿಷತ್ತುಗಳ ಉಪದೇಶಕ್ಕೆ

ಹೊಂದುಗೆಯಾಗಿದೆ, ವೇದಾಂತಿಗಳಿಗೆ ಈ ಅರ್ಥವೇ ಕ್ರೈಸ್ತನ ಮನಸ್ಸಿನಲ್ಲಿದ್ದಿರಬೇಕು ಎನಿಸುತ್ತದೆ.

ಈಗ ಇನ್ನೊಂದು ಗ್ರಂಥಭಾಗವನ್ನು ಇಲ್ಲಿ ಉದಾಹರಿಸುವೆನು. ಅದರಿಂದಲೂ ಈ ನನ್ನ ಅಭಿಪ್ರಾಯಕ್ಕೆ ಪುಷ್ಟಿ ದೊರೆಯುವಂತಿದೆ. ಸೇಂಟ್ ಜಾನಿನ ಹತ್ತನೆಯ ಅಧ್ಯಾಯದಲ್ಲಿ ಈ ವಾಕ್ಯವಿದೆ 'ನಾನೂ ನಮ್ಮ ತಂದೆಯೂ ಒಂದೇ.' ಇಲ್ಲಿ 'ಅಹಂ ಬ್ರಹ್ಮಾಸ್ಮಿ' ಎಂಬ ವೇದಾಂತಮಹಾವಾಕ್ಯದ ಅಭಿಪ್ರಾಯವು ಇದೆ. ಈಶ್ವರನನ್ನು ತಂದೆ ಎಂದು ಕರೆಯುವದು ಯಹೂದ್ಯರಲ್ಲಿ ರೂಢಿ. ಈ ಕ್ರೈಸ್ತನ ಮಾತನ್ನು ಕೇಳಿದ ಕೂಡಲೆ ಅಲ್ಲಿದ್ದ ಯಹೂದಿಗಳು ಅವನನ್ನು ಕಲ್ಲುಗಳಿಂದ ಹೊಡೆದು ಕೊಲ್ಲಬೇಕೆಂದು ಯತ್ನಿಸಿದರು. ಆ ಜನರಿಗೆ ಕ್ಷೇತ್ರಜ್ಞೇಶ್ವರೈಕ್ಯವನ್ನು ಹೇಳುವರು ಮಹಾದೈವದ್ರೋಹವೆಂಬ ಅಭಿಪ್ರಾಯವಿತ್ತು. ಈಚೆಗೆ 'ಮನ್ಸೂರ್ ಎಂಬ ಮುಸಲ್ಮಾನ ಮಹಾತ್ಮನೊಬ್ಬನು 'ಅನಲ್ ಹಕ್!' (ನಾನು ಪರಮಾತ್ಮನೇ) ಎಂಬ ಅರಬೀವಾಕ್ಯವನ್ನು ಘೋಷಿಸಿ ಆಗಿನ ಕಾಲದ ಜನರ ಉಗ್ರಕೋಪಕ್ಕೆ ಬಲಿಯಾದನೆಂದು ಹೇಳುತ್ತಾರೆ. ಈಶ್ವರನೂ ಜೀವನೂ ಒಂದೇ ಎಂಬ ವಾಕ್ಯದ ಅರ್ಥವು ಸಾಮಾನ್ಯರಿಗೆ ತಿಳಿಯುವದು ಕಷ್ಟ.

''ಪರಮೇಶ್ವರನ ಮಹಾಕರ್ಮಗಳನ್ನು ನಿಮಗೆ ನಾನು ತಿಳಿಸಿಕೊಟ್ಟರುತ್ತೇನಷ್ಟೆ? ಅವುಗಳಲ್ಲಿ ಯಾವದಕ್ಕಾಗಿ ನನ್ನನ್ನು ಕಲ್ಲಿನಿಂದ ಹೊಡೆಯಬೇಕೆನ್ನುವಿರಿ?'' ಎಂದು ಕ್ರೈಸ್ತನು ಕೇಳಿದ್ದಕ್ಕೆ ಅವರು ''ನಿನ್ನನ್ನು ನಾವು ಸುಕೃತ್ಯಕ್ಕಾಗಿ ಹೊಡೆಯುತ್ತಿಲ್ಲ, ದೈವದ್ರೋಹಕ್ಕಾಗಿ ಹೊಡೆಯುತ್ತೇವೆ; ಮನುಷ್ಯಮಾತ್ರದವನಾಗಿದ್ದುಕೊಂಡು ನಾನು ಈಶ್ವರನೆಂದುಕೊಳ್ಳುತ್ತಿ - ರುವೆಯಲ್ಲ!'' ಎಂದರು.

ಇದಕ್ಕೆ ಕ್ರೈಸ್ತನು ಕೊಟ್ಟ ಉತ್ತರವು ಬೋಧಪ್ರದನಾಗಿದೆ; ''ನಿಮ್ಮ ಶಾಸ್ತ್ರ ದಲ್ಲಿಯೇ 'ನೀವು ದೇವರುಗಳು ಎಂದೆನು' ಎಂದು ಬರೆದಿರುವದಲ್ಲವೇ ಈಶ್ವರನ ಶಬ್ದವು ಯಾರಿಗೆ ಬಂದಿತೋ ಅವರನ್ನೇ ದೇವರೆಂದಿದೆ-ಶಾಸ್ತ್ರವು ಅಪ್ರಮಾಣವಾಗಲಾರದಷ್ಟೆ?- ಹೀಗಿರುವಲ್ಲಿ ಆ ತಂದೆಯು ಪವಿತ್ರಗೊಳಿಸಿ ಈ ಪ್ರಪಂಚಕ್ಕೆ ಕಳುಹಿಸಿರುವ ನಾನು 'ಆ ಪರಮೇಶ್ವರನ ಪುತ್ರನು' ಎಂದದ್ದಕ್ಕೆ ದೈವದ್ರೋಹವಾಯಿತೆನ್ನುವಿರೇನು? ಆ ನನ್ನ ತಂದೆಯ ಲೀಲೆಗಳನ್ನೇ ನಾನು ತೋರಿಸುತ್ತಿಲ್ಲವಾದರೆ, ನನ್ನಲ್ಲಿ ಶ್ರದ್ಧೆಯಿಡಬೇಡಿರಿ; ಆದರೆ ನಾನು ಅವನ್ನೇ ತೋರಿಸುತ್ತಿದ್ದರೆ ನನ್ನಲ್ಲಿ ವಿಶ್ವಾಸವಿಲ್ಲದಿದ್ದವೂ ಚಿಂತೆಯಿಲ್ಲ, ಆ

ಲೀಲೆಗಳನ್ನು ನಂಬಿರಿ; ಹಾಗಾದರೆ ಆ ತಂದೆಯು ನನ್ನಲ್ಲಿರುತ್ತಾನೆಂದೂ ನಾನು ಆ ತಂದೆಯಲ್ಲಿರುತ್ತೇನೆಂದೂ ಅರಿತುಕೊಂಡೀರಿ!'' ಈ ವಾಕ್ಯವನ್ನು ನಮ್ಮ ದೇಶದವರಿಗೆ ತಿಳಿಯುವ ಭಾಷೆಯಲ್ಲಿಟ್ಟರೆ ಅದರ ಅಭಿಪ್ರಾಯವು ಇಷ್ಟಾಗುವದು: ಜ್ಞಾನಿಯಾದವನು ಪರಮೇಶ್ವರನಿಗೆ ಪರಮಭಕ್ತನು; ಅವನಿಗೂ ಆ ಭಗವಂತನಿಗೂ ಯಾವ ಭೇದವೂ ಇರುವದಿಲ್ಲ. ಅವನ ಕೃತಿಗಳೆಲ್ಲ ಆ ಪರಮಾತ್ಮನವೇ ಆಗಿರುತ್ತವೆ. ಜ್ಞಾನಿಯು ಭಗವಂತನಿಗೆ ಅತ್ಯಂತಪ್ರಿಯನು. ಏಕೆಂದರೆ ಅವನಿಗೆ ಭಗವಂತನು ಅತ್ಯಂತಪ್ರಿಯನಾಗಿರುತ್ತಾನೆ. ಪರಮಾತ್ಮನೊಬ್ಬನೇ ಉತ್ತಮಗತಿಯೆಂಬುದನ್ನು ಜ್ಞಾನಿಯು ಬಲ್ಲನು. ಆದ್ದರಿಂದ ಅವನು ನಿಜವಾಗಿ ಭಗವಂತನ ಆತ್ಮನೇ ಆಗಿರುತ್ತಾನೆ. ಸಾಮಾನ್ಯಜನರು ಕೂಡ ಪರಮಾತ್ಮನ ಅಂಶಸ್ವರೂಪರೇ ಸರಿ; 'ಅದೇ ನೀನು, ಇದೆಲ್ಲವೂ ಪರಮಾತ್ಮನೇ; ಬೆಸ್ತರು, ಜೀತಗಾರರು, ಜೂಜುಗಾರರು- ಇಂಥ ಕ್ಷುದ್ರಜೀವರುಗಳೂ ಬ್ರಹ್ಮವೇ'- ಎಂದು ವೇದವು ಹೇಳುತ್ತಿದೆ. ಹೀಗಿರುವಲ್ಲಿ ಮಹಾವೀರ್ಯರಾದ ಪುಣ್ಯಾತ್ಮರಾದ, ಪರಮಾತ್ಮನಲ್ಲಿಯೇ ನಿಷ್ಠೆಯುಳ್ಳ, ಮಹಾತ್ಮರು 'ನಾನು ಬ್ರಹ್ಮನೇ' ಎಂದರೆ ಆಶ್ಚರ್ಯವೇನು?

ವೇದವೆಂಬುದು ಅನಾದಿ ಎಂದು ಭಾರತನಿವಾಸಿಗಳಾದ ಋಷಿಗಳ ನಂಬಿಕೆ. ಅವರು ತಪಸ್ಸಿನಿಂದ ಪರಮಾತ್ಮಧ್ಯಾನದಲ್ಲಿ ಮುಳುಗಿ ತನ್ಮಯರಾಗಿದ್ದಾಗ ಆತನ ಅನುಗ್ರಹದಿಂದ ಅವರಿಗೆ ಆ ಪರಮಾತ್ಮನ ಪರಂಜ್ಯೋತಿಸ್ವರೂಪದ ಅರಿವು ಆಯಿತು. 'ಎಲೈ ಅಮೃತಪುತ್ರರಿರ, ಕೇಳಿರಿ!' ಎಂದು ಒಬ್ಬ ಋಷಿ ಎಲ್ಲರನ್ನೂ ಸಂಬೋಧಿಸಿರುತ್ತಾನೆ. 'ಪರಮೇಶ್ವರನು ಆದಿತ್ಯವರ್ಣನು, ಕತ್ತಲ ಅಚೆಗಿರುವವನು' ಎಂದು ವೇದಾಂತ ವಾಕ್ಯವು ಸಾರುತ್ತಿದೆ. 'ಆತನು ಎಲ್ಲರಲ್ಲಿಯೂ ಇರುವ ಸಾಕ್ಷಿಯು, ಚೈತನ್ಯಸ್ವರೂಪನು'- ಎಂದು ಮತ್ತೊಂದು ವಾಕ್ಯದಲ್ಲಿದೆ.

ಯೇಸುಕ್ರೈಸ್ತನ ಉಪದೇಶಗಳನ್ನು ಈ ದೃಷ್ಟಿಯಿಂದ ನೋಡಿದರೆ ಪರಮೇಶ್ವರನು ಎಲ್ಲರಿಗೂ ಒಂದಲ್ಲ ಒಂದು ಮಾರ್ಗದಿಂದ ತನ್ನ ತತ್ತ್ವಸ್ವರೂಪವನ್ನು ಮಹಾತ್ಮರ ಮೂಲಕವಾಗಿ ಉಪದೇಶಿಸಿರುತ್ತಾನೆಂದು ಹೇಳಬೇಕಾಗುವದಲ್ಲವೆ?

★★★★★

# ಜ್ಞಾನಸ್ನಾನದಾತನಾದ ಜಾನನು

## (ಡಾನ್ ಪತ್ರಿಕೆಯಲ್ಲಿ ಶ್ರೀಮತಿ ಎಲಿಸಬೆತ್ ಹೇಡನ್‌ರವರು ಬರೆದಿರುವದರ ಅನುವಾದ)

ಜ್ಞಾನಸ್ನಾನದಾತನಾದ ಜಾನನು[1] ಹೊರಗಿನ ಗುರುವು; ಕ್ರೈಸ್ತನ ಆಗಮನಕ್ಕೆ ಸಿದ್ಧಪಡಿಸುವದೇ ಈ ಗುರುವಿನ ಕೆಲಸವು. ಅವನು ಮಾಡುವ ಬೋಧೆಯು ಉದ್ಬೋಧಕವಾಗಿರಬೇಕು; ಒಳಗಿರುವ ಬೀಜ ಶಕ್ತಿಯು, ದೈವಬೀಜವು, ತನ್ನ ಮೇಲಿರುವ ಮಣ್ಣಿನ ಶರೀರವೆಂಬ ಒತ್ತಾದ ಹೊದಿಕೆಯನ್ನು ಒಡೆದುಕೊಂಡು ಮೇಲಕ್ಕೇಳುವಂತಿರಬೇಕು.

ಜಾರ್ಡಾನ್ನಿನಲ್ಲಿ ಮಾಡಿದ ಜ್ಞಾನಸ್ನಾನವೆಂಬುದು[2] ಹೊರಗಿನ ಕರ್ಮವಿಶೇಷವನ್ನು ಸೂಚಿಸುತ್ತದೆ. ಕೆಲವು ವೇಳೆ ಇದರಿಂದಲೂ ಉದ್ದಿಷ್ಟ ಫಲವಾಗುತ್ತವೆ. ಒಳಗಿನ ಕ್ರೈಸ್ತನು ಮೆಲ್ಲಮೆಲ್ಲಗೆ ಎಚ್ಚರುವದಕ್ಕೆ ಮೊದಲುಮಾಡುವನು. ಹಿಂದಿನ ತಪ್ಪಿಗೆ ಪಶ್ಚಾತ್ತಾಪಪಡುವದೆಂಬುದು ಹೀಗೆ ಎಚ್ಚತ್ತದ್ದಕ್ಕೆ ಒಂದು ಗುರುತು.

---

1. ಜಾನನು ಕ್ರೈಸ್ತನಿಗಿಂತ ಮೊದಲು ಬಂದಿದ್ದ ಒಬ್ಬ ಮತಾಚಾರ್ಯನು; ಇವನು ಜೀಸಸ್ಸನಿಗೂ ಜಾರ್ಡಾನ್ ನದಿಯಲ್ಲಿ ಜ್ಞಾನಸ್ನಾನಮಾಡಿಸಿದನು. ಈ ಲೇಖದಲ್ಲಿ ಈತನ ಚರಿತ್ರೆಯನ್ನು ರೂಪಕವಾಗಿ ವರ್ಣಿಸಿದೆ. –ಸಂ.ಅ.ಪ್ರ

2. ಜ್ಞಾನಸ್ನಾನವೆಂಬುದು ಕ್ರಿಸ್ತಿಯನ್ ಸಮಾಜಕ್ಕೆ ಸೇರಿಕೊಂಡ ಗುರುತಾಗಿಯೋ ಶುದ್ಧಿಯಾದದ್ದರ ಗುರುತಾಗಿಯೋ, ಪಾಪಿ ಜನ್ಮದಲ್ಲಿದ್ದು ಸತ್ತು ಕ್ರೈಸ್ತನೊಡನೆ ಮತ್ತೆ ಎದ್ದದ್ದರ ಗುರುತಾಗಿಯೋ, ಕ್ರೈಸ್ತನೇ ರಕ್ಷಕನು, ಕರ್ತನು ಎಂದು ಆತನೊಡನೆ ಸೇರಿಕೊಂಡದ್ದರ, ಗುರುತಾಗಿಯೋ ಇನ್ನು ಮೇಲೆ ಕ್ರೈಸ್ತನಲ್ಲಿಯೇ ನಿಷ್ಠನಾಗಿರುವನೆಂದು ಪ್ರತಿಜ್ಞೆಮಾಡಿದ್ದರ ಗುರುತಾಗಿಯೋ– ಮಾಡಿಸುವ ಒಂದಾನೊಂದು ಕ್ರೈಸ್ತಸಂಸ್ಕಾರವು. ನೀರಿನಲ್ಲಿ ಮುಳುಗಿಸುವದು, ನೀರನ್ನು ಅಭಿಷೇಕಮಾಡುವದು, ಅಥವಾ ಸಂಪ್ರೋಕ್ಷಣೆಮಾಡುವದು – ಈ ಕರ್ಮದಲ್ಲಿ ಮುಖ್ಯವಾಗಿರುವದು. ಈ ಸಂಸ್ಕಾರವನ್ನು ಯಾರಿಗೆ ಮಾಡಬೇಕು, ಹೇಗೆ ಮಾಡಬೇಕು, ಇದರ ಫಲವೇನು? ಎಂಬ ವಿಷಯಕ್ಕೆ ಕ್ರಿಸ್ತಿಯನ್ನರಲ್ಲಿ ಮತಭೇದವುಂಟು.

ಕ್ರೈಸ್ತನು ಪೂರ್ಣವಾಗಿ ಒಂದು ಸಲ ಎಚ್ಚತ್ತುಬಿಟ್ಟರೆ. ಹೊರಗಿನ ಉಪದೇಶವು ಆಮೇಲೆ ಬೇಕಿರುವದಿಲ್ಲ; ಏಕೆಂದರೆ ಆಗ ಯಾವ ತೊಡಕು ಉಂಟಾದರೂ ಅದಕ್ಕೆ ಬೇಕಾದ ಬೋಧನೆಯು ಒಳಗಿನಿಂದಲೇ. ಈ ಲೋಕಕ್ಕೆ ಬರುವ ಪ್ರತಿಯೊಬ್ಬನಲ್ಲಿಯೂ ಬೆಳಗುತ್ತಿರುವ ಪ್ರದೀಪದಿಂದಲೇ ದೊರಕುತ್ತದೆ.

ಜ್ಞಾನಸ್ನಾನದ ಜಾನನ ಉಪದೇಶವು ದುಃಖಾಂತವಾಗಿ[1] ಕೊನೆ ಗಂಡದ್ದರಿಂದ ತಿಳಿಯಬೇಕಾದದ್ದೇನೆಂದರೆ, ಹೆಂಗಸರ ಹೆಮ್ಮೆಯೂ ಹೆಂಗಸರ ಮುಂದೆ ತಮ್ಮ ಜಂಭವನ್ನು ಕೊಚ್ಚಿಕೊಳ್ಳಬೇಕೆಂಬ ಗಂಡಸರ ಹವಣಿಕೆಯೂ ಎಂಥ ಒಳ್ಳೆಯ ಕೆಲಸವನ್ನಾದರೂ ಹಾಳುಮಾಡಿಬಿಡುತ್ತವೆ. ಈ ಸಂದರ್ಭದಲ್ಲಿಯೂ ಗಂಡಸರ ಹೆಂಗಸರ ಹೆಮ್ಮೆಯೇ ನಿರಪರಾಧಿಯವನೊಬ್ಬನ ಸಾವಿಗೆ ಕಾರಣವಾಯಿತು.

ಪರಲೋಕದ ರಾಜ್ಯದಲ್ಲಿರುವವರಲ್ಲಿ ಎಲ್ಲರಿಗಿಂತಲೂ ಕಡಿಮೆಯಾದವನು ಕೂಡ ಜ್ಞಾನಸ್ನಾನದ ಜಾನನಿಗಿಂತ ದೊಡ್ಡವನೆಂದು ಜೇಸಸ್ಸನು ಹೇಳಿರುತ್ತಾನೆ. ಇದರಭಿಪ್ರಾಯವೇನೆಂದರೆ ಒಳಗಿನ ಅಂತರಾತ್ಮವು ಎಚ್ಚರುವವರೆಗೆ ಹೊರಗಿನ ಉಪದೇಶವು ನಿಷ್ಫಲವು; ಅಧ್ಯಾತ್ಮವಿಚಾರಗಳು ತರ್ಕಕ್ಕೆ ನಿಲುಕುವದಿಲ್ಲ. ಪರಲೋಕದ ರಾಜ್ಯವೆಂಬುದು ನಮ್ಮ ಒಳಗೆ ಹುಡುಕಿಕೊಂಡಾಗ ಮಾತ್ರವೇ ದೊರಕೀತು.

★★★★★

---

1. ಹೆರಾಡನೆಂಬ ದೊರೆಯು ತನ್ನ ಅಣ್ಣನ ಹೆಂಡತಿಯಾದ ಹೆರೋಡಿಯಸ್ ಎಂಬಾಕೆಯನ್ನಿಟ್ಟುಕೊಂಡಿದ್ದನು. ಇದು ಅಧರ್ಮವೆಂದು ಹೇಳಿದ ಜಾನನನ್ನು ಅವನು ಸೆರೆಮನೆಯಲ್ಲಿಡಿಸಿದನು; ಆದರೆ ಇವನ ಶಿಷ್ಯಮಂಡಲಿಯವರು ಏನುಮಾಡುವರೋ ಎಂಬ ಅಂಜಿಕೆಯಿಂದ ಆತನನ್ನು ಕೊಲ್ಲಿಸದೆ ಇದ್ದನು. ದೊರೆಯು ತನ್ನ ವರ್ಧಂತಿಯಲ್ಲಿ ಹೆರೋಡಿಯಸ್ಸಿನ ಮಗಳು ಮಾಡಿದ ನರ್ತನಕ್ಕೆ ಮೆಚ್ಚಿ ನೀನು ಕೇಳಿದ ವರವನ್ನು ಕೊಡುವೆನೆಂದು ಆಣೆಯಿಟ್ಟುಕೊಂಡನು. ಮೊದಲೇ ತಾಯಿಯ ಉಪದೇಶದಿಂದ ಬಂದಿದ್ದ ಆ ಹುಡುಗಿಯು 'ಜಾನನ ತಲೆಯನ್ನು ತರಿಸಿಕೊಂಡು' ಎಂದಳು. ಅರಸನಿಗೆ ಇದು ಇಷ್ಟವಿರಲಿಲ್ಲವಾದರೂ ತಾನು ಇಟ್ಟುಕೊಂಡಿದ್ದ ಆಣೆಯನ್ನು ಪಾಲಿಸುವದಕ್ಕಾಗಿ ಜಾನನನ್ನು ಸೆರೆಮನೆಯಲ್ಲಿಯೇ ತಲೆ ಹೊಡೆಯಿಸಿದನು – ಎಂದು ಬೈಬಲ್ ಕಥೆ. (ಮ್ಯಾಥ್ಯೂ, 14ನೆಯ ಅಧ್ಯಾಯ)

# ಜೇಕಬ್ ಬೊ ಎಹ್ಮ್

## (ವೆರಿಯರ್ ಎಲ್ವಿನ್ ಎಂಬುವರು ''ದಿ ನ್ಯೂ ಏಜ್'' ಪತ್ರಿಕೆಯಲ್ಲಿ ಬರೆದಿರುವದರ ಆಧಾರದಿಂದ)

ಪ್ರಪಂಚದಲ್ಲಿ ಒಂದೇ ವಸ್ತುವಿನಲ್ಲಿಯೇ ಜನರಿಗೆ ಬೇರೆ ಬೇರೆ ಅಭಿಪ್ರಾಯಗಳಿರುವದುಂಟು. ಆದರೆ ಅತ್ಯಂತ ವಿರುದ್ಧವಾದ ಅಭಿಪ್ರಾಯಗಳುಂಟಾಗುವದು ತೀರ ಕಡಿಮೆ. ಜರ್ಮನಿಯ ಜೇಕಬ್ ಬೋ ಎಹ್ಮ್ - ಎಂಬ ಯೋಗಿಯ ವಿಷಯವಾಗಿ ಈ ಕೆಳಗೆ ನಾವು ಕೊಡುವ ವಿರುದ್ಧಾಭಿಪ್ರಾಯಗಳನ್ನು ವಾಚಕರೇ ತೂಗಿ ನೋಡಿ ಸಾಮರಸ್ಯವನ್ನು ಕಂಡುಕೊಳ್ಳಬೇಕು.

ಈತನ ವಿಷಯದಲ್ಲಿ ''ನವವಿಶ್ವಜೀವನಚರಿತೆ'' (New Universal Biography) ಎಂಬ ಕೋಶದಲ್ಲಿ ಬರೆದಿರುವದಿಷ್ಟು; ''ಇವನೊಬ್ಬ ಜರ್ಮನಿಯ ಕಲ್ಪನಾದೃಷ್ಟಿಯ ಪುರುಷನು; ಇವನು ಮತವಿಚಾರವಾಗಿ ಬರೆದಿರುವ ಅಸಂಬದ್ಧಗ್ರಂಥಗಳು ಅರ್ಥವಾಗದಿರುವದೇ ಹೆಚ್ಚು. ಅರ್ಥವಾಗುವ ಕಡೆ ಶುದ್ಧ ಅವಿವೇಕವಾಗಿವೆ- ಎಂದೇ ತಿಳಿದವರಿಗೆ ಕಂಡುಬರುತ್ತಿದ್ದವು. ಆದರೆ ಇವನನ್ನು ಮೆಚ್ಚಿದವರೂ ಅನೇಕರುಂಟು. ಈ ಗ್ರಂಥಗಳ ವಿಷಯದಲ್ಲಿ ಎಷ್ಟೋ ವ್ಯರ್ಥವಾದ ಚರ್ಚೆಗಳು ನಡೆದವು. ಈತನು ಹುಟ್ಟಿದ್ದು 1575, ಸತ್ತುದ್ದು 1674.''

ಬೊಎಹ್ಮನ ವಿಚಾರವಾಗಿ ಮತ್ತೊಂದಭಿಪ್ರಾಯವುಂಟು. ಅದನ್ನು ವಾಚಕರು ಅವಶ್ಯವಾಗಿ ಮನನಮಾಡಬೇಕು. ಪರಮೇಶ್ವರನು ಜಾತಿ ಕುಲಧನರೂಪಾದಿಗಳನ್ನೊಂದನ್ನೂ ಲಕ್ಷ್ಯವಿಡದೆ ಯಾರಲ್ಲಿ ತನಗೆ ಪ್ರೀತಿ ಯಾಗುವದೋ ಅವರಿಗೆ ಅನುಗ್ರಹವನ್ನು ಮಾಡುವನೆಂಬುದನ್ನೂ ಚತುರ್ಮುಖಬ್ರಹ್ಮನಿಂದ ಹಿಡಿದು ಗಿಡಮರಗಳವರೆಗೂ ಪರಮಾತ್ಮನ ಅಂಶವೇ ಒಳಗಡಗಿದ್ದು ಸಮಯ ಬಂದಾಗ ಹೊರತೋರಿಕೊಳ್ಳುವದೆಂಬುದನ್ನೂ ಮನಗಾಣುವದಕ್ಕೆ ಇದು ಸಹಾಯವಾದೀತು.

ಬೊಎಹ್ಮನು ಒಬ್ಬ ಮೋಚಿಯುವನು; ಇವನು ಸೈಲೀಷಿಯದಲ್ಲಿ ತೀರ ಬಡವರಾಗಿದ್ದ ತಾಯಿತಂದೆಗಳ ಮನೆಯಲ್ಲಿ ಜನ್ಮವನ್ನೆತ್ತಿದ್ದನು. ಹುಟ್ಟಿದಾಗಿನಿಂದಲೂ ಇವನಲ್ಲಿ ಪರಮಾರ್ಥವಾಸನೆಯು ತಲೆದೋರಿಕೊಂಡೇ ಇರುತ್ತಿತ್ತು. ಅವನು ಇನ್ನೂ ಚಿಕ್ಕವನಾಗಿರುವಾಗಲೇ ಒಂದು ದಿನ ಕಗ್ಗತ್ತಲೆಯಾಗಿದ್ದ ಒಂದು ಗುಹೆಯನ್ನು ಹೊಕ್ಕನಂತೆ. ಅಲ್ಲಿ ಒಂದು ಕೊಪ್ಪರಿಗೆಯ ತುಂಬ ಹಣವನ್ನು ಕಂಡು ಹೆದರಿಕೆಯಿಂದ ಹೊರಕ್ಕೆ ಓಡಿ ಬಂದನಂತೆ. ಆಮೇಲೆ ಇವನು ತನ್ನ ಗೆಳೆಯರೊಡನೆ ಅದೇ ಸ್ಥಳಕ್ಕೆ ಬಂದು ನೋಡಿದರೂ ಆ ನಿಧಿಯು ಕಾಣಿಸಿಕೊಳ್ಳಲಿಲ್ಲವಂತೆ. ಬೊಎಹ್ಮನು ಬ್ರಹ್ಮವಿದ್ಯೆಯ ರಹಸ್ಯನಿಧಿಯನ್ನು ಕಂಡುಕೊಳ್ಳುವನೆಂಬುದಕ್ಕೆ ಇದು ಭವಿಷ್ಯತ್ಸೂಚನೆಯೆಂದು ಕೆಲವರು ಊಹಿಸಿರುತ್ತಾರೆ. ಅಂತೂ ಚಿಕ್ಕವನಾಗಿರುವಾಗಲೇ ಇವನಲ್ಲಿ ವಿರಕ್ತಿಯು ಮೊಳಕೆಯಾಗಿತ್ತೆಂದು ತೋರುತ್ತದೆ. ಈ ವಿರಕ್ತಿಯು ಕೊನೆಯವರೆಗೂ ಇವನಲ್ಲಿ ನೆಲೆಯಾಗಿ ನಿಂತೇಬಿಟ್ಟಿತು.

ಇನ್ನೊಂದು ಸಲ ಬೊಎಹ್ಮನು ತನ್ನ ಅಂಗಡಿಯಲ್ಲಿ ಜೋಡುಗಳನ್ನು ಹೊಲೆಯುತ್ತಾ ಕೂತಿರುವಾಗ ಒಬ್ಬ ತೇಜಸ್ವಿಯಾದ ಅಪರಿಚಿತಪುರುಷನು ಬಂದು ''ಬೇಕಬನೆ, ಈಗ ನೀನು ಅಲ್ಪನಾಗಿರುತ್ತೀಯೆ; ಆದರೆ ನೀನು ಮುಂದೆ ಮಹಾತ್ಮನಾಗುವೆ. ಆಗ ಇಡಿಯ ಲೋಕವೇ ನಿನ್ನನ್ನು ನೋಡಿ ಬೆರಗಾಗುವದು ನಿನಗೆ ಬಹಳ ಕಷ್ಟವೊದಗುವದು. ಒಡತನವು ಬೆನ್ನಂಟುವದು, ಜನರ ಹಿಂಸೆಯು ಹಿಂದೆಯೇ ಇರುವದು; ಆದರೆ ಹೆದರಬೇಡ, ನೀನು ಪರಮೇಶ್ವರನಿಗೆ ಭಕ್ತನಾಗಿದ್ದೀಯೆ'' ಎಂದುನುಡಿದು ಮಾಯವಾದನಂತೆ. ಅಂದಿನಿಂದ ಈ ಚಮ್ಮಾರರ ಹುಡುಗನು ತನ್ನ ಕರ್ತವ್ಯವೇನೆಂಬುದನ್ನು ಕಂಡುಕೊಂಡನು. ಅವನಿಗೆ ಆಗಿಂದಾಗ್ಗೆ ಬಗೆಬಗೆಯ ಸಮಾಧಿಗಳುಂಟಾಗುವದಕ್ಕೆ ಮೊದಲಾದವು. ಕೊನೆಗೆ ಒಂದು ದಿನ ಥಳಗುಟ್ಟುತ್ತಿದ್ದ ತಟ್ಟೆಯಲ್ಲಿ ಮಾರುಹೊಳೆದಿದ್ದ ಸೂರ್ಯಬಿಂಬವನ್ನು ನೋಡಿದ ಕೂಡಲೆ ಇವನಿಗೆ ಒಂದು ಅದ್ಭುತವಾದ ದರ್ಶನವಾಯಿತು. ಆಗ ಅವನಿಗೆ ದೇಹದ ಭಾಸವೇ ಇಲ್ಲದಂತಾಯಿತು. ಪ್ರಪಂಚದ ರಹಸ್ಯವೆಲ್ಲ ಒಮ್ಮೆಗೇ ಗೋಚರವಾದಂತಾಯಿತು. ಅವನು ಹೊರಕ್ಕೆ ಹೋದರೆ ಪ್ರತಿಯೊಂದು ವಸ್ತುವಿನಲ್ಲಿಯೂ ತತ್ತ್ವವು ಸೂಸುತ್ತಿರುವಂತೆ ಅವನಿಗೆ ತೋರುತ್ತಿತ್ತು. ಹುಲ್ಲೂ ಹೂವೂ ಜೀವಕಳೆಯಿಂದ ತುಂಬಿ ತುಳುಕಾಡುವಂತೆ ಕಾಣುತ್ತಿದ್ದವು. ಪ್ರಕೃತಿದೇವಿಯ ಮೇಲ್ಮುಸುಕು ಬಲು ತೆಳ್ಳಗಾಗಿ ಅಲ್ಲೆಲ್ಲ ಆಧಾರವಾಗಿರುವ ಆತ್ಮಾಂಶವು ಗೋಚರವಾಗುವದಕ್ಕೆ ಮೊದಲಾಯಿತು.

ಅಲ್ಲಿಂದ ಮುಂದಕ್ಕೂ ಬೋಎಹ್ಮನು ತನ್ನ ಕಸಬನ್ನು ಮಾಡಿಕೊಂಡೇ ಇರುತ್ತಿದ್ದನಾದರೂ ಅವನಿಗೆ ಆಗಿಂದಾಗ್ಗೆ ಆಗುವ ಅದ್ಭುತದರ್ಶನಗಳಿಂದ ಅವನ ಹೃದಯವು ಕದಡಿತು. ಅವನ ದೃಷ್ಟಿಯು ನಿರ್ಮಲವಾಗುತ್ತಾ ಬಂದ ಹಾಗೆಲ್ಲ ಈ ದರ್ಶನಗಳು ಅವನಿಗೆ ಹೆಚ್ಚು ಹೆಚ್ಚು ಪರಮಾರ್ಥವೆಂದು ತೋರುತ್ತಾ ಬಂದವು. ಆಮೇಲೆ ಅವನು ಗ್ರಂಥರಚನೆಗೆ ಕೈಹಾಕಿದನು. ಕೂಡಲೆ ಇವನನ್ನು ಆಗಿನ ಕ್ರಿಸ್ತಿಯನರು ಹಿಂಸಿಸುವದಕ್ಕೆ ಮೊದಲು ಮಾಡಿದರು. ಆದರೂ ಇವನ ಕೀರ್ತಿಯು ಹೆಚ್ಚು ಹೆಚ್ಚು ಹರಡುತ್ತಾ ಅವನಿಗೆ ''ಜರ್ಮನಿಯ ತತ್ತ್ವಶಾಸ್ತ್ರದ ಸಂಪ್ರದಾಯಪ್ರವರ್ತಕ''ನೆಂಬ ಬಿರುದು ಬಂದಿತು. ಅವನು ಯೂರೋಪಿನಲ್ಲೆಲ್ಲ ಪ್ರಯಾಣಮಾಡಿ ಆಗಿನ ತತ್ತ್ವಚಿಂತರಲ್ಲನೇಕರ ಪರಿಚಯವನ್ನು ಮಾಡಿಕೊಂಡನು. 1613ರಲ್ಲಿ ತನ್ನ ಮೋಚಿಯಂಗಡಿಯ ಸಾಮಾನುಗಳನ್ನೆಲ್ಲ ಮಾರಿ ಉಣ್ಣೆಯ ಬಟ್ಟೆಯ ವ್ಯಾಪಾರವನ್ನು ಪ್ರಾರಂಭಿಸಿದನು. ಎಷ್ಟೋ ಜನ ಮುಮುಕ್ಷುಗಳಿಗೆ ಸಾಧನಕ್ರಮವನ್ನುಪದೇಶಿಸಿ ಗುರುವೆನಿಸಿಕೊಂಡು ಇನ್ನೂ ಹತ್ತುವರ್ಷಗಳ ಕಾಲ ಸುಖವಾಗಿ ಬಾಳಿದನು. ಕೊನೆಗೆ ಸಾಯುವ ಕಾಲದಲ್ಲಿ ದಿವ್ಯಗಾನದ ಆನಂದವನ್ನನುಭವಿಸುತ್ತಾ ''ಇನ್ನು ನಾನು ಸ್ವರ್ಗಕ್ಕೆ ಹೊರಡುವೆನು'' ಎಂದು ಹೇಳಿ ಪ್ರಾಣವನ್ನು ಬಿಟ್ಟನು.

ಬೋಎಹ್ಮನು ಉಪದೇಶಿಸಿದ ತತ್ತ್ವಗಳಿಂದ ಅವನು ಎಷ್ಟೋ ಜನ ಕ್ರಿಸ್ತಿಯನರ ದ್ವೇಷಕ್ಕೆ ಪಾತ್ರನಾಗಬೇಕಾಯಿತು. ಆದರೆ ಅವನು ಕೊನೆಗೂ ಪರಮಾರ್ಥಭಕ್ತನಾಗಿಯೇ ಇರುತ್ತಿದ್ದನು. ''ಈಶ್ವರನ ವಚನವನ್ನೂ ಈಶ್ವರನ ಹೃದಯವನ್ನೂ ಬಿಟ್ಟು ಮತ್ತೇನನ್ನೂ ಹುಡುಕದಿರಿ'' ಎಂಬುದೇ ಅವನ ಮುಖ್ಯೋಪದೇಶವಾಗಿತ್ತು. ''ಜೀವನು ಸರ್ವಶಕ್ತನಾದ ಈಶ್ವರನಿಂದ ಹೊರಟುಬಂದಿರುವ ಒಂದು ಕಿಡಿಯು'' ಎಂಬುದು ಅವನ ಮತವು. ಅವನು ''ಎಲ್ಲಾ ವ್ಯಾಪಾರಗಳೂ, ಎಲ್ಲಾ ಕಸಬುಗಳೂ, ಎಲ್ಲಾ ಸ್ಥಿತಿಗಳೂ ದೈವನಿಯಮಿತವಾಗಿದೆ; ಪ್ರತಿಯೊಬ್ಬನೂ ಈಶ್ವರಲೀಲೆಯನ್ನೇ ತೋರಿಸುತ್ತಿರುವನು'' ಎನ್ನುತ್ತಿದ್ದನು. ಯೋಗಿಗಳು ಹೇಳುವ ಯೋಗಾನಂದವನ್ನು ಹೇಳುವದರ ಜೊತೆಗೆ ಮನುಷ್ಯನು ಪಾಪಾಚರಣೆಯಿಂದ ಕೆಟ್ಟುಹೋಗಿದ್ದಾನೆಂಬ ಉಪದೇಶವನ್ನೂ ಕೂಡಿಸಿ ಬೋಧಿಸುತ್ತಿದ್ದನು. ತನ್ನೊಳಗೆ ತಾನು ನಿಂತು ಈಶ್ವರಸಮಾಧಿಯನ್ನೇ ಅನುಭವಿಸುತ್ತಿರಬೇಕೆಂಬ ಧ್ಯಾನಯೋಗಿಗಳ ಮತವನ್ನೂ ಪ್ರಪಂಚದಲ್ಲಿಯೇ ವ್ಯವಹಾರಮಾಡುತ್ತಾ ತನ್ನೊಳಗಿರುವ ಈಶ್ವರದೃಷ್ಟಿಯನ್ನು

ಕೈಬಿಡಬೇಕೆಂಬ ವ್ಯಾವಹಾರಿಕ ಕರ್ಮಯೋಗಿಗಳ ಮತವನ್ನೂ ಅವನು ಒಟ್ಟು ಗೂಡಿಸಿ ''ಎರಡೂ ಮಾಡತಕ್ಕವು; ಹೊರಗೂ ಸಾಧನಮಾಡಬೇಕು, ಒಳಗೂ ಪರಮೇಶ್ವರನನ್ನು ಕಂಡುಕೊಳ್ಳಬೇಕು''- ಎಂದು ಬೋಧಿಸುತ್ತಿದ್ದನು.

ಅಧ್ಯಾತ್ಮಾನುಭವಕ್ಕೆ ದೇಶಕಾಲಗಳ ಕಟ್ಟಿಲ್ಲ, ಜಾತಿಕುಲಧನಸಂಪತ್ತಿಗಳ ಅಪೇಕ್ಷೆಯಿಲ್ಲ; ಯಾರು ಯೋಗ್ಯರಾದ ಅಧಿಕಾರಿಗಳೋ ಅವರಲ್ಲಿ ಅದು ಒಡೆದು ಮೂಡುವದು. ಜೇಕಬ್‌ಬೊಎಹ್ಮ್ ಎಂಬ ಜರ್ಮನಿಯ ಯೋಗಿಯ ಜೀವನಚರಿತ್ರೆಯನ್ನು ಹಿಂದೆ ಸಂಗ್ರಹವಾಗಿ ಬರೆದಿದೆಯಷ್ಟೆ. ಆತನ ಅನುಭವೋಕ್ತಿಗಳಲ್ಲಿ ಒಂದೆರಡನ್ನು ಇಲ್ಲಿ ಮೊದಲು ಕೊಡುವೆನು. ಬೊಎಹ್ಮನು ವೃತ್ತಿಯಿಂದ ಚಮ್ಮಾರನಾದರೂ ಚರ್ಮಚಕ್ಷುಸ್ಸಿನಿಂದ ವಿಷಯಗಳನ್ನು ನೋಡುತ್ತಿರಲಿಲ್ಲವೆಂಬುದು ಇದರಿಂದ ವ್ಯಕ್ತವಾಗುತ್ತದೆ.

ಬೊಎಹ್ಮನು ಬರೆದಿರುವ ಗ್ರಂಥಗಳಲ್ಲಿ ''ಮನುಷ್ಯನ ಮೂರು ಬಗೆಯ ಜೀವನ'' (Three-fold Life of Man), ''ಈಶ್ವರತತ್ತ್ವದ ಮೂರು ಲಕ್ಷಣಗಳು'' (Three Principles of the Divine Essence), ''ಜೀವನ ನಲವತ್ತು ಪ್ರಶ್ನೆಗಳಿಗೆ ಉತ್ತರ'' (Answers to the Forty Questions of the Soul), ''ಪರಮರಹಸ್ಯ'' (Mysterious Mangnum)- ಎಂಬಿವು ಮುಖ್ಯವಾಗಿರುತ್ತವೆ.

ಈ ಸಾಧುವಿನ ಮುಖ್ಯವಾದ ಉಪದೇಶಗಳು ಎರಡು; ಈಶ್ವರಸತ್ತೆಯು ಸರ್ವವ್ಯಾಪಕವಾದದ್ದು; ಪರಮೇಶ್ವರನ ಪ್ರೇಮಮಯಸತ್ತೆಯಲ್ಲಿಯೇ ಜೀವನ ವ್ಯವಹಾರವೆಲ್ಲ- ಎಂದರೆ 'ಸುಖದುಃಖ, ಸುಖದುಃಖಗಳಿಗೆ ಕಾರಣವಾದ ಪಾಪಪುಣ್ಯಗಳು, ಜೀವನಿಗಾಗುವ ಪರಮಗತಿ' ಇಷ್ಟೂ- ಅಡಕವಾಗಿರುತ್ತದೆ.

ಮಾನವನು ಈಶ್ವರಪರಾಙ್ಮುಖವಾಗಿರುವದರಿಂದ ಪ್ರಕೃತಿಯಿಂದ ಬದ್ಧನಾಗಿರುತ್ತಾನೆ. ಬದ್ಧಾವಸ್ಥೆಯಲ್ಲಿ ಈಶ್ವರನು ಮೂರು ತತ್ತ್ವಗಳಾಗಿ ಮನುಷ್ಯನಲ್ಲಿಯೂ ಮತ್ತೆಲ್ಲದರಲ್ಲಿಯೂ ವ್ಯಾಪಾರಮಾಡುವ ಶಕ್ತಿವಿಶೇಷವಾಗಿ ತೋರಿಕೊಳ್ಳುತ್ತಾನೆ; ಮೊದಲನೆಯದು ಬಂಧಕ್ಕೆಳೆಯುವ ಜಡಶಕ್ತಿ; ಎರಡನೆಯದು ಬಿಡುಗಡೆಯನ್ನು ಮಾಡುವ ತೇಜೋಮಯವಾದ ಭಾವನಾಶಕ್ತಿ; ಮೂರನೆಯದು ಈ ಎರಡರ ಸಂಘಟನೆಯಿಂದ ಉಂಟಾಗುವ ತೃಪ್ತಿ ಅಥವಾ ಮೋಕ್ಷಶಕ್ತಿ, ಮನುಷ್ಯನು ತನ್ನ ಮನಸ್ಸಿನಿಂದಲೇ ಬದ್ಧನಾಗುತ್ತಾನೆ, ಮನಸ್ಸಿನಿಂದಲೇ ಪರಮಗತಿಯನ್ನು

ಪಡೆಯುತ್ತಾನೆ. ಬೊಎಹ್ಮನ ಈ ಬೋಧೆಯನ್ನು, ಸಾಂಖ್ಯರ ತ್ರಿಗುಣಾತ್ಮಕವಾದ ಪ್ರಕೃತಿಯಿಂದ ಪುರುಷನಿಗಾಗುವ ಬಂಧಮೋಕ್ಷಗಳಿಗೆ ಹೋಲಿಸಿರುತ್ತದೆ.

''ಕ್ರಿಸ್ತಿಯನ್ ಧರ್ಮದ ಸಾರವೆಲ್ಲ ಇಷ್ಟೇ; ನಮ್ಮನ್ನು ನಾವು ಅರಿತುಕೊಳ್ಳಬೇಕು, ಎಂದರೆ ನಾವು ಎಲ್ಲಿಂದ ಬಂದೆವು, ನಾವು ಯಾವ ಸ್ಥಿತಿಯಲ್ಲಿರುವೆವು; ನಾವು ಪರಮೈಕ್ಯವನ್ನು ಬಿಟ್ಟು ಕಲಹ, ದುಷ್ಟತನ, ಅಧರ್ಮಗಳಿಗೆ ಹೇಗೆ ಇಳಿದಿರುತ್ತೇವೆ; ಈ ದೋಷಗಳನ್ನು ಹೇಗೆ ಉದ್ಬೋಧನಗೊಳಿಸಿ ಮೇಲಕ್ಕೆತ್ತಿ ಹಿಡಿದುಕೊಂಡಿರುತ್ತೇವೆ; ಇವುಗಳಿಂದ ಮತ್ತೆ ನಾವು ಹೇಗೆ ಮುಕ್ತರಾಗಿ ಮೊದಲಿನ ಆನಂದವನ್ನು ಪಡೆದುಕೊಳ್ಳಬಹುದು? ಎಂಬುದನ್ನು ಅರಿತುಕೊಳ್ಳವದೇ ಈ ಮತದ ಸಾರವು.''

''ಈಶ್ವರನನ್ನು ತಿಳಿದುಕೊಂಡಮೇಲೂ ಆ ಮಾರ್ಗದಲ್ಲಿ ನಡೆಯದೆ ತಪ್ಪು ಹಾದಿಯನ್ನೇ ಹಿಡಿಯುತ್ತಿದ್ದರೆ ಅಂಥ ತಿಳಿವಳಿಕೆಯಿಂದ ಜೀವನಿಗೇನು ಪ್ರಯೋಜನ? ಕ್ರೈಸ್ತನು ಈಶ್ವರಪುತ್ರನೆಂದೂ ಆತನ ಮನೋಭಾವಗಳು ಮರಣ ಇವುಗಳ ಮೂಲಕ ಆತನ ವಂಶಕ್ಕೆ ಸಂಬಂಧಪಟ್ಟಿರುವದರಿಂದ ನಮಗೂ ಪ್ರಿತ್ರಾರ್ಜಿತವಾದ ದಿವ್ಯಸಂಪತ್ತು ದೊರಕುವದೆಂದೂ ಜೀವನು ಮನಸ್ಸಮಾಧಾನ ಮಾಡಿಕೊಂಡರೇನಾಯಿತು? ನಿಜವಾಗಿಯೂ ಪುತ್ರನಾಗಿ ಹುಟ್ಟಬೇಡವೆ? ಕ್ರೈಸ್ತನ ಆತ್ಮನಿಂದ ಹುಟ್ಟಿದ ಪುತ್ರನಾಗಬೇಡವೆ? ಆತನು ಪಟ್ಟ ಕಷ್ಟಗಳು, ಆತನ ಮರಣ, ಪುನರುಜ್ಜೀವನ- ಇವುಗಳೆಲ್ಲವೂ ನಮ್ಮಲ್ಲಿ ತೋರಬೇಕಲ್ಲವೆ?''

''ಕ್ರೈಸ್ತನು ಭೂಮಿಯಲ್ಲಿ ಸಾವಿರ ಸಲ ಹುಟ್ಟಿದರೂ ಸರಿಯೆ, ಆತನು ನಿನ್ನೊಳಗೆ ಅವತರಿಸದಿದ್ದರೆ ನಿನಗೆ ಸದ್ಗತಿ ದೊರಕಲಾರದು.''

ಮೇಲೆ ಉದಾಹರಿಸಿರುವ ಸೂಕ್ತಿಗಳಿಂದ ಬೊಎಹ್ಮ ಅನುಭವಕ್ಕೆ ಎಂಥ ಹೆಚ್ಚಿನ ಬೆಲೆಯನ್ನು ಕೊಟ್ಟಿದ್ದನೆಂಬುದು ಸ್ಪಷ್ಟವಾಗುತ್ತದೆ. ''ಅತೀಂದ್ರಿಯಾನುಭವ'' (The Super-sensual Life) ಎಂಬ ಚಿಕ್ಕ ಗ್ರಂಥದಿಂದ ಈ ಸಾಧುವಿನ ಅಭಿಪ್ರಾಯವು ಮತ್ತಷ್ಟು ಸ್ಪಷ್ಟವಾಗುವದು –

**ಶಿಷ್ಯನು** ಗುರುವನ್ನು ಕುರಿತು ಕೇಳಿದ್ದು: ''ಪೂಜ್ಯರೆ, ಅತೀಂದ್ರಿಯಸ್ಥಿತಿಯನ್ನು ಪಡೆದುಕೊಳ್ಳುವದು ಹೇಗೆ? ಈಶ್ವರನನ್ನು ಕಂಡು ಆತನ ಮಾತನ್ನು ಕೇಳುವಂತಾಗುವ ಬಗೆ ಹೇಗೆ?

**ಗುರುವಿನ ಉತ್ತರ:** ಮಗನೆ, ಯಾವದರಲ್ಲಿ ಒಬ್ಬ ಜೀವನೂ ಇಲ್ಲವೋ ಅದರೊಳಕ್ಕೆ ಒಂದು ಕ್ಷಣವಾದರೂ ಪ್ರವೇಶಿಸಿದರೆ ಈಶ್ವರನ ಮಾತನ್ನು ಕೇಳಬಹುದು.

**ಶಿಷ್ಯ:-** ಯಾವ ಜೀವನೂ ಇಲ್ಲದ್ದೆಂಬ ಅದು ಹತ್ತಿರದಲ್ಲಿದೆಯೋ, ಬಹು ದೂರವಾಗಿದೆಯೋ?

**ಗುರು:-** ಅದು ನಿನ್ನೊಳಗೇ ಇರುವದು, ಮಗುವೆ, ನಿನ್ನ ಯೋಚನೆಗಳನ್ನೂ ಸಂಕಲ್ಪಗಳನ್ನೂ ಸ್ವಲ್ಪ ಹೊತ್ತಿನವರೆಗಾದರೂ ನಿರೋಧಮಾಡುವದಾದರೆ ಆ ಪರಮೇಶ್ವರನ ಅವರ್ಣನೀಯವಾದ ಮಾತುಗಳು ಕೇಳಿಬರುವವು.

**ಶಿಷ್ಯ:-** ಯಾವ ಯೋಚನೆಯನ್ನೂ ಮಾಡದೆ ಯಾವ ಸಂಕಲ್ಪವನ್ನೂ ಮಾಡದೆ ಇರುವಾಗ ಆತನ ಮಾತುಗಳನ್ನು ನಾನು ಕೇಳುವದು ಹೇಗೆ?

**ಗುರು:-** ನಿನ್ನ ಪರಿಚ್ಛಿನ್ನಾತ್ಮದ ಯೋಚನೆಗಳನ್ನೂ ಸಂಕಲ್ಪವನ್ನೂ ಬಿಟ್ಟು ನಿಷ್ಕಂಪನಾಗಿ ನಿಂತುಬಿಟ್ಟರೆ, ನಿನ್ನ ಮನಸ್ಸೂ ಬುದ್ಧಿಯೂ ಸುಮ್ಮನಾಗಿ ನಿತ್ಯಾವಾದ ಶಬ್ದವೂ ಆತ್ಮನೂ ವಿಕಾಸವಾಗುವಂತೆ ಸಜ್ಜಾದರೆ, ನಿನ್ನ ಅಹಂತೆಯು ಮೇಲಕ್ಕೆ ಹಾರಿ ಈ ಅನಿತ್ಯವಾದ್ದನ್ನೆಲ್ಲ ಮೀರಿ ಹೊರಗಿನ ಇಂದ್ರಿಯಗಳೂ ಮನಃಕಲ್ಪನೆಯೂ ಪವಿತ್ರತಮವಾದ ಧ್ಯಾನದಿಂದ ಬಾಧಿತವಾಗಿಬಿಟ್ಟರೆ, ಆಗ ನಿತ್ಯಾಶ್ರಮವೂ ನಿತ್ಯವಚನವೂ ನಿನ್ನಲ್ಲಿ ತೋರಿಕೊಳ್ಳುವವು, ಆಗ ಈಶ್ವರನು ನಿನ್ನ ಮೂಲಕ ಕೇಳುವನು, ನೋಡುವನು. ಆಗ ಆತನ ಚೈತನ್ಯಕ್ಕೆ ನೀನು ಕರಣವಾಗುವದರಿಂದ ಈಶ್ವರನು ನಿನ್ನಲ್ಲಿ ಮಾತನಾಡುವನು, ನಿನ್ನ ಚೈತನ್ಯಕ್ಕೆ ಪಿಸುಮಾತಿನಲ್ಲಿ ಹೇಳುವನು; ಆಗ ನಿನಗೆ ಆತನ ಧ್ವನಿಯು ಕೇಳಿಸುವದು. ಆದ್ದರಿಂದ ವ್ಯಕ್ತಿಗತವಾದ ನಿನ್ನ ಯೋಚನೆಯನ್ನೂ ಸಂಕಲ್ಪವನ್ನೂ ಬಿಟ್ಟರೆ, ನಿನ್ನ ಇಂದ್ರಿಯ ವ್ಯಾಪಾರಗಳನ್ನೂ ಮನೋವಿಕಲ್ಪವನ್ನೂ ನಿಲ್ಲಿಸಿಬಿಟ್ಟರೆ ನೀನೇ ಧನ್ಯನು; ಏಕೆಂದರೆ ಅದರಿಂದ ದಿವ್ಯತರವಾದ ಅನುಭವಗಳೂ ದಿವ್ಯಭಾವನೆಗಳೂ ದೊರಕಿ ಪರಮೇಶ್ವರನ ಮುಕ್ತಿಯೆಂದರೇನೆಂಬುದನ್ನು ಕಂಡುಕೊಳ್ಳುವೆ. ನಿನ್ನ ಸಂಕಲ್ಪ, ನಿನ್ನ ಶ್ರವಣ- ಇವೇ ಈಶ್ವರನನ್ನು ನೋಡದಂತೆ ಅಡ್ಡಿಯಾಗಿವೆಯೇ ಹೊರತು ಮತ್ತೆ ಬೇರೆಯಿಲ್ಲ.

**ಶಿಷ್ಯ:-** ಈಶ್ವರನು ಪ್ರಕೃತಿತತ್ತ್ವ ಜೀವತತ್ತ್ವ (Nature and Creature)

ಎರಡನ್ನೂ ಮೀರಿರುವದರಿಂದ ನಾನು ಆತನ ಮಾತನ್ನು ಏತರಿಂದ ಕೇಳಬೇಕು?

**ಗುರು:-** ಮಗುವೆ, ನೀನು ನಿರ್ವ್ಯಾಪಾರನಾಗಿ ಸುಮ್ಮನಿದ್ದರೆ ಜೀವ ಪ್ರಕೃತಿಗಳೆರಡಕ್ಕೂ ಮುಂಚೆ ಈಶ್ವರನು ಹೇಗಿದ್ದನೋ ಆ ಸ್ಥಿತಿಯನ್ನೇ ಹೊಂದಿರುವೆ, ಆಗ ಈಶ್ವರನು ಏನಾಗಿದ್ದನೋ ಅದೇ ಆಗಿರುವೆ, ಅಂದರೆ ಯಾವದರಿಂದ ನಿನ್ನ ಜೀವತತ್ತ್ವವನ್ನೂ ಪ್ರಕೃತಿತತ್ತ್ವವನ್ನೂ ಆತನು ಮಾಡಿದನೋ ಅದೇ ಆಗಿರುವೆ. ನಿನ್ನ ಸಂಕಲ್ಪವೂ ನಿನ್ನ ದರ್ಶನವೂ ಸೃಷ್ಟಿಯಾಗುವ ಮೊದಲು ನಿನ್ನೊಳಗೆ ಈಶ್ವರನು ಏತರಿಂದ ಕೇಳುತ್ತಿದ್ದನೋ ಅದರಿಂದಲೇ ಕೇಳುವೆ ಅದರಿಂದಲೇ ನೋಡುವೆ.''

ಬೋಎಹ್ಮನು ನಿರ್ವಿಕಲ್ಪಸಮಾಧಿಯನ್ನೇ ಮೇಲೆ ವರ್ಣಿಸಿದ್ದಾನೆಂಬುದಕ್ಕೆ ಸಂಶಯವಿಲ್ಲ. ಪರಮೇಶ್ವರಾರ್ಪಣಬುದ್ಧಿಯಿಂದ ಕ್ರಿಯಾಯೋಗವನ್ನು ಮಾಡುತ್ತಿದ್ದರೆ ಈಶ್ವರಾನುಗ್ರಹದಿಂದ ಇಂಥ ಸ್ಥಿತಿಯನ್ನು ಪಡೆದವರು ಪರಮಾರ್ಥವನ್ನೂ ವ್ಯವಹಾರವನ್ನೂ ಪರಸ್ಪರವಿರೋಧವಿಲ್ಲದಂತೆ ಸಾಗಿಸುತ್ತಾ 'ನಿತ್ಯದೃಷ್ಟಿ', 'ಅನಿತ್ಯದೃಷ್ಟಿ'- ಎರಡನ್ನೂ ಏಕಕಾಲದಲ್ಲಿ ತೆಗೆದುಕೊಂಡಿರುತ್ತಾರೆ ಎಂದು ಆತನು ಹೇಳುತ್ತಾನೆ.

★★★★★

# ಎಲ್ಲಿ ಬಿತ್ತಿದ ಬೀಜವು ಸಾರ್ಥಕವಾಗುವದು?

## (ಬೈಬಲ್, ಸೇಂಟ್ ಲ್ಯೂಕ್)

''ಒಬ್ಬ ಬೀಜಬಿತ್ತುವಾತನು ತನ್ನಲ್ಲಿದ್ದ ಬೀಜವನ್ನು ಬಿತ್ತುವದಕ್ಕೆಂದು ಹೋಗಿ ಬಿತ್ತುತ್ತಿರುವಲ್ಲಿ ಕೆಲವು ದಾರಿಯಲ್ಲಿ ಬಿದ್ದು ಹೋದವು. ಅವನ್ನು ಜನರು ತುಳಿದುಹಾಕಿದರು; ಆಕಾಶದಲ್ಲಿ ಹಾರಾಡುವ ಹಕ್ಕಿಗಳು ಕೆಲವನ್ನು ತಿಂದುಬಿಟ್ಟವು; ಸ್ವಲ್ಪಭಾಗವು ಒಂದು ಬಂಡೆಯಮೇಲೆ ಬಿದ್ದಿತು; ಅದು ಮೊಳೆತುಕೊಂಡಕೂಡಲೆ ಬತ್ತಿಹೋಯಿತು, ಏಕೆಂದರೆ ಅದಕ್ಕೆ ತೇವ ಸಿಕ್ಕಲಿಲ್ಲ. ಇನ್ನುಸ್ವಲ್ಪ ಭಾಗವು ಮುಳ್ಳುಗಿಡಗಳ ನಡುವೆ ಬಿದ್ದಿತು; ಅದರೊಡನೆ ಮುಳ್ಳುಗಿಡಗಳೂ ಬೆಳೆದುಕೊಂಡು ಅದನ್ನು ಬೆಳೆಯದಂತೆ ಮುತ್ತಿಕೊಂಡುಬಿಟ್ಟವು. ಇನ್ನು ಉಳಿದ ಭಾಗವು ಒಳ್ಳೆಯ

ನೆಲದಮೇಲೆ ಬಿದ್ದಿನು. ಅದು ಬೆಳೆದುಕೊಂಡು ಒಂದಕ್ಕೆ ನೂರರಷ್ಟು ಫಲವನ್ನು ಕೊಟ್ಟಿತು.''

ಇಷ್ಟನ್ನು ಹೇಳಿದ ಬಳಿಕ ಯೇಸುಕ್ರಿಸ್ತನು ''ಕಿವಿಯಿದ್ದವರು ಇದನ್ನು ಕೇಳಲಿ''- ಎಂದನು. ಆಗ ಶಿಷ್ಯರು ಈ ದೃಷ್ಟಾಂತದ ಸಾರವೇನೊ!- ಎಂದು ಕೇಳಿದರು. ಅವನು ಇಂತೆಂದನು; ''ಈಶ್ವರತತ್ತ್ವದ ರಹಸ್ಯವು ನಿಮಗೆ ಮಾತ್ರ ತಿಳಿದೀತು; ಮಿಕ್ಕವರಿಗೆ ಬರಿಯ ದೃಷ್ಟಾಂತದಕಥೆಗಳು ಮಾತ್ರ ಸಿಕ್ಕುವವು; ಅವರಿಗೆ ನೋಡಿದರೂ ಕಾಣಿಸುವದಿಲ್ಲ, ಕೇಳಿದಮೇಲೂ ತಿಳಿಯಲಾರದು. ಈ ಕಥೆಯ ಸಾರವಿಷ್ಟು; ಈ ಜೀಜವೆಂದರೆ ಈಶ್ವರನ ವಚನವು. ದಾರಿಯಲ್ಲಿರುವವರು ಯಾರಂದರೆ ಕಲ್ಮಷಚಿತ್ತರಾಗಿ ಶ್ರವಣಮಾಡುವವರು. ಶ್ರವಣಮಾಡಿದಮೇಲೂ ಪಾಪ ಪುರುಷನು ಅವರ ಹೃದಯದಿಂದ ಆ ವಚನವನ್ನು ಅಪಹರಿಸಿಬಿಡುತ್ತಾನೆ; ಅವರಿಗೆ ಶ್ರದ್ಧೆಯುಂಟಾಗಿ ಮುಕ್ತರಾಗದಂತೆ ಮಾಡುತ್ತಾನೆ. ಇನ್ನು ಮುಳ್ಳುಗಿಡದಂತಿರುವವರು ಯಾರೆಂದರೆ ಶ್ರವಣಮಾಡಿದಮೇಲೂ ಸಂಸಾರದ ಯೋಚನೆಗಳು ಸಿರಿಸಂಪತ್ತುಗಳು, ವಿಷಯಭೋಗಗಳು – ಇವುಗಳ ಸುತ್ತುಗಟ್ಟಿನೆಲ್ಲಿ ಸಿಕ್ಕಿಕೊಂಡು ನರಳುವವರು. ಅವರಲ್ಲಿ ಉಪದೇಶವಚನವು ಫಲಿಸಲಾರದು. ಆದರೆ ಬೀಜದ ಕೆಲವು ಭಾಗವು ಬಿತ್ತಿದ ಸರಿಯಾದ ನೆಲದಂತಿರುವವರು ಯಾರೆಂದರೆ; ಯಾರು ಶ್ರದ್ಧಾಭಕ್ತಿಗಳಿಂದ ಅದನ್ನು ಶ್ರವಣಮಾಡಿ ತಮ್ಮಲ್ಲಿ ರಕ್ಷಣೆಮಾಡಿಕೊಂಡು ತಾಳ್ಮೆಯಿಂದ ಅದನ್ನು ಸಫಲಗೊಳಿಸಿಕೊಳ್ಳುತ್ತಾರೋ ಅವರು.

''ಹೀಗಿರುವದರಿಂದ ಶ್ರವಣಮಾಡುವ ಪ್ರಕಾರದಲ್ಲಿ ಎಚ್ಚರಿಕೆಯುಳ್ಳವರಾಗಿರಬೇಕು. ಯಾವನಲ್ಲಿ ಶ್ರದ್ಧಾದಿಸಾಮಗ್ರಿ ಇರುವದೋ ಅವನಿಗೇ ಇದು ಲಭಿಸುವದು; ಆದರೆ ಯಾವನಲ್ಲಿ ಅದು ಇರುವದಿಲ್ಲವೋ ಅವನಲ್ಲಿರುವಂತೆ ತೋರುವಷ್ಟನ್ನೂ ಅವನು ಕಳೆದುಕೊಳ್ಳುವನು.''

(ಮೇಲಿನ ಉಪದೇಶವು ಕಠೋಪನಿಷತ್ತಿನ ವಚನವನ್ನು ನೆನಪಿಗೆ ತರುವಂತಿದೆ.)

''ಅವಿವೇಕಿಯಾದವನಿಗೆ ಪರಗತಿಗೆ ಬೇಕಾದ ಸಾಧನವು ತೋಚುವದಿಲ್ಲ. ಅವನು ಎಚ್ಚರಿಕೆತಪ್ಪಿರುತ್ತಾನೆ, ವಿತ್ತದ ಮೋಹದಿಂದ ದಿಕ್ಕುಗಾಣದೆ ಇರುತ್ತಾನೆ, ಈ ಲೋಕವೇ ಲೋಕ, ಪರಲೋಕವೆಂಬುದಿಲ್ಲ' ಎಂದುಕೊಂಡು ಮತ್ತೆಮತ್ತೆ ಮೃತ್ಯುವಿನ ವಶನಾಗುತ್ತಿರುವನು.

''ಬಹುಜನರಿಗೆ ಆ ಪರಮಾತ್ಮನ ಶ್ರವಣವೂ ಲಭಿಸುವದಿಲ್ಲ; ಎಷ್ಟೋ ಜನರಿಗೆ ಶ್ರವಣಮಾಡಿದಮೇಲೂ ಅದು ಅರ್ಥವಾಗುವದಿಲ್ಲ. ಅದನ್ನು ತಿಳಿಸಿಕೊಡುವಾತನು ಆಶ್ಚರ್ಯರೂಪನಾಗಿರುತ್ತಾನೆ, ಅದನ್ನು ಕೇಳಿ ಅರ್ಥಜ್ಞಾನವನ್ನು ಸಂಪಾದಿಸಿಕೊಳ್ಳುವವನು ಜಾಣನು; ಜಾಣನಾದ ಆಚಾರ್ಯನಿಂದ ಉಪದೇಶವನ್ನು ಪಡೆದುಕೊಂಡು ಅರಿತುಕೊಳ್ಳುವಾತನು ಆಶ್ಚರ್ಯರೂಪನೇ ಆಗಿರುತ್ತಾನೆ'' ಕಾ.1-2-7.)

★★★★★

# ಏಷಿಯದ ಯುವಕರಿಗೆ

## (ಬಿಷಪ್ ಫ್ರೀಡರಿಕ್ ಬಿ. ಫಿಸರ್‌ರವರು ಕೊಟ್ಟಿರುವ ಸಂದೇಶದ ಭಾಗ)

ಯಾವ ಕುಲದವರೇ ಆಗಲಿ ಮತ್ತೊಂದು ಕುಲದವರ ಬಳಿಗೆ 'ಸತ್ಯವನ್ನೆಲ್ಲ ನಾವೇ ಕಂಡುಕೊಂಡುಬಂದಿದ್ದೇವೆ. ನಮಗೆ ನಿಮ್ಮಿಂದ ತಿಳಿಯಬೇಕಾದದ್ದು ಏನೇನೂ ಇರುವದಿಲ್ಲ' ಎನ್ನುವಂತಿಲ್ಲ; ನಮ್ಮ ಅಧ್ಯಾತ್ಮಿಕಾನುಭವಗಳನ್ನು ಮತ್ತೊಬ್ಬರಿಗೆ ತಿಳಿಯಪಡಿಸಬೇಕೆಂಬ ಕುತೂಹಲವೇ ಎಲ್ಲರಲ್ಲಿಯೂ ಒಂದಾನೊಂದು ವ್ಯಾಪಕಧರ್ಮ ಅಂಶವಿರುವದೆಂದು ಮನಗಾಣಿಸುತ್ತಿರುವದು.

ಪೂರ್ವದೇಶದಲ್ಲಿಯೇ ಆಗಲಿ ಪಶ್ಚಿಮದೇಶದಲ್ಲಿಯೇ ಆಗಲಿ, ನಮ್ಮ ಪೂರ್ವಿಕರು ಕಷ್ಟ ಸುಖ, ಜಯ ಅಪಜಯ - ಇವುಗಳಿಂದ ಕೆಲವು ಸಂಸ್ಕೃತಿವಿಶೇಷಗಳನ್ನೂ ನೀತಿನಿಯಮಗಳನ್ನೂ ಕಂಡುಕೊಂಡು ಅವುಗಳಿಂದ ಮಾನವಜನಾಂಗವಾಗುವ ಉನ್ನತಿಯನ್ನು ಪಡೆದರು. ಆದರೆ ವೇಗವಾದ ರೈಲು, ಹಡಗು, ವಾಯುವಿಮಾನಗಳಿಂದ ಸಂಚರಿಸುತ್ತಿರುವ ಈ ನಮ್ಮ ಪ್ರಪಂಚದಲ್ಲಿ, ಟೆಲಿಫೋನು ರೇಡಿಯೋಗಳ ಮೂಲಕ ಶ್ರವಣಮಾಡುತ್ತಿರುವ ಈ ನಮ್ಮ ಪ್ರಪಂಚದಲ್ಲಿ, ಅಗಣಿತವಾದ ಗ್ರಂಥಗಳ ನಿಯತಕಾಲಿಕಪತ್ರಗಳ ಮೂಲಕ ಪಠನಮಾಡುತ್ತಿರುವ ಈ ನಮ್ಮ ಪ್ರಪಂಚದಲ್ಲಿ, ಆ ಖಂಡಾತ್ಮಕ ಕುಲಸಂಸ್ಕೃತಿಗಳು ತಮ್ಮ ಅಪೂರ್ಣತೆಯನ್ನು ತೋರ್ಪಡಿಸಿಕೊಳ್ಳುತ್ತಿರುವವು. ಅವುಗಳೆಲ್ಲ ಬೇರೆ

ತೆರದ ಜನರ ಅಂತಃಕರಣದೊಳಗೆ ನುಗ್ಗಿ ಆ ಸಂಸರ್ಗದಿಂದ ಕೆಲವು ವೇಳೆ ಮಾರ್ಪಾಡುಗಳನ್ನು ಹೊಂದಿರುತ್ತವೆ. ಈ ಲೋಕದಲ್ಲಿರುವ ಪ್ರತಿಯೊಬ್ಬ ಜೀವನೂ ಈಗ ಸ್ವಲ್ಪಮಟ್ಟಿಗೆ ಮಿಕ್ಕವರನ್ನೆಲ್ಲ ವ್ಯಾಪಿಸಿರುತ್ತಾನೆ. ಅವರಿಂದ ತಾನೂ ವಿಕೃತಿಯನ್ನು ಹೊಂದಿರುತ್ತಾನೆ. ಹೀಗೆ ಬೇರೆಬೇರೆಯ ಭೂಮಿಕೆಯಲ್ಲಿರುವ ಜನಾಂಗಗಳ ಸಂಸರ್ಗದ ಪೈಪೋಟಿಯಲ್ಲಿ ಭೂಭಾಗಪರಿಚ್ಛೇದ, ಕುಲಪರಿಚ್ಛೇದ, ಧರ್ಮ ಪರಿಚ್ಛೇದಗಳಿಂದೊಡಗೂಡಿದ್ದ ನಮ್ಮ ಹಳೆಯ ಶಾಸ್ತ್ರಗಳು ನಮಗೆ ಸಾಕಾದಷ್ಟು ಅವಲಂಬನವಾಗಲಾರದೆ ಇವೆ. ಈಗ ಸಾವಿರಾರುಗಟ್ಟೆಲೆಯ ಜನರು ಸಂಶಯ ಸಾಗರದ ಮೇಲೆ ಅತ್ತಿತ್ತ ಹೊಡೆದಾಡುವ ಅಲೆಗಳಿಗೆ ಸಿಕ್ಕುಬಿದ್ದಿರುತ್ತಾರೆ. ನಮ್ಮ ಪೂರ್ವಿಕರಿಗೆ ಝಗಝಗಿಸುವವೆಂದು ತೋರುತ್ತಿದ್ದ ಮಾರ್ಗಪ್ರದೀಪಗಳು ಈಗ ಕಾವಳಮುಚ್ಚಿ ಮಂಕಾಗಿರುತ್ತವೆ. ಧ್ರುವತಾರೆಗಳೆನಿಸಿದ್ದ ನಕ್ಷತ್ರಗಳು ಕೂಡ ತಮ್ಮ ತಮ್ಮ ಸ್ಥಾನಗಳಿಂದ ಚಲಿಸುತ್ತಿರುವಂತೆ ಕಾಣುತ್ತಿವೆ. ಈ ಗಡಿಬಿಡಿಯಲ್ಲಿ ಹಿಂದಿನ ನಕ್ಷೆಗಳು ನಮಗೆ ಉಪಯೋಗವಿಲ್ಲವೆಂದು ಕೆಲವು ವೇಳೆ ನಾವು ಅವುಗಳನ್ನು ಸಮುದ್ರಕ್ಕೆ ಹಾಕಿಬಿಡುವೆವು. ಆದರೆ ಅವಕ್ಕೆ ಬದಲು ಬೇರೊಂದು ನಕ್ಷೆಯೇ ಕಂಡುಬರುವದಿಲ್ಲ. ಹೀಗೆ ಸ್ವಲ್ಪವೂ ದಿಕ್ಕುತೋಚದೆ ಎಷ್ಟೋ ಸಂದರ್ಭಗಳಲ್ಲಿ ನಮ್ಮ ವ್ಯಕ್ತಿತ್ವವೇ ತುಂಡುತುಂಡಾಗಿ ಹೋಗಿಬಿಡುವಂತಾಗಿದೆ.

ಹೀಗಿದ್ದರೂ ನಮಗೆ ಇಷ್ಟೆಲ್ಲ ಮೊಗಸುತ್ತಾಗಿದ್ದರೂ, ಎಲ್ಲಿಯೋ ಒಂದು ಕಡೆ ಧ್ರುವನಕ್ಷತ್ರವೊಂದು ಥಳಗುಟ್ಟುತ್ತಲೇ ಇರಬೇಕೆಂದು ನಮಗೆ ಅನ್ನಿಸುತ್ತದೆ. ಅದು ಸಿಕ್ಕಿದರೆ ವಿಶ್ವವ್ಯಾಪಕ ಸತ್ಯದ ಜ್ಯೋತಿಯನ್ನು ನಿಜವಾಗಿ ಕಂಡಂತಾಗುವದು, ಆಗ ನಮ್ಮ ಮಾರ್ಗವು ಯಾವದೆಂಬುದನ್ನು ಜಾಣತನದಿಂದ ಆರಿಸಿ ಕೊಳ್ಳಲೂಬಹುದಾಗುವದು.

ಸತ್ಯವೆಂಬ ಬೆಳಕು ನಮ್ಮ ಕುಲಸ್ವಭಾವ ಮತ್ತು ಅನುಭವವಿಶೇಷಗಳೆಂಬ ಲೋಳಕಗಳಿಂದ ಬಗೆಬಗೆಯ ಬಣ್ಣವಾಗಿ ಒಡೆದುಕೊಂಡಿರುವದು. ಈ ಬೇರೆ ಬೇರೆ ಬಣ್ಣಗಳಿಗೆ ಆಧಾರವಾಗಿರುವ ಸಾರವನ್ನು ಗೊತ್ತುಪಡಿಸಿಕೊಂಡರೆ ನಮ್ಮ ನಮ್ಮ ಜನಾಂಗಗಳು ಎಲ್ಲಿಗೆ ಮುಟ್ಟುವವೆಂಬ ಬಗ್ಗೆ ನಮಗೆ ಮತ್ತಷ್ಟು ಧೈರ್ಯವುಂಟಾದೀತು, ಜನಾಂಗಗಳ ಪರಸ್ಪರಸಂಸರ್ಗ ವ್ಯವಹಾರದಲ್ಲಿರಬೇಕಾದ ಮೈತ್ರಿಯನ್ನು ಮತ್ತಷ್ಟು ಹೆಚ್ಚಿಸೀತು.

ಭೌತಿಕವಿಜ್ಞಾನ ಮತ್ತು ವಿದ್ಯಾಭ್ಯಾಸ – ಈ ಕ್ಷೇತ್ರಗಳಲ್ಲಿ ಲೋಕವೆಲ್ಲ ಒಂದೇ ಎಂಬುದು ಸ್ಪಷ್ಟವಾಗುತ್ತಿದೆ. ಪೂರ್ವದೇಶದಲ್ಲಿಯಾಗಲಿ ಪಶ್ಚಿಮದೇಶದಲ್ಲಿಯಾಗಲಿ ಸಕಲವಿದ್ಯಾನಿಲಯಗಳ ಪಾಠಕ್ರಮವು ಸ್ವಲ್ಪ ಹೆಚ್ಚುಕಡಿಮೆ ಒಂದೇ ಆಗಿರುತ್ತದೆ. ಇದರಿಂದ ವಿಚಾರದಲ್ಲಿಯೂ ಆಚಾರದಲ್ಲಿಯೂ ಪರಸ್ಪರ ಸಹಾಯವುಂಟಾಗಲೇ ಬೇಕು.

ಸ್ಥಿತ್ಯಂತರಪ್ರಾಪ್ತಿಯ ಈ ಯುಗದಲ್ಲಿ ಪೂರ್ವದೇಶದವರಾದ ನಿಮಗೆ ಪಶ್ಚಿಮದೇಶದ ಯುವಕರಿಗಿಂತ ಒಂದು ಹೆಚ್ಚಿನ ಅನುಕೂಲ್ಯವಿರುವದು. ಅದೇನೆಂದರೆ, ಸಾವಿರಾರು ವರ್ಷಗಳಿಂದಲೂ ನೆಲೆಸಿರುವ ತತ್ತ್ವಗಳು ನಿಮ್ಮ ಪಾಲಿಗೆ ಬಂದಿವೆ; ನಿಮ್ಮ ಸನ್ನಿವೇಶಗಳಲ್ಲಿ ಸರ್ವಸಮ್ಮತವೆನಿಸಿರುವ ನೀತಿನಿಯಮಗಳಿರುತ್ತವೆ; ಇಷ್ಟೊಂದು ವಿಪರಿಣಾಮವಾಗುತ್ತಿರುವ ಲೋಕವು ಕೂಡ ಗೌರವಕೊಡುವಷ್ಟು ಪ್ರಾಚೀನತರವಾದ ವಾಙ್ಮಯವಿದೆ; ಇವೆಲ್ಲದರ ಜೊತೆಗೆ ಎಷ್ಟೋ ದೀರ್ಘಕಾಲದಿಂದ ತಾಪತ್ರಯಗಳನ್ನು ತಾಳ್ಮೆಯಿಂದ ಸಹಿಸಿಕೊಂಡು ಬಂದಿರುವದರಿಂದುಂಟಾಗಿರುವ ಸಮತಾಬುದ್ಧಿಯೂ ಇದೆ. ಈ ನಿಧಿಗಳು ನಷ್ಟವಾಗಬಾರದು. ಒಂದೊಂದು ಕುಲದವರೂ ಹೊತ್ತಿಸಿರುವ ಸತ್ಯದೀಪಿಕೆಯು ದೀಪಿಕಾಂತರಗಳ ಕಿರಣಗಳೊಂದಿಗೆ ಸೇರಿ ಉಜ್ಜ್ವಲವಾಗಬೇಕೇ ಹೊರತು ಆರಿಹೋಗಬಾರದು. ಅಸಂಖ್ಯಾತವಾದ ತಲಾಂತರಗಳಿಂದ ಏಷಿಯಾಖಂಡದಲ್ಲಿ ಅಭಿವೃದ್ಧಿಯಾಗುತ್ತಾ ಬಂದಿರುವ (1) ಅಧ್ಯಾತ್ಮಿಕಸಮತೆ, (2) ಯೋಗ, (3) ಅನಹಂಕಾರ (4) ತನ್ನ ವ್ಯಕ್ತಿತ್ವವನ್ನು ಕುಟುಂಬದಲ್ಲಿಯಾಗಲಿ ಸಾಮಾಜಿಕಭಾಗದಲ್ಲಿಯಾಗಲಿ ಬೆರೆಸಿಬಿಡುವ ವ್ಯಾವಹಾರಿಕಯೋಗ್ಯತೆ – ಎಂಬ ಸಂಸ್ಕೃತಿಯ ಸದ್ಗುಣಗಳು ಪಶ್ಚಿಮದೇಶಕ್ಕೆ ಬೇಕಾಗಿರುತ್ತವೆ.

ಇಂಡಿಯದಲ್ಲಿ ಮಹಾತ್ಮ ಗಾಂಧಿ, ಜಪಾನಿನಲ್ಲಿ ತೋಯೋಹಿಕೊ ಕಾಗವ, ಆಫ್ರಿಕದವರಲ್ಲಿ ಮ್ಯಾಕ್ಸಯೇರ್ಗನ್– ಹೀಗೆ ಬೇರೆಬೇರೆ ಮತದವರು ಅನುಷ್ಠಾನದಲ್ಲಿ ತೋರಿಸಿರುವ ಜೀವನಕ್ರಮವನ್ನು ನೋಡಿದರೆ, ಈ ವಿಶ್ವವ್ಯಾಪಕಧರ್ಮವೆಂಬ ಧ್ಯೇಯವು ಬೆಟ್ಟದ ತಪ್ಪಲಿನಲ್ಲಿ ಕ್ರೈಸ್ತನು ಮಾಡಿದ ಉಪದೇಶದ ಆಧಾರದಿಂದ ಒಂದಾನೊಂದು ನವೀನಸಾಮಾಜಿಕಕ್ರಮವು ಏರ್ಪಡಬಹುದೆಂದು ನಿರ್ಣಯವಾಗುತ್ತದೆ. ಈ ಅಮೃತಸ್ವರೂಪವಾದ ಉಪದೇಶದಲ್ಲಿ ಯಹೂದ್ಯರ ಮತ, ಬೌದ್ಧರ ಮತ, ಹಿಂದುಗಳ ಮತ –

ಮುಂತಾದ ಸುತ್ತಮುತ್ತಲಿನ ಪೂರ್ವದೇಶದ ಮತಗಳ ಪ್ರಭಾವವು ಸೇರಿತ್ತೆ ಎಂಬುದನ್ನೂ ನಾವು ನೆನಪಿನಲ್ಲಿಡುವದು ಒಳ್ಳೆಯದು. ಈ ಹೊಸ ಸಮಾಜ ಕ್ರಮವೆಂದು ನಾವು ಇಟ್ಟುಕೊಂಡಿರುವ ಸವಿಗನಸಿನಲ್ಲಿ ಪ್ರಾಚೀನಋಷಿಗಳ ಪುರುಷಾರ್ಥ, ಈಗಿನ ಆರೋಗ್ಯಕರವಿಚಾರದ ಪ್ರಕ್ರಿಯೆ, ವೈಜ್ಞಾನಿಕಸಾಮಾಜದ ಪರಸ್ಪರಸಹಾಯ ಪದ್ಧತಿ - ಇವುಗಳೆಲ್ಲವೂ ಸೇರಿರುವವು. ಭೂಲೋಕವೇ ಒಂದೆಂಬ ಭಾವನೆಯು ಬಲವಾಗಿರುವ ಈ ಕಾಲದಲ್ಲಿ ಮತ್ತೊಬ್ಬರನ್ನು ನಮ್ಮ ಮತಕ್ಕೆ ದೀಕ್ಷೆ ಕೊಟ್ಟು ತಿರುಗಿಸಿಕೊಳ್ಳಬೇಕೆಂಬ ದಂಡಯಾತ್ರೆಗಳು ಯಾವವೂ ಶಾಶ್ವತಫಲದಾಯಕಗಳಾಗಲಾರವು. ಪ್ರತಿಯೊಂದು ಕುಲದವರಲ್ಲಿ ಕಂಡುಬಂದಿರುವ ತತ್ತ್ವವಿಚಾರ, ಕಲೆ, ಮತಾಚಾರ, ನಾಗರಿಕತೆ- ಇವುಗಳೆಲ್ಲ ದಿವ್ಯವಾದ ರಸಾಯನದ್ರವ್ಯಗಳಂತೆ ಒಂದುಗುಡಿ ಈ ಹೊಸ ಮಾದರಿಯ ಜೀವನಕ್ರಮವೂ ಅಭಿವೃದ್ಧಿಯೂ ಧರ್ಮವೂ ಏರ್ಪಡಬೇಕಾಗಿದೆ. ಇವುಗಳೆಲ್ಲ ಒಂದಕ್ಕೊಂದು ಬರಿಯ ಸಮ್ಮಿಶ್ರಣವಾಗಬೇಕೆಂದಲ್ಲಿ ಭಾವಾತ್ಮಕ, ಬುದ್ಧ್ಯಾತ್ಮಕ, ಅನುಭವಗಳೆಲ್ಲವೂ ಸಮರಸವಾಗಿ ಸೇರಿದ ಒಂದು ಹೊಸ ಎರಕವು ಏರ್ಪಡಬೇಕಾಗಿ ರುತ್ತದೆ.

★★★★★

# ಹೆನ್ರಿ ಬರ್ಗ್ಸನ್ನರವರ ಸಿದ್ಧಾಂತ

(ಲೋಕವಿಖ್ಯಾತರಾದ ತತ್ತ್ವಶಾಸ್ತ್ರಜ್ಞ ಡಾ|| ಹೆನ್ರಿ ಬರ್ಗ್ಸನ್ನರವರು ತಮ್ಮ 82ನೆಯ ವಯಸ್ಸಿನಲ್ಲಿ ಕೀರ್ತಿಶೇಷರಾದರೆಂದು ವೃತ್ತಪತ್ರಿಕೆಗಳಿಂದ ತಿಳಿದ ತತ್ತ್ವಜಿಜ್ಞಾಸುಗಳಿಗೆಲ್ಲ ಅತ್ಯಂತ ಶೋಕವುಂಟಾಗಿರುತ್ತದೆ. ತತ್ತ್ವಚಿಂತಕರ ಸನ್ನಿಧಿಯಿಂದ ಇಡಿಯ ಜಗತ್ತಿಗೇ ಮಂಗಳವುಂಟಾಗುತ್ತದೆ. ಆದ್ದರಿಂದ ಅವರನ್ನು ಕಳೆದುಕೊಂಡಿದ್ದರಿಂದ ಇಡಿಯ ಭೂಮಂಡಲಕ್ಕೇ ನಿಜವಾಗಿಯೂ ಅಪಾರವಾದ ನಷ್ಟವಾಗಿರುತ್ತದೆ. ನಾಜಿಗಳ ಆಕ್ರಮಣದಿಂದ ಫ್ರಾನ್ಸ್ ರಾಜ್ಯವು ತನ್ನ ಉನ್ನತವಾದ ಸ್ಥಾನವನ್ನು ಕಳೆದುಕೊಂಡದ್ದೂ ಆದರ ವ್ಯಕ್ತಿತ್ವವು ಉಳಿಯುವದೊ ಅಳಿದು ಹೋಗುವದೊ - ಎಂಬ ಅಂಜಿಕೆಗೆ ಎಡೆಯಿತ್ತಿರುವದೂ ಅಷ್ಟು ಶೋಚನೀಯವಲ್ಲ. ಆ ರಾಷ್ಟ್ರಕ್ಕೆ ಸರ್ವಕಾಲದಲ್ಲಿಯೂ ಸರ್ವರಿಂದಲೂ ಕೀರ್ತಿಯನ್ನುಗಳಿಸಿಕೊಟ್ಟಿರುವ ಬರ್ಗ್ಸನರಂಥ ಜೀವರತ್ನದ ಬೆಳಕು ಮಾಯವಾಯಿತಲ್ಲ! ಎಂಬುದು ಅದಕ್ಕಿಂತ ನೂರುಮಡಿಯಾಗಿ ಶೋಚನೀಯವಾಗಿರುತ್ತದೆ. ಬರ್ಗ್ಸನ್ನರವರ ಜೀವನಚರಿತ್ರೆಗಿಂತ ಅವರ ವಿಚಾರಸರಣಿಯ ಮಹತ್ತ್ವವು ಮುಖ್ಯವಾಗಿರುವದರಿಂದಲೂ ನಿಜವಾಗಿ ಮನುಷ್ಯನ ಮನಸ್ಸಿನ ಇತಿಹಾಸವೇ ಅವನ ಜೀವನದ ಇತಿಹಾಸವಾಗಿರುವದರಿಂದಲೂ ಆ ಮಹಾಮಹಿಮನ ಸಿದ್ಧಾಂತದ ಕೆಲವು

ಪ್ರಧಾನೋಪದೇಶಗಳನ್ನು ಇಲ್ಲಿ ತಿಳಿಸುವುದಕ್ಕೆ ಪ್ರಯತ್ನ ಮಾಡುವೆವು)

ಬರ್ಗ್ಸನ್ನರು ತತ್ತ್ವಚಿಂತನೆಯ ಹಾದಿಯನ್ನು ತುಳಿಯುವ ಮೊದಲು, ಯೂರೋಪಿನ ವಿಚಾರಕರು ಮುಖ್ಯವಾಗಿ ವಸ್ತುವಿಜ್ಞಾನಶಾಸ್ತ್ರದ ಅನುಸರಣೆಯನ್ನು ಮಾಡಿ ಮಾನವನ ಬುದ್ಧಿಗೇ ಹೆಚ್ಚು ಪ್ರಾಮುಖ್ಯವನ್ನು ಕೊಟ್ಟಿರುತ್ತಿದ್ದರು. ಆದರೆ ಬರ್ಗ್ಸನರವರು ಪ್ರಪಂಚದ ಪರಮಾರ್ಥವನ್ನು ನಿರ್ಣಯಿಸುವದಕ್ಕೆ ಬುದ್ಧಿಗಿಂತಲೂ **ಅನುಭವವೇ** (Intuition) ಹೆಚ್ಚು ಪ್ರಯೋಜನಕರವಾದ ಸಾಧನವೆಂಬುನ್ನು ಮೊಟ್ಟಮೊದಲಿಗೆ ತೋರಿಸಿಕೊಟ್ಟರು. ಅನುಭವವೆಂಬುದು ಮನುಷ್ಯನಲ್ಲಿರುವ ಪ್ರಾಣದ ಸಾರವಾಗಿರುತ್ತದೆ. ಪ್ರಾಣವೇ ಮನುಷ್ಯನ ಸ್ವರೂಪವಾಗಿರುತ್ತದೆ - ಎಂಬುದು ಅವರ ಸಿದ್ಧಾಂತದ ಮೂಲತತ್ತ್ವವಾಗಿರುತ್ತದೆ.

ಬುದ್ಧಿಯಿಂದ ನೋಡಿದರೆ ಹೊರಗೆ ಘನವಸ್ತುಗಳು ಬೇರೆಬೇರೆಯಾಗಿ ದ್ದುಕೊಂಡಿರುವಂತೆ ತೋರುತ್ತದೆ. ಆ ವಸ್ತುಗಳಿಗೆ ಸಾಹಚರ್ಯವಿದ್ದರೂ ಅವು ತಮ್ಮ ತಮ್ಮ ಸ್ವಭಾವನಿಯಮಕ್ಕೆ ಅನುಸಾರವಾಗಿ ಬೇರೆಬೇರೆಯ ಸ್ಥಿತಿಯನ್ನು ಅನುಭವಿಸುತ್ತಿರುವಂತೆಯೇ ತೋರುತ್ತದೆ. ಆ ದೃಷ್ಟಿಯಿಂದ ನೋಡಿದಾಗ ಕಾಲವೆಂಬುದು ವಸ್ತುಗಳನ್ನೊಳಗೊಂಡಿರುವ ಒಂದಾನೊಂದು ಪೆಟ್ಟಿಗೆಯೆಂತೆ ಇರುತ್ತದೆ. ಪೆಟ್ಟಿಗೆಯಲ್ಲಿರುವ ವಸ್ತುಗಳ ಧರ್ಮವಿಪರಿಣಾಮಕ್ಕೂ ಪೆಟ್ಟಿಗೆಗೂ ಯಾವ ಸಂಬಂಧವೂ ಇಲ್ಲ; ಅವು ಆ ಅರ್ಥದಲ್ಲಿ ಕಾಲನಿರಪೇಕ್ಷವಾಗಿ ಸ್ವತಂತ್ರ ವಾಗಿಯೇ ಇರುತ್ತವೆ. ಈ ದೃಷ್ಟಿಯಿಂದಲೇ ಪದಾರ್ಥವಿಜ್ಞಾನಶಾಸ್ತ್ರವು ಪದಾರ್ಥಗಳ ಸ್ವಭಾವವನ್ನು ನಿರ್ಣಾಯಿಸುವದಕ್ಕೆ ಹೊರಟಿರುತ್ತದೆ.

ಆದರೆ ಅನುಭವವನ್ನನುಸರಿಸಿ ಪರಮಾರ್ಥವನ್ನು ನಿರ್ಣಯಿಸಿಕೊಳ್ಳ ಬೇಕೆನ್ನುವವರು ಪದಾರ್ಥ ವಿಜ್ಞಾನದ ವಸ್ತುಗಳನ್ನು ನೋಡುವದಕ್ಕಿಂತಲೂ ಪ್ರಾಣಶಾಸ್ತ್ರದ ವಿಷಯವಾದ ಪ್ರಾಣವನ್ನು ಪರೀಕ್ಷಿಸಬೇಕು. ಅದನ್ನು ಬುದ್ಧಿಯ ಕಣ್ಣಿಂದ ನೋಡುವದಕ್ಕೆ ಬದಲು ಅದರ ಕಟ್ಟಿನಿಂದ ಬಿಡುಗಡೆಮಾಡಿಕೊಂಡು ತಮ್ಮ ತಮ್ಮೊಳಗೇ ಇರುವ ಪ್ರಾಣದಲ್ಲಿ ಅನುಭವದಿಂದ ಐಕ್ಯತೆಯನ್ನು ಹೊಂದಿನೋಡಬೇಕು. ಆಗ ಒಂದಾನೊಂದು ನಿತ್ಯನಿರಂತರಪ್ರಾಣಪ್ರವಾಹವೇ ಪರಮಾರ್ಥವೆಂಬುದು ಕೂಡಲೆ ಹೊಳೆಯುತ್ತದೆ. ಈ ಸಜೀವ ಪ್ರವಾಹಕ್ಕೆ ನಾವು ಸಿಕ್ಕಿ ಮುಂದುವರಿಯುತ್ತಿರುವೆವು. ಅದರಲ್ಲಿ ಹಿಂದಿನದೆಲ್ಲವೂ

ಸೇರಿಕೊಂಡು ಈಗಿನ ಕಾಲದಲ್ಲಿ ಸೇರಿಕೊಂಡಿರುತ್ತದೆ; ಇದನ್ನು ಮುಂದಕ್ಕೆ ತಳ್ಳಿ ಭವಿಷ್ಯತ್ಕಾಲವನ್ನು ಏರ್ಪಡಿಸುತ್ತಿರುತ್ತದೆ.

ಈ ದೃಷ್ಟಿಯಿಂದ ನೋಡಿದಾಗ ಒಂದಾನೊಂದು ಪದಾರ್ಥವು ಅಥವಾ ತತ್ತ್ವವು ಸತತವಾಗಿ ಹರಿಯುತ್ತಿದೆ ಎಂದು ಹೇಳಿದ ಹಾಗಾಯಿತೆಂದು ಭಾವಿಸಬಾರದು. ಸ್ಪಂದವು ಉಂಟಾಗುತ್ತಿರುವದೂ (Movement and becoming) ಪರಮಾರ್ಥವು; ಅದು ಏತರ ಸ್ಪಂದವೂ ಅಲ್ಲ, ಯಾವದೊಂದು ಉಂಟಾಗುವದೂ ಅಲ್ಲ, ಸ್ಪಂದವೇ, ಉಂಟಾಗುವದೇ, ಇರುವದೆಂಬ ಶಬ್ದಕ್ಕೆ ಅರ್ಥವು. ವಿಜ್ಞಾನವಾದಿಗಳ ಕಣ್ಣಿನಿಂದ ವಿಜ್ಞಾನವು ಪರಮಾರ್ಥ, ಬಾಹ್ಯವಸ್ತುವಾದಿಗಳ ಕಣ್ಣಿನಿಂದ ವಸ್ತುಗಳೂ ಪರಮಾರ್ಥ; ಹೀಗೆ ಅವರಿಬ್ಬರಿಗೂ ಪರಮಾರ್ಥದ ಸ್ವರೂಪದ ವಿಷಯಕ್ಕೆ ಮತಭೇದವಿದ್ದರೂ ಅವರು ವಿಜ್ಞಾನ ಅಥವಾ ವಸ್ತು ಬೇರೆ, ಅದರ ಸ್ಪಂದವು, ವಿಕಾರವು, ಉಂಟಾಗುವಿಕೆಯುಭಯ, ಬೇರೆ ಎನ್ನುತ್ತಿದಾರೆ. ಆದರೆ ಬರ್ಗ್ಸನ್ನರ ಅಭಿಪ್ರಾಯವು ಹಾಗಿಲ್ಲ. ಸ್ಪಂದವು ತಾನೇ ಸ್ವತಂತ್ರವಾಗಿರುತ್ತದೆ; ಅದು ಚಿತ್ತದ, ಬಾಹ್ಯವಸ್ತುವಿನ, ಅಥವಾ ಮತ್ತೆ ಯಾವದಾದರೊಂದು ವಸ್ತುವಿನ ಸ್ಪಂದವಲ್ಲ, ಕಾಲನಿರಪೇಕ್ಷವಾದ ವಸ್ತುಗಳ ಇರವನ್ನು ಬುದ್ಧಿಯ ಕಣ್ಣಿಂದ ನೋಡಿ ಒಪ್ಪಿಕೊಂಡಿರುವದೇ ವಸ್ತುಗಳನ್ನಾಶ್ರಮಿಸಿ ಸ್ಪಂದವುಂಟಾಗುವದೆಂಬ ತಪ್ಪು ತಿಳಿವಳಿಕೆಗೆ ಕಾರಣವಾಗಿರುತ್ತದೆ ಎಂಬುದು ಅವರ ಮತವು.

ಪ್ರಾಣವನ್ನು ಕೂಡ ಬುದ್ಧಿಯ ದೃಷ್ಟಿಯಿಂದ ಪರೀಕ್ಷಕರು ನೋಡುವದುಂಟು. ಪ್ರಾಣಿಗಳಿಗೆ ಬಾಲ್ಯ, ಯೌವನ, ಕೌಮಾರ, ವಾರ್ಧಕ – ಎಂಬ ಸ್ಥಿತಿಗಳು ಉಂಟಾಗುತ್ತಿರುವವೆಂದೂ ಅವು ಕೆಲವುಕಾಲ ನಿಂತಿದ್ದು ಬೇರ್ಪಡುವ ಸ್ಥಿತಿಗಳೆಂದೂ ನಾವು ಭಾವಿಸುವುದಕ್ಕೆ ಇದೇ ಕಾರಣ. ಆದರೆ ಈ ದೃಷ್ಟಿಯಲ್ಲಿ ಶರೀರವೆಂಬ ಉಪಾಧಿಯನ್ನು ನಾವು ಬಿಡಿಸಿಕೊಳ್ಳದೆ ಇರುತ್ತೇವೆ. ದೇಶದಲ್ಲಿದ್ದು ಕೊಂಡಿರುವ ಶರೀರದ ದೃಷ್ಟಿಯನ್ನು ಬಿಟ್ಟು ನಮ್ಮ ಸ್ವರೂಪವೇ ಆಗಿರುವ ಪ್ರಾಣವನ್ನು ನೋಡಿಕೊಂಡರೆ ನಮ್ಮ ಪ್ರಾಣವು ನಿತ್ಯನಿರಂತರಸ್ಪಂದವಾಗಿರುವದೆಂದೂ ಅದಕ್ಕೂ ಕಾಲಕ್ಕೂ ಯಾವ ಭೇದವೂ ಇಲ್ಲವೆಂದೂ ಗೊತ್ತಾಗುತ್ತದೆ. ವಸ್ತುಗಳು ಕಾಲಸಂಪರ್ಕದಿಂದ ಇದ್ದುಕೊಂಡು ಸ್ವಭಾವನಿಯಮಕ್ಕೊಳಪಟ್ಟಿರುವವೆಂದು ನಾವು ಹೇಳುವದು ಕಾಲಾಭಾಸವು, ನಿಜವಾದ ಕಾಲವಲ್ಲ, ನಮ್ಮ

ಸ್ವರೂಪವೇ ಆಗಿರುವ ಪ್ರಾಣಪ್ರವಾಹವೇ ನಿಜವಾದ ಕಾಲವು. ಅರಿವೆಂಬುದು ಈ ಸ್ಪಂದವೇ, ಈ ಪರಮಾರ್ಥಕಾಲವೇ; ಅದು ಸ್ಪಂದವಿಲ್ಲದೆ ವಿಕಾರವಿಲ್ಲದೆ ಇರುವ ತತ್ತ್ವವಲ್ಲ ಅದನ್ನು ಬುದ್ಧಿಯು ಗೊತ್ತುಪಡಿಸಲಾರದು. ಸ್ಥಿರವಸ್ತುಗಳ ಸ್ವಭಾವವನ್ನು ಗೊತ್ತುಪಡಿಸುವದೇ ಪದಾರ್ಥವಿಜ್ಞಾನದ ಕೆಲಸವು ಪ್ರಾಣದ ಸ್ವಭಾವವನ್ನು ಗೊತ್ತುಪಡಿಸುವದೇ ತತ್ತ್ವಶಾಸ್ತ್ರದ ಕೆಲಸವು.

**ಅನುಭವವೆಂದರೇನು**? ಇದು ಯೋಗಿಪ್ರತ್ಯಕ್ಷದಂತಹ ಒಂದಾನೊಂದು ವಿಶೇಷಾನುಭವವಲ್ಲ, ಅದರಲ್ಲಿ ಯಾವ ರಹಸ್ಯವೂ ಇಲ್ಲ – ಅದಕ್ಕೂ ಪ್ರಾಣಕ್ಕೂ ಅವಿನಾಭಾವವಿರುತ್ತದೆ, ಪ್ರಾಣಕ್ಕೂ ಅದಕ್ಕೂ ತಾದಾತ್ಮ್ಯವಿರುತ್ತದೆ. ಪ್ರಾಣವಿರುವ ಕಡೆಯಲ್ಲೆಲ್ಲ ಈ ಅನುಭವವಿರಬಹುದೆಂದೂ ಹೇಳಬಹುದಾಗಿರುತ್ತದೆ. ಆದರೂ ಯಾವಾಗಲೋ ಒಂದೊಂದು ಸಲ ಚಿತ್ತಾವಧಾನದಿಂದ ಈ ಅನುಭವವು ನಮ್ಮಗಳಿಗೆ ಉಂಟಾಗುತ್ತದೆ.

**ಬುದ್ಧಿಯೆಂಬುವೇನು**? ಅದು ಅಂತಃಕರಣದ ಒಳಗಣ್ಣು ಎಂದು ಹೇಳಬಹುದಾಗಿದೆ. ಹೇಗೆ ವಿಕಾಸಕ್ರಮದಲ್ಲಿ ಪ್ರಾಣಿಗಳಿಗೆ ಕಣ್ಣೆಂಬ ಇಂದ್ರಿಯವು ಏರ್ಪಟ್ಟಿರುವದೋ, ಹೇಗೆ ಅದು ಶಬ್ದವೇ ಮುಂತಾದ ಮಿಕ್ಕದೆಲ್ಲವನ್ನೂ ಬಿಟ್ಟು ರೂಪಮಾತ್ರವನ್ನು ಗ್ರಹಿಸುವದಕ್ಕೆ ಅನುಕೂಲವಾದ ಸಾಧನವಾಗಿ ರುತ್ತದೆಯೋ, ಹಾಗೇಯೇ ಬುದ್ಧಿಯೆಂಬುದು ಪರಮಾರ್ಥದ ಕೆಲವು ಭಾಗವನ್ನು ಮಾತ್ರ ಆರಿಸಿಕೊಂಡು ತಿಳಿಯುವದಕ್ಕಾಗಿ ಆ ಪ್ರವಾಹದಲ್ಲಿ ಕೆಲವು ಕೆಲವು ಪರಿಚ್ಛೇದಗಳನ್ನೂ ಮಾಡಿಕೊಂಡು ನಮಗೆ ಬೇಕಾದಷ್ಟನ್ನು ತಿಳಿಸಿಕೊಡುವದಕ್ಕೆ ಏರ್ಪಟ್ಟಿರುವ ವಿಕಾಸವಿಶೇವಾಗಿರುತ್ತದೆ. ಬುದ್ಧಿಯೂ ಪರಮಾರ್ಥವನ್ನೇ ತಿಳಿಸಿ ಕೊಡುತ್ತದೆಯಾದರೂ ಅದಕ್ಕೆ ಕೆಲಕೆಲವು ಬೇಲಿಗಳನ್ನು ಹಾಕಿ ಆಯಾ ಆಕಾರದಲ್ಲಿ ಮಾತ್ರ ಅದನ್ನು ತೋರಿಸಿಕೊಡುತ್ತದೆ. ಇದು ವ್ಯವಹಾರದಲ್ಲಿ ನಮಗೊಂದು ಬಹಳ ಉಪಯುಕ್ತವಾಗಿರುವ ಸಾಧನವಾಗಿರುತ್ತದೆ. ಭೌತಿಕವಿಜ್ಞಾನವು ಈ ಸಾಧನದಿಂದ ಪರಮಾರ್ಥವನ್ನು ನೋಡುತ್ತಿದೆ. ಸಿನಿಮಾದಲ್ಲಿ ವಸ್ತುಗಳ ಬೇರೆಬೇರೆ ನೋಟಗಳ ಚಿತ್ರಗಳನ್ನು ವೇಗವಾಗಿ ತೆರೆಯಮೇಲೆ ಚಲಿಸುವಂತೆ ಮಾಡುವದರಿಂದ ಅಖಂಡವಾಗಿ ಚಲಿಸುತ್ತಿರುವ ಒಂದಾನೊಂದು ಚಿತ್ರವು ಕಾಣಿಸುವದಿಲ್ಲವೆ? ಹಾಗೆಯೇ ಸ್ಥಿರವಾದ ಕೆಲವು ಸ್ಥಿತಿಗಳು ಅನುಕ್ರಮವಾಗಿ ಒಂದರ ಹಿಂದೊಂದುಬಂದರೆ ಅದನ್ನೇ ವಿಕಾರವು, ಸ್ಪಂದವು – ಎಂದು ಪದಾರ್ಥ ವಿಜ್ಞಾನಶಾಸ್ತ್ರವು ಭಾವಿಸುತ್ತದೆ. ಆದರೆ ಪರಮಾರ್ಥವಾದ ಸ್ಪಂದವು ಅಖಂಡವಾಗಿ

ರುತ್ತದೆ. ಅದರಲ್ಲಿ ನಾವು ಕಲ್ಪಿಸುವ ಭಾಗಗಳು ಅದರ ಬೇರೆಬೇರೆಯ ನೋಟಗಳೇ ಹೊರತು ನಿಜವಾಗಿಯೂ ಚಲನೆಯ ಭಾಗಗಳಲ್ಲ.

ಹಾಗಾದರೆ **ಭೌತಿಕ ವಸ್ತು**ವೆಂದರೆ ಏನು? ಹೊರಗೆ ಘನವಾಗಿ ಕಾಲದ ಗರಜಿಲ್ಲದ ಸ್ವತಂತ್ರವಾಗಿರುವಂತೆ ಕಾಣುವ ವಸ್ತುಗಳ ನಿಜವು ಏನು? ಎಂದರೆ ಈ ಸಿದ್ಧಾಂತದಲ್ಲಿ ಉತ್ತರವಿದು: ಸ್ಥಿರವಾಗಿರುವ ಜಡವಸ್ತುವೆಂಬುದು ಒಂದಾನೊಂದು ಹುಸಿತೋರಿಕೆಯು, ಪರಮಾರ್ಥವಾಗಿ ಅದು ಎರಡು ಬಗೆಯ ಸ್ಪಂದಗಳೇ ಆಗಿರುತ್ತದೆ. ನಾವು ರೈಲಿನಲ್ಲಿ ಹೋಗುತ್ತಿರುವಾಗ ನಮ್ಮ ಜೊತೆಗೊಂದು ರೈಲುಗಾಡಿಯು ಮೆಲ್ಲಗೆ ಹೋಗುತ್ತಿದ್ದರೆ ಅದು ಹಿಂದಕ್ಕೆ ಹೋಗುವಂತೆ ತೋರುತ್ತದೆ; ಅದರ ವೇಗವು ನಮ್ಮ ಗಾಡಿಯದರಷ್ಟೇ ಆಗಿದ್ದರೆ ಅದು ನಿಂತಿರುವಂತೆಯೇ ತೋರುತ್ತದೆ; ಅದು ನಮಗೆ ಪ್ರತಿಕೂಲವಾದ ದಿಕ್ಕಿನಲ್ಲಿ ಹೋಗುತ್ತಿದ್ದರೆ ತನ್ನ ನಿಜವಾದ ವೇಗಕ್ಕಿಂತ ಎರಡರಷ್ಟು ವೇಗದಿಂದ ಚಲಿಸುತ್ತಿರುವಂತೆ ತೋರುತ್ತಿರುತ್ತದೆ. ಅಲ್ಲವೆ? ಇಡಿಯ ಜೀವನವು ಒಂದಾನೊಂದು ಮಹಾಸ್ಪಂದವಾಗಿರುತ್ತದೆ. ಇದರಲ್ಲಿ ಒಂದಂಶವು ಹೋಗುತ್ತಿರುವ ದಿಕ್ಕಿನಲ್ಲಿ ನಮಗೆ ಅವಧಾನ ಉಂಟಾದಾಗ ಉಳಿದ ಭಾಗವು ನಮ್ಮನ್ನು ಅಡ್ಡಗಟ್ಟುತ್ತಿರುವಂತೆ ಅಥವಾ ಹಿಂದು ಹಿಂದಕ್ಕೆ ಹೋಗುತ್ತಿರುವಂತೆ ಕೂಡ ಭಾಸವಾಗಿರುತ್ತದೆ. ಹೀಗಿರುವದರಿಂದ ನಮ್ಮ ಸುತ್ತಲೂ ಇರುವ ಸ್ಪಂದವನ್ನೇ ನಾವು ದೃಷ್ಟಿ ವಿಶೇಷದಿಂದ ಜಡವಸ್ತುವೆಂದು ಭಾವಿಸುತ್ತಿದೇವೆಯೇ ಹೊರತು ಪರಮಾರ್ಥವಾಗಿ ಜಡವೆಂಬುದೇ ಇಲ್ಲ–ಎಲ್ಲವೂ ಏಕ ಮಾತ್ರ ಮಹಾಸ್ಪಂದಪ್ರವಾಹವೇ ಆಗಿರುತ್ತದೆ.

ಬುದ್ಧಿಯಂತೆ ನೈಸರ್ಗಿಕವಾದರಿವೂ ಈ ಪ್ರವಾಹವೆಂಬ ಮಹಾಸ್ಪಂದದಿಂದಲೇ ಉಂಟಾಗಿರುವ ಒಂದಾನೊಂದು ಸಾಧನವಾಗಿ ರುತ್ತದೆ. ನೈಸರ್ಗಿಕರರಿವಿನಲ್ಲಿ ವಿಷಯಜ್ಞಾನವು ಎದ್ದು ತೋರುತ್ತಿರುವದಿಲ್ಲ. ನಿದ್ರೆಯ ಮಬ್ಬಿನಲ್ಲಿ ಜನರು ಮಾಡುವ ವ್ಯಾಪಾರದಂತೆಯೇ ಇರುವ, ಜೇನುಹುಳು ಮುಂತಾದ ಪ್ರಾಣಿಗಳು ನೈಸರ್ಗಿಕದರಿವಿನಿಂದ ತಮ್ಮ ತಮ್ಮ ವ್ಯಾಪಾರವನ್ನು ಮಾಡುತ್ತಿರುತ್ತವೆ. ಲೋಕದ ವ್ಯವಹಾರಕ್ಕೆ ನೈಸರ್ಗಿಕದರಿವು, ಬುದ್ಧಿ ಈ ಎರಡೂ ಸಾಧನವಾಗಿರುತ್ತವೆಯಾದರೂ ಅವುಗಳಲ್ಲಿ ಒಂದಕ್ಕೊಂದಕ್ಕೆ ಹೆಚ್ಚಿನ ತಾರತಮ್ಯವಿರುತ್ತದೆ. ನೈಸರ್ಗಿಕದರಿವು ಬುದ್ಧಿಯ ಅವ್ಯಕ್ತಸ್ಥಿತಿಯೆಂದು ಭಾವಿಸುವದು ಸರಿಯಲ್ಲ, ಕೆಲಸವನ್ನು ಮಾಡುವದಕ್ಕೆ ನೈಸರ್ಗಿಕದರಿವನ್ನು

ಉಪಯೋಗಿಸುವ ಪ್ರಾಣಿಗಳು ತಪ್ಪುತಾಗಿಲ್ಲದೆ ತಮ್ಮ ಕೆಲಸವನ್ನು ಮಾಡುತ್ತವೆ; ಆದರೆ ಬುದ್ಧಿಯನ್ನುಪಯೋಗಿಸುತ್ತಿರುವ ಮಾನವನು ಹಿಂದೆಮುಂದೆ ನೋಡುತ್ತಾ ಮೆಲ್ಲಮೆಲ್ಲಗೆ ವ್ಯವಹಾರದಲ್ಲಿ ತೊಡಗುತ್ತಾನೆ. ನೈಸರ್ಗಿಕವಾದ ಅರಿವಿನ ಕ್ಷೇತ್ರವು ಬಹುಸ್ವಲ್ಪವಾಗಿರುತ್ತದೆ. ಬುದ್ಧಿಯು ಪರಮಾರ್ಥವನ್ನು ತಿಳಿಸುವದಕ್ಕೆ ಅಷ್ಟು ಉತ್ತಮಸಾಧನವಲ್ಲದಿದ್ದರೂ ಸ್ವಲ್ಪ ಹೆಚ್ಚು ಕಡಿಮೆ ಮಿತಿಯಿಲ್ಲದಷ್ಟು ಕ್ಷೇತ್ರವುಳ್ಳದ್ದಾಗಿರುತ್ತದೆ. ಉದ್ದೇಶವಿಧೇಯಭಾವವನ್ನು ತಿಳಿಯುವ ಶಕ್ತಿಯು ಬುದ್ಧಿಗಿರುವಂತೆ ನೈಸರ್ಗಿಕದರಿವಿಗೆ ಇರುವುದಿಲ್ಲ. ಇದೂ ಅಲ್ಲದೆ ನೈಸಗಿ ರ್ಕದರಿವು ಪರಮಾರ್ಥವನ್ನು ನೇರಾಗಿ ಸಂಬಂಧಿಸಿ ತಿಳಿಸುತ್ತದೆ, ಆದರೆ ಬುದ್ಧಿಯು ಪರಮಾರ್ಥವನ್ನು ನಮ್ಮ ಪ್ರಾಣಸ್ವರೂಪಕ್ಕಿಂತ ಬೇರೆಯಾಗಿ ನಮ್ಮ ಬಾಹ್ಯದಲ್ಲಿರುವಂತೆ ತಿಳಿಯಪಡಿಸುತ್ತದೆ, ಹೀಗೆ ಸ್ವರೂಪ, ಕ್ಷೇತ್ರ, ಕಾರ್ಯ-ಇವುಗಳಲ್ಲೆಲ್ಲ ಈ ಎರಡಕ್ಕೂ ಮಹದಂತರವಿರುವದರಿಂದ ಇವೆರಡೂ ಬೇರೆಬೇರೆಯ ಬಗೆಯಿದಾದ ಪರಮಾರ್ಥದ ವಿಕಾಸಗಳೆಂದೇ ಒಪ್ಪುವದು ಯುಕ್ತವಾಗಿರುತ್ತದೆ.

ಮಾನವಸ್ವಭಾವದಲ್ಲಿ ಈ ಎರಡು ಸಾಧನಗಳೂ ಒಂದುಬಗೆಯಿಂದ ಒಂದುಗೂಡಿ ತೋರಿಕೊಳ್ಳುತ್ತಿರುತ್ತವೆ. ನೈಸರ್ಗಿಕದರಿವು ಹಿಂದೆ ನಾವು ಅನುಭವವೆಂದು ಕರೆದಿರುವ ಮಾನವನ ಶಕ್ತೀಲವಿಶೇಷವನ್ನು ಹೊಂದತಕ್ಕದ್ದಾಗಿ ರುತ್ತವೆ. ಈ ಶಕ್ತಿಯನ್ನು ಉಪಯೋಗಿಯೇ ತತ್ತ್ವಶಾಸ್ತ್ರಜ್ಞರು ಪರಮಾರ್ಥವನ್ನು ಗ್ರಹಿಸಬೇಕು; ಹಾಗಾದರೆ ಬುದ್ಧಿಯ ವ್ಯವಧಾನವಿಲ್ಲದೆ ಪರಮಾರ್ಥವನ್ನೂ ಇದ್ದದ್ದು ಇದ್ದಂತೆ ತಿಳಿದುಕೊಂಡಂತೆ ಆಗುತ್ತದೆ; ಏಕೆಂದರೆ ಹಿಂದೆ ಹೇಳಿದಂತೆ ಪ್ರಾಣವೇ ಪರಮಾರ್ಥವಾಗಿರುವದರಿಂದ ಆಗ ಅದನ್ನು ಇಂದ್ರಿಯಗಳಿಂದ ದೇಶ ಕಾಲಗಳ ಚೌಕಟ್ಟಿನಲ್ಲಿ ಸಿಕ್ಕಿಸಿಕೊಂಡು ಹೊರಗಿನ ಪದಾರ್ಥಗಳಂತೆ ಅರಿಯದೆ ನೇರಾಗಿಯೇ ಅರಿಯುತ್ತೇವೆ. ಈ ಪ್ರಾಣದ ಸಿದ್ಧಾಂತವನ್ನು ಅರಿತ ಮೇಲೆಯೇ ಜ್ಞಾನದ ಸಿದ್ಧಾಂತವೂ ನಿಲುಗಡೆಗೆ ಬರುತ್ತದೆ. ಜ್ಞಾನವೆಂಬುದು ಪ್ರಾಣದ ವ್ಯಾಪಾರಕ್ಕಾಗಿರುವ ಪದಾರ್ಥಸಾಧನವೆಂದೂ ಬುದ್ಧಿಯ ಪ್ರತ್ಯಯವಿಶೇಷಗಳು ಭೌತಿಕಲಶಾಸ್ತ್ರಕ್ಕೆ ಉಪಯೋಗಿಸಿಕೊಳ್ಳುವ ಸಂಕೇತವಿಶೇಷಗಳೆಂದೂ ಅವುಗಳನ್ನು ವಿಸ್ತರಿಸಬಹುದು ಅಥವಾ ಅವನ್ನೂ ಮೀರಬಹುದು ಎಂದೂ ತೋರಿಸಿಕೊಟ್ಟು ಪ್ರಾಣವಿಕಾಸದಲ್ಲಿ ಅವುಗಳ ಸ್ಥಾನವನ್ನು ಗೊತ್ತುಪಡಿಸುವದು

ಈ ಸಿದ್ಧಾಂತದಿಂದ ಮಾತ್ರವೇ ಆಗುತ್ತದೆ. ವ್ಯವಹಾರಕ್ಕಾಗಿ ಏರ್ಪಟ್ಟಿರುವ ಬುದ್ಧಿಸಾಧನವನ್ನು ತತ್ತ್ವ ನಿರ್ಣಯಕ್ಕಾಗಿ ಉಪಯೋಗಿಸಿಕೊಂಡಾಗ ಇಲ್ಲದ ತೊಡಕುಗಳುಂಟಾಗುವವೆಂಬುದೂ ಇದರಿಂದ ಸ್ಪಷ್ಟವಾಗುತ್ತದೆ. ಈ ರೀತಿಯಲ್ಲಿ ಮನಸ್ಸಿಗೂ ಭೌತಿಕವಸ್ತುವಿಗೂ ಇರುವ ಸಂಬಂಧವಿಷಯದ ಒಣಜಗಳವು ಮಾಯವಾಗುತ್ತವೆ. ಮಾನವನಿಗೆ ಸ್ವಾತಂತ್ರ್ಯವಿದೆಯೊ, ಅವನು ನಿಯತಿಗೆ ಸಿಕ್ಕು ಒದ್ದಾಡುತ್ತಿರಬೇಕೆಲ - ಎಂಬ ಪ್ರಶ್ನೆಗೂ ಸರಿಯಾದ ಉತ್ತರವು ಸಿಕ್ಕಂತಾಗುತ್ತದೆ. ಏಕೆಂದರೆ ನಮ್ಮ ಸ್ವರೂಪವೆಂಬುದು ಭೂತಭವಿಷ್ಯದ್ವರ್ತಮಾನಗಳನ್ನೆಲ್ಲ ಆವರಿಸಿಕೊಂಡಿರುವ ಪ್ರಾಣವೆಂಬ ಸತತಸ್ಪಂದವೆಂದು ಸಿದ್ಧಾಂತವಾಗಿರುವದರಿಂದ ಮನಸ್ಸೂ ಭೌತಿಕವಸ್ತುವೂ ಅದರ ವಿಕಾಸಮಾತ್ರವಾಗಿರುತ್ತವೆ, ಮತ್ತು ಸ್ವಾತಂತ್ರ್ಯವನ್ನೂ ಈ ಅರ್ಥದಲ್ಲಿ ಒಪ್ಪಿಕೊಂಡಂತೆ ಆಗುತ್ತದೆ. ಮಾನವನು ಈ ಸ್ಪಂದದ ಜಯಪತಾಕೆಯಾಗಿರುತ್ತಾನೆಂದೂ ಒಂದರ್ಥದಲ್ಲಿ ಹೇಳಬಹುದು; ಏಕೆಂದರೆ ಅವನಲ್ಲಿ ಮಾತ್ರವೇ ಅರಿವೆಂಬುದು ಮುಂದಕ್ಕೆ ನುಗ್ಗುತ್ತಲೇ ಇರುತ್ತದೆ.

ಬರ್ಗ್ಸನ್ನರ ಸಿದ್ಧಾಂತವು ವಿಕಾಸವಾದದ (Theory of Evolution) ಆಧಾರದಿಂದ ಹುಟ್ಟಿದ್ದಾಗಿರುತ್ತದೆ. ಅವರಿಗಿಂತ ಹಿಂದಿನ ಸ್ಪೆನ್ಸರ್ ರವರೂ ವಿಕಾಸವಾದದಿಂದ ಒಂದಾನೊಂದು ಸಿದ್ಧಾಂತವನ್ನು ತೆಗೆದಿದ್ದರು: ಆದರೆ ಬರ್ಗ್ಸನ್ನರವರ ಸಿದ್ಧಾಂತವು ಒಂದು ಹೊಸಮಾರ್ಗದಲ್ಲಿ ಹೊರಟಿತು. ಈ ಪ್ರಪಂಚವೂ ಇಲ್ಲಿರುವ ಪ್ರಾಣಿಗಳೂ ವಿಕಾಸದಿಂದ ಉಂಟಾಗಿರುತ್ತವೆಂಬುದನ್ನು ಹಿಂದಿನ ಸಿದ್ಧಾಂತವೂ ಒಪ್ಪಿದ್ದರೂ ಈಗಿನ ರೂಪಗಳನ್ನು ವಿಭಜನೆಮಾಡಿ ಮೂಲರೂಪಕ್ಕೆ ತಿರುಗಿಸಿ ಮತ್ತೆ ಆ ಮೂಲಧಾತುಗಳಿಂದ ಈ ವಿಕಾಸವು ಹೇಗಾಗುವದೆಂಬುದನ್ನು ತೋರಿಸಿದರೆ ಸಿದ್ಧಾಂತವಾಯಿತೆಂದು ಆದರಲ್ಲಿ ಅಂಗೀಕರಿಸಿತ್ತು. ಇದರಿಂದ ಕಾಲಕ್ಕೆ ಸರಿಯಾದ ಸ್ಥಾನವಿಲ್ಲದೆಹೋಗಿದ್ದದಿಲ್ಲದೆ, ವಿಕಾಸದ ಮುಖ್ಯಸ್ವರೂಪವೇ ಅಳಿಸಿಹೋದಂತಾಗಿಬಿಟ್ಟಿತ್ತು ಆದರೆ ಬರ್ಗ್ಸನ್ನರವರು ಸಿದ್ಧಾಂತದಲ್ಲಿ ವಿಕಾಸಕ್ಕೆ ಮೂಲವು ಪ್ರಾಣವಾಗಿರುತ್ತದೆ. ಪ್ರಾಣವೆಂಬ ಸ್ಪಂದವೇ ಕಾಲವಾಗಿದ್ದು ಅದರಲ್ಲಿ ಹಿಂದು, ಇಂದು, ಮುಂತಾದವುಗಳೆಲ್ಲವೂ ಅಡಕವಾಗಿರುತ್ತವೆ. ವಿಕಾಸವೆಂಬುದು ಅಖಂಡವಾಗಿದ್ದು ಹೊಸಹೊಸದಾಗಿ ಉಂಟಾಗುವದಾದ್ದರಿಂದ ಅದು ಎರಡು ಸ್ಥಿತಿಗಳ ನಡುವಿನ ಬಿಡುವಲ್ಲ ಕಾರಣವು ವಿಕಾಸವಾಗುತ್ತಿದೆಯೆಂದರೆ ಅದು ಮತ್ತೆಮತ್ತೆ ಸತ್ತುಹುಟ್ಟುತ್ತಲಿದೆಯೆಂದರ್ಥವಲ್ಲ.

ಅಖಂಡವಾಗಿ ಒಂದೇಟ್ಟ ಸ್ಪಂದವು ಮುಂದುವರಿಯುತ್ತಿದೆಯೆಂದೇ ಅರ್ಥ. ಪ್ರಾಣಿಗಳ ವಿಕಾಸದ ಮುಖ್ಯಸಮಸ್ಯೆಯನ್ನು- ಒಂದೇ ಜಾತಿಯ ಬೇರೆಬೇರೆಯ ಬಗೆಯ ಪ್ರಾಣಿಗಳ ಉತ್ಪತ್ತಿಯನ್ನು-ವಿವರಿಸುವದಕ್ಕೆ ಈ ಸಿದ್ಧಾಂತವು ಬಹಳ ಸಹಾಯವಾಗಿರುತ್ತದೆ. ಮುಖ್ಯವಾಗಿ ತತ್ತ್ವಶಾಸ್ತ್ರಕ್ಕೆ ಈ ಸಿದ್ಧಾಂತದಿಂದ ಆಗಿರುವ ಪ್ರಯೋಜನವೆಂದರೆ ಬುದ್ಧಿಯು ಭೌತಿಕವಸ್ತುವನ್ನು ತಿಳಿಯುವ ಸಾಧನವೆಂದೂ ಮನಸ್ಸಿನ ಬುದ್ಧಿ ಶಕ್ತಿಯಾಗಲಿ ಪದಾರ್ಥದ ಜಡತ್ವವಾಗಲಿ ಎರಡು ಬೇರೆಬೇರೆ ಪದಾರ್ಥಗಳಿಂದ, ಅಥವಾ ಎರಡು ಸ್ಪಂದಗಳಿಂದ ಆಗಿರದೆ ಅವು ಒಂದೇ ಸ್ಪಂದದ ಎರಡು ವಿಧಾನ ಮಾತ್ರಗಳೆಂದೂ ತೋರಿಸಿಕೊಟ್ಟಿರುವದು; ಪರಮಾರ್ಥವು ಸ್ಪಂದ ರೂಪ ಪ್ರಾಣಮಯವಾಗಿ ಎಲ್ಲೆಲ್ಲಿಯೂ ಒಂದೇ ರೀತಿಯಾಗಿರುವದೆಂದು ನಿರ್ಣಯಿಸುವದಕ್ಕೆ ತಕ್ಕ ಸಲಹೆಗಳನ್ನು ಕೊಟ್ಟಿರುವದು.

ನಾವು ಬಹು ಸಂಕ್ಷಿಪ್ತವಾಗಿ ಈ ವರೆಗೆ ವರ್ಣಿಸಿರುವ ಬರ್ಗ್ಸನ್ನರವರ ದರ್ಶನವು ನಮ್ಮ ದೇಶದವರಿಗೆ ಒಗ್ಗದೆ ಹೋಗಬಹುದು, ಕೇವಲ ಪೌರುಷೇಯವಾದ ಸಿದ್ಧಾಂತಗಳನ್ನು ವಿಮರ್ಶೆಮಾಡಿ ಒಪ್ಪುವದಕ್ಕೆ ನಮ್ಮಲ್ಲನೇಕರು ಸಿದ್ಧರಾಗಿಯೂ ಇಲ್ಲ. ಆದರೂ ಈ ಸಿದ್ಧಾಂತದಲ್ಲಿ ನಾವೂ ಗ್ರಹಿಸಬಹುದಾಗಿ ರುವ ಕೆಲವು ಅಂಕಗಳು ಇಲ್ಲದೆ ಇಲ್ಲ. ಮೊಟ್ಟಮೊದಲನೆಯದಾಗಿ ಮಾನವರ ಬುದ್ಧಿಶಕ್ತಿಯ ತರ್ಕದಿಂದ ನಿರ್ಣಯಿಸುವ ವಿಚಾರಗಳಿಗಿಂತ ಅನುಭವದಿಂದ ತತ್ತ್ವವನ್ನು ನಿರ್ಣಯಿಸಬೇಕೆಂಬ ಒಂದು ಸೂಚನೆ ಇಲ್ಲಿರುತ್ತದೆ; ಅನುಭವವೆಂದರೆ ಯೋಗಪ್ರತ್ಯಕ್ಷವೇ ಮುಂತಾದವುಗಳಲ್ಲ, ಸಾರ್ವತ್ರಿಕವಾದ ಅನುಭವವು ಎಂಬ ಸೂಚನೆಯೂ ಇಲ್ಲಿ ಇದೆ. ಎರಡನೆಯದಾಗಿ ಸಾಮಾನ್ಯವ್ಯವಹಾರದ ಬುದ್ಧಿಗೆ ಗೋಚರವಾಗುವದು ಭೌತಿಕವಿಜ್ಞಾನಕ್ಕೆ ಮೆಚ್ಚಾಗಿದ್ದರೂ ಅದು ತಿಳಿಸುವ ಪರಮಾರ್ಥವು ಏಕದೇಶಮಾತ್ರವಾಗಿರುವದೆಂದೂ ಕೇವಲ ವ್ಯಾವಹಾರಿಕವಾಗಿರುವದೆಂದೂ ಹೇಳುವ ಮತ್ತೊಂದು ಸೂಚನೆಯೂ ಇಲ್ಲಿ ಇರುತ್ತದೆ. ಮೂರನೆಯದಾಗಿ ಕೇವಲ ಇಂದ್ರಿಯಜ್ಞಾನವೇ ಪ್ರಧಾನವಾಗಿ ರುವ ಬುದ್ಧಿಯು ಪ್ರಾಣವನ್ನು ಗ್ರಹಿಸಲಾರದೆಂಬುದನ್ನು ಅನುಭವದ ಸಾಕ್ಷಿಯಿಂದ ತಿಳಿಸಿಕೊಟ್ಟಿರುವದರಿಂದ ಮನೋಗ್ರಾಹ್ಯವಾಗದೆ ಇರುವ ತತ್ತ್ವವೂ ಇರಬಹುದೆಂದು ಹೇಳುವ ವಾದಕ್ಕೆ ಇದೊಂದು ಹೆಜ್ಜೆಯಾಗಿರುತ್ತದೆ. ಇಲ್ಲಿಯವರೆಗೆ ಬರ್ಗ್ಸನ್ನರವರ ಸಿದ್ಧಾಂತವನ್ನು ಸಹಾನುಭೂತಿಯಿಂದ ತಿಳಿದುಕೊಳ್ಳುವವರಿಗೆ

ನಮ್ಮ ದೇಶದ ವೈದಿಕಸಿದ್ಧಾಂತದಿಂದ ತೆಗೆದ ಪ್ರಾಣಾಕ್ಯೋಪಾಸನೆಯನ್ನೂ ಕೇವಲ ಅವಸ್ಥಾತ್ರಯಪರೀಕ್ಷೆಯ ಅನುಭವದಿಂದ ಸಾಧಿಸುವ ಪರಮಾರ್ಥಾದ್ವೈತ ಸಿದ್ಧಾಂತವನ್ನೂ ಬೋಧಿಸುವದು ಬಹಳ ಸುಲಭವಾಗಿರುವದೆಂದು ನಮ್ಮ ದೃಢಭಾವನೆಯಿದೆ. ಪರಿಪಕ್ವವಾದ ಇಂಥ ಬುದ್ಧಿಸಂಸ್ಕಾರವುಳ್ಳ ತತ್ತ್ವವಿಮರ್ಶಕರು ಜಗತ್ತಿನ ಯಾವ ಭಾಗದಲ್ಲಿದ್ದರೂ ಪೂಜ್ಯರೇ ಆಗಿರುತ್ತಾರೆ. ಅಂತ ಪೂಜ್ಯ ಜ್ಯೋತಿಗಳ ನಿರ್ಮಲಾಕಾಶದಲ್ಲಿ ಹೆನ್ರಿ ಬರ್ಗ್ಸನ್ನರವರಿಗೆ ಒಂದು ಅಸಾಧಾರಣ ಸ್ಥಾನವುಂಟಾಗಿರುತ್ತದೆ. ಭಗವಂತನಿಗೆ ತತ್ತ್ವಜಿಜ್ಞಾಸುಗಳಲ್ಲಿ ಹೆಚ್ಚಿನ ಪ್ರೇಮವುಂಟೆಂದು ಶಾಸ್ತ್ರಗಳು ಮೊಳಗುತ್ತವೆ. ದಿವಂಗತರಾಗಿರುವ ಶ್ರೀ ಬರ್ಗ್ಸನ್ನರವರ ಜೀವಕ್ಕೆ ಕರುಣಾಳುವಾದ ಆ ಭಗವಂತನು ಶಾಂತಿಯನ್ನೀಯಲಿ- ಎಂಬುದೇ ನಮ್ಮ ಪ್ರಾರ್ಥನೆ.

★★★★★

# ಇಸ್ಲಾಂಮತ

## ಇಸ್ಲಾಂ ಎಂದರೇನು?

### (‘ದಿನ್ಯೂಏಜ್’ ಎಂಬ ಪತ್ರಿಕೆಯಲ್ಲಿ ಶ್ರೀಯುತ ಎಂ ಯು ಅಬ್ಬಾಸಿ ಇವರು ಬರೆದಿರುವದು)

ದಿನಕ್ಕೆ ಐದು ಸಲ ನಮಾಜುಮಾಡಿ ಒಂದು ತಿಂಗಳು ಉಪವಾಸಮಾಡಿದ ಮಾತ್ರದಿಂದ ನಿಜವಾದ ಮುಸಲಮಾನನೆನಿಸಬಹುದಾದರೆ, ಇದಕ್ಕಿಂತ ಸುಲಭವಾದದ್ದು ಮತ್ತೆ ಯಾವದೂ ಇಲ್ಲ. ಆದರೆ ನಿಜವಾಗಿ ಇಷ್ಟು ಮಾತ್ರದಿಂದ ನಾನು ಪ್ರವಾದಿಯ ಮೆಚ್ಚಿನ ಅನುಯಾಯಿಯಾದೇನೇನು? ಕವಾಯತುಮಾಡುವದು, ವ್ಯವಸ್ಥೆಗೆ ಸರಿಯಾಗಿರುವದು - ಇವೆರಡರಲ್ಲಿಯೂ ಶೀಪಾಯಿಯಾದವನು ನೆಟ್ಟಗೆ ಕ್ರಮತಪ್ಪದೆ ಇರಬೇಕಾಗುತ್ತದೆ. ಇವುಗಳನ್ನು ಒಂದಿಷ್ಟೂತಪ್ಪದೆ ಅವನು ನಡೆಸಿಕೊಂಡು ಬಂದಿರುತ್ತಾನೆ. ಆದರೆ ಯುದ್ಧರಂಗದಲ್ಲಿ ಅವನಿಗೆ ತನ್ನ ಶಕ್ತಿಯನ್ನು ತೋರಿಸುವ ಧೈರ್ಯವು ಸಾಲದೆ ಹೋದರೆ, ಅವನ ಇದುವರೆಗಿನ ಕವಾಯತಿಗೂ, ವ್ಯವಸ್ಥೆಗೂ - ಯಾವದಕ್ಕೂ ಏನೂ ಬೆಲೆಯಿರುವದಿಲ್ಲ; ಅವನು ಎಷ್ಟೋ ವರ್ಷಗಳಿಂದ ಶೀಪಾಯಿಯೆಂದು ಕರೆಯಿಸಿಕೊಂಡು ಬಂದಿರುತ್ತಾನಾದರೂ ಈ ಸಾಧನಗಳಿಂದೇನೂ ಅವನು ನಿಜವಾದ ಶೀಪಾಯಿಯೆನಿಸಿಕೊಳ್ಳಲಾರನು. ತನ್ನ ಜನ್ಮವೆಲ್ಲ ನಮಾಜುಮಾಡಿ ಉಪವಾಸಮಾಡಿದ್ದರೂ ಯುದ್ಧ ಕಾಲಕ್ಕೆ ಪರೀಕ್ಷೆಗೆ ನಿಲ್ಲಲಾರದೆ ಹೋಗುವವನ ವಿಷಯವೂ ಹೀಗೆಯೇ.

ಸತ್ಯಕ್ಕೆ ಸಾಕ್ಷಿಯೇನೆಂದರೆ ಅದು ವ್ಯವಹಾರದಲ್ಲಿ ಉಪಯೋಗವಾಗುವದು. ಆದ್ದರಿಂದ ಇಸ್ಲಾಂಧರ್ಮವು ಸತ್ಯದ ಆಧಾರದ ಮೇಲೆ ನಿಂತಿರುವದಾದರೆ, ಅದರ ನಿಜವನ್ನು ಮಾತಿನಿಂದ ತೋರಿಸಿದರೆ ಸಾಲದು; ನಮ್ಮ ದಿನ ದಿನದ ವ್ಯವಹಾರದಲ್ಲಿ ತೋರಿಸಿಕೊಡಬೇಕು.

ಯಾವಾತನ ಧರ್ಮವು ಶಾಂತಿಯನ್ನೇ ಬೋಧಿಸುವದೋ ಆ ಪೈಗಂಬರನ ಅನುಯಾಯಿಗಳೆಲ್ಲಿರುವರು? ಇಸ್ಲಾಂ ಎಂಬ ಮಾತಿಗೆ

ಶಾಂತಿಯೆಂದೇ ಅರ್ಥವು. ಇವರು ಹೆಚ್ಚು ಶಾಂತಿಯನ್ನುಂಟುಮಾಡಿರುವರೋ ಯುದ್ಧವನ್ನುಂಟುಮಾಡಿರುವರೋ? - ಇದೇ ನನ್ನ ಪ್ರಶ್ನೆ. ನನಗೆ ಇನ್ನೂ ಶಾಂತಿಯ ಕುರುಹುಗಳೇನೂ ಕಾಣಿಸುತ್ತಲ್ಲಿಲ್ಲ. ನಾನು ಮುಸಲಮಾನನು ಎಂದುಕೊಂಡು, ಐದು ನಮಾಜುಗಳನ್ನು ಮಾಡಿ, ರಮ್ಜಾನ್‌ಮಾಸದಲ್ಲಿ ಉಪವಾಸ ಮಾಡುವದೇನೋ ಸುಲಭವೇ ಸರಿ. ಆದರೆ ನಿಜವಾದ ಮುಸಲಮಾನನಾಗಿ ರುವದೆಂಬುದು ಬೇರೆ. ಅದಕ್ಕೆ ಬೇಕಾದದ್ದೇನೆಂದರೆ ಪರೀಕ್ಷೆಗೆ ಸಿದ್ಧನಾಗಿ ರುವದು. ಇಸ್ಲಾಂಧರ್ಮವು ತನ್ನ ಯೋಗ್ಯತೆಯನ್ನು ತೋರಿಸಿಕೊಳ್ಳುವದಕ್ಕೆ ಇದೇ ಸಮಯವು. ಏಕೆಂದರೆ ಎಲ್ಲೆಲ್ಲಿಯೂ ಅಶಾಂತಿಯು ತೋರುತ್ತಿರುವದು; ಎಲ್ಲೆಲ್ಲಿಯೂ ಯುದ್ಧದ ಕೂಗುಗಳೇ ಕೇಳಬರುತ್ತಿರುವವು. ಇಸ್ಲಾಂಧರ್ಮವು ಶಾಂತಿಯನ್ನು ತರಲಿ!

★★★★★

# ಮಹಮ್ಮದ್ ಪೈಗಂಬರನು

**- ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು**

ಹಿಂದೂಮತ, ಬೌದ್ಧಮತ, ಪಾರ್ಸಿಮತ, ಕನ್‌ಫೂಷಿಯಸ್‌ಮತ, ಯಹೂದ್ಯರ ಮತ, ಕ್ರಿಸ್ತಿಯನ್ ಮತ, ಮಹಮ್ಮದೀಯರ ಮತ - ಎಂಬ ಏಳು ಮತಗಳು ಜಗತ್ಪ್ರಸಿದ್ಧವಾಗಿವೆಯಷ್ಟೆ. ಭರತಖಂಡದಲ್ಲಿ ಈ ಎಲ್ಲಾ ಮತಗಳ ಅನುಯಾಯಿಗಳೂ ಕಂಡುಬರುವರಾದರೂ ಸದ್ಯಕ್ಕೆ ಜನಸಂಖ್ಯೆಯಲ್ಲಿ ಹಿಂದೂ ಮತದವರನ್ನು ಬಿಟ್ಟರೆ ಮಹಮ್ಮದೀಯರೇ ಮಿಕ್ಕವರೆಲ್ಲರಿಗಿಂತಲೂ ಹೆಚ್ಚಾಗಿ ರುವರು. ಈ ಮತದ ಸ್ಥಾಪಕನಾದ ಮಹಮ್ಮದ್ ಪೈಗಂಬರನ ಜಯಂತಿಯು ಈ ವರ್ಷದ ಆಷಾಢ ಶುದ್ಧ ಪೂರ್ಣಿಮೆಯ ದಿನ ಬರುವದು. ಆ ದಿನವು ಪ್ರಪಂಚದ ಮುಸಲ್‌ಮಾನರೆಲ್ಲರಿಗೂ ಪವಿತ್ರದಿನವಾಗಿರುವದು ಸ್ವಾಭಾವಿಕವೆ; ಆದರೆ ಮತಾಚಾರ್ಯದಲ್ಲಿ ಗೌರವವಿರುವ ಬೇರೆಯವರೂ ಈ ಮತಾಚಾರ್ಯನ ಇತಿಹಾಸವನ್ನೂ ಉಪದೇಶಗಳನ್ನೂ ಮನಸ್ಸಿಗೆ ತಂದುಕೊಳ್ಳುವದಕ್ಕೆ ಇದೊಂದು ಸುಸಂದರ್ಭವಾಗಿರುವದು.

ಮಹಮ್ಮದೀಯ ಮತವು ಐತಿಹಾಸಿಕಮತಗಳಲ್ಲೆಲ್ಲ ತೀರ ಈಚಿನದು, ಮಹಮ್ಮದನು ಹುಟ್ಟಿದ್ದು ಕ್ರಿ.ಶ. 521ರಲ್ಲಿ ತನ್ನ ಮತವನ್ನುಪದೇಶಮಾಡುವದಕ್ಕೆ ಮೊದಲು ಮಾಡಿದ್ದು ಅಲ್ಲಿಂದ ನಲವತ್ತು ವರ್ಷಗಳ ಈಚೆಗೆ. ಹಿರ ಎಂಬ ಪರ್ವತಗುಹೆಯಲ್ಲಿ ತಪಸ್ಸು ಮಾಡುತ್ತಿರುವಾಗ ಗೇಬ್ರೀಲ್ ಎಂಬ ದೇವದೂತನು ಆತನಿಗೆ ದರ್ಶನವನ್ನಿತ್ತು 'ದೇವರು ನಿನ್ನನ್ನು ತನ್ನ ಕಡೆಯ ಮತಸಂದೇಶದನನ್ನಾಗಿ ಆರಿಸಿಕೊಂಡಿರುತ್ತಾನೆ. ಜನರಿಗೆಲ್ಲರಿಗೂ ಆತನ ಅಭಿಪ್ರಾಯವನ್ನು ಬೋಧಿಸು' ಎಂದು ಅಪ್ಪಣೆಮಾಡಿದನಂತೆ. ಅಂದಿನಿಂದ ಹದಿಮೂರು ವರ್ಷಗಳವರೆಗೆ ಮಹಮ್ಮದನು "ಪರಮೇಶ್ವರನು ಒಬ್ಬನೇ, ನಾನು ಆತನ ಕಡೆಯ ಪ್ರವಾದಿಯು; ನೀವು ವಿಗ್ರಹಪೂಜೆಯನ್ನೂ ನಿಮ್ಮಲ್ಲಿರುವ ದುರಾಚಾರಗಳನ್ನೂ ಕೂಡಲೆ ಬಿಟ್ಟು ಬಿಡಿ" ಎಂದು ಎಡೆಬಿಡದೆ ಬೋಧಿಸುತ್ತಾ ಬಂದನು. ಮಹಮ್ಮದನು ತಮ್ಮ ವಂಶದಲ್ಲಿಯೇ ಹುಟ್ಟಿದ್ದರೂ ತಮ್ಮ ಪೂರ್ವದ ಆಚಾರಗಳಿಗೇ ವಿರುದ್ಧವಾಗಿ ಬೋಧಿಸುತ್ತಿದ್ದುದನ್ನು ಕಂಡು ಮೆಕ್ಕದಲ್ಲಿದ್ದ ಕುರೇಷಿ ಜನರು ಅವನ ಮತದ ಪ್ರಸಾರಣೆಯನ್ನು ನಯಭಯಗಳಿಂದ ತಪ್ಪಿಸುವದಕ್ಕೆ ಪ್ರಯತ್ನಪಟ್ಟರು; ಆದರೆ ಅದು ಸಾಗಲಿಲ್ಲ. ಮಹಮ್ಮದನ ಮತವು ಅವರ ಕಾಟದಿಂದ ಹಾಳಾಗುವದಕ್ಕೆ ಬದಲಾಗಿ ದಿನದಿನಕ್ಕೂ ಹೆಚ್ಚುಹೆಚ್ಚಾಗಿ ಹಬ್ಬುತ್ತಾ ಹೋಯಿತು. ಮೊದಲು ಅವನ ಮನೆಯವರೂ ಆಮೇಲೆ ಮೆಕ್ಕದ ಮುಖ್ಯ ಜನರೂ ಈ ಹೊಸ ಮತವನ್ನು ಆವಲಂಬಿಸಿದರು.

ಮಹಮ್ಮದೀಯರ ಮತಕ್ಕೆ 'ಇಸ್ಲಾಂ' ಎಂದು ಹೆಸರು. ಇಸ್ಲಾಂ ಎಂದರೆ ಶಾಂತಿಯೆಂದರ್ಥ. ಮತವಿಚಾರದಲ್ಲಿ ಯಾರನ್ನೂ ಬಲಾತ್ಕರಿಸಕೂಡದೆಂಬುದೇ ಮಹಮ್ಮದನ ಮತವಾದ್ದರಿಂದ ಈ ಮತಕ್ಕೆ ಈ ಹೆಸರು ಬಂದಿದೆ. ಮಹಮ್ಮದನು ತನ್ನ ಐವತ್ತು ಮೂರನೆಯ ವರ್ಷದವರೆಗೆ ಶಾಂತರೀತಿಯಿಂದಲೇ ತನ್ನ ಮತವನ್ನು ಬೋಧಿಸುತ್ತಿದ್ದರೂ ಅವನ ಶತ್ರುಗಳು ಅವನ ಮತಕ್ಕೆ ಸೇರಿದವರನ್ನೂ ಅವನನ್ನೂ ಹಿಂಸಿಸುವದಕ್ಕೂ ಕೊಲ್ಲುವದಕ್ಕೂ ಯತ್ನ ಮಾಡಿದ್ದರಿಂದ ಆತನು ಕ್ರಿ.ಶ.622ರಲ್ಲಿ ಮದೀನಪಟ್ಟಣಕ್ಕೆ ಓಡಿಹೋಗಬೇಕಾಗಿಬಂದಿತು. ಈ ವರ್ಷದಿಂದ ಮಹಮ್ಮದೀಯರ 'ಹಿಜರಿ' ಎಂಬ ಶಕೆಯು ಪ್ರಾರಂಭವಾಯಿತು. ಮದೀನಪಟ್ಟಣಕ್ಕೆ ಹೋದ ಮೇಲೆ ಮಹಮ್ಮದನು ತನ್ನ ಮತಕ್ಕೆ ಸಾವಿರಗಟ್ಟಲೆಯಾಗಿ ಜನರನ್ನು ಸೇರಿಸಿಕೊಂಡನು. ಮುಂದೆ ಮೆಕ್ಕಪಟ್ಟಣವನ್ನೂ ಪ್ರವೇಶಿಸಿ ಅಲ್ಲಿದ್ದ ಕುರೇಷಿಗಳನ್ನು

ಸೆರೆಹಿಡಿದನು. ಆಮೇಲೆ ಅರಬ್ಬಿದೇಶದ ಸುತ್ತಮುತ್ತಲೂ ಇದ್ದ ರಾಜರುಗಳಿಗೆಲ್ಲ ತನ್ನ ಮತವನ್ನು ಅವಲಂಬಿಸುವಂತೆ ಸಂದೇಶಗಳನ್ನು ಕಳುಹಿಸಿದನು. ಕೆಲವರು ಈ ನಿರೂಪಗಳನ್ನು ಗೌರವಿಸಿದರು ಮತ್ತೆ ಕೆಲವರು ತಿರಸ್ಕರಿಸಿ ತಮ್ಮ ರಾಜ್ಯಗಳನ್ನು ಕಳೆದುಕೊಂಡರು, ಮಹಮ್ಮದನು ಈ ಸಂದರ್ಭದಲ್ಲಿ ಮಾಡಿದ ಯುದ್ಧಗಳು ಕೇವಲ ಆತ್ಮರಕ್ಷಣೆ ಮತ್ತು ಧರ್ಮರಕ್ಷಣೆಗೆ ಎಂದು ಮುಸಲಮಾನರ ಅಭಿಪ್ರಾಯ.

ಮಹಮ್ಮದೀಯಮತದಲ್ಲಿ **ನಿರಾಕಾರಸಗುಣದೇವರನ್ನು** ಅಂಗೀಕರಿಸಿರುತ್ತದೆ. ಈ ವಿಷಯದಲ್ಲಿ ಯಹೂದ್ಯರೂ ಕ್ರಿಸ್ತಿಯನರೂ ಮಹಮ್ಮದಿಯರೂ ಒಂದೇ ಅಭಿಪ್ರಾಯದವರಾಗಿರುತ್ತಾರೆ. ಮಹಮ್ಮದನಿಗೆ ವಿಗ್ರಹಾರಾಧನೆಯನ್ನು ಕಂಡರೆ ಸ್ವಲ್ಪವೂ ಒಗ್ಗದು. ಅವನು ಮೆಕ್ಕಪಟ್ಟಣವನ್ನು ವಶಮಾಡಿಕೊಂಡ ವರ್ಷವೇ ಆ ಪಟ್ಟಣದಲ್ಲಿಯೂ ಸುತ್ತಮುತ್ತಲೂ ಇದ್ದ ವಿಗ್ರಹಗಳನ್ನೆಲ್ಲ ಒಡೆಸಿಹಾಕಿದನು. ಕುರೇಷಿಯೆಂಬ ಮನೆತನದ ದಿಟ್ಟರೇ ಮಹಮ್ಮದನ ವಶವಾದದ್ದನ್ನು ಕಂಡು ಮಿಕ್ಕ ಅರಬ್ಬಿಯವರೂ ಶರಣಾಗತರಾಗಿ ಮುಸಲ್ಮಾನರಾದರು. ಹೀಗೆ ಮಹಮ್ಮದನ ಜೀವಿತಕಾಲದಲ್ಲಿಯೇ ವಿಗ್ರಹಾರಾಧನೆಯು ಆ ದೇಶದಲ್ಲಿ ನಿರ್ನಾಮವಾಯಿತು. ವಿಗ್ರಹವನ್ನೇ ದೇವರೆಂದು ಭಾವಿಸುವದು ಹಿಂದೂಮತಕ್ಕೂ ಒಪ್ಪಿಲ್ಲ; ಆದರೆ ವಿಗ್ರಹಗಳ ಮೂಲಕ ಭಗವಂತನನ್ನು ಆರಾಧಿಸಬೇಕೆನ್ನುವವರಿಗೂ ಆ ಮತದಲ್ಲಿ ಅನುಮತಿಯನ್ನು ಕೊಟ್ಟಿರುತ್ತದೆ. ಈ ಗುಟ್ಟನ್ನರಿಯದೆ ಅನೇಕ ಮುಸಲ್ಮಾನರು ಹಿಂದುಗಳನ್ನು ವಿಗ್ರಹಾರಾಧಕರೆಂದೇ ಭಾವಿಸುತ್ತಾರೆ. ಭಾರತದಲ್ಲಿರುವ ಮಹಮ್ಮದೀಯರಿಗೆ ವಿಗ್ರಹಗಳನ್ನು ಪೂಜೆಗೆ ಉಪಯೋಗಿಸುವ ಹಿಂದೂಭ್ರಾತೃಗಳ ಅಭಿಪ್ರಾಯವನ್ನು ತಿಳಿಯಹೇಳುವದು ಈ ದೇಶದ ಮುಂದಾಳುಗಳೆಲ್ಲರ ಕರ್ತವ್ಯವಾಗಿರುತ್ತದೆ.

ಇಸ್ಲಾಂಮತದಲ್ಲಿ ಒಂದು ವಿಶೇಷವೇನೆಂದರೆ ಈ ಮತವು ಹುಟ್ಟುವಾಗ ಪ್ರವರ್ತಕನಾದ ಆಚಾರ್ಯನೊಡನೆಯೇ **ಮತಗ್ರಂಥವೂ** ಹೊರಕ್ಕೆ ಬಂದಿತು. ಈ ಮತದ ಮೂಲಗ್ರಂಥಕ್ಕೆ **ಕುರಾನ್** ಎಂದು ಹೆಸರು. ಇದರ ಕೆಲವು ಭಾಗಗಳನ್ನು ಮೆಕ್ಕದಲ್ಲಿಯೂ ಕೆಲವು ಭಾಗಗಳನ್ನು ಮದೀನದಲ್ಲಿಯೂ ತನಗೆ ಪರಮೇಶ್ವರನ ದೂತನು ತಂದುಕೊಟ್ಟು ಅನುಗ್ರಹಿಸಿದನೆಂದು ಮಹಮ್ಮದನು ಆಗಿನ ಜನರಿಗೆ ಆಗಿಂದಾಗ್ಗೆ ತಿಳಿಸುತ್ತಾ ಬಂದನು. ಅವನ ಶತ್ರುಗಳು ಈ ವಚನಗಳೆಲ್ಲವೂ ಅವನಿಂದಲೇ ಕಲ್ಪಿತವಾದವುಗಳೆಂದು ಅಭಿಪ್ರಾಯಪಟ್ಟರಾದರೂ ಮಹಮ್ಮದನು

ನಿರಕ್ಷರಕುಕ್ಷಿಯಾದ್ದರಿಂದ ಕುರಾನಿನಂಥ ಉದ್ಗ್ರಂಥವನ್ನು ರಚಿಸಿರಲಾರನೆಂಬುದರ ಮೇಲೆ ಆ ಪವಿತ್ರಗ್ರಂಥವು ದೈವಿಕವಾಣಿಯೆಂಬುದನ್ನು ಬಹು ಜನರು ಬೇಗ ನಂಬಿಬಿಟ್ಟರು. ಕುರಾನಿನ ಭಾಷೆಯು ಬಹುಶುದ್ಧವಾಗಿದೆ, ಶೈಲಿಯಲ್ಲಿಯೂ ಶಬ್ದಗಳ ಜೋಡಣೆಯಲ್ಲಿಯೂ ನಿರತಿಶಯವಾಗಿದೆ, ಮನೋಹರವಾದ ಶಬ್ದವೈಚಿತ್ರ್ಯದಿಂದಲೂ ಕೂಡಿರುತ್ತದೆ.

1. ''ದೇವರು ಒಬ್ಬನೇ, ಜಗತ್ತಿಗೆ ದೇವರಲ್ಲದೆ ಮತ್ತೊಂದು ಕಾರಣವೂ ಉಂಟೆಂದು ನಂಬುವದು ಪಾಪಕರ, ಆತನ ಸಂಕಲ್ಪಕ್ಕೆ ಅನುಗುಣವಾಗಿ ನಡೆದುಕೊಳ್ಳುವವರೇ ಮುಸ್ಲಿಮರು'' – ಎಂಬುದು **ಕುರಾನಿನ ಮುಖ್ಯೋಪದೇಶವು.**

2. ''ನಿಜವಾದ ಧರ್ಮವೆಂಬುದು ಒಂದೇ, ಈ ಧರ್ಮವನ್ನು ಬೋಧಿಸಿರುವ ಆಚಾರ್ಯರೂ ಋಷಿಗಳೂ ಎಲ್ಲರೂ ಮುಸ್ಲಿಮರೇ. ಈ ಧರ್ಮವನ್ನು ಆಗಿಂದಾಗ್ಗೆ ಉಜ್ಜೀವನಗೊಳಿಸುವದಕ್ಕೆಂದು ದೇವರು ಹಿಂದೆ ಅನೇಕ ಮತಾಚಾರ್ಯರನ್ನು ಕಳುಹಿಸಿದ್ದನು; ಅವರಲ್ಲಿ ಮೋಸಸ್, ಜೀಸಸ್ – ಎಂಬುವರು ಮುಖ್ಯರು; ಮಹಮ್ಮದನೇ ಕಟ್ಟಕಡೆಯವನು; ಪ್ರತಿಯೊಂದು ಜನಾಂಗಕ್ಕೂ ಒಬ್ಬೊಬ್ಬ ದೇವರ ಕಡೆಯ ಮತಾಚಾರ್ಯನು ಬಂದೇ ಇರುತ್ತಾನೆ'' – ಎಂಬುದು ಇಸ್ಲಾಂಮತದ **ಎರಡನೆಯ** ಉಪದೇಶವು.

3. ''ಪರಮೇಶ್ವರನು ಪ್ರಲಯಾಂತ್ಯದಲ್ಲಿ ಜೀವರ ಪಾಪಪುಣ್ಯಗಳನ್ನು ವಿಚಾರಮಾಡಿ ಆಯಾ ಜೀವನ ಪಾಪಪುಣ್ಯಗಳಿಗೆ ತಕ್ಕಂತೆ ದಂಡವನ್ನೋ ಸ್ವರ್ಗಸೌಖ್ಯವನ್ನೋ ಅವನವನಿಗೆ ಕೊಡುವನು'' – ಎಂಬುದು ಈ ಮತದ **ಮೂರನೆಯ** ಉಪದೇಶವು.

4. ''ಪ್ರಾರ್ಥನೆ, ಉಪವಾಸ, ದಾನ, ಮೆಕ್ಕಾಯಾತ್ರೆ– ಇವುಗಳನ್ನು ಶಾಸ್ತ್ರದಲ್ಲಿ ಹೇಳಿರುವಂತೆ ನಡೆಯಿಸುವದೇ ಸಾಧನವು. ಈ ಸಾಧನವನ್ನು ಸರಿಯಾಗಿ ಶ್ರದ್ಧೆಯಿಂದ ನಡೆಸಿದವರಿಗೆ ದೇವರ ಅನುಗ್ರಹವಾಗುವದು'' – ಎಂಬುದು ಈ ಮತದ **ನಾಲ್ಕನೆಯ** ಉಪದೇಶವು.

ಮುಸಲ್ಮಾನರ ಮತವು ಮಹಮ್ಮದನ ಜೀವಿತಕಾಲದಲ್ಲಿಯೇ ಬೇಕಾದಷ್ಟು ಬೆಳೆದಿತ್ತು; ಆತನು ಕ್ರಿ.ಶ.632ರಲ್ಲಿ ದೇಹವನ್ನು ಬಿಟ್ಟು ಹೋದ ತರುವಾಯ

ಬಂದ **ಖಲೀಫರ** ವಿಜಯಯಾತ್ರೆಗಳಿಂದ ಪಶ್ಚಿಮ ಏಷಿಯಾ, ಉತ್ತರ ಆಫ್ರಿಕಾ, ಯೂರೋಪಿನ ಕೆಲವು ಭಾಗಗಳು – ಈ ಕಡೆಗಳಿಗೂ ಅದು ಹಬ್ಬುವಂತಾಯಿತು. ಈ ಮತವು ಇಂಡಿಯದೇಶಕ್ಕೂ ಕಾಲಕ್ರಮದಲ್ಲಿ ಬಂದು ಇಲ್ಲಿನ ಬಹುಜನರನ್ನು ಆಕ್ರಮಿಸಿಕೊಂಡಿರುವದು ನಮಗೆಲ್ಲರಿಗೂ ಪ್ರತ್ಯಕ್ಷವಾಗಿಯೇ ಇದೆ.

ಇಂಡಿಯದಲ್ಲಿರುವ ಹಿಂದುಗಳಿಗೂ ಮುಸಲ್ಮಾನರಿಗೂ ಮತದ ನೆಪದಿಂದ ಆಗಾಗ್ಗೆ ಜಗಳವಾಗುವಂತೆ ಕಾಣುತ್ತಿದ್ದರೂ ಆ ಜಗಳಕ್ಕೆ ಕಾರಣವು ಇವರ ಧರ್ಮಗಳ ಸಿದ್ಧಾಂತದಲ್ಲಿರುವ ತಾರತಮ್ಯಗಳೇನೂ ಅಲ್ಲವೆಂಬುದು ವಿಚಾರಕರಿಗೆ ಹೊಳದೇ ಇದೆ. ಹಿಂದೂಧರ್ಮದ ಮತ್ತು ಇಸ್ಲಾಂಧರ್ಮದ ನಂಬಿಕೆಗಳಲ್ಲಿಯೂ ಆಚಾರವಿಚಾರಗಳಲ್ಲಿಯೂ ಇರುವ ಸಾಮ್ಯವೈಷಮ್ಯಗಳನ್ನು ಕುರಿತ ತಿಳಿವಳಿಕೆಯನ್ನು ಜನರಲ್ಲಿ ಶಾಂತರೀತಿಯಿಂದ ಹಬ್ಬಿಸುತ್ತಾ ಬರುವದಲ್ಲದೆ ಈ ಎರಡು ಮತದವರೂ ಅಣ್ಣ ತಮ್ಮಂದಿರಂತೆಯೇ ಇದ್ದುಕೊಂಡು ತಮ್ಮ ತಮ್ಮ ಮತಾಚಾರಗಳನ್ನು ಅನುಸರಿಸುವದಕ್ಕೆ ಯಾವ ಆಡ್ಡಿಯೂ ಇಲ್ಲವೆಂಬುದನ್ನು ಮನಗಾಣಿಸುವದು ಅತ್ಯಗತ್ಯವು.

★★★★★

# ಜೀವನದ ಬೆಳಕು

## (ಡಾಕ್ಟರ್ ಬಿ.ಎ.ಫರೂಕಿಯವರು ''ಮುಸ್ಲಿಮ್ ರಿವೈವಲ್'' ಪತ್ರಿಕೆಯಲ್ಲಿ ಬರೆದಿರುವದರ ಸರಳಾನುವಾದ)

1. ಸೆಳೆತಕ್ಕೆ ಸಿಕ್ಕಿ ಆಳವಾಗಿ ಮುಳುಗುವವರನ್ನು ನೋಡಿರಿ.
2. ಮತ್ತು ಯಾರು ಸಂತೋಷದಿಂದ ಮುಂದುವರಿಯುವರೋ ಅವರನ್ನೂ (ನೋಡಿರಿ).
3. ಮತ್ತು ಯಾರು ಈಸಾಡಿಕೊಂಡು ಹೋಗುವರೋ ಅವರನ್ನೂ (ನೋಡಿರಿ).
4. ಆಮೇಲೆ ಯಾರು ಮಿಕ್ಕವರನ್ನು ಮೀರುವರೋ ಅವರನ್ನೂ (ನೋಡಿರಿ).

5. ಆಮೇಲೆ ಯಾರು ಸ್ವಾಧೀನದಲ್ಲಿಟ್ಟು ಕೊಂಡಿರುವರೋ ಅವರನ್ನೂ (ನೋಡಿರಿ). **-ಕೊರಾನ್ 79-1-5**

ಮನಸ್ಸನ್ನು ಮೇಲಕ್ಕೆ ಹಿಡಿದೆತ್ತಿ ಈ ಭೂಲೋಕದ ವ್ಯವಹಾರದಲ್ಲಿ ಕೂಡ ಅತ್ಯಂತ ಮೇಲಿನ ಕೋಡುಗಲ್ಲನ್ನು ಮುಟ್ಟಿಸುವದೇ ಇಸ್ಲಾಂ ಮತದ ಸಂದೇಶದ ಉದ್ದೇಶಗಳಲ್ಲಿ ಒಂದಾಗಿರುವದು. ದೊಡ್ಡವನಾಗಿ ಹೆಸರುವಾಸಿಯನ್ನು ಬೇಗ ಪಡೆಯುವದಕ್ಕೆ ಕೂಡಲೆ ಮಜಲನ್ನು ಮುಟ್ಟಿಸುವ ಒಳದಾರಿ ಯಾವದೂ ಇರುವದಿಲ್ಲ. ಇದಕ್ಕೆ ಒಂದೇ ಒಂದು ಗೊತ್ತಾದ ಮಾರ್ಗವಿರುವದು; ಅದೇ **''ಸಿರಾತ್-ಇ-ಮುಸ್ತಕೀಮ್''** ಎಂಬುದು. ಈ ಹಾದಿಯು ಎಷ್ಟು ಕಠಿನವಾಗಿ ರಲಿ, ಎಷ್ಟು ತಗ್ಗುತಿಟ್ಟುಗಳಿಂದ ಕೂಡಿರಲಿ, ಮೇಲಿನ ಉದ್ದೇಶದಿಂದ ಹೊರಟವನು ಈ ಮಾರ್ಗದಲ್ಲಿಯೇ ನಡೆಯಬೇಕು, ಇಲ್ಲದಿದ್ದರೆ ಅವರು ದಾರಿತಪ್ಪಿ ಕಾಡಿನಲ್ಲಿ ಮುಂಗಾಣದೆ ಹೋಗುವದು ಖಂಡಿತ. ಈ ಪ್ರಪಂಚದಲ್ಲಿ ಒಂದಾನೊಂದು ವ್ಯವಸ್ಥೆಯಿದೆ; ಇದರಲ್ಲಿ ಎಲ್ಲವೂ ಕಾರ್ಯಕಾರಣಭಾವವೆಂಬ ಸರಪಳಿಯಿಂದ ಕಟ್ಟುಪಡೆದಿರುತ್ತದೆ. ಯಾವದಾದರೊಂದು ಅಭೀಷ್ಟವನ್ನು ಪಡೆಯಬೇಕಾದರೆ, ಅದಕ್ಕಾಗಿ ಈಶ್ವರನು ಹಾಕಿಕೊಟ್ಟಿರುವ ಕಿತ್ತೆಯನ್ನು ತೀಡುವದಲ್ಲದೆ ಬೇರೆ ಯಾವ ಉಪಾಯವೂ ಇಲ್ಲ. ಹೀಗೆಂಬುದು ಕುರಾನಿನ ಸಿದ್ಧಾಂತವು. ಈ ಲೇಖನದಲ್ಲಿ ನಾವು ವಿಷಯವಾಕ್ಯವಾಗಿ ತೆಗೆದುಕೊಂಡಿರುವ ಪಂಚಸೂಕ್ತಗಳೂ ಮನುಷ್ಯನು ಪರಮಪುರುಷಾರ್ಥವನ್ನು ಹೊಂದುವ ರಾಜಮಾರ್ಗವನ್ನು ಭಗವಂತನು ತೋರಿಸಿರುವ ಇಂಥ ಪ್ರಕಾರಗಳಲ್ಲಿ ಒಂದಾಗಿದೆ.

ಈ ರಾಜಮಾರ್ಗದಲ್ಲಿ ಐದು ಗೊತ್ತಾದ ಮಜಲುಗಳಿರುವವು. ಜೀವನಕ್ರಮದಲ್ಲಿ ಯಾವದೊಂದು ಕಾರ್ಯದಲ್ಲಿಯೇ ಆಗಲಿ ಮನುಷ್ಯನು ಕೃತಕೃತ್ಯನೆನಿಸುವದಕ್ಕೆ ಇವನ್ನು ಮುಟ್ಟಿಯೇ ತೀರಬೇಕು.

**''ವನ್ನಾಖ ಆತಿ ಗರಖನ್''**- ಇದು ಮೊದಲನೆಯ ಮಜಲು 'ನಸ' ಎಂದರೆ ಎಳೆಯುವದು. 'ಘಖ್'- ಎಂದರೆ ಏತರಲ್ಲಾದರೂ ಮುಳುಗುವದು. ಯಾರು ತಮ್ಮ ಕಾರ್ಯದಲ್ಲಿರುವ ಪ್ರೇಮದ ಸೆಳತಕ್ಕೆ ಸಿಕ್ಕಿ, ಎಂದರೆ ಸೇರಿಹೋಗಿ ಅದರಲ್ಲಿಯೇ ಮುಳುಗಿರುವರೋ ಅವರನ್ನು ನೋಡಿರಿ - ಎಂಬುದು ಈ ಸೂಕ್ತಿಯ ಅಭಿಪ್ರಾಯವು. ತಿಳಿದವರು ತಾವು ಯಾವ ಕೆಲಸವನ್ನು ಕೈಗೊಂಡರೂ

ಅದರಲ್ಲಿ ಪೂರ್ಣಾಭಿಮಾನವನ್ನು ಹೊಂದಿ ಅದರಲ್ಲಿಯೇ ಮಗ್ನರಾಗಿಬಿಡುತ್ತಾರೆ, ಅದರಲ್ಲಿಯೇ ಸೇರಿಹೋಗಿರುತ್ತಾರೆ. ಆದ್ದರಿಂದ ಯಾವ ಕಾರ್ಯವಾಗಲಿ ಸಫಲವಾಗಬೇಕಾದರೆ ಮೊಟ್ಟಮೊದಲು ಅವಶ್ಯಕವಾಗುವದೇನೆಂದರೆ, ಅದರಲ್ಲಿಯೇ ನಿಮ್ಮ ಮನಸ್ಸನ್ನೆಲ್ಲ ಹಾಕಬೇಕು.

ಆದರೆ ಈ ಮೊದಲನೆಯ ಮಜಲಿನಲ್ಲಿ ಮನುಷ್ಯನು ಎಡೆಬಿಡದೆ ಪ್ರಯತ್ನ ಮಾಡುತ್ತಿರಬೇಕಾಗುವದು; ಮನಸ್ಸನ್ನು ಅತ್ತಿತ್ತ ಸೆಳೆಯುವ ಯಾವದೊಂದು ವಿಕ್ಷೇಪಕ್ಕೂ ಒಳಗಾಗದಂತೆ ಹೆಣಗಾಡುತ್ತಲೇ ಇರಬೇಕಾಗುವದು. ಆದ್ದರಿಂದ ಇಷ್ಟೇ ಸಾಲದು, ಎರಡನೆಯ ಸೂಕ್ತಿಯಲ್ಲಿ ಹೇಳಿರುವ ಮುಂದಿನ ಮಜಲನ್ನೂ ಮುಟ್ಟುವದು ಅವಶ್ಯಕವು. ''**ವನ್ನಾಶಿ ಅತಿ ನಶ್ತನ್**'' ಇದರ ತಾತ್ಪರ್ಯವೇನೆಂದರೆ, ಕೆಲಸವು ಕೆಲಸವಾಗಿರಬಾರದು; ಅದು ಒಂದು ಬಗೆಯ ಆನಂದವಾಗಬೇಕು. ತನ್ನ ಕೆಲಸದಲ್ಲಿ ತೊಡಗಿರುವದಕ್ಕೆ ಮೊದಲನೆಯ ಮಜಲಿನಲ್ಲಿ ಬೇಕಾಗಿರುವಂತೆ ಯಾವದೊಂದು ಪ್ರಯತ್ನವೂ ಬೇಕಾಗಬಾರದು. ಯಾವದರಲ್ಲಿಯೇ ಆಗಲಿ ಒಂದೇ ಸಮನೆ ಮನಸ್ಸಿಟ್ಟವೆಂದರೆ ಅದರಲ್ಲಿ ಪ್ರೇಮವುಂಟಾಗುವದು. ಆಮೇಲೆ ನಾವು ಮಾಡುವ ಕೆಲಸವೊಂದು ತಾನೇ ಒಂದು ಬಗೆಯ ಆನಂದವಾಗಿ ಬಿದುವದು; ಎಂದರೆ ಆಗ ನಾವು ಕೆಲಸಕ್ಕಾಗಿಯೇ ಕೆಲಸಮಾಡಲು ಮೊದಲುಮಾಡುವೆವು, ಅದನ್ನು ಮಾಡುವದರಿಂದ ನಮಗೆ ಆನಂದವಾಗುವದು. ಕೆಲಸವು ಕಷ್ಟವಾಗಿ ತೋರುವದರ ಬದಲು ಹೀಗೆ ಆನಂದವಾಗಿ ತೋರುವದು ಎರಡನೆಯ ಮಜಲು.

ಆಮೇಲೆ ಮೂರನೆಯ ಮಜಲು ''**ವಸ್ಸಾಬಿ ಅತಿ ಸಬಹನ್**'' ಎಂದರೆ ತನ್ನ ಕೆಲಸದಲ್ಲಿ ಈಸಾಡಿಕೊಂಡು ಹೋಗುವ ಸ್ಥಿತಿ. ಈ ಸ್ಥಿತಿಯಲ್ಲಿ ಒಂದು ಸಲ ಹೀಗೆ ನೋಡಿದರೆ ಸಾಕು, ಎಲ್ಲವೂ ತಿಳಿದುಬರುತ್ತದೆ; ಕೆಲಸದಲ್ಲಿ ಯಾವದೊಂದು ತೊಡಕಾಗಲಿ ಆಡಚಣೆಯಾಗಲಿ ತೋರಿಬರುವದೇ ಇಲ್ಲ. ನೀರಿನಲ್ಲಿ ಈಜಾಡಿಕೊಂಡು ಹೋಗುವ ಹಾಗೆ ಬೇಗಬೇಗನೆ ಕೆಲಸವನ್ನು ಮಾಡಿಕೊಂಡು ಹೋಗುವವನೇ ದಕ್ಷನಾಗುವವನು.

ಈ ಮಜಲುಗಳನ್ನೆಲ್ಲ ದಾಟಿದ ಮೇಲೆ ಆಗುವದೇನು? ಎಂದರೆ '**ಫಸ್ಸಾಬಿ ಖಾತಿ ಸಬಖನ್**', '**ಫಲ್ ಮುದಬ್ಬಿರಾತಿ ಅಮರನ್**' ಇದರ ಅರ್ಥವೇನೆಂದರೆ ಇಂಥವನು ಮಿಕ್ಕವರೆಲ್ಲರನ್ನೂ ಮೀರಿರುತ್ತಾನೆ; ಇಷ್ಟೇ ಅಲ್ಲ, ಅವನೇ ಎಲ್ಲರಿಗೂ

ಮೇಲುಪಙ್ಕ್ತಿಯೆನಿಸಿಕೊಂಡು ತಾನು ಹೇಳಿದಂತೆಯೇ ಎಲ್ಲವೂ ನಡೆಯುವಂತೆ ತನ್ನ ಅಧೀನಕ್ಕೆ ತೆಗೆದುಕೊಂಡು ಬಿಡುತ್ತಾನೆ.

ಅಂತೂ ಕಾರ್ಯವು ಸಫಲವಾಗುವದಕ್ಕೆ ಐದು ಮೆಟ್ಟಿಲಗಳುಂಟೆಂದು ಕುರಾನಿನ ಉಪದೇಶವಘ: (1) ಪೂರ್ಣಶ್ರದ್ಧೆ, (2) ಕೆಲಸವನ್ನು ಒಂದು ಆನಂದವಾಗಿ ಮಾಡಿಕೊಳ್ಳುವದು, (3) ಕೆಲಸದಲ್ಲಿ ದಕ್ಷನೆನಿಸಿಕೊಳ್ಳುವದು, (4) ಮಿಕ್ಕವರನ್ನು ಮೀರಿಸುವದು, (5) ಎಲ್ಲರಿಗೂ ಆದರ್ಶನಾಗುವದು.

ಈ ಕಡಿದಾದ ದಾರಿಯಲ್ಲಿಯೇ ಪೂರ್ವದ ಇಸ್ಲಾಮಿಗಳು ಮೆಟ್ಟಿಲು ಮೆಟ್ಟಿಲಾಗಿ ಮೆಲ್ಲಗೆ ಹತ್ತಿ ದೊಡ್ಡಸ್ತಿಕೆಯೆಂಬ ದೇವಾಲಯವನ್ನು ಸೇರಿದರು; ಮೊದಲು ಕೀಳುಜನರೆಂದೆನಿಸಿಕೊಂಡಿದ್ದವರು ದೊಡ್ಡದೊಂದು ನಾಗರಿಕತೆಯ ನಿರ್ಮಾಣಕರ್ತರೆನಿಸಿದರು; ಮಾನವಕುಲದವರ ಪ್ರಗತಿಯ ಮಾರ್ಗವು ಯಾವದೆಂಬುನ್ನು ಎಷ್ಟೋ ಶತಮಾನಗಳವರೆಗೆ ಮಿಕ್ಕವರಿಗೆ ತೋರಿಸಿಕೊಡುವ ನಾಯಕರಾದರು. ಇಸ್ಲಾಂಮತವು ತಲೆದೋರುವ ಮೊದಲು ತಮ್ಮಲ್ಲಿದ್ದ ದುರಾಚಾರಗಳನ್ನೂ ದುಷ್ಟಪದ್ಧತಿಗಳನ್ನೂ ಅತ್ತೊಗೆದು ಅವರು ಆತ್ಮಶುದ್ಧಿಯ ಕಾರ್ಯವನ್ನು ಮನಃ ಪೂರ್ವಕವಾಗಿ ಕೈಗೊಂಡರು. ಆಮೇಲೆದ ಸತ್ಯಕ್ಕಾಗಿ ಸಂತೋಷದಿಂದ ಸ್ವಾರ್ಥತ್ಯಾಗವನ್ನು ಮಾಡಿ ಅದಕ್ಕಾಗಿ ತಮ್ಮ ಪ್ರಾಣವನ್ನು ಕೂಡ ನಗೆ ಮುಖದಿಂದಲೇ ಒಪ್ಪಿಸುವರಾದರು. ಆಮೇಲೆ ಅವರು ಒಟ್ಟು ಜನಾಂಗವಾಗುವದಕ್ಕೆ ಬೇಕಾದ ಸಾಧನವನ್ನೆಲ್ಲ ಮಾಡಿದರು. ಇದಕ್ಕೆ ಫಲವಾಗಿ ಕೆಲವು ದಶಕಗಳೊಳಗಾಗಿಯೇ ರೋಮಕರ ಮತ್ತು ಪರ್ಷಿಯನರ ಚಕ್ರಾಧಿಪತ್ಯಗಳು ಅವರ ಕಾಲಿಗೆ ಅಡ್ಡಬಿದ್ದವು. 'ಸ್ವರಾಜ್ಯ' 'ಸ್ವರಾಜ್ಯ'ವೆಂದು ಕೂಗುತ್ತಿರುವರು ಇಗೋ, ಇದನ್ನು ನೋಡಿ ಕಲಿತುಕೊಳ್ಳಬೇಕು. ಸ್ವರಾಜ್ಯವೆಂಬುದು ಯಾರಾದರೂ ಧಾರೆಯೆರೆದು ಕೊಡುವ ದಾನವಲ್ಲ, ಯಾರನ್ನಾದರೂ ಬೇಡಿ ತರುವ ವಸ್ತುವೋ ಅಲ್ಲ. ಮೇಲೆ ವಿವರಿಸಿರುವ ರೀತಿಯಲ್ಲಿ ಜನಾಂಗವೆಲ್ಲ ಸಾಧನಮಾಡಬೇಕು. ಮೇಲೆ ವರ್ಣಿಸಿರುವ ಬೇರೆಬೇರೆ ಅಂತಸ್ತುಗಳನ್ನು ಮುಟ್ಟುವಂತೆ ನಮ್ಮನಮ್ಮೊಳಗೆ ನಾವು ಮಾಡಿಕೊಳ್ಳುವ ಪ್ರಯತ್ನ ವಿಶೇಷದಿಂದಲೇ ಅದು ಬರಬೇಕಾಗಿರುವದು.

★★★★★

# ಮಹಮ್ಮದ್ ಪೈಗಂಬರನ ಕೆಲವು ಸೂಕ್ತಿಗಳು

## (ಶ್ರೀಯುತ ಮಹಮದ್ ಮನ್ಸೂರ್ ಇಲಾಹಿ ಎಂಬುವರ ಇಂಗ್ಲಿಷು ಅನುವಾದದಿಂದ ಆರಿಸಿ ಕನ್ನಡಿಸಿದ್ದು)

1. ಸತ್ತವರೇಳುವ ದಿನದಲ್ಲಿ ನನ್ನ ಸಹಾಯಕ್ಕೆ ಯಾರು ಅರ್ಹರಾಗಿರುವರೆಂದರೆ ಯಾರು ಮನಃಪೂರ್ವಕವಾಗಿ ಅಲ್ಲಾಹನೊಬ್ಬನಲ್ಲದೆ ಬೇರೊಬ್ಬ ದೇವರಿಲ್ಲವೆಂದು ನಂಬಿರುತ್ತಾರೋ ಅವರೇ.

2. ದೇವರನ್ನು ನಂಬಿರುವಾತನ ಕೆಲಸಗಳು ಅದ್ಭುತವಾಗಿರುವವು; ಅವನ ಕರ್ಮಗಳಿಂದೆಲ್ಲ ಅವನಿಗೆ ಒಳ್ಳೆಯದಾಗುವಂತೆ ನಂಬಿಕೆಯಿಲ್ಲದಾತನಿಗೆ ಆಗಲಾರದು. ಅವನಿಗೆ ಸುಖವು ಬಂದರೆ ಅವನು ದೇವರಿಗೆ ಕೃತಜ್ಞನಾಗಿರುವನು; ದುಃಖವು ಬಂದರೆ ಸಹಿಸಿಕೊಂಡು ಸುಮ್ಮನಿರುವನು. ಇದೂ ಒಳ್ಳೆಯದೇ.

3. ತನಗೆ ಬೇಕಾದದ್ದನ್ನೇ ಮತ್ತೊಬ್ಬನಿಗೂ ಆಗಬೇಕೆಂದು ನಿಮ್ಮಲ್ಲಿ ಯಾವನು ಹಾರೈಸುವದಿಲ್ಲವೋ ಅವನು ಆಲ್ಲಾಹವನ್ನು ನಂಬಿದವನಲ್ಲ.

4. ಯಾವಾತನು ಅಲ್ಲಾಹನಿಗಾಗಿ ಪ್ರೀತಿಸುವನೋ, ಅಲ್ಲಾಹನಿಗಾಗಿ ದ್ವೇಷಿಸುವನೋ, ಅಲ್ಲಾಹನಿಗಾಗಿ ದಾನಮಾಡುವನೋ, ಅಲ್ಲಾಹನಿಗಾಗಿ ಪಾಪಾಚರಣೆಯನ್ನು ಬಿಟ್ಟಿರುವನೋ. ಆತನು ತನ್ನ ನಂಬಿಕೆಯನ್ನು ಪರಿಪೂರ್ಣಮಾಡಿಕೊಂಡಂತಾಯಿತು.

5. ಯಾವಾತನ ನಾಲಿಗೆಯಿಂದಲೂ ಕೈಗಳಿಂದಲೂ ಮಿಕ್ಕ ಮುಸ್ಲಿಮರು ತೊಂದರೆಯಿಲ್ಲದೆ ಸುರಕ್ಷಿರಾಗಿರುವರೋ ಅವನು ನಿಜವಾದ ಮುಸ್ಲಿಮನು; ಯಾವಾತನು ಬೇರೆ ಜನರ ಪ್ರಾಣವನ್ನೂ ಸ್ವತ್ತುಗಳನ್ನೂ ರಕ್ಷಿಸುವನೋ ಅವನೇ ನಿಜವಾಗಿ ದೈವಭಕ್ತಿಯುಳ್ಳವನು.

6. (ಪ್ರಶ್ನೆ) ಯಾವ ಇಸ್ಲಾಮ ಆಚರಣೆಯು ಉತ್ತಮವಾದದ್ದು? (ಉತ್ತರ) ಹೊಟ್ಟೆಗಿಲ್ಲದವರಿಗೆ ಅನ್ನವಿಕ್ಕುವದು, ನಿಮ್ಮ ಪರಿಚಯವಿದ್ದವರಿಗೂ ಇಲ್ಲದವರಿಗೂ ಸಲಾಮು ಮಾಡುವದು.

★★★★★

# ಹ|| ಅಬೂಸ್ವಾಲಿಹರವರ ಗೃಹಸ್ಥಾಶ್ರಮಪ್ರವೇಶ

## (ಶ್ರೀಯುತ ಎಮ್.ಬಿ.ಕೊಪ್ಪಳ, ಉರ್ದುಶಾಲಾ ಹೆಡ್ ಮಾಸ್ತರ, ರೋಣ)

ಇಸ್ಲಾಮೀಧರ್ಮದ ಅನುಯಾಯಿಗಳಲ್ಲಿ ಸಾವಿರಾರು ಯೋಗಿಗಳು ಉದಯಿಸಿದ್ದು, ಅವರು ಜಗತ್ತಿನ ಆಯಾಯ ಭಾಗಗಳಲ್ಲಿ ಅಜ್ಞಾನಾಂಧಕಾರ ಸಾಗರದ ತೆರೆಗಳಿಗೆ ಎದುರಾಗಿ ಜಲಸಮಾಧಿಯನ್ನು ಹೊಂದುತ್ತಿದ್ದ ಮಾನವರನೇಕರಿಗೆ ತಮ್ಮ ಆತ್ಮೀಯಜ್ಞಾನಪ್ರಕಾಶದ ಬಾಹುಗಳಿಂದ ಆಶ್ರಯವನ್ನಿತ್ತು ಪಾರುಗಾಣಿಸಿದ ಸಂಗತಿಗಳು ಸರ್ವರ ಆದರಕ್ಕೆ ಪಾತ್ರವಾಗಿರುವವು. ಹಜರತ ಸೈಯ್ಯದ ಅಬ್ದುಲ್‌ಕಾದರ ಜೀಲಾನಿಯವರು ಇಂಥ ಮಹಾತ್ಮರಲ್ಲಿ ಅದ್ವಿತೀಯ ಅಗ್ರಗಣ್ಯರಾದ ಮುನಿಪುಂಗವರಿದ್ದಾರೆ. ಈ ಮಹನೀಯರ ಉಜ್ಜ್ವಲವಾದ ಜೀವನಚರಿತ್ರೆಯನ್ನು ಹಿಜರಿಸಾಲಿನ ರಬ್ಬಿಯನ್ ಅಖ್ಖೆರ ತಿಂಗಳಲ್ಲಿ ಅರಬಿಸ್ಥಾನ, ತುರ್ಕಿಸ್ಥಾನ, ಇರಾನ, ಹಿಂದುಸ್ಥಾನ - ಮುಂತಾದ ದೇಶಗಳಲ್ಲಿ ಹೇಳಿಸುವ ಪರಿಪಾಠವುಂಟು. ಮತ್ತು ಅವರ ಸ್ಮಾರಕಕ್ಕಾಗಿ ಮುಸಲ್ಮಾನರು 'ಗ್ಯಾರವೀ' ಎಂಬದನ್ನು ಸಹ ಮಾಡುತ್ತಿರುವದು. ಸದ್ಯಕ್ಕೆ ಇಲ್ಲಿ ಇವರ ತಂದೆಯವರಾದ **ಹ|| ಅಬೂಸ್ವಾಲಿಹ ಜಂಗಿ ದೋಸ್ತ** ಎಂಬವರ ಗೃಹಸ್ಥಾಶ್ರಮಪ್ರವೇಶದ ಸಂಗತಿಯನ್ನು ವಿವರಿಸುವೆನು. ಮುಂದೆ ಮಹಾಶಯ ಪತ್ರಸಂಪಾದಕರು ಅನುವುಕೊಟ್ಟಲ್ಲಿ ಹ|| ಅಬ್ದುಲ್ ಕಾದರ ಜೀಲಾನಿಯವರ ಮಹತ್ತ್ವದ ಸಂಗತಿಗಳನ್ನೂ ಇನ್ನಿತರರ ಸಂಗತಿಗಳನ್ನೂ ವಾಚಕವೃಂದದ ಎದುರಿಗಿಡಲು ಪ್ರಯತ್ನಿಸುವೆನು.

ಹ|| ಅಬೂಸ್ವಾಲಿಹರವರು ಇರಾನದೊಳಗಿನ ಜೀಲಾನಪ್ರಾಂತದ ನಿವಾಸಿಗಳು. ಇವರು ಪ್ರಾಯಕ್ಕೆ ಬಂದೊಡನೆಯೇ ಯೋಗಸಾಧನದಲ್ಲಿ ತೊಡಗಿದರು. ಆತ್ಮಶುದ್ಧಿಗಾಗಿ ಯಾವಗಲೂ ವನಾಂತರಗಳಲ್ಲಿಯೇ ಕಾಲ ಕಳೆಯುತ್ತಿದ್ದರು. ಹಗಲೆಲ್ಲ ರೋಜಾ (ಉಪವಾಸ) ಇದ್ದು ಸಂಜೆಗೆ ಹಣ್ಣು ಹಂಪಲುಗಳ ಉಪಾಹಾರಮಾಡುತ್ತಿದ್ದರು. ರಾತ್ರಿಯೆಲ್ಲ ದೇವರ ಧ್ಯಾನದಲ್ಲಿ ನಿರತರಾಗಿರುತ್ತಿದ್ದರು. ಹೀಗಿರುತ್ತಿರಲು ಒಮ್ಮೆ ಅವರಿಗೆ ಸಮಗ್ರ ಮೂರು ದಿವಸಗಳವರೆಗೆ ಏನೂ ಆಹಾರ ದೊರಕಲಿಲ್ಲ. ಆಗ ಸ್ವಲ್ಪ ಹೊಳೆಯ ನೀರನ್ನು ಕುಡಿದು ವಿಶ್ರಾಂತಿಹೊಂದುತ್ತಿರಲು, ಹೊಳೆಯ ಪ್ರವಾಹದೊಡನೆ ಹರಿದು ಬರುವ ಒಂದು ಸೇಬುಹಣ್ಣು ದೃಷ್ಟಿಗೆ ಬಿತ್ತು. ಕೂಡಲೆ ಅವರು ಸಾಗಿಹೋಗಿ ಆ ಹಣ್ಣನ್ನು ತೆಗೆದುಕೊಂಡು ತಿಂದರು. ಆದರೆ ತತ್ಕ್ಷಣವೇ ಅವರಿಗೆ ''ನಾನು ಅನ್ಯರ ಪದಾರ್ಥವನ್ನು ಅವರ ಸಮ್ಮತಿಯಿಲ್ಲದೆ ತಿಂದೆನಲ್ಲ!'' ಎಂಬ ಸಂಶಯವು ಉತ್ಪನ್ನವಾಯಿತು.ಇದೇ ವಿಚಾರದಲ್ಲಿ ಅವರು ಸೇಬುಹಣ್ಣು ಹರಿದುಬಂದ ದಿಕ್ಕಿಗೆ ಹೊಳೆಯ ದಂಡೆಯನ್ನೇ ಹಿಡಿದು ಸಾಗಿದರು. ಸ್ವಲ್ಪ ದೂರ ಹೋದ ಮೇಲೆ ಹೊಳೆಯ ದಂಡಗೆ ಹೊಂದಿದ್ದ, ಒಂದು ತೋಟವನ್ನು ನೋಡಿದರು. ಅದರಲ್ಲಿ ದಂಡೆಯ ಮಗ್ಗಲಿಗೆ ಸೇಬುಹಣ್ಣಿನ ಗಿಡಗಳಿದ್ದವು. ಆಗ ಅಬೂಸ್ವಾಲಿಹರವರು 'ಬಹುಶಃ ಇದೇ ತೋಟದೊಳಗಿನ ಹಣ್ಣು ಹರಿದು ಬಂದಿರಲಿಕ್ಕೆಬೇಕು' ಎಂಬ ಧೋರಣದಿಂದ ತೋಟದ ಮಾಲಕರ ಕಡೆಗೆ ಹೋದರು.

ಆ ತೋಟದ ಮಾಲಕರು ಇರಾಕಪ್ರಾಂತದೊಳಗಿನ ಅಬ್ದುಲ್ಲಾ ಹ ಸೂಫಿ ಎಂಬ ಪ್ರಸಿದ್ಧಯೋಗಿಗಳು ಇದ್ದರು. ಅಬೂಸ್ವಾಲಿಹರವರು ಅವರ ದರ್ಶನ ಹೊಂದಿ, ವರ್ಣಿಸಿದ ಸಂಗತಿಯನ್ನೆಲ್ಲ ಅರುಹಿ ಅವರ ತೋಟದೊಳಗಿಂದ ಹರಿದು ಬಂದ ಸೇಬುಹಣ್ಣನ್ನು ತಿಂದ ಮೂಲಕ ಅದಂಥ ಅಪರಾಧವನ್ನು ಕ್ಷಮಿಸಬೇಕೆಂದು ಅರಿಕೆಮಾಡಿಕೊಂಡರು.

ಆಗ **ಅಬ್ದುಲ್ಲಾಹ ಸೂಫಿಯವರು** – ಎಲೈ ತರುಣನೆ, ಮೊದಲು ಅನ್ಯರ ಪದಾರ್ಥದ ಮೇಲೆ ದೃಷ್ಟಿಯನ್ನಿಟ್ಟಿದ್ದೇ ಅಪರಾಧವು; ಇನ್ನು ಅದನ್ನು ಉಪಭೋಗಿಸಿದ್ದಂತೂ ಮಹಾಪರಾಧವು.

**ಅಬೂಸ್ವಾಲಿಹ** - ಸ್ವಾಮಿನ್, ನಾನು ಕುಡಿದ ಹೊಳೆಯ ನೀರಿನಿಂದಲೇ ಸಂತುಷ್ಟನಾಗಿದ್ದರೆ ಈ ಅಪರಾಧವೇ ನನ್ನಿಂದ ಜರುಗುತ್ತಿದ್ದಿಲ್ಲ. ಇದೊಂದು ತಪ್ಪಾಗಿದೆ, ಕ್ಷಮಿಸೋಣವಾಗಬೇಕು.

**ಅಬ್ದುಲ್ಲಾಹ ಸೂಫಿ** - ಪ್ರಥಮತಃ ಈಗ ಆಗಿರುವ ತಪ್ಪಿನ ಬಗ್ಗೆ ಶಿಕ್ಷೆಯನ್ನು ಅನುಭೋಗಿಸಲಿಕ್ಕೆ ಸಿದ್ಧನಾಗು. ತದನಂತರ ಕ್ಷಮಾಪಣೆಯ ಮಾತು.

**ಅಬೂಸ್ವಾಲಿಹ** - ತಾವು ವಿಧಿಸುವ ಶಿಕ್ಷೆಯನ್ನು ಅನುಭವಿಸಲು ಸಿದ್ಧನಿದ್ದೇನೆ.

**ಅಬ್ದುಲ್ಲಾಹ ಸೂಫಿ**- ಹಾಗಾದರೆ ಹನ್ನೆರಡು ವರ್ಷಗಳವರೆಗೆ ನಮ್ಮ ಸನ್ನಿಧಿಯಲ್ಲಿದ್ದು ತೋಟದ ವ್ಯವಸ್ಥೆಯನ್ನು ಕಾಯ್ದುಕೊಂಡು ಹೋಗಬೇಕು. ಮತ್ತು ನಿನ್ನ ಇಚ್ಛೆ ಇದ್ದಲ್ಲಿ ಅವಕಾಶ ದೊರೆತ ವೇಳೆಯಲ್ಲಿ ಯೋಗಸಾಧನದ ವಿಷಯಗಳನ್ನು ಕಲಿತುಕೊಳ್ಳಬಹುದು. ನಿನ್ನ ಕೆಲಸವು ನಮಗೆ ಸರಿದೋರಿದಲ್ಲಿ ಹನ್ನೆರಡು ವರ್ಷಗಳ ತರುವಾಯ ನಿನ್ನ ಅಪರಾಧವನ್ನು ಕ್ಷಮಿಸುವದರಲ್ಲಿ ಬರುವದು.

ಈ ಮಾತಿಗೆ ಅಬೂಸ್ವಾಲಿಹರವರು ಒಪ್ಪಿಕೊಂಡು ಅವರ ಅಪ್ಪಣೆಯ ಮೇರೆಗೆ ಹಗಲು ತೋಟದೊಳಗೆ ಕೆಲಸಮಾಡುತ್ತ ರಾತ್ರಿ ಪಾರಮಾರ್ಥಿಕ ವಿಷಯಜ್ಞಾನಸಂಗ್ರಹಮಾಡುವದರಲ್ಲಿ ಕಾಲಕಳೆದರು. ಹನ್ನೆರಡು ವರ್ಷಗಳು ಪೂರ್ಣ ಮುಗಿದ ಮೇಲೆ ತಮ್ಮ ಅಪರಾಧವನ್ನು ಕ್ಷಮಿಸಿ ಊರಿಗೆ ಹೋಗಲಿಕ್ಕೆ ಅಪ್ಪಣೆಯನ್ನೀಯಬೇಕೆಂದು ಬೇಡಿಕೊಂಡರು.

**ಅಬ್ದುಲ್ಲಾಹ ಸೂಫಿ** - ಹನ್ನೆರಡು ವರ್ಷಗಳು ಕಳೆದುಹೋದದ್ದೇನೊ ನಿಜ. ಆದರೆ ಇನ್ನೊಂದು ಮಾತು ಉಳಿದಿದೆ. ನಮ್ಮ ಒಬ್ಬ ಮಗಳು ಇದ್ದಾಳೆ. ನೀನು ಅವಳನ್ನು ವಿವಾಹಮಾಡಿಕೊಂಡಲ್ಲಿ ಮಾತ್ರ ನಿನಗೆ ಹೋಗಲಿಕ್ಕೆ ಅಪ್ಪಣೆ ದೊರೆಯುವದು.

**ಅಬೂಸ್ವಾಲಿಹ** - ಗುರುವರ್ಯರೆ, ತಮ್ಮ ಆಜ್ಞೆಯಂತೆ ವರ್ತಿಸಲಿಕ್ಕೆ ಮೊದಲೇ ವಚನಬದ್ಧನಾಗಿರುವೆನು. ತಮ್ಮ ಇಚ್ಛೆಯಂತೆ ಲಗ್ನವಾಗಲಿಕ್ಕೆ ಹಾಜರ ಇರುವೆನು.

**ಅಬ್ದುಲ್ಲಾಹ ಸೂಫಿ** – ಆದರೆ ಯುವಕನೆ, ಸ್ವಲ್ಪ ಕೇಳು, ಆ ನಮ್ಮ ಮಗಳು ಮೂರು ಅವಯುವಗಳಿಂದ ವ್ಯಂಗಳಿದ್ದಾಳೆ. ಕುರುಡಿಯೂ, ಕಿವುಡಿಯೂ, ಇರುವಳಲ್ಲದೆ ಕೈಕಾಲುಗಳಿಂದಲೂ ಸಹ ಊನಳಿದ್ದಾಳೆ.

**ಅಬೂಸ್ವಾಲಿಹ** – ಮಹಾನ್, ಹ್ಯಾಗಿದ್ದರೂ ಅಡ್ಡಿ ಇಲ್ಲ, ಅವಳನ್ನೇವರಿಸುವೆನು. ನನ್ನ ಅಪರಾಧವನ್ನು ಕ್ಷಮಿಸಿದರೆ ಸಾಕು. ಸತಿಯು ಮನೆಯೊಳಗಿನ ಕೆಲಸಬೊಗಸೆಗಳನ್ನು ಮಾಡುತ್ತ ಪತಿಗೆ ಈ ಸಂಸಾರಯಾತ್ರೆಯಲ್ಲಿ ಸಹಾಯಕಳಾಗಿರುವದು ಸ್ವಾಭಾವಿಕವಾದದ್ದು. ಹೀಗಿದ್ದು ತಮ್ಮ ಮಗಳು ಊನಳಿದ್ದಾಳೆಂದ ಮೇಲೆ ಮನಯೊಳಗಿನ ಅಡಿಗೆ ಮೊದಲಾದ ಎಲ್ಲ ಕೆಲಸಗಳನ್ನೂ ಸ್ವತಃ ನಾನೇ ಮಾಡುವ ಪ್ರಸಂಗ ಬಂದಂತಾಯಿತು. ಇದೇನೂ ನನಗೆ ಭಾರವಲ್ಲ, ಆದರೆ ತಮ್ಮ ಸಮ್ಮತಿಯಿಲ್ಲದೆ ಸೇಬುಹಣ್ಣುತಿಂದ ಮೂಲಕ ಘಟಿಸಿದ ಅಪರಾಧದ ಭಾರವನ್ನು ಮಾತ್ರ ಸಹಿಸಲಾರೆನು.

**ಅಬ್ದುಲ್ಲಾಹ ಸೂಫಿ** – ಹೀಗಿದ್ದಲ್ಲಿ ಚೆನ್ನಾಯಿತು. ಲಗ್ನಕಾರ್ಯವಾದ ಮೇಲೆ ನಿನ್ನ ಅಪರಾಧವನ್ನು ಕ್ಷಮಿಸುವೆನು. ಆಮೇಲೆ ನೀನು ನಿಮ್ಮ ಪತ್ನಿಯೊಡನೆ ಮಾತೃಭೂಮಿಗೆ ಹೋಗಬಹುದು.

ಈ ಪ್ರಕಾರ ನಿಶ್ಚಿತವಾದನಂತರ ಅವರೀರ್ವರ ಲಗ್ನ ಸಮಾರಂಭವು ಜರುಗಿತು. ಸಂಪ್ರದಾಯಕ್ಕನುಸಾರವಾಗಿ ಅಬೂಸ್ವಾಲಿಹರವರು ಶೋಭನ ಕಾರ್ಯದ ರಾತ್ರಿ ಶಯನಮಂದಿರದಲ್ಲಿ ಪ್ರವೇಶಿಸಿ ನೋಡುತ್ತಾರೆ – ಅಲ್ಲಿ ಊನಸ್ತ್ರೀಯಳ ಬದಲು ರೂಪಲಾವಣ್ಯಗಳಿಂದೊಪ್ಪುದ ಒಬ್ಬ ಸುಂದರಾಂಗನೆಯು ನಿಂತಿದ್ದಾಳೆ! ಅವಳನ್ನು ನೋಡಿದಾಕ್ಷಣವೇ ಅಬೂಸ್ವಾಲಿಹರವರು ಭಯಚಕಿತ ರಾದರು. ಆದ್ದರಿಂದ ಅಲ್ಲಿ ಒಂದು ನಿಮಿಷವನ್ನೂ ಕಳೆಯದೆ ಶಯನ ಮಂದಿರದಿಂದ ಹೊರಬಿದ್ದು ತೋಟದೊಳಕ್ಕೆ ಹೋದರು. ಅಲ್ಲಿ ''ಒಂದು ಸೇಬು ಹಣ್ಣು ತಿಂದ ಅಪರಾಧವನ್ನು ನಿವಾರಣೆಮಾಡಿಕೊಳ್ಳಲಿಕ್ಕೆ ಈ ಮಹನೀಯರ ಆಶ್ರಮದಲ್ಲಿ ಹನ್ನೆರಡು ವರ್ಷ ಕಾಲಕಳೆಯಬೇಕಾಯಿತು. ಇನ್ನು ಇಂದು ರಾತ್ರಿ ಪರಸ್ತ್ರೀಯಳ ಮೇಲೆ ದೃಷ್ಟಿಬಿದ್ದ ತಪ್ಪಿಗಾಗಿ ದುಪ್ಪಟ್ಟು (24) ವರ್ಷ ಕಾಲಕಳೆಯ ಬೇಕಾಗುವದೋ ಏನೋ! ನನಗಂತೂ ಏನೂ ತೋಚದಾಗಿದೆ. ದೇವರೆ, ಇದೇನು! ಒಂದು ಹುಣ್ಣು

ಮಾಯುವಷ್ಟರಲ್ಲಿ ಮತ್ತೊಂದು ಹುಣ್ಣು ಹುಟ್ಟಿತು. ನನ್ನ ಅದೃಷ್ಟವೇ ಹೀಗಿರಬಹದೋ!'' ಎಂದು ವಿಸ್ಮಯಭರಿತರಾಗಿ ಕುಳಿತರು. ಅತ್ತ ಶಯನಮಂದಿರದಲ್ಲಿ ಆ ಸಾಧ್ವಿಯು ನಮಾಜುಮಾಡುತ್ತ ದೇವರ ಧ್ಯಾನದಲ್ಲಿ ನಿಮಗ್ನಳಾದಳು.

ಮಾರನೆಯ ದಿವಸ ಮುಂಜಾನೆ ಅಬೂಸ್ವಾಲಿಹರವರು ಮಾವಂದಿರ ಹತ್ತಿರ ಹೋಗಿ ''ಏನು ಸ್ವಾಮಿ, ತಾವೇನು ನನ್ನನ್ನು ಲಗು ಬಿಡುಗಡೆಮಾಡುವಂತೆ ತೋರುವದಿಲ್ಲ. ನನ್ನ ಆಯುಷ್ಯವು ಇಲ್ಲಿಯೇ ಕಳೆದುಹೋಗುವದೋ ಏನೋ ತಿಳಿಯದಂತಾಯಿತು'' ಎಂದರು.

**ಅಬ್ದುಲ್ಲಾಹ ಸೂಫಿ –** ಅದು ಏಕೆ? ಇನ್ನು ಮುಂದೆ ನೀವು ಇಲ್ಲಿ ಉಳಿಯಲಿಕ್ಕೆ ಕಾರಣವೇನು?

**ಅಬೂಸ್ವಾಲಿಹ –** ಕಾರಣವೋ ನಿಮಿತ್ತವೋ ತಾವೇ ವಿಚಾರಿಸಿರಿ. ಕುರುಡಿ ಕಿವುಡಿ ಕುಂಟಿಯೆಂದು ಹೇಳಿದವರು ಶಯನಮಂದಿರದಲ್ಲಿ ಸರ್ವಾವಯಗಳಿಂದಲೂ ಪರಿಪೂರ್ಣಳಿರುವ ಪರಸ್ತ್ರೀಯನ್ನು ಕೂರಿಸಬೇಕೆ? ಪರಸ್ತ್ರೀಯರ ಮೇಲೆ ದೃಷ್ಟಿಬಿದ್ದ ತಪ್ಪಿಗಾಗಿ ಇನ್ನೆಷ್ಟು ವರ್ಷಗಳವರೆಗೆ ತೋಟದಲ್ಲಿ ನನ್ನನ್ನು ದುಡಿಸಿಕೊಳ್ಳುವ ಉದ್ದೇಶವದೆ?

**ಅಬ್ದುಲ್ಲಾಹಸೂಫಿ –** ಸುಕುಮಾರನೆ, ನಿನ್ನೆರಾತ್ರಿ ಶಯನಮಂದಿರದಲ್ಲಿದ್ದವಳು ನಿನ್ನ ಪತ್ನಿಯಲ್ಲವೆ?

**ಅಬೂಸ್ವಾಲಿಹ –** ಓಹೋ! ಮಾವನವರೆ! ಪಗಾರವಿಲ್ಲದ ಸೇವಕನನ್ನು ಹಿಡಿಯುವ ಹಂಚಿಕೆಯು ನೆಟ್ಟಗದೆ, ಅವಳೇ ನನ್ನ ಸತಿಯು ಆದಲ್ಲಿ ನಿನ್ನೆ ಸಂಜೇಗೇನೆ ಕಣ್ಣುಕಿವಿಕೈಕಾಲುಗಳು ನೆಟ್ಟಗಾದವೋ?

**ಅಬ್ದುಲ್ಲಾಹ ಸೂಫಿ –** ಹಾಗೇನೂ ಆಗಿಲ್ಲ. ಆದರೆ ನಿನ್ನ ವಿಚಾರತರಂಗಗಳೇ ವ್ಯತ್ಯಾಸವಾಗಿವೆ. ನನ್ನ ಮಗಳು ಕುರುಡಿ, ಕಿವುಡಿ, ಕುಂಟಿಯೆಂದು ಹೇಳಿದ್ದರ ಮರ್ಮವನ್ನೇ ನೀನು ತಿಳಿದುಕೊಳ್ಳಲಿಲ್ಲ. ಸುಭಾಗ್ಯನೆ, ಸ್ವಲ್ಪ ಕೇಳು. ಆ ನನ್ನ ಮಗಳು ನಿನ್ನೆ ರಾತ್ರಿ ನಿನ್ನನ್ನು ನೋಡಿದ್ದು ಹೊರತಾಗಿ ಇದುವರೆಗೆ ಯಾವ ಪರಪುರುಷನನ್ನೂ ನೋಡಿರುವದಿಲ್ಲ; ಅದಕ್ಕಾಗಿ ನಾನು ಅವಳು ಕುರುಡಿಯೆಂದು ಹೇಳಿದ್ದೆನು. ಇನ್ನು

ಕಿವುಡಿಯೆಂದರೆ ಇದುವರೆಗೆ ಪುಣ್ಯಪುರಾಣಕಥೆಗಳ ಶ್ರವಣದ ಹೊರತಾಗಿ ಇತರ ನುಡಿಗಳು ಅವಳ ಕಿವಿಯಲ್ಲಿ ಬಿದ್ದಿರುವದಿಲ್ಲ. ಅದರಂತೆ ಈ ಸಾಧ್ವಿಯು ಇಲ್ಲಿಯ ತನಕ ತನ್ನ ಕೈಕಾಲುಗಳನ್ನು ಸದಾಚಾರದಲ್ಲಿ ಉಪಯೋಗಿಸಿರುವಳೇ ಹೊರತು ಅಲ್ಲದ ಕೆಲಸಗಳಲ್ಲಿ ಕೈಹಾಕಿರುವದಿಲ್ಲ. ಅಂದ ಮೇಲೆ ನಾನು ಅವಳು ಕುರುಡಿ ಕಿವುಡಿ ಕುಂಟಿಯೆಂದು ಹೇಳಿದ್ದರಲ್ಲಿ ದುಷ್ಟ ಉದ್ದೇಶವೇನಿದ್ದಂತಾಯಿತು?

**ಅಬೂಸ್ವಾಲಿಹ** - ಹಾಯ್! ಹಾಯ್!! ನಾನು ಹನ್ನೆರಡು ವರ್ಷಗಳನ್ನು ತಮ್ಮ ಸನ್ನಿಧಿಯಲ್ಲಿ ಕಳೆದರೂ ಇಂಥ ಸೂಕ್ಷ್ಮವಿಚಾರಗಳು ನನ್ನಲ್ಲಿ ಮುಂದೋರಲಿಲ್ಲ. ಅಂತೇ ತಮ್ಮಂಥ ಮಹಾತ್ಮರ ಸಹವಾಸದಲ್ಲಿ ಕೆಲವು ಕಾಲ ಕಳೆಯುವ ಉದ್ದೇಶದಿಂದಲೇ ದೇವರು ನನ್ನನ್ನು ಇಲ್ಲಿಗೆ ಬರಮಾಡಿದನು. ಇದು ನನ್ನ ಸುದೈವವು ತಮ್ಮ ಸಹವಾಸದಲ್ಲಿದ್ದದ್ದರಿಂದ ಪಾರಾಮರ್ಥಿಕ ವಿಷಯದ ಜ್ಞಾನವಾದದ್ದಲ್ಲದೆ ಸಕಲಗುಣಸಂಪನ್ನೆಯಾದ ಸಾಧ್ವೀಮಣಿಯೂ ದೊರೆತಳು. ಇವೆಲ್ಲ ತಮ್ಮ ಮಹಿಮೆಯ ಪ್ರಭಾವವು. ನನಗೆ ಇನ್ನೆರಡು ವರ್ಷ ಇಲ್ಲಿಯೇ ಇರುವ ಹವ್ಯಾಸವದೆ. ಈ ಬಗ್ಗೆ ತಾವು ಸಮ್ಮತಿಯನ್ನಿತ್ತೀರೆಂದು ಬಲವಾದ ಆಶೆ ಅದೆ.

**ಅಬ್ದುಲ್ಲಾಹ ಸೂಫಿ** - ವತ್ಸ, ಹಾಗೆಯೇ ಆಗಬಹುದು. ನಿನ್ನ ಇಚ್ಛೆ ಇದ್ದಷ್ಟು ವರ್ಷಗಳವರೆಗೆ ಇರಬಹುದು. ನಮ್ಮದೇನೂ ಆತಂಕವಿಲ್ಲ.

ಈ ಮೇರೆಗೆ ಅಬೂಸ್ವಾಲಿಹರವರು ಸಾಧ್ವೀಮಣಿಯಾದ ಬಿಫಾತಿಮಾ ಎಂಬ ಪತ್ನಿಯೊಡನೆ ಗೃಹಸ್ಥಾಶ್ರಮಿಯಾಗಿ ಇರುತ್ತಿರಲು ಅವರ ಉದರದಲ್ಲಿ ಅದ್ವಿತಿಯ ಯೋಗೀಶ್ವರರಾದ ಸೈ॥ ಅಬ್ದುಲ್ ಕಾದರ ಜೀಲಾನಿಯವರು ಜನಿಸಿದರು.

★★★★★

# ಹ|| ಇಬ್ರಾಹೀಮರ ಏಕದೇವಾರಾಧನೆ

## (ಶ್ರೀಯುತ ಎಮ್.ಬಿ. ಕೊಪ್ಪಳ ಉರ್ದು ಸ್ಕೂಲ್ ಹೆಡ್‌ಮಾಸ್ತರ, ರೋಣ)

ಅತಿಪ್ರಾಚೀನಕಾಲದಲ್ಲಿ ಹ|| ಇಬ್ರಾಹೀಮ ಪೈಗಂಬರದ ವಂಶದವರು ಬಾಬಿಲೋನಪಟ್ಟಣದಲ್ಲಿ ವಾಸಮಾಡುತ್ತಿದ್ದರು. ಆಗಿನ ಕಾಲಕ್ಕೆ ಬಾಬಿಲೋನ ಪಟ್ಟಣವು ಸಾಮಾಜಿಕ ರಾಜಕೀಯ ಸಂಗತಿಗಳಲ್ಲಿ ಸುಧಾರಣೆಯ ಅಗ್ರಸ್ಥಾನವನ್ನು ಹೊಂದಿತ್ತು. ಆದರೆ ಧಾರ್ಮಿಕದೃಷ್ಟಿಯಿಂದ ತೀರ ಹೀನಸ್ಥಿತಿಗೆ ಬಂದಿತ್ತು. ಆಗ್ಗೆ ಜನರೊಳಗೆ ಮೂರ್ತಿಪೂಜೆಯೇ ವಿಶೇಷಪ್ರಚಾರದಲ್ಲಿತ್ತು. ಸ್ವತಃ ಹ|| ಇಬ್ರಾಹೀಮ ಪೈಗಂಬರರ ತಂದೆಯಾದ ಆಜರನು ಮೂರ್ತಿಗಳನ್ನು ಕಟ್ಟಿಸಿ ಮಾರಾಟಮಾಡುತ್ತಿದ್ದನು. ಹ|| ಇಬ್ರಾಹೀಮರು ವಯಸ್ಸಿಗೆ ಬಂದನಂತರ ತಮ್ಮ ತಂದೆ ಮತ್ತು ಜನರೊಡನೆ ಮೂರ್ತಿಪೂಜೆಯ ಸಂಬಂಧವಾಗಿ ವಾದವಿವಾದ ಮಾಡಹತ್ತಿದರು. ಅವರಲ್ಲಿ ಸಂವಾದ ನಡೆದ ವಿಷಯಕ್ಕೆ ಕುರಾನ ಗ್ರಂಥದ ಅಂಬಿಯಾ ಅಧ್ಯಾಯದ ಐದನೆಯ ಭಾಗದಲ್ಲಿ ಉಪಲಬ್ಧವಾದ ಸಂದರ್ಭವನ್ನು ಕೆಳಗೆ ವಿವರಿಸಿದೆ:-

**ಇಬ್ರಾಹೀಮ** - ನೀವು ಈ ಕೃತ್ರಿಮವಿಗ್ರಹಗಳನ್ನು ಆರಾಧಿಸುವ ಕಾರಣವೇನು?

**ಜನರು** - ನಮ್ಮ ತಂದೆ ಅಜ್ಜ ಮುತ್ತಜ್ಜಂದಿರು ಸಹ ಇವುಗಳನ್ನೇ ಪೂಜಿಸುತ್ತ ಬಂದಿದ್ದನ್ನು ನಾವು ಕೇಳಿಯೂ ನೋಡಿಯೂ ಇದ್ದೇವೆ.

**ಇಬ್ರಾಹೀಮ** - ಹೀಗಿದ್ದಲ್ಲಿ ನೀವು ಮತ್ತು ನಿಮ್ಮ ತಂದೆ ಅಜ್ಜಂದಿರು ಸಹ ಕೇವಲ ಅಧರ್ಮಿಗಳೇ ಸರಿ.

**ಜನರು** - ಇದೇನು! ನೀನು ನಮ್ಮೊಡನೆ ಚೇಷ್ಟೆ ಮಾಡುವೆಯೊ? ಅಥವಾ ನಿಜವಾಗಿ ನಮ್ಮ ಮೂರ್ತಿಗಳ ತಿರಸ್ಕಾರಮಾಡುತ್ತಿರುವೆಯಾ?

**ಇಬ್ರಾಹೀಮ** - ಹಾಗೇನೂ ಇಲ್ಲ ನಾನು ಆಡುವ ಮಾತುಗಳು ಸತ್ಯವಾಗಿ

ವೆ. ಯಾವನು ಈ ಭೂಮ್ಯಾಕಾಶಗಳನ್ನು ಸೃಷ್ಟಿಸಿದನೋ, ಯಾವನು ಇಡಿಯ ಬ್ರಹ್ಮಾಂಡಕ್ಕೆ ಒಡೆಯನೋ, ಆ ನಿರಾಕಾರನಿರಂಜನ ಪರಮಾತ್ಮನೇ ಪೂಜೆಗೆ ಅರ್ಹನು. ನಾನು ಈ ಮಾತುಗಳನ್ನು ಅಗದಿ ಸತ್ಯವಾಗಿ ಸಾರುತ್ತೇನೆ. ಇದರಲ್ಲಿ ತಿಲಮಾತ್ರವೂ ಹುಸಿಯಿಲ್ಲ.

ಹೀಗೆ ಅವರೊಳಗೆ ವಾಗ್ವಾದವು ನಡೆದು, ಅನಂತರ ಎಲ್ಲಾ ಜನರೂ ತಮ್ಮ ತಮ್ಮ ಮನೆಗಳಿಗೆ ಹೊರಟುಹೋದರು. ಇತ್ತ ಇಬ್ರಾಹೀಮ ಪೈಗಂಬರರು ಮಂದಿರಗಳಲ್ಲಿ ಹೊಕ್ಕು, ಒಂದು ದೊಡ್ಡ ಮೂರ್ತಿಯ ಹೊರ್ತಾಗಿ ಉಳಿದ ಎಲ್ಲ ಮೂರ್ತಿಗಳನ್ನೂ ಒಡೆದು ತುಂಡುಮಾಡಿದರು.

ಮಾರನೆಯ ದಿವಸ ಆ ಜನರು ಬಂದು ಈ ಸ್ಥಿತಿಯನ್ನೆಲ್ಲ ನೋಡಿ ತಮ್ಮ ತಮ್ಮೊಳಗೆ ತರ್ಕವಿತರ್ಕ ಮಾಡುತ್ತ ಬಹುತೇಕ ನಿನ್ನೆ ನಮ್ಮ ಸಂಗಡವಾದಿಸಿದವನೇ ಇವುಗಳನ್ನು ಒಡೆದಿರಲಿಕ್ಕೆಬೇಕು. ಆ ಇಬ್ರಾಹೀಮನನ್ನು ಕರೆಸಿರಿ; ಅಂದರೆ ಇದರ ಸಂಬಂಧ ಎಲ್ಲ ನಿಜಸಂಗತಿಯೂ ತಾನೇ ವ್ಯಕ್ತವಾಗುವದು ಎಂದುಕೊಂಡರು.

**ಜನರು** - ಎಲೈ ಇಬ್ರಾಹೀಮನೆ, ನಮ್ಮ ದೇವತೆಗಳ ಅವಸ್ಥೆಯನ್ನು ಹೀಗೆ ಮಾಡಿದವರು ಯಾರು?

**ಇಬ್ರಾಹೀಮ** - ನನಗಂತೂ ಈ ಕೃತ್ಯವು ಆ ದೊಡ್ಡ ಮೂರ್ತಿಯಿಂದ ಘಟಿಸಿರಲಿಕ್ಕೆಬೇಕೆಂದು ತೋರುತ್ತದೆ. ಒಂದು ವೇಳೆ ಅದು ಮಾತಾಡುತ್ತಿದ್ದಲ್ಲಿ ನೀವು ಅದನ್ನು ಕೇಳಿ ವಿಚಾರಿಸಬಹುದು.

**ಜನರು** - (ತಮ್ಮೊಳಗೆ) ''ಇವನು ಎಂಥ ಅಸಂಬದ್ಧ ಮಾತುಗಳನ್ನು ಆಡುತ್ತಾನೆ! ಈ ಕೃತ್ರಿಮವಿಗ್ರಹಗಳು ಎಲ್ಲಿಯಾದರೂ ಮಾತಾಡುವದುಂಟೋ ಮಾತಾಡಲಿಕ್ಕೆ ಇವೇನು ಸಜೀವಪ್ರಾಣಿಗಳೊ?''

**ಇಬ್ರಾಹೀಮ** - ಅಂದ ಮೇಲೆ ದಯಮಾಡಿ ದುರಭಿಮಾನವನ್ನು ತೊರೆದು ಸ್ವಲ್ಪ ನೀವೇ ವಿಚಾರಿಸಿರಿ. ನಿರಾಕಾರನಾದ ಪರಮಾತ್ಮನ ಹೊರ್ತಾಗಿ ಕೃತ್ರಿಮಗೊಂಬೆಗಳನ್ನು ದೇವರೆಂದು ಭಾವಿಸಿ ಆರಾಧಾನೆಮಾಡುತ್ತಿರುವಿರಿ. ಈ ಗೊಂಬೆಗಳು ನಿಮಗೆ ಯಾವ ತರದ ಹಿತವನ್ನಾಗಲಿ ಅಥವಾ ಅಹಿತವನ್ನಾಗಲಿ ಸರ್ವಥಾ ಮಾಡಲಾರವು. ಇದನ್ನು ನೀವು ದೃಢವಾಗಿ ನಂಬಿರಿ. ನಿರಾಕಾರ ಪರಮಾತ್ಮನ ಹೊರ್ತಾಗಿ ವಿಗ್ರಹಗಳನ್ನು ನೆಚ್ಚಿಕೊಂಡು ಆರಾಧಿಸುತ್ತಿರುವ ನಿಮ್ಮ

ಜನ್ಮಕ್ಕೆ ಧಿಕ್ಕಾರ! ಧಿಕ್ಕಾರ! ಅಯ್ಯೋ! ನೀವು ಎಂಥಾ ಅಜ್ಞಾನಿಗಳು! ಆ ಪರಮಾತ್ಮನೇ ನಿಮಗೆ ಸನ್ಮಾರ್ಗವನ್ನು ತೋರಲಿ.

ಈ ಪ್ರಕಾರ ಅವರೊಳಗೆ ಕೆಲವು ದಿವಸ ಸಂವಾದವು ನಡೆದು ಕಡೆಗೆ ಅವರಲ್ಲಿ ಹ|| ಇಬ್ರಾಹಿಮರ ವಿಷಯಕ್ಕೆ ವೈಮನಸ್ಸುಂಟಾಯಿತು. ಈ ವೈಮನಸ್ಸೇ ವಿಕೋಪಕ್ಕೆ ಮುಟ್ಟಿ, ಅವರು ಹ|| ಇಬ್ರಾಹೀಮ ಪೈಗಂಬರರನ್ನು ಕೊಂದು ನಿರ್ಮೂಲಮಾಡಬೇಕೆಂದು ಅನೇಕ ಹಂಚಿಕೆಗಳನ್ನು ಹಾಕಹತ್ತಿದರು.

**ಜನರು** (ತಮ್ಮೊಳಗೆ):- ನಾವು ಇವನಿಗೆ ಹೀಗೆಯೇ ಅವಕಾಶಕೊಟ್ಟಲ್ಲಿ ನಮ್ಮ ದೇವತೆಗಳನ್ನು ತುಚ್ಛ ಮಾಡುತ್ತ ಇವುಗಳ ಮೇಲೆ ಜನರಲ್ಲಿರುವ ವಿಶ್ವಾಸ ನಂಬಿಕೆಗಳನ್ನು ಇಲ್ಲದಂತೆ ಮಾಡುವನು. ಆದ್ದರಿಂದ ನಾವು ನಮ್ಮ ದೇವತೆಗಳ ಗೌರವವನ್ನು ಕಾಯುವದಕ್ಕೋಸ್ಕರ ಇವನನ್ನು ಈಗಲೇ ನಾಶಪಡಿಸುವದು ಅವಶ್ಯವು. ಇವನನ್ನು ಧಗಧಗಿತ ಅಗ್ನಿಕುಂಡದೊಳಗೆ ಸೂಕಿ ಸುಡುವದು ಲೇಸೆಂದು ತೋರುತ್ತದೆ.

ಹೀಗೆ ನಿಶ್ಚಯ ಮಾಡಿದ ಪ್ರಕಾರ ಆ ಜನರು ಬಂದು ವಿಶಾಲವಾದ ಅಗ್ನಿಕುಂಡವನ್ನು ತಯಾರುಮಾಡಿದರು. ತದನಂತರ ಹ|| ಇಬ್ರಾಹೀಮರನ್ನು ಬಲಾತ್ಕಾರದಿಂದ ಹಿಡಿತಂದು ಆ ಅಗ್ನಿಕುಂಡದಲ್ಲಿ ನೂಕಿದರು. ತತ್ಕ್ಷಣವೇ ಸರ್ವಶಕ್ತನಾದ ಪರಮಾತ್ಮನ ಪ್ರೇರಣೆಯಿಂದ ಅದರ ಉನ್ನತವಾದ ಜ್ವಾಲೆಗಳು ಶಾಂತಿಮಯವಾಗಿ, ಅಗ್ನಿಕುಂಡವು ಲೋಪವಾಗಿ ಅದರ ಸ್ಥಳದಲ್ಲಿ ಮನೋಹರವಾದ ಒಂದು ಉದ್ಯಾನವು ನಿರ್ಮಾಣವಾಯಿತು. ನಿರಾಕಾರ ಪರಮಾತ್ಮನಲ್ಲಿಯೇ ನಿಷ್ಠೆಯುಳ್ಳವರಾಗಿ, ಕೇವಲ ಅವನ ಧ್ಯಾನ ಜಪಗಳನ್ನೇ ಸ್ಥಿರಪಡಿಸಲು, ಅಹೋ ರಾತ್ರಿ ತ್ರಿಕರಣಪೂರ್ವಕವಾಗಿ ಹೆಣಗಾಡುತ್ತಿದ್ದ ಹ|| ಇಬ್ರಾಹೀಮ ಪೈಗಂಬರರು ಸುರಕ್ಷಿತವಾಗಿ ಆ ಉದ್ಯಾನದ ಮಧ್ಯಭಾಗದಲ್ಲಿ ನಿರ್ಮಿಸಲ್ಪಟ್ಟ ಸಿಂಹಾಸನದ ಮೇಲೆ ವಿಶ್ರಮಿಸಿದ್ದರು.

★★★★★

# ಮತವೂ ಸಾಕ್ಷಾತ್ಕಾರವೂ

## ( ಸಾಧು ಮೆಹರ್ ಬಾಬಾಜಿಯವರು ಸರ್ವಮತಸಮ್ಮೇಲನಕ್ಕೆ ಕಳುಹಿಸಿದ ಸಂದೇಶದ ಅನುವಾದ)

ಬೇರೆ ಬೇರೆ ಮತಗಳ ಪ್ರತಿನಿಧಿಗಳು ಹೀಗೆ ಒಕ್ಕಡೆ ಸೇರುವದು ಬಹಳ ಒಳ್ಳೆಯದೆಂದು ನನ್ನ ಅಭಿಪ್ರಾಯವು. ಮತಗಳೆಲ್ಲ ಒಂದೇ ಒಂದು ತತ್ತ್ವದ ಮೇಲೆ ನಿಂತಿರುತ್ತವೆ, ಅದು ಯಾವದೆಂದರೆ ಮತಶ್ರದ್ಧೆ. ಅವುಗಳಲ್ಲಿ ಸಾಧನ, ಸನ್ನಿವೇಶ, ಮತ್ತು ಆಕಾರಗಳು ಬೇರೆಬೇರೆಯಾಗಿರಬಹುದು; ಒಂದರಲ್ಲಿ ಮೂರ್ತಿಗಳಿರಬಹುದು, ಮತ್ತೊಂದರಲ್ಲಿ ಮಾನಸಕಲ್ಪನೆಯಿರಬಹುದು, ಒಂದರಲ್ಲಿ ಯುಕ್ತಿಯಿಂದಾದ ದೃಢವಿಶ್ವಾಸವಿರಬಹುದು, ಮತ್ತೊಂದರಲ್ಲಿ ಹೃದಯದ ಭಾವನೆಗಳಿಂದಾದ ಶ್ರದ್ಧೆಯಿರಬಹುದು; ಹೇಗೇ ಆಗಲಿ, ಮತದ ನಾಯಕ ಮಣಿಯು ಯಾವಾಗಲೂ ಒಂದೇ.

ಮತಗಳಲ್ಲಿ ಎರಡು ಜಾತಿಗಳಿಲ್ಲ. ಮತಕ್ಕೆ ಅದು, ಇದು–ಎಂದು ಹೆಸರಿನ ಪಟ್ಟಿ ಬರೆದು ಕೊರಳಿಗೆ ಕಟ್ಟುವದು ಎಂದಿಗೂ ಸಮನಲ್ಲ. ಒಂದು ಬಲವಾದ ಶ್ರದ್ಧೆಯಾಗಿರಬಹುದು, ಮತ್ತೊಂದು ದುರ್ಬಲವಾದ ಶ್ರದ್ಧೆಯಾಗಿರಬಹುದು. ಕೆಲವರು ಹೊರಗಿನ ರೂಪಗಳು. ಆಚಾರಗಳು – ಇವನ್ನೇ ನಂಬಿಕೊಂಡಿರುತ್ತಾರೆ; ಮತ್ತೆ ಕೆಲವರು ಅವನ್ನು ದಾಟಿ ಒಳಗಿನ ತಿರುಳನ್ನು ಹಿಡಿದು ಹೊರಗಿನ ಚಿಪ್ಪನ್ನು ಕೈಬಿಟ್ಟಿರುತ್ತಾರೆ. ಅಂಥವರಲ್ಲಿ ಕೆಲವರು ನಿರ್ಗುಣವಾದ, ಅನಂತಸತ್ತಾಮಾತ್ರದಲ್ಲಿ ಶ್ರದ್ಧೆಯಿಟ್ಟಿರುವರು, ಮತ್ತೆ ಕೆಲವರು ತಮ್ಮ ಗುರುವನ್ನೇ ನಂಬಿರುತ್ತಾರೆ. ಆದ್ದರಿಂದ ಇದೆಲ್ಲ ಶ್ರದ್ಧೆಯ ಪ್ರಮಾಣದಲ್ಲಿರುವ ಭೇದವೇ ಹೊರತು ಮತ್ತೆ ಬೇರೆಯಲ್ಲ. ಪೂರ್ಣಸಾಕ್ಷಾತ್ಕಾರವೇ ಎಲ್ಲಾ ಮತಗಳ ಗುರಿಯು; ಅದು ಉಂಟಾದ ಹೊರತು, ಅದು ಉಂಟಾಗುವವರೆಗೂ, ಮತವೆಂಬುದು ಮತವೇ, ಶ್ರದ್ಧೆಯೇ; ಅದನ್ನು ಅಂಧಶ್ರದ್ಧೆಯನ್ನಿರಿ, ಮತ್ತೇನೆಂದಾದರೂ ಕರೆಯಿರಿ.

ಆದರೆ ದೇವರ ಸಾಕ್ಷಾತ್ಕಾರವಾಯಿತೆಂದರೆ ಆಮೇಲೆ ಶ್ರದ್ಧೆಯ ಮಾತೇ ಇಲ್ಲ. ಮನುಷ್ಯನಿಗೆ ತಾನು ಮನುಷ್ಯನೆಂದು ನಂಬುವದಕ್ಕೆ ಹೇಗೆ ಶ್ರದ್ಧೆಯು ಬೇಕಿರುವದಿಲ್ಲವೋ, ಅದರಂತೆಯೇ ಇದನ್ನೂ ಅರಿಯಬೇಕು. ಆಗ

ಶ್ರದ್ಧೆಯ ಎಲ್ಲೆಗಟ್ಟುಗಳನ್ನೆಲ್ಲ ದಾಟಿ ಅನಂತವಾದ ತತ್ತ್ವವೇ ತಾನೆಂಬುದನ್ನು ಕಂಡುಕೊಂಡಿರುವನು, ಆವೊಬ್ಬ ಪರಮಾತ್ಮನೇ ಎಲ್ಲೆಲ್ಲಿಯೂ ವ್ಯಕ್ತವಾಗಿ ತೋರಿಕೊಳ್ಳುತ್ತಿರುವನೆಂಬುದನ್ನು ಕಂಡುಕೊಂಡಿರುವನು.

★★★★★

# ಹ|| ಮಹಮ್ಮದ ಪೈಗಂಬರರ ಅತಿಥಿಸತ್ಕಾರ

## (ಶ್ರೀಯುತ ಎಮ್.ಬಿ. ಕೊಪ್ಪಳ, ಉರ್ದುಸ್ಕೂಲ ಹೆಡ್ ಮಾಸ್ತರ ರೋಣ)

ಇಸ್ಲಾಮಿಧರ್ಮಸ್ಥಾಪಕರಾದ ಹಜರತ್ತ ಮಹಮ್ಮದ ಪೈಗಂಬರರು ಒಳ್ಳೆ ಉದಾರಮನಸ್ಸಿನವರೂ ದಯಾಳು ಸ್ವಭಾವದವರೂ ಇದ್ದರು. ಅತಿಥಿ ಸತ್ಕಾರದಲ್ಲಂತೂ ಇವರ ಸಮಾನ ಯಾವ ಧರ್ಮೋಪದೇಶಕರೂ ಆಗಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಮನೆಗೆ ಬಂದ ಜನರನ್ನು ಕೇವಲ ತಮ್ಮ ಬಂಧು ಭಗನಿಯರೆಂದೇ ಭಾವಿಸಿ ಆದರಾತಿಥ್ಯ ಮಾಡುತ್ತಿದ್ದರು; ಮತ್ತು ತಮ್ಮ ಮಿತ್ರ ಮಂಡಳಿಯವರಿಗೂ ಮನೆಗೆ ಬಂದವರ ಪರಾಮರಿಕೆ ಮಾಡುವದರ ಸಂಬಂಧವಾಗಿ ಮೇಲೆ ಮೇಲೆ ಬೋಧಿಸುತ್ತಿದ್ದರು.

ಒಮ್ಮೆ ಕೆಲವು ಯಹೂದೀಜನರು ಒಂದು ಕೆಲಸದ ನಿಮಿತ್ತ ಪೈಗಂಬರರ ಸನ್ನಿಧಿಗೆ ಬಂದರು. ಆಗ ಪೈಗಂಬರರು ಅವರೊಳಗಿನ ಒಬ್ಬೊಬ್ಬರನ್ನು ನಿಮ್ಮ ನಿಮ್ಮ ಮನೆಗಳಿಗೆ ಕರೆದುಕೊಂಡು ಹೋಗಿ ಊಟ ಉಪಚಾರದ ವ್ಯವಸ್ಥೆಮಾಡಿರೆಂದು ಮಿತ್ರಮಂಡಲಿಯವರಿಗೆ ನಿರೂಪಿಸಿದರು. ಅಜ್ಞಾನುಸಾರ ಮಿತ್ರರು ಒಬ್ಬೊಬ್ಬ ಗೃಹಸ್ಥವನ್ನು ಕರೆದುಕೊಂಡು ಹೋದರು. ಆದರೆ ಆ ಯಹೂದೀ ಜನರಲ್ಲಿ ಒಬ್ಬನು ಕಿಡಿಗೇಡಿಯೂ ಜಗಳಗಂಟನೂ ಇದ್ದನು. ಆದಕಾರಣ ಇವನನ್ನು ಕರೆದುಕೊಂಡು ಹೋಗಲಿಕ್ಕೆ ನಾನು ಒಲ್ಲೆ, ತಾನು ಒಲ್ಲೆ– ಎಂದು ಪ್ರತಿಯೊಬ್ಬರೂ ಹಿಂಜರಿಯಹತ್ತಿದರು. ಆಗ ಪೈಗಂಬರರು ನೀವು ಬಿಡಿರಿ; ಇವನು ನಮ್ಮ ಮನೆಗೇ ಬರಲಿ, ಎಂದು ತಮ್ಮ ಮನೆಗೆ ಕರೆದುಕೊಂಡು ಬಂದರು.

ಭೋಜನ ಸಮಯಕ್ಕೆ ಪೈಗಂಬರರು ಆ ಗೃಹಸ್ಥನನ್ನು ತಕ್ಕ ಸ್ಥಳದಲ್ಲಿ ಕುಳ್ಳಿರಿಸಿ, ಪಕ್ವಾನ್ನವನ್ನು ತಂದು ಅವನ ಮುಂದೆ ಇಟ್ಟು ಊಟಮಾಡಲು ಸೂಚಿಸಿದರು. ಅವನು ಆ ಎಲ್ಲ ಅನ್ನವನ್ನೂ ಉಂಡು ಇನ್ನಿಷ್ಟು ಬಡಿಸಿರೆಂದು ಹೇಳಿದನು. ಪೈಗಂಬರರು ಅವನ ಇಚ್ಛೆಯಂತೆ ಮತ್ತಿಷ್ಟು ಅನ್ನವನ್ನು ತಂದು ಬಡಿಸಿದರು. ಅದನ್ನೂ ಉಂಡು ಪುನಃ ಬೇಡಿದನು, ಆಗಲೂ ತಂದು ಬಡಿಸಿದರು. ಆಗ ಆ ಯಹೂದೀಮನುಷ್ಯನು ತನ್ನ ಮನದೊಳಗೆ ''ತಾವು ಕರೆದುಕೊಂಡು ಹೋಗುತ್ತೇವೆಂದು ಒಳ್ಳೆಯ ಹುರುಪಿನಿಂದ ಮುಂದೆ ಬಂದು ನನ್ನನ್ನು ಕರೆದುಕೊಂಡು ಬಂದಿದ್ದಾರೆ; ಇವರಿಗೆ ಚನ್ನಾಗಿ ಕೈತೋರಿಸಬೇಕು'' ಎಂದು ಯೋಚಿಸಿ ಪುನಃ ಇನ್ನಿಷ್ಟು ಬಡಿಸಿರೆಂದು ಹೇಳಹತ್ತಿದನು. ಪೈಗಂಬರರಾದರೂ ಬೇಸರಿಯದೆ ಅವನು ಬೇಡಿದಷ್ಟನ್ನೂ ತಂದು ತಂದು ಬಡಿಸುತ್ತಾ ಬಂದರು. ಕೆಲಹೊತ್ತಿನ ಮೇಲೆ ಆ ಮನುಷ್ಯನು 'ನನಗೆ ಸಾಕು, ಇನ್ನು ಒಳಗೆ ಹೋಗಬೇಡಿರಿ' ಎಂದನು. ಅತ್ತ ಒಳಗಿಂದಲೂ ಅದೇ ''ಪಕ್ವಾನ್ನವೆಲ್ಲವೂ ತೀರಿತು ಪ್ರಕಾರ ಸಾಕು, ಇನ್ನು ಒಳಗೆ ಬರಬೇಡಿ'' ಎಂಬ ಶಬ್ದವೂ ಕೇಳಬಂತು. ಹೀಗೆ ಆ ಮನುಷ್ಯನು ಮನೆಯೊಳಗಿನ ಎಲ್ಲ ಅಡಿ ಗೆಯನ್ನೂ ಒಬ್ಬನೇ ಉಂಡುಬಿಟ್ಟನು. ಪೈಗಂಬರರು ಅತಿಥಿಯು ತೃಪ್ತಿಯಾದದ್ದೇ ಪರಮಾನಂದವೆಂದು ತಿಲಾಂಶವಾದರೂ ಅಸಮಾಧಾನಪಡದೆ ಅಂದು ಎಲ್ಲರೊಡನೆ ಉಪವಾಸಮಾಡಿದರು.

ಭೋಜನೋತ್ತರ ಪೈಗಂಬರರು ಅವನಿಗೆ ಸಾಕಷ್ಟು ಹಾಸಿಗೆಹೊದಿಕೆಗಳನ್ನು ಕೊಟ್ಟು ಒಂದು ಪ್ರತ್ಯೇಕ ಕೋಣೆಯಲ್ಲಿ ಮಲಗಿಸಿದರು. ಅವನು ಆ ರಾತ್ರಿ ನಾಲ್ಕೈದು ಜನರ ಅಡಿಗೆಯನ್ನು ಒಬ್ಬನೇ ಬಕ್ಕರಿಸಿದ್ದಷ್ಟರಿಂದ ಅಜೀರ್ಣವಾಗಿ ಕೆಳಗೂ ಮೇಲೂ ಎರಡೂ ದ್ವಾರದಿಂದ ನಾದವು ಹೊರಡಹತ್ತಿತು. ಕಡೆಗೆ ಹೊಟ್ಟೆ ಚಾಡಿಸಲಿಕ್ಕೆ ಸಮವಾಗಿ ಏಳಲಿಕ್ಕೆ ಸಹ ಅವಕಾಶದೊರೆಯದೆ ಹಾಸಿಗೆ ಹೊದಿಕೆಗಳಲ್ಲಿಯೇ ಮಲಮೂತ್ರವಿಸರ್ಜನೆಯಾಯಿತು. ಅವನು ಒಂದು ತಾಸು ರಾತ್ರಿ ಇರುವಾಗಲೇ ಎದ್ದು ಯಾರಿಗೂ ತಿಳಿಸದೆ ಅಲ್ಲಿಂದ ಹೊರಟು ಹೋದನು.

ಮಾರನೆಯ ದಿವಸ ಪ್ರಾತಃಕಾಲಕ್ಕೆ ಪೈಗಂಬರರು ಆ ಕೋಣೆಯ ಬಾಗಿಲು ತೆರೆದುನೋಡುತ್ತಾರೆ, ಹಾಸಿಗೆಹೊದಿಕೆಗಳೆಲ್ಲ ಮಲಮೂತ್ರದಲ್ಲಿ ಮುಳುಗಿ ಎದ್ದಿವೆ; ಕೋಣೆಯಲ್ಲಿ ದುರ್ಗಂಧವು ವ್ಯಾಪಿಸಿಕೊಂಡಿದೆ! ಬಾಗಿಲಿಗೆ ಹೋದ ಕೂಡಲೆ ಗೊಮ್! ಎಂದು ದುರ್ವಾಸನೆಯು ಬರುತ್ತಿರುವದು. ಆದರೆ ಪೈಗಂಬರರು ಇದರ

ಕಡೆಗೆ ಲಕ್ಷ್ಯಕೊಡದೆ ಆ ಮನುಷ್ಯನು ಕೋಣೆಯಲ್ಲಿ ಇಲ್ಲದ್ದನ್ನು ನೋಡಿ, ಅವನಿಗೆ ನಮ್ಮಿಂದ ಏನು ಕೊರತೆಯಾಯಿತೋ, ಭೆಟ್ಟಿಯಾಗದೆ ಹಾಗೆ ಹೋಗಿದ್ದಾನೆ!- ಎಂದು ವಿಷಾದಪಟ್ಟರು, ಮತ್ತು ಆ ಹೇಸಿಗೆಯ ಹಾಸಿಗೆ ಹೊದಿಕೆಗಳನ್ನು ಸ್ವತಃ ತೊಳೆಯಹತ್ತಿದರು.

ಸ್ವಲ್ಪ ಹೊತ್ತಿನ ಮೇಲಿನ ನಿತ್ಯದಂತೆ ಮಿತ್ರಮಂಡಳಿಯವರು ಪೈಗಂಬರರ ಸನ್ನಿಧಿಗೆ ಬಂದರು. ಅವರು ಈ ಸ್ಥಿತಿಯನ್ನು ನೋಡಿ ''ಸ್ವಾಮಿ, ಇದೇನು? ಈ ಅಸ್ತವ್ಯಸ್ತವು ಬಹುಮಟ್ಟಿಗೆ ಆ ಯಹೂದೀಮನುಷ್ಯನಿಂದ ಘಟಿಸಿರಲಿಕ್ಕೆ ಬೇಕು. ಆದ್ದರಿಂದಲೇ ನಾವು ಆ ಕಿಡಿಗೇಡಿಯನ್ನು ಕರೆದುಕೊಂಡು ಹೋಗಲಿಲ್ಲ. ಆಗಿಹೋದದ್ದಕ್ಕೆ ಚಿಂತಿಸಿ ಫಲವಿಲ್ಲ, ಬಿಡಿರಿ! ಬಿಡಿರಿ!! ತಮ್ಮಂಥವರು ಅವನ ಮಲಮೂತ್ರಗಳನ್ನು ಮುಟ್ಟುವದು ಅಸಹ್ಯಕರವು. ನೀವು ಹಿಂದಕ್ಕೆ ಸರಿಯಿರಿ; ನಾವು ತೊಳೆಯುತ್ತೇವೆ''- ಎಂದು ಪ್ರತಿಯೊಬ್ಬರೂ ಮುಂದೆ ಬಂದು ತೊಳೆಯಲಿಕ್ಕೆ ಹಾತೊರೆಯಹತ್ತಿದವರು. ಆಗ್ಗೆ.

**ಪೈಗಂಬರರು** - ನಾನು ತೊಳೆದರೆ ಅಸಹ್ಯವೇನು?

**ಮಿತ್ರಮಂಡಲಿಯವರು** - ತಾವು ಗುರುಗಳು, ಶ್ರೇಷ್ಠರು. ಕಾರಣ ಕೀಳನಾದ ಆ ಯಹೂದೀ ಮನುಷ್ಯನ ಹೇಸಿಗೆಯನ್ನು ಸ್ಪರ್ಶಮಾಡುವದು ಆಯೋಗ್ಯವು.

**ಪೈಗಂಬರರು** - ಮಿತ್ರರೇ ಕೇಳಿರಿ; ಶ್ರೇಷ್ಠತ್ವವು ಮನುಷ್ಯನ ಕುಲಗೋತ್ರಗಳಲ್ಲಿರದೆ ಅವನ ಆಚಾರವಿಚಾರದಲ್ಲಿರುವದು. ಅವನು ಜಾತಿಯಿಂದ ಯಹೂದಿಯಾಗಿದ್ದರೂ ನೀತಿದೃಷ್ಟಿಯಿಂದ ವಿಚಾರಿಸಿದಲ್ಲಿ ನಮ್ಮಂತೆ ಅವನೂ ಮಾನವ ಕುಟುಂಬಕ್ಕೆ ಸಂಬಂಧಪಟ್ಟವನಿದ್ದಾನೆ. ಮಾನವಕುಟುಂಬದ ಸೇವೆಯನ್ನು ಮಾಡುವದೂ ಮಾನವರ ಹಿತವನ್ನು ಬಯಸುವದೂ ನಮ್ಮ ಆದ್ಯಕರ್ತವ್ಯವು. ಅಂದ ಮೇಲೆ ನಾನು ಈ ಹಾಸಿಗೆಯನ್ನು ತೊಳೆಯುವದರಲ್ಲಿ ಸಂಕೋಚವೇಕೆ?

**ಮಿತ್ರರು** - ಸತ್ಯವು! ಬೋಧಪ್ರದವಾದ ತಮ್ಮ ಮಾತುಗಳು ಪೂರ ಸಮಂಜಸವಾಗಿದೆ. ಆದರೆ ತೊಳೆಯಲಿಕ್ಕೆ ನಾವು ಹಾಜರ ಇದ್ದೇವೆ. ಕಾರಣ ತಾವು ತೊಳೆಯುವ ಅವಶ್ಯಕತೆಯಿಲ್ಲ, ಬಿಡಿರಿ.

**ಪೈಗಂಬರರು** - ಆ ಮನುಷ್ಯನು ನಿನ್ನೆ ರಾತ್ರಿ ನಿಮ್ಮ ಮನೆಗೆ ಅತಿಥಿಯಾಗಿ ಬಂದಿದ್ದರೆ ಹಾಗೆ ಮಾಡಬಹುದಾಗಿತ್ತು. ಆದರೆ ಅವನು ನಮ್ಮ ಅತಿಥಿಯಾಗಿ

ದ್ದಾನೆ. ಆದ್ದರಿಂದ ಸರ್ವರೀತಿಯಿಂದ ಅವನ ಪರಾಮರಿಕೆ ಮಾಡುವದು ನನ್ನ ಕರ್ತವ್ಯವಾಗಿದೆ.

ಮಿತ್ರರೇ ಎಷ್ಟೇ ಅಗ್ರಹಪಟ್ಟರೂ ಪೈಗಂಬರರು ತಾವೇ ತೊಳೆಯಹತ್ತಿದರು. ಆ ಯಹೂದೀ ಮನುಷ್ಯನು ತಾನು ಮಲಗಿದ್ದ ಕೋಣೆಯಲ್ಲಿ ತನ್ನದೊಂದು ಬೆಲೆಯುಳ್ಳ ಖಡ್ಗವನ್ನು ಮರೆತು ಹೋಗಿದ್ದನು. ದಾರಿಯಲ್ಲಿ ಅಕಸ್ಮಾತ್ ಸ್ಮರಣಕ್ಕೆ ಬರಲು ಅದನ್ನು ಒಯ್ಯುವದಕ್ಕಾಗಿ ಮರಳಿ ಮನೆಗೆ ಬಂದು ತಾನು ಹೇಸಿಗೆಮಾಡಿದ ಹಾಸಿಗೆಹೊದಿಕೆಗಳನ್ನು ಪೈಗಂಬರರು ಸ್ವಹಸ್ತದಿಂದ ತೊಳೆಯುತ್ತ ಕೂತಿರುವದನ್ನೂ ಸುತ್ತಲೂ ಜನರು ನೆರೆದು ತಾವು ತೊಳೆಯಲಿಕ್ಕೆ ಹಾತೊರೆಯುತ್ತಿರುವದನ್ನೂ ಕಂಡನು. ಇವನು ಬಂದದ್ದನ್ನು ನೋಡಿ ಪೈಗಂಬರರು ಹರ್ಷಗೊಂಡು ಅದರದಿಂದ ಮುಂದಕ್ಕೆ ಕರೆದರು ಮತ್ತು ರಾತ್ರಿಯಲ್ಲಿ ಅಜೀರ್ಣದ ಮೂಲಕ ಅವನಿಗಾದ ತಾಪವನ್ನು ಕುರಿತು ವಿಷಾದಪಟ್ಟು ಅವನ ಖಡ್ಗವನ್ನು ತಂದುಕೊಟ್ಟರು.

ಆ ಯಹೂದೀ ಗೃಹಸ್ಥನು ಪೈಗಂಬರರ ನಿರಹಂಕಾರಬುದ್ಧಿಯನ್ನೂ ಅವರ ಅತಿಥಿಸತ್ಕಾರದ ಪ್ರೇಮಾದರವನ್ನೂ ಕಣ್ಣಾರೆ ಕಂಡು ಬೆರಗಾದನು. ಆ ಕ್ಷಣವೇ ಅವನಲ್ಲಿ ಪೈಗಂಬರರ ಬಗ್ಗೆ ಪೂಜ್ಯಭಾವನೆಯು ಉದಯವಾಯಿತು ಮತ್ತು ಮಾನವೀಕುಟುಂಬದ ಸೇವೆಯೇ ತಮ್ಮ ಮುಖ್ಯಧ್ಯೇಯವೆಂದು ಭಾವಿಸುವ ಈ ಮಹಾತ್ಮರು ಭೋಧಿಸುವಂಥ ಧರ್ಮವೇ ಶ್ರೇಷ್ಠವಾದದ್ದೆಂದು ಆಗಲೇ ಪೈಗಂಬರರ ಸಮ್ಮುಖದಲ್ಲಿ ''**ಲಾ ಇಲಾಹ ಇಲ್ಲಲ್ಲಾಹು ಮಹಮ್ಮದುರ್ರ ಸೂಲಿಲ್ಲಾಹಿ**''[1] ಎಂಬ ಬೀಜಮಂತ್ರವನ್ನು ಓದಿ ನಿರ್ಮಲಮನಸ್ಸಿನಿಂದ ಇಸ್ಲಾಮೀಧರ್ಮವನ್ನು ಸ್ವೀಕಾರಮಾಡಿದನು.

ಇದರಂತೆ ಮಹಮ್ಮದ ಪೈಗಂಬರ ಜೀವನದಲ್ಲಿ ಸದಾಚಾರಸದ್ವರ್ತನಗಳನ್ನು ಪ್ರತ್ಯಕ್ಷನೋಡಿ ಇಸ್ಲಾಮೀಧರ್ಮ ಸ್ವೀಕಾರಮಾಡಿದವರ ದೃಷ್ಟಾಂತಗಳು ಅನೇಕ ಉಂಟು ಆದರೆ ದುರಭಿಮಾನಿಗಳಾದ ಕೆಲವು ಪಾಶ್ಚಾತ್ಯ ಇತಿಹಾಸ ಕರ್ತರು ಇಸ್ಲಾಮೀಧರ್ಮದ ಶಾಂತತಾಪ್ರೀತಿ, ನ್ಯಾಯಶೀಲತೆ, ಸಮದೃಷ್ಟಿ-ಮುಂತಾದ ಉಚ್ಚತತ್ತ್ವಗಳ ಸೌಂದರ್ಯಮುಖದ ಮೇಲೆ ಕಪ್ಪುಬಣ್ಣವನ್ನು ಬಳಿದು,

---

1. ಒಬ್ಬ ಪರಮಾತ್ಮನ ಹೊರತು ಅನ್ಯದೇವರಿಲ್ಲ. ಮಹಮ್ಮದ ಸಾಹೇಬರು ಅವನಿಂದ ಕಳುಹಿಸಲ್ಪಟ್ಟವರು.

ನೋಡುವವರಿಗೆ ಅಕರಾಳವಿಕರಾಳಸ್ವರೂಪವು ಗೋಚರವಾಗುವಂತೆ ಮಾಡಿರುವರು; ಮತ್ತು ಪೈಗಂಬರರು ಕತ್ತಿಯ ಬಲದಿಂದ ಧರ್ಮಪ್ರಸಾರ ಮಾಡಲು ಹವಣಿಸಿದರೆಂದು ನಿರಾಧಾರವಾದ ಆರೋಪವನ್ನು ಹೊರಿಸಿರುವರು.

ನಮ್ಮ ಹಿಂದೂಭಾಂಧವರಲ್ಲಿ ಕೆಲವರು ಅರಬೀಫಾರಸೀಗ್ರಂಥಗಳ ವ್ಯಾಸಂಗವಿಲ್ಲದೆ ಹಿಂದುಮುಂದಿನ ವಿಚಾರಮಾಡದೆ ಇಸ್ಲಾಮೀಧರ್ಮವನ್ನೂ ಆ ಧರ್ಮದ ಅನುಯಾಯಿಗಳನ್ನೂ ಅಸೂಯಾದೃಷ್ಟಿಯಿಂದ ನೋಡುತ್ತಿರುವರು. ಇದು ಹಿಂದುಮುಸಲ್ಮಾನರ ವೈಷಮ್ಯಕ್ಕೆ ಕಾರಣವಾಗಿದೆ, ದೇಶೋನ್ನತಿಗೂ ಮಹಾವಿಘ್ನವನ್ನುಂಟುಮಾಡಿದೆ. ಆಧುನಿಕ ಕಾಲದಲ್ಲಿ ಮಿಸ್ಟರ್ ಥಾಮಸ್ ಕಾರ್ಲಾಯಿಲ್, ಪ್ರೊಫೇಸರ ಹರ್ಬರ್ಟವಾಯಿಲ್, ಮಹಾತ್ಮಾಗಾಂಧಿ, ಪಂಡಿತ ಶಾಂತಾರಾಮ ಪ್ರೊಫೇಸರ ಮೊದಲಾದ ನಿಷ್ಪಕ್ಷಪಾತಿಗಳು ಇಸ್ಲಾಮೀ ಧರ್ಮದ ಬಗ್ಗೆ ಮಾನ್ಯವಾದ ಸದಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ನಮ್ಮ ಹಿಂದೂಬಾಂಧವರು ಈ ಸದ್ಗೃಹಸ್ಥರ ಉದ್ಗಾರಗಳನ್ನು ಅವಲೋಕನಮಾಡಿದಲ್ಲಿ ಇಸ್ಲಾಮೀಧರ್ಮದ ವಿಷಯಕ್ಕೆ ಜನರಲ್ಲಿರುವ ದುರಾಗ್ರಹವು ದೂರಾದೀತೆಂಬುದರಲ್ಲಿ ಸಂದೇಹವಿಲ್ಲ.

ಮುಸಲ್ಮಾನಬಾಂಧವರೂ ಸಹ ಹ|| ಮಹಮ್ಮದ ಪೈಗಂಬರರ ಶೀಲವನ್ನೂ ಭೂತದಯ, ಸಮದೃಷ್ಟಿ, ಸಹಾನುಭೂತಿ- ಮುಂತಾದ ಸದ್ಗುಣಗಳನ್ನೂ ಮಾದರಿಯಾಗಿಟ್ಟುಕೊಂಡು ಹಿಂದೂಜನರೊಡನೆ ಪ್ರೇಮಭಾವದಿಂದ ವರ್ತಿಸತಕ್ಕದ್ದು. ಅವರವರ ಧರ್ಮಗಳು ಅವರಿಗೆ ಮಾನ್ಯವು. ಪರಧರ್ಮವನ್ನು ಹೀಯಾಳಿಸುವದು ಧರ್ಮವಂತರಿಗೆ ಸರಿಯಾದದ್ದಲ್ಲ. ಕುರಾನಷರೀಫದಲ್ಲಿ ಅನ್ಯಧರ್ಮದ ದೇವತೆಗಳ ವಿಷಯದಲ್ಲಿ ಅವಶಬ್ದಗಳನ್ನು ಆಡಬಾರದೆಂದು ಕಟ್ಟಪ್ಪಣೆ ಇದೆ. ''ಪರಧರ್ಮಿಗಳ ದೇವತೆಗಳನ್ನು ನಿಂದೆಮಾಡಬೇಡಿರಿ; ಒಂದು ವೇಳೆ ನೀವು ಅವುಗಳನ್ನು ಬೈದರೆ ಅವರು ನಿಮ್ಮ ದೇವರನ್ನು ಬೈಯುವರು''. (ಸೂರಾ. 6ರುಕೂ 16). ಕುರಾನಷರೀಫದ ಮತ್ತೊಂದು ಭಾಗದಲ್ಲಿ ''ಕ್ರಿಶ್ಚನ್ನರ ಚರ್ಚಗಳನ್ನೂ ಯಹೂದೀಯರ ದೇವಸ್ಥಾನಗಳನ್ನೂ ಮುಸಲ್ಮಾನರ ಮಸೀದಿಗಳನ್ನೂ ಯೋಗಿಗಳ ಆಶ್ರಮಗಳನ್ನೂ ನಾಶಪಡಿಸುವ ಜನಾಂಗಕ್ಕೆ ದೇವರು ಅಳಿಗಾಲವನ್ನು ತರುತ್ತಾನೆ'' (ಸೂರಾ 22ರುಕೂ 5)– ಈ ಪ್ರಕಾರ ಅನ್ಯಧರ್ಮಿಗಳ ದೇವಸ್ಥಾನಗಳನ್ನು ನಾಶಪಡಿಸುವವರಿಗೆ ವಿನಾಶಕಾಲವೆಂದು ಸ್ಪಷ್ಟೋಕ್ತಿ ಅದೆ. ಆದ ಕಾರಣ ಸುವಿಚಾರಿಗಳಾದ ಮುಸಲ್ಮಾನರು ಕುಹಕ ಜನರ ಚಾಡಿಯ ಮಾತುಗಳಿಗೆ

ಮೋಸಹೋಗಿ ಹಿಂದೂಜನರ ದ್ವೇಷವನ್ನು ಕಟ್ಟಿಕೊಂಡು ಅವರ ದೇವತೆಗಳನ್ನು ನಿಂದೆಮಾಡುವದೂ ದೇವಸ್ಥಾನಗಳನ್ನು ಕೆಡಿಸಲು ಪ್ರಯತ್ನಿಸುತ್ತಿರುವದೂ ಇಸ್ಲಾಮೀಧರ್ಮಾಜ್ಞೆಗಳನ್ನು ಉಲ್ಲಂಘಿಸಿದಂತಾಗುವದು.

ಯಾವದೇ ಧರ್ಮದವನಿರಲಿ, ಅವನೊಡನೆ ಸ್ನೇಹಭಾವದಿಂದ ನಡೆದುಕೊಂಡು ಸಖ್ಯ ಬೆಳೆಯಿಸುವದು ಇಹಪರಸುಖಕ್ಕೆ ಅನುಕೂಲವಾಗಿರುವದು. ಹಿಂದುಸ್ಥಾನದಲ್ಲಿರುವ ಹಿಂದೂಮುಸಲ್ಮಾನರು ಒಂದೇ ದೇಶದಲ್ಲಿ ಒಬ್ಬ ಅರಸನ ಆಡಳಿತದಲ್ಲಿ ವಾಸಿಸುವದರಿಂದ ಒಬ್ಬರಿಗೊಬ್ಬರು ಸಹಕಾರಿಗಳಾಗಿ ಐಕ್ಯಮತದಿಂದ ವರ್ತಿಸುವದು ಉಭಯತರಿಗೂ ಹಿತಕರವಾದ ಮಾತಾಗಿದೆ.

★★★★★

# ಸಭ್ಯಗೃಹಸ್ಥನ ಲೌಕಿಕ ವ ಧಾರ್ಮಿಕ ಕರ್ತವ್ಯ ಕರ್ಮಗಳು

### (ಕುರಾನಗ್ರಂಥದಿಂದ ಸಂಗ್ರಹಿಸಿದ್ದು)

**-ಶ್ರೀಯುತ ಎಂ.ಬಿ.ಕೊಪ್ಪಳ**

1. ಸತ್ಯವಂತನಾಗಿರು (ಅಧ್ಯಾಯ 8)
2. ನ್ಯಾಯಶೀಲನಾಗಿರು (ಅ. 6)
3. ವಚನವನ್ನು ಪಾಲಿಸು (ಅ. 14)
4. ಜನರಿಗೆ ಸತ್ಕಾರ್ಯಗಳನ್ನು ಮಾಡಲು ಬೋಧಿಸು. (ಅ. 9)
5. ಸತ್ಕಾರ್ಯದಲ್ಲಿ ಸಹಾಯಕನಾಗಿರು. (ಅ. 6)
6. ಆಪ್ತರು, ಇಷ್ಟರು, ಮಿತ್ರರು, ನೆರೆಹೊರೆಯವರು, ಸೇವಕರು, ಪ್ರಯಾಣಸ್ಥರು, ಇವರೆಲ್ಲರೊಡನೆ ಪರೋಪಕಾರಿ ಬುದ್ಧಿಯಿಂದ ವರ್ತಿಸು. (ಅ. 5)
7. ನಿಮ್ಮ ಪತ್ನಿಯರನ್ನು ಪೀಡಿಸಬೇಡಿರಿ. (ಅ. 2)

8. ಸ್ತ್ರೀಯರೊಡನೆ ಸದಾಚರಣೆಯಿಂದ ವರ್ತಿಸು. (ಅ. 2)
9. ಪತಿಪತ್ನಿಯರೀರ್ವರಲ್ಲಿ ಮನಸ್ತಾಪವುಂಟಾದರೆ ವಿಚಾರಣೆಗಾಗಿ ಪತಿಯ ಕಡೆಯಿಂದ ಒಬ್ಬ ಸಭ್ಯಗ್ರಹಸ್ಥನನ್ನೂ ಪತ್ನಿಯ ಪಕ್ಷವಾಗಿ ಒಬ್ಬ ಸಂಪನ್ನ ಹೆಣ್ಣುಮಗಳನ್ನೂ ನೇಮಿಸು. (ಅ. 4)
10. ಅಂತಃಕಲಹಗಳಿಂದ ಶಕ್ತಿಯು ಸಡಿಲಾಗುವದು. (ಅ. 10)
11. ಮಹತ್ತ್ವದ ಕಾರ್ಯಗಳಲ್ಲಿ ಒಬ್ಬರಲ್ಲೊಬ್ಬರು ವಿಚಾರವಿನಿಮಯ ಮಾಡುತ್ತಿರಬೇಕು. (ಅ. 4)
12. ತೂಕ ಅಳತೆಗಳಲ್ಲಿ ತಗಲು ಮಾಡಬೇಡ. (ಅ. 12)
13. ಯಾವನೊಬ್ಬ ವ್ಯಾಪಾರಸ್ಥನಿಗೆ ಹಾನಿಯುಂಟಾದರೆ ಅವನ ಸ್ಥಿತಿಯು ಸುಧಾರಿಸುವವರೆಗೆ ಅವನಿಂದ ಬರತಕ್ಕ ಹಣವನ್ನು ಬಿಟ್ಟುಬಿಡುವದು ಹಿತಕರ (ಅ. 5)
14. ಎಲೈ ಸದ್ಭಕ್ತರೇ! ಸಿರಿಸಂಪತ್ತುಗಳು ಪರಮಾತ್ಮನ ನಾಮಸ್ಮರಣೆಯನ್ನು ಮರೆಯಿಸದಂತೆ ಜಾಗರೂಕರಾಗಿರಿ.
15. ಪರರ ದೇವಸ್ಥಾನಗಳನ್ನು ನಾಶಪಡಿಸಬೇಡಿರಿ. (ಅ. 17)
16. ಜನರಿಗೆ ಸಾಮೋಪಾಯದಿಂದ ಧರ್ಮವನ್ನು ಬೋಧಿಸಬೇಕು. (ಅ. 14)
17. ಸತ್ಯವನ್ನು ನುಡಿಯುವಾಗ್ಗೆ ಆಪ್ತ-ಇಷ್ಟರ ಪಕ್ಷಪಾತವನ್ನು ಹಿಡಿಯಬೇಡಿರಿ **(ಅ.8)**

★★★★★

# ಎರಡು ಇಸ್ಲಾಮಿ ರತ್ನಗಳು

**- ಶ್ರೀಯುತ ಎಮ್.ಬಿ.ಕೊಪ್ಪಳ**

(ಭಾರತಮಾತೆಯ ಸಮಾನಪುತ್ರರೆನಿಸುವ ಹಿಂದೂಮುಸಲ್ಮಾನರೊಳಗಿನ ವೈಷಮ್ಯಭಾವನೆಯನ್ನು ಹೋಗಲಾಡಿಸುವದಕ್ಕಾಗಿ ಹಗಲೂ ಇರುಳೂ ಹೆಣಗುತ್ತಿರುವ ದೇಶಬಂಧುಗಳಲ್ಲಿ ಸ್ವಾಮಿ ಲಕ್ಷ್ಮಣಜಿ ಮಹಾರಾಜ, ಹಿಸಾರ (ಪಂಜಾಬ) ಎಂಬವರೊಬ್ಬ ಗ್ರಂಥಕರ್ತರಿದ್ದಾರೆ. ಇವರು ಮಹಾವಿದ್ವಾಂಸರೂ ಶ್ರೇಷ್ಠಕವಿಗಳೂ ಪರಧರ್ಮಸಹಿಷ್ಣುಗಳೂ

ಆಗಿರುವರು. ಪ್ರಕೃತ ಜಗತ್ತಿನಲ್ಲಿ ಪ್ರಚಲಿತವಾಗಿರುವ ವಿಶ್ವಮತಸ್ಥಾಪಕರ ಜೀವನಚರಿತ್ರೆಗಳನ್ನು ಬರೆಯುವ ಕುತೂಹಲ ಇವರಿಗೆ ವಿಶೇಷವಾಗಿದೆ. ಪ್ರಥಮದಲ್ಲಿ ಇವರು ಇಸ್ಲಾಮಿ ಧರ್ಮಸ್ಥಾಪಕರಾದ ಹ|| ಮಹಮ್ಮದ ಪೈಗಂಬರರ ವಿಷಯವಾಗಿ 'ಅರಬಕಾ ಚಾಂದ' ಎಂಬ ಉದ್ಗ್ರಂಥವನ್ನು ವಿರಚಿಸಿದ್ದಾರೆ. ಇವರು ಅನೇಕಾನೇಕ ಗ್ರಂಥಾವಲೋಕನ ಸಾರಸಂಗ್ರಹಶಕ್ತಿಯಿಂದ ಬುದ್ಧಿಪುರಸ್ಸರವಾಗಿ ಪೂಜ್ಯಭಾವದಿಂದ ಪೈಗಂಬರರ ವಿಷಯಕ್ಕೆ ಒಂದು ಮೌಕ್ತಿಕಮಾಲೆಯನ್ನೇ ಕಟ್ಟಿರುವರೆಂದರೆ ಅತಿಶೋಕ್ತಿಯಾಗಲಾರದು. ಮೇಲೆ ಕಂಡ ಗ್ರಂಥದೊಳಗಿನ ಎರಡು ಉದ್ಗಾರಗಳನ್ನು ಇಲ್ಲಿ ಉಲ್ಲೇಖಿಸಿದ್ದೇನೆ)

## ಜನಾಬರು ಕೆಂಡದ ಹಾಸಿಗೆಯ ಮೇಲೆ

ಮಹಮ್ಮದ ಪೈಗಂಬರರು ಮೆಕ್ಕಾಪಟ್ಟಣದಲ್ಲಿ ಧರ್ಮೋಪದೇಶ ಕಾರ್ಯವನ್ನು ಕೈಕೊಂಡ ಸ್ವಲ್ಪ ದಿವಸಗಳಲ್ಲಿಯೇ ಕೆಲವು ಜನರು ತಮ್ಮ ಅಂಧಶ್ರದ್ಧೆಯ ಮೂರ್ತಿಪೂಜೆಯನ್ನು ತ್ಯಜಿಸಿ ಇಸ್ಲಾಮಿ (ಏಕೇಶ್ವರೀಶಾಂತಿಮಯ) ಧರ್ಮವನ್ನು ಸ್ವೀಕಾರಮಾಡಿದರು. ಆದರೆ ಇದು ಮೆಕ್ಕಾದ ಕುರೇಷಜನರಿಗೆ ಸಹನವಾಗದೆ ಪೈಗಂಬರರನ್ನೂ ಅವರ ಅನುಯಾಯಿಗಳನ್ನೂ ಪೀಡಿಸಹತ್ತಿದರು. ಈ ಪೀಡನೆಗೆ ಒಳಗಾದವರಲ್ಲಿ ಜನಾಬರೊಬ್ಬರಾಗಿದ್ದಾರೆ.

ಇವರ ತಂದೆಯ ಹೆಸರು ಅಲ್ ಅಸನ್, ಇವರು ತಮಯಮ್ ಮನೆತನದವರು. ಇವರು ಉಮ್ಮೆ ತಮಾರ ಎಂಬ ಶ್ರೀಮಂತನ ಗುಲಾಮರಾಗಿದ್ದರು. ಒಂದು ದಿವಸ ಇವರಿಗೆ ಸತ್ಯೋದಯವಾಗಿ ಇಸ್ಲಾಮಿಧರ್ಮವನ್ನು ಸ್ವೀಕಾರ ಮಾಡಿದರು. ಈ ಸಂಗತಿಯು ಉಮ್ಮೆತಮಾರನಿಗೆ ತಿಳಿದುಬರಲು, ಆತನು ಈ ಹೊಸ ಪಂಥವನ್ನು ತಿರಸ್ಕರಿಸೆಂದು ಅಪ್ಪಣೆಮಾಡಿದನು. ಜನಾಬರು ಅದಕ್ಕೊಪ್ಪಲಿಲ್ಲ. ಆಗ ತಮಾರನು ಕೋಪಾವೇಶದಿಂದ ಜನಾಬರ ಕೈಕಾಲುಗಳನ್ನು ಕಟ್ಟಿ ಮಧ್ಯಾಹ್ನದ ಪ್ರಖರವಾದ ಬಿಸಿಲಿನೊಳಗೆ ಕಾದ ಮಳಲಿನ ಮೇಲೆ ಮಲಗಿಸಿ 'ಈಗಲಾದರೂ ನಿನ್ನ ಹೊಸಧರ್ಮವನ್ನು ತ್ಯಜಿಸುವೆಯಾ?' ಎಂದು ಕೇಳಿದನು. ಅದಕ್ಕೆ ಜನಾಬರು 'ಸರ್ವಥಾ ಬಿಡಲಾರೆನು' ಎಂದು ಪ್ರತ್ಯುತ್ತರವನ್ನಿತ್ತರು. ಆಗ ತಮಾರನು ಜನಾಬರನ್ನು ಪರಿಪರಿಯಿಂದ ಪೀಡಿಸಹತ್ತಿದನು. ಜನಾಬರು ಭಯಭೀತರಾಗದೆ ಬಂದ ಕಷ್ಟಗಳನ್ನೆಲ್ಲ ಸಹಿಸಿಕೊಳ್ಳುತ್ತಿದ್ದರು.

ಒಂದು ದಿವಸ ಉಮ್ಮೆತಮಾರನು ಧಗಧಗಿಸುವ ಕೆಂಡದ ಹಾಸಿಗೆಯನ್ನು

ತಯಾರಿಸಿ ಜನಾಬರನ್ನು ಅದರ ಮೇಲೆ ಮಲಗಿಸಿದನು; ಮತ್ತು ಅವರು ಅತ್ತಿತ್ತ ಅಲುಗಾಡದಂತೆ ಎದೆಯ ಮೇಲೆ ಒಬ್ಬನನ್ನು ನಿಲ್ಲಿಸಿ ''ಎಲೊ, ಜನಾಬ! ನೋಡು!! ಈಗ ಹೇಗಿದೆ? ಇನ್ನು ಮೇಲೆ ಆ ಪಂಥದ ಹೆಸರು ಉಚ್ಚರಿಸುವೆಯಾ?'' ಎಂದು ಕೇಳಿದನು.

ಜನಾಬರು ''ನನ್ನ ಒಡೆಯನೆ, ನಾನು ಒಮ್ಮೆ ಸತ್ಯಧರ್ಮಕ್ಕೆ ಆತ್ಮಸಮರ್ಪಣೆ ಮಾಡಿಬಿಟ್ಟಿರುತ್ತೇನೆ. ಆದ್ದರಿಂದ ನನ್ನ ಆತ್ಮವು ಲವಲೇಶವಾದರೂ ಆ ಪಂಥವನ್ನು ತೊರೆಯಲಾರದು. ಇಷ್ಟೇ ಏಕೆ? ನೀವು ನನ್ನನ್ನು ಅಗ್ನಿಕುಂಡದಲ್ಲಿ ಚಲ್ಲಿಸಿರಿ, ಅಥವಾ ನನ್ನ ಶಿರಚ್ಛೇದನವನ್ನೇ ಮಾಡಿಸಿರಿ; ನಾನೆಂದಿಗೂ ಭಯಪಡುವವನಲ್ಲ. ನಿರಾಕಾರನಾದ ಪರಮಾತ್ಮನು ನನ್ನ ಭಕ್ತಿವಿಶ್ವಾಸಗಳನ್ನು ಇದೇ ರೀತಿಯಾಗಿ ಪರೀಕ್ಷಿಸುವದಿದ್ದರೆ ಹಾಗೆಯೇ ಆಗಲಿ!'' ಎಂದು ಶಾಂತಚಿತ್ತದಿಂದಲೂ ಗಂಭೀರವಾಣಿಯಿಂದಲೂ ನುಡಿದರು.

ಪ್ರಜ್ವಲಿತವಾದ ಕೆಂಡಗಳು ಜನಾಬರ ಶಾಂತಸ್ವರೂಪ ದೃಢನಿಶ್ಚಯದ ನಿಶ್ಚಲಭಕ್ತಿಗೆ ಎದುರಾಗದೆ ಅವರ ಬೆನ್ನಕೆಳಗೆ ತಮ್ಮಿಂದ ತಾವೇ ಆರಿ, ಅಲ್ಲಿಯೇ ಇದ್ದಲಿಯಾದವು, ಉಮ್ಮೆತಮಾರನು ಮುಂದೆ ದಿನದಿನವೂ ಒಂದೊಂದು ಪ್ರಕಾರದಿಂದ ತ್ರಾಸಕೊಡಹತ್ತಿದನು. ಒಂದು ದಿವಸ ಪೈಗಂಬರನ ಮಿತ್ರರೊಬ್ಬರು ಜನಾಬರ ಮೇಲೆ ನಡೆಯುತ್ತಿದ್ದ ಬಲಾತ್ಕಾರವನ್ನು ಕಣ್ಣಾರೆಕಂಡು ಉಮ್ಮೆತಮಾರನು ಬೇಡಿದ ಬೆಲೆಯನ್ನು ಕೊಟ್ಟು ಅವರನ್ನು ಆ ಕ್ರೂರಿಯ ಗುಲಾಮಗಿರಿಯಿಂದ ಬಿಡಿಸಿದರು. ಜನಾಬರು ಮುಂದೆ ಇತರ ಮುಸಲ್ಮಾನರೊಡನೆ ದೇಶತ್ಯಾಗಮಾಡಿ ಮದೀನಾಶಹರಕ್ಕೆ ಹೋದರು. ಅಲ್ಲಿ ಮಹಮ್ಮದ ಪೈಗಂಬರರು ಜನಾಬರ ಬೆನ್ನಮೇಲಿದ್ದ ಸುಟ್ಟಕಲೆಗಳನ್ನು ಜನರಿಗೆ ತೋರಿಸಿ ಇವರ ಇಸ್ಲಾಮದ ಮೇಲಿನ ಏಕನಿಷ್ಠೆಯನ್ನು ಪ್ರಶಂಸೆಮಾಡುತ್ತಿದ್ದರು.

## ಸಲ್ಮಾವಿದುಷಿಯು ಖಡ್ಗದ ಝಳಪಿನಲ್ಲಿ

ಈಕೆಯ ಗಂಡನ ಹೆಸರು ಅಶಿಮ್ ಬಿನ್ ಅಪ್ಸಾಸ. ಅಸ್ ಬಿನ್ ರೂಫಿಯಾ ಎಂಬವನು ಇವಳ ಅಣ್ಣನು. ಸಲ್ಮೆಯು ಇಸ್ಲಾಮ ಪಂಥವನ್ನು ಸ್ವೀಕರಿಸಿದ ಸಂಗತಿಯು ಗೊತ್ತಾದ ಕೂಡಲೆ ಅಶಿಮ್ ಮತ್ತು ಆಸ್ ಉಭಯತರು ಸಲ್ಮೆಗೆ ನಾನಾಪ್ರಕಾರದಿಂದ ತ್ರಾಸವನ್ನು ಕೊಡಹತ್ತಿದರು. ಇವರು ಅವಳನ್ನು ದಿನ ದಿನವೂ

ಕೋರಡೆಯಿಂದ ಬಲವಾಗಿ ಹೊಡೆಯುತ್ತಿದ್ದರು. ಅದರಿಂದ ಅವಳ ಮೈಮೇಲೆ ಬಾರುಬಸಳುಗಳೆದ್ದು ದೇಹವು ರಕ್ತಮಯವಾಗುತ್ತಿತ್ತು. ಆದರೂ ಆ ಸಾಧ್ವಿಯು ತನ್ನ ಧರ್ಮವನ್ನು ತ್ಯಜಿಸಲು ಸಮ್ಮತಿಸುತ್ತಿರಲಿಲ್ಲ.

ಒಂದು ದಿನ ಆಸನು ಸಲ್ಮೆಯ ಕೈಕಾಲುಗಳನ್ನು ಕಟ್ಟಿ ತಪ್ತವಾದ ಮಳಲಿನ ಮೇಲೆ ಸಮಗ್ರ ನಾಲ್ಕು ಗಂಟೆಗಳು ಮಲಗಿಸಿ 'ಈಗ ಹೊಸ ಪಂಥವನ್ನು ಬಿಡುವೆಯೊ?'- ಎಂದು ಕೇಳಿದನು. ಅದಕ್ಕೆ ಸಲ್ಮೆಯು ನಕಾರದಲ್ಲಿ ಉತ್ತರವನ್ನಿತ್ತಳು. ಅವನು ರೊಚ್ಚಿಗೆದ್ದು ತೀಕ್ಷ್ಣವಾದ ಒಂದು ಖಡ್ಗವನ್ನು ಒರೆಯಿಂದ ಹಿರಿದು ಝಳುಪಿಸುತ್ತಾ ಬಂದು ಎಲೈ ಮೂರ್ಖಳೆ, ಬುದ್ಧಿಭ್ರಂತವಾದ ಆ ಮಹಮ್ಮದನ ವಿಷಯಕ್ಕೆ ನೀನು ಏನು ಭಾವಿಸಿರುವೆ? ಜನರ ತಲೆಕೆಡಿಸಲು ಹರಡುತ್ತಿರುವ ಅವನ ಹೊಸ ಪಂಥವನ್ನು ತ್ಯಜಿಸುವೆಯೊ ಅಥವಾ ನನ್ನ ಖಡ್ಗಕ್ಕೆ ಆಹುತಿಯಾಗುವೆಯೊ? ಹೇಳು, ಹುಂ ಬೇಗ ಹೇಳು; ವಿಲಂಬ ಮಾಡಬೇಡ!'' ಎಂದು ಗದರಿಸಿದನು.

**ಸಲ್ಮೆಯು:** ''ಅಣ್ಣನವರೆ ನಿಮಗೆ ಸಿಟ್ಟು ಬಂದಿದ್ದರೆ ನನ್ನನ್ನು ಬೈಯಿರಿ; ಆದರೆ ಆ ಮಹಾತ್ಮರ ವಿಷಯದಲ್ಲಿ ಮಾತ್ರ ಅಪಶಬ್ದವನ್ನು ಆಡಬೇಡಿರಿ. ಜಗತ್ಕರ್ತನಾದ ಪರಮಾತ್ಮನು ನಮ್ಮಲ್ಲಿ ರೂಢವಾಗಿರುವ ಅನಾಚಾರಗಳನ್ನು ಸಂಹರಿಸುವದಕ್ಕಾಗಿಯೇ ಮಹಮ್ಮದ್ ಪೈಗಂಬರನು ನಮ್ಮೆಡೆಗೆ ಕಳುಹಿಸಿದಾನೆ. ಅವರು ಮೋಕ್ಷದಾಯಿಗಳೂ ಸತ್ಯವಾದಿಗಳೂ ಆಗಿದ್ದಾರೆ. ಇಸ್ಲಾಮವು ತೇಜಸ್ವಿಯಾದ ಮತವಾಗಿದೆ. ಅದು ನಿಮ್ಮಂಥ ವಿಕಾರವಶದಿಂದ ಬುದ್ಧಿಹೀನರಾದವರ ಜೊಳ್ಳುಬೆದರಿಕೆಗೆ ನಂದಿಹೋಗುವಂಥದಲ್ಲ. ಇದೇ ನನ್ನ ಹೃದಯಾಂತಃಕರಣದ ಭಾವನೆಯು. ನಿರಂಜನನಾದ ಪರಮಾತ್ಮನೇ ದೇವರೆಂದು ನಂಬಿಕೆಮಾಡಿಕೊಂಡದ್ದು ನನ್ನ ಆತ್ಮವು, ಈ ಸ್ಥೂಲಕಾಯವಲ್ಲ. ಆ ಆತ್ಮವು ನಿಮ್ಮ ಅಂಕೆಯೊಳಗೆ ಒರಲಾರದು. ಇದೊ ನನ್ನ ಸ್ಥೂಲಕಾಯವು ನಿಮ್ಮೆದುರಿನಲ್ಲಿಯೇ ಬಿದ್ದಿದೆ. ನೀವು ಒಬ್ಬರೇ ಏಕೆ? ಇನ್ನೂ ನಾಲ್ಕು ಜನರನ್ನು ಸಹಾಯಕ್ಕೆ ಕರೆಯಿಸಿಕೊಳ್ಳಿರಿ, ನಿಮ್ಮ ಇಚ್ಛಾನುಸಾರ ನನ್ನ ಸ್ಥೂಲದೇಹವನ್ನು ಛಿನ್ನವಿಚ್ಛಿನ್ನಮಾಡಿರಿ!'' ಎಂದು ಆ ಸಾಧ್ವೀಮಣಿಯು ಗಂಭೀರಮುದ್ರೆಯಿಂದ ಉಸುರಿದಳು.

ಆಗ ಮದೋನ್ಮತ್ತನಾದ ಆಸನು ಕೈಯೊಳಗಿನ ಖಡ್ಗವನ್ನು ಸಲ್ಮೆಯ ಎದೆಯೊಳಗೆ ಚುಚ್ಚಿದನು. ಕ್ಷಣಾರ್ಧದಲ್ಲಿ ಆ ವೀರಾಂಗನೆಯ ಮುಖದಿಂದ

''ಅಲ್ಲಾ ಹು ಅಕಬರ್?'' ಎಂಬ ಗರ್ಜನೆಯೊಡನೆ ಅವಳ ಆತ್ಮವೂ ದಿಗಂತದಲ್ಲಿ ವಿಶ್ರಾಂತವಾಯಿತು.

ಇದೇ ಪ್ರಕಾರ ವುಕ್ಕಾರ ಕುರೇತ ಜನರ ಹ॥ ಬಿಲಾಲ, ಅಮ್ಮಾರ, ಯಾಸರ, ಸೊಹೀಬ- ಮೊದಲಾದ ಅನೇಕ ಇಸ್ಲಾಮಿ ಅನುಯಾಯಿಗಳಿಗೆ ಹಲವು ತರದಿಂದ ತ್ರಾಸಕೊಟ್ಟಂಥ ಸಂಗತಿಗಳು ವಿಶದವಾಗಿವೆ. ಮೇಲಿನ ಸಂಗತಿಗಳ ಅವಲೋಕನದಿಂದ ವಾಚಕರಿಗೆ ಇಸ್ಲಾಮವು ಖಡ್ಗಬಲದಿಂದ ಪ್ರಸಾರವಾಗದೆ ಇಸ್ಲಾಮನ್ನು ವಿರೋದಿಸುತ್ತಿದ್ದ ಖಡ್ಗದ ಪ್ರಹಾರಕ್ಕೆ ಅಹುತಿಯಾಗಿ ಹಬ್ಬಿರುವದೆನ್ನುವದು ಸಮಂಜಸವಾಗಿ ತೋರಬಹುದು.

★★★★★

# ಹ॥ ಸೈಯದ ಅಬ್ದುಲ್ ಕಾದರ ಜೀಲಾನಿಯವರು

**- ಶ್ರೀಯುತ ಎಂ. ಬಿ. ಕೊಪ್ಪಳ**

ಮನುಷ್ಯನು ಇಹಲೋಕದಲ್ಲಿ ಪರಿಶ್ರಮದಿಂದ ದೊರೆಕಿಸಿದ ಅಷ್ಟೈಶ್ವರ್ಯಗಳು ಮಿಥ್ಯವಾದವಿದ್ದು, ಸ್ಥೂಲಕಾಯಕ್ಕಷ್ಟೇ ಸಂಬಂಧಿಸಿರುವವು. ಇವುಗಳಿಂದ ಸೂಕ್ಷ್ಮಕಾಯಕ್ಕೆ ನಿತ್ಯಸುಖವು ಸರ್ವಥಾಲಭಿಸದು. ಆದ್ದರಿಂದ ಮನುಷ್ಯನು ವಿಷಯಸುಖದ ಮೋಹಪಾಶವನ್ನು ಕಿತ್ತೊಗೆದು. ಆತ್ಮೋನ್ನತಿಯ ಜ್ಞಾನ ಮಾಡಿಕೊಳ್ಳುವದು ಅವಶ್ಯವು. ಅಂತೇ ಶರಣರು ''**ತರ್ ಪಹಜಾನತ್ ಜಾನಕಿ, ತಬ್ ಪಹಚಾನತ್ ಹೋ ಸುಜ್ಞಾನಕಿ**'' (ಅಂದರೆ ಮೊದಲು ಆತ್ಮದ ಇಂಗಿತವನ್ನು ಅರಿತುಕೊ, ತದನಂತರ ಪರಮಾತ್ಮನ ಜ್ಞಾನವು ತಾನೇ ಲಭಿಸುವದು) ಎಂದು ಬೋಧಿಸಿದ್ದಾರೆ. ಆತ್ಮಜ್ಞಾನಮಾಡಿಕೊಳ್ಳಲಿಕ್ಕೆ ಸಜ್ಜನರ ಸಹವಾಸವೂ ಅವರ ಚರಿತ್ರವಾಚನವೂ ಶ್ರವಣವೂ ಅಗತ್ಯವೆಂದು ಹೇಳಲವಶ್ಯವಿಲ್ಲ. ಜಗತ್ತಿನಲ್ಲಿ ಗತಿಸಿಹೋದ ಯೋಗಿಗಳಲ್ಲಿ ನಮ್ಮ ಚರಿತ್ರನಾಯಕರು ಅದ್ವಿತೀಯ ಅಗ್ರಗಣ್ಯರಾದ ಮುನಿಪುಂಗವರು. ಇಂಥ ಯೋಗೀಶ್ವರರ ಸಚ್ಚರಿತ್ರೆಯನ್ನು

ಬರೆಯುವದು ನಮ್ಮಂಥ ಪಾಮರರ ಮತಿಗೆ ಮೀರಿದ್ದು; ಆದರೂ ಈ ಮಹಾತ್ಮರ ಸಂಕ್ಷೇಪಚರಿತ್ರೆಯನ್ನು - ಸತ್ಪುರುಷರ ವಿಷಯವಾದ ಗೊತ್ತಿದ್ದ ಸಂಗತಿಗಳನ್ನು - ತೊದಲುನುಡಿಗಳಲ್ಲಿ ವಾಚಕಮಹಾಶಯರ ಮುಂದಿರಿಸಿದ್ದೇನೆ.

ಈ ಮಹಾಪುರುಷರ ಮೂಲ ಹೆಸರು ಅಬ್ದುಲ್‌ಖಾದರ; ಇವರಿಗೆ ಮೊಹಯ್ಯುದ್ದೀನ ಖಿತಾಬ; ಗೌಸುಲ್ ಅಜಮ್, ಗೌಸುಸ್ಸೊಮದಾನಿ ಕುತುಬೆ ರಬ್ಬಾನಿ, ಮಹಬೂಬೆ ಸುಬ್ಹಾನಿ, ಪೀತಾನಪೀರ ದಸ್ತಗೀರ, ಬಡೇಪೀರ- ಮೊದಲಾದ ಬಿರುದಾವಳಿಗಳುಂಟು. ಇವರ ಜನ್ಮವು ಹಿಜರೀ ಶಕ 470ನೆಯ ರಮಜಾನ ತಿಂಗಳು 1ನೆಯ ತಾರೀಖು ಸೋಮವಾರ ಸೂರ್ಯೋದಯಕ್ಕೆ ಇರಾಣದೊಳಗಿನ ಜೀಲಾನಗ್ರಾಮದಲ್ಲಾಯಿತು. ಇವರ ಮಾತಾಪಿತರು ಹ|| ಮಹಮ್ಮದ ಪೈಗಂಬರರ ಮನೆತನದವರು. ತಂದೆಯ ಹೆಸರು ಅಬೂಸ್ವಾಲಿಹ ತಾಯಿಯ ಹೆಸರು ಬಿಘಾತಿಮಾ.

ಇವರ ಜನನವಾದಾಗ್ಗೆ ಅಂದೇ ರಮಜಾನ ತಿಂಗಳು ಪ್ರಾರಂಭವಾಗಿತ್ತು. ಈ ತಿಂಗಳಲ್ಲಿ ಮುಸಲ್ಮಾನರು ಹಗಲು ರೋಜಾ (ಉಪವಾಸ) ಇರುವದು ಸರ್ವಶ್ರುತವಿದೆ. ಜೀಲಾನಿಯವರು ತಾಯಿಯ ಗರ್ಭದಿಂದ ಭೂಮಿಗೆ ಬಂದೊಡನೆಯೇ ಉಪೋಷಣೆಮಾಡಹತ್ತಿದರು. ತಾಯಿಯವರು ಹಾಲುಕುಡಿಸಲು ಎಷ್ಟೇ ಪ್ರಯತ್ನಿಸಿದರೂ ಇಡೀ ತಿಂಗಳು ರಾತ್ರಿಯ ಹೊರತು ಹಗಲು ಹಾಲು ಕುಡಿಯಲಿಲ್ಲ. ಇವರ ಜನ್ಮೋತ್ಸವದ ಪ್ರಭಾವದ ಮೂಲಕ ಜೀಲಾನ ಗ್ರಾಮದೊಳಗೆ ಗರ್ಭಿಣಿ ಇದ್ದ ಸ್ತ್ರಿಯರೆಲ್ಲರೂ ಗಂಡುಕೂಸುಗಳನ್ನೇ ಹೆತ್ತರು; ಮತ್ತು ಅವೆಲ್ಲ ಬೆಳೆದು, ದೊಡ್ಡವರಾದ ಮೇಲೆ ಸರ್ವರೂ ಸಾಧುಗಳೇ ಆದರು! ಜೀಲಾನಿಯವರು ಶೈವಾವಸ್ಥೆಯಲ್ಲಿರುವವರೆಗೆ ರಮಜಾನ ತಿಂಗಳಲ್ಲಿ ಹಗಲು ಎಂದೂ ಹಾಲುಕುಡಿಯಲಿಲ್ಲ.

ಇವರು ಸ್ವಲ್ಪದೊಡ್ಡವರಾದ ಮೇಲೆ ಓರಗೆಯ ಹುಡುಗರೊಡನೆ ಆಡಲಿಕ್ಕೆ ಹೋದರೆ ಆಗ ಆಕಸ್ಮಾತ್ ''ಎಲೈ ಪ್ರಭಾವಶಾಲಿಯೆ! ಎಲ್ಲಿ ಹೋಗುವೆ?'' ಎಂದು ಆಕಾಶವಾಣಿಯಾಗುತ್ತಿತ್ತು. ಇವರು ಅದನ್ನು ಕೇಳಿದೊಡನೆಯೆ ಭಯಗೊಂಡು ಓಡಿ ಮನೆಗೆ ಹೋಗುತ್ತಿದ್ದರು. ಇವರು ಒಮ್ಮೆ ಒಂದು ಎತ್ತನ್ನು ಹಿಡಿಯಹೋಗಲು ಅದು ''ಎಲೋ ಅಬ್ದುಲ್‌ಖಾದರ! ದೇವರು ನಿನ್ನನ್ನು ಇದಕ್ಕಾಗಿ ಹುಟ್ಟಿಸಿಲ್ಲ''

ಎಂದು ಶುದ್ಧವಾಣಿಯಿಂದ ನುಡಿಯಿತು. ಕೂಡಲೆ ಜೀಲಾನಿಯವರು ಹೆದರಿ ಓಡಿಹೋಗಿ ತಾಯಿಯನ್ನು ಅವಚಿಕೊಂಡರು.

ಜೀಲಾನಿಯವರಿಗೆ ಐದು ವರ್ಷಗಳಾಗುತ್ತಲೆ ಅವರ ತಂದೆಯವರು ಕುರಾನದ ಅಧ್ಯಯನ ಮಾಡಿಸುವದಕ್ಕೆ ಅದೇ ಊರಲ್ಲಿದ್ದ ಅಬ್ದುಲ್‌ಜಲೀಲ ಎಂಬ ಮೌಲ್ವಿಯವರ ಹತ್ತಿರ ಕರೆದುಕೊಂಡು ಹೋದರು. ಆಗ ಮೌಲ್ವಿಯವರು ಪ್ರಥಮಕ್ಕೆ 'ಬಿಸ್ಮಿಲ್ಲಾಹ' ಎಂಬ ಮಂತ್ರವನ್ನು ಓದಲಿಕ್ಕೆ ಹೇಳಲು ಜೀಲಾನಿಯವರು ತಮಗೆ ಕುರಾನದ ಹದಿನೆಂಟು ಅಧ್ಯಾಯಗಳು ಮುಕ್ತಪಾಠ ಬರುವವೆಂದು ಕೆಲವು ಅಧ್ಯಾಯಗಳನ್ನು ಓದಿತೋರಿಸಿದರು. ''ನಮ್ಮ ತಾಯಿಯವರಿಗೆ ಹದಿನೆಂಟೇ ಅಧ್ಯಾಯಗಳು ಪಠನವಾಗಿದ್ದು ನಾನು ಗರ್ಭದಲ್ಲಿದ್ದಾಗ್ಗೆ ಅವರು ಓದುತ್ತಿರುವದನ್ನು ಕೇಳಿದ್ದರಿಂದ ನನಗೂ ಪಠನವಾಗಿದೆ, ಮುಂದಿನ ಭಾಗಗಳು ಬರುವದಿಲ್ಲ' ಎಂದರು. ಆಗ ಮೌಲ್ವಿಯವರು ಅತ್ಯಾಶ್ಚರ್ಯಪಟ್ಟು ಅಬೂಸ್ವಾಲಿಹರವರನ್ನು ಕುರಿತು ''ಮಹಾನುಭಾವರೆ, ನೀವೇ ಧನ್ಯರು; ಧನ್ಯರು!! ನಿಮ್ಮ ಉದರದಲ್ಲಿ ಇಂಥ ಸತ್ಪುರುಷನು ಜನಿಸಿದ್ದು ನಿಮ್ಮ ಸುಭಾಗ್ಯವು; ಆ ಬಾಲಕನು ಮುಂದೆ ಮಹಾಯೋಗಿಯೇ ಆಗುವನೆಂಬುದರಲ್ಲಿ ತಿಲಮಾತ್ರವೂ ಸಂಶಯವಿಲ್ಲ'' ಎಂದು ಉದ್ಗಾರಹೊರಡಿಸಿದರು. ಬಳಿಕ ಮಾಲ್ವಿಯವರು ಜೀಲಾನಿಯವರಿಗೆ ಒಳ್ಳೇ ಪ್ರೇಮದಿಂದಲೂ ಉತ್ಸಾಹದಿಂದಲೂ ಕುರಾನದ ಅಧ್ಯಯನಮಾಡಿಸಿದರು.

ಹದಿನೆಂಟನೆಯ ವಯಸ್ಸಿನ ಸುಮಾರಿಗೆ ಅಬೂಸ್ವಾಲಿಹರವರು ಪರಲೋಕವಾಸಿಗಳಾದರು. ಆಗ ಜೀಲಾನಿಯವರ ಸಂರಕ್ಷಣೆಯು ಯಾವತ್ತು ಭಾರವು ತಾಯಿಯವರ ಮೇಲೆಯೇ ಬಿತ್ತು. ಜೀಲಾನಿಯವರ ಮನಸ್ಸಿನಲ್ಲಿ ಉಚ್ಚತರ ಗತಿಯ ಶಿಕ್ಷಣಪಡೆಯುವದಕ್ಕೆ ಬಗದಾದಕ್ಕೆ ಹೋಗಬೇಕೆಂಬ ಉತ್ಸುಕತೆಯುಂಟಾಯಿತು. ಅವರು ಈ ಮನದಾಸೆಯನ್ನು ಮಾತೆಯ ಸನ್ನಿಧಿಯಲ್ಲಿ ಅರಿಕೆ ಮಾಡಿಕೊಳ್ಳಲು, ಸುಶಿಕ್ಷಿತಳಾದ ಅವರ ತಾಯಿಯು ಹೋಗಲಿಕ್ಕೆ ಅನುಮತಿಕೊಟ್ಟಳು. ಜೀಲಾನಿಯವರು ಜಗದಾದಕ್ಕೆ ಹೋಗುವ ಒಂದು ವ್ಯಾಪರಸ್ಥರ ಸಾರ್ಥದೊಡನೆ ಹೋಗಲು ಸನ್ನದ್ಧರಾದರು. ಆಗ ಅವರ ತಾಯಿಯವರು ಸಲವತ್ತು ಅಷ್ರಫಿಗಳನ್ನು ಅವರ ಕೋಟಿನ ಬಗಲ ಒಳವಸ್ತ್ರದಲ್ಲಿಟ್ಟು ಬೀಳದಂತೆ ಹೊಲಿದು ಬಂದುಮಾಡಿದರು ಮತ್ತು ಹೊರಡುವಾಗ್ಗೆ ''ಸುಕುಮಾರನೆ! ಬಗದಾದಕ್ಕೆ ಹೋಗಿ, ಮನಮುಟ್ಟಿ ಅಭ್ಯಾಸಮಾಡಿ, ವಿದ್ಯಾಸಂಪನ್ನನಾಗಿ ಬಾ.

ಇದೇ ನನ್ನ ಅಂತ್ಯದರ್ಶನವು; ನೀನು ಮರಳಿ ಬರುವ ತನಕ ನಾನು ಜೀವಂತ ಇರುವೆನೋ ಇಲ್ಲವೋ, ದೇವರ ಇಚ್ಛೆ. ನಿನ್ನ ಜೀವಹೋಗುವ ಪ್ರಸಂಗ ಬಂದರೂ ಸಹ ಸುಳ್ಳು ಮಾತ್ರ ಆಡಬೇಡ; ಇದೇ ನಾನು ಹೇಳತಕ್ಕ ಮುಖ್ಯಮಾತು. ದೇವರು ನಿನ್ನನ್ನು ರಕ್ಷಿಸಲಿ!'' ಎಂದು ಆಶೀರ್ವದಿಸಿದಳು. ಜೀಲಾನಿಯವರು ಮಾತೆಯ ಅಜ್ಞೆಯನ್ನು ಶಿರಸಾರಹಿಸಿ, ಅಪ್ಪಣೆಪಡೆದು ಹೊರಟರು.

ವ್ಯಾಪರಸ್ಥರ ಸಮೂಹವು ಮೂರು ನಾಲ್ಕುಪಯಣಗಳನ್ನು ದಾಟಿ ಹೋದ ಮೇಲೆ ಹಮ್ದಾನದ ನಿಬಿಡವಾದ ಕಾನನದೊಳಗೆ ಅನಿರೀಕ್ಷಿತವಾಗಿ ಅರವತ್ತು ಮಂದಿಡಕಾಯಿತರು ಒಂದು, ವ್ಯಾಪಾರಸ್ಥರನ್ನು ಸದೆಬಡೆದು, ಎಲ್ಲ ಮಾಲನ್ನೂ ಸುಲಿದುಕೊಂಡರು. ಅವರೊಳಗಿನ ಇಬ್ಬರು ಜೀಲಾನಿಯವರನ್ನೂ ಕೆಣಕಿ ''ನಿನ್ನಲ್ಲೇನಾದರೂ ಇರುವದೊ?'' ಎಂದು ಕೇಳಿದರು. ಅದಕ್ಕೆ ಜೀಲಾನಿಯವರು ''ನನ್ನಲ್ಲಿ ನಲವತ್ತು ಅಷ್ರಫಿಗಳು ಇವೆ'' ಎಂದು ಹೇಳಿದರು. ಆದರೆ ಅವರಿಗೆ ಇವರ ಸಾದಾ ಪೋಷಾಕುನೋಡಿ, ನಂಬಿಗೆ ಹುಟ್ಟದೆ ಇವನು ಚೇಷ್ಟೆಮಾಡುವನೆಂದು ಭಾವಿಸಿ ಹಾಗೇ ಹೊರಟುಹೋದರು. ಬಳಿಕ ಅವರೆಲ್ಲರೂ ಒತ್ತಟ್ಟಿಗೆ ಕೂತು, ತಮ್ಮ ಸರದಾರನಾದ ಅಹಮ್ಮದ ಅಲ್ಫಿಯ ಮುಂದೆ ಲೂಟಿಯ ಸಂಗತಿಯನ್ನು ಹೇಳುತ್ತಿರುವಾಗ್ಗೆ ಜೀಲಾನಿಯವರ ಪ್ರಸ್ತಾಪವೂ ಹೊರಟಿತು. ಆ ಕ್ಷಣವೇ ಸರದಾರನು ಜೀಲಾನಿಯವರ ಪ್ರಸ್ತಾಪವೂ ಹೊರಟಿತು. ಆ ಕ್ಷಣವೇ ಸರದಾರನು ಜೀಲಾನಿಯವರನ್ನು ಹಿಡಿತರಿಸಿ, ''ತಮ್ಮಾ, ನಿನ್ನಲ್ಲಿ ಅಷ್ರಫಿಗಳುಂಟೊ?'' ಎಂದು ಪ್ರಶ್ನೆಮಾಡಿದನು.

ಜೀಲಾನಿಯವರು : ಹೌದು ಅವೆ.

ಅಹಮ್ಮದ ಅಲ್ಫಿ : ಅವು ಎಲ್ಲಿ ಅವೆ?

ಜೀ: ನನ್ನ ಕೋಟಿನ ಒಳವಸ್ತ್ರದೊಳಗೆ ಹೊಲಿಯಲ್ಪಟ್ಟಿರುವವು.

ಆಗ ಸರದಾರನು ಕೋಟನ್ನು ಕಳೆದು ಹರಿದು ನೋಡಲು ನಿಜವಾಗಿ ಅದರಲ್ಲಿ ನಲವತ್ತು ಅಷ್ರಫಿಗಳು ಹೊರಬಿದ್ದವು. ಇದನ್ನು ನೋಡಿ ಸರದಾರನು ಬೆರಗಾಗಿ – ಎಲೋ ತರುಣನೆ! ಅಷ್ರಫಿಗಳು ಇಷ್ಟೊಂದು ಬಂದು ಕಟ್ಟಿನಲ್ಲಿದ್ದರೂ ಕೂಡ ನೀನು ನಿಜಸಂಗತಿಯನ್ನು ಹೇಳಿದ ಕಾರಣವೇನು?

ಜೀ: ನಾನು ಹೊರಡುವಾಗ್ಗೆ ನಮ್ಮ ಮಾತೆಯವರು ಎಂದೂ ಸುಳ್ಳಾಡ ಬಾರದೆಂದು ಕಟ್ಟಪ್ಪಣೆಮಾಡಿರುವರು. ಆದಕಾರಣ ನಾನು ಆಜ್ಞೆಯಂತೆ ಸತ್ಯವನ್ನೇ ನುಡಿದೆನು.

ಅ: ''ಹಾಯ್! ಹಾಯ್!! ನಾನು ಮಹಾಪಾಪಿಷ್ಠನು; ನನ್ನ ಜನ್ಮವು ನಾಯಿನರಿಗಳಿಗಿಂತಲೂ ಹೀನವಾದದ್ದು, ತರುಣನೆ! ನೀನು ತಾಯಿಯ ಒಂದು ಅಪ್ಪಣೆಯನ್ನು ಸಹ ಮೀರದೆ ಸತ್ಯವನ್ನೇ ಆಡಿದೆ. ಆದರೆ ನಾನು ಮಾತ್ರ ಇದುವರೆಗೆ ಪರಮಾತ್ಮನ ಅನೇಕ ಆಜ್ಞೆಗಳನ್ನು ಉಲ್ಲಂಘಿಸಿ, ಸಾವಿರಾರು ನಿರಪರಾಧಿ ಜನರನ್ನು ಕೊಂದು, ಅವರ ವಸ್ತು ಒಡವೆಗಳನ್ನು ಅಪಹರಿಸುತ್ತ ಬಂದೆನು. ನಾನು ಪರಲೋಕದಲ್ಲಿ ಘೋರನರಕಯಾತನೆಯನ್ನು ಅನುಭವಿಸುವದು ನಿಶ್ಚಯವು. ಸಾಕು ಸಾಕು! ಈ ಹರಾಮ (ನಿಷಿದ್ಧ) ಉದ್ಯೋಗವು॥ ಪಾಪಸಾಗರದೊಳಗೆ ಲೋಲಾಡುವ ಪಾಪಿಷ್ಠರಿಗೆ ನೀನೇ ಸದ್ಗುರು. ಓ ಸುಗುಣಸಂಪನ್ನನೆ! ಮೋಕ್ಷದಾಯಕವಾದ ನಿನ್ನ ಪವಿತ್ರಹಸ್ತಗಳನ್ನು ತೀವ್ರ ಮುಂದೋರು'' ಎಂದು ದುಃಖಾಶ್ರುಗಳನ್ನು ಉದುರಿಸುತ್ತ ಜೀಲಾನಿಯವರ ಹಸ್ತಗಳಿಗೆ ಚುಂಬನಮಾಡಿದನು, ಮತ್ತು ಇನ್ನುಮುಂದೆ ತಾನು ಇಂಥ ದುಷ್ಕೃತ್ಯಗಳನ್ನು ಎಂದೂ ಮಾಡಲಕ್ಕಿಲ್ಲೆಂದು ಪ್ರತಿಜ್ಞೆಮಾಡಿದನು. ಆ ಕ್ಷಣವೇ ಅವನ ಸಂಗಡಿ ಗರಾದ ಐವತ್ತೊಂಬತ್ತು ಮಂದಿ ಡಕಾಯಿತರು ತಾವೂ ಇಂಥ ದುಷ್ಟಕೆಲಸಗಳನ್ನೆ ತ್ಯಾಗಮಾಡುವೆವೆಂದು ಅಭಿವಚನಕೊಟ್ಟರು. ತದನಂತರ ಓಡುತ್ತಹೋಗಿ ಅರಣ್ಯರೊದನ ಮಾಡುತ್ತ ಹೋಗುತ್ತಿದ್ದ ಸರ್ವವ್ಯಾಪಾರಸ್ಥರನ್ನೂ ಮರಳಿ ಕರೆತಂದು ಅವರವರ ಸರಕುಗಳನ್ನು ಅವರವರ ಸ್ವಾಧೀನಕ್ಕೆ ಕೊಟ್ಟರು. ಆಗ ಆ ವ್ಯಾಪರಸ್ಥರು ಆನಂದಭರಿತರಾಗಿ ಜೀಲಾನಿಯವರ ಪ್ರಭಾವಶಕ್ತಿಯಿಂದಲೇ ತಮಗೆ ಸರಕುಗಳು ದೊರೆತವೆಂದು ಜೀಲಾನಿಯವರನ್ನು ಕೊಂಡಾಡುತ್ತ, ಮುಂದೆ ಮಾರ್ಗಕ್ರಮಣಮಾಡಿ, ಕೆಲವು ದಿವಸಗಳಾದ ಮೇಲೆ ಸುರಕ್ಷಿತವಾಗಿ ಬಗದಾದಕ್ಕೆ ಬಂದು ತಲ್ಪಿದರು.

ಆ ಕಾಲಕ್ಕೆ ಬಗದಾದಪಟ್ಟಣದಲ್ಲಿದ್ದ ನಿಜಾಮಿಯ ವಿಶ್ವವಿದ್ಯಾಲಯವು ಇಸ್ಲಾಮೀರಾಷ್ಟ್ರದಲ್ಲಿ ಅತಿ ಮಿಗಿಲಾದದ್ದಿತ್ತು. ಅಲ್ಲಿ ಜೀಲಾನಿಯವರು ಅರಬಿಫಾರ್ಸಿಗಳ ವ್ಯಾಸಂಗಮಾಡಿ ಕುರಾನ, ಹದೀಘ್,ಫಿಕಾ–ಮೊದಲಾದ

ಧಾರ್ಮಿಕಶಿಕ್ಷಣದಲ್ಲಿ ಅತಿ ಪ್ರವೀಣತೆಯನ್ನು ಹೊಂದಿದರು. ಆಗಿನ ಕಾಲದಲ್ಲಿ ಇವರ ಸಮಾನ ಒಬ್ಬರಾದರೂ ವಿದ್ವಾಂಸರು ಮುಸಲ್ಮಾನರೊಳಗೆ ಇದ್ದಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ವಿದ್ಯಾವ್ಯಾಸಂಗವು ಮುಗಿದನಂತರ ಇವರ ದೃಷ್ಟಿಯು ಯೋಗಸಾಧನದ ಕಡೆಗೆ ಹೊರಳಿತು.

ಜೀಲಾನಿಯವರು ವಿದ್ಯಾಭ್ಯಾಸದಲ್ಲಿ ಪಾರಂಗತರಾಗಿ, ಇರಾಕಪ್ರಾಂತದ ಘೋರಾರಣ್ಯದಲ್ಲಿ ಉಗ್ರತಪಸ್ಸು ಮಾಡುತ್ತಿದ್ದರು. ಹಗಲೆಲ್ಲ ಉಪೋಷಣೆ ಇದ್ದು ಸಂಜೆಗೆ ಅರಣ್ಯದೊಳಗಿನ ಕಂದಮೂಲಗಳನ್ನೂ ಖರ್ಜೂರದ ಫಲಗಳನ್ನೂ ಸೇವಿಸುತ್ತಿದ್ದರು. ಇರುಳು ವಾಚಿಕ-ಉಪಾಂಶು-ಮಾನಸಿಕಜಪಗಳನ್ನು ಮಾಡುತ್ತ ಪರಮಾತ್ಮನ ಧ್ಯಾನದಲ್ಲಿ ತಲ್ಲೀನರಾಗಿರುತ್ತಿದ್ದರು. ಒಂದೊಂದು ರಾತ್ರಿ ಒಂಟಿಗಾಲ ಮೇಲೆ ನಿಂತು ಕುರಾನನ್ನು ಪುರಶ್ಚರಣಮಾಡುತ್ತಿದ್ದರು. ಈ ಪ್ರಕಾರ ಜೀಲಾನಿಯವರು ಸಮಗ್ರ ಇಪ್ಪತ್ತೈದು ವರ್ಷಗಳನ್ನು ಅಹೋರಾತ್ರಿ ಪರಮಾತ್ಮನ ಸ್ತೋತ್ರದಲ್ಲಿಯೇ ಕಳೆದರು. ಒಮ್ಮೆ ಶೇಖ ಆಬೂ ಸಯೀದ ಮಖ್ಝೂಮಿ ಎಂಬ ಸಾಧುವರ್ಯರ ಸಂದರ್ಶನವಾಗಲು, ಅವರಲ್ಲಿ ಗುರುಬೋಧ ಪಡೆದರು. ಪುನಃ ಕೆಲವು ವರ್ಷಗಳವರೆಗೆ ಪಾರಮಾರ್ಥಿಕ ಆಧ್ಯಾತ್ಮಿಕ ವಿಷಯಗಳ ವ್ಯಾಸಂಗಮಾಡಿ, ಸಂಪೂರ್ಣಬ್ರಹ್ಮಜ್ಞಾನವನ್ನು ಸಂಪಾದಿಸಿದರು. ಮುಂದೆ ಸ್ವಲ್ಪ ದಿವಸಗಳಲ್ಲಿಯೇ ತಮ್ಮ ಅಲೌಕಿಕವಾದ ಬ್ರಹ್ಮಜ್ಞಾನದ ಮೂಲಕ **ಯೋಗೀಶ್ವರ**(ಕುತುಬ)ರೆಂಬ ಅಭಿದಾನವನ್ನು ಪಡೆದರು.

ಜೀಲಾನಿಯವರಿಗೆ ಸನ್ ಹಿಜರಿ 511ನೆಯ, ಸವ್ವಾಲ ತಿಂಗಳ 12ನೆಯ ತಾರೀಖು ಮಂಗಳವಾರ ರಾತ್ರಿ ಸ್ವಪ್ನಾವಸ್ಥೆಯಲ್ಲಿ ಮಹಮ್ಮದ ಪೈಗಂಬರರ ದರ್ಶನವಾಗಿ, ಭವಿಜನರಿಗೆ ಉಪದೇಶಮಾಡಲಿಕ್ಕೆ ಅನುಜ್ಞೆ ದೊರೆಯಿತು. ಅಂದಿನಿಂದ ಜೀಲಾನಿಯವರು ತಮ್ಮ ಆಶ್ರಮದೊಳಗೆ ವಾರದಲ್ಲಿ ಮೂರು ವೇಳೆ ಉಪನ್ಯಾಸಮಾಡಲಿಕ್ಕೆ ಹತ್ತಿದ್ದರು. ಮುಸಲ್ಮಾನ, ಯಹೂದಿ, ಫಾರಸಿ, ಕ್ರಿಸ್ತಿ, ನೇಚರಿ-ಮೊದಲಾದ ಸರ್ವಧರ್ಮದವರೂ ಅವರ ಉಪನ್ಯಾಸವನ್ನು ಕೇಳಲಿಕ್ಕೆ ಒಳ್ಳೆ ಆಸ್ಥೆಯಿಂದ ಬರುತ್ತಿದ್ದರು. ಇವರ ಸುಶ್ರಾವ್ಯಭಾಷಣವನ್ನು ಕೇಳಿ, ನಾಸ್ತಿಕರು ತಮ್ಮ ಅಧರ್ಮಪರತೆಯನ್ನು ಬಿಟ್ಟು ಆಸ್ತಿಕರಾಗುತ್ತಿದ್ದರು. ಇವರ ಉಪನ್ಯಾಸದೊಳಗೆ ಎಷ್ಟೋ ಜನರು ಪಾರಮಾರ್ಥಿಕಬೋಧಾಮೃತದ ಸೇವನೆಯಿಂದ ಎಚ್ಚರದಪ್ಪಿ ಪ್ರಾಣವನ್ನರ್ಪಿಸಿದ ಉದಾಹರಣೆಗಳುಂಟು.

ಇವರ ಭಾಷಣದ ಪ್ರತಿಯೊಂದು ಶಬ್ದವೂ ಎಸೆದ ಬಾಣದಂತೆ ಶ್ರೋತೃವರ್ಗದ ಹೃದಯದಲ್ಲಿ ಸೇರಿ ಗಾಯಗೊಳಿಸುತ್ತಿತ್ತು. ಎಂಥ ಪಾಷಾಣ ಹೃದಯವನಿದ್ದರೂ ಇವರ ಉಪದೇಶದಿಂದ ನಮ್ರಶಾಲಿಯೂ ಸದಾಚಾರಿಯೂ ಆಗುತ್ತಿದ್ದನು. ಪ್ರತಿಯೊಂದು ಉಪನ್ಯಾಸದಲ್ಲಿ ಕನಿಷ್ಠ ಐದಾರು ಜನರು ಪರಧರ್ಮಿಗಳು ಇಸ್ಲಾಮಿಧರ್ಮವನ್ನು ಸ್ವೀಕಾರಮಾಡುತ್ತಿದ್ದರು. ಅಜಮಾಸ ಒಂದು ಲಕ್ಷಜನರು ಇತರಲ್ಲಿ ಅನುಗ್ರಹ (ಮುರೀದಿ) ಪಡೆದಿದ್ದರು.

ಜೀಲಾನಿಯವರಿಂದ ಎಷ್ಟೋ ಅಮಾನುಷಕೃತ್ಯಗಳು ಘಟಿಸಿರುವವು. ಅವುಗಳಲ್ಲಿ ಒಂದೆರಡು ಕರಾಮತಿಗಳನ್ನು ವಿವರಿಸುತ್ತೇನೆ. ಒಮ್ಮೆ ಜೀಲಾನಿಯವರು ಆವದೋ ಒಂದು ಕೆಲಸದ ನಿಮಿತ್ತಹೋಗುತ್ತಿದ್ದಾಗ್ಗೆ ಮಾರ್ಗದಲ್ಲಿ ಒಬ್ಬ ಮುಸಲ್ಮಾನನು ಹ॥ಮಹಮ್ಮದ ಪೈಗಂಬರರು ಶ್ರೇಷ್ಠರೆಂತಲೂ ಮತ್ತು ಒಬ್ಬ ಕ್ರಿಶ್ಚನ್ನನು ಯೇಸುಕ್ರಿಸ್ತರೇ ಶ್ರೇಷ್ಠರೆಂತಲೂ ತಮ್ಮತಮ್ಮೊಳಗೆ ಸಂವಾದಮಾಡುತ್ತಿದ್ದರು. ಇವರ ವಾದವಿವಾದವನ್ನು ಕೇಳಿ, ಜೀಲಾನಿಯವರು ಅಲ್ಲಿ ಸ್ವಲ್ಪ ತಡೆದು 'ಯೇಸುಕ್ರಿಸ್ತರೇ ಶ್ರೇಷ್ಠರೆಂದು ನೀವು ಯಾವ ಆಧಾರದ ಮೇಲಿಂದ ಹೇಳುತ್ತೀರಿ?' ಎಂದು ಕ್ರಿಶ್ಚನ್ನನನ್ನು ಕೇಳಿದರು. ಅದಕ್ಕೆ ಕ್ರಿಶ್ಚನ್ನನು 'ನಮ್ಮ ಯೇಸುಕ್ರಿಸ್ತರು ಸತ್ತವರನ್ನು ಬದುಕಿಸುತ್ತಿದ್ದರು; ಆದ್ದರಿಂದಲೇ ನಾನು ಅವರೇ ಶ್ರೇಷ್ಠರೆಂದು ಹೇಳುವೆನು' ಎಂದನು. ಆ ಮಾತಿಗೆ ಜೀಲಾನಿಯವರುಒಳ್ಳೇದು ನಾನು ಪ॥ ಮಮ್ಮದ ಪೈಗಂಬರ ಒಬ್ಬ ಅನುಯಾಯಿ ಇದ್ದೇನೆ. ನೀವು ಬೇಕಾದ ಗೋರಿಯನ್ನು ತೋರಿಸಿ; ನಾನು ಅದರೊಳಗಿನ ಶವವನ್ನು ಜೀವಂತ ಎಬ್ಬಿಸುವೆನು' ಎಂದು ಹೇಳಲಾಗಿ ಆ ಕ್ರಿಶ್ಚನ್ನನು ಅವರನ್ನು ಒಂದು ಹಳೇ ಗೋರಿಯ ಹತ್ತಿರದ ಕರೆದುಕೊಂಡು ಹೋಗಿ, 'ಇದರೊಳಗಿನ ಪ್ರೇತವನ್ನು ಎಬ್ಬಿಸಿರಿ' ಎಂದು ಹೇಳಿದನು. ಅದಕ್ಕೆ 'ಜೀಲಾನಿಯವರು ಇದರೊಳಗೆ ಒಬ್ಬ ಗವಾಯಿಯ ಪ್ರೇತವಿರುವದು; ನಿಮ್ಮ ಅಪೇಕ್ಷೆ ಇದ್ದರೆ ಅವನು ಗಾಯನಮಾಡುತ್ತ ಬರುವಂತೆ ಎಬ್ಬಿಸುವೆನು ಎಂದೆನ್ನಲು ಆ ಕ್ರಿಶ್ಚನ್ನನು 'ಹಾಗೆಯೇ ಆಗಲಿ' ಎಂದನು. ಆಗ ಜೀಲಾನಿಯವರು 'ತುಮ್ ಬಿ ಇಜ್ನಿಲ್ಲಾಹ', (ಅಂದರೆ ಅಲ್ಲಾಹನ ಅಪ್ಪಣೆಯಿಂದ ಏಳು) ಅನ್ನಲು ತತ್‌ಕ್ಷಣವೇ ಆ ಗೋರಿಯು ಇಬ್ಭಾಗವಾಗಿ ಅದರೊಳಗಿಂದ ಗವಾಯಿಯು ಕೈಯಲ್ಲಿ ಸಿತಾರವನ್ನು ಹಿಡಿದುಕೊಂಡು ಸುಸ್ವರದಿಂದ ಹಾಡುತ್ತ ಹೊರಬಿದ್ದನು ಆಗ ಜೀಲಾನಿಯವರು 'ಯಾವ ಪೈಗಂಬರರು ಶ್ರೇಷ್ಠರೆಂಬುವದನ್ನು ಈಗ ನೀವೇ ತರ್ಕಿಸಿರಿ' ಎನ್ನಲು ಆ

ಕ್ರಿಶ್ಚನ್ನನು ಬೆರಗಾಗಿ ಅದೇ ಕ್ಷಣ ಇಸ್ಲಾಮೀಧರ್ಮವನ್ನೇ ಸ್ವೀಕರಿಸಿದನು. ಮತ್ತು ಹದಿನೈದು ಮಿನಿಟುಗಳ ಮೇಲೆ ಜೀಲಾನಿಯವರ ಅಪ್ಪಣೆಯಂತೆ ಆ ಗವಾಯಿಯು ಗೋರಿಯಲ್ಲಿ ಇಳಿಯಲು ಅದು ಯಥಾಸ್ಥಿತಿ ಕೂಡಿಕೊಂಡಿತು.

ಒಮ್ಮೆ ಜೀಲಾನಿಯವರು ಶುಕ್ರವಾರದ ನಮಾಜು ಮುಗಿದನಂತರ ತಮ್ಮ ಉಪನ್ಯಾಸದೊಳಗೆ ಹ|| ಮಹಮ್ಮದ ಪೈಗಂಬರರು ಸ್ವರ್ಗಾರೋಹಣ ಮಾಡಿ ನಿಮಿಷಾರ್ಧದಲ್ಲಿ ಮರಳಿ ಬಂದರೆಂಬ ವೃತ್ತಾಂತವನ್ನು ಶ್ರುತಪಡಿಸುತ್ತಿದ್ದರು. ಶ್ರೋತೃಸಮೂಹದಲ್ಲಿ ಒಬ್ಬ ನೇಚರಿ ಮನುಷ್ಯನಿದ್ದನು. ಅವನು ಮನದೊಳಗೆ ಇಂಥ ಸಾತ್ತ್ವಿಕರು ಮನುಷ್ಯನ ಬುದ್ಧಿಗೆ ಹರಿಯದ ಸಂಗತಿಗಳನ್ನು ಹೇಳುತ್ತಾರೆ. ಇಂಥ ನಿರರ್ಥಕ ಸಂಗತಿಯನ್ನು ಕೇಳುತ್ತ ಕೂರುವದರಲ್ಲಿ ಪ್ರಯೋಜನವಿಲ್ಲವೆಂದು ಅಲ್ಲಿಂದ ಹೊರಟು ಮನೆಯ ದಾರಿಹಿಡಿದನು. ಮಾರ್ಗದಲ್ಲಿ ಒಂದು ಜೀವಂತ ಮೀನವನ್ನು ಕೊಂಡು ಮನೆಗೆ ತಂದನು. ತನ್ನ ಹೆಂಡತಿಗೆ 'ನಾನು ಹೊಳೆಗೆ ಹೋಗಿ ಸ್ನಾನಮಾಡಿಕೊಂಡು ಬರುತ್ತೇನೆ. ನೀನು ತೀವ್ರಮೀನದ ಪಕ್ವಾನ್ನ ಸಿದ್ಧಪಡಿಸು' ಎಂದು ಹೇಳಿದನು. ಅವನ ಹೆಂಡತಿಯು ನೂಲಲಿಕ್ಕೆ ಕೂತಿದ್ದಳು. ಆಕೆಯು 'ಒಳ್ಳೆಯದು, ಕೈಯೊಳಗಿನ ಈ ಹಂಜಿಯು ಮುಗಿದ ಕೂಡಲೆ ಪಕ್ವಾನ್ನಕ್ಕೆ ಕೂಡ್ರುವೆನು' ಎಂದಳು. ಅವನು ಹೊಳೆಗೆ ಹೋಗಿ ಅರಿವೆಗಳನ್ನು ದಂಡೆಯ ಮೇಲಿಟ್ಟು ನೀರಲ್ಲಿ ಮುಳಗಿ ಏಳಲು, ತನ್ನ ಅರಿವೆಗಳು ಕಾಣದೆ ತಾನು ಬೇರೊಂದು ಸ್ಥಳಕ್ಕೆ ಬಂದಂತೆ ಭಾಸವಾಯಿತು. ಇದೂ ಅಲ್ಲದೆ ತನ್ನ ಪುರುಷಸ್ವರೂಪವು ವಿಕಾರಹೊಂದಿ ಸ್ತ್ರೀರೂಪವನ್ನು ಧಾರಣಮಾಡಿತ್ತು. ಆಗ ಅವನು ಹೌಹಾರಿ ದೇವರೆ ಇದೇನು ನನ್ನ ವಿಪರೀತ ಸ್ಥಿತಿಯು! ಎಂದು ವ್ಯಸನಪಡುತ್ತ ಲಜ್ಜೆಯಿಂದ ಗಿಡದ ಮರೆಯಲ್ಲಿ ಹೋಗಿ ಕೂತನು. ಅಷ್ಟರಲ್ಲಿ ಒಬ್ಬ ನೂತನಪ್ರಾಯದ ಕುದುರೆಯ ಸವಾರನು ಬಂದು ಸುಂದರಾಂಗನೆಯೊಬ್ಬಳು ಗಿಡದ ಮರೆಯಲ್ಲಿ ಕೂತಿದ್ದದ್ದನ್ನು ನೋಡಿ, ಮೋಹಿತನಾದನು; ಮತ್ತು ಹೊದ್ದುಕೊಳ್ಳಲಿಕ್ಕೆ ತನ್ನ ರುಮಾಲನ್ನು ಕೊಟ್ಟು ಅವಳನ್ನು ಕುದುರೆಯ ಮೇಲೆ ಕೂರಿಸಿ ಮನೆಗೆ ಕರೆದುಕೊಂಡು ಬಂದನು. ಆ ಮೇಲೆ ಶಾಸ್ತ್ರವಿಧಿಯಂತೆ ಅವಳೊಡನೆ ಲಗ್ನವಾಗಿ, ಇಬ್ಬರೂ ದಾಂಪತ್ಯ ಸುಖವನ್ನು ಅನುಭೋಗಿಸುತ್ತಿರಲು ಅವರಿಗೆ ಕೆಲವು ವರ್ಷಗಳಲ್ಲಿ ಏಳು ಗಂಡು, ನಾಲ್ಕು ಹೆಣ್ಣು–ಹೀಗೆ ಒಟ್ಟಿಗೆ ಹನ್ನೊಂದು ಮಕ್ಕಳಾದವು. ಹೀಗಿರುತ್ತಿರಲಾಗಿ ಸ್ತ್ರೀರೂಪವನ್ನು ಧರಿಸಿದ ಆ ನೇಚರಿ ಮನುಷ್ಯನು ಒಮ್ಮೆ ನೆರೆಮನೆಯ ಸ್ತ್ರೀಯರೊಡನೆ ಹೊಳಿಗೆ

ಸ್ನಾನಮಾಡಲಿಕ್ಕೆ ಬಂದನು. ಅಲ್ಲಿ ನೀರೊಳಗೆ ಮುಳುಗಿ ಎದ್ದಕೂಡಲೆ ಸ್ತ್ರೀರೂಪವೆಲ್ಲ ಮಾಯವಾಗಿ ತನ್ನ ಮೊದಲಿನ ಪುರುಷ ರೂಪವು ಗೋಚರವಾಯಿತು ಮತ್ತು ತಾನು ತನ್ನ ಮೊದಲಿನ ಸ್ಥಳದಲ್ಲಿಯೇ ಬಂದಂತಾಗಿ, ದಂಡೆಯ ಮೇಲೆ ತನ್ನ ಅರಿವೆಗಳೂ ದೃಷ್ಟಿಗೆ ಬಿದ್ದವು. ಆಗ ಅವನಿಗೆ ಹಿಡಿಸಲಾರದಷ್ಟು ಆನಂದವಾಯಿತು. ಅವನು ಅಲ್ಲಿಂದ ಹೊರಟು ಸಖೇದಾಶ್ಚರ್ಯದಿಂದ ಮನೆಗೆ ಬಂದು ನೋಡುತ್ತಾನೆ. ಹೆಂಡತಿಯು ಇನ್ನೂ ನೂಲುತ್ತ ಕೂತಿದ್ದಾಳೆ! ಮೀನವು ಹಾಗೇ ಒದ್ದಾಡುತ್ತಿದೆ!! ಆಗ ಅವನು ಹೆಂಡತಿಯನ್ನು ಕುರಿತು ''ಏನೆ! ಇಷ್ಟು ಅವಕಾಶವಾದರೂ ಇನ್ನೂ ನೂಲತ್ತ ಕೂತಿರುವೆ!! ಪಕ್ವಾನ್ನ ಮಾಡಿಯೇ ಇಲ್ಲ!'' ಎಂದನು. ಆ ಮಾತಿಗೆ ಹೆಂಡತಿಯು ''ನೀವು ಇದೇ ಈಗ ಹೋಗಿದ್ದೀರಿ ತಡವೆಲ್ಲಿ ಆಗಿದೆ? ನೀವು ಹೋಗುವಾಗ್ಗೆ ಹಿಡಿದ ಹಂಜಿಯನ್ನೇ ಇನ್ನೂ ನೂಲುತ್ತಿರುವೆನು; ಅದು ಮುಗಿದ ಕೂಡಲೆ ಅಡಿಗೆಗೆ ಹೊರಡುತ್ತೇನೆ'' ಎಂದು ನುಡಿದಳು. ಆಗ ಆ ನೇಚರಿ ಮನುಷ್ಯನು ''ಈ ವಿಚಿತ್ರಘಟನೆಯು ಏಕೆ ವರ್ತಿಸಿತು? ಇದರ ರಹಸ್ಯವೇನಿರಬಹುದು?'' ಎಂದು ಅಲೋಚಿಸುತ್ತಿರಲಾಗಿ ತಾನು ಜೀಲಾನಿಯವರಿಗೆ ತುಚ್ಛಮಾಡಿದ್ದರಿಂದ ತನಗೆ ಇಂಥ ಪ್ರಸಂಗವು ಒದಗಿರಬಹುದೆಂದು ತರ್ಕಿಸಿದನು; ಮತ್ತು ಆಗಿಂದಾಗ್ಗೆಯೆ ಮಸೀದಿಗೆ ಹೋಗಿ ನೋಡುತ್ತಾನೆ- ಅಲ್ಲಿ ಇನ್ನೂ ಅದೇ ಸ್ವರ್ಗಾರೋಹಣದ ವಿಷಯವು ಸಾಗಿದೆ! ಆಗ ಅವನು ಜೀಲಾನಿಯವರನ್ನು ಕುರಿತು- ''ಓ ಮಹಾತ್ಮರೆ! ತಾವು ಹೇಳಿದ ಮೇಅರಾಜ ವೃತ್ತಾಂತದ ಸಂಬಂಧವಾಗಿ ನನಗೆ ಆಕ್ಷೇಪವುಂಟಾಗಿ ನಾನು ತಮ್ಮನ್ನು ದೂಷಿಸಿದೆನು. ಆದ್ದರಿಂದ ನನಗೆ ತಕ್ಕ ಪ್ರಾಯಶ್ಚಿತ್ತವಾಗಿದೆ. ಇದೊಂದು ನನ್ನಿಂದ ಮಹಾಪರಾಧವಾಯಿತು. ಕ್ಷಮಿಸೋಣವಾಗಬೇಕು'' ಎಂದು ಬೇಡಿಕೊಂಡು ಘಟಿಸಿದ ಸಮಸ್ತವೃತ್ತಾಂತವನ್ನೂ ಅರುಹಿದನು. ಈ ಸಂಗತಿಯನ್ನು ಕೇಳಿ ಶ್ರೋತೃವರ್ಗವು ಆಶ್ಚರ್ಯ ಪಟ್ಟು ಜೀಲಾನಿಯವರ ಲೀಲಾಶಕ್ತಿಯನ್ನು ಪ್ರಶಂಸೆಮಾಡಹತ್ತಿದರು.

ಬಗದಾದಶಹರದ ಉತ್ತರಕ್ಕೆ ಒಂದು ಆಮಿನಾ ಖಾತೂನ ಎಂಬ ಓರ್ವ ಸುಶಿಕ್ಷಿತ ಸ್ತ್ರೀಯ ಇರುತ್ತಿದ್ದಳು. ಅವಳು ಸುಶೀಲಳೂ ವಿದ್ಯಾವತಿಯೂ ಇದ್ದು ರೂಪಲಾವಣ್ಯಗಳಲ್ಲಿ ಸೌಂದರ್ಯಮೂರ್ತಿಯಾಗಿದ್ದಳು. ಆ ಭಾಗದ ಸುಬೇದಾರನು ಅವಳ ಮೇಲೆ ಮೋಹಿತನಾಗಿ, ಆ ಯುವತಿಯನ್ನು ಸ್ವಾಧೀನಪಡಿಸಿಕೊಳ್ಳುವ ಬಗ್ಗೆ ವಿಶ್ವಪ್ರಯತ್ನವನ್ನೂ ಮಾಡಿದನು. ಆದರೆ

ಅದೆಲ್ಲ ನಿಷ್ಫಲವಾಯಿತು. ಒಮ್ಮೆ ಆ ಕೋಮಲಾಂಗನೆಯು ತೋಟಕ್ಕೆ ಹೋಗುತ್ತಿರಲು, ಸುಬೇದಾರನು ಸಮಯ ಸಾಧಿಸಿ ಬಂದು ಬಲಾತ್ಕಾರದಿಂದ ಅವಳ ಪಾತಿವ್ರತ್ಯವನ್ನು ಪರಣಮಾಡಲಿಕ್ಕೆ ಹವಣಿಸಿದನು. ಆ ಕ್ಷಣವೇ ಆ ಶೀಲವಂತೆಯು ತನ್ನ ಗುರುಗಳಾದ ಜೀಲಾನೀಯವರನ್ನು ಸ್ಮರಿಸಿ ''ಹುಜೂರ್! ಈ ದುರಾತ್ಮನಿಂದ ನನ್ನ ಪತಿವ್ರತಾಧರ್ಮವನ್ನು ರಕ್ಷಿಸಿರಿ!'' ಎಂದು ದೀನತೆಯಿಂದ ಬೇಡಿಕೊಂಡಳು. ಜೀಲಾನಿಯವರು ಆ ಸಮಯಕ್ಕೆ ತಮ್ಮ ಆಶ್ರಯದೊಳಗೆ ಹಸ್ತಮುಖಪ್ರಕ್ಷಾಲನಮಾಡಲಿಕ್ಕೆ ಕೂತಿದ್ದರು. ಅವರು ತಮ್ಮ ಅಂತರ್ಜ್ಞಾನದಿಂದ ಆಮಿನಾ ಖಾತೂನಳ ಮೇಲೆ ಬಂದ ವಿಪತ್ತನ್ನು ಅರಿತುಕೊಂಡು ತಮ್ಮ ಪಾದರಕ್ಷಣೆಗಳಿಗೆ ಸನ್ನೆಮಾಡಿ ಹೋಗಿರಿ ಆ ದುಷ್ಟನಿಂದ ನಮ್ಮ ಶಿಷ್ಯಳ ರಕ್ಷಣೆಮಾಡಿರಿ' ಎಂದು ಅಜ್ಞಾಪಿಸಿದರು. ಆ ಎರಡೂ ಪಾದ ರಕ್ಷೆಗಳು ಅಲ್ಲಿಂದ ಅದೃಶ್ಯವಾಗಿ ಸುಬೇದಾರನ ತಲೆಗೆ ಫಡ್! ಫಡ್! ಹೊಡೆಯಹತ್ತಿದವು. ಅವುಗಳ ಹೊಡೆತದಿಂದ ಸುಬೇದಾರನು ಮೂರ್ಛೆಹೊಂದಿದನು. ಆಮೀನಾ ಖಾತೂನಳು ತ್ವರೆಯಿಂದ ಆ ಪಾದರಕ್ಷೆಗಳನ್ನು ತಕ್ಕೊಂಡು ಅಲ್ಲಿಂದ ಹೊರಟು ಹ|| ಜೀಲಾನಿಯವರ ಸನ್ನಿಧಿಗೆ ಬಂದು ಯಾವತ್ತು ಸಂಗತಿಯನ್ನು ಅರಿಕೆಮಾಡಿದಳು ಜೀಲಾನಿಯವರು ಅವಳನ್ನು ಸಮಾಧಾನಪಡಿಸಿ ಓರ್ವ ಸಾತ್ತ್ವಿಕನೊಡನೆ ಅವಳ ವಿವಾಹಮಾಡಿಸಿದರು.

ಜೀಲಾನಿಯವರು ಸಹನಶೀಲರೂ ನಮ್ರಸ್ವಭಾವದವರೂ ಸುಶೀಲರೂ ಆಗಿದ್ದರು. ಔದಾರ್ಯವಂತೂ ಇವರಲ್ಲಿ ಮನೆಮಾಡಿಕೊಂಡಿತ್ತು. ಮನೆಗೆ ಬಂದ ಭಿಕ್ಷುಕರನ್ನು ಬರಿಗೈಯಿಂದ ಎಂದೂ ಕಳುಹಿಸುತ್ತಿರಲಿಲ್ಲ. ಅನಾಥರನ್ನೂ ಬಡವರನ್ನೂ ರೋಗಿಗಳನ್ನೂ ವಿಶೇಷವಾಗಿ ಪ್ರೀತಿಸುತ್ತಿದ್ದರು; ಮತ್ತು ಸ್ವತಃ ಅವರ ಮನೆಗೆ ಹೋಗಿ ಸಾಧ್ಯವಾದಷ್ಟು ಅವರ ಕೊರತೆಗಳನ್ನು ನೀಗಿಸಲಿಕ್ಕೆ ಪ್ರಯತ್ನಮಾಡುತ್ತಿದ್ದರು. ಜನರಿಂದ ಬಂದ ಕಾಣಿಕೆಯ ಪದಾರ್ಥಗಳನ್ನು ಆಶ್ರಮದೊಳಗೆ ಸಂಗ್ರಹಿಸುತ್ತಿದ್ದಿಲ್ಲ. ಅವುಗಳನ್ನು ಆಗಿಂದಾಗ್ಗೆಯೇ ಬಡವರಿಗೂ, ಅನಾಥರಿಗೂ ಹಂಚಿಬಿಡುತ್ತಿದ್ದರು. ಅಹಂಕಾರಿಜನರು ಇವರ ಮನಸ್ಸಿಗೆ ಎಷ್ಟುಮಾತ್ರಕ್ಕೂ ಸೇರುತ್ತಿದ್ದಿಲ್ಲ. ದರ್ಶನಕ್ಕೆ ಬಂದವರು ಶ್ರೀಮಂತರೇ ಇರಲಿ, ಸಂಸ್ಥಾನಿಕರೇ ಇರಲಿ ಯಾರೇ ಇರಲಿ, ಅವರಲ್ಲಿ ಏನಾದರೂ ನ್ಯೂನತೆಗಳು ಕಂಡುಬಂದರೆ ನಿರ್ಭೀಡೆಯಿಂದ ನಿಮ್ಮಲ್ಲಿ ಇಂಥಿಂಥ ದೋಷಗಳು ಇವೆ; ನೀವು

ಅವುಗಳನ್ನು ಅವಶ್ಯವಾಗಿ ತ್ಯಜಿಸತಕ್ಕದ್ದು' ಎಂದು ಉಪದೇಶಮಾಡುತ್ತಿದ್ದರು.

ಜೀಲಾನಿಯವರು ಅನೇಕಗ್ರಂಥಗಳನ್ನು ರಚಿಸಿದ್ದಾರೆ. ಅವುಗಳಲ್ಲಿ **ಗುನಿಯ ತುತ್ತಾಲಿಬೀನ, ಫುತೂಹುಲ್‌ಗೈಬ** - ಎಂಬೆರಡು ಅಮೌಲ್ಯವಾದ ಉದ್ಗ್ರಂಥಗಳು ಅವೆ. ಮೊದಲನೆಯದರಲ್ಲಿ ಇಸ್ಲಾಮೀಗ್ರಹಸ್ಥಾಶ್ರಮದ ಕ್ರಮವನ್ನು ಸವಿಸ್ತಾರವಾಗಿ ವರ್ಣಿಸಿರುವದಲ್ಲದೆ ಗುರುಶಿಷ್ಯರ ಸಂಬಂಧ, ಶಿಷ್ಯನು ವೇದಾಂತ ಮಾರ್ಗದಲ್ಲಿ ಪ್ರವೇಶಿಸುವ ರೀತಿ - ಮುಂತಾದ ಸಂಗತಿಗಳನ್ನು ವಿವರಿಸಿರುವದು. ಎರಡನೆಯದು ಪಾರಮಾರ್ಥಿಕವಿಷಯಕ್ಕೆ ಸಂಬಂಧಿಸಿರುವದು. ಅದರೊಳಗೆ ಬ್ರಹ್ಮಚರ್ಯ, ಪ್ರಪಂಚತ್ಯಾಗ, ಹೃದಯಶುದ್ಧಿ, ಚಿತ್ತಏಕೀಕರಣ ಪಂಚಕಾಯ, ಷಟ್‌ಸ್ಥಲ- ಮುಂತಾದ ವೇದಾಂತವಿವೇಚನೆ ಇರುವದು.

ಜೀಲಾನಿಯವರು ಉಪನ್ಯಾಸದಲ್ಲಿ ಶ್ರುತಪಡಿಸಿದ ಎಲ್ಲಾ ವಿಷಯಗಳನ್ನೂ ವಿದ್ವಾಂಸರು ಸಂಗ್ರಹಿಸಿದ್ದಾರೆ. ಅದರೊಳಗಿನ ಕೆಲವು ಹಿತೋಕ್ತಿಗಳನ್ನು ಕೆಳಗೆ ಕೊಟ್ಟಿರುತ್ತದೆ.-

1. ಸುಖದುಃಖಗಳಲ್ಲಿ ಅಂತರಂಗಬಹಿರಂಗದೊಳಗೆ ದೇವರ ಮೇಲೆ ದೃಢವಿಶ್ವಾಸವನ್ನಿಟ್ಟವನೇ ನಿಷ್ಠಾವಂತನು.

2. ಯಾವ ವಿರಕ್ತನು ಸಿರಿಸಂಪತ್ತು ವಾರ್ತಾಕೀರ್ತಿಗಳನ್ನು ಅಪೇಕ್ಷಿಸುತ್ತಾನೋ ಅವನು ಮಹಾಠಕ್ಕನಿದ್ದಾನೆ.

3. ಯಾವ ಗುರು ತನ್ನ ಶಿಷ್ಯನು ಸನ್ನಿಧಿಯಲ್ಲಿದ್ದಾಗ್ಗೆ ಅವನಿಗೆ ಸದುಪದೇಶ ಮಾಡುವನೋ ಮತ್ತು ಶಿಷ್ಯನು ಸಮ್ಮುಖದಲ್ಲಿ ಇಲ್ಲದಾಗ್ಗೆ ದುರ್ಮಾರ್ಗಕ್ಕೆ ಹೋಗದಂತೆ ಅವನ ರಕ್ಷಣೆಮಾಡುವನೋ ಅವನೇ ಸದ್ಗುರುವು.

4. ತಾಳ್ಮೆಯಲ್ಲಿ ಎರಡು ಪ್ರಕಾರ; ಸಂಕಟಸಮಯಕ್ಕೆ ಜನಪ್ರೇರಣೆಯಿಂದ ಸಹನಮಾಡಿಕೊಳ್ಳುವದು ಕನಿಷ್ಠ ತರಗತಿಯು ತಾಳ್ಮೆಯು; ವಿಪತ್ಕಾಲಕ್ಕೆ ಕಿಂಚಿತ್ತಾದರೂ ವ್ಯಸನಪಡದೆ ಯಥಾಸ್ಥಿತಿ ಇರುವದು ಶ್ರೇಷ್ಠತರಗತಿಯ ತಾಳ್ಮೆಯು.

5. ಕೃತಜ್ಞತೆಯು ಮೂರು ಪ್ರಕಾರದ್ದು: (1) ತನ್ನ ಕುಶಲತನದಿಂದ ಅಥವಾ ಅನ್ಯರ ಸಹಾಯದಿಂದ ಸುಖಸಂಪತ್ತು ದೊರೆಯಿತೆಂದು ಭಾವಿಸದೆ ದೇವರಿಂದಲೇ

ಲಭಿಸಿತೆಂದು ನೆರೆನಂಬಿ ಅತಿನಮ್ರತೆಯಿಂದ ಪರಮಾತ್ಮನನ್ನು ಹೊಗಳುವದು ನಾಲಿಗೆಯಿಂದ ಆಗುವ ಕೃತಜ್ಞತೆಯು; (2) ಅಂತರಂಗಬಹಿರಂಗಸೌಖ್ಯಗಳು ಪರಮಾತ್ಮನಿಂದಲೇ ಲಭಿಸಿರುವದೆಂದು ಉಪಕಾರವನ್ನುಸ್ಮರಿಸುವದು ಮನಸ್ಸಿನಿಂದಾಗುವ ಕೃತಜ್ಞತೆಯು; (3) ಪರಮಾತ್ಮನಿಂದ ದೊರತ ಸುಖಸಂಪತ್ತಿನ ಪ್ರತಿಯಾಗಿ ಪಂಚೇಂದ್ರಿಯಗಳನ್ನು ಸದಾ ಅವನ ಧ್ಯಾನದಲ್ಲಿ ತೊಡಗಿಸುವದು ಇಂದ್ರಿಯಗಳಿಂದಾಗುವ ಕೃತಜ್ಞತೆಯು.

6. ಮನುಷ್ಯನ ಹೃದಯವು ಸ್ವಾಭಾವಿಕವಾಗಿ ಸ್ವಚ್ಛವಾದ ಶಾಂತಿಯುಕ್ತದರ್ಪಣದಂತೆರುವದು. ಆದರೆ ಅವನ ದುಷ್ಕೃತ್ಯಗಳ ಕಶ್ಮಲವು ಲೇಪಿಸುವದರಿಂದ ಅದು ಕಾಂತಿಹೀನವಾಗುವದು. ಇಂಥ ಸಮಯಕ್ಕೆ ಸದ್ಗುರುವಿನ ಸದ್ಬೋಧವು ಲಭಿಸಿದರೆ ಅದರ ಮೇಲಿನ ಕಶ್ಮಲವು ನಾಶವಾಗಿ ಉಜ್ಜಿದ ಕನ್ನಡಿಯಂತೆ ಹೊಳೆತಹತ್ತುವದು. ಆಗ್ಗೆ ನಿರ್ಮಲವಾದ ಇಂಥ ಹೃದಯ ದರ್ಪಣದಲ್ಲಿ ಇಡಿಯ ಸೃಷ್ಟಿಯ ಪ್ರತಿಬಿಂಬಸ್ವರೂಪವು ಮಾಡುವದರಿಂದ ಜಗತ್ತಿನೊಳಗೆ ಘಟಿಸುವ ಸಮಸ್ತಕಾರ್ಯಗಳೂ ಅವನಿಗೆ ಪ್ರತ್ಯಕ್ಷ ತೋರಿಬರುವವು.

7. ಸದ್ವರ್ತನವು ಮೂರು ಪ್ರಕಾರವಾಗಿದೆ; (1) ಪವಿತ್ರಪದಾರ್ಥಗಳನ್ನು ಸ್ವೀಕರಿಸಿ ನಿಷೇಧವಸ್ತುಗಳನ್ನು ತ್ಯಜಿಸಿ ಪುಷ್ಟಕಾಯರಾಗಿ ಶಾಸ್ತ್ರನುಸಾರ ಆಚರಿಸುವದು ಕನಿಷ್ಠತರಗತಿಯ ಸದ್ವರ್ತನವು; ಇದು ಸಾಮಾನ್ಯಜನರಿಗೆ ಅನುಕೂಲವಾದದ್ದು. (2) ಸ್ಥೂಲಕಾಯಕ್ಕೆ ಸಂಬಂಧಿಸಿದ ಶಾಸ್ತ್ರಸಮ್ಮತವಾದ ಮನೋಭಿಲಾಷೆಗಳನ್ನು ಸಂಪೂರ್ಣಮಾಡಿರುವದು ಮಧ್ಯಮ ತರಗತಿಯ ಸದ್ವರ್ತನವು, ಇದು ಸಾಧುಜನರಿಗೆ ಸಾಧ್ಯವಾದದ್ದು. (3) ಸ್ಥೂಲಕಾಯಕ್ಕೆ ಸಂಬಂಧಪಟ್ಟ ಶಾಸ್ತ್ರಸಮ್ಮತವಾದ ಮನೋಭಿಲಾಷೆಗಳನ್ನೂ ತಿರಸ್ಕರಿಸುವದು ಶ್ರೇಷ್ಠತರದ ಸದ್ವರ್ತನವು; ಇದು ಯೋಗಿಗಳಿಗೆ ಮಾತ್ರ ಸಾಧ್ಯವು.

8. **ಫಕೀರನು ಯಾರು? ಫಕೀರ = ಫ,ಕ,ಇ,ರ** (1) **ಫ-ಫನಾ:** ನಾನು ಎಂಬ ಅಸ್ತಿತ್ವವನ್ನು ಅಳಿದು ನಾನು ಮಿಥ್ಯನು; ಸರ್ವಾಂತರ್ಯಾಮಿಯಾದ ಪರಮಾತ್ಮನೇ ಸತ್ಯನು ಎಂಬ ದೃಢವಿಶ್ವಾಸದಿಂದ ಇಚ್ಛಾರಹಿತನಾಗುವದು. (2) **ಕ-ಕಿನಾಅತ್:** ನಿರಪೇಕ್ಷಬುದ್ಧಿಯಿಂದ ಲಭಿಸಿದ್ದೇ ಪಂಚಾಮೃತವೆಂದು ಭಾವಿಸಿ ಸಂತುಷ್ಟನಾಗಿರುವದು. (3) **ಇ-ಯಾದೆ ಇಲಾಹೀ:** ಸರ್ವದಾ ಪರಮಾತ್ಮನ

ಧ್ಯಾನದಲ್ಲಿ ತಲ್ಲೀನನಾಗಿರುವದು. (4) **ರ-ರಿಯಾಜತ್:** ಸ್ಥೂಲಶರೀರದ ಮಂತ್ರಿಯಾದ ಮಾಯಾ (ನಫ್ಸ)ವಿಕಾರಗಳಿಗೆ ಅನುವುಗೊಡದೆ ಅವನ್ನು ಬಂಧನದಲ್ಲಿರಿಸಿಕೊಳ್ಳುವದು. ಈ ನಾಲ್ಕು ಕ್ರಿಯೆಗಳಂತೆ ಆಚರಿಸುವವನೇ ನಿಜವಾದ ಫಕೀರನು.

ಜೀಲಾನಿ ಮಹರ್ಷಿಗಳು ಪಾಪಮಯವಾದ ಉಷ್ಣಜ್ವಾಲೆಯೊಳಗೆ ಬೆಂದುಬೆಂಡಾದ ಜೀವನ್ಮೃತರಿಗೆ ಸತತ ಐವತ್ತು ವರ್ಷಗಳವರೆಗೆ ಅಹೋರಾತ್ರಿ ತಮ್ಮ ಅದ್ಭುತಪ್ರಭಾವಶಕ್ತಿಯಿಂದ ನವಜೀವನವನ್ನಿತ್ತು, ಆಗಾಧವಾದ ತಮ್ಮ ಜ್ಞಾನಸಾಗರದ ಶೀತೋದಕದಿಂದ ಸಂತೃಪ್ತಿಗೊಳಿಸುತ್ತಬಂದರು. 'ಜಾತಸ್ಯಮರಣಮ್', ಎಂಬ ಉಕ್ತಿಯಂತೆ ಇವರ ಅಂತ್ಯಕಾಲವು ಸಮೀಪಿಸಲು ಒಂದು ವಾರದವರೆಗೆ ಜ್ವರಬಾಧೆಯಿಂದ ಹಾಸಿಗೆಹಿಡಿದರು. ಕಡೆಗೆ ತಮ್ಮ ಆಯುಷ್ಯದ ತೊಂಭತ್ತೆರಡನೆಯ ವರ್ಷ ಹಿಜರಿಸಾಲಿನ 561ನೇ ರಬಿಯುಲ್ ಆಖರ ತಿಂಗಳ 11ನೇ ತಾರೀಖು ಮಂಗಳವಾರ ರಾತ್ರಿ ಈ ಜಡದೇಹವನ್ನು ಬಿಟ್ಟು ನಿರಾಕಾರ ಪರಮಾತ್ಮನ ಸಾನ್ನಿಧ್ಯವನ್ನು ಹೊಂದಿದರು. ಇವರ ಸಮಾಧಿಯನ್ನು ಆಶ್ರಮದೊಳಗಿನ ಪಾಠಶಾಲೆಯಲ್ಲಿಯೇ ಸ್ಥಾಪಿಸಿರುವರು. ಪ್ರತಿವರ್ಷ ಯುರೋಪ ಆಶಿಯಾಖಂಡದ ಅನೇಕ ಪ್ರವಾಸಿಕರು ಬಗದಾದ ಪಟ್ಟಣಕ್ಕೆ ಬಂದು ಈ ಮಹರ್ಷಿಗಳ ಸಮಾಧಿಯ ದರ್ಶನವನ್ನು ಪಡೆಯುತ್ತಿರುವರು.

ಇಂಥ ಸದ್ಗುರುಗಳ ಸಚ್ಚರಿತ್ರೆಯನ್ನು ಓದಿ, ಇವರಲ್ಲಿದ್ದ ಸಗುಣಗಳನ್ನು ಗ್ರಹಿಸಿ ಸರ್ವದಾ ಸಾತ್ತ್ವಿಕರಾಗಿಯೇ ಇರುವಂಥ ಸುಬುದ್ಧಿಯನ್ನು ದಯಾಘನನಾದ ಪರಮಾತ್ಮನು ನಮಗೂ ವಾಚಕವೃಂದಕ್ಕೂ ಅನುಗ್ರಹಿಸಲೆಂದು ಕೋರುವೆನು.

★★★★★

# ಹಿಂದೂರಾಣಿಯ ಮುಸಲ್ಮಾನ ಬಂಧು

(ಶ್ರೀಯುತ ಎಮ್. ಬಿ. ಕೊಪ್ಪಳ, ಉರ್ದುಸ್ಕೂಲ್ ಹೆ||ಮಾಸ್ಟರ್, ರೋಣ)

ಮೇವಾಡದ ಅರಸನಾದ ಸಂಗ್ರಾಮಸಿಂಗನು ಸಿಕ್ರಿ ಎಂಬಲ್ಲಿ ಬಾಬರನೊಡನೆ ಯುದ್ಧಮಾಡಿ ಅಪಜಯಪಟ್ಟ ಸಂಗತಿಯು ಸರ್ವವಿದಿತವದೆ. ಕ್ರಿ.ಶ.1530ರಲ್ಲಿ ಬಾಬರನ ಮರಣದನಂತರ ಹುಮಾಯೂನ ಬಾದಶಹನು ಸಿಂಹಾಸನವೇರಿದನು. ಮೇವಾಡದಲ್ಲಿ ಸಂಗ್ರಾಮಸಿಂಗನ ತರುವಾಯ ಅವನ ಮಗನಾದ ರಾಣಾರತನ್ನಸಿಂಗನು ಪಟ್ಟವೇರಿದನು.

ರಾಣಾನು ಪಟ್ಟವೇರಿದಾಗ್ಗೆ ಇನ್ನೂ ಚಿಕ್ಕವನಿದ್ದನು. ಆದ್ದರಿಂದ ಅವನ ತಾಯಿಯಾದ ಕಾರ್ನಾವತಿಯು ತಾನೇ ರಾಜ್ಯಕಾರಭಾರ ಸಾಗಿಸುತ್ತಿದ್ದಳು. ಆದರೆ ಕರ್ನಾವತಿಗೆ ಚಿತ್ತೂರ ಮೇಲೆ ಪರಿಚಕ್ರಗಳ ಹಾವಳಿಯು ಬರಬಹುದೆಂಬ ಭೀತಿಯುಂಟಾಯಿತು. ಆಗ ಧೂರ್ತಳಾದ ಕಾರ್ನಾವತಿಯು ಒಂದು ಕಂಕಣವನ್ನು ಒಬ್ಬ ರಾಯಭಾರಿಯ ಕೈಯಲ್ಲಿ ಕೊಟ್ಟು ಹುಮಾಯೂನ ಬಾದಶಹನ ಸನ್ನಿಧಿಗೆ ಕಳುಹಿಸಿದಳು. ರಾಯಭಾರಿಯು ರಾಣಿಯ ಆಜ್ಞಾನುಸಾರ ದಿಲ್ಲಿಗೆ ಹೋಗಿ ಬಾದಶಹನಿಗೆ ಸಮರ್ಪಿಸಿದನು. ಆಗ ಬಾದಶಹನು ''ನಿಮ್ಮ ರಾಣಿಯು ಇದನ್ನು ನಮ್ಮ ಕಡೆಗೆ ಕಳಿಸಲು ಕಾರಣವೇನು?'' ಎಂದು ಕೇಳಿದನು.

**ರಾಯಭಾರಿ** – ಹುಜೂರ! ನಮ್ಮ ರಜಪೂತ ರಾಣಿಗಳು ಇಂಥ ಕಂಕಣಗಳನ್ನು ಉತ್ಸವದ ಪ್ರಸಂಗಗಳಲ್ಲಿ ತಮ್ಮ ಅಣ್ಣಂದಿರಿಗೆ ಮಾತ್ರ ಕಳಿಸುವ ಪರಿಪಾಠವುಂಟು.

**ಬಾದಶಹ** – ಹಾಗಾದರೆ ನಿಮ್ಮ ರಾಣಿಯು ನನ್ನನ್ನು ತನ್ನ ಸಹೋದರನೆಂದು ಭಾವಿಸಿರುವಳೇನು?

**ರಾಯಭಾರಿ** – ಜಹಾಪನಾಹ! ಪರಕೀಯರಿಗೆ ಕಳಿಸದಂಥ ಕಂಕಣವನ್ನು ತಮ್ಮ ಸನ್ನಿಧಿಗೆ ಕಳುಹಿಸಿರುವಲ್ಲಿ ತಮ್ಮನ್ನು ಸಹೋದರರೆಂದೇ ಭಾವಿಸಿರ ಬಹುದಲ್ಲವೆ?

**ಬಾದಶಹ-** ''ಎಲೈ ರಾಯಭಾರಿಯೇ, ಹೀಗಿದ್ದಲ್ಲಿ ನಾನಾದರೂ ಆ ಕಾರ್ನಾವತಿಯನ್ನು ನನ್ನ ಸಹೋದರಿಯೆಂದೇ ಗ್ರಹಿಸುವೆನು; ಮತ್ತು ಒಬ್ಬ ಅಣ್ಣನು ಯಾವ ಪ್ರಕಾರ ತನ್ನ ಸಹೋದರಿಗೆ ವಿಪತ್ಕಾಲದಲ್ಲಿ ನೆರವಾಗುವನೋ ಅದರಂತೆ ನಾನಾದರೂ ನಿಮ್ಮ ರಾಣಿಗೆ ಸಹಾಯಕನಾಗಿರುವೆನು. ಈ ಸಂಗತಿಯನ್ನು ರಾಣಿಗೆ ಶ್ರುತಪಡಿಸು.'' ಎಂದು ಹೇಳಿ ಆ ರಾಯಭಾರಿಗೆ ತಕ್ಕ ಸನ್ಮಾನ ಮಾಡಿ ಉಡುಗರೆಗಳನ್ನು ಕೊಟ್ಟು ಮೇವಾಡಕ್ಕೆ ಹೋಗಲು ನಿರೂಪಿಸಿದನು. ಈ ಪ್ರಕಾರ ಹುಮಾಯೂನ ಮತ್ತು ಕರ್ನಾವತಿ ಈವರಲ್ಲಿ ಭಗಿನೀಬಂಧುತ್ವವು ಸ್ಥಿರಗೊಂಡಿತು.

ಕ್ರಿ.ಶ.1535ರಲ್ಲಿ ರಾಣಾರತನ್ನ ಸಿಂಗನು ಸಾಯಲು ಅವನ ತಮ್ಮನಾದ ವಿಕ್ರಮಾಜಿತಸಿಂಗನು ಸಿಂಹಾಸನಾರೂಢನಾದನು. ಮುಂದೆ ಸ್ವಲ್ಪ ದಿವಸಗಳಲ್ಲಿಯೇ ಗುಜರಾಥದ ಬಹಾದ್ದೂರಶಹನು ದಂಡೆತ್ತಿಬಂದನು. ರಜಪೂತರ ಸೈನ್ಯವು ಅವನನ್ನು ಎದುರಿಸಲಿಕ್ಕೆ ಹೋಗಿ ಹಿಮ್ಮೆಟ್ಟಿತು. ಆಗ ಬಹಾದ್ದೂರಶಹನು ಚಿತ್ತೂರಿಗೆ ಬಂದು ಮುತ್ತಿಗೆ ಹಾಕಿದನು.

ಈ ಮುತ್ತಿಗೆಯು ಬಹಳ ದಿವಸಗಳವರೆಗೆ ಏಳಲಿಲ್ಲ. ಕೋಟೆ ಯೊಳಗಿನ ಅನ್ನಸಾಮಗ್ರಿಗಳು ತೀರುತ್ತಬಂದವು. ಆಗ ಕಾರ್ನಾವತಿಯು ಇಂಥ ಬಿಕ್ಕಟ್ಟಿನ ಪ್ರಸಂಗದಲ್ಲಿ ತನಗೆ ಸಹಾಯಮಾಡಬೇಕೆಂದು ಪತ್ರಬರೆದು ಹುಮಾಯೂನ ಬಾದಶಹನ ಕಡೆಗೆ ಕಳುಹಿಸಿದಳು. ರಾಯಭಾರಿಯು ಪತ್ರತೆಗೆದುಕೊಂಡು ವೇಗದಿಂದ ಪ್ರಯಾಣಮಾಡುತ್ತ ದಿಲ್ಲಿಗೆ ಬಂದನು.

ಕಾರ್ನಾವತಿಯ ದುರದುಷ್ಟವೋ ಏನೋ, ಬಾದಾಶಹನು ಆ ಸಮಯಕ್ಕೆ ದಿಲ್ಲಿಯೊಳಗೆ ಇದ್ದಿಲ್ಲ. ಬಿಹಾರ ಪ್ರಾಂತವನ್ನು ಕೈವಶಪಡಿಸಿಕೊಳ್ಳಲು ದಂಡೆತ್ತಿಹೋಗಿದ್ದನು. ಕೆಲವು ದಿವಸಗಳ ಮೇಲೆ ಆ ಪತ್ರವು ಮೊಗಲಸ್ವಾರರಿಂದ ಹುಮಾಯೂನನಿಗೆ ತಲ್ಪಿತು. ತಕ್ಷಣವೇ ಹುಮಾಯೂನನು ಕೆಲವು ದಂಡನ್ನು ಅಲ್ಲಿಯೇ ಬಿಟ್ಟು ಉಳಿದ ದಂಡಿನೊಡನೆ ಚಿತ್ತೂರಿಗೆ ಹೊರಟನು. ದಾರಿಯಲ್ಲಿ ಹೆಚ್ಚು ವಿಶ್ರಾಂತಿ ತೆಗೆದುಕೊಳ್ಳದೆ ಪ್ರಯಾಣಬೆಳೆಸುತ್ತ ಒತ್ತರದಿಂದ ಸಾಗಿಬಂದನು. ಆಗಿನ ಕಾಲಕ್ಕೆ ರೈಲುಗಳಿದ್ದಿಲ್ಲ. ಚಿತ್ತೂರಿಗೆ ಬರಬೇಕಾದರೆ ಮಾರ್ಗದಲ್ಲಿಯೇ ಎಷ್ಟೋ ದಿವಸಗಳು ಕಳೆದುಹೋದವು.

ಇತ್ತ ಚಿತ್ತೂರಲ್ಲಿ ಬಹಾದ್ದೂರಶಹನ ದಂಡಿನವರು ಕೋಟೆಯ ಒಂದು

ಭಾಗವನ್ನು ಕೆಡವಿ ಒಳಗೆ ಹೋಗಲನುವಾದರು. ಆಗ ಚಿತ್ತೂರಿನವರು ಇನ್ನು ಕೋಟೆಯು ಶತ್ರುಗಳ ವಶವಾಗುವದೆಂದು ಹೌಹಾರಿದರು. ಗಂಡಸರು ಕೇಸರಿ ಬಣ್ಣದ ವಸ್ತ್ರಗಳನ್ನುಟ್ಟು ಕೋಟೆಯು ಬಿದ್ದಭಾಗದಲ್ಲಿ ಬಂದು, ಶತ್ರುಗಳೊಡನೆ ಹೋರಾಡಿ ಪ್ರಾಣವನ್ನರ್ಪಿಸಲಿಕ್ಕೆ ಸನ್ನದ್ಧರಾದರು. ಅತ್ತ ಕಾರ್ನಾವತಿಯು ಅಣ್ಣನಿಂದ ಸಹಾಯವು ಏಕೆ ಬರಲಿಲ್ಲವೆಂದು ಹಳಹಳಿಸುತ್ತ ಚಿತೆಯನ್ನು ತಯಾರಮಾಡಿಸಿ ರಜಪೂತಸ್ತ್ರೀಯರೊಡನೆ ಜೋಹರಮಾಡಿದಳು. ಆಗ ಬಹಾದ್ದೂರಶಹನ ದಂಡಿನವರಿಗೂ ರಜಪೂತರಿಗೂ ತುಮುಲಯುದ್ಧವಾಯಿತು. ಆದರೂ ಕೊನೆಗೆ ವಿಜಯಶ್ರೀಯು ಬಹಾದ್ದೂರಶಹನನ್ನೇ ಅವಲಂಬಿಸಿದಳು. ಬಹಾದ್ದೂರನು ಚಿತ್ತೂರನ್ನು ವಶಪಡಿಸಿಕೊಂಡನು.

ಮುಂದೆ ಮೂರು ನಾಲ್ಕು ದಿವಸಗಳಲ್ಲಿಯೇ ಹುಮಾಯೂನ ಬಾದಶಹನು ಬರುವನೆಂಬ ವರ್ತಮಾನ ಹತ್ತಿತು. ಕೂಡಲೆ ಬಹಾದ್ದೂರಶಹನು ಚಿತ್ತೂರ ಬಿಟ್ಟು ಓಡಿಹೋದನು. ಬಾದಶಹನು ಕಾರ್ನಾವತಿಯು ಚಿತೆಯಲ್ಲಿ ಹಾರಿ ಅಸುದೊರೆದ ಸಂಗತಿಯನ್ನು ಕೇಳಿ ''ಹಾಯ್! ಹಾಯ್!! ನಾನು ಏಕೆ ಸಮಯಕ್ಕೆ ಸರಿಯಾಗಿ ಸಹೋದರಿಯ ಸಹಾಯಕ್ಕೆ ಒದಗಲಿಲ್ಲ'' ಎಂದು ವಿಷಾದಯುಕ್ತನಾಗಿ ಅಶ್ರುಗಳನ್ನುದುರಿಸಿದನು. ಆಮೇಲೆ ಕೆಲವು ದಿವಸ ಅಲ್ಲಿಯೇ ನಿಂತು ವಿಕ್ರಮಾಜಿತನಿಗೆ ಪುನಃ ಪಟ್ಟಾಭಿಷೇಕಮಾಡಿಸಿ, ರಾಜ್ಯದಲ್ಲಿ ಸುವ್ಯವಸ್ಥೆಯನ್ನು ನೆಲೆಗೊಳಿಸಿ ದಿಲ್ಲಿಗೆ ಹೊರಟುಹೋದನು.

ಮುಸಲ್ಮಾನ ಅರಸರು ಹಿಂದೂಜನರೊಡನೆ ಸಹಕಾರಿತ್ವದಿಂದ ವರ್ತಿಸಿದ ಸಂಗತಿಗಳೇನೋ ಹೀಗೆ ಅವೆ. ಆದರೆ ನಮ್ಮ ಹಿಂದೂಬಂಧುಗಳ ದೃಷ್ಟಿಗೆ ಪಾಶ್ಚಾತ್ತ್ಯರು ಬರೆದಂಥ ಮುಸಲ್ಮಾನ ಅರಸರ ಗುಣಶೀಲನಗಳೇ ಗೋಚರವಾಗುತ್ತವೆ, ಅವುಗಳನ್ನೇ ಅವರು ಕಲ್ಪಿಸಿಕೊಂಡಿದ್ದಾರೆ. ಹಿಂದೂಸ್ತ್ರಿಯರೊಡನೆ ಪರನಾರೀಸಹೋದರರಂತೆ ವರ್ತಿಸುವವರೂ ಪ್ರಜೆಗಳ ದೂರುಕೇಳುವದಕ್ಕೆ ಅರಮನೆಯ ಹೊರಗೆ ಗಂಟೆಗಳನ್ನು ಕಟ್ಟಿಸಿದವರೂ ಸರಾಯಿಯ ಗುಂಗಿನಲ್ಲಿದ್ದ ಅರಸರೆ!!

★★★★★

# ಹ|| ಅಹಮ್ಮದ ಹರ್ಬ ನೇಷಾಪುರಿ

## (ಶ್ರೀಯುತ ಎಂ.ಬಿ.ಕೊಪ್ಪಳ, ಉರ್ದುಸ್ಕೂಲ ಹ|| ಮಾಸ್ತರ, ರೋಣ)

ಖುರಾಸಾನ ಪ್ರಾಂತದಲ್ಲಿ ಅಹಮ್ಮದ ಹರ್ಬರೆಂಬವರು ಒಬ್ಬ ಮಹಾಯೋಗಿಗಳು ಗತಿಸಿಹೋಗಿದ್ದಾರೆ, ನೇಷಾಪುರವೇ ಇವರ ವಾಸಸ್ಥಾನವು. ಇವರು ಪ್ರಪಂಚದಲ್ಲಿಯೇ ಪರಮಾರ್ಥವನ್ನು ಸಾಧಿಸಿಕೊಂಡಿದ್ದರು. ಇವರ ಪಂಚೇಂದ್ರಿಯಗಳು ಐಹಿಕವ್ಯವಹಾರದಲ್ಲಿ ಸಿಲುಕಿಕೊಂಡಿದ್ದರೂ ಇವರ ಹೃತ್ಕಮಲವು ಮಾತ್ರ ಸರ್ವದಾ ಪರಮಾತ್ಮನ ಧ್ಯಾನದಲ್ಲಿಯೇ ತಲ್ಲೀನವಾಗಿ ರುತ್ತಿತ್ತು. ಇವರ ಸಾತ್ತ್ವಿಕವರ್ತನವು ಅತಿಸೂಕ್ಷ್ಮವಾದದ್ದು. ಒಮ್ಮೆ ಇವರ ತಾಯಿಯು ಮನೆಯಲ್ಲಿ ಸಾಕಿದ ಕೋಳೀಮಾಂಸದ ಪಕ್ವಾನ್ನವನ್ನು ಸಿದ್ಧಪಡಿಸಿ ಉಣಬಡಿಸಿದಳು. ಇವರು ಅದನ್ನು ಉಣ್ಣಲಿಲ್ಲ. ತಾಯಿಯು ವಿಚಾರಿಸಲು ''ಮಾತೆಯೆ! ಒಂದು ದಿವಸ ಈ ಕೋಳಿಯು ನೆರೆಮನೆಯ ಮಾಳಿಗೆಯ ಮೇಲೆ ಹರವಿದ್ದ ಕಾಳುಗಳನ್ನು ಆರಿಸಿ ತಿಂದಿತ್ತು. ಆದ್ದರಿಂದ ಇದರ ಮಾಂಸವು ಭುಂಜಿಸಲು ಅಯೋಗ್ಯವಾಗಿದೆ'' ಎಂದು ಉತ್ತರಿಕೊಟ್ಟರು.

ಇವರು ವಾಸಮಾಡುತ್ತಿದ್ದ ಓಣಿಯಲ್ಲಿ ಬಹರಾಮನೆಂಬ ಒಬ್ಬ ಫಾರಸೀ ಧರ್ಮದ ವ್ಯಾಪಾರಸ್ಥನಿದ್ದನು. ಒಮ್ಮೆ ಅವನು ವ್ಯಾಪಾರದ ಸಲುವಾಗಿ ಕಳುಹಿಸಿದ ಸರಕು ದಾರಿಯಲ್ಲಿ ಕಳವಾಯಿತೆಯ ಸುದ್ದಿಯು ಬಂದಿತು. ಆಗ ಅಹಮ್ಮದರವರು ಈ ವೃತ್ತಾಂತವನ್ನು ಕೇಳಿ ಬಹರಾಮನನ್ನು ಪರಾಮರಿಸಲು ಶಿಷ್ಯರೊಡನೆ ಅವನ ಮನೆಗೆ ಹೋದರು. ಆಗ ಬಹರಾಮನು ಇವರನ್ನು ಆದರದಿಂದ ಬರಮಾಡಿಕೊಂಡು ತಕ್ಕ ಸ್ಥಳದಲ್ಲಿ ಕೂಡ್ರಿಸಿರನು. ಅವನು ಬರಗಾಲದ ಮೂಲಕ ಭೋಜನಕ್ಕಾಗಿ ಇವರುಗಳು ದಯಮಾಡಿಸಿರಬಹುದೆಂದು ಭಾವಿಸಿಕೊಂಡು ''ಸ್ವಲ್ಪ ವಿಶ್ರಮಿಸಿದ, ಈಗಲೇ ಭೋಜನದ ವ್ಯವಸ್ಥೆಯನ್ನು ಮಾಡಿಸುವೆನು'' ಎಂದು ಅರಿಕೆಮಾಡಿಕೊಂಡನು.

ಆಗ **ಅಹಮ್ಮದರವರು** – ''ಬಹರಾಮ! ಹಾತೊರೆಯಬೇಡ!! ನಾವೇನೂ ಕ್ಷುಧಾಭಾಧೆಯಿಂದ ಇಲ್ಲಿಗೆ ಬಂದವರಲ್ಲ; ನಿನ್ನ ಸರಕು ಕಳಿವಾಗಿ ಹೋದ ಸಂಗತಿಯನ್ನು ಕೇಳಿ, ನಿನಗೆ ಸಹಾನುಭೂತಿಯನ್ನು ತೋರಿಸುವದಕ್ಕೆ ಬಂದಿದ್ದೇವೆ'' ಎಂದರು.

**ಬಹರಾಮ:-** ಸ್ವಾಮಿನ್, ಇದರಿಂದ ನನಗೇನೂ ವ್ಯಥೆಯಾಗಲಿಲ್ಲ ಸ್ವಲ್ಪ ಪರಿಶೀಲಿಸಿದಲ್ಲಿ ನಾನೇ ಇದರ ಸಂಬಂಧವಾಗಿ ಮೂರು ಸಂಗತಿಗಳ ವಿಷಯವಾಗಿ ಕೃತಜ್ಞತಾಭಾವವನ್ನು ವ್ಯಕ್ತಮಾಡಬೇಕಾಗಿದೆ. ಅವು ಯಾವವೆಂದರೆ 1) ಪೂರ್ಣಸರಕು ಹೋಗಿಲ್ಲ; ಅರ್ಧ ಹೋಗಿದೆ; (2) ನಾನೇನೂ ಪರರಮಾಲನ್ನು ಅಪಹರಿಸಿಲ್ಲ, ನನ್ನ ಮಾಲನ್ನೇ ಪರರು ಅಪಹರಿಸಿದ್ದಾರೆ; (3) ನಿತ್ಯಾನಂದ ಕೂಡುವಂಥ ನನ್ನ ಧರ್ಮವೇನೂ ಕಳವಾಗಿಲ್ಲ; ಕ್ಷಣಿಕವಾದ ಲೌಕಿಕ ಸಂಪತ್ತು ಮಾತ್ರ ಕಳವಾಗಿಹೋಗಿದೆ.

ಆಗ **ಅಹಮ್ಮದರವರು:-** ತಮ್ಮ ಶಿಷ್ಯರೆನ್ನುದ್ದೇಶಿಸಿ- ''ಈ ಮೂರು ಮಾತುಗಳನ್ನು ಬರೆದಿಟ್ಟುಕೊಳ್ಳಿರಿ, ಇವನು ಅಗ್ನಿಪೂಜಕನಾಗಿದ್ದರೂ ಎಂಥ ಸುವಾಸಿತಪುಷ್ಪಗಳ ಸುಗಂಧವು ಇಲ್ಲಿ ಬೀರುತ್ತಲಿದೆ, ನೋಡಿದಿರಾ?'' ಎಂದು ಬಹರಾಮನನ್ನು ಕುರುತು- ''ನೀವು ಅಗ್ನಿಯನ್ನು ಏಕೆ ಪೂಜಿಸುತ್ತಿರುವಿರಿ?'' ಎಂದು ಕೇಳಿದರು.

**ಬಹರಾಮ:-** ನಾಳೆ ಪರಲೋಕದಲ್ಲಿ ಅದು ನಮ್ಮನ್ನು ಸುಡಬಾರದೆಂತಲೂ ನಮ್ಮನ್ನು ದೇವರ ಸನ್ನಿಧಿಗೆ ಕರೆದೊಯ್ಯಲೆಂತಲೂ ಪೂಜಿಸಿ ಅದರ ಕೃಪೆಯನ್ನು ಸಂಪಾದಿಸಿಕೊಳ್ಳುತ್ತೇವೆ.

**ಅಹಮ್ಮದರವರು:-** ಬಹರಾಮ! ಈ ವಿಷಯದಲ್ಲಿ ಮಾತ್ರ ವಿಚಾರ ಸರಣಿಯು ಬದಲಾಗಿದೆ ನೋಡು! ಅಗ್ನಿಯೆಂಬುದೊಂದು ಸೃಷ್ಟಪದಾರ್ಥವು; 'ಇವರು ಸ್ವಜನರು, ಅವರು ಪರಕೀಯರು - ಎಂಬ ಜ್ಞಾನವೇನೂ ಅದಕ್ಕಿಲ್ಲ. ಜ್ವಲನಕಾರ್ಯವು ಅದರ ಸ್ವಭಾವವು, ತನ್ನನ್ನು ಮುಟ್ಟಿದ ಎಲ್ಲರನ್ನೂ ಅದು ಸುಡುವದು. ಒಬ್ಬ ಬಾಲಕನು ಅದರ ಮೇಲೆ ನೀರುಸುರಿದರೂ ಅದು ಆರಿ ಹೋಗುವದು. ಇಂಥ ಅಸಮರ್ಥವಾದ ಬೆಂಕಿಯು ಸರ್ವಶಕ್ತನಾದ ಪರಮಾತ್ಮ ನೆಡೆಗೆ ನಿಮ್ಮನ್ನು ಕರೆದೊಯ್ಯುವದೆನ್ನುವದು ಅಜ್ಞಾನದ ದ್ಯೋತಕವು. ನೀನು ಎಪ್ಪತ್ತು ವರ್ಷಗಳ ಪರ್ಯಂತರ ಅದರ ಆರಾಧನೆಯನ್ನು ಮಾಡಿರುವೆ; ನಾನು ಯಾವಾಗಲೂ ಅದನ್ನು ಪೂಜಿಸಿರುವದಿಲ್ಲ. ಬಾ, ಇಬ್ಬರೂ ಅದರೊಳಗೆ ಕೈಗಳನ್ನು ಇಡೋಣ' ಎಂದು ಇಬ್ಬರೂ ಬಹಳ ಹೊತ್ತಿನವರೆಗೆ ಇಟ್ಟರೂ ಯಾರ ಕೈಗೂ ಉಷ್ಣತೆಯು ಸೋಂಕಲಿಲ್ಲ.

ಆಗ ಅಹಮ್ಮದ್‌ರವರು ಆಕಾಶದ ಕಡೆಗೆ ಮುಖವೆತ್ತಿ ವೀರಗರ್ಜನೆಯಿಂದ ''ಓ ಸತ್ಯಾಸತ್ಯಪರೀಕ್ಷಾಕರ್ತನೆ; ಇದೋ, ನಿನ್ನ ಸತ್ಯದ ಪರೀಕ್ಷೆಯ ಪ್ರಭಾವವು!'' ಎಂದು ಕೂಗಿದರು. ಆಗ ''ಎಲೊ ಪ್ರಿಯ ದೀನಬಂಧುವೆ, ನಿನ್ನ ಕೈಯನ್ನು ಈಚೆಗೆ ತೆಗೆ, ಅವನೊಬ್ಬನೇ ಇಡಲಿ; ಆಮೇಲೆ ಅಗ್ನಿಯ ಜ್ವಲನಶಕ್ತಿಯನ್ನು ನೋಡು. ನಿನ್ನ ಹಸ್ತವು ಅಗ್ನಿಯ ಜಲ್ವನಕಾರ್ಯವನ್ನು ವಿರೋಧಿಸಿ ಬಹರಾಮನ ಕೈಗೆ ಆಶ್ರಯವಾಯಿತೆಂಬುದನ್ನು ನೀನು ಅರಿಯದಾದೆ'' ಎಂದು ಆಕಾಶವಾಣಿಯಾಯಿತು. ಮುಂದೆ ಬಹರಾಮನು ಒಬ್ಬನೇ ಇಡಲಾಗಿ ಕೂಡಲೆ ಅದು ಬೆಂದು ಹುರಪಳಿಸಿತು.

ಇದರಿಂದ ಬಹರಾಮನ ಮನಸ್ಸಿನ ಮೇಲೆ ಒಳ್ಳೆ ಪರಿಣಾಮವಾಯಿತು. ಆಗ ಅವನು ''ನನ್ನ ಎರಡು ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರವನ್ನಿತ್ತರೆ ನಾನು ನಿಮ್ಮ ಧರ್ಮವನ್ನು ಅನುಸರಿಸುವೆನು'' ಎಂದನು. ಅಹಮ್ಮದರವರು ''ನಿನಗೆ ಯಾವ ಸಂಶಯ ಬಂದಿದ್ದರೂ ಕೇಳಿ ಪರಿಹರಿಸಿಕೊಳ್ಳಬಹುದು'' ಎಂದರು.

**ಬಹರಾಮ:-** ನಿಮ್ಮ ಹಸ್ತವು ಏಕೆ ಸುಡಲಿಲ್ಲ? ದೇವರು ನಮ್ಮನ್ನು ಜಗತ್ತಿನಲ್ಲಿ ಏಕೆ ಹುಟ್ಟಿಸುತ್ತಾನೆ?

**ಅಹಮ್ಮದರವರು:-** ಯಾವನು ಸೃಷ್ಟಿಕರ್ತನಾದ ನಿರಾಕಾರಪರಮಾತ್ಮನನ್ನು ಆರಾಧಿಸಿ ಆತನ ಕೃಪೆಗೆ ಪಾತ್ರನಾಗುವನೋ ಸೃಷ್ಟಪದಾರ್ಥಗಳೆಲ್ಲ ಅಂಥವನ ಅಧೀನವಾಗಿ ಅವನ ಇಚ್ಛೆಯಂತೆ ವರ್ತಿಸುವವು. ಆದ್ದರಿಂದ ಅಗ್ನಿಯು ನನ್ನ ಇಚ್ಛೆಗೆ ವಿರುದ್ಧವಾಗಿ ನನ್ನ ಕೈಯನ್ನು ಸುಡಲಿಲ್ಲ. ದೇವರು ತಾನು ಕರ್ತನೆಂಬ ನಾಮಸ್ವರೂಪಕ್ಕೆ ಅನುಗುಣವಾಗಿಯೇ ನಮ್ಮನ್ನು ಜಗತ್ತಿನಲ್ಲಿ ಹುಟ್ಟಿಸುತ್ತಾನೆ.

ಇದನ್ನು ಕೇಳಿ ಬಹರಾಮನು ಶಾಂತಚಿತ್ತನಾಗಿ ನಿರ್ಮಲಮನಸ್ಸಿನಿಂದ ಇಸ್ಲಾಮಿಧರ್ಮವನ್ನು ಸ್ವೀಕರಿಸಿದನು.

ಅಹಮ್ಮದರವರು ರಾತ್ರಿಯಲ್ಲಿ ಮಲಗದೆ ಜಪಕ್ರಮದಲ್ಲಿಯೇ ಮಗ್ನರಾಗಿ ರುತ್ತಿದ್ದರು. ಒಂದು ದಿನ ಶಿಷ್ಯರು ತಾವು ನಿದ್ರಿಸದೆ ಇರುವದೇಕೆಂದು ಕೇಳಲು ಅವರು ''ತಲೆಯ ಮೇಲೆ ಸ್ವರ್ಗವನ್ನು ಶೃಂಗರಿಸಹತ್ತಿದ್ದಾರೆ, ಕೆಳಗೆ ನರಕದ ಅಗ್ನಿಗೆ ಪುಟಕೊಡಹತ್ತಿದ್ದಾರೆ; ಇವೆರಡರಲ್ಲಿ ಯಾವ ಸ್ಥಾನಕ್ಕೆ ಹೋಗುವೆನೆಂಬುದು

ನಿಶ್ಚಿತವಿಲ್ಲದ ಮನುಷ್ಯನಿಗೆ ನಿದ್ರೆಯು ಹೇಗೆತಾನೆ ಬಂದೀತು?'' ಎಂದರಂತೆ.

ಅಹಂಕಾರವನ್ನು ತ್ಯಜಿಸಬೇಕು, ದೇವರಲ್ಲಿ ಭಯಭಕ್ತಿಯುಳ್ಳವನಾಗಿರಬೇಕು, ಪ್ರಪಂಚದಲ್ಲಿದ್ದ ಪರಮಾರ್ಥವನ್ನು ಸಾಧಿಸಬೇಕು-ಎಂಬಿವೇ ಅಹಮ್ಮದರವರ ಬೋಧೋಕ್ತಿಗಳು.

★★★★★

# ಇಸ್ಲಾಂ ಮತ್ತು ಹಿಂದೂ ಧರ್ಮಗಳಲ್ಲಿ ಭ್ರಾತೃಭಾವನೆ

**(ಡಾ|| ಮಹಮ್ಮದ್ ಹಾಫಿಸ ಸೈಯದ್, ಪಿ.ಎಚ್.ಡಿ., ಡಿಲಿಟ್., ವಿದ್ಯಾಸಾಗರ)**

**(ಹಿಂದಿ ಕಲ್ಯಾಣದಿಂದ ಕನ್ನಡಿಸಿದ್ದು)**

ಎಲ್ಲಾ ಜನರೂ ಅಣ್ಣತಮ್ಮಂದಿರು ಎಂಬುದು ಎಲ್ಲರಿಗೂ ಗೊತ್ತಿರುವ ಸಾಮಾನ್ಯ ತತ್ತ್ವವೇ ಸರಿ, ಆದರೂ ಜನರು ಇದನ್ನು ಆಸಡ್ಡೆಮಾಡಿ ತಿರಸ್ಕರಿಸುವದೇ ಬಹಳವಾಗಿ ಕಂಡುಬರುತ್ತದೆ. ಇದು ಜೀವನಕ್ಕೆ ಬೇಕಾದ ಎಂಥ ಸ್ಪಷ್ಟ ಮತ್ತು ಬಲುಮಟ್ಟಿಗೆ ಸರ್ವಸಮ್ಮತವಾದ ತತ್ತ್ವವಾಗಿರುವದೆಂದರೆ ಇದನ್ನು ಮನಸ್ಸಿಗೆ ಹತ್ತಿಸಿಕೊಳ್ಳುವದಕ್ಕೆ ಬಹಳ ಹೊತ್ತು ಬೇಕಾಗುವದಿಲ್ಲ. ಆದ್ದರಿಂದ ಮಾನವೀಯ ಭ್ರಾತೃಭಾವವನ್ನು ಲೋಕದಲ್ಲಿ ನ್ಯಾಯಪ್ರಿಯರೂ ವಿಚಾರಶೀಲರೂ ಆಗಿರುವವರೆಲ್ಲ ಒಪ್ಪಿರುವರಾದರೂ ದಿನದಿನದ ಜೀವನವ್ಯವಹಾರದಲ್ಲಿ ಈ ತತ್ತ್ವಕ್ಕೆ ಹೆಚ್ಚಿನ ತಿರಸ್ಕಾರವೇ ಲಭಿಸುತ್ತಿರುತ್ತದೆ. ಮನುಷ್ಯರ ಭ್ರಾತೃಭಾವವೆಂಬುದು ನಿರಾಧಾರವೆಂದೂ ವ್ಯರ್ಥವೆಂದೂ ಹೇಳುವವರ ಸಂಖ್ಯೆಯೇನೂ ಈ ಜಗತ್ತಿನಲ್ಲಿ ಕಡಿಮೆ ಇಲ್ಲ.

ತಮ್ಮನ್ನು ಹಿಂಬಾಲಿಸುವ ಜನರು ಈ ಗಂಭೀರ ಸಾಭಿಪ್ರಾಯ ಸಕಲ ಸತ್ಯವನ್ನು ತೀರ ಉಪೇಕ್ಷಿಸುವಂತೆ ಮಾಡಿ, ಅವಿಚಾರಕೃತವಾದ ಆಚರಣೆಯನ್ನು

ಮಾಡುವ ಕೆಲವರು ಮುಂದಾಳುಗಳು ಇರುವದು; ಅವರು ತಿಳಿದವರು, ಕಾರ್ಯದಕ್ಷರು-ಎನಿಸಿಕೊಂಡಿದ್ದರೂ ತಮ್ಮ ಒಡನಾಡಿಗಳಿಗೆ ಎಷ್ಟು ಹಾನಿಗಳನ್ನು ಮಾಡಿರುವರೋ, ಎಷ್ಟು ದುಃಖದ ಮಳೆಯನ್ನು ಕರೆದಿರುವರೋ ಅದನ್ನು ಅಳೆದು ಹೇಳುವುದಕ್ಕೆ ಆಗುವಂತಿಲ್ಲ. ಧರ್ಮವಿಚಾರದಲ್ಲಿರುವ ಮತಭೇದದಿಂದಲೂ ಜಾತೀಯವಿರೋಧದಿಂದಲೂ ಕೂಡಿರುವ ಈ ಕಾಲದಲ್ಲಿ ಮಾನವೀಯ ಭ್ರಾತೃಭಾವನೆಗೆ ಯಾವದಾದರೂ ಆಧಾರವಿದೆಯೆ?- ಎಂಬ ಬಗ್ಗೆ ಕೆಲವರಿಗೆ ಸಂಶಯವುಂಟಾಗಿರುವದು. ಆದರೆ ಇನ್ನೊಂದು ಕಡೆಯಲ್ಲಿ ನೋಡಿದರೆ ಈ ವಿಷಯದಲ್ಲಿ ಪೂರ್ಣವಿಶ್ವಾಸದಿಂದ ಇದು ಮಾನವ ಜೀವನದ ಸಾಮಾಜಿಕ, ರಾಜನೈತಿಕ, ಆರ್ಥಿಕ ಮತ್ತು ಧಾರ್ಮಿಕ- ಈ ಎಲ್ಲಾ ಕ್ಷೇತ್ರಗಳಲ್ಲಿಯೂ ಇದರ ಸತ್ತೆಯು ಇರುವದೆಂದು ನಂಬಿದವರೂ ಇರುತ್ತಾರೆ. ನಾವು ಉನ್ನತಿಯ ಮಾರ್ಗದಲ್ಲಿ ಮುಂದುವರಿಯುತ್ತಲೇ ಇರಬೇಕೆಂದೂ ಒಬ್ಬರಿಗೊಬ್ಬರು ಹೊಂದಿಕೊಂಡೇ ಇರಬೇಕೆಂದೂ ಇಷ್ಟಪಡುವವರಾದರೆ ಈ ತತ್ತ್ವವನ್ನು ಯಾವಾಗಲೂ ಮನಸ್ಸಿನಲ್ಲಿಟ್ಟಿರಬೇಕಾಗುತ್ತದೆ. ಆದ್ದರಿಂದ ಇಂಥ ಮಹತ್ತ್ವಪೂರ್ಣವಾದ ತತ್ತ್ವವನ್ನು ಒಳಹೊಕ್ಕು ಪರೀಕ್ಷಿಸಿ ಇದರ ಗುಣಗಳನ್ನು ಸಾಧಾರಣವಾಗಿ ಸ್ಥಾಪಿಸುವದಕ್ಕೆ ಹೊರಡುವದು ಅವಶ್ಯವಾಗಿರುತ್ತದೆ.

''ನಾನು ಮೊದಲು ಇಂಗ್ಲೆಂಡು ನಿವಾಸಿಯು, ಬಳಿಕ ಕ್ರಿಸ್ತೀಯ ಮತದವನು'' ''ನಾನು ಭಾರತೀಯನು ಮೊದಲು, ಹಿಂದುವೆಂಬುದು ಎರಡನೆಯದು'' ಇಂಥ ಮಾತುಗಳೇನೋ ನಮ್ಮ ಕಿವಿಗೆ ಬಹಳವಾಗಿ ಬೀಳುತ್ತಿರುತ್ತವೆ. ಆದರೆ ''ನಾನು ಮೊಟ್ಟಮೊದಲನೆದುದಾಗಿ ಮನುಷ್ಯನು, ಇನ್ನೇನಾದರೂ ಆಗಿದ್ದರೆ ಅದು ಎರಡನೆಯದಾಗಿ'' ಎನ್ನುವವರು ಬಹುವಿರಳ. ವಿಜ್ಞಾನವು ಹೆಚ್ಚಿದಂತೆಲ್ಲ, ನಾವು ಜೀವನಕ್ಕೆ ಅತ್ಯವಶ್ಯವಾದ ತತ್ತ್ವಗಳಿಗಿಂತಲೂ ಅನಾವಶ್ಯಕವಾದ ಅಂಗಗಳಿಗೇ ಹೆಚ್ಚು ಮಹತ್ತ್ವವನ್ನು ಕೊಡುತ್ತಾ ಬಂದಿರುವೆವು.

## ಆಧ್ಯಾತ್ಮಿಕ ಆಧಾರ

ಮಾನವೀಯ ಭಾತೃಭಾವನೆ ಎಂಬ ಕಟ್ಟಡವು ಆಳವಾದ ಆಧ್ಯಾತ್ಮಿಕ ತಳಹದಿಯ ಮೇಲೆ ನಿಂತಿರುತ್ತದೆ. ಇದನ್ನು ವ್ಯಾವಹಾರಿಕ ಜೀವನದಲ್ಲಿ ಆಚರಣೆಗೆ ಇಳಿಸಿಕೊಳ್ಳುವದೇ ಆಧ್ಯಾತ್ಮಿಕ ಜಾಗೃತಿಯ ಪರಮೋದ್ದೇಶವು.

ಯಾವ ಮತಕ್ಕೆ ಸೇರಿರುವ ಮಹಾತ್ಮರಲ್ಲಿಗೆ ಹೋಗಿ ನೋಡಿದರೂ ಆತನು ಸಹಿಷ್ಣುವಾಗಿ, ಪ್ರೇಮಮಯನಾಗಿ, ಎಲ್ಲರಲ್ಲಿಯೂ ಸಹಾನುಭೂತಿಯುಳ್ಳವನಾಗಿ ಇರುವನೆಂದು ಕಂಡುಬರುತ್ತದೆ. ಪ್ರಾಚೀನತತ್ತ್ವಜ್ಞರ ದೃಷ್ಟಿಯಿಂದ ನೋಡಲಿ, ಅರ್ವಾಚೀನತತ್ತ್ವಜ್ಞರ ದೃಷ್ಟಿಯಿಂದ ನೋಡಲಿ, ಆಧ್ಯಾತ್ಮಿಕ ಉನ್ನತಿಯ ಕ್ಷೇತ್ರದಲ್ಲಿ ಭ್ರಾತೃಭಾವನೆಗೆ ತಪ್ಪದೆ ಸ್ಥಾನವಿದ್ದೇ ಇರುತ್ತದೆ.

ಯಾವ ಧರ್ಮವೇ ಆಗಲಿ, ಭಗವಂತನು ಸರ್ವಕಾರಣಕಾರಣನೆಂದೂ ಎಲ್ಲಾ ಜೀವರಿಗೂ ತಂದೆಯೆಂದೂ ಸೃಷ್ಟಿಕರ್ತನೆಂದೂ ಒಪ್ಪಿಕೊಳ್ಳುತ್ತವೆ. ಈ ನಿಯಮಕ್ಕೆ ಎಲ್ಲಿಯೂ ಅಪವಾದವಿರುವದಿಲ್ಲ. ಇದು ನಿಜವಾದರೆ, ಭಗವಂತನ ದೃಷ್ಟಿಯಲ್ಲಿ ಮಾನವರೆಲ್ಲ ಸಮಾನರೆಂದು ತೀರ್ಮಾನವಾಗುತ್ತದೆ. ಭಗವಂತನಾದ ಶ್ರೀಕೃಷ್ಣನು ಗೀತೆಯಲ್ಲಿ ''ನಾನು ಸರ್ವಭೂತಗಳಲ್ಲಿಯೂ ಸಮನಾಗಿರುವೆನು, ನನಗೆ ಯಾರೂ ಅಪ್ರಿಯನಲ್ಲ, ಪ್ರಿಯನೂ ಅಲ್ಲ; ಯಾರು ನನ್ನನ್ನು ಪ್ರೇಮದಿಂದ ಭಜಿಸುತ್ತಿರುವರೋ ಅವರು ನನ್ನಲ್ಲಿರುವರು, ನಾನು ಅವರಲ್ಲಿಯೂ ಇರುವೆನು'' (9-26) ಎಂದು ಹೇಳಿರುತ್ತಾನೆ.

ಲೋಕದಲ್ಲಿರುವ ಧರ್ಮಗಳಿಗೆಲ್ಲ ಮಾನವರ ಹೃದಯವನ್ನು ಶುದ್ಧಿಗೊಳಿಸಿ ಭಗವಂತನ ಬಳಿಗೆ ಕೊಂಡೊಯ್ಯುವದೇ ಗುರಿಯಾಗಿರುತ್ತದೆ. ಆದರೆ ಜನರು ಆಲಸ್ಯದಿಂದ ತಮ್ಮತಮ್ಮ ಧರ್ಮವಿಚಾರವನ್ನು ಕೂಡ ಅಧ್ಯಯನಮಾಡುವದಿಲ್ಲ. ಅವರು ಧರ್ಮವಿರುದ್ಧವಾಗಿ ಆಚರಣೆಮಾಡುತ್ತಿರುವದಕ್ಕೆ ಇದೇ ಕಾರಣವಾಗಿ ರುತ್ತದೆ. ಮಾನವೀಯ ಭ್ರಾತೃಭಾವಕ್ಕೆ ವಿರುದ್ಧವಾಗಿ ಉಪದೇಶಮಾಡುವ ಧರ್ಮವೇ ಇಲ್ಲವೆಂದು ಧಾರಾಳವಾಗಿ ಹೇಳಬಹುದು. ನನ್ನ ಈ ಮಾತಿನಲ್ಲಿ ಅವಿಶ್ವಾಸಿಗಳಾದ ಕೆಲವರಿಗೆ ಸಂಶಯವುಂಟಾಗಬಹುದು; ಆದ್ದರಿಂದ ಈ ಮಾತಿಗೆ ಪುಷ್ಟಿಯನ್ನು ಕೊಡುವದಕ್ಕಾಗಿ ಹಿಂದು ಮತ್ತು ಮುಸಲ್ಮಾನರ ಧರ್ಮಗ್ರಂಥದಿಂದ ಆರಿಸಿದ ಕೆಲವು ಉಕ್ತಿಗಳನ್ನು ಇಲ್ಲಿ ಉದಾಹರಿಸಬೇಕೆಂಬ ಆಸೆಯನ್ನು ತಡೆದುಕೊಳ್ಳಲಾರೆನು.

ನನಗೆ ಗೊತ್ತಿರುವ ಧರ್ಮಗಳೆಲ್ಲೆಲ್ಲ ಹಿಂದೂಧರ್ಮವು ಜಗತ್ತಿನಲ್ಲಿ ಪ್ರಾಚೀನ ತಮವಾಗಿರುತ್ತದೆ. ಈ ಪ್ರಾಚೀನಧರ್ಮದ ಪ್ರತಿಯೊಂದು ಪವಿತ್ರ ಗ್ರಂಥದಲ್ಲಿಯೂ ಮಾನವ ಭ್ರಾತೃಭಾವವನ್ನು ಸಮರ್ಥನೆಮಾಡುವ ಸ್ಪಷ್ಟೋಕ್ತಿಗಳು,

ಯಾವ ಬೇರೆಯ ಅಭಿಪ್ರಾಯಕ್ಕೂ ಅವಕಾಶವಿಲ್ಲದಂಥ ವಚನಗಳು, ಇರುತ್ತವೆ. **ಶ್ರೀಮದ್ಭಗವದ್ಗೀತೆಯ** ಆರನೆಯ ಅಧ್ಯಾಯದಲ್ಲಿ ಭಗವಂತನು ಹೇಳಿರುವದೇನೆಂದರೆ: ''ಸುಹೃತ್ ಮಿತ್ರ, ವೈರಿ, ಉದಾಸೀನ, ಮಧ್ಯಸ್ಥ, ದ್ವೇಷ್ಯ, ಬಂಧು-ಇವರಲ್ಲಿಯೂ ಸಾಧುಜನರಲ್ಲಿಯೂ ಸಮಬುದ್ಧಿಯಿಂದಿರುವವನು ಸರ್ವಶ್ರೇಷ್ಠನು''(9) ''ಯೋಗಯುಕ್ತಾತ್ಮನೂ ಸರ್ವರಲ್ಲಿಯೂ ಸಮದರ್ಶನನೂ ಆಗಿರುವ ಪುರುಷನು ಆತ್ಮನಲ್ಲಿ ಸರ್ವಭೂತಗಳನ್ನೂ ಸರ್ವಭೂತಗಳಲ್ಲಿ ಆತ್ಮನನ್ನೂ ಕಾಣುವನು'' (29). ಅದರ ಮೂರನೆಯ ಅಧ್ಯಾಯದಲ್ಲಿ ಹೇಳಿರುವದೇನೆಂದರೆ: ''ಲೋಕಸಂಗ್ರಹದೃಷ್ಟಿಯಿಂದಲಾದರೂ ನೀನು ಕರ್ಮವನ್ನು ಮಾಡಬೇಕು.''(20) ಇನ್ನೊಂದು ವಾಕ್ಯ: ''ಎಲೈ ನಿದ್ರೆಯನ್ನು ಗೆದ್ದಿರುವ ಅರ್ಜುನನೆ, ನಾನು ಸರ್ವಭೂತಗಳ ಹೃದಯದಲ್ಲಿಯೂ ಇರುವ ಎಲ್ಲರ ಆತ್ಮನು''(10-20) ಈ ಪ್ರಕಾರವಾದ ಶ್ಲೋಕಗಳು ಹೇರಳವಾಗಿರುತ್ತವೆ.

**ಮನುಸ್ಮೃತಿಯಲ್ಲಿ** ಹೀಗೆಂದು ಬರೆದಿದೆ: ''ಎಲ್ಲಾ ಪ್ರಾಣಿಗಳೊಡನೆ ಮೈತ್ರಿಯನ್ನು ಮಾಡುವವನೇ ಬ್ರಾಹ್ಮಣನು'' ಮತ್ತು ''ಹೀಗೆ ಯಾವನು ಸರ್ವಭೂತಗಳ ಆತ್ಮರುಗಳಲ್ಲಿ ತನ್ನ ಆತ್ಮನನ್ನು ಕಾಣುವನೋ ಅವನಿಗೆ ಸಮಬುದ್ಧಿಯುಂಟಾಗಿ ಅವನು ಬ್ರಹ್ಮಸಾಕ್ಷಾತ್ಕಾರರೂಪವಾದ ಪರಮಪದವನ್ನು ಹೊಂದುವನು.''

**ಕಠೋಪನಿಷತ್ತಿನಲ್ಲಿ** ಈ ವಾಕ್ಯವು ಕಂಡುಬರುತ್ತದೆ: ''ಸರ್ವಭೂತಗಳಿಗೂ ಅಂತರಾತ್ಮನಾಗಿರುವ ಒಬ್ಬ ಪರಮಾತ್ಮನೇ, ಒಂದೊಂದು ರೂಪಕ್ಕೂ ಅನುರೂಪವಾಗಿರುತ್ತಾನೆ.''

**ಈಶೋಪನಿಷತ್ತಿನಲ್ಲಿ** ಹೀಗೆಂದು ಬರೆದಿದೆ; ''ಯಾವನು ಸರ್ವಭೂತಗಳಲ್ಲಿಯೂ ತನ್ನನ್ನು, ತನ್ನಲ್ಲಿ ಸರ್ವಭೂತಗಳನ್ನೂ ಕಾಣುವನೋ ಅವನು ಯಾರನ್ನೂ ನಿಂದಿಸನು.''

**ಮಹಾಭಾರತ** ಶಾಂತಿಪರ್ವದಲ್ಲಿರುವ ಈ ಶ್ಲೋಕವು ತುಂಬ ಭಾವಪೂರ್ಣವಾಗಿರುತ್ತದೆ; ''ಯಾವನು ಎಲ್ಲಾ ಭೂತಗಳಿಗೂ ಮಿತ್ರನೋ, ಯಾವನು ಮನಸ್ಸು, ವಾಕ್ಕು, ವಿದ್ಯೆ, ಕರ್ಮ-ಇವುಗಳಿಂದ ಎಲ್ಲರಿಗೂ ಉಪಕಾರಮಾಡುವದರಲ್ಲಿ ನಿರತನಾಗಿರುವನೋ, ಅವನೇ ಧರ್ಮವನ್ನು

ಅರಿತವನು.''

ಇನ್ನು **ವಿಷ್ಣುಪುರಾಣ**ದಲ್ಲಿ ಬರೆದಿರುವದೇನೆಂದರೆ: ''ಎಲ್ಲಾ ಜೀವಿಗಳಲ್ಲಿಯೂ ಪರಮಾತ್ಮನಿರುವನೆಂದು ಬಲ್ಲ ವಿವೇಕಿಗಳು ಎಲ್ಲಾ ಪ್ರಾಣಿಗಳನ್ನೂ ಯಾವಾಗಲೂ ಪ್ರೀತಿಸುತ್ತಿರುವರು.''

## ಕುರಾನಿನ ಉಪದೇಶ

ಪವಿತ್ರ **ಕುರಾನಿ**ನಲ್ಲಿ ಉಪದೇಶಿಸುವದೇನೆಂದರೆ ''ಹೆತ್ತವರು, ಅಣ್ಣತಮ್ಮಂದಿರು, ಅನಾಥರು, ದರಿದ್ರರು, ನಮ್ಮವರಾದ ನೆರೆಯವರು, ಅಪರಿಚಿತರಾದ ನೆರೆಯವರು, ಅಪರಿಚಿತರಾದ ಪಥಿಕರು, ದಾಸಜನರು- ಎಲ್ಲರಲ್ಲಿಯೂ ದಯೆಯಿಂದಲೇ ನಡೆದುಕೊಳ್ಳಬೇಕು. ಅನಾಥರಿಗೆ ಎಂದಿಗೂ ಕಷ್ಟವನ್ನುಂಟುಮಾಡಬಾರದು. ಭಿಕ್ಷುಕಜನರನ್ನು ಬಾಗಿಲಿಂದ ಅಟ್ಟಬಾರದು'', ''ಎಲೈ ಮುಸಲ್ಮಾನರೇ, ಯಾವ ರಾಷ್ಟ್ರದವರನ್ನಾಗಲಿ ಯಾವ ಜಾತಿಯವರನ್ನಾಗಲಿ ನಿಂದಿಸಬಾರದು; ನೋಡಿ ನಗಬಾರದು. ನಿಂದಿಸುವವರಿಗಿಂತಲೂ ಅವರೇ ಉತ್ತಮರಾಗಿದ್ದರೂ ಇರಬಹುದು, ಭಗವಂತನ ದೃಷ್ಟಿಯಲ್ಲಿ, ಸತ್ಕರ್ಮಗಳನ್ನು ಮಾಡುವದರಲ್ಲಿ ಇನ್ನೂ ಕ್ಷಮಾವಂತರಾಗಿರಬಹುದು, ಮತ್ತೊಂದು ವಾಕ್ಯ; ''ನಿಮ್ಮವರೇ ಆಗಿರುವ ಜನರಲ್ಲಿ ದೋಷವನ್ನು ಎತ್ತೆಣಿಸಬಾರದು. ಒಬ್ಬರ ವಿಷಯಕ್ಕೊಬ್ಬರು ಕೆಟ್ಟಮಾತನ್ನಾಡಬಾರದು. ಇಸ್ಲಾಮ ಸಮಾಜಕ್ಕೆ ಸೇರಿದ ಬಳಿಕ ಕೆಟ್ಟಮಾತನ್ನಾಡುವದೆಂಬುದೇ ಪಾಪವಾಗುವದು.''

ಇದರಂತೆಯೇ **ಮಹಮದ್ ಪೈಗಂಬರನು** ಹೇಳಿರುವದೇನೆಂದರೆ ''ಎಲ್ಲಿಯವರೆಗೆ ತನಗಾಗಿಯೇ ಎಲ್ಲವೂ ಬೇಕೆನ್ನುತ್ತಿರುವನೋ ಅಲ್ಲಿಯವರೆಗೆ ತನ್ನ ಅಣ್ಣತಮ್ಮಂದಿರಿಗೆಂದು ಬೇಕೆನ್ನುವದಾಗಲಾರದು. ಅಂಥವನು ನಿಜವಾದ ಮುಸಲ್ಮಾನನೇ ಅಲ್ಲ''. ಯಾವನು ಭಗವಂತನು ಸೃಷ್ಟಿಸಿರುವ ಪ್ರಾಣಿಗಳು ಮತ್ತು ಅವುಗಳ ಸಂತತಿಯ ವಿಷಯದಲ್ಲಿ ಪ್ರೇಮವನ್ನಿಟ್ಟಿರುವದಿಲ್ಲವೋ, ಅವನಿಗೆ ಭಗವಂತನ ಪ್ರೇಮವು ದೊರೆಯಲಾರದು.'' ''ಭಗವಂತನಿಗೆ ಎಲ್ಲರಿಗಿಂತಲೂ ಪ್ರಿಯನಾದವನು ಯಾರು? ಯಾವನಿಂದ ಭಗವಂತನು ಸೃಷ್ಟಿಸಿರುವ ಪ್ರಾಣಿಗಳಿಗೆ ತೀರ ಹೆಚ್ಚಿನ ಕಲ್ಯಾಣವಾಗುತ್ತದೆಯೋ ಅವನು. ಯಾವನಿಂದ ಮಾನವಜಾತಿಗೆ ಉಪಕಾರವಾಗುತ್ತದೆಯೋ ಅವನೇ ಮನುಷ್ಯರಲ್ಲೆಲ್ಲ ಶ್ರೇಷ್ಠನು. ಭೂತಗಳೆಲ್ಲ ಭಗವಂತನ ಪರಿವಾರ, ಅವುಗಳಿಗೆ ಆದಷ್ಟು ಹೆಚ್ಚಿನ ಉಪಕಾರವನ್ನು ಮಾಡುವವನೇ

ಭಗವಂತನಿಗೆ ಎಲ್ಲರಿಗಿಂತಲೂ ಹೆಚ್ಚಿನ ಕೃಪಾಪಾತ್ರನಾಗಿರುವನು.'' ''ಹಸಿದವರಿಗೆ ಅನ್ನವನ್ನು ಕೊಡು, ರೋಗಿಗಳ ಅರೈಕೆಯನ್ನು ಮಾಡು, ಯಾರಾದರೂ ಅನ್ಯಾಯದಿಂದ ಬದ್ಧರಾಗಿದ್ದರೆ ಅವರನ್ನು ಮುಕ್ತರನ್ನಾಗಿ ಮಾಡು. ಕಷ್ಟದಲ್ಲಿ ಬಿದ್ದಿರುವ ಮುಸಲ್ಮಾನರಿಗೂ ಮುಸಲ್ಮಾನೇತರರಿಗೂ ಎಲ್ಲರಿಗೂ ಸಹಾಯಮಾಡು. ಪ್ರಭುವಿನ ಕಟ್ಟಪ್ಪಣೆಯೇನೆಂದರೆ ಸ್ತ್ರೀಯರೊಡನೆ ಉತ್ತಮವ್ಯವಹಾರವನ್ನಿಟ್ಟು ಕೊಂಡಿರು; ಏಕೆಂದರೆ ಅವರು ನಿಮ್ಮ ತಾಯಂದಿರು, ಮಕ್ಕಳು, ಚಿಕ್ಕಮ್ಮಂದಿರು'' ''ನಿಮ್ಮ ಸೃಷ್ಟಿಕರ್ತನಿಗೆ ಪ್ರಿಯವಾದದ್ದನ್ನು ಮಾಡಬೇಕೆನ್ನುವಿರೇನು? ಹಾಗಾದರೆ ಮೊದಲು ನಿಮ್ಮ ಅಣ್ಣತಮ್ಮಂದಿರಿಗೆ ಒಳ್ಳೆಯದನ್ನು ಮಾಡಿರಿ.''

ತಮ್ಮ ಅಂತಿಮಯಾತ್ರೆಯ ಸಮಯದಲ್ಲಿ ಅವರು ಹೇಳಿದ್ದು: ''ಇದನ್ನು ನೆನಪಿನಲ್ಲಿಡಿ. ನೀವೆಲ್ಲರೂ ಅಣ್ಣತಮ್ಮಂದಿರು. ಭಗವಂತನ ದೃಷ್ಟಿಯಲ್ಲಿ ಮನುಷ್ಯರೆಲ್ಲರೂ ಸಮಾನರು, ನಿಮ್ಮ ಜೀವನ, ನಿಮ್ಮ ಸಂಪತ್ತು-ಎಲ್ಲವೂ ಪವಿತ್ರವಾದವು; ಆದ್ದರಿಂದ ಎಂಥ ಅವಸ್ಥೆಯಲ್ಲಿಯೂ ಒಬ್ಬರು ಮತ್ತೊಬ್ಬರ ಜೀವನವನ್ನು ಅಥವಾ ಧನವನ್ನು ಆಕ್ರಮಿಸಬಾರದು. ಇಂದಿನ ದಿನ ನಾನು ಜಾತಿ, ವರ್ಗ, ರಾಷ್ಟ್ರೀಯತೆ- ಮುಂತಾದ ಸರ್ವಭೇದಗಳನ್ನೂ ಕಾಲಿನಡಿಯಲ್ಲಿ ತುಳಿದುಹಾಕಿರುತ್ತೇನೆ. ಮನುಷ್ಯರೆಲ್ಲರೂ ಆದಮನ ಸಂತಾನವು; ಆದಮನು ಮಣ್ಣಿನಿಂದ ಸೃಷ್ಟನಾದವನು.''

ಮಹಾ ಖಲೀಫನಾದ **ಉಮರ**ನು ತನ್ನ ಅದೇಶಪತ್ರದಲ್ಲಿ ಒಂದು ಹೊಸ ನಿರೂಪವನ್ನು ಈಮಾತುಗಳಿಂದ ಬರೆಸಿದ್ದನು: ''ನಾನು ಬಿಳಿಯವರು ಕರಿಯವರು ಎಂಬ, ಹಾಗೂ ಅರಬರು ಅರಬರಲ್ಲದವರು ಎಂಬ, ದ್ವೇಷಪೂರ್ಣಭಾವವನ್ನು ಎಂದಿಗೂ ಇಟ್ಟುಕೊಳ್ಳುವದಿಲ್ಲ ನಾನು ಮಹಮ್ಮದ್ ಪೈಗಂಬರ್‌ರವರ ಹೆಜ್ಜೆಯ ಗುರುತನ್ನೇ ಹಿಡಿದು ನಡೆಯುವೆನು.''

ಮೇಲೆ ಕೊಟ್ಟಿರುವ ವಚನಗಳಿಂದ ಅತ್ಯಂತ ಸ್ಪಷ್ಟವಾಗಿ ತಿಳಿದುಬರುವದೇನೆಂದರೆ: ಭರತಖಂಡದ ಯಾವದೊಂದು ಧರ್ಮವೂ ಜನಹಿತಕ್ಕೆ ವಿರುದ್ಧವಾದ ಶಿಕ್ಷೆಯನ್ನು ಕೊಟ್ಟಿರುವದಿಲ್ಲ; ಅಸಹಿಷ್ಣತೆಗಾಗಲಿ ಅತ್ಯಾಚಾರಕ್ಕಾಗಲಿ ಆಶ್ರಯವನ್ನು ಕೊಟ್ಟಿರುವದಿಲ್ಲ.

★★★★★

# ಮುಸಲ್ಮಾನರ ಮತದಲ್ಲಿ ದೇವರು

- ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಮನುಷ್ಯನಿಗೆ ರಾಗದ್ವೇಷಗಳು ಸ್ವಾಭಾವಿಕವಾಗಿರುವವು. ಆದ್ದರಿಂದ ಅವನಿಗೆ ಬಲ್ಲವರು ಉಪದೇಶಿಸಿದ ಮತವಿಚಾರಗಳು, ತತ್ತ್ವವಿಚಾರಗಳು – ಇವುಗಳಲ್ಲಿಯೂ ಅಪರಮಾರ್ಥಾಭಿನಿವೇಶವೇ ಹೆಚ್ಚುಬೇಗನೆ ಒಗ್ಗುತ್ತದೆ. ನಮ್ಮ ದೇಶದಲ್ಲಿ ನಮ್ಮೊಡನೆ ಅನೇಕ ಶತಾಬ್ದಗಳಿಂದ ವಾಸಮಾಡಿಕೊಂಡಿರುವ ಮುಸಲ್ಮಾನರ ಮತದ ವಿಷಯದಲ್ಲಿ ನಮಗಿರುವ ಅಜ್ಞಾನ, ತಿರಸ್ಕಾರಬುದ್ಧಿ–ಮುಂತಾದವುಗಳಿಗೆ ಈ ನೈಸರ್ಗಿಕದೋಷವೂ ಒಂದು ಮುಖ್ಯಕಾರಣವೆನ್ನಬಹುದು.

ಪ್ರಬುದ್ಧ ಕರ್ಣಾಟಕದ ವಿಳಂಬಿಸಂವತ್ಸರದ ಪುಷ್ಯಸಂಚಿಕೆಯಲ್ಲಿ ಶ್ರೀಕೃಷ್ಣರಾಯ ನಿಲೋಗಲ್ಲ – ಇವರು ಬರೆದಿರುವ 'ಇಸ್ಲಾಮಿತತ್ತ್ವಶಾಸ್ತ್ರ ಸಮಸ್ಯೆಗಳು' ಎಂಬ ತಲೆಬರಹ ಲೇಖನವನ್ನು ನೋಡಿದಾಗ ಈ ನನ್ನ ಅಭಿಪ್ರಾಯಕ್ಕೆ ಪುಷ್ಟಿಬಂದಿತು. ಅಧ್ಯಾತ್ಮಪ್ರಕಾಶದ ತತ್ತ್ವಪಕ್ಷಪಾತಿಗಳಾದ ವಾಚಕರೆಲ್ಲ ಈ ಲೇಖನವನ್ನು ಒಮ್ಮೆ ಸಾವಧಾನವಾಗಿ ಓದಬೇಕೆಂದು ನನ್ನ ವಿಜ್ಞಾಪನೆಯಿದೆ. ಅದನ್ನು ಸರಿಯಾಗಿ ಓದಿನೋಡಿದವರಿಗೆ ನನ್ನಂತೆ ಸಾನಂದಾಶ್ಚರ್ಯವಾಗುವದರಲ್ಲಿ ಸಂಶಯವಿಲ್ಲ. ನಾನು ಗ್ರಹಿಸಿದಮಟ್ಟಿಗೆ ಲೇಖನದ ಸಾರವನ್ನು ಇಲ್ಲಿ ಕೊಡುತ್ತೇನೆ. ಇಸ್ಲಾಂಮತದಲ್ಲಿ ಈಶ್ವರನು ಸಗುಣನೇ ಎಂಬುದು ನಮ್ಮಲ್ಲಿ ಬಹುಜನರಿಗೆ ತಿಳಿದಿದೆ. ಆತನು ಜಗತ್ತಿನ ಸೃಷ್ಟಿಸ್ಥಿತಿ ಸಂಹಾರಗಳನ್ನು ಮಾಡುವವನು– ಆತನಿಗೆ 'ಖಾಲಿಕ್' ಸೃಷ್ಟಿಕರ್ತ, 'ರಬ್ಬ್' ಪಾಲಕಪೋಷಕನು; 'ರಹಿಮಾನ್, ರಹೀಮ' ಕರುಣಾಶಾಲಿ, ದಯಾನಿಧಿ; 'ಕುದ್ದೂಸ್' ಪವಿತ್ರನು, 'ಆಲಿಮ್' ಜ್ಞಾನಿ– ಮುಂತಾದ ಬೇರೆಬೇರೆಯ ಗುಣನಾಮಗಳು ಉಂಟು; ಆದರೆ 'ಅಲ್ಲಾಹ' ಎಂಬುದು ಆತನನ್ನು ಸಂಪೂರ್ಣವಾಗಿ ತಿಳಿಸುವ ಕೃತ್ಸ್ನವಾಚಕನಾಮ.

ಅಲ್ಲಾಹನು, ದೇವರು, ಸಾಕಾರನೊ, ನಿರಾಕಾರನೊ?– ಎಂಬ ಬಗ್ಗೆ ಮುಸಲ್ಮಾನರಲ್ಲಿ ವಿವಾದವಿದೆ. ಈಶ್ವರನು ಸಶರೀರನು, ಆತನನ್ನು ಅಥವಾ ಆತನ ತೇಜಸ್ಸನ್ನು ನೇರಾಗಿ ನೋಡಿದ ಭಕ್ತರೂ, ಆತನೊಡನೆ ಸಂಭಾಷಣೆ ಮಾಡಿದ ಭಕ್ತರೂ ಉಂಟು. ಈಶ್ವರನ ಶರೀರವೂ ಕೈಕಾಲು ಮುಂತಾದ ಅವಯವಗಳೂ

ನಮ್ಮ ಶರೀರಾದಿಗಳಂತಲ್ಲ, ಅವು ಅಲೌಕಿಕವಾದವುಗಳು ಎಂಬವರೂ ಕೆಲವರು ಉಂಟು. ಅಲ್ಲಾಹನಿಂದಲೇ ಎಲ್ಲಾ ಜ್ಞಾನೇಚ್ಛಾಕ್ರಿಯೆಗಳೂ ಉಂಟಾಗುವವು; ಆತನ ಜ್ಞಾನೇಚ್ಛೆಗಳು ಅನಾದಿ; ಆತನು ಸರ್ವಸ್ವತಂತ್ರನು, ಯಾವ ಲೌಕಿಕನಿಯಮಗಳೂ ಆತನಿಗಿಲ್ಲ - ಎಂದು ಕೆಲವರು. ಆತನು ಸರ್ವಸ್ವತಂತ್ರನೇ ಆದರೂ ನ್ಯಾಯಬದ್ಧವಾಗಿಯೇ ಎಲ್ಲವನ್ನೂ ಮಾಡುತ್ತಾನೆ- ಎಂದು ಕೆಲವರು. ಅಲ್ಲಾಹನು ಜಗತ್ತನ್ನು ಸೃಷ್ಟಿಸಿ ನಮ್ಮನ್ನು ಅನುಗ್ರಹಿಸಿರುತ್ತಾನೆ, ಜೀವರ ಕರ್ಮಾನುಸಾರವಾಗಿ ಫಲವನ್ನು ಕೊಡುತ್ತಾನೆ.

ಅಲ್ಲಾಹನಿಗೆ ಆಕಾರವಿಲ್ಲ. ಕೈಕಾಲು ಮುಂತಾದ ಶಬ್ದಗಳು ಕುರಾನಿನಲ್ಲಿ ಬಂದಕಡೆಯಲ್ಲಿ ಅವುಗಳಿಗೆ ಲಕ್ಷ್ಯಾರ್ಥವನ್ನೇ ಹೇಳಬೇಕು. ಈಶ್ವರನ ಮುಖವು ಎಲ್ಲಾ ಕಡೆಯಲ್ಲಿಯೂ ಇದೆ ಎಂದರೆ ಅವನು ಸರ್ವಗತನೆಂದು ತಿಳಿಯಬರುತ್ತದೆ ಎಂದರ್ಥ; ಎಲ್ಲವೂ ಅವನ ಕೈಯಲ್ಲಿದೆ ಎಂದರೆ ಅವನ ಅಧೀನವಾಗಿದೆ ಎಂದರ್ಥ. ಹೀಗೆ ಆಕಾರವಾಚಕಗಳಿಗೆಲ್ಲ ಜಹಲ್ಲಕ್ಷಣೆಯಿಂದ ಅರ್ಥಮಾಡಬೇಕು. ಅಲ್ಲಾಹನಿಗೂ ಗುಣಗಳಿಗೂ ಭೇದವಿದೆ; ಗುಣಗಳಿಗೆ ನಾಶವುಂಟು, ಆದರೆ ಈಶ್ವರನಿಗೆ ನಾಶವಿಲ್ಲ- ಎಂಬುದು ಕೆಲವು ನಿರಾಕಾರವಾದಿಗಳ ಮತ. ಈಶ್ವರನ ಗುಣಗಳಿಗೂ ಈಶ್ವರನಿಗೂ ಅಭೇದವನ್ನೇ ಒಪ್ಪುವ ವಾದಿಗಳೂ ಇದಾರೆ. ಅಲ್ಲಾಹನಿಗೂ ಆತನ ಗುಣಗಳಿಗೂ ಭೇದಾಭೇದವಿದೆ ಎನ್ನುವವರೂ ಇದಾರೆ; ದೇವರ ಗುಣಗಳು ಸ್ವತಂತ್ರವಾಗಿವೆ ಎಂದರೆ ದೇವರಿಗೆ ಪರಿಚ್ಛೇದವನ್ನು ತಂದಂತೆ ಆಗುತ್ತದೆ, ಅವನ ಸ್ವರೂಪವೇ ಎನ್ನೋಣವೆಂದರೆ ಅವಕ್ಕಿರುವ ವಿಕಾಸವೂ ಚಲನೆಯೂ ಆ ಸ್ವರೂಪಕ್ಕೆ ಇರುವದಿಲ್ಲ-ಎಂಬುದು ಭೇದಾಭೇದವಾದಿಗಳು ಹೇಳುವ ಉಪಪತ್ತಿ.

ಈಶ್ವರನೇ ಜೀವನಿಂದ ಎಲ್ಲಾ ಕರ್ಮಗಳನ್ನೂ ಮಾಡಿಸುತ್ತಾನೆಂದು ಕೆಲವರು, ಜೀವನು ತನ್ನ ಕರ್ಮಗಳಿಗೆ ತಾನೇ ಹೊಣೆಯಾದರೂ ಅವನ ಕರ್ತೃತ್ವವು ಈಶ್ವರನಿಂದಲೇ ಬಂದದ್ದು ಎಂದು ಕೆಲವರು- ಹೀಗೆ ಜೀವನ ಕ್ರಿಯಾ ಕರ್ತೃತ್ವದ ವಿಷಯಕ್ಕೂ ಮತಭೇದವಿರುತ್ತದೆ.

ಕುರಾನ್ ಎಂಬ ಇಸ್ಲಾಮೀವೇದವು ಅನಾದಿಯೆಂದು ಕೆಲವರು, ಈಶ್ವರ ಸೃಷ್ಟವೆಂದು ಕೆಲವರು. ಕುರಾನ್ ಶಬ್ದರೂಪದಿಂದಲೂ ನಿತ್ಯ, ಅರ್ಥರೂಪದಿಂದ ಮಾತ್ರ ನಿತ್ಯ -ಎಂದು ಕುರಾನಿನ ನಿತ್ಯತ್ವದ ವಿಷಯಕ್ಕೂ ಮತಭೇದವಿದೆ.

ಈಶ್ವರನು ಜಗತ್ತನ್ನು ಯಾವ ಉಪಾದಾನಕಾರಣವನ್ನೂ ಬಯಸದೆ ತನ್ನ ಇಚ್ಛಾಮಾತ್ರದಿಂದ ಅದನ್ನು ಸೃಷ್ಟಿಸಿರುತ್ತಾನೆ. ಜಗತ್ತು ಅನಾದಿಯಾದರೂ ಅದು ಅಲ್ಲಾಹನಿಂದ ಸೃಷ್ಟವಾಗಿಯೇ ಅನಾದಿಯಾಗಿದೆ, ಎಂದರೆ ಬರೆಯುವವನ ಕೈಯೂ ಲೇಖನಿಯೂ ಒಂದೇ ಕಾಲದಲ್ಲಿ ಚಲಿಸುವಂತೆ ಜಗತ್ಸೃಷ್ಟಿಯು ಅನಾದಿಯಾಗಿ ಈಶ್ವರನ ಜೊತೆಯಲ್ಲಿಯೇ ಪೂರ್ವಾಪರಕ್ರಮವಿಲ್ಲದೆ ಇರುತ್ತದೆ ಎನ್ನುವವರು ಕೆಲವರು.

ಭಕ್ತನ ಬಾಳು ಭಗವಂತನಿಗಾಗಿಯೇ ಎಂಬ ಉಪದೇಶವೂ ಈ ಮತದಲ್ಲಿದೆ. ಜೀವೇಶ್ವರಾದ್ವೈತವನ್ನು ಮಾತ್ರ ಯಾರೂ ಒಪ್ಪುವದಿಲ್ಲ; ಒಪ್ಪಿದರೂ ಅದು ಭಕ್ತಿಭರದ ಆವೇಶದಿಂದ ನುಡಿದದ್ದು ಎಂದು ಭಾವಿಸಬೇಕು.

★★★★★

# ಇಸ್ಲಾಮ್ ಮತದಲ್ಲಿ ಕೆಲವು ಧ್ಯಾನಪ್ರಕಾರಗಳು

– ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಹಿಂದೂಮುಸಲ್ಮಾನರ ಮತಭೇದಗಳ ವಿಷಯದಲ್ಲಿ ವೃತ್ತಾಂತಪತ್ರಿಕೆಗಳಲ್ಲಿ ಆಗಾಗ್ಗೆ ಲೇಖನಗಳು ಬರುತ್ತವೆ. ಆದರೆ ಆ ಮತಗಳವರು ಒಬ್ಬರಿಂದೊಬ್ಬರು ಆರಿಸಿಕೊಳ್ಳಬೇಕಾದ ಸುಗುಣಗಳೇನಾದರೂ ಇವೆಯೆ? ಎಂಬ ವಿಚಾರವು ನಮ್ಮಗಳ ಮನಸ್ಸಿನಲ್ಲಿ ಬಾರದೆ ಇರುವದೊಂದು ಆಶ್ಚರ್ಯಕರವಾದ ಸಂಗತಿ. ಶತಮಾನಗಟ್ಟಲೆಯಾಗಿ ಒಂದೇ ದೇಶದಲ್ಲಿರುವ ನಾವುಗಳು ಆಗಾಗ್ಗೆ ಈ ಪ್ರಶ್ನೆಯನ್ನು ಕೇಳಿಕೊಳ್ಳುವದರಿಂದ ಲಾಭವುಂಟು. ಈ ಲೇಖನದಲ್ಲಿರುವದು ''ಡಿವೈನ್ ಲೈಫ್'' ಎಂಬ ಇಂಗ್ಲಿಷುಪತ್ರಿಕೆಯಲ್ಲಿ ವಿದ್ಯಾರತ್ನ ಅನ್ವರೂಲ್ ಹಸನ್ ಎಂಬವರು ಬರೆದಿರುವದರ ಸಾರವು. ಸನಾತನಾರ್ಯಮತದಲ್ಲಿರುವಂತೆ ಇಸ್ಲಾಮು ಮತದಲ್ಲಿಯೂ ಹಲವು ಒಳಪಂಗಡಗಳಿವೆ. ಇಲ್ಲಿರುವ ಧ್ಯಾನಪ್ರಕಾರವನ್ನು ಎಲ್ಲಾ ಮುಸಲ್ಮಾನರೂ ಒಪ್ಪಿರುವರೋ ಇಲ್ಲವೋ ನಾನರಿಯೆ. ಆದರೂ ವಿಷಯವು

ವೈದಿಕಮತದವರಿಗೂ ಕುತೂಹಲಜನಕವಾಗಿರುತ್ತದೆಯೆಂಬುದು ನಿಶ್ಚಯ. ಹಸನ್ನರು ಬರೆದಿರುವದೇನೆಂದರೆ:

ಮುಸ್ಲಿಮಧ್ಯಾನಯೋಗಿಗಳ ಸಂಪ್ರದಾಯದಲ್ಲಿ ಅತ್ಯಂತ ಉತ್ತಮವಾದ ಧ್ಯಾನವೆಂದರೆ ಸದ್ಗುರುವಿನ ಮೂರ್ತಿಯನ್ನು ಅಲ್ಲಾಹನ ವಿಭೂತಿಯೆಂದು ಅಥವಾ ಪರಮೇಶ್ವರನ ಕಲ್ಯಾಣಗುಣಗಳನ್ನು ಪ್ರತಿಬಿಂಬಿಸುವ ಕನ್ನಡಿಯೆಂದು, ಭಾವಿಸುವದು. ಸದ್ಗುರುವಿನ ಅನುಗ್ರಹದಿಂದ- ಆತನು ತನ್ನ ಭೌತಿಕದೇಹವನ್ನು ಬಿಟ್ಟುಹೋಗಿದ್ದರೂ ಸರಿಯೆ - ಉತ್ತಮಸಾಧಕನಿಗೆ ಇದರಿಂದ ಹಲವು ದಿವ್ಯದರ್ಶನಗಳು ಲಭಿಸುವವು.

ಆದರೆ ನಿಶ್ಚಲವಾದ ಶ್ರದ್ಧಾಭಕ್ತಿಗಳಿಗೆ ಯೋಗ್ಯನೆಂಬ ಭರವಸೆಯುಂಟಾಗುವ ಇಂಥ ಮಹಾಜ್ಞಾನಿಯಾದ ಪೀರನು ದೊರಕುವದು ಎಲ್ಲರಿಗೂ ಸುಲಭವಲ್ಲವಾದ್ದರಿಂದ ಬೇರೆ ಕೆಲವು ಧ್ಯಾನಪ್ರಕಾರಗಳನ್ನೂ ಮುಸ್ಲಿಮಯೋಗಿಗಳು ಉಪದೇಶಿಸಿರುತ್ತಾರೆ. ಸದ್ಗುರುವು ದೊರೆಕದಿದ್ದಾಗ ಸಾಧನಮಾರ್ಗದಲ್ಲಿ ಮುಂದುವರಿದಿರುವ ಯಾವನಾದರೊಬ್ಬನ ಸಹಾಯವು ಅವಶ್ಯವಾಗುತ್ತದೆ; ಅದೂ ದೊರಕದಿರುವಲ್ಲಿ ಪ್ರಮಾಣಗ್ರಂಥಗಳನ್ನಾದರೂ ನೋಡಬೇಕು. ಈ ಸಹಾಯವನ್ನು ದೊರಕಿಸಿಕೊಂಡು ಮುಂದೆ ಹೇಳಿರುವ ಯಾವದಾದರೊಂದು ಪ್ರಕಾರದಿಂದ ಧ್ಯಾನಮಾಡಬಹುದು. ಇವು ಶುದ್ಧಧ್ಯಾನಪ್ರಕಾರಗಳು; ಈ ಪ್ರಕಾರಗಳು ಸ್ವಲ್ಪ ಹೆಚ್ಚುಕಡಿಮೆ ಒಂದೇ ಅಭಿಪ್ರಾಯದವಾಗಿರುತ್ತವೆ: (1) ಈಶ್ವರನು ನನ್ನೊಳಗೆ ಇರುತ್ತಾನೆ. ಆತನು ನನ್ನನ್ನು ನೋಡುತ್ತಿದಾನೆ, ನನ್ನ ಜೊತೆಯಲ್ಲಿಯೇ ಇರುತ್ತಾರೆ. (2) ಈಶ್ವರನು ಎಲ್ಲೆಲ್ಲಿಯೂ ವ್ಯಾಪಿಸಿರುತ್ತಾನೆ. (3) ಈ ಜಗತ್ತಿನಲ್ಲಿ ಈಶ್ವರಸಾನ್ನಿಧ್ಯವೊಂದು ಹೊರತು ಮಿಕ್ಕದ್ದೆಲ್ಲವೂ ಅನಿತ್ಯ. (4) ಈಶ್ವರನು ತನ್ನನ್ನು ನೋಡುತ್ತಲೇ ಇರುವನೆಂಬುದು ಮಾನವನಿಗೆ ತಿಳಿಯದೇನು?

ಇನ್ನೊಂದು ಧ್ಯಾನಪ್ರಕಾರವೂ ಉಂಟು: ಆಕಾಶವು ಈಶ್ವರನ ಚಿಹ್ನೆ ಎಂಬ ಭಾವನೆಯಿಂದೊಡಗೂಡಿ ಅವನ್ನೇ ಎವೆಯಿಕ್ಕದೆ ನೋಡುತ್ತಿರಬೇಕು, ಕಣ್ಣುಗಳು ನೋಡಿ ನೋಡಿ ಸೋತರೆ, ಅವನ್ನು ಸ್ವಲ್ಪ ಹೊತ್ತು ಮುಚ್ಚಿಕೊಂಡಿದ್ದು ಮತ್ತೆ ನೋಡುವದಕ್ಕೆ ಪ್ರಾರಂಭಿಸಬೇಕು.

ಸ್ಥೂಲರೂಪವಾಗಿ ಮಾಡುವ ಧ್ಯಾನಪ್ರಕಾರವಿದು; ಒಂದು ಕಾಗದದ ಮೇಲೆ ಹೃದಯ ಚಿತ್ರವನ್ನು ಬರೆಯಬೇಕು; ಚಿತ್ರದ ಬಣ್ಣವು ಕೆಂಪು ಅಥವಾ ನೀಲಿಯಾಗಿ ರಬೇಕು. ಆದರ ಮೇಲೆ ಸ್ವರ್ಣಾಕ್ಷರಗಳಲ್ಲಿ ಅಥವಾ ರಜತಾಕ್ಷರಗಳಲ್ಲಿ 'ಅಲ್ಲಾಹ' ಎಂಬ ಹೆಸರನ್ನು ಬರೆಯಬೇಕು. ಈ ಚಿತ್ರವನ್ನೇ ನೋಡುತ್ತಾ **'ಅಲ್ಲಾಹ'** ಶಬ್ದದ ಮೇಲೆಯೇ ಏಕಾಗ್ರವಾಗಿ ದಿಟ್ಟಿಸಿ ನೋಡುವದನ್ನು ಅಭ್ಯಾಸ ಮಾಡಿಕೊಳ್ಳಬೇಕು.

ಹೃದಯವನ್ನು ಒಂದು ಬೆಳ್ಳಿಯ ಹಲಗೆಯೆಂದು ಭಾವಿಸಿ ಅದರ ಮೇಲೆ ಒಂದು ಬಿಳಿಯ ಕಮಲವಿದ್ದಂತೆಯೂ ಕಮಲದಮೇಲೆ **'ಅಲ್ಲಾಹ'** ಎಂಬ ಮಾತು ಸ್ವರ್ಣಾಕ್ಷರಗಳಲ್ಲಿ ಅಥವಾ ರಜತಾಕ್ಷರಗಳಲ್ಲಿ ಬರೆದಿರುವಂತೆಯೂ ಭಾವಿಸಿಕೊಳ್ಳಬೇಕು. ಇದೊಂದು ಧ್ಯಾನ.

ಇನ್ನೂ ಕೆಲವು ಧ್ಯಾನಪ್ರಕಾರಗಳಿವು: (1) ಈಶ್ವರನು ಶಾಂತವಾಗಿ ಹರಿಯುತ್ತಿರುವ ಒಂದು ವಿಶಾಲವಾದ ನದಿಯೆಂದೂ ಅದರಲ್ಲಿ ಥಳಥಳಿಸುವ ನೀರು ಇದೆಯೆಂದೂ ತಾನೂ ಆ ನೀರಿನ ಒಂದು ತೊಟ್ಟು ಎಂದೂ ಭಾವಿಸಬೇಕು. (2) ಈಶ್ವರನು ಎಲ್ಲೆಲ್ಲಿಯೂ ಆವರಿಸಿಕೊಂಡಿರುವ ಅಂಧಕಾರವೆಂದೂ ತಾನು ಅದರಲ್ಲಿ ಎದುರಾಗಿ ಹೋಗಿರುವ ಒಂದು ಛಾಯೆಯೆಂದೂ ಭಾವಿಸಬೇಕು. (3) ಎಣ್ಣೆಗೆಂಪಿನ ಬಣ್ಣದ ಒಂದಾನೊಂದು ಬಿಂದುವು ಮೆದುಳಿನ ಮೇಲುಗಡೆ ಥಳಿಥಳಿಸುತ್ತಿರುವದೆಂದು ಕಲ್ಪಿಸಿಕೊಳ್ಳಬೇಕು. ಈ ಬಿಂದುವು ಬರುಬರುತ್ತಾ ದೊಡ್ಡದಾಗಿ, ಶರೀರವನ್ನೆಲ್ಲ ವ್ಯಾಪಿಸಿಕೊಂಡಂತೆಯೂ ಕೊನೆಗೆ ಪ್ರಪಂಚವನ್ನೇ ವ್ಯಾಪಿಸಿಕೊಂಡಂತೆಯೂ ಭಾವಿಸಿಕೊಳ್ಳಬೇಕು. ಈಶ್ವರನೇ ಎಲ್ಲೆಲ್ಲಿಯೂ ಇರುತ್ತಾನೆ, ಆತನನ್ನು ಬಿಟ್ಟರೆ ಮತ್ತೇನೂ ಇಲ್ಲವೇ ಇಲ್ಲವೆಂದೂ ಭಾವನೆ ಬರಬೇಕು. ಸಾಧಕನಿಗೆ ಈ ವ್ಯಾಪಕಜ್ಯೋತಿಯಲ್ಲಿ ಕೆಲವು ದೇವತೆಗಳ ದರ್ಶನವೂ ಆಗುವದುಂಟು; ಆದರೆ ಕೊನೆಗೆ ಪರಮಾತ್ಮನಲ್ಲಿ ಏಕತ್ವವನ್ನು ಕಂಡುಕೊಳ್ಳುವದೇ ಇಲ್ಲಿ ಕೊನೆಯ ಗುರಿ.

ಮುಂಜಾವದಲ್ಲಿ ಎದ್ದು ಪೂರ್ವದ ಕಡೆಗೆ ಬೆನ್ನುತಿರುಗಿಸಿಕೊಂಡು ವಜ್ರಾಸನದಂಥ ಒಂದಾನೊಂದು ಆಸನದಲ್ಲಿ ಕುಳಿತುಕೊಳ್ಳಬೇಕು. ಮುಖವನ್ನು ಆಕಾಶದಕಡೆಗೆ ತಿರುಗಿಸಿಕೊಳ್ಳಬೇಕು. ಶೀತಲವಾದ ವಾಯುವಿನ ಭಾವನೆ ಮಾಡಿಕೊಳ್ಳಬೇಕು. ಆ ಬಳಿಕ ಆ ಸೂಕ್ಷ್ಮ ಶೀತಲತ್ವವನ್ನೂ ಬೆಳಗಿನಜಾವದ ಪ್ರಶಾಂತಿಯನ್ನೂ ಒಳಕ್ಕೆಳೆದುಕೊಳ್ಳುವೆನೆಂದು ಭಾವನೆಯಿಂದ ಕಣ್ಣುಗಳನ್ನು

ಮುಚ್ಚಿಕೊಳ್ಳಬೇಕು, ಈ ಅಭ್ಯಾಸವನ್ನು ಸೂರ್ಯೋದಯವಾಗುವವರೆಗೂ ಮಾಡುತ್ತಿರಬೇಕು. ಇದರ ಫಲವು ಹತ್ತೇ ದಿನಗಳಲ್ಲಿ ಅನುಭವಕ್ಕೆ ಬರುವದು.

ಇಲ್ಲಿಂದ ಮುಂದಕ್ಕೆ ಲೇಖಕರು ಬೇರೆಬೇರೆ ಮುಹೂರ್ತಗಳಲ್ಲಿ ಧ್ಯಾನ ಮಾಡುವದರಿಂದಾಗುವ ಬೇರೆಬೇರೆಯ ಫಲಗಳನ್ನು ವಿವರಿಸಿರುತ್ತಾರೆ.

ಮೇಲೆವರ್ಣಿಸಿರುವ ಧ್ಯಾನಪ್ರಕಾರಗಳನ್ನು ಹೋಲುವ ಸನಾತನಮತದವರ ಧ್ಯಾನಗಳನ್ನು ವಾಚಕರಲ್ಲಿ ಕೆಲವರಾದರೂ ಮನಸ್ಸಿಗೆ ತುಂದುಕೊಳ್ಳುವರೆಂದು ನನಗೆ ಭರವಸೆಯಿದೆ. ಇವರಿಂದೇನು ಸಿದ್ಧವಾಗುತ್ತದೆ? ಈಶ್ವರನು ತನ್ನ ಮಕ್ಕಳಾದ ಮನುಷ್ಯರೆಲ್ಲರನ್ನೂ ಪುತ್ರವಾತ್ಸಲ್ಯದಿಂದಲೇ ಕಂಡಿರುತ್ತಾನೆ. ಎಲ್ಲರೂ ತಮ್ಮ ತಮ್ಮ ಅಧಿಕಾರಕ್ಕೆ ತಕ್ಕಂತೆ ತನ್ನ ಉಪಾಸನೆಗಳಿಂದ ಧನ್ಯರಾಗ ಬೇಕೆಂಬುದು ಆತನ ಸಂಕಲ್ಪವು.

ಈಶ್ವರನು ನಮ್ಮೆಲ್ಲರ ಹೃದಯದಲ್ಲಿಯೂ ಇದ್ದುಕೊಂಡಿರುತ್ತಾನೆ. ಆತನ ಸುನಿಧಿಯು ನಮ್ಮ ಸುತ್ತಲೂ ಇರುತ್ತದೆ. ಈ ವಿಷಯವನ್ನು ನಾವು ಮನದಂದು ಕೊಂಡಂತೆಲ್ಲ ಆತನಿಗೆ ಹತ್ತಿರವಾಗುವೆವು. ಆತನಲ್ಲಿ ಅನನ್ಯಭಕ್ತಿಯನ್ನು ಪಡೆದುಕೊಂಡಿರುವ ಮಹಾತ್ಮರು ಆತನಲ್ಲಿಯೇ ಇರುವರು; ಆತನೂ ಅವರಲ್ಲಿರುವನು. ಅಂಥ ಏಕಾಂತಭಕ್ತರುಗಳ ಧ್ಯಾನವು ಕೂಡ ಈಶ್ವರನಿಗೆ ಪ್ರಿಯವಾಗಿರುತ್ತದೆ.

ದೇಶ, ಕಾಲ, ಪರಿಸ್ಥಿತಿ, ವೇಷ, ಭಾಷೆ- ಇವುಗಳನ್ನನುಸರಿಸಿ ಜನರಿಗೆ ಪರಮೇಶ್ವರನ ವಿಷಯವಾದ ತಿಳಿವಳಿಕೆಯು ಅಷ್ಟಷ್ಟು ದೊರೆಯುತ್ತದೆ. ಆತನ ಪರಮಾರ್ಥಸ್ಥಿತಿಯು ಆತನ ಭಕ್ತರ ಸಹಾಯದಿಂದಲೂ ಆತನ ಅನುಗ್ರಹದಿಂದಲೂ ಎಲ್ಲಿಯೋ ಒಬ್ಬನಿಗೆ, ಸಾವಿರದಲ್ಲಿ ಅಥವಾ ಹತ್ತು ಸಾವಿರದಲ್ಲಿ ಒಬ್ಬನಿಗೆ ಸಾಕ್ಷಾತ್ತಾಗಿ ಅರಿಯುವದಕ್ಕೆ ಬರುವದು.

ಮತಸ್ಥಾಪಕರೆಲ್ಲರೂ ತನುಗೆ ಆದ ಈಶ್ವರಾನುಭವದ ಸುಖವನ್ನು ಆದಮಟ್ಟಿಗೂ ಎಲ್ಲರಿಗೂ ನೀಡಬೇಕೆಂಬ ಸದುದ್ದೇಶವುಳ್ಳವರಾಗಿದ್ದರು. ಜನರು ಭಗವಂತನಿಂದ ವಿಮುಖರಾಗಬಾರದು, ಅಹಂಕಾರಪೂರಿತರಾಗಬಾರದು, ರಾಗ ದ್ವೇಷಗಳಿಂದ ವ್ಯವಹರಿಸಬಾರದು. ಎಲ್ಲರನ್ನೂ ಪ್ರೀತಿಯಿಂದ ಕಾಣಬೇಕು-

ಎಂಬ ಸದುದ್ದೇಶದಿಂದಲೇ ಅವರು ಮತಪ್ರಚಾರವನ್ನು ಮಾಡಿರುತ್ತಾರೆ. ವಿವೇಕಿಗಳಾದವರು ಯುಕ್ತಿಯುಕ್ತವಾದ ಹಿತವಾದವು ಎಲ್ಲಿ ಸಿಕ್ಕಿದರೂ ಗ್ರಹಿಸುವರು.

★★★★★

# ಇಸ್ಲಾಂಮತವೂ ಗೋಹತ್ಯವೂ

- ಶ್ರೀ ಜಿ.ಎಸ್.ಎ. ಕರೀಂ ಸುಹ್ರವರ್ದಿ

ಲೇಖಕರು Divine Life ಪತ್ರಿಕೆಯಲ್ಲಿ ಬರೆದಿರುವ ಇಸ್ಲಾಂಸಂಸ್ಕೃತಿಯ ಲೆಖನದಿಂದ ಈ ಭಾಗವನ್ನು ಕನ್ನಡಿಸಿದೆ. ಆ ಪೂರ್ಣಲೇಖನದಲ್ಲಿ ಈಶ್ವರನ ಏಕತ್ವ, ಇಸ್ಲಾಂ ಶಬ್ದದ ಅರ್ಥ, ಮಾನವರ ಭ್ರಾತೃಭಾವ, ಇಸ್ಲಾಂನಲ್ಲಿ ಮತಾಂಧತೆಯ ಅಭಾವ, ಇಸ್ಲಾಂ ಸಾಮಾಜಿಕಧರ್ಮಶಾಸ್ತ್ರ ಮುಸ್ಲಿಂ ವಿದ್ವಾಂಸರು-ಮೊದಲಾದ ಅನೇಕ ಅಮೂಲ್ಯವಿಷಯಗಳಿವೆ.

-ಸಂ.ಅ.ಪ್ರ

ನಮ್ಮಗಳ ದೌರ್ಭಾಗ್ಯದಿಂದ ಗೋಹತ್ಯೆಯೆಂಬುದು ಮುಸಲ್ಮಾನರಿಗೂ ಹಿಂದುಗಳಿಗೂ ಇರುವ ಪರಸ್ಪರದ್ವೇಷಕ್ಕೆ ಒಂದು ನಿತ್ಯಕಾರಣವಾಗಿಬಿಟ್ಟಿದೆ. ಇದಕ್ಕೆ ಒಂದು ಪರಿಹಾರೋಪಾಯವನ್ನು ಕಂಡುಹಿಡಿಯುವದು ನಮ್ಮಗಳ ಕರ್ತವ್ಯವಾಗಿದೆ.

ಪಶುಯಾಗದ ಕರ್ಮಗಳ ಮೂಲವನ್ನು ಶೋಧಿಸಿ ತಿಳಿದುಕೊಳ್ಳುವದರಿಂದ ನಮಗೆ ಸಹಾಯವಾಗಬಹುದು. ಇದ್-ಉದ್-ಸುಹಾ ಎಂಬ ಹಬ್ಬದ ಸಂದರ್ಭದಲ್ಲಿ ಇಬ್ರಾಹಿಂ (ಬೈಬಲ್ಲಿನ ಅಬ್ರಹಾಂ) ಪ್ರವಾದಿಯ ಐತಿಹಾಸಿಕಯಜ್ಞದ ಉತ್ಸವವನ್ನು ಮಾಡುತ್ತಾರೆ. ಆದರೆ ಇಬ್ರಾಹಿಮನೇನೂ ಗೋಯಜ್ಞವನ್ನು ಮಾಡಲಿಲ್ಲ; ಗೋವನ್ನು ಬಲಿಕೊಡಬೇಕೆಂದು ನಮ್ಮ ಶಾಸ್ತ್ರದಲ್ಲಿ ಪ್ರಧಾನವಾಗಿ ವಿಹಿತವಾಗಿಯೂ ಇಲ್ಲ. ಇದಕ್ಕೆ ಬದಲಾಗಿ ಒಂಟೆ ಅಥವಾ ಕುರಿಯನ್ನೇ ಯಜ್ಞಕರ್ಮಗಳ ಸಂಬಂಧದಲ್ಲಿ ಮತ್ತೆಮತ್ತೆ ಹೇಳಿರುತ್ತದೆ. ನಮ್ಮ ಹಾಜಿಗಳಲ್ಲಿ (ಯಾತ್ರಿಕರಲ್ಲಿ) ಎಷ್ಟು ಜನರು ಇಸ್ಲಾಮಿನ ಮೂಲಸ್ಥಾನವಾದ ಅರೇಬಿಯಾದಲ್ಲಿ

ಗೋಯಾಗವನ್ನು ಮಾಡಿರುತ್ತಾರೆ? ಹಾಗೆ ಮಾಡದೆ ಇರುವದರಿಂದ ಇಸ್ಲಾಂಶಾಸ್ತ್ರದ ವಿಧಿಯನ್ನು ಅನಾದರಮಾಡಿದ ದೋಷವೇನಾದರೂ ಅವರಿಗೆ ಬಂದಿದೆಯೇನು? ಹೀಗಿರುವಲ್ಲಿ ಇಂಡಿಯಾದೇಶದಲ್ಲಿ ಮಾತ್ರ ನಾವುಗಳು ಗೋಯಜ್ಞದ ಪ್ರಶ್ನೆಯನ್ನು ಬೇರೊಂದು ದೃಷ್ಟಿಯಿಂದ ಏತಕ್ಕೆ ನೋಡಬೇಕು?

ತನ್ನ ಕಾಲದ ಮಹಾಭೂಪತಿಗಳಲ್ಲಿ ಒಬ್ಬನಾಗಿದ್ದ ಬಾಬರ್ ಚಕ್ರಾಧಿಪತಿಯು ತನ್ನ ಮಗನಾದ ಹುಮಾಯೂನನಿಗೆ ಹಿಂದೂಗಳ ಧಾರ್ಮಿಕಭಾವನೆಗಳನ್ನು – ಅವರ ಮತವಿಷಯದಲ್ಲಿನ ದುರಭಿಪ್ರಾಯಗಳನ್ನುಕೂಡ – ಗೌರವಿಸುವಂತೆ ಉಪದೇಶಿಸಿದ್ದನು. ಅದರಲ್ಲಿಯೂ ಮುಖ್ಯವಾಗಿ ಗೋವನ್ನು ಇಂಡಿಯಾ ದೇಶದಲ್ಲಿ ಪೂಜ್ಯಬುದ್ಧಿಯಿಂದ ಕಾಣುತ್ತಿದ್ದಾರೆಂಬುದನ್ನು ಎತ್ತಿ ಹೇಳಿದ್ದನು. ಆಫ್ಘಾನಿಸ್ಥಾನದ ದೊರೆಯಾದ ಅಮೀರ್ ಹಬೀಬುಲ್ಲಾ ಖಾನನು ಮುಸ್ಲಿಂ ಮತದಲ್ಲಿ ಅಭಿಮಾನವುಳ್ಳವನಾಗಿದ್ದರೂ ಗೋವುಗಳನ್ನು ಬಲಿಕೊಡುವ ವಿಷಯಕ್ಕೆ ಅವಕಾಶವನ್ನು ಕೊಡದೆ ಇದ್ದನು. ಕಾಶ್ಮೀರದೇಶದ ಮುಸಲ್ಮಾನರು ಇಸ್ಲಾಂ ಮತದಲ್ಲಿ ಬದ್ಧಾದರರಾಗಿದ್ದರೂ ಗೋಹತ್ಯವು ನಮ್ಮ ಮತದಲ್ಲಿ ವಿಹಿತವಾಗಿ ಲ್ಲವೆಂದೇ ನಂಬುತ್ತಾರೆ. ಮಿಕ್ಕ ಮುಸ್ಲಿಮರೂ ಈ ಅಭಿಪ್ರಾಯವನ್ನು ಒಪ್ಪುವದಾದರೆ ಅವರು ಇಸ್ಲಾಂಶಾಸ್ತ್ರವಿಧಿಯನ್ನೇನೂ ಉಲ್ಲಂಘಿಸಿದವರಾಗಲಾರರು.

ಪ್ರಾಣಿಗಳ ರಕ್ತವಾಗಲಿ ಮಾಂಸವಾಗಲಿ ಈಶ್ವರನಿಗೆ ತಲಪುವದಿಲ್ಲವೆಂಬುದು ಎಲ್ಲರೂ ಒಪ್ಪಿರುವ ಧರ್ಮೋಪದೇಶವಾಗಿದೆ. ಈ ಕರುಣಾಪೂರಿತದೃಷ್ಟಿಯು ಈಶ್ವರನು ಮತ್ತು ಅವನ ಸೃಷ್ಟಿ–ಇವುಗಳ ವಿಷಯಕ್ಕೆ ನಮ್ಮಗಳಿಗಿರುವ ಕಲ್ಪನೆಗೆ ಸಂಪೂರ್ಣವಾಗಿ ಹೊಂದುಗೆಯಾಗಿದೆ. ಬಲಿಕರ್ಮಗಳನ್ನು ಮೆರವಣಿಗೆಯ ರೂಪದಲ್ಲಿ ಪ್ರದರ್ಶನಮಾಡುವದರಿಂದ ಒಂದು ಪಂಗಡದ ಜನರಿಗೆ ನೋವಾಗುವದಾದರೆ ಅದಕ್ಕೆ ನಾವು ಅವಕಾಶವನ್ನು ಕೊಡಬಾರದು. ಗೋಮಾಂಸವನ್ನು ತಿನ್ನುವ ಇನ್ನೂ ಕೆಲವು ಪಂಗಡಗಳ ಜನರು ಇದ್ದೇ ಇರುತ್ತಾರೆ. ಆದರೆ ಅವರೇನೂ ಪೂಜ್ಯಬುದ್ಧಿಯಿಂದ ಜನರು ಕಾಣುತ್ತಿರುವ ಈ ಪ್ರಾಣಿಯನ್ನು ಬಲಿಕೊಡುವ ಉತ್ಸವವನ್ನು ಮಾಡಿ ತಮ್ಮ ನೆರೆಯವರ ಮನಸ್ಸಿಗೆ ನೋವನ್ನುಂಟುಮಾಡುತ್ತಿಲ್ಲ.

ಈ ಎಲ್ಲಾ ವಿಷಯಗಳನ್ನೂ ಮನದಂದು ಉತ್ತರದೇಶದಲ್ಲಿರುವ ನಮ್ಮ ನಮ್ಮ

ಮುಸಲ್ಮಾನಸಹೋದರರಿಗೆ ನಾನು ನಮ್ರತೆಯಿಂದ ಹೇಳಿಕೊಳ್ಳುವದೇನೆಂದರೆ ದಕ್ಷಿಣದೇಶದಲ್ಲಿರುವ ಮುಸಲ್ಮಾನರಾದ ನಾವುಗಳು ಸಾಮಾನ್ಯವಾಗಿ ಗೋಯಾಗವನ್ನೇನೂ ಮಾಡುತ್ತಿಲ್ಲ - ಈ ಯಜ್ಞವಿಶೇಷದ ವಿಷಯಕ್ಕೆ ಇರುವ ತಮ್ಮ ಅಭಿಪ್ರಾಯಗಳನ್ನು ಪುನರ್ವಿಮರ್ಶೆಮಾಡಬೇಕು. ಇದರ ಪರಿಣಾಮವೇನೆಂಬುದನ್ನೂ ಪರೀಕ್ಷಿಸಿ ನೋಡಿಕೊಳ್ಳಬೇಕು; ಹಿಂದುಗಳೊಡನೆ ತಮಗಿರುವ ಸಂಬಂಧವನ್ನು ಕ್ರಮಪಡಿಸಿಕೊಂಡು ಈ ದೇಶದಲ್ಲಿ ಶಾಂತಿರಕ್ಷಣೆಗೆ ನೆರವಾಗಬೇಕು. ಪರಸ್ಪರವಾಗಿ ದೂಷಣೆಮಾಡಿ ಕಚ್ಚಾಡುವದನ್ನು ಬಿಡುವ ಕಾಲವು ಬಂದುಬಿಟ್ಟಿದೆ. ಅಪ್ರಧಾನವಿಷಯಗಳ ವಿಚಾರದಲ್ಲಿ ಕಾಲಹರಣಮಾಡುವದೇತಕ್ಕೆ? ಹಿಂದೂಮುಸಲ್ಮಾನರು ಐಕ್ಯದಿಂದಿರಬೇಕಾದದ್ದು ಅವಶ್ಯವೆಂಬುದನ್ನು ಎಷ್ಟು ಒತ್ತಿ ಹೇಳಿದರೂ ಸಾಲದು.

★★★★★

# ಸೂಫಿಮತ

## ಸೂಫಿಯ ಪರಿಚಯ

### (ಮುರ್ಷಿದ್ ಇನಾಯತ್ ಖಾನ್ ಎಂಬಾತನ ಗ್ರಂಥದಿಂದ ಸಂಗ್ರಹಿಸಿದ್ದು)

ಪ್ರಶ್ನೆ :- ಸೂಫಿಯೆಂದರೆ ಯಾರು?

ಉತ್ತರ :- ಯಾವನು ತನ್ನದೇ ಒಂದು ಅಭಿಪ್ರಾಯವೆಂದು ಅಥವಾ ಮತವೆಂದು ಮಿಕ್ಕವರೆಲ್ಲರನ್ನೂ ಬಿಟ್ಟು ಬೇರೆಯಾಗಿರುವದಿಲ್ಲವೋ, ಯಾವನು ಹೃದಯವೇ ದೇವರ ದೇವಾಲಯವೆಂದು ಕಂಡುಕೊಂಡಿರುವನೋ ಅವನೇ ಸೂಫಿಯು.

ಪ್ರಶ್ನೆ:- ಅವನಿಗೆ ಬೇಕಾಗಿರುವದೇನು?

ಉತ್ತರ :- ಅಹಂಕಾರದ ಮರೆಯನ್ನು ತೆರೆದುಹಾಕಿ, ತನ್ನೊಳಗಿರುವ ಪರಮಾತ್ಮನನ್ನು ಕಂಡುಕೊಳ್ಳುವದು.

ಪ್ರಶ್ನೆ :- ಅವನು ಮಾಡುವ ಬೋಧನೆಯೇನು?

ಉತ್ತರ :- ಆನಂದಪ್ರಾಪ್ತಿ.

ಪ್ರಶ್ನೆ :- ಅವನು ಹುಡುಕುವದೇನನ್ನು?

ಉತ್ತರ :- ಜ್ಞಾನದ ಬೆಳಕನ್ನು.

ಪ್ರಶ್ನೆ :- ಅವನಿಗೆ ಕಾಣುವದೇನು?

ಉತ್ತರ :- ಸಾಮರಸ್ಯ.

ಪ್ರಶ್ನೆ :- ಅವನು ಕೊಡುವದೇನು?

ಉತ್ತರ :- ಸರ್ವಭೂತಗಳ ಪ್ರೇಮವನ್ನು.

ಪ್ರಶ್ನೆ :- ಅವನಿಗೆ ಸಿಗುವದೇನು?

ಉತ್ತರ :- ಪ್ರೇಮದ ಅದ್ಭುತಶಕ್ತಿ.

ಪ್ರಶ್ನೆ :- ಅವನು ಕಂಡುಕೊಳ್ಳುವದೇನನ್ನು?

ಉತ್ತರ :- ಪರಮಾತ್ಮನನ್ನು.

ಪ್ರಶ್ನೆ :- ಅವನು ಕಳೆದುಕೊಳ್ಳುವದೇನನ್ನು?

ಉತ್ತರ :- ಅಹಂಕಾರವನ್ನು.

★★★★★

# ಸೂಫಿಪಂಥ

## (ಬೇರೆ ಬೇರೆ ಆಧಾರಗಳಿಂದ ಸಂಗ್ರಹಿಸಿದ್ದು)

ಪಾರ್ಸಿದೇಶದಲ್ಲಿ ಹುಟ್ಟಿದ ಧರ್ಮಪಂಥಗಳಲ್ಲಿ (1) ಸರಥುತ್ತ್ರನ ಮತ್ತು (2) ಸೂಫಿಪಂಥ, (3) ಷಿಯಾಪಂಥ - ಈ ಮೂರೂ ನಮ್ಮ ಭರತಖಂಡದವರ ಸಂಸ್ಕೃತಿಗೆ ನಿಕಟಸಂಬಂಧವುಳ್ಳವುಗಳಾಗಿವೆ. ಇವು ಮೂರರಲ್ಲಿಯೂ ಹಿಂದುಗಳಿಗೆ ಸಹಜವಾಗಿ ಆದರವು ಹುಟ್ಟಲು ಕಾರಣವಿದೆ. ಈಗ ಸೂಫಿಪಂಥದ ಪರಿಚಯವನ್ನು ಸ್ವಲ್ಪಮಟ್ಟಿಗೆ ವಾಚಕರಿಗೆ ಮಾಡಿಕೊಡುವದಕ್ಕೆ ಯತ್ನಿಸುವೆನು.

ಸೂಫಿಪಂಥವು ಮೂಲದಲ್ಲಿ ಮುಸಲ್ಮಾನರ ಧರ್ಮದಿಂದ ಹೊರಟಿದ್ದು. ಅದು ಇಸ್ಲಾಂಧರ್ಮದ ಒಳತಿರುಳನ್ನು ಒಳಗೊಂಡಿರುವದೆಂದೂ ಮಹಮ್ಮದನ ಉಪದೇಶದ ರಹಸ್ಯಾರ್ಥವೇ ಸೂಫಿಗಳ ಉಪದೇಶವೆಂದೂ ಕೆಲವರೆನ್ನುವರು. ಆದರೆ ಆ ಪಂಥದಲ್ಲಿ ಕ್ರೈಸ್ತಧರ್ಮ, ನವೀನಪ್ಲೇಟೋಸಿದ್ಧಾಂತ, ಬೌದ್ಧ ಧರ್ಮ - ಈ ಎಲ್ಲ ಮತಗಳ ಸಂಬಂಧವೂ ಕಾಣಬರುತ್ತದೆಯೆಂದು ಮತ್ತೆ ಕೆಲವರು ಬಲ್ಲವರು ಹೇಳುವರು.

ಇಸ್ಲಾಂಮತದಿಂದ ಏಕೇಶ್ವರವಾದ, ಸರ್ವರಲ್ಲಿಯೂ ಭ್ರಾತೃಬುದ್ಧಿ-

ಇವುಗಳನ್ನೂ ಕ್ರಿಸ್ತಿಯನರ ಮತದಿಂದ ಧ್ಯಾನ, ವೈರಾಗ್ಯ ಇವುಗಳನ್ನೂ ನವೀನ ಪ್ಲೇಟೋಸಿದ್ಧಾಂತದಿಂದ ತತ್ತ್ವವಿಚಾರದ ಕ್ರಮವನ್ನು ಬೌದ್ಧಧರ್ಮದಿಂದ ಜಪಮಾಲಿಕೆಯ ಉಪಯೋಗವೇ ಮುಂತಾದ ಆಚಾರಗಳು, ಫಾನ (ನಿರ್ವಾಣ)-ಇವುಗಳನ್ನೂ ಸೂಫಿಪಂಥವು ಆರಿಸಿಕೊಂಡಿರುವಂತಿದೆ. ಸೂಫಿಗಳ 'ಹಕ್' ಎಂಬುದು ವೇದಾಂತದ ಬ್ರಹ್ಮವನ್ನು ಹೋಲುವದು; ಮಾರ್ಫತ್ ಎಂಬುದು ವೇದಾಂತದ ಜ್ಞಾನದ ಸ್ಥಾನದಲ್ಲಿರುವದು. ಜೀವಬ್ರಹ್ಮರ ಸಂಬಂಧ, ಮುಕ್ತಿಯ ಸಾಧನ-ಇವುಗಳ ವಿಷಯದಲ್ಲಿಯೂ ವೇದಾಂತಕ್ಕೂ ಸೂಫಿಪಂಥಕ್ಕೂ ಹೆಚ್ಚಿನ ಹೋಲಿಕೆ ಇರುವದು. ಅಂತೂ ಈ ಪಂಥವನ್ನು ಯಾವದಾದರೊಂದು ಧರ್ಮದ ಶಾಖೆಯನ್ನುವದಕ್ಕಿಂತ ವಿವಿಧಮತಗಳ ಸಮ್ಮೇಲನವೆಂದು ಕರೆಯುವದು ಹೆಚ್ಚು ಯೋಗ್ಯವಾಗಿರುತ್ತದೆ.

ಸೂಫಿಪಂಥದಲ್ಲಿ ಬೈರಾಗಿಗಳು, ತತ್ತ್ವವಿಚಾರಕರು, ಕವಿಗಳು-ಎಂದು ಮೂರು ಪಂಗಡವನ್ನು ಮಾಡಬಹುದಾಗಿರುತ್ತದೆ. ಸೂಫಿ ಎಂಬ ಮಾತಿಗೆ ಜ್ಞಾನಿ, ಪರಿಶುದ್ಧನು, ಪೀಠದ ಮೇಲೆ ಕುಳಿತಿರುವ ಭಿಕ್ಷುಕ - ಎಂಬ ಬೇರೆ ಬೇರೆ ತೆರದಲ್ಲಿ ಅಕ್ಷರಾರ್ಥವನ್ನು ಮಾಡಿರುತ್ತಾರೆ. ಪ್ರಪಂಚದಲ್ಲಿ ತಮಗಿರುವ ವಿರಕ್ತಿಯನ್ನು ಸೂಚಿಸುವದಕ್ಕಾಗಿ ಸೂಫ್ ಎಂಬ ಒಂದು ಬಗೆಯ ಉಣ್ಣೆಯ ಕಪನಿಯನ್ನು ಹಾಕಿಕೊಳ್ಳುತ್ತಿದ್ದರಿಂದ ಸೂಫಿ ಎಂಬ ಹೆಸರು ಇವರಿಗೆ ಬಂತೆಂದು ಅನೇಕ ವಿದ್ವಾಂಸರ ಮತವು. ಇದರ ನಿಜವನ್ನು ಇತಿಹಾಸಶೋಧಕರು ಕಂಡು ಹಿಡಿಯಬೇಕಾಗಿರುವದು.

ಇಸ್ಲಾಂಮತದ ಪ್ರಾರಂಭಸ್ಥಿತಿಯಲ್ಲಿ ಕಲ್ಪನಾಶಕ್ತಿಯೂ ಭಕ್ತಿಯೂ ಹೆಚ್ಚಾಗಿರುವವರಿಗೆ ತಕ್ಕ ಅವಕಾಶವಿಲ್ಲದ್ದರಿಂದ ದರ್ವೇಷಿ (ಬೈರಾಗಿ)ಗಳಾಗಿ ಓಡಾಡುತ್ತಿದ್ದ ಯೋಗಿಗಳಲ್ಲಿಯೇ ಸೂಫಿಪಂಥವು ಮೊದಮೊದಲು ಮೊಳಕೆಯಾಯಿತು. ಇವರು ಆಶೆಯಿಂದಲಾಗಲಿ ಭಯದಿಂದಲಾಗಲಿ ಈಶ್ವರಾರಾಧನೆಯನ್ನು ಮಾಡುವ ಅಂತಸ್ತನ್ನು ಮೀರಿ ಪ್ರೇಮದಿಂದ ಆತನನ್ನು ಭಜಿಸುವದೇ ಹೆಚ್ಚಿನದೆಂಬ ತತ್ತ್ವವನ್ನು ಕಂಡುಕೊಂಡಿದ್ದರು. ಮುಸಲ್ಮಾನರಲ್ಲದವರಿಂದ ಕೂಡ ಭಕ್ತಿಯ ವಿಚಾರಗಳನ್ನು ಇವರು ತೆಗೆದುಕೊಳ್ಳಹತ್ತಿದ್ದರಿಂದ ಮಹಮ್ಮದೀಯರು ಇವರನ್ನು ಪಾಷಂಡಿಗಳೆಂದು ಎಣಿಸಹತ್ತಿದರು, ಚಿತ್ರವಿಚಿತ್ರಹಿಂಸೆಗಳಿಂದ ಪೀಡಿಸಹತ್ತಿದರು. ಆದರೆ ಈ ಭಕ್ತರು ಅಹಿಂಸೆಯನ್ನೇ ತಮ್ಮ ವ್ರತವಾಗಿಟ್ಟುಕೊಂಡು, ತಮ್ಮ ಹಗೆಗಳನ್ನಾಗಲಿ, ಹಿಂಸಕರನ್ನಾಗಲಿ ದ್ವೇಷಿಸದೆ, ಮಹಾತ್ಮರೆನಿಸಿಕೊಂಡರು. ಈ ಭಕ್ತರ ಮಾಲೆಯಲ್ಲಿ

ಬಿಸ್ತಮಿಯ ಬಾಯಸೀದ್, ಹುಸೇನ್ ಇಬನ್ ಮನ್ಸೂರ್, ಷೇಕ್ ಫರಿದುದ್ದೀನ್ ಅತ್ತರ್, ಇಬನ್‌ಸೈಯದ್, ರಬಿಯ-ಇವರ ಹೆಸರುಗಳು ಪ್ರಸಿದ್ಧವಾಗಿವೆ.

ಬೈರಾಗಿ ಸೂಫಿಗಳನೇಕರು ವೇದಾಂತಿಗಳಂತೆ 'ನಾನೇ ಪರತತ್ತ್ವವು' ಎಂದು ಸಾರುತ್ತಿದ್ದರು; ಜಾತಿನೀತಿಕುಲಗೋತ್ರಗಳಿಗೆ ದೂರನಾಗಿ ಅಪರಿಚ್ಛಿನ್ನನಾಗಿ ಆತ್ಮಾನಾತ್ಮವೆಂಬ ವಿಭಾಗವನ್ನು ಮೀರಿದ ಪರಮಾತ್ಮನೇ ತಾವೆಂಬ ಭಾವನೆಯಲ್ಲಿ ಅವರು ಮುಳುಗಿ ಹೋಗಿದ್ದರು. ಇದನ್ನು ತಡೆಯಲಾರದೆ ಮಹಮ್ಮದೀಯರು ಅವರನ್ನು ಹೊಡೆದು ಬಡಿದು ಕೊಂದುಹಾಕುತ್ತಿದ್ದರು; ಇದರಿಂದ ಅವರ ಭಕ್ತಿಯೂ ವಿಚಾರವೂ ಇನ್ನೂ ಹೆಚ್ಚಿ ಸೂಫಿತತ್ತ್ವವಿಚಾರಶಾಸ್ತ್ರವೊಂದು ಏರ್ಪಡುವದಕ್ಕೆ ಕಾರಣವಾಯಿತು. ಆಲ್ ಫಸಾಲಿ ಎಂಬಾತನು ಸೂಫಿ ಸಿದ್ಧಾಂತವನ್ನು ಇಸ್ಲಾಂಧರ್ಮಕ್ಕೆ ಹೊಂದಿಸಿದ ಎಷ್ಟೋ ವಿಚಾರಗಳನ್ನು ಹೊರಕೆತಂದನು. ಇವನನ್ನು ಆಸ್ತಿಕ ಮಹಮ್ಮದೀಯರು ಕೂಡ ಬಹುವಾಗಿ ಮೆಚ್ಚಿ ಅವನಿಗೆ 'ಇಸ್ಲಾಂತತ್ತ್ವವಾದಿ' ಎಂಬ ಬಿರುದನ್ನು ಕೊಟ್ಟರು. ಷೇಕ್ ಷಿಹಾಬುದ್ದೀನ್ ಸುಹ್ರವರ್ದಿ ಎಂಬಾತನು ಮತ್ತೊಬ್ಬ ವಿದ್ವಾಂಸನು. ಇವನನ್ನು ಪಾಷಂಡಿಯೆಂದು ಬಗೆದು ಮುಸಲ್ಮಾನರು ಮರಣದಂಡನೆಯನ್ನು ವಿಧಿಸಿದರು. ಕುರಾನಿಗೆ ವ್ಯಾಖ್ಯಾನವನ್ನೂ ಇಸ್ಲಾಂಧರ್ಮದ ರಹಸ್ಯಾರ್ಥವನ್ನೂ ಬರೆದ ಷೇಕ್ ಮುಹಿಯುದ್ದೀನ್ ಇಬನುಲ್ ಅರಾಬಿ ಎಂಬಾತನೂ ಈ ತತ್ತ್ವವಿಚಾರಕರ ಗುಂಪಿಗೇ ಸೇರಿದವನು.

ಸೂಫಿಕವಿಗಳ ಕಾವ್ಯದಲ್ಲಿ ಕಂಡುಬರುವ ಉಪದೇಶವು ಮೇಲೆ ಹೇಳಿದ ಎರಡಕ್ಕಿಂತಲೂ ಶುದ್ಧವಾಗಿಯೂ ಚಿತ್ತಾಕರ್ಷಕವಾಗಿಯೂ ಇರುವದು. ಪಾರ್ಸಿದೇಶದ ಕವಿತೆಯಲ್ಲಿ ಸೂಫಿ ಸಂಬಂಧವಿಲ್ಲದ ಕವಿತೆಯೇ ತೀರ ಕಡಿಮೆಯಾಗಿರುವದು. ಫರಿದುದ್ದೀನ್ ಅತ್ತರ್, ಜಲಾಲುದ್ದೀನ್, ಹಾಫೆಸ್, ಸಾದಿ, ಓಮರ್‌ಖಾಯಮ್-ಮೊದಲಾದ ಉತ್ತಮಕವಿಗಳೆಲ್ಲ ಸೂಫಿಯೋಗವನ್ನು ನಿರೂಪಿಸುವದಕ್ಕೇ ತಮ್ಮ ಕಾವ್ಯಪ್ರಬಂಧಗಳನ್ನು ಮೀಸಲಾಗಿರಿಸಿರುವರು. ಆದ್ದರಿಂದ ಸೂಫಿಮತದ ಸವಿಯನ್ನು ನೋಡಬೇಕೆನ್ನುವವರು ಪಾರ್ಸಿಭಾಷೆಯನ್ನು ಕಲಿಯಬೇಕು; ಇಲ್ಲದಿದ್ದರೆ ಇಂಗ್ಲಿಷಿನಲ್ಲಿಯೂ ಬಂಗಾಳಿಯಲ್ಲಿಯೂ ಆಗಿರುವ ಸೂಫಿಕವಿತೆಗಳ ಅನುವಾದಗಳನ್ನಾದರೂ ಓದಬೇಕು.

★★★★★

# ಸೂಫಿಕವಿಗಳು

**- ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು**

ಇಸ್ಲಾಂಮತದಮೂಲರೂಪವನ್ನು ಕರ್ಮಕಾಂಡವೆಂದು ಕರೆಯುವದಾದರೆ ಸೂಫಿಪಂಥವನ್ನು ಅದರ ಜ್ಞಾನಕಾಂಡವೆಂದು ಕರೆಯಬಹುದಾಗಿರುತ್ತದೆ. ಏಕೆಂದರೆ ಈ ಪಂಥದಲ್ಲಿ ಹೊರಗಿನ ಆಚಾರಕ್ಕಿಂತಲೂ ಭಕ್ತಿಜ್ಞಾನ ವೈರಾಗ್ಯಗಳಿಗೇ ಪ್ರಾಮುಖ್ಯವನ್ನು ಕೊಟ್ಟಿರುತ್ತದೆ. ಈ ಲೇಖನದಲ್ಲಿ ಕೆಲವು ಸೂಫಿಕವಿತೆಗಳ ಅನುವಾದವನ್ನು ಇದಕ್ಕೆ ಉದಾಹರಣೆಯಾಗಿ ಕೊಡುವೆನು.

**ಜಲಾಲುದ್ದೀನ್** ಎಂಬ ಕವಿಯು ಸೂಫಿಯ ದೃಷ್ಟಿಯನ್ನು ಈ ರೀತಿಯಲ್ಲಿ ವರ್ಣಿಸಿರುವನಂತೆ:-

**ಏನ ಮಾಡಲಿ ನಾನು ಮುಸ್ಲಿಮರ ಪೇಳಿ ।**
**ನಾನದಾರೋ ನನಗೆ ತಿಳಿದು ಹೇಳಿ ॥**
**ನಾನು ಕ್ರಿಸ್ತಿಯನಲ್ಲ, ಯೇಹೊದ್ಯ ಮೊದಲಲ್ಲ,**
**ಮೇಣು ಗೇಬರನಲ್ಲ ಮೂಸ್ಲಿಮನುಮಲ್ಲ,**
**ನಾನು ಮೂಡಣಪಡುವಣಾ ದೇಶದವನಲ್ಲ,**
**ಭೂಮಿಯಲಿ ನಾನಿಲ್ಲ, ಸಾಗರದೊಳಿಲ್ಲ,**

**ನಾನು ಪ್ರಕೃತಿಯಿನೊಗೆದ ನಾಣ್ಯವಲ್ಲವು ಮತ್ತೆ,**
**ಬಾನೊಳಗೆ ಪುಟ್ಟಿ ಮರೆದಾತ ಮೊದಲಲ್ಲ,**
**ನನ್ನ ತಾಣವು ತಾಣವಿಲ್ಲದುದರಲ್ಲಿಹುದು,**
**ನನ್ನ ಗುರುತದು ಗುರುತೆ ಇಲ್ಲದಿಹುದು,**
**ಶರಿರವಲ್ಲವು ನೋದಲಾತಮನು ಮೇಣಲ್ಲ,**
**ಅರಿಯಲೆನ್ನಯ ಪ್ರಿಯನಿಗಾತುಮನು ನಾನು.**

– R.A. Nicholson ಎಂಬವರ ಅನುವಾದವನ್ನನುಸರಿಸಿದ್ದು.

ಮೋಕ್ಷಮಾರ್ಗಗಳು ಅನಂತವಾಗಿರುವವೆಂದು ಸೂಫಿಗಳನ್ನುವರು. ಸರ್ವವ್ಯಾಪಕನಾದ ಪರಮಾತ್ಮನು ಒಬ್ಬನೇ ಆದರೂ ಕನ್ನಡಿಗಳಲ್ಲಿ ಸಾವಿರಾರು

ಪ್ರತಿಬಿಂಬಗಳು ಆತನ ಸುಂದರರೂಪವನ್ನು ತೋರಿಸಬಹುದೆಂದು ನಂಬಿರುವದರಿಂದ ಕ್ರಿಸ್ತಿಯನ್ನರ ವ್ಯೂಹತ್ರಯವಾದಕ್ಕಾಗಲಿ ಇಸ್ಲಾಮಿಗಳಲ್ಲದವರ ಮೂರ್ತಿಪೂಜೆಗಾಗಲಿ ಇವರು ವಿರೋಧಿಗಳಲ್ಲ:

**ಮೂರ್ತಿಯ ತತ್ತ್ವವದೇನೆಂ**
**ದರ್ಥಿಯಿನರಿತಂದು ಮೂಸ್ಲಿಮಂ ನಿಶ್ಚಿಯದಿಂ ।**
**ಮೂರ್ತಿಯ ಪೂಜೆಯುಮಂ ಪರ**
**ಮಾರ್ಥಂ ಧರ್ಮ್ಯಂದಲೆಂದು ತರಿಸಲದಿಹನೇ ॥**

**– ಷಬಿಸ್ತರದ ಮಹಮ್ಮೂದ್**

**ಪ್ರತಿಮೆಯು ಪೂಜಾರಿಗ ಹೇಳಿತು ''ನೀ ಜತನದಿ ಪೂಜಿಪೆಯನ್ನ**
**ಸುತ ನೀನೆನ್ನಯ ಭಕುತನಾದುದಕೆ ಕಾರಣವನು ತಿಳಿಯಣ್ಣ ।**
**ಅತಿಸುಂದರ ಪರಮಾತ್ಮನ ಹೊಳಪದು ಬೀರುವದೆನ್ನೊಳು ಮುನ್ನ**
**ನುತಿಸುತೆನ್ನ ನೋಡುತ್ತಿರುವೀ ನಿನ್ನ ಮೂಲಕವೆ ಘನ್ನ ॥**

**– ಓಮರ್‌ಖಾಯಮ್**

ಮೇಲೆ ಕೊಟ್ಟಿರುವ ಎರಡನೆಯ ಕವಿತೆಯಲ್ಲಿ ಮೂರ್ತಿಯಲ್ಲಿ ತೋರುವ ದೇವನು ಆರಾಧಕನ ಅಂತರಾತ್ಮನೇ ಎಂಬ ತತ್ತ್ವವು ಅಡಗಿರುವದು.

ಸೃಷ್ಟಿಗೆ ಪೂರ್ವದಲ್ಲಿ ಸಚ್ಚಿತ್ಸುಂದರಸ್ವರೂಪನಾದ ಪರಮಾತ್ಮನೊಬ್ಬನೇ ಇದ್ದನು. ಆತನು ತನ್ನ ರೂಪವನ್ನು ಪ್ರಕಟಮಾಡಬೇಕೆಂದು ಈ ಅಸತ್ತಾದ ಪ್ರಪಂಚವನ್ನು ಸೃಷ್ಟಿಮಾಡಿದನು – ಎಂಬ ಸೂಫಿಯವರ ಹೇಳಿಕೆಯು ಉಪನಿಷತ್ತುಗಳ ಪ್ರತಿಧ್ವನಿಯಂತಿರುವದು:

**ಪಿರಿಯರವಪ್ಪೆ ನೀನುಳಿದುದೆಲ್ಲಮದೇನಿರವಲ್ತು ತೋರ್ಕೆಯೊಂ**
**ದಿರವದು ನಿನ್ನ ಸೃಷ್ಟಿಯೊಳಗೊಂದಿರವೈಸೆ ಸಮಸ್ತವಸ್ತುವೊಳ್ ।**
**ಪರಿಪರಿ ತೋರ್ಪ ನಿನ್ನ ಪರಸುಂದರರೂಪು ಜಗನ್ಮಮೋಹರಂ**
**ಮೆರೆಯಿಪುದಲ್ತೆ ಮೈಮೆಯಿಂದಂ ಮುಕುರಂಗಳೊಂದೆ ನೂರ್ತೆರಂಜಾಮಿ**

ಜಾಮಿ ಜಗತ್ತಿನಲ್ಲಿ ಕಾಣುವ ರೂಪಗಳೆಲ್ಲ ಪರಮಾತ್ಮನ ರೂಪವೇ ಆಗಿರುವಂತೆ ಅದರಲ್ಲಿ ಕೇಳಬರುವ ಮಾತುಗಳೆಲ್ಲವೂ ಆತನ ನಾಮಗಳೇ ಆಗಿ ರುವವು:

ಮಧು ನೀನೇ ಮಧುಬಾಂಡವು ನೀನೇ ಬಡಿಶವು ನೀನೇ ಬಲೆ ನೀನೇ ।
ಭುವಿಯೆಂಬುವ ಹಲಗೆಯ ಮೇಲಿರುವೀ ಬರಹವೆಲ್ಲ ನಿನ್ನಯ ನಾಮ ।
ಇಂತಿರಲಾವ ಪೆಸರಿನಿಂ ಕರೆವವ ನಂತನಾಮ ನಿನ್ನನು ನಾವು ॥ – ಜಾಮಿ

ಆದ್ದರಿಂದ ಸಾಧಕನು ಪರಮಾತ್ಮನ ಪ್ರೇಮಕ್ಕೆ ಆಡಿಯಾಳಾಗಿ ತನ್ನ ಮುಕ್ತಿಯನ್ನು ತಾನು ಕಂಡುಕೊಳ್ಳಬೇಕೆಂಬುದೇ ಸೂಫಿಗಳ ಉಪದೇಶವು:

ರಾಗ ಆಟತಾಳ

ಪ್ರೇಮದ ದಾಸನಾಗಣ್ಣ । ಈ ನೇಮವ ಬಿಡಬೇಡಣ್ಣ ॥ ಪ ॥
ಪ್ರೇಮವೊಂದೇ ಬಲ್ಲವರ ಪುರುಷಾರ್ಥವು ಕಾಮಿತದಾಯಕವಣ್ಣ ॥ ಅ ॥
ಪ್ರೇಮದ ದಾಸ ನೀನಾದರೆ ಮುಕುತಿಯ ಕ್ಷೇಮವು ಕೈವಶಣ್ಣ ।
ಪ್ರೇಮದ ಬರೆ ಬೀಳಲೆದೆಯ ಮೇಲೆ ಬ್ರಹ್ಮಾನಂದವುಕ್ಕುವದಣ್ಣ ॥ 1 ॥
ಪ್ರೇಮದ ಮದದೊಳು ಮೈ ಬಿಸಿಯಾದರೆ ಮೈಮರೆವರು ಮುಚ್ಚಿ ಕಣ್ಣ ।
ಪ್ರೇಮವೊಂದನುಳಿದೆಲ್ಲವು ಬರಿ ಮಂಕು, ತಾಮಸ, ಹೆಮ್ಮೆಯದಣ್ಣ ॥ 2 ॥
ಪ್ರೇಮದ ನೆನಹರು ಪ್ರೇಮಿಗೆ ಬರಲವನಾಮೋದ ಬಲು ಸೊಗಸಣ್ಣ ।
ಪ್ರೇಮವ ಹೊಗಳುವಾತನ ದನಿಯೇರಿಕೆ ತಾ ಮಿತಿಮೀರುವದಣ್ಣ ॥ 3 ॥
–ಜಾಮಿ

ಜೀವನು ಕೊನೆಯಲ್ಲಿ ದೇವನನ್ನೇ ಸೇರುವನೆಂಬುದನ್ನು ಈ ಕೆಳಗಣ ಕವಿತೆಯಲ್ಲಿ ಸುಂದರವಾಗಿ ವರ್ಣಿಸಿರುತ್ತದೆ. ಜೀವನ ವಿಕಾಸವು ಕ್ರಮಕ್ರಮವಾಗಿ ಹೇಗೆ ಆಗುವದೆಂಬ ತತ್ತ್ವವೂ ಇದರಲ್ಲಿ ಅಡಗಿರುವದು:

ಖನಿಜವಾದವ ಸತ್ತು ಸಸ್ಯವೆನಿಸಿದೆ ಮತ್ತೆ
ಸಸ್ಯದೊಳು ಸತ್ತು ನಾಂ ಪ್ರಾಣಿಯೆನಿಸಿದೆನು।
ಮನುಜನಾದೆನು ಬಳಿಕ ಪ್ರಾಣವಳಿಯಲು ಮಗುಳೆ,
ಸಾಯಲಂಜಲದೇಕೆ! ಸತ್ತು ಕೀಳಹೆನೆ?॥
ಮರಳಿ ಮರಣವ ಹೊಂದೆ ಸುರದೇಹದಿಂದೊಗೆವೆ,
ಸುರಭೋಗವನು ಮೀರ್ದ ಗತಿಯ ಬಯಸುವೆನು।
''ಸುರುಟಿ ಸಾಯುವದೆಲ್ಲ, ನಿರುತವಿಹುದೊಂದಿಲ್ಲ

ಪರಮಾತ್ಮ ಸಾಲೋಕ್ಯವೊಂದುಳಿದು ಜಗದಿ'' ॥
ದೇವರ್ಕಳನು ದಾಟಿ ಹಾರುವೆನು ಪರಪದಕೆ
ಭಾವನೆಗೆ ನಿಲುಕದಿಹ ರೂಪನಾನುವೆನು ।
ಸಾವೆನದರಿಂ, ಬೀಣೆಯಿಂಚರವು ಸಾರುತಿದೆ
'ದೇವನೆಡೆಗೇ ಮರುಳುತಿಹೆವೆಲ್ಲ'ರೆಂದು ॥ [1] -ಮಸ್ನವಿ

ಹೀಗೆಲ್ಲ ಕವಿಗಳು ಪರಮಾರ್ಥವನ್ನೂ ಭಗವದ್ಭಕ್ತಿಯನ್ನೂ ಹಾಡಿಹೊಗಳಿರುವದನ್ನು ಕೇಳಿದರೆ 'ಸೂಫಿಗಳು ಪರಮತದವರೆ? ಅವರ ತತ್ತ್ವಕ್ಕೂ ನಮ್ಮ ಮತಬೋಧೆಗೂ ಭೇದವುಂಟೆ?' – ಎಂಬ ಉದ್ಗಾರವು ಹಿಂದುಗಳಲ್ಲನೇಕರಲ್ಲಿ ಹೊರಬೀಳದೆ ಇರದು.

★★★★★

# ಆಧುನಿಕ ಸೂಫಿಮತ

– ಶ್ರೀಮತಿ ಮುನೀರವಾನ್ ವೂರ್ಸ್ಟ್ ವಾನ್ ಬಿಎನ್ಸ್

(Divine Life ಪ್ರತಿಕೆಯಿಂದ)

ಮೌಲಾಭಕ್ಷನೆಂಬ ಸಂಗೀತಗಾರನ ಮೊಮ್ಮಗನಾದ ಇನಾಯತ ಖಾನನೆಂಬಾತನು ಬರೋಡದಲ್ಲಿ ಜನಿಸಿ ಕುಲಕ್ರಮಾಗತವಾದ ಸಂಗೀತದಲ್ಲಿ ಪ್ರವೀಣನಾಗಿ ಭರತಖಂಡದಲ್ಲೆಲ್ಲ ಸಂಚರಿಸಿದನು. ಹೈದರಾಬಾದಿನಲ್ಲಿ ಸೂಫಿದೀಕ್ಷೆಯನ್ನು ಪಡೆದು ಗುರುವಿನ ಅಪ್ಪಣೆಯಂತೆ ಅಮೆರಿಕ, ರಷ್ಯ –ಮುಂತಾದ ಪಾಶ್ಚಾತ್ಯದೇಶಗಳಲ್ಲಿ ಈ ಹೊಸ ಪಂಥವನ್ನು ಪ್ರಚಾರಮಾಡಿರುತ್ತಾನೆ. ಆತನ ಮತದಲ್ಲಿ ಈ ಕೆಳಗಿನ ಹತ್ತು ಉಪದೇಶಗಳು ಮುಖ್ಯವಂತೆ:

---

1. ಈ ಬರಹದಲ್ಲಿ ಕೊಟ್ಟಿರುವ ಪದ್ಯ, ಪದಗಳ ಛಂದಸ್ಸಿಗೂ ಮೂಲಗ್ರಂಥದ ಛಂದಸ್ಸಿಗೂ ಯಾವ ಸಂಬಂಧವೂ ಇಲ್ಲ, ಪಾಶ್ಚಾತ್ಯವಿದ್ವಾಂಸರ ಅನುವಾದವೇ ಇವಕ್ಕೇ ಮೂಲ. ಪಾರ್ಷಿಯಿಂದಲೇ ನೇರಾಗಿ ಯಾರಾದರೂ ಕೆಲವು ಕಾವ್ಯಗಳನ್ನು ಕನ್ನಡಿಸಿದರೆ ನಮಗೆ ಎಂಥ ಅಮೂಲ್ಯ ಲಾಭವುಂಟೆಂಬುದನ್ನು ಹೇಳಬೇಕಾದದ್ದೇ ಇಲ್ಲ.

1. ದೇವರು ಒಬ್ಬನೇ; ಆತನು ನಿತ್ಯನು; ಆತನೊಬ್ಬನೇ ಪರಮಾರ್ಥ ಸತ್ಯವು ಆತನನ್ನು ಬಿಟ್ಟರೆ ಮತ್ತೆ ಯಾರೂ ಇರುವದೇ ಇಲ್ಲ.

2. ಗುರು ಒಬ್ಬನೇ: ಆತನೇ ಎಲ್ಲಾ ಜೀವರುಗಳಿಗೂ ಮಾರ್ಗದರ್ಶಿ ಆತನು ತನ್ನ ಅನುಯಾಯಿಗಳನ್ನು ಎಡೆಬಿಡದೆ ಬೆಳಕಿನ ಕಡೆಗೆ ಕರೆದೊಯ್ಯುತ್ತಿರುವನು.

3. ಧರ್ಮಗ್ರಂಥವು ಒಂದೇ; ಅದೇ ಪ್ರಕೃತಿಯೆಂಬ ಹಸ್ತಲಿಖಿತ ಪುಸ್ತಕವು. ವಾಚಕನಿಗೆ ಜ್ಞಾನದ ಬೆಳಕನ್ನು ಕೊಡುವ ಗ್ರಂಥವು ಅದೊಂದೇ.

4. ಧರ್ಮವು ಒಂದೇ; ಧ್ಯೇಯದ ಕಡೆಗೇ, ಅತ್ತಿತ್ತ ಚಲಿಸದೆ, ಸನ್ಮಾರ್ಗದಲ್ಲಿ ನಡೆಯುತ್ತಿರುವದೇ ಆ ಧರ್ಮವು. ಪ್ರತಿಯೊಬ್ಬನ ಜನ್ಮವೂ ಅದರಿಂದ ಸಾರ್ಥಕವಾಗುತ್ತದೆ.

5. ಕರ್ತವ್ಯಕರ್ಮವು ಒಂದೇ; ಒಬ್ಬರನ್ನೊಬ್ಬರು ಪ್ರೀತಿಸುವದೇ ಆ ಕರ್ತವ್ಯವು. ಇದನ್ನು ನಿಃಸ್ವಾರ್ಥವಾದ ಮನಃಸಾಕ್ಷಿಗೆ ಅನುಗುಣವಾಗಿ ನ್ಯಾಯವಾದ ಪಥವನ್ನರಿತು ನಡೆಯಿಸಬೇಕಾಗಿರುತ್ತದೆ.

6. ನಿಜವಾದ ಭ್ರಾತೃತ್ವವು ಒಂದೇ; ಮಾನವರೆಲ್ಲರೂ ಅಣ್ಣತಮ್ಮಂದಿರು. ಇದನ್ನರಿತರೆ ಭೂಮಿಯಲ್ಲಿರುವವರಿಗೆಲ್ಲ ಈಶ್ವರನೊಬ್ಬನೇ ತಂದೆಯಾಗಿರುವನು.

7. ನೀತಿಯು ಒಂದೇ; ಪ್ರೇಮವೇ ಅದು. ಸ್ವಾರ್ಥತ್ಯಾಗದಿಂದ ಅದು ಜನಿಸುತ್ತದೆ, ಪರೋಪಕಾರಗಳಿಂದ ಅದು ವಿಕಾಸವಾಗುತ್ತದೆ.

8. ಸ್ತೋತ್ರಮಾಡತಕ್ಕದ್ದು ಒಂದೇ, ಸೌಂದರ್ಯವೇ ಅದು. ಅದು ತನ್ನ ಆರಾಧಕರನ್ನು ದೃಷ್ಟದಿಂದ ಅದೃಷ್ಟಕ್ಕೆ ಏರಿಸುವದು.

9. ಸತ್ಯವು ಒಂದೇ; ನಮ್ಮ ಒಳಹೊರಗಿನ ಸ್ವರೂಪವನ್ನು ಅರಿತುಕೊಳ್ಳುವದೇ ಅದು. ಅದೇ ಸರ್ವಜ್ಞಾನದ ಸಾರವು.

10. ಸಾಧನಮಾರ್ಗವು ಒಂದೇ. ಮಿಥ್ಯಾತ್ಮನನ್ನು ಸತ್ಯಾತ್ಮನಲ್ಲಿ ಮುಳುಗಿಸುವದೇ ಅದು. ಆದರಿಂದ ಮರ್ತ್ಯನು ಅಮೃತನಾಗುವನು, ಅದೇ ಪೂರ್ಣಸಿದ್ಧಿ.

★★★★★

# ಮುಸಲಮಾನ ಸಾಧ್ವಿ ರಬಿಯಾ

**- ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು**

ರಬಿಯಾ ಸಾಧ್ವಿಯು ಬಸರಾದಲ್ಲಿ ಒಂದು ಬಡ ಮುಸಲಮಾನ ಕುಟುಂಬದಲ್ಲಿ ಹುಟ್ಟಿಗಳು, ಆಕೆಯ ತಾಯಿತಂದೆಗಳು ಅವಳಿನ್ನೂ ಸಣ್ಣವಳಾಗಿರುವಾಗಲೇ ಕಾಲವಶರಾಗಿದ್ದರು. ಹೊಟ್ಟೆಗಿಲ್ಲದ ಕಾಲದಲ್ಲಿ ಯಾವನೋ ಒಬ್ಬ ದುಷ್ಟನು ಆಕೆಯನ್ನು ಮರುಳುಗೊಳಿಸಿ ಒಬ್ಬ ಹಣಗಾರನಿಗೆ ಮಾರಿಬಿಟ್ಟನು. ಹೀಗೆ ಗುಲಾಮಳಾದ ರಬಿಯಾಳಿಗೆ ಬಾರಿಬಾರಿಗೂ ಆಯಜಮಾನನಿಂದ ತೊಂದರೆಗಳು ಒದಗುತ್ತಿದ್ದವು. ಆಕೆಯು ಅದೆಲ್ಲವನ್ನೂ ಸಹಿಸಿಕೊಂಡು ಪ್ರತಿದಿನವೂ ಏಕಾಂತದಲ್ಲಿ ಈಶ್ವರನ ಮುಂದೆ ತನ್ನ ದುಃಖವನ್ನು ಹೇಳಿಕೊಂಡು ಗೋಳಿಡುತ್ತಿದ್ದಳು.

ಹಣಗಾರನಾದ ಯಜಮನನು ತನಗೆ ಕೊಡುತ್ತಿದ್ದ ತೊಂದರೆಗಳನ್ನು ತಡೆಯಲಾರದೆ ಒಂದು ದಿನ ರಬಿಯಳು ಅವನ ಮನೆಯಿಂದ ತಪ್ಪಿಸಿಕೊಂಡು ಗುಟ್ಟಿನಿಂದ ಹೊರಗೆ ಬಂದಳು; ಆದರೆ ಅವಳ ಕೆಲಸವು ದೇವರ ಮನಸ್ಸಿಗೆ ಒಪ್ಪಾಗಲಿಲ್ಲವೆಂದು ತೋರುತ್ತದೆ. ಅವಳು ಸ್ವಲ್ಪ ದೂರ ಹೋಗುವಷ್ಟರಲ್ಲಿ ಎಡವಿಬಿದ್ದು, ಬಲಗೈಯನ್ನು ಮುರಿದುಕೊಂಡಳು. ಹೀಗೆ ಒಂದು ಕಷ್ಟವನ್ನು ಪರಿಹರಿಸಿಕೊಳ್ಳುವದರೊಳಗೆ ಮತ್ತೊಂದು ಕಷ್ಟವು ಆಕೆಗೆ ಗಂಟುಬಿತ್ತು. ಆಕೆಯು ದಿಕ್ಕು ತೋಚದವಳಾಗಿ ''ಹೇ ದಯಾಘನನೆ, ತಾಯಿತಂದೆಗಳಿಲ್ಲದ ತಬ್ಬಲಿಯಾಗಿ ಗುಲಾಮಗಿರಿಯಲ್ಲಿ ಸಿಕ್ಕಿಬಿದ್ದು ಹಗಲೂ ಇರುಳೂ ದುಡಿದು ದುಡಿದು ಹೇಗೋ ಜೀವನವನ್ನು ಮಾಡಿಕೊಂಡಿದ್ದೆನು. ಈಗ ಕೆಲಸಮಾಡುವ ಕೈಯು ಮುರಿದುಹೋಯಿತಲ್ಲ! ನನಗೆ ಈಗ ಏನು ಮಾಡಬೇಕೆಂಬುದೇ ತೋರಲೊಲ್ಲದು. ನಿನಗೆ ನನ್ನ ಮೇಲೆ ದಯೆಯಿಲ್ಲವೇನು? ಧಣಿಯೇ, ನನ್ನ ಮೇಲೆ ನಿನಗೆ ಅಸಮಾಧಾನವೇನು? ಹೇಳು?'' ಎಂದು ಈಶ್ವರನಲ್ಲಿ ಮೊರೆಯಿಟ್ಟಳು. ರಬಿಯಳ ಈ ಕಾತರವಾಣಿಯು ಪರಮಾತ್ಮನನ್ನು ಮುಟ್ಟಿತು. ದೀನದಯಾಳುವಾದ ಭಗವಂತನು ಕೂಡಲೆ ''ಮಗಳೆ, ಚಿಂತಿಸಬೇಡ, ನಿನ್ನ ಸಂಕಟವೆಲ್ಲ ಇಷ್ಟರಲ್ಲಿಯೇ ದೂರವಾಗು ವದು ನಿನ್ನ ಮಹಿಮೆಯು ಭೂಲೋಕದಲ್ಲೆಲ್ಲ ಹರಡುವದು, ದೇವತೆಗಳು ಕೂಡ ನಿನ್ನನ್ನು ಆದರಿಸುವರು'' ಎಂದು ಸಂತಯಿಸಿದನು.

ಅಮಾವಾಸ್ಯೆಯ ಕಗ್ಗತ್ತಲೆಯ ದಿನವು ಮುಗಿದ ಮೇಲೆಯೇ ಶುಕ್ಲ ಪಕ್ಷದ ಬೆಳ್ದಿಂಗಳು ಮೊದಲಾಗುವದಲ್ಲವೆ? ಅದರಂತೆ ರಬಿಯಳ ಕಷ್ಟಗಳು ಕೊನೆಮುಟ್ಟಿ ಈಗ ಮನಸ್ಸಿನಲ್ಲಿ ಸ್ವಲ್ಪ ಸಮಾಧಾನವು ಮೂಡುವದಕ್ಕಾರಂಭಿಸಿತು. ಆಕೆಯು ಮತ್ತೆ ಸಾಹುಕಾರನ ಮನೆಯನ್ನು ಹೊಕ್ಕಳು. ಅಂದಿನಿಂದ ಅವಳ ಜೀವನಕ್ರಮವೇ ಮಾರ್ಪಟ್ಟಿತು. ಅವಳು ಯಾವ ಕೆಲಸವನ್ನು ಮಾಡುತ್ತಿರಲಿ, ಭಗವಂತನ ಧ್ಯಾನವನ್ನು ಮಾತ್ರ ತಪ್ಪದೆ ಮಾಡಹತ್ತಿದಳು. ಈ ನಿರಂತರಭಜನೆಯ ಪ್ರಭಾವದಿಂದ ಅವಳ ಮುಖದ ತೇಜಸ್ಸು ಹೆಚ್ಚಿತು. ಒಂದು ದಿನ ರಾತ್ರಿ ಸರಿಹೊತ್ತಿನಲ್ಲಿ ಆಕೆಯು ತನ್ನ ಕೊಠಡಿಯಲ್ಲಿ ಮೊಳಕಾಲೂರಿ ಕುಳಿತು, ಆರ್ತಸ್ವರದಿಂದ ಪರಮಾತ್ಮನ ಪ್ರಾರ್ಥನೆಯನ್ನು ಮಾಡುತ್ತಿದ್ದಳು; ಅದೇಕೋ, ಮನೆಯ ಯಜಮಾನನಿಗೆ ಎಚ್ಚರವಾಯಿತು. ಕರುಣೋತ್ಪಾದಕವಾದ ಮಧುರ ಸ್ವರದ ಆ ಕೀರ್ತನೆಯನ್ನು ಕೇಳಿ ರಬಿಯಳ ಧ್ವನಿಯಿರಬೇಕೆಂದೂಹಿಸಿ ಕೂಡಲೆ ಅವನು ಆ ಕೊಠಡಿಯ ಬಾಗಿಲ ಬಳಿಗೆ ಬಂದನು. ಬಾಗಿಲು ಸಂದಿನಲ್ಲಿ ಇಣಿಕಿ ನೋಡುತ್ತಾನೆ, ಒಳಗೆಲ್ಲ ಅಲೌಕಿಕವಾದ ಪ್ರಕಾಶವು ತುಂಬಿ ಕೊಂಡಿದೆ! ''ನನ್ನ ಸ್ವಾಮಿಯೆ, ನಾನು ಈಗ ನಿನ್ನ ಅಪ್ಪಣೆಯಂತೆಯೇ ನಡೆಯುತ್ತಿರುವೆನು. ಆದರೆ ಎಷ್ಟು ಕಾಲ ನಿನ್ನ ಧ್ಯಾನದಲ್ಲಿಯೇ ಇರಬೇಕೆಂದು ನನಗೆ ಮನಸ್ಸಿನಲ್ಲಿರುವದೋ ಅಷ್ಟು ಮಟ್ಟಿಗೆ ನಿನ್ನ ಧ್ಯಾನದಲ್ಲಿ ಕಾಲವನ್ನು ಕಳೆಯಲಾಗುವಹಾಗಿಲ್ಲ. ಎಷ್ಟಾದರೂ ನಾನು ಖರೀದಿಯಾದ ಗುಲಾಮಳು; ಈ ಗುಲಾಮಗಿರಿಯಲ್ಲಿ ನನಗೆ ಬಿಡುವಾದರೂ ಎಲ್ಲ ಬಂದೀತು?''

ದೀನಬಂಧುವಾದ ಪರಮಾತ್ಮನು ರಬಿಯಳ ಈ ಪ್ರಾರ್ಥನೆಯನ್ನು ಮನದಂದು ಆಕೆಯ ಯಜಮಾನನ ಹೃದಯವನ್ನು ಕರಗಿಸಿದನು. ಆಕೆಯ ತೇಜಃಪುಂಜವಾದ ಮಂಜುಲಮೂರ್ತಿಯನ್ನು ಕಂಡು, ಆ ಭಕ್ತಿಪೂರ್ಣವಾದ ಪ್ರಾರ್ಥನೆಯನ್ನು ಕೇಳಿದ ಆತನಿಗೆ ಇನ್ನು ಆಕೆಯನ್ನು ತನ್ನ ಸೇವಾವೃತ್ತಿಯಲ್ಲಿ ತಡೆದಿಟ್ಟುಕೊಳ್ಳುವದಕ್ಕೆ ಆಗದೆ ಹೋಯಿತು. ಅಂದಿನಿಂದಲೇ ಅವಳನ್ನು ದಾಸ್ಯದಿಂದ ಬಿಡುಗಡೆಮಾಡಿಬಿಟ್ಟನು! ರಬಿಯಳು ಇನ್ನು ಮೇಲೆ ಭಗವಂತನ ಭಜನಧ್ಯಾನಗಳಿಂದಲೇ ಕಾಲವನ್ನು ಕಳೆಯಲಾರಂಭಿಸಿದಳು.

ಈ ಕಾಲದಲ್ಲಿ ರಬಿಯಳ ಮನಸ್ಸು ಹೇಗಿದ್ದಿತೆಂಬುದನ್ನು ಆಕೆಯ ಒಂದು ಪ್ರಾರ್ಥನೆಯು ಸೂಚಿಸುವದು: ''ನನ್ನ ಸ್ವಾಮಿಯೆ, ನೀನು ನನ್ನ ಸರ್ವಸ್ವವಾಗಿ ರುವೆ; ನನಗೆ ಮತ್ತೇನೂ ಬೇಕಿಲ್ಲ. ನಾನು ನರಕಭೀತಿಯಿಂದ ನಿನ್ನ ಸೇವೆಯನ್ನು

ಮಾಡುತ್ತಿದ್ದರೆ, ನನ್ನನ್ನು ಧಗಧಗಿಸುತ್ತಿರುವ ನರಕದ ಅಗ್ನಿಕುಂಡದಲ್ಲಿ ಹಾಕಿಬಿಡು; ಸ್ವರ್ಗದ ಆಸೆಯಿಂದ ನಿನ್ನ ಸೇವೆಯನ್ನು ಮಾಡುತ್ತಿದ್ದರೆ ಸ್ವರ್ಗದ ಬಾಗಿಲನ್ನು ಮುಚ್ಚಿ ಬಿಡು; ಹಾಗಲ್ಲದೆ ನಾನು ನಿನ್ನನ್ನು ನಿನಗಾಗಿಯೇ ನಿಜವಾಗಿ ಸೇವೆ ಮಾಡುತ್ತಿದ್ದರೆ ಕೂಡಲೆ ಬಂದು ನಿನ್ನವಳನ್ನಾಗಿ ಮಾಡಿಕೊಂಡು ಬಿಡು. ಎಂಥ ನಿಷ್ಕಾಮ ಭಕ್ತಿಯಿದು!

ಒಂದು ದಿನ ರಾತ್ರೆ, ಹೊರಗೆ ಎಲ್ಲೆಲ್ಲಿಯೂ ಬೆಳದಿಂಗಳು ಹರಡಿದೆ. ಆದರೆ ರಬಿಯಳು ಮಾತ್ರ ತನ್ನ ಗುಡಿಸಿಲೊಳಗೆ ಸೇರಿಕೊಂಡು ಮತ್ತೊಂದು ಬಗೆಯ ದಿವ್ಯಸೃಷ್ಟಿಯ ಬೆಳದಿಂಗಳ ಆನಂದವನ್ನು ಅನುಭವಿಸುತ್ತಿದ್ದಾಳೆ. ಆ ಸಮಯಕ್ಕೆ ಒಬ್ಬ ಸ್ತ್ರೀಯು ಒಂದು ರಬಿಯಾ! ಹೊರಗೆ ಬಂದು ನೋಡು! ರಾತ್ರೆಯು ಎಷ್ಟ ಮನೋಹರವಾಗಿದೆ!'' ಎಂದು ಹೊರಗಿನಿಂದಲೆ ಕೂಗಿದಳು, ರಬಿಯಳು ಅಮ್ಮಾ, ನೀನು ಒಂದು ಸಲ ನನ್ನ ಅಂತಃಕರಣದೊಳಕ್ಕೆ ಬಂದು ನೋಡು, ಅಲ್ಲಿ ಎಂಥ ಪ್ರಪಂಚಾತೀತವಾದ ವಿಚಿತ್ರವಾದ ಸೌಂದರ್ಯವಿದೆ!'' ಎಂದಳು.

ರಬಿಯಳು ಹಿಜರಿ 135 ರಲ್ಲಿ ಭಗವದ್ಧ್ಯಾನದಲ್ಲಿ ಲೀನಳಾಗಿ ತನ್ನ ಕೀರ್ತಿ ಶರೀರವನ್ನು ಈ ಲೋಕದಲ್ಲಿಟ್ಟು ಪರಮಾತ್ಮನ ಸನ್ನಿಧಿಗೆ ತೆರಳಿದಳು.

★★★★★

# ಬಾಬಿಪಂಥ[1]

**- ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು**

ಸೂಫಿಗಳಿಗೂ ಮುಸಲ್ಮಾನರಲ್ಲಿ ಒಂದು ಮುಖ್ಯಪಂಗಡವಾದ ಷಿಯಾಪಂಥದವರಿಗೂ ಒಂದು ತಾರತಮ್ಯವಿರುವಂತೆ ತೋರುವದು. ಸೂಫಿಗಳು ಪೈಗಂಬರರೆಂಬ ಜಗದ್ಗುರುಗಳನ್ನು ಅಷ್ಟಾಗಿ ಹೆಚ್ಚಿನ ಸ್ಥಾನದಲ್ಲಿಟ್ಟುಕೊಂಡಿರುವಂತೆ ತೋರುವದಿಲ್ಲ. ಆದರೆ ಷಿಯಜನರು ಹಾಗಲ್ಲ, ಅವರಿಗೆ ತಮ್ಮ 'ಇಮಾಮ'ರಲ್ಲಿರುವಷ್ಟು ಪೂಜ್ಯತೆಯು ಸುನ್ನಿಗಳಿಗೆ ತಮ್ಮ ಖಲೀಫರಲ್ಲಿ ಕೂಡ ಇರುವದಿಲ್ಲ.

ಖಲೀಫರನ್ನು ಸುನ್ನಿಗಳು ತಮ್ಮ ಆಚಾರವಿಚಾರಗಳನ್ನು ಕಾಪಾಡುವದಕ್ಕಾಗಿ ಬಹುಮಂದಿ ಸೇರಿ ಆರಿಸಿರುವ ಧರ್ಮರಕ್ಷಕರೆಂದು ಮಾತ್ರ ಒಪ್ಪಿಕೊಂಡಿರುತ್ತಾರೆ. ಆದ್ದರಿಂದ ಖಲೀಫರ ಸ್ಥಾನವು ಲೌಕಿಕವಾಯಿತು; ಅವರ ಉದ್ಯೋಗವು ಕೂಡ ಧರ್ಮನಿಯಮಗಳನ್ನು ರಕ್ಷಣೆಮಾಡುವ ನ್ಯಾಯಸ್ಥಾನಕ್ಕೆ ಸೇರಿದಂತಾಗಿರುವದೇ ಹೊರತು ದೈವಿಕವೇನೂ ಅಲ್ಲ. ಷಿಯಗಳು ತಮ್ಮ ಇಮಾಮರು ಆಯಾ ಸ್ಥಾನದಲ್ಲಿ ಈಶ್ವರನಿಯುಕ್ತರಾಗಿರುವದೆಂದು ನಂಬುತ್ತಾರೆ; ಅವರಲ್ಲಿ ಹೆಚ್ಚುಕಡಿಮೆಯಾಗಿ ಸರ್ವಜ್ಞತ್ವವೂ ಸರ್ವಶಕ್ತಿತ್ವವೂ ಇರುವವೆನ್ನುವಷ್ಟು ಗೌರವವನ್ನಿಟ್ಟುಕೊಂಡಿರುತ್ತಾರೆ. ಸುನ್ನಿಗಳ ಮೊದಲನೆಯ ಮೂರು ಮಂದಿ ಖಲೀಫರು ಮಹಮ್ಮದನ ತರುವಾಯ ಗುರುಪಟ್ಟಕ್ಕೆ ಬರಬೇಕಾಗಿದ್ದ ಇಮಾಮನ ಅಳಿಯನಾದ ಅಲಿಯ ಅಧಿಕಾರವನ್ನು ಬಲಾತ್ಕಾರದಿಂದ ಕಸಿದುಕೊಂಡು ಅಲಿಯ ವಂಶದ ಇಮಾಮರನ್ನು ಹಿಂಸಿಸಿ ಕೊಂದ ಅಯೋಗ್ಯರೆಂದು ಷಿಯಗಳು ಅವರಿಗೆ ಹೃತ್ಪೂರ್ವಕವಾಗಿ ಶಾಪವನ್ನು

---

1. ಈ ಲೇಖನಕ್ಕೆ ಪ್ರೊಫೆಸರ್ ಬ್ರೌನ್ (Professor Browne) ಎಂಬವರ ಒಂದಾನೊಂದು ಬರಹವೂ ರೆವೆರೆಂಡ್ ಕ್ಯಾನನ್‌ಸೆಲ್ (The Rev. Canon Sell, D.D) ಎಂಬವರ 'ಇಸ್ಲಾಂಮತದ ವಿಚಾರಗಳು' (Studies in Islam) ಎಂಬ ಗ್ರಂಥವೂ ಮುಖ್ಯವಾದ ಆಧಾರವಾಗಿವೆ. ಬಾಹಉಲ್ಲನ ಪಂಥದವರ ಕಣ್ಣಿನಿಂದ ಇದರ ವಿವರವನ್ನು ತಿಳಿಯಬೇಕೆಂಬ ಕುತೂಹಲವುಳ್ಳವರು ನ್ಯೂಯಾರ್ಕ್‌ನಗರಿಯಲ್ಲಿ ಸ್ಥಾಪಿತವಾಗಿರುವ ಅಭಿನವೇತಿಹಾಸ ಸಮಾಜದವರು ಪ್ರಕಟಿಸಿರುವ Living Pictures (ಜೀವಂತ ಚಿತ್ರಗಳು) ಎಂಬ ಗ್ರಂಥವನ್ನು ಓದಬೇಕು.

ಹಾಕುತ್ತಾರೆ. ಆದರೆ ಇಮಾಮರೆಂಬ ಜಗದ್ಗುರುಗಳನ್ನು ಮಾತ್ರ ಅತ್ಯಂತ ಭಯಭಕ್ತಿಗಳಿಂದ ಆರಾಧಿಸುತ್ತಾರೆ.

ಅಲಿಯು ಮತ್ತು ಅವನ ಇಬ್ಬರು ಮಕ್ಕಳಾದ ಹಸನ್, ಹುಸೇನ್- ಈ ಮೂವರೂ ಈ ಒಳಪಂಗಡಗಳ ಜಗಳಕ್ಕಾಗಿ ಕೆರ್ಬಾಲಕದನದಲ್ಲಿ ಮಡಿದಂದಿನಿಂದ ಸುನ್ನಿಗಳ ಖಲೀಫರದಲ್ಲಿ ಷಿಯಾಜನರಿಗೆ ದ್ವೇಷವೂ ಇಮಾಮರಲ್ಲಿ ಮಿತಿ ಮೀರಿದ ಭಕ್ತಿಯೂ ಮತ್ತಷ್ಟು ಬೇರುಬಿಟ್ಟುಕೊಂಡವು. ಈ ಇಸ್ಲಾಮಿನ ಕುರುಕ್ಷೇತ್ರಯುದ್ಧವನ್ನೇ ಷಿಯಜನರು 'ಮೊಹರಂ' ಎಂಬ ಹೆಸರಿನಿಂದ ಆಡಿ ದುಃಖ ಸೂಚನೆಮಾಡುತ್ತಾರೆ. ಶುಭ್ರವಾದ ವಸ್ತ್ರಗಳನ್ನುಟ್ಟು, ಗೋಪುರಗಳಂತಿರುವ ತಾಸಿಯಗಳನ್ನು ಉತ್ಸವರೂಪವಾಗಿ ಹೊತ್ತುಕೊಂಡು ಹೋಗುವದು, 'ಹಸನ್!' 'ಹುಸೇನ್!' ಎಂದು ಗಟ್ಟಿಯಾಗಿ ಕೂಗುತ್ತಾ ತಮ್ಮ ಎದೆಗಳನ್ನು ಬಡಿದುಕೊಳ್ಳುತ್ತಾ ದುಃಖವನ್ನು ಸೂಚಿಸುವದು- ಇವುಗಳನ್ನು ಪ್ರತಿವರ್ಷವೂ ಆಚರಿಸುತ್ತಾರೆ, ನಮ್ಮ ದೇಶದ ಹಿಂದುಗಳಲ್ಲಿ ಕೆಲವರು ಮೊಹರಂನ ಈ ಕಥೆಯನ್ನರಿಯದೆ ಇದೊಂದು ಬಗೆಯ ಸಂತೋಷದ ಹಬ್ಬವೆಂದು ತಿಳಿದದ್ದಲ್ಲದೆ ಆಲಾಬಿ ದೇವರಿಗೆ ಸಕ್ಕರೆ ಓದಿಸುವದು, ತಾವೂ ಲಾಡಿಕಟ್ಟಿಕೊಳ್ಳುವದು, ಫಕೀರನವೇಷ ಹುಲಿವೇಷವೇ ಮುಂತಾದವುಗಳನ್ನು ಹಾಕಿಕೊಳ್ಳುವದು ಹೀಗೆಲ್ಲ ಹುಚ್ಚಾಬಟ್ಟೆಯಾಗಿ ಕುಣಿದಾಡುವರು. ಇದಂತಿರಲಿ, ಮೊಹರಂ ಎಂಬುದು ಮೂಲದಲ್ಲಿ ಇಮಾಮರಿಗಾಗಿ ದುಃಖವನ್ನೂ ಭಕ್ತಿಯನ್ನೂ ತೋರಿಸುವ ಒಂದಾನೊಂದು ಧರ್ಮಕಾರ್ಯವೆಂಬುದು ಇಲ್ಲಿ ನೆನಪಿಡಬೇಕಾದದ್ದು.

ಈ ಇಮಾಮರ ಪರಂಪರೆಯಲ್ಲಿ ಹನ್ನೆರಡು ಮಂದಿ ಜಗದ್ಗುರುಗಳು ಆಗಿ ಹೋದರು. ಹನ್ನೊಂದನೆಯ ಹಸನ್ ಅಸ್ಕಾರಿ ಎಂಬಾತನು ಕಾಲವಾದ ಮೇಲೆ ಅವನ ಮಗನು ಹನ್ನೆರಡನೆಯ ಇಮಾಮನಾದನು.ಈತನು ಮೊದಲಿಂದಲೂ ಗುಪ್ತನಾಗಿ ಯೇ ಇರುತ್ತಿದ್ದು ತನ್ನ ಆಪ್ತರ ಮೂಲಕವಾಗಿಯೇ ವ್ಯವಹಾರಮಾಡುತ್ತಿದ್ದನು. ಈ ಆಪ್ತರಿಗೆ ಅಬ್ವಾಬ್ (ದ್ವಾರ) ಎಂಬ ಹೆಸರಿತ್ತು. ಈತನು ಕ್ರಿ.ಶ.940 ರ ಸುಮಾರಿನಲ್ಲಿ ಮಾನವರ ಕಣ್ಣಿಗೆ ಅಗೋಚರನಾದನು; ಈತನು ಜಬಲ್ಕ ಎಂಬ ಗುಪ್ತನಗರಿಯಲ್ಲಿ ಈಗಲೂ ಇರುವನೆಂದೂ ಮುಂದೆ ಅಧರ್ಮವು ಹೆಚ್ಚಿದಾಗ ಪ್ರಕಟನಾಗಿ ಧರ್ಮರಾಜ್ಯವನ್ನು ಸಂಸ್ಥಾಪನೆಮಾಡುವನೆಂದೂ ಷಿಯಪಂಥದವರು ನಂಬುತ್ತಾರೆ. ಆದ್ದರಿಂದ ಈತನಿಗೆ ಇಮಾಮಮಹಿಮ – ಭವಿಷ್ಯದ್ರಕ್ಷನು – ಎಂದು

ಹೆಸರಾಯಿತು. ಮಹ್ದಿಯು ಪೂರ್ಣಗುಪ್ತನಾದ ಮೇಲೂ ಅವನ 'ದ್ವಾರ'ಗಳು ಒಬ್ಬರಾಗುತ್ತಲೂ ಒಬ್ಬರು ಅವನ ವಿಚಾರವನ್ನು ಜನರಿಗೆ ತಿಳಿಸುತ್ತಲೇ ಇದ್ದರು. ಕಟ್ಟಕಡೆಯ ದ್ವಾರವಾಗಿದ್ದ ಅಬುಲ್‌ಹುಸೇನ್ ಎಂಬಾತನು ಸಾಯುವಾಗ ಮತ್ತೊಬ್ಬ ದ್ವಾರನನ್ನು ಸ್ಥಾಪನೆಮಾಡಲಿಲ್ಲ. ಕೆಲವು ವರ್ಷಗಳವರೆಗೆ ಮಹ್ದಿಯ ಸಮಾಚಾರವು ಜನರಿಗೆ ತಿಳಿಯುವದಿಲ್ಲವೆಂದೂ ಇದು ಭಗವಂತನ ಸಂಕಲ್ಪವೆಂದೂ ಹೇಳಿ ಆತನು ಪ್ರಾಣವನ್ನು ಬಿಟ್ಟನು. ಈ ಮಹ್ದಿಯ ನಂಬಿಕೆಯೇ ಪರ್ಷಿಯದೇಶದ **ಬಾಬಿಮತ**, ಪಂಜಾಬಿನ **ಅಹಮ್ಮದೀಯ ಪಂಥ** – ಇವೆರಡರ ಉಗಮಕ್ಕೆ ಕಾರಣವಾಯಿತು.

ಬಾಬಿಮತವನ್ನು ಮಿರ್ಸ ಆಲಿ ಮಹಮ್ಮದ್ ಎಂಬಾತನು ಕ್ರಿ.ಶ. 1844 ರಲ್ಲಿ ಸ್ಥಾಪಿಸಿದನು. ಇವನು ದಕ್ಷಿಣಪರ್ಷಿಯದಲ್ಲಿ ಷಿರಾಸ್‌ಪಟ್ಟಣದಲ್ಲಿದ್ದ ಕ್ರಿ.ಶ. 1820 ರಲ್ಲಿ ಹುಟ್ಟಿದನು. ಜವಳಿವ್ಯಾಪಾರಿಯ ಮನೆಯಲ್ಲಿ ಹುಟ್ಟಿದನಾದರೂ ಇವನು ಬಾಲ್ಯದಿಂದಲೂ ಧ್ಯಾನ, ವಿಚಾರ – ಇವುಗಳಲ್ಲಿಯೇ ಮಗ್ನನಾಗಿರುತ್ತಿದ್ದನು. ಈತನು ಯಾತ್ರೆಗೆಂದು ಮೇಲೆ ಹೇಳಿದ ಕೆರ್ಬಾಲಕ್ಕೆ ಬಂದು ಅಲ್ಲಿ ಹಾಜಿ ಸೈಯದ್ ಕಾಸಿಮ್ ಎಂಬ **ಷೇಖಿಪಂಥದ**[1] ಗುರುವಿನ ಬಳಿಯಲ್ಲಿ ಶಿಷ್ಯವೃತ್ತಿಗೆಂದು ಕೆಲವು ಕಾಲವಿದ್ದು ತನ್ನೂರಿಗೆ ಬಂದುಬಿಟ್ಟನು. ಆಮೇಲೆ ಕುರಾನಿನ ಸೂರತು ಯುಸುಪ್ ಮುಂತಾದ ಭಾಗಗಳ ಮೇಲೆ ವ್ಯಾಖ್ಯಾನವನ್ನು ಬರೆದನು. ಆ ವ್ಯಾಖ್ಯಾನದಲ್ಲೆಲ್ಲ ಪರಮೇಶ್ವರಪ್ರಸಾದಕ್ಕೆ ಪಾತ್ರನಾಗಿದ್ದ ಇಮಾಮನ ಅನುಗ್ರಹದಿಂದಲೇ ತಾನು ಬರೆದಿರುವದಾಗಿ ಸೂಚಿಸಿರುತ್ತಾನಂತೆ.

ಷೇಖಿಪಂಥದವರ ನಂಬಿಕೆಗೂ ಷಿಯಪಂಥವರ ನಂಬಿಕೆಗೂ ಇರುವ ಮುಖ್ಯತಾರತಮ್ಯವೇನೆಂದರೆ ಷಿಯಜನರು (1) ಪರಮೇಶ್ವರನು ಒಬ್ಬನೇ, (2) ಆತನು ನ್ಯಾಯಪಕ್ಷಪಾತಿ, (3) ತನ್ನ ತತ್ತ್ವವನ್ನು ತಿಳಿಸುವುದಕ್ಕೆ ನಬಿಯನ್ನು ಕಳುಹಿಸುವನು, (4) ಇಮಾಮರು ಜಗದ್ಗುರುಪೀಠಕ್ಕೆ ತಕ್ಕವರು, (5) ಸತ್ತವರನ್ನೆಲ್ಲ ಎಬ್ಬಿಸಿ ಪರಮೇಶ್ವರನು ನ್ಯಾಯದ ತೀರ್ಪನ್ನು ಕೊಡುವನು–ಎಂದು ಐದು ನಂಬಿಕೆಗಳನ್ನು ಇಟ್ಟುಕೊಂಡಿರುತ್ತಾರೆ; ಷೇಖಿಯವರು ಇವುಗಳಲ್ಲಿ ಎರಡನೆ ಐದನೆಯ ನಂಬಿಕೆಗಳನ್ನು ಬಿಟ್ಟು "ನಾಲ್ಕನೆಯ ಅವಲಂಬನ" ಎಂಬ ನಂಬಿಕೆಯೊಂದನ್ನು ಹೊಸದಾಗಿ ಸೇರಿಸಿಕೊಂಡಿದ್ದರು. ಇಮಾಮನ ಅನುಗ್ರಹವನ್ನು

1. ಷೇಕ್ ಅಹ್ಮದ್ ಎಂಬಾತನ ಶಿಷ್ಯರ ಪಂಥಕ್ಕೆ ಶೇಖಿಪಂಥವೆಂದು ಹೆಸರು.

ಜನರಿಗೆ ಕೊಡಬಲ್ಲ ಸಿದ್ಧಪುರುಷನೊಬ್ಬನು ಯಾವಾಗಲೂ ಇರುವನೆಂಬುದೇ ಈ ಅವಲಂಬನದ ನಂಬಿಕೆಯು. ಹಾಜಿಸೈಯದ್ ಕಾಸಿಮನು ಸಾಯುವ ವೇಳೆಯಲ್ಲಿ ತನ್ನ ತರುವಾಯ 'ಸತ್ಯವು ಪ್ರಕಟವಾಗುವದು; ಒಬ್ಬಾನೊಬ್ಬ ತರುಣನು ಉದಿಸುವನು' ಎಂದು ಹೇಳಿಹೋಗಿದ್ದನಂತೆ; ಈ ಸತ್ಯವು ಅಥವಾ ನಾಲ್ಕನೆಯ ಅವಲಂಬನವು ತಾನೇ ಎಂದು ಮಿರ್ಸ ಅಲಿಯು ತನ್ನ ಇಪ್ಪತ್ತು ನಾಲ್ಕನೆಯ ವಯಸ್ಸಿನಲ್ಲಿ ಹೇಳಿಕೊಂಡನು; ಮುಲ್ಲಹುಸೇನ್ ಎಂಬ ಷೇಖಿಯು ಇದನ್ನು ನಂಬಿ ಎಲ್ಲರಿಗೂ ಈ ವಾರ್ತೆಯನ್ನು ಹರಡಿದನು. ''ಇಮಾಮ್ ಮಹ್ದಿಯೊಡನೆ ಸಂಭಾಷಣೆಮಾಡಿ ಪರಮೇಶ್ವನಪ್ರಾಪ್ತಿಯ ಸಾಧನವನ್ನು ಅರಿತುಕೊಳ್ಳಬೇಕೆಂದು ಇಚ್ಛಿಸುವವರು ನನ್ನ ದ್ವಾರವೇ ಪ್ರಯತ್ನಿಸಬೇಕು, ನಾನೇ ಮಹ್ದಿಯ **ಬಾಬನು**(ದ್ವಾರವು)'' ಎಂದು ಆಲಿಯು ಪ್ರಕಟಿಸಿದನು. ಈ ಕಾರಣದಿಂದಲೇ ಇವನ ಪಂಥಕ್ಕೆ ಬಾಬಿಪಂಥವೆಂದು ಹೆಸರಾಯಿತು.

ಬಾಬನು 1844ರಲಿ ಮೆಕ್ಕಾಯಾತ್ರೆಯನ್ನು ಮಾಡಿದನು. ಮಹಮ್ಮದನಲ್ಲಿಯೂ ಇಮಾಮರಲ್ಲಿಯೂ ಅವನು ತೋರಿಸಿದ ಭಯಭಕ್ತಿಯನ್ನೂ ಅವನ 'ಮುಖದ ತೇಜಸ್ಸನ್ನೂ ನೋಡಿ ಆಸ್ತಿಕರು ಬೆರಗಾದರು. ಆದರೆ ಮುಸಲ್ಮಾನ ಮುಲ್ಲರಿಗೆ ಮಾತ್ರ ಅವನನ್ನು ಕಂಡರೆ ಆಗಲಿಲ್ಲ. ಬಾಬನು ಮುಲ್ಲರ ವಿಷಯಲಂಪಟತೆಯನ್ನೂ ಸರ್ಕಾರದವರ ದುರಾಶೆಯನ್ನೂ ತನ್ನ ಭಾಷಣಗಳಲ್ಲಿ ಉದ್ಘಾಟಿಸುತ್ತಿದ್ದದ್ದರಿಂದ ಅರಮನೆಗುರುಮನೆಗಳೆರಡೂ ಅವನಿಗೆ ವೈರಿಗಳಾದವು. ಗಂಡಸರೂ ಹೆಂಗಸರೂ ಸಮಾನಸ್ವಾತಂತ್ರ್ಯವುಳ್ಳವರು, ಎಲ್ಲಾ ಧರ್ಮಗಳೂ ಪರಮಾತ್ಮನನ್ನು ಕಾಣುವದಕ್ಕೆ ದಾರಿಗಳು-ಎಂದು ಅವನು ಮಾಡಿದ ಬೋಧನೆಗಳು ಸಂಪ್ರದಾಯಸ್ಥರಿಗೆ ವಿರುದ್ಧವಾಗಿ ಕಂಡುಬಂದವು. ಅವನೊಡನೆ ವಾಗ್ವಾದಕ್ಕೆ ಬಂದ ಕೆಲವು ಮುಲ್ಲರು ಅವನ ಸಂಭಾಷಣಕ್ರಮ, ಗ್ರಂಥಗಳಲ್ಲಿ ತೋರಿಬಂದ ಔದಾರ್ಯ-ಮುಂತಾದವುಗಳಿಗೆ ಮೆಚ್ಚಿ ತಾವೂ ಬಾಬಿಗಳಾದರು. ಇದರಿಂದ ಮಿಕ್ಕ ಮುಲ್ಲಗಳು ರೇಗಿ ಬಾಬಿಮತವು ಪ್ರಸಾರವಾಗದಂತೆ ಅದಕ್ಕೆ ಬಗೆಬಗೆಯ ಅಡ್ಡಿಯನ್ನು ತಂದೊಡ್ಡಿದರು; ಸರ್ಕಾರಕ್ಕೆ ಫಿರ್ಯಾದ ಕೊಟ್ಟು ಬಾಬನನ್ನು ಹಿಡಿಸಿ ವಿಚಾರಮಾಡಿಸಿ ಹೊಡೆದು ಬಡಿದು ಖೈದಿಯಲ್ಲಿಟ್ಟರು; ಅವನ ಶಿಷ್ಯರನ್ನು ಹಿಂಸಿಸಿದರು, ಹೊಡೆದರು, ಬಡಿದರು, ಕೊಂದರು.

ಆದರೂ ಬಾಬಿಮತವು ಪ್ರಚಾರವಾಗುತ್ತಲೇ ಬಂತು. ಬಾಬಿ ಅನುಯಾಯಿಗಳ ಸಂಖ್ಯೆಯು ಬೆಳೆಯಿತು; ಅವರೆಲ್ಲರೂ ಆ ಮತಕ್ಕಾಗಿ ಹೋರಾಡಿ ಸರಕಾರದವರನ್ನು ಕೂಡ ಕೆಲವು ಕಾಲ ಅಂಜಿಕೆಯಲ್ಲಿಟ್ಟು ಕೊನೆಗೆ ಸರಕಾರದವರ ಮೋಸದಿಂದ ಸೆರೆಸಿಕ್ಕಿದರು; ತಾವು ನಂಬಿದ್ದ ಮತಕ್ಕಾಗಿ ತಮ್ಮ ಪ್ರಾಣವನ್ನು ಬಲಿಕೊಟ್ಟರು. ಬಾಬನೂ ಅವನ ಮುಖ್ಯಶಿಷ್ಯರೂ ತಮ್ಮನ್ನು ಗಲ್ಲಗೆ ಹಾಕಿದಾಗಲೂ ತಮ್ಮ ಮತವನ್ನು ಬಿಡಲೊಪ್ಪದೆ ಮರಣವನ್ನೇ ಶರಣುಹೊಂದಿದರು. ಬಾಬಿಯು ಮಾಕುದುರ್ಗದಲ್ಲಿ ಸೆರೆಮನೆಯಲ್ಲಿದ್ದಾಗಲೇ 'ಬಯಾನ್' (The Bayon) ಎಂಬ ಧರ್ಮಗ್ರಂಥವನ್ನು ಬರೆದನು. ಅದರ ಉಪದೇಶಗಳು ಹೊರಗಿದ್ದ ತನ್ನ ಶಿಷ್ಯರಿಗೂ ದೊರಕುವಂತೆ ಬಗೆಬಗೆಯಿಂದ ಏರ್ಪಾಡುಮಾಡಿದನು. ಸತ್ಯಕ್ಕಾಗಿ ಹೋರಾಡಿ ಸಂಕಟಪಡುತ್ತಿದ್ದ ತಮ್ಮ ಗುರುವಿನಲ್ಲಿ ನಂಬಿಕೆಯಿಟ್ಟ ಬಾಬಿಗಳನ್ನು ಪ್ರೋತ್ಸಾಹಿಸುವದಕ್ಕೆ ಇದೂ ಕಾರಣವಾಯಿತು. ಕ್ರೈಸ್ತನನ್ನು ಯಹೂದ್ಯರ ಮಾತು ಕೇಳಿ ರೋಮ ಸರ್ಕಾರವು ಕೊಂದಂತೆ ಬಾಬನನ್ನು ಮುಲ್ಲರ ಮಾತನ್ನು ಕೇಳಿ ಪರ್ಷಿಯಾ ಸರ್ಕಾರದವರು ರಾಜಕೀಯ ಕಾರಣದಿಂದ ಕ್ರಿ.ಶ.1850ರಲ್ಲಿ ಗಲ್ಲಿಗೇರಿಸಿದರು. ಕ್ರೈಸ್ತನ ಮರಣದ ತರುವಾಯ ಆತನ ಮತವು ಅಲ್ಲಲ್ಲಿ ಹರಡಿಕೊಂಡಂತೆ ಬಾಬಿಮತವೂ ಈಗ ಅಲ್ಲಲ್ಲಿ ಹರಡಿಕೊಳ್ಳುತ್ತಿದೆ.

ಬಾಬಿಮತದ ಮುಖ್ಯತತ್ತ್ವಗಳನ್ನು ಇಲ್ಲಿ ಸಂಕ್ಷೇಪವಾಗಿ ತಿಳಿಸುವದು ಅಗತ್ಯವು, ''ದೇವರು ಒಬ್ಬನು, ನಿತ್ಯನು, ಕಲ್ಪನಾತೀತನು, ಜಗತ್ತೆಲ್ಲವೂ ಆತನಿಂದಲೇ ಉಂಟಾಗಿ ಆತನಿಂದಲೇ ಇರವನ್ನು ಪಡೆದಿರುವದು. ಆತನನ್ನು ಅರಿಯುವದಕ್ಕೆ ಒಂದಾನೊಂದು ಅಂತರಾಳ ಸಾಧನವು ಬೇಕು; ಇದೇ ಆತನ ಅನಾದಿ ಸಂಕಲ್ಪವು. ಆಯಾ ದೇಶಕಾಲಗಳಲ್ಲಿ ಜನರಿಗೆ ತಿಳಿಯುವ ಯೋಗ್ಯತೆಯಿರುವಷ್ಟು ಮಟ್ಟಿಗೆ ಪರಮಾರ್ಥವನ್ನು ಉಪದೇಶಿಸುವದಕ್ಕೆಂದು ಆತನು ಲೆಕ್ಕವಿಲ್ಲದಷ್ಟು ಗುರುಗಳನ್ನು ಕಳುಹಿಸುತ್ತಾನೆ. ಈ ಗುರುಗಳಲ್ಲೆಲ್ಲಕ್ಕ ಅನಾದಿಸಂಕಲ್ಪವು ತಾರತಮ್ಯದಿಂದ ಪ್ರಕಟವಾಗುತ್ತದೆ. ಹಿಂದುಹಿಂದಿನ ಗುರುಗಳ ಉಪದೇಶವನ್ನು ಮುಂದು ಮುಂದಿನ ಗುರುಗಳು ಪರಿಪೂರ್ತಿಗೊಳಿಸಿ ಮುಂದುವರಿಸುತ್ತಾರೆ. ಇದೇ ಸಂಕಲ್ಪವೇ ಈಗ ಬಾಬನ ಮೂಲಕ ಹೊರತೋರಿಕೊಂಡಿರುತ್ತದೆ, ಇನ್ನು ಮುಂದೆ 'ದೇವರು ಪ್ರಕಾಶಗೊಳಿಸುವ' ಮತ್ತೊಬ್ಬ ಮಹಾಪುರುಷನ ಮೂಲಕವೂ ತೋರಿಕೊಳ್ಳುವದು. ಮನುಷ್ಯನ ಅವ್ಯಕ್ತಶಕ್ತಿಗಳು ವಿಕಾಸವಾಸಂತೆಲ್ಲ

ಅವನಿಗೆ ಪೂರ್ಣತತ್ತ್ವವನ್ನು ಸಾಕ್ಷಾತ್ಕರಿಸಿಕೊಳ್ಳುವ ಸ್ಪಷ್ಟವಾದ ಬೋಧನೆಯನ್ನು ತಾಳ್ಮೆಯಿಂದ ಕೇಳಿ ಆನಂದಿಸುವ ಶಕ್ತಿಯೂ ಹೆಚ್ಚುತ್ತದೆ. ಪರಲೋಕವೆಂಬುದು ಒಂದು ಲೋಕವಲ್ಲ, ಅದು ಒಂದಾನೊಂದು ಸ್ಥಿತಿ. ಬಯಾನಿನಲ್ಲಿ ನಂಬಿಕೆಯಿಟ್ಟವನು ತಿಪ್ಪೆಯ ಮೇಲೆ ಕುಳಿತಿದ್ದರೂ ಅದೇ ಅವನಿಗೆ ಒಂದು ಸಿಂಹಾಸನವು; ಅಜ್ಞಾನವೇ ಅಗ್ನಿಸಂತಾಪನೆಯ ನರಕವು. ಸತ್ತವರನ್ನು ಉಜ್ಜೀವನಗೊಳಿಸಿ ದೇವರು ತೀರ್ಪುಕೊಡುತ್ತಾನೆಂಬ ಮುಸಲ್ಮಾನರ ನಂಬಿಕೆಯ ನಿಜವಾದ ಅರ್ಥವು ಬೇರೆ; ಅನಾದಿಸಂಕಲ್ಪವು ಬೇರೆಬೇರೆಯಾಗಿ ಅವತರಿಸುತ್ತಲೇ ಇರುವದರಿಂದ ಮುಂದಿನ ಪ್ರಾಕಟ್ಯವೇ ಹಿಂದಿನ ಕಲ್ಪಕ್ಕೆ ಕಡೆಯ ದಿನವು, ಅದನ್ನು ನಂಬುವದೇ ಸೇತುವನ್ನು ದಾಟಿದಂತೆ. ಪರಗತಿಯು ಕೊನೆಗೆ ಧರ್ಮಿಷ್ಠರಿಗೆ ಸಿಕ್ಕೇಸಿಗುತ್ತದೆ, ಆದರೆ ಈ ಲೋಕದ ವ್ಯವಹಾರವೇ ಅದಕ್ಕೆ ಆಧಾರ. ಸತ್ತಮೇಲೆ ಯಾವ ಗತಿಯಾಗುವದೋ ದೇವರಿಗೇ ಗೊತ್ತು. ಅದಕ್ಕಾಗಿಯಲ್ಲ. ನಾವು ಧರ್ಮವನ್ನೆ ಮಾಡುವದು, ಧರ್ಮಕ್ಕಾಗಿಯೇ ಧರ್ಮವನ್ನು ಮಾಡಬೇಕು. ಈಶ್ವರನ ಆರಾಧನೆಯನ್ನು ಸದ್ಗತಿಗಾಗಿ ನಾವು ಮಾಡಿದೆವೆಂದರೆ ಈಶ್ವರನಿಗೂ ಸದ್ಗತಿಗೂ ಸಮಪಾಲು ಹಂಚಿದಂತಾಗುವದು; ಆದ್ದರಿಂದ ಕುಂಭೀಪಾಕನರಕವಾದರೂ ಚಿಂತೆಯಿಲ್ಲ, ಪರಮೇಶ್ವರನನ್ನೇ ಆರಾಧಿಸುವೆನೆಂಬ ಸಂಕಲ್ಪವನ್ನು ಮಾಡಿಕೊಳ್ಳಿರಿ'' – ಎಂಬುದೇ ಬಾಬನ ಉಪದೇಶವು.

★★★★★

# ಬಾಹಾ ಉಲ್ಲ್ಹನ ಪಂಥ

**- ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು**

ಮಿರ್ಝಾ ಅಲಿ ಮಹಮ್ಮದನು ಮೊದಲು ತಾನೇ ಹನ್ನೆರಡನೆಯ ಇಮಾಮ್ ಮಹಡಿಯ ಬಾಬನು (ದ್ವಾರವು) ಎಂದು, ಆಮೇಲೆ ತಾನೇ ಆ ಇಮಾಮನೆಂದು, ಹೇಳಿಕೊಂಡದ್ದರಿಂದ ಬಾಬಿಗಳಿಗೂ ಷಿಯಜನರಿಗೂ ವೈಮನಸ್ಯವುಂಟಾದದ್ದನ್ನೂ ಪರ್ಷಿಯ ಸರ್ಕಾರದವರೂ ಬಾಬಿಗಳ ವೈರಿಗಳಾಗಿ ಕೊನೆಗೆ ಬಾಬನನ್ನೇ ಕೊಂದು ಹಾಕಿದ್ದನ್ನೂ ಹಿಂದಿನ ಲೇಖನದಲ್ಲಿ ತಿಳಿಸಿರುತ್ತೇನಷ್ಟೆ. ಬಾಬನನ್ನು ಕೊಂದು ಹಾಕಿದರೆ ಅವನ ಮತವೇ ಇಲ್ಲದಂತಾಗುವದೆಂದು ಸರಕಾರದವರು ನಂಬಿದ್ದರು. ಆದರೆ ಆ ಊಹೆಯು ತೀರ ತಪ್ಪಾಯಿತೆಂಬುದು ಹಿಂದೆ ತಿಳಿಸಿರುವ ಬಾಬಿ ಇತಿಹಾಸದಿಂದಲೇ ಸ್ಪಷ್ಟವಾಗಿರುತ್ತದೆ.

ಇದಕ್ಕೆ ಕಾರಣವೇನೆಂದರೆ ಬಾಬನು ತಾನು ಬೋಧಿಸಿದ ಧರ್ಮಕ್ಕೆ ತಾನೇ ಮುಖ್ಯನೆಂದು ಹೇಳಿಕೊಂಡಿರಲಿಲ್ಲ. 'ಧರ್ಮದ ವ್ಯವಸ್ಥೆಯು **ಏಕತೆ** (Unity) ಯೆಂಬ ಒಂದಾನೊಂದು ನಿತ್ಯಸಂಘಕ್ಕೆ ಸೇರಿರುತ್ತದೆ; ನಾನು ಈ ಸಂಘದ **ಬಿಂದುವು** (Point), ಇದಕ್ಕೆ **ಬೀಜಾಕ್ಷರ**ರೂಪರಾದ ಇನ್ನು ಹದಿನೆಂಟು ಮಂದಿ ಬೇರೆ ಸೇರಿರುತ್ತಾರೆ; ಈ ಬಿಜಾಕ್ಷರಗಳಲ್ಲಿ (Letters of the Living) ಯಾವನಾದರೂ ಒಬ್ಬನು ಸತ್ತರೆ ಅವನ ಮಹಿಮಾತಿಶಯಗಳೆಲ್ಲವೂ ಮತ್ತೊಬ್ಬ ಬಾಬಿಗೆ ಸೇರಿಕೊಳ್ಳುವವು, ಅಲ್ಲಿಂದ ಮುಂದಕ್ಕೆ ಅವನು ಧರ್ಮಮಂಡಲದ ಬೀಜಾಕ್ಷರವಾಗಿರುವನು - ಎಂದು ಅವನು ಬೋಧಿಸುತ್ತಿದ್ದದ್ದರಿಂದ ಅವನ ಪಂಥವನ್ನು ಯಾರೊಬ್ಬರ ಕೊಲೆಯಿಂದಲೂ ನಾಶಗೊಳಿಸುವದಕ್ಕೆ ಅವಕಾಶವಿಲ್ಲದಂತಾಗಿತ್ತು. ಬಿಂದುವಿನ, ಎಂದರೆ ಬಾಬನ, ಕೆಳಗಿನ ಅಂತಸ್ತಿನಲ್ಲಿ ಮುಲ್ಲಹುಸೇನ್, ಮುಲ್ಲಮಹಮ್ಮದ್ ಅಲಿ, ಜನಾಬಿಕುದ್ದೂಸ್ - ಎಂಬ ಬೀಜಾಕ್ಷರಗಳಿದ್ದರು. ಅವರು ಹತರಾದ ಬಳಿಕ ಮಿರ್ಝಾ ಯಹ್ಯ ಎಂಬ ತರುಣನು ಬಾಬನಿಗೆ ಎರಡನೆಯ ಸ್ಥಾನದವನಾಗಿ ನಿಯಮಿತನಾದನು. ಬಾಬನು ಅವನಿಗೆ ಸುಬ್ಹಿಲಿಸಲ್ (ನಿತ್ಯತ್ವದ ಪ್ರಭಾತ) ಎಂಬ ಬಿರುದನ್ನು ಕೊಟ್ಟು ತನ್ನ **ಬಯಾನ್** ಗ್ರಂಥವನ್ನು ಪೂರ್ಣಮಾಡುವಂತೆ ತಿಳಿಸಿದನು. ಈ ಅಸಲನೇ ಈ ಲೇಖನದ ಪ್ರಧಾನನಾಯಕನಾದ ಬಾಹಾಉಲ್ಲ್ಹನ ಬಲತಮ್ಮನು.

ಮಿರ್ಜಹುಸೇನ ಅಲಿ ಎಂಬುದು ಬಾಹಾಉಲ್ಲಾನ ಜನ್ಮನಾಮವು, ಈತನು, ನೂರ್ ಎಂಬ ನಗರಿಯಲ್ಲಿ ಕ್ರಿ.ಶ.1817ರಲ್ಲಿ ಜನಿಸಿದನು. ಇವನು ಪರ್ಷಿಯ ಚಕ್ರವರ್ತಿಯ ಆಸ್ಥಾನದಲ್ಲಿ ಒಬ್ಬ ಅಧಿಕಾರಿಯಾಗಿರುತ್ತಿದ್ದನಾದರೂ ಬಾಬನನ್ನು ಕಾರಾಗಾರದಲ್ಲಿಡುವ ಹೊತ್ತಿಗೆ ತಾನೂ ಬಾಬಿಯಾಗಿ ಪರಿಣಮಿಸಿದ್ದನು. ಬಾಬನನ್ನು ಗಲ್ಲಿಗೇರಿಸಿದ ಮೇಲೆ ತಮ್ಮ ಗುರುವಿನ ಮರಣಕ್ಕಾಗಿ ಸೇಡುತೀರಿಸಿ ಕೊಳ್ಳುವದಕ್ಕೆಂದು ಕೆಲವರು ದುರಭಿಮಾನಿಗಳಾದ ಬಾಬಿಗಳು ಪಾರಸಿದೇಶದ ಷಾನನ್ನು ಕೊಲ್ಲುವದಕ್ಕೆ ಸಂಚುಮಾಡಿದರು. ಇದರಿಂದ ಸರಕಾರದವರು ಮತ್ತಷ್ಟು ರೇಗಿದರು; ಮಂತ್ರಿಯಾದ ತಾಕಿಖಾನನ ಇಷ್ಟದಂತೆ ಸೇನಾಖಾತೆಯವರು, ಮಂತ್ರಿಮಂಡಲದವರು, ವರ್ತಕರು, ಮತೋಪದೇಶಕರು, ದರ್ವೇಷಿಗಳು, ಚಾಕರರು, ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು – ಎಲ್ಲರೂ ಕಾರ್ಯಭಾಗವನ್ನು ವಹಿಸಿ ಲೆಕ್ಕವಿಲ್ಲದಷ್ಟು ಬಾಬಿಗಳನ್ನು ಚಿತ್ರಹಿಂಸೆಮಾಡಿ ಪ್ರಾಣವನ್ನು ತೆಗೆದು ತಮ್ಮ ರಾಜನಿಷ್ಠೆಯನ್ನು ತೋರಿಸಿಕೊಂಡರು. ಇಷ್ಟು ಹೊತ್ತಿಗೆ ಹುಸೇನ್‌ಆಲಿಯು 'ಬಾಹಾ ಉಲ್ಲಾ' (ದೇವಕೀರ್ತಿ) ಎಂಬ ಬಿರುದನ್ನು ತಾಳಿದ್ದನ್ನು ಅವನೇ ಈ ರಾಜದ್ರೋಹಕ್ಕೆ ಮೂಲಭೂತನೆಂದು ರಾಜನ ತಾಯಿಯು ಎಣಿಸಿದ್ದರಿಂದ ಇದರ ಫಲವಾಗಿ ಬಾಹಾಉಲ್ಲಾನಿಗೆ ನಾಲ್ಕು ತಿಂಗಳ ಕಾರಾಗಾರವಾಸವಾಯಿತು. ಆಮೇಲೆ ಅವನನ್ನು ಸರಕಾರದವರು ಸಕುಟುಂಬಸಪರಿವಾರವಾಗಿ ಬಾಗದಾದಿಗೆ ಗಡಿಪಾರುಮಾಡಿದರು. ಇಲ್ಲಿಗೆ ಮೇಲೆ ಹೇಳಿದ ಅಸ್ಸಲನೂ ಬಂದನು.

ಸರಕಾರದವರ ಉಪಟಳವನ್ನು ತಡೆಯಲಾರದೆ ಎಷ್ಟೋ ಜನ ಬಾಬಿಗಳು ಈಗ ಬಾಗದಾದಿಗೆ ವಲಸೆಬಂದರು. ಬಾಬಿನಾಯಕರು ಧರ್ಮಗ್ರಂಥಗಳನ್ನು ಬರೆಯುವದು, ಉಪದೇಶಗಳನ್ನು ವ್ಯವಸ್ಥೆಗೊಳಿಸುವದು, ಪ್ರಸಾರಮಾಡುವದು– ಈ ಕಾರ್ಯದಲ್ಲಿ ನಿರತರಾದರು. ಬಾಹಾಉಲ್ಲಾನು ಈ ನಡುವೆ ಎರಡು ವರ್ಷಗಳ ಕಾಲ ಸಲೈಮಾನಿಯ ಪರ್ವತಕ್ಕೆ ಹೋಗಿ ಏಕಾಂತವಾಸದಲ್ಲಿರುತ್ತಿದ್ದನು; ಆಮೇಲೆ ಮತ್ತೆ ಬಾಗದಾದಿಗೆ ಬಂದು ತನ್ನನ್ನು ಕಾಣುವದಕ್ಕೆ ತಂಡತಂಡವಾಗಿ ಬರುತ್ತಿದ್ದ ಜನರಿಗೆಲ್ಲ ಉಪದೇಶಮಾಡುವದಕ್ಕೆ ಮೊದಲುಮಾಡಿದನು. ಈ ಸಮಯದಲ್ಲಿಯೇ ಅವನು ''ಗುಹ್ಯವಚನಾಮೃತ'' (Hidden Words) ಎಂಬ ಪದ್ಯಗಳನ್ನೂ, ''ಸಪ್ತಭೂಮಿಕೆಗಳು'' (Seven Valleys) ಎಂಬ ಅಮೋಘವಾದ ಸಾಧನಗ್ರಂಥವನ್ನೂ ಬರೆದನು.

ಕ್ರಿ.ಶ.1863ರಲ್ಲಿ ಪರ್ಷಿಯಸರಕಾರದವರ ಅಭಿಪ್ರಾಯದಂತೆ ತುರ್ಕಿ ಸರ್ಕಾರದವರು ಬಾಬಿಗಳನ್ನು ಪರ್ಷಿಯಕ್ಕೆ ಕಳುಹಿಸದೆ ಇನ್ನು ಸ್ವಲ್ಪ ಮುಂದಕ್ಕೆ ಸಾಗಿಸಿದರು. ಮೊದಲು ಕಾನ್‌ಸ್ಟಾಂಟಿನೋಪಲಿಗೂ ಆಮೇಲೆ ಎಡ್ರಿಯಾನೋಪಲಿಗೂ ಅವರನ್ನು ಅಟ್ಟಿದರು. ಮೇಲೆ ತಿಳಿಸಿರುವಂತೆ ಅಸಲನೇ ಬಾಬನಿಗೆ ಎರಡನೆಯವನೆಂದು ಗೊತ್ತಾಗಿ ಬಾಬಿಗಳಿಗೆಲ್ಲ ನಾಯಕನಾಗಿರುತ್ತಿದ್ದರೂ ಬಾಬನು ಆಡಿದ್ದ ಮತ್ತೊಂದು ಭವಿಷ್ಯವು ಬಾಸಾಉಲ್ಲ್ಹನಿಗೂ ಸ್ಥಾನವನ್ನು ಕಲ್ಪಿಸಿತ್ತು. ತನ್ನ ತರುವಾಯ ದೇವಪ್ರಕಾಶಿತನಾಗಿ (He whom God shall manifest) ಬರುವನೊಬ್ಬನಿರುವನೆಂದೂ ಅವನು ತನ್ನ ಬಯಾನ್‌ಗ್ರಂಥವನ್ನು ಕೂಡ ಹಿಂದಕ್ಕೆ ಹಾಕಿ ಇನ್ನೂ ಹೆಚ್ಚಿನ ತತ್ತ್ವಗಳನ್ನು ಉಪದೇಶಿಸುವನೆಂದೂ ಬಾಬನು ಹೇಳಿಟ್ಟಿದ್ದನು. ಅವನ ಮರಣಾನಂತರದಲ್ಲಿ ಬಾಗದಾದನಗರದಲ್ಲಿ ಅನೇಕ ಮಂದಿ ಬಾಬಿಗಳು ತಾವೇ ಆ ದೇವಪ್ರಕಾಶರೆಂದು ಹೇಳಿಕೊಳ್ಳುವದಕ್ಕೆ ಮೊದಲುಮಾಡಿದ್ದರು; ಆದರೆ ಅವರುಗಳ ಮಾತಿಗೆ ಬಹುಜನರು ಬೆಲೆಕೊಡಲಿಲ್ಲ. ಬಾಹಾಉಲ್ಲ್ಹನು ಬಯಾನ್‌ಗ್ರಂಥದಲ್ಲಿ ವರ್ಣಿತನಾಗಿರುವ 'ದೇವ ಪ್ರಕಾಶನು' ತಾನೇ ಎಂದು ಹೇಳಿಕೊಂಡಾಗ ಮಾತ್ರ ಹಾಗಾಗಲಿಲ್ಲ. ''ಬಾಬನು ಮಾಡಿದ ಉಪದೇಶವು ಇಸ್ಲಾಮ ಜನರ ಅಜ್ಞಾನವನ್ನು ಮಾತ್ರ ಕಳೆಯುವದಕ್ಕಲ್ಲ; ಸರ್ವಧರ್ಮಗಳ ಪರಿಚ್ಛೇದವನ್ನೂ ತೆಗೆದುಹಾಕಿ ಈ ಮತಗಳಲ್ಲಿರುವ ತತ್ತ್ವಮುಕ್ತಾಫಲಗಳೆಲ್ಲವನ್ನೂ ಒಂದು ಕಂಠಮಾಲೆಯಾಗಿ ಪೋಣಿಸುವ ಕೆಲಸವೇ ಆತನ ಮೂಲಕ ಈಶ್ವರನು ಮಾಡಿಸಬೇಕೆಂದಿರುವದು. ಈ ಕೆಲಸವನ್ನು ಪರಿಪೂರ್ತಿಗೊಳಿಸುವದೇ ನಿಮ್ಮ ಕೆಲಸವು. ಇನ್ನು ಮೇಲೆ ನೀವು ಬರಿಯ ಬಾಬಿಗಳಲ್ಲ, ಬಾಹಾಮತದವರು. ಬಾಬನು ಹೇಳಿದ ದೇವಪ್ರಕಾಶನೇ ಬಾಹಾಉಲ್ಲ್ಹನೆಂದು ತಿಳಿಯಿರಿ'' ಎಂದು ಆತನು ಉದ್ಘೋಷಿಸಲು ಅವರೆಲ್ಲರೂ ಬೆಪ್ಪಾದರು. ಕೊನೆಗೆ ಮುಕ್ಕಾಲುಪಾಲು ಬಾಬಿಗಳು ಅವನ ಅನುಯಾಯಿಗಳಾದರು. ಬಯಾನ್‌ಗ್ರಂಥವನ್ನೇ ನಂಬಿಕೊಂಡ ಅಸ್ಜಾಲಿಗಳು ಮಾತ್ರ ಮತ್ತೊಂದು ಸಣ್ಣ ತಂಡವಾಗಿ ಒಡೆದುಕೊಂಡರು.

ಬಾಬಿಪಂಥದ ಈ ಎರಡು ತಂಡಗಳಿಗೂ ಆದ ಕಿತ್ತಾಟಗಳನ್ನು ನೋಡಿ ತುರ್ಕಿಸರ್ಕಾರದವರು ಅಸ್ಜಲನನ್ನು ಸೈಪ್ರಸ್ ದ್ವೀಪದಲ್ಲಿರುವ ಫಾಮಗುಸ್ತ ಎಂಬಲ್ಲಿಗೂ ಬಾಹಉಲ್ಲ್ಹನನ್ನು ಪ್ಯಾಲೆಸ್ಟೈನ್ ದೇಶದ ಅಕ್ಕ ಅಥವಾ ಏಕರ್ ಎಂಬಲ್ಲಿಗೂ ಗಡಿಪಾರುಮಾಡಿದರು. ಅಸಲನು 1912ರಲ್ಲಿ ಕಾಲವಾದನು; ಆತನ

ಅನುಯಾಯಿಗಳು ತೀರ ಸ್ವಲ್ಪ ಜನವಿದ್ದದ್ದರಿಂದ ಅವನ ಮತವೂ ಹಾಗೆಯೇ ಕಣ್ಮರೆಯಾಯಿತು. ಬಾಹಉಲ್ಲ್ಹಾನು ಅಕ್ಕದುರ್ಗದಲ್ಲಿ ಕುಳಿತು ಪ್ರಪಂಚದ ರಾಜರಿಗೂ ಚಕ್ರಾಧಿಪತಿಗಳಿಗೂ ಪ್ರಖ್ಯಾತವಾದ ತನ್ನ ಪತ್ರಗಳನ್ನು ಬರೆದನು. ಈ ಪತ್ರಗಳಲ್ಲಿ ಮೋಕ್ಷಕ್ಕೆ ಮಾರ್ಗವು ಯಾವದೆಂಬುದನ್ನು ತಿಳಿಸಿರುವದಲ್ಲದೆ ರಾಜ್ಯಾಧಿಪತಿಗಳೆಲ್ಲರೂ ವಿಶ್ವಶಾಂತಿಯನ್ನೂ ವಿಶ್ವಭ್ರಾತೃತ್ವವನ್ನೂ ಸ್ಥಾಪಿಸುವದಕ್ಕೆ ಪ್ರಯತ್ನ ಮಾಡಬೇಕೆಂದೂ ಯುದ್ಧಪದ್ಧತಿಯನ್ನು ನಿಲ್ಲಿಸಿಬಿಡಬೇಕೆಂದೂ ಬರೆದಿರುತ್ತಾನೆ. ಹೀಗೆ ಬಾಹಾಉಲ್ಲ್ಹಾನು ನಲವತ್ತು ವರ್ಷಗಳಿಗಿಂತಲೂ ಹೆಚ್ಚಾಗಿಯೇ ವಿದೇಶವಾಸವನ್ನೂ ಕಾರಗಾರಗಳನ್ನೂ ಅನುಭವಿಸಿ ಮಾನವ ಧರ್ಮವು ದುರಭಿಮಾನದ ಸಂಪ್ರದಾಯಪರಿಚ್ಛೇದಗಳಿಲ್ಲದೆ ಸ್ವತಂತ್ರವಾಗುವದಕ್ಕೆ ತಕ್ಕ ಏರ್ಪಾಡುಗಳನ್ನು ನಿರಂತರವೂ ಮಾಡುತಿದ್ದು ಕೊನೆಗೆ ಕ್ರಿ.ಶ.1892ರಲ್ಲಿ ತನ್ನ ದೇಹವನ್ನು ಬಿಟ್ಟನು.

ಬಾಹಉಲ್ಲ್ಹಾನ ಉದಾರವಾದ ಭಾವವನ್ನು ಸೂಚಿಸುವ ಆತನ ಕೆಲವು ಸೂಕ್ತಿಗಳನ್ನು ಉದಾಹಸುವೆನು.[1]

1) ಎಲೈ ಭೂಲೋಕದ ಜನರುಗಳಿರ, ನೀವೆಲ್ಲ ಒಂದೇ ಮರದ ಹಣ್ಣುಗಳು, ಒಂದೇ ಕೊಂಬೆಯ ಎಲೆಗಳು. ಆದ್ದರಿಂದ ಪೂರ್ಣವಾದ ಸದಾಶಯದಿಂದಲೂ ಸಾಮರಸ್ಯದಿಂದಲೂ ಪ್ರೇಮದಿಂದಲೂ ಹೊಂದಿಕೆಯಿಂದಲೂ ಕೂಡಿ ನಡೆಯಿರಿ. ಸತ್ಯಸೂರ್ಯನ ಮೇಲೆ ಅಣೆಯಿಟ್ಟು ಹೇಳುವೆನು ಕೇಳಿ; ಸಾಮರಸ್ಯದ ಬೆಳಕು ದಿಗಂತಗಳನ್ನೆಲ್ಲ ಬೆಳಗುತ್ತದೆ.

2) ಮನುಷ್ಯನು ತನ್ನ ದೇಶವನ್ನು ಪ್ರೀತಿಸುವೆನೆಂದು ಹೆಮ್ಮೆಪಡಬಾರದು, ತನ್ನಂತಿರುವ ಮಾನವರನ್ನು ಪ್ರೀತಿಸುವೆನೆಂದು ಬೇಕಾದರೆ ಹೆಮ್ಮೆಪಡಬಹುದು.

---

1. ಈ ಲೇಖನಕ್ಕೆ ಪ್ರೊಫೆಸರ್ ಬ್ರೌನ್, (Prof. Browne) ಎಂಬಾತನು ಬರೆದಿರುವ ಲೇಕನವು, ಮೌಲಾನಾ ಮಹಮ್ಮದ್ ಆಲಿ ಎಂಬವರು Muslim Revival ಎಂಬ ಬರೆದಿರುವ ''History of the Babi Movement'' ಎಂಬ ಲೇಖನವು, New History Foundation ನವರು ಪ್ರಕಟಿಸಿರುವ Living Pictures ಎಂಬ ಗ್ರಂಥವೂ ಆಧಾರವು. ಕೊನೆಯ ಗ್ರಂಥವನ್ನು ಬಾಹಾಉಲ್ಲ್ಹಾನ ಅನುಯಾಯಿಯಾದ Mirza Ahmad Sohrab ಎಂಬಾತನು ಬರೆದದ್ದಾಗಿ ರುತ್ತದೆ.

ಈ ಭೂಲೋಕವೆಂಬುದು ಒಂದು ಹಿಡಿ ಮಣ್ಣು; ಇದೆಲ್ಲ ಒಂದೇ ಮನೆ, ಇದು ಒಂದಾಗಿಯೇ ಇರಲಿ.

3) ಜನಾಂಗಗಳೆಲ್ಲವೂ ಒಂದೇ ಮತದವರಾಗಬೇಕು, ಎಲ್ಲಾ ಜನರೂ ಅಣ್ಣತಮ್ಮಂದಿರಂತಿರಬೇಕು.

4) ಯಾವ ಮತದವರನ್ನಾಗಲಿ ಸ್ನೇಹಿತರಂತೆ ಕಾಣಬೇಕು, ಅವರನ್ನು ಅಶುಚಿಯಾದವರೆಂದು ಎಣಿಸಬಾರದು. ತರ್ಕದಿಂದಲೂ ಬುದ್ಧಿವಾದದಿಂದಲೂ ತಮ್ಮ ಧರ್ಮಕ್ಕೆ ತಿರುಗಿಸುವದು ತಪ್ಪಲ್ಲ, ಆದರೆ ಜುಲುಮು ಮಾಡಿದರೆ ಮಾತ್ರ ಭಗವದ್ದ್ವೇಷವನ್ನು ಕಟ್ಟಿಕೊಂಡಂತಾಗುವದು.

5) ಧರ್ಮದ ಉದ್ದೇಶವೇನೆಂದರೆ ಮಾತುಗಳನ್ನು ಕಡಿಮೆಮಾಡುವದು, ಕೃತಿಗಳನ್ನು ಹೆಚ್ಚಿಸುವದು.

6) ನಿಮ್ಮನ್ನು ಒಬ್ಬರು ಕೊಂದರೂ ಕೊಲ್ಲಲಿ; ನೀವು ಮಾತ್ರ ಒಬ್ಬರನ್ನು ಕೊಲ್ಲದಿರಿ.

7) ಕೊಟ್ಟಮಾತಿನಂತೆ ನಡೆದುಕೊಳ್ಳಿರಿ, ಕತ್ತಲೆಯ ದೀಪವಾಗಿರಿ, ಕಷ್ಟದಲ್ಲಿ ಸಹಾಯಕರಾಗಿ. ನೀರಡಿಕೆಯುಳ್ಳವರಿಗೆ ಸಮುದ್ರವಾಗಿರಿ, ಸಂಕಟಪಡುತ್ತಿರುವವರಿಗೆ ಆಸರೆಯಾಗಿರಿ.

★★★★★

# ಬಾಹೈ (ನನ್ನ) ಮತ

### (ಶ್ರೀಯುತ ಮಿರ್ಜ಼ಾ ಅಹಮ್ಮದ್ ಸೂಹ್ರಾಬ್‌ರವರು ಪ್ರಕಟಿಸಿರುವ "My Faith" ಎಂಬ ಲೇಖನ ಅನುವಾದ)

ಈ ಕೆಳಗೆ ಕೊಟ್ಟಿರುವ ಶ್ರದ್ಧೇಯತತ್ತ್ವ ಸಂಗ್ರಹವನ್ನು (Credo) ಅಮೆರಿಕದಲ್ಲಿರುವ ಅಭಿನವೇತಿಹಾಸದ ಸಮಾಜದ ಡೈರೆಕ್ಟರಾದ ಮಿರ್ಜಾಅಹ್ಮದ್

ಸೊಹ್ರಾಬರುವರು ಏರ್ಪಡಿಸಿರುತ್ತಾರೆ. ಸುಪ್ರಸಿದ್ಧ ಡಾ||ಹರಿಹಾಸ ಟಿ. ಮುಸುಮ್ದಾರ್, ಎಮ್.ಡಿ., ಪಿಎಚ್.ಡಿ – ಇವರು ಇದಕ್ಕೊಂದು ಮುನ್ನುಡಿಯನ್ನು ಬರೆದಿರುತ್ತಾರೆ. ''ಅಸ್ಪೃಶ್ಯತೆಯ ಸಮಸ್ಯೆಯನ್ನೂ ಮಾನವನು ಮಾನವನ ವಿಷಯದಲ್ಲಿ ಮಾನವಯೋಗ್ಯವಲ್ಲದ ಹೃದಯಕಾಠಿನ್ಯವನ್ನು ತೋರ್ಪಡಿಸುತ್ತಿರುವದನ್ನೂ ಭರತಖಂಡದ ವೇದಾಂತದರ್ಶನದಲ್ಲಿ ಉಕ್ತವಾಗಿರುವ ಜೀವಾತ್ಮಪರಮಾತ್ಮರ ಐಕ್ಯಕ್ಕೂ ಹಿಂದೂಸಮಾಜದಲ್ಲಿರುವ ಆಚರಣೆಗಳಿಗೂ ಇರುವ ಅಜಗಜಾಂತರತಾರತಮ್ಯವನ್ನೂ ಚೆನ್ನಾಗಿ ಮನದಂದು ಈ ವಿಶ್ವಾಸ ತರಂಗಿಣಿಯನ್ನು ಸೊಹ್ರಾಬರವರು ಬರೆದಿರುವರೆಂದೂ ಪ್ರತಿಯೊಬ್ಬ ಮಾನವನಿಗೂ ಮುಖ್ಯವಾಗಿ ಕೀಳುಜಾತಿಯವರಿಗೂ ಜಾತಿಬಹಿಷ್ಕೃತರಿಗೂ ಇದು ಸ್ವೀಕಾರಯೋಗ್ಯವಾಗುವದೆಂದು ಅವರು ಹಾರೈಸಿರುವರೆಂದೂ ಡಾಕ್ಟರ್ ಮುಸುಮ್ದಾರ್ರವರು ಹೇಳುತ್ತಾರೆ.

ಅಧ್ಯಾತ್ಮಪ್ರಕಾಶವು ಸಮಾಜಸುಧಾರಣೆಯ ವಿಚಾರದ ಪತ್ರಿಕೆಯಲ್ಲವಾದರೂ ಇಡಿಯ ಮಾನವವರ್ಗದ ಅಧ್ಯಾತ್ಮಿಕಸಮುನ್ನತಿಯನ್ನು ಕೋರುವ ಭಾವನೆಗೆ ಉತ್ತೇಜನವನ್ನು ಕೊಡುವ ಉದ್ದೇಶದಿಂದಲೇ ಅದು ಹೊರಟಿರುವದು. ಯಾವದಾದರೊಂದು ಕಾಲದ ಸಮಾಜಸ್ಥಿತಿಗೂ ಮಾನವವ್ಯಕ್ತಿಗಳ ಧಾರ್ಮಿಕ ಭಾವನೆಗೂ ಒಂದನ್ನೊಂದು ಬಿಡಲಾರದ ಸಂಬಂಧವಿರುವದೆಂದೇನೂ ನಮ್ಮ ನಂಬಿಕೆಯಿರುವದಿಲ್ಲವಾದರೂ ಮನುಷ್ಯನ ಬಂಧಮೋಕ್ಷಗಳು ಅವನ ಮನಸ್ಸನ್ನೇ ಅವಲಂಬಿಸಿರುವದೆಂಬ ತತ್ತ್ವದಲ್ಲಿ ನಮಗೆ ಪೂರ್ಣಶ್ರದ್ಧೆಯಿರುವದು. ''ಸಮಾಜದ ಪದ್ಧತಿಗಳೂ ಜಾತಿಯ ಕೋಟಲೆಗಳೂ ನಿರ್ಬಂಧಗಳನ್ನು ಏರ್ಪಡಿಸಿರುವವೆಂಬುದೇನೋ ನಿಜವೇ. ಆದರೂ ಹರಿಜನರು ದಿಕ್ಕುಗಾಣದೆ ಇರುವದಕ್ಕೆ ಮುಖ್ಯವಾಗಿ ಅವರ ಮಾನಸಿಕ ಮತ್ತು ಆಧ್ಯಾತ್ಮಿಕಬಂಧವೇ ಕಾರಣವಾಗಿದೆಯೆಂಬುದನ್ನು ತಿರಸ್ಕರಿಸುವದಕ್ಕಿಲ್ಲ. ಹರಿಜನರು ನಾನು ಸ್ವತಂತ್ರನು ಎಂದುಕೊಂಡು ಸ್ವತಂತ್ರಭಾವನೆಯಿಂದ ಜನರನ್ನು ಧೈರ್ಯವಾಗಿ ಕಾಣುವದಕ್ಕೆ ಮೊದಲು ಮಾಡಿದರೆ ಸಾಕು, ಕೂಡಲೆ ಅನಾದಿಯಿಂದಲೂ ಸಂಪ್ರದಾಯಸ್ಥರು ಅವರಲ್ಲಿ ಆರೋಪಿಸಿಟ್ಟಿರುವ ನೈಚ್ಯಭಾವನೆಯ ಬಂಧವು ಕಡಿದುಬೀಳುವದು''

(– ಎಂದು ಮುಸುಮದಾರ್ರವರು ಹೇಳಿರುವದರಲ್ಲಿ ತಥ್ಯಾಂತವೂ ಇದೆಯೆಂಬುದು ನಮ್ಮ ಭಾವನೆ. **–ಸಂ.ಅ.ಪ್ರ**)

ನಾನು ಈಶ್ವರನ ಮಗುವು, ದೇವರ ತೊಡೆಯ ಮೇಲೆಯೇ ಹುಟ್ಟಿಬೆಳೆದವನು.
ಮಾನವ ಪ್ರಪಂಚವೆಲ್ಲವೂ ಏಕವಾಗಿರುವದೆಂಬುದು ನನ್ನ ನಂಬಿಕೆ.

ಸ್ವಾತಂತ್ರ್ಯದ ನಿಯಮವು ನನ್ನಲ್ಲಿ, ನನ್ನೊಡನೆಯೇ, ನನಗಾಗಿಯೇ ಇರುವದು. ನನ್ನ ಸ್ವಾತಂತ್ರ್ಯದ ಕಿರಣಗಳು ಹೊರಹೊರಟು ಮಿಕ್ಕವರ ಸ್ವಾತಂತ್ರ್ಯದ ಕಿರಣಗಳೊಂದಿಗೆ ಸೇರುತ್ತಲಿರುವದು ನನಗೆ ಕಾಣಿಸುತ್ತಿದೆ. ಸ್ವಾತಂತ್ರ್ಯದ ಪ್ರಕಾಶವು ಇಡಿಯ ವಿಶ್ವವನ್ನೇ ಮತ್ತೆಮತ್ತೆ ವ್ಯಾಪಿಸುತ್ತಿರುವದನ್ನೇ ನಾನು ನೋಡುತ್ತಿರುತ್ತೇನೆ.

ಸಮಾನತೆಯ ನಿಯಮವೆಂಬುದು ನನ್ನ ಹಕ್ಕು. ಅದು ನನ್ನ ಶರೀರದ ಅಣುಗಳಲ್ಲೆಲ್ಲ ವ್ಯಾಪಿಸಿ ಹತ್ತಿಕೊಂಡಿರುವದು, ನನ್ನ ಮೆದುಳಿನ ನರಮಂಡಲಗಳಲ್ಲೆಲ್ಲ ವ್ಯಾಪಿಸಿಕೊಂಡಿರುವದು; ನಾನು ಮತ್ತೊಬ್ಬರಿಗೆ ಸಮಾನನೆಂಬ ತಿಳಿವಳಿಕೆಯಲ್ಲಿ ಮತ್ತೊಬ್ಬರೂ ನನಗೆ ಸಮಾನರೆಂದೇ ನಾನು ಒಪ್ಪಿದಂತಾಗಿರುತ್ತದೆ.

ಸಹಕಾರನಿಯಮವೆಂಬುದು ನನ್ನ ಮನಃಪೂರ್ವಕವಾದ ಕೃತಿಯು. ನನ್ನ ಆಲೋಚನೆಗಳಲ್ಲಿಯೂ ವ್ಯಾಪಾರಗಳಲ್ಲಿಯೂ ಅದು ಉತ್ತೇಜಕವಾಗಿದ್ದುಕೊಂಡು ಪ್ರಾಧಾನ್ಯವನ್ನು ಹೊಂದಿರುವಂತೆ ಅವಕಾಶಕೊಡುವೆನು: ಮತ್ತೊಬ್ಬರೊಡನೆ ನಾನು ಸಹಕರಿಸಿದರೆ ನನ್ನನ್ನು ದೃಷ್ಟಿಸಿದ ದೇವರೊಡನೆ ಸಹಕಾರಮಾಡಿದಂತಾಗುವದೆಂಬುದನ್ನು ನಾನು ಎಂದಿಗೂ ಮರೆಯುವದಿಲ್ಲ.

ಸ್ವಾತಂತ್ರ್ಯ ಸಮಾನತೆ, ಸರಕಾರ – ಈ ಮೂರು ಥಳಿಥಳಿಸುವ ಸ್ತಂಭಗಳ ಮೇಲೆಯೇ ನನ್ನ ಬಾಳುವೆಯೆಂಬ ದೇವಾಲಯವು ನಿರ್ಮಿತವಾಗಿರುತ್ತದೆ.

ನನ್ನ ಹೃದಯಕುಹರದಲ್ಲಿ ಈಶ್ವರನು ಗೂಢನಾಗಿರುತ್ತಾನೆ, ಅಂಥ ವ್ಯಕ್ತಿಯು ನಾನು; ಬಣ್ಣದ, ಮತದ ಮತ್ತು ಜಾತಿಯ ಯಾವದೊಂದು ಸೋಂಕೊ ನನಗೆ ಹತ್ತದಂತೆ ಆತನು ನನ್ನನ್ನು ಕಾಪಾಡುತ್ತಿದ್ದಾನೆ.

ನಾನು ನನ್ನ ಮನಃಸ್ಸಾಕ್ಷಿಯೆಂಬ ದಿವ್ಯಪೀಠಕ್ಕೆ ನಮಸ್ಕರಿಸಿ ಅಲ್ಲಿಯೇ ಅರ್ಚನೆಮಾಡುತ್ತೇನೆ: ಈ ಅರ್ಚನೆಯು ನಾನು ನಿರ್ಬಲನೆಂದೂ ಪರಿಚ್ಛಿನ್ನನೆಂದೂ ಹೇಳಿಕೊಳ್ಳುವದಕ್ಕಲ್ಲ. ನನ್ನ ಸಹಜವಾದ ಬಲವನ್ನೂ ಆನಂತ್ಯವನ್ನೂ ಒಪ್ಪಿಕೊಳ್ಳುವದಕ್ಕೆ.

ಧರ್ಮದ ಸಾಧನೆಗೂ ನಿಯಮಗಳ ಆಚರಣೆಗೂ ನನ್ನ ಸಮ್ಮತಿಯುಂಟು; ಆದರೆ ಇವು ಬಹಿಷ್ಕಾರ, ಪರಿವರ್ಜನ, ವಿಭಾಗೀಕರಣ, ದುರಭಿಮಾನ, ಮತದ್ವೇಷ, ''ಪವಿತ್ರ ಮಿಥ್ಯಾಚಾರಗಳು''– ಇವುಗಳಿಗೆ ಒಪ್ಪಿಗೆಯನ್ನೀಯುವಂಥ ಧರ್ಮವಾಗಿರಬಾರದು, ಅಂಥ ನಿಯಮಗಳಾಗಿರಬಾರದು.

ಎಲ್ಲಾ ದೇವಾಲಯಗಳಲ್ಲಿಯೂ ಪೂಜಿಸುವ ಸ್ವಾತಂತ್ರ್ಯವೆಂಬುದು ನನ್ನ ಅಧ್ಯಾತ್ಮಿಕ ಹಕ್ಕು. ಅವೆಲ್ಲ ದೇವರ ಮಂದಿರಗಳಲ್ಲವೆ? ನಮ್ಮಪ್ಪನ ಮಂದಿರದಲ್ಲಿಯೇ ನನಗೆ ಸ್ವಾಗತವಿಲ್ಲವೇನು? ನಮ್ಮ ತಂದೆಯು ನಾನು ಬಂದಕೂಡಲೆ ಕದವನ್ನು ಮುಚ್ಚಿಕೊಳ್ಳುವದಿಲ್ಲ. ಆತನ ಬಾಗಿಲುಗಳನ್ನು ದಾಟಬೇಕಾದಾಗ ನಾವೇನೂ **ಶೋಷಿತರೆ**ಯುವದಿಲ್ಲ.

ನನ್ನ ಸಹಚರರನ್ನು ನಾನು ಆರಿಸಿಕೊಳ್ಳಬೇಕಾಗಿರುವದಿಲ್ಲ; ಏಕೆಂದರೆ ಈ ಜಗತ್ತು ಸೃಷ್ಟಿಯಾದಂದಿನಿಂದಲೂ ಅವರನ್ನು ದೇವರು ಗೊತ್ತುಪಡಿಸಿಯೇ ಇರುತ್ತಾನೆ. ಐದು ಖಂಡಗಳಲ್ಲಿಯೂ ಸಮುದ್ರದಲ್ಲಿರುವ ದ್ವೀಪಗಳಲ್ಲಿಯೂ ಇರುವವರೆಲ್ಲ ನನ್ನ ಸಹವಾಸಕ್ಕೆ ಯೋಗ್ಯರೆ. ಈ ಪರಮೇಶ್ವರನ ಅಭಿಪ್ರಾಯವು ಯಾರಿಗಾದರೂ ಸಮ್ಮತವಲ್ಲದಿದ್ದರೆ, ಅವರು ಮೊದಲು ಆತನನ್ನು ಕೈಬಿಟ್ಟು ಆಮೇಲೆ ಆತನು ಆರಿಸಿಕೊಟ್ಟ ಸಹವಾಸಿಗಳನ್ನು ಬಿಟ್ಟು ದೂರ ಸರಿಯಲಿ.

ಕರ್ಮಾಚರಣೆಗಳನ್ನೂ ಮಡಿಮೈಲಿಗೆಗಳ ನಿಯಮವನ್ನೂ ಅನುಸರಿಸುವದದಾಗಲಿ ಅನುಸರಿಸದೆ ಇರುವವದಾಗಲಿ ನನಗೆ ಸಂಬಂಧಪಟ್ಟದ್ದಲ್ಲ; ನಾನು ಎಲ್ಲರೊಡನೆಯೂ ಯಾವದೊಂದು ಅಂಜಿಕೆಯೂ ಕರೆಕರೆಯೂ ಇಲ್ಲದೆ ಹೊಂದಿಕೊಂಡಿರುವೆನು, ಊಟಮಾಡುವೆನು, ನೀರುಕುಡಿಯುವೆನು, ಜೊತೆಯಲ್ಲಿ ಓಡಾಡುವೆನು.

ನನ್ನ ಮಾತೃಭೂಮಿಯ ಎಲ್ಲೆಕಟ್ಟಿನಲ್ಲಿ ನಾನು ಎಲ್ಲಿ ಬೇಕೆಂದರೆ ಅಲ್ಲಿ– ಪೂರ್ವದಿಂದ ಪಶ್ಚಿಮಕ್ಕೂ ಉತ್ತರದಿಂದ ದಕ್ಷಿಣಕ್ಕೂ– ಸಂಚರಿಸುತ್ತಿರುವೆನು. ನನ್ನನ್ನು ಈ ಮೇರೆಯಿಂದಾಚೆಗೆ ಅಟ್ಟುವದಕ್ಕೆ ಯಾರೊಬ್ಬರಿಂದಲೂ ಆಗಲಾರದು, ಏಕೆಂದರೆ ಅಖಂಡಭೂಮಂಡಲವೇ ನಮ್ಮ ಮನೆಯಾಗಿರುತ್ತದೆ.

ನಾನು ಈಶ್ವರಚೈತನ್ಯದ ಛಾಯೆಯಾಗಿರುವೆನು; ಈ ನೆರಳು ಆತನ ವಿರಾಜಮಾನವಾದ ದಿಗಂತದಿಂದ ಈ ಭೂಮಿಯ ಹುಲ್ಲುಗಾವಲುಗಳ ಮೇಲೆ ಬಿದ್ದಿರುತ್ತದೆ. ಯಾರ ದಾರಿಯಲ್ಲಾದರೂ ಈಶ್ವರ ಚೈತನ್ಯದ ನೆರಳಾದ ನಾನು ಹಾದುಹೋದರೆ ಅವನಿಗೆ ಮೈಲಿಗೆಯಾಗುವದೆಂದೂ ಅವನು ಅಪರಿಶುದ್ಧ ನಾದನೆಂದೂ ಹೆಮ್ಮೆಯಿಂದ ಹೇಳಿಕೊಳ್ಳುವದಕ್ಕೂ ಏರಲುದನಿಯಿಂದ ಕಿರುಚುವದಕ್ಕೂ ಯಾವನಿಗೆ ತಾನೆ ಧೈರ್ಯವಿರುವದು? ಹಾಗಾದರೆ ಯಾವ ಪರಮಾತ್ಮನ ಚೈತನ್ಯದಿಂದ ನಾನು ಬಂದಿರುವನೋ ಅದೂ ಅಪರಿಶುದ್ಧವೇನು?

ಗುರುಗಳೆಂದು ಹೇಳಿಕೊಳ್ಳುವವರೂ ಅಧ್ಯಾತ್ಮಪೀಠಾಧಿಪರೆಂದುಕೊಳ್ಳುತ್ತಿರುವವರೂ ಮೃಷ್ಟಾನ್ನ ಭೋಜನವನ್ನು ಮಾಡುತ್ತಿರುವಲ್ಲಿ ಒಂದಿಷ್ಟು ಉಚ್ಚಿಷ್ಟದ ಜ್ಞಾನವನ್ನು ಕೊಡಿರೆಂದು ಬೇಡಿಕೊಳ್ಳುವಷ್ಟು ಹೊಟ್ಟೆಗಿಲ್ಲದ ತಿರುಕನಲ್ಲ ನಾನು; ಏಕೆಂದರೆ ನನ್ನ ಅಂತಃಕರಣಮಂಟಪದಲ್ಲಿ ದಿವ್ಯಜ್ಞಾನವೆಂಬ ವಿವಿಧಭಕ್ಷ್ಯಭೋಜ್ಯಗಳ ಅಡಿಗೆಯನ್ನು ಬಡಿಸಿ ಸಿದ್ಧಮಾಡಿಟ್ಟಿರುತ್ತದೆ.

ನಾನು ಅವಿದ್ಯಾಕಾಮುಗಳೆಂಬ ಅರಣ್ಯದಲ್ಲಿ ಹೊಲಬುಗೆಟ್ಟು ಬಾಯಾರಿಕೆಯಿಂದ ಬಳಲಿ ಬೆಂಡಾಗಿರುವ ದಾರಿಗನಲ್ಲ; ನನ್ನ ಹೃದಯ ಮೂಲದಿಂದ ಮುಕ್ತಿಝರಿಯ ಸ್ವಚ್ಛವಾದ ಜಲವು ಉಕ್ಕೇರುತ್ತಿರುವದು. ನಾನು ಆಶಾಭಂಗವೆಂಬ ಗುಂಡಿಗೊಟರುಗಳನ್ನೂ ಭರವಸೆಯೆಂಬ ಕಳ್ಳಹಾದಿಗಳೂ ಇರುವ ದಾರಿಯಲ್ಲಿ ಅಳುಕಿನಿಂದ ಮೆಲ್ಲಗೆ ಹೆಜ್ಜೆಯಿಡುತ್ತಾ ಸಂಚರಿಸುವದಿಲ್ಲ. ಅನಂತವಾದ ಪ್ರಗತಿಯೂ ಅವಿಚ್ಛಿನ್ನ ಜಯವೂ ತುಂಬಿರುವ ಹಿತಕರವಾದ ರಾಜಪಥದಲ್ಲಿ ಧೈರ್ಯದಿಂದ ಧಾರಾಳವಾಗಿ ಮುಂದುವರಿಯುತ್ತಿರುವೆನು. ನಾನು ಹೊಸ ದಿನದ ಅರುಣೋದಯವಾಗುವದೆಂದು

ಕಾದುಕೊಂಡಿರುವದಿಲ್ಲ, ಸತ್ಯಸೂರ್ಯನು ತಪಿಸುತ್ತಿರುವ ಮಧ್ಯಾಹ್ನದ ಬಿಸಲಿನಲ್ಲಿ ಹಾಯಾಗಿ ಮಲಗಿರುತ್ತೇನೆ. ಅದರ ಶಾಖವು ಎಲ್ಲಾ ಜೀವಿಗಳನ್ನೂ ಮುಸುಕಿಕೊಂಡಿರುತ್ತದೆ.

ಅನೇಕ ಕುಲಗಳು ಇರುವವೆಂಬ ಮೂಢವಿಶ್ವಾಸದಲ್ಲಿ ನನಗೆ ಅನಾದರ. ಕೆಲವು ತಂಡದವರಿಗೆ ಮಾತ್ರ ಈಶ್ವರನ ಅನುಗ್ರಹವುಂಟೆಂಬ ವಾದವನ್ನು ನಾನು ಒಪ್ಪುವದಿಲ್ಲ. ಇರುವದೆಲ್ಲ ಒಂದೇ ಕುಲವೆಂದೂ ಅವರಿಗೆಲ್ಲ ಒಂದೇ ರೀತಿಯಲ್ಲಿ ಶಕ್ತಿಯಿರುವದೆಂದೂ ಒಂದೇ ಬಗೆಯ ಹಕ್ಕಿರುವದೆಂದೂ ಈಶ್ವರಾನು ಗ್ರಹದ ಸಾಗರದಲ್ಲಿ ಅವರೆಲ್ಲರೂ ಒಂದೇ ಸಮನೆ ಮುಳುಗಿರುವರೆಂದೂ ನನ್ನ ನಂಬಿಕೆ.

''ಹೊರಗಿನ ಪ್ರಮಾಣ''ವನ್ನೇನೂ ನಾನು ಒಪ್ಪುವದಿಲ್ಲ, ನನಗೆ ''ಒಳಗಿನ ಪ್ರಮಾಣ''ವೊಂದೇ ಒಪ್ಪಿಗೆಯಾಗಿರುತ್ತದೆ. ನನ್ನ ದೃಷ್ಟಿಯನ್ನು ನನ್ನ ಕಡೆಗೆ ತಿರುಗಿಸಿಕೊಂಡು ನೋಡಿದರೆ ಆ ಪರಮಾತ್ಮನು ನನ್ನಲ್ಲಿಯೇ ಸರ್ವಶಕ್ತನಾಗಿ ಬಲಿಷ್ಠನಾಗಿ ಸರ್ವೋತ್ತಮನಾಗಿ ನಿಂತಿರುತ್ತಾನೆಂಬುದು ನನಗೆ ಗೊತ್ತಾಗಿರುತ್ತದೆ.

**ಇದೇ ಬಾಹಾಮತವು ।**

**ಇದೇ ನನ್ನ ಮತವು ।**

★★★★★

# ಬಾಹೈ ಶತಮಾನೋತ್ಸವ

**ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು**

ಈ ವರ್ಷದ ಮೇ ತಿಂಗಳಿನಲ್ಲಿ ನ್ಯೂಯಾರ್ಕ್ ನಗರದಲ್ಲಿ ತಲೆಬರಹದಲ್ಲಿ ತಿಳಿಸಿರುವ ಮಹೋತ್ಸವವನ್ನು ಅಭಿನವೇತಿಹಾಸಸಂಘ (The New History Society) ದವರು ಅಮೆರಿಕದಲ್ಲಿರುವ ಅನೇಕ ಉದಾರಹೃದಯರ ಪ್ರೋತ್ಸಾಹದಿಂದ ನಡೆಯಿಸಲಿರುವರು. ಪ್ರಪಂಚದ ಹಲವು ದೇಶಗಳಲ್ಲಿ ಇದರ ಅಂಗವಾಗಿ ಉತ್ಸವಗಳು ನೆಡೆಯುವವು. ಈ ಉತ್ಸವದ ಮೂಲವೇನೂ? ಉದ್ದೇಶವೇನು?

ಇದರ ಉಗಮವು ಪರ್ಷಿಯಾದೇಶದಲ್ಲಿ ಮುಸಲ್ಮಾನರಲ್ಲಿ ಷಿಯಾ ಜನರ ನಂಬಿಕೆಯೇನೆಂದರೆ ಇಮಾಮರೆಂಬ ಸರ್ವಜ್ಞರೂ ಭಗವತ್ಕಲ್ಪರೂ ಆದ ಮಹಾತ್ಮರು ಪರಮೇಶ್ವರನ ಅನುಗ್ರಹವನ್ನು ಜನರಿಗೆ ಸಲ್ಲಿಸುವ ಪ್ರಣಾಳಿಯಾಗಿರುತ್ತಾರೆ.

ಕೊನೆಯ ಇಮಾಮನು ಅಂತರ್ಧಾನವನ್ನು ಹೊಂದಿದಮೇಲೆ ಅವನು ''ಬಾಬ್'' ಎಂದರೆ ದ್ವಾರಭೂತರಾದ ಆಚಾರ್ಯರ ಮೂಲಕ ಜನರಿಗೆ ತತ್ತ್ವಜ್ಞಾನವನ್ನು ಕೊಡುತ್ತಾನೆಂದು ಆ ಜನರು ನಂಬುತ್ತಾರೆ. ''ಮಿರ್ಸ ಅಲಿ ಮಹಮ್ಮದ್'' ಎಂಬಾತನು ಇಂಥ ''ಬಾಬ್''. ಆತನು 1844ನೆಯ ಮೇ 23ನೆಯ ದಿನ ಜನರನ್ನು ಸೇರಿಸಿ ಈ ರೀತಿ ಉಪದೇಶಿಸಿದನು. ಇನ್ನು ಮುಂದೆ ಹಳೆಯ ಲೋಕವು ಮಾಯವಾಗುವದು; ಧರ್ಮಾಧಿಕಾರಿಗಳ ಉಗ್ರಶಾಸನವೂ ಮೇಲಿನಂತಸ್ತಿನ ಜನರು ಕೀಳರನ್ನು ತುಳಿದು ತಮ್ಮ ಉಪಯೋಗಕ್ಕೆ ಇಟ್ಟುಕೊಳ್ಳುವದೂ ಇನ್ನು ಇರಲಾರದು. ಇನ್ನುಮೇಲೆ ಸ್ವತಂತ್ರರಾದ ಧೀರರ ಲೋಕವು ಇದರ ಸ್ಥಾನವನ್ನು ಆಕ್ರಮಿಸುವದು, ಇಷ್ಟರಲ್ಲಿಯೇ ಈಗಿನ ಯುಗಕ್ಕೆ ತಕ್ಕ ಒಬ್ಬ ಜಗದ್ಗುರುವು ಪ್ರಕಟನಾಗುವನು.''

ಈ ಭವಿಷ್ಯವು ನಿಜವಾಗಿ ಬಾಹ ಉಲ್ಲಾಹ (ಈಶ್ವರಪ್ರಕಾಶ)ನೆಂಬ ಒಬ್ಬ ಜಗದ್ಗುರು ಅವತರಿಸಿದನು. ಆತನು ಒಂದು ಹೊಸ ಕ್ರಾಂತಿಕಾರಕವಾದ ಸಂದೇಶವನ್ನು ಜನರಿಗೆ ಸಾರಿದನು. ''ಇಡಿಯ ಭೂಮಂಡಲವೇ ಜನರಿಗೆ ಏಕಮಾತ್ರವಾದ ಸ್ವದೇಶವು; ಮಾನವಜಾತಿಯೆಲ್ಲ ಒಂದೇ ಕುಲದವರು; ಅವರಿಗೆಲ್ಲ ಇರುವದು ಒಂದೇ ಧರ್ಮವು'' ಎಂದು ಉದ್ಘೋಷಿಸುತ್ತಿದ್ದ ಆತನ ಬೋಧನೆಯು ಸಾವಿರಾರು ಜನಕ್ಕೆ ಹೆಚ್ಚಾಗುತ್ತಿರುವದನ್ನು ಕಂಡು ಅವನನ್ನು ಹಿಂಬಾಲಿಸುತ್ತಿದ್ದ ಶಿಷ್ಯರನ್ನು ಸುಮಾರು 2000ರ ಕ್ಕಿಂತ ಹೆಚ್ಚಾಗಿಯೇ, ಮುಸಲ್ಮಾನರೂ ಪರ್ಷಿಯದ ಸರ್ಕಾರದವರೂ ಹಿಂಸಿಸಿ ಕೊಂದರು. ಆತನು ತುರ್ಕದೇಶಕ್ಕೆ ಗಡಿಪಾರಾದನು ಅಲ್ಲಿಂದ ಪ್ಯಾಲೆಸ್ಟೈನು ದೇಶದಲ್ಲಿ ''ಅಕ್ಕ'' ಎಂಬಲ್ಲಿಗೆ ಹೋಗಿ ಕಾರಾಗಾರದಲ್ಲಿಯೇ ಇದ್ದು ಜನರಿಗೆ ತನ್ನ ಉಪದೇಶವನ್ನು ಮಾಡುತ್ತಲೇ 1892ನೆಯ ಇಸವಿಯಲ್ಲಿ ಪರಂಧಾಮವನ್ನೈದಿದನು.

ಬಾಹಾಉಲ್ಲಾಹನಿಗೆ ಅಬ್ಬಾಸ್ ಎಫೆಂಡ್ಡಿ ಎಂಬ ಒಬ್ಬ ಮಗನಿದ್ದನು. ಅಬ್ದುಲ್ ಬಾಹ(ಈಶ್ವರದಾಸ)ನೆಂಬ ಹೆಸರಿನಿಂದ ತನ್ನ ತಂದೆಯ ಉಪದೇಶಗಳನ್ನು ಭೂಮಂಡಲದಲ್ಲೆಲ್ಲ ಹರಡಲು ಸೊಂಟಕಟ್ಟಿದನು. ಕ್ರಿ.ಶ.1908ರಲ್ಲಿ ತುರ್ಕಿ ದೇಶದವರು ಅಬ್ದುಲ್ ಹಮೀದನ ದಬ್ಬಾಳಿಕೆಯ ಸರ್ಕಾರವನ್ನು ತಲೆಕೆಳಗುಮಾಡಿ ಸ್ವತಂತ್ರರಾದರು. ಕೂಡಲೆ ರಾಜಕೀಯ ಬಂದಿಗಳನ್ನೆಲ್ಲ ಬಿಡುಗಡೆಮಾಡಿ ಬಿಟ್ಟರು. ಸೆರೆಮನೆಯಿಂದ ಹೊರಕ್ಕೆ ಬಂದಾಗ ಅಬ್ದುಲ್ ಬಾಹನಿಗೆ ಅರವತ್ತು ನಾಲ್ಕು ವರ್ಷ,

ಆದರೂ ಆತನು ದೇಹಾಯಾಸವನ್ನು ಲೆಕ್ಕಿಸದೆ ಈಜಿಪ್ಟ್, ಸ್ವಿಟ್ಜರ್ಲೆಂಡ್, ಫ್ರಾನ್ಸ್, ಬರ್ಮ, ಆಸ್ಟ್ರಿಯ, ಹಂಗೇರಿ, ಇಂಗ್ಲೆಂಡ್, ಅಮೆರಿಕದ ಸಂಯುಕ್ತ ಸಂಸ್ಥಾನ, ಕೆನಡ, ಈ ದೇಶಗಳಲ್ಲೆಲ್ಲ ಸಂಚರಿಸಿ ತನ್ನ ಶಾಂತಿ ಸಂದೇಶವನ್ನೂ ಏಕೀಕರಣದ ಒಸಗೆಯನ್ನೂ ಸಾವಿರಾರು ಜನರಿಗೆ ಬೋಧಿಸಿದನು. ''ಬಹೈ ಎಂದರೇನು?'' ಎಂಬ ಪ್ರಶ್ನೆಗೆ ಆತನು ಹೇಳುತ್ತಿದ್ದುದ್ದೇನೆಂದರೆ:- ''ಬಾಹೈ ಆಗಿರುವದೆಂದರೆ ಭೂಲೋಕದವರನ್ನೆಲ್ಲ ಪ್ರೀತಿಸುವದು'' ಮಾನವವರ್ಗವನ್ನೆಲ್ಲ ಪ್ರೀತಿಸುವದು, ಅದರ ಸೇವೆಯನ್ನು ಮಾಡುವದು; ಎಲ್ಲರೂ ಶಾಂತಿಯಿಂದಿರುವಂತೆ ಎಲ್ಲರೂ ಅಣ್ಣತಮ್ಮಂದಿರಾಗಿರುವಂತೆ ಬಾಳುವದಕ್ಕೆ ಯತ್ನಿಸುವದು. ಇಂಥ ಲೋಕಪ್ರಿಯವಾದ ಬೋಧನೆಯನ್ನು ಮಾಡಿದ ಬಳಿಕ ಅಬ್ದುಲ್ ಬಾಹನ 1921ನೆಯ ಇಸವಿಯಲ್ಲಿ ತನ್ನ ಲೋಕಸೇವೆಯ ಜೀವನವನ್ನು ಮುಗಿಸಿದನು.

ಈಗ್ಗೆ ಈ 'ಬಾಹೈ'ಪಂಥದವರು ಎಲ್ಲೆಲ್ಲಿಯೂ ಹರಡುತ್ತಿದಾರೆ. ಮುಖ್ಯವಾಗಿ ಅಮೆರಿಕದಲ್ಲಿರುವ 'ಅಭಿನವೇತಿಹಾಸಸಂಘ'ದವರು ಈ ಮತದ ಉಪದೇಶಗಳನ್ನು ಬಗೆಬಗೆಯಿಂದ ಪ್ರಪಂಚದಲ್ಲಿ ಬಿತ್ತರಿಸುತ್ತಿದಾರೆ. ಇಡಿಯ ಭೂಮಂಡಲವೇ ಒಂದಾಗಬೇಕೆಂಬ ಅವರ ಆಸೆಯನ್ನು ನೆರವೇರಿಸುವಂತೆ ಜನರಿಗೆ ಧರ್ಮಾರ್ಥವಾಗಿ ದಿಗ್ದಂತಿಗಳಾದ ಜಗತ್ಪ್ರಖ್ಯಾತರಾದ ವಿದ್ವಾಂಸರುಗಳಿಂದ ಭಾಷಣಗಳನ್ನು ಮಾಡಿಸುತ್ತಾರೆ. ಭೂಮಂಡಲದ ಸಮಾಜದ ಪುನರ್ ನಿರ್ಮಾಣದ ವಿಷಯದಲ್ಲಿ ಪಂಚಭೂಖಂಡಗಳ ತರುಣದಿಂದಲೂ ಪ್ರಬಂಧಗಳನ್ನು ಬರೆಯಿಸಿ ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹುಮಾನಗಳನ್ನು ಕೊಟ್ಟಿರುತ್ತಾರೆ. ''ಪೂರ್ವ ಪಶ್ಚಿಮಗಳ ಸಾರ್ಥ'' (The Caravan of the east and west Inc) ಎಂಬ ಹೆಸರಿನ ಸಂಸ್ಥೆಯೊಂದನ್ನು ಏರ್ಪಡಿಸಿ ಅಖಿಲ ಜನಾಂಗಗಳ ತರುಣರಿಗೆ ಪತ್ರವ್ಯವಹಾರದ ಮೂಲಕ ಮೈತ್ರಿಯನ್ನುಂಟುಮಾಡುವ ಪ್ರಯತ್ನವನ್ನು ಮಾಡಿರುತ್ತಾರೆ. ಬಾಹ ಉಲ್ಲಾಹನ ಗ್ರಂಥಗಳನ್ನು ಇಂಗ್ಲೀಷಿಗೆ ಅನುವಾದಮಾಡಿ ಪ್ರಕಟಿಸಿರುತ್ತಾರೆ. ಈ ಸಂದೇಶವನ್ನು ಸಂಗ್ರಹಿಸುವ ಸಣ್ಣ ಸಣ್ಣ ಪುಸ್ತಕಗಳನ್ನು ಹೊರಕ್ಕೆ ತಂದಿರುತ್ತಾರೆ. ''ಅಭಿನವೇತಿಹಾಸ'' ''ಮಕ್ಕಳಸಾರ್ಥ'' ಎಂಬರ್ಥದ ಹೆಸರಿನ ಪತ್ರಿಕೆಗಳನ್ನು ಇಂಗ್ಲೀಷಿನಲ್ಲಿ ಪ್ರಕಟಿಸುತ್ತಿದ್ದಾರೆ. ಎಲ್ಲಕ್ಕೂ ಮೇಲಾಗಿ ''**ಅಖಿಲ ಮಾನವ ಜಾತಿಯ ವೇದ**'' (The Bible of Mankind) ಎಂಬ ಹೆಸರಿನಿಂದ ಭೂಮಂಡಲದ ಒಂಬತ್ತು ಮತಗಳ ಸಾರವನ್ನು ಆಯಾ ಮತಗಳ ಧರ್ಮಗ್ರಂಥಗಳಿಂದ ತೆಗೆದು ಅವತರಣಿಕೆಗಳಿಂದಲೂ

ಆಯಾ ಮತದ ಅನುಯಾಯಿಗಳಲ್ಲಿ ಪ್ರಖ್ಯಾತರಾದ ಒಬ್ಬೊಬ್ಬ ಮಹನೀಯರು ಬರೆದ ಭೂಮಿಕೆಗಳಿಂದಲೂ ಅಲಂಕರಿಸಿ ಪ್ರಕಟಿಸಿರುತ್ತಾರೆ. ಈ ಸಂಘದವರೇ ಈಗ ಬಾಹ್ಯೆಶತಮಾನೋತ್ಸವವನ್ನು ಮಾಡುವದಕ್ಕೆ ಉದ್ಯುಕ್ತರಾಗಿರುವರು.

ಈ ಉತ್ಸವದಲ್ಲಿ ಒಂದು ಮಹಾನಾಟಕವನ್ನು ಆಡುವರಂತೆ. ಒಂದು ವಿಶ್ವಧರ್ಮಸಮ್ಮೇಳನವನ್ನು ಕೂಡಿಸುವರಂತೆ. ಭೌತಿಕವಿಜ್ಞಾನದ, ವಿದ್ಯಾಭ್ಯಾಸದ, ಮತ್ತು ತತ್ತ್ವವಿಚಾರದ ಮುಂದಾಳುಗಳ ಸಮ್ಮೇಲನವೊಂದನ್ನೇರ್ಪಡಿಸುವರಂತೆ. ಬಾಹ್ಯೆಪ್ರದರ್ಶನವನ್ನೂ ಏರ್ಪಡಿಸುವರಂತೆ; ಆಕಾಶವಾಣಿಯಿಂದ ಸಂದೇಶವನ್ನೂ ಕಳುಹುವರಂತೆ; ಪುಸ್ತಕಪ್ರಕಟನೆಗಳನ್ನು ಮಾಡುವರಂತೆ. ಇದರಲ್ಲಿ ಬಾಹ್ಯೆಪಂಥದ ಪ್ರಚಾರವು ಪ್ರಮುಖಸ್ಥಾನವನ್ನು ಹೊಂದುವದೆಂಬುದು ನಿರೀಕ್ಷಣೀಯವಾಗಿಯೇ ಇದೆ. ಈ ಸಂಘದವರ ಉದ್ದೇಶವು ಮಾನವವರ್ಗದ ಪ್ರಜಾಪ್ರಭುತ್ವವನ್ನು ಏರ್ಪಡಿಸುವದು ಇದಕ್ಕಾಗಿ ಇವರು ಇಟ್ಟುಕೊಂಡಿರುವ ಸಹಾಯಕ ಉದ್ದೇಶಗಳು ಸಾಮಾಜಿಕವೇ ಅಲ್ಲದೆ ರಾಜಕೀಯವಾಗಿಯೂ ಇರುತ್ತವೆ. ಉದ್ದೇಶವು ಯುಕ್ತವೆಂದು ವಿಶಾಲಹೃದಯದವರು ಹೇಳಿದರೂ ಅದು ನೆರವೇರುವದಕ್ಕೆ ಅನಿವಾರ್ಯಗಳಾದ ಆಡಚಣೆಗಳಿರುವವೆಂಬುದನ್ನು ಎಲ್ಲರೂ ಒಪ್ಪಬೇಕು. ಆದರೆ ಇವುಗಳಲ್ಲಿ ಒಂದು ಉದ್ದೇಶವು ಅಧ್ಯಾತ್ಮಪ್ರಕಾಶದ ವಾಚಕರಿಗೆ ಅದರವನ್ನುಂಟು ಮಾಡುವಂಥದ್ದು. ''ಒಂದಾನೊಂದು ಸಾರ್ವತ್ರಿಕ ಧರ್ಮವಿರಬೇಕು. ಅದರಲ್ಲಿ ಅವರವರು ಅವರವರ ಮತದಂತೆ ದೇವರನ್ನು ಆರಾಧಿಸುವದಕ್ಕೂ ಒಬ್ಬರಿಗೊಬ್ಬರು ಉಪಕಾರವನ್ನು ಮಾಡುವದಕ್ಕೂ ಅವಕಾಶವಿರಬೇಕು. ಎಲ್ಲರಿಗೂ ಇತರ ಮತಗಳ ತಿಳಿವಳಿಕೆಯೂ ಅವುಗಳಲ್ಲಿ ಸಹಾನುಭೂತಿಯೂ ಇರಬೇಕು'. ಎಂಬುದೇ ಆ ಉದ್ದೇಶವು. ಈ ಸಾರ್ವತ್ರಿಕಧರ್ಮವನ್ನು ನಾವುಗಳು ಈಗಲೇ ಇಲ್ಲಿಯೇ ಕೈಗೊಳ್ಳುವದಕ್ಕೆ ಯಾರೊಬ್ಬರ ಅಡ್ಡಿಯೂ ಇರುವಂತೆ ಕಾಣಲಿಲ್ಲ.

★★★★★

# ಪಾರ್ಸಿಯವರ ಮತ

## (ಮೆಸೆಜ್, ಈಶ್ವರಾಂಕ-ಮುಂತಾದ ಕಡೆಗಳಿಂದ ಸಂಗ್ರಹಿಸಿದ್ದು)

**ಸಂಗ್ರಹ - ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು**

**1**

ಪ್ರಪಂಚದಲ್ಲಿ ಪಾರ್ಸಿಜನರ ಸಂಖ್ಯೆಯು ಬಲು ಕಡಿಮೆಯಾಗಿದೆ; ಆದರೆ ಅವರು ಭರತಖಂಡದ ಜನಾಂಗದಲ್ಲಿ ಒಂದು ಬಹು ಮುಖ್ಯವಾದ ಭಾಗವಾಗಿರುತ್ತಾರೆ. ವರ್ತಕತನದಲ್ಲಿ, ಕುಶಲವಿದ್ಯೆಯಲ್ಲಿ, ಬ್ಯಾಂಕಿನ ಕೆಲಸದಲ್ಲಿ, ವಿದ್ಯಾಭ್ಯಾಸದ ಪ್ರಸಾರಣೆಯಲ್ಲಿ- ಎಲ್ಲಿಲ್ಲಿಯೂ ಪಾರ್ಸಿಯರು ಮುಂದಾಳುಗಳಾಗಿರುವರು. ಇವರ ಜನರು ಬೊಂಬಾಯಿಯಲ್ಲಿಯೇ ಹೆಚ್ಚಾಗಿದ್ದಾರೆ. ಆದರೆ ಇವರು ಮಾಡುವ ಪರೋಪಕಾರವು ಲೋಕ ಪ್ರಸಿದ್ಧವಾಗಿರುವದು. ಕರ್ಣಾಟಕದಲ್ಲಿಯೂ ಇವರು ಜನೋಪಕಾರಕವಾದ ಮಹಾಕಾರ್ಯಗಳನ್ನು ಮಾಡಿರುತ್ತಾರೆ; ಸುಪ್ರಸಿದ್ಧವಾದ ‘‘ತಾತಾ ಇನ್ಸ್ಟಿಟ್ಯೂಟ್’’ ಎಂಬ ಭೌತಿಕಶೋಧನಾಲಯವು ಒಬ್ಬ ಪ್ರಖ್ಯಾತ ಪಾರ್ಸಿಯ ಔದಾರ್ಯದ ಫಲವು. ಈ ಎಲ್ಲಾ ಕಾರಣಗಳಿಂದ ಪಾರ್ಸಿಜನರ ವಿಷಯದಲ್ಲಿ ಭಾರತವಾಸಿಗಳಾದ ನಮಗೆಲ್ಲರಿಗೂ ಆದರವಿರುವದು ಸ್ವಾಭಾವಿಕವಾಗಿದೆ.

ಪಾರ್ಸಿಮತವನ್ನು ಸ್ಥಾಪಿಸಿದಾತನು **ಸೋರೋ ಆಸ್ತರನು ಅಥವಾ ಅಶೋಸ್ಪಿತಮ ಸರಾಥುತ್ರನು.**[1] ಪರ್ಷಿಯಾದೇಶದ ಈಶಾನ್ಯಭಾಗದಲ್ಲಿದ್ದ ಮೀಡಿಯಾ ಎಂಬ ಮಂಡಲದಲ್ಲಿ ‘ರಪಿ’ ಎಂಬ ನಗರದಲ್ಲಿ ಸದಾಚಾರಿಯಾಗಿಯೂ ಈಶ್ವರಭಕ್ತನಾಗಿಯೂ ಇದ್ದ ಪೌರುಷಾಸ್ಪನೆಂಬಾತನಿಗೆ

---

1. ‘ಅಶೋ’ ಎಂಬುದು ಸಂಸ್ಕೃತದ ಋಷಿಶಬ್ದಕ್ಕೆ ಸಮಾನವಾದದ್ದು. ಸ್ಪಿತಮನೆಂಬುದು ಮಗುವಿಗೆ ತಂದೆಯು ನಾಮಕರಣಕಾಲದಲ್ಲಿ ಇಟ್ಟ ಹೆಸರು. ಆ ಹೆಸರಿನ ವೀರನೊಬ್ಬನು ಹಿಂದಕ್ಕೆ ಇದೇ ವಂಶದಲ್ಲಿ ಆಗಿಹೋಗಿದ್ದನು. ಸರಾಥುಶ್ತ್ರನೆಂಬುದು ಈತನು ಮತಾಚಾರ್ಯನಾದ ಮೇಲೆ ಬಂದ ಹೆಸರು.

ದೋಗ್ಧೋ ಎಂಬ ಧರ್ಮಪತ್ನಿಯಲ್ಲಿ ಹುಟ್ಟಿದ ಮಹಾಪುರುಷನಿವನು. ಈತನು ಹುಟ್ಟಿದ್ದು ರಾಜವಂಶದ ಕುಟುಂಬದಲ್ಲಿ; ಆಗಿನ ಬಾದಷಹನೂ ಅವನ ಸರದಾರರೂ ಈ ಮನೆಯಲ್ಲಿ ಹುಟ್ಟುವ ಮಗುವಿನಿಂದ ತಮಗೆ ಏನೋ ಅಪಾಯವಾಗುವದೆಂದು ಯಾವದೋ ಒಂದು ದುಃಶಕುನಕ್ಕೆ ಅರ್ಥಮಾಡಿಕೊಂಡು ಇವನ ನಾಶಕ್ಕಾಗಿ ಬಹಳ ಪ್ರಯತ್ನಮಾಡಿದಂತೆ. ಅವರ ಹೆದರಿಕೆಯಿಂದ ಪೌರುಷಾಸ್ಪನು ತನ್ನ ಹೆಂಡತಿಯನ್ನು ರವಿನಗರದಲ್ಲಿದ್ದ ಆಕೆಯ ತೌರುಮನೆಗೆ ಕಳುಹಿಸಿಬಿಟ್ಟಿದ್ದನು: ಅಲ್ಲಿ ಜನಿಸಿದ ಸ್ಪಿತಮನು ಶತ್ರುಗಳ ಕೋಟಲೆಗಳನ್ನೆಲ್ಲ ತಡೆದುಕೊಂಡು ಈಶ್ವರಾನುಗ್ರಹದಿಂದ ಉಳಿದುಕೊಂಡನು. ತಂದೆಯೇ ಈತನ ವಿದ್ಯಾಭ್ಯಾಸವನ್ನು ನಡೆಯಿಸಿದನು. ಈಶ್ವರಭಕ್ತಿಯ ಬೀಜವನ್ನು ಇವನ ಹೃದಯದಲ್ಲಿ ಬಿತ್ತಿದವನೂ ತಂದೆಯೇ. ಆಗಿನ ಪದ್ಧತಿಯಂತೆ ಹದಿನೈದನೆಯ ವರ್ಷಕ್ಕೆ ಮಗನಿಗೆ ಮದುವೆಯನ್ನು ಮಾಡಿಬಿಡಬೇಕೆಂದು ತಂದೆಯು ಯೋಚಿಸುತ್ತಿದ್ದನು: ಆದರೆ ಅಷ್ಟರಲ್ಲಿ ಸ್ಪಿತಮನು ವೈರಾಗ್ಯದಿಂದ ಮನೆಮಾರುಗಳನ್ನೆಲ್ಲ ಬಿಟ್ಟು ಹೊರಟು ಎಲ್ಬರ್ಸ್‌ಪರ್ವತದ ಒಂದು ಗುಹೆಯಲ್ಲಿ ತಪಶ್ಚರ್ಯೆಯನ್ನು ಮಾಡುತ್ತಾ ಏಕಾಂತವಾಸದಲ್ಲಿಯೇ ಸುಮಾರು ಹದಿನೈದು ವರ್ಷಗಳನ್ನು ಕಳೆದುಬಿಟ್ಟನು. ಅಲ್ಲಿ 'ಬಹುಮನ್' ಎಂಬ ದೇವದೂತನು ಅವನಿಗೆ ಈಶ್ವರನ ದರ್ಶನಮಾಡಿಸಿಕೊಟ್ಟನೆಂದೂ ಈಶ್ವರನ ಅಪ್ಪಣೆಯೆಂತೆ ಸ್ಪಿತಮನು ಅಂದಿನಿಂದ ಧರ್ಮೋಪದೇಶಕನಾದನೆಂದೂ ಪಾರ್ಸಿಯವರು ನಂಬುತ್ತಾರೆ.

ಇಲ್ಲಿಂದ ಮುಂದಕ್ಕೆ ಬ್ರಹ್ಮತೇಜಸ್ಸಿನಿಂದ ಹೊಳೆಯುತ್ತಾ ಉಪದೇಶಕನಾಗಿ ಬಂದ ಸ್ಪಿತಮನಿಗೆ 'ಸರಾಥುಶ್ತ್ರ' (ಬಂಗಾರದ ಹೊಳಪಿನವನು) ಎಂಬ ಹೆಸರು ಬಂದಿತು. ಈ ಕಾಲಕ್ಕೆ ಇರಾನದಲ್ಲಿ ವಿಗ್ರಹಾರಾಧನೆಯೂ ಜಾತಿಪದ್ಧತಿಯೂ ಬಲವಾಗಿ ಹಬ್ಬಿದ್ದವು. ಆಕಾಶ, ಸೂರ್ಯ, ಚಂದ್ರ, ಗ್ರಹಗಳು, ನಕ್ಷತ್ರಗಳು, ಭೂಮಿ, ನದಿ – ಮುಂತಾದವುಗಳೆಲ್ಲ ಪರಮೇಶ್ವರನ ಸೃಷ್ಟಿಯಾದ್ದರಿಂದ ಆತನ ಮಹಿಮೆಯನ್ನು ಸೂಚಿಸುತ್ತವೆ – ಎಂಬ ಭಾವನೆಯಿಂದ ಪುರಾತನಾರ್ಯರು ಅವನ್ನು ಪೂಜಿಸುತ್ತಿದ್ದರು. ಆದರೆ ಬರುಬರುತ್ತಾ ಸೃಷ್ಟಿಯ ವಸ್ತುವನ್ನೂ ಸೃಷ್ಟಿಮಾಡಿದ ದೇವರನ್ನೂ ಬೇರ್ಪಡಿಸಿಕೊಳ್ಳಲರಿಯದೆ ಆಯಾ ವಸ್ತುಗಳನ್ನೇ ಅವರು ದೇವರೆಂದೆಣಿಸಲಾರಂಭಿಸಿದರು. ಸರಾಥುಶ್ತ್ರನು ''ದೇವರು ಅನೇಕರಿಲ್ಲ, ಸರ್ವೇಶ್ವರನಾದ ದೇವರು ಒಬ್ಬನೇ; ಆತನ ಹೆಸರು ಅಹುರಮಸ್ದನು (ಸರ್ವಜ್ಞನಾದ

ಈಶ್ವರನು); ಆತನನ್ನು ಆರಾಧಿಸುವರೇ ಮಸ್ದಾಯಸ್ನ (ಈಶ್ವರಾರಾಧನೆ)'' ಎಂದು ಉಪದೇಶಿಸಿದನು. ಅಂದಿನಿಂದ ಆರ್ಯರಲ್ಲಿ **'ಮಸ್ದಾಯಸ್ನೀಯರು'** (ಈಶ್ವರಾರಾಧಕರು) **'ದೈವಯಸ್ನೀಯರು'** (ರಾಕ್ಷಸರ ಆರಾಧಕರು)- ಎಂಬ ಎರಡು ತಂಡಗಳಾದವು. ಈ ಎರಡು ಪಂಗಡದವರಿಗೂ ಘೋರಸಂಗ್ರಾಮಗಳಾಗಿ ಅವುಗಳಲ್ಲಿ ಸೋತು ಹೋದ ದೈವಯಸ್ನೀಯರು ಭರತಖಂಡಕ್ಕೆ ಬಂದುಬಿಟ್ಟರು. ಅವರ ವಂಶದವರೇ ಈಗಿನ ಹಿಂದುಗಳು. ಹೀಗೆಂದು ಪ್ರಾಚೀನೇತಿಹಾಸಶೋಧಕರು ಹೇಳುತ್ತಾರೆ.

ಮೇಲಿನ ಊಹೆಗೆ ಸಾಧಕವಾಗಿ ಕೆಲವು ಪ್ರಮಾಣಗಳೂ ದೊರೆಯುತ್ತವೆ. ಪಾರ್ಸಿಗಳ ದೇವರಿಗೆ 'ಅಹುರ'(ಅಸುರ)ನೆಂದು ಹೆಸರಷ್ಟೆ; ವೇದದಲ್ಲಿ ಅಸುರನೆಂಬುದು ದೇವತೆಗಳ ವೈರಿಗಳ ಹೆಸರಾಗಿರುವದು. ಪಾರ್ಸಿಗಳು ಹೇಳುವ ದೈವಾರಾಧಕರು ವೇದದಲ್ಲಿ ಹೇಳಿರುವ ದೇವಾರಾಧಕರೇ ಎಂದೂ ಊಹಿಸಬಹುದಾಗಿದೆ; ಏಕೆಂದರೆ ಇಂದ್ರ, ಅಗ್ನಿ, ಯಮ, ವರುಣ- ಮುಂತಾದ ಅನೇಕ ದೇವತೆಗಳನ್ನು ವೇದದಲ್ಲಿ ಕೊಂಡಾಡಿರುವದು ಕಂಡು ಬರುತ್ತದೆ. ಆದರೆ ವೈದಿಕರು ಅತ್ಯಂತ ಪುರಾತನಕಾಲದಲ್ಲಿಯೂ ಏಕೇಶ್ವರವಾದಿಗಳಾಗಿಯೇ ಇದ್ದಂತೆ ತೋರುವದು. ''ಏಕಂ ಸದ್ವಿಪ್ರಾಬಹುಧಾ ವದನ್ತಿ'' (ಇರುವ ತತ್ತ್ವವು ಒಂದೇ, ಅದನ್ನೇ ತಿಳಿದವರು ಬಗೆ ಬಗೆಯಾಗಿ ಕರೆಯುತ್ತಿರುವರು) ಎಂಬ ವಚನವು ಋಗ್ವೇದದಲ್ಲಿಯೇ ಇದೆ.

ಸರಾಥುಶ್ತ್ರನ ಮೊಟ್ಟಮೊದಲನೆಯ ಶಿಷ್ಯನು **'ಮ ಇಧ್ಯೋಮಾಹ'**ನೆಂಬಾತನು. ಇವನು ಸರಾಥುಶ್ತ್ರನ ಚಿಕ್ಕಪ್ಪನ ಮಗನು. ಇವನು ಗುರುಸೇವೆಯಲ್ಲಿಯೇ ಕಡೆಯವರೆಗೂ ನಿರತನಾಗಿದ್ದನು. ಎಷ್ಟೋ ವರ್ಷಗಳ ವರೆಗೂ ಸ಼ರಾಥುಶ್ತ್ರನು ಪಶ್ಚಿಮ ಈರಾನದಲ್ಲಿ ಸಂಚರಿಸಿದರೂ ಇವನ ಪಕ್ಷವನ್ನು ಯಾರೂ ವಹಿಸಲಿಲ್ಲ; ಕೊನೆಗೆ ಪೂರ್ವ ಈರಾನದ ಬಾಲ್ಕ (Bactria)ದೇಶದ ಬಾದಶಹನಾದವೀಶ್ತಾಸ್ಪ(ಗುಶ್ತಾಸ್ಪ)ನುಈತನನ್ನುಸನ್ಮಾನದಿಂದಬರಮಾಡಿಕೊಂಡು ಈ ಮತವನ್ನು ಅವಲಂಬಿಸಿದನು. ದೊರೆಯ ಜೊತೆಯಲ್ಲಿ ಅವನ ಇಬ್ಬರು ವಜೀರರೂ ಸರಾಥುಶ್ತ್ರನ ಶಿಷ್ಯರಾದರು. ಗುಸ್ತಾಸ್ಪ ಬಾದಾಷಹನು ಈ ಹೊಸ ಮತದ ಉಪದೇಶಗಳನ್ನು ಹನ್ನೆರಡು ಸಾವಿರ ಹದಮಾಡಿಸಿದ ಗೋಚರ್ಮಗಳ ಮೇಲೆ ಬರೆಯಿಸಿ ಪರ್ಸಿಪಾಲಿಸ್ ಎಂಬಲ್ಲಿ ಒಂದು ಬಂಡೆಯಲ್ಲಿ ಕೊರೆದ ಒಂದಾನೊಂದು

ನೆಲಮಾಳಿಗೆಯಲ್ಲಿ ಭದ್ರವಾಗಿಡಿಸಿದನಂತೆ. ಇಲ್ಲಿಂದ ಮುಂದಕ್ಕೆ ಮಸ್ದಾಯಸ್ನದ ಮತವು ವೇಗದಿಂದ ಹಬ್ಬುವದಕ್ಕೆ ಮೊದಲಾಯಿತು. ಕೈರಸ್, ಡೇರಿಯಸ್-ಎಂಬ ಪರ್ಷಿಯದ ಚಕ್ರವರ್ತಿಗಳು ಈ ಮತವನ್ನು ಎಲ್ಲೆಲ್ಲಿಯೂ ಹರಡುವದಕ್ಕೆ ಬೆಂಬಲವನ್ನಿತ್ತರು. ಪರ್ಷಿಯದ ಚಕ್ರವರ್ತಿಯಾದ ಸರ್ಕ್ಸಿಸನಿಗೂ ಗ್ರೀಕರಿಗೂ ಆದ ಯುದ್ಧಗಳಲ್ಲಿ ಆ ಚಕ್ರವರ್ತಿಗೆ ಅಪಜಯವಾಗುವದಕ್ಕೆ ಬದಲು ಗ್ರೀಕರೇ ಸೋತುಹೋಗಿದ್ದರೆ ಇಂದು ಯೂರೋಪುಖಂಡವೆಲ್ಲ ಪಾರ್ಸಿಮತಕ್ಕೆ ಸೇರಿರುವ ಸಂಭವವಿತ್ತು. ಆದರೆ ಕಾಲಗತಿಯು ಬೇರೆಯಿತ್ತು. ಹೀಗಾಗುವದಕ್ಕೆ ಬದಲು ಪಾರ್ಸಿಗಳೇ ಅರಬರ ಹಾವಳಿಗೆ ತುತ್ತಾಗಿ ತಮ್ಮ ದೇಶವನ್ನು ಬಿಟ್ಟು ಅನ್ಯದೇಶದಲ್ಲಿ ಶರಣುಹೊಕ್ಕು ಅಲ್ಲಿಯ ಆಚಾರವಿಚಾರಗಳಿಂದಲೂ ಮಾರ್ಪಡುವ ಸ್ಥಿತಿಗೆ ಸಿಕ್ಕುಬಿದ್ದಿರುತ್ತಾರೆ. ಧರ್ಮದ ವಿಜಯವು ಎಲ್ಲೆಲ್ಲಿಯೂ ಆಗುತ್ತಿರುವದನ್ನು ಕಣ್ಣಾರೆ ಕಾಣುವಷ್ಟು ದೀರ್ಘಕಾಲ ಬದುಕಿದ್ದು ಸರಾಥುಶ್ತ್ರನು ಮುಪ್ಪಿನ ಕೊನೆಯಲ್ಲಿ ದೇಹತ್ಯಾಗಮಾಡಿದನು.

ಈ ಮತದ ಉಪದೇಶಗಳು ಈಗ ''**ಸೆಂಡ್-ಅವೆಸ್ತ**'' ಎಂಬ ಗ್ರಂಥದಲ್ಲಿವೆ. ಸೆಂಡ್ ಎಂಬುದು ಗ್ರಂಥವನ್ನು ಬರೆದಿರುವ ಭಾಷೆಯ ಹೆಸರು. ಅವೆಸ್ತ ಎಂಬ ಮಾತಿಗೆ ಭಾಷ್ಯವೆಂದು ಅರ್ಥವಾಗುತ್ತದೆ. ಈಗ ಸಿಕ್ಕುವ ಅವೆಸ್ತವು ಪೂರ್ತಿಯಾಗಿಲ್ಲ. ಗ್ರೀಕರ ಸಿಕಂದರ (ಅಲೆಕ್ಸಾಂಡರ್) ಬಾದಶಹನು ಪರ್ಷಿಯಾದೇಶವನ್ನು ಗೆದ್ದಾಗಲೂ ಮುಂದೆ ಕ್ರಿ.ಶ.651ರಲ್ಲಿ ಅರಬಿಯವರು ಈ ದೇಶಕ್ಕೆ ನುಗ್ಗಿದಾಗಲೂ ಎಷ್ಟೋ ಗ್ರಂಥಭಾಗವು ನಾಶವಾಯಿತೆಂದು ಹೇಳುತ್ತಾರೆ.

## 2

ಪಾರ್ಸಿಮತದ ವೇದವಾದ 'ಅವೆಸ್ತ'ವು ಸಿಕಂದರನ ಹಾವಳಿಯಿಂದ ಖಿಲವಾದ ಮೇಲೆ 'ದುಸ್ತುರ'ರೆಂಬ ಪಾರ್ಸಿ ಧರ್ಮಗುರುಗಳ ಅಧ್ಯಯನಬಲದಿಂದ ಒಂದಿಷ್ಟು ಉಳಿದುಕೊಂಡಿತ್ತು. ಪಾರ್ಥಿಯನ್ ವಂಶದ ಮತ್ತು ಸಾಸನವಂಶದ ದೊರೆಗಳ ಪೋಷಣೆಯಿಂದ ಮತ್ತೆ ಗ್ರಂಥಸ್ಥವಾಗಿ ಪಹ್ಲವಿ ಭಾಷೆಗೂ ಪರಿವರ್ತನೆಯಾಯಿತು. ಸ್ವಲ್ಪ ದಿನಗಳಲ್ಲಿಯೇ ಅರಬರ ಹಾವಳಿಯು ಬಂದೊದಗಲು ಆಗ್ಗೆ ಉಳಿದಿದ್ದ ಕೈಬರಹದ ಪ್ರತಿಗಳನ್ನು ಭರತ ಖಂಡಕ್ಕೆ ಸಾಗಿಸಿದರು. ಈ ಏಳುಬೀಳುಗಳಿಂದ ಈಗ ಈ ಗ್ರಂಥದ ಕೆಲವು ತುಂಡುಗಳು ಮಾತ್ರ ಉಳಿದುಕೊಂಡಿವೆ.

ಈಗಿರುವ ಗ್ರಂಥದಲ್ಲಿ ಯಸ್ನ, ಗಾಥಾ, ವೆಂಡಿಡಾಡ್- ಎಂಬ ಮೂರು ಭಾಗಗಳಿವೆ. ಯಸ್ನದಲ್ಲಿ ಯಜ್ಞಮಂತ್ರಗಳಿವೆ; ಗಾಥೆಗಳಲ್ಲಿ ಸ್ಪರಾಥುಶ್ತ್ರನ ಉಪದೇಶಗಳಿವೆ; ವೆಂಡಿಡಾಡ್ ಎಂಬ ಮೂರನೆಯ ಭಾಗದಲ್ಲಿ ಪಾರ್ಸಿಯವರ ಆಚಾರಗಳೂ ಕುಲಪದ್ಧತಿಗಳೂ ವಿವೃತವಾಗಿವೆ.

ಪಾರ್ಸಿಮತವು ಏಕೇಶ್ವರಮತವು; ಅಹುರಮಸ್ದನೆಂಬ ಈಶ್ವರನೊಬ್ಬನೇ ಜಗತ್ತಿನ ಸೃಷ್ಟಿಸ್ಥಿತಿಲಯಗಳಿಗೆ ಕಾರಣನೆಂದು ಸಾರಾಥುಶ್ತ್ರನು ಉಪದೇಶಿಸಿರುತ್ತಾನೆ. ಅವೆಸ್ತದಲ್ಲಿ ಅಹುರಮಸ್ದನೇ ಅಲ್ಲದೆ ಅಷವಹಿಸ್ಥ (ಧರ್ಮದೇವತೆ), ವೊಹು-ಮೆನ (ಶುದ್ಧ ಮನೋಭಿಮಾನದೇವತೆ), ಕ್ಷತ್ರವ ಇರ್ಯ (ಬಲಾಭಿಮಾನದೇವತೆ), ಸ್ಪೆಂತ ಆರ್ಮೆ ಇತಿ (ಪ್ರೀತಿಯಭಿಮಾನದೇವತೆ), ಹವೂರ್ವತಾತ್ (ಆರೋಗ್ಯದಭಿಮಾನದೇವತೆ), ಅಮೆರೆತಾತ್ (ಅಮೃತತ್ವದ ದೇವತೆ)- ಎಂಬ (**ಅಮೆಶಾಸ್ಪಂದ**) ದೇವತೆಗಳ ಹೆಸರೂ ಕಂಡುಬರುತ್ತದೆ. ಆದರೆ ಈ ದೇವತೆಗಳೆಂಬವರು[1] ಪರಮೇಶ್ವರನ ಶಕ್ತಿವಿಶೇಷಗಳೇ ಹೊರತು ಸ್ವತಂತ್ರರಾದ ದೇವತೆಗಳಲ್ಲವೆಂದು ಪಾರ್ಸಿಯವರೆನ್ನುವರು.

ಸರ್ವೇಶ್ವರನಾದ ಮಸ್ದನ ಮತಕ್ಕೆ ಅನುಸಾರವಾಗಿ ನಡೆದುಕೊಂಡು ಆತನನ್ನು ಸೇರುವದೇ ಪರಮ ಪುರುಷಾರ್ಥವೆಂಬುದು ಈ ಮತದ ಸಾರವು. ಇದಕ್ಕೆ ಸಾಧನವಾಗಿರುವ ಧರ್ಮಕ್ಕೆ '**ಅಷ**'ವೆಂದು ಹೆಸರು. ವೇದದಲ್ಲಿ ಹೇಳಿರುವ ಋತ, ಬೌದ್ಧಗ್ರಂಥದಲ್ಲಿರುವ ಧಮ್ಮ, ಕ್ರಿಸ್ತಿಯನರು ಹೇಳುವ ರೈಟ್ಯಸ್‌ನೆಸ್ (Righteousness), ಮುಸಲ್ಮಾನರೊಪ್ಪಿರುವ ಇಸ್ಲಾಂ- ಈ ಮಾತುಗಳಲ್ಲಿರುವ ಅಭಿಪ್ರಾಯವೇ ಅಷವೆಂಬ ಮಾತಿನಲ್ಲಿಯೂ ಅಡಕವಾಗಿರುವದು. ಒಳ್ಳೆಯ ವಿಚಾರ (ಹುಮತ), ಒಳ್ಳೆಯ ನುಡಿ (ಹುಖ್ತ), ಒಳ್ಳೆಯ ಕರ್ಮ (ಹುವರ್ತ್ಶ)- ಹೀಗೆ ತ್ರಿಕರಣಶುದ್ಧಿಯಿಂದ ಅನುಸರಿಸಿದ ಅಷದಿಂದ ಮನುಷ್ಯನು ಪರಮೇಶ್ವರನ ಸಾಲೋಕ್ಯ, ಸಾಮೀಪ್ಯ, ಸಾಯುಜ್ಯಗಳನ್ನು ಹೊಂದುವನೆಂಬುದು ಅವೆಸ್ತದ ಉಪದೇಶವು. ಪರೋಪಕಾರವು ಅಷದ ತಿರುಳಾಗಿರುವದು.

ಅಷದ ಮಾರ್ಗವನ್ನು ಬಿಡುವದಕ್ಕೆ ಅಥವಾ ಅನುಸರಿಸುವದಕ್ಕೆ

---

1. ಈ ಆರು ದೇವತೆಗಳಂತೆ ಎಸತರೆಂಬ ಪೂಜ್ಯರಾದ ದೇವತೆಗಳೂ ಉಂಟೆಂದು ಪಾರ್ಸಿಯವರ ನಂಬಿಕೆಯುಂಟು.

ಮನುಷ್ಯನು ಸ್ವತಂತ್ರನಾಗಿರುವನು. ಉರ್ವಾನ್ ಎಂಬ ತನ್ನಲ್ಲಿರುವ ಧರ್ಮಾಧರ್ಮವಿವೇಚನಶಕ್ತಿಯಿಂದ ತನಗೆ ಇಷ್ಟವಾದಂತೆ ಮನುಷ್ಯನು ನಡೆಯುತ್ತಾನೆ. ಅದಕ್ಕೆ ತಕ್ಕ ಫಲಗಳನ್ನು ಅನುಭವಿಸುತ್ತಾನೆ. ಸತ್ಕರ್ಮವನ್ನು ಮಾಡುವದಕ್ಕೆ ಸ್ಪೆಂಟೊ-ಮೈನ್ಯು ಎಂಬ ದೇವತೆಯೂ ದುಷ್ಕರ್ಮವನ್ನು ಮಾಡುವದಕ್ಕೆ ಅಂಗ್ರೊ-ಮೈನ್ಯು ಎಂಬ ದೇವತೆಯೂ ಪ್ರೇರಕರಾಗುವರು. ಆದರೂ ಮನುಷ್ಯನು ಸತ್ತಮೇಲೆ ಚಿನ್ವತ್ ಎಂಬ ಸೇತುವೆಯನ್ನು ದಾಟಿ ತನ್ನ ಪಾಪಪುಣ್ಯಫಲಗಳ ವಿಚಾರಣೆಗೆ ಒಳಪಟ್ಟು ಸದ್ಗತಿಯನ್ನೊ, ದುರ್ಗತಿಯನ್ನೊ, ಹೊಂದುವರು - ಎಂದಿರುವ ನಂಬಿಕೆಯಿಂದ ಮನುಷ್ಯನೇ ತನ್ನ ಕರ್ಮಕ್ಕೆ ಹೊಣೆಗಾರನಾಗಿರುವನೆಂತಲೂ ಈ ದೇವತೆಗಳು ಬರಿಯ ನಿಮಿತ್ತವೆಂತಲೂ ಹೇಳಬೇಕಾಗಿದೆ.

ಅಂಗ್ರೊಮೈನ್ಯುವಿಗೆ ಅಹ್ರಿಮನ್ನನೆಂಬ ಮತ್ತೊಂದು ಹೆಸರೂ ಉಂಟು. ಅಹ್ರಿಮನ್ನನು ಅಹುರ-ಮಸ್ದನಿಗೆ ಎದುರಾಳಿಯಾಗಿ ಜನರನ್ನೆಲ್ಲ ಕಷ್ಟಕ್ಕೆ ಈಡುಮಾಡುತ್ತಾನೆಂದೂ ಈಶ್ವರನು ಸೃಷ್ಟಿಮಾಡಿದ ಒಂದೊಂದು ಭೂಖಂಡದಲ್ಲಿಯೂ ಅತ್ಯುಷ್ಣ, ಅತಿಶೀತ, ಸಾಂಕ್ರಾಮಿಕರೋಗಗಳು, ವಿಷ ಕ್ರಿಮಿಗಳು- ಮುಂತಾದ ಒಂದೊಂದು ಆತಂಕವನ್ನು, ಸೃಷ್ಟಿಸಿರುವನು ಇವನೇ ಎಂತಲೂ ಅವೆಸ್ತದಲ್ಲಿ ವರ್ಣಿತವಾಗಿದೆ. ಇದನ್ನು ನೋಡಿದರೆ ಬೌದ್ಧರು ಹೇಳುವ 'ಮಾರ'ನೆಂಬ ದೇವತೆಯ ಮತ್ತು ಕ್ರಿಸ್ತಿಯನರೂ ಮುಸಲಮಾನರೂ ಹೇಳುವ ಸೈತಾನನ ಸ್ಥಾನವೇ ಅಹ್ರಿಮನ್ನನಿಗೂ ಇರುವದೆಂದು ಹೇಳಬಹುದಾಗಿದೆ. ಆದರೆ ಪಾರ್ಸಿಮತದಲ್ಲಿ ಕ್ರೈಸ್ತಮತದಲ್ಲಿರುವಂತೆ ನಿತ್ಯನರಕನಿತ್ಯಸ್ವರ್ಗಗಳು ಇಲ್ಲ; ಅಹ್ರಿಮನ್ನನು ಸ್ವತಂತ್ರನಲ್ಲವೆಂದೂ ಅಹುರ-ಮಸ್ದನಿಗೆ ಸಮಾನನಲ್ಲವೆಂದೂ ನಿತ್ಯನಲ್ಲವೆಂದೂ ತಿಳಿಸುವ ಸ್ಪಷ್ಟೋಕ್ತಿಗಳು ಪಾರ್ಸಿಯವರ ಗ್ರಂಥದಲ್ಲಿದೆ.

ಅಷಕ್ಕೆ ಅಭಿಮಾನಿಯಾದ ದೇವತೆಯು ಬೆಂಕಿಗೂ ಅಭಿಮಾನದೇವತೆ ಈ ಕಾರಣದಿಂದ ಬೆಂಕಿಯನ್ನು ಪಾರ್ಸಿಯವರು ಧರ್ಮದ ಹೊರಗುರುತೆಂದು ಭಾವಿಸಿ ಪೂಜಿಸುತ್ತಾರೆ. ಪ್ರಪಂಚದಲ್ಲಿ ಹತ್ತು ಕಡೆಗಳಲ್ಲಿ ಅಗ್ನಿದೇವನಿಗಾಗಿ ದೇವಾಲಯಗಳನ್ನು (ಆತಸ್-ಬೆಹ್ರಾಮ್ಸ್) ಕಟ್ಟಿಸಿರುತ್ತಾರೆ. ಬೊಂಬಾಯಿಗೆ ಸುಮಾರು ನೂರು ಮೈಲಿಗಳ ದೂರದಲ್ಲಿರುವ ಇಂಥ ಅಗ್ನಿಗೆ 'ಇರಾನ್-ಷಾ' (ಪಾರ್ಸಿದೇಶದ ರಾಜ) ಎಂದು ಹೆಸರು.

ಹಿಂದೂಧರ್ಮದಲ್ಲಿರುವ ಕೆಲವು ಆಚರಣೆಗಳು ಈ ಮತದಲ್ಲಿ ಕಂಡುಬರುತ್ತವೆ. ಉದಾಹರಣೆಗೆ ನವಜಾತ ಎಂಬ ಉಪನಯನಸಂಸ್ಕಾರದಲ್ಲಿ ಹಿಂದುಗಳು ಜನಿವಾರವನ್ನು ಧರಿಸುವಂತೆಯೇ ಇವರು ಸುದ್ರೇಹವೆಂಬ ಒಂದು ಜುಬ್ಬವನ್ನು ಧರಿಸುವರು; ಮೌಂಜಿಯ ಹಾಗೆ ಕುಸ್ತಿ ಎಂಬ ಬಿಳಿಯ ತುಪಟದ ಉಡಿ ದಾರವನ್ನು ಕಟ್ಟಿಕೊಳ್ಳುವರು. ಹಿಂದುಗಳ ವೇದದಲ್ಲಿರುವ ಎಷ್ಟೋ ದೇವತೆಗಳ ಹೆಸರುಗಳು ಇವರ ವೇದದಲ್ಲಿಯೂ ಕಂಡು ಬರುತ್ತದೆ; ಆದರೆ ಉಪನಿಷತ್ತಿನಲ್ಲಿರುವ ಬ್ರಹ್ಮಾತ್ಮವಾದವು ಮಾತ್ರ ಎಲ್ಲಿಯೂ ಕಂಡುಬರುವದಿಲ್ಲ. ಮುಸಲಮಾನ ಕ್ರಿಸ್ತಿಯನ್ನರ ಮತಗಳಂತೆ ನಿರಾಕಾರಸಗುಣಾರಾಧನೆಯು ಈ ಮತದಲ್ಲಿರುತ್ತದೆ; ಆದರೆ ಎಷ್ಟೋ ಭಾಗದಲ್ಲಿ ಆ ಎರಡು ಮತಗಳಿಗೂ ಇದಕ್ಕೂ ತುಂಬ ತಾರತಮ್ಯವಿರುವದು. ಪರ್ಸಿಯ ದೇಶವು ಭರತಖಂಡಕ್ಕೂ ಪಾಶ್ಚಾತ್ತ್ಯದೇಶಗಳಿಗೂ ನಡುವೆ ಇರುವಂತೆಯೇ ಈ ದೇಶದ ಮತವೂ ಆಚಾರವಿಚಾರಗಳೂ ಆ ಎರಡು ಪಂಗಡಗಳಿಗೂ ಸೇರದೆ ನಡುತರದ್ದಾಗಿಯೇ ಇರುವದೆಂದು ಹೇಳಬಹುದಾಗಿದೆ.

★★★★★

# ಸೂರ್ಯದಾಹ

## (ಶ್ರೀಯುತ ಜಮ್ಶಿದ್ ನಸರ್‌ವಾನ್ಜಿ ಮೆಹತ-ಇವರು 'ಯಂಗ್ ಬಿಲ್ಡರ್' ಎಂಬ ಪತ್ರಿಕೆಯಲ್ಲಿ ಬರೆದಿರುವ ಭಾಗ)

(ಪಾರ್ಸಿಯವರು ಶವವನ್ನು ಹೂಳುವದಿಲ್ಲ, ಸುಡುವದಿಲ್ಲ, ಜಲವಾಸವನ್ನು ಮಾಡುವದಿಲ್ಲ; ಬಿಸಿಲಿನಲ್ಲಿ ಒಣಗುವದಕ್ಕೆ ಬಿಡುತ್ತಾರೆ. ಈ ಪದ್ಧತಿಯು ಮಿತವ್ಯಯ, ಆರೋಗ್ಯ, ಸ್ವಭಾವನಿಯಮ – ಈ ಮೂರು ದೃಷ್ಟಿಯಿಂದಲೂ ಒಳ್ಳೆಯದೆಂಬುದನ್ನು ಲೇಖಕರು ಇಲ್ಲಿ ತಿಳಿಸಿರುತ್ತಾರೆ. – ಸಂ.ಅ.ಪ್ರ)

ಶವವನ್ನು ದೂರ ಸಾಗಿಸುವ ಕ್ರಮಗಳಲ್ಲಿ ಬಲು ಉತ್ತಮವಾದುದೊಂದು ಪದ್ಧತಿಯು ಸ್ರೋರೋ ಆಸ್ಟರಮತದೊಡನೆ ಬೆರತುಹೋಗಿರುವದು. ಈ ಕಾರಣದಿಂದ ಜನರು ಇದನ್ನು ಅಷ್ಟಾಗಿ ಉಪಯೋಗಿಸುತ್ತಲಿಲ್ಲ. ''ಮೌನದ ಗೋಪುರ''ಕ್ಕೂ ಪಾರ್ಸಿಮತಕ್ಕೂ ಗಂಟುಬೀಳದೆ ಇದ್ದರೆ ಈ ಪದ್ಧತಿಯು

ಪ್ರಪಂಚದಲ್ಲಿ ಇನ್ನೂ ಹೆಚ್ಚು ವ್ಯಾಪಿಸಿರುತ್ತಿತ್ತೆಂಬುದು ಖಂಡಿತ.

ಈ ಪದ್ಧತಿಯಲ್ಲಿ ಅನುಕೂಲಗಳೇ ಹೆಚ್ಚು. ಇದರಲ್ಲಿ ಅನವಶ್ಯಕವಾದ ಖರ್ಚುಮಾಡಬೇಕಾದುದೇನೂ ಇಲ್ಲ. ಸತ್ತ ಸ್ವಲ್ಪ ಹೊತ್ತಿನಲ್ಲಿಯೇ ದೇಹವನ್ನು ಗಾಡಿಯಲ್ಲಿಯೋ ಹೊರುವವರ ಹೆಗಲ ಮೇಲೋ ಸಾಗಿಸಿಬಿಡಬಹುದು; ಸುತ್ತಲೂ ಗೋಡೆಹಾಕಿಸಿ ಮೇಲುಗಡೆಗೆ ಬಯಲಾಗಿರುವ ಅಷ್ಟೇನೂ ವಿಶಾಲವಲ್ಲದ ನೆಲದ ಮೇಲೆ ಅದನ್ನು ಇಟ್ಟುಬಿಡಬಹುದು. ಮೈಮೇಲಿನ ಬಟ್ಟೆಯನ್ನು ತೆಗೆದುಬಿಟ್ಟರೆ ಸರಿ, ಬತ್ತಲೆಯಾಗಿರುವ ಶರೀರವನ್ನು ಸ್ವಲ್ಪ ಹೊತ್ತಿನಲ್ಲಿಯೇ ವಾಸನೆಯನ್ನು ಬಲ್ಲ ಕೆಲವು ಜಾತಿಯ ಪಕ್ಷಿಗಳು ಬಂದು ಬೇಗಬೇಗನೆ ಮಾಂಸವನ್ನೆಲ್ಲ ಕಿತ್ತು ತಿಂದುಬಿಡುವವು. ಬರಿಯ ಎಲಬು, ಶರೀರದ ದ್ರವಭಾಗ-ಇವು ಮಾತ್ರ ಸೂರ್ಯನ ಕಿರಣಕ್ಕೆ ಸಿಕ್ಕಿ ಬಿಸಲಿನಿಂದ ಒಣಗುವವು. ಕೊನೆಗೆ ಶುಚಿಯಾದ ಶುದ್ಧವಾದ ಬೂದಿಯೊಂದೇ ನಿಲ್ಲುವದು.

ಇದರಿಂದ ಯಾವದೊಂದು ಭೂತವೂ ಅಪವಿತ್ರವಾಗುವದಿಲ್ಲ. ಬೆಂಕಿ, ನೀರು, ನೆಲ-ಯಾವದೊಂದನ್ನೂ ಈ ಕೆಲಸಕ್ಕೆ ಉಪಯೋಗಿಸಿದಂತೆ ಆಗುವದಿಲ್ಲ. ಸಾಮಾನ್ಯವಾಗಿ ಆಚರಣೆಯಲ್ಲಿರುವ ಪದ್ಧತಿಯಲ್ಲಿ ದೇಹವನ್ನು ತೊಳೆಯುವದು ಕೂಡ ಇಲ್ಲ; ಆದ್ದರಿಂದ ಮನೆಯ ಒಂದು ತೊಟ್ಟು ನೀರಿಗೆ ಕೂಡ ಶವದ ಸೋಂಕು ಆಗುವಂತಿಲ್ಲ. ಸುಡಬೇಕಾದದ್ದೂ ಇಲ್ಲ, ಬೆಂಕಿಯಾಗಲಿ ಬೆಲೆಯುಳ್ಳ ಬಟ್ಟೆಗಳಾಗಲಿ ಪರಿಮಳದ್ರವ್ಯವಾಗಲಿ ಆಗಬೇಕಾದದ್ದಿಲ್ಲ. ದೇಹವು ಹುಟ್ಟುವಾಗ ಹೇಗೆ ಬೆತ್ತಲೆಯಾಗಿ ಬಂದಿರುವದೋ ಹಾಗೆಯೇ ಅದನ್ನು ಬೆತ್ತಲೆಯಾಗಿಯೆ ಅದನ್ನು ಕೊಟ್ಟ ಪ್ರಕೃತಿದೇವತೆಗೆ ಅರ್ಪಿಸಿಬಿಡುವೆವು. ಅವೊಂದು ಪರಮತತ್ತ್ವದಿಂದ ಹೆಸರಿಲ್ಲದೆ ಬಂದಿದ್ದದ್ದು ಕೊನೆಗೆ ಹೆಸರಿಲ್ಲದೆ ಹೋಗುವದು. ಕೊನೆಗೂ ಉಳಿಯುವದು, ಮತ್ತು ಉಳಿಯಬೇಕಾದ್ದು ಏನೆಂದರೆ ಜೀವನ ಪ್ರೇಮ, ಆತನ ನೆನಹು, ಆತನ ಕೃತಜ್ಞತೆ, ಆತನು ಭೂಮಿಯ ಮೇಲೆ ಬದುಕಿದ್ದಾಗ ಅವನೊಳಗಿದ್ದ ಒಳ್ಳೆಯತನ, ನಿಜವಾದ ಒಳಗಿನ ಪರಿಮಳ. ಹೀಗೆ ಇದು ಎಲ್ಲಕ್ಕಿಂತಲೂ ಪರಿಶುದ್ಧವಾದ, ಎಲ್ಲಕ್ಕೂ ಸುಲಭವಾದ, ಎಲ್ಲಕ್ಕೂ ಮಿತವ್ಯಯವುಳ್ಳ, ಆರೋಗ್ಯ ಕರವಾದ ಪದ್ಧತಿಯಾಗಿರುವದು.

ಕೆಲವರಿಗೆ ಈ ಕ್ರಮದಲ್ಲಿ ಬಹು ಅಸಹ್ಯವಾಗಿ ತೋರಬಹುದಾದ ಭಾಗವು

ಯಾವದೆಂದರೆ ಶರೀರವನ್ನು ಪಕ್ಷಿಗಳು ಕಿತ್ತು ತಿನ್ನುವವೆಂಬುದು. ಆದರೆ ಶರೀರವನ್ನು ನೆಲದ ಕೆಳಗೆ ಇರುವೆಗಳೂ ಕ್ರಿಮಿಗಳೂ ತಿನ್ನುವದನ್ನೂ ವಿದ್ಯುಚ್ಛಕ್ತಿಯು ಅಥವಾ ಉರಿಯುವ ಬೆಂಕಿಯು ಸುಟ್ಟು ಬೇಯಿಸುವದನ್ನೂ, ಸಮುದ್ರದ ಮೀನುಗಳು ಕಚ್ಚಿತಿನ್ನುವದನ್ನೂ ಮನಸ್ಸಿಗೆ ತಂದುಕೊಂಡರೆ ಈ ಭಾವನೆಗೇನೂ ಕಾರಣವಿರುವದಿಲ್ಲ. ಆಗ ಹಕ್ಕಿಗಳು ಶರೀರವನ್ನು ತಿನ್ನುವದನ್ನು ನೋಡುವದು ಅಷ್ಟು ಅಸಹ್ಯವಾಗಿ ತೋರಲಾರದು. ಇಷ್ಟೇ ಅಲ್ಲ. ಇದರಲ್ಲಿ ಮತ್ತೊಂದು ಗುಣವೂ ಉಂಟು. ಎಚ್ಚರತಪ್ಪಿರುವ ಜನರನ್ನು ಸತ್ತಿರುವರೆಂದೇ ತಪ್ಪಾಗಿಭಾವಿಸಿ ಸುಡುವ ಅಥವಾ ಹೂಳುವ ಅಪಾಯಕ್ಕೆ ಈ ಪದ್ಧತಿಯಲ್ಲಿ ಅವಕಾಶವಿರುವದಿಲ್ಲ. ಇಂಥ ಅಪಾಯಗಳು ಅನೇಕ ಸಂದರ್ಭಗಳಲ್ಲಿ ಆಗಿರುತ್ತವೆ. ಈ ರೀತಿಯ ತಪ್ಪು ತಿಳಿವಳಿಕೆಯ ಕೃತ್ಯಗಳು ನಡೆಯದಂತೆ ಜನರಿಗೆ ತಿಳಿವಳಿಕೆಯನ್ನು ಕೊಡುವದಕ್ಕೆ ಅಮೆರಿಕದಲ್ಲಿ ಒಂದು ಚಳುವಳಿಯನ್ನು ಕೂಡ ಎಬ್ಬಿಸಿರುತ್ತಾರೆ.

ಹೀಗೆ ಬೆಂಕಿಯಿಂದ ಸುಡುವದು, ಕಡಲ ನೀರಿನಲ್ಲಿ ಹಾಕುವದು, ನೆಲದಲ್ಲಿ ಹೂಳುವದು, ಬಿಸಿಲಿನಲ್ಲಿ ಒಣಗಿಸುವದು – ಎಂಬ ನಾಲ್ಕು ಕ್ರಮಗಳಲ್ಲಿ ಕೊನೆಯ ಪದ್ಧತಿಯಲ್ಲಿ ಹೆಚ್ಚಿನ ಅನುಕೂಲಗಳಿವೆ. ಮತಾಚಾರ್ಯರು ಹುಟ್ಟುವದಕ್ಕಿಂತ ಪೂರ್ವದಿಂದಲೇ ಈ ಪದ್ಧತಿಗಳೆಲ್ಲ ಆಚರಣೆಯಲ್ಲಿದ್ದವು; ಯಾವನೊಬ್ಬ ಆಚಾರ್ಯನೂ ಇಂಥ ಪದ್ಧತಿಯನ್ನೇ ಅನುಸರಿಸಬೇಕೆಂದು ಒತ್ತಿ ಬೋಧಿಸಿರುವದಿಲ್ಲ. ಆಯಾ ಸ್ಥಳದಲ್ಲಿ ಆಯಾ ದೇಶದಲ್ಲಿ ಅಲ್ಲಲ್ಲಿಯ ಪರಿಸ್ಥಿತಿಗೆ ತಕ್ಕ ಆಯಾ ಪದ್ಧತಿಯನ್ನು ಅನುಸರಿಸಿಕೊಂಡು ಬಂದಿರುತ್ತಾರೆ, ಅಷ್ಟೆ.

★★★★★

# ಹಿಗ್ಗದಿರು

ಈ ಪ್ರಪಂಚದಲ್ಲಿ ಏನಾದರೂ ಸುಖವು ದೊರೆತರೆ ಹಿಗ್ಗದಿರು; ಏಕೆಂದರೆ ಪ್ರಪಂಚದ ಸುಖವೆಂಬುದು ಮಳೆಗಾಲದಲ್ಲಿ ಬರುವ ಮೋಡದಂತೆ ಇರುವುದು. ಅದನ್ನು ಯಾವ ಬೆಟ್ಟವೂ ತಡೆದಿಟ್ಟುಕೊಳ್ಳಲರಿಯದು.

ಹಣಕಾಸೂ ಐಶ್ವರ್ಯವೂ ಬಂತೆಂದು ಹಿಗ್ಗದಿರು: ಏಕೆಂದರೆ ಕೊನೆಗೆ ನೀನು

ಇದೆಲ್ಲವನ್ನೂ ಬಿಟ್ಟು ತೆರಳಬೇಕಾಗುವುದು.

ಒಳ್ಳೆಯ ನೆಂಟರೂ ಉತ್ತಮವಾದ ಕುಲವೂ ನಿನಗಿರುವವೆಂದು ಹಿಗ್ಗದಿರು; ಏಕೆಂದರೆ ಕೊನೆಗೆ ನಿನ್ನ ಕರ್ಮವೇ ನಿನ್ನನ್ನು ಕಾಪಾಡಬೇಕಾಗಿರುವುದು.

ನಾನು ಬದುಕಿದೇನಲ್ಲ ಎಂದು ಹಿಗ್ಗದಿರು; ಏಕೆಂದರೆ ಕೊನೆಗೆ ನಿನಗೆ ಸಾವು ಬಂದೇ ತೀರುವುದು, ನಾಶವಾಗಬೇಕಾದ ಭಾಗವೆಲ್ಲ ನೆಲಕ್ಕುರುಳಿಯೇ ತೀರುವುದು.

–ಪಾರ್ಸಿಯವರ ಧರ್ಮಗ್ರಂಥ.

★★★★★

# ಯೂರೋಪಿನ ಶಂಕರಾಚಾರ್ಯ ಮಿಸ್ಟರ್ ಎಕ್ಹಾರ್ಟ್

### (ಡಾನ್ ಪತ್ರಿಕೆಯಲ್ಲಿ ಸಾಧು ವಾಸ್ವಾನಿಯವರ ಭಾಷಣಭಾಗ)

**ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು**

## 1

ಎಕ್ಹಾರ್ಟ್ ಎಂಬ ಆಚಾರ್ಯಪುರುಷನೊಬ್ಬನು ಜರ್ಮನಿಯಲ್ಲಿ ಆಗಿ ಹೋಗಿರುತ್ತಾನೆ. ಆತನ ಕೀರ್ತಿಯು ಹದಿನಾಲ್ಕನೆಯ ಶತಮಾನದ ಆದಿಭಾಗದಲ್ಲಿ ಆ ದೇಶದಲ್ಲಿ ಎಲ್ಲೆಲ್ಲಿಯೂ ಹರಡಿತ್ತು. ಆಗಿನ ಪೋಪರು (ರೋಮನಗರದ ಮಠಾಧೀಶರು) ಅವನಿಗೆ ಉತ್ತಮವಾದ ಬಿರುದನ್ನೂ ಧರ್ಮಾಧಿಕಾರವನ್ನೂ ಕೊಟ್ಟು ಸನ್ಮಾನಿಸಿದ್ದರು. ಆದರೆ ಆತನು ಹೊಸದೊಂದು ಪ್ರಕ್ರಿಯೆಯನ್ನು ಉಪದೇಶಮಾಡಿದನೆಂಬ ಆಪಾದನೆಯ ಮೇಲೆ ಸ್ಥಾನಚ್ಯುತನಾದನು; ಧರ್ಮಶೋಧನಾ (Inquisution) ಪರಿಷತ್ತಿನವರ ದಂಡನೆಗೂ ಒಳಗಾದನು. ತನ್ನ ವಿಷಯವಾಗಿ ಪುನರ್ವಿಮರ್ಶೆಮಾಡಬೇಕೆಂದು ಮಠಾಧೀಶರನ್ನು ಅವನು

ಬೇಡಿಕೊಂಡಿದ್ದನು. ಆದರೆ ವಿಚಾರಣೆಯು ಸಮಾಪ್ತಿಯಾಗುವದರೊಳಗೆ ಸೆರಮನೆಯಲ್ಲಿಯೇ ಕ್ರಿ.ಶ.1327ರಲ್ಲಿ ದೇಹವನ್ನು ಬಿಟ್ಟನು. ಈಗ ಆತನನ್ನು ಯೂರೋಪಿನ ಶಂಕರಾಚಾರ್ಯನೆಂದು ಬಹು ಜನರು ಕೊಂಡಾಡುತ್ತಿದ್ದಾರೆ. ಎಕ್ಹಾರ್ಟನು ಹೂಡಿದ್ದ ನಾಸ್ತಿಕವಾದವು ಯಾವದು?- ಎಂಬ ಪ್ರಶ್ನೆಗೆ ಇಲ್ಲಿ ಸಂಕ್ಷೇಪವಾದ ಉತ್ತರವನ್ನು ಕೊಟ್ಟಿರುತ್ತದೆ.

ಈಶ್ವರನಿಗಿಂತ ಅಧಿಕವಾದ ಈಶ್ವರತತ್ತ್ವ (Godhead) ಎಂಬ ನಿರುಪಾಧಿಕ ಸ್ವರೂಪವನ್ನು ಬೋಧಿಸಿರುವದು ಈ ಆಚಾರ್ಯನ ಬೋಧನೆಯಲ್ಲಿ ಒಂದು ವಿಶೇಷವು. ಮೇಲ್ತರದ ತತ್ತ್ವವೆಂದು ತಿಳಿಯುವಂತೆಯೇ ಎಕ್ಹಾರ್ಟನೂ ತಿಳಿಯುತ್ತಾನೆ. ಈಶ್ವರತತ್ತ್ವವು ಸನ್ಮಾತ್ರವಾಗಿರುತ್ತದೆ; ನಿರಪೇಕ್ಷವಾಗಿ, ನಿತ್ಯವಾಗಿ, ನಿರಾಕಾರವಾಗಿ, ಅವಾಚ್ಯವಾಗಿರುವ ಅಚಿಂತ್ಯವಾಗಿರುವ ಆ ತತ್ತ್ವವನ್ನು ಯಾವದೊಂದು ಧರ್ಮವುಳ್ಳದ್ದೆಂದು ಭಾವಿಸಿದರೂ ಅದಕ್ಕೆ ಒಂದು ಆವರಣವನ್ನು ಕಲ್ಪಿಸಿದಂತೆ - ಎಂದು ಈ ಆಚಾರ್ಯನು ಹೇಳಿರುತ್ತಾನೆ. ಅದು ನಿರುಪಾಧಿಕವಾದದ್ದು, ಅದು, ಇದು-ಎಂದು ಹೇಳುವದಕ್ಕೆ ಬಾರದ್ದು- ಎಂಬುದೇ ಆತನ ಮತವು.

ವ್ಯವಹಾರದಲ್ಲಿ ನಾವು ಕಾಣುವ ಪ್ರಪಂಚವು ಈಶ್ವರನ ಪ್ರತಿಬಿಂಬವೇ ಈಶ್ವರನು ಕಾಲದೇಶದಲ್ಲಿ ವ್ಯಕ್ತನಾದರೆ ಪ್ರಪಂಚವೆನಿಸುವನು. ಪ್ರಪಂಚವು ಈಶ್ವರನ ಯಥಾರೂಪದ ನಕಲಲ್ಲ, ಅದಕ್ಕಿಂತ ನಿಕೃಷ್ಟವಾಗಿರುತ್ತದೆ. ಇದು ಬರಿಯ ಅಸತ್ತು; ಒಣಗಿ ಉದುರಿದ ಹುಲ್ಲಿನಂತೆ ಬಾಡಿದ ಹೂವಿನಂತೆ, ಅತ್ತ ಸಾಯುವ ನೆರಳಿನಂತೆ. ಮರೆಯಾಗುವ ಮೋಡದಂತೆ ಕೊನೆಗಾಣುವ ಉಸಿರಿನಂತೆ, ದಾರಿಹೋಗುವ ಧೂಳಿನಂತೆ ತೋರಿಹಾರುವ ಕನಸಿನಂತೆ ಇರತಕ್ಕದ್ದು- ಎಂಬುದು ಎಕ್ಹಾರ್ಟನ ಮತ್ತೊಂದು ವಿಶಿಷ್ಟಬೋಧನೆಯು. ಪ್ರಪಂಚವು ಮಿಥ್ಯೆ - ಎಂಬ ಶಂಕರಚಾರ್ಯರ ಮಾಯಾವಾದಕ್ಕೆ ಇದು ಬಹು ಹತ್ತಿರವಾಗಿರುತ್ತದೆ.

ಈಶ್ವರನು ನನ್ನಂಥ ಸ್ವರೂಪದವನೇ, ನಾನೂ ಆತನೂ ಒಂದುಗೂಡಿರುವೆವೆಂದಿಷ್ಟೇ ಅಲ್ಲ, ನಮ್ಮಿಬ್ಬರಿಗೂ ಪರಮೈಕ್ಯವಿರುತ್ತದೆ. ನಾನು ಈಶ್ವರನಲ್ಲ, ಜೀವನೂ ಅಲ್ಲ, ನಾನು ನನ್ನ ನಿತ್ಯ ಸ್ವರೂಪದಲ್ಲಿ ಈಗಲೂ ಇರುವೆನು, ಮುಂದೆಯೂ ಇರುವೆನು - ಎಂಬ ಎಕ್ಹಾರ್ಟನ ಉಪದೇಶವು ಜೀವಬ್ರಹ್ಮೈಕ್ಯವನ್ನು

ಹೇಳುವ ಶಂಕರಾಚಾರ್ಯರ ಉಪದೇಶವನ್ನೇ ನೆನಪುಕೊಡುತ್ತದೆ.

ಜೀವನು ತಾನು ಅಲೆದಾಡುತ್ತಿರುವ ಈ ಪ್ರಪಂಚವನ್ನು ಬಿಟ್ಟು ತನ್ನ ಸ್ವರೂಪವನ್ನೇ ಸೇರಿಕೊಳ್ಳಬೇಕು. ಅಷ್ಟೇ ಅವನಿಗೆ ಪರಮಪುರುಷಾರ್ಥವು ಎಂದು ಶಂಕರಾಚಾರ್ಯರಂತೆಯೇ ಎಕ್ಹಾರ್ಟನು ಬೋಧಿಸಿರುತ್ತಾನೆ.

ಮುಕ್ತಿಗೆ ಜ್ಞಾನವೇ ಉಪಾಯವು ಜ್ಞಾನದಿಂದ ಸರ್ವಾತ್ಮಜ್ಞಾನವು ಬರುತ್ತದೆ. ಜ್ಞಾನಿಯು ಈಶ್ವರನನ್ನು ಅರಿಯುತ್ತಾನೆ. ಈಶ್ವರತತ್ತ್ವವನ್ನರಿತವನು ಅದೇ ಆಗಿಬಿಡುತ್ತಾನೆ. ಜ್ಞಾನವೆಂದರೆ ಜ್ಯೋತಿವಾದಿಗಳ ದರ್ಶನವಲ್ಲ; ಪರಮೈಕ್ಯವು ಮನದಲ್ಲಿ ಮಿಂಚುವ ಅನುಭವವೇ ಜ್ಞಾನವು ಆ ಅನುಭವವು ದೇಶಕಾಲಗಳನ್ನು ಮೀರಿರುತ್ತವೆ. ಜೀವರಲ್ಲಿ ಈಶ್ವರನಿರುವನೆಂದು ತಿಳಿಯುವದು ಸಂಜೆಬೆಳಕು; ಈಶ್ವರನಲ್ಲಿ ಜೀವರಿರುವರೆಂದು ತಿಳಿಯುವದು ಬೆಳಗಿನ ಬೆಳಕು, ಈಶ್ವರನು ಸನ್ಮಾತ್ರನೆಂದು ಅರಿತುಕೊಳ್ಳುವದು ಮಧ್ಯಾಹ್ನದ ಬೆಳಕು'' – ಎಂದು ತತ್ತ್ವಜ್ಞಾನದ ವರ್ಣನೆಯನ್ನು ಈ ಆಚಾರ್ಯನು ಮಾಡಿರುತ್ತಾನೆ.

ಭೇದದೃಷ್ಟಿಯೇ ದುಃಖಮೂಲವು ನಾನಾತ್ವವನ್ನು ಕಳೆದುಕೊಂಡರೆ ಜೀವನಿಗೆ ನಿತ್ಯಾನಂದವೂ ಶಾಂತಿಯೂ ದೊರಕುವವು, ಪರತತ್ತ್ವಕ್ಕೂ ತನಗೂ ಐಕ್ಯವನ್ನು ಕಂಡುಕೊಳ್ಳುವದೇ ಪುರುಷಾರ್ಥವು. ಆ ಪುರುಷಾರ್ಥವನ್ನು ಈ ಲೋಕದಲ್ಲಿ ಈಗಲೇ ಪಡೆದು ಜೀವನ್ಮುಕ್ತರಾಗಬಹುದು– ಎಂಬುದು ಶಂಕರಾಚಾರ್ಯರಿಗೂ ಎಕ್ಹಾರ್ಟನಿಗೂ ಸಮಾನವಾದ ಬೋಧೆಯಾಗಿರುತ್ತದೆ.

ಎಕ್ಹಾರ್ಟನು ಶಂಕರಾಚಾರ್ಯರಂತೆಯೇ ಅದ್ವೈತಿ ಎಂಬುದಕ್ಕೆ ಎಳ್ಳಷ್ಟೂ ಸಂಶವಿಲ್ಲ. ಆದರೆ ಎಕ್ಹಾರ್ಟನು ಬೈಬಲಿನ ಆಧಾರದ ಮೇಲೆ ತನ್ನ ಅದ್ವೈತವಾದನ್ನು ಕಟ್ಟಿರುತ್ತಾನೆ; ಶಂಕರಾಚಾರ್ಯರು ಉಪನಿಷತ್ತುಗಳ ಆಧಾರದಮೇಲೆ ತಮ್ಮ ಪ್ರಕ್ರಿಯೆಯನ್ನು ನಿಲ್ಲಿಸಿರುತ್ತಾರೆ. ಈ ಕಾರಣದಿಂದ ಒಂದು ವಿಶೇಷವು ಅವರಿಬ್ಬರ ಪ್ರತಿಪಾದನೆಯಲ್ಲಿ ಕಂಡುಬರುತ್ತದೆ. ಎಕ್ಹಾರ್ಟನ ಅದ್ವೈತವು ಈಶ್ವರಧ್ಯಾನದಿಂದ ಜೀವನಿಗೆ ದೊರೆಯತಕ್ಕದ್ದಾಗಿದೆ. ಶಂಕರರು ಧ್ಯಾನವಾದವನ್ನೂ ಅವಲಂಬಿಸಿಯೇ ಇರುತ್ತಾರೆ; ಅದನ್ನು ಉಪನಿಷತ್ತುಗಳಲ್ಲಿ ಪ್ರತಿಪಾದಿಸಿಯೂ ಇರುತ್ತದೆ. ಅವಸ್ಥಾತ್ರಯ ಸಾಕ್ಷಿಯಾಗಿರುವ ಸಚ್ಚಿದಾನಂದಸ್ವರೂಪವು ನಮ್ಮ ಆತ್ಮನು, ಅದೇ ಅದ್ವಿತೀಯ ಬ್ರಹ್ಮವು – ಎಂಬುದನ್ನು ಮಾತ್ರ ಉಪನಿಷತ್ತುಗಳ ಹೊರತು ಮತ್ತೆ ಯಾವ ಗ್ರಂಥವೂ ಅನುಭವಕ್ಕೆ ಹೊಂದಿಸಿ ಉಪದೇಶಿಸಿಲ್ಲ; ಈ ಪ್ರಕ್ರಿಯೆಯನ್ನು ಶಂಕರಾಚಾರ್ಯರಷ್ಟು

ಸ್ಫುಟವಾಗಿ ಮತ್ತೆ ಯಾವ ಆಚಾರ್ಯರೂ ವಿವರಿಸಿಯೂ ಇಲ್ಲ.

## 2

ಭರತಖಂಡದಲ್ಲಿ ಶಂಕರರು ಜನಿಸಿದ ಶತಮಾನದಲ್ಲಿಯೇ ಯೂರೋಪಿನಲ್ಲಿ ಮತ್ತೊಬ್ಬ ಮಹಾಶಯನು ಜನಿಸಿದನು. ಆತನಿಗೆ ಎಕ್ಹಾರ್ಟನೆಂದು ಹೆಸರು. ಆತನನ್ನು ನಾನು ಯೂರೋಪಿನ ಶಂಕರಾಚಾರ್ಯನೆನ್ನುತ್ತೇನೆ. ಶಂಕರರನ್ನು ಆಚಾರ್ಯರು ಎಂದರೆ ತತ್ತ್ವೋಪದೇಶಕರು ಎಂದು ಕರೆಯುತ್ತಾರಷ್ಟೆ; ಜರ್ಮನಿಯ ಎಕ್ಹಾರ್ಟನನ್ನು 'ಮಾಸ್ಟರ್'- (ಬೋಧಕ) ಎನ್ನುತ್ತಾರೆ. ಆ ಶತಮಾನದಲ್ಲಿ ಪಶ್ಚಿಮದಲ್ಲಿ ಹುಟ್ಟಿದ ತತ್ತ್ವಜ್ಞಾನಿಗಳಲ್ಲೆಲ್ಲ ಎಕ್ಹಾರ್ಟ ಮತ್ತು ಡಾಂಟೆಇಬ್ಬರೇ ಎಲ್ಲರಿಗಿಂತಲೂ ಮೇಲಾದವರೆಂದು ಹೇಳಬಹುದಾಗಿದೆ.

ಎಕ್ಹಾರ್ಟ್ ಮಹಾಶಯನು ವಿಚಾರಶೀಲನು, ತತ್ತ್ವಜ್ಞಾನಿಯು, ಬ್ರಹ್ಮಜ್ಞಾನಿಯು, ಯೋಗಿಯು, ತತ್ತ್ವದ್ರಷ್ಟನು, ಮಹಾತೇಜಸ್ವಿಯಾದ ಋಷಿಯು. ಆತನ ವಿಷಯದಲ್ಲಿ ಒಂದು ಕಥೆಯನ್ನು ಹೇಳುತ್ತಾರೆ. ಒಂದು ದಿನ ಎಕ್ಹಾರ್ಟನು ಧ್ಯಾನಮಂದಿರದಲ್ಲಿರುವಾಗ ತನ್ನ ಮುಂದೆ ಸುಂದರತರನಾದ ಒಬ್ಬ ಬಾಲಕನನ್ನು ಕಂಡನು. ಎಕ್ಹಾರ್ಟನು ''ನೀನು ಎಲ್ಲಿಂದ ಬಂದೆಯಪ್ಪ?'' ಎನ್ನಲು ಹುಡುಗನು ''ನಾನು ದೇವರ ಬಳಿಯಿಂದ ಬಂದಿದೇನೆ'' ಎಂದನು. ''ಅವನನ್ನು ಎಲ್ಲಿ ಬಿಟ್ಟುಬಂದೆ?'' ಎಂದು ಎಕ್ಹಾರ್ಟನು ಕೇಳಿದ್ದಕ್ಕೆ ''ಪವಿತ್ರಾತ್ಮರ ಹೃದಯದಲ್ಲಿ'' ಎಂದು ಆ ಸುಂದರಬಾಲಕನ ಉತ್ತರವು ಬಂತು. ಈ ಉತ್ತರವನ್ನು ಕೇಳಿ ಬೆರಗಾದ ಎಕ್ಹಾರ್ಟನು ''ನೀನು ಯಾರು?'' ಎಂದನು; ಹುಡುಗನು ಶಾಂತಿಯಿಂದೊಡಗೂಡಿದ ಗಾಂಭೀರ್ಯದಿಂದ ''ನಾನೊಬ್ಬ ರಾಜನು'' ಎಂದುತ್ತರವಿತ್ತನು. ''ನಿನ್ನ ರಾಜ್ಯವೆಲ್ಲಿದೆ?'' ಎಂಬ ಪ್ರಶ್ನೆಗೆ ಬಾಲಕನು ''ಹೃದಯದಲ್ಲಿ'' ಎಂದನು.

ಎಕ್ಹಾರ್ಟನು ಆ ಹುಡುಗನನ್ನು ಮತ್ತೊಂದು ಕೋಣೆಯೊಳಕ್ಕೆ ಕರೆದುಕೊಂಡು ಹೋಗಿ ''ಇಲ್ಲಿ ನಿನಗೆ ಬೇಕಾದ ಒಂದಂಗಿಯನ್ನು ತೆಗೆದುಕೊ, ಎಂದನು. ಆದರೆ ಆ ಚಿಣ್ಣನು ''ದೊರೆಯು ತೆಗೆದುಕೊಳ್ಳ ತಕ್ಕವನಲ್ಲ, ದೊರೆಯೆಂದರೆ ಕೊಡತಕ್ಕವನು'' ಎಂದು ನುಡಿದು ಅಲ್ಲಿಯೇ ಕಣ್ಮರೆಯಾದನಂತೆ!

ಇದೆಲ್ಲ ಮಾಸ್ಟರ ಎಕ್ಹಾರ್ಟನು ಕಂಡ ದಿವ್ಯದರ್ಶನವಾಗಿರಬಹುದೆ? ಈ ಕಥೆಯಲ್ಲಿ ಒಂದು ಮಹಾತತ್ತ್ವವು ಅಡಗಿರುತ್ತದೆ. ನೀವು ರಾಜರು! ಪ್ರತಿಯೊಬ್ಬನೂ

ರಾಜವಂಶೀಯನು. ನೀವು ತಿಳಿದುಕೊಂಡಿರುವ ಹಾಗೆ ನೀವುಗಳು ನಿರ್ಬಲರಾದ ನಿಷ್ಪ್ರಯೋಜಕ ವ್ಯಕ್ತಿಗಳಲ್ಲ; ನೀವು ತಿಳಿದುಕೊಂಡಿರುವಕ್ಕಿಂತ ನಿಜವಾಗಿಯೂ ಹೆಚ್ಚಿನ ಮಹಿಮೆಯುಳ್ಳವರು. ಮೈಯರ್ಸ್ ಎಂಬಾತನು ಹೇಳಿರುವ 'ಅಧೋವಿಜ್ಞಾನಾತ್ಮ'[1] (Subliminal Self) ಎಂಬುದೊಂದು ಮಾತ್ರವೇ ಇರುವದಿಲ್ಲ; 'ಅತಿವಿಜ್ಞಾನಾತ್ಮ'[2] (Supra Liminal Self) ಎಂಬೂದೂ ಉಂಟು. ನಿಮ್ಮಲ್ಲಿ ಒಂದು ಅವ್ಯಕ್ತಶಕ್ತಿಯಿದೆ, ಒಂದು ನಿತ್ಯಶಕ್ತಿಯಿದೆ. ಅದನ್ನು ವ್ಯಕ್ತಗೊಳಿಸಿದರೆ ನೀವು ಜನಸಮಾಜವನ್ನೇ ವಶಗೊಳಿಸಿಕೊಳ್ಳಬಹುದು. ಈ ಶಕ್ತಿಯನ್ನು ವ್ಯಕ್ತಗೊಳಿಸಬೇಕಾದರೆ ಅದಕ್ಕೆ ತಕ್ಕಂತೆ ನೀವು ನಿಸ್ವಾರ್ಥರಾಗಿರಬೇಕು, ಅನಾಸಕ್ತರಾಗಿರಬೇಕು. ನೀವು ರಾಜರು: ತೆಗೆದುಕೊಳ್ಳುವದೆಂಬುದು ರಾಜನಿಗೆ ಯೋಗ್ಯವಲ್ಲ, ರಾಜನು ತನಗೆಂಬ ಬುದ್ಧಿಯಿಲ್ಲದೆ ಕೊಡುತ್ತಿರಬೇಕು. ನಿಮ್ಮ ಕೈಯಲ್ಲಿ ಎಷ್ಟು ಜನಕ್ಕೆ ಕೊಡುವದಕ್ಕೆ ಅದೀತೋ ಅಷ್ಟು ಜನರಿಗೆ ಭರವಸೆಯನ್ನೂ ಬಲವನ್ನೂ ಪ್ರೇಮವೆಂಬ ಬಿಸಿಲಿನ ಬೆಳಕನ್ನೂ ಕೊಡಿರು. 'ನೀವು ರಾಜರು!' ಅಧ್ಯಾತ್ಮದೃಷ್ಟಿಯಿಂದ ನೋಡಿದರೆ ಜೀವಾತ್ಮನು ರಾಜನೇ ಎಂದು ಹೇಳಿರುವದೇ ಶಂಕರಾಚಾರ್ಯರ ಸಂದೇಶದ ರಹಸ್ಯ ಅದನ್ನೇ ವಿವೇಕಾನಂದಸ್ವಾಮಿಗಳೂ ಈಚೆಗೆ ಮತ್ತೆ ಸಾರಿರುತ್ತಾರೆ. ಇವರಿಬ್ಬರಿಗೂ ನಮ್ಮ ನಮಸ್ಕಾರ! ಇವರಿಬ್ಬರ ಜ್ಞಾನವೂ ದೃಷ್ಟಿಯೂ ನಮ್ಮಲ್ಲಿ ನಿಂತು ನಾವು ಅದಕ್ಕೆ ಭಾಗಿಗಳಾಗಿ ಅದಕ್ಕೆ ತಕ್ಕಂತೆ ನಡೆಯುವ ಭಾಗ್ಯವು ನಮಗೆ ದೊರಕಲಿ!

★★★★★

1. ಜಾಗ್ರದವಸ್ಥೆಯ ಜ್ಞಾನವನ್ನುಳ್ಳ ಜೀವಾತ್ಮನ ಕೆಳಗಿರುವಂನಸ್ತಿನಲ್ಲಿ ಅರ್ಧ ಎಚ್ಚರದ ಮತ್ತೊಂದು ಆತ್ಮವು ಇರುವದೆಂದೂ ಇದು ಸನ್ನಿಯೇ ಮುಂತಾದ ಅವಸ್ಥೆಯಲ್ಲಿ ತೋರಿಕೊಳ್ಳುವದೆಂದೂ ಕೆಲವರು ನಂಬುತ್ತಾರೆ. – ಸಂ.ಅ.ಪ್ರ

2. ಪರಮಾತ್ಮ, ಇದೇ ನಮ್ಮ ನಿಜವಾದ ಆತ್ಮ – ಸಂ.ಅ.ಪ್ರ

# ಮೂರ್ತಿಪೂಜೆ

-ಶ್ರೀಯುತ ಬಿ. ಶ್ರೀಕಂಠಯ್ಯನವರು, ಹಾಸನ

## 1

ನಮ್ಮ ಸುತ್ತಮುತ್ತಲೂ ಲೆಕ್ಕವಿಲ್ಲದಷ್ಟು ಚಿತ್ರವಿಚಿತ್ರವಸ್ತುಗಳು ನಮ್ಮ ಕಣ್ಣಿಗೆ ಬೀಳುತ್ತಿರುವವಷ್ಟೆ. ಇವುಗಳಲ್ಲಿ ನಮಗೆ ಸಾಮಾನ್ಯವಾಗಿ ಉಪಯೋಗದ ದೃಷ್ಟಿಯೇ ಹೆಚ್ಚಾಗಿರುವುದು. ಜಗತ್ತಿನಲ್ಲಿ ಕಾಣುವ ಚರಾಚರವಸುಗಳೆಲ್ಲವೂ ನಮಗೆ ಒಂದಿಲ್ಲದಿದ್ದರೆ ಒಂದು ಉಪಯೋಗಕ್ಕೆ ಬರುವಂತಿರುವುವು. ಇವುಗಳಲ್ಲಿ ಕೆಲವು ಒಂದೊಂದು ಇಂದ್ರಿಯಕ್ಕೂ ಮತ್ತೆ ಕೆಲವು ಒಮ್ಮೆಯೆ ಹಲವು ಇಂದ್ರಿಯಗಳಿಗೂ ಸುಖವನ್ನುಂಟುಮಾಡುವಂತಿರುವುವು. ಆದ್ದರಿಂದ ನಾವು ಯಾವ ವಸ್ತುವನ್ನು ಕಂಡರೂ ಇದರ ಉಪಯೋಗವೇನು?' ಎಂಬ ಪ್ರಶ್ನೆಯನ್ನೇ ಮೊದಲು ಕೇಳುತ್ತೇವೆ. ಅವುಗಳಿಂದ ಸುಖವನ್ನು ಪಡೆಯಬೇಕೆಂಬ ಸ್ವಾರ್ಥತೆಯಲ್ಲಿಯೇ ಮುಳುಗಿ ರುವೆವು; ಅವು ಯಾವಾಗ ನಮ್ಮ ಕರಗತವಾದಾವೊ, ಅವು ತಿನ್ನುವವಸ್ತುಗಳಾದರೆ ಅವನ್ನು ಯಾವಾಗ ತಿಂದು ತೇಗೇವೋ' ಎಂಬುದೇ ನಮ್ಮ ಹಂಬಲಿಕೆ.

ಹೀಗಿರುವುದರಿಂದ ಅವುಗಳ ರಚನಾವೈಚಿತ್ರ್ಯವು ಸಾಮಾನ್ಯವಾಗಿ ನಮ್ಮ ಬುದ್ಧಿಗೆ ಹೊಳೆಯುವುದೇ ಇಲ್ಲ. ಇಷ್ಟು ಸುಂದರವಾಗಿಯೂ ಅಸ್ಭುತವಾಗಿಯೂ ಇರುವ ಈ ವಸ್ತುಗಳು ಉಂಟಾದದ್ದು ಹೇಗೆ? ಮನುಷ್ಯನು ತಾನು ಎಷ್ಟು ಗಟ್ಟಿ ಗನೆಂದು ತನ್ನ ಜಾಣ್ಮೆಯನ್ನು ತಾನೇ ಕೊಚ್ಚಿಕೊಳ್ಳುತ್ತಲಿರುವನಾದರೂ ಇವುಗಳಂಥ ಸುಂದರವಸ್ತುಗಳನ್ನು ತಾನೇ ಎಂದಿಗಾದರೂ ಮಾಡಿಕೊಳ್ಳಲಾಪನೆ? ಈ ವಸ್ತುಗಳ ನಿರ್ಮಾಣಕರ್ತನು ಯಾರಿರಬಹುದು? ಇವೇ ಮುಂತಾದ ವಿಚಾರಗಳು ನಮ್ಮ ಆಲೋಚನೆಗೆ ಬರುವುದೇ ಇಲ್ಲ.

ಮನುಷ್ಯನು ನೂತನಸೃಷ್ಟಿಯಲ್ಲಿ ಸಂಪೂರ್ಣವಾಗಿ ಅಶಕ್ತನೆಂದೇನೂ ನನ್ನ ಅಭಿಪ್ರಾಯವಲ್ಲ. ಇಂದ್ರಿಯಗಳಿಗೆ ಗೋಚರವಾಗುತ್ತಿರುವ ವಸ್ತುಗಳ ರೂಪವನ್ನು ಸ್ವಲ್ಪ ಮಾರ್ಪಡಿಸುವುದೂ ಅವುಗಳಂತೆ ಕೆಲವು ಕೃತಕವಸ್ತುಗಳನ್ನು ಮಾಡಿಕೊಳ್ಳುವುದೂ ಮಾನವನ ಕೈಯಲ್ಲಿದೆಯೆಂಬುದು ಅನಾದಿಕಾಲದಿಂದಲೂ

ಪ್ರಸಿದ್ಧವಾಗಿದೆ. ಮುಖ್ಯವಾಗಿ ಪ್ರಕೃತಿದೇವತೆಯ ಕೃತಿಯನ್ನು ಅಣಕಿಸುವುದು ಮನುಷ್ಯನಿಗೆ ಮುಡುಪು. ಕಣ್ಣಿಗೆ ಕಾಣುವ ರೂಪಗಳನ್ನು ನೋಡಿ ಅಂಥ ಮತ್ತೆ ಕೆಲವು ರೂಪಗಳನ್ನು ನಾವು ಸೃಷ್ಟಿ ಮಾಡಿಕೊಳ್ಳಬಲ್ಲೆವು, ಕಿವಿಗೆ ಬೀಳುವ ಶಬ್ದಗಳಂತೆ ಕೆಲವು ಹೊಸ ಶಬ್ದಗಳನ್ನು ಯಂತ್ರಗಳಿಂದ ಏರ್ಪಡಿಸಬಲ್ಲೆವು. ಚಲನಚಿತ್ರಗಳನ್ನೂ ಗ್ರಾಮಫೋನುಗಳನ್ನೂ ಇಲ್ಲಿ ನೆನಪಿಗೆ ತಂದುಕೊಳ್ಳಬಹುದು. ಆದರೆ ಈ ಬಗೆಯ ಕಲ್ಪನೆಗೆ ಒಂದು ಮಿತಿಯಿದೆ; ಅಲ್ಲಿಂದಾಚೆಗೆ ದಾಟುವುದಕ್ಕೆ ಮನುಷ್ಯನಿಗೆ ಶಕ್ತಿಯಿರುವದಿಲ್ಲ. ಉದಾಹರಣೆಗೆ ಒಂದು ಗುಲಾಬಿಯ ಹೂವನ್ನು ಕಂಡರೆ ನಮಗೆಲ್ಲ ಎಷ್ಟೋ ಆನಂದವಾಗುವುದು. ನಾವು ಪ್ರಯತ್ನಪಟ್ಟರೆ ಅದರ ಆಕಾರವೂ ಬಣ್ಣವೂ ಬರುವಂತೆ ಕಾಗದದ ಅಥವಾ ಬಟ್ಟೆಯ ಹೂವನ್ನು ಮಾಡಬಹುದು. ಆದರೆ ನಿಜವಾದ ಹೂವಿನ ಆ ಕೋಮಲತೆ, ನರುಗಂಪು, ಕಳೆ, ಜೀವ- ಅವುಗಳನ್ನೇನಾದರೂ ನಮ್ಮ ಕೃತಕವಾದ ಹೂವಿಗೆ ಕೊಡಲಾಪೆವೆ? ಎಂದಿಗೂ ಇಲ್ಲ. ಈ ತರದ ಅಶಕ್ತತೆಯು ನಮ್ಮ ಎಲ್ಲ ಅನುಕರಣದಲ್ಲಿಯೂ ಒಡೆದುಮೂಡಿರುವುದು. ಕೃತಕವು ಪ್ರಕೃತಿಗೆ ಅಚ್ಚುಮೆಚ್ಚಾದರೂ ಪೆಚ್ಚಾದುದೆ. ಈ ವಿಷಯವನ್ನು ನೆನಪಿಗೆ ತಂದುಕೊಂಡಾಗ ಈ ವಿಚಿತ್ರ ಜಗತ್ತಿನ ಸೃಷ್ಟಿಕರ್ತನೊಬ್ಬ ನಿರಬೇಕೆಂಬ ಊಹೆಯು ನಮಗೆ ಬರುತ್ತದೆ. ಎಲ್ಲದರಲ್ಲಿಯೂ ಆತನ ಕೌಶಲವು ಎದ್ದು ಕಾಣುತ್ತದೆ. ಎಲ್ಲೆಲ್ಲಿಯೂ ಆತನ ಅನಂತಮಹಿಮೆಯೂ ಹೊರಪಡುವುದು.

ಆದರೆ ಆ ನಿರ್ಮಾಣಕನು ಅವ್ಯಕ್ತನು. ಈ ಅವ್ಯಕ್ತತೆಯೆ ಆತನನ್ನು ಹುಡುಕುವುದಕ್ಕೆ ಕಾರಣವಾಗಿದೆ. ಎಲ್ಲೆಲ್ಲಿಯೂ ಆತನೇ ಇರುವನೆಂಬ ಭಾವನೆಯು ನಮಗೆ ಬಂದ ಮೇಲೆ ಆತನು ನಮಗೆ ಬೆಳಕನ್ನೂ ಶಾಖವನ್ನೂ, ಅಷ್ಟೇ ಅಲ್ಲ, ನಮ್ಮ ಪ್ರಾಣವನ್ನೂ ಕೊಡುವ ಸೂರ್ಯನಲ್ಲೇಕಿರಬಾರದು? ಮನೋಹರವಾದ ಸುಂದರಸುಮಗಳಲ್ಲಿಯೂ ಮಧುರಫಲಗಳನ್ನೀಯುವ ವೃಕ್ಷಗಳಲ್ಲಿಯೂ ಹೊಳೆಯುವ ಕಾಂಚನದಲ್ಲಿಯೂ ಅಮೌಲ್ಯವಾದ ರತ್ನದಲ್ಲೇಕಿರಬಾರದು? ಎಂದು ಮುಂತಾಗಿ ತರ್ಕವು ಹುಟ್ಟುವುದು. 'ಸರ್ವಂ ವಿಷ್ಣುಮಯಂ ಜಗತ್' ಎಂಬ ಶ್ರುತಿವಚನವು ಈ ಅಭಿಪ್ರಾಯವನ್ನೇ ಗಟ್ಟಿಗೊಳಿಸುತ್ತದೆ.

ನಾವು ಇಂಥ ಪರಮಾತ್ಮನ ಕರುಣೆಯನ್ನು ಕುರಿತು ಯೋಚಿಸುವಾಗ ನಮ್ಮ ತಾಯಿತಂದೆಗಳ ಕರುಣವು ಭಾಸವಾಗಿ ಅವರ ರೂಪಾದಿಗಳು ಕಣ್ಣಿಗೆ ಕಟ್ಟಿದಂತಾಗುವುವು. ಅಪಯತ್ನವಾಗಿ ಪರಮಾತ್ಮನನ್ನು ಅವರಿಗೆ ಹೋಲಿಸಿಬಿಡುವೆವು. ಶ್ರೇಷ್ಠವಾದ ಪುರುಷಾಕೃತಿಯು ಕಲ್ಪನೆಯಾಗುವುದೂ ಆಗಲೇ.

ಆತನು ಸರ್ವಶಕ್ತನಷ್ಟೆ? ಬ್ರಹ್ಮಾಂಡವೂ ಕಾಲಚಕ್ರವೂ ಆತನ ಕರಗತವೆಂದು ತಿಳಿಯುವವು. ಅವುಗಳ ಲಾಂಛನಗಳಾದ ಶಂಖಚಕ್ರ ಗಳನ್ನು ನಮ್ಮ ಮನಸ್ಸಿನಲ್ಲಿರುವ ಈ ಪುರುಷನ ಕೈಗೆ ಕೊಡುವವು. ಹೀಗೆಯೇ ಆತನ ಇತರ ಗುಣಗಳಿಗೂ ಆಯಾ ಲಾಂಛನಗಳನ್ನು ಮಾಡಿಕೊಳ್ಳುತ್ತಾ ಬಂದಹಾಗೆಲ್ಲ ನಾರಾಯಣಾಕೃತಿಯಾಗಿ ಕಡೆಗೆ ದಿವ್ಯ ಸುಂದರವಿಗ್ರಹವೊಂದು ಶಿಲ್ಪಿಗಳ ಜಾಣ್ಮೆಗೆ ತಕ್ಕಂತೆ ರಚಿತವಾಗುವುದು.

ಪರಮಾತ್ಮನೇ ನಮ್ಮನ್ನು ಪೋಷಿಸುವನೆಂಬ ಭಾವನೆಯು ತುಂಬಿರುವಾಗ ಆತನನ್ನು ಹುಡುಕುವ ಭರದಲ್ಲಿ ಮೃಷ್ಟಾನ್ನವನ್ನು ಪ್ರೇಮದಿಂದಿಕ್ಕುವ ತಾಯಿಯ ನೆನಪಾಗಿ ಅನ್ನಪೂರ್ಣೆಯ ವಿಗ್ರಹವು ಕಲ್ಪಿತವಾಗುವುದು. ಇದರಂತೆಯೇ ಬೇರೆ ಬೇರೆ ಮೂರ್ತಿಗಳಾಗಿರುವವು. ಪ್ರತಿಯೊಂದರ ಅಂಗಾಂಗಕ್ಕೂ ಗೂಡಾರ್ಥವುಂಟು; ಪ್ರತಿಯೊಂದೂ ಆ ಒಬ್ಬ ನಿರಾಮಯನ ಒಂದೊಂದು ಶಕ್ತಿಯ ಅಥವಾ ಗುಣದ ಚಿಹ್ನವು. ಹೀಗೆ ಆರಾಧಕರ ಇಷ್ಟದಂತೆ ಆತನ ಮೂರ್ತಿಗಳು ಮಾರ್ಪಡುತ್ತಾ ಬಂದಿವೆ.

ಚಿಕ್ಕಂದಿನಲ್ಲಿ ಹೆಣ್ಣು ಮಕ್ಕಳು ಆಡುವ ಬೊಂಬೆಯಾಟವು ಮುಂದೆ ಮಾತೃತ್ವಕ್ಕೆ ಬೇಕಾದ ಶಿಶುಪೋಷಣೆಯ ಬುದ್ಧಿಯು ಕುದುರುವುದಕ್ಕೆ ಮೂಲವಾಗುವಂತೆ ಈ ಮೂರ್ತಿಪೂಜೆಯು ಅನೇಕರಿಗೆ ಮುಂದಿನ ಮಾನಸ ಪೂಜೆಗೆ ಮುಮ್ಮೆಟ್ಟಲಾಗಿ ರುವುದು. ಮಕ್ಕಳಿಗೆ ಸುಲಭವಾಗಿ ಅಕ್ಷರಪರಿಚಯವನ್ನು ಮಾಡಿಕೊಡುವುದಕ್ಕೆ ಮೊದಮೊದಲು ಕ್ರೀಡಾವಸ್ತುಗಳ ಸಹಾಯವು ಬೇಕಾಗುವುದು, ರೇಖಾಗಣಿತವನ್ನು ಸರಿಯಾಗಿ ಗ್ರಹಿಸುವುದಕ್ಕೆ ರೇಖೆ, ಕೋನ, ವರ್ತುಲಾದಿಗಳ ಆಕೃತಿಯು ಕಣ್ಣೆದುರಿಗೆ ಇರಲೇ ಬೇಕು. ಯಾವುದಾದರೊಂದು ರಾಶಿಯ ಒಂದು ಭಾಗವನ್ನು ಮನಸ್ಸಿಗೆ ಹಿಡಿಯುವಂತೆ ಮಾಡುವದಕ್ಕಾಗಿ ಒಂದು ವೃತ್ತವನ್ನೋ ಚೌಕೋನವನ್ನೋ ಬರೆದು ಅದನ್ನು ವಿಭಾಗಿಸಿ ಚಿತ್ರದ ಮೂಲಕ ತಿಳಿಸುವುದು ರೂಢಿಯಲ್ಲಿದೆ. ಹೀಗೆ ಸಾಧಾರಣವಿಷಯಗಳಿಗೆ ಚಿತ್ರಾದಿಗಳ ಸಹಾಯವು ಅಗತ್ಯವಿರುವಾಗ ಪ್ರಾರಂಭದ ದೇವತಾರ್ಚನೆಯ ವಿಚಾರದಲ್ಲಿ ಹೇಳಬೇಕಾದುದೇನು?

ಮೂರ್ತಿಪೂಜೆಗೆ ಅರ್ಥವಿಲ್ಲವೆನ್ನುವವರಲ್ಲಿ ಕೆಲವರ ವರ್ತನಕ್ಕೆ ಅರ್ಥವು ಗೊತ್ತಾಗುವಂತಿರುವುದಿಲ್ಲ. ಅವರು ದೊಡ್ಡವರ ಸಮಾಧಿಗೂ, ರಾಷ್ಟ್ರ ಧ್ವಜವೆಂಬ ದೊಡ್ಡ ಹೆಸರಿನ ಬಟ್ಟೆಗೂ, ಗುರುಹಿರಿಯರ ಚಿತ್ರಕ್ಕೂ, ಆಳುವವರ

ಬಯಲಪ್ರತಿಮೆಗೂ ಇಲ್ಲದ ಮನ್ನಣೆಯನ್ನು ಮಾಡುವರು. ಮಿಕ್ಕವರು ಅವಕ್ಕೆ ತಿರಸ್ಕಾರವನ್ನು ಸೂಚಿಸಿದರೆ ಕಿಡಿಕಿಡಿಯಾಗಿ ಎಷ್ಟೋ ಅನರ್ಥಗಳನ್ನುಂಟು ಮಾಡುವರು! ಇಂಥ ಸಂದರ್ಭದಲ್ಲಿ ಕೊಲೆಗಳುಂಟಾಗುವುದುಂಟು! ಹೀಗೆ ತಮಗೆ ಬೇಕಾದ ಮೂರ್ತಿಯ ಮಾನಸಪೂಜೆಯನ್ನು ಮಾಡುವ ಇವರು ಹೊರಗೆ ಎಲ್ಲರೂ ಕಾಣುವಂತೆ ಪೂಜೆಮಾಡುವವರನ್ನು ಏತಕ್ಕೆ ಆಕ್ಷೇಪಿಸುವರೊ! ಹಿರಿಯರಿಗೂ ದೊರೆಗಳಿಗೂ ಪಟವೂ ವಿಗ್ರಹವೂ ಗೌರವಸೂಚಕವಾದರೆ ಪರಮಾತ್ಮನ ಪೂಜೆಯಲ್ಲಿ ಅವು ಬೇರೆ ಅರ್ಥವನ್ನು ಕೊಟ್ಟಾವೆ? ಪರಮಾತ್ಮನ ಮಹಾ ಮಹಿಮೆಯನ್ನು ಮನದಟ್ಟು ಮಾಡಿಕೊಳ್ಳಬೇಕಾದರೆ ಅನೇಕರಿಗೆ ವಿಗ್ರಹಗಳ ಸಹಾಯವು ಬೇಕೇಬೇಕಾಗುವದು. ನಾಸ್ತಿಕರಾಗಿರುವವರಿಗೂ ಎಲ್ಲೆಲ್ಲಿಯೂ ಇರುವ ಪರಮಾತ್ಮನ ಅಸ್ತಿತ್ತ್ವವನ್ನು ಮನಗಂಡವರಿಗೆ ಅವುಗಳಿಲ್ಲದಿದ್ದರೂ ಆಗಬಹುದು.

## 2

ಮೂರ್ತಿಪೂಜೆಯನ್ನು ಕುರಿತು ಕೆಲವು ಅಭಿಪ್ರಾಯಗಳನ್ನು ಹಿಂದೆ ಸೂಚಿಸಿರುವೆನಷ್ಟೆ, ಇದೇ ಬಗೆಯ ಅಭಿಪ್ರಾಯವನ್ನೇ ಗ್ರೀಕರಲ್ಲಿ ಪ್ರಸಿದ್ಧನಾಗಿದ್ದ ಸಾಕ್ರೆಟಿಸ್ ಎಂಬ ತತ್ತ್ವಜ್ಞಾನಿಯು ಹೊರಪಡಿಸಿರುವದಾಗಿ ಈ ಕೆಳಗಿನ ಸಂಭಾಷಣೆಯಿಂದ ಗೊತ್ತಾಗುತ್ತದೆ. ಸಾಕ್ರೆಟಿಸನು ಈಗ್ಗೆ ಸುಮಾರು ಎರಡೂವರೆ ಸಾವಿರ ವರ್ಷಗಳ ಕೆಳಗೆ ಗ್ರೀಸ್‌ದೇಶದ ಆಥೆನ್ಸು ಎಂಬಲ್ಲಿದ್ದ ಮಹಾಜ್ಞಾನಿಯು. ಆತನು ಜ್ಞಾನವೇ ಸದ್ಗುಣವೆಂಬ ಸಿದ್ಧಾಂತವನ್ನು ಪ್ರತಿಪಾದಿಸುತ್ತಿದ್ದವನು; ಜ್ಞಾನಕ್ಕಾಗಿ ಪ್ರಾಣವನ್ನು ಕೊಟ್ಟವನು. ಬೆನ್ನ ಅಜರ ಎಂಬಾತನು ಯಹೂದ್ಯರಲ್ಲಿ ಧರ್ಮಾಚಾರ್ಯ(Rabbi)ನೆನಸಿಕೊಂಡಾತನು. ಗ್ರೀಕರು ವಿಗ್ರಾಹಾರಾಧಕರು, ಯಹೂದ್ಯರು ವಿಗ್ರಹಾರಾಧನೆಯ ವಿರೋಧಿಗಳು. ವಿಗ್ರಹಾರಾಧನೆಯು ಸಾಧಕನ ಪೂರ್ವಸ್ಥಿತಿಯಲ್ಲಿ ಬೇಕಾಗಬಹುದೆಂಬುದನ್ನು ವಾಚಕರು ಈ ಸಂಭಾಷಣೆಯಿಂದ ಮನಗಾಣಬಹುದಾಗಿದೆ.

# I

**ಸಾಕ್ರೆಟಿಸ್**:- ಬೇರೆ ಊರುಗಳಲ್ಲಿರುವಂತೆ ಮೂರ್ತಿಮಂದಿರಗಳು ನಿಮ್ಮ ಜೆರುಸಿಲಂನಲ್ಲಿ ಕಾಣಿಸುವುದಿಲ್ಲವೇಕೆ?

**ಬೆನ್ ಅಜರಾ** - ನಮ್ಮ ದೇವಾಲಯಗಳ ಗರ್ಭಾಂಗಣಗಳಲ್ಲಿ ಸಹ ನಮ್ಮ ದೇವರ ವಿಗ್ರಹವಿರುವುದಿಲ್ಲ.

**ಸಾ** - ಇಲ್ಲಿಗೂ ಇತರ ಕಡೆಗಳಿಗೂ ಇಷ್ಟೊಂದು ವ್ಯತ್ಯಾಸಕ್ಕೆ ಪ್ರಬಲ ಕಾರಣವಿರಬೇಕಲ್ಲವೆ?

**ಬೆನ್** - ತನ್ನ ಪ್ರತಿಮೆಯನ್ನು ಮಾಡಕೂಡದೆಂದು ನಮ್ಮ ದೇವರ ಆಜ್ಞೆಯುಂಟು. ಅದು ನಮ್ಮ ಶಾಸ್ತ್ರವಚನವು.

**ಸಾ** - ಹಾಗಿದ್ದರೆ ನೀವು ಅದನ್ನು ಅನುಸರಿಸುವುದು ನ್ಯಾಯವೆ. ಆದರೆ ಅದಕ್ಕೆ ಆಧಾರ ಬೇಕಷ್ಟೆ? ನಿಮ್ಮ ಶಾಸ್ತ್ರದಲ್ಲಿ ಮೂರ್ತಿಪೂಜೆ ಕೂಡದೆಂಬುದಕ್ಕೆ ಕಾರಣವನ್ನು ಕೊಟ್ಟಿದೆಯೆ?

**ಬೆನ್** - ಏನನ್ನಾದರೂ ಮಾಡಬೇಡವೆಂದು ನಮ್ಮ ಶಾಸ್ತ್ರವು ಆಜ್ಞೆಮಾಡಿದರೆ ನಮಗೆ ಅಷ್ಟೇ ಸಾಕು. ಆಧಾರವನ್ನು ಹುಡುಕುತ್ತಾ ಹೋದರೆ ಕೇಡು ಸಂಭವಿಸುವುದು.

**ಸಾ** - ಆದರೆ ನಿಮ್ಮ ಸ್ಮೃತಿಯು ನ್ಯಾಯ ವಿರುದ್ಧವಲ್ಲವಷ್ಟೆ?

**ಬೆನ್** - ಎಂದಿಗೂ ಅಲ್ಲ. ದೇವವಾಕ್ಕೆಂದರಾಯಿತು. ಕಾರಣಕಾರಣಗಗಳ ತರ್ಕದಿಂದ ಭಗವದಾಜ್ಞೆಯ ಬಗ್ಗೆ ನಮಗಿರಬೇಕಾದ ಭಯಭಕ್ತಿಗಳು ತಗುವವು.

**ಸಾ** - ಬುದ್ಧಿ ಮಟ್ಟಾಗಿರುವವರಿಗೆ ಹಾಗೆ ಭಕ್ತಿಯು ತಗ್ಗಬಹುದು; ಆದರೆ ನಿಮ್ಮಂತಹ ಪ್ರಾಜ್ಞರಿಗೆ ತಗ್ಗದು. ಶಾಸ್ತ್ರಮೂಲವು ಸ್ಪಷ್ಟಪಟ್ಟರೆ ಅನುಯಾಯಿಗಳ ಶ್ರದ್ಧೆಯು ಇಮ್ಮಡಿಯಾಗುವುದಲ್ಲವೆ?

# II

**ಬೆನ್ -** ಶಾಸ್ತ್ರಬಾಹಿರರಿಗೆ ಮೂರ್ತಿಪೂಜೆಯು ಒಗ್ಗುವದು. ಯಹೂದ್ಯರ ನೀತಿಯು ಬೇರೆ ರೀತಿಯದು. ಪರಂತು ನಮ್ಮ ಶಾಸ್ತ್ರಕ್ಕೆ ಕಾರಣವು ವ್ಯಕ್ತವಾಗಿಯೇ ಇದೆ. ವಿಗ್ರಹಗಳು ನಮ್ಮನ್ನು ತಪ್ಪುಹಾದಿಗೆ ಎಳೆಯುವುವು. ಕಲ್ಲನ್ನೂ ಕಟ್ಟಿಗೆಯನ್ನೂ ಪೂಜಿಸುವದಲ್ಲ. ಹಾಗೂ ವಿಗ್ರಹಭಕ್ತನ ಜ್ಞಾನವು ಅದರ ಕಡೆಗೆ ತಿರುಗಿ ಜಗದೀಶನನ್ನು ಮರೆಸುವುದು.

**ಸಾ -** ನಿಮ್ಮ ಸಂಕೀರ್ತನಕಾರನಾದ ಡೇವಿಡ್ಡನು ನಿಮ್ಮ ದೇವರಿಗೆ ಅನೇಕ ಆಕಾರಗಳನ್ನು ಕೊಟ್ಟಿಲ್ಲವೆ?

**ಬೆನ್ -** ಅದು ಹೇಗೆ?

**ಸಾ -** ನೀವೇನೋ ದೇವರು ನಿರಾಕಾರನೆಂದು ಹೇಳಬಹುದು. ಆದರೆ ಆತನನ್ನು ಅರಸ ನಾಯಾಧೀಶ, ಕುರುಬ ಕಡೆಗೆ ಒಂದು ''ಬಂಡೆ'' ಎಂದು ಸಹ ಡೇವಿಡ್ಡನು ಕರೆದಿರುವನು. ದೇವರಿಗೆ ರೆಕ್ಕೆಯಿರುವದೆಂದೂ ಕರದಲ್ಲಿ ಪಾತ್ರೆಯನ್ನು ಧರಿಸಿರುವನೆಂದೂ ಹೇಳಿದ್ದಾನೆ. ಇವೆಲ್ಲಾ ನಿಮ್ಮ ದೇವರ ಆಕೃತಿಗಳಲ್ಲವೆ?

**ಬೆನ್-** ನಾವು ಪರಮಾತ್ಮನಿಗೆ ರೂಪನ್ನು ಆರೋಪಿಸೆವು. ಈ ವರ್ಣನೆಯೆಲ್ಲ ಬರಿಯ ಉಲ್ಲೇಖಗಳು.

**ಸಾ -** ಉಲ್ಲೇಖಗಳಲ್ಲೇ ಆಕೃತಿಯು ಮೂಡುವುದು. ಅಂತು ಡೇವಿಡ್ಡನು ದೇವರಿಗೆ ಆಕಾರಗಳನ್ನು ಕಲ್ಪಿಸಿದಂತಾಯಿತು.

**ಬೆನ್-** ಆದರೆ ಆ ಆಕಾರಗಳಿಗೆ 'ಇರುವಿಕೆ'ಯಿಲ್ಲ; ಅವು ಶಿಲ್ಪಿಕಲ್ಪಿತ ಮೂರ್ತಿಗಳಲ್ಲ.

**ಸಾ -** ಅವುಗಳ ಇರುವಿಕೆಗೆ ಹೊರಗೆ ಆಲಯ ಕಟ್ಟಲ್ಲಿಲ್ಲ. ಆದಕ್ಕಾಗಿಯೇ ನೀವು ಅವಕ್ಕೆ ನಿಮ್ಮ ಮನೋಮಂದಿರದಲ್ಲಿ (Mind) ಸ್ಥಲಕೊಡಬೇಕಾಗಿದೆ. ಬಾಹ್ಯವರ್ತನಕ್ಕಿಂತ ಅಂತರಂಗದ ರೀತಿಯು ಹೆಚ್ಚಿನದಷ್ಟೆ? ಆದುದರಿಂದ ವಿಗ್ರಹಾರಾಧಕರ ತಪ್ಪಿಗಿಂತ ಡೇವಿಡ್ಡನ ತಪ್ಪು ಹೆಚ್ಚಿನದು. ಯಹೂದ್ಯರು ದೇವರ ಆಕೃತಿಯನ್ನು ಮನಸ್ಸಿನಲ್ಲಿ ಮಾತ್ರ ಇಟ್ಟುಕೊಂಡಿರುವಲ್ಲಿ, ಇತರರು ಮನಸ್ಸಿನಲ್ಲಿಯೂ ಹೊರಗೂ ಇಟ್ಟಿರುವರು. ಇಷ್ಟೇ ನಿಮಗೂ ಅವರಿಗೂ ಇರುವ ತಾರತಮ್ಯ.

# III

**ಸಾ** – ಇರಲಿ. ಈಗ ಬೇರೊಂದು, ತಾರತಮ್ಯವನ್ನು ವಿಮರ್ಶಿಸುವ.

**ಬೆನ್** – ಏತರ ತಾರತಮ್ಯವನ್ನು?

**ಸಾ** – ತಿಳಿದವರ ಮತ್ತು ಉಳಿದವರ ಭೇದವನ್ನು.

**ಬೆನ್** – ಹಾಗೆಂದರೆ?

**ಸಾ** – ನಮ್ಮೂರಿನಲ್ಲಿ ಬಹುಮಂದಿಗೆ ತತ್ತ್ವಜ್ಞಾನವಿಲ್ಲ. ನಿಮ್ಮೂರಿನಲ್ಲಿ ಅನೇಕರಿಗೆ ನಿಮ್ಮ ಶಾಸ್ತ್ರಜ್ಞಾನವಿಲ್ಲವಂತೆ. ಅಜ್ಞಾನಿಗಳ ಗುಂಪು ದೊಡ್ಡದು; ಜ್ಞಾನಿಗಳದು ಚಿಕ್ಕದು. ಮೂಢರ ಪಡೆಯೊಂದೆಡೆ; ಜ್ಞಾನಿಗಳ ಅಲ್ಪಸಂಖ್ಯೆಯೊಂದೆಡೆ.

**ಬೆನ್** – ಈ ಭೇದವು ಎಲ್ಲೆಲ್ಲೂ ಇರುವುದು ನಿಜ. ಆದರೇನು?

**ಸಾ** – ಆ ದೊಡ್ಡಗುಂಪಿನವರು ಕಾಷ್ಠಲೋಷ್ಟಗಳಿಂದ ರಚಿಸಲ್ಪಟ್ಟ ಇಷ್ಟದೇವತೆಗಳನ್ನು ಪೂಜಿಸುವರು.

**ಬೆನ್** – ಅವರು ವಿವೇಕಶೂನ್ಯರಾದುದರಿಂದಲೇ ಅಲ್ಲವೆ ಈ ಮೂಢಾಚರಣೆಯು?

**ಸಾ** – ಹೌದು. ಆದರೆ ಆ ಅವಜ್ಞತೆಯು ಅವರಲ್ಲಿ ಅಡಗಿರುವುದು ವಿಗ್ರಹದ ತಪ್ಪಲ್ಲವಷ್ಟೆ?

**ಬೆನ್** – ಆದರೇನು?

**ಸಾ** – ಅಜ್ಞಾನದ ಸಂಬಂಧವಿರುವವರೆಗೂ ಅಸಂಬದ್ಧಕ್ರಿಯೆಗಳೂ ತಪ್ಪವು.

**ಬೆನ್** – ಅಲ್ಲವೆನ್ನುವವರಾರು?

**ಸಾ** – ನಾವು ವಿಗ್ರಹಗಳನ್ನು ಕಿತ್ತುಕೊಂಡ ಮಾತ್ರಕ್ಕೆ ಶುಂಠರ ಅಜ್ಞಾನವನ್ನು ಹೋಗಲಾಡಿಸಿದಂತಾಯಿತೆ? ವಿಗ್ರಹವನ್ನು ಕಿತ್ತುಕೊಂಡರೆ ಅವರ ಪೂಜೆಪುರಸ್ಕಾರಗಳು ಮತ್ತೂ ಕೀಳುದರ್ಜೆಗೆ[1] ಇಳಿಯುವವು. ಬಹುಶಃ

---

1. ಮೇಲುಜಾತಿಯವರ ದೇವಾಲಯಗಳಿಗೆ ಹೋಗಲು ಅವಕಾಶವಿಲ್ಲದುದಕ್ಕಾಗಿ ಪಂಚಮಾದಿಗಳು ಮಾರಿಮಸಣಿಗಳನ್ನು ಪೂಜಿಸುವುದು ಭರತಖಂಡದಲ್ಲಿ ವಾಡಿಕೆಯಿದೆ.

ಐಗೂಪ್ತಿಯರಂತೆ ಇವರೂ ಬೆಕ್ಕುಗಳನ್ನೋ ಮೊಸಳೆಗಳನ್ನೋ ಪೂಜಿಸುವರು; ಅಥವಾ ಎಲ್ಲವನ್ನೂ ಬಿಟ್ಟು ನಾಸ್ತಿಕರಾಗುವರು. ನಾಸ್ತಿಕ್ಯಕ್ಕಿಂತ ಬೆಕ್ಕು ಮೊಸಳೆಗಳನ್ನಾದರೂ ಪೂಜಿಸುವುದು ಒಳ್ಳೆಯದು; ಆ ತೆರದ ಪೂಜೆಗಿಂತ ಸುಂದರವಿಗ್ರಹಾರಾಧನೆಯು ಒಳ್ಳೆಯದು–ಎಂಬುದು ನನ್ನ ಅಭಿಪ್ರಾಯವು.

**ಬೆನ್** – ಪೂಜೆಪುರಸ್ಕಾರಗಳನ್ನು ಪೂರ ತೊರೆದವರ ಪರಿಸ್ಥಿಯು ಹೆಚ್ಚು ಶೋಚನೀಯವಾದುದೆಂದು ಒಪ್ಪಿಕೊಳ್ಳುವೆನು.

**ಸಾ** – ರಬ್ಬಿಯವರೆ, ತಾವೂ ತಮ್ಮಂಥ ಪ್ರಾಜ್ಞರೂ ಮೂಢರನ್ನು ಸುಪಥಕ್ಕೆ ಕರೆತರುವವರೆಗೂ ಅವರಿಗೆ ವಿಗ್ರಹಗಳನ್ನು ಬಿಟ್ಟುಕೊಡಬೇಕಲ್ಲವೆ? ಬೆಳಕನ್ನು ತೋರಿಸಿದರೆ ಕತ್ತಲೆಯನ್ನು ಅವರೇ ಬಿಡುವರು. ಅಂತರಂಗವು ಮಾರ್ಪಡುವವರೆಗೂ ಬಹಿರಾಚರಣೆಯನ್ನು ಬಲವಂತದಿಂದ ಬದಲಾಯಿಸುವುದು ವ್ಯರ್ಥಶ್ರಮವಲ್ಲದೆ?

## IV

**ಸಾ** – ಈಗ ಸಾಮಾನ್ಯರನ್ನು ಬಿಟ್ಟು ಜ್ಞಾನಿಗಳ ವಿಚಾರವನ್ನು ಪ್ರಸ್ತಾವಿಸುವ.

**ಬೆನ್** – ಆಗಬಹುದು.

**ಸಾ** – ತನ್ನಲ್ಲಿ ವಿವೇಕವಿರುವಮಟ್ಟಿಗೆ ಜ್ಞಾನಿಯು ತಪ್ಪನ್ನು ಮಾಡನೆಂದು ಭಾವಿಸುವಿರಿ. ಹೌದೋ?

**ಬೆನ್** – ಹೌದು. ಆದರೆ ನಿಮ್ಮ ಅಥೆನ್ಸಿನಲ್ಲಿ ಜ್ಞಾನಿಗಳು ತಪ್ಪುಹಾದಿಯನ್ನು ತುಳಿಯುವರಷ್ಟೆ?

**ಸಾ** – ನಾವು ಅನೇಕ ವಿಗ್ರಹಗಳನ್ನು ಸ್ಥಾಪಿಸಿರುವುದು ನಿಜ. ಆದರೆ ಅವು ಪೂರ್ಣಜ್ಞಾನಿಗಳಿಗೋಸುಗವಲ್ಲ. ಆದರೂ, ಅವರು ಮೂರ್ತಿಗಳಿಗೆ ಹರಕೆಗಳನ್ನೊಪ್ಪಿಸುವರು. ಪುಷ್ಪಮಾಲೆಯನ್ನು ಅರ್ಪಿಸುವರು, ನಮಸ್ಕರಿಸುವರು, ಉತ್ಸವಮಾಡುವರು, ಮತ್ತು ಜಾತ್ರೆಗಳಲ್ಲಿ ಭಾಗಿಯಾಗುವರು. ಆದರೆ ಅದು ಕಲ್ಲೆಂಬುದನ್ನು ಬಲ್ಲರು. ಅದು ಯಾವ ಪರಮಾತ್ಮನ ಹೆಗ್ಗುರುತೋ ಆತನನ್ನು ಇಂತು ಸೇವಿಸುವರು. ಇದರಲ್ಲೂ ತಾರತಮ್ಯವುಂಟು.

**ಬೆನ್** – ಇಲ್ಲಿಯೂ, ನಿಮಗೆ ತಾರತಮ್ಯದ ಗೀಳೇ? ತಿಳಿದವರ ಉಳಿದವರ ವಿಂಗಡನೆಯಾಯಿತು. ಈಗ ಮೂರ್ತಿಕೀರ್ತಿಗಳ ಭೇದವಾದ ತಾನೆ?

**ಸಾ** – ಈ ತೆರದ ವಿಭಜನೆಯಿಂದಲೇ ಪರಿಶೀಲನಜ್ಞಾನವು ವೃದ್ಧಿಗೊಳ್ಳುವುದು. ಇರಲಿ ಮೂಢರು ಕಲ್ಲನ್ನೇ ಪೂಜಿಸುವುದು ನಿಜ. ಅವರಿಗೆ ಗತ್ಯಂತರವಿಲ್ಲ. ಪ್ರಾಜ್ಞರೂ ಪೂಜಿಸುವರು, ಆದರೆ ಬರಿಯ ಕಲ್ಲನ್ನಲ್ಲ; ಅದರ ಮೂಲಕ ಅದರಿಂದ ನಿರ್ದಿಷ್ಟವಾದ ಪರವಸ್ತುವನ್ನು ಮಾತ್ರ.

**ಬೆನ್** – ವಿಗ್ರಹಸ್ಥಾಪನೆಯಿಂದ ಜನರ ಗಮನವು ಆ ಕಡೆಗೆ ತಿರುಗಿ ದೇವರನ್ನು ಮರೆಯುವರೆಂಬುದು ನಮ್ಮ ಹಿರಿಯರ ಶಂಕೆಯು ಮತ್ತು ತನ್ನನ್ನು ಇತರ ವಸ್ತುಗಳಿಗೆ ಹೋಲಿಸಕೂಡದೆಂದು ದೇವರ ಅಜ್ಞೆಯು.

**ಸಾ** – ಈ ಬಗ್ಗೆ ಮತ್ತೊಂದು ಸಂಗತಿಯನ್ನು ತಿಳಿಸುವೆನು. ನಿಮ್ಮ ಆಚರಣೆಯನ್ನು ಧಿಕ್ಕರಿಸುವುದಕ್ಕಲ್ಲ, ನಮ್ಮ ಪದ್ಧತಿಯು ಯುಕ್ತಿ ಯುಕ್ತವಾದುದೆಂದು ತೋರಿಸುವುದಕ್ಕೆ ಮಟ್ಟಿಗೆ ಹೇಳುವೆನು. ನಮ್ಮ ಅಭಿಪ್ರಾಯಗಳನ್ನು ಸಂಕೇತದ ಮೂಲಕ ಸೂಚಿಸಬಹುದಷ್ಟೆ. ಒಂದು ನಾಟಕದಲ್ಲಿ ದೊರೆಯ ಪಾತ್ರವನ್ನು ವಹಿಸಿದವನು ತಾನೇ ದೊರೆಯಲ್ಲ, ಅವನಂತೆ ನಟಿಸುವನು ಮಾತ್ರ; ಸತೀಮಣಿಯೊಬ್ಬಳು ಗತಿಸಿದ ತನ್ನ ಪತಿಯ ಹೆಸರಿನಲ್ಲಿ ಒಂದು ಸದನವನ್ನು ಕಟ್ಟಿಸಿದರೆ ಅದು ಅವಳ ಪತಿಯಲ್ಲ, ಆತನ ಸ್ಮಾರಕ ಕಟ್ಟಡವು. ಜೋಲಿರುವ ಸ್ವರಣಲತೆಯು ಅಧೋಲೋಕವನ್ನು ಸೂಚಿಸುವ ಚಿಹ್ನೆಯು; ಕೋಗಿಲೆಯಿಂದ ವಸಂತಾಗಮನದ ಬೋಧೆಯಾಗುವುದು. ಹೀಗೆ ಎಷ್ಟೋ ರೀತಿಯಲ್ಲಿ ಒಂದು ವಸ್ತುವು ಮತ್ತೊಂದಕ್ಕೆ ಗುರುತಾಗಿರುವದು. ಕಾಣುವುದರ ಸಹಾಯದಿಂದ ಕಾಣದುದನ್ನು ಗ್ರಹಿಸುವೆವು. ಬಾಹ್ಯವಸ್ತುವನ್ನು ನೋಡಿ ಅಂತರ್ಗತವಾದುದನ್ನು ನೆನೆಯುವೆವು. ಮೂರ್ತಿಯು ಸ್ಫೂರ್ತಿಯನ್ನುಂಟು ಮಾಡುವುದು[1]

★★★★★

1. 1932 ನೆಯ ವರ್ಷದ 'ಹಿಬ್ಬರ್ಟ್ ಜರ್ನಲ್' ಎಂಬ ಪತ್ರಿಕೆಯ ಒಂದಾನೊಂದು ಲೇಖನದಿಂದ ಈ ಸಂಭಾಷಣೆಯನ್ನು ಆರಿಸಿಕೊಂಡಿದೆ.

# ಗಟ್ಟಿ ಮೆದು

ಮನುಷ್ಯನು ಹುಟ್ಟುವಾಗ ಮೃದುವಾಗಿ ಕೋಮಲವಾಗಿರುತ್ತಾನೆ, ಸತ್ತಮೇಲೆ ಸೆಟೆದುಕೊಂಡು ಗಟ್ಟಿಯಾಗುತಾನೆ. ಎಲ್ಲವೂ ಹೀಗೆಯೇತ್ತಾ. ಗಿಡಗಳೂ ಮರಗಳೂ ಬೆಳೆಯುತ್ತಿರುವಾಗ ಬಳುಕುತ್ತಾ ಕೋಮಲವಾಗಿರುವವು, ಸತ್ತಮೇಲೆ ಬತ್ತಿಕೊಂಡು ಗಟ್ಟಿಯಾಗುವವು. ಹೀಗೆ ನೋಡಿದರೆ, ಗಟ್ಟಿಯಾಗಿ ಬಲವಾಗಿರುವದು ಸಾವಿಗೆ ಸೇರಿದ್ದು; ಮೃದುವಾಗಿ ಕೋಮಲವಾಗಿರುವದು ಜೀವನದ ಜೊತೆಯಲ್ಲಿರುವದು. ಆದ್ದರಿಂದ ಯಾವನು ಬರಿಯ ಬಲವನ್ನೇ ನಂಬಿಕೊಂಡಿರುವನೋ ಅವನಿಗೆ ಜಯವಿಲ್ಲ; ಮರವು ಬಲವಾಗಿದ್ದರೆ ಕೊಡಲಿಯ ಪೆಟ್ಟು ಸಿದ್ಧ. ಆದ್ದರಿಂದ ಹೆಚ್ಚಿನ ಬಲಕ್ಕೆ ಕೆಳಗಿನ ಸ್ಥಾನ, ಶಾಂತಿಯ ಮಾರ್ದವಕ್ಕೇ ಉಚ್ಚಸ್ಥಾನ,

– ಲಾವೋಸೂ

★★★★★

# ಮತಗಳ ಗುರಿ

**–ಡಾ|| ಅನಿ ಬೆಸೆಂಟ್**

ಈ ಲೋಕದ ಮತಗಳಿಗೆಲ್ಲ ಒಂದೇ ಗುರಿಯಿರುತ್ತದೆ. ಆತ್ಮಸಾಕ್ಷಾತ್ಕಾರವೇ, ಪರಮೇಶ್ವರನ ವಿಜ್ಞಾನವೇ, ಆ ಗುರಿಯು. ಅವುಗಳಲ್ಲಿ ಬಾಹ್ಯಕರ್ಮಗಳನ್ನೂ ಆಚಾರಗಳನ್ನೂ ಹೇಳಿರುವದು ಶರೀರವನ್ನು ಸಜ್ಜುಗೊಳಿಸುವದಕ್ಕೆ; ಅದರಲ್ಲಿರುವ ಆಲಸಿಕೆಯನ್ನು ಪರಿಹರಿಸಿಕೊಂಡು ಆಹಾರವಿಹಾರಾದಿಗಳಲ್ಲೆಲ್ಲ ಮಿತವಾಗಿ ರಬೇಕೆಂಬುದನ್ನು ತಿಳಿದುಕೊಂಡು, ಶರೀರವು ನಮ್ಮನ್ನು ಗೋಳುಗುಟ್ಟಿಸುವ ಯಜಮಾನನಾಗಿರದೆ ಉಪಕಾರಿಯಾದ ಆಳಾಗಿರುವಂತೆ ಮಾಡಿಕೊಳ್ಳುವದಕ್ಕೆ ಅವುಗಳಲ್ಲಿ ನೀತಿಯನ್ನು ಹೇಳಿರುವದು ನಮ್ಮೀ ಮನೋಭಾವಗಳನ್ನು ಅತ್ಯಂತ ಉತ್ಕೃಷ್ಟವಾದ ಪ್ರಯೋಜನಕ್ಕೆ ನೆರವಾಗುವಂತೆ ತಯಾರುಮಾಡಿಕೊಳ್ಳುವದಕ್ಕೆ. ಆ ಮತಗಳಲ್ಲಿ ವಿಚಾರವನ್ನೂ ವಿವೇಕವನ್ನೂ ಹೇಳಿರುವದು ಬುದ್ಧಿಯನ್ನು ಅತ್ಯಂತ

ಉತ್ತಮರೀತಿಯಿಂದ ವಿಕಾಸಗೊಳಿಸಿಕೊಳ್ಳುವದಕ್ಕೆ. ಆದರೆ ಧರ್ಮದ ಸಾರವು ಯಾವದೆಂದರೆ ಏಕತ್ವವು, ಒಳಗೂ ಹೊರಗೂ ಇದ್ದುಕೊಂಡು ಜೀವರುಗಳೆಲ್ಲರ ಭ್ರಾತೃಭಾವರೂಪದಿಂದ ವಿಕಾಸವಾಗಿರುವ ಪರಮೇಶ್ವರನೊಬ್ಬನೇ ಎಂಬುದನ್ನು ಅನುಭವಕ್ಕೆ ತಂದುಕೊಳ್ಳುವುದು.

ಭರತಖಂಡದಲ್ಲಿ ಮುಖ್ಯಧರ್ಮಗಳೆಲ್ಲವೂ ನೆಲೆಸಿರುತ್ತವೆ. ಅದರಿಂದ ಧಾರ್ಮಿಕ ಭೇದಗಳಿಂದ ಜನಾಂಗಭಾವನೆಯುಂಟಾಗುವದಕ್ಕೆ ಎಂದೆಂದಿಗೂ ಅಡ್ಡಿಯಾಗಿರುವದೆಂದು ಕೆಲವರು ಹೇಳುತ್ತಾರೆ. ಹೀಗೆನ್ನುವವರ ಅಭಿಪ್ರಾಯವು ತಪ್ಪಾಗಿರುತ್ತದೆ. ಏಕೆಂದರೆ ಧರ್ಮಗಳಲ್ಲಿರುವ ವಿಶೇಷಗಳು ವಿಧವಿಧವಾಗಿರುತ್ತವೆ; ಯಾರು ಅಧ್ಯಾತ್ಮಪರರಲ್ಲವೋ ಅವರು ಅಪ್ರಧಾನವಿಷಯಗಳನ್ನು ಕುರಿತು ಜಗಳವಾಡುತ್ತಿರುವರು. ಆದರೆ ಧರ್ಮದ ಹೃದಯವು ಒಂದೇ; ಪರಮೇಶ್ವರನನ್ನೂ ಮಾನವನನ್ನೂ ಪ್ರೀತಿಸುವುದೇ ಆ ಹೃದಯವು. ಎಲ್ಲರಿಗೂ ಸಮಾನವಾಗಿರುವ ಈ ಧರ್ಮಾಭಿಮಾನವು ಇಂಡಿಯಾದಲ್ಲಿರುವ ಧಾರ್ಮಿಕವೈಷಮ್ಯಗಳ ಸ್ಥಾನವನ್ನು ಆಕ್ರಮಿಸಬೇಕು. The Theosophist.

**ಯಂ ಶೈವಾಃ ಸಮುಪಾಸತೇ ಶಿವ ಇತಿ ಬ್ರಹ್ಮೇತಿ ವೇದಾನ್ತಿನೋ**
**ಬೌದ್ಧ ಬುದ್ಧ ಇತಿ ಪ್ರಮಾಣಪಟವಃ ಕರ್ತೇತಿ ನೈಯಾಯಿಕಾಃ ।**
**ಅರ್ಹನ್ನಿತ್ಯಥ ಜೈನಶಾಸನರತಾಃ ಕರ್ಮೇತಿ ಮೀಮಾಂಸಕಾಃ**
**ಸೋಽಯಂ ವೋ ವಿದಧಾತು ವಾಞ್ಛಿತಫಲಂ ತ್ರೈಲೋಕ್ಯನಾಥೋ ಹರಿಃ ॥**

ಯಾವನನ್ನು ಶೈವರು ಶಿವನೆಂದೂ ವೇದಾಂತಿಗಳು ಬ್ರಹ್ಮವೆಂದೂ ಬೌದ್ಧರು ಬುದ್ಧನೆಂದೂ ಪ್ರಮಾಣಜ್ಞರಾದ ನೈಯಾಯಿಕರು ಕರ್ತನೆಂದೂ ಜೈನಶಾಸ್ತ್ರಜ್ಞರು ಅರ್ಹಂತನೆಂದೂ ಮೀಮಾಂಸಕರು ಕರ್ಮವೆಂದೂ ಉಪಾಸನೆಮಾಡುವರೋ ಆ ಮೂಲೋಕದೊಡೆಯನಾದ ಹರಿಯು ಅಭೀಷ್ಟಫಲವನ್ನು ಕೊಡಲಿ!

★★★★★

# ಯಹೂದ್ಯರು

**- ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು**

ಧಾರ್ಮಿಕಕಾರಣದಿಂದ ಹಿಂದುಗಳಂತೆಯೇ ಪ್ರಸಿದ್ಧರಾಗಿ ರಾಜಕೀಯಸ್ಥಿತಿಯಲ್ಲಿ ಬಹುಕಾಲದಿಂದಲೂ ಕೀಳುಮಟ್ಟದಲ್ಲಿರುವ ಜನರು ಯಹೂದ್ಯರು. ಈ ಜನರು ಈಗ ಯೂರೋಪು, ಏಷಿಯ, ಆಫ್ರಿಕ- ಮೂರು ಖಂಡಗಳಲ್ಲಿಯೂ ಹರಡಿಕೊಂಡಿರುತ್ತಾರೆ. ಅದೇನು ಈಶ್ವರನ ಮಾಯೆಯೊ, ಈ ಜನರಿಗೆ ಎಲ್ಲಿಯೂ ಉಳಿಬಾಳಿಲ್ಲವಾಗಿದೆ!

ಈ ಜನಾಂಗಿದ ಪೂರ್ವಿಕರು ಪ್ಯಾಲಸ್ಟೈನ್ ದೇಶದಲ್ಲಿದ್ದರೆಂದೂ ಅವರು ಗ್ರೀಕರ, ರೋಮನರ ಮತ್ತು ತುರ್ಕಿದೇಶದವರ ಉಪಟಳವನ್ನು ತಡೆಯಲಾರದೆ ತಮ್ಮ ದೇಶವನ್ನು ಬಿಟ್ಟು ಹೊರಕ್ಕೆ ಬಂದರೆಂದೂ ಪಶ್ಚಿಮದೇಶಗಳಲ್ಲಿ ಬಹುಜನರ ನಂಬಿಕೆಯಿದೆ. ಆ ನಂಬಿಕೆಯಲ್ಲಿ ನಿಜದಂಶ್ಯವೂ ಇದೆ. ಜೆರೂಸಲೆಂ ನಗರದಲ್ಲಿ ವಾಸವಾಗಿದ್ದ ಯಹೂದ್ಯರನ್ನು ಬಾಬಿಲಾನ್ ದೊರೆಯೊಬ್ಬನು ಕೈಸೆರೆಹಿಡಿದುಕೊಂಡು ಹೋದನೆಂದೂ ಅವರು ಬಂಧವಿಮೋಚನೆಯಾಗಿ ತಮ್ಮ ದೇಶಕ್ಕೆ ಬಂದಮೇಲೆ ಮತ್ತೆ ತಮ್ಮ ಪವಿತ್ರ ಕ್ಷೇತ್ರವಾದ ಜೆರೂಸಲೆಮ್ಮಿನ ದೇವಾಲಯವನ್ನು ಕಟ್ಟಿಕೊಂಡರೆಂದೂ ಬೈಬಲ್ ಗ್ರಂಥದಿಂದ ತಿಳಿದುಬರುತ್ತದೆ. ಆ ಜನರು ಧರ್ಮಭ್ರಾತೃತ್ವವನ್ನು ಬಹುಬಲವಾಗಿ ಬೆಳೆಯಿಸಿಕೊಂಡು ಮತ್ತೆ ಯಾರೊಬ್ಬರಲ್ಲಿಯೂ ಸಂಬಂಧವನ್ನು ಮಾಡದೆ ತಾವೇ ಒಂದು ಜನರಾಗಿ ಉಳಿದುಕೊಂಡುಬಿಟ್ಟರು. ಈಶ್ವರನು ತಮ್ಮ ಜನಾಂಗವನ್ನು ತನ್ನ ದಯೆಗೆ ವಿಶೇಷವಾಗಿ ಪಾತ್ರವೆಂದು ಆರಿಸಿಕೊಂಡಿರುವನೆಂಬ ನಂಬಿಕೆಯು ಆ ಜನರಲ್ಲಿ ಮೊದಲಿನಿಂದಲೂ ಬೇರೂರಿತ್ತು. ಹಿಂದುಗಳನೇಕರು ಕಲ್ಕಿಯ ಅವತಾರವನ್ನು ನಿರೀಕ್ಷಿಸುವಂತೆ ಅವರೂ ಪರಮೇಶ್ವರನ ಅವತಾರವೊಂದನ್ನು ನಿರೀಕ್ಷಿಸಿಕೊಂಡಿದ್ದರು. ದೇವರು ತಮ್ಮಲ್ಲಿ ಆವತರಿಸಿ ತಮ್ಮ ಕಷ್ಟವನ್ನೆಲ್ಲ ಪರಿಹರಿಸಿ ಇಡಿಯ ಭೂಮಂಡಲವನ್ನೇ ಯಹೂದ್ಯರ ಧರ್ಮರಾಜ್ಯಕ್ಕೆ ಒಳಗು ಮಾಡುವನೆಂಬ ನಂಬಿಕೆಯೊಂದು ಆ ಜನರಲ್ಲಿ ಅಂದಿನಿಂದ ಇಂದಿನವರೆಗೂ ಅಚ್ಚಳಿಯದೆ ನಿಂತುಬಿಟ್ಟಿದೆ. ಇದೂ ಒಂದು ಆ ಜನರ ಒಗ್ಗಟ್ಟಿಗೆ ಕಾರಣವಾಗಿರುತ್ತದೆ.

ಯಹೂದ್ಯರು ಧರ್ಮದೃಷ್ಟಿಯಿಂದ ಒಂದೇ ಜನರಾದರು ಮಿಕ್ಕವರು ಯಾರೂ ಅವರಲ್ಲಿ ಬೆರೆತುಕೊಂಡೇ ಇಲ್ಲವೆಂದು ಹೇಳುವದಕ್ಕೆ ಬರುವಂತಿಲ್ಲ. ಭೂ ಮಧ್ಯಸಮುದ್ರದ ಪಕ್ಕದದೇಶಗಳಲ್ಲಿಯೂ ಉತ್ತರ ಆಫ್ರಿಕಾಖಂಡದಲ್ಲಿಯೂ ಸ್ಪೈನ್ ದೇಶದಲ್ಲಿಯೂ ಇದ್ದ ಫಿಸಿಷಿಯನ್ನರೆಂಬ ವರ್ತಕರು ಯಹೂದ್ಯರು ಭಾಷೆಯ ಸಜಾತೀಯವಾದ ಒಂದು ಭಾಷೆಯನ್ನು ಆಡುತ್ತಿದ್ದರು. ಅವರಲ್ಲನೇಕರು ರಾಜಕೀಯಹಿಂಸೆಗಳಿಂದ ಯಹೂದ್ಯರ ಧರ್ಮವನ್ನು ಆವಲಂಬಿಸಿದರೆ, ಪ್ಯಾಲಸ್ಟೈನ್ ಅಗ್ನೇಯದಲ್ಲಿದ್ದ ಇಡುಮಿಯ ದೇಶದವರೂ ಬಲಾತ್ಕಾರದಿಂದ ಯಹೂದ್ಯರಾದರೆಂದು ಹೇಳುತ್ತಾರೆ. ಮಹಮ್ಮದನ ಕಾಲಕ್ಕೆ ಕೆಲವರು ಅರಬರು ಕೂಡ ಯಹೂದ್ಯರಾಗಿದ್ದರೆಂದು ತಿಳಿಯಬರುತ್ತದೆ.

ಹೀಗೆ ಒಟ್ಟುಗೂಡಿದ ಈ ಜನರು ಲೇವಾದೇವಿ, ವರ್ತಕ ವೃತ್ತಿ-ಇವುಗಳನ್ನು ಮೊದಲಿನಿಂದಲೂ ಅನುಸರಿಸಿಕೊಂಡು ಬಂದಂತೆ ತೋರುತ್ತದೆ. ಇವರು ಯಹೂದ್ಯರೆಲ್ಲ ಧರ್ಮಭ್ರಾತೃಗಳೆಂಬುದನ್ನು ಎಂದೂ ಎಲ್ಲಿಯೂ ಮರೆಯಲೇ ಇಲ್ಲ. ತಾವು ಯಾವ ದೇಶದಲ್ಲಿಯೇ ಇರಲಿ, ಅಲ್ಲಿಯ ಒಳಜಗಳದಲ್ಲಿ ಪಾಲುತೆಗೆದುಕೊಳ್ಳದೆ ಇವರು ಸ್ವವೃತ್ತಿಯನ್ನು ಬಿಡದೆ ಒಬ್ಬರನ್ನೊಬ್ಬರು ಪ್ರೀತಿಸುತ್ತಲೂ ಒಬ್ಬರಿಗೊಬ್ಬರು ಸಹಾಯಮಾಡುತ್ತಲೂ ಬಂದದ್ದರಿಂದ ಬೇಗನೆ ಧನಸಂಪತ್ತನ್ನು ಗಳಿಸಿದರು, ಕಷ್ಟ ಕಾಲದಲ್ಲಿ ಅಲ್ಲಲ್ಲಿಯ ರಾಜರುಗಳಿಗೆ ಕೂಡ ಸಾಲವನ್ನು ಕೊಟ್ಟು ಸಹಾಯಮಾಡಿದರು. ಈ ಸಾಲವನ್ನು ಕೊಡಬೇಕಾಗಿ ಬಂದಾಗ ಆಯಾ ದೇಶದವರು ಬಗೆಬಗೆಯ ನೆವಗಳನ್ನು ತೆಗೆದು ಇವರನ್ನು ಹಿಂಸಿಸುತ್ತಲೇ ಬಂದಿರುತ್ತಾರೆ. ಆದರೂ ಇವರು ತಮ್ಮ ವಾಙ್ಮಯ, ಕಲಾಕೌಶಲ, ವಾಣಿಜ್ಯವಿದ್ಯೆ-ಇವುಗಳ ಮೂಲಕ ತಮ್ಮ ಸುತ್ತುವಳೆಯದಲ್ಲಿರುವವರನ್ನು ಮೇಲಕ್ಕೆತ್ತುತ್ತಲೇ ನಡೆದಿರುತ್ತಾರೆ.

ತಮಗಿಂತ ಕಷ್ಟಪಟ್ಟು ಕೆಲಸಮಾಡುವವರೂ ಮಿತವ್ಯಯಿಗಳೂ ಶಾಂತಿಪ್ರಿಯರೂ ಸುಸಂಸ್ಕೃತರೂ ಬುದ್ಧಿವಂತರೂ ಆಗಿರುವವರನ್ನು ಕಂಡರೆ, ಅದರಲ್ಲಿಯೂ ಅಂಥ ಜನರು ಪರಕೀಯರಾಗಿದ್ದರೆ, ಅಸೂಯೆಪಡುವದೇ ಮನುಷ್ಯರ ಸ್ವಭಾವವಾಗಿದೆಯೆಂದು ತೋರುತ್ತದೆ. ಈ ಎಲ್ಲಾ ಕಾರಣಗಳೂ ಯಹೂದ್ಯರ ವಿಷಯದಲ್ಲಿ ಸೇರಿಕೊಂಡಿವೆಯೆಂದ ಮೇಲೆ ಅವರನ್ನು ಯೂರೋಪಿನ ಜನರು ಬಹುವಾಗಿ ಹಿಂಸಿಸುವದು ಸ್ವಭಾವವೆಂದೇ

ಹೇಳಬೇಕಾಗುತ್ತದೆ. ಸಾಲದಕಡಿಮೆಗೆ ಧರ್ಮದ ಒಂದು ಕುಂಟನೆಪವೊಂದು ಪಾಶ್ಚಾತ್ಯದಿಗೆಲ್ಲ ಸಿಕ್ಕಿರುತ್ತದೆ. ಯಹೂದ್ಯರಲ್ಲಿ 'ಯೇಸು'ವೆಂಬಾತನೊಬ್ಬನು ತಾನೇ ಆ ಜನರು ನಿರೀಕ್ಷಿಸುತ್ತಿದ್ದ ಅವತಾರಪುರುಷನೆಂದು ಹೇಳಿಕೊಂಡನು. ಆದರೆ ಯಹೂದ್ಯರು ಮಾತ್ರ ತಮ್ಮ ಧರ್ಮಗ್ರಂಥದಲ್ಲಿ ಹೇಳಿದ ಈಶ್ವರಾಂಶಪುರುಷನು ಯೇಸುವಲ್ಲವೆಂದು ಹೇಳಿಬಿಟ್ಟರು. ಇಷ್ಟೇ ಅಲ್ಲ, ಅವರಲ್ಲಿ ಕೆಲವರು ರೋಮನ್ನರಲ್ಲಿ ದೂರುಹೇಳಿ ಅವನನ್ನು ಶಿಲುಬೆಗೆ ಹಾಕಿಸಿ ಕೊಲ್ಲಿಸಿಯೂ ಬಿಟ್ಟರು. ಈಚೆಗೆ ಯೇಸುವೇ ಲೋಕೋದ್ಧಾರಕ್ಕಾಗಿ ಅವತರಿಸಿದ ಮಹಾತ್ಮನೆಂದು ಅನೇಕರು ಒಪ್ಪಿಕೊಂಡುಬಿಟ್ಟಿರುತ್ತಾರೆ; ಅವನು ಕ್ರೈಸ್ತನು ಎಂದರೆ ರಕ್ಷಕನು ಎಂದು ಒಪ್ಪಿಕೊಂಡವರೇ ಈಗ ಕ್ರಿಸ್ತಿಯನ್ನರಾಗಿ ಇರುತ್ತಾರೆ. ಕ್ರಿಸ್ತಿಯನ್ನ ಮತವು ಯೂರೋಪಿನಲ್ಲೆಲ್ಲ ಈಗ ಹರಡಿಬಿಟ್ಟಿರುತ್ತದೆ. ತಮ್ಮ ಧರ್ಮವತಾರನಾದ ಕ್ರೈಸ್ತನನ್ನು ಯಹೂದ್ಯರು ಸಿಲುಬೆಗೆ ಹಾಕಿಸಿದ್ದರಿಂದ ಆ ಜನಾಂಗದಲ್ಲಿ ಯಾವದೋ ಒಂದು ಅಸುರಾಂಶ ಇರುವದೆಂದೇ ಬಹುಜನ ಕ್ರಿಸ್ತಿಯನ್ನರ ವಿಶ್ವಾಸವಾಗಿಬಿಟ್ಟಿದೆ. ಕ್ರೈಸ್ತನ ಬೋಧೆಯನ್ನು ಆಚರಣೆಗೆ ತಾರದೆ ಇದ್ದರೂ ಚಿಂತೆಯಿಲ್ಲ, ಯಹೂದ್ಯರನ್ನು ಹಿಂಸೆಮಾಡುವದರಿಂದ ತಮಗೆ ಮುಕ್ಕಾಲುವಾಸಿ ಕ್ರೈಸ್ತ ಧರ್ಮದ ದೀಕ್ಷೆಯಾದಂತೆ ಎಂದು ಕ್ರಿಸ್ತಿಯನರು ಭಾವಿಸಿದಂತೆ ತೋರುತ್ತದೆ!

ಯಹೂದ್ಯರ ದ್ವೇಷಕ್ಕೆ ಧರ್ಮವೊಂದು ನಿಮಿತ್ತವೇ ಹೊರತು ಅದೊಂದೇ ಕಾರಣವಲ್ಲವೆಂಬುದು ಖಂಡಿತ. ಯಹೂದ್ಯರ ಸಾಲವನ್ನು ತೀರಿಸುವದಕ್ಕೆ ಅವರ ಮೇಲೆ ಹಗೆತನವನ್ನು ತೋರಿಸುವದೊಂದು ಒಳ್ಳೆಯ ಉಪಾಯವೆಂತ ಕ್ರಿಸ್ತಿಜನರಿಗೆ ತೋರಿರಬೇಕು. ಬಡ್ಡಿಯಿಂದಲೇ ಜೀವಿಸುವದು ಅಧರ್ಮವೆಂಬ ಕ್ರಿಸ್ತಿಧರ್ಮಕ್ಕೆ ವಿರುದ್ಧವಾಗಿ ಯಹೂದ್ಯರು ವರ್ತಿಸುತ್ತಾರೆಂಬುದು ಒಳ್ಳೆಯ ಆಯುಧವಾಯಿತು. ಯಾವದಾದರೊಂದು ನೆಪದಿಂದ ಆ ಜನರನ್ನು ಸೆರೆಮನಗೆ ಕಳುಹಿಸುವದೂ ದೇಶದಿಂದ ಗಡೀಪಾರುಮಾಡುವದೂ ಒಂದು ಪದ್ಧತಿಯಾಗಿ ಬಂದು ಬಿಟ್ಟಿದೆ. ಇಂಗ್ಲೆಂಡಿನಲ್ಲಿ ಯೆಹೂದ್ಯರೂ ಬ್ರಿಟನ್‌ಪ್ರಜೆಗಳು ಎಂದು ಒಪ್ಪಿ ಈಗ 200 ವರ್ಷಗಳು ಮಾತ್ರವಾಗಿರುತ್ತದೆ; ಈಗ ಅಲ್ಲಿ ಯಹೂದ್ಯರಿಗೂ ಅವರವರಿಗೆ ತಕ್ಕ ಸ್ಥಾನಮಾನಗಳು ದೊರೆಯುತ್ತಿವೆಯಾದರೂ ಯಹೂದ್ಯದ್ವೇಷವು ಪೂರ್ಣವಾಗಿ ಹೋಗಿರುವದೆಂದು ಈಗಲೂ ಹೇಳುವಂತಿಲ್ಲ. ಜರ್ಮನಿಯಲ್ಲಿ ಇತ್ತೀಚೆಗೆ ಯಹೂದ್ಯರಿಗಾದ ಚಿತ್ರಹಿಂಸೆಯನ್ನು ನಾವೆಲ್ಲರೂ ಕೇಳಿಯೇ ಇರುತ್ತೇವೆ.

ಯಹೂದ್ಯರಲ್ಲಿಯೂ ಮಿಕ್ಕಮನುಷ್ಯರಲ್ಲಿರುವಂತೆ ಕೆಲವು ದೋಷಗಳಿದ್ದೇ ಇರಬಹುದು. ಆದರೆ ಅವರೂ ಮನುಷ್ಯರೆಂದು ಜನರು ಏತಕ್ಕೆ ಎಣಿಸಬಾರದು? ''ಈಶ್ವರನು ತಂದೆಯು ಮನುಷ್ಯರೆಲ್ಲರೂ ಅಣ್ಣತಮ್ಮಂದಿರು'' ಎಂದು ಬಾಯಿಯಲ್ಲಿ ನುಡಿಯುವ ಮನುಜರಿಗೆ ಇವರು ನಿಜವಾಗಿಯೂ ನಮ್ಮಂತೆಯೇ ಎಂಬುದು ಎಂದಿಗೆ ಹೊಳೆದೀತು?

★★★★★

# ಮಹಾಧರ್ಮಗ್ರಂಥ

## (ಶ್ರೀಮತಿ ಜೂಲಿ ಚಾನ್ಲರ್, ''ಅಭಿನವೇತಿಡಾಸ'' ಸಹಸಂಪಾದಕಿಯರು)

''ಆದಿಯಲ್ಲಿ ಶಬ್ದವಿತ್ತು, ಆ ಶಬ್ದವು ಈಶ್ವರನಿಂದ ಬಂದಿತ್ತು, ಆ ಶಬ್ದವು ಈಶ್ವರನೇ ಆಗಿತ್ತು.'' ಆ ಶಬ್ದವನ್ನು ಮನುಷ್ಯನಿಗೆ ಸಿಕ್ಕುವಂತೆ ಒಂದು ಮಹಾಗ್ರಂಥದಲ್ಲಿ ಬರೆಯಲಾಗಿತ್ತು.

ಈ ಶಬ್ದವೆಂಬುದು ಸಾರ್ವತ್ರಿಕವಾಗಿದ್ದದ್ದರಿಂದ ಗ್ರಂಥವು ಸಾರ್ವತ್ರಿಕ ವಾಗಿಯೇ ಇತ್ತು. ಆದರೆ ಮಾನವನು ಬೇರೆಬೇರೆಯ ಕಾಲದಲ್ಲಿ ಬೇರೆಬೇರೆ ದಿಕ್ಕುಗಳಿಂದ ತನತನಗೆ ಸಿಕ್ಕಷ್ಟು ತಿಳಿವಳಿಕೆಯನ್ನು ಕಂಡುಕೊಂಡದ್ದರಿಂದ ಇದರ ಪ್ರವಾಹವು ಇಂತಿಷ್ಟು ಎಂಬ ಅರಿವೇ ಅವನಿಗಿರಲಿಲ್ಲ.

ಆ ಶಬ್ದದ ಪ್ರಥಮಲಿಪಿಗಳನ್ನು ಹೃದಯದಮೇಲೆ ಕೆತ್ತಲಾಗಿತ್ತು. ಕಾಲಕಾಲಕ್ಕೆ ಒಂದು ಹೃದಯದಿಂದ ಇನ್ನೊಂದು ಹೃದಯಕ್ಕೆ ಅದನ್ನು ಕೊಡುತ್ತಾ ಬರಲಾಗಿತ್ತು. ಇತ್ತೀಚೆಗೆ ಮನುಷ್ಯನು ಬೆಳೆದಹಾಗೆಲ್ಲಾ ಆ ಶಬ್ದವನ್ನು ಚಿಹ್ನೆಗಳಾಗಿಯೂ ವರ್ಣಗಳಾಗಿಯೂ ಪರಿವರ್ತನೆಮಾಡಲಾಯಿತು; ಅವುಗಳನ್ನು ಕಲ್ಲು, ಎಲೆಗಳು, ಚರ್ಮ, ಕಾಗದ–ಮುಂತಾದವುಗಳ ಮೇಲೆ ಬರೆಯಲಾಯಿತು, ಆದರೆ ಹೀಗೆ ಪ್ರದರ್ಶನವು ಬೇರೆಬೇರೆಯವರೂ ಅವುಗಳ ರೂಪಭೇದಗಳು ಹಲವು ಆದರೂ ಉಪದೇಶಗಳೆಲ್ಲ ಒಂದೇ ಆಗಿದ್ದವು.

ಹೀಗಿರಲು ಮನುಷ್ಯನು ಆ ಗ್ರಂಥದಿಂದ ಶಬ್ದವನ್ನು ತನ್ನಲ್ಲಿ ಭದ್ರವಾಗಿ ಟ್ಟುಕೊಂಡು ಅದಕ್ಕೊಂದು ಹೆಸರನ್ನು ಕೊಟ್ಟನು. ಆ ಶಬ್ದದ ಹೆಸರಿನಲ್ಲಿ ಅವನಿಗೆ ಇದ್ದ ಗೌರವದ ಭರದಲ್ಲಿ ಆ ಶಬ್ದದ ಅರ್ಥವನ್ನೇ ಬಹುಮಟ್ಟಿಗೆ ಮರೆತುಬಿಟ್ಟನು.

ಈ ರೀತಿಯಲ್ಲಿ ಎಲ್ಲೆಲ್ಲಿಯೂ ಹೆಸರುಗಳು, ಜನರನ್ನು ರೇಗಿಸುವ, ಆಕ್ರಮ ಪ್ರವೇಶವನ್ನು ಮಾಡುವ ಮತ್ತೆಯಾವ ಹೆಸರಿಗೂ ಇಲ್ಲದ ಸಹಜಗುಣವು ತನಗೇ ಅಸಾಧಾರಣವಾಗಿದೆಯೆಂದು ಹೇಳಿಕೊಳ್ಳುವ ಹೆಸರುಗಳು ಎಲ್ಲೆಲ್ಲಿಯೂ ಎದ್ದುಕೊಂಡವು. ಭೂಮಿಯಮೇಲೆ ರಕ್ತವು ಕೋಡಿಹರಿಯಿತು. ಅದರ ಮೇಲಿನ ರೂಪಗಳಲ್ಲಿ ಹಗೆಯು ಗೂಡುಕಟ್ಟಿಕೊಂಡಿತು, ಅಲ್ಲಿ ಹಸುರಾಗಿದ್ದ ಹಸಲೆಗಳಮೇಲೆ ಮಂಜಿನ ಎಲ್ಲೆಕಟ್ಟುಗಳು ಏರ್ಪಟ್ಟವು.

ಆದರೆ ಆಗಲೂ ಆ ಹೊಳೆಯುವ ಗ್ರಂಥವು ಮನುಷ್ಯನ ಕಣ್ಣು ಮುಂದೇ ಇತ್ತು; ಆದರೆ ಹಾಳೆಗಳು ಅಲ್ಲಲ್ಲಿ ಪಟಪಟನೆ ಹಾರಾಡುತ್ತಾ ತೆರೆದುಕೊಳ್ಳುತ್ತಲೇ ಇದ್ದವು.

''ಅಂಜದಿರು, ಋಜುವಾದ ಮಾರ್ಗವನ್ನನುಸರಿಸು, ಯಾವ ಮಾರ್ಗವನ್ನು ಶ್ರದ್ಧೆಯಿಂದ ಅನುಸರಿಸಿದರೂ ಈಶ್ವರನನ್ನು ಮುಟ್ಟುವೆ.''–ಕೃಷ್ಣ.

''ಆತನ ಭವನದಲ್ಲಿ ಒಂದೇ ಪ್ರದೀಪವಿರುತ್ತದೆ, ಅದರ ಯಾವದೊಂದು ಕಿರಣದ ಹಾದಿಯನ್ನು ಹಿಡಿದು ನೋಡಿದರೂ ಒಂದು ಪ್ರಕಾಶಯುತವಾದ ಸಂಘವು ಕಾಣಿಸುವುದು'' ಸ಼ಾರತುಷ್ಟ್ರ.

''ಯಾವ ಯುಗದಲ್ಲಿಯಾದರೂ ಪವಿತ್ರವಾದ ಹೃದಯವುಳ್ಳವರ ಜ್ಞಾನವು ಹುಟ್ಟಿತೆಂದರೆ ಅವರು ಈಶ್ವರನ ಸಖರಾಗುವರು, ಪ್ರವಾದಿಗಳಾಗುವರು''.

''ನಾನಿನ್ನೂ ಎಷ್ಟೋ ವಿಷಯಗಳನ್ನು ಹೇಳುವುದು ಉಳಿದಿದೆ. ಆದರೆ ಅವನ್ನು ಈಗ ಹೇಳುವುದಿಲ್ಲ. ಆ ತತ್ತ್ವದ ಆತ್ಮನು ಬಂದನೆಂದರೆ ನಿಮ್ಮನ್ನು ತತ್ತ್ವಸರ್ವಸ್ವದ ಬಳಿಗೆ ಕೊಂಡೊಯ್ಯುವನು. ಅವನು ಜಯಕಾರವನ್ನು ಮಾಡುವನು, ಏಕೆಂದರೆ ಆತನು ನನ್ನ ತತ್ತ್ವವನ್ನು ಸ್ವೀಕರಿಸಿ ನಿಮಗೆ ಅದನ್ನು ತೋರಿಸುವನು''. ಯೇಸು.

''ಸಿದ್ಧಪುರುಷನಿಗೆ ಮತಗಳು ಅನೇಕವಾದರೂ ಯುಕ್ತಿಯು ಒಂದೇ ಎಂಬುದು ತಿಳಿಯುವುದು. ವಿಶಾಲಹೃದಯನಾದವನಿಗೆ ಬೇರೆಬೇರೆಯ

ಮತಗಳಲ್ಲಿ ಒಂದೇ ತತ್ತ್ವವು ಕಾಣುವುದು, ಆದರೆ ಕ್ಷುದ್ರಹೃದಯರಿಗೆ ಬರಿಯ ತಾರತಮ್ಯಗಳೇ ಕಾಣುವವು'' – ಕನ್ಫೂಷಿಯಸ್

''ತಥಾಗತನೆಂದರೆ ಒಂದು ಹಾದಿಯನ್ನು ಏರ್ಪಾಡುಮಾಡುವವನು– ಹಿಂದೆ ಇಲ್ಲದಿದ್ದ ಹಾದಿಯನ್ನು ಉಂಟುಮಾಡುವಾತನು. ನಾನು ಹಾದಿಯನ್ನು ತೋರಿಸುವವನು ಮಾತ್ರ; ನೀವು ಹಾದಿಹೋಕರು. ನೀವು ಆರಿಸಿಕೊಂಡ ಹಾದಿಯಲ್ಲಿ ನೀವು ನಡೆಯಬೇಕು.'' – ಬುದ್ಧ

ನಿಮ್ಮದು ಯಾವ ಧರ್ಮವೇ ಆಗಿರಲಿ ನಿಮಗಿಂತ ಭಿನ್ನಾಭಿಪ್ರಾಯವುಳ್ಳವರೊಡನೆ ಸೇರಿಕೊಳ್ಳಿರಿ. ಯಾರು ಎತ್ತತಿರುಗಿದರೆ ಅಲ್ಲಿ ಒಂದು ದಿಕ್ಕು ಇರುತ್ತದೆ; ಎತ್ತಲೇ ತಿರುಗಲಿ, ಅಲ್ಲಿ ಅಲ್ಲಾಹನ ಮುಖವು ಇದ್ದೇ ಇರುತ್ತದೆ. –ಮಹಮ್ಮದ್.

ಇಲ್ಲಿಗೆ ಆ ಗ್ರಂಥದ ಹಾಳೆಗಳು ಅಂತರಿಕ್ಷದ ಬಿರುಗಾಳಿಗೆ ಹಾರಾಡುತ್ತಾ ಮಗುಚಿಹಾಕುತ್ತಾ ಕಟ್ಟಕಡೆಗೆ ಬರೆದಿದ್ದ ಪುಟಕ್ಕೆ ಬಂದು ನಿಂತವು.

''ಭೂಮಂಡಲದ ಜನರಿರಾ, ಈಶ್ವರನ ಧರ್ಮವನ್ನು ನಿಮ್ಮಲ್ಲಿ ಭಿನ್ನಾಭಿಪ್ರಾಯಕ್ಕೆ ಕಾರಣವಾಗಿ ಮಾಡಿಕೊಳ್ಳದಿರಿ. ನಿಜವಾಗಿ ಇಡಿಯ ಜಗತ್ತೇ ಒಂದಾಗಲೆಂದು ಅದನ್ನು ಪ್ರಕಟಗೊಳಿಸಲಾಗಿರುತ್ತದೆ. ಎಲ್ಲಾ ಜನರೂ ಮತದಲ್ಲಿ ಒಂದಾಗಬೇಕು, ಎಲ್ಲಾ ಜನರೂ ಅಣ್ಣತಮ್ಮಂದಿರಂತೆ ಇರಬೇಕು; ಪ್ರೇಮದ ಐಕ್ಯದ ಬಂಧಗಳು ಬಲವಾಗಬೇಕು; ಧರ್ಮಗಳ ಭೇದವು ಇಲ್ಲವಾಗಬೇಕು, ಕುಲದ ತಾರತಮ್ಯಗಳನ್ನು ತೆಗೆದುಹಾಕಬೇಕು – ಎಂದೇ ಅದನ್ನು ಪ್ರಕಟಗೊಳಿಸಿರುತ್ತದೆ. ಅದರಂತೆ ಆಗಿಯೇ ತೀರುತ್ತದೆ. ಈ ವ್ಯರ್ಥವಾದ ಬಡಿದಾಟಗಳು, ಈ ಪ್ರಲಯಕಾರಕ ಯುದ್ಧಗಳು, ಮಾಯವಾಗುವವು; ಪರಮಶಾಂತಿಯೊಂದು ಬಂದೇಬರುವುದು! ನನ್ನ ದೇಶವನ್ನು ಪ್ರೀತಿಸುತ್ತೇನೆ ಎಂದು ಯಾವ ಮಾನವನೂ ಹೆಮ್ಮೆಪಡದೆ ಇರಲಿ, ಅದಕ್ಕೆ ಬದಲು ನನ್ನ ವರ್ಗದ ಮಾನವರನ್ನೆಲ್ಲ ಪ್ರೀತಿಸುವೆನು ಎಂದು ಹೆಮ್ಮೆಪಡಲಿ!'' – ಬಾಹ ಉಲ್ಲಾಹ.

ಈಗ ಮಾನವನು ಮೊಟ್ಟಮೊದಲನೆ ಸಲಕ್ಕೆ ತನ್ನ ಕಣ್ಣನ್ನು ಅರಳಿಸಿಕೊಂಡು ನೋಡಿದನು; ಇಡಿಯ ಗ್ರಂಥವು ತನ್ನದೇ ಎಂದುಕೊಂಡು ಅದನ್ನು ಓದಲು ಪ್ರಾರಂಭಿಸಿದನು.

★★★★★

# ಥೋರೊ

## (Vision ಪತ್ರಿಕೆಯಲ್ಲಿ ರೆವೆರೆಂಡ್ ಎ.ಮ್ಯಾಸೆಯವರು ಬರೆದಿದ್ದರ ಆಧಾರದಿಂದ)

ಹೆನ್ರಿ ಡೇವಿಡ್ ಥೋರೊ ಎಂಬಾತನು ಅಮೆರಿಕದಲ್ಲಿದ್ದ ಒಬ್ಬ ಸರಳಜೀವಿಯಾದ ಮಹಾತ್ಮನು. ವ್ಯಕ್ತಿಸ್ವಾತಂತ್ರ್ಯವಾದಿಗಳಲ್ಲಿ ಆತನೊಬ್ಬನು. ದುಂದುಗಾರಿಕೆಯ ಜೀವನವು ಎಲ್ಲೆಲ್ಲಿಯೂ ಹೆಚ್ಚುತ್ತಿರುವ ಈಗಿನ ಕಾಲಕ್ಕೆ ನಮ್ಮ ದೇಶದವರು ಹಿಂದಿದ್ದ ಋಷಿಗಳ ಸರಳಜೀವನಕ್ರಮವನ್ನು ನೆನಪಿಗೆ ತಂದುಕೊಳ್ಳುವದು ಲಾಭದಾಯಕವಾಗಿರುವದೆಂಬುದರಲ್ಲಿ ಸಂಶಯವಿಲ್ಲ. ಆ ಜೀವನವನ್ನು ಈ ಕಲಿಯುಗದಲ್ಲಿಯೂ ಅನುಸರಿಸಬಹುದೆನ್ನುವದಕ್ಕೆ ಥೋರೋವಿನ ಉದಾಹರಣೆಯು ಸಾಕಾಗಿರುತ್ತದೆ.

ಈ ಮಾಹಾಪುರುಷನು ಸಂಯುಕ್ತಸಂಸ್ಥಾನಗಳಲ್ಲಿ ವಾಲ್ಡೆನ್ ಎಂಬಲ್ಲಿದ್ದ ಒಂದು ಅರಣ್ಯದಲ್ಲಿ ಎರಡು ವರ್ಷಗಳು ವಾಸವಾಗಿದ್ದನು. ಆತನು ಅಲ್ಲಿ ತಾನೇ ಕಡಿದ ಮರದ ಸಾಮಾನಿನಿಂದ ಒಂದು ಕುಟೀರವನ್ನು ಕಟ್ಟಿಕೊಂಡಿದ್ದನು. ಕುಟೀರದಲ್ಲಿ ಆರಾಮಕುರ್ಚಿ, ಮೇಜು-ಮುಂತಾದ ಸಾಮಾನುಗಳನ್ನು ತುಂಬಿಕೊಳ್ಳುವ ಪದ್ಧತಿಯವರು ನಿರೀಕ್ಷಿಸುವಷ್ಟು ಆಸನಗಳು ಯಾವವೂ ಇರಲಿಲ್ಲ. ಮನೆಯ ಬಾಗಿಲಿನ ಮುಂದೆ ಕಾಲನ್ನು ಒರಸಿಕೊಳ್ಳುವದಕ್ಕೆ ಒಂದು ತಟ್ಟನ್ನು ಕೂಡ ಅವನು ಹಾಕಿಕೊಂಡಿರಲಿಲ್ಲ; ಅದನ್ನು ಆಗಾಗ್ಗೆ ಶುದ್ಧಿಪಡಿಸಬೇಕಾದ ಅವಶ್ಯಕತೆಯಿರಬಾರದೆಂದು ಅವನ ಅಭಿಪ್ರಾಯ. ಬಾಗಿಲ ಮುಂದೆ ಬೆಳೆದಿದ್ದ ಹುಲ್ಲಿನ ಮೇಲೆ ಕಾಲು ಒರಸಿಕೊಂಡರಾಯಿತು, ಎನ್ನುತ್ತಿದ್ದನು. ಜೀವನಕ್ಕೆ ಬೇಕಾದ ಸಾಮಗ್ರಿಗಳನ್ನು ನೋಡಿಕೊಳ್ಳುವದಕ್ಕೇ ಆಯುಸ್ಸಿನ ಬಹುಭಾಗವನ್ನು ವ್ಯರ್ಥವಾಗಿ ಕಳೆಯುವದು ಆಯುಕ್ತವೆಂದು ಅವನಿಗೆ ಮನದಟ್ಟಾಗಿಬಿಟ್ಟಿತ್ತು. ಮನಸ್ಸಿನ ಸಂಸ್ಕೃತಿಯನ್ನು ಮರೆಯುವದು ಮಹಾಪರಾಧವೆಂದು ಆತನ ಎಣಿಕೆಯಾಗಿತ್ತು.

ಪರಮಾರ್ಥದಲ್ಲಿ ಆತನಿಗೆ ಬಹಳ ಪ್ರೇಮ. ''ಜನರ ಅಭಿಪ್ರಾಯ, ಸಂಪ್ರದಾಯ, ಮೋಹ, ಬರಿಯ ತೋರುಗಾಣಿಕೆ – ಎಂಬ ಕೆಸರನ್ನು ಬಿಟ್ಟು ನಾವು ಹೇಗಾದರೂ ಮಾಡಿ ಕೆಳಕ್ಕಿಳಿಯಬೇಕು. ಪ್ಯಾರಿಸ್, ಲಂಡನ್, ನ್ಯೂಯಾರ್ಕ್ ಎಂಬ

ನಗರಿಗಳನ್ನೂ ಬಿಟ್ಟು ಕೆಳಕ್ಕಿಳಿಯಬೇಕು. ಅರಮನೆ, ಗುರುಮನೆ, ತತ್ತ್ವಶಾಸ್ತ್ರ ಮತ- ಎಲ್ಲವನ್ನೂ ಬಿಟ್ಟು ಪರಮಾರ್ಥವೆಂಬ ಅರೆಬಂಡೆಯು ಸಿಕ್ಕುವವರೆಗೂ ಇಳಿಯಬೇಕು'' ಎಂದು ಆತನು ಹೇಳಿರುತ್ತಾನೆ. ''ನಿನ್ನ ಆತ್ಮನಲ್ಲಿ ನಿನಗೆ ಭಕ್ತಿಯಿರಲಿ'' ಎಂಬುದು ಈ ಥೋರೊವಿನ ಮೂಲಭಾವನೆ. ''ನನ್ನ ಪ್ರಾರ್ಥನೆ'' ಎಂಬ ಕವಿತೆಯಲ್ಲಿ ''ನನಗೇ ನಾನು ಅಶಾಭಗಂವನ್ನುಂಟುಮಾಡದಂತೆ ಮಾಡು'' ಎಂದು ಆತನು ಬೇಡಿಕೊಂಡಿರುತ್ತಾನೆ. ಆತನು ಕೇಳಿಕೊಂಡಿರುವ ಎರಡನೆಯ ವರವು ಯಾವದೆಂದರೆ ''ನೀನು ಅನುಗ್ರಹಿಸಬೇಕಾದ ಎರಡನೆಯ ವರವೇನೆಂದರೆ, ನನ್ನ ವಿಷಯದಲ್ಲಿ ನನ್ನ ಸ್ನೇಹಿತರಿಗೆ ಪೂರ ಆಶಾಭಂಗವಾಗಲಿ! ಅವರು ಏನೇ ಅಂದುಕೊಳ್ಳಲಿ, ನನ್ನ ವಿಷಯಕ್ಕೆ ಯಾವ ಆಶೆಯನ್ನೇ ಇಟ್ಟುಕೊಂಡಿರಲಿ, ನನಗೆ ನೀನು ಮಾಡಿರುವ ಅನುಗ್ರಹವು ಯಾವದೆಂಬುದು ಅವರಿಗೆ ಕನಸಿನಲ್ಲಿಯೂ ಅರಿವಾಗದೆ ಇರಲಿ!''

ಅವನಿಗೆ ಅಂಧಪರಂಪರೆಯಿಂದ ನಡೆಯುವದೆಂದರೆ ಆಗದು. ಅರಣ್ಯದಲ್ಲಿ ಎರಡು ವರ್ಷಗಳವರೆಗೆ ವಾಸಮಾಡಿದ ಬಳಿಕ ಅವನು ಊರಿಗೆ ಬಂದು ಬಿಟ್ಟನು. ಮನೆಯ ಬಾಗಿಲಿನಿಂದ ಕೊಳದವರೆಗೆ ಒಂದೇ ಸಮನೆ ನಡೆದುನಡೆದು ಒಂದು ಕಾಲುಹಾದಿಯಾಗುತ್ತಿರುವದು ಅವನಿಗೆ ಕಂಡುಬಂದಿತು. ಹಿಂದಿನವರ ಸಂಪ್ರದಾಯವನ್ನೇ ಹಿಡಿದು ವಿಚಾರವಿಲ್ಲದೆ ನಡೆಯುವದೂ ಹೀಗೆಯೇ ಮಾಮೂಲಿನ ಹಾದಿಗಳನ್ನು ಮಾಡಿಬಿಟ್ಟಿದೆ; ಆ ಹಾದಿಗಳ ಜೊತೆಗೆ ನಾನೊಂದು ಅಂಥ ಹಾದಿಯನ್ನೇ ಏಕೆ ಮಾಡಲಿ?- ಎಂದು ಆತನು ಹಿಂದಕ್ಕೆ ಬಂದನಂತೆ.

ಲೋಕಾಪವಾದಕ್ಕೆ ಹೊರಗಾದವರು ಯಾರಿರುತ್ತಾರೆ? ಅನೇಕ ಗ್ರಂಥಗಳನ್ನೂ ಕಾವ್ಯಗಳನ್ನೂ ರಚಿಸಿ ಹಸ್ತಲಿಖಿತವಾದ ಮೂವತ್ತು ದಿನಚರಿಯ ಪುಸ್ತಕಗಳನ್ನೂ ಬರೆದಿಟ್ಟಿರುವ, ತೋಟದ ಕೆಲಸಮಾಡುವದು, ಮೋಜಣಿಮಾಡುವದು-ಮುಂತಾದಕಷ್ಟಕೆಲಸಗಳಿಂದಲೇಜೀವನೋಪಾಯವನ್ನು ಸಂಪಾದಿಸಿಕೊಳ್ಳುತ್ತಿದ್ದ ಈತನನ್ನು ಕೆಲವರು ಸೋಮಾರಿಯೆಂದುಕೂಡ ಕರೆದಿರುತ್ತಾರೆ! ಊರನ್ನು ಬಿಟ್ಟು ಕಾಡಿಗೆ ಹೋದ್ದರಿಂದ ಜನರು ಅವನಿಗೆ ಮನುಷ್ಯರ ನೆರಳು ಕಂಡರೆ ಆಗದು ಎನ್ನುವಂತೆ ಆಯಿತು. ಆದರೆ ಏಕಾಂತವಾಸದ

ಉದ್ದೇಶವು ಒಂಟಿಯಾಗಿರಬೇಕೆಂಬ ಅಭಿಲಾಷೆಯಿಂದಲ್ಲ; ಮೇಲುಮೇಲಕ್ಕೆ ಹಾರಬೇಕೆಂಬ ಇಚ್ಛೆಯಿಂದ. ನಾವು ಮೇಲುಮೇಲಕ್ಕೆ ಹೋದಂತೆಲ್ಲ ಜನಸಮಾಜವು ಕಡಿಮೆಕಡಿಮೆಯಾಗುತ್ತದೆ. ಕೊನೆಗೆ ತಾನೇ ಇಲ್ಲವಾಗುತ್ತದೆ'' ಎಂಬುದು ಅವನ ಅಭಿಪ್ರಾಯವಾಗಿತ್ತು.

ಆತನು ಕೇವಲ ಸಸ್ಯಾಹಾರಿಯಾಗಿದ್ದದ್ದರಿಂದ ಅವನಿಗೆ ಮೀನುಹಿಡಿಯುವದು, ಹಕ್ಕಿಗಳನ್ನು ಗುಂಡಿಟ್ಟುಹೊಡೆಯುವದು ಮುಂತಾದ ಚಟವಿರಲಿಲ್ಲ. ಎಲ್ಲಾ ಪ್ರಾಣಿಗಳನ್ನೂ ಪ್ರೇಮದಿಂದ ಕಾಣುವದು ಅವನಿಗೆ ಸಹಜವಾಗಿತ್ತು. ಮತನೀತಿಗಳ ಕಟ್ಟುಕಟ್ಟಳೆಗಳ ಬಾಹ್ಯಾಡಂಬರವು ಅವನಿಗೆ ಸೇರುತ್ತಿರಲಿಲ್ಲ; ಆದರೆ ಅವನು ಸೌಜನ್ಯದಲ್ಲಿ ಯಾರಿಗೂ ಕಡಿಮೆಯಾಗಿ ರಲಿಲ್ಲ, ಧರ್ಮವೆಂಬುದು ಸಾರ್ವತ್ರಿಕವಾಗಿರುವದೆಂದೇ ನಂಬಿದ್ದನು. ಹೊರಗಿ ನ ದೃಶ್ಯಗಳಿಗೆಲ್ಲ ನಿತ್ಯಾಧಾರವಾದ ತತ್ತ್ವವೊಂದು ಇದೆಯೆಂದೂ ಅದನ್ನೇ ಅನಂತನಾಮಗಳಿಂದ ಕರೆಯುತ್ತಿರುವರೆಂದೂ ಅವನ ನಂಬುಗೆಯಿತ್ತು.

★★★★★

# ಕೆಲವು ಪ್ರಾರ್ಥನೆಗಳು

1. ಆತನು ಸರ್ವಾತ್ಮನು, ಭೂರ್ಲೋಕ ಭುವರ್ಲೋಕ ಸುವರ್ಲೋಕಗಳನ್ನು ವ್ಯಾಪಿಸಿಕೊಂಡಿರುವಾತನು. ಆ ಜಗತ್ಕಾರಣನಾದ ದೇವನ ಪ್ರಿಯತಮವಾದ ಬೆಳಕನ್ನು ಧ್ಯಾನಿಸುತ್ತೇವೆ. ಆತನು ನಮ್ಮ ಬುದ್ಧಿವೃತ್ತಿಗಳನ್ನು ಪ್ರೇರಿಸಲಿ! **– ವೇದ**

2. ಓ ಸ್ಪಿಯೂಸನೆ, ಶುಭದಾತೃವೆ, ಮೋಡದಲ್ಲಿಯೂ ಬೆಳಗುವ ಮಿಂಚುಗಳಲ್ಲಿಯೂ ಅಡಗಿರುವಾತನೆ, ದುಃಖಪ್ರದವಾದ ಅಜ್ಞಾನದಿಂದ ಜನರನ್ನು ರಕ್ಷಿಸು. ತಂದೆಯೆ, ಅದನ್ನು ಚಿತ್ತದಿಂದ ತೊಲಗಿಸು! **– ಸ್ಟೋಇಕರ ಪ್ರಾರ್ಥನೆ**

3. ಎಲೈ ಸರ್ವಜ್ಞನಾದ ಮಸ್ದನೆ, ನಿನ್ನನ್ನು ಪೂಜಿಸುತ್ತಿರುವ ನಾವು ನಿನ್ನ ಕೃಪೆಯು ನಮಗೆ ಸಿಕ್ಕಲೆಂದು ಬಯಸಿರುವೆವು. ನಿನ್ನ ಕಡೆಗೆ ಎಳೆದು ವಶಪಡಿಸಿಕೊಳ್ಳುವ ನಿನ್ನ ದಾನಶೀಲ ಆತ್ಮಪ್ರಸಾದವು ನಮಗುಂಟಾಗಲೆಂದು ಪ್ರಾರ್ಥಿಸುವೆವು. **– ಜೆಂಡ್ ಅವಸ್ತಾ**

4. ಸ್ತೋತ್ರವೆಲ್ಲ ಅಲ್ಲಾನಿಗೆ ಸಲ್ಲತಕ್ಕದ್ದು. ಆತನು ಸರ್ವಲೋಕಪ್ರಭು. ದಯಾಮಯನು, ಕರುಣಾಕರನು, ಪಾಪಪುಣ್ಯಗಳ ಫಲದಾನದಿನದ ಒಡೆಯನು. ನಿನ್ನನ್ನೇ ಸೇವಿಸುತ್ತೇವೆ, ನಿನ್ನ ಸಹಾಯವನ್ನೇ ಬೇಡುತ್ತೇವೆ. ನಮ್ಮನ್ನು ಸನ್ಮಾರ್ಗದಲ್ಲಿಯೇ ನಡೆಯಿಸು, ಯಾರ ಮೇಲೆ ನೀನು ಅನುಗ್ರಹವನ್ನು ಮಾಡಿರುವೆಯೋ ಅವರ ಮಾರ್ಗದಲ್ಲಿ ನಡೆಯಿಸು, ಯಾರಮೇಲೆ ನಿನ್ನ ಕೋಪವುಂಟಾಗುವದೋ ಮತ್ತು ಯಾರು ತಪ್ಪುಹಾದಿ ಹಿಡಿಯುವರೋ ಅವರ ಮಾರ್ಗದಲ್ಲಲ್ಲ. **–ಕುರಾನ್**

5. ಸ್ವರ್ಗದಲ್ಲಿರುವ ನಮ್ಮ ತಂದೆಯೆ, ನಿನ್ನ ನಾಮವು ಪರಿಶುದ್ಧವಾದದ್ದು. ನಿನ್ನ ರಾಜ್ಯವು ಬರಲಿ! ಸ್ವರ್ಗದಲ್ಲಿ ನಿನ್ನ ಸಂಕಲ್ಪವು ನಡೆಯುತ್ತಿರುವಂತೆ ಭೂಮಿಯಲ್ಲಿಯೂ ನಡೆಯಲಿ! ಈ ದಿನ ನಮಗೆ ಪ್ರತಿದಿನದ ಆಹಾರವನ್ನು ಕೊಡು. ನಮಗೆ ಋಣಿಗಳಾಗಿರುವವರನ್ನು ನಾವು ಮನ್ನಿಸುವದಕ್ಕೆ ಅನುಗುಣವಾಗಿ ನೀನೂ ನಮ್ಮನ್ನು ಮನ್ನಿಸು, ನಮ್ಮನ್ನು ದುರಾಶೆಯೊಳಕ್ಕೆ ಹೋಗಗೊಳಿಸದಿರು, ಪಾಪದಿಂದ ಮುಕ್ತರನ್ನಾಗಿ ಮಾಡು, ಏಕೆಂದರೆ ಈ ರಾಜ್ಯವೂ ಅಧಿಕಾರವೂ ಮಹಿಮೆಯೂ ಎಂದೆಂದಿಗೂ ನಿನ್ನದೇ. **– ಬೈಬಲ್**

5. ಬುದ್ಧನನ್ನು ಶರಣು ಹೊಕ್ಕಿದ್ದೇನೆ. ಧರ್ಮವನ್ನು ಶರಣು ಹೊಕ್ಕಿದ್ದೇನೆ, ಸಂಘವನ್ನು ಶರಣು ಹೊಕ್ಕಿದ್ದೇನೆ. **–ಬೌದ್ಧರ ಪ್ರಾರ್ಥನೆ**

6. ದೇವ, ಪ್ರಾಣಿಗಳಲ್ಲಿ, ಮೈತ್ರಿಯನ್ನೂ ಗುಣಿಗಳಲ್ಲಿ ಸಂತೋಷವನ್ನೂ ಕಷ್ಟಪಡುತ್ತಿರುವವರಲ್ಲಿ ದಯಾಪರತೆಯನ್ನೂ ತಪ್ಪು ನಡೆಯುವರಲ್ಲಿ ಔದಾಸೀನ್ಯವನ್ನೂ ನನ್ನ ಮನಸ್ಸು ಯಾವಾಗಲೂ ತೋರಿಸುತ್ತಿರಲಿ! ಜಿನೇಂದ್ರ, ಒರೆಯಿಂದ ಕತ್ತಿಯನ್ನು ಬೇರ್ಪಡಿಸುವಂತೆ ಶರೀರದಿಂದ ಅನಂತಶಕ್ತಿಯುಳ್ಳ ನಿರ್ದುಷ್ಟವಾದ ಆತ್ಮನನ್ನು ಬೇರ್ಪಡಿಸಿಕೊಳ್ಳುವ ಶಕ್ತಿಯು ನನಗೆ ನಿನ್ನ ಪ್ರಸಾದದಿಂದ ಉಂಟಾಗಲಿ! **– (ಅಮಿತಗತಿ) ಜೈನಸ್ತೋತ್ರ**

★★★★★

# ಸಂದೇಶದ ವಿಷಯಕ್ಕೆ ಅಭಿಪ್ರಾಯಭೇದ

## (ವಿಶ್ವಪ್ರೇಮಿ)

(ಅಧ್ಯಾತ್ಮಪ್ರಕಾಶ ಪತ್ರಿಕೆಯು ಸಾಮಾಜಿಕ ಮತ್ತು ರಾಜಕೀಯವಿಚಾರಗಳಲ್ಲಿ ತಾಟಸ್ಥವನ್ನು ವಹಿಸಿರುತ್ತದೆಯಾದರೂ ಧಾರ್ಮಿಕವಿಚಾರಗಳಿಗೆ ಸಂಬಂಧಪಟ್ಟ ಅಭಿಪ್ರಾಯಗಳನ್ನು ಹೊರಪಡಿಸುವದಕ್ಕೆ ಪ್ರಚಲಿತಜೀವನದಲ್ಲಿರುವ ದೃಷ್ಟಾಂತಗಳನ್ನು ತೆಗೆದುಕೊಂಡ ಲೇಖನಗಳಿಗೆ ಅದರಲ್ಲಿ ಅವಕಾಶವಿರುತ್ತದೆ. ಇಲ್ಲಿರುವ ಯಾವ ಲೇಖನಗಳ ಮೇಲೂ ಟೀಕೆಗಳನ್ನು ಬರೆಯುವವರ ಲೇಖನಗಳನ್ನು ಪ್ರಕಟಿಸಿ ಪ್ರತ್ಯುತ್ತರವನ್ನು ಬರೆಯಿಸುವವಾಡಿಕೆಯೂ ಪತ್ರಿಕೆಯಲ್ಲಿಲ್ಲ. ಆದರೂ ಈ ನಿಯಮಕ್ಕೊಂದು ಪ್ರತಿಷೇಧವಾಗಿ ಶ್ರೀಸ್ವಾಮಿಗಳವರ ಕೋರಿಕೆಯಂತೆ ಇದೊಂದು ಟೀಕೆಯನ್ನು ಪ್ರಕಟಿಸಿರುತ್ತದೆ. ಇದರ ಮುಂದೆ ಸ್ವಾಮಿಗಳವರು ಬರೆದಿರುವ ಸಮಾಧಾನವನ್ನೂ ಕೊಟ್ಟಿದೆ. ಸ್ವಾಮಿಗಳವರ ವೈಯಕ್ತಿಕವಾದ ಅಭಿಪ್ರಾಯವೇ ಅಲ್ಲದೆ ಪತ್ರಿಕೆಯ ನೀತಿಯೂ ಇದರಿಂದ ವಾಚಕರಿಗೆ ತಿಳಿದುಬರುವದೆಂದು ಸಂಪಾದಕಮಂಡಲಿಯವರ ನಿರೀಕ್ಷಣೆಯಿದೆ. – ಸಂ.ಅ.ಪ್ರ)

1. ಸತ್ಯ ಮತ್ತು ಭೂತಪ್ರೇಮದ (?) ಆಧಾರದಮೇಲೆ ರಚಿಸಬೇಕಾದ ಹೊಸ ಸಮಾಜಸೃಷ್ಟಿಗೆ ಸಮತಾವಾದದ ತತ್ತ್ವವು ಸಹಾಯಕವಾಗಿದೆ. ಅಂದ ಮೇಲೆ ಅದನ್ನು ಅಧರ್ಮದ್ದು ಅಥವಾ ಧರ್ಮದ್ವೇಷಕ್ಕೆ ಅಗ್ರಸ್ಥಾನವನ್ನು ಕೊಟ್ಟಿರುವ 'ಕಮ್ಯೂನಿಸಂ' ಎಂಬ ಸಮತಾವಾದವೆಂದು ಹೀಯಾಳಿಸುವದು ಸರಿಯಲ್ಲ.

2. ನಮ್ಮ ದೇಶದಲ್ಲಿ ಬಾಯಿನಲ್ಲಿ ಮಾತ್ರ ''ಸರ್ವೇಜನಾಃ ಸುಖಿನೋ ಭವಂತು'' ಎಂಬ ಭೂತಪ್ರೇಮದ ನುಡಿಯನ್ನು ಉಚ್ಚರಿಸಿ ಕಾರ್ಯದಲ್ಲಿ ಮಾತ್ರ ಸಾಮಾನ್ಯಜನಗಳನೇಕರನ್ನು ತುಳಿದು ಹೀನಸ್ಥಿತಿಯಲ್ಲಿಟ್ಟು ಕೆಲವೇ ಅಲ್ಪಸಂಖ್ಯಾತ ಧನಿಕರು ಸುಖಲೋಲುಪ್ತಿಯಲ್ಲಿದ್ದಾರೆ. ಸಾರ್ವಜನಿಕ ಮತ್ತು ಅನೇಕ ಧರ್ಮಸಂಸ್ಥೆಗಳೆಂಬ ನಾಮಾಭಿಮಾನದ ಸಂಸ್ಥೆಗಳ ಭೂತಪ್ರೇಮವೆಲ್ಲ ಈ ಧನಿಕ ಅಲ್ಪಸಂಖ್ಯಾತರ ಹಿಂಬಾಲಕರಾಗುವದರಲ್ಲೇ ಬತ್ತಿಹೋಗುತ್ತದೆ. ಹೆಚ್ಚಿನ ಪ್ರಮಾಣದಲ್ಲಿರುವ ಬಡಜನತೆಯ ಮೇಲೆ 'ಭೂತಪ್ರೇಮ'ವೆಲ್ಲಿ? ಅವರನ್ನು 'ಪೂರ್ವಜನ್ಮದ ಸಂಸ್ಕಾರ'ವೆಂದು ಸಮಾಧಾನಪಡಿಸಿ ಧನಿಕನ ದುಡಿಯಾಳುಗಳನ್ನು ಮಾಡುವದರಲ್ಲಿ ಧರ್ಮಸಂಸ್ಥೆಗಳ ಸುತ್ತಲೂ ಇರುವ ಜನರು ಯಾರು? ಸಿನಿಮಾ, ನಾಟಕ– ಮೊದಲಾದವುಗಳಿಗೆ ವಾಡಿಕೆಯಾಗಿ ಹೋಗಿಬರುವಂತೆ ಸುಳಿದಾಡುವ ಜನರೇ ಹೆಚ್ಚು, ಜೀವನದ ವ್ಯವಹಾರದಲ್ಲಿ

ಅನುಸರಿಸುವ ಧರ್ಮವೇನು? ಎಷ್ಟರಮಟ್ಟಿನ ಜೀವನದ ಮಾರ್ಪಾಟಾಗಿದೆ? ಪುರಾಣ, ಉಪನ್ಯಾಸಗಳನ್ನು ಕೇಳುತ್ತಿರುವ ತತ್ಕಾಲಕ್ಕೆ ಮಾತ್ರ ಪರವಶರಾಗುವದರಲ್ಲಿಯೇ ಧರ್ಮಬುದ್ಧಿಯೆಲ್ಲ ಹಾರಿಹೋಗಿ ಜೀವನಕ್ಕೆ ಸಂಬಂಧವಿಲ್ಲದ ಮೇಲೆ ಏನು ಪ್ರಯೋಜನ?

3. ಈ ಬಗೆಯ ವಿರೋಧಾಭಾಸಗಳೆಲ್ಲ ಈಗಿನ ಸಮಾಜಕ್ಕೇ ಸಂಬಂಧಪಟ್ಟ ಕೂರತೆಗಳಲ್ಲವೆ?

4. ಅನೇಕ ಹಿಂದಿನಿಂದಲೂ ಈಗಲೂ ಮಹಾತ್ಮರು ಹೇಳುತ್ತಿರುವ ''ಸರ್ವೇ ಜನಾಃ ಸುಖಿನೋ ಭವಂತು'' ಎಂಬುದು ಆಚರಣೆಗೆ ಬರಬೇಡವೆ? ಈ ಬಗೆಯ ನುಡಿಯು ಆಚರಣೆಯಲ್ಲಿರುವ ಸಮಾಜಸೃಷ್ಟಿಯಾಗಬೇಡವೆ? ಈ ಹೊಸ ಸಮಾಜರಚನೆ ಸಮುತಾವಾದದಿಂದಲೇ ಸಾಧ್ಯ. ಅದೇ ಧರ್ಮ, ಅದೇ ಸತ್ಯ, ತತ್ತ್ವಕ್ಕೆ ಎಲ್ಲೆ ಎಲ್ಲಿದೆ? ಹವಗುಣಕ್ಕೆ ಒಂಟುವದಿಲ್ಲವೆನ್ನುವದುಂಟೆ?

★★★★★

# ಧರ್ಮಸಂಸ್ಥೆಗಳೂ ಸಮತಾವಾದವೂ

**-ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು**

ಈಗಿನ ಧರ್ಮಸಂಸ್ಥೆಗಳು ಸಾರ್ವಜನಿಕ ಪ್ರೇಮವನ್ನು ಬೆಳೆಸುವದರ ಬದಲು ಅದಕ್ಕೆ ಅಡ್ಡಿಯಾಗಿರುವ ಧನಿಕರ ಬಾಲವನ್ನು ಹಿಡಿಯುತ್ತಿವೆ. ಸಮತಾವಾದವು ಸರ್ವಜನರಿಗೂ ಅನುಕೂಲವಾದ ಸಮಾಜ ರಚನೆಗೆ ಇರುವ ಒಂದೇ ಸಾಧನ. ಅದೇ, ಧರ್ಮ, ಸತ್ಯ, ಅದನ್ನು ಧರ್ಮದ್ವೇಷಿಯೆಂದು ಹಳಿಯಬಾರದು. ಈ ಎರಡು ಅಭಿಪ್ರಾಯಗಳು ಸರಿಯಾಗಿರಬಹುದು, ತಪ್ಪಾಗಿರಬಹುದು. ಆದರೆ ನನ್ನ ಸಂದೇಶದ ಮೇಲಿನ ಟೀಕೆಯೇನೂ ಇದಾಗುವದಿಲ್ಲ.

ಸಂದೇಶದಲ್ಲಿ ಹೇಳಿರುವದರ ಸಾರವು ಇಷ್ಟು: ವರ್ಣಾಶ್ರಮಗಳ ವಿಂಗಡವು ಧರ್ಮದ ಆಧಾರದ ಮೇಲೆ ಏರ್ಪಟ್ಟಿತ್ತು; ಈಗ ನಮ್ಮ ದೇಶದಲ್ಲಿರುವ ವರ್ಣಾಶ್ರಮಗಳ ವಿಂಗಡವು ಬರಿಯ ಅಭಾಸಮಾತ್ರವಾಗಿದೆ. ಬೇರೆಯ ದೇಶಗಳಲ್ಲಿ ವರ್ಣಾಶ್ರಮಗಳು ಯಾವಾಗಲೂ ಇರಲಿಲ್ಲ; ಆ ದೇಶಗಳಲ್ಲಿ ವರ್ಣಗಳ ಬದಲು ವರ್ಗಗಳು ಮಾತ್ರ ಇದ್ದವು. ವರ್ಣಾಶ್ರಮಪದ್ಧತಿಯಲ್ಲಿ ಧರ್ಮಗುರುಗಳಲ್ಲಿ ಭಕ್ತಿಗೆ ಅವಕಾಶವಿದೆ; ವರ್ಗಗಳಲ್ಲಿ ಪರಸ್ಪರ ದ್ವೇಷಕ್ಕೆ ಅವಕಾಶವಿದೆ. ಇದಿಷ್ಟು ನನ್ನ ಅಭಿಪ್ರಾಯ. ಭೂಲೋಕದ ಇತಿಹಾಸವನ್ನು ಬಲ್ಲವರು ಯಾರುತಾನೆ ಇದನ್ನು ಸುಳ್ಳೆಂದು ಹೇಳುವರು? ಕಮ್ಯೂನಿಸ್ಟರು ಅಥವಾ ಸಮತಾವಾದಿಗಳು ಹೇಳುವದೂ ಇದೇ. ವರ್ಗಗಳ ಪರಸ್ಪರವಿರೋಧವೇ ಈಗಿನ ಸಮಾಜದಲ್ಲಿರುವ ದೋಷವೆಂದೂ ಆ ದೋಷವನ್ನು ತಪ್ಪಿಸುವದಕ್ಕೆ ಮೊದಲು ಕೂಲಿಯ ವರ್ಗದವರು ರಾಜಕೀಯ ಕ್ರಾಂತಿಯ ಮೂಲಕ ಪ್ರಭುತ್ವವನ್ನು ವಶಪಡಿಸಿಕೊಂಡು ಬಲಾತ್ಕಾರದಿಂದ ಪದಾರ್ಥಗಳ ಉತ್ಪತ್ತಿಯ ಕ್ರಮವನ್ನು ಮಾರ್ಪಡಿಸಬೇಕು ಎನ್ನುತ್ತಾರೆ, ಅವರು. (The Communist Manifesto Kari Marks Selected Works Eng Ed. "Mosco 1946 ನೋಡಿ.)

ಜನರು ''ಸರ್ವೇ ಜನಾಃ ಸುಖಿನೋ ಭವಂತು'' ಎಂಬ 'ಭೂತ ಪ್ರೇಮದ'ದ ನುಡಿಯನ್ನು ಬಾಯಿಯಲ್ಲಿ ಮಾತ್ರ ನುಡಿಯುತ್ತಿರಬಹುದು; ಕಾರ್ಯದಲ್ಲಿ ಅದನ್ನು ನಡೆಯಿಸದೆ ಇರಬಹುದು. ಭೂತಪ್ರೇಮವೆಂದರೆ ಪ್ರಾಣಿಗಳ ಮೇಲೂ ಪ್ರೇಮವಿರುವದು. ಮಹಾವೀರ, ಬುದ್ಧ, ಸೇಂಟ್ ಫ್ರಾನ್ಸಿಸ್– ಇಂಥ ಮಹನೀಯರು ಅದನ್ನು ಆಚರಣೆಯಲ್ಲಿಯೂ ತೋರಿಸಿದರು. ಆದರೆ ಮನುಷ್ಯನನ್ನೇ ಮನುಷ್ಯರು ಹಿಂಸಿಸಿ ಕೊಲ್ಲುತ್ತಿರುವ ಈ ಕಾಲಕ್ಕೆ ಅದು ಯಾರ ಆಚರಣೆಯಲ್ಲಿದೆಯೋ ಅವರಿಗೆ ಗೊತ್ತು; ಈಶ್ವರನಿಗೆ ಗೊತ್ತು. ಇದಂತಿರಲಿ, ಜನರು ಸರ್ವಸೌಖ್ಯಕ್ಕೆ ದುಡಿಯದೆ ಇದ್ದರೆ, ಮತ್ತು ನಾಮಧಾರಿ ಧರ್ಮಸಂಸ್ಥೆಗಳು ಇದಕ್ಕೆ ವಿರುದ್ಧವಾಗಿ ನಡೆಯುತ್ತಿದ್ದರೆ, ಧರ್ಮದ ಅಭಿಮಾನವಿಲ್ಲದ ವ್ಯಕ್ತಿಗಳೂ ವರ್ಗಗಳೂ ಸಂಸ್ಥೆಗಳೂ ಸಮಾಜಕ್ಕೆ ಅಪಾಯವನ್ನೇ ತರುತ್ತವೆ – ಎಂಬ ನನ್ನ ಸಂದೇಶದ ಅಭಿಪ್ರಾಯಕ್ಕೆ ಪುಷ್ಟಿಯೇ ದೊರಕಿದಂತೆ ಆಗುವದಷ್ಟೆ? ಜನರಿಗೆ ಧರ್ಮವನ್ನು ತಿಳಿಸುವದು ಅತ್ಯವಶ್ಯವೆಂದೂ ಆಗುವದಷ್ಟೆ? ಈ ದೋಷಗಳಿಲ್ಲದ ಒಂದು ಧರ್ಮಸಂಸ್ಥೆ ಏರ್ಪಟ್ಟರೆ ಒಳ್ಳೆಯದೆಂದೂ ಆಗುವದಷ್ಟೆ?

ಧರ್ಮಸಂಸ್ಥೆಗಳಲ್ಲಿ ಪುರಾಣ, ಉಪನ್ಯಾಸಗಳಿಂದ 'ತತ್ಕಾಲಕ್ಕಾದರೂ ಪರವಶರಾಗುವ' ಜನರು ಇನ್ನೂ ಇದಾರೆಂದು ನಮ್ಮಮಿತ್ರರು ಒಪ್ಪಿರುತ್ತಾರೆ. ಅದು ಅಷ್ಟರಲ್ಲಿಯೇ ನಿಲ್ಲಬಾರದೆಂದು ಅವರ ಆಶೆ; ಜೀವನಕ್ಕೆ ಸಂಬಂಧವಿಲ್ಲದಿದ್ದರೆ ಏನೂ ಪ್ರಯೋಜನವಿಲ್ಲವೆಂದು ಅವರ ಅಭಿಪ್ರಾಯ. ಇದಕ್ಕೆ ನಮ್ಮ ಅನುಮೋದನವಿದೆ. ಅದಷ್ಟುಮಟ್ಟಿಗೂ ಧರ್ಮವನ್ನು ಜೀವನಕ್ಕೆ ಸಂಬಂಧಿಸಿಕೊಳ್ಳುವಂತೆ ಜನರನ್ನು ಪ್ರೇರಿಸುವದೇ ನಮ್ಮ ಗುರಿ. ಆದರೆ ರಾಜಕೀಯಕ್ರಾಂತಿಗಳಿಂದ ಆ ಕೆಲಸವಾಗುವದೆಂಬುದರಲ್ಲಿ ನಮ್ಮ ನಂಬಿಕೆಯಿಲ್ಲ. 'ಧರ್ಮಸಂಸ್ಥೆಗಳ ಸುತ್ತಲೂ ಸಿನಿಮ, ನಾಟಕ-ಮೊದಲಾವುಗಳಿಗೆ ವಾಡಿಕೆಯಾಗಿ ಹೋಗಿ ಬರುವಂತೆ ಸುಳಿದಾಡುವ ಜನವೇ ಹೆಚ್ಚು ಎಂಬುದನ್ನು ನಾವುಗಳೂ ಒಪ್ಪುತ್ತೇವೆ. ಆದರೆ ಯಾವ ಕ್ಷೇತ್ರದಲ್ಲಿಯಾದರೂ ಹೀಗೆಯೇ ಇರುತ್ತದೆ. ರಾಜಕೀಯದ ಮಾತನ್ನಾಡುವವರೆಲ್ಲ ರಾಜಕಾರಣದಲ್ಲಿ ಇಳಿದಿರುವದಿಲ್ಲ; ಸಮಾಜಸುಧಾರಣೆಯ ಶಬ್ದಗಳನ್ನು ಉಚ್ಚರಿಸುವವರೆಲ್ಲ ಸುಧಾರಕರಾಗಿರುವದಿಲ್ಲ; ರಾಗತೆಗೆಯುವವರೆಲ್ಲ ಸಂಗೀತಗಾರರಾಗಿರುವದಿಲ್ಲ. ಒಂದೊಂದು ಕ್ಷೇತ್ರದಲ್ಲಿಯೂ ಆಯಾ ವಿಷಯದಲ್ಲಿ ಮುಳುಗಿ ಅದಕ್ಕಾಗಿ ಜೀವನವನ್ನು ಮೀಸಲಾಗಿರಿಸುವವರು ಎಲ್ಲಿಯೋ ಕೆಲವರಿರುವರು. ಸಿನಿಮ, ನಾಟಕ-ಮುಂತಾದವುಗಳನ್ನು ನೋಡುವವರ ಮೇಲೆ ಕೂಡ ಯಾವ ಪರಿಣಾಮವೂ ಆಗದೆ ಇರುವದಿಲ್ಲ. ಅಲ್ಲಿ ಕಾಣುವ ಕಾಮೋತ್ತೇಜಕವಾದ, ಸಮಾಜದೋಷಗಳನ್ನೇ ಗುಣವೆಂದು ತೋರಿಸುವ, ಕೆಲವು ದೃಶ್ಯಗಳು ಕೆಲವರನ್ನು ಕೆಡಿಸಿವೆ, ಒಳ್ಳೆಯ ದೃಶ್ಯಗಳು ಕೆಲವರಿಗೆ ಮಾರ್ಗದರ್ಶಕವಾಗಿಯೂ ಪರಿಣಮಿಸಿವೆ. ಇದರಂತೆ ಧರ್ಮಸಂಸ್ಥೆಗಳಲ್ಲಿ ಆಗುವ ಪುರಾಣಾದಿಗಳಿಂದಲೂ ಕೆಲವು ಜನರ ಜೀವನದ ಮೇಲೂ ಒಳ್ಳೆಯ ಅಥವಾ ಕೆಟ್ಟ ಪರಿಣಾಮಗಳಾಗಿರುತ್ತವೆ.- ಇದಕ್ಕೆ ಆ ಸಂಸ್ಥೆಗಳ ಗುಣದೋಷಗಳು ಕಾರಣವೆಂಬುದರಲ್ಲಿ ಏನು ಸಂದೇಹ?

ಸಮತಾವಾದವನ್ನು ಧರ್ಮದ್ವೇಷಿಯೆಂದು ನಾನು ಆರೋಪವನ್ನು ಹೊರಿಸಿಲ್ಲ. ಅದನ್ನು ಕಮ್ಯುನಿಸ್ಟರೇ ಒಪ್ಪಿಕೊಂಡಿರುತ್ತಾರೆ. ''Religion by V.I.Lemin''(ಧರ್ಮ-ವಿ.ಐ.ಲೆನಿನ್ ವಿರಚಿತ) ಎಂಬ ಗ್ರಂಥವನ್ನು ಇಂಗ್ಲಿಷು ಬಲ್ಲವರೆಲ್ಲರೂ ಓದಬಹುದು. ಅದರಲ್ಲಿ ಈ ಅಭಿಪ್ರಾಯಗಳಿವೆ:

1) ಧರ್ಮವು ಜನರಿಗೆ ಅಫೀಮು, ಅದು ಕೂಲಿಯವರನ್ನು ಮಂಕುಗೊಳಿಸುತ್ತದೆ (ಪು.12)

2) ಧರ್ಮಕ್ಕೆ ವಿರುದ್ಧವಾಗಿರುವದು ಚಾರ್ವಾಕವಾದದ ಓನಾಮ, ಮಾರ್ಕ್ಸ್ ಮತದ (ಸಮತಾವಾದದ) ಓನಾಮ (ಪು.14).

3)ಕೂಲಿಯವರ ಕೇಳಿಕೆ ಏನೆಂದರೆ ಧರ್ಮವು ಅವರವರಿಗೆ ಸೇರಿದ್ದೆಂದು ಸರ್ಕಾರವು ಹೇಳಬೇಕು. ಆದರೆ ಧರ್ಮವಿರುದ್ಧವಾಗಿ ಹೋರಾಡುವದು ಅವರವರಿಗೆ ಸೇರಿದ್ದಲ್ಲ. ವರ್ಗಕ್ಕೆಲ್ಲ ಸೇರಿದ್ದು (ಪು.18)

4) ನಮ್ಮ ನೀತಿ ಎಂಬುದು ಸಂಪೂರ್ಣವಾಗಿ ವರ್ಗದ ಹೋರಾಟಕ್ಕೆ ಅಧೀನವಾಗಿರುತ್ತದೆ. ಕೂಲಿಯವರ ಹೋರಾಟಕ್ಕೆ ಬೇಕಾದ ಸಂಗತಿಗಳಿಂದಲೇ ನೀತಿಯನ್ನು ಕಲ್ಪಿಸಬೇಕು (ಪು.48)

ಕೊನೆಯದಾಗಿ ''ತತ್ತ್ವಕ್ಕೆ ಎಲ್ಲೆ ಎಲ್ಲಿದೆ? ಹವಗುಣಕ್ಕೆ ಒಂಟುವದಿಲ್ಲವೆನ್ನುವದುಂಟೆ?''ಎಂಬಪ್ರಶ್ನೆಗೆಉತ್ತರವನ್ನುಹೇಳಿಈಲೇಖನವನ್ನು ಮುಗಿಸುವೆನು. ನಾನು ಮೊದಲೇ ಹೇಳಿರುವಂತೆ ''ಸಮತಾವಾದವೊಂದೇ ಸರ್ವಜನಸುಖಕ್ಕೆ ಬೇಕಾದ ಸಮಾಜರಚನೆಗೆ ಸಾಧನ''ವೆಂಬ ಅಭಿಪ್ರಾಯವು ಸರಿಯಾಗಿರಬಹುದು, ತಪ್ಪಾಗಿಯೂ ಇರಬಹುದು, ನಿಜವನ್ನು ಭವಿಷ್ಯತ್ಕಾಲದಲ್ಲಿ ಕಾಣಬೇಕಾಗಿದೆ. 'ತತ್ತ್ವಕ್ಕೆ ಎಲ್ಲೆಯಿಲ್ಲ'ವೆನ್ನುವದು ನಿಜ, ನೀವು ಹೇಳುವದೇ ತತ್ತ್ವವೆಂದು ಮಾತ್ರ ಸರ್ವರೂ ಒಪ್ಪಿಲ್ಲ. 'ಅದೇ ಧರ್ಮ' ಎನ್ನುವದೂ ಸರಿಯಲ್ಲ; ಧರ್ಮವೇ ತತ್ತ್ವ ಎನ್ನುವದು ನ್ಯಾಯ.

ಇದು ಹೇಗಾದರೂ ಇರಲಿ, ಹವಾಕ್ಕೆ ಒಂಟುವದಿಲ್ಲವೆಂದು ನಾನು ಹೇಳಿರುವದು ಇದನ್ನಲ್ಲ. ಸಂದೇಶ(ಪು.7)ವನ್ನು ಇನ್ನೊಮ್ಮೆ ಓದಿ ನೋಡಿರಿ. ಮಿಕ್ಕದೇಶಗಳಲ್ಲಿ ಗ್ರೀಕ್‌ಚರ್ಚ್ ಮುಂತಾದ ಧರ್ಮಸಂಸ್ಥೆಗಳು ಆಸ್ತಿಪಾಸ್ತಿಗಳನ್ನು ಸಂಪಾದಿಸಿಕೊಂಡು ಧನಿಕವರ್ಗದವರ ಸಹಾಯಕರಾಗಿ ಅಥವಾ ಅವರನ್ನು ತಮ್ಮ ಬಲೆಗೆ ಕೆಡವಿಕೊಂಡು ಬಡಜನರಿಗೆ ತೊಂದರೆಯನ್ನು ಕೊಡುತ್ತಿದ್ದರು. ಆದರೆ ನಮ್ಮ ದೇಶದಲ್ಲಿ ಧರ್ಮವನ್ನುಪದೇಶಿಸುವ ಬ್ರಾಹ್ಮಣರಿಗೆ, ಅದರಲ್ಲಿಯೂ ಸಂನ್ಯಾಸಿಗೆ, ಯಾವ ಆಸ್ತಿಯೂ ಇರುವ ಹಾಗಿಲ್ಲ. ಧರ್ಮಬೋಧಕರು

ಧನಿಕರಿಗೂ ಬಡವರಿಗೂ ಸಮಾನವಾಗಿಯೇ ಸಹಾನುಭೂತಿಯಿಂದ ಉಪದೇಶಿಸುತ್ತಾರೆ. ಧರ್ಮಬೋಧಕರಿಗೆ ಇಲ್ಲಿ ಯಾವ ಅಧಿಕಾರವೂ ಇಲ್ಲ. ಅವರು ಲೋಕಾಂತರದಲ್ಲಾಗುವ ಫಲಗಳನ್ನು ತೋರಿಸಿ ಬಡವರನ್ನು ಸಮಾಧಾನಮಾಡುವದಿಲ್ಲ; ಇದ್ದದ್ದನ್ನೇ ಒಪ್ಪಿಕೊಂಡು ಸದ್ಯಸ್ಥಿತಿಯಲ್ಲಿಯೇ ಜನ್ಮಾಂತರವಾದವನ್ನು ಕುಳಿತಿರುವಕ್ಕೂ ಉಪಯೋಗಿಸುವದಿಲ್ಲ. ಪ್ರತಿಯೊಬ್ಬನೂ ಪ್ರಯತ್ನಪಟ್ಟರೆ ಈಗಲೇ ಇಲ್ಲಿಯೇ ಎಲ್ಲಾ ಕರ್ಮಬಂಧವನ್ನೂ ಕಡಿದು ಹಾಕಬಹುದು ಎಂಬ ಪ್ರೋತ್ಸಾಹಕತತ್ತ್ವವನ್ನು ಮುಂದಿಡುವದಕ್ಕೆ ಅದು ಉಪಯೋಗವಾಗಿದೆ. ಆದ್ದರಿಂದ ವಿದೇಶೀಯರ ಪದ್ಧತಿಯನ್ನು ಅನುಸರಿಸಿ ನಾವೇಕೆ ಇಲ್ಲಿ ಧರ್ಮಬೋಧಕರ ಮೇಲೆ ತಿರುಗಿಬೀಳಬೇಕು? ಧರ್ಮದ ಮೇಲೆ ದಂಗೆಯೇಳುವದು ನಮ್ಮ ದೇಶದ ಹವೆಗೆ ಒಂಟುವದಿಲ್ಲ. ನಮ್ಮ ದೇಶದಲ್ಲಿ ಧರ್ಮವು ನಮ್ಮನ್ನು ಯಾರೊಬ್ಬರಿಗೂ ಅಡಿಯಾಳಾಗುವದನ್ನು ಹೇಳಿಕೊಡುವದಿಲ್ಲ; ಜೀವನ್ಮುಕ್ತಿಯನ್ನು ಬದುಕಿರುವಾಗಲೇ ಸ್ವಾತಂತ್ರ್ಯದಿಂದಿರುವ ಉಪಾಯವನ್ನು, ತಿಳಿಸಿಕೊಡುತ್ತದೆ. ಇಷ್ಟು ನನ್ನ ಸಂದೇಶದ ಸಾರವು. ''ವಿಶ್ವಪ್ರೇಮಿ''ಗಳು ಈಗ ನಾನು ಬರೆದಿರುವ ವಿವರಣದ ಸಮೇತವಾಗಿ ಇನ್ನೊಮ್ಮೆ ನನ್ನ ಹಿಂದಿನ ಲೇಖವನ್ನು ಓದಿದರೆ ನಿಜವಾದ ಧರ್ಮವೆಂಬುದು ಹೇಗಾದರೂ ಕೆಡವಬೇಕಾದ ಹಳೆಯ ಕಟ್ಟಡವಲ್ಲವೆಂಬುದು ಅವರಿಗೆ ಮನವರಿಕೆಯಾಗುವದೆಂದು ನನ್ನ ನಂಬಿಕೆ.

★★★★★

# ಗುರುಪರಮೇಶ್ವರನಲ್ಲಿ ಭಕ್ತಿ

**– ಶ್ರೀ ಸಚ್ಚಿದಾನಂದ ಸರಸ್ವತೀಸ್ವಾಮಿಗಳವರು**

ಶ್ವೇತಾಶ್ವತರೋಪನಿಷತ್ತಿನಲ್ಲಿ ಒಂದು ವಾಕ್ಯವಿದೆ; ''ಯಾವನಿಗೆ ದೇವರಲ್ಲಿ ಪರಭಕ್ತಿಯಿರುವದೋ, ದೇವರಲ್ಲಿರುವಷ್ಟೇ ಗುರುವಿನಲ್ಲಿಯೂ ಭಕ್ತಿಯಿರುವದೋ ಆತನಿಗೆ ಈ ಹೇಳಿದ ವಿಷಯಗಳು ಮನದಟ್ಟಾಗುವವು.'' ಈ ವಾಕ್ಯವನ್ನು ಈಗಿನ ಕಾಲದವರಾದ ನಾವು ಹೃದಯಕ್ಕೆ ತಂದುಕೊಳ್ಳುವದು ಅವಶ್ಯವೆಂದು ನನಗೆ

ಎನಿಸಿರುತ್ತದೆ. ಏಕೆಂದರೆ ಈಗ್ಗೆ ನಾವು ಎಲ್ಲಾ ಧರ್ಮಿಕಗ್ರಂಥಗಳನ್ನೂ ಓದುತ್ತಿದೇವೆ; ಜಗದ್ಗುರುಗಳೆಂದು ಪ್ರಸಿದ್ಧರಾದ ಮಹನೀಯರ ಸೂಕ್ತಿಗಳನ್ನೂ ಪಠಿಸುತ್ತಿದೇವೆ. ಆದರೆ ನಮಗೆ ಅವರ ಉಪದೇಶಗಳಿಂದ ಯಾವ ಪರಿಣಾಮವೂ ಆಗಿರುವದಿಲ್ಲ. ಇದೇಕೆ?

News and Views ('ಸುದ್ದಿಗಳೂ ವಿಮರ್ಶೆಗಳೂ') ಎಂಬ ಹೆಸರಿನ ಒಂದ ರಷ್ಯನ್ ಪತ್ರಿಕೆಯಲ್ಲಿ (ಡಿಸೆಂಬರು 4, 1957) ಕಮ್ಯೂನಿಸ್ಟು ಪಾರ್ಟಿಯ ಪ್ರಥಮ ಸೆಕ್ರೆಟರಿಗಳಾದ ಖ್ರುಶ್ಚಾವ್‌ರವರಿಗೂ ಅಮೆರಿಕದೇಶದ ಕೆಲವರು ವೃತ್ತಾಂತಪತ್ರಿಕೆಗಳ ಸಂಪಾದಕರಿಗೂ ಆದ ಸಂಭಾಷಣೆಯನ್ನು ಹಾಕಿತ್ತು. ಅದು ವಿಶೇಷವಾಗಿ ರಷಿಯ ಮತ್ತು ಅಮೆರಿಕದ ದೇಶಗಳ ರಾಜನೀತಿಗೆ ಸಂಬಂಧಪಟ್ಟ ಸಂಭಾಷಣೆಯಾದರೂ ಆದರಲ್ಲಿ ಧಾರ್ಮಿಕವಿಚಾರದ ಒಂದು ಪ್ರಸಂಗ ಬಂದಿದೆ; ''ನೀವು ಈಶ್ವರ, ಜೀವ, ಕಮ್ಯೂನಿಸ್ಟ್ ರಾಷ್ಟ್ರದಲ್ಲಿ ಧಾರ್ಮಿಕ ವಿಚಾರದಲ್ಲಿರುವ ವ್ಯಕ್ತಿಸ್ವಾತಂತ್ರ್ಯ – ಇವುಗಳ ಪರಾಮರ್ಶಮಾಡಿದಿರಷ್ಟೆ; ಆದರೆ ಈಶ್ವರನ ಆಸ್ತಿತ್ವದಲ್ಲಿ ಧಾರ್ಮಿಕತೃಪ್ತಿಯು ಪುರುಷಾರ್ಥಪರವೆಂಬುದರಲ್ಲಿಯೂ ನಂಬಿಕೆಯಿರುವವರಿಗೆ ನಿಮ್ಮ ಪಕ್ಷದಲ್ಲಿ ಸ್ಥಾನವಿಲ್ಲವೇಕೆ?'' ಎಂದು ಪತ್ರಿಕೆಯ ಸಂಪಾದಕರು ಕೇಳಿದ್ದಕ್ಕೆ ಖ್ರುಶ್ಚಾವ್‌ರವರು ಕೊಟ್ಟ ಉತ್ತರವು ಮನನೀಯವಾಗಿದೆ; ''**ಈಶ್ವರನಲ್ಲಿ ನಂಬಿಕೆಯಿರುವದು ನಮ್ಮ ಕಮ್ಯೂನಿಸ್ಟು ನೀತಿಗೆ ವಿರುದ್ಧವೆಂದು ನಮ್ಮ ಭಾವನೆ;** ಆದರೆ ಜನರು ಯಾವದಾದರೂ ಮತವನ್ನು ಇಟ್ಟುಕೊಂಡಿದ್ದರೆ ಅವರನ್ನೇನೂ ಅದಕ್ಕಾಗಿ ನಾವು ಹಿಂಸೆಮಾಡುವದಿಲ್ಲ. ಏಕೆಂದರೆ ಇದು ಅವರವರ ಮನಸ್ಸಾಕ್ಷಿಗೆ ಸೇರಿದ ಮಾತಾಗಿದೆ.'' ಸಂಪಾದಕರು ''ಆದರೂ ಯಾವದಾದರೊಂದು ದೇವತೆಯಲ್ಲಿ ನಂಬಿಕೆಯಿಡದ ಜನಾಂಗವಾಗಲಿ, ಮಹಾದೇಶವಾಗಲಿ, ಈವರೆಗೆ ಎಲ್ಲಿಯೂ ಇರಲಿಲ್ಲವಷ್ಟೆ?'' ಎಂದು ಹೇಳಲು ಖ್ರುಶ್ಚಾನ್‌ರು ಕೊಟ್ಟ ಉತ್ತರವು ಪರಿಶೀಲಿಸತಕ್ಕದ್ದಾಗಿದೆ:

''ಇದನ್ನು ಸ್ವಲ್ಪ ವಿಶದಗೊಳಿಸುವದಕ್ಕೆ ನಾನು ಹೇಳತಕ್ಕದ್ದಿದೆ. ಯಾವದೊಂದು ದೇಶದಲ್ಲಿಯೂ ಜನರೆಲ್ಲ ಒಂದೇ ಮತದವರಾಗಿದ್ದದ್ದು ಎಂದಿಗೂ ಇಲ್ಲ; ಎಲ್ಲ ಜನರೂ ಈಶ್ವರನ ಅಸ್ತಿತ್ವವನ್ನು ನಂಬಿದ್ದಿಲ್ಲ, ನಮ್ಮಲ್ಲಿಯೂ ಈಶ್ವರನನ್ನು ನಂಬುವ ಆಸ್ತಿಕರು ಇನ್ನೂ ಇರುತ್ತಾರೆ. ಆದ್ದರಿಂದ ಅವರು ನಂಬಿಕೊಂಡಿರಲಿ; ದೇವರನ್ನು ನಂಬುವದೂ ಬಿಡುವದೂ ಒಬ್ಬೊಬ್ಬ ವ್ಯಕ್ತಿಗೆ

ಸೇರಿದ್ದು. ಅದು ಅವನವನ **ಮನಃಸಾಕ್ಷಿಗೆ ಸಂಬಂಧಿಸಿದ್ದು. ಎಷ್ಟೋವೇಳೆ ಒಂದೇ ಕುಟುಂಬದಲ್ಲಿಯೇ ನಂಬುವವರೂ ಇರುತ್ತಾರೆ, ನಂಬದವರೂ ಇರುತ್ತಾರೆ. ಆದರೆ ಈಶ್ವರನಲ್ಲಿ ನಂಬಿಕೆಯಿರುವವರು ದಿನದಿನಕ್ಕೂ ಕಡಿಮೆಯಾಗುತ್ತಿದ್ದಾರೆ; ತರುಣರು ದೊಡ್ಡವರಾಗುತ್ತಿದ್ದಾರೆ, ಅವರಲ್ಲಿ ಈಶ್ವರನನ್ನು ನಂಬದವರೇ ಆಸ್ತಿಕರಿಗಿಂತ ಹೆಚ್ಚಿನ ಸಂಖ್ಯೆಯವರಾಗಿರುತ್ತಾರೆ. ಜನಸಾಮಾನ್ಯದ ವಿದ್ಯಾಭ್ಯಾಸ, ಭೌತಿಕವಿಜ್ಞಾನದ ತಿಳಿವಳಿಕೆಯ ಪ್ರಸಾರ, ಪ್ರಕೃತಿ ನಿಯಮಗಳ ವಿಮರ್ಶೆ. ಇವುಗಳಿಂದಾಗಿ ಈಶ್ವರನಲ್ಲಿ ನಂಬಿಕೆಯಿಡುವದಕ್ಕೆ ಅವಕಾಶವೇ ದೊರಕುವಂತಿಲ್ಲ.''**

ಮೇಲೆ ಖ್ರುಶ್ಚಾವರ ಕೆಲವು ವಾಕ್ಯಗಳನ್ನು ಕಪ್ಪಕ್ಷರಗಳಲ್ಲಿ ಅಚ್ಚುಮಾಡಿಸಿದೆ. ಓದುಗರು ಅವುಗಳನ್ನು ಲಕ್ಷ್ಯವಿಟ್ಟು ನೋಡಬೇಕೆಂಬುದು ನನ್ನ ಕೋರಿಕೆ. ಈಗ ನಮ್ಮ ದೇಶದ ಸ್ಥಿತಿಯು ಬಲುಮಟ್ಟಿಗೆ ಹೀಗೆಯೇ ಇದೆ ಎಂದರೆ ತಪ್ಪಾದೀತೆ? ಇಲ್ಲಿನ ಸರಕಾರದ ನೀತಿಗೆ ಈಶ್ವರನಲ್ಲಿ ನಂಬಿಕೆಯಿಡುವದೇನೂ ವಿರುದ್ಧವಲ್ಲ; ಆದರೆ ಆ ವಿಷಯಕ್ಕೆ ಸರಕಾರವು ಔದಸೀನ್ಯದಿಂದ ಇದೆ ಎಂದರೆ ಸುಳ್ಳಾಗುವದಿಲ್ಲ. ನಮ್ಮ ದೇಶದ ತರುಣರಿಗೂ ದೇವರ ಆಸ್ತಿತ್ವದಲ್ಲಿ ನಂಬಿಕೆಯು ಕಡಿಮೆಯಾಗುತ್ತಿದೆ. ಎನ್ನಬಹುದು. ವಿದ್ಯಾಭ್ಯಾಸದ ಇಲಾಖೆಯಲ್ಲಿ ಸರಕಾರಿಯ ಸ್ಕೂಲುಗಳಲ್ಲಿಯೂ ಸರಕಾರದ ಹಣವನ್ನು ಸಹಾಯವಾಗಿ ಪಡೆಯುವ ವಿದ್ಯಾ ಶಾಲೆಗಳಲ್ಲಿಯೂ ಮತವಿಚಾರವನ್ನು ಬೋಧಿಸಕೂಡದು – ಎಂಬ ಶಾಸನವು ಇರುತ್ತದೆ. ಮನೆಗಳಲ್ಲಿ ತಾಯಿತಂದೆಗಳಿಗೆ ನಿತ್ಯಜೀವನದ ಹೊಟ್ಟೆಬಟ್ಟೆಯ ವಿಚಾರಗಳು ಹೆಚ್ಚು ಕರೆಕರೆಯನ್ನು ಮಾಡುತ್ತಿರುವದರಿಂದ ಅವರು ತಮ್ಮ ಮಕ್ಕಳಿಗೆ ಮತವಿಚಾರವನ್ನು ತಿಳಿಸಿಕೊಡುವದಕ್ಕೆ ಅವಕಾಶವೇ ದೊರಕುವಹಾಗಿಲ್ಲ. ಒಂದುವೇಳೆ ದೊರೆತರೂ ವಿದ್ಯಾಭ್ಯಾಸದ ಇಲಾಖೆಯವರು ಪಾಠಶಾಲೆಗಳಲ್ಲಿ ಏರ್ಪಡಿಸಿರುವ ಶಾಲಾಬಾಹ್ಯವಿಚಾರಗಳ ಚಟುವಟಿಕೆಗಳು (Extra Curricular activities) ವಿದ್ಯಾರ್ಥಿಗಳಿಗೆ ಈಶ್ವರನ ವಿಚಾರಕ್ಕೆ ಅವಕಾಶವನ್ನು ಕೊಡುವಂತೆಯೇ ಇರುವದಿಲ್ಲವೆಂದೂ ಹೇಳಬಹುದು. ಹೀಗಾಗಿ ಈಶ್ವರನಲ್ಲಿ ಭಕ್ತಿ, ಗುರುವಿನಲ್ಲಿ ಭಕ್ತಿ – ಎಂಬ ಮಾತುಗಳಿಗೆ ಅರ್ಥವೇನೆಂಬುದೇ ನಮ್ಮ ಬಾಲಕರಿಗೆ ತಿಳಿಯದೆಹೋಗುವ ಸಂಭವವೂ ಉಂಟಾಗಿಬಿಟ್ಟಿದೆ ಎನ್ನಬಹುದು!

ಇದನ್ನು ಹಿರಿಯರಾದವರು ಮನದಂದುಕೊಳ್ಳುವದು ಅವಶ್ಯ. ನಮ್ಮೆಲ್ಲನೇಕರು ನಮ್ಮ ಮಕ್ಕಳಿಗೆ ಓದುಬರಹವನ್ನು ಕಲಿಸಿ, ಅವರಿಗೆ

ಕಾಲೇಜುಗಳೆಂಬ ಪ್ರೌಢವಿದ್ಯಾಶಾಲೆಗಳಲ್ಲಿ ತಿಳಿವಳಿಕೆಯನ್ನು ಕೊಟ್ಟು ಅವರ ಜೀವನವು ಸುಖಮಯವಾಗಿರಬೇಕೆಂದು ನಮ್ಮ ಕೈಯಲ್ಲಾದ ಪ್ರಯತ್ನವನ್ನೆಲ್ಲ ಮಾಡುತ್ತಿದೇವೆ. ಆದರೆ ಅವರ ಅಂತಃಕರಣದಲ್ಲಿ ಪರಮಾತ್ಮನ ಆಸ್ತಿತ್ವಕ್ಕೆ ಸ್ಥಳವು ಇರಬೇಕೆಂಬ ಹಾರೈಕೆಯು ನಮ್ಮ ಮನಸ್ಸಿನಲ್ಲಿ ನಿಜವಾಗಿ ಇದೆಯೆ? ''ಈಶ್ವರನಲ್ಲಿಯೂ ಗುರುಗಳಲ್ಲಿಯೂ ಭಕ್ತಿ ಇರುವವನಿಗೆ ಅಧ್ಯಾತ್ಮವಿಚಾರಗಳ ಮರ್ಮವು ತಿಳಿಯುತ್ತದೆ; ಅಧ್ಯಾತ್ಮಜ್ಞಾನದಿಂದಲೇ ಸುಖಶಾಂತಿಗಳು ದೊರಕುತ್ತವೆ'' ಎಂಬ ಶಾಸ್ತ್ರವಾಕ್ಯದಲ್ಲಿ ನಮಗೆ ಶ್ರದ್ಧೆಯಿದೆಯೆ? ಹಾಗಿದ್ದರೆ ನಮ್ಮ ಮಕ್ಕಳಿಗೆ ಆ ಸುಖಶಾಂತಿಗಳು ಬೇಡವೆಂದೇ ನಮ್ಮ ಅಭಿಲಾಷೆಯೆ? ಈ ಪ್ರಶ್ನೆಗೆ ನಮ್ಮಲ್ಲಿ ನಾವು ಮೊದಲು ಉತ್ತರವನ್ನು ಕೊಟ್ಟುಕೊಳ್ಳಬೇಕು.

ವರ್ಷವರ್ಷವೂ ಕ್ರೈಸ್ತಜಯಂತಿ, ಮಹಮ್ಮದನ ಜಯಂತಿ, ಕೃಷ್ಣನ ಜಯಂತಿ ಎಂದು ಹಬ್ಬವನ್ನೂ ಉತ್ಸವವನ್ನೂ ಮಾಡುವವರಿಗೆಲ್ಲ ಇಲ್ಲಿ ಒಂದು ಪ್ರಶ್ನೆಯಿದೆ; ಕ್ರೈಸ್ತನ ಉಪದೇಶವಿರುವ ಕ್ರಿಸ್ತಿಯನ್ನರ ಬೈಬಲಿನಲ್ಲಿ, ಮಹಮ್ಮದನ ಮೂಲಕ ನಮಗೆ ಬಂದಿರುವ ಈಶ್ವರನ ಸಂದೇಶವನ್ನು ನಂಬುವ ಮುಸಲ್ಮಾನರ ಕೊರಾನಿನಲ್ಲಿ, ಶ್ರೀಕೃಷ್ಣಭಗವಂತನ ಉಪದೇಶಗಳೆಂದು ನಂಬಿರುವ ಗೀತಾಶ್ಲೋಕಗಳ ಸೂಕ್ತಿಗಳಲ್ಲಿ ಆಯಾ ಮತದರಾದ ನಿಮಗೆ ನಿಜವಾದ ನಂಬಿಕೆ ಇದೆಯೊ, ಇಲ್ಲವೊ? ಆ ಉಪದೇಶಗಳಂತೆ ನಡೆದುಕೊಂಡರೆ ಇಹದಲ್ಲಿಯೂ ಪರದಲ್ಲಿಯೂ ಸದ್ಗತಿಯಾಗುವದೆಂದು ನೀವು ನಿಜವಾಗಿ ನಂಬುತ್ತೀರೊ, ಇಲ್ಲವೊ? ಇದಕ್ಕೆ ಉತ್ತರವನ್ನು ನಿಮಗೆ ನೀವೇ ಹೇಳಿಕೊಳ್ಳಿರಿ. ರಷಿಯದವರು 'ನಾವು ನಾಸ್ತಿಕರು, ನಮಗೆ ಈಶ್ವರನ ಅಸ್ತಿಯ್ವದಲ್ಲಿ ನಂಬಿಕೆಯಿಲ್ಲ' ಎನ್ನುತ್ತಿದಾರೆ. ಅವರದು ಋಜುಮಾರ್ಗ; ಮನಸ್ಸಿನಲ್ಲಿ ಒಂದು, ಬಾಯಲ್ಲಿ ಇನ್ನೊಂದು, ನಡೆಯಲ್ಲಿ ಮತ್ತೊಂದು - ಹೀಗಿಲ್ಲ. ನಮ್ಮ ದೇಶದವರಾದ ವಾಚಕರುಗಳು ನಿಜವಾಗಿ ಆಸ್ತಿಕರೆಂದಾದರೆ, ಈಶ್ವರನಲ್ಲಿ ನಿಜವಾದ ಅಸ್ತಿತ್ವಬುದ್ಧಿಯು ಅವರಿಗೆ ಇದ್ದರೆ, ಕೂಡಲೆ ತಮ್ಮ ನಡೆನುಡಿಗಳನ್ನು ಅದಕ್ಕೆ ತಕ್ಕಂತೆ ತಿದ್ದಿಕೊಳ್ಳಬೇಕು; ತಮ್ಮ ಮಕ್ಕಳಿಗೂ ಗುರುದೇವತಾಭಕ್ತಿಯುಂಟಾಗುವದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡಿಕೊಳ್ಳಬೇಕು. ಪಾಠಕಮಹಾಶಯ ಇದಕ್ಕೆ ನಿಮ್ಮ ಹೃದಯದಿಂದ ಬರುವ ಉತ್ತರವೇನು?

★★★★★

# ಅಂತಃಕರಣಕ್ಕೆ ಸಂಸ್ಕಾರದ ಅವಶ್ಯಕತೆ

- ಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಅಧ್ಯಾತ್ಮವಿಷಯಕವಾದ ಪುಸ್ತಕವನ್ನು ಓದಿ ಪಙ್ಕ್ತಿಗಳ ಅರ್ಥವನ್ನು ಮಾಡಿಕೊಳ್ಳುವದು, ಮತ್ತೊಬ್ಬರಿಗೆ ಹೇಳಿಕೊಡುವದು, ಉಪನ್ಯಾಸಮಾಡುವದು, ವಾದವಿವಾದಗಳನ್ನು ನಡೆಯಿಸುವದು - ಇದೇ ಮುಂತಾದವುಗಳು ಅಧ್ಯಾತ್ಮಸಾಧನದ ಮುಖ್ಯವಾದ ಗುರುತೆಂದು ಭಾವಿಸಬಾರದು. ಅಧ್ಯಾತ್ಮ ವಿಚಾರವು ಮುಖ್ಯವಾಗಿ ನಮ್ಮ ಅಂತಃಕರಣಕ್ಕೆ ಸಂಬಂಧಪಟ್ಟದ್ದು; ಅಂತಃಕರಣವು ಆತ್ಮನ ಕಡೆಗೆ ತಿರುಗುವ ಮತ್ತು ಆತ್ಮನ ಅನುಭವಕ್ಕೆ ಸಜ್ಜಾಗುವ ಸಂಸ್ಕಾರವನ್ನು ಮೊದಲು ಪಡೆದುಕೊಳ್ಳಬೇಕು.

ಅಧ್ಯಾತ್ಮತತ್ತ್ವವನ್ನು ಬೋಧಿಸಬಲ್ಲ ಸದ್ಗುರುಗಳ ಸೇವೆಯು ಈ ವಿಷಯದಲ್ಲಿ ಬಹುಮುಖ್ಯವಾದ ಸಾಧನವಾಗಿರುತ್ತದೆ. ಸದ್ಗುರುಗಳೆಂದರೆ ಅಧ್ಯಾತ್ಮತತ್ತ್ವದಲ್ಲಿ ನೆಲೆನಿಂತು ಶಾಂತ್ಯಾದಿಗುಣಗಳಿಂದ ಕೂಡಿರುವ ಮಹಾತ್ಮರು. ಅಂಥವರು ನುಡಿಗಿಂತಲೂ ನೆಡೆಯಿಂದಲೇ ಹೆಚ್ಚಾಗಿ ಬೋಧಿಸುತ್ತಿರುವರು. ತತ್ತ್ವದರ್ಶಿಗಳ ನಡತೆಯು ನಮಗೆ ಅಧ್ಯಾತ್ಮಸಾಧನೆಗೆ ಉತ್ತಮವಾದ ಆದರ್ಶವಾಗಿರುವದು; ಅಂಥವರು ಎಷ್ಟು ಮಿತವಾಗಿ ಮಾತನಾಡುತ್ತಿದ್ದರೂ ಅವರ ಉಪದೇಶದಿಂದ ನಮ್ಮ ಮೋಹವು ಬಲುಬೇಗನೆ ತೊಲಗುವದು. ಭಗವಚ್ಚಿಂತನೆಯು ಅಂತಃಕರಣಕ್ಕೆ ಒಂದು ಅವಶ್ಯಕವಾದ ಸಾಧನವು ಚಿಂತನೆಯು ದಕ್ಕದೆ ಇರುವ ಸ್ಥಿತಿಯಲ್ಲಿ ಸಾಧಕನು ಭಗವಂತನ ಸ್ತೋತ್ರವನ್ನೂ ನಾಮಸ್ಮರಣೆಯನ್ನೂ ಮಾಡಬೇಕು.

ಯಾವ ಸಾಧನದಲ್ಲಿಯೂ ದಂಭವು - ಧರ್ಮಗಳನ್ನು ಬಾವುಟವಾಗಿ ಎತ್ತಿಹಿಡಿದು ಜನರ ಮುಂದೆ ಪ್ರದರ್ಶಿಸುವ ಒಣತೋರಿಕೆಯು - ತಲೆದೋರ ಬಾರದು. ಸಾಧನವು ನಿಮ್ಮ ಮನಸ್ಸನ್ನು ಒಳಕ್ಕೆಳೆದುಕೊಳ್ಳುವದಕ್ಕೆ ಸಹಕಾರಿಯಾಗಿ ರುವದೆ? ಮನಸ್ಸಿನ ಚಾಂಚಲ್ಯವು ಹೋಗುವದಕ್ಕೆ ಸಹಾಯಕವಾಗಿರುವದೆ? ಮನಸ್ಸಿಗೆ ದಿನದಿನಕ್ಕೂ ಶಾಂತಿಯನ್ನು ಮಾಡುತ್ತಿರುವದೇ? - ಎಂಬುದನ್ನು ನೋಡಿಕೊಳ್ಳಿರಿ. ಇದೇ ಸಾಧನದ ಮರ್ಮವು.

★★★★★

# ವಿಕಾಸಕ್ರಮದ ಪರೀಕ್ಷೆ

ಒಬ್ಬ ವೈಜ್ಞಾನಿಕನು ಒಮ್ಮೆ ಒಂದು ವಿಲಕ್ಷಣ ಪ್ರಾಣಿಯ ಅಸ್ಥಿಪಂಜರವನ್ನು ಪರೀಕ್ಷಿಸುತ್ತಿದ್ದನು. ನರನು ವಾನರನಿಂದ ವಿಕಾಸಕ್ರಮದಿಂದ ಉತ್ಪನ್ನವಾಗಿರುವನೆಂದು ನಿಸ್ಸಂಶಯನಾಗಿ ತೀರ್ಮಾನಿಸುವದಕ್ಕೆ ಅಂಥ ಪ್ರಾಣಿಯೊಂದು ಹುಟ್ಟಿದೆ ಎಂಬ ಸಾಕ್ಷ್ಯವು ಬೇಕಾಗಿತ್ತು. 'ಈಗ ಎಲ್ಲವೂ ಸರಿ ಹೋಯಿತು. ಈ ಪ್ರಾಣಿಯೇ ನಮ್ಮ ಮತವನ್ನು ನಿರ್ವಿಕಾರವಾಗಿ ಸ್ಥಾಪಿಸುವದಕ್ಕೆ ಸಾಕಾಗಿದೆ' ಎಂದು ಅವನಿಗೆ ಅನ್ನಿಸಿತು. ಆದರೆ ಆ ಆಸ್ಥಿವಂಜರವನ್ನು ಇನ್ನಷ್ಟು ಸೂಕ್ಷ್ಮವಾಗಿ ಪರೀಕ್ಷಿಸಿ ನೋಡುವದು ಅವಶ್ಯವೆಂದು ಅವನಿಗೆ ತೋರಿತು. ಈ ಪ್ರಾಣಿಯು ಯಾವ ಕಾಲದಲ್ಲಿ ಸಜೀವವಾಗಿ ನೆಲದಮೇಲೆ ಸಂಚರಿಸುತ್ತಿದ್ದಿರಬಹುದು? ಇದಕ್ಕೆ ಮಾನವನ ಮಾತಿಗೆ ಹತ್ತಿರವಾಗಿರುವ ಧ್ವನಿಯೂ ಇದ್ದಿರಬಹುದೆ?- ಎಂದು ಮುಂತಾಗಿ ಅವನು ಆಲೋಚಿಸಲಾರಂಸಿದನು. ಆ ಪ್ರಾಣಿಯ ಎಲುಬಿನ ಗೂಡನ್ನು ತಿರುಗಿಸಿತಿರುಗಿಸಿ ನೋಡುತ್ತಿರುವ ಹಾಗೇ ಅದು ಧೊಪ್ಪೆಂದು ಅವನ ಕೈಯಿಂದ ಕೆಳಕ್ಕೆ ಬಿತ್ತು. ಈಗ ಅವನಿಗೆ ಥಟ್ಟನೆ ಎಚ್ಚರವಾಯಿತು. ಅವನ ಕೈಯಲ್ಲಿ ಒಂದು ಬಿದಿರಿನ ಮೊರವಿತ್ತು!

★★★★★

**ಮತಗಳು ಮತ್ತು ತತ್ತ್ವಸಿದ್ಧಾಂತಗಳು – 550 ಪುಟಗಳು, 1ನೇ ಮುದ್ರಣ, ಬೆಲೆ ರೂ.280/–** ಲೋಕದಲ್ಲಿ ಅನೇಕ ಮತಗಳೂ ತತ್ತ್ವಸಿದ್ಧಾಂತಗಳೂ ಪ್ರಚಾರದಲ್ಲಿವೆ. ಅವುಗಳು ಶಾಂಕರವೇದಾಂತ ಜಿಜ್ಞಾಸುಗಳಿಗೆ ಎಷ್ಟು ಪೂರಕವಾಗಿವೆ ಎಂಬುದನ್ನು ವಿಮರ್ಶಿಸಿರುವ ಲೇಖನಗಳ ಸಂಗ್ರಹ.

**ಸಾಧುಸಂತರು ಮತ್ತು ಮಹಾತ್ಮರು – 332 ಪುಟಗಳು, 1ನೇ ಮುದ್ರಣ, ಬೆಲೆ ರೂ.180/–** ನಮ್ಮ ದೇಶದಲ್ಲಿ ಅನೇಕ ಸಾಧು–ಸಂತರೂ ಮಹಾತ್ಮರುಗಳೂ ಆಗಿ ಹೋಗಿದ್ದಾರೆ. ಅವರುಗಳನ್ನು ಕುರಿತ ಪರಿಚಯಾತ್ಮಕ ಲೇಖನಗಳ ಸಂಗ್ರಹ.

**ಶಂಕರಸಪ್ತಾಹದ ಉಪನ್ಯಾಸಗಳು – 959 ಪುಟಗಳು, 1ನೇ ಮುದ್ರಣ, ಬೆಲೆ ರೂ.500/–** ಶ್ರೀಶಂಕರಾಚಾರ್ಯರ ಜಯಂತಿ ಎಂದರೆ ಅವರ ಗ್ರಂಥಗಳ ಚಿಂತನೆಯೇ, ಅವರು ಬೋಧಿಸಿದ ತತ್ತ್ವಗಳ ಮನನವೇ ಎಂದು ಮನಗಂಡು ಶ್ರೀಶ್ರೀಗಳವರು ಶಂಕರಸಪ್ತಾಹವನ್ನು ಶಂಕರಜಯಂತಿಯ ಸಂದರ್ಭದಲ್ಲಿ ಏರ್ಪಡಿಸುತ್ತಿದ್ದರು. ಬೆಳಿಗ್ಗೆ ಭಾಷ್ಯಪಾಠ, ಮಧ್ಯಾಹ್ನ ಪುರಾಣಪ್ರವಚನ, ಸಂಜೆ ಉಪನ್ಯಾಸಗಳು ಎಂದು ಕಾರ್ಯಕ್ರಮಗಳು ಇರುತ್ತಿದ್ದವು. ಆ ಉಪನ್ಯಾಸಗಳನ್ನು ಬರೆದಿಟ್ಟು ಲೇಖನಗಳಾಗಿಸಿ ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಯಲ್ಲಿ ಪ್ರಕಟಿಸಿದ್ದರ ಸಂಗ್ರಹ.

**ವೇದಾಂತಲೇಖನಮಾಲೆ (ಶ್ರೀ ವಿಟ್ಠಲಶಾಸ್ತ್ರಿಗಳು) – 415 ಪುಟಗಳು, 1ನೇ ಮುದ್ರಣ, ಬೆಲೆ ರೂ.200/–** ಗ್ರಂಥವು ತನ್ನ ಹೊಸತನದಿಂದಾಗಿ, ಅಪೂರ್ವ ಶಾಸ್ತ್ರಾಲೋಚನೆಯಲ್ಲಿ ಜಿಜ್ಞಾಸುಗಳನ್ನು ವಿಹಾರಮಾಡಿಸುವ ದೆಸೆಯಿಂದ ವೇದಾಂತರಂಗದಲ್ಲೊಂದು ಮೈಲಿಗಲ್ಲಾಗಿದೆ. ಶಂಕರ–ಅಶಾಂಕರ ವೇದಾಂತಗ್ರಂಥಗಳ ಲೇಖನಗಳಿಂದ ಕೂಡಿದೆ.

**ಭಾಗವತಾಮೃತಸಾರ – 380 ಪುಟಗಳು, 1ನೇ ಮುದ್ರಣ, ಬೆಲೆ ರೂ.160/–** ಶ್ರೀಶ್ರೀಗಳವರು ಶ್ರೀಮದ್ಭಾಗವತದಲ್ಲಿರುವ ಅಧ್ಯಾತ್ಮದ ಸಾಧನ–ಸಿದ್ಧಾಂತಗಳನ್ನು ಬೋಧಿಸುವ ಶ್ಲೋಕಗಳನ್ನು ಆಯ್ಕೆಮಾಡಿಕೊಂಡು ಆ ಶ್ಲೋಕಗಳಿಗೆ ಅನುವಾದವನ್ನು ಕೊಟ್ಟಿದ್ದಾರೆ.

**ವೇದಾಂತಲೇಖನಗಳು (ಶ್ರೀ ನಂಜಪ್ಪಭಾಗವತರು) – 511 ಪುಟಗಳು, 1ನೇ ಮುದ್ರಣ, ಬೆಲೆ ರೂ.250/–** ಗ್ರಂಥವು ತನ್ನ ಹೊಸತನದಿಂದಾಗಿ, ಅಪೂರ್ವಕಲ್ಪನಾಲೋಕದಲ್ಲಿ ಜಿಜ್ಞಾಸು ಗಳನ್ನು ವಿಹಾರಮಾಡಿಸಿರುವ ದೆಸೆಯಿಂದ ವೇದಾಂತರಂಗದಲ್ಲೊಂದು ಮೈಲಿಗಲ್ಲಾಗಿದೆ. ಇಲ್ಲಿ ವೇದಾಂತವಿಚಾರವನ್ನು ಸಾಧನವಿಚಾರಗಳನ್ನು ಕಥೆ, ರೂಪಕ, ಸಂಭಾಷಣೆಯ ಮೂಲಕ ನಿರೂಪಿಸಿದೆ. ಈ ಲೇಖನಗಳು ವೇದಾಂತಜಿಜ್ಞಾಸುಗಳಿಗೆ ಮಾರ್ಗದರ್ಶಿ ಯಾಗಿವೆ.

ಜಗತ್ತೆಲ್ಲವೂ ಅಧ್ಯಾತ್ಮ ಅಧಿಭೂತವೆಂದು ಎರಡು ದೊಡ್ಡಪಂಗಡವಾಗಿರುವದು. ನಮ್ಮ ಪೂರ್ವಜರು ಎರಡೂ ಪಂಗಡದ ಮರ್ಮವನ್ನು ಅರಿತು, ಅವಕ್ಕೆ ತಕ್ಕಂತೆ ವ್ಯವಹಾರವನ್ನು ನಡೆಸಿ ಸುಖವನ್ನು ಹೊಂದಿದ್ದರು. ಇವುಗಳಲ್ಲಿ ವೈದಿಕ ಮತ್ತು ಅವೈದಿಕ ಎಂದು ಎರಡು ಗುಂಪುಗಳಿವೆ. ವೈದಿಕ ದರ್ಶನಗಳಲ್ಲಿ ಹೇಗೋ ಹಾಗೆ ಅವೈದಿಕ ಮತಗಳಲ್ಲಿಯೂ ಅಮೋಘವಾದ ನೀತಿಮಾರ್ಗವನ್ನು ಬೋಧಿಸುವ ಅಂಶಗಳಿವೆ. ನಮ್ಮ ದರ್ಶನಗ್ರಂಥಗಳಲ್ಲಿ ಅವೈದಿಕ ದರ್ಶನಗಳನ್ನು ಪೂರ್ವಪಕ್ಷವಾಗಿ ಖಂಡನೆಮಾಡಿಯೂ ಇರುತ್ತದೆ. ಆ ಪೂರ್ವಪಕ್ಷಗಳ ಬಲಾಬಲಗಳನ್ನು ಆಯಾ ಮತದವರು ಹೇಳುವ ಅಭಿಪ್ರಾಯಗಳಿಂದ ತಿಳಿಯುವದು ಯುಕ್ತವೇ ಆಗಿದೆ. ಹಿಂದಿನ ಆಚಾರ್ಯರುಗಳು ಚಾರ್ವಾಕಾದಿ ಮತಗಳ ಗುಣಾಗುಣಗಳನ್ನು ಹೀಗೆಯೇ ವಿಚಾರಮಾಡಿದ್ದರೆಂಬುದು ಅವರ ಅಮೋಘಭಾಷ್ಯಗಳಿಂದಲೇ ವ್ಯಕ್ತವಾಗುವದು. ಈಗ ಪ್ರಾಚೀನಕಾಲದ ಅವೈದಿಕಮತಗಳು ಲುಪ್ತವಾಗಿ ಹೊಸ ಮತಗಳು ತಲೆದೋರಿವೆ. ಈ ನವೀನ ಮತಗಳು ಜಗತ್ತಿನ ಬಹುಭಾಗದ ಜನರಮೇಲೆ ತಮ್ಮ ಪರಿಣಾಮವನ್ನು ಉಂಟುಮಾಡಿರುತ್ತವೆ. ಈ ಮತಗಳಿಂದ ಜಗತ್ತಿನ ಇತಿಹಾಸವೇ ಬದಲಾಗುತ್ತಿವೆ. ಈಗ ಅವುಗಳ ಸಾರವನ್ನು ಗ್ರಹಿಸದೆ ಇರುವದು ಕೂಪಮಂಡೂಕವೃತ್ತಿಯಂತೆ ತೋರುತ್ತದೆ. ಕೆಲವು ಶೋಧನೆಗಳನ್ನು ಗಮನಿಸಿದರೆ ಪ್ರಾಚೀನಾರ್ಯರ ಸನಾತನ ಸಿದ್ಧಾಂತವೇ ಬಗೆಬಗೆಯ ಮಾರ್ಪಾಡನ್ನು ಪಡೆಯುತ್ತ ಬಂದಿದೆ ಎಂಬುದು ವಿದಿತವಾಗುತ್ತದೆ. ಈ ಎಲ್ಲ ಕಾರಣಗಳಿಂದ ವಿವಿಧ ಸಿದ್ಧಾಂತಗಳ ಸಾರಗ್ರಹಣವನ್ನು ಮಾಡುವದು ಯುಕ್ತವೇ ಆಗಿದೆ.

ಈಗ ನಮ್ಮ ದೇಶದಲ್ಲಿ ಶಂಕರ, ರಾಮಾನುಜ, ಮಧ್ವ, ವಲ್ಲಭ, ಅರಬಿಂದೊ ಮೊದಲಾದವರ ಸಿದ್ಧಾಂತಗಳಲ್ಲದೆ, ಆರ್ಯಸಮಾಜ, ಬ್ರಹ್ಮಸಮಾಜ, ಜೈನ, ಬೌದ್ಧ, ಕ್ರೈಸ್ತ, ಇಸ್ಲಾಂ, ಸೂಫಿ, ಥಿಯಾಸಫಿ – ಮೊದಲಾದ ಮತಗಳೂ ಪ್ರಸಿದ್ಧವಾಗಿವೆ. ಆತ್ಮನ ಅಜ್ಞಾನದಿಂದ ಸಂಸಾರದ ಅನರ್ಥವು ಉಂಟಾಗಿರುವದು ಎಂಬುದನ್ನೂ, ತತ್ತ್ವಜ್ಞಾನವು ಮೋಕ್ಷಕ್ಕೆ ಅವಶ್ಯವೆಂಬುದನ್ನೂ ಬಹುಮಟ್ಟಿಗೆ ಎಲ್ಲ ಅಧ್ಯಾತ್ಮವಾದಿಗಳೂ ಒಪ್ಪುತ್ತಾರೆ. ವಸ್ತುತಂತ್ರವಾದದ್ದೇ ಜ್ಞಾನವೆಂದು ಕೆಲವರು, ಮನೋವೃತ್ತಿರೂಪವಾದದ್ದೇ ಜ್ಞಾನವೆಂದು ಕೆಲವರು, ಹೀಗೆ ಜ್ಞಾನಾಜ್ಞಾನಗಳ ಸ್ವರೂಪವಿಷಯದಲ್ಲಿ ಬಹಳ ಮತಭೇದವಿರುತ್ತದೆ. ವೇದಾಂತವಿಚಾರವನ್ನು ಮಾಡುವಾಗ ಈ ವಿಷಯವನ್ನೆಲ್ಲ ತಿಳಿದಿರುವದು ಅತ್ಯವಶ್ಯ.

ಈ ವಿಷಯಗಳನ್ನೆಲ್ಲ ಅಳವಡಿಸಿಕೊಂಡು ತತ್ತ್ವಜಿಜ್ಞಾಸೆಯನ್ನು ಮಾಡಲು ಅನುಕೂಲವಾಗುವಂತೆ ಪೂರ್ವ–ಪಶ್ಚಿಮಗಳ ತತ್ತ್ವಸಿದ್ಧಾಂತಗಳನ್ನು ವಿಚಾರ ಮಾಡುವ ಲೇಖನಗಳನ್ನು, ನಿಷ್ಪಕ್ಷಪಾತಿಗಳಾಗಿ ವಿಚಾರವನ್ನು ಮಾಡುವ ಲೇಖಕರಿಂದ ಬರೆಯಿಸಿದ ಲೇಖನಗಳನ್ನು ಈ ಗ್ರಂಥದಲ್ಲಿ ಸಂಗ್ರಹಿಸಲಾಗಿದೆ.

2021 ₹ 280/-